ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ ೨೧

ಕಾವ್ಯ ಸಾಹಿತ್ಯ : ಭಾಗ-೩



ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ - ೫೮೬೧೦೩

[illegible]

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ

ಸಂಪುಟ-೨೧ : ಕಾವ್ಯ ಸಾಹಿತ್ಯ : ಭಾಗ-೩

❖

- ಮಲ್ಲಿನಾಥಪುರಾಣ ಸಂಗ್ರಹ
- ಶಬ್ದಮಣಿದರ್ಪಣ ಸಂಗ್ರಹ
- ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ
- ಆದಯ್ಯನ ಲಘುಕೃತಿಗಳು
- ಕೊಂಡಗುಳಿ ಕೇಶಿರಾಜನ ಕೃತಿಗಳು

❖

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ

ಧಾರವಾಡ

ಸಂಪಾದಕರು

ಡಾ. ಬಿ. ವ್ಹಿ. ಶಿರೂರ

ಹುಬ್ಬಳ್ಳಿ

ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ. ಎಲ್. ಡಿ. ಇ. ಸಂಸ್ಥೆ

ವಿಜಯಪುರ

೨೦೧೯

COMPLETE WORK OF DR. M.M.KALBURGI
VOLUME - 21 : KAVYA SAHITY BHAGA-3
Edited by : **Dr. B.V. Shirur,** Hubli

Published by : **Dr. P.G. Halakatti Research Centre**
B.L.D.E. Association, Vijayapura, Karnatak

First Edition : 2019
Pages : lii + 616=668

Copies : 1000
Price : Rs. 335/-

❖❖

Cover page design : K.K. Makali, Hampi.
Tyapset : **Dr. Hanumanth Melinamani, Dr. Sarswatidevi Bhagawati,** Dharwad.
Printer : **The Print Point,** No. 9/8 6th Cross, 4th Main, Rajajinagar, Industrial Town, Bengaluru-560044. Ph. 97390 67359

ಆರ್ಥಿಕ ನೆರವು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರ್ಕಾರ

ಡಾ. ಎಂ.ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ, ಸಂಪುಟ : ೨೧–ಕಾವ್ಯ ಸಾಹಿತ್ಯ : ಭಾಗ–೩
ಸಂಪಾದಕರು : ಡಾ. ಬಿ. ವ್ಹಿ. ಶಿರೂರ, ಹುಬ್ಬಳ್ಳಿ
ಪ್ರಕಾಶಕರು : ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ. ಎಲ್. ಡಿ. ಇ. ಸಂಸ್ಥೆ, ವಿಜಯಪುರ
ಪ್ರಥಮ ಮುದ್ರಣ : ೨೦೧೯
ಪುಟಗಳು : lii + ೬೧೬=೬೬೮

ಪ್ರತಿಗಳು : ೧೦೦೦
ಬೆಲೆ : ರೂ. ೩೩೫/–

❖❖

ಮುಖಪುಟ ವಿನ್ಯಾಸ: ಕೆ. ಕೆ. ಮಕಾಳಿ, ಹಂಪಿ
ಅಕ್ಷರ ಸಂಯೋಜನೆ : **ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ,** ಧಾರವಾಡ
ಮುದ್ರಣ : **ಪ್ರಿಂಟ್ ಪಾಯಿಂಟ್**, ನಂ. ೯/೮ ೬ನೆಯ ಕ್ರಾಸ್, ೪ನೆಯ ಮುಖ್ಯರಸ್ತೆ, ರಾಜಾಜಿನಗರ, ಇಂಡಸ್ಟ್ರಿಯಲ್ ಟೌನ್, ಬೆಂಗಳೂರು–೫೬೦೦೪೪. ಫೋನ್ : ೯೭೩೯೦ ೬೭೩೫೯

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಲಹಾ ಸಮಿತಿ

❖

ಗೌರವಾಧ್ಯಕ್ಷರು

ಡಾ. ಎಂ. ಬಿ. ಪಾಟೀಲ, ವಿಜಯಪುರ

ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ ಮತ್ತು ಗೃಹ ಸಚಿವರು, ಕರ್ನಾಟಕ ಸರ್ಕಾರ

ಅಧ್ಯಕ್ಷರು

ಶ್ರೀ ಜಿ. ಕೆ. ಪಾಟೀಲ, ವಿಜಯಪುರ

ಕಾರ್ಯದರ್ಶಿಗಳು

ಡಾ. ಎಂ. ಎಸ್. ಮದಭಾವಿ, ವಿಜಯಪುರ

ಪ್ರಧಾನ ಸಂಪಾದಕರು

ಡಾ. ವೀರಣ್ಣ ರಾಜೂರ, ಧಾರವಾಡ

ಯೋಜನಾ ಸಂಯೋಜಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ, ವಿಜಯಪುರ

❖

ಸದಸ್ಯರು

ಡಾ. ಗುರುಲಿಂಗ ಕಾಪಸೆ, ಧಾರವಾಡ

ಶ್ರೀ ಶ್ರೀವಿಜಯ ಕಲಬುರ್ಗಿ, ಧಾರವಾಡ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರತಿನಿಧಿಗಳು

❖❖

ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ

ಸಂಪಾದಕ ಸದಸ್ಯರು

❖

❖❖

*

ಪ್ರಧಾನ ಸಂಪಾದಕರ ಮಾತು

ಡಾ. ವೀರಣ್ಣ ರಾಜೂರ

ಮಾರ್ಗಕ್ಕೆ ಕೊನೆಯಿಲ್ಲ.....

ಡಾ. ಎಂ. ಎಂ. ಕಲಬುರ್ಗಿ ಅವರು ಕನ್ನಡ ಸಂಶೋಧನ ಮಹಾಮಾರ್ಗದ ಮಹಾಶಿಲ್ಪಿ; ಕನ್ನಡ ವಿದ್ವತ್ ಪರಂಪರೆಯ ಪ್ರಥಮ ಶ್ರೇಣಿಯ ಗಟ್ಟಿ ವಿದ್ವಾಂಸರು; ಕನ್ನಡ ಭಾಷೆ–ಸಾಹಿತ್ಯ–ಸಂಸ್ಕೃತಿಗಳ ಬಹುಶಿಸ್ತೀಯ ಅಧ್ಯಯನದ ಸವ್ಯಸಾಚಿ ಸತ್ಯಶೋಧಕರು. ಅವರ ಘನವ್ಯಕ್ತಿತ್ವ, ಕರ್ತೃತ್ವಶಕ್ತಿ, ಕಾರ್ಯಕ್ಷಮತೆ, ನಾಡು–ನುಡಿ–ಸಂಸ್ಕೃತಿ ಪ್ರೀತಿ, ಸಾಮಾಜಿಕ ಕಳಕಳಿ, ಶೈಕ್ಷಣಿಕ ಶಿಸ್ತು, ಸಾಹಿತ್ಯಿಕ–ಸಾಧನೆ, ಸಂಶೋಧನ ಸಿದ್ಧಿ, ಆಡಳಿತ ದಕ್ಷತೆ ಹಾಗೂ ಮಾನವೀಯ ಮೌಲ್ಯಗಳ ಅನುಷ್ಠಾನ ಅಪೂರ್ವ–ಅದ್ವಿತೀಯ–ಅನುಕರಣೀಯ.

ಡಾ. ಎಂ. ಎಂ. ಕಲಬುರ್ಗಿ ಅವರದು ಬಹುಮುಖ ವ್ಯಕ್ತಿತ್ವ; ಬಹುಮುಖ ಪ್ರತಿಭೆ–ಪಾಂಡಿತ್ಯ–ಪ್ರಭುತ್ವ; ಬಹುಮುಖ ಕಾರ್ಯ ಯೋಜನೆ, ಕಾರ್ಯಸಾಧನೆ, ಕಾರ್ಯಸಿದ್ಧಿ. ಕನ್ನಡದ ಶ್ರೇಷ್ಠ ಪ್ರಾಧ್ಯಾಪಕರಾಗಿ, ಪ್ರಥಮ ಶ್ರೇಣಿಯ ಸಂಶೋಧಕರಾಗಿ, ಸಮರ್ಥ ಸಂಶೋಧನ ಮಾರ್ಗದರ್ಶಕರಾಗಿ, ವಿಭಾಗದ ದಕ್ಷ ಅಧ್ಯಕ್ಷರಾಗಿ, ವಿಶ್ವವಿದ್ಯಾಲಯದ ಮಾದರಿಯ ಕುಲಪತಿಗಳಾಗಿ, ಉನ್ನತ ಶಿಕ್ಷಣ ತಜ್ಞರಾಗಿ, ಅನೇಕ ವಿನೂತನ ಯೋಜನೆಗಳ ಯೋಜಕರಾಗಿ, ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಸಂಘಸಂಸ್ಥೆಗಳ ನಿರ್ದೇಶಕರಾಗಿ ಅವರು ಮಾಡಿದ ಕಾರ್ಯ, ಕೊಟ್ಟ ಕೊಡುಗೆ ಅಚ್ಚರಿ ಮೂಡಿಸುವಂತಹವು; ಅಭಿಮಾನ ಉಕ್ಕಿಸುವಂತಹವು.

ಜೀವನ–ಸಾಧನೆ :

ಡಾ.ಎಂ.ಎಂ.ಕಲಬುರ್ಗಿ (ಮಲ್ಲೇಶಪ್ಪ ಮಡಿವಾಳಪ್ಪ ಕಲಬುರ್ಗಿ) ಅವರು ೧೯೩೮ ನವ್ಹಂಬರ್ ೨೮ ರಂದು ತಾಯಿಯ ತವರೂರು ಗುಬ್ಬೇವಾಡ (ತಾ.ಸಿಂದಗಿ, ಜಿ: ವಿಜಯಪುರ)ದಲ್ಲಿ ಜನಿಸಿದರು. ತಂದೆ ಮಡಿವಾಳಪ್ಪ; ತಾಯಿ ಗುರಮ್ಮ. ಶ್ರಮಸಂಸ್ಕೃತಿಯ ಒಕ್ಕಲುತನ ಮನೆತನ. ಮಧ್ಯಮವರ್ಗದ ಸುಸಂಸ್ಕೃತ–ಅವಿಭಕ್ತ ಕುಟುಂಬ. ಇಂಥ ಪರಿಸರದಲ್ಲಿ ಬೆಳೆದ ಕಲಬುರ್ಗಿ ಅವರಿಗೆ ಶ್ರಮಗೌರವ ಹಾಗೂ ಸಹಬಾಳ್ವೆಯ ಪಾಠ ಬಾಲ್ಯದಿಂದಲೇ ಬಳುವಳಿಯಾಗಿ ದೊರೆಯಿತು.

ಕಲಬುರ್ಗಿ ಅವರ ಪ್ರಾಥಮಿಕ ಶಿಕ್ಷಣ (ಮುಲ್ಕೀ ಪರೀಕ್ಷೆಯವರೆಗೆ) ತಂದೆಯವರ ಊರಾದ ಯರಗಲ್ಲ (ತಾ. ಸಿಂದಗಿ, ಜಿ. ವಿಜಯಪುರ)ದಲ್ಲಿ ನಡೆಯಿತು. ಮಾಧ್ಯಮಿಕ ವ್ಯಾಸಂಗವನ್ನು ಸಿಂದಗಿಯ ಎಚ್.ಜಿ. ಬಾಡ ಹೈಸ್ಕೂಲಿನಲ್ಲಿ ಪೂರೈಸಿದರು. ೧೯೫೬ ರಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತು ಉಚ್ಚಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು.

ಕಲಬುರ್ಗಿ ಅವರ ಉನ್ನತವ್ಯಾಸಂಗ ವಿಜಯಪುರ ಮತ್ತು ಧಾರವಾಡದಲ್ಲಿ ನೆರವೇರಿತು. ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ವಿಜಯ ಕಾಲೇಜಿನಿಂದ ಬಿ.ಎ. ಪದವಿಯನ್ನು (೧೯೬೦) ಪ್ರಥಮಶ್ರೇಣಿಯಲ್ಲಿ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದಿಂದ ಎಂ.ಎ. ಪದವಿಯನ್ನು (೧೯೬೨) ಪ್ರಶಸ್ತಿ ಸಹಿತ ಪ್ರಥಮ ಶ್ರೇಣಿಯಲ್ಲಿ ಗಳಿಸಿಕೊಂಡರು. ಮೊದಲಿನಿಂದಲೂ ಪ್ರತಿಭೆ–ಪರಿಶ್ರಮಗಳ ಸಂಗಮವೆನಿಸಿದ್ದ ಕಲಬುರ್ಗಿ ಅವರಿಗೆ ಕಾಲೇಜಿನಲ್ಲಿ ಪ್ರೊ. ಬಿ.ಟಿ. ಸಾಸನೂರ ಅವರು, ವಿಶ್ವವಿದ್ಯಾಲಯದಲ್ಲಿ ಡಾ. ಆರ್.ಸಿ. ಹಿರೇಮಠ ಅವರು ಪ್ರೀತಿಯ ಗುರುಗಳಾಗಿ ದೊರೆತು ತಮ್ಮ ವಿದ್ವತ್ತಿನ ಜ್ಞಾನಾಮೃತವನ್ನು ನೆಚ್ಚಿನ ವಿದ್ಯಾರ್ಥಿಗೆ ಧಾರಾಳವಾಗಿ ಧಾರೆಯೆರೆದರು. ಗುರುಗಳ ಸಮರ್ಥ ಮಾರ್ಗದರ್ಶನ, ಕಲಬುರ್ಗಿ ಅವರ ಪ್ರತಿಭೆ–ಪರಿಶ್ರಮ–ಪ್ರಯತ್ನಗಳಿಂದ ಮುಪ್ಪುರಿಗೊಂಡ ಸ್ವಸಾಮರ್ಥ್ಯದ ಬಲದಿಂದ ಅವರೊಬ್ಬ ಸಶಕ್ತ–ಮಾದರಿಯ–ಆದರ್ಶ ವಿದ್ಯಾರ್ಥಿಯಾಗಿ ರೂಪುಗೊಂಡರು.

ಎಂ. ಎ. ಅಧ್ಯಯನ ಮುಗಿಯುತ್ತಲೆ ಕಲಬುರ್ಗಿ ಅವರಿಗೆ ಕಲಿತ ವಿಶ್ವವಿದ್ಯಾಲಯದಲ್ಲಿಯೇ ಕೆಲಸ ದೊರೆಯಿತು. ಕನ್ನಡ ವಿಭಾಗದಲ್ಲಿ ಆಗ ತಾನೆ ಆರಂಭವಾಗಿದ್ದ 'ಸಮಗ್ರ ವಚನ ವಾಙ್ಮಯ ಸಂಶೋಧನ ಸಂಸ್ಕರಣ ಪ್ರಕಟಣ ಯೋಜನೆ'ಯಲ್ಲಿ ಸಹಾಯಕ ಸಂಶೋಧಕರಾಗಿ ವೃತ್ತಿಜೀವನ(೧೯೬೨) ಆರಂಭಿಸಿದರು. ಕೆಲವೇ ದಿವಸಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರತಿಷ್ಠಿತ ಕಾಲೇಜು ಎನಿಸಿದ ಕರ್ನಾಟಕ ಕಲಾ ಮಹಾವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸ್ಥಾನ ಪಡೆದರು. ತಮ್ಮ ಸತತಾಭ್ಯಾಸ ಪ್ರವೃತ್ತಿ, ವ್ಯವಸ್ಥಿತ ಅಚ್ಚುಕಟ್ಟಾದ ಪ್ರಭಾವಶಾಲಿ ಪಾಠಬೋಧನೆ, ಶಿಸ್ತಿನ ನಡೆ–ನುಡಿಗಳಿಂದ ವಿದ್ಯಾರ್ಥಿಗಳ–ಸಹೋದ್ಯೋಗಿಗಳ ವಿಶೇಷ ಪ್ರೀತಿ–ವಿಶ್ವಾಸ–ಗೌರವಗಳಿಗೆ ಪಾತ್ರರಾದರು.

ಪಾಠಬೋಧನೆಯ ಜೊತೆಗೆ ಕಲಬುರ್ಗಿ ಅವರು ತಮ್ಮ ನೆಚ್ಚಿನ ಗುರುಗಳಾಗಿದ್ದ ಡಾ. ಆರ್.ಸಿ. ಹಿರೇಮಠ ಅವರ ಮಾರ್ಗದರ್ಶನದಲ್ಲಿ 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' ಎಂಬ ವಿಷಯದ ಮೇಲೆ ಪಿಎಚ್.ಡಿ. ಸಂಶೋಧನೆಯನ್ನೂ ಕೈಕೊಂಡರು. ಆ ಸಮಯದಲ್ಲಿ ಕರ್ನಾಟಕ ಕಾಲೇಜಿನ ಗ್ರಂಥಾಲಯವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ತಮ್ಮ ವಿಭಿನ್ನ ಆಸಕ್ತಿಯ ಜ್ಞಾನ ಕ್ಷೇತ್ರಗಳನ್ನು ಫಲಭರಿತಗೊಳಿಸಿಕೊಂಡರು. ೧೯೬೮ ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

ನಾಲ್ಕು ವರ್ಷ (೧೯೬೨–೬೬) ಕರ್ನಾಟಕ ಕಾಲೇಜಿನಲ್ಲಿ ಯಶಸ್ವಿಯಾಗಿ ಸೇವೆ ಪೂರೈಸಿದ ನಂತರ ಕಲಬುರ್ಗಿ ಅವರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ತನ್ನತ್ತ ಕರೆದುಕೊಂಡಿತು. ಅಲ್ಲಿ ಅವರು ಅಧ್ಯಾಪಕರಾಗಿ, ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಅಧ್ಯಕ್ಷರಾಗಿ, ಬಸವಪೀಠದ ಪ್ರಾಧ್ಯಾಪಕರಾಗಿ ಅಖಂಡ ೩೨ ವರ್ಷ (೧೯೬೬–೯೮) ಅದ್ವಿತೀಯವಾದ ಶೈಕ್ಷಣಿಕ ಸೇವೆ ಸಲ್ಲಿಸಿದರು. 'ಕನ್ನಡ ವಿಭಾಗ' ಅನೇಕ ಅಧ್ಯಯನ ಶಾಖೆಗಳನ್ನು ಹೊಂದಿ, 'ಕನ್ನಡ ಅಧ್ಯಯನಪೀಠ'ವೆಂಬ ಮಹಾವೃಕ್ಷವಾಗಿ ಬೆಳೆದು ನಿಲ್ಲುವಲ್ಲಿ ಕಲಬುರ್ಗಿ ಅವರು ಪಟ್ಟ ಶ್ರಮದ

ಪಾಲು ಅತ್ಯಧಿಕವಾಗಿದೆ. ಬಸವೇಶ್ವರಪೀಠವನ್ನು ಕಟ್ಟಿ ಬೆಳೆಸುವಲ್ಲಿ ಅವರು ತೋರಿದ ನಿಷ್ಠೆ ನಿಬ್ಬೆರಗು ಹುಟ್ಟಿಸುವಂತಿದೆ.

ವಿಶ್ವವಿದ್ಯಾಲಯದ ಸೇವೆಯಲ್ಲಿದ್ದಾಗ ಕಲಬುರ್ಗಿ ಅವರು ನಿರ್ವಹಿಸಿದ ಹುದ್ದೆಗಳು ಹಲವಾರು. ಕಲಾನಿಕಾಯದ ಡೀನರಾಗಿ, ವಿದ್ಯಾವಿಷಯಕ ಮಂಡಳಿ, ಪರೀಕ್ಷಾ ಮಂಡಳಿ, ಅಭ್ಯಾಸ ಮಂಡಳಿಗಳ ಅಧ್ಯಕ್ಷರಾಗಿ, ಸಿಂಡಿಕೇಟ್ ಸದಸ್ಯರಾಗಿ, ಕನ್ನಡ ಸಂಶೋಧನ ಸಂಸ್ಥೆಯ ಪ್ರಭಾರ ನಿರ್ದೇಶಕರಾಗಿ, ಸ್ನಾತಕೋತ್ತರ ವಿದ್ಯಾರ್ಥಿ ಕೂಟದ ಅಧ್ಯಕ್ಷರಾಗಿ, ಅನೇಕ ಶೈಕ್ಷಣಿಕ ಸಲಹಾ ಮಂಡಳಿಗಳ ಸದಸ್ಯರಾಗಿ ಅವರು ಮಾಡಿದ ಕಾರ್ಯ, ನೀಡಿದ ಮಾರ್ಗದರ್ಶನ, ಕಾರ್ಯರೂಪಕ್ಕೆ ತಂದ ನೀತಿ-ನಿಯಮಾವಳಿಗಳು ಮೌಲಿಕವಾಗಿದ್ದು, ವಿಶ್ವವಿದ್ಯಾಲಯದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ವಿಶೇಷ ನೆರವು ನೀಡಿವೆ.

ಡಾ. ಎಂ. ಎಂ. ಕಲಬುರ್ಗಿ ಅವರು ೧೯೯೮ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸೇವೆಯಿಂದ ನಿವೃತ್ತಿ ಹೊಂದಿದರು. ಅಷ್ಟರಲ್ಲಿ ಅವರಿಗೆ ಮತ್ತೊಂದು ಉನ್ನತ ಅವಕಾಶದ ಬಾಗಿಲು ತೆರೆದುಕೊಂಡಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ನೇಮಕಗೊಂಡರು. ಅದು ಅವರ ಅನೇಕ ನೂತನ ಯೋಜನೆಗಳಿಗೆ ಕಾರ್ಯರಂಗವೆನಿಸಿತು. ತಾವು ಕಂಡ ಕನಸುಗಳನ್ನೆಲ್ಲ ಅಲ್ಲಿ ನನಸುಗೊಳಿಸಲು ತಕ್ಷಣದಲ್ಲಿಯೇ ಕಾರ್ಯ ಪ್ರವೃತ್ತರಾದರು. ಹಿಂದೆ ಇದ್ದ ಕೆಲವು ಶಾಖೆಗಳ ಜೊತೆಗೆ ಮತ್ತೆ ಹಲವು ನೂತನ ಶಾಖೆಗಳನ್ನು ಆರಂಭಿಸಿ, ಎಲ್ಲ ಶಾಖೆಗಳಿಗೂ ಸಮಾನಸ್ಥಾನ-ಮಾನ, ಆರ್ಥಿಕ ಸಹಾಯ, ಮಾನವ ಸಂಪನ್ಮೂಲಗಳನ್ನು ಒದಗಿಸಿ, ಎಲ್ಲರೂ ಶಿಸ್ತುಬದ್ಧವಾಗಿ, ಸಮಯ ನಿಷ್ಠವಾಗಿ ಕೆಲಸ ಮಾಡಲು ತೊಡಗುವಂತೆ ಮಾಡಿದರು. ಅದರಿಂದಾಗಿ ಎಲ್ಲರಲ್ಲಿ ನವಚೈತನ್ಯ ತುಂಬಿಕೊಂಡಿತು. ಸಾಂಘಿಕ, ವೈಯಕ್ತಿಕ ಸಂಶೋಧನ ಯೋಜನೆಗಳಿಂದಾಗಿ ಅನೇಕ ಹೊಸ ಕ್ಷೇತ್ರಗಳಿಗೆ ಸಂಬಂಧಿಸಿದ ಅಪೂರ್ವ ಗ್ರಂಥಗಳು ಪ್ರಕಟವಾದವು. ಅದರಿಂದಾಗಿ ಕನ್ನಡ ವಿಶ್ವವಿದ್ಯಾಲಯದ ಕೀರ್ತಿ ಇಮ್ಮಡಿಗೊಂಡಿತು. ಹಗಲಿರುಳೆನ್ನದೆ ತಾವೂ ದುಡಿದು, ಇತರೆಲ್ಲರನ್ನೂ ದುಡಿಸಿ-ಶ್ರಮಸಂಸ್ಕೃತಿಯನ್ನು ಅಲ್ಲಿ ಗಟ್ಟಿಗೊಳಿಸಿ ಮೂರು ವರ್ಷಗಳಲ್ಲಿ ಅದನ್ನೊಂದು ಮಾದರಿಯ ವಿಶ್ವವಿದ್ಯಾಲಯವನ್ನಾಗಿಸಿ-೨೦೦೧ ರಲ್ಲಿ ನಿವೃತ್ತಿ ಹೊಂದಿದರು. ಹಿಂದಿನವರಂತೆ ಕಲಬುರ್ಗಿಯವರ ಸೇವೆಯನ್ನೂ ಇನ್ನೂ ಮೂರು ವರ್ಷ ವಿಸ್ತರಿಸಿದ್ದರೆ, ಕನ್ನಡ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟದಲ್ಲಿ ಗಮನ ಸೆಳೆಯುವ ಒಂದು ಮಹಾಸಂಸ್ಥೆಯನ್ನಾಗಿ ಬೆಳೆಸಿ ನಿಲ್ಲಿಸುತ್ತಿದ್ದರು.

ನಿವೃತ್ತಿಯ ನಂತರ ಡಾ. ಕಲಬುರ್ಗಿ ಅವರ ಕಾರ್ಯಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಮುಕ್ತವಾಗಿ ಅವರು ಸಾಹಿತ್ಯ-ಸಂಶೋಧನೆ-ಸಮಾಜಸೇವೆ-ಸಾಂಸ್ಕೃತಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅನೇಕ ಸಂಘ-ಸಂಸ್ಥೆಗಳಿಗೆ ಸಾಹಿತ್ಯಿಕವಾಗಿ, ಸಾಮಾಜಿಕವಾಗಿ ಮಾರ್ಗದರ್ಶನ ನೀಡುತ್ತ, ಭಾಷಣ-ಬರಹಗಳ ಮೂಲಕ ಅಸತ್ಯ, ಅನ್ಯಾಯ, ಮೂಢಾಚಾರಗಳನ್ನು ಖಂಡಿಸುತ್ತ, ಶರಣರು ಕಂಡ ಸಮಾನತೆಯ-ಸದಾಚಾರದ-ಸ್ವಸ್ಥ ಸಮಾಜ ನಿರ್ಮಾಣವಾಗಬೇಕೆಂದು ಸಾಮಾಜಿಕರಲ್ಲಿ ಜಾಗೃತಿಯನ್ನು ಮೂಡಿಸುವ ಕಾರ್ಯದಲ್ಲಿ ತೊಡಗಿದರು. ಸ್ಥಾವರಗೊಂಡ ವ್ಯವಸ್ಥೆಯನ್ನು ಚಲನಶೀಲಗೊಳಿಸಬೇಕು, ಜಂಗಮಗೊಳಿಸಬೇಕು ಎಂದು ನಿರಂತರ ಸಮಾಜ ಶುದ್ಧಿಯ ಕಾರ್ಯದಲ್ಲಿ ನಿರತರಾಗಿದ್ದರು. ಅವರ ಪ್ರಖರ ವಿಚಾರಗಳು, ವೈಚಾರಿಕ ನಿಲವುಗಳು, ನಿಷ್ಠುರ ಸತ್ಯಗಳು ಪಟ್ಟ ಭದ್ರ ಹಿತಾಸಕ್ತಿಗಳಿಗೆ, ಸಂಕುಚಿತ ಭಾವದ ಸನಾತನಿಗಳಿಗೆ ರುಚಿಸಲಿಲ್ಲ; ಅಪಥ್ಯವೆನಿಸಿದವು. ಹೀಗಾಗಿ ಸತ್ಯ ಶೋಧಕರಾದ ಡಾ. ಎಂ. ಎಂ. ಕಲಬುರ್ಗಿ ಅವರು ದುಷ್ಟಶಕ್ತಿಗಳ ಗುಂಡೇಟಿಗೆ

ಬಲಿಯಾಗಬೇಕಾಯಿತು. ೩೦-೦೮-೨೦೧೫ ಕರ್ನಾಟಕದ ಇತಿಹಾಸದಲ್ಲಿ ಒಂದು ಕರಾಳದಿನ. ಸಾಂಸ್ಕೃತಿಕ ಶ್ರೀಮಂತ ನಗರವೆನಿಸಿದ ಧಾರವಾಡದಲ್ಲಿ ಹಾಡುಹಗಲೇ ವಿದ್ಯಾರ್ಥಿ ವೇಷದಲ್ಲಿ ಮನೆಯೊಳಗೆ ನುಗ್ಗಿ ಸಾತ್ವಿಕ ಶರಣ, ಸ್ವತಂತ್ರ ವಿಚಾರವಾದಿ, ನ್ಯಾಯ ನಿಷ್ಠುರಿಯ ಅಮಾನುಷ ಹತ್ಯೆ ಮಾಡಲಾಯಿತು. ಇದು ಸತ್ಯದ ಕೊಲೆ; ಅಭಿವ್ಯಕ್ತಿ ಸ್ವಾತಂತ್ರ್ಯದ ಕಗ್ಗೊಲೆ. ಇದರಿಂದ ನಾಡು ಒಬ್ಬ ಅಪ್ರತಿಮ ವಿಚಾರವಾದಿಯನ್ನು ಕಳೆದುಕೊಂಡು ಬಡವಾಯಿತು. ಲಿಂಗಾಯತ ಸಮಾಜ ಒಬ್ಬ ತತ್ವನಿಷ್ಠ ಚಿಂತಕನ ಅಗಲಿಕೆಯಿಂದ ಅನಾಥವಾಯಿತು. ವಿದ್ವತ್‌ಲೋಕ ಒಬ್ಬ ಸತ್ಯನಿಷ್ಠ ಸಂಶೋಧಕನನ್ನು ಕಳೆದುಕೊಂಡು ಭರಿಸಲಾರದ ಹಾನಿಗೊಳಗಾಯಿತು.

* * * *

ಡಾ. ಎಂ. ಎಂ. ಕಲಬುರ್ಗಿ ಅವರ ಬೋಧಕೇತರ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಕಾರ್ಯವ್ಯಾಪ್ತಿ ಬಹು ದೊಡ್ಡದು. ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ, ಅಖಿಲ ಕರ್ನಾಟಕ ಕೇಂದ್ರ ಕ್ರಿಯಾ ಸಮಿತಿಯ ಕಾರ್ಯದರ್ಶಿಯಾಗಿ; ಯುಜಿಸಿ ಭಾರತೀಯ ಭಾಷೆಗಳ ಸಲಹಾ ಸಮಿತಿ, ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ರಚನಾ ಸಮಿತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯರಾಗಿ; ದ.ರಾ.ಬೇಂದ್ರೆ ಟ್ರಸ್ಟ್, ಬಸವರಾಜ ಕಟ್ಟಿಮನಿ ಪ್ರತಿಷ್ಠಾನ, ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆಯ ಅಧ್ಯಕ್ಷರಾಗಿ; ಗದಗ ಲಿಂಗಾಯತ ಅಧ್ಯಯನ ಸಂಸ್ಥೆ, ಬೆಳಗಾವಿ ಲಿಂಗಾಯತ ಅಧ್ಯಯನ ಅಕಾಡೆಮಿ, ನಿಡಸೋಸಿ ಶರಣ ಸಂಸ್ಕೃತಿ ಅಕಾಡೆಮಿ, ಕೊಡೆಕಲ್ಲ ಬಸವೇಶ್ವರ ಅಧ್ಯಯನ ಸಂಸ್ಥೆ, ಮೈಸೂರು ಸಮಗ್ರ ಸ್ವರವಚನ ಸಾಹಿತ್ಯ ಪ್ರಕಟಣ ಮಾಲೆ, ಶಿವಮೊಗ್ಗ ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆಗಳ ನಿರ್ದೇಶಕರಾಗಿ; ಸಮಗ್ರ ವಚನ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಅಪ್ರಕಟಿತ ಕನ್ನಡ ಸಾಹಿತ್ಯ ಪ್ರಕಟಣ ಯೋಜನೆ, ಪ್ರಾಚೀನ ಗದ್ಯ ಸಾಹಿತ್ಯ ಪ್ರಕಟಣ ಯೋಜನೆ, ವಚನ ಬಹುಭಾಷಾ ಭಾಷಾಂತರ ಯೋಜನೆ, ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಬಸವರಾಜ ಕಟ್ಟಿಮನಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ, ಗಳಗನಾಥ ಸಮಗ್ರ ಕಾದಂಬರಿ ಪ್ರಕಟಣ ಯೋಜನೆ, ಕೆರೂರ ವಾಸುದೇವಾಚಾರ್ಯ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆಗಳ ಪ್ರಧಾನ ಸಂಪಾದಕರಾಗಿ ಅವರು ಮಾಡಿದ ಕಾರ್ಯಗಳು ಚಿರಸ್ಮರಣೀಯವೆನಿಸಿವೆ.

ಡಾ. ಕಲಬುರ್ಗಿ ಅವರ ಈ ಬಹುಮುಖ-ಮೌಲಿಕ ಸಾಹಿತ್ಯ-ಸಂಶೋಧನ ಕಾರ್ಯ ಸಾಧನೆಗಾಗಿ ಸಾಹಿತ್ಯ ಅಕಾಡೆಮಿ, ಸರ್ಕಾರ ಹಾಗೂ ಅನೇಕ ಸಂಘ ಸಂಸ್ಥೆಗಳು ಉನ್ನತ-ಪ್ರತಿಷ್ಠಿತ ಪ್ರಶಸ್ತಿ-ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಅವರಿಗೆ ದೊರೆತ ೨೫ ಕ್ಕೂ ಹೆಚ್ಚು ಪ್ರಶಸ್ತಿಗಳಲ್ಲಿ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ರಾಷ್ಟ್ರೀಯ ಬಸವ ಪುರಸ್ಕಾರ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಗಳ ಗ್ರಂಥ ಪುರಸ್ಕಾರ, ಹಂಪಿ ಕನ್ನಡ ವಿಶ್ವವಿದ್ಯಾಲಯದ ನಾಡೋಜ ಪ್ರಶಸ್ತಿ ಪ್ರಮುಖವಾದವು.

ಸಾಹಿತ್ಯ ರಾಶಿ :

ಡಾ. ಎಂ. ಎಂ. ಕಲಬುರ್ಗಿ ಅವರ ಆಸಕ್ತಿ ಕ್ಷೇತ್ರಗಳ ಹರಹು ಬಲು ದೊಡ್ಡದು; ಬರವಣಿಗೆಯ ವ್ಯಾಪ್ತಿ ಬಹು ವಿಸ್ತಾರ. ಸೃಜನ-ಸೃಜನೇತರ ಉಭಯ ಕ್ಷೇತ್ರಗಳಲ್ಲಿ ಸಮರ್ಥ ಕೃಷಿ. ಅದರಲ್ಲಿಯೇ ಸಂಶೋಧನ ಕ್ಷೇತ್ರದ ಬೆಳೆ ತುಂಬ ಹುಲುಸು; ಫಲಭರಿತ. ಅದಕ್ಕೆ ಗರಿಷ್ಠ ಬೆಲೆ-ಬೇಡಿಕೆ.

ಕನ್ನಡ ಸಂಶೋಧನ ಕ್ಷೇತ್ರವನ್ನು ಸಂಪದ್ಭರಿತಗೊಳಿಸಿ, ಅದಕ್ಕೊಂದು ನೂತನ ಆಯಾಮ ಆವಿಷ್ಕಾರವನ್ನು ನೀಡಿದ ಕಲಬುರ್ಗಿ ಅವರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ವಿಷಯಗಳ ವೈವಿಧ್ಯತೆ ಬೆರಗುಗೊಳಿಸುತ್ತದೆ: ಶಾಸನ, ಹಳಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ, ಚರಿತ್ರೆ, ಜಾನಪದ, ಹಸ್ತಪ್ರತಿಶಾಸ್ತ್ರ, ಗ್ರಂಥಸಂಪಾದನೆ, ನಾಮವಿಜ್ಞಾನ, ಛಂದಸ್ಸು, ವ್ಯಾಕರಣ, ಪ್ರಾಚ್ಯವಸ್ತುಶಾಸ್ತ್ರ, ಸಂಶೋಧನೆ, ವಿಮರ್ಶೆ, ನಾಡು–ನುಡಿ–ಸಂಸ್ಕೃತಿ–ಹೀಗೆ ಅದು ಅನಂತಮುಖಿಯಾಗಿದೆ.

ಡಾ. ಕಲಬುರ್ಗಿ ಅವರು ತಮ್ಮ ಆಸಕ್ತಿಯ ಕ್ಷೇತ್ರಗಳು, ಅಧ್ಯಯನದ ಸ್ವರೂಪ–ವ್ಯಾಪ್ತಿ ಮತ್ತು ವಿಧಾನ ಕುರಿತು ಬೇರೆ ಬೇರೆ ಕೃತಿಗಳ ಅರಿಕೆ, ಲೇಖಕರ ನುಡಿ, ಮಾರ್ಗಕ್ಕೆ ಮೊದಲು ಇತ್ಯಾದಿ ಬರಹಗಳಲ್ಲಿ ಹೀಗೆ ಹೇಳಿಕೊಂಡಿದ್ದಾರೆ:

"ನನ್ನದು ಬಹುಮುಖಿ ಅಧ್ಯಯನ. ಪ್ರಾಚೀನ ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಮೈ–ಮನಸ್ಸುಗಳನ್ನು ಅಭ್ಯಸಿಸುತ್ತಲೇ ವ್ಯಾಕರಣ, ಅಲಂಕಾರ, ಛಂದಸ್ಸು ಇತ್ಯಾದಿ ಶಾಸ್ತ್ರಗಳನ್ನು ತೆಕ್ಕೆಗೆ ಅಳವಡಿಸಿಕೊಂಡ ಬಳಿಕ, ನಾನು ಪ್ರವೇಶಿಸಿದ ಹೊಸ ಕ್ಷೇತ್ರ ಶಾಸನ. ಆಮೇಲೆ ಆಧುನಿಕ ಶೈಕ್ಷಣಿಕ ಶಿಸ್ತುಗಳೆನಿಸಿದ ಜಾನಪದ, ನಾಮವಿಜ್ಞಾನ, ಗ್ರಂಥಸಂಪಾದನೆ ಇತ್ಯಾದಿಗಳತ್ತ ನನ್ನ ಒಲವು ಬೆಳೆಯಿತು. ಹೀಗಾಗಿ ಈ ಎಲ್ಲ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕ, ಲೇಖನ ಬರವಣಿಗೆ ನನ್ನಿಂದ ಸಾಧ್ಯವಾಯಿತು. ಈ ಎಲ್ಲ ಬರವಣಿಗೆಯ ಹಿಂದೆ ಸಂಶೋಧನೆಯ ಸಶಬ್ದ ಶ್ರುತಿ, ಕೆಲವೊಮ್ಮೆ ನಿಃಶಬ್ದ ಶ್ರುತಿ ಕೆಲಸಮಾಡಿದೆ."

"ಸಾಹಿತ್ಯವನ್ನು ಘಟಿತವಸ್ತು (Fact) ಕೇಂದ್ರಿತ ಮತ್ತು ಕಲ್ಪಿತವಸ್ತು (Fiction) ಕೇಂದ್ರಿತವೆಂದು ವರ್ಗೀಕರಿಸಬಹುದಾಗಿದೆ. ಇವುಗಳಲ್ಲಿ ಸಂಭವಿಸಿದ ಜೀವನವನ್ನು, ಜೀವನ ಮೌಲ್ಯಗಳನ್ನು ನಮ್ಮ ಮುಂದೆ ಕಲಾತ್ಮಕವಾಗಿ ಸ್ಥಾಪಿಸುವ ಘಟಿತವಸ್ತು ಸಾಹಿತ್ಯವೇ ಸಮಾಜಕ್ಕೆ ಹೆಚ್ಚು ಮಾರ್ಗದರ್ಶಕ, ಹೆಚ್ಚು ಪ್ರಯೋಜಕವೆಂದು ನನ್ನ ಭಾವನೆ. ಹೀಗಾಗಿ ನನಗೆ ಸಂಭವನೀಯ ವಸ್ತುವನ್ನೊಳಗೊಂಡ ಕಥೆ, ಕಾದಂಬರಿ ಸಾಹಿತ್ಯಕ್ಕಿಂತ, ಸಂಭವಿಸಿದ ವಸ್ತುವನ್ನೊಳಗೊಂಡ ಆತ್ಮಚರಿತ್ರೆ, ಜೀವನ ಚರಿತ್ರೆ, ಸಾಹಿತ್ಯ ಹೆಚ್ಚು ಪ್ರಿಯವಾದುದು. ಈ ಕಾರಣದಿಂದಾಗಿ ನಾನು ಕಲ್ಪಿತ ಸಾಹಿತ್ಯದ ಜೊತೆಗೆ ಘಟಿತ ಸಾಹಿತ್ಯದತ್ತ ವಿಶೇಷ ಒಲವು ಬೆಳೆಸಿಕೊಂಡಿದ್ದೇನೆ"(ಕನ್ನಡ ಶಾಸನ ಸಾಹಿತ್ಯ–ಲೇಖಕರ ಮಾತು).

"ಕನ್ನಡ ಸೃಜನ ಸಾಹಿತ್ಯ ನವೋದಯ, ನವ್ಯ, ನವ್ಯೋತ್ತರವೆಂಬ ಘಟ್ಟಗಳನ್ನು ರೂಪಿಸಿಕೊಳ್ಳುತ್ತ ಬಂದ ಹಾಗೆ, ಕನ್ನಡ ಸಂಶೋಧನ ಸಾಹಿತ್ಯವೂ ರೂಪಿಸಿಕೊಳ್ಳುತ್ತ ಬಂದ ಸಾಮಗ್ರಿ ಶೋಧನಿಷ್ಠ, ಸಾಮಗ್ರಿ ವಿಶ್ಲೇಷಣನಿಷ್ಠ, ಸಾಮಗ್ರಿವ್ಯಾಖ್ಯಾನ ನಿಷ್ಠ ಘಟ್ಟಗಳಲ್ಲಿ ನಾನು ದುಡಿಯುತ್ತ ಬಂದಿದ್ದೇನೆ. ಇದೇ ರೀತಿ ಕನ್ನಡ ಸಂಶೋಧನೆ ಆಗಾಗ ಅಳವಡಿಸಿಕೊಳ್ಳುತ್ತ ಬಂದ ಸಂಸ್ಕೃತಿ, ಶಾಸನ, ಜಾನಪದ, ನಾಮವಿಜ್ಞಾನ ಇತ್ಯಾದಿ ಹೊಸ ಹೊಸ ಕ್ಷೇತ್ರಗಳಲ್ಲಿಯೂ ನಾನು ಬಿಚ್ಚಿಕೊಂಡಿದ್ದೇನೆ. ಹೀಗೆ ಈ ಮೂರು ಆಯಾಮಗಳನ್ನೊಳಗೊಂಡ ಕನ್ನಡ ಸಂಶೋಧನ 'ಮಹಾಮಾರ್ಗ'ದಲ್ಲಿ ನಡೆದು ಬಂದವನಾದುದರಿಂದ ನನ್ನ (ಸಂಪ್ರಬಂಧಗಳ ಸಂಕಲನ) ಕೃತಿಗಳಿಗೆ 'ಮಾರ್ಗ' ಎಂದು ಹೆಸರಿಟ್ಟಿದ್ದೇನೆ. ಕನ್ನಡ ಸಂಶೋಧನೆಯ ಎಲ್ಲ ಮಾದರಿಗಳನ್ನು ಈ ಪ್ರಬಂಧಗಳು ಪ್ರತಿನಿಧಿಸುತ್ತವೆ ಎಂದು ಸೂಚಿಸಬಯಸುತ್ತೇನೆ."

"ಸಂಶೋಧನೆ ಎನ್ನುವುದು ಅಲ್ಪ ವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮಕ್ಕೆ ಸಾಗುವ ಕ್ರಿಯೆಯಾಗಿದೆ. ಹೀಗಾಗಿ ಹೊಸ ಹೊಸ ಆಕರಗಳು ಲಭ್ಯವಾದಂತೆ ಸಂಶೋಧಕ ತನ್ನ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಗುತ್ತದೆ.'ಸಂಶೋಧಕ ತಪ್ಪು ಹೇಳಿರಬಹುದು, ಸುಳ್ಳು ಹೇಳಿರಲಾರ'

ಎನ್ನುವುದು ಈ ಅರ್ಥದಲ್ಲಿ. ಸಂಶೋಧನ ಪ್ರಬಂಧಗಳನ್ನು ಬರೆಯುವಾಗ ಈ ಎಲ್ಲ ಆದರ್ಶಗಳು ನನ್ನ ಮನಸ್ಸಿನಲ್ಲಿರುತ್ತವೆ. 'ಜನಮೆಚ್ಚೆ ನಡಕೊಂಡರೇನುಂಟು ಲೋಕದಿ ಮನಮೆಚ್ಚೆ ನಡಕೊಂಬುದೇ ಚೆಂದವು' ಎಂಬುದಂತೂ ನನ್ನನ್ನು ಸದಾ ಎಚ್ಚರಿಸುತ್ತಲಿರುತ್ತದೆ"(ಮಾರ್ಗ-೧, ೨ ಅರಿಕೆ).

"೨೦ನೆಯ ಶತಮಾನದ ಉತ್ತರಾರ್ಧದಲ್ಲಿ 'ಚಾರಿತ್ರಿಕ ಶೋಧ'ದೊಂದಿಗೆ 'ಸಾಂಸ್ಕೃತಿಕ ಶೋಧ' ಹೆಸರಿನ ಹೊಸಬಗೆಯ 'ಸಾಮಾಜಿಕ ಪ್ರಕ್ರಿಯಾ ಶೋಧ' ಕರ್ನಾಟಕದ ತುಂಬ ಕಣ್ಣು ತೆರೆಯಿತು. ಕಾಲಗತಿಸಿದಂತೆ ಇದರ ಹಿಂದಿರುವ 'ಸಾಮಾಜಿಕ ಕಾರಣ ಶೋಧ'ದ ಮೇಲೆ ಹೆಚ್ಚು ಒತ್ತು ಬಿದ್ದಿತು. ಹೀಗಾಗಿ ಇಂದು ಕರ್ನಾಟಕದಲ್ಲಿ ಆಕರಶೋಧ, ಚಾರಿತ್ರಿಕ ಶೋಧ, ಸಾಮಾಜಿಕ ಶೋಧ, ಸಾಮಾಜಿಕ ಪ್ರಕ್ರಿಯಾ ಶೋಧ ಮತ್ತು ಸಾಮಾಜಿಕ ಕಾರಣಶೋಧಗಳೆಂಬ ಐದು ಆಯಾಮಗಳು ನಮ್ಮ ಸಂಶೋಧನೆಯಲ್ಲಿ ಕಾಣಿಸಿಕೊಂಡಿವೆ. ನಾನು ಈ ಐದೂ ಆಯಾಮಗಳಲ್ಲಿ ಬಿಚ್ಚಿಕೊಂಡುದರ ಫಲಿತಗಳನ್ನು 'ಮಾರ್ಗ' ಹೆಸರಿನ ನನ್ನ ಮೂರು ಸಂಪುಟಗಳಲ್ಲಿ, ಅದೇ ರೀತಿ ಈ ನಾಲ್ಕನೆಯ ಸಂಪುಟದಲ್ಲಿ ಕಾಣಬಹುದು".

"ಇತ್ತೀಚೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ, ರಾಜಕೀಯ-ಧಾರ್ಮಿಕ-ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಸುಳ್ಳು ಇತಿಹಾಸವನ್ನು ಮುಂದುಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ. ಸತ್ಯವೆಂಬ ಭೂತಕಾಲದ ಬಲದಿಂದ ಅಸತ್ಯವೆಂಬ ವರ್ತಮಾನಕಾಲವನ್ನು ಸರಿಪಡಿಸುವುದಾಗಿದೆ. ಹೀಗಾಗಿ ನನ್ನ ಸುತ್ತಲಿನ ವರ್ತಮಾನದ ಅಸತ್ಯಗಳು ಭೂತದ ಸತ್ಯವನ್ನು ಹುಡುಕಲು ನನ್ನನ್ನು ಒತ್ತಾಯಿಸಿದ ಫಲವಾಗಿ, ಇಲ್ಲಿಯ ಬಹಳಷ್ಟು ಲೇಖನಗಳು ಹುಟ್ಟಿಕೊಂಡಿವೆ. ಸಮಾಜದ ಪ್ರಚಲಿತ ಸಮಸ್ಯೆಗಳನ್ನು ಎತ್ತಿಕೊಂಡುದಲ್ಲದೆ, ಶಿಷ್ಟ ಆಕರಗಳೊಂದಿಗೆ ಪರಿಶಿಷ್ಟ ಆಕರಗಳನ್ನೂ ಬಳಸಿಕೊಂಡ ಕಾರಣ, ಇವು ಒಂದಿಷ್ಟು ಸಾಮಾಜಿಕ ಹೊಳಪನ್ನು ಒಳಗೊಂಡಿವೆ"(ಮಾರ್ಗ-೪, ಅರಿಕೆ).

ಈ ಮೇಲಿನ ಉದ್ಧರಣೆಗಳು ಡಾ. ಎಂ. ಎಂ. ಕಲಬುರ್ಗಿ ಅವರ ಒಟ್ಟು ಸಂಶೋಧನೆಯ ಸ್ವರೂಪ-ವ್ಯಾಪ್ತಿ-ವಿಧಾನ-ದೃಷ್ಟಿ ಧೋರಣೆಗಳನ್ನು ಸ್ಪಷ್ಟಪಡಿಸುತ್ತವೆ. ಅಂದರೆ ಅವರು ಆಕರಮುಖಿ ಶೋಧದ ಮೂಲಕ ಹೊರಟು, ವಿಶ್ಲೇಷಣಮುಖಿ ಶೋಧದಲ್ಲಿ ಮುಂದುವರೆದು ವ್ಯಾಖ್ಯಾನಮುಖಿ ಶೋಧವನ್ನು ತಲುಪಿದ ರೀತಿಯನ್ನು; ವಸ್ತುನಿಷ್ಠ ಸಂಶೋಧನೆಯಿಂದ ತೊಡಗಿ, ಸಂಸ್ಕೃತಿನಿಷ್ಠ ಸಂಶೋಧನೆಯಲ್ಲಿ ಸಾಗಿ, ಕೊನೆಗೆ ಸಮಾಜನಿಷ್ಠ ಸಂಶೋಧನೆಯಲ್ಲಿ ನೆಲೆನಿಂತ ನಿಲವನ್ನು ನಿಚ್ಚಳವಾಗಿ ನಿರ್ವಚಿಸುತ್ತವೆ.

* * * *

ಡಾ. ಕಲಬುರ್ಗಿ ಅವರ ಸಾಹಿತ್ಯ ಸೃಷ್ಟಿ ಎರಡು ಬಗೆಯಾಗಿ ನಡೆದಿದೆ. ಒಂದು ಇಡಿಯಾದ ಗ್ರಂಥ ರೂಪದಲ್ಲಿ; ಮತ್ತೊಂದು-ಬಿಡಿಯಾದ ಸಂಪ್ರಬಂಧ ಸ್ವರೂಪದಲ್ಲಿ. ಅವರು ತಮ್ಮ ಎಪ್ಪತ್ತೇಳು ವರ್ಷದ ಜೀವಿತಾವಧಿಯಲ್ಲಿ-ಸು. ೫೦ ವರ್ಷ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. ೧೯೬೨ ರಲ್ಲಿ ಪ್ರಕಟವಾದ 'ಬಸವಣ್ಣನವರ ಜೀವನ ಚರಿತ್ರೆ' ಅವರ ಮೊದಲ ಲೇಖನವೆನಿಸಿದರೆ, ೧೯೬೮ ರಲ್ಲಿ

ಹೊರ ಬಂದ 'ಬಸವಣ್ಣನವರನ್ನು ಕುರಿತ ಶಾಸನಗಳು' ಎಂಬುದು ಮೊದಲ ಕೃತಿಯಾಗಿದೆ. ಹಾಗೆಯೇ 'ನಾಲ್ಕು ಜಾತಿವಿಡಿದು ಬಂದ ಜಂಗಮವೆ ಶ್ರೇಷ್ಠ?' ಎಂಬುದು ಅವರ ಕೊನೆಯ ಲೇಖನ; 'ವಚನ ವರ್ಷ' ಎಂಬುದು ಕೊನೆಯ ಕೃತಿ. ಈ ಮಧ್ಯದ ಅವಧಿಯಲ್ಲಿ ಅವರು ಒಟ್ಟು ೧೧೬ ಕೃತಿಗಳನ್ನು ಮತ್ತು ೮೯೩ ಲೇಖನಗಳನ್ನು ಪ್ರಕಟಿಸಿದ್ದಾರೆ.

ಡಾ. ಕಲಬುರ್ಗಿ ಅವರ ಒಟ್ಟು ಕೃತಿಗಳನ್ನು ಸೃಜನ ಮತ್ತು ಸೃಜನೇತರ ಎಂದು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಸೃಜನ ಸಾಹಿತ್ಯದಲ್ಲಿ ಅವರ ಕಾವ್ಯ ಮತ್ತು ನಾಟಕ ಕೃತಿಗಳು ಸೇರುತ್ತವೆ. ಸೃಜನೇತರದಲ್ಲಿ ಸ್ವತಂತ್ರ ಕೃತಿಗಳು, ಸಂಪಾದಿತ ಕೃತಿಗಳು ಎಂದು; ಸಂಪಾದಿತ ಕೃತಿಗಳಲ್ಲಿ ಪ್ರಾಚೀನ-ಆಧುನಿಕ ಎಂದು ಮತ್ತೆ ಎರಡೆರಡು ವಿಭಾಗಗಳನ್ನು ಮಾಡಬಹುದು. ಸ್ವತಂತ್ರ ಕೃತಿಗಳಲ್ಲಿ ಶಾಸನ, ಶಾಸ್ತ್ರ, ಸಂಶೋಧನೆ ಮತ್ತು ಜಾನಪದಕ್ಕೆ ಸಂಬಂಧಿಸಿದ ಕೃತಿಗಳು ಸೇರಿದರೆ, ಪ್ರಾಚೀನ ಸಂಪಾದಿತ ಕೃತಿಗಳಲ್ಲಿ ಶಾಸನ, ಕಾವ್ಯ, ವಚನ, ದಾಖಲು ಸಾಹಿತ್ಯ ಕೃತಿಗಳು ಮತ್ತು ಆಧುನಿಕ ಸಂಪಾದಿತ ಕೃತಿಗಳಲ್ಲಿ ಲೇಖನ ಸಂಗ್ರಹ, ಜೀವನ ಚರಿತ್ರೆ ಮತ್ತು ಅಭಿನಂದನ ಗ್ರಂಥಗಳು ಸೇರುತ್ತವೆ. ಅವುಗಳ ವಿವರ ಹೀಗಿದೆ :

ಸೃಜನ ಸಾಹಿತ್ಯ

೧. ನೀರು ನೀರಡಿಸಿತ್ತು (ಕವನ), ೨. ನೀರಾಗ ನಿಂತೀನಿ ನೀರಡಿಸಿ (ಕವನ), ೩. ಕೆಟ್ಟಿತ್ತು ಕಲ್ಯಾಣ (ನಾಟಕ), ೪. ಖರೇ ಖರೇ ಸಂಗ್ಯಾ ಬಾಳ್ಯಾ (ನಾಟಕ), ೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ).

ಸೃಜನೇತರ ಸಾಹಿತ್ಯ (ಸ್ವತಂತ್ರ ಕೃತಿಗಳು) :

ಶಾಸನ ಸಾಹಿತ್ಯ

೬. ಬಸವಣ್ಣನವರನ್ನು ಕುರಿತ ಶಾಸನಗಳು, ೭. ಶಾಸನಗಳಲ್ಲಿ ಶಿವಶರಣರು, ೮. ಸಮಾಧಿ-ಬಲಿದಾನ-ವೀರಮರಣ ಸ್ಮಾರಕಗಳು, ೯. ಮಹಾರಾಷ್ಟ್ರದ ಕನ್ನಡ ಶಾಸನಗಳು.

ಶಾಸ್ತ್ರ ಸಾಹಿತ್ಯ

೧೦. ಕನ್ನಡ ಗ್ರಂಥಸಂಪಾದನಶಾಸ್ತ್ರ, ೧೧. ಪ್ರತಿಬಿಂಬ, ೧೨. ಸಾಹಿತ್ಯ ಸಂಪಾದನೆ, ೧೩. ಕನ್ನಡ ನಾಮವಿಜ್ಞಾನ, ೧೪. ಕನ್ನಡ ಸಂಶೋಧನಶಾಸ್ತ್ರ, ೧೫. ಕನ್ನಡ ಹಸ್ತಪ್ರತಿಶಾಸ್ತ್ರ.

ಸಂಶೋಧನ ಸಾಹಿತ್ಯ

೧೬. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ೧೭. ಶಾಸನ ವ್ಯಾಸಂಗ-೧, ೧೮. ಶಾಸನ ವ್ಯಾಸಂಗ-೨, ೧೯. ಕನ್ನಡ ಶಾಸನ ಸಾಹಿತ್ಯ, ೨೦. ಐತಿಹಾಸಿಕ, ೨೧. ವೀರಶೈವ : ಇತಿಹಾಸ ಭೂಗೋಳ, ೨೨. ಶುದ್ಧಶೈವ ಮತ್ತು ಗೋಳಕಿಮಠ ಸಂಪ್ರದಾಯ, ೨೩. ಪರಿಕಲ್ಪನೆ, ೨೪. ಪಂಚಾಚಾರ್ಯರ ನಿಜಸ್ವರೂಪ, ೨೫. ಸಂಸ್ಕೃತಿ-ವಿಕೃತಿ, ೨೬. ಕನ್ನಡ ಅರಸರ ಅಕನ್ನಡ ಪ್ರಜ್ಞೆ, ೨೭. ನಿರ್ವಚನ.

ಜಾನಪದ ಸಾಹಿತ್ಯ

೨೮. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ, ೨೯. ಜನಪದ ಮಾರ್ಗ.

ಲೇಖನ ಸಂಪುಟ

೩೦. ಮಾರ್ಗ–೧, ೩೧. ಮಾರ್ಗ–೨, ೩೨. ಮಾರ್ಗ–೩, ೩೩. ಮಾರ್ಗ–೪, ೩೪. ಮಾರ್ಗ–೫, ೩೫. ಮಾರ್ಗ–೬, ೩೬. ಮಾರ್ಗ–೭, ೩೭. ಮಾರ್ಗ–೮.

ಸೃಜನೇತರ ಸಾಹಿತ್ಯ (ಪ್ರಾಚೀನ ಸಂಪಾದಿತ ಕೃತಿಗಳು):
ಶಾಸನ ಸಾಹಿತ್ಯ

೩೮. ಶಾಸನ ಸಂಪದ, ೩೯. ಧಾರವಾಡ ಜಿಲ್ಲೆಯ ಶಾಸನ ಸೂಚಿ, ೪೦. ವಿಜಾಪುರ ಜಿಲ್ಲೆಯ ಶಾಸನ ಸೂಚಿ, ೪೧. ಧಾರವಾಡ ತಾಲೂಕಿನ ಶಾಸನಗಳು, ೪೨. ಶಾಸನ ಸೂಕ್ತಿಸುಧಾರ್ಣವ.

ದಾಖಲು ಸಾಹಿತ್ಯ

೪೩. ಕರ್ನಾಟಕದ ಕೈಫಿಯತ್ತುಗಳು, ೪೪. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ ಜೈನ ಬಸದಿ ಹಸ್ತಪ್ರತಿಸೂಚಿ, ೪೫. ವಚನ ಸಾಹಿತ್ಯ ಆಕರ ಕೋಶ, ೪೬. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧.

ವಚನ ಸಾಹಿತ್ಯ

೪೭. ಬಸವಸ್ತೋತ್ರದ ವಚನಗಳು, ೪೮. ಬಸವಣ್ಣನವರ ಟೀಕಿನ ವಚನಗಳು ಭಾಗ–೧, ೪೯. ಬಸವಣ್ಣನವರ ಟೀಕಿನ ವಚನಗಳು ಭಾಗ–೨, ೫೦. ವಚನ ಸಂಕಲನ ಸಂಪುಟ–೪, ೫೧. ವಚನ ಸಂಕಲನ ಸಂಪುಟ–೬, ೫೨. ಬಸವಣ್ಣನವರ ವಚನ ಸಂಪುಟ, ೫೩. ಸಂಕೀರ್ಣ ವಚನ ಸಂಪುಟ, ೫೪. ಚೆನ್ನಬಸವಣ್ಣನವರ ವಚನ ಮಹಾಸಂಪುಟ, ೫೫. ಸಿದ್ಧರಾಮಯ್ಯದೇವರ ವಚನಗಳು, ೫೬. ಪರಮಾನಂದ ಸುಧೆ, ೫೭. ವಚನ, ೫೮. ಏಕೋತ್ತರಶತಸ್ಥಲ, ೫೯. ಶೂನ್ಯಸಂಪಾದನೆ, ೬೦. ವಚನ ವರ್ಷ, ೬೧. ವಚನಶಾಸ್ತ್ರಸಾರ(ಸಂಪುಟ–೧), ೬೨ ಡಾ. ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫.

ಕಾವ್ಯ ಸಾಹಿತ್ಯ

೬೩. ಮಲ್ಲಿನಾಥ ಪುರಾಣ ಸಂಗ್ರಹ, ೬೪. ಶಬ್ದಮಣಿದರ್ಪಣ ಸಂಗ್ರಹ, ೬೫. ಶಿವಯೋಗ ಪ್ರದೀಪಿಕಾ, ೬೬. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ, ೬೭. ಕೊಂಡಗುಳಿ ಕೇಶಿರಾಜನ ಕೃತಿಗಳು, ೬೮. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ, ೬೯. ಆದಯ್ಯನ ಲಘುಕೃತಿಗಳು, ೭೦. ನಿಂಬಸಾಮಂತ ಚರಿತೆ, ೭೧. ಸಿರುಮಣ ನಾಯಕನ ಸಾಂಗತ್ಯ, ೭೨. ಸಿರುಮನ ಚರಿತೆ, ೭೩. ಗೊಲ್ಲ ಸಿರುಮನ ಚರಿತೆ, ೭೪. ಷಟ್‌ಸ್ಥಲ ಶಿವಾಯಣ, ೭೫. ಹರಿಹರನ ರಗಳೆಗಳು, ೭೬. ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು, ೭೭. ಹೊಸಕುಮಾರರಾಮನ ಸಾಂಗತ್ಯ, ೭೮. ಕೊಮಾರ ರಾಮಯ್ಯನ ಚರಿತ್ರೆ, ೭೯. ಬಾಲರಾಮಯ್ಯನ ಸಾಂಗತ್ಯ, ೮೦. ಹಳೆಯಕುಮಾರ ರಾಮನ ಸಾಂಗತ್ಯ, ೮೧. ಸಿದ್ಧಮಂಕ ಚರಿತೆ, ೮೨. ತಗರ ಪವಾಡ, ೮೩. ಗುಂಡಬಸವೇಶ್ವರ ಪುರಾಣ, ೮೪. ಕೊಡೆಕಲ್ಲ ವಚನ ವಾಕ್ಯ, ೮೫. ಕಿತ್ತೂರ ಸಂಸ್ಥಾನ ಸಾಹಿತ್ಯ–೧, ೮೬. ಕಿತ್ತೂರ ಸಂಸ್ಥಾನ ಸಾಹಿತ್ಯ–೨, ೮೭. ಕಿತ್ತೂರ ಸಂಸ್ಥಾನ ಸಾಹಿತ್ಯ–೩.

ಸೃಜನೇತರ ಸಾಹಿತ್ಯ (ಆಧುನಿಕ ಸಂಪಾದಿತ ಕೃತಿಗಳು):

ಲೇಖನ ಸಂಗ್ರಹಗಳು :

೮೮. ದಿಗಂಬರ(ಕವನ ಸಂಗ್ರಹ), ೮೯. ಬಸವ ಮಾರ್ಗ-೧(ಲೇಖನ ಸಂಗ್ರಹ), ೯೦. ಬಸವ ಮಾರ್ಗ-೨, ೯೧. ಬಸವ ಮಾರ್ಗ-೩, ೯೨. ವಚನಸಾಹಿತ್ಯದ ಪ್ರಕಟಣೆಯ ಇತಿಹಾಸ, ೯೩. ಕರ್ನಾಟಕ ಗಾಂಧಿ ಹರ್ಡೇಕರ ಮಂಜಪ್ಪ, ೯೪. ಕೆಳದಿ ಸಂಸ್ಥಾನ : ಸಮಗ್ರ ಅಧ್ಯಯನ, ೯೫. ಮಾನಸೋಲ್ಲಾಸ ಪರಿಚಯ, ೯೬. ಮಾನಸೋಲ್ಲಾಸ ಸಂಪುಟ ೧-೨, ೯೭. ಸ್ವಾದಿ ಅರಸು ಮನೆತನ, ೯೮. ಬೀಳಗಿ ಅರಸು ಮನೆತನ, ೯೯. ಸ್ವರವಚನ ವಿಚಾರ ಸಂಕಿರಣ ಸಂಪುಟ, ೧೦೦. ಭಾರತಸ್ವಾತಂತ್ರ್ಯ ಮತ್ತು ಕರ್ನಾಟಕ ಏಕೀಕರಣ : ಲಿಂಗಾಯತರ ಪಾತ್ರ, ೧೦೧. ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು.

ಜೀವನ ಚರಿತ್ರೆಗಳು

೧೦೨. ಅರಟಾಳ ರುದ್ರಗೌಡರ ಚರಿತ್ರೆ, ೧೦೩. ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪ ಸಂಪುಟ-೨, ೧೦೪. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ, ೧೦೫. ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ, ೧೦೬. ಮಡಿವಾಳಪ್ಪ ಸಾಸನೂರ ಬದುಕು-ಬರೆಹ, ೧೦೭. ಶಿವಾನುಭವ ಪತ್ರಿಕೆ.

ಅಭಿನಂದನ ಗ್ರಂಥಗಳು

೧೦೮. ಬೆಳ್ವೊಲ, ೧೦೯. ಸಾರಂಗಶ್ರೀ, ೧೧೦. ವಜ್ರಕುಸುಮ, ೧೧೧. ಲಿಂಗಾಯತ, ೧೧೨. ಕಲ್ಯಾಣದೀಪ್ತಿ, ೧೧೩. ಶರಣಶ್ರೀ.

ಇತರೆ

೧೧೪. ನನ್ನ ಜೀವನ ಚರಿತ್ರೆ(ಷಣ್ಮುಖಪ್ಪ ಅಂಗಡಿಯವರ ಆತ್ಮಚರಿತ್ರೆ), 115. My Autobiography, 116. Heaven of Equality.

ಇವುಗಳಲ್ಲಿ ಸಂಶೋಧನ ಸಾಹಿತ್ಯ ವಿಭಾಗಕ್ಕೆ ಸೇರಿರುವ ಶಾಸನ ವ್ಯಾಸಂಗ ೧,೨, ಕನ್ನಡ ಶಾಸನ ಸಾಹಿತ್ಯ, ಐತಿಹಾಸಿಕ, ವೀರಶೈವದ ಇತಿಹಾಸ ಭೂಗೋಳ, ಶುದ್ಧಶೈವ ಮತ್ತು ಗೊಳಕಿಮಠ ಸಂಪ್ರದಾಯ, ಪರಿಕಲ್ಪನೆ, ಪಂಚಾಚಾರ್ಯರ ನಿಜಸ್ವರೂಪ, ಸಂಸ್ಕೃತಿ-ವಿಕೃತಿ, ಕನ್ನಡ ಅರಸರ ಅಕನ್ನಡ ಪ್ರಜ್ಞೆ, ನಿರ್ವಚನ ಎಂಬ ೧೧ ಕೃತಿಗಳು ಮಾರ್ಗ ಸಂಪುಟಗಳಲ್ಲಿನ ಲೇಖನಗಳನ್ನು ಆಯ್ದು ಸಂಗ್ರಹಿಸಿದ ಸಂಕಲನಗಳಾಗಿರುವುದರಿಂದ ಅವು ಸ್ವತಂತ್ರ ಕೃತಿಗಳಲ್ಲ; ಹಾಗೆಯೇ ವಚನ ಸಾಹಿತ್ಯ ಸಂಪಾದನೆಗಳಲ್ಲಿ ಸೇರಿದ ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೫ ಅದೇ ಭಾಗಕ್ಕೆ ಸೇರಿದ ವಚನಶಾಸ್ತ್ರಸಾರದ ಪುನರ್ ಮುದ್ರಣವಾಗಿದೆ. ಕಾವ್ಯ ಸಂಪಾದನೆಗಳಲ್ಲಿ ಸೇರಿದ 'ಹರಿಹರ ವಿರಚಿತ ಕನ್ನಡ ಶರಣರ ಕಥೆಗಳು' ಹರಿಹರನ ರಗಳೆಗಳು ಗ್ರಂಥದಿಂದ ಆಯ್ದ ಸಂಗ್ರಹರೂಪದ ಕೃತಿಯಾಗಿದೆ. ಜೀವನ ಚರಿತ್ರೆ ಭಾಗದಲ್ಲಿ ಸೇರಿದ 'ಶಿವಾನುಭವ ಪತ್ರಿಕೆ' ಎಂಬುದನ್ನು 'ಡಾ. ಫ.ಗು. ಹಳಕಟ್ಟಿ ಆತ್ಮಚರಿತ್ರೆ'ಯಲ್ಲಿ ಅಳವಡಿಸಲಾಗಿದೆ. ಹೀಗಾಗಿ ಈ ೧೪ ಕೃತಿಗಳನ್ನು ಕೈಬಿಟ್ಟರೆ ಕಲಬುರ್ಗಿ ಅವರ ಒಟ್ಟು ಕೃತಿಗಳ ಸಂಖ್ಯೆ ೧೦೨ ಆಗುತ್ತದೆ.

ಡಾ. ಎಂ. ಎಂ. ಕಲಬುರ್ಗಿ ಅವರು ತಮ್ಮ ಬಿಡಿ ಬರಹ (ಸಂಪ್ರಬಂಧ-ಲೇಖನ)ಗಳನ್ನು 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ (ಇವುಗಳಲ್ಲಿ ೭ ಮತ್ತು ೮ ಎರಡು ಸಂಪುಟಗಳು ಮರಣೋತ್ತರ ಪ್ರಕಟಿಸಿದವು) ಪ್ರಕಟಿಸಿದ್ದಾರೆ. ಅವುಗಳಲ್ಲಿ ವಿವಿಧ ವಿಷಯಗಳಿಗೆ ಸಂಬಂಧಿಸಿದ ಸಂಪ್ರಬಂಧಗಳು, ಸಂಪಾದಿತ ಕೃತಿಗಳಿಗೆ ಬರೆದ ಪ್ರಸ್ತಾವನೆ, ಅರಿಕೆ, ಇತರರ ಕೃತಿಗಳಿಗೆ ಬರೆದ ಮುನ್ನುಡಿ, ಬೆನ್ನುಡಿ, ವ್ಯಕ್ತಿಚಿತ್ರ, ಭಾಷಣ, ಸಂದರ್ಶನ, ಸಂಪಾದಕೀಯ, ಕೃತಿ ವಿಮರ್ಶೆ, ಇತ್ಯಾದಿ ಸಮಾವೇಶಗೊಂಡಿವೆ. ಇವುಗಳನ್ನು ಆಧರಿಸಿ ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಆಯ್ಕೆ ಮಾಡಿ ಕೆಲವು ಪ್ರತ್ಯೇಕ ಕೃತಿಗಳನ್ನು ಸಿದ್ಧಪಡಿಸಿ ಪ್ರಕಟಿಸುವ ಕಾರ್ಯವನ್ನು ಸ್ವತಃ ಕಲಬುರ್ಗಿಯವರೇ ಮಾಡುತ್ತ ಬಂದಿದ್ದಾರೆ. ಮೇಲೆ ಹೆಸರಿಸಿದ ೧೧ ಕೃತಿಗಳು ಆ ಮಾದರಿಯವು. ಅಲ್ಲದೆ ಇತರರಿಗೂ ಅಂಥ ಆಯ್ದ ಲೇಖನಗಳ ಸಂಗ್ರಹಗಳನ್ನು ಸಿದ್ಧಪಡಿಸಲು ಅವರು ಪ್ರೇರಣೆ ನೀಡಿದ್ದಾರೆ. ಹಾಗೆ ರೂಪಿತವಾದ ೧೬ ಕೃತಿಗಳು ಈ ಕೆಳಗಿನಂತಿವೆ :

ಜಂಗಮದಿಂದ ಸ್ಥಾವರಕ್ಕೆ (ಡಾ. ಮೃತ್ಯುಂಜಯ ರುಮಾಲೆ), ಹಾಲುಮತ ಅಧ್ಯಯನಗಳು (ಡಾ. ಎಫ್.ಟಿ. ಹಳ್ಳಿಕೇರಿ), ನಾಟಕದ ನೆಲೆಗಳು (ಡಾ. ರಾಮಕೃಷ್ಣ ಮರಾಠೆ), ಪಂಪನ ಅಧ್ಯಯನಗಳು (ಡಾ. ಎನ್. ಎಸ್. ತಾರಾನಾಥ), ಕನ್ನಡ ಭಾಷಾವಲೋಕನ (ಡಾ. ಎಸ್. ಎಸ್. ಅಂಗಡಿ), ಛಂದಸ್ಸಿನ ಅಧ್ಯಯನದ ನೆಲೆಗಳು (ಡಾ. ಎಸ್.ಎಸ್. ಅಂಗಡಿ), ಬಸವಣ್ಣ ಮತ್ತು... (ಡಾ. ನಂದೀಶ ಹಂಜೆ), ಸಿದ್ಧರಾಮ ಮತ್ತು...(ಡಾ. ಎಸ್.ಕೆ. ಕೊಪ್ಪಾ), ರೇವಣಸಿದ್ಧ ಮತ್ತು... (ಡಾ. ಕೆ. ರವೀಂದ್ರನಾಥ), ಶರಣರು ಮತ್ತು...(ಡಾ. ವಿ.ಎಸ್. ಮಾಳಿ), ಗ್ರಂಥಸಂಪಾದನ ವ್ಯಾಸಂಗ (ಡಾ. ವಾಯ್.ಸಿ. ಭಾನುಮತಿ), ಜೈನ ಅಧ್ಯಯನಗಳು (ಡಾ. ಶಾಂತಿನಾಥ ದಿಬ್ಬದ), ನಾಮವ್ಯಾಸಂಗ (ಡಾ. ಎಚ್. ಶಶಿಕಲಾ), ಮಹಾಮರಣ(ಡಾ. ಜೆ. ಎಂ. ನಾಗಯ್ಯ), ಇತಿಹಾಸ ಮತ್ತು... (ಡಾ. ಎನ್.ಎಸ್. ಮಹಾಂತೇಶ), ಸಂಘರ್ಷದ ನೆಲೆಗಳು (ಡಾ. ಪಿ.ಕೆ. ರಾಠೋಡ).

ಇವುಗಳನ್ನು ಗಮನಿಸಿದರೆ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ, ಬರವಣಿಗೆಯ ಹರಹು, ಅದಕ್ಕಾಗಿ ಅವರು ತೋರಿದ ನಿಷ್ಠೆ, ಪಟ್ಟ ಪರಿಶ್ರಮ, ವಹಿಸಿದ ತಾಳ್ಮೆ, ತನ್ಮೂಲಕ ಈ ಕ್ಷೇತ್ರದಲ್ಲಿ ಅವರು ಏರಿದ ಎತ್ತರ, ಪಡೆದ ಪ್ರಸಿದ್ಧಿ, ನೀಡಿದ ಕೊಡುಗೆ ಎಲ್ಲವೂ ಏಕಕಾಲಕ್ಕೆ ಕಣ್ಣ ಮುಂದೆ ಬಂದು ನಿಲ್ಲುತ್ತವೆ.

ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ :

ಡಾ. ಎಂ. ಎಂ. ಕಲಬುರ್ಗಿ ಅವರ ಈ ಸಮೃದ್ಧ ಸಾಹಿತ್ಯವನ್ನು ಸಮಗ್ರ ಸಂಪುಟಗಳಲ್ಲಿ ಪ್ರಕಟಿಸುವ ಯೋಜನೆಯೊಂದನ್ನು ವಿಜಯಪುರದ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ-ಕರ್ನಾಟಕ ಸರ್ಕಾರದ ಧನ ಸಹಾಯದಿಂದ-ಕೈಗೆತ್ತಿಕೊಂಡಿತು. ಯೋಜನೆಯ ವ್ಯವಸ್ಥಿತ ಪೂರೈಕೆಗಾಗಿ ಎಂಟು ಜನರ ಒಂದು ಸಲಹಾ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಡಾ. ಎಂ.ಬಿ. ಪಾಟೀಲ ಅವರನ್ನು ಗೌರವಾಧ್ಯಕ್ಷರೆಂದು, ಶ್ರೀ ಜಿ.ಕೆ.ಪಾಟೀಲ ಅವರನ್ನು ಅಧ್ಯಕ್ಷರೆಂದು, ಡಾ. ಎಂ.ಎಸ್. ಮದಭಾವಿ ಅವರನ್ನು ಕಾರ್ಯದರ್ಶಿಯೆಂದು, ಡಾ. ವೀರಣ್ಣ ರಾಜೂರ ಅವರನ್ನು ಪ್ರಧಾನ ಸಂಪಾದಕರೆಂದು, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರನ್ನು ಯೋಜನಾ ಸಂಯೋಜಕರೆಂದು, ಡಾ. ಗುರುಲಿಂಗ ಕಾಪಸೆ, ಶ್ರೀ ವಿಜಯ ಕಲಬುರ್ಗಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರನ್ನು ಸದಸ್ಯರೆಂದು ಗುರುತಿಸಲಾಯಿತು.

ಸಲಹಾ ಸಮಿತಿ ೧೪-೭-೨೦೧೭ ರಂದು ತನ್ನ ಮೊದಲ ಸಭೆ ಕರೆಯಿತು. ಅದರಲ್ಲಿ ಭಾಗವಹಿಸಲು ನಾಡಿನ ಹಲವು ವಿದ್ವಾಂಸರನ್ನು ಆಹ್ವಾನಿಸಿತು. ಅವರೆಲ್ಲರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕಲಬುರ್ಗಿಯವರ ಸಮಗ್ರ ಸಾಹಿತ್ಯ ಪ್ರಕಟಣೆಯ ರೂಪ-ರೇಷೆ, ಸಂಪುಟಗಳ ಸ್ವರೂಪ, ಸಂಪಾದಕರ ಆಯ್ಕೆ ಕುರಿತು ಒಂದು ನೀಲನಕ್ಷೆಯನ್ನು ಸಿದ್ಧಪಡಿಸಿತು. ಅದನ್ನು ಪ್ರಧಾನ ಸಂಪಾದಕರಿಗೆ ಒಪ್ಪಿಸಿ, ಅಂತಿಮ ಸ್ವರೂಪ ಕೊಡಲು ತಿಳಿಸಿತು.

೨೩-೯-೨೦೧೭ ರಂದು ಪ್ರಧಾನ ಸಂಪಾದಕರು ಎರಡನೆಯ ಸಭೆ ಕರೆದರು, ಯೋಜನೆಯ ಒಟ್ಟು ಸ್ವರೂಪವನ್ನು ೫ ಅಂಶಗಳಲ್ಲಿ ಅಳವಡಿಸಿ ಕೆಳಗಿನಂತೆ ನಿರೂಪಿಸಿದರು.

೧. ಡಾ. ಕಲಬುರ್ಗಿ ಅವರ ಒಟ್ಟು ಸಾಹಿತ್ಯವನ್ನು (ಪ್ರಕಟಿತ-ಅಪ್ರಕಟಿತ)೪೦ ಸಂಪುಟಗಳಲ್ಲಿ ಪ್ರಕಟಿಸುವುದು. ಅವುಗಳ ಸಂಪಾದನ ಕಾರ್ಯವನ್ನು ಒಟ್ಟು ೧೬ ಜನ ವಿದ್ವಾಂಸರಿಗೆ ವಹಿಸುವುದು.

೨. ಒಟ್ಟು ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸುವುದು.

೩. ಸ್ವತಂತ್ರ ಮತ್ತು ಪ್ರಾಚೀನ ಗ್ರಂಥ ಸಂಪಾದನ ಕೃತಿಗಳನ್ನು ಮಾತ್ರ ಪ್ರಕಟಣೆಗೆ ಆಯ್ದುಕೊಳ್ಳುವುದು. ಆಧುನಿಕ ಸಂಪಾದಿತ ಕೃತಿಗಳನ್ನು (ವಿಚಾರ ಸಂಕಿರಣಗಳಲ್ಲಿ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹ), ಅಭಿನಂದನ ಗ್ರಂಥಗಳನ್ನು ಕೈಬಿಡುವುದು.

೪. ಒಂದೊಂದು ಸಂಪುಟದ ವ್ಯಾಪ್ತಿಯನ್ನು ೫೦೦ ಪುಟಗಳಿಗೆ ಮಿತಿಗೊಳಿಸುವುದು.

೫. ಎರಡು ವರ್ಷಗಳ ಕಾಲಾವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ೨೦೧೯ ನವ್ವೆಂಬರ್ ೨೮ ರಂದು ಎಲ್ಲ ಸಂಪುಟಗಳನ್ನು ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

ಒಟ್ಟು ಸಂಪುಟಗಳ ವಿಸ್ತೃತ ಸ್ವರೂಪ ಹೀಗಿದೆ :

ನಾಲ್ವತ್ತು ಸಂಪುಟಗಳನ್ನು ವ್ಯಾಪಕವಾದ ಹಿನ್ನೆಲೆಯಲ್ಲಿ ಸ್ವತಂತ್ರ ಕೃತಿ ಸಂಪುಟಗಳು, ಸಂಪಾದಿತ ಕೃತಿ ಸಂಪುಟಗಳು, ಲೇಖನ ಸಾಹಿತ್ಯ ಸಂಪುಟಗಳು ಮತ್ತು ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು ಎಂದು ನಾಲ್ಕು ಭಾಗಗಳಲ್ಲಿ ವಿಂಗಡಿಸಲಾಗಿದೆ. ಮೊದಲ ಭಾಗದಲ್ಲಿ ಮತ್ತೆ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ಸಂಶೋಧನ ಸಾಹಿತ್ಯ, ಜನಪದ ಸಾಹಿತ್ಯ ಮತ್ತು ಸೃಜನ ಸಾಹಿತ್ಯ ಎಂದು ನಾಲ್ಕು ವಿಭಾಗಗಳನ್ನು ಕಲ್ಪಿಸಲಾಗಿದೆ. ಎರಡನೆಯ ಭಾಗದಲ್ಲಿ ಸಂಪಾದಿತ ಕೃತಿಗಳನ್ನು ಶಾಸನ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಕಾವ್ಯ ಸಾಹಿತ್ಯ ಮತ್ತು ಜೀವನ ಚರಿತ್ರ ಸಾಹಿತ್ಯ ಎಂದು ವಿಭಜಿಸಲಾಗಿದೆ. ಮೂರನೆಯದಾದ ಲೇಖನ ಸಂಪುಟಗಳಲ್ಲಿ ಶಾಸನ ಸಾಹಿತ್ಯ, ಶಾಸ್ತ್ರ ಸಾಹಿತ್ಯ, ವಚನಸಾಹಿತ್ಯ, ಕಾವ್ಯಸಾಹಿತ್ಯ ಮತ್ತು ವ್ಯಕ್ತಿಚಿತ್ರಣ, ಮುನ್ನುಡಿ, ಬೆನ್ನುಡಿ, ಅರಿಕೆ, ಭಾಷಣ, ಸಂದರ್ಶನ ಎಂದು ಐದು ಭಾಗಗಳನ್ನು ಮಾಡಲಾಗಿದೆ. ಕೊನೆಯದಾದ ಪ್ರಾತ್ಯಕ್ಷಿಕೆ ಸಂಪುಟಗಳಲ್ಲಿ ಚಿತ್ರ, ಪತ್ರ-ವರದಿಗಳು, ಆಡಿಯೋ-ವಿಡಿಯೋ ಎಂದು ಮೂರು ಭಾಗಗಳನ್ನು ಯೋಜಿಸಲಾಗಿದೆ.

ಸಂಪುಟಗಳು, ಅದರಲ್ಲಿ ಅಳವಟ್ಟ ಕೃತಿಗಳು ಮತ್ತು ಸಂಪಾಕರ ವಿವರ ಕೆಳಗಿನಂತಿದೆ:

I. ಸ್ವತಂತ್ರ ಕೃತಿ ಸಂಪುಟಗಳು

ಸಂಪುಟ ೧ : ಶಾಸನ ಸಾಹಿತ್ಯ –ಸಂ. ಡಾ. ಎಸ್.ಕೆ. ಕೊಪ್ಪಾ

೧. ಬಸವಣ್ಣನವರನ್ನು ಕುರಿತ ಶಾಸನಗಳು
೨. ಶಾಸನಗಳಲ್ಲಿ ಶಿವಶರಣರು
೩. ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು
೪. ಮಹಾರಾಷ್ಟ್ರದ ಕನ್ನಡ ಶಾಸನಗಳು

ಸಂಪುಟ ೨ : ಶಾಸ್ತ್ರ ಸಾಹಿತ್ಯ –ಸಂ. ಡಾ. ಬಿ.ವ್ಹಿ. ಶಿರೂರ

೧. ಕನ್ನಡ ಗ್ರಂಥಸಂಪಾದನಶಾಸ್ತ್ರ
೨. ಪ್ರತಿಬಿಂಬ
೩. ಸಾಹಿತ್ಯ ಸಂಪಾದನೆ
೪. ಕನ್ನಡ ನಾಮವಿಜ್ಞಾನ
೫. ಕನ್ನಡ ಸಂಶೋಧನಶಾಸ್ತ್ರ
೬. ಕನ್ನಡ ಹಸ್ತಪ್ರತಿಶಾಸ್ತ್ರ

ಸಂಪುಟ ೩ : ಸಂಶೋಧನ ಸಾಹಿತ್ಯ –ಸಂ. ಶಶಿಧರ ತೋಡ್ಕರ

೧. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ

ಸಂಪುಟ : ೪ ಜನಪದ ಸಾಹಿತ್ಯ –ಸಂ. ಶಶಿಧರ ತೋಡ್ಕರ

೧. ಉತ್ತರಕರ್ನಾಟಕದ ಜನಪದ ಪದ್ಯ ಸಾಹಿತ್ಯ
೨. ಜನಪದ ಮಾರ್ಗ

ಸಂಪುಟ : ೫ ಸೃಜನ ಸಾಹಿತ್ಯ –ಸಂ. ಡಾ. ಗುರುಪಾದ ಮರಿಗುದ್ದಿ

೧. ನೀರು ನೀರಡಿಸಿತ್ತು (ಕವನ ಸಂಕಲನ)
೨. ನೀರಾಗ ನಿಂತೀನಿ ನೀರಡಿಸಿ (ಕವನ ಸಂಕಲನ)
೩. ಕೆಟ್ಟಿತ್ತು ಕಲ್ಯಾಣ (ನಾಟಕ)
೪. ಖರೇ ಖರೇ ಸಂಗ್ಯಾಬಾಳ್ಯಾ (ನಾಟಕ)
೫. ಖರೇ ಖರೇ ಕಿತ್ತೂರ ಬಂಡಾಯ(ನಾಟಕ)

II. ಸಂಪಾದಿತ ಕೃತಿ ಸಂಪುಟಗಳು

ಸಂಪುಟ ೬ : ಶಾಸನ ಸಾಹಿತ್ಯ –ಸಂ. ಡಾ. ಎಸ್. ಕೆ. ಕೊಪ್ಪಾ

೧. ಶಾಸನ ಸಂಪದ
೨. ಧಾರವಾಡ ಜಿಲ್ಲೆಯ ಶಾಸನ ಸೂಚಿ

೩. ವಿಜಾಪುರ ಜಿಲ್ಲೆಯ ಶಾಸನ ಸೂಚಿ
೪. ಧಾರವಾಡ ತಾಲೂಕಿನ ಶಾಸನಗಳು
೫. ಶಾಸನ ಸೂಕ್ತಿಸುಧಾರ್ಣವ

ಸಂಪುಟ : ೭ ದಾಖಲು ಸಾಹಿತ್ಯ : ಭಾಗ–೧ –ಸಂ. ಡಾ. ಪಂಡಿತ ರಾಠೋಡ
೧. ಕರ್ನಾಟಕದ ಕೈಫಿಯತ್ತುಗಳು

ಸಂಪುಟ : ೮ ದಾಖಲು ಸಾಹಿತ್ಯ : ಭಾಗ– ೨ –ಸಂ. ಡಾ. ಪಂಡಿತ ರಾಠೋಡ
೧. ಕೊಲ್ಹಾಪೂರ ಲಕ್ಷ್ಮೀಸೇನ ಭಟ್ಟಾರಕ
ಜೈನ ಬಸದಿ ಹಸ್ತಪ್ರತಿಸೂಚಿ
೨. ವಚನ ಸಾಹಿತ್ಯ ಆಕರ ಕೋಶ
೩. ತೋಂಟದಾರ್ಯ ಮಠದ ದಾಖಲು ಸಾಹಿತ್ಯ–೧

ಸಂಪುಟ : ೯ ವಚನ ಸಾಹಿತ್ಯ : ಭಾಗ–೧ –ಸಂ. ಡಾ. ವೀರಣ್ಣ ರಾಜೂರ
೧. ಬಸವಸ್ತೋತ್ರದ ವಚನಗಳು
೨. ಬಸವಣ್ಣನವರ ವಚನ ಸಂಪುಟ

ಸಂಪುಟ : ೧೦ ವಚನ ಸಾಹಿತ್ಯ : ಭಾಗ–೨ –ಸಂ. ಡಾ. ಗುರುಲಿಂಗ ಕಾಪಸೆ
೧. ಚೆನ್ನಬಸವಣ್ಣನವರ ವಚನ ಮಹಾಸಂಪುಟ
೨. ಸಿದ್ಧರಾಮಯ್ಯದೇವರ ವಚನಗಳು

ಸಂಪುಟ : ೧೧ ವಚನ ಸಾಹಿತ್ಯ : ಭಾಗ–೩ –ಸಂ. ಡಾ. ವೀರಣ್ಣ ರಾಜೂರ
೧. ಸಂಕೀರ್ಣ ವಚನ ಸಂಪುಟ

ಸಂಪುಟ : ೧೨ ವಚನ ಸಾಹಿತ್ಯ : ಭಾಗ–೪ –ಸಂ. ಡಾ. ವೀರಣ್ಣ ರಾಜೂರ
೧. ವಚನ

ಸಂಪುಟ : ೧೩ ವಚನ ಸಾಹಿತ್ಯ : ಭಾಗ–೫ –ಸಂ. ಡಾ. ವೀರಣ್ಣ ರಾಜೂರ
೧. ಶೂನ್ಯಸಂಪಾದನೆ

ಸಂಪುಟ : ೧೪ ವಚನ ಸಾಹಿತ್ಯ : ಭಾಗ–೬ –ಸಂ. ಡಾ. ವೀರಣ್ಣ ರಾಜೂರ
೧. ಪರಮಾನಂದ ಸುಧೆ
೨. ಏಕೋತ್ತರಶತಸ್ಥಲ

ಸಂಪುಟ : ೧೫ ವಚನ ಸಾಹಿತ್ಯ : ಭಾಗ–೭ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೧

ಸಂಪುಟ : ೧೬ ವಚನ ಸಾಹಿತ್ಯ : ಭಾಗ–೮ **–ಸಂ. ಡಾ. ಪಂಡಿತ ರಾಠೋಡ**

೧. ಬಸವಣ್ಣನವರ ಟೀಕಿನ ವಚನಗಳು, ಭಾಗ–೨

ಸಂಪುಟ : ೧೭ ವಚನ ಸಾಹಿತ್ಯ : ಭಾಗ–೯ **–ಸಂ. ಶಶಿಧರ ತೋಡ್ಕರ**

೧. ವಚನ ಸಂಕಲನ–೪

೨. ವಚನ ಸಂಕಲನ–೬

೩. ವಚನ ವರ್ಷ

ಸಂಪುಟ : ೧೮ ವಚನ ಸಾಹಿತ್ಯ : ಭಾಗ–೧೦ **–ಸಂ. ಡಾ. ವೀರಣ್ಣ ರಾಜೂರ**

೧. ವಚನಶಾಸ್ತ್ರಸಾರ(ಸಂಪುಟ–೧)

ಸಂಪುಟ : ೧೯ ಕಾವ್ಯ ಸಾಹಿತ್ಯ : ಭಾಗ–೧ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೧

ಸಂಪುಟ : ೨೦ ಕಾವ್ಯ ಸಾಹಿತ್ಯ : ಭಾಗ–೨ **–ಸಂ. ಡಾ. ಗುರುಪಾದ ಮರಿಗುದ್ದಿ**

೧. ಹರಿಹರನ ರಗಳೆಗಳು, ಭಾಗ–೨

ಸಂಪುಟ: ೨೧ ಕಾವ್ಯ ಸಾಹಿತ್ಯ : ಭಾಗ–೩ **–ಸಂ. ಡಾ. ಬಿ.ವ್ಹಿ. ಶಿರೂರ**

೧. ಮಲ್ಲಿನಾಥ ಪುರಾಣ ಸಂಗ್ರಹ

೨. ಶಬ್ದಮಣಿದರ್ಪಣ ಸಂಗ್ರಹ

೩. ತೋಂಟದ ಸಿದ್ಧಲಿಂಗೇಶ್ವರ ಭಾವರತ್ನಾಭರಣ ಸ್ತೋತ್ರ

೪. ಆದಯ್ಯನ ಲಘುಕೃತಿಗಳು

೫. ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪುಟ: ೨೨ ಕಾವ್ಯ ಸಾಹಿತ್ಯ : ಭಾಗ–೪ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ಷಟ್‌ಸ್ಥಲ ಶಿವಾಯಣ

೨. ಶಿವಯೋಗ ಪ್ರದೀಪಿಕಾ

ಸಂಪುಟ: ೨೩ ಕಾವ್ಯ ಸಾಹಿತ್ಯ : ಭಾಗ–೫ **–ಸಂ. ಡಾ. ಎಫ್. ಟಿ. ಹಳ್ಳಿಕೇರಿ**

೧. ತಗರ ಪವಾಡ

೨. ಸಿದ್ಧಮಂಕ ಚರಿತೆ

೩. ಗುಂಡಬಸವೇಶ್ವರ ಪುರಾಣ

೪. ಕೊಡೆಕಲ್ಲ ವಚನ ವಾಕ್ಯ

ಸಂಪುಟ: ೨೪ ಕಾವ್ಯ ಸಾಹಿತ್ಯ : ಭಾಗ–೬ –ಸಂ. ಡಾ. ಹನುಮಂತ ಮೇಲಿನಮನಿ

೧. ಹೊಸಕುಮಾರರಾಮನ ಸಾಂಗತ್ಯ

೨. ಹಳೆಯಕುಮಾರ ರಾಮನ ಸಾಂಗತ್ಯ

ಸಂಪುಟ: ೨೫ ಕಾವ್ಯ ಸಾಹಿತ್ಯ : ಭಾಗ–೭ –ಸಂ. ಡಾ. ಹನುಮಂತ ಮೇಲಿನಮನಿ

೧. ಕೊಮಾರ ರಾಮಯ್ಯನ ಚರಿತ್ರೆ

೨. ಬಾಲರಾಮಯ್ಯನ ಸಾಂಗತ್ಯ

ಸಂಪುಟ: ೨೬ ಕಾವ್ಯ ಸಾಹಿತ್ಯ : ಭಾಗ–೮ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಸಿರುಮಣ ನಾಯಕನ ಸಾಂಗತ್ಯ

೨. ಸಿರುಮನ ಚರಿತೆ

೩. ಗೊಲ್ಲ ಸಿರುಮನ ಚರಿತೆ

ಸಂಪುಟ: ೨೭ ಕಾವ್ಯ ಸಾಹಿತ್ಯ : ಭಾಗ–೯ –ಸಂ. ಡಾ. ಸರಸ್ವತಿದೇವಿ ಭಗವತಿ

೧. ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ

೨. ನಿಂಬಸಾಮಂತ ಚರಿತೆ

ಸಂಪುಟ: ೨೮ ಕಾವ್ಯ ಸಾಹಿತ್ಯ : ಭಾಗ–೧೦ –ಸಂ. ಡಾ. ಎಂ ಎಸ್. ಮದಭಾವಿ

೧. ಕಿತ್ತೂರ ಸಂಸ್ಥಾನ ಸಾಹಿತ್ಯ–೧

೨. ಕಿತ್ತೂರ ಸಂಸ್ಥಾನ ಸಾಹಿತ್ಯ–೨

೩. ಕಿತ್ತೂರ ಸಂಸ್ಥಾನ ಸಾಹಿತ್ಯ–೩

ಸಂಪುಟ: ೨೯ ಜೀವನ ಚರಿತ್ರೆ ಸಾಹಿತ್ಯ : ಭಾಗ–೧ –ಸಂ. ಡಾ. ಎಂ ಎಸ್. ಮದಭಾವಿ

೧. ಹಾಲಭಾವಿ ವೀರಭದ್ರಪ್ಪನವರ ಆತ್ಮಚರಿತ್ರೆ

೨. ಫ.ಗು.ಹಳಕಟ್ಟಿಯವರ ಆತ್ಮಚರಿತ್ರೆ

೩. ಮಡಿವಾಳಪ್ಪ ಸಾಸನೂರ ಬದುಕು–ಬರಹ

ಸಂಪುಟ: ೩೦ ಜೀವನ ಚರಿತ್ರೆ ಸಾಹಿತ್ಯ : ಭಾಗ–೨ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೧

ಸಂಪುಟ: ೩೧ ಜೀವನ ಚರಿತ್ರೆ ಸಾಹಿತ್ಯ : ಭಾಗ–೩ –ಸಂ. ಡಾ. ಮಲ್ಲಿಕಾರ್ಜುನ ಮೇತ್ರಿ

೧. ಧರ್ಮ ದ್ರಷ್ಟಾರ ಹರ್ಡೇಕರ
ಮಂಜಪ್ಪನವರು, ಭಾಗ : ೨

ಸಂಪುಟ: ೩೨ ಜೀವನ ಚರಿತ್ರೆ ಸಾಹಿತ್ಯ : ಭಾಗ–೪ –ಸಂ. ಡಾ. ವಿ.ಎಸ್. ಮಾಳಿ
೧. ಅರಟಾಳ ರುದ್ರಗೌಡರ ಚರಿತ್ರೆ

III. ಲೇಖನ ಸಾಹಿತ್ಯ ಸಂಪುಟಗಳು (ಮಾರ್ಗ ಸಂಪುಟಗಳು)

ಸಂಪುಟ: ೩೩. ಲೇಖನ ಸಾಹಿತ್ಯ : ಭಾಗ–೧ –ಸಂ. ಡಾ. ಕೆ. ರವೀಂದ್ರನಾಥ
ಶಾಸನ ಸಾಹಿತ್ಯ

ಸಂಪುಟ: ೩೪. ಲೇಖನ ಸಾಹಿತ್ಯ : ಭಾಗ–೨ –ಸಂ. ಡಾ. ಕೆ. ರವೀಂದ್ರನಾಥ
ಶಾಸ್ತ್ರ ಸಾಹಿತ್ಯ

ಸಂಪುಟ: ೩೫. ಲೇಖನ ಸಾಹಿತ್ಯ : ಭಾಗ–೩ –ಸಂ. ಡಾ. ಕೆ. ರವೀಂದ್ರನಾಥ
ವಚನ ಸಾಹಿತ್ಯ

ಸಂಪುಟ: ೩೬. ಲೇಖನ ಸಾಹಿತ್ಯ : ಭಾಗ–೪ –ಸಂ. ಡಾ. ಕೆ. ರವೀಂದ್ರನಾಥ
ಕಾವ್ಯ ಸಾಹಿತ್ಯ

ಸಂಪುಟ: ೩೭. ಲೇಖನ ಸಾಹಿತ್ಯ : ಭಾಗ–೫ –ಸಂ. ಡಾ. ಕೆ. ರವೀಂದ್ರನಾಥ
ವ್ಯಕ್ತಿಚಿತ್ರಣ–ಮುನ್ನುಡಿ–ಬೆನ್ನುಡಿ
ಅರಿಕೆ–ಭಾಷಣ–ಸಂದರ್ಶನ

IV. ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳು

ಸಂಪುಟ : ೩೮–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೧ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಚಿತ್ರ –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೩೯–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೨ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಪತ್ರ–ವರದಿಗಳು –ಡಾ. ವಿ.ಡಿ. ಐಹೊಳ್ಳಿ

ಸಂಪುಟ : ೪೦–ಪ್ರಾತ್ಯಕ್ಷಿಕೆ ಸಾಹಿತ್ಯ ಭಾಗ–೩ –ಸಂ. ಡಾ. ಕೃಷ್ಣಕೊಲ್ಹಾರ ಕುಲಕರ್ಣಿ
ಆಡಿಯೋ–ವಿಡಿಯೋ –ಡಾ. ವಿ.ಡಿ. ಐಹೊಳ್ಳಿ

ಹೀಗೆ ೪೦ ಸಂಪುಟಗಳಲ್ಲಿ ೭೯ ಕೃತಿಗಳನ್ನು ಅಳವಡಿಸಲಾಗಿದೆ. ಮಾರ್ಗ ಸಂಪುಟದಿಂದಾಯ್ದು ಡಾ. ಕಲಬುರ್ಗಿಯವರೇ ಸಿದ್ಧಪಡಿಸಿದ ೧೧ ಸಂಕಲನ ಕೃತಿಗಳನ್ನು,

ಹರಿಹರನ ರಗಳೆ ಸಂಪುಟದಿಂದಾಯ್ದು ಸಿದ್ಧಪಡಿಸಿದ 'ಕನ್ನಡ ಶರಣರ ಕಥೆಗಳು' ಎಂಬ ಕೃತಿಯನ್ನು, ವಚನ ಶಾಸ್ತ್ರಸಾರದ ಪುನರ್ ಮುದ್ರಣವಾದ 'ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೫'ನ್ನು; 'ಶಿವಾನುಭವ ಪತ್ರಿಕೆ'ಯನ್ನು, ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ವಿವಿಧ ವಿದ್ವಾಂಸರ ಪ್ರಬಂಧಗಳ ಸಂಕಲನಗಳೆನಿಸಿದ ಆಧುನಿಕ ಸಂಪಾದಿತ ೧೪ ಕೃತಿಗಳನ್ನು ಮತ್ತು ೬ ಅಭಿನಂದನಗ್ರಂಥ, ಎರಡು ಇಂಗ್ಲಿಷ್‌ಗ್ರಂಥ ಹೀಗೆ ಒಟ್ಟು ೩೫ ಗ್ರಂಥಗಳನ್ನು-ಪುನರುಕ್ತಿಕಾರಣವಾಗಿ- ಈ ಸಂಪುಟಗಳಲ್ಲಿ ಸೇರಿಸದೆ ಕೈಬಿಡಲಾಗಿದೆ.

ಸಂಪುಟಗಳ ಸಂಯೋಜನೆಯಲ್ಲಿ ಈ ಕೆಳಗಿನ ಕ್ರಮವನ್ನು ಅನುಸರಿಸಲಾಗಿದೆ:

ಒಂದು ಕೃತಿ ೫೦೦ ಪುಟ ವ್ಯಾಪ್ತಿಯನ್ನು ಹೊಂದಿದ್ದರೆ ಅದನ್ನು ಒಂದು ಸ್ವತಂತ್ರ ಸಂಪುಟವೆಂದು ಪರಿಗಣಿಸಲಾಗಿದೆ(ಉದಾ: ಶೂನ್ಯಸಂಪಾದನೆ, ವಚನ). ಪುಟ ಸಂಖ್ಯೆ ಕಡಿಮೆ ಇದ್ದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಸೇರಿಸಿ ೫೦೦ ಪುಟಕ್ಕೆ ಹೊಂದುವಂತೆ ಜೋಡಿಸಲಾಗಿದೆ(ಉದಾ: ಹೊಸ ಕುಮಾರರಾಮನ ಸಾಂಗತ್ಯ, ಹಳೆಯ ಕುಮಾರಾಮನ ಸಾಂಗತ್ಯ). ಹಾಗೆ ಜೋಡಿಸುವಲ್ಲಿ ವಿಷಯದ ಏಕತೆಯನ್ನು ದೃಷ್ಟಿಯಲ್ಲಿಟ್ಟುಕೊಳ್ಳಲಾಗಿದೆ. ಒಂದು ಕೃತಿ ಸಾವಿರ ಅಥವಾ ಅದಕ್ಕಿಂತ ಹೆಚ್ಚು ಪುಟ ವ್ಯಾಪ್ತಿಯನ್ನು ಪಡೆದಿದ್ದರೆ, ಅದನ್ನು ಎರಡು ಭಾಗಗಳಾಗಿ ವಿಭಜಿಸಿ ಪ್ರತ್ಯೇಕ ಸಂಪುಟವೆಂದು ಗಣಿಸಲಾಗಿದೆ(ಉದಾ: ಬಸವಣ್ಣನವರ ಟೀಕಿನ ವಚನಗಳು, ಧರ್ಮದ್ರಷ್ಟಾರ ಹರ್ಡೇಕರ ಮಂಜಪ್ಪನವರು).

ಡಾ. ಕಲಬುರ್ಗಿ ಅವರ ಬಿಡಿ ಲೇಖನಗಳು (ಸಂಪ್ರಬಂಧಗಳು) ಮೂಲದಲ್ಲಿ 'ಮಾರ್ಗ' ಹೆಸರಿನ ೮ ಸಂಪುಟಗಳಲ್ಲಿ ಪ್ರಕಟವಾಗಿವೆ. ಕಾಲಕಾಲಕ್ಕೆ ಪ್ರಕಟವಾದ ಅವುಗಳಲ್ಲಿ ಒಂದೇ ವಿಷಯ ಕ್ಷೇತ್ರಕ್ಕೆ ಸಂಬಂಧಿಸಿದ ಲೇಖನಗಳು ಬೇರೆಬೇರೆ ಸಂಪುಟಗಳಲ್ಲಿ ಹಂಚಿ ಹೋಗಿವೆ. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಎಲ್ಲ ಲೇಖನಗಳನ್ನು ವಿಷಯಾನುಗುಣವಾಗಿ ಮರುವರ್ಗೀಕರಣ ಮಾಡಿ ೫ ಸಂಪುಟಗಳಲ್ಲಿ ಅಳವಡಿಸಲಾಗಿದೆ. ಹಾಗೆ ಮಾಡುವಲ್ಲಿ ಮೂಲ ಮಾರ್ಗ ಸಂಪುಟ ೫ ರಲ್ಲಿ ಅಳವಡಿಸಿದ್ದ ಪ್ರಾಚೀನ ಸಂಪಾದಿತ ಕೃತಿಗಳ ಪ್ರಸ್ತಾವನೆಗಳನ್ನು-ಅವು ಅಯಾ ಕೃತಿಗಳಲ್ಲಿ ಅಲ್ಲಲ್ಲಿಯೇ ಪ್ರಕಟವಾಗುವುದರಿಂದ-ಕೈಬಿಡಲಾಗಿದೆ. ಆಧುನಿಕ ಸಂಪಾದಿತ ಕೃತಿಗಳು ಈ ಯೋಜನೆಯಿಂದ ಹೊರಗುಳಿದಿರುವುದರಿಂದ ಅವುಗಳ ಅರಿಕೆ, ಸಂಪಾದಕರ ಮಾತು, ಪ್ರಧಾನ ಸಂಪಾದಕರ ಮಾತು-ಇವುಗಳನ್ನು ಮಾತ್ರ ಹಾಗೇ ಉಳಿಸಿಕೊಳ್ಳಲಾಗಿದೆ. ಮರು ಹೊಂದಾಣಿಕೆ ಮಾಡಿದ ಲೇಖನಗಳ ಮೂಲ ಆಕರಗಳನ್ನು ಆಯಾ ಲೇಖನದ ಕೆಳಗೆ ನಮೂದಿಸಲಾಗಿದೆ.

ಪ್ರಾತ್ಯಕ್ಷಿಕೆ ಸಾಹಿತ್ಯ ಸಂಪುಟಗಳಲ್ಲಿ ಒಂದು-ಡಾ. ಕಲಬುರ್ಗಿಯವರಿಗೆ ಸಂಬಂಧಿಸಿದ ಚಿತ್ರ ಸಂಪುಟವಾಗಿದೆ. ಇದರಲ್ಲಿ ಅವರ ವೈಯಕ್ತಿಕ ಬದುಕು ಮತ್ತು ಶೈಕ್ಷಣಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕಿಗೆ ಸಂಬಂಧಿಸಿದ ಆಯ್ದ ಭಾವ ಚಿತ್ರಗಳನ್ನು ಅಳವಡಿಸಲಾಗಿದೆ. ಎರಡನೆಯದಾದ ಪತ್ರ-ವರದಿ ಸಂಪುಟದಲ್ಲಿ ಕಲಬುರ್ಗಿ ಅವರು ಇತರರಿಗೆ ಬರೆದ, ಇತರರು ಕಲಬುರ್ಗಿಯವರಿಗೆ ಬರೆದ ಮಹತ್ವದ ಪತ್ರಗಳನ್ನು ಮತ್ತು ಕಲಬುರ್ಗಿಯವರು ಭಾಗವಹಿಸಿದ ಕಾರ್ಯಕ್ರಮಗಳ ಪತ್ರಿಕಾ ವರದಿಗಳನ್ನು ಸಂಗ್ರಹಿಸಲಾಗಿದೆ. ಮೂರನೆಯ ಸಂಪುಟದಲ್ಲಿ ಕಲಬುರ್ಗಿ ಅವರನ್ನು ಕುರಿತ ಸಾಕ್ಷ್ಯಚಿತ್ರ, ದೂರದರ್ಶನ ಸಂದರ್ಶನ ಮತ್ತು ಭಾಷಣಗಳು; ಅವರ ನಾಟಕಗಳ ಪ್ರದರ್ಶನದ ಚಿತ್ರೀಕರಣ ಮಾಡಿದ ಆಡಿಯೋ-ವಿಡಿಯೋಗಳನ್ನು ಒಂದುಗೂಡಿಸಲಾಗಿದೆ.

ಡಾ. ಕಲಬುರ್ಗಿ ಅವರ ಕೃತಿಗಳಲ್ಲಿ ಕೆಲವು ಒಂದೇ ಮುದ್ರಣ ಕಂಡಿದ್ದರೆ, ಮತ್ತೆ ಕೆಲವು ಒಂದಕ್ಕಿಂತ ಹೆಚ್ಚು ಮುದ್ರಣ ಹೊಂದಿವೆ. ಹೀಗಾಗಿ ಈ ಸಂಪುಟಗಳನ್ನು ಸಿದ್ಧಪಡಿಸುವಲ್ಲಿ ಎಲ್ಲ ಆವೃತ್ತಿಗಳನ್ನೂ ಅವಲೋಕಿಸಿ, ಕೊನೆಯ ಆವೃತ್ತಿಯನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಒಂದು ಕೃತಿಯಲ್ಲಿ ಒಪ್ಪೋಲೆ ಇದ್ದರೆ ಮೊದಲು ಅದನ್ನು ಸರಿಪಡಿಸಿಕೊಳ್ಳುವುದು. ಕೃತಿಯ ಅಥವಾ ಲೇಖನದ ಒಳಗೆ ಕೆಲವು ಭಾಗ ಅಥವಾ ಪುಟ ಅಥವಾ ಪದ-ವಾಕ್ಯ ಬಿಟ್ಟುಹೋಗಿದ್ದರೆ ಮೂಲ ಆವೃತ್ತಿಯನ್ನು ನೋಡಿ ಸೇರಿಸಿಕೊಳ್ಳುವುದು. ಅಕ್ಷರ ದೋಷಗಳನ್ನು ತಿದ್ದುಪಡಿಮಾಡುವುದು. ಅಡಿಟಿಪ್ಪಣಿ, ಅನುಬಂಧಗಳಲ್ಲಿ ವ್ಯತ್ಯಾಸಗಳಾಗಿದ್ದರೆ ಹೊಂದಾಣಿಕೆ ಮಾಡುವುದು. ಆಕರಗಳು ಬಿಟ್ಟು ಹೋಗಿದ್ದರೆ ಬೇರೆ ಮೂಲಗಳಿಂದ ಹುಡುಕಿ ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಆಯಾ ಸಂಪುಟಗಳ ಸಂಪಾದಕರು ತಮ್ಮ ತಮ್ಮ ಸಂಪುಟಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ಶುದ್ಧರೂಪದಲ್ಲಿ ಸಿದ್ಧಪಡಿಸುವುದು. ಅನಂತರ ಆ ಸಂಪುಟದ ಸ್ವರೂಪ-ವಿಶೇಷತೆ ಕುರಿತು ನಾಲ್ಕಾರು ಪುಟದ ಸಂಪಾದಕರ ಮಾತು ಬರೆದು ಜೋಡಿಸುವುದು-ಇದು ಈ ಸಂಪುಟಗಳನ್ನು ರೂಪಿಸುವಲ್ಲಿ ಅನುಸರಿಸಿದ ವಿಧಾನ.

ಗ್ರಂಥ ವಿನ್ಯಾಸ ಕುರಿತಂತೆ-ಕೃತಿಯ ಆರಂಭದ ಪುಟಗಳು (ಪ್ರಿಲಿಮ್ಸ್) ಮುಗಿದು ಮೂಲ ಗ್ರಂಥ ಆರಂಭವಾಗುವಲ್ಲಿ ಮೊದಲ ಆವೃತ್ತಿಯ ಮೊದಲ ಪುಟವನ್ನು (ಕೃತಿಯ ಹೆಸರು, ಲೇಖಕರು/ಸಂಪಾದಕರು, ಪ್ರಕಾಶಕರು, ಪ್ರಕಟಣ ವರ್ಷಗಳನ್ನೊಳಗೊಂಡಂತೆ) ಹಾಗೆಯೇ ಇಟ್ಟುಕೊಳ್ಳಲಾಗಿದೆ. ಮೂಲದಲ್ಲಿನ ಪ್ರಕಾಶಕರ ಮಾತು, ಮುನ್ನುಡಿಗಳನ್ನು ತೆಗೆದುಹಾಕಿ ಲೇಖಕರ ಮಾತು, ಪ್ರಸ್ತಾವನೆಗಳನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಒಂದು ಸಂಪುಟದಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳಿದ್ದರೆ ಒಂದೊಂದು ಕೃತಿಯ ಮೂಲ ಸ್ವರೂಪವನ್ನು ಹಾಗೆಯೇ ಉಳಿಸಿಕೊಂಡು ಪುಟ ಸಂಖ್ಯೆಯನ್ನು ಮಾತ್ರ ಮೊದಲಿನಿಂದ ಕೊನೆಯವರೆಗೆ ಬೆಳೆಸಲಾಗಿದೆ. ಪರಿವಿಡಿಯಲ್ಲಿ ಎಲ್ಲ ಕೃತಿಗಳ ವಿವರವನ್ನು ಕೊಡಲಾಗಿದೆ.

ಒಟ್ಟಿನಲ್ಲಿ ಅಚ್ಚುಕಟ್ಟಾದ ವಿನ್ಯಾಸ, ಅರ್ಥಪೂರ್ಣ-ಆಕರ್ಷಕ ಮುಖಪುಟ, ದೋಷರಹಿತ ಸುಂದರ ಮುದ್ರಣ, ಭಾರವೆನಿಸದ ಗಾತ್ರ ಮತ್ತು ಸುಲಭವಾದ ಬೆಲೆಯಲ್ಲಿ ಡಾ. ಕಲಬುರ್ಗಿ ಅವರ ಅಮೂಲ್ಯವಾದ ಸಮಗ್ರ ಸಾಹಿತ್ಯ ಒಂದೆಡೆ ಎಲ್ಲರಿಗೂ ದೊರಕುವಂತೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಅದನ್ನು ಬಹುಮಟ್ಟಿಗೆ ಈಡೇರಿಸಿದ್ದೇವೆ ಎಂಬ ತೃಪ್ತಿ ನಮ್ಮದಾಗಿದೆ.

ಕೃತಜ್ಞತೆಗಳು :

'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟಣ ಯೋಜನೆ' ಕನ್ನಡದ ಒಂದು ಮಹತ್ವಾಕಾಂಕ್ಷೆಯ ಪ್ರತಿಷ್ಠಿತ ಗ್ರಂಥಪ್ರಕಟಣ ಯೋಜನೆ. ಇದನ್ನು ಯಶಸ್ವಿಯಾಗಿ ಪೂರೈಸುವಲ್ಲಿ ಹಲವಾರು ವ್ಯಕ್ತಿಗಳು ನೆರವಾಗಿದ್ದಾರೆ. ಅವರನ್ನು ಈ ಸಂದರ್ಭದಲ್ಲಿ ಗೌರವಪೂರ್ವಕವಾಗಿ ನೆನೆಯುವುದು ನನ್ನ ಪರಮ ಕರ್ತವ್ಯವೆಂದು ಭಾವಿಸಿದ್ದೇನೆ.

ಈ ಯೋಜನೆಗೆ ಅನುಮೋದನೆ ನೀಡಿ, ಧನ ಸಹಾಯ ಮಾಡಿದವರು ಕರ್ನಾಟಕ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ಮಾನ್ಯ ಶ್ರೀ ಸಿದ್ಧರಾಮಯ್ಯನವರು. ಅದಕ್ಕೆ ಪೂರ್ವಭಾವಿಯಾಗಿ

ಸಂಸ್ಕೃತಿ ಇಲಾಖೆಯ ನಿರ್ದೇಶಕರು. ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಈ ಮಹತ್ವದ ಯೋಜನೆ ಕಾರ್ಯರೂಪಕ್ಕೆ ಬರಲು ಮುಖ್ಯಮಂತ್ರಿಗಳ ಮನ ಒಲಿಸಿ ಹಣ ಬಿಡುಗಡೆ ಮಾಡಿಸುವುದರ ಜೊತೆಗೆ ತಮ್ಮ ಬಿಎಲ್‌ಡಿಇ ಸಂಸ್ಥೆಯ ಅಡಿಯಲ್ಲಿರುವ 'ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ'ದ ಮೂಲಕ ಇದು ಸಾಕಾರಗೊಳ್ಳಲು ಕಾರಣರಾದವರು ಕರ್ನಾಟಕ ಸರ್ಕಾರದ ಪ್ರಭಾವೀ ಗೃಹಸಚಿವರೂ, ಉತ್ಕಟ ಬಸವತತ್ವಾಭಿಮಾನಿಗಳೂ ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆಯ ಹೋರಾಟದ ಮುಂಚೂಣಿ ನಾಯಕರೂ ಆದ ಮಾನ್ಯ ಡಾ. ಎಂ.ಬಿ. ಪಾಟೀಲ ಅವರು. ಡಾ. ಎಂ. ಎಂ. ಕಲಬುರ್ಗಿ ಅವರ ಬಗೆಗೆ ಪಾಟೀಲರಿಗೆ ಅನನ್ಯವಾದ ಪ್ರೀತಿ–ವಿಶ್ವಾಸ–ಗೌರವ. ಅವರ ಮಾರ್ಗದರ್ಶನದಲ್ಲಿ ತಮ್ಮ ಬಿ.ಎಲ್.ಡಿ.ಇ. ಸಂಸ್ಥೆಯಿಂದ 'ಡಾ. ಫ.ಗು. ಹಳಕಟ್ಟಿ ಸಮಗ್ರ ಸಾಹಿತ್ಯ', 'ಆದಿಲ್‌ಶಾಹಿ ಸಮಗ್ರ ಸಾಹಿತ್ಯ' ಪ್ರಕಟಿಸಿದ ಕೀರ್ತಿ ಅವರದು. ಈಗ ಕಲಬುರ್ಗಿ ಅವರ ಸಮಗ್ರ ಸಾಹಿತ್ಯ ಪ್ರಕಟಿಸುವ ಮೂಲಕ ಅವರಿಗೆ ತಮ್ಮ ಕೃತಜ್ಞತಾಪೂರ್ವಕ ಗೌರವ ಸಲ್ಲಿಸುತ್ತಿರುವುದು ಅಪೇಕ್ಷಣೀಯ ಉಪಕ್ರಮವೆನಿಸಿದೆ. ಡಾ. ಎಂ.ಬಿ. ಪಾಟೀಲ ಅವರ ಈ ಕಾರ್ಯಕ್ಷಮತೆಗೆ ಅನಂತ ಶರಣಾರ್ಥಿಗಳನ್ನು ಸಲ್ಲಿಸುತ್ತೇನೆ.

ಈ ಯೋಜನೆ ನಿಗದಿತ ವೇಳೆಯಲ್ಲಿ ಸಮಯಬದ್ಧವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳ್ಳಲು ಅರ್ಪಣಾಭಾವದಿಂದ ನಿರಂತರ ಶ್ರಮಿಸಿದವರು ಹಳಕಟ್ಟಿ ಸಂಶೋಧನ ಕೇಂದ್ರದ ಮತ್ತು ಈ ಯೋಜನೆಯ ಕಾರ್ಯದರ್ಶಿಗಳೂ ಆದ ಡಾ. ಎಂ. ಎಸ್. ಮದಭಾವಿ ಮತ್ತು ಯೋಜನಾ ಸಂಯೋಜಕರಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಹಾಗೂ ಸಂಶೋಧನ ಕೇಂದ್ರದ ಎಲ್ಲ ಸಿಬ್ಬಂದಿ ವರ್ಗ. ಅವರ ಅವಿರತ ಪರಿಶ್ರಮಕ್ಕೆ ಅನಂತ ವಂದನೆಗಳು.

ಈ ಯೋಜನೆಗೆ ಬೇಕಾದ ಆಕರ ಸಾಮಗ್ರಿಯನ್ನು, ಅಂದರೆ ಗ್ರಂಥಗಳನ್ನು ಒದಗಿಸಿದವರು ಡಾ. ಎಂ. ಎಂ. ಕಲಬುರ್ಗಿ ಅವರ ಕುಟುಂಬವರ್ಗದವರು. ಈ ಸಂದರ್ಭದಲ್ಲಿ ಶ್ರೀಮತಿ ಉಮಾದೇವಿ ಕಲಬುರ್ಗಿ, ಶ್ರೀ ವಿಜಯ ಕಲಬುರ್ಗಿ ಮತ್ತು ರೂಪಾ ಕಲಬುರ್ಗಿ ಅವರು ಅನೇಕ ವಿಧದಲ್ಲಿ ಸಹಾಯ–ಸಹಕಾರ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾವು ಚಿರಋಣಿಯಾಗಿದ್ದೇವೆ.

ಒಂದು ಯೋಜನೆ ನಿರೀಕ್ಷಿತ ಮಟ್ಟದಲ್ಲಿ ತೃಪ್ತಿಕರವಾಗಿ ಕೈಗೂಡಬೇಕಾದರೆ ಬದ್ಧತೆಯುಳ್ಳ ವಿದ್ವಾಂಸರ ನಿಶ್ಚಿತ ನೆರವು ಮತ್ತು ಪ್ರಾಮಾಣಿಕ ಪ್ರಯತ್ನ ಅಗತ್ಯ. ಅಂಥ ೧೬ ಜನ ವಿದ್ವಾಂಸರು ನಮಗೆ ಸಂಪಾದಕರಾಗಿ ದೊರೆತುದು ಈ ಯೋಜನೆ ಸುಗಮವಾಗಿ ಪೂರ್ಣಗೊಳ್ಳಲು ಸಹಕಾರಿಯಾಗಿದೆ. ಅವರೆಲ್ಲರ ವಿದ್ವತ್ ಪ್ರೀತಿಗೆ, ಕಲಬುರ್ಗಿ ಸರ್ ಮೇಲಿನ ಅಭಿಮಾನಕ್ಕೆ ತುಂಬು ಹೃದಯದ ಅಭಿನಂದನೆಗಳು.

ಸಂಪುಟಗಳು ಸುಂದರವಾಗಿ–ಬಂಧುರವಾಗಿ ಹೊರಬರಲು ಕಾರಣರಾದವರು ಛಾಯಾಕ್ಷರ ಜೋಡಿಸಿ, ಗ್ರಂಥವಿನ್ಯಾಸಗೊಳಿಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ, ಮುಖಪುಟ ರೂಪಿಸಿದ ಕೆ.ಕೆ. ಮಕಾಳಿ ಮತ್ತು ಮುದ್ರಣಗೊಳಿಸಿದ ಪ್ರಿಂಟ್‌ಪಾಯಿಂಟ್ ಮಾಲೀಕರಾದ ಬಿ.ಸಿ. ಪಾಟೀಲ (ಹೆಬ್ಬಾಳ) ಅವರು. ಇವರೆಲ್ಲರಿಗೆ ಅನಂತ ಕೃತಜ್ಞತೆಗಳು.

ಡಾ. ಕಲಬುರ್ಗಿ ಅವರು ಅನೇಕ ಯೋಜನೆಗಳ ಮಹಾಯೋಜಕರು. ಅವರು ನೆರವೇರಿಸಿದ ಹಲವಾರು ಯೋಜನೆಗಳಲ್ಲಿ ಜೊತೆಗೂಡಿ ಕೆಲಸ ಮಾಡುವ ಅವಕಾಶ ದೊರಕಿಸಿಕೊಂಡ ನನಗೆ ಈಗ ಅವರ ಸಮಗ್ರಸಾಹಿತ್ಯ ಪ್ರಕಟಣ ಯೋಜನೆಯ ಪ್ರಧಾನ ಸಂಪಾದಕನಾಗಿ ಕಾರ್ಯ ಮಾಡುವ ಯೋಗ ಒದಗಿ ಬಂದುದು ನನ್ನ ಬದುಕಿನ ಮಹಾಭಾಗ್ಯವೆಂದು ಭಾವಿಸಿದ್ದೇನೆ. ಈ ಕಾರ್ಯಗೌರವವನ್ನು ಆ ಗುರುವಿನ ದಿವ್ಯಚೇತನಕ್ಕೆ ವಿನಮ್ರವಾಗಿ ಅರ್ಪಿಸುತ್ತೇನೆ.

❖❖

*

ಸಂಯೋಜಕರ ನುಡಿ

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಡಾ. ಎಂ.ಎಂ. ಕಲಬುರ್ಗಿಯವರು ತಮ್ಮ ಅಮೂಲ್ಯ ಸಾಹಿತ್ಯದ ಮೂಲಕ ನಾಡು, ನುಡಿ ಸೇವೆಗೈದು ದೇಶ-ವಿದೇಶದಲ್ಲಿ ದಟ್ಟವಾದ ಪ್ರಭಾವವನ್ನು ಬೀರಿದ ವ್ಯಕ್ತಿ. ೨೦ನೆಯ ಶತಮಾನದ ಉತ್ತರಾರ್ಧ ಹಾಗೂ ೨೧ನೆಯ ಶತಮಾನದ ಪೂರ್ವಾರ್ಧದ ಹೊಸ್ತಿಲಲ್ಲಿ ನಿಂತು ಸಾಹಿತ್ಯ ವಾರಸುದಾರರಿಗೆ ಮಾರ್ಗ ತೋರಿದ ಮಹಾನ್ ವಿದ್ವಾಂಸ, ಸಂಶೋಧಕ, ವಿಮರ್ಶಕ, ಚಿಂತಕ ಹಾಗೂ ಸಾಹಿತ್ಯದ ಆರಾಧಕರವರು.

ಇಂಥ ಅಪರೂಪದ ವ್ಯಕ್ತಿಯ ವ್ಯಕ್ತಿತ್ವದ ಬಹುಮುಖಗಳನ್ನು ಒಂದೆಡೆ ಸೇರಿಸಿ ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅಕ್ಷರ ಮಾಧ್ಯಮದಲ್ಲಿ ಬಂದ ಅವರ ಸಮಗ್ರ ಸಾಹಿತ್ಯವನ್ನು ವಿಷಯವಾರು ವಿಂಗಡಿಸಿ ೪೦ ಸಂಪುಟಗಳಲ್ಲಿ ಪ್ರಕಟಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

- ❖ ಅವರು ನುಡಿದ ಮಾತುಗಳು(ದೃಶ್ಯ ಮತ್ತು ಧ್ವನಿ) ರೇಡಿಯೊ, ದೂರದರ್ಶನದಲ್ಲಿ ಅಲ್ಲದೆ ಹಲವಾರು ಮಹತ್ವದ ಕಾರ್ಯಕ್ರಮಗಳಲ್ಲೂ ದಾಖಲಾಗಿವೆ. ಅವುಗಳನ್ನು ಇದ್ದ ರೀತಿಯಲ್ಲೆ ಸಂಗ್ರಹಿಸುವುದರ ಜೊತೆಗೆ, ಅವುಗಳನ್ನು ಅಕ್ಷರ ಮಾಧ್ಯಮಕ್ಕೆ ತಂದು ಸಂಪುಟ ರೂಪದಲ್ಲಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ವಿಪುಲವಾದ ಅಪ್ರಕಟಿತ ಸಾಹಿತ್ಯವು ಆತ್ಮಚರಿತ್ರೆಯ ರೂಪದ ದಿನಚರಿಯ ಪುಟಗಳಲ್ಲಿ ಲಭ್ಯವಿವೆ ಎಂದು ಬಲ್ಲ ಮೂಲಗಳಿಂದ ತಿಳಿದುಬಂದಿದೆ. ಅದನ್ನು ವಿವಿಧ ಮೂಲಗಳಿಂದ ಸಂಗ್ರಹಿಸಿ ಪ್ರಕಟಿಸುವುದು.
- ❖ ಐದು ದಶಕಗಳ ಕಾಲದಿಂದಲೂ ದಿನಪತ್ರಿಕೆಯಲ್ಲಿ, ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಲೇಖನಗಳನ್ನು ಮತ್ತು ಸಭೆ, ಸಮಾರಂಭಗಳಲ್ಲಿ ನೀಡಿರುವ ವಿದ್ವತ್ಪೂರ್ಣವಾದ ಮಾತುಗಳನ್ನು ಪತ್ರಿಕೆಯವರು ಪ್ರಕಟಿಸಿರುವುದುಂಟು. ಇವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.

- ❖ ಸಾವಿರಾರು ವಿದ್ಯಾರ್ಥಿಗಳಿಗೆ, ಸಹೋದ್ಯೋಗಿ ಬಂಧುಗಳಿಗೆ, ವಿದ್ವಾಂಸರುಗಳಿಗೆ, ಗುರುಗಳಿಗೆ, ಮಠಮಾನ್ಯಗಳಿಗೆ ಅವರು ಹಲವಾರು ಪತ್ರಗಳನ್ನು ಬರೆದವರಾಗಿದ್ದಾರೆ. ಅವುಗಳೆಲ್ಲವನ್ನು ಒಂದೆಡೆ ಸೇರಿಸಿ ಪತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಸರಕಾರ ಮತ್ತು ಸರಕಾರೇತರ ಪ್ರತಿಷ್ಠಾನಗಳು, ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯ ಇವುಗಳಲ್ಲಿ ಹಲವಾರು ಸಾಹಿತ್ಯಿಕ ಕೃತಿಗಳನ್ನು ಪ್ರಕಟಿಸಿದ್ದಾರೆ. ಅವುಗಳು ಕನ್ನಡ ನಾಡು ಮತ್ತು ಹೊರನಾಡುಗಳಲ್ಲಿ ಚದುರಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರ ಹಲವಾರು ಶೈಕ್ಷಣಿಕ, ಸಾಹಿತ್ಯಿಕ, ಸಾಮಾಜಿಕ ಮತ್ತು ಸಂಶೋಧನಾತ್ಮಕ ಲೇಖನಗಳು ನಿಯತಕಾಲಿಕೆಗಳಲ್ಲಿ ಪ್ರಕಟಗೊಂಡಿವೆ. ಅವುಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಭಾಷಣಗಳು, ಉಪನ್ಯಾಸಗಳು, ಹಲವಾರು ವಿಚಾರಸಂಕಿರಣದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ವೇದಿಕೆಗಳಲ್ಲಿ ಮಂಡಿಸಿದ ಪ್ರಬಂಧಗಳನ್ನು ಒಂದೆಡೆ ಸಂಗ್ರಹಿಸುವುದಲ್ಲದೆ, ರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ವರದಿಗಳನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಅವರ ಸಾವಿರಾರು ಶಿಷ್ಯವರ್ಗದ ಗ್ರಂಥಗಳಿಗೆ ಬರೆದ ಮುನ್ನುಡಿ, ಹಿನ್ನುಡಿ, ಮಾರ್ಗದರ್ಶಕ ಟಿಪ್ಪಣಿಗಳು, ಪ್ರಸ್ತಾವನೆಗಳು ಮತ್ತು ಸಂಪಾದಕ ನುಡಿಗಳು ಇವುಗಳೆಲ್ಲವನ್ನು ಸಂಗ್ರಹಿಸಿ ಪ್ರಕಟಿಸುವುದು.
- ❖ ಡಾ. ಕಲಬುರ್ಗಿಯವರು ಜಾನಪದ ಸಾಹಿತ್ಯದಲ್ಲೂ ಅಪರೂಪದ ಕೆಲಸ ಮಾಡಿದ್ದಾರೆ. ಹಲವಾರು ಹಾಡುಗಳನ್ನು ಸಂಗ್ರಹಿಸಿದ್ದಾರೆ. ಅವುಗಳನ್ನು ಸಂಗ್ರಹಿಸಿ, ಪ್ರಕಟಿಸುವುದು.
- ❖ ಐದು ದಶಕಗಳ ಅವರ ನಿರಂತರ ಕಾರ್ಯಚಟುವಟಿಕೆಗಳ ಭಾವಚಿತ್ರಗಳನ್ನು ಸಂಗ್ರಹಿಸಿ ಚಿತ್ರ ಸಂಪುಟಗಳನ್ನು ಪ್ರಕಟಿಸುವುದು.
- ❖ ಅವರು ಬರೆದ, ರಂಗಪ್ರದರ್ಶನ ಕಂಡ ನಾಟಕಗಳನ್ನು ಪುನರ್ ಪ್ರದರ್ಶಿಸಿ ದೃಶ್ಯಮಾಧ್ಯಮದಲ್ಲಿ ಸೆರೆಹಿಡಿದು ಪ್ರಕಟಿಸುವುದು.
- ❖ ಮುಂದುವರೆದ ಈ ತಾಂತ್ರಿಕ ಯುಗದಲ್ಲಿ ಅವರ ಸಮಗ್ರ ಸಾಹಿತ್ಯವನ್ನು ಅಂತರ್ಜಾಲಕ್ಕೆ ರವಾನಿಸುವುದು.

ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ಸುಮಾರು ೨ ದಶಕಗಳ ಸಂಶೋಧನ ಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು.ಹಳಕಟ್ಟಿ ಸಮಗ್ರ ಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಆದಿಲಶಾಹಿ ಕಾಲದ ಸಾಹಿತ್ಯವನ್ನು ೧೮ ಸಂಪುಟಗಳಲ್ಲಿ ಅನುವಾದಿಸಿ ಪ್ರಕಟಿಸಿದೆ. ೯ ವಿದ್ಯಾರ್ಥಿಗಳು ವಿವಿಧ ವಿಷಯದಲ್ಲಿ ಪಿಎಚ್.ಡಿ.ಪದವಿಯನ್ನು ಪಡೆದಿದ್ದಾರೆ. ಇನ್ನು ಕೆಲವರು ಪದವಿಯನ್ನು ಪಡೆಯುವ ದಾರಿಯಲ್ಲಿ ಇದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ.ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಈ ಯೋಜನೆಯ ಕರಡು ಪ್ರತಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳುಹಿಸಿತು. ಈ ಯೋಜನೆಗೆ ಅನುದಾನ ನೀಡುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸನ್ಮಾನ್ಯ ಶ್ರೀ

ಸಿದ್ಧರಾಮಯ್ಯನವರು ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ಮತ್ತು ಅಧಿಕಾರಿಗಳು. ಇವರಿಗೆಲ್ಲ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಯೋಜನೆಯಲ್ಲಿ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರು, ನಾಡಿನ ಹಿರಿಯ ರಾಜಕಾರಣಿಗಳು ಆದ ಡಾ. ಎಂ.ಬಿ.ಪಾಟೀಲ ಗೌರವ ಅಧ್ಯಕ್ಷರಾಗಿ, ಶ್ರೀ ಜಿ.ಕೆ.ಪಾಟೀಲರು ಅಧ್ಯಕ್ಷರಾಗಿ, ಡಾ. ಎಂ.ಎಸ್. ಮದಭಾವಿ ಕಾರ್ಯದರ್ಶಿಗಳಾಗಿ, ಡಾ. ವೀರಣ್ಣ ರಾಜೂರ ಪ್ರಧಾನ ಸಂಪಾದಕರಾಗಿ, ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಸಂಯೋಜಕರಾಗಿ ಹಾಗೂ ಡಾ. ಗುರುಲಿಂಗ ಕಾಪಸೆ, ಶ್ರೀವಿಜಯ ಕಲಬುರ್ಗಿ, ಡಾ. ವಿ.ಡಿ.ಐಹೊಳ್ಳಿ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರು, ಸಲಹಾ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಇವರೆಲ್ಲರನ್ನು ಪ್ರೀತಿಯಿಂದ ನೆನೆಯುತ್ತೇವೆ.

ಪ್ರಸ್ತುತ ಸಂಪುಟದ ಸಂಪಾದಕರಾದ ಡಾ. ಬಿ.ವ್ಹಿ. ಶಿರೂರ, ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಸುಂದರವಾಗಿ ಅಕ್ಷರ ಸಂಯೋಜನೆ ಮಾಡಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿದೇವಿ ಭಗವತಿ ಮತ್ತು ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟಿನ ಶ್ರೀ ಬಿ.ಸಿ.ಪಾಟೀಲ(ಹೆಬ್ಬಾಳ) ಹಾಗೂ ಅವರ ಸಿಬ್ಬಂದಿಗೆ ಕೃತಜ್ಞತೆಗಳು.

❖❖

*

ಸಂಪಾದಕರ ನುಡಿ

ಡಾ. ಬಿ. ವ್ಹಿ. ಶಿರೂರ

ಡಾ. ಎಂ. ಎಂ. ಕಲಬುರ್ಗಿ ಅವರ ಪಾಂಡಿತ್ಯ–ಪ್ರತಿಭೆ ಬಹುಮುಖಿಯಾದುದು. ಅವರು ಸಂಶೋಧಕರಾಗಿ ಹಲವಾರು ಶಾಸ್ತ್ರಕೃತಿಗಳನ್ನು ರಚಿಸಿದರೆ, ಕಾವ್ಯಾಸಕ್ತರಾಗಿ ಅನೇಕ ಪ್ರಾಚೀನ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಶಾಸ್ತ್ರಕೃತಿರಚನೆಯಲ್ಲಿ ತೋರಿದ ಶ್ರಮ ಪಾಂಡಿತ್ಯ–ಪ್ರತಿಭೆಗಳು ಅವರು ಸಂಪಾದಿಸಿರುವ ಕೃತಿಗಳಲ್ಲಿಯೂ ಕಂಡುಬರುತ್ತಿವೆ.

ನಾಗಚಂದ್ರನ 'ಮಲ್ಲಿನಾಥ ಪುರಾಣ ಸಂಗ್ರಹ' ಅದೊಂದು ಕೇವಲ ಸಂಗ್ರಹ ಕೃತಿಯಲ್ಲ. ಕೆಲಮಟ್ಟಿಗೆ ಸಂಪಾದಿತಕೃತಿಯೂ ಹೌದು. ಕವಿ–ಕಾವ್ಯವನ್ನು ಕುರಿತು ಪ್ರಸ್ತಾವನೆಯಲ್ಲಿ ಮಂಡಿಸಿರುವ ವಿಚಾರಗಳು ಮುಂದೆ ಬಂದ ಸಾಹಿತ್ಯ ಚರಿತ್ರೆಗಳಿಗೆ ಸಾಮಗ್ರಿಯಾಗಿರುವುದನ್ನು ಕಾಣುತ್ತೇವೆ. ಗ್ರಂಥದ ಕೊನೆಯಲ್ಲಿ ಕೊಟ್ಟಿರುವ ಟಿಪ್ಪಣಿಗಳು ವಿಪುಲ ಮಾಹಿತಿಯನ್ನೊಳಗೊಂಡಿರುವುದೂ ಈ ಕೃತಿಯ ವೈಶಿಷ್ಟ್ಯ. ಹೀಗೆ ಇದೊಂದು ಮಾದರಿ ಸಂಗ್ರಹವಾಗಿದೆ. ಹಾಗೆಯೇ ಕೇಶಿರಾಜನ 'ಶಬ್ದಮಣಿದರ್ಪಣ ಸಂಗ್ರಹ'ವು ಅಲ್ಲಿರುವ ಹಲವಾರು ತೊಡಕುಗಳನ್ನು ಬಿಡಿಸಲು ಮಾಡಿದ ಪ್ರಯತ್ನವಾಗಿದೆ.

ಸಿದ್ಧನಂಜೇಶನ 'ತೋಂಟದ ಸಿದ್ಧೇಶ್ವರ ಭಾವರತ್ನಾಭರಣ ಸ್ತೋತ್ರ'ವು ಸಾಮಾನ್ಯರ ವಾಚನಕ್ಕೋಸುಗ ಪದ್ಯಕ್ಕೆ ಪ್ರತಿಪದಾರ್ಥ ಹಾಗೂ ಸರಳಾನುವಾದ ಬರೆಯಲ್ಪಟ್ಟ ಕೃತಿ. ಅಲ್ಲಿಯೂ ಡಾ. ಕಲಬುರ್ಗಿ ಅವರ ಅಪಾರ ಪರಿಶ್ರಮವನ್ನು ಕಾಣುತ್ತೇವೆ. ಶಿವಶರಣರಲ್ಲಿ ಕೆಲವರು ವಚನಕಾರರು ಮಾತ್ರವಲ್ಲ, ಅವರು ಬೇರೆ ಬೇರೆ ಸಾಹಿತ್ಯ ಪ್ರಕಾರಗಳಲ್ಲಿಯೂ ಕೃಷಿ ಮಾಡಿದ್ದಾರೆ ಎಂಬುದನ್ನು ಬಿಚ್ಚಿತೋರಲು 'ಆದಯ್ಯನ ಲಘು ಕೃತಿಗಳು' ಕೃತಿಯನ್ನು ಸಂಪಾದಿಸಿದ್ದಾರೆ. ಹಾಗೆಯೇ ಬಸವ ಪೂರ್ವಯುಗದ ಮೌನವನ್ನು ಮುರಿಯುವುದಕ್ಕಾಗಿ ಪ್ರಕಟಿಸಲಾದ ಕೃತಿ 'ಕೊಂಡಗುಳಿ ಕೇಶಿರಾಜನ ಕೃತಿಗಳು.'

I. ಮಲ್ಲಿನಾಥಪುರಾಣ ಸಂಗ್ರಹ – ೧೯೭೪

'ಕಾವ್ಯರಚನೆಯೆಂಬುದು ವಾಣಿಮಾಧ್ಯಮದ ಮೂಲಕ ಜರಗುವ ದೇವಪೂಜೆ' ಎಂದು ಭಾವಿಸಿದ್ದ ನಾಗಚಂದ್ರ, 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ' ಎಂಬ ಮಾತಿಗೆ ವಿರುದ್ಧವಾಗಿ, ಎರಡೂ ಆಗಮಿಕ ಕೃತಿಗಳನ್ನೇ ರಚಿಸಿದ ಮುನಿಸದೃಶ ಶ್ರಾವಕಜೀವಿ. ಅವನು ರಚಿಸಿದ ರಾಮಚಂದ್ರಚರಿತಪುರಾಣ, ಮಲ್ಲಿನಾಥಪುರಾಣಗಳು ನಾಗಚಂದ್ರನ ಕಾವ್ಯಸಾಮರ್ಥ್ಯವನ್ನು ಸೊಗಸಾಗಿ ಬಿಂಬಿಸುವ ಶ್ರೇಷ್ಠ ಕಾವ್ಯಗಳು. ಅವುಗಳಲ್ಲಿ 'ಮಲ್ಲಿನಾಥಪುರಾಣಸಂಗ್ರಹ'ವನ್ನು ಸಂಗ್ರಹಿಸುವ ಮೂಲಕ ಗ್ರಂಥಸಂಪಾದನಕ್ಷೇತ್ರವನ್ನು

ಪ್ರಪ್ರಥಮವಾಗಿ ಪ್ರವೇಶಿಸಿದವರು ಡಾ. ಕಲಬುರ್ಗಿ ಅವರು. ಅವರು ಈ ಕೃತಿಯ ಸಂಪಾದನೆಗೆ ತೊಡಗಲು ಒದಗಿ ಬಂದ ಕಾರಣವನ್ನು ಈ ರೀತಿ ಹೇಳಿದ್ದಾರೆ : 'ಕೃತಿಸಂಕ್ಷೇಪನ' ಕಾರ್ಯ ಪ್ರಾಚೀನ ಕಾಲದಿಂದಲೂ ನಮ್ಮಲ್ಲಿ ನಡೆದುಬಂದಿದೆ. ಕವಿ ಅಸಗನ ೧೬ ಸಂಧಿಗಳ 'ಶಾಂತೀಶ್ವರಪುರಾಣ' ೧೨ ಸಂಧಿಗಳಲ್ಲಿ ಲಘುಶಾಂತೀಶ್ವರಪುರಾಣವಾಗಿ ಲಭಿಸುತ್ತದೆ. ಕುಮಾರವ್ಯಾಸಭಾರತ, ತೊರವೆರಾಮಾಯಣ, ಭಾಗವತಗಳಿಂದ ರೂಪಿತವಾದ ಸಂಕ್ಷೇಪಭಾರತ, ಸಂಕ್ಷೇಪರಾಮಾಯಣ, ಸಂಕ್ಷೇಪಭಾಗವತದ ಹಸ್ತಪ್ರತಿಗಳು ನೂರಾರು ಸಿಗುತ್ತವೆ. ಆಧುನಿಕಯುಗದಲ್ಲಂತೂ ಉತ್ತಮೋತ್ತಮ ಪ್ರಾಚೀನ ಗ್ರಂಥಗಳಿಂದ 'ಸಂಗ್ರಹ'ಗಳನ್ನು ಸಿದ್ಧಗೊಳಿಸುವುದು ನಡದೇ ಇದೆ. ಇವುಗಳಲ್ಲಿ ಆದಿಪುರಾಣ ಸಂಗ್ರಹ, ಗದಾಯುದ್ಧ ಸಂಗ್ರಹ, ಪಂಪರಾಮಾಯಣಸಂಗ್ರಹ, ಹರಿಶ್ಚಂದ್ರಕಾವ್ಯಸಂಗ್ರಹ, ಸಿದ್ಧರಾಮಪುರಾಣಸಂಗ್ರಹ, ಪ್ರಭುಲಿಂಗಲೀಲೆಸಂಗ್ರಹ ಸುಪ್ರಸಿದ್ಧವಾದವು. ಮಲ್ಲಿನಾಥಪುರಾಣವನ್ನು ಸಂಗ್ರಹಿಸುವಾಗ ಈ ಕೃತಿಗಳು ನನ್ನ ಮನಸ್ಸಿನಲ್ಲಿವೆ'

ಒಂದು ಕೃತಿಯನ್ನು ಸಂಪಾದಿಸುವಲ್ಲಿ ಮುಖ್ಯವಾದವು–ಪಠ್ಯ, ಪ್ರಸ್ತಾವನೆ ಮತ್ತು ಅನುಬಂಧ. ಮೂಲದಲ್ಲಿ ೧೪ ಆಶ್ವಾಸ, ೧೪೯೧ ಪದ್ಯಗಳನ್ನೊಳಗೊಂಡಿರುವ ಮಲ್ಲಿನಾಥಪುರಾಣವನ್ನು ೩೨೫ ಪದ್ಯಗಳಲ್ಲಿ ಡಾ. ಕಲಬುರ್ಗಿ ಅವರು ಸಂಗ್ರಹಿಸಿದ ರೀತಿಯನ್ನು ಈ ರೀತಿ ಹೇಳಿಕೊಂಡಿದ್ದಾರೆ: 'ವಸ್ತು, ಕವಿ ಇವುಗಳ ದಾಂಪತ್ಯದ ಫಲ ಕೃತಿ. ಒಂದು ಕೃತಿಯನ್ನು ಸಂಗ್ರಹಗೊಳಿಸುವಲ್ಲಿ ವಸ್ತುವಿನ ಸ್ಥಿತಿಗೂ ಕವಿಯ ಪ್ರತಿಭೆಗೂ ಅನ್ಯಾಯವಾಗದಂತೆ ಎಚ್ಚರವಹಿಸಬೇಕಾಗುತ್ತದೆ. ಪರಿಭಾಷೆಯಲ್ಲಿ ಮಾತನಾಡುವುದಾದರೆ ಮಲ್ಲಿನಾಥಪುರಾಣವು ಪುರಾಣವಲ್ಲ, ಪುರಾಣಕಾವ್ಯ. ಹೀಗಾಗಿ ಪುರಾಣಕ್ಕೂ ಧಕ್ಕೆಯಾಗದಂತೆ ಕಾವ್ಯಕ್ಕೂ ಧಕ್ಕೆಯಾಗದಂತೆ ಸಂಗ್ರಹಿಸಲು ಪ್ರಯತ್ನಿಸಿರುವೆನಾದರೂ ಕಾವ್ಯದ ಏಕಮುಖತೆಯ ದೃಷ್ಟಿಯಿಂದ ಕೆಲವು ಮುತ್ತಿನಂಥ ಪದ್ಯಗಳನ್ನು ಕೈಬಿಡಬೇಕಾಯಿತು, ಸಿಂಪಿಯಂಥ ಪದ್ಯಗಳನ್ನು ಸ್ವೀಕರಿಸಬೇಕಾಯಿತು, ಅನಿವಾರ್ಯ. ಪದ್ಯಸಂಗ್ರಹಕ್ಕಿಂತ ಗದ್ಯಸಂಗ್ರಹದಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸಿದ್ದೇನೆ. ಒಂದೇ ಗದ್ಯಭಾಗವನ್ನು ಅಲ್ಲಿಯ ವಾಕ್ಯಗಳಿಂದಲೇ ಸಂಗ್ರಹಿಸಿದ್ದೇನೆ. ಕೆಲವುಸಲ ಒಂದು ಭಾಗದ ಗದ್ಯವನ್ನು ಮುಂದಿನ ಭಾಗದ ಗದ್ಯದೊಂದಿಗೆ ಬೆಸೆದಿದ್ದೇನೆ. ಕಥೆಗೆ ಸಂಬಂಧ ಕಲ್ಪಿಸಲು ಅನಿವಾರ್ಯವೆನಿಸಿದಾಗ ಹೊಸದೇನನ್ನಾದರೂ ಸೇರಿಸಿದಲ್ಲಿ ಚೌಕಕಂಸನ್ನು ಉಪಯೋಗಿಸಿದ್ದೇನೆ' ಎಂದಿದ್ದಾರೆ.

ಒಂದು ಕೃತಿಯ ಸಂಗ್ರಹವೆಂದರೆ ಒಂದು ಪಠ್ಯವನ್ನು ಮುಂದಿಟ್ಟುಕೊಂಡು ಅಲ್ಲಲ್ಲಿಯ ಪದ್ಯ, ಗದ್ಯ ಭಾಗಗಳನ್ನು ಕಡಿಮೆ ಮಾಡಿ ಇದ್ದಕ್ಕಿದ್ದಹಾಗೆ ಪ್ರಕಟಿಸುವುದಲ್ಲ. ಮೂಲದ ಪಠ್ಯದಲ್ಲಿ ಏನಾದರೂ ದೋಷಗಳಿದ್ದರೆ ಅವುಗಳನ್ನು ಅಡಿಟಿಪ್ಪಣಿಗಳ ಸಹಾಯದಿಂದಾಗಲಿ, ಬೇರೆ ಹಸ್ತಪ್ರತಿಯ ಸಹಾಯದಿಂದಾಗಲಿ ತಿದ್ದುಪಡಿ ಮಾಡಬೇಕಾದುದು ಅವಶ್ಯ. ಅದೇ ರೀತಿ ಡಾ. ಕಲಬುರ್ಗಿ ಅವರು ಈ ಕೃತಿಯನ್ನು ಸಂಗ್ರಹಿಸುವಲ್ಲಿ ಸಂಪಾದನೆಯ ಕಾರ್ಯವನ್ನೂ ಮಾಡಿದ್ದಾರೆ. ಅದನ್ನು ಅವರು ಈ ರೀತಿ ಹೇಳಿಕೊಂಡಿದ್ದಾರೆ: 'ಸಂಗ್ರಹಕಾರ್ಯದಷ್ಟೇ ಶ್ರಮವಹಿಸಬೇಕಾಯಿತು ಇಟ್ಟುಕೊಂಡ ಭಾಗದ ಪಾಠನಿರ್ಣಯದಲ್ಲಿ. ಮಲ್ಲಿನಾಥಪುರಾಣ, ಈ ವರೆಗೆ ವಿದ್ವಾಂಸರ ನಿಖರವ್ಯಾಸಂಗಕ್ಕೆ ಒಳಗಾಗಿಲ್ಲ. ಹಸ್ತಪ್ರತಿಗಳೂ ಹೆಚ್ಚು ಸಿಗುವುದಿಲ್ಲ. ಹೀಗಾಗಿ ಇದರ ಪಾಠವಿವೇಚನೆಯ ವಲಯದಿಂದ ದೂರ ಉಳಿಯುತ್ತಬಂದಿದೆ. ಈ ಪ್ರಸಂಗದಲ್ಲಿ ನಾನು ಆಧಾರವಾಗಿ ಹಿಡಿದುದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಜೈನವಿಭಾಗ ಪ್ರಕಟಿಸಿದ 'ಮಲ್ಲಿನಾಥಪುರಾಣ'ವನ್ನು. ಯೋಗ್ಯವೆನಿಸಿದಲ್ಲಿ ಮೇಲಿನಪಾಠ ಬಿಟ್ಟು ಅಡಿಪಾಠಗಳನ್ನು ಸ್ವೀಕರಿಸಿದ್ದೇನೆ' ಎಂದಿದ್ದಾರೆ. ಹಾಗೆ ಅಡಿಪಾಠಗಳನ್ನು ಸ್ವೀಕರಿಸಿದುದಕ್ಕೆ ಉದಾಹರಣೆ–

ಪತ್ಯದ ಪಾಠ	ಸಂಗ್ರಹದಲ್ಲಿ ಸ್ವೀಕರಿಸಿದ ಅಡಿಟಿಪ್ಪಣಿ ಪಾಠ
ಪು. ಪ. ಸಂಖ್ಯೆ	ಪದ್ಯ ಸಂಖ್ಯೆ
೨೩–೨೨–ಶತಪತ್ರಪತ್ರಶತ	೧೮– ಶತಪತ್ರಪತ್ರಶರ
೨೭–೪೩–ಚದುರೆತ್ತಣದಾಕೆ	೨೦– ಬದುಕೆತ್ತಣದಾಕೆ
೮೩–೧ರ ಗದ್ಯ–ಸಂತತೋತ್ಸವ	೫೨ರ ಗದ್ಯ ವಸಂತೋತ್ಸವ
೯೦–೩೩–ತೃಷ್ಣಂ	೬೮–ಪೃಷ್ಠಂ
೧೧೦–೨೫ರ ಗದ್ಯ–ಎಂದಾಸುಮತಿಯಾಗೆ	೯೧ರ ಗದ್ಯ–ಎಂದಾ[ಶು] ಕವಿಯಾ[ಗಿ]
೨೩೩–೬೫–ನಡೆ ಮೇಘದಿಂ	೨೫೨–ನವಮೇಘದಿಂ
೨೬೬–೮೦ರ ಗದ್ಯ–ದೇವಾರ್ಭಕ	೨೫೫ರ ಗದ್ಯ–ಜಿನಾರ್ಭಕಂ ಮೊದಲಾದವು

ಮೇಲಿನಪಾಠ ಮತ್ತು ಅಡಿಪಾಠಗಳೆರಡೂ ಅಸಮ್ಮತವೆನಿಸಿದಾಗ ಪರಿಷ್ಕರಣವನ್ನೋ ಊಹಾತ್ಮಕ ಪರಿಷ್ಕರಣವನ್ನೋ ಮಾಡಿ ಅದಕ್ಕೆ ಚೌಕಕಂಸ ಬಳಸಬೇಕಾದುದು ಒಳ್ಳೆಯ ಸಂಪಾದಕನ ಲಕ್ಷಣ. ಅದನ್ನು ಡಾ. ಕಲಬುರ್ಗಿ ಅವರು ಸಮರ್ಥ ರೀತಿಯಲ್ಲಿ ಮಾಡಿರುವುದಕ್ಕೆ ಕೆಲವು ಉದಾಹರಣೆಗಳನ್ನು ನೋಡಬಹುದು–

ಮೂಲಪಾಠ	ಸಂಗ್ರಹದಲ್ಲಿ ಸ್ವೀಕರಿಸಿದ ಪಾಠ
ಪು. ಪ. ಸಂಖ್ಯೆ	ಪದ್ಯ ಸಂಖ್ಯೆ
೯–೪೧–ಜಿನಪತಿ ಸಭೆಯೊಳ್	೬–[ಜ]ನಪತಿ ಸಭೆಯೊಳ್
೨೭–೪೪–ಗಂಡುದೊತ್ತಾಳ್ವರಾವ	೨೧–ಗಂಡುದೊತ್ತಾ[ಳ್ವುದಾ]ವ
೫೧–೭೮–ಸತಿ	೩೧–ಸ[ಲೆ]
೫೮–೨ರ ಗದ್ಯ–ಸಿಂಹಾಸನನಾಸೀನನರಸನರಸಿಯ	೪೦ರ ಗದ್ಯ–ಸಿಂಹಾನಾಸೀನ [ನಾಗಿಯ]ರಸಿಯ
೭೮–೮೧ರ ಗದ್ಯ–ಸ್ವಾಂತ[ಚಿತ್ತ]ನಂತಃಪುರ	೫೩–ಸ್ವಾಂತನಂತಃಪುರ
೮೬–೧೪–ಮಲ್ಲಿಗೆವೊಲಂ	೧೬–ಮಲ್ಲಿಗೆ[ವ]ಲಂ
೧೩೩–೨೩–ತಳ್ತೆಮೆದುರುಗಲೆನಲ್ಲೂ	೨೧–ತಳ್ತೆಮೆ[ದುರುಗಿತೆನ]ಲ್ಲೂ
೧೩೬–೩೬–ಪೆರೆ	೧೨೪–[ಪೊ]ರೆ
೧೬೭–೭೯–ತೆರಳೆ	೧೫೧–[ತ]ರಳೆ
೧೮೯–೩೯–ಕೆಲಗೊಂಬಾ	೧೭೩–ಕೆಲಗೊಂ[ಡಾ]

೨೨೨-೭೫ರ ಗದ್ಯ-ನೆಯ್ದೆವರ್ಪುದುಂ	೧೯೯ರ ಗದ್ಯ-ನೆಯ್ದೆವ[ಂದು]
೨೫೧-೧೦-ಗಣಿಕಾಪ್ರಭೆಯಂ	೨೩೪-ಗಣಿಕಾಪ್ರಭೆ[ಯಾ]
೨೯೧-೬೫-ಕದಡದೆ	೨೭೭-ಕದಡ[ದು]
೩೧೬-೨೮-ಮೊಡವುಟ್ಟಿದಂತಸು	೨೯೬-ಮೊಡವುಟ್ಟ[ದತ್ತಿ]ಸು
೩೧೬-೩೦-ಕೆಳ್ಗದಿ	೨೯೮-[ಕೂಳ್ಗ]ದಿ
೩೧೭-೩೪-ದೊಣೆಯುಮಂ	೩೦೦-[ಗುಣಮುಮಂ] ಮೊದಲಾದವು

ಮೂಲದ ಪುಟ ೮೯ರ-೨೭,೨೯; ೯೨ರ-೩೨ನೆಯ ಪದ್ಯಗಳಲ್ಲಿ ಚಿತ್ರಿಕೆ ಎಂದಿರುವುದನ್ನು ಸಂಗ್ರಹದ ಪದ್ಯ ೬೩,೬೪, ೭೨ರ ಪದ್ಯಗಳಲ್ಲಿ ಚಿತ್ರಕ ಎಂದು ತಿದ್ದಿಕೊಳ್ಳಲಾಗಿದೆ

ಇಲ್ಲಿ ಊಹೆಯಿಂದ ಸ್ವೀಕರಿಸಿದ ಪಾಠಗಳು ಸಂದರ್ಭಕ್ಕೆ ತಕ್ಕಂತೆ ಸರಿಯಾದ ಅರ್ಥವನ್ನೇ ನೀಡುವುದರಿಂದ ಡಾ. ಕಲಬುರ್ಗಿ ಅವರ ಸಂಪಾದನೆಯ ಕಾರ್ಯ ಬಹುಮಟ್ಟಿಗೆ ಯಶಸ್ವಿಯಾಗಿದೆಯೆಂದೇ ಹೇಳಬಹುದು. . 'ಹೀಗೆ ಪರಿಷ್ಕರಿಸುವಾಗ ನನ್ನ ಅನ್ಯಥಾಜ್ಞಾನದಿಂದಾಗಿ ಒಂದೆರಡು ಹೊಸ ತಪ್ಪುಗಳು ಉದ್ಭವಿಸಿದವು. ಅವುಗಳನ್ನು ಒಪ್ಪೋಲೆಯಲ್ಲಿ ಸೂಚಿಸಿದ್ದೇನೆ, ಟಿಪ್ಪಣಿಯಲ್ಲಿ ಚರ್ಚಿಸಿದ್ದೇನೆ' ಎಂದಿದ್ದಾರೆ. ಅಲ್ಲದೆ ಪಠ್ಯದಲ್ಲಿ ಡಾ. ಕಲಬುರ್ಗಿ ಅವರ ಹದ್ದಿನ ಕಣ್ಣನ್ನೂ ತಪ್ಪಿಸಿ ಅಲ್ಲಲ್ಲಿ ಕೆಲವು ಅಚ್ಚಿನದೋಷಗಳೂ ಉಳಿದಿವೆ. ಅವನ್ನೂ ಗ್ರಂಥದ ಕೊನೆಗೆ 'ಒಪ್ಪೋಲೆ'ಯಲ್ಲಿ ಕೊಡಲಾಗಿದೆ. ಉದಾಹರಣೆಗೆ-

ಮೂಲದ ಪು. ಪ. ಸಂಖ್ಯೆ	**ಸಂಗ್ರಹದಲ್ಲಿಯ ಪದ್ಯ ಸಂಖ್ಯೆ**
೧೮೪-೧೮-ಮಟ್ಟೆವಂದಂ	೧೬೯-ಮುಟ್ಟೆವಂದಂ
೧೮೯-೩೩-ತಿಗ್ಮು	೧೭೩-ತಿಗ್ಮ
೨೬೪-೬೭ರ ಗದ್ಯ-ವೂರ್ವಭಾಗ	೨೫೩-ಪೂರ್ವಭಾಗ
೩೪೭-೧೬೪ರ ಗದ್ಯ-ತಾಲ್ವೋಷ್ಠ	೩೧೨ರ ಗದ್ಯ-ತಾಲೋಷ್ಠ
೩೫೩-೧೯೧-ಕಾಮನ ಮೋಹನಾಸ್ತ್ರ	೩೨೨-ಕಾಮನ ಮೋಹಶಾಸ್ತ್ರ
೩೫೩-೧೯೧--ಮಿಕ್ಷುಲತೆ	ಮೀಕ್ಷಣಮೆ
೩೫೭-೨೦೭-ಕೃಷ್ಣಾಗುರು	೩೨೫-ಕೃಷ್ಣಾಗರು, ಮೊದಲಾದವು

ಹೀಗೆ ಕೃತಿಯ ಕೊನೆಯಲ್ಲಿ ಒಪ್ಪೋಲೆಯನ್ನು ಕೊಡಲಾಗಿದ್ದರೂ ಇನ್ನೂ ಕೆಲವು ಶಬ್ದದೋಷಗಳು ಉಳಿದುಕೊಂಡಿವೆ. ಉದಾ-ಪ್ರಸ್ತಾವನೆಯಲ್ಲಿಯ ಸನ್ನಿಧಿಯೊಳ್ತಿವಂತು-ಸನ್ನಿಧಿಯೊಳ್ತಿಳಿವಂತು, ಪ. ೧೫೩ ವಿಯದ್ವಯಳಕ್ಕೆ-ವಿಯದ್ವಳಯಕ್ಕೆ, ೧೯೫ರ ಗದ್ಯ-ಮೂನೂರ್ವರಕಸು-ಮೂನೂರ್ವರರಸು, ಪು.೫೦. ಪ.೨೫೩-ಆಡರ್ದುದ-ಅಡರ್ದುದ, ಪ. ೩೨೪-ನೆಂದ್ರಸುತ್ಕರ್ಷ-ನೆಂದ್ರನುತ್ಕರ್ಷ. ಅವನ್ನು ಇಲ್ಲಿ ಸರಿಪಡಿಸಲಾಗಿದೆ.

ಒಂದು ಸಂಗ್ರಹ ಕೃತಿಗೆ ಪಠ್ಯದಷ್ಟೆ ಮುಖ್ಯವಾದುದು ಪ್ರಾರಂಭದ ಪ್ರಸ್ತಾವನೆ ಮತ್ತು ಅಂತ್ಯದ ಅನುಬಂಧ. ಪ್ರಸ್ತಾವನೆಯನ್ನು ಬರೆಯಲು ಒದಗಿದ ಸಂದರ್ಭ ಕುರಿತು ಡಾ. ಕಲಬುರ್ಗಿ ಅವರು ಈ ರೀತಿ ಹೇಳಿಕೊಂಡಿದ್ದಾರೆ : 'ಕನ್ನಡದ ಪ್ರಥಮದರ್ಜೆಯ ಸಂಗ್ರಹಗಳಲ್ಲಿ ಕೆಲವು ಪ್ರಸ್ತಾವನೆಯ ಕೊರತೆಯಿಂದ, ಕೆಲವು ಅನುಬಂಧದ ಕೊರತೆಯಿಂದ ಬಳಲುತ್ತಿರುವ ಸಂಗತಿ ನನಗೆ ನೋವನ್ನುಂಟುಮಾಡಿದ್ದಿತು. ಈ ನೋವು, ನನ್ನಿಂದ ಈ ಸಂಗ್ರಹಕ್ಕೆ ಎರಡನ್ನೂ ಬರೆಯಲು ಹಚ್ಚಿತು. ಪರಸ್ಪರ ಪೂರಕವೆನಿಸುವ ಯುಗಪರಿಚಯ, ಕವಿಪರಿಚಯ, ಕೃತಿಪರಿಚಯ ಎಂಬ ಮೂರು ಕ್ಷೇತ್ರಗಳ ವಿವೇಚನೆಯನ್ನೊಳಗೊಂಡಿದೆ' ಎಂದಿದ್ದಾರೆ.

ಯುಗಪರಿಚಯದಲ್ಲಿ ಅರಸರ ಆಶ್ರಯದಲ್ಲಿ ಜೈನಧರ್ಮ ಬೆಳೆದುಬಂದ ಬಗೆಯನ್ನು ಎರಡೇ ಪುಟದಲ್ಲಿ ಕರಿಯನ್ನು ಕನ್ನಡಿಯಲ್ಲಿ ಹಿಡಿದಿಟ್ಟಹಾಗೆ, ಸಂಕ್ಷಿಪ್ತವಾಗಿ ಸಮಗ್ರವಾಗಿ ಕಟ್ಟಿಕೊಟ್ಟಿದ್ದಾರೆ. 'ಜೈನಧರ್ಮ ರಾಷ್ಟ್ರಕೂಟ, ಗಂಗರ ಪತನದಿಂದ ಅನಾಥಪ್ರಜ್ಞೆಯನ್ನನುಭವಿಸುತ್ತ ಅರಮನೆಯಲ್ಲಿ ಮಲಮಗನಂತೆ ಬದುಕತೊಡಗಿತು' ಎಂದಿರುವುದು ಎಷ್ಟೊಂದು ಅರ್ಥಪೂರ್ಣವಾಗಿದೆ ಎಂಬುದು ಇದರಿಂದ ಗೋಚರವಾಗುತ್ತಿದೆ. ಅದರ ಪ್ರತಿಭಟನೆ ಎನ್ನುವಂತೆ ಮೂಡಿಬಂದ ಸಾಹಿತ್ಯ ಕುರಿತು 'ಹೀಗೆ ಅವಸರದಿಂದ ಅಸ್ತಮಾನದೆಡೆಗೆ ನಡೆದುದನ್ನು ಕಣ್ಣಿನಿಂದ ನೋಡಲಿಕ್ಕೂ ಆಗದೆ, ಕೈಯಿಂದ ತಡೆಯಲಿಕ್ಕೂ ಆಗದೆ ಜೈನಸಮಾಜ ಅಸಹಾಯಕಸ್ಥಿತಿಯ ರೋಷವನ್ನು ಬದುಕುತ್ತಲಿದ್ದಿತು. ಬ್ರಹ್ಮಶಿವನ ಬಾಯಿಂದ, ನಯಸೇನನ ನಾಲಿಗೆಯಿಂದ ಅವತರಿಸಿದ ಸಾಹಿತ್ಯವೇ ಇದಕ್ಕೆ ನಿದರ್ಶನ. ನಾಗಚಂದ್ರನಂಥ ಸುಸಂಸ್ಕೃತ ವ್ಯಕ್ತಿಯೂ 'ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಿಂ ಸ್ಮರಂ ನಂದೆ ಪೊಯ್ವಂ' ಎಂಬಂತಹ ದೂಷಣೆರೂಪದ ಹತ್ತೆಂಟು ಮಾತುಗಳನ್ನಾಡಿದುದು ಜೈನಮತದ ಅಸಹಾಯಕಸ್ಥಿತಿಯ ಸಹನೆಯನ್ನೂ, ಅವನತಿಯ ವೇಗವನ್ನೂ ಸ್ಪಷ್ಟಪಡಿಸುತ್ತದೆ. ತತ್ವದ ಸುವರ್ಣಶುದ್ಧಿಯನ್ನು ಕಳೆದುಕೊಂಡ ಜೈನಘಟ್ಟದ ಅಪರಾಹ್ನದ ಅವಧಿಯಲ್ಲಿ ಬದುಕಿದ ನಾಗಚಂದ್ರ, ಈ ಸೆಳವಿನಿಂದ ಹೊರಬಂದು ಹೊಸಹಾದಿ ಹುಡುಕುವ ಸಾಹಸ ಮಾಡದೆ ಸಂಪ್ರದಾಯದ ಶ್ರೇಷ್ಠಕವಿಯಾಗಿ ನಿಂತುದನ್ನು ವಿವರಿಸಿದ್ದಾರೆ. ಕಾವ್ಯವನ್ನು ಒಳಹೊಕ್ಕು ಕವಿಯ ಮನಸ್ಥಿತಿಯನ್ನು ಈ ರೀತಿ ವಿವರಿಸಿದ್ದಾರೆ: 'ನಾಗಚಂದ್ರ, ಕಾವ್ಯಸೃಷ್ಟಿಯಲ್ಲಿ ಅಭಿನವಪಂಪನಾಗಬಯಸಿದ್ದರೂ ಜೀವನದೃಷ್ಟಿಯಿಂದ ಹರಿಹರನಾಗಿದ್ದಾನೆ, ಅವನ ಧರ್ಮಶ್ರದ್ಧೆ ಕುರುಡು ವ್ಯಾಮೋಹವಲ್ಲ, ನಿಸರ್ಗಪ್ರೀತಿ, ಸಂಗೀತ-ಕಲಾಸಕ್ತಿಗಳು ಇವನ ವ್ಯಕ್ತಿತ್ವದ ಇನ್ನೆರಡು ಮುಖ್ಯ ಲಕ್ಷಣಗಳು. ಇವನದು ಸತತ ಶಾಂತಿಯಲ್ಲಿ ತುಡಿಯುವ ಮನಸ್ಸು'.

ನಾಗಚಂದ್ರನ ವಂಶಪರಂಪರೆ, ಗುರುಪರಂರೆ, ಕಾಲ, ಜನ್ಮಸ್ಥಳ, ಕಥಾವಸ್ತು ಮೊದಲಾದವುಗಳನ್ನು ಕುರಿತು ಈ ಹಿಂದೆ ಪಂಡಿತರು ಮಂಡಿಸಿದ ಅಭಿಪ್ರಾಯಗಳನ್ನೆಲ್ಲ ಚರ್ಚಿಸಿ, ತಮ್ಮದೇ ಆದ ವಿಚಾರಗಳನ್ನು ಈ ರೀತಿ ಮಂಡಿಸಿದ್ದಾರೆ–

೧. ಈ ವರೆಗೆ ವಿದ್ವಾಂಸರು ಕಟ್ಟಿಕೊಟ್ಟ ನಾಗಚಂದ್ರನ ವಂಶಚಿತ್ರವನ್ನು ಮುರಿದು ಹೊಂದಿಸಲು ಪ್ರಯತ್ನಿಸಿದುದು.

೨. ಭಾರತೀಯರ ಜೀವನ ಪರಿಪೂರ್ಣಗೊಳ್ಳುವುದು ಪಿತೃಪರಂಪರೆ ಮತ್ತು ಗುರುಪರಂಪರೆಗಳಿಂದ. ಇವುಗಳಲ್ಲಿ ಒಂದು ಪ್ರಾಣಪರಂಪರೆಯಾದರೆ ಇನ್ನೊಂದು ಜ್ಞಾನಪರಂಪರೆ. ಪಿತೃಪರಂಪರೆಯ ಬಗ್ಗೆ ಮೌನಿಯಾದ ನಾಗಚಂದ್ರ ಗುರುಪರಂಪರೆಯನ್ನು ಗುರುಪರಿವಾರವನ್ನು ಗೌರವದಿಂದ ಸ್ಮರಿಸಿದ್ದಾನೆ ಎಂದು ನಾಗಚಂದ್ರನ ಗುರು ಬಾಲಚಂದ್ರಮುನಿಯ ಪರಂಪರೆಯನ್ನು ಶ್ರವಣಬೆಳ್ಗೊಳದ ಶಾಸನಗಳಿಂದ ಸ್ಪಷ್ಟಪಡಿಸಿದ್ದಾರೆ.

೩. ನಾಗಚಂದ್ರನ ಕಾಲ ಕುರಿತು ಬಿ. ಎಲ್. ರೈಸ್, ಕೆ. ಬಿ.ಪಾಠಕ, ಆರ್. ನರಸಿಂಹಾಚಾರ್, ಜಿ. ವೆಂಕಟಸುಬ್ಬಯ್ಯ, ಗೋವಿಂದ ಪೈ ಅವರ ವಿಚಾರಗಳನ್ನೆಲ್ಲ ಸೋಸಿ, ದೊರೆತ ಹೊಸ ಶಾಸನಗಳ ಆಧಾರದಿಂದ 'ನಾಗಚಂದ್ರ ೧೧ ಮತ್ತು ೧೨ನೆಯ ಶತಮಾನಗಳ ಮಧ್ಯದಲ್ಲಿ ಬದುಕಿದ್ದರೂ ಅವನು ಸಾಹಿತ್ಯ ರಚನೆಯ ಸಾರವತ್ತಾದ ಜೀವನವನ್ನು ೧೧ನೆಯ ಶತಮಾನದ ಉತ್ತರಾರ್ಧದಲ್ಲಿ ಕಳೆದಿರಬೇಕು' ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

೪. ನಾಗಚಂದ್ರನ ಜನ್ಮಸ್ಥಳ ಕುರಿತು–ಕವಿಚರಿತೆಕಾರರು ಮತ್ತು ಮಧುರಚೆನ್ನರು ವಿಜಾಪುರದಲ್ಲಿ ಮಾತ್ರ ನಾಗಚಂದ್ರನ ಪದ್ಯಗಳನ್ನೊಳಗೊಂಡ ಶಾಸನವಿದೆ ಎಂದ ಅಭಿಪ್ರಾಯಕ್ಕೆ ಡಾ. ಕಲಬುರ್ಗಿ ಅವರು ಇನ್ನೆರಡು ಆಧಾರಗಳನ್ನು ಒದಗಿಸಿ, ಅವನು ವಿಜಾಪರದವನೇ ಎಂಬುದನ್ನು ಸಾಬೀತುಪಡಿಸಿದ್ದಾರೆ.

೫. ನಾಗಚಂದ್ರನ ಕೃತಿಸಂಖ್ಯೆಯ ವಿಷಯವಾಗಿ ವಿದ್ವಾಂಸರಲ್ಲಿ ನಡೆದ ಊಹೆಗಳನ್ನೆಲ್ಲ ಚರ್ಚಿಸಿ, 'ನಾಗಚಂದ್ರನವೆಂದು ಸ್ಪಷ್ಟವಾಗಿ ತಿಳಿದುಬರುವ ಕೃತಿಗಳು–೧. ರಾಮಚಂದ್ರಚರಿತಪುರಾಣಂ ಇನ್ನೊಂದು ೨. ಮಲ್ಲಿನಾಥಪುರಾಣಂ ಎಂಬ ಖಚಿತ ಅಭಿಪ್ರಾಯಕ್ಕೆ ಬಂದಿದ್ದಾರೆ.

೬. ಸಮಗ್ರ ಭಾರತದಲ್ಲಿಯೇ ಕನ್ನಡ ಮಲ್ಲಿನಾಥಪುರಾಣ ಪ್ರಥಮ ಸ್ವತಂತ್ರ ಕೃತಿ; ನಾಗಚಂದ್ರ ಮಲ್ಲಿನಾಥಪುರಾಣದ ಪ್ರಥಮ ಶಿಲ್ಪಿ (ಪು.೧೪)

೭. ಜಿನಸೇನಾಚಾರ್ಯರ ಪೂರ್ವಪುರಾಣವನ್ನನುಸರಿಸಿದ ಪಂಪನಂತೆ ಈತ ಯಾವುದನ್ನೂ ನಿರ್ದಿಷ್ಟವಾಗಿ ಅನುಸರಿಸಿಲ್ಲ (ಪು.೧೮).

೮. ಮಲ್ಲಿನಾಥನನ್ನು ಕುರಿತ ಬೇರೆ ಕೃತಿಗಳಿಗೂ ಈ ಕೃತಿಗೂ ಕೆಲವು ವ್ಯತ್ಯಾಸಗಳು ತೋರುತ್ತವೆ(ಪು.೨೪)

೯. ಸಮಕಾಲೀನ ಪರಸ್ಥಿಗೆ ಓಗೊಡುತ್ತ ಸಾಗಿದುದು ಈ ಕೃತಿಯ ಇನ್ನೊಂದು ವೈಶಿಷ್ಟ್ಯ. ಶ್ವೇತಾಂಬರ ಮತ್ತು ದಿಗಂಬರ ಸಂಪ್ರದಾಯಗಳಲ್ಲಿ ಬೆಳೆದುಬಂದ ಮಲ್ಲಿನಾಥಪುರಾಣದ ಕಥೆಗಳನ್ನೆಲ್ಲ ಸಮೀಕ್ಷಿಸಿ, 'ಜಿನಭಕ್ತಿ' ಯ ವಿಷಯದಲ್ಲಿ ಪಂಪ ಮೊದಲುಗೊಂಡು ಕನ್ನಡದ ಎಲ್ಲ ಜೈನಕವಿಗಳಲ್ಲಿ ನಾಗಚಂದ್ರ ಅದ್ವಿತೀಯ ವ್ಯಕ್ತಿ. ಮಿಕ್ಕವರಲ್ಲಿ ಜೈನದ ಆತ್ಮಾನುಸಂಧಾನಕ್ಕಿಂತ ತತ್ವಾಭ್ಯಾಸ ಹೆಚ್ಚು ಕಾಣುತ್ತಿದ್ದರೆ, ನಾಗಚಂದ್ರನಲ್ಲಿ ಇವೆರಡರ ಅಪೂರ್ವ ಸಂಗಮವಿದೆ ಎಂದಿದ್ದಾರೆ. ಇವುಗಳಿಗಿಂತ ಮಿಗಿಲಾದುದು, ಯಾವುದೇ ಮೂಲದಲ್ಲಿ ಇಲ್ಲದ ಕಾಮದಹನ ಪ್ರಸಂಗ ಇಲ್ಲಿರುವುದು ಎಂದು ಗುರುತಿಸಿದ್ದಾರೆ.

ಇವೆಲ್ಲವುಗಳಿಂದ ಡಾ. ಕಲಬುರ್ಗಿ ಅವರು ಹೇಳಿಕೊಂಡಿರುವ ಹಾಗೆ 'ಕವಿ ವಿಷಯವಾಗಿ, ಕೃತಿ ವಿಷಯವಾಗಿ ಕೆಲವು ಸಂಗತಿಗಳು ಇಲ್ಲಿ ಪ್ರಥಮ ಬಾರಿ ಬೆಳಕಿಗೆ' ಬಂದಿದ್ದು ಅವರ ಶ್ರಮ ಸಾರ್ಥಕವಾಗಿದೆಯೆಂದು ಹೇಳಬಹುದು. ಇಲ್ಲಿಯ ಕೆಲವು ವಿಚಾರಗಳು ಮೈಸೂರು ವಿಶ್ವವಿದ್ಯಾಲಯದ ಸಾಹಿತ್ಯಚರಿತ್ರೆಯಲ್ಲಿ ಉಲ್ಲೇಖಗೊಂಡಿರುವುದನ್ನೂ ಕಾಣಬಹುದು.

ಇನ್ನು ಅದರ ಕಾವ್ಯಾಂಶಗಳನ್ನು ಕುರಿತು 'ಒಂದು ಪುರಾಣವನ್ನು ಪುರಾಣಕಾವ್ಯವಾಗಿಸುವುದು ಎಂದರೆ ಧಾರ್ಮಿಕ ಕಥೆಗೆ ಕಾವ್ಯಧರ್ಮದ ಸಂಸ್ಕಾರ ಕೊಡುವುದು. ಈಗ ತಿಳಿದಮಟ್ಟಿಗೆ ಜಿನಸೇನಾಚಾರ್ಯರು, ಗುಣವರ್ಮ, ಪಂಪ ಮೊದಲುಗೊಂಡು ಕರ್ನಾಟಕದ ಜೈನಕವಿಗಳು ಈ ಕಾರ್ಯವನ್ನು ಧರ್ಮದ ಶುದ್ಧಿ ಕೆಡದಂತೆ ಜೋಕೆಯಿಂದ ನಿರ್ವಹಿಸುತ್ತ ಬಂದಿದ್ದಾರೆ. ಈ ದಾರಿಯಲ್ಲಿ ಹೆಜ್ಜೆ ತಪ್ಪದೆ ನಡೆದುಬಂದಿದ್ದಾನೆ ನಾಗಚಂದ್ರ (ಪು. ೨೫). ಕವಿಸಮಯಕ್ಕೆ ಹೇಳಿ ಮಾಡಿಸಿದ ಹಂಸ,

ಕೋಕಿಲ, ಕರ್ಣಿಕಾರಗಳ ಬಳಕೆಯಿಂದ ನಿರ್ಜೀವಗೊಳ್ಳಬೇಕಾಗಿದ್ದ ಕಲ್ಪನೆ ಇಲ್ಲಿ ಜೀವಂತವಾಗಿದೆ.... ಕವಿಸಮಯವನ್ನು ತುಂಬಿಕೊಂಡು ಮಲೆತ ನೀರಿನ ಹೊಂಡಗಳಾಗದೆ, ಪ್ರತಿಭೆಯಿಂದ ನಿರ್ಮಲ ಮಡುಗಳಾದ ಪದ್ಯಗಳು ಇಲ್ಲಿ ಅನೇಕ. ಇಂಥ ಪ್ರಸಂಗಗಳಲ್ಲಿ ಅನುಕರಣಪಂಪನಾಗುವುದನ್ನು ತಪ್ಪಿಸಿಕೊಂಡು ಅಭಿನವಪಂಪನಾಗುತ್ತಾನೆ, ನಾಗಚಂದ್ರ.(೨೬). ಹೃದಯಸಾಕ್ಷಿಯಾಗಿ ಸಮಾಜವನ್ನು, ಆತ್ಮಸಾಕ್ಷಿಯಾಗಿ ಸೃಷ್ಟಿಯನ್ನು ದೃಷ್ಟಿಸುವವ ಮಾತ್ರ ಪೂರ್ಣದೃಷ್ಟಿಯ ಕವಿ. ಈ ಉಭಯಶುದ್ಧಿ ಕಂಡುಬರುವುದು ಪಂಪ, ಹರಿಹರ ಮತ್ತು ನಾಗಚಂದ್ರರಲ್ಲಿ ಮಾತ್ರ. . . . . ನಿಸರ್ಗ ವರ್ಣನೆಯ ಈ ಮೇಲುಪದರಿನಲ್ಲಿ ನಾಗಚಂದ್ರ ಬಿಡಿಸಿದ ಬಿಸಿಲು–ಬೆಳದಿಂಗಳು, ಬೆಳಕು–ಕತ್ತಲೆ, ಸೂರ್ಯೋದಯ–ಸೂರ್ಯಾಸ್ತಗಳೆಂಬ ಸೃಷ್ಟಿಯ ನಿತ್ಯ ವ್ಯಾಪಾರದ ಒಳಪದರಗಳೂ ನಿತ್ಯನೂತನವೆನಿಸಿವೆ(೨೭). ಶಾಸ್ತ್ರವಿವರಣೆಯನ್ನು ಬಿಟ್ಟರೆ ಮಲ್ಲಿನಾಥಪುರಾಣದ ತುಂಬ ಉಸಿರಾಡಿಸುವುದೆಂದರೆ ಭಕ್ತಿ ಮತ್ತು ಶೃಂಗಾರಗಳೆಂಬ ಎರಡು ಕೋಮಲಭಾವಗಳು. ಇವುಗಳ ಮೂಲಕ ಅಂಗೈ ಅಗಲದ ಮಲ್ಲಿನಾಥನ ಕಥೆ ಅರ್ಚನೆ, ಪ್ರಾರ್ಥನೆ, ತಪಸ್ಸು ಪ್ರಸಂಗಗಳಲ್ಲಿ ಅಚ್ಚುಕಟ್ಟಾಗಿ ಅರಳಿದೆ. ಸ್ತ್ರೀ–ಪುರುಷ ವಿಲಾಸ, ನಾಡು–ನಗರ ವರ್ಣನೆ, ಋತುಚಿತ್ರಣಗಳಲ್ಲಿ ತಾಂಡವಲಾಸ್ಯವಾಡಿದೆ. ಶಬ್ದಚಿತ್ರಗಳ ಜೊತೆ ಬಿಡಿಸಿದ ವರ್ಣಚಿತ್ರಗಳಿಂದಾಗಿ ಮಲ್ಲಿನಾಥಪುರಾಣ ಎರಡು ಕಲಾಸೃಷ್ಟಿಗಳ ಸುಂದರ ಸಂಪುಟವಾಗಿದೆ. . . . ಒಂದೇ ಬಣ್ಣದ ಬೇರೆಬೇರೆ ಛಾಯೆಗಳನ್ನು ಬಳಸಿಕೊಂಡು ಚಿತ್ರವನ್ನು ಬೆಳಸಿಕೊಂಡು ಹೋಗುವ ರೀತಿಯನ್ನು ಇಲ್ಲಿ ನೋಡಬಹುದು. . . . ಏಕವರ್ಣದಲ್ಲಿ ಕಲಾಸಿದ್ಧಿತೋರುವ ನಾಗಚಂದ್ರ, ಹಲವು ವರ್ಣಗಳ ಸಂಯೋಜನೆಯಲ್ಲಿಯೂ ಮಹಾಸಿದ್ಧಿ ತೋರಿಸುತ್ತಾನೆ. . . .ಇಂಥ ಮನೋಜ್ಞ ಚಿತ್ರಗಳನ್ನು ಬಿಡಿಸಿದ ಕನ್ನಡದ ಏಕೈಕ ಕವಿ, ನಾಗಚಂದ್ರ. ಹೀಗೆ ಪುರಾಣದ ಗರಿಗರಿಗಳಲ್ಲಿ ಕಾವ್ಯದ ಕಣ್ಣುಗಳನ್ನು ಬಿಡಿಸುತ್ತ ಹೋಗಿ 'ಕಾವ್ಯಧರ್ಮಮಂ ಧರ್ಮಮುಮಂ' ಮೇಳವಿಸಿದ್ದಾನೆ. ಇದರಿಂದ ಕನ್ನಡದ ಶ್ರೇಷ್ಠದರ್ಜೆಯ ಜೈನಪುರಾಣಗಳೆಂದರೆ ಆದಿಪುರಾಣ, ಅನಂತನಾಥಪುರಾಣ ಮತ್ತು ಮಲ್ಲಿನಾಥಪುರಾಣಗಳೆಂದು ಬೆರಳುಮಾಡಿ ತೋರಿಸುವಂತಾಗಿದೆ' ಎಂದಿದ್ದಾರೆ.

ಹೀಗೆ ಮಲ್ಲಿನಾಥಪುರಾಣದ ಹೃದಯದ ಹೊಲಿಗೆಯನ್ನೇ ಬಿಚ್ಚಿ ಅದರ ಅಂತರಂಗ ಬಹಿರಂಗದ ಸೌಂದರ್ಯವನ್ನು ಬಹುರಸವತ್ತಾಗಿ ಹಿಡಿದಿಟ್ಟಿರುವುದು ಈ ಪ್ರಸ್ತಾವನೆಯ ವಿಶೇಷತೆ. ಅಲ್ಲಿ ಡಾ. ಕಲಬುರ್ಗಿ ಅವರ ಭಾಷೆಯ ಮೇಲಿನ ಪ್ರಭುತ್ವವನ್ನೂ, ಅದನ್ನು ಹದಗೊಳಿಸಿ ಮಂಡಿಸುವ ರೀತಿಯನ್ನೂ, ನಾಗಚಂದ್ರನ ಮೇಲಿನ ಅಭಿಮಾನವನ್ನೂ ಕಾಣಬಹುದು. ಇಲ್ಲಿಯ ಅಭಿಮಾನ ಒಣ ಅಭಿಮಾನವಲ್ಲ, ಕವಿಯ ನಿಜವಾದ ಅಂತರಂಗದ ದರ್ಶನ.

ಒಂದು ಸಂಪಾದಿತ ಗ್ರಂಥದ ಇನ್ನೊಂದು ಮಹತ್ವಪೂರ್ಣ ಅಂಗ–ಟಿಪ್ಪಣಿಗಳು. ಡಾ. ಕಲಬುರ್ಗಿ ಅವರು ಈ ಗ್ರಂಥಕ್ಕೆ ಬರೆದಿರುವ ಟಿಪ್ಪಣಿಗಳಲ್ಲಿ, ಶಬ್ದಾರ್ಥಗಳಿವೆ, ಶಬ್ದಗಳನ್ನು ಬಿಡಿಸಿ ಓದುವ ಸೂಚನೆಗಳಿವೆ, ಪದ್ಯದಲ್ಲಿ ಬಂದಿರುವ ವಿಶೇಷ ವಿಚಾರಗಳ ವಿವರವೂ ಇದೆ. ಉದಾಹರಣೆಗೆ ೧ನೆಯ ಪದ್ಯಕ್ಕೆ ಕಠಿಣಶಬ್ದಗಳ ಅರ್ಥವನ್ನು ಕೊಟ್ಟು ಕೆಳಗೆ 'ಪಾದ, ಪಾದಪೀಠ, ಉತ್ತಮಾಂಗಗಳ ವರ್ಣನೆಯ ಮೂಲಕ ಮಲ್ಲಿನಾಥನ ಐಶ್ವರ್ಯಸೂಚನೆ ಮತ್ತು ಅವನಿಂದ ಸುಖಯಾಚನೆ ಈ ಪದ್ಯದ ಉದ್ದೇಶ. ಇಲ್ಲಿಯ ಚಂದ್ರ, ತಾರೆ, ಜೋತ್ಸ್ನಾ ಪದಗಳ ಪರಸ್ಪರ ಸಂಬಂಧವನ್ನು ಗಮನಿಸಿರಿ. ನಾಗಚಂದ್ರನ ಗುರುವಿನ ಹೆಸರೂ ಬಾಲಚಂದ್ರನೆಂಬುದನ್ನು ನೆನೆಯಿರಿ' ಎಂದಿದ್ದಾರೆ. ೩ನೆಯ ಪದ್ಯದಲ್ಲಿ ಕವಿ ಸ್ತುತಿಸಿದ ಪಂಪ, ಪೊನ್ನ, ರನ್ನರ ಸಂಕ್ಷಿಪ್ತ ವಿವರವನ್ನು ಕೊಡಲಾಗಿದೆ. ಹಾಗೆಯೇ ೬ನೆಯ ಪದ್ಯದಲ್ಲಿ 'ಜಿನಪತಿ' ಎಂದಿದ್ದುದನ್ನು 'ಜನಪತಿ' ಎಂದು ತಿದ್ದಿಕೊಂಡ ಬಗ್ಗೆ 'ಹಸ್ತಪ್ರತಿಗಳಲ್ಲಿ

ಸಿಗುವ ಪಾಠ 'ಜಿನಪತಿಸಭೆ'. ಇದರಿಂದ ನಾಗಚಂದ್ರನು ತೀರ್ಥಂಕರನ ಸಮವಸರಣ(=ಜಿನಪತಿಸಭೆ)ದಲ್ಲಿ ಪೂಜ್ಯನೆಂಬ ಇತಿಹಾಸವಿರೋಧವೂ, ನಂಬಿಕೆವಿರೋಧವೂ ಆದ ಅರ್ಥ ಹೊರಡುವುದರಿಂದ '[ಜ]ನಪತಿಸಭೆ' ಎಂದು ತಿದ್ದಿಕೊಳ್ಳಲಾಗಿದೆ' ಎಂಬ ವಿವರಣೆಯನ್ನಿತ್ತಿದ್ದಾರೆ. ಅದೇರೀತಿ ೧೨ನೆಯ ಪದ್ಯದಲ್ಲಿ 'ಹಿಮಶೈಲಪ್ರಮುಖಂಗಳಾರು ಕುಲಶೈಲಂಗಳ್ . . .' ಎಂದಿರುವ ಪದ್ಯದಲ್ಲಿ ಬರುವ ಆರು ಕುಲಶೈಲ, ಏಳು ವಿಷಯ ಮೊದಲಾದವುಗಳ ಸಮಗ್ರ ವಿವರವನ್ನೀಯಲಾಗಿದೆ. ಅದೇರೀತಿ ಪದ್ಯ ೨೧೨, ೩೦೨, ೩೧೨, ೩೧೭, ೩೯೯ರಲ್ಲಿಯೂ ಜೈನಧರ್ಮಕ್ಕೆ ಸಂಬಂಧಿಸಿದ ವಿವರವಿದೆ. ಹೀಗೆ ಈ ಕೃತಿಯನ್ನು ಜೈನರು ಮಾತ್ರವಲ್ಲ, ಇತರ ಸಾಮಾನ್ಯರೂ ಓದಿ ತಿಳಿದುಕೊಳ್ಳಲು ಸಾಧ್ಯವಾಗುವಂತೆ ರಚಿಸಿರುವುದು ವಿಶೇಷ. ಇಲ್ಲಿಯ ಕೆಲವು ಪದ್ಯಭಾಗಗಳು, ರನ್ನ, ಕರ್ಣಪಾರ್ಯ, ಪಾರ್ಶ್ವಕವಿ(೧೧೨)ಗಳ ಕೃತಿಗಳಲ್ಲಿ ಜಗನ್ನಾಥ ವಿಜಯ, ನೇಮಿನಾಥ ಪುರಾಣ(೧೪೯)ಗಳಲ್ಲಿ ಬಂದಿರುವುದನ್ನು ಗುರುತಿಸಿರುವಲ್ಲಿ ಡಾ. ಕಲಬುರ್ಗಿ ಅವರ ಅಧ್ಯಯನದ ವ್ಯಾಪ್ತಿ ಗೋಚರಿಸುತ್ತಿದೆ. ಪದ್ಯಗಳು ಅರ್ಥವಾಗದ ಕೆಲವು ಕಡೆ ಪ್ರಶ್ನಾರ್ಥಕ ಚಿಹ್ನೆ ಹಾಕಿರುವುದು ಸಂಪಾದಕರ ಪ್ರಾಮಾಣಿಕತೆಯನ್ನು ತೋರುತ್ತಿದೆ.

ಹೀಗೆ ಒಂದು ಕಾವ್ಯವನ್ನು ಸಮಗ್ರವಾಗಿ ತಿಳಿಸಿಕೊಡಲು ಏನು ಸಾಧ್ಯವಿದೆಯೋ ಆ ಎಲ್ಲ ಪ್ರಯತ್ನವನ್ನು ಇಲ್ಲಿ ಮಾಡಿದ್ದರೂ ಈ ಹಿಂದಿನ ಗದಾಯುದ್ಧಸಂಗ್ರಹ, ಪ್ರಭುಲಿಂಗಲೀಲೆಸಂಗ್ರಹ, ಪಂಪರಾಮಾಯಣಸಂಗ್ರಹಗಳ ಹಾಗೆ ಈ ಕೃತಿ ಪ್ರಸಿದ್ಧಿಗೆ ಬಾರದೆಯಿದ್ದುದು ಆಶ್ಚರ್ಯವನ್ನುಂಟು ಮಾಡುತ್ತದೆ.

II. ಶಬ್ದಮಣಿದರ್ಪಣ ಸಂಗ್ರಹ – ೧೯೭೫

ಕನ್ನಡಿಗರಿಗೆ ಇಂದಿಗೂ ಕೂಡಾ ಅತ್ಯಂತ ಆಧಾರಯುಕ್ತವಾದ ಏಕೈಕ ವ್ಯಾಕರಣಗ್ರಂಥ ಕೇಶಿರಾಜನ ಶಬ್ದಮಣಿದರ್ಪಣ. ಅದರ ಸೂತ್ರಗಳು ಕಂದದಲ್ಲಿದ್ದು 'ಪ್ರಾಸಚ್ಛಂದೋನ್ವಯ ವಿನ್ಯಾಸದಿನಂತಿಂತು' ಶಬ್ದಗಳು ಇರುವುದರಿಂದ ಕೇಶಿರಾಜನೇ ಈ ಸೂತ್ರಗಳಿಗೆ ಅರ್ಥವೃತ್ತಿಯನ್ನು ಬರೆದ. ಅದಕ್ಕೆ ತೃಪ್ತರಾಗದ ಮೂಡಬಿದರೆ ಹಸ್ತಪ್ರತಿ ಟೀಕಾಕರ್ತೃ, ಹೈದರಾಬಾದ ಹಸ್ತಪ್ರತಿ ವ್ಯಾಖ್ಯಾನ ಕರ್ತೃ, ನಿಟ್ಟೂರ ನಂಜಯ್ಯ, ಲಿಂಗಣಾರಾಧ್ಯ, ಶ್ರೀ ಗಂಗಾಧರ ಮಡಿವಾಳೇಶ್ವರ ತುರಮರಿ, ಕಿಟೆಲ್, ಪ್ರೊ. ಎಸ್. ಆರ್. ಮಳಗಿ ಅವರು ಟೀಕೆ, ಪರಿಶೀಲನೆ, ವ್ಯಾಖ್ಯಾನಗಳನ್ನು ಬರೆದರೂ ಇದರ ಸಿಕ್ಕುಗಳು ಇನ್ನೂ ತೊಡಕಿನದಾದವು. ಈ ಮಾಲಿಕೆಗೆ ಈಗ ಇನ್ನೊಂದು ಸೇರ್ಪಡೆ 'ಶಬ್ದಮಣಿದರ್ಪಣ ಸಂಗ್ರಹ.'

ಈ ಗ್ರಂಥರಚನೆಯ ಉದ್ದೇಶ ಕುರಿತು ಡಾ. ಕಲಬುರ್ಗಿ ಅವರು 'ಕೇಶಿರಾಜನು ಬರೆದ ಅರ್ಥವೃತ್ತಿಗೆ – ೧. ಬಳಸಿದ ಭಾಷೆ ಹಳಗನ್ನಡವಾಗಿದೆ. ೨. ಸೂತ್ರಕ್ಕೂ ವೃತ್ತಿಗೂ ಸಂಬಂಧ ತಪ್ಪುವ ರೀತಿಯಲ್ಲಿ ಸೂತ್ರಕ್ಕೆ ಹೊರತಾದ ಹೆಚ್ಚಿನ ವಿಷಯಗಳನ್ನು ವೃತ್ತಿಯಲ್ಲಿ ಹೇಳಿದ್ದಾನೆ. ೩. ತರುವಾಯದ ಅಭ್ಯಾಸಿಗಳು ಮಾಡಿದ ಲೋಪ, ಆಗಮ, ಆದೇಶ ರೂಪದ ಪಾಠಗಳಿಂದಾಗಿ ವಿಸ್ತಾರ ಇಲ್ಲವೆ ಸಂಕೋಚರೂಪ ಪಡೆದ ವೃತ್ತಿಗೂ ಮೂಲಸೂತ್ರಕ್ಕೂ ಇನ್ನೂ ಸಂಬಂಧ ತಪ್ಪಿದೆ. ಈ ಮೂರೂ ತೊಡಕುಗಳನ್ನು ನಿವಾರಿಸುವ ರೀತಿಯಲ್ಲಿ ಸೂತ್ರಕ್ಕೆ 'ತಕ್ಕಷ್ಟು' ವೃತ್ತಿಯನ್ನು ಅದೂ ಹೊಸಗನ್ನಡದಲ್ಲಿ ಬರೆದಿದ್ದೇವೆ. ಇದರಿಂದ ಎಷ್ಟೋ ಕಡೆ ಮೂಲವೃತ್ತಿ ಸಂಗ್ರಹರೂಪಕ್ಕಿಳಿದಿದೆ. ಸೂತ್ರದ ಅನ್ವಯಕ್ರಮದಲ್ಲಿಯೇ ಮುನ್ನಡೆದ ಇದು, ಓದುಗನಿಗೆ ಸೂತ್ರವನ್ನು ಸರಸರ ಸುರುಳಿಬಿಚ್ಚಿ ತೋರಿಸುತ್ತದೆ. ವೃತ್ತಿಗೆ ಸಂಬಂಧಪಟ್ಟ

ನಮ್ಮ ಈ ಪ್ರಯತ್ನ ಈ ಸಂಗ್ರಹದ ಒಂದು ಸಾಧನೆಯೆಂದೇ ಹೇಳಬಹುದು . . . . . ಒಟ್ಟಿನಲ್ಲಿ ನಮ್ಮದು ಸೂತ್ರ ಸಂಗ್ರಹವಲ್ಲ. ಅತಿವ್ಯಾಪ್ತಿಯಿಂದ ಕೂಡಿದ ವೃತ್ತಿಗಳ, ಅದಕ್ಕಿಂತ ಹೆಚ್ಚಾಗಿ ಅವ್ಯವಸ್ಥೆಯಿಂದ ಕೂಡಿದ ಪ್ರಯೋಗಗಳ ವ್ಯವಸ್ಥಿತ ಸಂಗ್ರಹ. ಇದರಿಂದ ದರ್ಪಣ ಮಿತಗಾತ್ರವೂ ಸುಲಭಗ್ರಾಹ್ಯವೂ ಆಗಿದೆಯೆಂದು ನಮ್ಮ ಭಾವನೆ' ಎಂದಿದ್ದಾರೆ.

ಡಾ. ಕಲಬುರ್ಗಿ ಅವರು ವೃತ್ತಿಸಂಬಂಧಿ ತೊಡಕುಗಳನ್ನು ನಿವಾರಿಸುವಲ್ಲಿ ಅದನ್ನು ಹೊಸಗನ್ನಡದಲ್ಲಿ ಬರೆದಿರುವುದು ಶ್ಲಾಘನೀಯವೇ. ಆದರೆ ಮುಖ್ಯ ತೊಂದರೆ ಇರುವುದು ಅದರ ಸೂತ್ರಗಳನ್ನು ಬಿಡಿಸಿ ಓದುವಲ್ಲಿ, ಅರ್ಥೈಸಿಕೊಳ್ಳುವಲ್ಲಿ. ದರ್ಪಣದ ಸೂತ್ರಗಳನ್ನು ವಿದ್ಯಾರ್ಥಿಗಳು ಮಾತ್ರವಲ್ಲ ಪ್ರಾಧ್ಯಾಪಕರೂ ಓದುವುದೂ ಕಷ್ಟವೇ. ಇದರ ಸೂತ್ರವೆಂಬ ಕೋಟೆಯನ್ನು ಭೇದಿಸುವಲ್ಲಿಯೇ ಇವರೆಲ್ಲ ದಣಿದು ನಿಲ್ಲುತ್ತಾರೆ. ಅದಕ್ಕಾಗಿ ಈ ಸಂಪಾದಕದ್ವಯರು ದರ್ಪಣದ ವೃತ್ತಿಗಳನ್ನು ಅರ್ಥೈಸುವಲ್ಲಿ ಮಾಡಿದ ಪ್ರಯತ್ನದಂತೆಯೇ ಅದರ ಸೂತ್ರಗಳನ್ನೂ, ಡಾ. ಎಲ್. ಬಸವರಾಜು ಅವರು 'ಸರಳ ಪಂಪಭಾರತ' ವನ್ನು ಅರ್ಥಾನುಗತವಾಗಿ ಸಂಪಾದಿಸಿರುವಂತೆ ಒಡೆದು ಸಂಪಾದಿಸಬಹುದಿತ್ತು. ಉದಾಹರಣೆಗೆ ದರ್ಪಣದ ಮೊದಲನೆಯ ಪದ್ಯವನ್ನೇ ನೋಡಬಹುದು–

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ ॥

ಇದನ್ನು ಈ ರೀತಿ ಒಡೆದು ಪ್ರಕಟಿಸಬಹುದಿತ್ತು–

ಶ್ರೀ ವಾಗ್ದೇವಿಗೆ ಶಬ್ದದಿಂ
ಆವಾವ ಇಂದ್ರಿಯದ ವಿಷಯಮಂ ಶ್ರೋತ್ರದೊಳ್
ಉದ್ಭಾವಿಪ ನಿರ್ಮಳಮೂರ್ತಿಗೆ
ಇಳಾವಂದ್ಯೆಗೆ ಶಾಸ್ತ್ರಮುಖದೊಳ್ ಅವನತನಪ್ಪೆಂ ॥

ಡಾ. ಕಲಬುರ್ಗಿ ಅವರು ನಮ್ಮ ನುಡಿಯಲ್ಲಿ 'ಅವಶ್ಯವೆನಿಸಿದ ವಿವರಣೆಯನ್ನು ಅಡಿಯಲ್ಲಿಯ ವಿಚಾರವಿಭಾಗದಲ್ಲಿ ಕೊಟ್ಟಿದ್ದೇವೆ' ಎಂದಿದ್ದರೂ ವೃತ್ತಿಯಲ್ಲಿ ಕೆಲವು ಕಡೆ ಕೆಲವೊಂದು ಶಬ್ದಗಳನ್ನು ಸೂತ್ರದಲ್ಲಿ ಇದ್ದಂತೆಯೇ ಇಟ್ಟುಕೊಂಡಿದ್ದಾರೆ. ಉದಾಹರಣೆಗೆ–ಮಣಿಗೂಪ್ಪಿನಂತೆ ಅಡಕಲುಗೊಂಡಿರೆ (ಸೂತ್ರ ೨೧), ಜಿಹ್ವಾಮೂಲಿಯ, ಉಪಧ್ಮಾನೀಯ, ಯೋಗವಾಹಗಳು (ಸೂತ್ರ ೨೭), ಯಮಕ (ಶೂತ್ರ ೨೯), ತಾಳುಗೆ (ಸೂತ್ರ೪೦), ಧವಲವರ್ಣ (೪೪), ಲಘೂಪದೆ (೫೩), ಸಕಲಸಂಜ್ಞೆ(೬೧), ಅವಧಾರಣೆ, ಅನಿಯೋಗ (೭೪), ಅಧ್ಯಾರೋಪ (೧೫೬), ನಿರ್ವತ್ಯ, ವಿಕಾರ್ಯ, ಪ್ರಾಪ್ಯ, ವೈಷೇಯಿಕ(೧೩೮), ಅಧಿಕರಣ(೧೩೦, ೧೪೨), ಅಪಾದಾನ(೧೪೨), ವೀಪ್ಸೆ (೨೦೪), ಅಭೀಕ್ಷಣ ಕ್ರಿಯಾಸಮಾಭಿಹಾರ(೨೦೬) ಮೊದಲಾದವು. ಇವುಗಳ ಅರ್ಥವನ್ನು ಅಥವಾ ವಿವರಣೆಯನ್ನು (ಪುಟ ೮೨ರಲ್ಲಿ ೧೭೫ನೆಯ ಸೂತ್ರಕ್ಕೆ ಕೊಟ್ಟಿರುವ ಹಾಗೆ) ಅಡಿಟಿಪ್ಪಣಿ ರೂಪದಲ್ಲಿ ಕೊಟ್ಟಿದ್ದರೆ ವಿಷಯವನ್ನು ತಿಳಿದುಕೊಂಡು ಓದುವ ಆಸಕ್ತಿ ಉಂಟಾಗುತ್ತಿತ್ತು. ಸೂತ್ರ ೧೧, ೭೫, ೧೦೮ ರ ವೃತ್ತಿಗಳನ್ನು ಇನ್ನೂ ಸರಳವಾಗಿ ಹೇಳಬಹುದಿತ್ತು. ಹಾಗೆಯೇ ಮಹಾಪ್ರಾಣಾಕ್ಷರಗಳು ಕನ್ನಡದಲ್ಲಿ ಇಲ್ಲ ಎಂಬುದನ್ನೂ ಹೇಳಬೇಕಿತ್ತು(೨೫). ಜೊತೆಗೆ 'ಅವ್ಯವಸ್ಥೆಯಿಂದ ಕೂಡಿದ ಪ್ರಯೋಗಗಳ

ಸಂಗ್ರಹ' ಮಾಡಿರುವುದರಿಂದ ಕೇಶಿರಾಜ ಶ್ರಮಪಟ್ಟು ಸಂಗ್ರಹಿಸಿದ ಒಂದರಿಂದ ಐದು ಅರ್ಥ ಹೊಂದಿದ ರಳಯುಕ್ತ ೧೮೧ ಪದಗಳು, ಹಾಗೆಯೇ ಧಾತು ಪ್ರಕರಣದಲ್ಲಿಯ ೯೮೫ ಶಬ್ದಗಳು ಇಲ್ಲಿ ಕೈಬಿಟ್ಟುಹೋಗಿವೆ.

ಡಾ. ಕಲಬುರ್ಗಿ ಅವರೇ ಹೇಳುವ ಹಾಗೆ 'ಶಬ್ದಮಣಿದರ್ಪಣ' ಕೇಶಿರಾಜನ ಮಹಾಕಾವ್ಯ. ಅವನ ಚೋಳಪಾಲಕಚರಿತಂ, ಶ್ರೀಚಿತ್ರಮಾಲೆ, ಸುಭದ್ರಾಹರಣಂ, ಪ್ರಬೋಧಚಂದ್ರಂ, ಕಿರಾತಂ ಗಳನ್ನು ಬಿಟ್ಟರೂ ಶಬ್ದಮಣಿದರ್ಪಣ ಒಂದರಲ್ಲಿಯೇ ಅವನ 'ಕವಿಮನ' ವ್ಯಕ್ತವಾಗಿರುವುದನ್ನು ಕಾಣುತ್ತೇವೆ. ಅವನಿಗೆ ಗೊತ್ತಿದೆ, ವ್ಯಾಕರಣವೆಂಬುದು ಒಂದು ಶುಷ್ಕವಾದ ವಿಷಯ. ಅದಕ್ಕಾಗಿ ಸೂತ್ರಗಳನ್ನು ವಿವರಿಸುವ ನೆವದಲ್ಲಿ ಹಲವಾರು ಸುಂದರ ಹೋಲಿಕೆಗಳನ್ನು ಕೊಡುತ್ತಾನೆ. ಉದಾಹರಣೆಗೆ– ಹಸುಂಬೆಯ ಲಚ್ಚಣದಂತಿರ್ದ ವರ್ಣಂ ಜಿಹ್ವಾಮೂಲೀಯಂ, ಕುಮಾರಿಯ ಸ್ತನಯುಗಳಾಕೃತಿಯ ವರ್ಣಮುಪಧ್ಮಾನೀಯಂ, ಕವೆಯಾಕಾರಮಂ ಬೀಸಿದಂತೆ ಬಟ್ಟಿತ್ತಾಗಿ ತೋರ್ಪುದು ಸೊನ್ನೆ(೨೭), ಕರು ತಾಯ ಬಳಿಯನುಳಿಯದ ತೆರದಿಂ (೧೭೩) ಇವು ಕೇಶಿರಾಜನ ನಿರ್ಮಿತಿಗಳಾದರೆ, ಉದಾಹರಿಸುವ ಪ್ರಾಚೀನರ ಪದ್ಯಗಳಲ್ಲಿಯೂ ರಸಿಕತೆ ತೋರಿದ್ದಾನೆ. ಉದಾ. ಎನಿತ್ತೆನಿತ್ತಂಬುಜಪತ್ರನೇತ್ರೆಯಾ ಘನಸ್ತನಗಳ್ . . . 'ಈಂದಪುಲಿಯಾವೊಲಿರ್ದಳೆಂದು. . .' (೧೨೮)ದಂತಹ ಪದ್ಯಗಳನ್ನು ನೋಡಿದರೆ ಕೇಶಿರಾಜ ರಸಿಕನೆಂಬುದು ಗೊತ್ತಾಗುತ್ತದೆ. ಅದೇರೀತಿ 'ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ . . . 'ವಾಯಸದಂತೆ ನೋಡು . . .' (೨೪೧), ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೆ . . .' (೨೫೪) ಮೊದಲಾದ ಪದ್ಯಗಳನ್ನೂ ನೋಡಬಹುದು. ಇಂಥ ಅಮೂಲ್ಯ ಪದ್ಯರಾಶಿಗಳ ಮೂಲಕ ದರ್ಪಣ ತನ್ನ ಪೂರ್ವದ ಕನ್ನಡ ಸಾಹಿತ್ಯದ ಮೇಲೆ ಹೊಸ ಬೆಳಕನ್ನು ಬೀರುತ್ತಿರುವುದು ಡಾ. ಕಲಬುರ್ಗಿ ಅವರಿಗೂ ಗೊತ್ತಿದೆ. ಹೀಗಾಗಿಯೇ ಅವರು 'ಕೇಶಿರಾಜ ಕಂಡ ಅನುಪಲಬ್ಧ ಭಾರತಗಳು' (ಪ್ರ.ಕ.೫೪–೪, ಮಾರ್ಗ–೧,ಪು.೧೪೦) ಎಂಬ ಲೇಖನವನ್ನೂ ಬರೆದರು. ಆದ್ದರಿಂದ ಇಲ್ಲಿಯ ಪದ್ಯಗಳನ್ನೆಲ್ಲ ಕೈಬಿಡುವುದಕ್ಕಿಂತ ಅವನ್ನೆಲ್ಲ ಇನ್ನಷ್ಟು ಸುಂದರವಾಗಿ, ಆಕರ್ಷಕವಾಗಿ ಮುದ್ರಿಸಬಹುದಿತ್ತೇನೋ ಎನ್ನಿಸುತ್ತಿದೆ.

ಮದ್ರಾಸ ವಿಶ್ವವಿದ್ಯಾಲಯದಿಂದ ಪ್ರಕಟಗೊಂಡ ದರ್ಪಣದಲ್ಲಿ ಕೇಶಿರಾಜನ ಮಹತ್ವದ ಕಾಣಿಕೆಯಾದ 'ಅರಿದಲ್ತೆ ಕನ್ನಡಂ' ಎಂಬ ಒಂದೇ ಸೂತ್ರದ ಸುಮಾರು ನೂರು ಪುಟದ ವಿವರಣೆ ಅದರ ಸಮಗ್ರ ಪರಿಚಯವನ್ನು ಮಾಡಿಕೊಡುತ್ತದೆ. ಅದು ಆ ಸಂಪಾದನೆಯ ವಿಶೇಷ ಕೊಡುಗೆ. ಅದೇರೀತಿ ಶಬ್ದಮಣಿದರ್ಪಣವನ್ನು ಚೆನ್ನಾಗಿ ಅರಗಿಸಿಕೊಂಡಿರುವವರ ತಲೆಮಾರಿಗೆ ಸೇರಿದ ಪ್ರೊ. ಬಿ. ಟಿ. ಸಾಸನೂರ ಮತ್ತು ಡಾ. ಕಲಬುರ್ಗಿ ಈ ಇಬ್ಬರು ವಿದ್ವಾಂಸರು ದರ್ಪಣದ ಅಂತರಂಗವನ್ನು ಭೇದಿಸುವ ಹಲವಾರು ಇತರ ವಿಷಯ(ಉದಾಹರಣೆಗೆ–ಸಂಧಿ, ಸಮಾಸ ಮೊದಲಾದವುಗಳ ವಿವರ)ಗಳನ್ನೊಳಗೊಂಡ, ಪ್ರಸ್ತಾವನೆಯಲ್ಲಿ ಹೇಳಿರುವ ಹಾಗೆ ಭಾಷೆಯ ಮೂರು ಪ್ರಮುಖ ಘಟಕ(ವರ್ಣ, ಪದ ಮತ್ತು ವಾಕ್ಯ)ಗಳಲ್ಲಿ ಇದು ಆಧುನಿಕ ಭಾಷಾಶಾಸ್ತ್ರದ 'ಪದಶಾಸ್ತ್ರ'(Morphology)ಕ್ಕೆ ಸೇರುತ್ತಿದೆ ಎಂಬುದನ್ನು ವಿವರಿಸುವ ಕೃತಿಯೊಂದನ್ನು ಹೊರತಂದಿದ್ದರೆ ಅದು ಕನ್ನಡ ವಿದ್ಯಾರ್ಥಿಗಳಿಗೆ ಭಾಷಾಶಾಸ್ತ್ರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗಬಹುದಿತ್ತು.

ದರ್ಪಣದಲ್ಲಿ ಪ್ರಸ್ತುತ ಭಾಗ(ವ್ಯಾಕರಣಕ್ಕೆ ಸಂಬಂಧಿಸಿದ ಭಾಗ ಇರುವಂತೆ), ಅಪ್ರಸ್ತುತ ಭಾಗಗಳೂ(ಯತಿ, ಪ್ರಾಸ ಮೊ.)ಇರುವುದನ್ನು ಗುರುತಿಸಿ ಹಲವೆಡೆ ಕೇಶಿರಾಜ ಮಾಡಿರುವ

ದೋಷಗಳನ್ನೂ ಡಾ. ಕಲಬುರ್ಗಿ ಅವರು ಗುರುತಿಸಿದ್ದಾರೆ. ಉದಾ. ಸೂತ್ರ ೩೪, ೫೫, ೮೨, ೮೩, ೯೪, ೧೦೦, ೧೦೪, ೧೦೭, ೧೧೫, ೧೯೨ಗಳ ಅಡಿಟಿಪ್ಪಣಿ ನೋಡಬಹುದು. ಹಾಗೆಯೇ ೪೭ರಿಂದ ೫೧ರ ವರೆಗಿನ ಸೂತ್ರಗಳು ಡಿ.ಎಲ್.ಎನ್. ದರ್ಪಣದಲ್ಲಿ ಹಿಂದುಮುಂದಾಗಿರುವುದನ್ನು ಕಿಟೆಲ್ ಸಂಪುಟದಿಂದ ಸರಿಪಡಿಸಿದುದು ಅವರ ಪಾಂಡಿತ್ಯದ ದ್ಯೋತಕ.

ಡಾ. ಕಲಬುರ್ಗಿ ಅವರ ಮಹತ್ವಪೂರ್ಣ ಕೊಡುಗೆಯೆಂದರೆ ಉದಾಹರಣೆಗಳನ್ನು ಬಿಡಿಸಿ ಉದಾಹರಿಸಿರುವುದು. ಡಿ.ಎಲ್.ಎನ್ ದರ್ಪಣದಲ್ಲಿ ಕರ್ಮಧಾರಯಕ್ಕೆ ಕಿರುಗೂಸು, ದ್ವಿಗುವಿಗೆ ಇರ್ಬಾಳ್, ಅವ್ಯಯೀಭಾವಕ್ಕೆ ಕಿಳ್ಪೊಡೆ, ಅಂಗಯ್, ಮುಂಗಯ್, ಕೆಳ್ಕೆರೆ ಎಂದಿರುವ ಉದಾಹರಣೆಗಳನ್ನು ಡಾ. ಕಲಬುರ್ಗಿ ಅವರು ಕಿರಿದು+ಕೂಸು=ಕಿರುಗೂಸು, ಎರಡು+ಬಾಳ್=ಇರ್ಬಾಳ್, (ಪೊಡೆಯ ಕೆಳಗು)>ಕೆಳಗು+ಪೊಡೆ=ಕಿಳ್ಪೊಡೆ, (ಕಯ್ಯ ಅಡಿ)>ಅಡಿ+ಕಯ್=ಅಂಗಯ್, (ಕಯ್ಯ ಮುಂದು)>ಮುಂದು+ಕಯ್=ಮುಂಗಯ್, (ಕೆರೆಯ ಕೆಳಗು)>ಕೆಳಗು+ಕೆರೆ=ಕೆಳ್ಕೆರೆ ಎಂದು ವಿಂಗಡಿಸಿಕೊಟ್ಟಿದ್ದಾರೆ. ಇಂಥ ಉದಾಹರಣೆಗಳು ದರ್ಪಣದ ತುಂಬ ಇವೆ. ಇವು ಡಾ. ಕಲಬುರ್ಗಿ ಅವರು ವ್ಯಾಕರಣವನ್ನು ಅರಗಿಸಿಕೊಂಡಿರುವುದಕ್ಕೆ ಮತ್ತು ತಾವು ಅರಗಿಸಿಕೊಂಡುದನ್ನು ಇತರರಿಗೆ ತಿಳಿಸಿಹೇಳುವಲ್ಲಿ ತೋರಿದ ಆಸಕ್ತಿಗೆ ಒಳ್ಳೆಯ ಉದಾಹರಣೆ ಎಂದು ಹೇಳಬಹುದು. ಸೂತ್ರ ೨೬೪, ೨೬೫, ೨೬೬ ಹಾಗೂ ೩೧೬ರ ಮುಂದಿನ ಎಲ್ಲ ಸೂತ್ರಗಳಿಗೂ ಡಾ. ಕಲಬುರ್ಗಿ ಅವರೆ ವೃತ್ತಿ ಬರೆದಿರುವುದು ವಿಶೇಷ. ಒಂದೆಡೆ ಸೂತ್ರದ ಒಂದು ಭಾಗ ಅರ್ಥವಾಗದುದನ್ನು ಒಪ್ಪಿಕೊಂಡಿದ್ದಾರೆ(೨೫೯)

ಕೆಲವೆಡೆ ಕೇಶಿರಾಜನನ್ನೆ ಪ್ರಶ್ನಿಸುವ, ತಿದ್ದುಪಡಿ ಸೂಚಿಸುವ ಮಾತುಗಳು ಅಡಿಟಿಪ್ಪಣಿಯ 'ವಿಚಾರ'ದಲ್ಲಿ ಬಂದಿವೆ–(ಸೂತ್ರ–೩೪, ೩೭, ೫೫, ೬೯, ೮೨, ೮೩, ೮೪, ೮೮, ೯೪, ೯೫, ೧೦೦, ೧೦೪, ೧೦೭, ೧೧೫, ೧೪೫, ೧೫೩, ೧೫೫, ೧೯೨, ೨೪೦, ೨೪೧, ೩೦೮). ಇವು ಡಾ. ಕಲಬುರ್ಗಿ ಅವರ ದರ್ಪಣದ ಮೇಲಿನ ಪ್ರಭುತ್ವದ ದ್ಯೋತಕವಾಗಿವೆ. ಆದರೆ ಸೂತ್ರ ೨೫೯ರ ಅಡಿಟಿಪ್ಪಣಿಯ 'ವಿಚಾರ'ದಲ್ಲಿ 'ಕೆನ್ನಂ ಪೆರವರ್ಕೆ ಲೋಪವಿಧಿ' ಎಂಬ ವಾಕ್ಯದ ಅರ್ಥ ಸ್ಪಷ್ಟವಾಗಿಲ್ಲ ಎಂದಿದ್ದಾರೆ. ಅದು ಡಿ.ಎಲ್.ಎನ್. ವೃತ್ತಿಯಲ್ಲಿ 'ವರಂ ವರೆಗಮಿರೆ ಕೆನ್ನಂ ಪೆರವರ್ಕೆ ಲೋಪವಿಧಿ'ಎಂದು ಸ್ಪಷ್ಟವಿದೆ.

ಪ್ರಾರಂಭದ 'ನಮ್ಮ ನುಡಿ' ಮತ್ತು 'ಪ್ರಸ್ತಾವನೆ'ಗಳು ಶಬ್ದಮಣಿದರ್ಪಣದ ಅಭ್ಯಾಸ ಪರಂಪರೆ, ಕನ್ನಡದಲ್ಲಿ ವ್ಯಾಕರಣ ಪರಂಪರೆ ಮತ್ತು ಪಂಥಗಳು, ಕೇಶಿರಾಜ, ಕೇಶಿರಾಜನ ಕೃತಿಗಳು, ಶಬ್ದಮಣಿದರ್ಪಣಂ ಎಂಬ ವಿಭಾಗ ಹೊಂದಿದ್ದು ಕೇಶಿರಾಜನ, ಶಬ್ದಮಣಿದರ್ಪಣದ ಮೇಲೆ ಹೊಸ ಬೆಳಕನ್ನು ಚೆಲ್ಲುತ್ತಿವೆ.

ಕೇಶಿರಾಜನ ವಂಶವನ್ನೇ ಜಾಲಾಡಿ, ಅವನ ಕಾಲವನ್ನು ಆರ್. ನರಸಿಂಹಾಚಾರ್ ಅವರು ಗುರುತಿಸಿರುವ ೧೨೬೦ನ್ನು ಸ್ವಲ್ಪ ಹಿಂದೆ ಸರಿಸಬಹುದು ಎಂದಿರುವುದು ಅವರ ಶೋಧ ಸಾಮರ್ಥ್ಯವನ್ನು ತೋರುತ್ತಿದೆ. ಹಾಗೆಯೇ ಅವನು ಜೈನನೇ? ಎಂಬ ಪ್ರಶ್ನೆಯನ್ನೆತ್ತಿ ಅವನು ಜೈನನಾಗಿರಲಿಕ್ಕಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿರುವುದೂ ವಿಶೇಷವೆನ್ನಿಸುತ್ತಿದೆ.

III. ಸಿದ್ಧನಂಜೇಶ ಕೃತ ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ – ೧೯೬೯

ಈ ಕೃತಿಯ ಕರ್ತೃ ನಂದ್ಯಾಲಪುರದ ಮಠಾಧೀಶನಾಗಿದ್ದ ಸಿದ್ಧನಂಜೇಶ. ಇವನು ಹೂಲಿಯ ಸಿದ್ಧನಂಜೇಶನ ಕಿರಿಯ ಮಗ ಮತ್ತು ಶಿಷ್ಯ. ಹೂಲಿಯ ಸಿದ್ಧನಂಜೇಶನ ಶಿಷ್ಯನಾಗಿದ್ದ ಕಾಲದಲ್ಲಿ ಚಿಕ್ಕನಂಜೇಶನೆಂಬ ಹೆಸರೂ ನಂದ್ಯಾಲದ ಮಠಾಧಿಪತಿಯಾಗಿದ್ದ ಕಾಲದಲ್ಲಿ ಸಿದ್ಧನಂಜೇಶನೆಂಬ

ಹೆಸರೂ ಈತನಿಗೆ ಇದ್ದುದಾಗಿ ತಿಳಿದುಬರುತ್ತದೆ. ಇದರಿಂದ ಇವನು ಆಯುಷ್ಯದ ಪೂರ್ವಾರ್ಧವನ್ನು ಹೂಲಿಯಲ್ಲಿ, ಉತ್ತರಾರ್ಧವನ್ನು ಶ್ರೀಶೈಲದ ನೆರೆಯ ನಂದ್ಯಾಲಪುರದಲ್ಲಿ ಕಳೆದಿದ್ದಾನೆ. ಇವನ ಕಾಲವನ್ನು ಸಂಪಾದಕರು, ಕವಿಚರಿತೆಕಾರರು ಹೇಳುವಂತೆ ೧೬೫೦ ಮತ್ತು ಇನ್ನೂ ಸ್ವಲ್ಪ ಮುಂದು ಎನ್ನಬೇಕಾಗುತ್ತದೆ ಎಂಬುದನ್ನು ಪ್ರಾರಂಭದ ಐದು ಪುಟದ ಪ್ರಸ್ತಾವನೆಯಲ್ಲಿ ಹಲವಾರು ಆಧಾರಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಸಿದ್ಧನಂಜೇಶನು ೧. ರಾಘವಾಂಕಚರಿತೆ ೨. ಗುರುರಾಜಚಾರಿತ್ರ ೩.ಬಸವಶತಕ ೪. ತೋಂಟದ ಸಿದ್ಧದೇಶಿಕನ ಭಾವರತ್ನಾಭರಣಗಳು ತನ್ನ ಕೃತಿಗಳೆಂದು ಗುರುರಾಜಚಾರಿತ್ರದಲ್ಲಿ ಹೇಳಿಕೊಂಡಿದ್ದಾನೆ. ಇವುಗಳಲ್ಲಿ ಮೊದಲ ಎರಡು ಬಹುದಿನಗಳ ಹಿಂದೆಯೆ ಲಭಿಸಿ ಪ್ರಕಟವಾಗಿವೆ. ಮಿಕ್ಕ ಎರಡರಲ್ಲಿ ಬಸವಶತಕ ಇನ್ನೂ ಸಿಕ್ಕಿಲ್ಲ. 'ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ'ವನ್ನು 'ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ' ಹೆಸರಿನಿಂದ ಡಾ. ಎಂ. ಎಂ. ಕಲಬುರ್ಗಿ ಮತ್ತು ಪ್ರೊ. ಬಿ.ಆರ್.ಹಿರೇಮಠ ಸೇರಿ ಸಂಪಾದಿಸಿದ್ದಾರೆ. ಇದನ್ನು ಡಂಬಳ-ಗದಗಿನ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ವೀರಶೈವ ಅಧ್ಯಯನಸಂಸ್ಥೆಯು ೧೯೭೯ರಲ್ಲಿ ಪ್ರಕಟಿಸಿದೆ.

ಸಿದ್ಧನಂಜೇಶನ ಉಳಿದ ಕೃತಿಗಳ ಹಾಗೆ ಇದೂ ಕೂಡಾ ಷಟ್ಪದಿರೂಪದಲ್ಲಿಯೇ ಇರುವುದರಿಂದ ಅವನು 'ವಸ್ತುಕ ವರ್ಣಕ'ಗಳಿಂದ ತಾನು ಕೃತಿಗಳನ್ನು ಬರೆದಿರುವೆನೆಂದು ಹೇಳಿಕೊಂಡಿರುವುದರ ಮಾತಿನ ಅರ್ಥ ಸ್ಪಷ್ಟವಾಗದು ಎಂದಿದ್ದಾರೆ.

ಈ ಕೃತಿ ಎರಡು ಮಹತ್ವದ ವಿಷಯಗಳನ್ನು ಒಳಗೊಂಡಿದೆ ಎಂಬುದನ್ನು ಸಂಪಾದಕರು ಎತ್ತಿತೋರಿದ್ದಾರೆ. ಒಂದು ತೋಂಟದಾರ್ಯನನ್ನು ಕುರಿತು ಪುರಾಣ ಬರೆದ ಶಾಂತೇಶನು ಅವರ ಕಣ್ಣು ಮುಂದೆಯೇ ಐಕ್ಯವಾದನೆಂಬುದನ್ನು ಇಲ್ಲಿಯ ಒಂದು ಪದ್ಯ (೭೯) ಹೇಳುತ್ತಿದೆ. ಇದು ಶಾಂತೇಶಕೃತ ಸಿದ್ಧೇಶ್ವರಪುರಾಣದ ಕಾಲವಾದ ಕ್ರಿ.ಶ. ೧೫೬೧ರಲ್ಲಿ ತೋಂಟದಾರ್ಯರು ಜೀವಂತವಾಗಿದ್ದರೆಂಬ ಅಂಶ, ತೋಂಟದಾರ್ಯರ ಕಾಲ ೧೬ನೆಯ ಶತಮಾನದ ಉತ್ತರಾರ್ಧವೆಂದು ವಿದ್ವಾಂಸರು ಹೇಳುತ್ತಿರುವುದಕ್ಕೆ ಹೊಸ ಆಧಾರವಾಗಿದೆ. ಇದಲ್ಲದೆ ಕರಸ್ಥಲದ ನಾಗಿದೇವನಿಗೆ ಹಂಪೆಯ ವಿರೂಪಾಕ್ಷನು ಹರಿಹರಕೃತ 'ಬಸವರಾಜದೇವರ ರಗಳೆ'ಯ ಭಿಕ್ಷೆಯನ್ನು ನೀಡಿದನೆಂಬ ಸಂಗತಿ (ಪದ್ಯ೪೬) ಪ್ರಥಮಸಲ ಬೆಳಕಿಗೆ ಬಂದಿದೆ.

ಸಿದ್ಧನಂಜೇಶನು ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರವನ್ನು ಭಾವಪೂರ್ಣವಾಗಿ ರಚಿಸಿರುವುದನ್ನು ಕಾಣುತ್ತೇವೆ. ತೋಂಟದಾರ್ಯನ ಪವಾಡಗಳಿಗಾಗಿ ಕವಿ ವಿರಕ್ತ ತೋಂಟದಾರ್ಯನ 'ಶ್ರೀ ಸಿದ್ಧೇಶ್ವರಪುರಾಣ'ವನ್ನವಲಂಬಿಸಿರುವನಾದರೂ ಅವುಗಳನ್ನು ವಿವರಿಸುವಲ್ಲಿ ಮೂರು ರೀತಿಯನ್ನು ಅನುಸರಿಸಿದಂತಿದೆ. ೧. ಆತನ ಮಹಿಮೆಯನ್ನು ಪುರಾಣದ ಪ್ರಸಿದ್ಧ ವಸ್ತುಗಳಾದ-ಚಿಂತಾಮಣಿ, ಕಲ್ಪವೃಕ್ಷ, ಕಾಮಧೇನು, ಪರುಷ, ಮೇರುಪರ್ವತ; ಸ್ಥಳಗಳಾದ-ಕಾಶಿ, ಕೇದಾರ, ಶ್ರೀಶೈಲ; ವ್ಯಕ್ತಿಗಳಾದ -ಇಂದ್ರ, ಬ್ರಹ್ಮ, ವಿಷ್ಣು, ಶಿವ, ವೀರಭದ್ರ, ವೃಷಭೇಂದ್ರ, ಭೃಂಗೀಶ, ಕಿರಾತ, ರುದ್ರ, ಷಣ್ಮುಖ, ಚಂದ್ರ, ಸೂರ್ಯ, ಭಗೀರಥ, ಮನು, ಕರ್ಣ, ಅಗಸ್ತ್ಯ ಮೊದಲಾದವರೊಂದಿಗೆ ಹೋಲಿಸಿ ವರ್ಣಿಸಿರುವುದನ್ನು ಕಾಣುತ್ತೇವೆ. ೨. ಶಿವತತ್ವಮಾರ್ಗದಲ್ಲಿ ಪ್ರಮುಖವಾದ ಗುರು ಲಿಂಗ ಜಂಗಮ ರುದ್ರಾಕ್ಷಿ ಮೊದಲಾದ ಅಷ್ಟಾವರಣಗಳ(೨೭), ಷಟ್ಸ್ಥಲಗಳ(೨೬) ಮಹಿಮೆಯೊಂದಿಗೆ ತೋಂಟದಾರ್ಯರ ಮಹಿಮಾತಿಶಯಗಳನ್ನು ವರ್ಣಿಸುವ ಹಲವಾರು ಪದ್ಯಗಳೂ ಇಲ್ಲಿವೆ. ೩. ಬಹುಮಹತ್ವದ್ದು ಶರಣರಲ್ಲಿ

ಪುರಾತನರು ನೂತನರು ಮಾಡಿದ ಪವಾಡಗಳೊಂದಿಗೆ ತೋಂಟದಾರ್ಯರು ಮಾಡಿದ ಪವಾಡಗಳನ್ನು ಹೋಲಿಸಿ ಆತನ ವ್ಯಕ್ತಿತ್ವವನ್ನು ಬಿಂಬಿಸಲು ಮಾಡಿರುವ ಪ್ರಯತ್ನವನ್ನೂ ಇಲ್ಲಿ ಕಾಣುತ್ತೇವೆ. ಇಲ್ಲಿ ಬಹಳಷ್ಟುಸಲ ಆಯಾ ಶರಣರ ಪವಾಡಗಳೇ ನಿರೂಪಿತವಾಗಿದ್ದರೂ ಕೆಲವು ಸಲ ಅವರ ಚರಿತ್ರೆಯ ಮೇಲೆ ಬೆಳಕು ಚೆಲ್ಲುವ ಸನ್ನಿವೇಶಗಳೂ ನಿರೂಪಿತವಾಗಿವೆ. ಈಗ ಅಲ್ಲಿ ಉಲ್ಲೇಖಗೊಂಡಿರುವ ಶರಣರಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ನೋಡಬಹುದು.

ಶರಣ ನಂಬೆಣ್ಣ, ಮಡಿವಾಳ ಮಾಚಿರಾಜ, ಮುಸುಟಿ ಚೌಡಯ್ಯ, ಕೆಂಭಾವಿ ಭೋಗ, ಬಹುರೂಪಿ ಚೌಡ, ಬಿಬ್ಬಿ ಬಾಚಯ್ಯ, ಕಲಕೇತ ಬ್ರಹ್ಮದೇವ, ಶಂಕರ ದಾಸಿಮಯ್ಯ, ದಸರಯ್ಯ ಈ ಒಂಬತ್ತು ಜನ ಶರಣರು ಕ್ರಮವಾಗಿ ಒಂಬತ್ತು ರಸಪ್ರಧಾನ ವ್ಯಕ್ತಿತ್ವ ಉಳ್ಳವರು (೩). ಹರಭಕ್ತ ಹಲಾಯುಧ, ಮಹೇಶ್ವರ ರಾಘವಾಂಕ, ಪ್ರಸಾದಿ ಪಾಲ್ಕುರಿಕೆ ಸೋಮನಾಥ, ಪ್ರಾಣಲಿಂಗಿ ಉದ್ಭಟಯ್ಯ, ಶರಣ ಕೆರೆಯ ಪದ್ಮರಸ, ಲಿಂಗೈಕ್ಯ ಹರಿಹರದೇವರು ಷಟ್ಸ್ಥಲಸ್ವರೂಪಿಗಳು (೪). ಪರಮಪ್ರಸಾದಿ ಮರುಳ ಶಂಕರದೇವ, ಭಕ್ತಿಗುಣಸಂಪನ್ನ ಬಸವಣ್ಣ, ಷಟ್ಸ್ಥಲಾಚಾರಕೋವಿದ ಚೆನ್ನಬಸವಣ್ಣ, ಶಿವಯೋಗಿ ಸಿದ್ಧರಾಮ, ಪರಿಪೂರ್ಣಅನುಭಾವಿ ನಿಜಗುಣಶಿವಯೋಗಿ, ಸರ್ವಜ್ಞಮೂರ್ತಿ, ಪ್ರಭುದೇವರು (೨೯). ಬಸವಣ್ಣನ ಭಕ್ತಿ, ಪ್ರಭುದೇವನ ಜ್ಞಾನ, ಅಕ್ಕಮಹದೇವಿಯ ವೈರಾಗ್ಯ(೪೦). ಗುರು ರೇವಣಸಿದ್ಧರು ಮತ್ತು ಪ್ರಭುದೇವರ ಹಾಗೆ ಸಿದ್ಧನಂಜೇಶನೂ ಕಾಶಿ, ಕೇದಾರ ನೈಮಿಷಾರಣ್ಯ ನೀಲಕಂಠ ಗಯೆ ಹಂಪೆ ದಾಕ್ಷಾರಾಮ ಶ್ರೀಗಿರಿ ಚಿದಂಬರ ಮೊದಲಾದ ಪುಣ್ಯಕ್ಷೇತ್ರಗಳಲ್ಲಿರುವ ಮನು ಮುನಿ ಸಿದ್ಧ ಸಾಧಕರಿಂದ ಪೂಜೆಗೊಂಡು, ಅವರು ಬೇಡಿದುದನ್ನು ದಯಪಾಲಿಸಿದನು (೪೫). ಹಂಪೆಯ ವಿರೂಪಾಕ್ಷನು ಕರಸ್ಥಲದ ನಾಗಯ್ಯನಿಗೆ ಹರಿಹರ ವಿರಚಿತ ಬಸವರಾಜದೇವರ ರಗಳೆಯನ್ನು ಭಿಕ್ಷೆಯಾಗಿ ನೀಡಿದನು(೪೬). ಕಣ್ಣಪ್ಪನು ಲಿಂಗದ ಮಸ್ತಕದ ಮೇಲೆ ಕಾಲನ್ನಿಡಲು ಶಿವಲಿಂಗದ ಕಣ್ಣಿನಿಂದ ಸುರಿವ ನೀರು ಬತ್ತಿಹೋಯಿತು(೪೭). ಓರಂಗಲ್ಲಿನ ವೀರೇಶನು ಕವಿ ರಾಘವಾಂಕನಿಗೆ ಕಲ್ಲಪದಕಗಳನ್ನು ತುಂಬಾ ಸಂತೋಷದಿಂದ ದಯಪಾಲಿಸಿದನು(೪೮). ಜಂಗಮಮೂರ್ತಿಯಾದ ಚಿಕ್ಕಸಿದ್ಧೇಶ್ವರನಿಗೆ ಹೊನ್ನಮ್ಮನೂ ಶ್ರೀಶೈಲದಲ್ಲಿ ಇಷ್ಟಕಾಮೇಶ್ವರಿಯೂ ಬೇಡಿದ ವರವನ್ನು ಸಂತೋಷದಿಂದ ದಯಪಾಲಿಸಿದರು(೫೦). ಹಿಂದೆ ಭೈರವೇಶ, ಮುಸುಟಿ ಚೌಡಯ್ಯ ಬಸವಯ್ಯರು ಗತಪ್ರಾಣವಾದ ಪ್ರಾಣಿಗಳಿಗೆ ಜೀವ ನೀಡಿದರು(೫೨). ಶಿವನು ಚೋಳ ನಿಂಬೆಣ್ಣ ಮತ್ತು ರಾಘವಾಂಕರಿಗೆ ಹೊನ್ನಮಳೆಯನ್ನೂ, (ತಾಳಿ)ಕೋಟೆಯೂರ ಶಿವದೇವರಿಗೆ ಧಾನ್ಯಮಳೆಯನ್ನು ಸುರಿಸಿದನು(೫೩). ಹರಿಹರನು ಉಭಯ ಬ್ರಹ್ಮರಾಕ್ಷಸರಿಗೆ ಮೋಕ್ಷವನ್ನು ದಯಪಾಲಿಸಿದನು(೫೪). ಆಕಳುಗಳನ್ನು ಕದಿಯಲಿಕ್ಕೆ ಬಂದು ಕುರುಡರಾಗಿ, ಪಾದಗಳಿಗೆ ನಮಸ್ಕರಿಸಿದ ವ್ಯಕ್ತಿಗಳಿಗೆ ಬಸವಣ್ಣನು ಕಣ್ಣುಗಳನ್ನು ನೀಡಿ ಸಲಹಿದನು(೫೫). ತವನಿಧಿಯು ಬತ್ತಿತೆಂದು ಜೇಡರ ದಾಸಿಮಯ್ಯ ನಮಸ್ಕರಿಸಲಾಗಿ, ಶಂಕರದಾಸಿಮಯ್ಯ ಅದು ತುಂಬಿ ಹೊರಸೂಸುವಂತೆ ಮಾಡಿದನು(೫೬). ನಂಬಿ ಹೂವನ್ನು ಭಾವಾರ್ಪಣಗೈದನು, ಹೂವಿನ ತುದಿಯಲ್ಲಿ ಲಿಂಗವನ್ನು ತೋರಿಸಿದನು(೫೭). ಬಾವೂರ ಬೊಮ್ಮಯ್ಯನೆಂಬುವನು ಕಲ್ಲುಬಸವನಿಗೆ ಕಬ್ಬನ್ನು ಮೆಲ್ಲಿಸಿದ, ಮಾದಾರ ಚೆನ್ನಯ್ಯನ ಮನೆಯಲ್ಲಿ ಉಂಡು ಚೋಳರಾಜನ ಭಕ್ತಿಪ್ರಸಾದವನ್ನು ಉಣ್ಣದ ಶಿವನು(೬೦). ವೇಮನಾರಾಧ್ಯರು ಮಹಿಮಾಶಾಲಿಗಳು(೬೧). ನಿಡುಮಾಗಡಿಯ ಕರಿಬಸವೇಶನಿಗೆ ತೆಂಗಿನ ಮರವು ಫಲಗಳನ್ನು ನೀಡಿತು(೬೨). ಶರಣ ಓಹಿಲಯ್ಯನಿಗೆ ಸೌರಾಷ್ಟ್ರ ಸೋಮೇಶ್ವರನು ಮುಚ್ಚಿದ ಬಾಗಿಲನ್ನು ತೆಗೆದನು(೬೩). ಬಸವೇಶ್ವರನು ಪಂಡಿತಾರಾಧ್ಯರಿಗೆ ಕನ್ನಡಭಾಷೆಯನ್ನು ದಯಪಾಲಿಸಿದನು(೬೮). 'ಸಿದ್ಧರಾಮ' ಎಂಬುದಕ್ಕೆ ಬದಲು "ಧೂಳಿಮಾಕಾಳ' ಎಂಬ ಹೆಸರಿಟ್ಟಕಾರಣ ಹಾಲು ಬೆಣ್ಣೆಗೆ ಬಾಯತೆರೆಯದ ಸಿದ್ಧರಾಮನು(೭೦).

ರಾಘವಾಂಕಪಂಡಿತನು ಭಕ್ತಿಯಿಂದ ಸ್ತುತಿಸಿ ದೇವಾಲಯದ ಮುಖವನ್ನು ತಿರಿಗಿಸಿದನು(೭೧). ಸೌರಾಷ್ಟ್ರ ಸೋಮೇಶ್ವರನು ಗುಡಿಸಲಿನಲ್ಲಿ ಹುಟ್ಟಿ ಬಾಚರಸನನ್ನು ರಕ್ಷಿಸಿದನು(೭೨). ಗೊಲ್ಲತಿಯೊಬ್ಬಳು ಜಾರಿಬೀಳುವಾಗ 'ಬಸವಾ'ಎಂದು ಸ್ಮರಿಸಲು ಬಸವೇಶ್ವರನು ರಾಜಸಭೆಯಲ್ಲಿದ್ದುಕೊಂಡೇ ಆಕೆಯ ತಲೆಯಮೇಲಿನ ಕೊಡವನ್ನು ಹಿಡಿದು ನಿಲ್ಲಿಸಿದನು(೭೩). ಲೋಕವೆಲ್ಲ ಹೊಗಳುವಂತೆ ಜಯಶಾಲಿಯಾಗಿ ಅರಬಸ್ಥಾನದಲ್ಲಿ ಮಳೆಯನ್ನು ಬರಿಸಿದ ಮಳೆಯ ಮಲ್ಲೇಶನು(೭೪). ಗುರು ಲಿಂಗ ಜಂಗಮವೆಂಬ ತ್ರಿವಿಧವಾದಾತನೂ, ಇವುಗಳನ್ನು ಪೂಜಿಸಲು ಸದ್ಭಕ್ತನಾದಾತನೂ ಆಗಿರುವ ಬಸವೇಶ್ವರನೇ ನಾನು ಎಂದು ಶಿವನು ಪಾರ್ವತಿಗೆ ಪ್ರತ್ಯಕ್ಷ ಮಾಡಿ ತೋರಿಸಿದನು(೭೫). ನೊಂದುಬಂದ ಶಿವಭಕ್ತನೊಬ್ಬನು ಮಾರುಡಿಗೆಯ ಹೊರವಲಯದಲ್ಲಿರಲು ಶಿವನು ಆ ವಿಷಯವನ್ನು ನಾಚಯ್ಯನಿಗೆ ಕನಸಿನಲ್ಲಿ ಹೇಳಿದನು(೭೬). ಹೂಗಿಡಗಳು ಬಾಗಿ ಸದ್ಭಕ್ತಿಯಿಂದ ದಸರಯ್ಯಗೆ ಹೂಗಳನ್ನು ನೀಡಿದವು(೭೭). ಹರಿಹರನು ರಾಘವಾಂಕನಿಗೆ ಹಲ್ಲುಗಳನ್ನು ದಯಪಾಲಿಸಿದನು(೭೮). ಶರಣ ನನ್ನಯ್ಯ, ಹೊನ್ನಯ್ಯ, ಚೆನ್ನಯ್ಯಗಳ ನಡವಳಿಕೆ ನಿನ್ನಲ್ಲಿದೆ(೮೧). ಶಿವಯೋಗಿ ಸಿದ್ಧರಾಮ ಹಾಗೂ ನೀವು ತೋಟದಲ್ಲಿ ಶಿವೈಕ್ಯರಾಗುವಾಗ ಕಾಮನನ್ನು ಜಯಿಸಿ, ಹುತ್ತದಲ್ಲಿ ವಾಸಿಸಿ, ಸಮಾನ ಪೂಜ್ಯತೆಯನ್ನು ಹೊಂದಿದಿರಿ(೮೨). ಆತನು ನರಕದಲ್ಲಿದ್ದ ಬಿಲ್ಲೇಶ ಬೊಮ್ಮಯ್ಯನನ್ನು ಮೇಲಕ್ಕೆ ಎತ್ತಿ ತೆಗೆದನು(೮೨). ಪೂರ್ವಕಾಲದಲ್ಲಿ ದಕ್ಷಿಣಾಮೂರ್ತಿಯು ತತ್ವವನ್ನು ಬೋಧಿಸಿದನಲ್ಲದೆ ಆಚರಿಸಿ ತೋರಿಸಲಿಲ್ಲ. ಬಸವೇಶ್ವರನು ತತ್ವವನ್ನು ಆಚರಿಸಿ ತೋರಿಸಿದನಲ್ಲದೆ ಬೋಧಿಸಲಿಲ್ಲ(೯೯). ಕೈ ಕಾಲುಗಳ ಉಗುರು ಬೆಳೆದು ಶ್ರೀಗಿರಿಯಲ್ಲಿದ್ದ ಶಿವಾನಂದಮುನಿಯನ್ನು ಕಂಡ ಗಂಧರ್ವರು ಪ್ರಾಣಿಜನ್ಮಹೊಂದಿ ಅಲೆದಾಡಿದರು. (೧೦೦). ಹಾವಿನಾಳ ಕಲ್ಲಯ್ಯನ ಮನೆಯ ನಾಯಿ ಬನವಾಸಿಯ ಬ್ರಹ್ಮದೇವನ ಮನೆಯ ಕಾಗೆ ವೇದವನ್ನು ಓದಿ ನಿಂದಕರನ್ನು ಹಿಮ್ಮೆಟ್ಟಿಸಿದವು. ಚೋಳನ ಬೆನ್ನಿಗೆ ಬಿದ್ದ ಬ್ರಹ್ಮಹತ್ಯದ ಹಾಗೆ ಎಲ್ಲಿಹೋದರೂ ಕೆಟ್ಟ ವಿಷಯಸುಖ ಬೆನ್ನ ಬಿಡದು. ಶ್ರೀ ಬಸವೇಶ್ವರನು ಹುಲ್ಲುಕಡ್ಡಿಯ ಮೂಲಕ (ಮೀಮಾಂಸಕನೊಡನೆ) ವಾದ ಮಾಡಿಸಿದನು(೧೦೭). ಸೌಂದರ ನಂಬಿಯ ಮೇಲಿನ ಪ್ರೀತಿ ಕಾರಣವಾಗಿ ಶಿವನು ಪರವೆನಾಚಿಯ ಎದೆಯಲ್ಲಿದ್ದುಕೊಂಡು ಅವಳಿಗಾಗಿ ಹೊನ್ನನ್ನು ನೀಡಿದನು(೧೧೧). ಹೀಗೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ, ನಂಬೆಣ್ಣ, ಮಡಿವಾಳ ಮಾಚಿದೇವ, ಕೆಂಬಾವಿ ಭೋಗಣ್ಣ, ಶಂಕರ ದಾಸಿಮಯ್ಯ, ಹರಿಹರ, ರಾಘವಾಂಕ, ಕೆರೆಯ ಪದ್ಮರಸ ಮೊದಲಾದವರ ಬಗ್ಗೆ ಈ ಕಾವ್ಯ ಮಹತ್ವದ ಮಾಹಿತಿಯನ್ನು ನೀಡುತ್ತಿರುವುದು ವಿಶೇಷ.

ಅಲ್ಲಲ್ಲಿ ಸುಂದರವಾದ ಉಪಮೆ ರೂಪಕ ಮೊದಲಾದ ಅಲಂಕಾರಗಳಿಂದ ಕೂಡಿದ ಸೊಗಸಾದ ಪದ್ಯಗಳೂ ಇಲ್ಲಿವೆ. ಆದರೂ ಕವಿತ್ವದ ದೃಷ್ಟಿಯಿಂದ ಇದು ಮಧ್ಯಮವರ್ಗದ ಕೃತಿಯೆಂದೇ ಹೇಳಬೇಕು ಎಂಬುದು ಡಾ. ಕಲಬುರ್ಗಿ ಅವರ ಅಭಿಪ್ರಾಯ. ಈ ಕೃತಿಯ ಹಿಂದಿರುವ ಭಕ್ತಿಭಾವ ಮಾತ್ರ ಅನನ್ಯವಾದುದು. 'ಗುರುಪೀಠದ ಶಿವಯೋಗಿಗಳೊಬ್ಬರು ವಿರಕ್ತಪೀಠದ ಇನ್ನೊಬ್ಬ ಶಿವಯೋಗಿಯನ್ನು ಈ ರೀತಿ ಭಕ್ತಿಭಾವದಿಂದ ಹಾಡಿದುದು, ಭಾವನಿರ್ಭರತೆಯಿಂದ ಹೊಗಳಿದುದು ಉಭಯ ವರ್ಗಗಳ ಅನ್ಯೋನ್ಯತೆಯನ್ನು ತೋರಿಸಿಕೊಡುತ್ತದೆ. ಇದು ವೀರಶೈವ ಇತಿಹಾಸದ ಒಂದು ಮಹತ್ವದ ಘಟನೆಯಾಗಿ ತೋರುತ್ತದೆ' ಎಂದು ಈ ಕೃತಿಯ ವಿಶೇಷತೆಯನ್ನು ಸ್ಪಷ್ಟಪಡಿಸಿದ್ದಾರೆ.

ಈ ಕೃತಿಯ ಪ್ರತಿ ದೊರೆತುದು ಜೇವರಗಿ ತಾಲೂಕಿನ ಎಡ್ರಾಮಿಯಲ್ಲಿ. ಬಹಳ ದಿನಗಳಿಂದ ಕಣ್ಣು ತಪ್ಪಿಸಿದ್ದ ಈ ಕೃತಿ ಕವಿಯ ಕಾರ್ಯಕ್ಷೇತ್ರಗಳಾದ ಹೂಲಿ, ನಂದ್ಯಾಲಪುರಗಳ ಪರಿಸರದಲ್ಲಿ ಸಿಗದೆ ದೂರದ ಎಡ್ರಾಮಿಯಲ್ಲಿ ಸಿಕ್ಕುದು ಆಶ್ಚರ್ಯವೆ ಸರಿ ಎಂದಿದ್ದಾರೆ.

ಇದು ಕಾಗದಪ್ರತಿಯಾಗಿದ್ದು ತಕ್ಕಮಟ್ಟಿಗೆ ಶುದ್ಧವಾಗಿಯೇ ಇದೆ. ಅವಶ್ಯವಿದ್ದಲ್ಲಿ ಮಾಡಿರುವ ತಿದ್ದುಪಡಿಗಳನ್ನು ಚೌಕಕಂಸಿನಲ್ಲಿ ಕೊಡಲಾಗಿದೆ. ತಿದ್ದುಪಡಿಗಳಿಗೆ ಸಂವಾದಿಯಾದ ಮೂಲಪಾಠವನ್ನು 'ಮೂ' ಎಂಬ ಸಂಕೇತದಿಂದ ಅಡಿಯಲ್ಲಿ ಕಾಣಿಸಲಾಗಿದೆ. ಹೀಗಿದ್ದೂ ಅನೇಕ ಸಂದೇಹಗಳು ಉಳಿದಿವೆ. ವಿದ್ವಾಂಸರು ಪರಿಹಾರಗಳನ್ನು ಸೂಚಿಸಿದಲ್ಲಿ ತುಂಬ ಉಪಕಾರವಾಗುವುದು ಎಂದಿದ್ದಾರೆ. ಶ್ರೀ ತೋಂಟದ ಮಹಾಸ್ವಾಮಿಗಳವರು ಈ ಕೃತಿಯ ಸಾಮಾಜಿಕ ಮತ್ತು ಐತಿಹಾಸಿಕ ಮಹತ್ವವನ್ನ ಮನದಂದು, ತಮ್ಮ ಮಠದ 'ವೀರಶೈವ ಅಧ್ಯಯನಸಂಸ್ಥೆ'ಯಿಂದ ಪ್ರಕಟಿಸುವದಕ್ಕೋಸುಗ ಪರಿಷ್ಕರಿಸಿಕೊಡಬೇಕೆಂದು ಆದೇಶ ನೀಡಿದರಲ್ಲದೆ 'ಸಾಮಾನ್ಯರ ವಾಚನಕ್ಕೋಸುಗ ಪ್ರತಿಯೊಂದು ಪದ್ಯಕ್ಕೆ ಪ್ರತಿಪದಾರ್ಥ ಮತ್ತು ಸರಳಾನುವಾದ ಬರೆಯುವ ಅವಶ್ಯಕತೆಯನ್ನೂ ಹೇಳಿದರು.' ಆ ಪ್ರಕಾರ ಇಲ್ಲಿ ಪ್ರತಿ ಪದ್ಯದ ಪ್ರತಿಪದಾರ್ಥ ಮತ್ತು ಸರಳಾನುವಾದವನ್ನು ಬರೆಯಲಾಗಿದೆ.

ಪದ್ಯಗಳನ್ನು ಓದುವಾಗ ಕ್ಲಿಷ್ಟಪದಗಳನ್ನು ಹೇಗೆ ಬಿಡಿಸಿ ಓದಬೇಕು ಎಂಬುದನ್ನೂ ಅಲ್ಲಲ್ಲಿ ಅಡಿಟಿಪ್ಪಣಿಯಲ್ಲಿ ಸೂಚಿಸಿರುವುದು ವಿಶೇಷ. ಉದಾಹರಣೆಗೆ ೨ನೆಯ ಪದ್ಯದಲ್ಲಿಯ 'ಆಗೆಸೆಯೆ' ಎಂಬುದನ್ನು 'ಆಗಿ+ಎಸೆಯೆ' ಎಂದು ಬಿಡಿಸಿ ಓದಬೇಕು ಎಂಬ ಸೂಚನೆಯನ್ನು ಕೊಟ್ಟಿದ್ದಾರೆ. ಹಾಗೆಯೇ ೭ನೆಯ ಪದ್ಯದ 'ಪೇಳ್ವೊಡನುಮಾನವೇಕಾಗದೇ ಬುಧಶ್ರಾವ್ಯವು' ಎಂಬುದನ್ನು 'ಪೇಳ್ವೊಡನುಮಾನವೇಕೆ?+ಆಗದೇ ಬುಧಶ್ರಾವ್ಯವು' ಎಂದು ಬಿಡಿಸಿ ಓದಬೇಕು ಎಂಬ ಸೂಚನೆ ಕೊಟ್ಟಿದ್ದಾರೆ. ಕೆಲವು ಕಡೆ ಕೆಲವು ಪಾರಿಭಾಷಿಕ ಪದಗಳಿಗೆ ವಿವರಣಾತ್ಮಕ ಅರ್ಥವನ್ನೂ ಹೇಳಿದ್ದಾರೆ. ಉದಾಹರಣೆಗೆ–'ಶಿವ ತ್ರಿಪುರವಂ ನಿರೀಕ್ಷಿಸುವಾಗ. . .' ಎಂದಿರುವ ೬೬ನೆಯ ಪದ್ಯದ ವಿವರಣೆ ಹೀಗಿದೆ–ತ್ರಿಪುರ–ತಾರಕಾಸುರನ ಮಕ್ಕಳಾದ ತಾರಾಕ್ಷ, ಕಮಲಾಕ್ಷ, ವಿದ್ಯುನ್ಮಾಲಿಯೆಂಬುವವರು ಆಕಾಶದಲ್ಲಿ ಬಂಗಾರ ಬೆಳ್ಳಿ ಕಬ್ಬಿಣಗಳಿಂದ ನಿರ್ಮಿಸಿದ ಮೂರು ಪಟ್ಟಣಗಳು. ಪದ್ಯ ೭೪ರಲ್ಲಿ ಉಲ್ಲೇಖಗೊಂಡ ಮಳೆಯ ಮಲ್ಲೇಶನ ಇಡೀ ವಿವರವನ್ನು ಕೊಟ್ಟಿರುವುದು ವಿಶೇಷ. ಪದ್ಯ ೨೮ ರಲ್ಲಿ ಬಂದ ದಶವಾಯುವಿಗೆ –ಐದು ಪ್ರಾಣವಾಯು : ಪ್ರಾಣ ಅಪಾನ ವ್ಯಾನ ಉದಾನ ಸಮಾನ. ಐದು ಉಪವಾಯು : ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಎಂಬ ಹತ್ತು ವಾಯುಗಳು, ಅಷ್ಟಮದ–ಕುಲ ಛಲ ಧನ ರೂಪ ಯೌವನ ವಿದ್ಯಾ ರಾಜ್ಯ ತಪವೆಂಬ ೮ ಮದಗಳು. ೧೧೦ನೆಯ ಪದ್ಯದಲ್ಲಿಯ 'ಅರಿಸಮಾಸೆನಿಪ ಹುಳ. . .' ಅರಿಸಮಾಸ–ಪೂರ್ವೋತ್ತರ ಪದಗಳಲ್ಲಿ ಒಂದು ಕನ್ನಡ, ಇನ್ನೊಂದು ಸಂಸ್ಕೃತ ಪದದಿಂದ ಉಂಟಾದ ಸಮಾಸ. ಹೀಗೆ ಹಲವಾರು ಪದಗಳಿಗೆ ವಿಸ್ತೃತ ವಿವರಣೆ ಕೊಟ್ಟಿರುವುದನ್ನು ನೋಡುತ್ತೇವೆ. ಆದರೆ ಒಂದೆರಡು ಕಡೆ ಅರ್ಥ ತಪ್ಪಿದಂತಿದೆ. ಪದ್ಯ ೧೧ ರಲ್ಲಿ ಮುನಿಶಾಪದಿಂದ ಕುಷ್ಟರೋಗಿಯಾದ ಸೂರ್ಯನು ಎಂದಿದೆ. ೬೪ ನೆಯ ಪದ್ಯದಲ್ಲಿ ಮಡದಿ ಎಂಬ ಶಬ್ದಕ್ಕೆ ಹೆಂಡತಿ ಎಂಬ ಅರ್ಥವನ್ನು ಪ್ರತಿಪದಾರ್ಥದಲ್ಲಿ ಹೇಳಿದೆ. ಆದರೆ ಆ ಸಂದರ್ಭಕ್ಕೆ ಸರಳಾನುವಾದದಲ್ಲಿ ಕೊಟ್ಟಿರುವ ಹಾಗೆ ಹೆಣ್ಣುಮಗಳು ಎಂಬ ಅರ್ಥವೇ ಸರಿ. ಪದ್ಯ ೯೩ ರಲ್ಲಿ ಮೂರುಹಾದಿ ಎಂಬ ಪದಕ್ಕೆ ತೊಂದರೆ ಎಂಬ ಅರ್ಥ ಕೊಟ್ಟಿರುವುದು ಅಷ್ಟು ಸಮಂಜಸವಾಗಿ ಕಾಣದು. ಪದ್ಯ ೯೮ರಲ್ಲಿ ಬೆಂದ ಎಂಬ ಶಬ್ದಕ್ಕೆ ಹಣ್ಣಾದ, ಉಲ್ಬಣಿಸಿದ ಎಂಬ ಅರ್ಥ ಕೊಡಲಾಗಿದೆ. ಆದರೆ ಅಲ್ಲಿ ಸುಟ್ಟ ಎಂಬರ್ಥ ಇರಬೇಕಿತ್ತು.

ಹೀಗೆ ಒಂದು ಸಣ್ಣ ಮತ್ತು ಸೊಗಸಾದ ಕೃತಿಯನ್ನು ಒಳ್ಳೆಯ ನಿಷ್ಠೆ ಮತ್ತು ಶ್ರದ್ಧೆಯಿಂದ ಸಂಪಾದಿಸಿರುವುದು ಸಂಪಾದಕರ ಸಂಪಾದನೆಯ ಮೇಲಿನ ಗೌರವವನ್ನು ತೋರುತ್ತದೆ. ಕೊನೆಯಲ್ಲಿ ಪದ್ಯಗಳ ಅಕಾರಾದಿಯನ್ನು ಕೊಡಲಾಗಿದೆ.

IV. ಆದಯ್ಯನ ಲಘುಕೃತಿಗಳು – ೧೯೮೦

'ಶಿವಶರಣರ ಸಾಹಿತ್ಯದ ಹೊಸಮುಖಗಳನ್ನು ಬಿಚ್ಚಿ ತೋರಿಸುವ ಪ್ರಯತ್ನದ ಅಂಗವಾಗಿ ಈ ಕೃತಿಯನ್ನು ಪ್ರಕಟಿಸಲಾಗಿದೆ. ಗಾತ್ರದಲ್ಲಿ ಚಿಕ್ಕದಾದರೂ ಪಾತ್ರದಲ್ಲಿ ಮಹತ್ವದ್ದಾದ ಈ ಕೃತಿ ಆದಯ್ಯನ ವಚನೇತರ ಸಾಹಿತ್ಯದ ಮಗ್ಗಲುಗಳ ಬಗೆಗೆ ಕುತೂಹಲ ಹುಟ್ಟಿಸುವಲ್ಲಿ ಉಪಯುಕ್ತವಾಗಿದೆ' ಎಂದು ಈ ಕೃತಿಯ ಮಹತ್ವವನ್ನೂ, ಪ್ರಕಟಣೆಯ ಹಿನ್ನೆಲೆಯನ್ನೂ ವಿವರಿಸಿದ್ದಾರೆ.

ಆದಯ್ಯನ ಹೆಸರನ್ನು ನೆನೆದಕೂಡಲೇ ನಮ್ಮ ಕಣ್ಣೆದುರು ನಿಲ್ಲುವ ಘಟನೆಯೆಂದರೆ, ಪುಲಿಗೆರೆಯಲ್ಲಿ ಜರುಗಿದ ಸೋಮೇಶ್ವರನ ಪ್ರತಿಷ್ಠಾಪನೆ. ಆದರೆ ಈ ದೈವತ್ವದ ಪ್ರತಿಷ್ಠಾಪಕನು ಆದಯ್ಯನೆಂದು ಹರಿಹರನ ಆದಯ್ಯನರಗಳೆ ಮೊದಲಾದ ಕಾವ್ಯಗಳು ಹೇಳಿದರೆ, ಸೋಮಣ್ಣನೆಂದು ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು ಮೊದಲಾದ ಕಾವ್ಯಗಳು ಹೇಳುತ್ತಿವೆ. ಈ ವಿಷಯವನ್ನು ಕುರಿತು ೧೯೬೮ರಲ್ಲಿಯೇ ಡಾ. ಕಲಬುರ್ಗಿ ಅವರು–

೧. ಸೋಮನಾಥನ ಸ್ಥಾಪಕ ಆದಯ್ಯನೇ? ಅಥವಾ ಸೋಮನಾಥನೇ?

೨. ಆದಯ್ಯನಾಗಿದ್ದರೆ ಆತನು ಮೂಲತಃ ವೀರಶೈವನೇ? ವೀರಶೈವೇತರನೇ?

೩. ಆದಯ್ಯನ ಘಟನೆ ಹುಲಿಗೆರೆಯಲ್ಲಿ ನಡೆಯಿತೇ? ಬೇರೊಂದು ಊರಲ್ಲಿ ನಡೆಯಿತೇ?

೪. ಪುಲಿಗೆರೆಯ ಸೋಮೇಶ್ವರನ ಮೂರ್ತಿಸ್ಥಾಪನೆಯ ಕಾಲವಾವುದು?

೫. ಮೂರ್ತಿಸ್ಥಾಪಕ ಆದಯ್ಯ, ವಚನಕಾರ ಆದಯ್ಯ ಭಿನ್ನರೇ? ಅಭಿನ್ನರೇ?

ಎಂಬ ಪ್ರಶ್ನೆಗಳನ್ನು ಎತ್ತಿ, ಇನ್ನೂ ಈ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿದಿವೆ ಎಂದಿದ್ದಾರೆ.

ಆದಯ್ಯನು ಪುಲಿಗೆರೆಯಲ್ಲಿ ಸೋಮೇಶ್ವರನನ್ನು ಸ್ಥಾಪಿಸಿದನೆಂಬುದು ಸರ್ವಸಾಮಾನ್ಯ ಗ್ರಹಿಕೆ. ಕಾಲದ ದೃಷ್ಟಿಯಿಂದ ಮೂರ್ತಿಸ್ಥಾಪಕ ಆದಯ್ಯ, ವಚನಕಾರ ಆದಯ್ಯ ಭಿನ್ನರೆಂದು ತೋರುತ್ತಿದ್ದು, ವಚನಕಾರ ಆದಯ್ಯ ಬಸವಣ್ಣನವರ ಕಿರಿಯ ಸಮಕಾಲೀನನೆಂಬ ನಿರ್ಧಾರಕ್ಕೆ ಡಾ. ಕಲಬುರ್ಗಿ ಅವರು ಬಂದಿದ್ದಾರೆ.

ಆದಯ್ಯನು ವಚನ, ಸ್ವರವಚನ, ಇತರ ಸಾಹಿತ್ಯ ರಚಿಸಿದ್ದು ಈಗಾಗಲೇ ಈತನ ವಚನ ಸಾಹಿತ್ಯವನ್ನು 'ಆದಯ್ಯನ ವಚನಗಳು' ಹೆಸರಿನಿಂದ ಹಳಕಟ್ಟಿಯವರು ೧೫೧, ಉತ್ತಂಗಿಯವರು ೩೯೭ ವಚನಗಳನ್ನು ಪ್ರಕಟಿಸಿದ್ದಾರೆ. ಉಳಿದ ಸಾಹಿತ್ಯ ಒಮ್ಮೆಯೂ ಬೆಳಕು ಕಂಡಿಲ್ಲವಾದ್ದರಿಂದ ಈತನ ವಚನೇತರ ಎರಡೂ ಸಾಹಿತ್ಯ ಪ್ರಕಾರಗಳನ್ನು "ಲಘುಸಾಹಿತ್ಯ" ಹೆಸರಿನಿಂದ ಇಲ್ಲಿ ಈಗ ಪ್ರಕಟಿಸುವ ಕಾರ್ಯಕ್ಕೆ ಡಾ. ಕಲಬುರ್ಗಿ ಅವರು ಕೈಹಾಕಿದ್ದಾರೆ.

ಇದಕ್ಕೆ ಕನ್ನಡ ಸಂಶೋಧನಸಂಸ್ಥೆಯ ೬೬೩ ನೆಯ ತಾಳೇಗರಿಕಟ್ಟನ್ನು 'ಮೂ' ಸಂಕೇತದಿಂದ ಬಳಸಿಕೊಳ್ಳಲಾಗಿದೆ. ಇದರಲ್ಲಿ ಆದಯ್ಯನ ವಚನಗಳನ್ನು ಮೊದಲುಗೊಂಡು ಹತ್ತು ಬೇರೆಬೇರೆ ಕೃತಿಗಳಿದ್ದು ಅವುಗಳಲ್ಲಿ ೨, ೪, ೫, ೬ನೆಯ ಕೃತಿಗಳಾದ ಆದಯ್ಯಗಳ ಕಂದ, ಸ್ವರವಚನ, ಉಯ್ಯಲಪದ, ಮುಕ್ತಿಕ್ಷೇತ್ರ ಇವುಗಳನ್ನು ಅವು ಇರುವ ಕ್ರಮದಲ್ಲಿಯೇ ಸಂಪಾದಿಸಿಕೊಡಲಾಗಿದೆ. ರೇಫೆ, ಱಳಗಳನ್ನು ಸರಿಯಾಗಿಯೇ ಬಳಸಿರುವುದರಿಂದ ಮತ್ತು ಪ್ರತಿ ಬಹಳಮಟ್ಟಿಗೆ ಶುದ್ಧವಾಗಿರುವುದರಿಂದ ಇಲ್ಲಿ ಊಹೆಗೆ ಅವಕಾಶ ಕಡಿಮೆ. ಆದಯ್ಯಗಳ ಕಂದದ ಇನ್ನೊಂದು ಪ್ರತಿ ಕನ್ನಡ ಅಧ್ಯಯನಪೀಠಕ್ಕೆ

ಸಂಬಂಧಿಸಿದ್ದು (ನಂ. ೭೯೧) 'ಅ' ಸಂಕೇತದಿಂದ ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಕೆಲವೆಡೆ ಗರಿಗಳ ಒಂದು ಮಗ್ಗಲು ಮುರಿದಿರುವುದರಿಂದ ಪಾಠ ಲೋಪವಾಗಿವೆ. ಸಾಧ್ಯವಿದ್ದಲ್ಲಿ ಮಾಡಿದ ಊಹೆಗೆ ಚೌಕಕಂಸನ್ನು ಬಳಸಲಾಗಿದೆ. ಕೊನೆಯಲ್ಲಿ ವಿಸ್ತೃತವಾದ ಶಬ್ದಾರ್ಥಕೋಶವನ್ನು ಕೊಡಲಾಗಿದೆ.

ಆದಯ್ಯನ ಸ್ವರವಚನಸಾಹಿತ್ಯದಲ್ಲಿ 'ಶರಣನೆ ಸತಿ ಲಿಂಗ ಪತಿಯಾಗಿರ್ದ. . .' ಎಂಬ ಹಾಡು 'ಶಿವದಾಸಗೀತಾಂಜಲಿ'ಯಲ್ಲಿ ಪ್ರಕಟವಾಗಿದೆ. ಈಗ ಇದಕ್ಕೆ ೧೯ ಹೊಸ ಹಾಡುಗಳು ಸೇರಿ ಈತನ ಸ್ವರವಚನಸಾಹಿತ್ಯ ಪ್ರಥಮಬಾರಿ ತನ್ನ ವಿಸ್ತಾರವನ್ನು ತೋರಿದೆ. ಇವುಗಳಿಗೆ ತೋರಿರುವ ರಾಗವೈವಿಧ್ಯ, ವಿಷಯವೈವಿಧ್ಯಗಳು ಆದಯ್ಯನ ವೈದುಷ್ಯ ಮತ್ತು ಅನುಭಾವಗಳಿಗೆ ಸಾಕ್ಷಿಯಾಗಿವೆ. ಇಲ್ಲಿಯ ಕೆಲವು ಸ್ವರವಚನಗಳು ತುಂಬ ಸುಂದರವಾಗಿದ್ದು ವಚನಗಳಿಗೆ ಹೆಗಲುಹಚ್ಚಿ ನಿಲ್ಲುತ್ತವೆ. ಸಾರ್ಥಕ ಪದಪ್ರಯೋಗ, ರಚನಾವಿಧಾನ, ಭಾವರಮ್ಯತೆಗಳ ದೃಷ್ಟಿಯಿಂದ ಸ್ವರವಚನದಲ್ಲಿಯೇ ಇವು ವಿಶಿಷ್ಟಸ್ಥಾನ ಹೊಂದಿವೆ' ಎಂದಿರುವ ಡಾ. ಕಲಬುರ್ಗಿ ಅವರ ಮಾತಿನಲ್ಲಿ ಸತ್ಯಾಂಶವಿದೆ ಎಂಬುದನ್ನು ರಾಗ ಕಾಂಬೋಧಿಯಲ್ಲಿ ರಚನೆಗೊಂಡ "ಶರಣನೆ ಸತಿ ಲಿಂಗವೆ ಪತಿಯಾಗಿರ್ಪ । ಸುರತದ ಸುಖವನೆಂತುಪಮಿಸುವೆ" ಎಂಬ ಸ್ವರವಚನದ ಒಂದು ಪದ್ಯದಿಂದ ಕಂಡುಕೊಳ್ಳಬಹುದು–

"ಕಂಗಳ ಕೆಂಪು ಸೋರ್ಮುಡಿ ಮೊಗ ಕಿರುಬೆಮ
ರಂಗ ರೋಮಾಂಚನ ಪುಳಕಿಸಲು
ತಂಗದಿರ್ಗಳು ಸರ್ವಾಂಗದಿ ನೆಲೆಸಿರೆ
ಲಿಂಗಸ್ವಭಾವದ ಸ್ವಸುಖವ"

ಲಿಂಗದಲ್ಲಿ ಒಂದಾಗಿರುವ ಭಕ್ತನ ಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸಿರುವ ಈ ಪದ್ಯವನ್ನು ಓದುತ್ತಿದ್ದಂತೆ ಚಾಮರಸನ ಪ್ರಭುಲಿಂಗಲೀಲೆಯ ಪದ್ಯ ನೆನಪಾಗುವುದರಲ್ಲಿ ಸಂಶಯವಿಲ್ಲ.

ಇತರ ಸಾಹಿತ್ಯದಲ್ಲಿ ಆದಯ್ಯಗಳ ಕಂದ, ಉಯ್ಯಲಪದ ಮತ್ತು ಮುಕ್ತಿಕ್ಷೇತ್ರಗಳನ್ನು ಹೆಸರಿಸಬಹುದಾಗಿದೆ. ಆದಯ್ಯಗಳ ಕಂದ ಹದಿನಾರು ಪದ್ಯಗಳ ಗುಚ್ಛ. ಶರಣರು ಕವಿಸಾಹಿತ್ಯದ ಈ ಮಟ್ಟನ್ನು ಎಷ್ಟು ಸುಂದರವಾಗಿ, ಸಮರ್ಪಕವಾಗಿ ಬಳಸಬಲ್ಲರೆಂಬುದಕ್ಕೆ ಇದು ಉತ್ತಮ ಉದಾಹರಣೆ.

ಬಟ್ಟಬಯಲೆಂಬುದದು ತಾ
ನೆಟ್ಟನೆ ಆಕಾಶತತ್ವವಲ್ಲದೆ ಲಿಂಗವೆ
ಸೃಷ್ಟಿಯೊಳಮುಟ್ಟ[ಯು ಮು]ಟ್ಟದೆ
ಇಟ್ಟಣಿಸಿಹ ಶಾಂತ ಸೋಮನಲ್ಲದೆ ಪೆರತೇಂ ॥ ೧೪ ॥

ಲಿಂಗಾಯತರಲ್ಲಿರುವ ಶೂನ್ಯ, ಬಯಲು, ಆಕಾಶತತ್ವದ ವಿವರ ಸಂಕ್ಷೇಪವಾಗಿಯಾದರೂ ಮನಮುಟ್ಟುವಂತೆ ಬಿಂಬಿಸಿರುವ ಇಲ್ಲಿ 'ಭಕ್ತಿ, ಭಾವ, ನಿರ್ಭರತೆ, ಭಾಷಾಪ್ರಯೋಗ, ಛಂದಸ್ಸಿನ ಹದ ದೃಷ್ಟಿಯಿಂದ ಇವು ಕನ್ನಡಸಾಹಿತ್ಯದ ಅಪೂರ್ವ ಕಂದಪದ್ಯಗಳೆನ್ನಿಸಿವೆ' ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

ಇವುಗಳಲ್ಲಿ 'ಉಯ್ಯಲಪದ'ವನ್ನು ಸ್ವರವಚನದಲ್ಲಿ ಪರಿಗಣಿಸಬಹುದಾದರೂ ಹಸ್ತಪ್ರತಿಯಲ್ಲಿ ಇದನ್ನು ಪ್ರತ್ಯೇಕವಾಗಿ ಬರೆಯಲಾಗಿರುವುದರಿಂದ ಇದನ್ನು ಇಲ್ಲಿಯೂ ಸ್ವತಂತ್ರವಾಗಿಯೇ ಪ್ರಕಟಿಸಲಾಗಿದೆ. 'ಉಯ್ಯಲ' ಎಂಬುದು ಶರಣರ ಪರಿಭಾಷೆಯಲ್ಲಿ 'ಶಿವಾನುಭವ'ಕ್ಕೆ ಸಂಕೇತವಾಗಿದೆ.

ಶಿವದಾಸಗೀತಾಂಜಲಿಯಲ್ಲಿ 'ತೂಗಿದೆನು ನಿಜದುಯ್ಯಲೆ . . .' ಎಂಬ ಅಕ್ಕಮಹಾದೇವಿಯ ಹಾಡು ಬರುತ್ತಿದ್ದು, ಅದೇ ಲಯದ, ಆದರೆ ಅದಕ್ಕಿಂತ ಸುಂದರವೂ ವಿಸ್ತಾರವೂ ಆದ ಗೀತೆಯಿದು. ಉಯ್ಯಾಲೆ ತೂಗುವ ದಾಟಿಯಲ್ಲಿ ಜೀಕುವ ಇದು ಒಂದು ಅಪರೂಪದ ಸ್ವರವಚನವೆಂದೇ ಹೇಳಬೇಕು ಎಂದಿದ್ದಾರೆ. ಅದಕ್ಕೆ ಉದಾಹರಣೆಗಾಗಿ ರಾಗ ಬವುಳಿಯಲ್ಲಿ ಬರೆದ ಉಯ್ಯಲಪದದ ಒಂದೆರಡು ಪದ್ಯಗಳನ್ನು ನೋಡಬಹುದು :

ಆರುದರುಶನಗಳೆಲ್ಲಾ ತಮತಮಗೆ
ಬೇರೆಬೇರೊಂದೊಂದನೂ
ಕೀರಿ ಕಟ್ಟಿದವಲ್ಲದೆ ಆರರಿಂ
ಮೀರಿಪ್ಪ ಮ[ಹ]ವರಿಯದೆ ॥ ॥೧೪॥

ಅಜಹರಿಗಳಿಗಸಾಧ್ಯ ಸುರರುಗಳ
ಭಜನೆಯೊಳು ನಿಲುಕದಿಪ್ಪಾ
ಗಜಭಜಿಪ ಯಜನೆಯಿಂದಾ
ಯಜಿಪರೀ ಅಜಪೆಯೊಳು ಸಿಲುಕದಿಹನಾ ॥೧೫॥

'ಮುಕ್ತಿಕ್ಷೇತ್ರ' ಇಲ್ಲಿಯ ಇನ್ನೊಂದು ಕೃತಿ. ಶರಣನ ದೇಹವೇ ದೇವಾಲಯ, ಕಾಯವೇ ಕೈಲಾಸವೆಂದು ಅನೇಕ ವಚನಗಳು ಸಾರುತ್ತಿವೆ. ಇಂಥ ಮುಕ್ತಾತ್ಮನ ಮತ್ತು ಅವನ ಜ್ಞಾನಸಂಪತ್ತಿನ ಸ್ವರೂಪ ಪ್ರತಿಪಾದನೆ ಈ ಕೃತಿಯ ವಸ್ತು. ಇಲ್ಲಿ ೫೧ ಪದ್ಯಗಳಿವೆ. ಮೂರು ಮಾತ್ರೆಯ ಮಾತ್ರಾಗಣ ಇಲ್ಲವೆ ೨ ಅಂಶಗಳ ಬ್ರಹ್ಮಗಣಗಳ ನಡಿಗೆಯಲ್ಲಿ ತುಂಬ ಶಿಸ್ತಿನಿಂದ ಮುಂದುವರಿವ ಈ ಬಂಧ ಆದಯ್ಯನ ಛಂದೋಪರಿಣತಿಯನ್ನು ಬಿಂಬಿಸುತ್ತದೆ ಎಂದಿರುವುದನ್ನು

ಲೋಹವಗ್ನಿಸಂಗದಿಂದ ಕಾಹುಗೊಂಡು ನಿಂದು ತನ್ನ
ಸಾಹಸಂಗಳಳಿದು ಕಠಿಣಗುಂದುವಂದದಿ
ದೇಹ ಜ್ಞಾನಸಂಗದಂದ ಕಾಹುಗೊಂಡು ದರ್ಪಗುಂದಿ
ಆಹ ಲಿಂಗದಲ್ಲಿ ಸಂಗಿಯಾದುದರಿಯೆ ಮುಕ್ತನು ॥೪೧॥

ಮುಂತಾದ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ.

ಹೀಗೆ ಭಾಷೆಯ ಎರಡು ಮೈಗಳಾದ ಶುದ್ಧಿ–ಶೈಲಿಗಳನ್ನು , ಸಾಹಿತ್ಯದ ಎರಡು ಮೈಗಳಾದ ದರ್ಶನ–ಪ್ರದರ್ಶನಗಳನ್ನು ಈ ಕೃತಿಗಳು ಬಹುಮಟ್ಟಿಗೆ ಸಮರ್ಪಕವಾಗಿ ನಿರ್ವಹಿಸಿವೆಯೆಂದೇ ಹೇಳಬೇಕು ಎಂದಿರುವಲ್ಲಿ ಸಂಪಾದಕರ ಅಧ್ಯಯನದ ವ್ಯಾಪ್ತಿ ತೋರುತ್ತಿದೆ. ಕೊನೆಯಲ್ಲಿಯ ಶಬ್ದಾರ್ಥಕೋಶ ಈ ಕೃತಿಯ ಅಧ್ಯಯನಕ್ಕೆ ಸಹಾಯವೊದಗಿಸುತ್ತದೆ.

V. ಕೊಂಡಗುಳಿ ಕೇಶಿರಾಜನ ಕೃತಿಗಳು – ೧೯೯೯

ಕಲಚುರಿ ಅರಸ ಬಿಜ್ಜಳನ ಮಂತ್ರಿಯಾಗಿದ್ದ ಬಸವಣ್ಣ, ದ್ವಾರಸಮುದ್ರದ ಹೊಯ್ಸಳ ಅರಸರಲ್ಲಿ ಮಂತ್ರಿಯಾಗಿದ್ದ ಕೆರೆಯ ಪದ್ಮರಸ, ವಿಜಯನಗರದ ಅರಸು ಪ್ರೌಢದೇವರಾಯನಲ್ಲಿ ಮಂತ್ರಿಯಾಗಿದ್ದ ಲಕ್ಕಣ್ಣದಂಡೇಶ ಈ ಮಾಲಿಕೆಯ ಆದ್ಯಪುರುಷ ಕೇಶಿರಾಜ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ದಂಡಾಧೀಶನಾಗಿದ್ದರೂ ಕೇಶಿರಾಜ ಅನ್ಯರ ಹಂಗಿಗೊಳಗಾಗಿ ಅವರನ್ನು ಹೊಗಳುವ

ಬವಣೆಯಿಂದ ಆದಷ್ಟೂ ದೂರ ಉಳಿಯುವ ಪ್ರಯತ್ನ ಮಾಡಿದ್ದಾನೆ. ಅದನ್ನು'ಸ್ತುತಿಗೊಡೆಯನಪ್ಪ ನಿಮ್ಮಂಸ್ತುತಿಯಿಸದೇ ಕೆಟ್ಟು ಬೆಂದ ಬಸುರಂ ಪೊರೆಯ। ಲ್ಮತಿವಿಕಳನಾಗಿ ಪೆರರಂ। ಸ್ತುತಿಯಿಪುದಂ ಮಾಣಿಸೆನಗೆ ಗಿರಿಜಾರಮಣಾ' (ಲಿಂಗಸ್ತೋತ್ರದ ಕಂದ-ಒಂದು-ಪ.೮೩)ಎಂದು ಹಾಡಿಕೊಂಡಿದ್ದಾನೆ. "ಬಸವಾದಿ ಪ್ರಮಥಯುಗದ ಸೂರ್ಯೋದಯಕ್ಕೆ ಹಿನ್ನೆಲೆಯಾಗಿ ಜರುಗಿದ ಅರುಣೋದಯರೂಪದ ಕ್ರೀಕಲಾಪಗಳು ಈ ಕೇಶಿರಾಜನ ಬದುಕಿನಲ್ಲಿ ಬರೆಹದಲ್ಲಿ ಒಡೆದುಕಾಣುತ್ತಿವೆ. ಆದುದರಿಂದ ಈತನ ಅಭ್ಯಾಸ, ಈತನ ಕೃತಿಗಳ ಅಭ್ಯಾಸಗಳೆಂದರೆ 'ಬಸವಪೂರ್ವಯುಗ'ದ ಅಭ್ಯಾಸವೇ ಆಗುತ್ತದೆ. ಹೀಗಾಗಿ ಬಸವಪೂರ್ವಯುಗದ ಮೌನವನ್ನು ಮುರಿಯಬೇಕಾಗಿರುವ ಇಂದಿನ ಪ್ರಸಂಗದಲ್ಲಿ ಪ್ರಸ್ತುತ ಪ್ರಕಟಣೆ ಒಂದು ಗಮನಾರ್ಹ ಪ್ರಯತ್ನವೇ ಸರಿ" ಎಂದು ಈ ಕೃತಿಗಳ ಪ್ರಕಟಣೆಯ ಮಹತ್ವವನ್ನು ಹೇಳಿ, ಅವುಗಳ ಪ್ರಕಟಣೆಗೆ ಕೈ ಹಾಕಿದ್ದಾರೆ ಡಾ. ಕಲಬುರ್ಗಿ ಅವರು.

ಕೇಶಿರಾಜನು ರಚಿಸಿದ ಕೃತಿಗಳಲ್ಲಿ ಈ ವರೆಗೆ 'ಮಂತ್ರಮಹತ್ವದಕಂದ'ವು ಶ್ರೀ ಆರ್. ನರಸಿಂಹಾಚಾರ್ ಅವರಿಂದ ಗುರುತಿಸಲ್ಪಟ್ಟು, ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಿಂದ ಎರಡು ಸಲ ಪ್ರಕಟವಾಗಿದ್ದಿತು. ಇದರೊಂದಿಗೆ ಕಲಬುರ್ಗಿ ಅವರು ತಾವೇ ಸಂಪಾದಿಸಿದ ಲಿಂಗಸ್ತೋತ್ರದ ಕಂದ : ೧, ೨, ಮೈಸೂರಿನ ಪ್ರೊ. ಶಿವಲಿಂಗಯ್ಯ ಅವರು ಪ್ರಕಟಿಸಿದ 'ಶೀಲಮಹತ್ವದ ಕಂದ', ಡಾ. ವಿ. ಬಿ. ರಾಜೂರ ಅವರು ಪ್ರಕಟಿಸಿದ 'ನವರತ್ನಮಾಲೆ'ಗಳನ್ನು ಒಳಗೊಂಡು ಈ ಕೃತಿಯ ಪ್ರಥಮ ಆವೃತ್ತಿ 'ಕೊಂಡಗುಳಿ ಕೇಶಿರಾಜನ ಕೃತಿಗಳು' ಹೆಸರಿನಿಂದ ಹುಬ್ಬಳ್ಳಿಯ ಶ್ರೀ ಮೂರುಸಾವಿರಮಠದಿಂದ ೧೯೭೮ರಲ್ಲಿ ಪ್ರಕಟವಾಗಿದ್ದಿತು. ಈಗ ಮತ್ತೆ ಅದಕ್ಕೆ ಶ್ರೀ ಎಸ್. ಶಿವಣ್ಣ ಮತ್ತು ಶ್ರೀ ಬಿ.ಬಿ. ಬಿರಾದಾರ ಅವರು ಪ್ರಕಟಿಸಿದ 'ಅಳಲಾಷ್ಟಕ', ಶ್ರೀ ಎಸ್. ಶಿವಣ್ಣ ಅವರು ಪ್ರಕಟಿಸಿದ 'ಮಂತ್ರಮಹತ್ವದ ಕಂದದ ಅನುಬಂಧ' ಸೇರಿಸಿ ಒಟ್ಟು ಏಳು ಕೃತಿಗಳನ್ನು ಅವುಗಳಲ್ಲಿಯ ಪುನರುಕ್ತ ಭಾಗಗಳನ್ನು ತೆಗೆದು ತ್ರುಟಿತ ಭಾಗಗಳನ್ನು ಬೇರೆ ಪ್ರತಿಗಳಿಂದ ತುಂಬಿ, ೧೯೯೯ರಲ್ಲಿ ಗದುಗಿನ ವೀರಶೈವ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸಲಾಗಿದೆ.

ಇಲ್ಲಿಯ ಪದ್ಯಗಳು ಕೇಶಿರಾಜ ಕೃತವಾಗಿದ್ದರೂ ನವರತ್ನಮಾಲಾ, ಅಳಲಾಷ್ಟಕಗಳನ್ನು ಹೊರತುಪಡಿಸಿದರೆ ಮಿಕ್ಕವುಗಳಿಗೆ ಗ್ರಂಥರೂಪ ಕೊಟ್ಟವರು ತರುವಾಯದ ವೀರಶೈವಸಂಕಲನಕಾರರೆಂದು ತೋರುತ್ತದೆ ಎಂಬುದಕ್ಕೆ ಡಾ. ಕಲಬುರ್ಗಿ ಅವರು ಈ ಆಧಾರಗಳನ್ನು ಕೊಟ್ಟು-೧. ಲಿಂಗಮಹತ್ವದ ಕಂದ ೧ ಮತ್ತು ೨ ರಲ್ಲಿ ೪೦ ಪದ್ಯಗಳು ಪುನರುಕ್ತಗೊಂಡಿವೆ. ಬಹುಶಃ ಇಬ್ಬರೂ ಸ್ವತಂತ್ರವಾಗಿ ಸಂಗ್ರಹ ಮಾಡಿರುವುದರಿಂದಲೇ ಈ ಪದ್ಯಗಳು ಎರಡರಲ್ಲಿಯೂ ಸೇರಿವೆ. ೨. ಮಂತ್ರಮಹತ್ವದ ಕಂದದ ಕೆಲವು ಹಸ್ತಪ್ರತಿಗಳ ಆರಂಭ ಮತ್ತು ಅಂತ್ಯಗಳಲ್ಲಿ ಯಳಮಲೆಯ ಗುರುಶಾಂತದೇವರು ಸೇರಿಸಿದ 'ಷಡಕ್ಷರಿಯ ಕಂದ', ಯಳಮಲೆಯ ಗುರುಶಾಂತದೇವರು ಸೇರಿಸಿದ 'ಮಂತ್ರಮಹತ್ವದ ಕಂದ' ಎಂದೂ, ಲಿಂಗಸ್ತೋತ್ರದ ಕಂದ ೨ ರ ಆದಿಯಲ್ಲಿ 'ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ ಕೇಶಿರಾಜ . . . .' ಎಂದೂ ಹೇಳಲಾಗಿದೆ. ಹೀಗಾಗಿ ಪದ್ಯರಚನೆ ಕೇಶಿರಾಜನದೆಂದೂ ಗ್ರಂಥರಚನೆ ಸಂಪಾಕರದೆಂದೂ ಹೇಳುವುದು ನ್ಯಾಯಸಮ್ಮತವೆನಿಸುತ್ತದೆ ಎಂಬ ನಿರ್ಧಾರಕ್ಕೆ ಬಂದಿದ್ದಾರೆ.

೧. **ಮಂತ್ರಮಹತ್ವದ ಕಂದ** : ಈ ಕೃತಿಯು ೧೧೦ ಪದ್ಯಗಳಿಂದ ಕೂಡಿದೆ. ಕೆಲವು ಹಸ್ತಪ್ರತಿಗಳ ಆರಂಭ ಮತ್ತು ಅಂತ್ಯಗಳಲ್ಲಿ 'ಯಳಮಲೆಯ ಗುರುಶಾಂತದೇವರು ಸೇರಿಸಿದ ಷಡಕ್ಷರಿಯ ಕಂದ', 'ಯಲಮಲೆಯ ಗುರುಶಾಂತದೇವರು ಸೇರಿಸಿದ ಮಂತ್ರಮಹತ್ವದ ಕಂದ'

ಎಂದಿರುವುದರಿಂದ ಕೇಶಿರಾಜನ ಸಾಹಿತ್ಯರಾಶಿಯಿಂದ ಯಳಮಲೆಯ ಗುರುಶಾಂತದೇವರು ಸಂಪಾದನೆ ಮಾಡಿದ್ದಾಗಿ ತಿಳಿದುಬರುತ್ತಿದೆ ಎಂದಿದ್ದಾರೆ ಡಾ. ಕಲಬುರ್ಗಿ ಅವರು. ಷಡಕ್ಷರಮಂತ್ರದ ಮಹತ್ವವನ್ನು ಸಾರುವುದೇ ಈ ಕೃತಿಯ ಪರಮಧ್ಯೇಯವಾಗಿದೆ. ಆದುದರಿಂದ ಇದಕ್ಕೆ 'ಷಡಕ್ಷರಮಂತ್ರ ಮಹತ್ವ ಕಂದ' ಎಂಬ ಹೆಸರೂ ಇದೆ. ಇಲ್ಲಿಯ ನವುರಾದ ಭಾಷೆಯ ಬಳಕೆಯನ್ನು, ಸುಂದರವಾದ ಉಪಮಾನ ಉಪಮೇಯಗಳನ್ನು ಡಾ. ಕಲಬುರ್ಗಿ ಅವರು ಎತ್ತಿ ಹೇಳಿದ್ದಾರೆ.

೨. **ಲಿಂಗಸ್ತೋತ್ರದ ಕಂದ –೧ :** ಇದರಲ್ಲಿ ನೂರು ಕಂದಗಳಿವೆ. ಸಿಕ್ಕಿರುವ ಎರಡು ಹಸ್ತಪ್ರತಿಗಳಲ್ಲಿ ಧಾರವಾಡದ ಪ್ರತಿಯಲ್ಲಿ ೧೨ನೆಯ ಪದ್ಯದ ಉತ್ತರಾರ್ಧದಿಂದ ೨೬ನೆಯ ಪದ್ಯದ ಪೂರ್ವಾರ್ಧದ ವರೆಗಿನ ಭಾಗಗಳನ್ನೊಳಗೊಂಡ ಒಂದು ಗರಿ ಕಳೆದುಹೋಗಿದೆ. ಲಿಪಿಕಾರನ ವಿಸ್ಮೃತಿಯಿಂದಾಗಿ ೮೭ನೆಯ ಪದ್ಯವೂ ಕೈಬಿಟ್ಟು ಹೋಗಿದೆ. ಮೈಸೂರು ಪ್ರತಿಯ ಮೊದಲ ಓಲೆಗಳು ಕಳೆದುಹೋದಕಾರಣ ಪ್ರಾರಂಭದ ೨೯ ಪದ್ಯಗಳು ಅಲ್ಲಿಲ್ಲ. ಆದರೂ ಒಂದರಲ್ಲಿ ಇಲ್ಲದ ಪದ್ಯಗಳನ್ನು ಮತ್ತೊಂದರ ಸಹಾಯದಿಂದ ತುಂಬಿಕೊಳ್ಳಲು ಇಲ್ಲಿ ಸಾಧ್ಯವಾಗಿದೆ. ಆರಾಧ್ಯದೇವರು ಸೋಮನಾಥನ ಸ್ತುತಿಯಿಂದ ಆರಂಭಗೊಂಡಿದೆ. ಮಂತ್ರಮಹತ್ವದ ಕಂದ ಕೃತಿಗೆ ಇರುವ ಸಮಾಪ್ತಿ ಪದ್ಯವನ್ನೇ ಇಲ್ಲಿಯೂ ಬಳಸಲಾಗಿದೆ. ಲಿಂಗಾರ್ಚನೆ, ಲಿಂಗಸ್ತುತಿ, ಲಿಂಗಧ್ಯಾನ, ಲಿಂಗಾನುಸಂಧಾನ, ಲಿಂಗಾನುಭವ, ಲಿಂಗಭಕ್ತಿ ಇವೆಲ್ಲವುಗಳನ್ನು ಕುರಿತಂತೆ ಈ ಕೃತಿಯು ಎಥೇಷ್ಟ ವಿವರಗಳನ್ನು ಒದಗಿಸುತ್ತದೆ. ಇಲ್ಲಿಯೂ ಕೂಡಾ ಸುಂದರವಾದ ಅಲಂಕಾರಗಳನ್ನು ಬಳಸಿ ಕಾವ್ಯಸೊಗಸಿಗೆ ಕಾರಣವಾಗಿದ್ದಾನೆ ಎಂದು ಕೃತಿಯ ಮಹತ್ವವನ್ನು ಡಾ. ಕಲಬುರ್ಗಿ ಎತ್ತಿ ಹೇಳಿದ್ದಾರೆ.

೩. **ಲಿಂಗಸ್ತೋತ್ರದ ಕಂದ–೨ :** ಇದರಲ್ಲಿ ೧೧೮ ಕಂದ ಪದ್ಯಗಳಿವೆ. ಹೆಸರೇ ಸೂಚಿಸುವಂತೆ ಇದೂ ಲಿಂಗಮಹತ್ವವನ್ನು ಹೇಳುತ್ತಿದೆ. ಲಿಂಗಸ್ತೋತ್ರದ ಕಂದ ೧ ರಲ್ಲಿಯ ೪೦ ಪದ್ಯಗಳು ಇಲ್ಲಿದ್ದು ೭೮ ಹೆಚ್ಚಿನ ಪದ್ಯಗಳನ್ನು ಇದು ಹೊಂದಿದೆ. ಈ ಕೃತಿಯ ಒಂದೇ ಪ್ರತಿ ಲಭಿಸಿದ್ದು ಇದರ ಎಲ್ಲ ಗರಿಗಳ ಒಂದು ಮೂಲೆಯನ್ನು ಹುಳು ತಿಂದು, ಸಂಪಾದಕರಿಗೆ ಸವಾಲನ್ನು ಒಡ್ಡುವಹಾಗೆ ಬಹಳಷ್ಟು ಪದ್ಯಗಳು ಪೂರ್ಣಸ್ಥಿತಿಯಲ್ಲಿ ಸಿಗುವುದಿಲ್ಲ. ಆದರೂ ಡಾ. ಕಲಬುರ್ಗಿ ಅವರು 'ಲಿಂಗಸ್ತೋತ್ರದ ಕಂದ ೧' ರಿಂದ ಹಲವಾರು ಪದ್ಯಗಳನ್ನು ಪೂರ್ಣಗೊಳಿಸಲು ಪ್ರಯತ್ನಿಸಿರುವರಾದರೂ ಬಹಳಷ್ಟು ಕಡೆ ಖಾಲಿಬಿಟ್ಟಿರುವ ಸ್ಥಳಗಳನ್ನು ಊಹೆಯಿಂದಲಾದರೂ ತುಂಬಬಹುದಿತ್ತು. ಉದಾ : ೮೦ನೆಯ ಪದ್ಯದಲ್ಲಿಯ 'ನನೆಯಂ ಪಿಡಿದಿಹ . . . ದು ತನಿವಣ್ಣಾಗಲ್ಕೆ' ಎಂಬಲ್ಲಿಯ ತೃಟಿತಭಾಗವನ್ನು 'ತೊಟ್ಟ' ಎಂದು ತುಂಬಬಹುದಿತ್ತು. ಹಾಗೆಯೇ ೭೪ನೆಯ ಪದ್ಯದಲ್ಲಿಯ 'ನಿಮ್ಮಡಿಗೆರಗುಗೆ ಸಲೆ ನಿಮ್ಮಂ ಪೂಜಿಸುಗೆ ಎನ್ನ ನಿಜ ಕರಯುಗಳಂ ನಿಮ್ಮಂ ಪಾಡುಗೆ . . . ಗಿ' ಎಂಬಲ್ಲಿಯ ತೃಟಿತಭಾಗವನ್ನು 'ನಾಲ' ಎಂದು ತುಂಬಬಹುದಿತ್ತು.

೪. **ಕೇಶಿರಾಜ ಡಣಾಯಕರ ಕಂದ :** ೨೧೪ ಕಂದ ಪದ್ಯಗಳ ಓಲೆಕಟ್ಟಿನಿಂದ, ಅಪ್ರಕಟಿತ ೧೧೦ ಪದ್ಯಗಳನ್ನಾಯ್ದು, ಇವುಗಳಲ್ಲಿ ಐದು ಪದ್ಯಗಳನ್ನು ಮಂತ್ರಮಹತ್ವಕ್ಕೆ ಅನುಬಂಧವಾಗಿ ಜೋಡಿಸಿ, ಮಿಕ್ಕ ೧೦೫ ಪದ್ಯಗಳನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಇವು 'ಲಿಂಗಸ್ತೋತ್ರದ ಕಂದ' ಧೋರಣೆಯ ಪದ್ಯಗಳಾಗಿದ್ದು ಭಕ್ತನ ಆರ್ತನಾದ, ಲಿಂಗದ ಮಹತ್ವ ಈ ಕೃತಿಯ ಸ್ಥಾಯಿಯಾಗಿದೆ ಎಂದಿದ್ದಾರೆ.

೫. **ಶೀಲಮಹತ್ವದ ಕಂದ** : ಒಂದು ನೂರಾ ಒಂದು ಕಂದಪದ್ಯಗಳ ವೀರಶೈವ ಆಚಾರಕ್ಕೆ ಸಂಬಂಧಪಟ್ಟ ೬೪ ಶೀಲಗಳನ್ನು ಹೇಳುವ ಅಪರೂಪದ ಕೃತಿಯಿದು. ಇದರ ಪ್ರಾರಂಭದಲ್ಲಿ "ಶ್ರೀಗುರು ಬಸವಲಿಂಗಾಯನಮಃ । ಕೇಶಿರಾಜದಣಾಯಕರು ನಿರೂಪಿಸಿದ ಕಂದ' ಎಂದೂ ಅಂತ್ಯದಲ್ಲಿ 'ಶ್ರೀ ಕೇಶಿರಾಜದಣಾಯಕರು ನಿರೂಪಿಸಿ ಕಂದ ಸಮಾಪ್ತ ಮಂಗಳಮಹಾಶ್ರೀ ಶ್ರೀ ಶ್ರೀ' ಎಂದಿದೆ. ಇಲ್ಲಿಯ ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಕಾಯಕನಿಷ್ಠೆ ಮೊದಲಾದ ಮೌಲಿಕ ವಿಚಾರಗಳು ಬಸವಪೂರ್ವದ 'ಶರಣಸಿದ್ಧಾಂತ'ದತ್ತ ನಮ್ಮ ಗಮನ ಸೆಳೆಯುತ್ತದೆ ಎಂಬ ವಿಚಾರವನ್ನು ಡಾ. ಕಲಬುರ್ಗಿ ಅವರು ಇಲ್ಲಿ ಎತ್ತಿಹೇಳಿದ್ದಾರೆ.

೬. **ಅಳಲಾಷ್ಟಕ** : ಎಂಟು ಪದ್ಯಗಳನ್ನು ಒಳಗೊಂಡ ಅಷ್ಟಕ. ಇದರಲ್ಲಿಯ ೧, ೫ನೆಯ ಪದ್ಯಗಳು 'ಕೇಶಿರಾಜ ಡಣಾಯಕರ ಕಂದ'ದ ೯೬, ೯೭ನೆಯ ಪದ್ಯಗಳಾದುದರಿಂದ ಇಡೀ ಅಳಲಾಷ್ಟಕ ಆತನದೆಂದು ತಿಳಿಯಲಾಗಿದೆ. ಆತನು ದಿನನಿತ್ಯ ಶಿವಾರ್ಚನೆ ಮಾಡುವಾಗ ಎಂಟು ಪದ್ಯಗಳನ್ನು ಆಶುಕವಿತ್ವದಿಂದ ಹಾಡುತ್ತ ಅರ್ಚನೆ ಮಾಡುತ್ತಿದ್ದನೆಂದು ಭಾವಿಸಲಾಗಿದೆ. ಇದರ ಮುದ್ರಿಕೆ 'ಪಂಪಾರಮಣ' ಎಂದಿರುವುದು ಚಿಂತನೀಯ ಎಂದಿದ್ದಾರೆ.

೭. **ನವರತ್ನಮಾಲಾ** : ಕೇಶಿರಾಜನು 'ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ' ಹೇಳುತ್ತಿದ್ದನೆಂದು ಹರಿಹರ ತಿಳಿಸುತ್ತ ಈತನ ಲಘುಸಾಹಿತ್ಯ ಪ್ರಕಾರವನ್ನು ಸೂಚಿಸುತ್ತಾನೆ. ಈ ವರ್ಗಕ್ಕೆ ಸಂಬಂಧಪಟ್ಟ ೯ ಪದ್ಯಗಳ 'ನವರತ್ನಮಾಲಾ' ಹೆಸರಿನ ಕೃತಿಯೊಂದು ಇತ್ತೀಚೆ ಲಭಿಸಿದೆ. ದೊರೆತಿರುವ ಹಸ್ತಪ್ರತಿಕೊನೆಯಲ್ಲಿ 'ಇತಿ ಕೇಶಿರಾಜದಂಡನಾಥ ಚೂಡಾಮಣಿ ನಿರೂಪಿಸಿದ ನವರತ್ನಮಾಲೆಗೆ ಸಂತೋಷಮಸ್ತು' ಎಂದಿರುವುದರಿಂದ ಇದು ಕೇಶಿರಾಜನ ಕೃತಿಯೆಂಬುದನ್ನು ಡಾ. ಕಲಬುರ್ಗಿ ಅವರು ಸ್ಪಷ್ಟಪಡಿಸಿದ್ದಾರೆ.

ನವರತ್ನಮಾಲೆ, ಅಳಲಾಷ್ಟಕಗಳನ್ನು ಬಿಟ್ಟರೆ ಮಿಕ್ಕವೆಲ್ಲ ೧೦೦, ೧೦೮, ೧೧೦ ಕಂದಪದ್ಯಗಳ ಕೃತಿಗಳಾದುದರಿಂದ ಕೇಶಿರಾಜ 'ಕನ್ನಡ ಶತಕ ಸಾಹಿತ್ಯದ ಆದಿಕವಿ'ಯೆನಿಸುತ್ತಾನೆ ಎಂಬುದು ಡಾ. ಕಲಬುರ್ಗಿ ಅವರ ಅಭಿಪ್ರಾಯ. ಹರಿಹರ-ಶಾಂತಲಿಂಗದೇಶಿಕರು ಹೇಳುವ ಈತನ ಮಿಕ್ಕ ಸಾಹಿತ್ಯಪ್ರಕಾರಗಳ ಶೋಧ ನಡೆಯಬೇಕಾಗಿದೆ ಎಂಬ ಸೂಚನೆಯನ್ನೂ ಅವರು ಇಲ್ಲಿ ಇತ್ತಿದ್ದಾರೆ. ಇನ್ನು ಈ ಕೃತಿಯ ಸಂಪಾದನೆ ಕುರಿತು "ಹಸ್ತಪ್ರತಿಗಳ ಸಾಮಗ್ರಿ ತುಂಬ ವಿರಳವಾಗಿರುವುದರಿಂದ ಈ ಕೃತಿಗಳ ಪರಿಷ್ಕರಣ ತುಂಬ ತೊಂದರೆದಾಯಕವೆನಿಸಿತು. 'ಲಿಂಗಸ್ತೋತ್ರದ ಕಂದ-೨' ಮತ್ತು 'ಶೀಲಮಹತ್ವದಕಂದ' ಗಳಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ" ಎಂಬ ಮಾತು ಪಠ್ಯವನ್ನು ಒಳಹೊಕ್ಕು ನೋಡಿದಾಗ ಮನವರಿಕೆಯಾಗುತ್ತದೆ. ಒಟ್ಟಾರೆ ಒಬ್ಬ ಪ್ರಾಚೀನಕವಿಯ ಕಾವ್ಯಗಳನ್ನು ಗುರುತಿಸಿ, ಶ್ರಮವಹಿಸಿ ಸರಿಯಾದ ಪಾಠಾಂತರಗಳನ್ನು ಗುರುತಿಸಿ ಕೊಟ್ಟಿರುವುದು ಡಾ. ಕಲಬುರ್ಗಿ ಅವರ ಸಂಪಾದನೆಯ ಸಾಮರ್ಥ್ಯಕ್ಕೆ ಒಳ್ಳೆಯ ನಿದರ್ಶನವೆನ್ನುವಂತಿವೆ.

ಪ್ರಾರಂಭದ ಪ್ರಸ್ತಾವನೆಯಲ್ಲಿ ಚಾಲುಕ್ಯರ ಸಮಯದ ಆದ್ಯರನ್ನು ಕುರಿತು "ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 'ಬಸವಪೂರ್ವಯುಗ'ವೊಂದು ಸಂಶೋಧಕರಿಗೆ ಅನೇಕ ಆಹ್ವಾನಗಳನ್ನೊಡ್ಡಿನಿಂತ ಅವಧಿಯಾಗಿದೆ. ವೀರಶೈವದ ಆಚಾರ, ವಿಚಾರ, ವಾಙ್ಮಯಗಳು ಆಕಾರ ಪಡೆಯುತ್ತಲಿದ್ದ ಕಾಲವದು" ಎಂದು ಹೇಳಿ ಆ ಕಾಲದಲ್ಲಿ ಬಾಳಿಹೋದ ಆದ್ಯರನ್ನು ಪ್ರಸ್ತಾಪಿಸಿ ಶರಣರಿಗೂ ಆದ್ಯರಿಗೂ ಇರುವ ಸಂಬಂಧವನ್ನು ಚರ್ಚಿಸಿದ್ದಾರೆ. ಚಾಲುಕ್ಯರ ಸಮಯದ ಆದ್ಯರ ಸಮೂಹದಲ್ಲಿ ಅಗ್ರವ್ಯಕ್ತಿಯಾಗಿ,

ಬಸವಾದಿ ಪ್ರಮಥರ ಕಾಲದ ಚಲನವಲನಗಳಿಗೆ ಬೀಜವಾಗಿ ತೋರುತ್ತಿದ್ದ ಕೇಶಿರಾಜ ವೀರಶೈವ ಕೃತಿಗಳಲ್ಲಿ ಶಾಸನಗಳಲ್ಲಿ ಗೋಚರವಾಗಿರುವುದನ್ನು ಆಧಾರ ಸಹಿತ ವಿವೇಚಿಸಿದ್ದಾರೆ. ಗ್ರಂಥದ ಕೊನೆಯಲ್ಲಿ ಕೇಶಿರಾಜನಿಗೆ ಸಂಬಂಧಿಸಿದ ಮೂರೂ ಶಾಸನಗಳನ್ನು ಕೊಟ್ಟಿರುವುದು ಅಭ್ಯಾಸಿಗಳಿಗೆ ಅನುಕೂಲವಾಗಿದೆ. ಗ್ರಂಥದ ಕೊನೆಗೆ ಕೊಟ್ಟಿರುವ ಕಠಿಣಪದಕೋಶ ವಿಸ್ತೃತ ವಿವರಣೆಯನ್ನೊಳಗೊಂಡು ಅಭ್ಯಾಸಿಗಳಿಗೆ ಹೆಚ್ಚಿನ ಮಾಹಿತಿಯನ್ನು ಕೊಡುತ್ತಿದೆ.

❖❖

*

ಪರಿವಿಡಿ

ಮಲ್ಲಿನಾಥಪುರಾಣ ಸಂಗ್ರಹ

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

೧೯೭೪

ರವಿಚಂದ್ರ ಪ್ರಕಾಶನ, ಧಾರವಾಡ

ವಿದ್ಯಾಗುರು

ಡಾ. ಎಚ್. ಟಿ. ಸಾಸನೂರ

ಅವರಿಗೆ

(ಅರವತ್ತು ತುಂಬಿದ ಅಮೃತ ಗಳಿಗೆಯ ನೆನಪು)

*

ನನ್ನ ನುಡಿ

'ಕೃತಿಸಂಕ್ಷೇಪನ' ಕಾರ್ಯ ಪ್ರಾಚೀನಕಾಲದಿಂದಲೂ ನಮ್ಮಲ್ಲಿ ನಡೆದುಬಂದಿದೆ. ಕವಿ ಅಸಗನ ೧೬ ಸಂಧಿಗಳ ಸಂಸ್ಕೃತ 'ಶಾಂತೀಶ್ವರಪುರಾಣ' ೧೨ ಸಂಧಿಗಳಲ್ಲಿ 'ಲಘುಶಾಂತೀಶ್ವರ ಪುರಾಣ'ವಾಗಿ ಲಭಿಸುತ್ತದೆ. ಕನ್ನಡ ಕುಮಾರವ್ಯಾಸಭಾರತ, ತೊರವೆ ರಾಮಾಯಣ, ಭಾಗವತಗಳಿಂದ ರೂಪಿತವಾದ ಸಂಕ್ಷೇಪಭಾರತ, ಸಂಕ್ಷೇಪರಾಮಾಯಣ, ಸಂಕ್ಷೇಪಭಾಗವತದ ಹಸ್ತಪ್ರತಿಗಳು ನೂರಾರು ಸಿಗುತ್ತವೆ. ಆಧುನಿಕ ಯುಗದಲ್ಲಂತೂ ಉತ್ತಮೋತ್ತಮ ಪ್ರಾಚೀನ ಗ್ರಂಥಗಳಿಂದ 'ಸಂಗ್ರಹ'ಗಳನ್ನು ಸಿದ್ಧಗೊಳಿಸುವುದು ನಡೆದೇ ಇದೆ. ಇವುಗಳಲ್ಲಿ ಆದಿಪುರಾಣ ಸಂಗ್ರಹ, ಗದಾಯುದ್ಧ ಸಂಗ್ರಹ, ಪಂಪರಾಮಾಯಣ ಸಂಗ್ರಹ, ಹರಿಶ್ಚಂದ್ರ ಕಾವ್ಯಸಂಗ್ರಹ, ಸಿದ್ಧರಾಮಪುರಾಣ ಸಂಗ್ರಹ, ಪ್ರಭುಲಿಂಗಲೀಲೆ ಸಂಗ್ರಹ ಸುಪ್ರಸಿದ್ಧವಾದುವು. ಮಲ್ಲಿನಾಥಪುರಾಣವನ್ನು ಸಂಗ್ರಹಿಸುವಾಗ ಈ ಕೃತಿಗಳು ನನ್ನ ಮನಸ್ಸಿನಲ್ಲಿವೆ.

'ಮಲ್ಲಿನಾಥಪುರಾಣ ಸಂಗ್ರಹ'ದ ಮೂಲಕ ನಾನು ಗ್ರಂಥಸಂಪಾದನ ಕ್ಷೇತ್ರವನ್ನು ಪ್ರಥಮವಾಗಿ ಪ್ರವೇಶಿಸುತ್ತಿದ್ದೇನೆ. ಪಠ್ಯಕ್ಕೆ ಸಂಬಂಧಪಟ್ಟ ಗ್ರಂಥಸಂಪಾದನ ಮತ್ತು ಗ್ರಂಥಸಂಕ್ಷೇಪನಗಳ ಜೊತೆಗೆ ಪ್ರಸ್ತಾವನೆ ಮತ್ತು ಟಿಪ್ಪಣಿಗಳನ್ನು ಬರೆವ ಜವಾಬ್ದಾರಿಯನ್ನೂ ನಿರ್ವಹಿಸಿದ ಪ್ರಯತ್ನ ಇಲ್ಲಿದೆ.

ವಸ್ತು, ಕವಿ ಇವುಗಳ ದಾಂಪತ್ಯದ ಫಲ ಕೃತಿ. ಒಂದು ಕೃತಿಯನ್ನು ಸಂಗ್ರಹಗೊಳಿಸುವಲ್ಲಿ ವಸ್ತುವಿನ ಸ್ಥಿತಿಗೂ ಕವಿಯ ಪ್ರತಿಭೆಗೂ ಅನ್ಯಾಯವಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಪರಿಭಾಷೆಯಲ್ಲಿ ಮಾತನಾಡುವುದಾದರೆ ಮಲ್ಲಿನಾಥಪುರಾಣವು ಪುರಾಣವಲ್ಲ, ಪುರಾಣಕಾವ್ಯ. ಹೀಗಾಗಿ ಪುರಾಣಕ್ಕೂ ಧಕ್ಕೆಯಾಗದಂತೆ ಕಾವ್ಯಕ್ಕೂ ಧಕ್ಕೆಯಾಗದಂತೆ ಸಂಗ್ರಹಿಸಲು ಪ್ರಯತ್ನಿಸಿರುವೆನಾದರೂ ಕಾವ್ಯದ ಏಕಮುಖತೆಯ ದೃಷ್ಟಿಯಿಂದ ಕೆಲವು ಮುತ್ತಿನಂಥ ಪದ್ಯಗಳನ್ನು ಕೈಬಿಡಬೇಕಾಯಿತು. ಸಿಂಪಿಯಂಥ ಪದ್ಯಗಳನ್ನು ಸ್ವೀಕರಿಸಬೇಕಾಯಿತು, ಅನಿವಾರ್ಯ. ಪದ್ಯ ಸಂಗ್ರಹಕ್ಕಿಂತ ಗದ್ಯ ಸಂಗ್ರಹದಲ್ಲಿ ಹೆಚ್ಚು ಸ್ವಾತಂತ್ರ್ಯ ವಹಿಸಿದ್ದೇನೆ. ಒಂದೇ ಗದ್ಯಭಾಗವನ್ನು ಅಲ್ಲಿಯ ವಾಕ್ಯಗಳಿಂದಲೇ ಸಂಗ್ರಹಿಸಿದ್ದೇನೆ. ಕೆಲವು ಸಲ ಒಂದು ಭಾಗದ ಗದ್ಯವನ್ನು ಮುಂದಿನ ಭಾಗದ ಗದ್ಯದೊಂದಿಗೆ ಬೆಸೆದಿದ್ದೇನೆ. ಕಥೆಗೆ ಸಂಬಂಧ ಕಲ್ಪಿಸಲು ಅನಿವಾರ್ಯವೆನಿಸಿದಾಗ ಹೊಸದೇನನ್ನಾದರೂ ಸೇರಿಸಿದಲ್ಲಿ ಚೌಕಕಂಸನ್ನು ಉಪಯೋಗಿಸಿದ್ದೇನೆ.

ಸಂಗ್ರಹಕಾರ್ಯದಷ್ಟೇ ಶ್ರಮವಹಿಸಬೇಕಾಯಿತು ಇಟ್ಟುಕೊಂಡ ಭಾಗದ ಪಾಠನಿರ್ಣಯದಲ್ಲಿ. ಮಲ್ಲಿನಾಥಪುರಾಣ, ಈವರೆಗೆ ವಿದ್ವಾಂಸರ ನಿಖರವ್ಯಾಸಂಗಕ್ಕೆ ಒಳಗಾಗಿಲ್ಲ; ಹಸ್ತಪ್ರತಿಗಳೂ ಹೆಚ್ಚು ಸಿಗುವುದಿಲ್ಲ. ಹೀಗಾಗಿ ಇದರ ಪಾಠ, ವಿವೇಚನೆಯ ವಲಯದಿಂದ ದೂರ ಉಳಿಯುತ್ತ ಬಂದಿದೆ. ಈ ಪ್ರಸಂಗದಲ್ಲಿ ನಾನು ಆಧಾರವಾಗಿ ಹಿಡಿದುದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ಜೈನವಿಭಾಗ ಪ್ರಕಟಿಸಿದ 'ಮಲ್ಲಿನಾಥಪುರಾಣ'ವನ್ನು. ಯೋಗ್ಯವೆನಿಸಿದಲ್ಲಿ ಮೇಲಿನ ಪಾಠ ಬಿಟ್ಟು ಅಡಿಪಾಠಗಳನ್ನು ಸ್ವೀಕರಿಸಿದ್ದೇನೆ. ಆದರೆ ಈಗ ಯಾವ ಸಂಕೇತವನ್ನೂ ಬಳಸಿಲ್ಲ. ಅಡಿಪಾಠವಿಲ್ಲದ ಮತ್ತು ಅಡಿಪಾಠವಿದ್ದ ಮೇಲಿನ ಪಾಠಗಳು ಅಸಮ್ಮತವೆನಿಸಿದಾಗ ಪರಿಷ್ಕರಣವನ್ನೋ ಊಹಾತ್ಮಕ ಪರಿಷ್ಕರಣವನ್ನೋ ಮಾಡಿ ಅದಕ್ಕೆ ಚೌಕಕಂಸ ಬಳಸಿದ್ದೇನೆ. ಉದಾ: ಜಿನಪತಿ ಸಭೆಯೊಳ್ ಪೂಜ್ಯಂ > (ಜ)ನಪತಿ ಸಭೆಯೊಳ್ ಪೂಜ್ಯಂ, ಸತಿ ಲಾವಣ್ಯರಸ ಪ್ರವಾಹದೊಳ್ ತೇಂಕುವಿನಂ >ಸ(ಲೆ) ಲಾವಣ್ಯರಸ ಪ್ರವಾಹದೊಳ್ ತೇಂಕುವಿನಂ. ಹೀಗೆ ಪರಿಷ್ಕರಿಸುವಾಗ ನನ್ನ ಅನ್ಯಥಾಜ್ಞಾನದಿಂದಾಗಿ ಒಂದೆರಡು ಹೊಸ ತಪ್ಪುಗಳು ಉದ್ಭವಿಸಿದವು. ಅವುಗಳನ್ನು ಒಪ್ಪೋಲೆಯಲ್ಲಿ ಸೂಚಿಸಿದ್ದೇನೆ, ಟಿಪ್ಪಣಿಯಲ್ಲಿ ಚರ್ಚಿಸಿದ್ದೇನೆ.

ಹೀಗೆ ಸಂಗ್ರಹ ಪ್ರಸಂಗದಲ್ಲಿ ಒಮ್ಮೆ, ಪರಿಷ್ಕರಣ ಪ್ರಸಂಗದಲ್ಲಿ ಒಮ್ಮೆ ಚೌಕ ಕಂಸ ಬಳಸಿದ್ದೇನೆ. ಒಂದರಿಂದ ಇನ್ನೊಂದನ್ನು ಬೇರ್ಪಡಿಸಲು ಹೆಚ್ಚಿನದಾಗಿ ಚುಕ್ಕೆ ಚಿಹ್ನವನ್ನು ಬಳಸಬಹುದಿತ್ತು. ತಾಂತ್ರಿಕ ತೊಂದರೆಯಿಂದಾಗಿ ಹಾಗೆ ಮಾಡುವುದು ಸಾಧ್ಯವಾಗಲಿಲ್ಲ. ಎರಡನೆಯದಾಗಿ ಇದ್ದ ಭಿನ್ನಪಾಠಗಳನ್ನು ಮತ್ತು ಪರಿಷ್ಕರಣ ಪ್ರಸಂಗದಲ್ಲಿ ಕೈಬಿಟ್ಟ ಪಾಠಗಳನ್ನು ಅಡಿಯಲ್ಲಿ ಕೊಟ್ಟಿಲ್ಲ, ಇದು ಸಂಗ್ರಹವೆಂಬ ಕಾರಣದಿಂದ, ಮುಖ್ಯವೆನಿಸಿದುವನ್ನು ಟಿಪ್ಪಣಿಯಲ್ಲಿ ವಿವೇಚಿಸಿದ್ದೇನೆ.

ಕನ್ನಡದ ಪ್ರಥಮ ದರ್ಜೆಯ ಸಂಗ್ರಹಗಳಲ್ಲಿ ಕೆಲವು ಪ್ರಸ್ತಾವನೆಯ ಕೊರತೆಯಿಂದ, ಕೆಲವು ಅನುಬಂಧದ ಕೊರತೆಯಿಂದ ಬಳಲುತ್ತಿರುವ ಸಂಗತಿ ನನಗೆ ನೋವನ್ನುಂಟುಮಾಡಿದ್ದಿತು. ಈ ನೋವು, ನನ್ನಿಂದ ಈ ಸಂಗ್ರಹಕ್ಕೆ ಎರಡನ್ನೂ ಬರೆಯಲು ಹಚ್ಚಿತು. ಪರಸ್ಪರ ಪೂರಕವೆನಿಸುವ ಯುಗಪರಿಚಯ, ಕವಿಪರಿಚಯ, ಕೃತಿಪರಿಚಯ ಎಂಬ ಮೂರು ಕ್ಷೇತ್ರಗಳ ವಿವೇಚನೆ ಯನ್ನೊಳಗೊಂಡಿದೆ, ಪ್ರಸ್ತಾವನೆ. ಕವಿ ವಿಷಯವಾಗಿ, ಕೃತಿ ವಿಷಯವಾಗಿ ಕೆಲವು ಸಂಗತಿಗಳು ಇಲ್ಲಿ ಪ್ರಥಮಬಾರಿ ಬೆಳಕಿಗೆ ಬಂದಿದ್ದರೆ ನನ್ನ ಶ್ರಮ ಸಾರ್ಥಕವೆಂದು ಬಗೆಯುತ್ತೇನೆ.

ಒಂದು ಕಾವ್ಯಾಧ್ಯಯನದ ಒರೆಗಲ್ಲು ಟಿಪ್ಪಣಿ. ಯೋಗ್ಯಪಾಠವನ್ನು ನಿರ್ಣಯಿಸುವ, ನಿರ್ಣಯಿಸಿದ ಪಾಠವನ್ನು ಅರ್ಥೈಸುವ, ಅರ್ಥದ ಹಿಂದಿನ ಬೆಳಕನ್ನು ಬೆಳಗಿಸುವ ಅಗ್ನಿಪರೀಕ್ಷೆ ಇಲ್ಲಿ ನಡೆಯುತ್ತದೆ. ಕಷ್ಟಪಟ್ಟು ಈ ಕಾರ್ಯ ಮಾಡಿರುವೆನಾದರೂ ಕೆಲವು ಪ್ರಸಂಗಗಳಲ್ಲಿ ಸೋತುನಿಂತಿದ್ದೇನೆ. ಇನ್ನು ಕೆಲವು ಪ್ರಸಂಗಗಳಲ್ಲಿ ಅನ್ಯಥಾಜ್ಞಾನದಿಂದ ತಪ್ಪು ಅನ್ವಯ, ಅರ್ಥ ಮಾಡಿರಲೂ ಸಾಧ್ಯವಿದೆ. ವಿದ್ವಾಂಸರು ಅವುಗಳನ್ನು ಸೂಚಿಸಿ, ಚರ್ಚಿಸಿ ಉಪಕರಿಸಬೇಕು. ಮೈತುಂಬ ಕಣ್ಣಾಗಿ ನೋಡಿದರೂ ಒಪ್ಪೋಲೆಯ ಶನಿ ಬೆನ್ನುಬಿಡಲಿಲ್ಲ, ದಯವಿಟ್ಟು ತಿದ್ದಿಕೊಂಡೇ ಓದಬೇಕು.

ಮಲ್ಲಿನಾಥಪುರಾಣದ ಸಂಗ್ರಹಕಾರ್ಯದಲ್ಲಿ ನಾನು ಹಿಡಿದ ದಾರಿ, ನಡೆದ ರೀತಿಯಿದು. ಈ ಪಥದಲ್ಲಿ ಪ್ರಯಾಣಿಸಲು ನನಗೆ ಪ್ರೇರಣೆ, ಪೋಷಣೆ ನೀಡಿದವರು ನನ್ನ ವಿದ್ಯಾಗುರುಗಳಾದ ಡಾ. ಆರ್. ಸಿ. ಹಿರೇಮಠ ಮತ್ತು ಡಾ. ಎಂ. ಎಸ್. ಸುಂಕಾಪುರ ಅವರು. ನಾನು ಕೊಟ್ಟ

ತೊಂದರೆ, ಕಾಟ, ಹಿಂಸೆಗಳಿಂದ ಬೇಸರಪಟ್ಟುಕೊಳ್ಳದೆ ಟಿಪ್ಪಣಿ ಬರೆಯುವಲ್ಲಿ ಬೆಳಕಾಗಿ ನಿಂತವರು ನನ್ನ ಇನ್ನೊಬ್ಬ ವಿದ್ಯಾಗುರುಗಳಾದ ಪ್ರೊ. ಬಿ. ಟಿ. ಸಾಸನೂರ ಅವರು. ಇವರೆಲ್ಲರಿಗೂ ನನ್ನ ವಂದನೆಗಳು ಸಲ್ಲಬೇಕು.

ಈ ಪುಸ್ತಕ ಬರವಣಿಗೆಯ ಎಲ್ಲ ಕಾರ್ಯವನ್ನು ನನ್ನ ಬಲಗೈಯಾಗಿ ಪೂರೈಸಿದವರು ನನ್ನ ವಿದ್ಯಾರ್ಥಿಯಾಗಿದ್ದ ಶ್ರೀ ಬಿ. ಆರ್. ಹಿರೇಮಠ; ಇದರ ಪ್ರಕಾಶನದ ಹೊಣೆ ಹೊತ್ತವರು ಮನೋಹರ ಮುದ್ರಣಾಲಯದ ಶ್ರೀ ಸೋಮಣ್ಣ ಆಕಳವಾಡಿ. ಇವರ ಸಹಕಾರವನ್ನು ಸಂತೋಷದಿಂದ ನೆನೆಯುತ್ತೇನೆ.

ಜೂನ್ : ೧೯೭೪ —ಎಂ. ಎಂ. ಕಲಬುರ್ಗಿ

❖❖

*

ಪ್ರಸ್ತಾವನೆ

೧. ಯುಗಪರಿಚಯ :

ಕಾವ್ಯ ಕವಿಯ ಸೃಷ್ಟಿಯಾದರೆ ಕವಿ ಯುಗದ ಸೃಷ್ಟಿಯಾಗಿರುವುದರಿಂದ ಒಂದು ಕಾವ್ಯದ ಅಭ್ಯಾಸದಲ್ಲಿ ಕವಿಯ ಮನಸ್ಥಿತಿ, ಯುಗದ ಪರಿಸ್ಥಿತಿಗಳ ಅಭ್ಯಾಸ ಪ್ರಯೋಜನಕಾರಿಯೆನಿಸುತ್ತದೆ. ಕಾವ್ಯದಲ್ಲಿ ತನ್ನನ್ನು ತಟ್ಟನೆ ಒಳಪಡಿಸಿಕೊಳ್ಳುವ, ಯುಗದ ಸಂವೇದನೆಗಳಿಗೆ ತಕ್ಷಣ ಸ್ಪಂದಿಸುವ ಕವಿಗಳ ಕೃತಿವ್ಯಾಸಂಗದಲ್ಲಿಯಂತೂ ಇಂಥ ಅಧ್ಯಯನ ತೀರ ಅವಶ್ಯಕವಾದುದು.

ನಾಗಚಂದ್ರ ಕನ್ನಡದ ಒಬ್ಬ ಸುಪ್ರಸಿದ್ಧ ಕವಿ. ತಾನು ಯುಗದ ಘಟಕವಾಗಿ, ಕಾವ್ಯವನ್ನು ತನ್ನ ಘಟಕವನ್ನಾಗಿಸಿ ಬೆಳಗಿದ ಕವಿ. ಹೀಗಾಗಿ ಇವನ ಕೃತಿವ್ಯಾಸಂಗಕ್ಕೆ ಒಂದು ಆವರಣವನ್ನು ಕಲ್ಪಿಸುವ ಯುಗದ ಪರಿಸ್ಥಿತಿ, ಕವಿಯ ಮನಸ್ಥಿತಿಗಳನ್ನು ಇಲ್ಲಿ ಅವಲೋಕಿಸಬೇಕಾಗುತ್ತದೆ.

ಯುಗದ ಪರಿಸ್ಥಿತಿ : ಪ್ರಾಚೀನ ಕರ್ನಾಟಕದಲ್ಲಿ ಸಾಮಾನ್ಯವಾಗಿ ಸಾಮ್ರಾಜ್ಯದ ಒಲವನ್ನವಲಂಬಿಸಿ ಧರ್ಮ, ಧರ್ಮದ ನಿಲವನ್ನವಲಂಬಿಸಿ ಸಾಹಿತ್ಯ ಸಾಗಿಬಂದಿವೆ. ಒಬ್ಬ ಒಳ್ಳೆಯ ಕವಿಯ ನಿರ್ಮಾಣಕ್ಕೆ ವಾತಾವರಣವನ್ನು ರೂಪಿಸುವ ಈ ಸಾಮ್ರಾಜ್ಯ, ಧರ್ಮ, ಸಾಹಿತ್ಯಗಳ ಸ್ಥಿತಿಗತಿ ನಾಗಚಂದ್ರನ ಕಾಲಕ್ಕೆ ಹೀಗಿದ್ದಿತು:

ಉತ್ತರ ಭಾರತದಿಂದ ಶ್ರವಣಬೆಳ್ಗೊಳಕ್ಕೆ ಆಗಮಿಸಿದ ಜೈನಮತವನ್ನು ಪ್ರಥಮವಾಗಿ ರಾಜಮರ್ಯಾದೆಯಿಂದ ಸ್ವಾಗತಿಸಿ, ನಿಸ್ಸೀಮಭಕ್ತಿಯಿಂದ ಪೋಷಿಸಿಕೊಂಡು ಬಂದವರು, ಗಂಗದೊರೆಗಳು. "ನುಡಿದುದನಾರೊಳಂ ನುಡಿದು ತಪ್ಪಿದೊಡಂ ಜಿನಶಾಸನಕ್ಕೊಡಂಬಡದೊಡಂ...... ಕಿಡುಗಂ ಕುಲಕ್ರಮಂ" ಎಂಬ ಆಚಾರ್ಯ ಸಿಂಹನಂದಿಯ ಆಶೀರ್ವಾಣಿಯಲ್ಲಿಯ ಎಚ್ಚರಿಕೆಯನ್ನು ಈ ಮನೆತನ ಕೊನೆಯವರೆಗೂ ನೆನಪಿಟ್ಟು ನಡೆಯಿತು. ದುರ್ವಿನೀತ, ಶಿವಮಾರರಂಥ ರಾಜಕವಿಗಳು, ಮಾರಸಿಂಹ, ಚಾವುಂಡರಾಯರಂಥ ಪರಮಧರ್ಮಾನುಯಾಯಿಗಳು ಈ ಮತವನ್ನು ಪ್ರಾಣದಂತೆ ರಕ್ಷಿಸಿದರು.

ಗಂಗಮನೆತನದ ಕೊನೆಯ ದಿನಗಳಲ್ಲಿ, ದಕ್ಷಿಣಕ್ಕಿಂತ ಉತ್ತರದ ರಾಷ್ಟ್ರಕೂಟ ರಾಜ್ಯದಲ್ಲಿ ತುಂಬಿತುಳುಕಿತು, ಈ ಮತ. ಪೂರ್ವಪುರಾಣದ ಜಿನಸೇನ, ಉತ್ತರಪುರಾಣದ ಗುಣಭದ್ರ, ಕಲ್ಯಾಣಕಾರಕದ ಉಗ್ರಾದಿತ್ಯ, ಗಣಿತಸಾರಸಂಗ್ರಹದ ಮಹಾವೀರಾಚಾರ್ಯ, ಶಬ್ದಾನುಶಾಸನದ ಶಾಕಟಾಯನ ಮೊದಲಾದ ವಿಶ್ವಮಾನ್ಯ ಜೈನವಿದ್ವಾಂಸರು, ಯತಿಗಳು ಇಲ್ಲಿ ರಾಜಗೌರವದಿಂದ

ಬದುಕಿದರು. ಮೇಲಾಗಿ ಅಮೋಘವರ್ಷನ ಒಲವು, ನಾಲ್ಮಡಿ ಇಂದ್ರನ ಭಕ್ತಿಗಳ ಮೂಲಕ ಜೈನಮತ ಅಪೂರ್ವಕಾಂತಿ ಪಡೆಯಿತು.

"ದಕ್ಷಿಣ ಭಾರತದ ಜೈನ ಇತಿಹಾಸವೆಂದರೆ ಕರ್ನಾಟಕದ ಜೈನ ಇತಿಹಾಸ" ಎಂಬ ಹಿರಿಮೆಗೆ ಕಾರಣವಾದ ಈ ರಾಷ್ಟ್ರಕೂಟ, ಗಂಗಮನೆತನಗಳನ್ನು ಕ್ರಮವಾಗಿ ಕಲ್ಯಾಣ ಚಾಲುಕ್ಯ, ದ್ವಾರಸಮುದ್ರದ ಹೊಯ್ಸಳರು ೧೧ನೆಯ ಶತಮಾನದ ಕೊನೆಯಲ್ಲಿ ಆಕ್ರಮಿಸಿದರು. ಆ ಮನೆತನಗಳ ಪತನದೊಂದಿಗೆ ಜೈನಮತ ತನ್ನ ಗಟ್ಟಿಯಾದ ಆಧಾರಭೂಮಿಯನ್ನೇ ಕಳೆದುಕೊಂಡಿತು.

ಜೈನಮತನಿಷ್ಠವಾಗಿ ಹುಟ್ಟಿದ ಹೊಯ್ಸಳ ಮನೆತನದ ಆರಂಭದ ಅರಸರಿಂದಾಗಿ ಅದು ಉತ್ತರಕ್ಕಿಂತ ದಕ್ಷಿಣದಲ್ಲಿ ೫೦ ವರ್ಷ ಹೆಚ್ಚು ಅರಮನೆಯಲ್ಲಿ ಕಾಲಕಳೆಯಿತು. ಮುಂದೆ ವಿಷ್ಣುವರ್ಧನ ಶ್ರೀವೈಷ್ಣವಮತ ಸ್ವೀಕರಿಸುವಲ್ಲಿ ರಾಣಿ ಶಾಂತಲೆ, ಮಂತ್ರಿ ಗಂಗರಾಜ, ಹುಳ್ಳರು ಎಂಥ ಐತಿಹಾಸಿಕ ಪೋಷಣೆ ನೀಡಿದರೂ ಅರಮನೆಯಿಂದ ದೂರ ಸರಿಯತೊಡಗಿತು.

ಈಗ ಉತ್ತರದಲ್ಲಿ ಸವದತ್ತಿಯ ರಟ್ಟರು (೯೫೦-೧೨೫೦), ದಕ್ಷಿಣದಲ್ಲಿ ಹುಮ್ಮಚದ ಶಾಂತರರು ಜೈನಮತಪುನರುಜ್ಜೀವನಕ್ಕೆ ಹಗಲಿರುಳು ಹೋರಾಡಿದರೂ ಸಾಮ್ರಾಟರ ಕಾಲದ ಶ್ರೀಮಂತ ಆಶ್ರಯ ಈ ಸಾಮಂತರಿಂದ ಸಾಧ್ಯವಾಗಲೇ ಇಲ್ಲ. ಒಟ್ಟಿನಲ್ಲಿ ರಾಷ್ಟ್ರಕೂಟ, ಗಂಗರ ಪತನದಿಂದ ಅನಾಥಪ್ರಜ್ಞೆಯನ್ನನುಭವಿಸುತ್ತ ಅರಮನೆಯಲ್ಲಿ ಮಲಮಗನಂತೆ ಬದುಕತೊಡಗಿತು. ಬಹುಶಃ ನಾಗಚಂದ್ರ ಕಲ್ಯಾಣ ಚಾಲುಕ್ಯ "ಜನಪತಿ ಸಭೆಯೊಳ್ ಪೂಜ್ಯ"ನಾಗಿದ್ದರೂ ಅದರಲ್ಲಿ ಆತ್ಮೀಯತೆಗಿಂತ ಔಪಚಾರಿಕತೆ ಅಧಿಕವಾಗಿರಬಹುದು.

ಹೀಗೆ ರಾಜಕೀಯದಲ್ಲಿ ನಿಂತ ನೆಲವನ್ನು ಕಳೆದುಕೊಂಡ ಜೈನಧರ್ಮ, ಧಾರ್ಮಿಕದಲ್ಲಿ ಸಹ ತತ್ವದ ಸುವರ್ಣಶುದ್ಧಿಯನ್ನು, ಬದುಕಿನ ಭದ್ರನೆಲೆಯನ್ನು ಉಳಿಸಿಕೊಳ್ಳದೇ ಹೋಯಿತು. ಬಾಹ್ಯ ಆಘಾತದಷ್ಟೇ ಆಂತರಿಕ ಅಸ್ವಾಸ್ಥ್ಯವೂ ಇದಕ್ಕೆ ಕಾರಣವಾಯಿತು. ಬಹುಕಾಲದ ಹಿಂದೆ ದಿಗಂಬರ, ಶ್ವೇತಾಂಬರವೆಂದು ಒಡೆದುಹೋಗಿ ತರುವಾಯ ಗಣ, ಗಚ್ಛಗಳಾಗಿ ವಿಂಗಡಿಸಲ್ಪಟ್ಟ ಜೈನಧರ್ಮ, ಈ ಹೊತ್ತಿಗಾಗಲೇ ಅಗ್ಗದ ಜನಪ್ರಿಯತೆಗೆ ಆಸೆ ಮಾಡಿ, ಹಿಂದೂಧರ್ಮದಂತೆ ತೀರ್ಥಂಕರನ ಜೊತೆ ಪರಿಹಾರ ದೇವತೆಗಳನ್ನೂ ಪಂಚನಮಸ್ಕಾರದ ಜೊತೆ ಮಂತ್ರ-ಮಾಟಗಳ ಮೋಹವನ್ನೂ ಬೆಳೆಸಿಕೊಂಡಿದ್ದಿತು. ಕಠೋರವಾದ ತನ್ನ ತತ್ತ್ವವ್ಯವಸ್ಥೆ, ಆಚಾರ ಪರಿಪಾಲನೆಗಳಲ್ಲಿ ಸಡಿಲು ತೋರಿಸಿ ಜನಸಾಮಾನ್ಯರೊಂದಿಗೆ ಅಂಶತಃ ಒಪ್ಪಂದ ಮಾಡಿಕೊಂಡಿದ್ದಿತು. ಇದರಿಂದಾಗಿ ತನಗರಿಯದಂತೆಯೇ ತತ್ವವಿಮುಖವಾಗತೊಡಗಿ ಒಳಒಳಗೇ ಸೊರಗುತ್ತ ನಡೆಯಿತು.

ಬೌದ್ಧಧರ್ಮವನ್ನು ದೇಶಾಂತರಗೊಳಿಸಿದ ಶಂಕರಾಚಾರ್ಯರ ಅಜೇಯ ಅದ್ವೈತದೆದುರು ಬದುಕಿದ ಜೈನಧರ್ಮ, ದಕ್ಷಿಣಭಾರದಲ್ಲಿ ಬಲವಾದ ಆಘಾತಗಳನ್ನು ಎದುರಿಸಬೇಕಾಗಿ ಬಂದುದು ೧೧ನೆಯ ಶತಮಾನದಲ್ಲಿ. ಈಗ ತಮಿಳುನಾಡಿನಲ್ಲಿ ಹುಟ್ಟಿದ ಶ್ರೀ ವೈಷ್ಣವಮತ ಹೊಯ್ಸಳರಾಜ್ಯದ ಕತೆಯಿಂದ, ಕರ್ನಾಟಕದಲ್ಲಿ ಹುಟ್ಟಿದ ವೀರಶೈವಮತ ಕಲ್ಯಾಣ ಚಾಲುಕ್ಯ ರಾಜ್ಯದ ಕಡೆಯಿಂದ ಒಂದೇ ಕಾಲಕ್ಕೆ ಜೈನಮತವನ್ನು ಮುತ್ತಿದವು. ಜೊತೆಗೆ ಆ ಕಡೆ ಚಾಲುಕ್ಯ ಜಯಸಿಂಹನ ಹೆಂಡತಿ ಸುಗ್ಗಲೆ ವೀರಶೈವಮತವನ್ನು, ಈ ಕಡೆ ಹೊಯ್ಸಳ ವಿಷ್ಣುವರ್ಧನ ಶ್ರೀವೈಷ್ಣವಮತವನ್ನು ಸ್ವೀಕರಿಸುವಲ್ಲಿ ಜೈನಮತದ ಪುಣ್ಯಚಂದ್ರಿಕೆ ಇನ್ನೂ ನಿಸ್ತೇಜಗೊಂಡಿತು.

ಹೀಗೆ ಅವಸರದಿಂದ ಅಸ್ತಮಾನದೆಡೆಗೆ ನಡೆದುದನ್ನು ಕಣ್ಣಿನಿಂದ ನೋಡಲಿಕ್ಕೂ ಆಗದೆ, ಕೈಯಿಂದ ತಡೆಯಲಿಕ್ಕೂ ಆಗದೆ ಜೈನಸಮಾಜ ಅಸಹಾಯಕಸ್ಥಿತಿಯ ರೋಷದಲ್ಲಿ ಬದುಕುತ್ತಲಿದ್ದಿತು. ಬ್ರಹ್ಮಶಿವ ನಯಸೇನರಿಂದ ಅವತರಿಸಿದ ಸಾಹಿತ್ಯವೇ ಇದಕ್ಕೆ ನಿದರ್ಶನ. ನಾಗಚಂದ್ರನಂತಹ ಸುಸಂಸ್ಕೃತ ವ್ಯಕ್ತಿಯೂ "ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಂ ಸ್ಮರಂ ನಂದೆ ಪೊಯ್ದಂ" ಎಂಬಂತಹ ದೂಷಣೆರೂಪದ ಹತ್ತೆಂಟು ಮಾತುಗಳನ್ನಾಡಿದುದು ಜೈನಮತದ ಅಸಹಾಯಕ ಸ್ಥಿತಿಯನ್ನೂ ಅವನತಿಯ ವೇಗವನ್ನೂ ಸ್ಪಷ್ಟಪಡಿಸುತ್ತದೆ.

ಹೀಗೆ ಪ್ರಾಚೀನ ಕಾಲದಲ್ಲಿ ರಾಜರಕ್ಷಣೆಗೆ ತಕ್ಕಂತೆ ಧರ್ಮ ಬೆಳೆದು ಬಂದರೆ, ಧರ್ಮದ ಸ್ಥಿತಿಗೆ ತಕ್ಕಂತೆ ಸಾಹಿತ್ಯ ಬೆಳೆದು ಬಂದಿತು. ಈ ಬೆಳವಣಿಗೆಯಲ್ಲಿ ಅದರ ಆರಂಭದ ಅಜ್ಞಾತ ಘಟ್ಟ(ಗಳ)ವನ್ನು ಬಿಟ್ಟರೆ ಪ್ರಥಮವಾಗಿ ಎದ್ದು ಕಾಣುವುದೆಂದರೆ ಜೈನಘಟ್ಟ. ನೃಪತುಂಗ ಮತ್ತು ವಚನಕಾರರ ಮಧ್ಯದ ಮೂರು ಶತಮಾನಗಳು ಇದರ ವ್ಯಾಪ್ತಿ, ಬ್ರಾಹ್ಮಣಪ್ರಜ್ಞೆ ಇನ್ನೂ ಪ್ರವೇಶಿಸದ, ವೀರಶೈವಪ್ರಜ್ಞೆಯ ಪ್ರವೇಶ ಅದೇ ಆರಂಭವಾಗಿದ್ದರೂ ಜೈನಸಾಹಿತ್ಯವಾಹಿನಿ ತಲ್ಲಣಗೊಳ್ಳದ ಅವಧಿಯಿದು. ದೇಶ–ಮಾರ್ಗಗಳ ಸಮನ್ವಯ ಶೈಲಿ, ಚಂಪೂರೂಪ, ಲೌಕಿಕ–ಧಾರ್ಮಿಕಗಳೆಂಬ ಉಭಯಮಾರ್ಗ– ಇವು ಈ ಯುಗದ ಲಕ್ಷಣಗಳು. ಕವಿರಾಜಮಾರ್ಗದ ಅರುಣೋದಯದೊಂದಿಗೆ ಈ ಲಕ್ಷಣ ಸಾಮಗ್ರಿಯನ್ನು ಸಜ್ಜುಗೊಳಿಸಿಕೊಂಡು ಕುಮಾರಸಂಭವದ ಅಸಗ, ಮಾಳವೀಮಾಧವದ ಕಣ್ಣಮಯ್ಯ, ಹರಿವಂಶ–ಶೂದ್ರಕಗಳ ಗುಣವರ್ಮ, ರಘುವಂಶ ಮಹಾಪುರಾಣದ ಶ್ರೀವಿಜಯ ಮೊದಲಾದವರ ಮೂಲಕ ಏರುತ್ತ ಬಂದ ಜೈನಸಾಹಿತ್ಯಸೂರ್ಯ ಪಂಪನಲ್ಲಿ ಮಧ್ಯಾಹ್ನ ಮುಟ್ಟಿ ಪೊನ್ನ, ರನ್ನ, ಚಾವುಂಡರಾಯ, ಶ್ರೀಧರಾಚಾರ್ಯ, ಶಾಂತಿನಾಥ, ನಾಗಚಂದ್ರ, ಕೀರ್ತಿವರ್ಮ, ನಯಸೇನ, ಬ್ರಹ್ಮಶಿವ, ಕರ್ಣಪಾರ್ಯ, ಇಮ್ಮಡಿ ನಾಗವರ್ಮ, ಇಮ್ಮಡಿ ಚಾವುಂಡರಾಯರ ಮೂಲಕ ಇಳಿಯುತ್ತ ಬಂದು, ವೀರಶೈವ ವಚನಕಾರರ ಸಮಯಕ್ಕೆ ನಿಸ್ತೇಜಗೊಂಡನು.

ನಾಗಚಂದ್ರ ಬದುಕಿದುದು ಈ ಜೈನಘಟ್ಟದ ಅಪರಾಹ್ನ ಅವಧಿಯಲ್ಲಿ, ಕನ್ನಡ ಸಾಹಿತ್ಯ, ಪಂಪನಲ್ಲಿ ಸಂವೇದನೆಯ ಸಾಧ್ಯತೆಗಳನ್ನು ಕಳೆದುಕೊಂಡು ಈಗ ಹೊಸದಿಕ್ಕು ಹುಡುಕುವ ಶಕ್ತಿಯಿಲ್ಲದೆ, ಸಂಪ್ರದಾಯದ ದಾರಿಯಲ್ಲಿ ಜಾರುತ್ತಲಿದ್ದಿತು. ನಾಗಚಂದ್ರ ಈ ಸೆಳವಿನಿಂದ ಹೊರಬಂದು ಹೊಸಹಾದಿ ಹುಡುಕುವ ಸಾಹಸ ಮಾಡದೆ, ಸಂಪ್ರದಾಯದ ಶ್ರೇಷ್ಠಕವಿಯಾಗಿ ಬೆಳಗಿದ.

ಕವಿಯ ಮನಸ್ಥಿತಿ : ಸುತ್ತಲಿನ ಸಮಾಜ ಅಸ್ಥಿರತೆಯಿಂದ ಕೂಡಿದ್ದರೂ ನಾಗಚಂದ್ರನದು ಮಾತ್ರ "ನಿಜವಿಭವೋದಯಂ ಸಫಲವಾಯ್ತೆನೆ ಮಲ್ಲಿಜಿನೇಂದ್ರ ಗೇಹಮಂ ವಿಜಯಪುರಕ್ಕಲಂಕರಣಮಾಗಿರೆ" ನಿರ್ಮಿಸಿದ ಶ್ರೀಮಂತ ಮನೆತನವಾಗಿದ್ದಿತು. ಜೈನಮತ ಅರಮನೆಯಿಂದ ಹೊರಗೆ ಬಂದಿದ್ದರೂ ನಾಗಚಂದ್ರ "ಜನಪತಿ ಸಭೆಯೊಳ್ ಪೂಜ್ಯಂ" ಎಂಬ ಗೌರವ ಗಳಿಸಿದ್ದನು. ಅವನದು ಈ ಐಶ್ವರ್ಯ, ಗೌರವಗಳಿಂದ ತಲೆತಿರುಗಿದ ಉನ್ಮತ್ತ ಪ್ರಕೃತಿಯಲ್ಲ. ಆ ನಿಜವಿಭವೋದಯವನ್ನು ನಿಜಧರ್ಮಗುಣೋದಯಕ್ಕೆ ವಿನಿಯೋಗಿಸಿದ ಉದಾತ್ತ ಪ್ರಕೃತಿ. ಇದಕ್ಕೆ ನಿದರ್ಶನ :

ಜಿನಪತಿಗಂ ಜಿನಮುನಿಗಂ
ಜಿನಾಗಮಕ್ಕಂ ಜಿನಾಧಿಪತಿಭವನಕ್ಕಂ
ಜಿನಗುಣಸಂಪತ್ತಿಗಮೆರ
ಪನೆರಗಸುಟಿದವರ್ಗೆ ನಾಗಚಂದ್ರ ಕವೀಂದ್ರಂ।[೧]

ನಾಗಚಂದ್ರ, ಕಾವ್ಯಸೃಷ್ಟಿಯಲ್ಲಿ ಅಭಿನವಪಂಪನಾಗಬಯಸಿದ್ದರೂ ಜೀವನದೃಷ್ಟಿಯಲ್ಲಿ ಹರಿಹರನಾಗಿದ್ದನೆಂದು ಈ ಪದ್ಯದಿಂದ ತಿಳಿಯುತ್ತದೆ. ಆದರೆ ಹರಿಹರನಂಥ ಋಷಿಚೇತನವಲ್ಲ, ಅವನನ್ನು ನೆನಪಿಸುವ ಭಕ್ತಚೇತನ. ಜೀವ, ದೇವನಿಗೆ ಅರ್ಪಣವಾಗುವಂತೆ ಸಾಹಿತ್ಯವೂ ದೇವನಿಗೇ ಸಮರ್ಪಣವಾಗಬೇಕೆಂಬ ಹರಿಹರದೃಷ್ಟಿ ಅವನದು. ಈ ನಂಬಿಕೆಯಿಂದ ಕೈಕೊಳ್ಳುವ ಕಾವ್ಯಸೃಷ್ಟಿ ಹರಿಹರನಿಗೆ ಶಿವೋಪಾಸನೆಯಾದರೆ, ನಾಗಚಂದ್ರನಿಗೆ ಜಿನೋಪಾಸನೆಯಾಗಿದೆ.

ನಾಗಚಂದ್ರನ ಈ ಧರ್ಮಶ್ರದ್ಧೆ ಕುರುಡುವ್ಯಾಮೋಹವಲ್ಲ, ಜೈನದ ಶಾಸ್ತ್ರಭ್ಯಾಸ ಮತ್ತು ಆತ್ಮಾನುಸಂಧಾನಗಳ ಅಮೃತಫಲ. ಇಂತಹ ಉತ್ತಮಾಂಶಗಳಿಂದ ಸಂಸ್ಕಾರಗೊಂಡವನಾಗಿದ್ದರೂ "ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಂ ಸ್ಮರಂ ನಂದೆ ಪೊಯ್ವಂ" "ಪೆಣ್ಣ ಮಣ್ಣ ಮೋಹದ ಪರಮಾತ್ಮರತ್ತಿರಲಿ ನೀನೆ ಜಗತ್‌ಸ್ತುತನ್ಯೆ ಜಿನೇಶ್ವರಾ" "ಪುಷ್ಪಚಾಪಾಂಚಿತ ಮಧುಕರ ಮೌರ್ವೀಲತಾಟಂಕೃತಕ್ಕಳ್ಳಿದ ಗೌರೀನಾಥಂ" ಮೊದಲಾದ ಮಾತುಗಳಲ್ಲಿ ಮತ್ತು ಕಾಮದಹನ ಪ್ರಸಂಗದಲ್ಲಿ ಅನ್ಯಧರ್ಮದೂಷಣೆಯ ದೋಷ ಕಾಣುತ್ತದೆ. ಆದರೆ ಅದು ಪರಿಸರದ ಪ್ರಭಾವವೇ ಹೊರತು ಕವಿಯ ಸ್ವಭಾವವಲ್ಲ.

ನಿಸರ್ಗಪ್ರೀತಿ, ಸಂಗೀತ-ಚಿತ್ರಕಲಾಸಕ್ತಿಗಳು ಇವನ ವ್ಯಕ್ತಿತ್ವದ ಇನ್ನೆರಡು ಮುಖ್ಯ ಲಕ್ಷಣಗಳು. ಇವು ಮಿಕ್ಕ ಜೈನಪುರಾಣಗಳಲ್ಲಿಯಂತೆ ಅನುಕರಣ ಚಿತ್ರಗಳಾಗಿ ಬರದೆ, ಅನುಭೂತಿಯ ಅಭಿವ್ಯಕ್ತಿಯಾಗಿ ಬಂದು, ನಾಗಚಂದ್ರನ ಆಳವಾದ ಆಸಕ್ತಿಯನ್ನು ತೋರಿಸುತ್ತವೆ.

ಇವೆಲ್ಲವುಗಳಿಗೆ ಸ್ಥಾಯಿಯಾದುದು, ತಾಯಿಯಾದುದು ನಾಗಚಂದ್ರನ ಶಾಂತಪ್ರವೃತ್ತಿ.

ನಿನಗೆ ರಸವೊಂದೆ ಶಾಂತಮೆ
ಜಿನೇಂದ್ರ ಮನಮಾರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆನಗರ್ಹಾ ॥[೨]

ಎಂಬ ಹಾರೈಕೆಯಿಂದ ತುಡಿಯುತ್ತಿದೆ, ಈತನ ಮನಸ್ಸು. ಇದು ನಾಗಚಂದ್ರನ ಕಾವ್ಯಗಳಲ್ಲಿ ಕಾಣುವ ಆತನ ವ್ಯಕ್ತಿತ್ವದ ಒಟ್ಟು ದರ್ಶನ. ಇದನ್ನು ಬೆಂಬಲಿಸುವ ರೀತಿಯಲ್ಲಿ–

---

೧. ಮಲ್ಲಿನಾಥಪುರಾಣಂ ೧-೪೦

೨. ಅದೇ ೧೦-೮೨

ವಿತ್ತಂ ಸತ್ಪಾತ್ರಕ್ಕಾ
ಯತ್ತಂ ನಿಜವಾಣಿ ತೀರ್ಥಕರಕೀರ್ತನೆಗಾ
ಯತ್ತಂ ವ್ರತಕ್ಕೆ ತನುವಾ
ಯತ್ತವೆನಲ್ ನಾಗಚಂದ್ರಬುಧನೆ ಕೃತಾರ್ಥಂ ।[೨]

ಎಂಬ ಪದ್ಯವಂತೂ ನಾಗಚಂದ್ರನ ವ್ಯಕ್ತಿತ್ವಕ್ಕೆ ಬರೆದ ಸೂತ್ರವಾಗಿದೆ.

೨ ಕವಿಪರಿಚಯ :

ಕನ್ನಡ ಸಾಹಿತ್ಯವ್ಯಾಸಂಗದಲ್ಲಿ ನಿರಂತರ ಕಾಡುವ ಪ್ರಶ್ನೆಯೆಂದರೆ ಕವಿಗಳ ಚರಿತ್ರೆ. ಕಾವ್ಯದ ಯಾವ ಮೂಲೆಯಲ್ಲಿಯು ತಮ್ಮ ಹೆಸರನ್ನು ಉಸಿರದ ನಾಮನಿರ್ಮೋಹಿಗಳನ್ನು ಬಿಟ್ಟರೆ ಕೆಲವರು ಅಪರೂಪಕ್ಕೆ ಚರಿತ್ರೆಯ ಒಂದೆರಡು ಅಂಶಗಳನ್ನು ಹೇಳುತ್ತಾರೆ–ಇವು ಆಂತರಿಕ ಆಧಾರಗಳು; ಅನ್ಯಕೃತಿ, ಶಾಸನ ಮತ್ತು ಐತಿಹ್ಯ– ಇವು ಬಾಹ್ಯ ಆಧಾರಗಳು. ನಾಗಚಂದ್ರ ಮೊದಲಾದ ಕವಿಗಳ ಚರಿತ್ರೆಯನ್ನು ಈ ಎರಡೂ ಎಳೆಗಳನ್ನು ಹಿಡಿದುಕೊಂಡು ಹೆಣೆಯಬೇಕಾಗುತ್ತದೆ.

ನಾಗಚಂದ್ರ ಹೆಸರಿನ ಹಲವು ಕನ್ನಡ ಕವಿಗಳಲ್ಲಿ ಸುಪ್ರಸಿದ್ಧನಾದವನು ಅಭಿನವ ಪಂಪ ಬಿರುದಿನ ಕವಿ. ಗುರುಪರಿವಾರವನ್ನು ಬಿಟ್ಟರೆ, ತನ್ನ ವಂಶಪರಿವಾರ, ದೇಶ, ಕಾಲ ನಿರೂಪಣೆಯಲ್ಲಿ ಇವನು ಜೈನಕವಿಗಳಲ್ಲಿಯೇ ತೀರ ನಿರಾಸಕ್ತ. ಇದಕ್ಕೆ ಕಾರಣ, ಇವನಲ್ಲಿ ಲೌಕಿಕ ಪ್ರಜ್ಞೆಗಿಂತ ಹೆಚ್ಚು ಆಳವಾಗಿ ಬೇರುಬಿಟ್ಟ ಆಗಮಿಕಪ್ರಜ್ಞೆ, ಹೀಗಾಗಿ ನಾಗಚಂದ್ರನ ಕಾವ್ಯಗಳಲ್ಲಿ ವ್ಯಕ್ತಿತ್ವಚಿತ್ರ ಎದ್ದು ಕಾಣುತ್ತಿದ್ದರೆ, ವ್ಯಕ್ತಿಚರಿತ್ರೆ ತೋರುವುದು ಎಳ್ಳಷ್ಟು ಮಾತ್ರ. ಈ ವಿಷಯವಾಗಿ ವಿದ್ವಾಂಸರು ಹಲವು ನಿರ್ಣಯಗಳನ್ನು ಮುಟ್ಟಿದ್ದರೂ ಸತ್ಯದ ಕಡೆಗೆ ನಡೆಯಲು ಇಲ್ಲಿ ಇನ್ನೂ ಅವಕಾಶವಿದೆ.

ವಂಶಪರಂಪರೆ : ನಾಗಚಂದ್ರನ ವಂಶಜರ ವಿಷಯವಾಗಿ ಆತನ ಕಾವ್ಯಗಳು ಮಹಾಮೌನ ತಾಳಿವೆ. ಈ ಮೌನವನ್ನು ಕೆಲಮಟ್ಟಿಗಾದರೂ ಮುರಿಯಲು ಸಂಶೋಧಕರು ಬಳಸಿಕೊಳ್ಳುವ ಕೃತಿಗಳೆಂದರೆ ಮೇಘಚಂದ್ರಕೃತ ಪೂಜ್ಯಪಾದನ ಸಮಾಧಿ ಶತಕದ ವ್ಯಾಖ್ಯಾನ (೧೧೪೮) ಮತ್ತು ಬ್ರಹ್ಮಶಿವನ ಸಮಯಪರೀಕ್ಷೆ (ಕ್ರಿ. ಶ. ಸು. ೧೨೦೦).

೧. "ವಿತತ ಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚಪೊಸಗನ್ನಡದಿಂ" ಪೂಜ್ಯಪಾದನ ಸಮಾಧಿ ಶತಕಕ್ಕೆ ತಾನು ವ್ಯಾಖ್ಯಾನ ಬರೆದುದಾಗಿ ಮೇಘಚಂದ್ರನ ಹೇಳಿಕೆ.[೪]

೨. ಸಮಯಪರೀಕ್ಷೆಯ ಪೀಠಿಕಾಪ್ರಕರಣದಲ್ಲಿ ತನ್ನ ವಂಶಾವಳಿಯ ಬಗ್ಗೆ ಬ್ರಹ್ಮಶಿವ

ಪಿರಿದರ್ತಿ ಮುನ್ನ ಮಾಹೇ
ಶ್ವರದೊಳ್ ತನಗದಱೋಳೊಳ್ಪುಗಾಣದೆ ನೆಗೞ್ದೀ
ಪರಮ ಜಿನಧರ್ಮದೊಳಪೊ
ಕ್ಕು ರಾಗಿಪಂ ಸುಕವಿ ಪಂಪರಾಜನ ಮೊಮ್ಮಂ ॥[೫]

೩. ಸಮಯ ಪರೀಕ್ಷೆ ೧–೩೬. ೪. ಕರ್ಣಾಟಕ ಕವಿಚರಿತೆ, ಸಂ.೧(೧೯೬೧) ಪು. [illegible] ೫. ಸಮಯ ಪರೀಕ್ಷೆ ೧–೫೯

ಇಳೆಯೊಳ್ ಸಲೆ ನೆಲಸಿದ ಪೊ
ಟ್ಟಳಗೆಱೆಯೊಳ್ ನೆಗಟ್ದಿ ಸಿಂಗರಾಜನ ಸುತನ
ಗ್ಗಳದೇವನ ಕೆಳೆಯಂ ದ್ವಿಜ
ಕುಳರತ್ನಂ ವತ್ಸಗೋತ್ರತಿಳಕಂ ಬ್ರಹ್ಮಂ ॥[೬]

ಎಂದು ಹೇಳಿದ್ದಾನೆ. ಈ ಎರಡು ಹೇಳಿಕೆಗಳಲ್ಲಿ ಬರುವ 'ವಿತತಯಶೋನಿಧಿ', 'ಸುಕವಿ' ವಿಶೇಷಣಗಳೂ, 'ಪಂಪ' 'ಪಂಪರಾಜ' ಹೆಸರುಗಳೂ ಅಭಿನವಪಂಪ ಬಿರುದಿನ ನಾಗಚಂದ್ರನನ್ನು ಸೂಚಿಸುವುದೆಂದು ಭಾವಿಸಿ ಈವರೆಗೆ ಎಲ್ಲ ವಿದ್ವಾಂಸರು

(ಅಭಿನವ) ಪಂಪರಾಜ
|
ಸಿಂಗರಾಜ
|
(ಅಗ್ಗಳದೇವನ ಸ್ನೇಹಿತ) ಬ್ರಹ್ಮಶಿವ

ಎಂಬ ವಂಶಚಿತ್ರವನ್ನು ಬಿಡಿಸಿ, ಅಭಿನವಪಂಪನ ಮಗ ಸಿಂಗರಾಜ, ಸಿಂಗರಾಜನ ಮಗ ಬ್ರಹ್ಮಶಿವನೆಂದು ಹೇಳುತ್ತಾರೆ. ಆದರೆ ನಾಗಚಂದ್ರನಿಗೆ 'ಪಂಪ' 'ಪಂಪರಾಜ' ಎಂದು ಯಾರೂ ಕರೆದಿಲ್ಲ.[೭] ಬ್ರಹ್ಮಶಿವ ಹೇಳಿದುವು ಶೈವ ಹೆಸರುಗಳಂತೆ ಕಾಣುತ್ತವೆ. ಈ ಎರಡು ಸಂದೇಹಗಳಿಗೆ ಪರಿಹಾರ ದೊರೆಯದ ಹೊರತು ಮೇಘಚಂದ್ರ ಹೇಳುವ ಪಂಪ, ಬ್ರಹ್ಮಶಿವ ಹೇಳುವ ಪಂಪರಾಜ ಹಾಗೂ ಪ್ರಸ್ತುತ ಅಭಿನವಪಂಪ–ಇವರ ಪರಸ್ಪರ ಸಂಬಂಧದ ಬಗ್ಗೆ ಸಂದೇಹ ಉಳಿದುಕೊಳ್ಳುತ್ತದೆ.

ಒಂದು ವೇಳೆ ಈ ಮೂವರೂ ಒಬ್ಬನೇ ಎಂದು ಒಪ್ಪಿಕೊಂಡರೂ ಜೈನನಾಗಿರುವ ನಾಗಚಂದ್ರನ ಮತ್ತು ಶೈವದಂತೆ ತೋರುವ ಸಿಂಗರಾಜ–ಬ್ರಹ್ಮಶಿವರ ಹೆಸರು, ಬ್ರಹ್ಮಶಿವನ ಜೀವನದಲ್ಲಿ ಜರುಗಿದ ಮತಾಂತರ ಘಟನೆ–ಇವುಗಳ ಬಲದಿಂದ ಮೇಲಿನ ವಂಶಚಿತ್ರವನ್ನು

ನಾಗಚಂದ್ರ (ಪಂಪ, ಅಭಿನವ–)

ಮಗ
(ಇವನಿಗಾಗಿ ಮೇಘಚಂದ್ರನಿಂದ ಕೃತಿರಚನೆ)

ಮಗಳು+ಸಿಂಗರಾಜ
|
ಬ್ರಹ್ಮಶಿವ

ಎಂದು ಮುರಿದು ಹೊಂದಿಸಬಹುದಾಗಿದೆ. ಇದರಿಂದ ವ್ಯಕ್ತವಾಗುವ ಸಂಗತಿಗಳಿವು :

೬.ಸಮಯ ಪರೀಕ್ಷೆ, ೧–೫೭

೭. ಕವಿಸ್ತುತಿ ಪ್ರಸಂಗದಲ್ಲಿ ಆದಿಪಂಪನನ್ನು 'ಪಂಪರಾಜ' ಎಂದು ಕರೆದಿದ್ದಾನೆ ಬ್ರಹ್ಮಶಿವ.

೧. ಸಮಾಧಿ ಶತಕದ ವ್ಯಾಖ್ಯಾನ ರಚನೆಗೊಂಡುದು ನಾಗಚಂದ್ರನ ಮಗನಿಗಾಗಿ ನಿಜ, ಸಿಂಗರಾಜನಿಗಾಗಿ ಅಲ್ಲ.

೨. ಬ್ರಹ್ಮಶಿವನು ನಾಗಚಂದ್ರನ ಮೊಮ್ಮಗನಾಗಿರಬಹುದು. ಮಗನ ಮಗನಲ್ಲ, ಮಗಳ ಮಗ.

೩. ಶೈವ ಸಿಂಗರಾಜ ಮತ್ತು ಜೈನ ನಾಗಚಂದ್ರನ ಮಗಳು ದಂಪತಿಗಳಾಗಿರಬೇಕು. ಇಂಥ ಮದುವೆ ಆ ಕಾಲದಲ್ಲಿ ಸಾಮಾನ್ಯ.

೪. "ಪಿರಿದರ್ತಿ ಮುನ್ನ (ತಂದೆಯ) ಮಾಹೇಶ್ವರ" ದಲ್ಲಿಟ್ಟಿದ್ದ ಮಗ ಬ್ರಹ್ಮಶಿವ, ಅದಜಿಱೊಳೊಳ್ಪುಗಾಣದೆ" ಮುಂದೆ ತಾಯಿಯ ಜೈನಧರ್ಮಕ್ಕೆ ಮತಾಂತರಗೊಂಡಿರಬೇಕು.

ಮೇಲೆ ಹೇಳಿದ ಎರಡೂ ಬಗೆಯ ವಂಶಾವಳಿಗಳಲ್ಲಿ ಯಾವುದು ನಿಜವೆಂಬುದನ್ನು ಕಾಲವೇ ನಿರ್ಧರಿಸಬೇಕು.

ಗುರುಪರಂಪರೆ : ಭಾರತೀಯ ಜೀವನ ಪರಿಪೂರ್ಣಗೊಳ್ಳುವುದು ಪಿತೃಪರಂಪರೆ ಮತ್ತು ಗುರುಪರಂಪರೆಗಳಿಂದ. ಇವುಗಳಲ್ಲಿ ಒಂದು ಪ್ರಾಣಪರಂಪರೆಯಾದರೆ ಇನ್ನೊಂದು ಜ್ಞಾನಪರಂಪರೆ. ಪಿತೃಪರಂಪರೆಯ ಬಗ್ಗೆ ಮೌನಿಯಾದ ನಾಗಚಂದ್ರ ಗುರುಪರಂಪರೆಯನ್ನೋ ಗುರುಪರಿವಾರವನ್ನೋ ಗೌರವದಿಂದ ಸ್ಮರಿಸಿದ್ದಾನೆ. 'ರಾಮಚಂದ್ರ ಚರಿತಪುರಾಣ', 'ಮಲ್ಲಿನಾಥ ಪುರಾಣ'ಗಳಲ್ಲಿ ಬರುವ ಅನುಬದ್ಧ ಕೇವಲಿಗಳು, ಶ್ರುತ ಕೇವಲಿಗಳು, ದಶಪೂರ್ವಧರರು, ಏಕಾದಶಾಂಗಧಾರಿಗಳು, ಭೂತಬಲಿ, ಪುಷ್ಪದಂತ, ಜಿನಸೇನ, ವೀರಸೇನ, ಸಮಂತಭದ್ರ, ಕವಿಪರಮೇಷ್ಠಿ, ಪೂಜ್ಯಪಾದ, ಕೊಂಡಕುಂದಾಚಾರ್ಯ, ಅಕಳಂಕರನ್ನು ಬಿಟ್ಟರೆ, ವರ್ಧಮಾನ ಭಟ್ಟಾರಕ, ಬಾಲಚಂದ್ರಮುನಿ, ಮೇಘಚಂದ್ರತ್ರೈವಿದ್ಯ, ಶುಭಕೀರ್ತಿ,[೮] ವಾಸುಪೂಜ್ಯ,[೮] ಶ್ರುತಕೀರ್ತಿತ್ರೈವಿದ್ಯ,[೮] ವೀರಣಂದಿ ಸೈದ್ಧಾಂತಿಕರು[೮] ನಾಗಚಂದ್ರನ ಸಮಕಾಲೀನರೆಂದು ತೋರುತ್ತದೆ. ಇವರಲ್ಲಿ ಕೆಲವರು ನಾಗಚಂದ್ರನ ಕೃತಿಗಳಲ್ಲಿಯ ಸ್ತುತಿಪದ್ಯ ಸಹಿತವಾಗಿ ಶ್ರವಣಬೆಳ್ಗೊಳದ ೬೪, ೭೧, ೧೨೭, ೧೪೦, ೧೫೮ನೆಯ ಶಾಸನಗಳಲ್ಲಿ ಹೀಗೆ ಗೋಚರಿಸುತ್ತಾರೆ.

	ಮುನಿ	ಪದ್ಯ	ಪಂ.ರಾ.	ಮ.ಪು.	ಶ್ರ.ಶಾ.
೧.	ವರ್ಧಮಾನ	ವಿಮಲಶ್ರೋತಂ....	೧-೧೫	೧-೧೮	೭೧
೨.	ಬಾಲಚಂದ್ರ	ಪ್ರಚುರಕಳಾ...	೧-೧೮	೧-೨೦	೧೫೮ (ಕ್ರಿ.ಶ. ೧೧೧೦)
೩.	ಮೇಘಚಂದ್ರ	ಮೂವತ್ತಾಱುಂ...	೧-೧೯	೧-೨೧	೧೪೦ (ಕ್ರಿ.ಶ. ೧೧೪೫)
	ಮೇಘಚಂದ್ರ	ಮುನಿನಾಥಂ...	೧-೨೦	–	೧೨೭ (ಕ್ರಿ.ಶ. ೧೧೧೫)
					೧೪೦ (ಕ್ರಿ.ಶ. ೧೧೪೫)
೪.	ಶ್ರುತಕೀರ್ತಿ	ಆವೊಂ ವಾದಿ....	೧-೨೪	–	೬೪ (ಕ್ರಿ.ಶ. ೧೧೬೩)
	ಶ್ರುತಕೀರ್ತಿ	ಶುತಕೀರ್ತಿ....	೧-೨೫	–	

೮. ಈ ನಾಲ್ವರ ಸ್ತುತಿ ಮಲ್ಲಿನಾಥಪುರಾಣದಲ್ಲಿ ಇಲ್ಲ.

೫. ವೀರಣಂದಿ ಗಣಧರರಂ.... ೧-೨೬ - ೧೪೦ (ಕ್ರಿ.ಶ. ೧೧೪೫)
ವೀರಣಂದಿ ಹರಿಹರಹಿರಣ್ಯ.... ೧-೨೭ -

ಇವರಲ್ಲಿ ಬಾಲಚಂದ್ರಮುನಿಯು ನಾಗಚಂದ್ರನ ಗುರುವೆಂಬುದನ್ನು[೯] ಬಿಟ್ಟರೆ ಮಿಕ್ಕವರ ಗುರು-ಶಿಷ್ಯಸಂಬಂಧವನ್ನಾಗಲಿ ಗಣ-ಗಚ್ಛಗಳನ್ನಾಗಲಿ ಪಂಪರಾಮಾಯಣ, ಮಲ್ಲಿನಾಥ ಪುರಾಣಗಳಲ್ಲಿ ಹೇಳಿಲ್ಲ, ಶಾಸನಗಳಿಂದ ಮಾತ್ರ ಈ ಅಂಶಗಳು ಹೀಗೆ ತಿಳಿದು ಬರುತ್ತವೆ.[೧೦]

ಬಾಲಚಂದ್ರ

|

(ಮರಣ ೧೧೧೫) ಮೇಘಚಂದ್ರ (ಸಧರ್ಮಿ) ಶುಭಕೀರ್ತಿ

|

(ಮರಣ ೧೧೪೫) ಪ್ರಭಾಚಂದ್ರ (ಸಧರ್ಮಿ) ವೀರಣಂದಿ

ಇವರು ಕೊಂಡಕುಂದಾನ್ವಯದ ಮೂಲಸಂಘದ ಪುಸ್ತಕಗಚ್ಛಕ್ಕೆ ಸಂಬಂಧಿಸಿದವರು. ಇವರಲ್ಲಿ ಬಾಲಚಂದ್ರ (ಲೋಕಪ್ರಜ್ಞಪ್ತಿ ಗ್ರಂಥದ ಕರ್ತೃ?),[೧೧] ಮೇಘಚಂದ್ರ (ಮೊರಂಬಗ್ರಾಮ ನಿವಾಸಿ?),[೧೨] ವೀರಣಂದಿ[೧೩]ಗಳನ್ನು ಬ್ರಹ್ಮಶಿವನೂ, ಶ್ರುತಕೀರ್ತಿ, ವೀರಣಂದಿಗಳನ್ನು ಅಗ್ಗಳನೂ[೧೪] ಸ್ತುತಿಸಿದಂತಿದೆ.

---

೯. ಪೀಠಿಕೆಯಲ್ಲಿ, ೧೦-೮೭ರ ಗದ್ಯದಲ್ಲಿ ಬಾಲಚಂದ್ರನ ಸ್ತುತಿ ಇದೆ, ಗುರುವೆಂಬ ಸೂಚನೆಯಿಲ್ಲ; ಆದರೆ ಆಶ್ವಾಸಗಳ ಕೊನೆಯ ಗದ್ಯದಲ್ಲಿ ಸ್ಪಷ್ಟ ಸೂಚನೆಯಿದೆ.

೧೦. ಶ್ರವಣಬೆಳಗೊಳದ ಶಾಸನಗಳು E. C. II, ೧೨೭ ಮತ್ತು ೧೪೦

೧೧. ಆಪ್ತೋದಿತ ಲೋಕಪ್ರ। ಜ್ಞಪ್ತಿಗೆ ಮುಂ ಕರ್ತೃವಾಗಿ ಕಡೆಯೊಳ್ನಿಂದಿ।
ದಾಪ್ತ ಸ್ಮರಣೆಯಿನಸುವಂ। ವ್ಯಾಪ್ತಯಶಂ ಬಿಟ್ಟು ಭಾಳಚಂದ್ರಂ ನೆಗಳ್ದಂ॥ (ಸಮಯ ಪರೀಕ್ಷೆ ೧-೨೬)
ಇದು ಒಂದು ಅಪರೂಪ ಸೂಚನೆ. ಕರ್ನಾಟಕದವನಾಗಿರಬಹುದಾದ ಯತಿವೃಷಭನು ರಚಿಸಿರಬಹುದಾದ 'ತಿಲೋಯ ಪಣ್ಣತ್ತಿ'ಯಲ್ಲಿ ಒಂದು ಕಡೆ ಬರುವ 'ಬಾಲಚಂದ್ರಮುನಿ' ಎಂಬ ಹೆಸರು ವಿದ್ವಾಂಸರಿಗೆ ಸಂದೇಹವನ್ನುಂಟುಮಾಡಿದೆ. ಈ ಸೂಚನೆ ಆ ಸಂದೇಹದ ಮೇಲೆ ಬೆಳಕು ಚೆಲ್ಲುವಂತಿದೆ.

೧೨. ಧರೆಯೊಳ್ಸಂದ ಮೊರಂಬದೊಳ್ ನಿಜ ನಿಶೀಥಿಸ್ಥಾನದೊಳ್ಮಣ್ಣನಾ।
ದರದಿಂದೊರ್ಮೆಯೆ ತಂದು ಪೂಸಲೊಡನತ್ಯುಗ್ರಗ್ರಹಾನೇಕ ಸ।
ರ್ಪರುಜಾಪೀಡೆಗಳಾಗಳಂತೆ ಕೆಡುಗುಂ ತಾನೆಂದೊಡಂ ಮಮ್ಮ ಬಾ।
ಬ್ಬುರೆ ಸಾಮಾನ್ಯಮೆ ಮೇಘಚಂದ್ರಮುನಿ ಮಾಹಾತ್ಮ್ಯಂ ಧರಾಚಕ್ರದೊಳ್ (ಸಮಯ ಪರೀಕ್ಷೆ ೧-೨೭)
ಸೊಲ್ಲಾಪೂರ ಸಮೀಪ ಮತ್ತು ಧಾರವಾಡ ಸಮೀಪ ಹೀಗೆ ಮೊರಬ ಹೆಸರಿನ ಎರಡು ಗ್ರಾಮಗಳಿವೆ. ಧಾರವಾಡ ಸಮೀಪದ ಮೊರಬ ಒಂದು ಪ್ರಾಚೀನ ಜೈನಕೇಂದ್ರ. ಇಲ್ಲಿಯ ಒಂದು ಶಾಸನ(ಕ್ರಿ.ಶ.೧೦೫೯)ದಲ್ಲಿ ಯಾಪನೀಯಸಂಘದ ಜಯಕೀರ್ತಿ ಶಿಷ್ಯ ನಾಗಚಂದ್ರನೆಂಬವನ ದಿವ್ಯವರ್ಣನೆಯಿದೆ. ಇವನ ಬಗ್ಗೆ ವಿಶೇಷ ಅಭ್ಯಾಸವಾಗಬೇಕಾಗಿದೆ.

೧೩. ಸಮಯ ಪರೀಕ್ಷೆ ೧-೨೮

೧೪. ಚಂದ್ರಪ್ರಭ ಪುರಾಣ ಪೀಠಿಕಾಸಂಧಿ

ಕಾಲ: ನಾಗಚಂದ್ರ ಬದುಕಿದ ಸಮಯದ ಬಗ್ಗೆ ವಿದ್ವಾಂಸರು ಮಂಡಿಸಿದ ಪ್ರಮುಖ ಅಭಿಪ್ರಾಯಗಳು ಹೀಗಿವೆ:

೧. ಬಿ. ಎಲ್. ರೈಸ್[೧೫] ಕ್ರಿ. ಶ. ೧೧೪೦

೨. ಕೆ. ಬಿ. ಪಾಠಕ[೧೬] ಕ್ರಿ. ಶ. ೧೧೪೫

೩. ಆರ್. ನರಸಿಂಹಾಚಾರ್[೧೭] ಕ್ರಿ. ಶ. ೧೧೦೦

೪. ಎ. ವೆಂಕಟಸುಬ್ಬಯ್ಯ[೧೮] ಕ್ರಿ. ಶ. ೧೦೪೦ಕ್ಕೆ ಹಿಂದೆ

೫. ಗೋವಿಂದ ಪೈ[೧೯] ಕ್ರಿ. ಶ. ೧೦೯೦–೧೧೪೦

ಇವುಗಳಲ್ಲಿ ಬಾಲಚಂದ್ರನ ಹೆಸರನ್ನವಲಂಬಿಸಿ ರೈಸ್, ಮೇಘಚಂದ್ರನ ಹೆಸರನ್ನವಲಂಬಿಸಿ ಪಾಠಕ ಅವರು ನೀಡಿದ ಅಭಿಪ್ರಾಯಗಳನ್ನು ನರಸಿಂಹಾಚಾರ್ಯರು ಹೀಗೆ ಅಲ್ಲಗಳೆಯುತ್ತಾರೆ. "ಮೆ, ರೈಸ್, ನಾಗಚಂದ್ರನ ಗುರುವಾದ ಬಾಲಚಂದ್ರನು ಸುಜನೋತ್ತಂಸನ ಸಮಕಾಲದವನೆಂದೂ ಪ್ರಾಭೃತತ್ರಯ ವ್ಯಾಖ್ಯಾನಕಾರನೆಂದೂ ಸುಮಾರು ೧೧೪೦ರಲ್ಲಿ ಇದ್ದನೆಂದೂ ಹೇಳುತ್ತಾರೆ.... ಆದರೆ ಬಾಲಚಂದ್ರ ಎಂಬ ಹೆಸರುಳ್ಳ ಇಬ್ಬರು ಜೈನಗುರುಗಳು ಇದ್ದಂತೆ ಶಾಸನಗಳಿಂದ ತಿಳಿದು ಬರುತ್ತದೆ. ಸುಜನೋತ್ತಂಸನ ಸಮಕಾಲದವನೂ ಪ್ರಾಭೃತತ್ರಯ ವ್ಯಾಖ್ಯಾನಕಾರನೂ ಆದ ಬಾಲಚಂದ್ರನಿಗೆ ಅಧ್ಯಾತ್ಮಿ ಬಾಲಚಂದ್ರ ಎಂದು ಹೆಸರು. ಈತನು ೧೧೭೬ರಲ್ಲಿ ಗತಿಸಿದ ನಯಕೀರ್ತಿಯ ಶಿಷ್ಯನೆಂದೂ ೧೧೫೧ರಲ್ಲಿ ಬದುಕಿದ್ದನೆಂದೂ ಪುಸ್ತಕಗಚ್ಛದವನೆಂದೂ ತಿಳಿಯುತ್ತದೆ. ಇವನು ಬೇರೆ, ನಾಗಚಂದ್ರನ ಗುರುವಾಗಿರಲಾರನು."

"ಮೇ. ಪಾಠಕರು, ಮೇಘಚಂದ್ರನು ಪೂಜ್ಯಪಾದಕೃತವಾದ ಸಮಾಧಿಶತಕಕ್ಕೆ 'ವಿತತ ಯಶೋನಿಧಿ ಪಂಪನ ಸುತಂಗೆ ತಿಳಿವಂತು ಪೊಚ್ಚಪೊಸಗನ್ನಡದಿಂ' ಒಂದು ವ್ಯಾಖ್ಯಾನವನ್ನು ೧೧೪೮ರಲ್ಲಿ ಬರೆದಿದ್ದಾನೆ ಎಂದು ಹೇಳುವ ಆಧಾರದಿಂದ ನಾಗಚಂದ್ರನು ಸುಮಾರು ೧೧೪೫ರಲ್ಲಿ ಇದ್ದಿರಬಹುದೆಂದು ಹೇಳುತ್ತಾರೆ.... (ಆದರೆ) ನಾಗಚಂದ್ರನು ಸ್ತುತಿಸುವ ಮೇಘಚಂದ್ರನೇ ಬೇರೆ. ಸಮಾಧಿಶತಕ ವ್ಯಾಖ್ಯಾನಕಾರನಾದ ಮೇಘಚಂದ್ರನೇ ಬೇರೆ. ಮೊದಲನೆಯವನು ೧೧೧೫ರಲ್ಲಿ ಗತಿಸಿದುದಾಗಿ ಹೇಳುವ ಶ್ರ.ಬೆ. ೧೨೭ನೆಯ ಶಾಸನದಲ್ಲಿಯೇ ಅವನ ಸ್ತುತಿರೂಪವಾದ "ಮುನಿನಾಥಂ ದಶಧರ್ಮಧಾರಿ" ಎಂಬ ಪದ್ಯವು ಇದೆ. ಎರಡನೆಯವರು ಸಮಾಧಿಶತಕ ವಾಖ್ಯೆಯನ್ನು ೧೧೪೮ರಲ್ಲಿ ಬರೆದುದಾಗಿ ತಿಳಿದುಬರುವುದರಿಂದ ಈತನಿಗೂ ೧೧೧೫ರಲ್ಲಿ ಗತಿಸಿದವನಿಗೂ ಏನೂ ಸಂಬಂಧವಿಲ್ಲ."

---

೧೫. ಶಬ್ದಾನುಶಾಸನ ಉಪೋದ್ಘಾತ, ೩೩

೧೬. Ind. Ant XII 20 (ಈ ಲೇಖನ ನನಗೆ ಸಿಗಲಿಲ್ಲ)

೧೭. ಕರ್ಣಾಟಕ ಕವಿಚರಿತೆ(೧೯೬೧) ೧೧೦

೧೮. ಕೆಲವು ಕನ್ನಡ ಕವಿಗಳ ಜೀವನ ಕಾಲ ವಿಚಾರ, ೩೩

೧೯. ಅಭಿನವಪಂಪ, ೩೪

ಹೀಗೆ ಆರ್. ನರಸಿಂಹಾಚಾರ್ ಅವರು ಉಭಯ ಹೇಳಿಕೆಗಳನ್ನು ಸರಿಯಾಗಿ ಅಲ್ಲಗಳೆದರೇನೋ ನಿಜ. ಆದರೆ ಮೊದಲನೆಯ ಹೇಳಿಕೆಯ ಕೊನೆಗೆ "ಮತ್ತೊಬ್ಬ ಬಾಲಚಂದ್ರಮುನಿ ಸುಮಾರು ೧೧೦೦ರಲ್ಲಿ ಇದ್ದನೆಂದೂ ವಕ್ರಗಚ್ಛಕ್ಕೆ ಸೇರಿದವನೆಂದೂ ತಿಳಿಯುತ್ತದೆ. ....ಈ ವಕ್ರಗಚ್ಛದ ಬಾಲಚಂದ್ರನೇ ನಾಗಚಂದ್ರನ ಗುರು" ಎಂದೂ, ಎರಡನೆಯ ಹೇಳಿಕೆಯ ಕೊನೆಗೆ "ಈತನು ಶ್ರವಣಬೆಳಗೊಳದ ೬೬ನೆಯ ಶಾಸನದಲ್ಲಿ ನಯಕೀರ್ತಿಯ ಶಿಷ್ಯನೆಂದು ಹೇಳಿರುವ ಮೇಘಚಂದ್ರನಾಗಿರಬಹುದು" ಎಂದೂ ಹೇಳಿದುದು ತಪ್ಪು.[೨೦] ಇಷ್ಟನ್ನು ಬಿಟ್ಟರೆ ಕೆಲವು ಅಭಿಪ್ರಾಯಗಳನ್ನಾಧರಿಸಿ ಆರ್. ನರಸಿಂಹಾಚಾರ್ ಅವರು ನಾಗಚಂದ್ರನ ಕಾಲ ಕ್ರಿ. ಶ. ೧೧೦೦ ಎಂದರೆ, ಗೋವಿಂದ ಪೈ ಅವರು ಕ್ರಿ. ಶ. ೧೧೪೦ ಎನ್ನುತ್ತಾರೆ. ಇಬ್ಬರ ಒಟ್ಟು ಅಭಿಪ್ರಾಯಗಳು ಹೀಗಿವೆ.

೧. ನಾಗಚಂದ್ರ ಸ್ತುತಿಸಿದ ಕೊನೆಯ ಕವಿ ರನ್ನ (ಕ್ರಿ. ಶ. ೧೦೦೦), ನಾಗಚಂದ್ರನನ್ನು ಸ್ತುತಿಸಿದ ಮೊದಲಕವಿ ಕರ್ಣಪಾರ್ಯ (ಕ್ರಿ. ಶ. ೧೧೭೦). ಹೀಗಾಗಿ ನಾಗಚಂದ್ರ ೧೦೦೦-೧೧೭೦ರ ಮಧ್ಯ ಬದುಕಿದವ. (ನರಸಿಂಹಾಚಾರ್. ಗೋವಿಂದ ಪೈ)

೨. ನಾಗವರ್ಮನ ಭಾಷಾಭೂಷಣದಲ್ಲಿ "ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆದಂ" ಎಂಬ ಪಂಪರಾಮಾಯಣದ ಪದ್ಯವಿರುವುದರಿಂದ ನಾಗಚಂದ್ರನು ನಾಗವರ್ಮನ ಕಾಲವಾದ ಕ್ರಿ. ಶ. ೧೧೪೫ಕ್ಕೆ ಹಿಂದೆ ಬದುಕಿದವನು(ಆರ್. ನರಸಿಂಹಾಚಾರ್).

೩. ನಾಗಚಂದ್ರನ ಗುರುವಾದ ಬಾಲಚಂದ್ರನ ಶಿಷ್ಯ ಶುಭಕೀರ್ತಿಯ ಸಧರ್ಮಿ ಮೇಘಚಂದ್ರ. (ಮರಣ ೧೧೧೫)ನನ್ನು ಸ್ತುತಿಸುವ ಕ್ರಿ. ಶ. ೧೧೧೫ರ ಬೆಳ್ಗೊಳದ ೧೨೭ರ ಶಾಸನಪದ್ಯ ನಾಗಚಂದ್ರ ಕೃತವಾಗಿದೆ(ಆರ್. ನರಸಿಂಹಾಚಾರ್, ಗೋವಿಂದ ಪೈ).

೪. ಮೇಘಚಂದ್ರನನ್ನು, ಆತನ ಶಿಷ್ಯನಾದ ಪ್ರಭಾಚಂದ್ರನ (ಮರಣ ೧೧೪೫) ಸಧರ್ಮಿ ವೀರಣಂದಿಯನ್ನು ಸ್ತುತಿಸುವ ಕ್ರಿ. ಶ. ೧೧೪೫ರ ಶ್ರವಣಬೆಳ್ಗೊಳ ೧೪೦ರ ಶಾಸನಪದ್ಯಗಳು ನಾಗಚಂದ್ರ ಕೃತವಾಗಿವೆ(ಗೋವಿಂದ ಪೈ).

೫. ಪಂಪರಾಮಾಯಣದ ೨-೫೯, ೧೦-೭೭, ೬-೪೨, ೧-೪೫ನೆಯ ಪದ್ಯಗಳಿರುವ ವಿಜಾಪುರ ಶಾಸನ ಕ್ರಿ. ಶ. ೧೧೦೧-೧೧೧೦ರ ಮಧ್ಯ ಹುಟ್ಟಿರಬಹುದು(ಗೋವಿಂದ ಪೈ).

೬. ಮದ್ರಾಸ ಪ್ರಾಚ್ಯಕೋಶಾಲಯದಲ್ಲಿರುವ ಕ್ರಿ.ಶ. ೧೧೦೫ರ ಶಾಸನ ಬರೆದ ಹಂಪಕವಿಯು ನಾಗಚಂದ್ರನಾಗಿರಬಹುದು(ಆರ್. ನರಸಿಂಹಾಚಾರ್).

ಇವುಗಳಲ್ಲಿ ಇವರು ೩, ೪ನೆಯ ಅಂಶಗಳನ್ನು ಗಟ್ಟಿಯಾಗಿ ಅವಲಂಬಿಸಿದ್ದಾರೆ. ಅಂದರೆ ಆರ್. ನರಸಿಂಹಾಚಾರ್‌ರು ನಾಗಚಂದ್ರರಚಿತ ಮೇಘಚಂದ್ರನ ಸ್ತುತಿಪರ ಪದ್ಯವನ್ನೊಳಗೊಂಡ ಕ್ರಿ. ಶ. ೧೧೧೫ರ ಶಾಸನ (ನಂ. ೧೨೭)ದ ಮೇಲೆ ಗಮನವಿಟ್ಟರೆ, ಪೈಗಳು ಮೇಘಚಂದ್ರ ಮತ್ತು

೨೦. ವೆಂಕಟಸುಬ್ಬಯ್ಯನವರು ಈ ತಪ್ಪುಗಳ್ನು ಎತ್ತಿ ತೋರಿಸಿದರಾದರೂ ಪಂಪರಾಮಾಯಣ ಮಲ್ಲಿನಾಥಪುರಣಗಳಲ್ಲಿಯ ಮುನಿಸ್ತುತಿ ಪದ್ಯಗಳನ್ನು ಇದೇ ಹೆಸರಿನ ಇತ್ತೀಚಿನ ಕವಿಗಳಿಗಾಗಿ ಶ್ರವಣಬೆಳ್ಗೊಳ ಶಾಸನಗಳು ಬಳಸಿಕೊಂಡಿವೆಯೆಂಬ ತಮ್ಮದೇ ಆದ ತಪ್ಪನ್ನ ಮಾಡಿದರು.

ಆತನ ಶಿಷ್ಯ ವೀರಣಂದಿಗಳ ಸ್ತುತಿಪರ ಪದ್ಯಗಳನ್ನೊಳಗೊಂಡ ಕ್ರಿ. ಶ. ೧೧೪೫ರ ಶಾಸನ (ನಂ. ೧೪೦)ದ ಮೇಲೆ ಗಮನವಿಟ್ಟಿದ್ದಾರೆ. ಒಬ್ಬ ಕವಿ ತನಗಿಂತ ವಯಸ್ಸಿನಲ್ಲಿ ಹಿರಿಯ ಮತ್ತು ಕಿರಿಯ ಪೂಜ್ಯ ವ್ಯಕ್ತಿಗಳನ್ನು ಸ್ತುತಿಸುವುದು ಸಹಜವಾದುದರಿಂದ ನಾಗಚಂದ್ರನು ಗುರು ಮೇಘಚಂದ್ರ, ಶಿಷ್ಯ ವೀರಣಂದಿಗಳಲ್ಲಿ ಯಾರ ಸಮವಯಸ್ಕನೆಂದು ಗುರುತಿಸುವುದು ಮುಖ್ಯವಾಗಿದೆ. ಇಂಥ ಪ್ರಸಂಗದಲ್ಲಿ ೧೧೮೯ರ ಅಗ್ಗಳನ ಗೆಳೆಯ ಬ್ರಹ್ಮಶಿವನು ನಾಗಚಂದ್ರನ ಮೊಮ್ಮಗನೆಂಬ ಹೊಸ ಆಧಾರ, ೧೧೪೮ರಲ್ಲಿ ನಾಗಚಂದ್ರನ ಮಗನಿಗಾಗಿ ಮೇಘಚಂದ್ರನೆಂಬುವನು ಸಮಾಧಿಶತಕ ವ್ಯಾಖ್ಯಾನ ಬರೆದಿರುವನೆಂಬ ಪಾಠಕ ಅವರ ಹಳೆಯ ವಿಚಾರಗಳನ್ನು ಹಿಡಿದು ಡಾ. ಡಿ. ಎಲ್. ನರಸಿಂಹಾಚಾರ್ಯರು ನಾಗಚಂದ್ರನ ಕಾಲ ಕ್ರಿ. ಶ. ೧೧೪೦ ಎಂಬ ಪೈಗಳ ಅಭಿಪ್ರಾಯವನ್ನು ಬೆಂಬಲಿಸುತ್ತಾರೆ.[೨೧] ಆದರೆ ಇದಕ್ಕಿಂತ 'ಸಮವಯಸ್ಕತೆ'ಯ ಶೋಧ ನಡೆಸುವುದು ಹೆಚ್ಚು ಯೋಗ್ಯವಾದುದು.

ಬೆಳ್ಗೊಳದ ಶಾಸನ (ನಂ. ೧೨೭, ೧೪೦) ಮತ್ತು ನಾಗಚಂದ್ರನ ಕೃತಿಗಳಿಂದ ಗುರುಪರಂಪರೆಯ ಈ ಚಿತ್ರ ಹೀಗೆ ಸಿದ್ಧವಾಗುತ್ತದೆ:

ಸಕಲಚಂದ್ರ
|
(ಮರಣ ೧೧೧೫) ಮೇಘಚಂದ್ರ (ಸಧರ್ಮಿ)
|
(ಮರಣ ೧೧೪೫) ಪ್ರಭಾಚಂದ್ರ (ಸಧರ್ಮಿ) ವೀರಣಂದಿ

ಬಾಲಚಂದ್ರ
|
ಶುಭಕೀರ್ತಿ — ನಾಗಚಂದ್ರ

ಇಲ್ಲಿ ೧೧೧೫ರಲ್ಲಿ ಮರಣ ಹೊಂದಿದ ಮೇಘಚಂದ್ರ ಮತ್ತು ನಾಗಚಂದ್ರರು ಸಧರ್ಮಿಗಳೂ ಸಮವಯಸ್ಕರೂ ಆಗಿ ತೋರುವುದರಿಂದ, ಕಿರಿಯವನಾಗಿರಬಹುದಾದ ವೀರಣಂದಿಯನ್ನು ಹೊಗಳಿರಬಹುದಾದರೂ ೧೧೧೫ರ ಸುಮಾರಿಗೆ ನಾಗಚಂದ್ರನೂ ತೀರಿಕೊಂಡಿರಬೇಕು; ಇಲ್ಲವೆ ತೀರ ವೃದ್ಧನಾಗಿರಬೇಕು. ಅದಕ್ಕಾಗಿ ನಾಗಚಂದ್ರನ ಕಾವ್ಯ ರಚನಾವ್ಯಾಪಾರ ಕ್ರಿ. ಶ. ೧೧೧೫ಕ್ಕೆ ಹಿಂದೆ ಹೇಳಬೇಕಾಗುತ್ತದೆ.

ವಿಜಾಪೂರ ಶಾಸನದ ಕಾಲದ ೧೧೦೧–೧೧೧೦ರ ಮಧ್ಯವೆಂದು ಪೈಗಳ ಊಹೆ. ಆದರೆ ಅದರ ಕಾಲ ಕ್ರಿ. ಶ. ೧೦೭೪ ಎಂದು ಶಾಸನದಿಂದಲೇ ತಿಳಿದುಬರುತ್ತದೆ. ಇದು ನಾಗಚಂದ್ರನನ್ನು ೧೧ನೆಯ ಶತಮಾನದ ಉತ್ತರಾರ್ಧದಲ್ಲಿ ನಿಲ್ಲಿಸುತ್ತದೆ.

ಇತ್ತಿಚೆ ಪ್ರಕಟವಾದ ಕರ್ನೂಲ ಜಿಲ್ಲೆಯ ಕರ್ನೂಲ ತಾಲೂಕಿನ ಪಂಚಲಿಂಗಾಲ ಗ್ರಾಮದ ಪಂಚಲಿಂಗೇಶ್ವರದೇವಾಲಯದ ಗದ್ಯಶಾಸನವೊಂದು "ಈ ಶಾಸನಮಂ ನಾಗಚಂದ್ರ ಕವೀಂದ್ರಂ ಬರೆದಂ" ಎಂದು ಮುಗಿಯುತ್ತದೆ.[೨೧ಎ] ಇದರ ಕಾಲ ಕ್ರಿ. ಶ. ೧೦೬೮, ಇದು ಶೈವಶಾಸನ,

೨೧. ಪಂಪರಾಮಾಯಣ ಸಂಗ್ರಹ XV XVII

೨೧.ಎ. ಕರ್ಣಾಟಕ ಕವಿಚರಿತೆ (೧೦೬೧) ಅನು–I-೫

ಕರ್ನೂಲ ಜಿಲ್ಲೆ ದೂರದ ಸ್ಥಳ ಎಂಬ ಸಂದೇಹಗಳನ್ನು ಬಿಟ್ಟರೆ ಮಾತ್ರ ನಾಗಚಂದ್ರನ ಕಾವ್ಯರಚನೆಗೆ ಸಮಕಾಲೀನವಾಗಿರುವ ಈ ಶಾಸನವನ್ನೂ ಆತನೇ ಬರೆದಿರಲು ಸಾಧ್ಯವಿದೆ.[೨೨]

ಒಟ್ಟಿನಲ್ಲಿ ನಾಗಚಂದ್ರ ೧೧ ಮತ್ತು ೧೨ನೆಯ ಶತಮಾನಗಳ ಮಧ್ಯದಲ್ಲಿ ಬದುಕಿದ್ದರೂ ಅವನು ಸಾಹಿತ್ಯರಚನೆಯ ಸಾರವತ್ತಾದ ಜೀವನವನ್ನು ೧೧ನೆಯ ಶತಮಾನದ ಉತ್ತರಾರ್ಧದಲ್ಲಿ ಕಳೆದಿರಬೇಕು.

ಜನ್ಮಸ್ಥಳ : ಕವಿ ನಾಗಚಂದ್ರ ಜನಿಸಿದ ಇಲ್ಲವೆ ನೆಲಸಿದ ಊರಿನ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ.

> ನಿಜವಿಭವೋದಯಂ ಸಫಳಮಾಯ್ತೆನೆ ಮಲ್ಲಿಜಿನೇಂದ್ರಗೇಹಮಂ
> ವಿಜಯಪುರಕ್ಕಲಂಕರಣಮಾಗಿರೆ ಮಾಡಿಸಿ........[೨೩]

ಎಂಬ ನಾಗಚಂದ್ರನ ಪದ್ಯದ ಪ್ರಕಾರ ಅವನ ಊರು ವಿಜಯಪುರ. ಈ ಹೆಸರಿನ ಅನೇಕ ಊರುಗಳು ಕರ್ನಾಟಕದಲ್ಲಿವೆ. ಇವುಗಳಲ್ಲಿ ನಾಗಚಂದ್ರನು ಜಿಲ್ಲೆಯ ಸ್ಥಳವಾದ ವಿಜಾಪುರವೆಂದು ಆರ್. ನರಸಿಂಹಾಚಾರ್‌ರ ಅಭಿಮತ. ಈ ಪಟ್ಟಣದ ಮ್ಯೂಜಿಯಂ ಶಾಸನವೊಂದರಲ್ಲಿ ಈತನ ಪದ್ಯಗಳಿರುವುದನ್ನು ಗುರುತಿಸುತ್ತ ಮಧುರಚೆನ್ನರು, ನರಸಿಂಹಾಚಾರ್ ಅಭಿಪ್ರಾಯವನ್ನು ಬೆಂಬಲಿಸುತ್ತಾರೆ.[೨೪] ಇದರ ಬಗ್ಗೆ ಡಾ. ಎ. ವೆಂಕಟಸುಬ್ಬಯ್ಯನವರು ಸಂದೇಹ ವ್ಯಕ್ತಪಡಿಸಿದರೆ,[೨೫] ಈತನ ಕಡಲವರ್ಣನೆಯ ವೈಶಿಷ್ಟ್ಯದ ಆಧಾರದಿಂದ "ಬನವಾಸಿದೇಶದ ಪಡುಗಡಿಯ ಕಡಲದಂಡೆ"ಯ

---

೨೨. ಇದಕ್ಕಿಂತ ಹಿಂದೆ ಹೋಗಲು ಇನ್ನೊಂದು ಹೊಸ ದಾರಿ ಕಾಣುತ್ತದೆ. ಪಂಪರಾಮಾಯಣದ "ಬಹುತಾಪಕ್ಕೆ ಬಿಗುರ್ತ......" ಎಂಬ ಪದ್ಯ ಭಾಷಾಭೂಷಣದಲ್ಲಿದೆ. ಇದು ಪ್ರಕ್ಷಿಪ್ತವಲ್ಲದಿದ್ದರೆ ನಾಗವರ್ಮನಿಗಿಂತ ನಾಗಚಂದ್ರ ಪ್ರಾಚೀನ. ಇತ್ತೀಚೆ ಲಭಿಸಿದ ನಾಗವರ್ಮನ ವರ್ಧಮಾನ ಪುರಾಣ ಮುಕ್ತಾಯಗೊಂಡ ಕಾಲ "ವಸುವರ್ಗಾಂತಮಿದ x ತೀತಳಕ ಭೂಭೃದ್ವತ್ಸರಂ ಚಿತ್ರಭಾ। ನು ಸಮಾಖ್ಯಾಬ್ಧಕಂ..."(ಚಿತ್ರಭಾನು ಶಕೆ ೯೦೪, ೧೦೨೪, ೧೦೮೪ರಲ್ಲಿ ಬರುತ್ತದೆ). ಇಲ್ಲಿ ಮೊದಲನೆ ಸಾಲು ದೋಷಪಾಠಯುತವೂ ತ್ರುಟಿತವೂ ಆಗಿದೆ. ಇದು "ವಸುವರ್ಗಾಂತ ನಿಧಿ ಪ್ರತೀತ ಶಕ ಭೂಭೃದ್ವತ್ಸರಂ" ಇರಬಹುದು. ವಸುವರ್ಗ(೮ X ೮=೬೪) ಅಂತ್ಯವಾಗುಳ್ಳ ನಿಧಿ (೯) ಅಂದರೆ ೯೬೪(ಕ್ರಿ.ಶ. ೧೦೪೨) ಎಂದು ಸಿದ್ಧವಾಗುತ್ತದೆ. ಈ ಸುಮಾರಿಗೆ ಪೊಟ್ಟಲಕೆರೆ ರಾಜಧಾನಿಯಿಂದ ರಾಜ್ಯವಾಳುತ್ತಿದ್ದ ಜಗದೇಕಮಲ್ಲ ಜಯಸಿಂಹ-IIನಲ್ಲಿ ನಾಗವರ್ಮ ಕಟಿಕೋಪಾಧ್ಯಾಯನಾಗಿರಬಹುದು. ಈತನ ವರ್ಧಮಾನಪುರಾಣವನ್ನು 'ಶೋಧಿಸಿದ' ವಾದಿರಾಜನು ಈ ಅರಸನಿಂದ ರಾಜ ಗೌರವ ಗಳಿಸಿದ್ದನೆಂಬುದೂ ಈ ಅಭಿಪ್ರಾಯವನ್ನು ಪೋಷಿಸಿಸುತ್ತಿದೆ. ನಾಗವರ್ಮನು ಕರ್ನಾಟ ಭಾಷಾಭೂಷಣವನ್ನು ೧೦೪೨ ಕ್ಕೆ ಬಹಳ ವರ್ಷಗಳ ತರುವಾಯ ಬರೆದು, ಅಲ್ಲಿ ಪಂಪರಾಮಾಯಣದ 'ಬಹುತಾಪಕ್ಕೆ ಬಿಗುರ್ತು..." ಪದ್ಯವನ್ನು ಸ್ವೀಕರಿಸಿರುವ ಸಂಭವವಿದೆ. ನಾವು ಊಹಿಸಿದಂತೆ ಈ ನಾಗವರ್ಮ ಪೊಟ್ಟಲಕೆರೆಯಲ್ಲಿ ಕಟಿಕೋಪಾಧ್ಯಾಯನಾಗಿದ್ದ. ವರ್ಧಮಾನಪುರಾಣವನ್ನು ತಿದ್ದಿದ ವಾದಿರಾಜ ರಾಜಗೌರವ ಗಳಿಸಿದುದು ಈ ಪೊಟ್ಟಲಕೆರೆಯಲ್ಲಿ, ಬ್ರಹ್ಮಶಿವ ಪೊಟ್ಟಲಕೆರೆಯವನೆಂಬುದು ಸ್ಪಷ್ಟ. ಹೀಗಾಗಿ ಬ್ರಹ್ಮಶಿವನ ಅಜ್ಜನಾದ ನಾಗಚಂದ್ರನಿಗೂ ಪೊಟ್ಟಲಕೆರೆ ಪ್ರದೇಶದ ಸಂಬಂಧವಿರುವ ಸಾಧ್ಯತೆಯಿದೆ. ಇಷ್ಟೆಲ್ಲ ವಿಚಾರಗಳನ್ನು ಖಚಿತ ಆಧಾರಗಳು ಸಿಗುವ ವರೆಗೆ ಒಂದು ಊಹೆಯಾಗಿ ಇಟ್ಟುಕೊಳ್ಳಬಹುದು.

೨೩. ಮಲ್ಲಿನಾಥಪುರಾಣಂ ೧೪-೨೧೧

೨೪. ಜಯಕರ್ನಾಟಕ ೮-೨. ೨೫. ಕೆಲವು ಕನ್ನಡ ಕವಿಗಳ ಜೀವನ ಕಾಲವಿಚಾರ ೪೪ ಅ.ಟಿ.

ಊರಿನವನಾಗರಬಹುದಾದ ಈತನು ಹೊಯ್ಸಳ ಆಸ್ಥಾನದಲ್ಲಿ ಕೆಲವು ದಿನ ಕಳೆದು, ಕಲ್ಯಾಣ ಚಾಲುಕ್ಯ ಮಲ್ಲಿಕಾರ್ಜುನನು ಆಳುತ್ತಿದ್ದ ವಿಜಾಪುರಕ್ಕೆ, ಅಲ್ಲಿಂದ ಸೋಮೇಶ್ವರನ ಆಸ್ಥಾನ (ಕಲ್ಯಾಣ)ಕ್ಕೆ ಹೋಗಿರಬೇಕೆಂದು ಶ್ರೀ ಗೋವಿಂದ ಪೈಗಳು ಊಹಿಸುತ್ತಾರೆ.[೨೫ಎ] ಇದು ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರ ಅಧಿಕಾರವ್ಯಾಪ್ತಿಗೆ ಸೇರಿದ ತಳಕಾಡುನಾಡಿನ ವಿಜಾಪುರವಾಗಿರುವ ಸಂಬಂಧವಿದೆಯೆಂದು ಡಾ. ಡಿ. ಎಲ್. ಎನ್. ಅಭಿಪ್ರಾಯ.[೨೬]

ಈ ರೀತಿ ಎಷ್ಟೇ ಸಂದೇಹಪಟ್ಟರೂ ಕವಿಚರಿತೆಕಾರರ ಮತ್ತು ಮಧುರಚೆನ್ನರ ಅಭಿಪ್ರಾಯ ಕೆಳಗಿನ ಆಧಾರಗಳಿಂದಾಗಿ ಇನ್ನೂ ಗಟ್ಟಿಯಾಗಿ ಉಳಿದಿದೆ.

೧. ಕರ್ನಾಟಕದಲ್ಲಿ ಹಲವು ವಿಜಯಪುರಗಳಿರಬಹುದು. ಜಿಲ್ಲೆಯ ಸ್ಥಳವಾದ ವಿಜಾಪುರದಲ್ಲಿ ಮಾತ್ರ ನಾಗಚಂದ್ರನ ಪದ್ಯಗಳನ್ನೊಳಗೊಂಡ ಶಾಸನವಿದೆ.

೨. 'ಕಡಲವರ್ಣನೆಯ ವೈಶಿಷ್ಟ್ಯ' ಎಂಬ ಆಧಾರ ಸಂಶೋಧನೆಯಲ್ಲ; ಊಹೆ.

೩. ಕಂತಿ, ಹಂಪರು ಹೊಯ್ಸಳರಲ್ಲಿದ್ದರೆಂದು ಉಲ್ಲೇಖಿಸುವ ರಾಜಾವಳಿ ಕಥೆ ಕೆಲವು ದಂತಕಥೆಗಳಿಂದ ಕೂಡಿದ ತೀರ ಇತ್ತೀಚಿನ ಕೃತಿ.

ಇವುಗಳಿಗೆ ಹೆಚ್ಚಿನದಾಗಿ ಇನ್ನೆರಡು ಆಧಾರಗಳನ್ನು ಇಲ್ಲಿ ಕೊಡಬಹುದು.

೧. ನಾಗಚಂದ್ರನ ಮೊಮ್ಮಗನಾಗಿರಬಹುದಾದ ಬ್ರಹ್ಮಶಿವನ ಪೊಟ್ಟಲಕೆರೆ ಮತ್ತು ಬ್ರಹ್ಮಶಿವನ ಗೆಳೆಯ ಅಗ್ಗಳನ ಇಂಗಳೇಶ್ವರಗಳಿಗೆ ಸಮೀಪವಿರುವುದೆಂದರೆ ಜಿಲ್ಲೆಯ ಸ್ಥಳವಾದ ವಿಜಾಪುರ.

೨. "ಜನಪತಿ ಸಭೆಯೊಳ್ ಪೂಜ್ಯಂ"[೨೭] "ಧರಣೀಭೃತ್ಪತಿಪೂಜ್ಯಂ"[೨೮] ಎಂದು ಹೇಳಿಕೊಂಡ ನಾಗಚಂದ್ರ, ಕಲ್ಯಾಣಚಾಲುಕ್ಯರ ರಾಜಧಾನಿಯಾಗಿದ್ಧ ಪೊಟ್ಟಲಕೆರೆ ಅಥವಾ ಯುವರಾಜ ಮಲ್ಲಿಕಾರ್ಜುನನ ರಾಜಧಾನಿಯಾಗಿದ್ದ ವಿಜಾಪುರದಲ್ಲಿ ಈ ಗೌರವ ಪಡೆದಿರಬಹುದು. ಇವುಗಳಲ್ಲಿ ತನ್ನ ಬಗ್ಗೆ ಹೇಳಿಕೊಂಡ "ಈ ವಸುಂಧರೆಗೆ ತಾಂ ಮಧ್ಯಸ್ಥನಾದೊಳ್ಪಿನಿಂ"[೨೯] ಎಂಬ ಮಾತು ಪೈಗಳ ಅಭಿಪ್ರಾಯವನ್ನು ತೊಡೆದುಹಾಕಿ, ರಾಜ್ಯದ ಮಧ್ಯಭಾಗದಲ್ಲಿರುವ ವಿಜಾಪುರಕ್ಕೆ ಹೆಚ್ಚು ಅನ್ವಯಿಸುವಂತೆ ತೋರುತ್ತದೆ.

೩. ಕೃತಿ ಪರಿಚಯ :

ನಾಗಚಂದ್ರನ ಕೃತಿಸಂಖ್ಯೆಯ ವಿಷಯವಾಗಿ ವಿದ್ವಾಂಸರಲ್ಲಿ ಊಹೆ ನಡೆದು, 'ಕಾಮನ ಕಾಳಗ'ವೆಂಬ ಭಾಮಿನಿ ಷಟ್ಪದಿ ಗ್ರಂಥ ಬೇರೊಬ್ಬ ನಾಗಚಂದ್ರನದೆಂದು, 'ಯೋಗಾಮೃತ'ವೆಂಬ

---

೨೫. ಎ. ಅಭಿನವಪಂಪ ೩೪–೩೬

೨೬. ಪಂಪರಾಮಾಯಣ ಸಂಗ್ರಹ ಪೀಠಿಕೆ IX ಅ.ಟಿ.

೨೭. ಮಲ್ಲಿನಾಥಪುರಾಣಂ ೧–೪೧

೨೮. ಮಲ್ಲಿನಾಥಪುರಾಣಂ ೧–೬೫

೨೯. ಮಲ್ಲಿನಾಥಪುರಾಣಂ ೧–೬೫

ಸಂಕಲನಗ್ರಂಥ ನೂತನ ನಾಗಚಂದ್ರನದೆಂದು ತೀರ್ಮಾನವಾಗಿದೆ. ಇವಲ್ಲದೆ ದೇವಚಂದ್ರ ಸೂಚಿಸುವ ಎರಡು ಗ್ರಂಥಗಳಲ್ಲಿ ಜಿನಮುನಿತನಯದ ಬಗ್ಗೆ ಸಂದೇಹವಿದೆ; ಜಿನಾಕ್ಷರಮಾತೆ ಇನ್ನೂ ಅಲಭ್ಯ.[೩೦] "ಈ ಶಾಸನಮಂ ನಾಗಚಂದ್ರ ಕವೀಂದ್ರಂ ಬರೆದಂ" ಎಂದು ಕೊನೆಗೊಳ್ಳುವ ಪಂಚಲಿಂಗಾಲ ಗ್ರಾಮದ ಪಂಚಲಿಂಗೇಶ್ವರ ದೇವಸ್ಥಾನಕ್ಕೆ ಸಂಬಂಧಪಟ್ಟ ಶೈವಶಾಸನ,[೩೧] ಹಂಪಕವಿ ವಿರಚಿತ ಮದ್ರಾಸ್ ಮ್ಯೂಜಿಯಂ ಶಾಸನ, ಪಂಪರಾಮಾಯಣದ ಪದ್ಯ ಮತ್ತು ಪದ್ಯಛಾಯೆಯನ್ನೊಳಗೊಂಡ ವಿಜಾಪುರ ಶಾಸನ,[೩೨] ಪಂಪರಾಮಾಯಣ, ಮಲ್ಲಿನಾಥಪುರಾಣಗಳ ಪದ್ಯಗಳನ್ನೊಳಗೊಂಡ ಶ್ರವಣಬೆಳ್ಗೊಳ ಶಾಸನ[೩೩]–ಇವು ನಾಗಚಂದ್ರ ಕೃತವೆಂಬುದಕ್ಕೆ ಗಟ್ಟಿ ಆಧಾರಗಳಿಲ್ಲ.

ಇವುಗಳನ್ನು ಬಿಟ್ಟರೆ ನಾಗಚಂದ್ರನವೆಂದು ಸ್ಪಷ್ಟವಾಗಿ ತಿಳಿದುಬಂದ ಕೃತಿಗಳು: ೧. ರಾಮಚಂದ್ರಚರಿತ ಪುರಾಣಂ, ೨. ಮಲ್ಲಿನಾಥಪುರಾಣಂ ಇವುಗಳಲ್ಲಿ ಮೊದಲು ಹುಟ್ಟಿದ ಕೃತಿ ಮಲ್ಲಿನಾಥಪುರಾಣವೆಂದು ಶೈಲಿಯನ್ನಾಧರಿಸಿ ಹೇಳುವ ಮಾತು ಇನ್ನೂ ಆಧಾರಗಳನ್ನು ಬಯಸುತ್ತದೆ.

'ರಾಮಚಂದ್ರಚರಿತ ಪುರಾಣ'ದ ರೂಢಿಯ ಹೆಸರು 'ಪಂಪರಾಮಾಯಣ', ಕನ್ನಡದಲ್ಲಿ ಪಂಪಭಾರತದ ತರುವಾಯ ಬಂದ ವಸ್ತುವಿಸ್ತಾರವುಳ್ಳ ಮಹಾಕೃತಿಯಿದು. ಈ ದೃಷ್ಟಿಯಿಂದ ಅಭಿನವಪಂಪ ಅರ್ಥಪೂರ್ಣ ಹೆಸರು. ಇದು ವಿಮಲಸೂರಿ ಪದ್ಧತಿಯ ಜೈನರಾಮಾಯಣ. ರಾವಣನ ಪಾತ್ರಕ್ಕೆ ದುರಂತ ತಿರುವು ಕೊಟ್ಟುದು ಈ ಪದ್ಧತಿಯ ವೈಶಿಷ್ಟ್ಯ. ಈ ಅಂಶವನ್ನು ಕನ್ನಡಕ್ಕೆ ಸಮರ್ಪಕವಾಗಿ ಬಗ್ಗಿಸಿ ತಂದಿದ್ದಾನೆ, ನಾಗಚಂದ್ರ. ಆದರೆ ರಾವಣನಿಗಾಗಿ ಬಳಸಿದ ಜಲೋಪಮೆ, ಕಾವ್ಯದುದ್ದಕ್ಕೂ ಬಳಸಿದ ಅರ್ಥಾಂತರನ್ಯಾಸ ನಾಗಚಂದ್ರನ ವೈಶಿಷ್ಟ್ಯಗಳಾಗಿವೆ.

ಮಲ್ಲಿನಾಥಪುರಾಣದ ವಸ್ತು ೧೯ನೆಯ ತೀರ್ಥಂಕರನ ಪುಣ್ಯಚರಿತ್ರೆ, ದಿಗಂಬರ ಜೈನ ಧಾರ್ಮಿಕ ಸಾಹಿತ್ಯದ ದ್ರವ್ಯಾನುಯೋಗ, ಕರಣಾನುಯೋಗ, ಚರಣಾನುಯೋಗ, ಪ್ರಥಮಾನುಯೋಗ ಎಂಬ ನಾಲ್ಕು ವರ್ಗಗಳಲ್ಲಿ ಒಂದಾದ–೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರೆಂಬ ತ್ರಿಷಷ್ಟಿಶಲಾಕಾ ಪುರುಷರ ಚರಿತ್ರೆಯನ್ನೊಳಗೊಂಡ–ಪ್ರಥಮಾನುಯೋಗ ವಿಭಾಗಕ್ಕೆ ಸಂಬಂಧಿಸಿದೆ; ಈ ಚರಿತ್ರೆ.

ಕನ್ನಡದಲ್ಲಿ ಬೆಳೆದುಬಂದ ಈ ಶಲಾಕಾಪುರುಷರ ಪುರಾಣಗಳಿಗೆ ಮೂಲ ಆಕರವೆಂದರೆ ಸಂಸ್ಕೃತ ಮತ್ತು ಪ್ರಾಕೃತ ಸಾಹಿತ್ಯ. ಅಲ್ಲಿ ಅರವತ್ತುಮೂವರ ಅಖಂಡ ಪುರಾಣ, ಒಬ್ಬೊಬ್ಬರ ಸ್ವತಂತ್ರ ಪುರಾಣಗಳು ಹುಟ್ಟಿಬಂದಿವೆ. ಆದರೆ ನಾಗಚಂದ್ರನಿಗೆ ಮೊದಲು ಸಂಸ್ಕೃತ, ಪ್ರಾಕೃತ, ಕನ್ನಡಗಳಲ್ಲಿ ಮಲ್ಲಿನಾಥಪುರಾಣವನ್ನು ಯಾರೂ ರಚಿಸಿದಂತಿಲ್ಲ. ಜಿನೇಶ್ವರ ಸೂರಿ (ಪ್ರಾ), ಹರಿಭದ್ರಸೂರಿ (ಪ್ರಾ), ಭುವನತುಂಗಸೂರಿ (ಪ್ರ), ಜಿನಪ್ರಭುಸೂರಿ (ಪ್ರಾ), ವಿನಯಚಂದ್ರ (ಸಂ),

---

೩೦. ಪಂಪರಾಮಾಯಣ ಸಂಗ್ರಹ ಪೀಠಿಕೆ, ೧ ಅ .ಟಿ. ನೋಡಿರಿ

೩೧. ಕರ್ಣಾಟಕ ಕವಿಚರಿತೆ (೧೯೬೦) ಅನು I-೫

೩೨. ಕರ್ಣಾಟಕ ಕವಿಚರಿತೆ ಅನು ೧೧೧

೩೩. ಜಯಕರ್ನಾಟಕ ೮–೨

ಶುಭವರ್ಧನ, ವಿಜಯಸೂರಿ, ಸಕಲಕೀರ್ತಿ, ಭಟ್ಟಾರಕ ಪ್ರಭಾಚಂದ್ರ ಮೊದಲಾದ[೩೪] ದಿಗಂಬರ–ಶ್ವೇತಾಂಬರ ಕವಿಗಳ ಸಂಸ್ಕೃತ, ಪ್ರಾಕೃತ ಮಲ್ಲಿನಾಥ ಪುರಾಣಗಳು ಕನ್ನಡ ಮಲ್ಲಿನಾಥ ಪುರಾಣಕ್ಕಿಂತ ಈಚಿನವು. ಇದು ನಿಜವಿದ್ದರೆ ಸಮಗ್ರ ಭಾರತದಲ್ಲಿಯೇ ಕನ್ನಡ ಮಲ್ಲಿನಾಥ ಪುರಾಣ ಪ್ರಥಮ ಸ್ವಂತಂತ್ರಕೃತಿ; ನಾಗಚಂದ್ರ ಮಲ್ಲಿನಾಥ ಪುರಾಣದ ಪ್ರಥಮಶಿಲ್ಪಿ.

"... ......ಕಿಜಿದೀ ಕಥಾಪತಿ

ಸ್ವಂದಮಿದಂ ನಿಮಿರ್ಚಿ ಕವಿತಾರಸಮಂ ನೆಜೆ ಪೇೞ್ದರಿಲ್ಲ ಮು

ನ್ನೆಂದು ಮಹಾಕವೀಶ್ವರರೊಳೊರ್ವರುಂ..........."[೩೫]

ಎಂದು ನಾಗಚಂದ್ರನ ಮಾತಿನಲ್ಲಿಯೂ ಇದೇ ಧ್ವನಿ ಇರುವಂತೆ ತೋರುತ್ತದೆ.

ಹೀಗಿರುವಾಗ ನಾಗಚಂದ್ರನಿಗೆ ಇರಬಹುದಾದ ಆಕರಗಳೆಂದರೆ, ಅನುಷಂಗಿಕವಾಗಿ ತೀರ್ಥಂಕರ ವಿಷಯವನ್ನೊಳಗೊಂಡ ಸಮವಾಯಾಂಗ, ವಿಶೇಷಾವಶ್ಯಕ ಭಾಷ್ಯ, ತಿಲೋಯಪಣ್ಣತ್ತಿ ಮತ್ತು ಜಿನಸೇನನ ಹರಿವಂಶ ಪುರಾಣಗಳನ್ನು ಬಿಟ್ಟರೆ ೬೩ರನ್ನು ಸಮಗ್ರವಾಗಿ ಚಿತ್ರಿಸಿದ ಜೈನಪುರಾಣಗಳು. ನಾಗಚಂದ್ರನಿಗೆ ಪ್ರಾಚೀನದಲ್ಲಿ ಹುಟ್ಟಿದ ಇವುಗಳ ವಿವರ ಹೀಗಿದೆ:

೧. ? – ಇಂದ್ರಭೂತಿ[೩೬]

೨. ? – ಕೂಚಿಭಟ್ಟಾರಕ[೩೭]

೩. ? – ಶ್ರೀನಂದಿ[೩೮]

೩೪. ಜಿನರತ್ನಕೋಶ(ಎಚ್. ಡಿ. ವೆಂಲಕರ್) ಪು. ೩೦೨–೩೦೩

೩೫. ಮಲ್ಲಿನಾಥಪುರಾಣಂ ೧–೪೫

೩೬. ಅಸದೃಶ ವಾಗ್ವಿಭೂತಿಯುತನಾದಿ ಕವೀಶ್ವರನಿಂದ್ರಭೂತಿ ವ
ವರ್ಣಿಸಿದ ಮಹಾಪುರಾಣ ಕಥೆಯಂ ಭುವನತ್ರಿತಯ ಪ್ರಸಿದ್ಧಮಂ
ಪೊಸಯಿಸಿ ಪೇೞಲೀ ಕೃತಿಯೊಳಾಂ ಬಗೆದೆಂ ಭರದಿಂದಮೀಸಲಾ
ಟಿಸುವೆಳವಾಳೆಯಂತಿರೆ ತಿಮಿಂಗಳನೀಸಿದಗಾಧವಾರ್ಧಿಯಂ

ಕೊನೆಯ ತೀರ್ಥಂಕರನಾದ ಮಹಾವೀರನ ಪ್ರಮುಖಗಣಧರ ಗೌತಮ. ಇವನ ಇನ್ನೊಂದು ಹೆಸರು ಇಂದ್ರಭೂತಿ. ಈ ಪದ್ಯದಲ್ಲಿ ಹೇಳಿದ ಇಂದ್ರಭೂತಿ ಈತನೋ ಬೇರೊಬ್ಬನೋ ಸ್ಪಷ್ಟವಾಗುವುದಿಲ್ಲ. ಈತನಾಗಿದ್ದರೆ ವಾಚಕ ರೂಪದಲ್ಲಿ ಹೇಳಬೇಕಾದ ಇವನು ಲಿಖಿತ ರೂಪದಲ್ಲಿ ಒಂದು ಕೃತಿ ಬರೆದನೇ? ಎಂಬ ಸಂದೇಹವುಂಟಾಗುತ್ತದೆ.

೩೭–೪೦. ವಿರಚಿಸಿದರ್ ಮುನ್ನೆ ಮಹಾ। ಪುರಾಣಮಂ ನೆಗಟ್ಟಿ ಕೂಚಿಭಟ್ಟಾರಕರುಂ
ಪರಮ ಶ್ರೀನಂದಿಮುನೀ । ಶ್ವರರುಂ ತದನಂತರಂ ಜಿನಾಗಮತಿಲಕರ್॥
ಕವಿಪರಮೇಶ್ವರರ್ ಬರೆದುದಂ ಜಿನಸೇನ ಮಹಾಮುನೀಶರೀ
ಯವನಿಗೆ ಪೇೞ್ದು ಮಾಣೆ ಗುಣಭದ್ರಮುನೀಶ್ವರರೆಯ್ದೆ ಪೇೞ್ದು ಪ
ಲ್ಲವಿಸಿದುದಂ ತ್ರಿಷಷ್ಟಿಪುರುಷಪ್ರತಿಬದ್ಧಪುರಾಣಮಮಂ ಮಹೋ
ತ್ಸವದೊಳೆ ಭವ್ಯಕೋಟಿಗಜೆಯಲ್ ಬರೆದಂ ಗುಣರತ್ನಭೂಷಣಂ॥

೪. ವಾಗರ್ಥಸಂಗ್ರಹ(ಕನ್ನಡ?) – ಕವಿಪರಮೇಷ್ಠಿ[೩೯]

೫. ಮಹಾಪುರಾಣ(ಸಂಸ್ಕೃತ) – ಜಿನಸೇನ, ಗುಣಭದ್ರ[೪೦]

೬. ತಿಸಟ್ಠಿಮಹಾಪುರಿಸ – ಪುಪ್ಪದಂತ (ಕ್ರಿ.ಶ. ೯೬೫)[೪೧]
ಗುಣಾಲಂಕಾರು(ಅಪಭ್ರಂಶ)

೭. ತ್ರಿಷಷ್ಟಿಶಲಾಕಾಪುರುಷಪುರಾಣ(ಕನ್ನಡ) – ಚಾವುಂಡರಾಯ[೪೨]

೮. ಮಹಾಪುರಾಣ(ಸಂಸ್ಕೃತ) – ಮಲ್ಲಿಷೇಣಸೂರಿ(ಕ್ರಿ.ಶ. ೧೦೪೭)[೪೩]

ಇವುಗಳಲ್ಲಿ ಮೊದಲಿನ ಮೂರರ ಬಗ್ಗೆ ಏನೂ ತಿಳಿದುಬಂದಿಲ್ಲ; ನಾಲ್ಕನೆಯದರ ಹೆಸರು ವಾಗರ್ಥಸಂಗ್ರಹ, ಸ್ವರೂಪ ಗದ್ಯಕಥಾ, ಭಾಷೆ ಕನ್ನಡ ಇರಬಹುದು. ಮಿಕ್ಕ ಕೃತಿಗಳು ಲಭಿಸಿವೆ. ಇವುಗಳಲ್ಲಿ ಯಾವುದು ಅಥವಾ ಯಾವ ಬೇರೊಂದು ತನಗೆ ಆಕರವೆಂದು ನಾಗಚಂದ್ರ ಹೇಳಿಲ್ಲ, ಜಿನಸೇನ, ಗುಣಭದ್ರ, ಪುಷ್ಪದಂತ, ಜಾವುಂಡರಾಯರ ಕೃತಿಗಳಲ್ಲಿಯ ಕಥೆಯೇ ನಾಗಚಂದ್ರನ ಕೃತಿಯಲ್ಲಿದೆ. ಕರ್ನಾಟಕದಲ್ಲಿ ಹೆಚ್ಚು ಪ್ರಸಿದ್ಧವಾಗಿರಬಹುದಾದ ಈ ಕೃತಿಗಳನ್ನು ಓದಿರಬಹುದಾದರೂ ಜಿನಸೇನಾಚಾರ್ಯರ ಪೂರ್ವಪುರಾಣವನ್ನನುಸರಿಸಿದ ಪಂಪನಂತೆ ಈತ ಯಾವುದನ್ನೂ ಅನುಸರಿಸಿದಂತಿಲ್ಲ. ಅದಕ್ಕಾಗಿಯೇ "ಮಗಧೇಶ್ವರ ಮಂಡಳಿಕಂಗೆ...... ವಿಪುಲಾದ್ರಿಯೊಳ್....... ಗೌತಮೋತ್ತಮಂ...........ವರ್ಧಮಾನಗುರು ಸನ್ನಿಧಿಯೊಳ್ತಿಳಿವಂತು ಪೇೞ್ದುದಂ ವಿರಚಿಸುವೆಂ ಮನಂ ಬಯಸೆ ಮಲ್ಲಿಜಿನೇಂದ್ರ ಮಹಾಪ್ರಬಂಧಮಂ"[೪೪] (ವರ್ಧಮಾನಜಿನನಿಂದ ಶ್ರಾವಣವಾಗಿ ಬಂದ ಕಥೆಯನ್ನು ಚಾಕ್ಷುಷಗೊಳಿಸುವೆ) ಎಂದು ಹೇಳಿದಂತಿದೆ.

ಮಲ್ಲಿನಾಥ ಚರಿತ್ರೆ :

ಣ ವಿ ಸಿಜ್ಝ ಇ ವತ್ಥಧರೋ ಜಿಣಸಾಸಣೆ ಜಇ ವಿ ಹೋಇ ತಿತ್ಥಯರೋ।
ಣಗ್ಗೋ ವಿಮೋಕ್ಖಮಗ್ಗೋ ಸೇಸಾ ಉಮ್ಮಗ್ಗಯಾ ಸವ್ವೇ ॥[೪೫]

(ಜಿನಶಾಸನದಲ್ಲಿ ತೀರ್ಥಂಕರರಾಗಿದ್ದರೂ ವಸ್ತ್ರಧಾರಿಗಳಾಗಿದ್ದರೆ ಸಿದ್ಧಿ ಪಡೆಯಲಾರರು. ನಗ್ನತ್ವವೇ ಮೋಕ್ಷದ ಮಾರ್ಗ, ಉಳಿದುವೆಲ್ಲ ಉನ್ಮಾರ್ಗ)

ಹೀಗೆ ದಿಗಂಬರತ್ವವೇ ಮೋಕ್ಷಮೂಲವೆಂಬ ನಂಬಿಕೆ ಕಾರಣವಾಗಿ, ದಿಗಂಬರತ್ವವಿಲ್ಲದ ಸ್ತ್ರೀಗೆ ಮೋಕ್ಷವಿಲ್ಲದಾಯಿತು. ಸ್ತ್ರೀ ವಿಷಯವಾಗಿಯೇನೊ ನಡೆಯಿತು. ಆದರೆ ತರುವಾಯ ಬಂದ, ದಿಗಂಬರತ್ವವನ್ನೊಪ್ಪದ ಪುರುಷರು ಮೋಕ್ಷವನ್ನಪೇಕ್ಷಿಸಿದಾಗ, ಸ್ತ್ರೀಗೂ ಮೋಕ್ಷವಿದೆಯೆಂದು

---

೩೯. ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ, ಪು. ೨೭೭

೪೧. ಈ ಪುಷ್ಪದಂತ ರಾಷ್ಟ್ರಕೂಟ ಕೃಷ್ಣ IIIನ ಮಂತ್ರಿ ಭರತನ ಆಶ್ರಯಹೊಂದಿ ಮಳಖೇಡದಲ್ಲಿದ್ದನು.

೪೩. ಇದು ನನಗೆ ನೋಡಲಿಕ್ಕೆ ದೊರೆಯಲಿಲ್ಲ.

೪೪. ಮಲ್ಲಿನಾಥ ಪುರಾಣಂ ೧-೫೩

೪೫. ಷಟ್ಪ್ರಾಭೃತ(ಕುಂದಕುಂದಾಚಾರ್ಯ), ಪು. ೬೭

ಒಪ್ಪಿಕೊಳ್ಳಬೇಕಾಯಿತು. ಇಂಥ ವಿಚಿತ್ರ ಪರಿಸ್ಥಿತಿಯಲ್ಲಿ ೧೯ನೆಯ ಜಿನನು ಮಲ್ಲಿನಾಥನೆಂಬ ಪುರುಷನೆಂದು ದಿಗಂಬರರು, ಮಲ್ಲಿಯೆಂಬ ಸ್ತ್ರೀಯೆಂದು ಶ್ವೇತಾಂಬರರು ಹೇಳುವುದು ರೂಢವಾಯಿತು. ಆಗ ಎರಡೂ ಸಂಪ್ರದಾಯದವರು ಎರಡು ಬೇರೆ ರೂಪದ ಕಥೆಗಳನ್ನು ಕಂಡರಿಸಿದರು.

ಶ್ವೇತಾಂಬರ ಸಂಪ್ರದಾಯದ ಕಥೆ :[೪೬] ಪಶ್ಚಿಮ ವಿದೇಹದ ಸಲಿಲಾವತೀ ಪ್ರಾಂತದಲ್ಲಿ ವೀತಕೋಶ ಹೆಸರಿನ ಪಟ್ಟಣವಿದೆ. ಅದನ್ನಾಳುವ ಬಲ, ಧಾರಣಿ ಎಂಬ ರಾಜದಂಪತಿಗಳ ಮಗ ಮಹಾಬಲ. ಇಂದ್ರಕುಬ್ಜವನದ ಮುನಿಗಳ ಸನ್ನಿಧಿಯಲ್ಲಿ ಧರ್ಮೋಪದೇಶವನ್ನು ಕೇಳಿ ಬಲನು ತಪಸ್ಸಿಗೆ ಹೋದನು. ತಂದೆಯ ತರುವಾಯ ರಾಜ್ಯವಾಳಿದ ಮಹಾಬಲನಿಗೆ ಕಮಲಶ್ರೀ ಮೊದಲಾದ ೫೦೦ ಜನ ರಾಣಿಯರು; ಅಚಲ, ಧರಣ, ಪೂರಣ, ವಸು, ವೈಶ್ರವಣ, ಅಭಿಚಂದ್ರ ಎಂಬ ಬಾಲ್ಯಸ್ನೇಹಿತರು; ಬಲಭದ್ರ ಹೆಸರಿನ ರಾಜಕುಮಾರ. ಜಿನಧರ್ಮಶ್ರವಣದಿಂದ ವೈರಾಗ್ಯಪರನಾದ ಮಹಾಬಲ ತನ್ನ ಆರು ಜನ ಮಿತ್ರರೊಂದಿಗೆ ವರ್ಧಮಾಮುನಿ ಸನ್ನಿಧಿಯಲ್ಲಿ ದೀಕ್ಷೆಪಡೆದು ತಪಸನ್ನಾಚರಿಸಿದ. ಒಬ್ಬ ಆಚರಿಸಿದ ತಪಸ್ಸನ್ನು ಏಳುಜನರೂ ಆಚರಿಸಬೇಕೆಂಬುದು ಅವರು ಮಾಡಿಕೊಂಡ ನಿರ್ಣಯ. ಆದರೆ ಎಲ್ಲರೂ ಪಾರಣೆಯ ದಿನಗಳಲ್ಲಿ ಊಟಮಾಡುತ್ತಿದ್ದರೆ, ಮಹಾಬಲ ಮಾತ್ರ ಅಂದು ಹೊಟ್ಟೆನೋವು ಮೊದಲಾದ ಸುಳ್ಳುಹೇಳಿ ಊಟಮಾಡದೆ ತಪಸ್ಸನ್ನು ಮುಂದುವರಿಸುತ್ತಿದ್ದ ಸುಳ್ಳು ಕಾರಣವಾಗಿ ಸ್ತ್ರೀಜನ್ಮದ ಕರ್ಮ, ಅಧಿಕ ತಪಸ್ಸು ಕಾರಣವಾಗಿ ತೀರ್ಥಂಕರ ಜನ್ಮದ ಕರ್ಮ ಅವನಿಗೆ ಸಂಚಯವಾಯಿತು. ಮುಂದೆ ಸಲ್ಲೇಖನದಿಂದ ಏಳು ಜನರೂ ತೀರಿಕೊಂಡು, ವೈಜಯಂತ ಸ್ವರ್ಗದಲ್ಲಿ ದೇವತೆಯಾಗಿ ಹುಟ್ಟಿದರು.

ಭರತಕ್ಷೇತ್ರದ ದಕ್ಷಿಣಭಾಗದಲ್ಲಿ ಮಿಥಿಲೆಯೆಂಬ ಪಟ್ಟಣ. ಅದರ ಅರಸು ಇಕ್ಷ್ವಾಕುವಂಶದ ಕುಂಭ, ಅರಸಿ ಪ್ರಭಾವತಿ, ಸ್ವರ್ಗದ ಆಯುಷ್ಯತೀರಿದ ಮಹಾಬಲ ಈ ದಂಪತಿಗಳಿಗೆ ಮಲ್ಲಿ ಹೆಸರಿನ ಮಗಳಾಗಿ ಹುಟ್ಟಿದ. ಮಿತ್ರರಾದ ಅಚಲ, ಧರಣ, ಪೂರಣ, ವಸು, ವೈಶ್ರವಣ, ಅಭಿಚಂದ್ರರು ಕ್ರಮವಾಗಿ ಸಾಕೇತ, ಚಂಪಾ, ಶ್ರಾವಸ್ತಿ, ವಾರಣಾಸಿ, ಹಸ್ತಿನಾಪುರ, ಕಾಂಪಿಲ್ಯ ಪಟ್ಟಣಗಳಲ್ಲಿ ಪ್ರತಿಬುದ್ಧಿ, ಚಂದ್ರಚ್ಛಾಯ, ರುಕ್ಮಿನ್, ಶಂಖ, ಅದೀನಶತ್ರು, ಜಿನಶತ್ರು ಹೆಸರಿನ ಅರಸರಾಗಿ ಹುಟ್ಟಿದರು.

ಮಲ್ಲಿಯ ಅನುಪಮ ಸೌಂದರ್ಯದ ಬಗ್ಗೆ ಕೇಳಿ ಮಾರುಹೋದ ಇವರು, ಕುಂಭ ರಾಜನಲ್ಲಿಗೆ ದೂತರನ್ನು ಕಳಿಸಿದರು. ಮಗಳಿಗೆ ತಕ್ಕ ಪುರುಷರಲ್ಲವೆಂದು ಕುಂಭರಾಜ ಇವರನ್ನು ಉಪೇಕ್ಷಿಸಿದ. ಸಿಟ್ಟಿಗೆದ್ದ ಈ ಆರು ಜನ ಅರಸರು ಮಾತನಾಡಿಕೊಂಡು ರಾಜಧಾನಿಯನ್ನು ಮುತ್ತಿದರು. ತಂದೆಯ ಸಂಕಟವನ್ನು ಅರ್ಥಮಾಡಿಕೊಂಡ ಮಲ್ಲಿ, ಯುದ್ಧ ನಿಲ್ಲಿಸುವಂತೆ ಹೇಳಿ ಆ ಅರಸರನ್ನು ಅರಮನೆಗೆ ಬರಮಾಡಿಕೊಂಡಳು.

ಮಲ್ಲಿ ಬಹುದಿನಗಳ ಹಿಂದೆಯೇ ಮೋಹಕವಾದ ಒಂದು ಸ್ತ್ರೀವಿಗ್ರಹವನ್ನು ಮಾಡಿಸಿದ್ದಳು. ಆ ವಿಗ್ರಹದೊಳಗೆ ದಿನದಿನವೂ ಅನ್ನದ ಉಂಡೆಯನ್ನು ಹಾಕಿ, ಬಂಗಾರದ ಮುಚ್ಚಳದಿಂದ

---

೪೬. Trisasti Salakapurusa Carita(Hemachandra) Vol IV P.52. Translated by Helen M. Johnson.

ಮುಚ್ಚುತ್ತಿದ್ದಳು. ಅರಮನೆಗೆ ಬಂದ ಈ ವೈರಿ ಅರಸರು ವಿಗ್ರಹದ ರೂಪಶ್ರೀಗೆ ಮರುಳಾಗಿ ತಲೆದೂಗುತ್ತಿರುವುಷ್ಟರಲ್ಲಿ, ಮಲ್ಲಿ ಅದರ ತಲೆಯ ಮೇಲಿನ ಮುಚ್ಚಳ ತೆಗೆಯುವುದೇ ತಡ ಹೊಲಸು ವಾಸನೆ ಅರಮನೆಯನ್ನೆಲ್ಲ ವ್ಯಾಪಿಸಿತು. ಈ ಅಸಹನೀಯ ವಾಸನೆಗೆ ಹೇಸಿ ಮೂಗುಮುಚ್ಚಿಕೊಂಡು ಅರಸರೆಲ್ಲ ಮುಖ ತಿರುವಿದರು. ಆಗ ತಟ್ಟನೇ ಮಲ್ಲಿ ಮುಂದೆ ಬಂದು "ಈ ಪ್ರತಿಮೆಯ ಬಹಿರಂಗ ಎಷ್ಟು ನಯನ ಮನೋಹರವೋ ಅಂತರಂಗ ಅಷ್ಟು ಹೇಸಿಕೆಯಿಂದ ಕೂಡಿಲ್ಲವೇ? ಮನಮೋಹಕವಾದ ನನ್ನ ಶರೀರವೂ ಇದೇ ರೀತಿ ಮಜ್ಜೆ-ಮಾಂಸ-ರಕ್ತಗಳಿಂದ ತುಂಬಿಹೋಗಿದೆಯೆಂದು ತಿಳಿಹೇಳಿ, ಅರಸುಮಕ್ಕಳನ್ನು ಅವರ ರಾಜಧಾನಿಗೆ ಕಳಿಸಿ, ವೈರಾಗ್ಯ ತಾಳಿ, ಜಯಂತಿ ಹೆಸರಿನ ಪಲ್ಲಕ್ಕಿ ಏರಿ ಸಹಸ್ರಾಮ್ರವಣ ಹೆಸರಿನ ಉಪವನಕ್ಕೆ ಬಂದು, ದೀಕ್ಷೆ ಪಡೆದು, ತಪಸ್ಸನ್ನಾಚರಿಸಿ, ಅರಸು ವಿಶ್ವಸೇನನಲ್ಲಿ ಪಾರಣೆ ತೀರಿಸಿ, ಕೇವಲಜ್ಞಾನ ಪಡೆದು, ಸಮವಸರಣವನ್ನೇರಿ, ಸಮ್ಮೇದಪರ್ವತಕ್ಕೆ ಬಂದು ಮುಕ್ತಿಹೊಂದಿದಳು.

ದಿಗಂಬರ ಸಂಪ್ರದಾಯದ ಕಥೆ :[೪೭] ಜಂಬೂದ್ವೀಪದ ನಟ್ಟನಡುವೆ ಮಂದರಪರ್ವತವಿದೆ. ಈ ಪರ್ವತದ ಪೂರ್ವ-ಪಶ್ಚಿಮಗಳಲ್ಲಿ ಪೂರ್ವವಿದೇಹ, ಪಶ್ಚಿಮವಿದೇಹಗಳಿವೆ. ಪೂರ್ವವಿದೇಹದಲ್ಲಿ ಪಶ್ಚಿಮ-ಪೂರ್ವವಾಗಿ ಹರಿವ ಸೀತಾನದಿಯ ಉತ್ತರಪ್ರದೇಶದಲ್ಲಿ ಎಂಟು, ದಕ್ಷಿಣ ಪ್ರದೇಶದಲ್ಲಿ ಎಂಟು ಹೀಗೆ ಹದಿನಾರು ನಾಡುಗಳಿವೆ. ಇವುಗಳಲ್ಲಿ ಒಂದು ಕಚ್ಚಕಾವತಿನಾಡು. ವೀತಶೋಕಪುರ ಇದರ ರಾಜಧಾನಿ. ಅಲ್ಲಿಯ ಅರಸು ವೈಶ್ರವಣ, ಅರಸಿ ಧನಶ್ರೀ ಹೆಸರಿನ ಲಕ್ಷ್ಮೀಮಹಾದೇವಿ (೩-೪ನೆಯ ಆಶ್ವಾಸ ಅರಸಿಯ ವರ್ಣನೆ ಮತ್ತು ಪುತ್ರದೋಹಳ). ಇವರ ಮಗ ಶ್ರೀಧರ, (೫-೯ ಹೀಗೆ ನಾಲ್ಕು ಆಶ್ವಾಸಗಳ ವರೆಗೆ ವಸಂತಕಾಲ, ಚಿತ್ರವಲೋಕನ, ವನವಿಹಾರ, ಜಲಕೇಳಿ, ವೇಶ್ಯಾವಾಟಿಕೆ, ಸಂಗೀತ-ನೃತ್ಯಾವಲೋಕನ, ವರ್ಷಾ ಮತ್ತು ಶರತ್ಕಾಲ ವರ್ಣನೆ).

ಶರತ್ಕಾಲದ ಒಂದು ದಿನ ವೈಶ್ರವಣನಿಗೆ ತನ್ನ ಚತುರಂಗಬಲವನ್ನು ಕಣ್ತುಂಬ ನೋಡುವ ಆಸಕ್ತಿ ಹುಟ್ಟಿತು. ರಾಜಧಾನಿಯ ಹೊರವಲಯದಲ್ಲಿ ನೆರೆದ ಬಲಸಮೂಹವನ್ನು ನೋಡಿ ತೃಪ್ತನಾಗಿ ಅರಮನೆಗೆ ಮರಳಿದನು. ದಾರಿಯಲ್ಲಿ ವ್ಯೋಮಚುಂಬಿತ ಭೂಮ ವಟವೃಕ್ಷವೊಂದು ಸಿಡಿಲಿನಿಂದ ಬುಡಮೇಲಾಗಿ ಬಿದ್ದುದನ್ನು ಕಾಣುತ್ತಲೇ ವೈರಾಗ್ಯ ಅಂಕುರಿಸಿತು. ಮಗ ಶ್ರೀಧರನಿಗೆ ಪಟ್ಟಗಟ್ಟಿ, ಶ್ರೀಪರ್ವತಕ್ಕೆ ಬಂದು, ಶ್ರೀನಾಗಭಟ್ಟಾರಕರಿಂದ ದೀಕ್ಷೆಪಡೆದು, ತಪವನ್ನಾಚರಿಸಿ, ಅನಶನದಿಂದ ಶರೀರವನ್ನು ತೊರೆದು, ಅಪರಾಜಿತವಿಮಾನ (=ಸ್ವರ್ಗ)ದಲ್ಲಿ ಅಹಮಿಂದ್ರನಾದನು.

ಮಿಥಿಲಾಪುರದ ಅರಸು ಕುಂಭರಾಜ, ಅರಸಿ ಪ್ರಭಾವತಿ, ಇವರಿಗೆ ಮಗನಾಗಿ ಹುಟ್ಟುವ ಈ ಅಹಮಿಂದ್ರನು ಮಾತೃಗರ್ಭಕ್ಕೆ ಅವತರಿಸುವುದಕ್ಕೆ ೬ ತಿಂಗಳು ಮೊದಲು, ನಿರಂತರವಾಗಿ ಮಿಥಿಲೆಯಲ್ಲಿ ಇಂದ್ರನ ಅಪ್ಪಣೆಯಂತೆ ಕುಬೇರನಿಂದ ಸುವರ್ಣವೃಷ್ಟಿ ಸುರಿಯಿತು. ಚತುರ್ಥಸ್ನಾನಾನಂತರ ದೇವತಾಸ್ತ್ರೀಯರಿಂದ ಪ್ರಭಾವತಿಯ ಗರ್ಭಶೋಧನೆ ಜರುಗಿತು. ಅಂದು ರಾತ್ರಿ ಷೋಡಶ ಸ್ವಪ್ನ ಕಂಡ ಪ್ರಭಾವತಿ, ತೀರ್ಥಂಕರನ ತಾಯಿಯಾಗುವ ಭಾಗ್ಯಕ್ಕೆ ಹರ್ಷಪಟ್ಟಳು. ವೈಶ್ರವಣಚರನಾದ ಅಹಮಿಂದ್ರನು ಅಪರಾಜಿತ ವಿಮಾನ (=ಸ್ವರ್ಗ)ದಿಂದಿಳಿದು ಪ್ರಭಾವತಿಯ ಗರ್ಭವನ್ನು ಪ್ರವೇಶಿಸಿದ.

---

೪೭. ನಾಗಚಂದ್ರನ ಮಲ್ಲಿನಾಥ ಪುರಾಣವನ್ನಾಧರಿಸಿ ಬರೆದುದು.

ಆಗ ಇಂದ್ರಾದಿ ದೇವತೆಗಳಿಂದ ತೀರ್ಥಂಕರನ ಪ್ರಥಮ ಕಲ್ಯಾಣವಾದ ಗರ್ಭಾವತರಣ ಮಹೋತ್ಸವ ಆಚರಿಸಲ್ಪಟ್ಟಿತು.

ಒಂಬತ್ತು ತಿಂಗಳು ಕಳೆದು, ಮಲ್ಲಿನಾಥ ಅವತರಿಸುತ್ತಲೇ ದೇವದುಂದುಭಿ ಮೊಳಗಿದವು. ಆಸನಕಂಪನದಿಂದ ಇದನ್ನು ಅರಿತ ಇಂದ್ರ, ದೇವಗಣದೊಂದಿಗೆ ಬಂದು ಶಿಶುವಿಗೆ ಮೇರುಪರ್ವತದಲ್ಲಿ ಕ್ಷೀರಾಭಿಷೇಕ ಮಾಡುವುದರ ಮೂಲಕ, ತೀರ್ಥಂಕರನ ದ್ವಿತೀಯ ಕಲ್ಯಾಣವಾದ ಜನ್ಮಾಭಿಷೇಕೋತ್ಸವವನ್ನು ಪೂರೈಸಿದನು.

ಕೂಸಿಗೆ ಮಲ್ಲಿನಾಥ ಎಂದು ಹೆಸರಿಟ್ಟರು. ದಿವ್ಯಲೀಲೆಗಳನ್ನು ಮೆರೆದ ಶಿಶು, ಬಾಲಕನಾಗಿ, ಯುವಕನಾಗಿ ಬೆಳೆದ. ಕುಲರೂಪಗುಣಸಂಪನ್ನೆಯರಪ್ಪ ಕನ್ಯೆಯರೊಂದಿಗೆ ಮಗನ ವಿವಾಹಮಾಡಲು ಬಯಸಿ ಭವ್ಯಮಂಟಪ ಕಟ್ಟಿಸಿದ, ಕುಂಭರಾಜ. ಈ ಮಂಟಪ ನೋಡುತ್ತಲೇ ಮಲ್ಲಿನಾಥನಿಗೆ ಹಿಂದಿನ ಜನ್ಮದ ಅಹಮಿಂದ್ರವಿಮಾನ (=ಸ್ವರ್ಗ)ದ ಸ್ಮರಣೆಯಾಗಿ ವೈರಾಗ್ಯ ಉಕ್ಕೇರಿತು. ಸಂಸಾರದ ಚತುರ್ಗತಿಯ ಚಕ್ರವನ್ನು ದಾಟಿ ಪಂಚಮಗತಿಯಲ್ಲಿ ಪ್ರಯಾಣಿಸಲು ನಿಶ್ಚಯಿಸಿದ. ಲೋಕಾಂತಿಕ ದೇವತೆಗಳು ಬಂದು ಈ ನಿರ್ಣಯವನ್ನು ಬೆಂಬಲಿಸಿದರು. ಇಂದ್ರ ಮೊದಲಾದ ದೇವತೆಗಳು ಬಂದು, ಜಿನನ ಮೂರನೆಯ ಕಲ್ಯಾಣವಾದ ಪರಿನಿಷ್ಕ್ರಮಣ ಮಹೋತ್ಸವವನ್ನು ಪೂರೈಸಿದರು.

ತಂದೆ–ತಾಯಿಗಳಿಗೆ ಸಮಾಧಾನ ಹೇಳಿ, ಜಯಂತ ಹೆಸರಿನ ಪಲ್ಲಕ್ಕಿಯನ್ನೇರಿ, ಮಲ್ಲಿನಾಥ ಶ್ವೇತವನಕ್ಕೆ ಬಂದನು. ದಿಗಂಬರತ್ವ–ಕೇಶಲೋಚನತ್ವ ಹೊಂದಿ, ೩೦೦ ಜನ ಅರಸರೊಂದಿಗೆ ದೀಕ್ಷೆ ಕೈಗೊಂಡನು. ಷಷ್ಠೋಪವಾಸ ನಿಯಮನಿಯುಕ್ತನಾಗಿ, ಪಾರಣೆಯ ದಿನ ಮಿಥಿಲಾ ನಗರದ ನಂದಿಷೇಣ ಮಹಾರಾಜನಲ್ಲಿ ಚರಿಗೆ ಸ್ವೀಕರಿಸಿದ.

ಶ್ವೇತವನದಲ್ಲಿ ಕಾಮವಿಲ್ಲ, ಕ್ರೋಧವಿಲ್ಲ, ವೈರವಿಲ್ಲ, ಮತ್ಸರವಿಲ್ಲ, ಶಾಂತಿ ಸಾಮ್ರಾಜ್ಯ ತುಂಬಿ ಸೂಸುತ್ತಿದ್ದಿತು. ಈ ದಿವ್ಯ ವಾತಾವರಣದ ಮಧ್ಯ ಮಲ್ಲಿನಾಥಮುನಿ ಕಾಮನನ್ನೂ ಲಕ್ಷಿಸದೆ ತಪೋನಿಮಗ್ನನಾದುದನ್ನು ನೋಡಿ, ಶಿಶಿರಮರುತನು ಒಡೆಯನಾದ ಕಾಮನಿಗೆ ನಿವೇದಿಸಿದ. ಆಯುಧ ಸಮೇತನಾಗಿ ಬಂದ ಕಾಮದೇವ ಭೇದಿಸಲು ಸಾಧ್ಯವಾಗದೆ, ಅಸಹಾಯಕ ಕೋಪಾಗ್ನಿಯಲ್ಲಿ ತನ್ನಿಂದ ತಾನೇ ಸುಟ್ಟುಹೋದನು. ಪತಿಯ ಮರಣದುಃಖದಲ್ಲಿ ಬೆಂದು ರತಿಯೂ ಪ್ರಾಣನೀಗಿದಳು.

ಮುನಿಯ ತಪಸ್ಸು ಪ್ರಜ್ವಲಿಸಿ ಎಂಟೂ ಕರ್ಮಗಳು ಸುಟ್ಟು, ಎಂಟು ಸಿದ್ಧಗುಣಗಳು ಪ್ರಕಟವಾದವು. ಕೈವಲ್ಯಜ್ಞಾನೇಶ್ವರ್ಯ ಪ್ರಾಪ್ತವಾಯಿತು. ಇಂದ್ರಾದಿಗಳು ಬಂದು ಕುಬೇರ ವಿರಚಿತ ಸಮವಸರಣದಲ್ಲಿ ಮಲ್ಲಿನಾಥನನ್ನು ಕುಳ್ಳಿರಿಸಿ, ಪೂಜೆಮಾಡಿ, ಜಿನನ ನಾಲ್ಕನೆಯ ಕಲ್ಯಾಣವಾದ ಕೈವಲ್ಯಬೋಧೋತ್ಸವವನ್ನು ನೆರವೇರಿಸಿದರು.

ದೇವನಿಂದ ದಿವ್ಯಧ್ವನಿ ಹೊರಹೊಮ್ಮಿತು. ವಿಶಾಖಗಣಧರ ಅದರ ಅರ್ಥ ವಿವರಿಸಿದ. ಆ ಮೇಲೆ ಮಲ್ಲಿನಾಥನು ಧರ್ಮಾನುಗ್ರಹಾರ್ಥ ಸಮವಸರಣ ಸಮೇತ ಗಗನಗಾಮಿಯಾಗಿ ನಡೆದು, ಅನೇಕ ಕ್ಷೇತ್ರಗಳನ್ನು ಸಂಚರಿಸಿ, ಸಮ್ಮೇದಪರ್ವಕ್ಕೆ ಬಂದು ಮುಕ್ತಿಹೊಂದಿದನು. ಆಗ ದೇವೇಂದ್ರಾದಿಗಳಿಂದ ಜಿನನ ಐದನೆಯ ಕಲ್ಯಾಣವಾದ ಪರಿನಿರ್ವಾಣಮಹೋತ್ಸವ ಆಚರಿಸಲ್ಪಟ್ಟಿತು.

ಮಲ್ಲಿನಾಥಪುರಾಣ : ಪುರಾಣಕೃತಿ

ಕರ್ನಾಟಕದ ಜೈನಪುರಾಣ ಪರಂಪರೆಗೆ ಪ್ರಾಚೀನತೆ ಮತ್ತು ಪ್ರೌಢಿಮೆ ದೃಷ್ಟಿಯಿಂದ ಭಾರತೀಯ ಮಹತ್ವ ಸಲ್ಲುತ್ತದೆ. ಸಂಸ್ಕೃತ, ಅಪಭ್ರಂಶ ಮತ್ತು ಕನ್ನಡಗಳಲ್ಲಿ ಕ್ರಮವಾಗಿ ಕಣ್ಣುತೆರೆದ ಜಿನಸೇನ + ಗುಣಭದ್ರರ ಮಹಾಪುರಾಣ, ಪುಷ್ಪದಂತನ ತಿಸಟ್ಠಿಮಹಾಪುರಿಸಗುಣಾಲಂಕಾರು, ಕವಿಪರಮೇಷ್ಠಿಯ ವಾಗರ್ಥಸಂಗ್ರಹ – ಇಂಥ ಮಹಾಪುರಾಣಗಳ ಮತ್ತು ಜಿನಸೇನನ ಹರಿವಂಶ,[೪೮] ಸ್ವಯಂಭುವಿನ ಪಉಮಚರಿಉ,[೪೯] ಪಂಪನ ಆದಿಪುರಾಣ–ಇಂಥ ಸ್ವತಂತ್ರಪುರಾಣಗಳ ಶ್ರೀಮಂತಪರಂಪರೆ ಈ ನಾಡಿಗಿದೆ.

ವ್ಯಕ್ತಿಜೀವನದಲ್ಲಿ ಲೌಕಿಕದಷ್ಟೇ ಪ್ರಮುಖವಾದುದು ಪಾರಲೌಕಿಕ. ಜೈನಧರ್ಮ ಇವೆರಡನ್ನೂ ಬಿಡಿಸಿ ಬದುಕಲು ಹೇಳುವುದರಿಂದ[೫೦] ಅವರ ಸಾಹಿತ್ಯದಲ್ಲಿ "ಬೆಳಗುವೆನಿಲ್ಲ ಲೌಕಿಕಮನಲ್ಲಿ ಜಿನಾಗಮಮಂ" ಎಂಬ ಕವಲು ಅನಿವಾರ್ಯ. ಕೆಲವು ಸಲ ಗದಾಯುದ್ಧದ ರನ್ನನೇ ಬೇರೆ, ಅಜಿತಪುರಾಣದ ರನ್ನನೇ ಬೇರೆ ಎನ್ನುವಷ್ಟರಮಟ್ಟಿಗೆ ಈ ಕವಲುಗಳ ಮಧ್ಯ ಅಂತರ ಕಂಡುಬರುತ್ತದೆ. ಇವುಗಳಲ್ಲಿ ಕವಿಗಳು ಧರ್ಮದ ಹಿನ್ನೆಲೆಯಲ್ಲಿ ಪುರಾಣವನ್ನು ರೂಪಿಸಿ, ಅದರಲ್ಲಿ ಕಾವ್ಯಧರ್ಮವನ್ನು ಬೆಸೆದ ಕಾರಣ, ಪುರಾಣಲಕ್ಷಣಗಳಲ್ಲಿ ಕಾವ್ಯಲಕ್ಷಣಗಳು ಸೇರಿ ಪುರಾಣಕಾವ್ಯಗಳು ರೂಪವಡೆದವು. ಈ ಅಂಶವನ್ನು

> ಮುನಿಮಾರ್ಗೋಕ್ತ ಪುರಾಣಪದ್ಧತಿಗೆ ಲೋಕಾಕಾರಮುಂ ತೀರ್ಥವ
> ರ್ತನಮುಂ ವ್ಯಾಪ್ತಚತುರ್ಗತಿಸ್ಥಿತಿಗಳುಂ ಭಾಸ್ವತ್ತಪೋದಾನಕೀ
> ರ್ತನಮುಂ ತತ್ಫಲಸಿದ್ಧಿಯುಂ ನೆಗಳ್ದುವೈದಂಗಂ, ಕವಿಪ್ರೋಕ್ತ ಕಾ
> ವ್ಯನಿಬಂಧೋಚಿತಮೆಂಟು ದೇಶನಗರೀರಾಜ್ಯೋತ್ಸವಾಖ್ಯಾನದಿಂ ॥[೫೧]

---

೪೮. ಜಿನಸೇನನ ಹರಿವಂಶ ಪುರಾಣ ವರ್ಧಮಾನಪುರದಲ್ಲಿ ರಚಿತವಾಗಿದೆ. ಇದು ಸೌರಾಷ್ಟ್ರ ಪ್ರಾಂತದಲ್ಲಿದೆಯೆಂದು ವಿದ್ವಾಂಸರ ಹೇಳಿಕೆ. ಆದರೆ ಇವನ ಪುನ್ನಾಟಸಂಘ ಕರ್ನಾಟಕಕ್ಕೆ ಸಂಬಂಧಿಸಿದುದೆಂಬ ಹಿನ್ನೆಲೆಯಲ್ಲಿಯೂ ಇವನ ಗ್ರಾಮವನ್ನು ಇಲ್ಲಿ ಭಾವಿಸುತ್ತಾರೆ.

೪೯. "ಸ್ವಯಂಭು ಕೂಡ ಕರ್ಣಾಟಕದೊಡನೆ ಬಹಳ ಹತ್ತಿರದ ಸಂಬಂಧವುಳ್ಳವನಾಗಿದ್ದನೆಂಬುದು ಅಸಂಭವನೀಯವೇನಲ್ಲ. ಅವನ ಬಂಧುಗಳಲ್ಲಿ ಕೆಲವರ ಹೆಸರುಗಳು ಹಾಗೆ ಸೂಚಿಸುವಂತಿವೆ. ಅಲ್ಲದೆ ಅವನು ಯಾಪನೀಯ ಸಂಘಕ್ಕೆ ಸೇರಿದವನೆಂದು ಹೇಳುತ್ತಾರೆ. ಈ ಯಾಪನೀಯ ಸಂಘಕ್ಕೆ ಕರ್ನಾಟಕವೇ ಮುಖ್ಯ ನೆಲೆ. ತಮರುಮನೆ"(ಕರ್ನಾಟಕ ಪರಂಪರೆ, I, ೫೫೬)

೫೦. 'ಜಿನತತ್ವಂ ಸ್ಮರತತ್ವಂಮೆಂಬಿವೆರಡುಂ ದೂರಸ್ಥಂ'(ಪೊನ್ನ ಶಾಂತಿಪುರಾಣ, ೧–೧೬) ಮೊದಲಾದ ಮಾತುಗಳನ್ನು ಗಮನಿಸಿರಿ.

೫೧. ಅನಂತನಾಥ ಪುರಾಣಂ, ೧–೬೬

ಎಂದು ಬಿಡಿಸಿ ಹೇಳಿದ್ದಾನೆ, ಜನ್ನ. ಇವನ ಪ್ರಕಾರ ಪುರಾಣದ ಅಂಗಗಳು ಮುನಿಗಳ ದೃಷ್ಟಿಯಲ್ಲಿ ಐದು. ಕವಿಗಳ ದೃಷ್ಟಿಯಲ್ಲಿ ಎಂಟು. ಜಿನಸೇನಾಚಾರ್ಯ,[೫೨] ಪಂಪ, ಪೊನ್ನ ಕವಿಗಳಿಂದ ಪ್ರತಿಪಾದಿತವಾದ ಈ ಎಂಟು ಅಂಗಗಳನ್ನು–

ಸಕಲಜ್ಞಪ್ರತಿಪಾದ್ಯಮಪ್ಪ ಭುವನಂ ದೇಶಂ ಪುರಂ ರಾಜ್ಯವೃ
ತ್ತಕಮರ್ಹದ್ವಿಭವಂ ಚತುರ್ಗತಿ ತಪೋಮಾರ್ಗಂ ಫಳಂ ತತ್ಪುರಾ
ಣಕಥಾಂಗಂಗಳಿವೆಂಟೆನಿಕ್ಕುಂ..............................॥[೫೩]

ಎಂದು ನಾಗಚಂದ್ರನೂ ಒಪ್ಪಿದ್ದಾನೆ. ಇದಲ್ಲದೆ ತೀರ್ಥಂಕರಭವದಲ್ಲಿ ಜರುಗುವ ಐದು ಕಲ್ಯಾಣಗಳೂ ಜೈನಪುರಾಣದ ಲಕ್ಷಣಗಳೆಂದು ಪರಿಗಣಿಸಲ್ಪಟ್ಟಿವೆ. ಹೀಗಾಗಿ ಜೈನಪುರಾಣಕಾವ್ಯದ ಕವಿಯು ಕಥೆಯನ್ನು ಮುನ್ನಡೆಸುವಲ್ಲಿ ಈ ಎಂಟು ಮತ್ತು ಐದು ಅಂಶಗಳತ್ತ ಗಮನವಿಡಬೇಕಾಗುತ್ತದೆ.

ಜೀವ–ಅಜೀವದೊಂದಿಗೆ ಸೇರಿ ಕರ್ಮದಿಂದ ಬಂಧಿಸಲ್ಪಟ್ಟು ದೇವ, ಮನುಷ್ಯ, ತಿರ್ಯಕ್, ನಾರಕ ಎಂಬ ಚತುರ್ಗತಿಗಳಲ್ಲಿ ಪರಿಭ್ರಮಣ ಪಡೆಯುತ್ತದೆ. ಈ ಭವಾಂತರ ಪ್ರಯಾಣದಲ್ಲಿ ಪುಣ್ಯಕರ್ಮಗಳ ಫಲದಿಂದಾಗಿ ತಿರ್ಯಕ್–ನಾರಕಭವಗಳಿಂದ ಅತೀತನಾಗಿ, ಮನುಷ್ಯ ಮತ್ತು ದೇವಭವಗಳಲ್ಲಿ ಮಾತ್ರ ಸುತ್ತಿರುವಾಗ, ಸಮ್ಯಕ್ತ್ವವನ್ನು ಸಾಧಿಸಬೇಕೆಂಬ ಹಂಬಲ ಮೂಡುತ್ತದೆ. ಇದು ಕಾಲಲಬ್ಧಿ. ಈ ಕಾಲಲಬ್ಧಿ ಭವದ ತರುವಾಯವೂ ಅದು ಹಲವು ಮನುಷ್ಯ, ದೇವಭವಗಳನ್ನು ಪಡೆದು, ಕೊನೆಗೆ ಮುಕ್ತಿಹೊಂದುತ್ತದೆ. ಇಂತಹ ಮುಕ್ತರ ಚರಿತ್ರೆ ಜೈನಪುರಾಣಗಳ ವಸ್ತು. ಆದರೆ ಅಲ್ಲಿ ಆ ಜೀವದ ಚರಿತ್ರೆ, ಕಾಲಲಬ್ಧಿಭವದಿಂದ ಮಾತ್ರ ಪ್ರಾರಂಭವಾಗಿ ತೀರ್ಥಂಕರಭವಕ್ಕೆ ಮುಕ್ತಾಯಗೊಳ್ಳುತ್ತದೆ. ಹೀಗಾಗಿ ಯಾವುದೇ ಜೈನಪುರಾಣದಲ್ಲಿ ಪೂರ್ವಭವಾವಳಿ ಮತ್ತು ತೀರ್ಥಂಕರಭವಯೆಂಬ ಎರಡು ಭಾಗಗಳು ಗೋಚರಿಸುತ್ತವೆ. ಪೂರ್ವಭವಾವಳಿ ಭಾಗ ಅನೇಕ ಭವಗಳ ಚಿತ್ರಣದಿಂದ, ತೀರ್ಥಂಕರಭವ ಭಾಗ ತೀರ್ಥಂಕರ ಮತ್ತು ಚಕ್ರವರ್ತಿ ಕಥೆಗಳಿಂದ ಮೈದುಂಬಿಕೊಳ್ಳುತ್ತವೆ. ಆದರೆ ಮಲ್ಲಿನಾಥನಿಗೆ ಕಾಲಲಬ್ಧಿಭವದ ಮರುಭವದಲ್ಲಿಯೇ ತೀರ್ಥಂಕರಭವ ಪ್ರಾಪ್ತವಾಗುವುದರಿಂದ, ಇಲ್ಲಿ ಭವಾವಳಿ ಭಾಗ ತುಂಬಿ ನಿಂತಿಲ್ಲ; ಜೈನಪುರಾಣದ ಒಂದು ಅಂಗವಾದ ಚತುರ್ಗತಿ ವಿವರಣೆಗೆ ಸಾಕಷ್ಟು ಅವಕಾಶ ಸಿಕ್ಕಿಲ್ಲವೆಂದೇ ಹೇಳಬೇಕು.

ತೀರ್ಥಂಕರಭವದ ಭಾಗದಲ್ಲಿ ತೀರ್ಥಂಕರನ ಅಲೌಕಿಕ ಬದುಕು ತೃಪ್ತಿಕರವಾಗಿ ಬಂದಿದ್ದರೂ ಸಂಸಾರಸುಖ, ಸಾಮ್ರಾಜ್ಯಸುಖಗಳನ್ನನುಭವಿಸದೇ ತಪಸ್ಸಿಗೆ ಹೋದ ಕಾರಣ, ಮಲ್ಲಿನಾಥನ ಲೌಕಿಕ ಬದುಕಿನ ಚಿತ್ರ ಇಲ್ಲದೇ ಹೋಗಿದೆ. ತೀರ್ಥಂಕರನೊಂದಿಗೆ ಅವಿಭಾಜ್ಯ ಸಂಬಂಧದಿಂದ ಬಂದರೆ ಮಾತ್ರ ಕಳೆಕಟ್ಟುವ ಚಕ್ರವರ್ತಿ ಪ್ರಸಂಗವೂ ಇಲ್ಲಿ ಇಲ್ಲವಾಗಿದೆ.[೫೪] ಈ ಅಂಶಗಳನ್ನು ಬಿಟ್ಟರೆ ಜೈನಪುರಾಣದ ಅಷ್ಟಾಂಗ ಮತ್ತು ಪಂಚ ಕಲ್ಯಾಣಗಳು ಚೆನ್ನಾಗಿ ಫಲಿಸಿವೆಯೆಂದೇ ಹೇಳಬೇಕು.

---

೫೨. ಜಿನಸೇನಾಚಾರ್ಯ–ಗುಣದ್ರಾಚಾರ್ಯರು ಮಹಾಪುರಾಣದಲ್ಲಿ ಈ ಎಂಟು ಅಂಗಗಳನ್ನು ಒಪ್ಪಿಕೊಂಡ ಕಾರಣ ಅದನ್ನು ಪುರಾಣಕಾವ್ಯವೆನ್ನಬೇಕಾಗುತ್ತದೆ.

೫೩. ಮಲ್ಲಿನಾಥ ಪುರಾಣಂ ೧–೫೪

೫೪. ಆದಿತೀರ್ಥಂಕರ ಮತ್ತು ಭರತಚಕ್ರವರ್ತಿಗಳಂತೆ ತಂದೆ–ಮಗ ಸಂಬಂಧದಿಂದ ಬಂದರೆ ಅಖಂಡತ್ವ ಪ್ರಾಪ್ತವಾಗುತ್ತದೆ. ಇಲ್ಲದಿದ್ದರೆ ಎರಡು ಬೇರೆ ಬೇರೆ ಕಥೆಗಳನ್ನು ಜುಲಮೆಯಿಂದ ತೇಪೆ ಹಚ್ಚಿದಂತಾಗುತ್ತದೆ.

‘ಜಿನಭಕ್ತಿ’ಯ ವಿಷಯದಲ್ಲಿ ಪಂಪ ಮೊದಲುಗೊಂಡು ಕನ್ನಡದ ಎಲ್ಲ ಜೈನಕವಿಗಳಲ್ಲಿ ನಾಗಚಂದ್ರ ಅದ್ವಿತೀಯ ವ್ಯಕ್ತಿ. ಮಿಕ್ಕವರಲ್ಲಿ ಜೈನದ ಆತ್ಮಾನುಸಂಧಾನಕ್ಕಿಂತ ತತ್ತ್ವಾಭ್ಯಾಸ ಹೆಚ್ಚು ಕಾಣುತ್ತಿದ್ದರೆ, ನಾಗಚಂದ್ರನಲ್ಲಿ ಇವೆರಡರ ಅಪೂರ್ವ ಸಂಗಮವಿದೆ. ತಪೋವಿಧಾನ, ಸಮವಸರಣ ರಚನೆ, ಮೋಕ್ಷಸ್ವರೂಪಗಳ ಬಗ್ಗೆ ಕೊಡುವ ವಿವರಣೆಗಳಲ್ಲಿ ಈ ಮಾತು ಅರ್ಥಪಡೆಯುತ್ತದೆ. ಪಂಚಕಲ್ಯಾಣಗಳೂ ಪುರಾಣಪದ್ಧತಿಗನುಸರಿಸಿ ಬಂದಿವೆ.

ಕವಿಪ್ರತಿಭೆ ಕಾರಣವಾಗಿ ವರ್ಣನೆ, ಕಲ್ಪನೆಗಳು ಹೆಚ್ಚು ಕಡಿಮೆಯಾಗಬಹುದಾದರೂ ಮೂಲಕಥೆಯ ವಿವರ ಮತ್ತು ವಿನ್ಯಾಸಗಳಲ್ಲಿ ಎಳ್ಳಷ್ಟೂ ವ್ಯತ್ಯಾಸವಾಗದುದು ಜೈನಪುರಾಣಗಳ ಪದ್ಧತಿ. ಆದರೆ ಮಲ್ಲಿನಾಥನನ್ನು ಕುರಿತ ಬೇರೆ ಕೃತಿಗಳಿಗೂ ಈ ಕೃತಿಗೂ ಕೆಲವು ವ್ಯತ್ಯಾಸಗಳು ತೋರುತ್ತವೆ. ಅವು; ಜಿನಾಂಬಿಕೆಯ ಹೆಸರು ಗುಣಭದ್ರನಲ್ಲಿ ಪ್ರಜಾವತಿ, ಇಲ್ಲಿ ಪ್ರಭಾವತಿ, ಕೆಲವೆಡೆ ರಕ್ಷಿತಾ.[೫೫] ತಿಲೋಯಪಣ್ಣತ್ತಿ[೫೬] ಮತ್ತು ಮಲ್ಲಿನಾಥ ಪುರಾಣಗಳಲ್ಲಿ ಕ್ರಮವಾಗಿ ೧. ಮಲ್ಲಿನಾಥನ ವೈರಾಗ್ಯಕ್ಕೆ ಕಾರಣ–ಮಿಂಚು / ವಿವಾಹ ಮಂಟಪ. ೨. ಕೇವಲ ಜ್ಞಾನೋತ್ಪತ್ತಿಯ ಕಾಲ–ಫಾಲ್ಗುಣ ಕೃಷ್ಣಪಕ್ಷ ೧೨ ಅಪರಾಹ್ನ / ಮಾರ್ಗಶಿರ ಶುಕ್ಲಪಕ್ಷ ೧೧ ಪೂರ್ವಾಹ್ನ, ೩. ವಿಪುಲಮತಿ (ಮನಃಪರ್ಯಯಜ್ಞಾನಿ)ಗಳು ೧೭೫೦ / ೧೨೫೦, ೪.ಆರ್ಯಿಕೆಯರು–೪೪೦೦೦/೫೦೦೦ ೫. ಮೋಕ್ಷಕಾಲ–ಫಾಲ್ಗುಣ ಕೃಷ್ಣಪಕ್ಷ ೫ / ಫಾಲ್ಗುಣ ಶುಕ್ಲಪಕ್ಷ ೫. ಈ ವ್ಯತ್ಯಸ್ತ ಸಂಗತಿಗಳು ಅನವಧಾನದಿಂದುಂಟಾದುವೋ ಯಾವುದೋ ಮೂಲದಿಂದ ದೊರೆತುವೋ ಸ್ಪಷ್ಟವಾಗುವುದಿಲ್ಲ.[೫೭]

ಇವುಗಳಿಗಿಂತ ಮುಖ್ಯವಾದುದು, ಯಾವುದೇ ಮೂಲದಲ್ಲಿಲ್ಲದ ಕಾಮದಹನ ಪ್ರಸಂಗ. ಮೂರು ಲೋಕಗಳನ್ನು ಗೆದ್ದ ಕಾಮನು ಶಿವನ ಹಣೆಗಣ್ಣಿಗೆ ಆಹುತಿಯಾದನೆಂಬ ಶೈವಪರಂಪರೆಯನ್ನು

---

೫೫. ಜೈನಧರ್ಮ(ಮಿರ್ಜಿ ಅಣ್ಣಾರಾಯ) ಪು. ೮೩೩

೫೬. ತಿಲೋಯ ಪಣ್ಣತ್ತಿ II, ಪು. ೮೩೩(ಸೊಲ್ಲಾಪುರ ಆವೃತ್ತಿ–೧೯೪೩) ಅನುಬಂಧ

೫೭. ಅ. ಮಲ್ಲಿನಾಥ ಹೆಸರಿಗೆ ಕಾರಣ ಜಿನಶಿಶುವಿನ ಶರೀರ ಮಲ್ಲಿಗೆ ಸುಗಂಧದಿಂದ ಕೂಡಿದುದು ಎಂದು ‘ತಿಸಟ್ಠಿ ಮಹಾಪುರಿಸ ಗುಣಾಲಂಕಾರು’ವಿನ ಪುಷ್ಪದಂತ, ಜಿನಮಾತೆ ಮಲ್ಲಿಗೆ ಹೂವಿನ ಹಾಸಿಗೆಯ ಮೇಲೆ ಮಲಗುವ ಗರ್ಭಿಣಿಯ ಬಯಕೆಯನ್ನನುಭವಿಸಿದ್ದುದು ಎಂದು ಶ್ವೇತಾಂಬರ ಸಂಪ್ರದಾಯದ ‘ತ್ರಿಷಷ್ಟಿಶಲಾಕಾಪುರುಷಚರಿತ್ರ’ದ ಕರ್ತೃ ಹೇಮಚಂದ್ರಾಚಾರ್ಯ ಹೇಳುತ್ತಾರೆ. ನಾಗಚಂದ್ರ ಇಂಥ ಮಾತನ್ನೇ ಎತ್ತಿಲ್ಲ.

೫೭.ಬ. ಗುಣಭದ್ರಾಚಾರ್ಯರ ವೈಶ್ರವಣನು ವನಶ್ರೀಯನು ನೋಡಲು ಹೊರಟು “ದ್ವಿಜರಿಂದ ಸೇವಿಸಲ್ಪಟ್ಟ ಮಹಾರಾಜನಂತೆ, ಪಕ್ಷಿಗಳಿಂದ ಸೇವಿಸಲ್ಪಟ್ಟ ಈ ಆಲದ ಮರವು ವಿಸ್ತಾರ, ಔನತ್ಯಗಳಲ್ಲಿ ನನ್ನನ್ನು ಹೋಲುತ್ತದೆ ಎಂದು ತನ್ನ ಪರಿವಾರದವರಿಗೆ ಹೆಮ್ಮೆಯಿಂದ ಹೇಳಿ ಮುಂದೆ ನಡೆದು, ವನವಿಹಾರ ಸುಖವನನ್ನನುಭವಿಸಿ ತಿರುಗಿಬರುತ್ತಿರಲು, ಅದೇ ಆಲದ ಮರ ಬುಡಮೇಲಾಗಿ ಬಿದ್ದಿರುವುದನ್ನು ಕಂಡು, ಸಂಸಾರದ ಬಗ್ಗೆ ವೈರಾಗ್ಯ ತಾಳುತ್ತಾನೆ. ನಾಗಚಂದ್ರನ ವೈಶ್ರವಣ ತಲೆಯೆತ್ತಿ ನಿಂತ ಮರವನ್ನು ಕಾಣದೆ, ತಲೆಕೆಳಗಾಗಿ ಬಿದ್ದ ಮರವನ್ನು ಮಾತ್ರ ಕಾಣುತ್ತಾನೆ. ಇದರಿಂದ ಮೂಲದಲ್ಲಿಯ ಸೊಗಸು, ಪರಿಣಾಮ ಮಾಯವಾಗಿದೆ.

ಅಲ್ಲಗಳೆಯುವ ರೀತಿಯಲ್ಲಿ ಮಲ್ಲಿನಾಥಮುನಿಯೆದುರು ಸುಟ್ಟು ಹೋದನೆನ್ನುವುದು ಈ ಪ್ರಸಂಗದ ಮುಖ್ಯಕಥೆ. ರಾಮಾಯಣ-ಮಹಾಭಾರತಗಳಿಗೆ ಜೈನರೂಪ ಕೊಡುವಂತೆ ಕಾಮದಹನಲೀಲೆಗೆ ಈ ತಿರುವುಕೊಟ್ಟ ಪ್ರಥಮವ್ಯಕ್ತಿ ನಾಗಚಂದ್ರನೆಂದೇ ತೋರುತ್ತದೆ. ಈ ಒಂದು ಪ್ರಸಂಗವಲ್ಲದೆ ಕಾವ್ಯದಲ್ಲಿ ಬರುವ "ಕಂತು ಸೀದಗರಿಯಂತಾದಂ..... ಬಾಲಂದ್ರ ಮುನಿನಾಥಜ್ಞಾನ ನೇತ್ರಾಗ್ನಿಯಿಂ" "ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಿಂ ಸ್ಮರಂ ನಂದೆಪೊಯ್ದಂ" "ಪುಷ್ಪ ಚಾಪಾಂಚಿತಮಧುಕರ ಮೌರ್ವಿಲತಾಟಂಕೃತಕ್ಕಳ್ಕಿದ ಗೌರೀನಾಥನಿಂ ತಾನಧಿಕನೆ" "ಪೆಣ್ಣ ಮಣ್ಣ ಮೋಹದ ಪರಮಾತ್ಮರತ್ತಿರಲಿ"-ಈ ಬಗೆಯ ಅನ್ಯಮತದೂಷಣೆಗಳು ಮೂಲದಲ್ಲಿ ಇಲ್ಲವೇ ಇಲ್ಲ.

ಹೀಗೆ ಜೈನಪುರಾಣಮಾರ್ಗದಲ್ಲಿ ಪ್ರಾಮಾಣಿಕವಾಗಿ ನಡೆದ ಮಲ್ಲಿನಾಥ ಪುರಾಣ, ಸಮಕಾಲೀನ ಪರಿಸ್ಥಿತಿಗೂ ಓಗೊಡುತ್ತ ಸಾಗಿದುದು ಅದರ ಒಂದು ವೈಶಿಷ್ಟ್ಯವೆಂದೇ ಹೇಳಬೇಕು.

ಮಲ್ಲಿನಾಥ ಪುರಾಣಂ – ಕಾವ್ಯಕೃತಿ :

ಒಂದು ಪುರಾಣವನ್ನು ಪುರಾಣಕಾವ್ಯವನ್ನಾಗಿಸುವುದೆಂದರೆ, ಧಾರ್ಮಿಕ ಕಥೆಗೆ ಕಾವ್ಯಧರ್ಮದ ಸಂಸ್ಕಾರ ಕೊಡುವುದು. ಈಗ ತಿಳಿದಮಟ್ಟಿಗೆ ಜಿನಸೇನಾಚಾರ್ಯ, ಗುಣವರ್ಮ, ಪಂಪ ಮೊದಲುಗೊಂಡು ಕರ್ನಾಟಕದ ಜೈನಕವಿಗಳು ಈ ಕಾರ್ಯವನ್ನು ಧರ್ಮದ ಶುದ್ಧಿ ಕೆಡದಂತೆ ಜೋಕೆಯಿಂದ ನಿರ್ವಹಿಸುತ್ತ ಬಂದಿದ್ದಾರೆ. ಈ ದಾರಿಯಲ್ಲಿ ಹೆಜ್ಜೆ ತಪ್ಪದೆ ನಡೆದು ಬಂದಿದ್ದಾನೆ, ನಾಗಚಂದ್ರ.

ಜೈನಪುರಾಣಗಳಲ್ಲಿ ಕವಿ ತನ್ನ ಬದುಕಿನ ವಿವಿಧ ಸಂವೇದನೆಗಳನ್ನು ಚಿಮ್ಮಿಸಲು ಅನುಕೂಲವಾದ ಪ್ರಸಂಗವೆಂದರೆ, ವೈವಿಧ್ಯಮಯವಾದ ಪೂರ್ವಭವಾವಳಿ. ಆದಿಪುರಾಣದ ರಸದ ಮಡುಗಳಾದ ಲಲಿತಾಂಗ-ಸ್ವಯಂಪ್ರಭೆ, ವಜ್ರಜಂಘ-ಶ್ರೀಮತಿ ಮೊದಲಾದ ಒಂಬತ್ತು ಭವಗಳು ಇಂಥವುಗಳಾಗಿವೆ. ಈ ದೃಷ್ಟಿಯಿಂದ ಕವಿ ನಾಗಚಂದ್ರನಿಗೆ ಸಿಕ್ಕ ಪೂರ್ವಭವವೆಂದರೆ ವೈಶ್ರವಣನ ಬದುಕು ಒಂದೇ. ಮೇಲಾಗಿ ತೀರ್ಥಂಕರ ಜೀವನಚಿತ್ರಣದಲ್ಲಿ ಏನೂ ಸ್ವಾತಂತ್ರ್ಯವಿರದ ಕಾರಣ, ಕವಿ ಇಲ್ಲಿಯೇ ಕವಿಪ್ರೋಕ್ತ ಪುರಾಣದ ಹೆಚ್ಚಿನ ಅಂಗಗಳಾದ ದೇಶಾಖ್ಯಾನ, ಪುರಾಖ್ಯಾನ, ರಾಜ್ಯಾಖ್ಯಾನಗಳ ಬಗ್ಗೆ ಹೇಳಬೇಕಾದುದನ್ನೆಲ್ಲ ಹೇಳಿಬಿಟ್ಟಿದ್ದಾನೆ. ಈ ರಾಜ್ಯಾಖ್ಯಾನದಲ್ಲಿ ಅವಕಾಶವಡೆದ ಅರಸ-ಅರಸಿಯರ ಸುದೀರ್ಘ ವರ್ಣನೆ, ಅರಸಿಯ ದೋಹಳ ವರ್ಣನೆಗಳಲ್ಲಿ ಸಾಂಪ್ರದಾಯಿಕತೆ ಇದ್ದರೂ ಜಡತೆ ಕಡಿಮೆ, ಚೈತನ್ಯ ಹೆಚ್ಚು.

> ಆತನು ಶ್ರೀಕಾಂತೆಗೇಕಾಂತೆಯೆ ಮಿಗಿಲೆನೆ ಕಾರ್ಗಾಲದೊಳ್ ಹಂಸಿ ಲೀಲಾ
> ಗತಿಯಿಂ, ಹೇಮಂತದೊಳ್ಕೋಗಿಲೆ ಕಳರುತಿಯಿಂ, ಗ್ರೀಷ್ಮದೊಳ್ಕರ್ಣಿಕಾರಂ
> ದ್ಯುತಿಯಿಂ, ತನ್ನಂತೆ ಚೆಲ್ವಂ ತಳೆಯವೆನಿಸಿ ಲಕ್ಷ್ಮೀಮಹಾದೇವಿ ಧಾತ್ರೀ
> ಪತಿಯಂ ಸರ್ವಾಂಗಸೌಂದರ್ಯದಿನೆಜಿಗಿಸಿ ಸೌಭಾಗ್ಯಸಂಪನ್ನೆಯಾದಳ್ ॥

ಕವಿಸಮಯಕ್ಕೆ ಹೇಳಿ ಮಾಡಿಸಿದ ಹಂಸಿ, ಕೋಕಿಲ, ಕರ್ಣಿಕಾರಗಳ ಬಳಕೆಯಿಂದ ನಿರ್ಜೀವಗೊಳ್ಳಬೇಕಾಗಿದ್ದ ಕಲ್ಪನೆ ಇಲ್ಲಿ ಜೀವಂತವಾಗಿದೆ. ಋತುಮಾನಕ್ಕೆ ತಕ್ಕಂತೆ ಭೂಮಿಗಿಂತ

ಮಿಗಿಲಾಗಿ ರೂಪಪರಿವರ್ತನೆ ಹೊಂದುವ ಮೂಲಕ (ಭೂಮಿಗೆ ಆಕರ್ಷಿತವಾಗಬೇಕಿದ್ದ) ಭೂಪತಿಯನ್ನು ತನ್ನತ್ತ ಆಕರ್ಷಿಸಿದ್ದಳೆಂದು ಇಲ್ಲಿಯ ಧ್ವನಿ. ಕವಿ ಸಮಯವನ್ನು ತುಂಬಿಕೊಂಡು ಮಲೆತ ನೀರಿನ ಹೊಂಡಗಳಾಗದೆ, ಪ್ರತಿಭೆಯಿಂದ ನಿರ್ಮಲ ಮಡುಗಳಾದ ಈ ಬಗೆಯ ಪದ್ಯಗಳು ಇಲ್ಲಿ ಅನೇಕ. ಇಂಥ ಪ್ರಸಂಗಗಳಲ್ಲಿ ಅನುಕರಣ ಪಂಪನಾಗುವುದನ್ನು ತಪ್ಪಿಸಿಕೊಂಡು ಅಭಿನವಪಂಪನಾಗುತ್ತಾನೆ, ನಾಗಚಂದ್ರ.

ಹೀಗೆ ಹಳೆಯ ವರ್ಣನೆಯನ್ನು ಬಳಸಿಯೂ ಅವುಗಳಿಗೆ ಜಂಗು ಹಿಡಿಸದ ನಾಗಚಂದ್ರನ ಪ್ರತಿಭೆ, ದೇಶೀಯ ಹೊಚ್ಚಹೊಸ ವರ್ಣನೆಗಳನ್ನೂ ಸೃಷ್ಟಿಸುವ ಶಕ್ತಿ ಪಡೆದಿದೆ. ಪುತ್ರದೋಹಳದಿಂದ ಬಳಲಿದ ಅರಸಿಯನ್ನು ಅರಸ ಕಂಡ ರೀತಿ:

ಪಗಲ ತಿಂಗಳವೋಲೇಕೆ ಕಾಂತಿಯಂ
ನಗೆಮೊಗಂ ಕೆದಱದಾನೆ ಪೊಕ್ಕ ಬೇ
ಸಗೆಯ ಕಾಡಕೆಱೆಯಂತೆ ನಾಡೆಯುಂ
ಬಗೆ ಕಲಂಕಿದುದಿದೇಕೆ ಕೋಮಳೇ ॥

ಇಲ್ಲಿ ಕಂಡ ಕಲ್ಪನೆ, ಕಂಡರಿಸಿದ ರೀತಿ, ಆಯ್ದುಕೊಂಡ ಪದಗಳೆಲ್ಲ ನಾಗಚಂದ್ರನೇ ಹೊಸದಾಗಿ ಹುಡುಕಿಕೊಂಡವು. ಚಿಂತೆಯಲ್ಲಿ ಕುಳಿತ ಸ್ತ್ರೀಯ ಮೊಗ ಮತ್ತು ಬಗೆಗಳಲ್ಲಿ 'ಪಗಲ ತಿಂಗಳ' ಮತ್ತು 'ಆನೆ ಪೊಕ್ಕ ಬೇಸಗೆಯ ಕಾಡಕೆರೆಗಳನ್ನು ಪ್ರತಿಮಿಸಿದ ಪ್ರತಿಭೆ, ಅಭಿನವಪಂಪತ್ವವನ್ನು ಬಿಟ್ಟು ದೂರಸರಿದು, ನಾಗಚಂದ್ರತ್ವವನ್ನು ಪ್ರತಿನಿಧಿಸುತ್ತದೆ.

ಈ ರೀತಿ ವೈಶ್ರವಣ ಬದುಕಿನ ಒಂದು ಘಟ್ಟವನ್ನು ಚಿತ್ರಿಸಿದ ಕಾವ್ಯ, ಮುಂದೆ ಎರಡನೆಯ ಘಟ್ಟದಲ್ಲಿ ಬೇಸಗೆ, ವರ್ಷಾ, ಶರತ್ ಋತುಗಳನ್ನು ಚಿತ್ರಿಸುತ್ತ ನಡೆದುಬಂದು, ಬುಡಮೇಲಾದ ಗಿಡವನ್ನು ಕಾಣುವಲ್ಲಿ ವೈಶ್ರವಣನೊಂದಿಗೆ ತಾನೂ ಒಂದು ಸ್ಥಿತಿ ಮುಟ್ಟುತ್ತದೆ. ನಾಗಚಂದ್ರನ ನಿಸರ್ಗಪ್ರೀತಿ, ಕಲಾಸಕ್ತಿಗಳನ್ನು ನೋಡಬೇಕು, ಇಲ್ಲಿ.

ಆತ್ಮಸಾಕ್ಷಿಯಾಗಿ ಸಮಾಜವನ್ನು, ಸೃಷ್ಟಿಯನ್ನು ದೃಷ್ಟಿಸುವವ ಮಾತ್ರ ಪೂರ್ಣದೃಷ್ಟಿಯ ಕವಿ. ಈ ಉಭಯಸಿದ್ಧಿ ಕಂಡುಬರುವುದು ಪಂಪ, ಹರಿಹರ ಮತ್ತು ನಾಗಚಂದ್ರರಲ್ಲಿ ಮಾತ್ರ. ಸಂಸ್ಕೃತ ಕವಿಗಳಿಗೆ ಕಮಲ, ಭ್ರಮರಗಳೆಂದರೆ ಪ್ರೀತಿ; ಕನ್ನಡ ಕವಿಗಳಿಗೆ ಮಾವು, ಮಲ್ಲಿಗೆಯೆಂದರೆ ಒಲವು. ಈ ದೃಷ್ಟಿಯಿಂದ ಪಂಪ, ಅಭಿನವಪಂಪ ಸಾರ್ಥಕ ಹೆಸರುಗಳು. ನಿಸರ್ಗವರ್ಣನೆಯ ಭಾಗವಾಗಿ ಈತ ಬಿಡಿಸಿದ ಬಿಸಿಲು–ಬೆಳದಿಂಗಳು, ಬೆಳಕು–ಕತ್ತಲೆ, ಸೂರ್ಯೋದಯ–ಸೂರ್ಯಾಸ್ತಗಳೆಂಬ ಸೃಷ್ಟಿಯ ನಿತ್ಯವ್ಯಾಪಾರದ ಒಳಪದರುಗಳು ಇಲ್ಲಿ ನಿತ್ಯನೂತನವೆನಿಸಿವೆ.

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ, ಚಂದ್ರಮಂಡಳಂ
ಬಾಡಿದ ಮಾಧವೀಮಧುರ ಮಂಜರಿಯಂತಿರೆ, ತಾರಕಾಳಿ ನೀ
ರೋಡಿ ಕಟಿಲ್ದು ಬೀೞ್ವ ಕಳಿವೂಗೆಣೆಯಾಗಿರೆ, ತಣ್ಣನಪ್ಪೆಲರ್
ತೀಡೆ ತಪೋವನಂಬೊಲತಿ ಪಾವನವಾಯ್ತು ನಭಂ ಪ್ರಭಾತದೊಳ್ ॥

ಮಸುಳೆ ದಿನಕರಂ ತೇಜಃ
ಪ್ರಸರಂ ನಭಮೆಣ್ಣೆದೊಡೆದ ಕನ್ನಡಿವೊಲ್ ತಾಂ
ಮಸಮಸನಾಗಿರ್ದುದು ದೂ
ಳಿಸಂಜೆಯೊಳ್ ದೈನ್ಯಮೇನೊ ನಿಸ್ತೇಜದವೋಲ್ ॥

ಸೂರ್ಯೋದಯ, ಸೂರ್ಯಾಸ್ತ ವರ್ಣನೆಯ ಪದ್ಯಗಳಿವು. ಇಂಥ ನವೀನ ಮತ್ತು ಜೀವಂತ ಚಿತ್ರಗಳನ್ನು ಕನ್ನಡದ ಬೇರೆ ಕವಿಗಳಲ್ಲಿ ಕಾಣುವುದು ಅಪರೂಪ.

ಇವುಗಳಿಗೆ ಜೊತೆಜೊತೆಯಾಗಿ ಜಲಕೇಳಿವರ್ಣನೆ, ಸೂಳೆಗೇರಿವರ್ಣನೆ, ಸಂಗೀತ, ನರ್ತನ ಮತ್ತು ಚಿತ್ರಕಲಾಪ್ರದರ್ಶನ ಸಾಗಿಬಂದಿವೆ. ಬೇರೆಡೆಗಳಂತೆ ಇಲ್ಲಿಯೂ ಇವು ಸಾಂಪ್ರದಾಯಿಕ ವರ್ಣನೆಗಳಾಗಿ ಪರಿಣಮಿಸಿವೆ. ಆದರೆ ಯಾವ ಜೈನಪುರಾಣದಲ್ಲಿಯೂ ಕಾಣದ ಚಿತ್ರಕಲೆ, ಇಲ್ಲಿ ಚಿತ್ತಾಕರ್ಷಕವಾಗಿ ಬಂದು, ಕಾವ್ಯಕ್ಕೆ ಕಾಂತಿ ಕಟ್ಟಿದೆ. ನಾಗಚಂದ್ರನಲ್ಲಿ ಕಾವ್ಯಕಲೆಯಷ್ಟೇ ಚಿತ್ರಕಲೆಯೂ ಶ್ರೀಮಂತವಾಗಿದ್ದುದರ ನಿದರ್ಶನನವಿದು. ಇಡೀ ಕಾವ್ಯದ ತುಂಬ ಬಣ್ಣಬಣ್ಣದ ಚಿತ್ರಗಳನ್ನು ಬಿಡಿಸುತ್ತ ಹೋಗಿದ್ದರೂ ಸಂಗೀತ ಮತ್ತು ನರ್ತನಗಳಂತೆ ಚಿತ್ರಪಟದರ್ಶನದ ಒಂದು ಹೊಸ ಪ್ರಸಂಗವನ್ನೇ ನಿರ್ಮಿಸಿಕೊಂಡಿದ್ದಾನೆ. ಇದರಿಂದ ತೀರ್ಥಂಕರಜೀವದ ಕಾವ್ಯಮಹೋತ್ಸವದಲ್ಲಿ ಒಂದು ಪ್ರಬುದ್ಧ 'ಚಿತ್ರಪ್ರದರ್ಶನ'ವನ್ನೇರ್ಪಡಿಸಿದಂತಾಗಿದೆ. ಶಬ್ದಚಿತ್ರಗಳ ಜೊತೆ ಬಿಡಿಸಿದ ಈ ವರ್ಣಚಿತ್ರಗಳಿಂದಾಗಿ ಮಲ್ಲಿನಾಥ ಪುರಾಣ ಎರಡು ಕಲಾಸೃಷ್ಟಿಗಳ ಸುಂದರ ಸಂಪುಟವಾಗಿದೆ. ಇಲ್ಲಿ ಅಷ್ಟು ವೈಭವಪೂರ್ಣ ಕಾರ್ಯಮಾಡಿದೆ, ರೇಖೆ ಮತ್ತು ವರ್ಣ.

ಬಟ್ಟಿದುವಾದ ಕಣ್ಣ ಕರಿಯಾಲಿಯ ಸುತ್ತಣ ಸಣ್ಣ ಬೆಳ್ಪು ನೇ
ರ್ಪಟ್ಟುದು ಕರ್ಬುರಚ್ಛವಿಯ ಚಂಚು ಮನಂಗೊಳಿಸಿತ್ತು ಮೆಯ್ಯ ಬೆ
ಳ್ಪಿಟ್ಟಳವಾಯ್ತು ಕಾಲ್ಗಳರಿದಾಳದ ಮೇಗಣ ಕೆಂಪಿನಣ್ಕೆಯಿಂ
ದಿಟ್ಟಿಗೆ ಬಂದುದಾರ್ಬರೆರಿಂತಳವಟ್ಟರೆ ರಾಜಹಂಸನಂ॥

ಇದು ರಾಜಹಂಸದ ಚಿತ್ರ. ಇಲ್ಲಿಯ ವರ್ಣಸಂಯೋಜನೆಯ ಪರಿಜ್ಞಾನ ಶಾಸ್ತ್ರಶುದ್ಧವಾದುದು. ಇದೇ ರೀತಿ ಗಿಳಿ, ಕೋಗಿಲೆ, ಭ್ರಮರ ಹೀಗೆ ಒಂದೊಂದು ಚಿತ್ರಘಟಕಗಳನ್ನು ಬಿಡಿಸುತ್ತ ಹೋಗುವುದರೊಂದಿಗೆ, ಇಂಥ ಹಲವು ಘಟಕಗಳನ್ನೊಳಗೊಂಡ ಚಿತ್ರಗಳನ್ನೂ ಬಿಡಿಸುತ್ತಾನೆ.

ತೆರೆ ಕರೆಗಣ್ಮದಪ್ಪುವಿವೆ ತಣ್ಣೆಲರಿಂ, ತಡಿಯೊಳ್ ರಥಾಂಗವೀ
ನೆರೆವುದೆ, ರಾಜಹಂಸ ಚರಣಾಹತಿಯಿಂ ಜಲಬುದ್ಬುದಂಗಳುಂ
ನೊರೆಗಳುಮೀ ತೆರಳ್ದಪುವೆ, ಹೇಮಸರೋರುಹಕುಟ್ಮಳಂಗಳೀ
ಬಿರಿವುವೆ ಪೋಲೆ ಪೂಗೊಳನನಿಂತಜನುಂ ಬರೆಯಲ್ಕೆ ಬಲ್ಲನೇ ॥

ಇಂಥ ದೃಶ್ಯಗಳನ್ನು ಬಿಡಿಸುವ ನಾಗಚಂದ್ರ, ಬಣ್ಣಗಳ ಸೂಕ್ಷ್ಮ ವ್ಯತ್ಯಾಸವನ್ನೂ ಅರಿತ ಕಲಾವಿದ. ಒಂದೇ ಬಣ್ಣದ ಬೇರೆ ಬೇರೆ ಛಾಯೆಗಳನ್ನು ಬಳಸಿಕೊಂಡು ಚಿತ್ರವನ್ನು ಬೆಳೆಸಿಕೊಂಡು ಹೋಗುವ ರೀತಿಯನ್ನು ಇಲ್ಲಿ ನೋಡಬಹುದು–

ಕಳವೆಯ ಕೆಯ್ವೊಲಂಗಳ ಪಸುರ್ಪು ದಿಶಾಪಟಳಕ್ಕೆ, ಪದ್ಮಿನೀ
ದಳದ ಪಸುರ್ಪು ಪೆರ್ಗಜೆಗೆ, ತಟ್ಟಿಳವುಲ್ಲ ಪಸುರ್ಪು ಶೈಲಮೇ

ಖಳೆಗೆ, ಶುಕಪ್ರತಾನದ ಪಸುರ್ಪ ವಿಯದ್ವಳಯಕ್ಕೆ ಪಚ್ಚೆಯಿಂ
ವಿಳಸಮನಿಕ್ಕಿದಂತೆಸೆಯೆ ಭೂಪತಿ ಮೆಚ್ಚಿ ಶರದ್ವಿಳಾಸಮಂ ॥

ಇಲ್ಲಿ ಭೂಮಿ, ದಿಕ್ಕು, ವ್ಯೋಮಗಳನ್ನು ವ್ಯಾಪಿಸುತ್ತ ಒಂದೇ ಹಸಿರು ಹಂತಕಟ್ಟಿ ಹಬ್ಬಿದೆ. ಹೀಗೆ ಏಕವರ್ಣದಲ್ಲಿ ಕಲಾಸಿದ್ಧಿ ತೋರುವ ನಾಗಚಂದ್ರ, ಹಲವು ವರ್ಣಗಳ ಸಂಯೋಜನೆಯಲ್ಲಿಯೂ ಮಹಾಸಿದ್ಧಿ ತೋರಿಸುತ್ತಾನೆ.

ವಿದಳಚ್ಚಂಪಕ ವರ್ಣಮಾದ, ಶಿಖಿಕಂಠಾಚ್ಛಾಯೆವೆತ್ತ, ಇಂದ್ರಚಾ
ಪದರೂಪಂ ತಳೆದ, ಅಭ್ರಕಭ್ರಮೆಯನಾಳ್ದ, ಉತ್ಪಾಟಳಪ್ರಾಂಸು ತ
ಟ್ತಿ, ದಳತ್ಕಿಂಶುಕ ಶೋಣಮಪ್ಪ ಸಮಸದ್ವರ್ಣ ಪ್ರದೇಶಂಗಳಿಂ
ದಿದೆ ಚೆಲ್ವಾದುದು ಮಂದರಾದ್ರಿ ಮದನಂ ವರ್ಣಕ್ರಮಂಗೆಯ್ವವೊಲ್ ॥

ಅರಳಿದ ಸಂಪಗೆ, ನವಿಲಕಂಠ, ಕಾಮನಬಿಲ್ಲು, ಅಭ್ರಕ, ಪಾದರಿ ಹೂ, ಮುತ್ತಲಮರಗಳ ನಿಸರ್ಗಸಹಜ ವರ್ಣಗಳನ್ನು ಸಂಯೋಜಿಸಿದ ವರ್ಣಕ್ರಮ, ಆತನ ಮಿಶ್ರವರ್ಣಗಳ ಅನುಭವವನ್ನು ವೇದ್ಯಗೊಳಿಸುತ್ತದೆ. ಹೀಗೆ ವರ್ಣಗಳನ್ನು ಸ್ಥಿರವಾಗಿ ಸಂಯೋಜಿಸುವುದರೊಂದಿಗೆ ಓದುಗರ ಕಣ್ಣಮುಂದೆ ಅವುಗಳ ಸಂಚಲವನ್ನೂ ಮಾಡಿಸುತ್ತಾನೆ.

ಚರಣಾಲಕ್ತಕರಾಗಮುರ್ವರೆಯೊಳಾರಕ್ತಾಬ್ಜಮಂ ಪಾಸುವಂ
ತಿರೆ, ಸಸ್ಮೇರ ಕಟಾಕ್ಷಮಾಲೆ ಬಯಲೊಳ್ ಕರ್ನೆಯ್ದಿಲಂ ಸೂಸುವಂ
ತಿರೆ, ಭೂಷಾರುಚಿ ಶಕ್ರಚಾಪಲತೆಯಂ ದಿಕ್ಚಕ್ರದೊಳ್ ಬೀಸುವಂ
ತಿರೆ ಬಂದೀಕ್ಷಿಸಿದರ್ ಪುರಪ್ರಮದೆಯರ್ ಸಾಹಿತ್ಯಸರ್ವಜ್ಞನಂ ॥

ಪುರಪ್ರಮದೆಯರ ಆಗಮನ ಪ್ರಸಂಗದಲ್ಲಿ ಬಣ್ಣಬಣ್ಣಗಳ ಬೆಳಕು ಬೀಸಿಹೋದ ಪ್ರಸಂಗವನ್ನು ಕವಿ ಸಮಗ್ರವಾಗಿ ಮೂಡಿಸಿದ್ದಾನೆ. ಇಂಥ ಮನೋಜ್ಞ ಚಿತ್ರಗಳನ್ನು ಬಿಡಿಸಿದ ಕನ್ನಡದ ಏಕೈಕ ಕವಿ, ನಾಗಚಂದ್ರ, ವೈವಿಧ್ಯವಿಲ್ಲದೆ ಒಂದೇ ಭವದಲ್ಲಿ ಮುಗಿದುಹೋಗುವ ಪೂರ್ವಭವ, ಇವುಗಳಿಂದಾಗಿ ಕಲಾಸಂಚಯವೆನಿಸಿದೆ.

ಯಾವುದೇ ತೀರ್ಥಂಕರನ ಭವ, ವೈವಿಧ್ಯರಹಿತವೂ ಸಂಪ್ರದಾಯ ನಿಯಂತ್ರಿತವೂ ಆಗಿರುತ್ತದೆ. ಅದರಲ್ಲಿಯೂ ಮಲ್ಲಿನಾಥನದು ಭೂಮಿಯ ಮೇಲೆ ಬದುಕುಮಾಡದ, ಚಕ್ರವರ್ತಿ ಪ್ರಸಂಗವಿರಹಿತ ಜೀವ. ಈ ಸಂದರ್ಭದಲ್ಲಿ ಪಂಚಕಲ್ಯಾಣ ವಿವರಣೆ ಮತ್ತು ಧರ್ಮನಿರೂಪಣೆಗಳೆರಡು ಅನಿವಾರ್ಯವಾಗಿ, ಕವಿತ್ವ ಗರಿಮುಚ್ಚಿ ಗಾಂಭೀರ್ಯದಿಂದ ಹೆಜ್ಜೆ ಹಾಕಬೇಕಾಗುತ್ತದೆ. ಆದರೂ ಈ ಭಾಗದ ಪುರಾಣ ಮತ್ತು ಶಾಸ್ತ್ರಪ್ರಸಂಗಗಳಲ್ಲಿ ಜನ್ಮಾಭಿಷೇಕ ಕಲ್ಯಾಣ, ಜೀವಸಂಬೋಧನೆಗಳು ಕಾರಣವಾಗಿ ಕವಿತ್ವ ಕಣ್ದೆರೆದಿದೆ. ಕಾಮದಹನ ಪ್ರಸಂಗವಂತೂ ನಾಗಚಂದ್ರನ ನವೀನಸೃಷ್ಟಿ. ಪೂರ್ವಭವದ "ಚಿತ್ರ ಪ್ರದರ್ಶನ" ದಂತೆ ಜಿನಭವದ ಈ "ಕಾಮದಹನ"ವೂ ಒಂದು ಒಳ್ಳೆಯ ಸಂದರ್ಭ.

ಹೀಗೆ ಪುರಾಣದ ಗರಿಗರಿಗಳಲ್ಲಿ ಕಾವ್ಯದ ಕಣ್ಣುಗಳನ್ನು ಬಿಡಿಸುತ್ತ ಹೋಗಿ ನಾಗಚಂದ್ರ"ಕಾವ್ಯಧರ್ಮಮಂ ಧರ್ಮಮುಮಂ" ಮೇಳವಿಸಿದ್ದಾನೆ. ಇದರಿಂದ ಕನ್ನಡದ ಶ್ರೇಷ್ಠದರ್ಜೆಯ ಜೈನಪುರಾಣಗಳೆಂದರೆ ಆದಿಪುರಾಣ, ಅನಂತನಾಥಪುರಾಣ ಮತ್ತು ಮಲ್ಲಿನಾಥಪುರಾಣಗಳೆಂದು ಬೆರಳುಮಾಡಿ ತೋರಿಸುವಂತಾಗಿದೆ.

ಕಾವ್ಯದೃಷ್ಟಿ : ಜೀವನವನ್ನು ಲೌಕಿಕ–ಪಾರಲೌಕಿಕವೆಂದು ಬೇರ್ಪಡಿಸಿ ಬದುಕುವ ಕಾರಣವಾಗಿ ಜೈನರಲ್ಲಿ ಲೌಕಿಕಕ್ಕೇ ಒಂದು ಕಾವ್ಯ, ಪಾರಲೌಕಿಕಕ್ಕೇ ಒಂದು ಕಾವ್ಯ ರೂಢಗೊಂಡು, ಪಂಪ ಮೊದಲುಮಾಡಿ ಎಲ್ಲ ಜೈನಕವಿಗಳು "ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಮಂ" ಎಂಬ ಎರಡು ಪರಂಪರೆಗಳಲ್ಲಿ ನಡೆದು ಬಂದರು. ನಾಗಚಂದ್ರನದು ಲೌಕಿಕಕ್ಕಿಂತ ಪಾರಲೌಕಿಕದ ಕಡೆಗೆ ಒಲಿದ ಮುನಿಸದೃಶ ಶ್ರಾವಕಜೀವ. ಲೌಕಿಕಕಾವ್ಯದಿಂದ ಮುಖತಿರುವಿ ಇವನು ಎರಡೂ ಆಗಮಿಕ ಕೃತಿಗಳನ್ನೇ ಸೃಷ್ಟಿಸಲು ಕಾರಣ, ಈ ಮನೋಧರ್ಮ. ಹೀಗೆ ಪರಂಪರೆಯನ್ನು ಪಾಲಿಸದಿದ್ದರೂ ಪ್ರಸಿದ್ಧ "ಕವಿಪದ್ಧತಿ"ಯನ್ನು ಪರಿಪಾಲಿಸಿದ ಸಂಪ್ರದಾಯಶೀಲ ಕವಿ ನಾಗಚಂದ್ರ. ಪ್ರತಿಭೆ ಎಷ್ಟೇ ಉಜ್ವಲವಾಗಿದ್ದರು ಸಂಪ್ರದಾಯಕ್ಕೆ ಹೀಗೆ ಬಂಧಿಸಿಕೊಳ್ಳುವುದರಲ್ಲಿಯೇ ಸಾರ್ಥಕತೆಯಿದೆಯೆಂಬ ಈ ಭಾವನೆ, ಅವನ ಕವಿತ್ವಕ್ಕೆ ಒಂದು ಮಿತಿಯನ್ನುಂಟುಮಾಡಿದೆ.

ಕಾವ್ಯದ ಮಹೋನ್ನತಿಗೆ ಮೂಲಧನವಾದ ಪ್ರತಿಭೆಯಂತೆ, ಕೆಲವು ಸಲ ವಸ್ತುವೂ ಕಾರಣವಾಗುತ್ತದೆ. ನಿರ್ಮಮತ್ವದ ಭಕ್ತ ಕವಿಗಳಿಗೆ ತಮ್ಮಲ್ಲಿ ಪ್ರಕಾಶಿಸುತ್ತಿರುವ ಪ್ರತಿಭೆಗಿಂತ, ತಾನು ಕಾವ್ಯದಲ್ಲಿ ಪೂಜಿಸುತ್ತಿರುವ ವಸ್ತುವೇ ದೊಡ್ಡದು. ಈ ದೃಷ್ಟಿಯಿಂದ ನಾಗಚಂದ್ರ ವಸ್ತುಶ್ರದ್ಧೆಯ ಕವಿ. "ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತ ರಾಘವಂ ನಾಯಕನಾಗೆ ವಿಶ್ರುತಮೆನಿಪ್ಪುದು...... ವಿಷಯಮೊಪ್ಪದೊಡಾವುದುಮೋಪ್ಪಲಾರ್ಕುಮೇ" "ಜಿನಂ ಸತ್ಯವಾದಿ ಕಥಾನಾಯಕನಾಗೆ ಚಿತ್ತರಿತಮಂ ಪೇಟ್ದಿಂಗೆ ಕೈಸಾರ್ಗುಂ......ನಿಃಶ್ರೇಯಸಶ್ರೀಪದಂ" ಎಂಬ ದೃಢವಾದ ನಂಬುಗೆ ಆತನದು. ಹರಿಹರ, ನಾಗಚಂದ್ರ, ಕುಮಾರವ್ಯಾಸ, ಚಾಮರಸ ಮೊದಲಾದ ಭಕ್ತಕವಿಗಳ ಸ್ಥಿತಿ ಇಂತಹದು. ನಾಯಕನು ತನ್ನ ಕಾವ್ಯವನ್ನು ತಾನೆ ಬರೆದುಕೊಳ್ಳುವನೆಂಬ ಆತ್ಮವಿಶ್ವಾಸ ಇವರದು.

ಕಾವ್ಯವೆಂಬುದು ರಾಗದ್ವೇಷಗಳ ನಿಬಂಧವಲ್ಲ; ವೀತರಾಗಪ್ರಬಂಧ. ಕಲೆಯೆಂಬುದು ಕಲೆಗಾಗಿ ಅಲ್ಲ, ಜೀವನಕಲೆಗಾಗಿ. ಇಷ್ಟೇ ಏಕೆ ಕರ್ಮವಿಮೋಚನೆ, ಮೋಕ್ಷಸಾಧನೆ ಅದರ ಗುರಿ. ಹೀಗಾಗಿ ಕಾವ್ಯರಚನೆಯೆಂಬುದು ನಾಗಚಂದ್ರನ ದೃಷ್ಟಿಯಲ್ಲಿ ವಾಣಿಮಾಧ್ಯಮದ ಮೂಲಕ ಜರುಗುವ ದೇವಪೂಜೆ.

ರಸಪ್ರಪಂಚದಲ್ಲಿ ನಾಗಚಂದ್ರ ಶಾಂತವನ್ನು ಮೆಚ್ಚಿದ ಕವಿ. "ಶಾಂತಮೆ ಪುಣ್ಯ ಹೇತುವಘಹೇತುಗಳನ್ಯರಸಂಗಳ್" ಇದು ಅವನ ಸಿದ್ಧಾಂತ, ಈ ಸಿದ್ಧಾಂತದಲ್ಲಿ ಶ್ರದ್ಧೆ ಇದ್ದರೆ ಸಾಕು, ಮಿಕ್ಕ ರಸಗಳು ಶಾಂತವನ್ನು ಮುಟ್ಟಿ ಶಾಂತವಾಗುತ್ತವೆಯೆಂದು ಅವನ ಭಾವನೆ. ಬಹುಶಃ ಕನ್ನಡ ಸಾಹಿತ್ಯದಲ್ಲಿಯೇ ಶಾಂತರಸದ ಬಗ್ಗೆ ಇಷ್ಟು ಆಳವಾದ ಕಾಳಜಿವುಳ್ಳ ಕವಿ ಇನ್ನೊಬ್ಬನಿಲ್ಲ.

> ನಿನಗೆ ರಸಮೊಂದೆ ಶಾಂತಮೆ
> ಜಿನೇಂದ್ರ ಮನಮಾ ರಸಾಂಬುನಿಧಿಯೊಳಗವಗಾ
> ಹನಮಿರ್ದು ಮಿಕ್ಕ ರಸಮಂ
> ಕನಸಿನೊಳಂ ನೆನೆಯದಂತು ಮಾಡೆನಗರ್ಹಾ ॥

ಎಂದು ತನ್ನ ಚಿತ್ತಸ್ಥಿತಿಯನ್ನು, ಶಾಂತರಸದ ಒಲುಮೆಯನ್ನು ಸ್ಪಷ್ಟಪಡಿಸಿದ್ದಾನೆ. ಶಾಂತಪ್ರವೃತ್ತಿಯು ಭಕ್ತಿ ಮತ್ತು ಶೃಂಗಾರಗಳೆಂಬ ಕೋಮಲಭಾವಗಳನ್ನು ಮಾತ್ರ ಪ್ರತಿನಿಧಿಸುತ್ತದೆ. ಶಾಸ್ತ್ರ ವಿವರಣೆಯನ್ನು

ಬಿಟ್ಟರೆ ಮಲ್ಲಿನಾಥಪುರಾಣದ ತುಂಬ ಉಸಿರಾಡಿಸುವುವೆಂದರೆ ಈ ಎರಡೂ ಭಾವಗಳು. ಇವುಗಳ ಮೂಲಕ ಅಂಗೈ ಅಗಲದ ಮಲ್ಲಿನಾಥನ ಕಥೆ ಅರ್ಚನೆ, ಪ್ರಾರ್ಥನೆ, ತಪಸ್ಸು ಪ್ರಸಂಗಗಳಲ್ಲಿ ಅಚ್ಚುಕಟ್ಟಾಗಿ ಅರಳಿದೆ; ಸ್ತ್ರೀ–ಪುರುಷ ವಿಲಾಸ, ನಾಡು–ನಗರ ವರ್ಣನೆ, ಋತುಚಿತ್ರಣಗಳಲ್ಲಿ ಲಾಸ್ಯವಾಡಿದೆ.

ಭಕ್ತಿ, ಶೃಂಗಾರಗಳ ಅಭಿವ್ಯಕ್ತಿಗೆ ಸರ್ವಯೋಗ್ಯ ಮಾಧ್ಯಮ, ಸುಕುಮಾರ ಶೈಲಿ. ಇದು ನಾಗಚಂದ್ರನಲ್ಲಿ ಪ್ರಾಣವಾಗಿ ಪ್ರವಹಿಸುತ್ತಲಿದೆ. "ಪದರಚನೆ...... ಮೃದುವೆನೆ, ಪೊಸಬಗೆ ರಸಭಾವದೊಳೋಕುಳಿಯಾಡೆ" ಎನ್ನುತ್ತ ತನ್ನ ಶೈಲಿ ಲಕ್ಷಣವನ್ನು ಕವಿಯೇ ಸಾರಿಹೇಳಿದ್ದಾನೆ. ಇದರಿಂದ ಚಂಪೂಶೈಲಿಯ ನಿಬಿಡ ಅರಣ್ಯ, ನಾಗಚಂದ್ರನಲ್ಲಿ ಉಪವನದ ಸೌಂದರ್ಯದಿಂದ ಶೋಭಿಸಿದೆ. ಷಟ್ಪದಿಯ ಮಾರ್ದವತೆಗೆ ಚಾಮರಸ, ಲಕ್ಷ್ಮೀಶ ಹೇಗೋ ಚಂಪುವಿನ ಮಾರ್ದವತೆಗೆ ಹರಿಹರ, ನಾಗಚಂದ್ರರೆಂದು ಹೇಳುವಂತಾಗಿದೆ.

ಈ ಕೋಮಲತೆ, ಕೆಲವೆಡೆ ವ್ಯಂಜಕತೆ ಇಲ್ಲದೆ ದೋಷವಾಗಿ ಪರಿಣಮಿಸುತ್ತದೆ. ಇದರಿಂದ ಮನಮುಟ್ಟುವ ಬದುಕಿನ ಸನ್ನಿವೇಶಗಳನ್ನಾಗಲೀ, ಪಾತ್ರಗಳನ್ನಾಗಲೀ ಪ್ರತಿಮಿಸುವ ಕಸುವು ಅದಕ್ಕೆ ಸಾಲದೇ ಹೋಗುತ್ತದೆ. ಲಕ್ಷ್ಮೀದೇವಿಯ ಪುತ್ರದೋಹಳ, ಶ್ರೀಧರನ ಉದ್ವೇಗಗಳು ಅಯಶಸ್ಸುಗೊಳ್ಳಲು, ಮಲ್ಲಿನಾಥ ಪುರಾಣಕ್ಕೆ ಗಕ್ಕನೇ ಒಂದು ತಿರುವುಕೊಟ್ಟ ವೈಶ್ರವಣನ ವಟವೃಕ್ಷದರ್ಶನದಲ್ಲಿ ಕಾವ್ಯಪ್ರವಾಹ ಪರಿಣಾಮಕಾರಿ ತಿರುವು ಪಡೆಯದೆ ಹರಿದುಹೋಗಲು ವ್ಯಂಜಕತೆಯ ಅಭಾವವೇ ಕಾರಣವಾಗಿದೆ. ಒಟ್ಟಿನಲ್ಲಿ ಪಂಪನಂತೆ ಸಂಯಮಪೂರ್ಣವೂ ಅಲ್ಲದ, ಹರಿಹರನಂತೆ ಆವೇಶಪೂರ್ಣವೂ ಅಲ್ಲದ ಸಹಜಗಮನ ನಾಗಚಂದ್ರನ ಶೈಲಿಯ ಮುಖ್ಯಲಕ್ಷಣವಾಗಿದೆ.

❖❖

*

ಪೀಠಿಕೆ

ಶ್ರೀಪಾದಂ ಬಾಲಚಂದ್ರೋಜ್ಜ್ವಲತರಸುಮನೋವರ್ಷದಿಂ ಪಾದಪೀಠಂ
ಭೂಪಾಲೋತ್ತಂಸತಾರಾತರಳಮಣಿಗಳಿಂದುತ್ತಮಾಂಗಂ ಶರಜ್ಜ್ಯೋ
ತ್ಸ್ನಾಪಾಂಡುಚ್ಛತ್ರರತ್ನಂಗಳಿನಜಿಪೆ ನಿಜೈಶ್ವರ್ಯಮಂ ದಿವ್ಯಭಾಷಾ
ವ್ಯಾಪಾರೋದಾರನಾದಂ ಕುಡುಗೆಮಗೆ ಸುಖಾವಾಪ್ತಿಯಂ ಮಲ್ಲಿನಾಥಂ ॥೧॥

ಪದವಿನ್ಯಾಸವಿಲಾಸಮಂಗವಿಭವಂ ಚೆಲ್ವಾದ ದೃಷ್ಟಿಪ್ರಸಾ
ದದೊಳೊಂದಾದ ನಯಂ ಮೃದೂಕ್ತಿ ವನಿತಾಸಾಮಾನ್ಯವಲ್ತೆಂಬ ಕುಂ
ದದ ವರ್ಣಂ ನಿಜವೆಂಬ ರೂಪೆಸೆಯೆ ನಾನಾಭಂಗಿಯಂ ಬೇಱೆ ತಾ
ಳಿದ ವಾಗ್ದೇವತೆ ಮಾಳ್ಕೆ ಮತ್ಕೃತಿಗೆ ಲೋಕಾಶ್ಚರ್ಯಚಾತುರ್ಯಮಂ ॥೨॥

ಮನ್ನಿಸುಗೆ ಕೃತಿಗೆ ಸೌಭಾ
ಗ್ಯೋನ್ನತಿಯಂ ಸುಕವಿ ಪಂಪನಾದಿಪುರಾಣಂ
ಪೊನ್ನನ ಶಾಂತಿಪುರಾಣಂ
ರನ್ನನ ಕೃತಿರತ್ನಮೆನಿಸಿದಜಿತಪುರಾಣಂ ॥೩॥

ಧರೆ ಪೊಗೞೆ ವೀತರಾಗನ
ಚರಿತದೊಳಳವಡಿಸಿ ಸಕಲರಸಮಂ ಕವಿತಾ
ಪರಿಣತಿಯಂ ಮೆಱೆದೀ ಕಾ
ವ್ಯರಸಾರ್ಣವಪೂರ್ಣಚಂದ್ರನಭಿನವಪಂಪಂ ॥೪॥

ಜಿನಪತಿಗಂ ಜಿನಮುನಿಗಂ
ಜಿನಾಗಮಕ್ಕಂ ಜಿನಾಧಿಪತಿಭವನಕ್ಕಂ
ಜಿನಗುಣಸಂಪತ್ತಿಗಮೆಱ
ಪನೆಱಗನುಱಿದವರ್ಗೆ ನಾಗಚಂದ್ರಕವೀಂದ್ರಂ ॥೫॥

[ಜ]ನಪತಿಸಭೆಯೊಳ್ ಪೂಜ್ಯಂ
ಮುನಿಪತಿಸಭೆಯೊಳ್ ಪದಾರ್ಥನಿಪುಣಂ ವಿದ್ವ
ಜ್ಜನಸಭೆಯೊಳ್ ಮಾನ್ಯಂ ಸ
ಜ್ಜನಸಭೆಯೊಳ್ ಚಾರುಚರಿತನಭಿನವಪಂಪಂ ॥೬॥

ಪದರಚನೆ ಸಜ್ಜನಶ್ರವ
ಣದೊಳಂಚೆಯ ತುಪ್ಪುಟಿಂಚೆಯಂ ತಿರಿಪಿದವೊಲ್
ಮೃದುವೆನೆ ಪೊಸಬಗೆ ರಸಭಾ
ವದೊಳೋಕುಳಿಯಾಡೆ ಪೇ[ಳ್ವ]ನಭಿವಪಂಪಂ ॥೭॥

ಎಂದನುರಾಗದಿಂದ ಪೊಗಟ್ದು ಭವ್ಯಜನಂ ಕಿಱಿದೀ ಕಥಾಪರಿ
ಸ್ಪಂದಮಿದಂ ನಿಮಿರ್ಚಿ ಕವಿತಾರಸಮಂ ನೆಱೆ ಪೇಟ್ದರಿಲ್ಲ ಮು
ನ್ನೆಂದು ಮಹಾಕವೀಶ್ವರರೊಳೊರ್ವರುಮೆಂದೊಡೆ ಪೇಟಲಾಂ ಮನಂ
ದಂದೆನದಲ್ಲದೆನ್ನಳವೆ ಮಲ್ಲಿಜಿನೇಂದ್ರಮಹಾಪುರಾಣಮಂ ॥೮॥

ವಿಕಥಾವರ್ಣನಮಲ್ಪಸಂಸ್ತವನಮೆಂಬೀದೋಷಮಲ್ತೆಂಬಿನಂ
ಸಕಲತ್ಯಾಗಿ ಸಮಸ್ತವೇದಿ ಭುವನಾರಾಧ್ಯಂ ಜಿನಂ ಸತ್ಯವಾ
ದಿ ಕಥಾನಾಯಕನಾಗೆ ತಚ್ಚರಿತಮಂ ಪೇಟ್ದಂಗೆ ಕೈಸಾರ್ಗುಮೈ
ಹಿಕಮಾಮುತ್ರಿಕಮಾನುಷಂಗಿಕಮೆನಲ್ ನಿಃಶ್ರೇಯಸಶ್ರೀಪದಂ ॥೯॥

ಶಾಂತಮೆ ಪುಣ್ಯಹೇತುವಘಹೇತುಗಳನ್ಯರಸಂಗಳಾಗಿಯುಂ
ಶಾಂತಮೆನಿಪ್ಪ ತಜ್ಜಿನಕಥಾರಸದೊಳ್ಪುದುವೊಕ್ಕು ಮಾಡುಗುಂ
ಶಾಂತಿಯನಾರಸಂಗಳಿದು ಚಿತ್ರಿತಸಿದ್ಧರಸೋಪವಿದ್ಧಮ
ತ್ಯಂತವಿಶುದ್ಧ ಹೇಮರಸವಾಗವೆ ಲೋಹರಸಂಗಳಾದೊಡಂ ॥೧೦॥

ಭರತಮಹೀಶ್ವರಂಗೆ ಮಗಧೇಶ್ವರಮಂಡಲಿಕಂಗೆ ತಾರಭೂ
ಧರವಿಪುಲಾದ್ರಿಯೊಳ್ ವೃಷಭಸೇನಗಣಾಗ್ರಣಿ ಗೌತಮೋತ್ತಮಂ
ಪುರುಜಿನವರ್ಧಮಾನಗುರುಸನ್ನಿಧಿಯೊಳ್ತಿಳಿವಂತು ಪೇಟ್ದುದಂ
ವಿರಚಿಸುವೆಂ ಮನಂಬಯಸೆ ಮಲ್ಲಿಜಿನೇಂದ್ರಮಹಾಪ್ರಬಂಧಮಂ ॥೧೧॥

*

ಪೂರ್ವ ಭಾಗ

ಹಿಮಶೈಲಪ್ರಮುಖಂಗಳಾಱು ಕುಲಶೈಲಂಗಳ್ವಿಯದ್ವಾಹಿನೀ
ಪ್ರಮುಖಂಗಳ್ಪದಿನಾಲ್ಕು ಗೋತ್ರನದಿಗಳ್ ಶೋಭಾರತಂ ಭಾರತ
ಪ್ರಮುಖಂಗಳ್ವಿಷಯಂಗಳೇೞ್ ನಿಜನಾನಾವರ್ಣದಿಂ ಮುತ್ತೆ ಚಿ
ತ್ತಮನೇಂ ಚಿತ್ತಜಚಿತ್ರಶಾಲೆಯೆನೆ ಜಂಬೂದ್ವೀಪಮಿಂಬಾದುದೋ ॥೧೨॥

ವ॥ ಆ ಜಂಬೂದ್ವೀಪದ ನಟ್ಟನಡುವೆ

ದೊರೆವೆತ್ತುನ್ನತಿಯಿಂ ಸಮಸ್ತ ವಿಬುಧಪ್ರಸ್ತುತ್ಯ ವಿಖ್ಯಾತಿಯಿಂ
ಸ್ಥಿರಸಂಪತ್ತಿಯಿನೀ ವಸುಂಧರೆಗೆ ತಾಂ ಮಧ್ಯಸ್ಥಮಾದೊಳ್ಪಿನಿಂ
ಧರಣೀಭೃತ್ಪತಿ ಪೂಜ್ಯಮಾದಮಹಿಮಾವಷ್ಟಂಭದಿಂ ನಾಡೆ ಸುಂ
ದರಮಾಗಿರ್ದುದು ಪೋಲ್ತು ಮಂದರನಗಂ ಸಾಹಿತ್ಯಸರ್ವಜ್ಞನಂ ॥೧೩॥

ವ॥ ಆ ಮಂದರಪೂರ್ವಾಪರದಿಗ್ವಿಭಾಗದೊಳ್

ಪುರಮೆಲ್ಲಂ ಮಾಡದಿಂದಲ್ಲಿಯ ಪುರವನಮೆಲ್ಲಂ ಲತಾಲೀಢದಿಂ ಗೋ
ಪುರಮೆಲ್ಲಂ ಚೈತ್ಯಗೇಹಂಗಳಿಗನುಪಪುರಮೆಲ್ಲಂ ಪರಸ್ತ್ರೀರಣನ್ನೂ
ಪುರಝುಂಕಾರಂಗಳಿಂ ರಂಜಿಸೆ ಜನಪದಲಕ್ಷ್ಮೀಪದಾಲಂಕೃತಂ ನೂ
ಪುರಮಿರ್ಪಂತಿರ್ಪುದಂಗೋದ್ಭವಜಯವನಿತಾಜನ್ಮಗೇಹಂ ವಿದೇಹಂ ॥೧೪॥

ವ॥ ಆ ವಿದೇಹವಿಷಯಕ್ಕೆ ಪೂರ್ವಾಪರಭೇದದಿಂ ಪೂರ್ವಾಪರವಿದೇಹಮೆಂಬ ಸಂಕಲ್ಪಮಾದುವಲ್ಲಿ

ಇಂದುವ ಪದಿನಾಱುಂ ಕಳೆ
ಯಿಂದಂ ಕಣ್ಗೊಳಿಸುವಂತೆ ಪದಿನಾಱುಂ ನಾ
ಡಿಂದಂ ಪೂರ್ವವಿದೇಹಂ
ಸೌಂದರ್ಯಮನತ್ಯಪೂರ್ವಮಂ ತಳೆದಿರ್ಕುಂ ॥೧೫॥

ವ॥ ಆ ಹದಿನಾಱಱೊಳೊಂದು ವಿಷಯಂ ಕಚ್ಛಕಾವತಿಯೆಂಬುದುಮಲ್ಲಿ

ಮಾವಿನ ಜೋಂಪಮಂ ಲತೆಯ ಬಳ್ಳಿ ಸರೋವರಮಂ ಪೊದಟ್ದಿ ಪೊಂ
ದಾವರೆವಳ್ಳಿ ಪೂಗವನಮಂ ಪೊದಜೆಂದೆಲೆವಳ್ಳಿ ಪುಷ್ಪವ
ಲ್ಲಿವನಮಂ ಲತಾಂಗಿಯರಪಾಂಗದ ಮಿಂಚಿನ ಬಳ್ಳಿ ಸುತ್ತೆ ಶೋ
ಭಾವಹಮಾರ್ಗಮಾವಿಷಯಮೀವುದು ರಾಗದ ಬಳ್ಳಿವಳ್ಳಿಯಂ ॥೧೬॥

ಜಾನಪದಾಂಗನಾಜನದ ಗಾಡಿಗೆ ಸೋಲ್ತಳಿನೀನಿನಾದಮಂ
ಜಾನಿಸಿ ಕೇಳ್ದು ಸಾರಪರಿಕಾಲ್ಗಳನೊಯ್ಯನೆ ದಾಂಟಿ ಸುತ್ತಿದು
ದ್ಯಾನದೊಳಾಡಿ ತೀರಮೆಯುಮಂ ಪಥಿಕರ್ ಮಱೆದಿಲ್ಲೆನಲ್ ಪರಿ
ಮ್ಲಾನತೆ ಸೈತು ಬಟ್ಟೆ ನಡೆಯಲ್ಪಡೆಯರ್ ವಿಷಯಾಂತರಾಳದೊಳ್ ॥೧೭॥

ವ॥ ಅಂತು ನಯನಾನಂದವಿಷಯವಪ್ಪಾದ ವಿಷಯವಿಲಾಸಿನೀಮಧ್ಯನಾಭಿಯುಂ ಸೌಂದರ್ಯಸನಾಭಿಯುಮೆನಿಸಿ [ರಾಜಧಾನಿ ವೀತಶೋಕಪುರಂ ಮೆರೆವುದುಮಲ್ಲಿ]

ಪಾಡುತ್ತುಂ ಮಱೆದುಂಬಿಯೊಳ್ಗಡಣದಿಂ ಪರಾವತಕ್ರೀಡೆಯಂ
ನೋಡುತ್ತುಂ ಪದಪಿಂ ವಿಚಿತ್ರರತಿಕೇಳೀವಾರ್ಧಿಯೊಳ್ಮೂಡಿ ಮು
ಳ್ಕಾಡುತ್ತುಂ ಶತಪತ್ರಪತ್ರಶರದಿಂದಂ ಪತ್ರಭಂಗಂಗಳಂ
ಮಾಡುತ್ತುಂ ಪ್ರಿಯರಿಂತು ಪೊಟ್ತುಗಳೆವರ್ನಿಚ್ಚಂ ಪುರೋದ್ಯಾನದೊಳ್ ॥೧೮॥

ನಡೆಗಲಿಸುತ್ತುಮಂಚೆಗಳನೋದಿಸುತುಂ ಗಿಳಿಯಂ ಪಿಕಕ್ಕೆ ಮಾ
ಮಿಡಿಗಳನಿಕ್ಕುತುಂ ನವಿಲನಾಡಿಸುತುಂ ಪೊಣರ್ವಕ್ಕಿಯಂ ಪುಣಿ
ಲ್ಗಿಡಿದು ಬಱಲ್ವಿನಂ ತಗುಳುತುಂ ಬನದೊಳ್ಬಿನದಂ ವಿಲಾಸಮಂ
ಪಡೆಯೆ ನಿರಂತರಂ ತೊಲಗದಿರ್ಪುದು ಪೌರವಿಲಾಸಿನೀಜನಂ ॥೧೯॥

ಗಂಡನನೊರ್ವಳೂರ್ವಶಿಗೆ ಗಂಗೆಗೆ ಗೋಪಿಗೆ ಕೊಟ್ಟರೆಂದೊಡಾ
ಪೆಂಡಿರ ರೂಪುಮಂ ಸೊಬಗುಮಂ ವಿಭಮಂ ಪೆಸರ್ಗೊಳ್ವುದೇ ಮನಂ
ಗೊಂಡಳನಂಗನಂ ರತಿಯೆನಲ್ ಬದುಕೆತ್ತಣದಾಕೆಗೆಂದು ಕ
ಣ್ಗೊಂಡ ವಿಲಾಸದಿಂ ನಗುವುದಲ್ಲಿಯ ವಾರವಿಲಾಸಿನೀಜನಂ ॥೨೦॥

ಆವಂ ಸ್ವರ್ಗಾಪವರ್ಗಕ್ಕೆಳಸುವನವನಂ ಗಂಡುದೊತ್ತ್ರಾ[ಳ್ವುದಾ]ವಂ
ಕಾವಂ ದೇವವ್ರತಖ್ಯಾತಿಯನವನನವಲ್ಮಾಟ್ಟುದೆಂದಾ ಪುರಸ್ತ್ರೀ
ಭ್ರೂವಿಕ್ಷೇಪಕ್ಕೆ ಸೇನಾಪತಿಪದವಿಯನಿತ್ತಂ ಮನೋಜಾತನಾಟಂ
ದಾ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಿಂ ಸ್ಮರಂ ನಂದೆವೊಯ್ವಂ ॥೨೧॥

ವ॥ ಅ ಪುರಸ್ತ್ರಿಯ ರತ್ನಕಂಠಿಕಾಮಯೂಖಲೇಖಾವಿಲಾಸಮಂ ತಳೆ[ದಿರ್ಪುದು ರಾಜಮಂದಿರಂ]

ಕರುಕರುವಿಂಗೆ ಕಣ್ದೆಱೆವಿ ಕಲ್ವೆಸದೋಜೆಗೆ ನಚ್ಚಿನಚ್ಚು ಕಂ
ಡರಣೆಗೆ ಮಂಡನಂ ಮರವೆಸಕ್ಕೆಱೆವಟ್ಟೆಱೆಕಕ್ಕೆ ಜೌವನಂ
ಪರಿಣತಿ ಚಿತ್ರವಿದ್ಯೆಗೆನಲಲ್ಲದೆ ಚಿತ್ರಿಸಿಕೊಂಡು ಬೇಱೆ ಬಿ
ತ್ತರಿಪುದು ಮೊಗ್ಗೆ ಸಪ್ತತಳರಮ್ಯಮನಾಧರಣೇಶಹರ್ಮ್ಯಮಂ ॥೨೨॥

ಆ ರಾಜಾಲಯವಲ್ಲಭಂ ವಿತರಣಕ್ಕರ್ಥಾರ್ಥಿಗಳ್ ಸತ್ಕ್ರಿಯಾ
ಪ್ರಾರಂಭಕ್ಕೆ ಸಮಸ್ತಮಂಗಳಮುಹೂರ್ತಂಗಳ್ ಜಸಕ್ಕಾಸೆಗಳ್
ಚಾರಿತ್ರಕ್ಕೆ ಜಿನೋಪದಿಷ್ಟ ವಿಧಿವಾಕ್ಯಂಗಳ್ ಗುಣಖ್ಯಾಪನ
ಕ್ಕಿರೇಟುಂ ಭುವನಂಗಳೆಯ್ದುವೆನಿಪಂ ಸಾಹಿತ್ಯವಿದ್ಯಾಧರಂ ॥೨೩॥

ಈ ವಲ್ಲಭನಂ ಪಡೆದ ಮ
ಹೀವಲ್ಲಭೆ ನೋಂತಳೆನಿಸಿದರಿನೃಪಮದವಿ
ದ್ರಾವಣವಿಜಯಭುಜಂ ವಸು
ಧಾವಿಶ್ರುತನೃಪಗುಣಾಶ್ರಯಂ ವೈಶ್ರವಣಂ ॥೨೪॥

ತನ್ನ ಸಿರಿ ತನ್ನ ವಿಭವಂ
ತನ್ನುನ್ನತಿ ತನ್ನ ಸಂತಸಂ ಪರಿಜನದೊಳ್
ಸನ್ನಿಹಿತಮಾಯ್ತು ತಕ್ಕುದೆ
ಪೊನ್ನಾಗವೆ ಪೊರ್ದಿ ಪರುಷಮಂ ಲೋಹಂಗಳ್ ॥೨೫॥

ಬಿರುದಿನ ಬೀರದ ಪೆಸಱಿ
ಕ್ಕರಮಂ ಪರನೃಪರ ಮೆಯ್ಯ ಪುಣ್ಗಲೆಗಳ್ ಪೋ
ಲ್ತಿರೆ ತೋಳ್ವಲಕ್ಕೆ ಪಡೆದಂ
ನರಶಾಸನಮಂ ನರೇಂದ್ರ ಚೂಡಾರತ್ನಂ ॥೨೬॥

ವ॥ ಅಂತೆನಿಸಿದ ಮನುಜೇಂದ್ರಚಂದ್ರಂಗೆ ಚಂದ್ರಿಕಾಲಕ್ಷ್ಮೀಯುಂ ವಿವೇಕ ವಿದ್ಯಾಧರಂಗೆ ವಿದ್ಯಾಲಕ್ಷ್ಮೀಯುಂ ವಿನಯಾರ್ಣವಂಗೆ ವೇಳಾವನಲಕ್ಷ್ಮೀಯುಂ ವಿಕ್ರಾಂತಕಂಠೀರವಂಗೆ ವೀರಲಕ್ಷ್ಮೀಯುಮೆನಿಸಿ ತನ್ಮಹೀಪಾಲನ ವಿಶಾಲವಕ್ಷಸ್ಥಲಕ್ಕೆರಡನೆಯ ಲಕ್ಷ್ಮೀಯಾದ ಮಹಿಮೆಯಿಂ ಲಕ್ಷ್ಮೀಮಹಾದೇವಿಯೆಂಬ ಸಕಲಕಲ್ಯಾಣಾಭಿರಾಮನಾಮಮುಮಂ ಧನಶ್ರೀಯೆಂಬ ಜನ್ಮನಾಮಮುಮಂ ತಳೆದು

ನಿರತಿಶಯಮೆನಿಪ ರೂಪಿಂ
ನಿರುಪಮಲಾವಣ್ಯಲಕ್ಷ್ಮೀಯಿಂ ನಿಖಿಲಕಲಾ
ಪರಿಣತಿಯಿಂದೆಣ್ಬಾಸಿರ
ಮರಸಿಯರೊಳ್ಪಡೆದಳಗ್ರಮಹಿಷೀಪದಮಂ ॥೨೭॥

ಅತನುಶ್ರೀಕಾಂತೆಗೀಕಾಂತೆಯೆ ಮಿಗಿಲೆನೆ ಕಾರ್ಗಾಲದೊಳ್ ಹಂಸಿ ಲೀಲಾ-
ಗತಿಯಿಂ ಹೇಮಂತದೊಳ್ಕೋಗಿಲೆ ಕಳರುತಿಯಿಂ ಗ್ರೀಷ್ಮದೊಳ್ಕರ್ಣಿಕಾರಂ
ದ್ಯುತಿಯಿಂ ತನ್ನಂತೆ ಚೆಲ್ವಂ ತಳೆಯವೆನಿಸಿ ಲಕ್ಷ್ಮೀಮಹಾದೇವಿ ಧಾತ್ರೀ
ಪತಿಯಂ ಸರ್ವಾಂಗಸೌಂದರ್ಯದಿನೆಱಗಿಸಿ ಸೌಭಾಗ್ಯಸಂಪನ್ನೆಯಾದಳ್ ॥೨೮॥

ಆ ಕಾಂತೆಯೊಳಾ ಸಕಲಮ
ಹೀಕಾಂತಂ ವಜ್ರಲೇಪದನುಬಂಧಮನಿ
ತ್ತಾಕೃತಿಯಿಂ ಪತ್ತುಗೆವೆ
ತ್ತೋಕುಳಿಯಾಡುವನನಂಗರಾಗಾಮೃತದೊಳ್ ॥೨೯॥

ವ॥ ಆ ಮಹೀಪಾಲನ ಲೋಲಲೋಚನಂಗಳಾಕೆಯ ಲಾವಣ್ಯರಸಕೂಪದಂತೆ ನಿಮ್ನಮಾದ ಪೊರ್ಕುಳಂ ಪೊಕ್ಕುಟಿದುಮಸಿಯ ಬಾಸೆಯಂ ಬಾಸಣಿಸಿಯುಂ ನೆಲೆಮೊಲೆಯಂ ನೆಲೆಮಾಡಿಯುಂ ಬಾಯ್ದೆಱೆಗೆ ತೆಱೆದಂತುಂ ನಿಱಿದಲೆಯೊಳ್ಕೆನಿಱಿದಾಡಿಯುಮಾಹರಿಣಲೋಚನೆಯ ಲೋಚನದೊಳಳಿಪಂ ಮನದೊಳುತ್ಸುಕತೆಯಂ ತನುಲತೆಯೊಳ್ಪುಳಕಾಂಕುರಮನೊದವಿಸುತ್ತುಮಿರೆ

ಒಂದು ದಿವಸಂ ಧನಶ್ರೀ
ಸುಂದರಿ ನಿಜಭವನವನದ ಮಣಿಮಯಲೀಲಾ
ಮಂದಿರಮಣಿವೇದಿಕೆಗೆ
ಟ್ಟಿಂದಳ್ಮಣಿಮೇಖಳಾರವಂ ಪೊಣ್ಮುವಿನಂ ॥೩೦॥

ಶ್ರೀವಧುವಿರ್ಪಂತಿರೆ ಪೊಂ
ದಾವರೆಯೊಳ್ ಪೊಳೆವ ಕಾಂಚನಾಸನದೊಳ್ ಬಂ
ದಾವಧು ಕುಳ್ಳಿರ್ದಳ್ ಸ[ಲೆ]
ಲಾವಣ್ಯರಸಪ್ರವಾಹದೊಳ್ ತೇಂಕುವಿನಂ ॥೩೧॥

ಅಮೃತಾಂಶುಲೇಖೆ ನಕ್ಷ
ತ್ರಮಾಲೆಯಿಂ ಬಳಸಿದಂತೆ ಪರಿವಾರವಧೂ
ಸಮಿತಿ ಪರಿವೇಷ್ಟಿಸಿರೆ ತರು
ಣಿ ಮಾಡಿದಳ್ ನಯನಕುವಲಯಾನಂದನಮಂ ॥೩೨॥

ವ॥ ಅಂತಾಕಾಂತೆ ಪರಿಮಿತಪರಿವಾರವನಿತಾಪರೀತೆ ಸೇವಾಚತುರಸಹಚರೀ–ಸುಭಾಷಿತಮನಾಲಿಸುತ್ತುಮಿರ್ಪಿನಂ ಮುಂದೆ

ಪರಿಪೂರ್ಣಚಂದ್ರಬಿಂಬಮೆ
ಪರಿವೇಷಂಗೊಂಡುದೆನಿಸಿ ಬಹುರತ್ನಶಿಲಾ
ಪರಿಘಟಿತಂ ನಯನಮನೋ
ಹರಮಾದುದು ಶಿಶಿರಜವನಮಂಭೋಜವನಂ ॥೩೩॥

ನಳಿನೀಲಕ್ಷ್ಮಿಯ ಮಂದಹಾಸಮೊ ಧನಶ್ರೀದೇವಿಗೇನಟ್ಟಿದ
ಪ್ಪಳೊ ಲಕ್ಷ್ಮೀವಧು ತನ್ನ ಬೆಳ್ಗೊಡೆಯನೇಂ ಡಿಂಡೀರಪಿಂಡಂ ಹಿಮಾ
ನಿಳನಿಂ ಕೂಡೆ ತೆರಳ್ದು ಬಂದಪುದೋ ಪೇೞೆಂಬನ್ನೆಗಂ ಬಂದುದಾ
ಕೊಳದಿಂದೊಂದು ಮರಾಳಕಾಂತೆ ಮಱಿಯುಂ ತಾನುಂ ನಿಜಸ್ವೈರದಿಂ ॥೩೪॥

ವ॥ ಅಂತು ಬಂದು ತಿಳಿಗೊಳದ ತಡಿಯ ತಮಾಳದ ತಣ್ಣೆಟಿಲ ಪದ್ಮರಾಗದ ಪಾಸಱೆಯ ಮೇಲೆ ನಿಂದು ಮೋಹರಸಪ್ರವಾಹದೊಳವಗಾಹಮಿರ್ದ ಕಳಹಂಸಿಯಂ ಧನಶ್ರೀಮಹಾದೇವಿ ನಿಶ್ಚಲಪಕ್ಷ್ಮಪಾಳಿಯುಮಕಂಪಿತನಯನಪುತ್ರಿಕೆಯುಮಾಗಿ ನೀಡುಂ ಭಾವಿಸಿನೋಡುತ್ತುಮದಱ ಸಹಜಪ್ರೀತಿಯಂ ಸಖೀಜನಕ್ಕೆ ತೋಱಿ ತಾನುಂ ಪುತ್ರದೋಹಳ ಕುತೂಹಳೆಯುಮಾ[ಗಿ]

ಎಳವೆಱೆ ಬಳೆಯದ ಗಗನ
ಸ್ಥಳಿ ಸಸಿ ಬೆಳೆಯದ ಧರಿತ್ರಿ ಮೌಕ್ತಿಕರತ್ನಂ
ಬಳೆಯದ ಶುಕ್ತಿಕೆ ಗರ್ಭಂ
ಬಳೆಯದ ಬಾಳಕಿಯ ಬಸಿಱನರ್ಥಕಮಲ್ತೇ ॥೩೫॥

ಕೈಗನ್ನಡಿಯವೊಲೆಲ್ಲರ
ಕೈಗೊಪ್ಪುವ ಮಗನನೆತ್ತಿ ಪುಳಕಾಂಕುರಮಂ
ಮೈಗಗ್ಗಳಿಸದ ಕಾಂತೆಯ
ಕೈಗಮದೇಂ ಭೇದಮುಂಟೆ ಸೀರೆಯ ಕೈಗಂ ॥೩೬॥

ಎಡೆಯಾಡಿದಪುದು ರನ್ನದ
ಸೊಡರೆನೆ ಹರಿನೀಳರತ್ನಕುಟ್ಟಿಮದೊಳ್ದ
ಟ್ಟಡಿಯಿಡುವ ತನೂಭವನಂ
ನಡೆನೋಡಲ್ಪಡೆದ ತಾಯ ಜನ್ಮಮೆ ಸಫಳಂ ॥೩೭॥

ದರವಿಕಸಿತಮಂ ರಜದೊಳ್
ಪೊರೆದಾತ್ಮಜಮುಖಸರೋಜಮಮಂ ಮೋಹರಸಂ
ತೆರೆಮಸಗೆ ನೊಟ್ಪ ಜನನಿಯ
ಕರಿಯಾಲಿಗಳೆಂಬ ತುಂಬಿಗಳ್ ಧನ್ಯಂಗಳ್ ॥೩೮॥

ಕಣ್ಬಡೆದ ಫಲಂ ಸುತನಂ
ಕಾಣ್ಬುದೆ ಸುತವದನಕಮಲಮಂ ಕಾಣದ ಕಣ್
ಕಣ್ಬೇಲಿಯ ಕಣ್ಣೆನುತುಂ
ಕಣ್ಬನಿಯಿಂ ಕರ್ಚಿದಳ್ಕಪೋಲಸ್ಥಳಿಯಂ ॥೩೯॥

ವ॥ ಅಂತಾ ಕಾಂತೆ ಚಿಂತಿಸುತ್ತಿರ್ಪಿನಂ

ದಿವಸಶ್ರೀ ಮಂಜಿನೊಳ್ಪಾಡಟಿಯೆ ಕಳೆಯಲಾಬೇಸಱಿಂ ಬರ್ಪ ತಿಗ್ಮಾಂ
ಶುವೋ ಪೇಟಿಂಬನ್ನೆಗಂ ತೊಟ್ಟರುಣಮಣಿವಿಭೂಷಾಂಶು ಬಾಲಾತಪಂ ತೀ
ವುವಿನಂ ಕೇಳೀಗೃಹಾಂತಸ್ಥಳಿಯನವನಿಪಾಳಂ ಸುತಾವಾಪ್ತಿಚಿಂತಾ
ಪ್ಲವದೋಳ್ತೇಂಕುತ್ತುಮಿರ್ದಾಸತಿಯ ಪರಿಮಿತಾಸ್ಥಾನಮಂ ಮುಟ್ಟೆವಂದಂ ॥೪೦॥

ವ॥ ಅಂತು ಬಂದು ಹೇಮಸಿಂಹಾಸನಾಸೀನ [ನಾಗಿಯ] ರಸಿಯ ಪರಿಮ್ಲಾನ ಮುಖಕಮಲ ಮನತಿವಿಸ್ಮಯಸ್ಫಾರಿವಿಲೋಚನನಾಗಿ ನೋಡಿ

ಪಗಲ ತಿಂಗಳವೊಲೇಕೆ ಕಾಂತಿಯಂ
ನಗೆಮೊಗಂ ಕೆದಱಿದಾನೆ ಪೊಕ್ಕ ಬೇ
ಸಗೆಯ ಕಾಡಕೆಱೆಯಂತೆ ನಾಡೆಯುಂ
ಬಗೆ ಕಲಂಕಿದುದಿದೇಕೆ ಕೋಮಳೇ ॥೪೧॥

ಎಂದರಸಂ ನುಡಿವುದುಮಾ
ಸುಂದರಿಗಂತಂತೆ ಮನ್ಯು ಮಿಕ್ಕು ಮನಸ್ತಾ
ಪಂ ದಳ್ಳಿಸೆ ಗಗ್ಗರಿಕೆಗ
ಳಂದೊಗೆದುವು ಕಂಠಕಂದಳಂ ಬೀಗುವಿನಂ ॥೪೨॥

ಕಾವಿಲ್ಲದ ಕರ್ನೆಯ್ದಿಲ
ಪೂವಿಂ ಬಿಡುಮುತ್ತು ಬಿಡದೆ ಬಿಡುತಂದಪುವೆಂ
ಬೀ ವಿಸ್ಮಯಮಂ ಮಾಡಿದು
ವಾವನಿತೆಯ ನೀಳ್ದ ಕಣ್ಗಳುಂ ಕಣ್ಬನಿಯುಂ ॥೪೩॥

ಎಡೆವಱಿಯದೆ ಕಣ್ಬನಿ ಪನಿ
ತೆಡೆಗಳ್ ಪುಸುರೇ[ಱೆ] ನಸುಕಿಲುಂಬೇಱಿದ ಕ
ನ್ನಡಿಯ ವಿಲಾಸಮನೇಂ ಕ
ಕನ್ನಡಿಸಿದುವೊ ಕಪೋಲಯುಗಳವಾ ಕೋಮಳೆಯಾ ॥೪೪॥

ವ॥ ಆಗಳರಸನತಿಸಂಭ್ರಮರಸಕ್ಷುಭಿತಚಿತ್ತನಾಗಿ[ಲಕ್ಷ್ಮೀಮಹಾದೇವಿ]ಸುತದೋಹಳ-ಕುತೂಹಳೆಯಾದುದಂ ಜಲಕ್ಕನಜೆದು

ಭವದೀಯಾಭಿಮತಂ ಸುತಾಭ್ಯುದಯಲಾಭಂ ತತ್ಫಲಪ್ರಾಪ್ತಿ ನಿ
ಕ್ಕುವಮಕ್ಕುಂ ತಡವಿಲ್ಲದಾರ್ಯಜನರಾಶೀರ್ವಾದದಿಂ ಪಾತ್ರದಾ
ನವಿಶೇಷವ್ಯಸನಂಗಳಿಂ ಜಿನಪದಾಂಭೋಜಾರ್ಚನಾಸಂತತೋ
ತ್ಸವದಿಂದೆಂಬುದುಮಾನದಂ ನಿನಗೆ ಪೇಟಲ್ಬಂದೆನಬ್ಜಾನನೇ ॥೪೫॥

ವ॥ [ಎಂದು ನೈಮಿತ್ತಿಕ ನಿರೂಪಿತಮಂ ನುಡಿಯಲೊಡಂ]

ಪರಿಯೆ ಪರ್ವಿದ ಮಂಜು ರಂಜಿಸುವಂತೆ ತಾವರೆ ನಾಡೆಯುಂ
ಕೊರಗಿದಾನನಮಾಗಳಾಗಳದೇನರಲ್ದುದೊ ಧೂಳಿಧೂ
ಸರಿತಮಾದ ಸುವರ್ಣಪುತ್ರಿಕೆ ಬಣ್ಣವಿಟ್ಟವೊಲೆಯ್ದೆ ನಿ
ಬ್ಬರಿಸಿದಂಗಮಪೂರ್ವಕಾಂತಿಗೆ ತೊಟ್ಟನೇನೆಡೆಗೊಟ್ಟುದೋ ॥೪೬॥

ವ॥ ಅಂತಾಕಾಂತೆ ಹರ್ಷರಸತರಂಗಿತಾಂತರಂಗೆಯಾಗಿರ್ಪಿನಮರಸನರ್ಹತ್ಪರಮೇಶ್ವರ ಪೂಜಾವಿಧಿಗಳಂ ನಿಯೋಜಿಸಿ ಬಿಜಯಂಗೆಯ್ವುದುಮಾ ಮಹಾನುಭಾವೆ ಶುಚಿರ್ಭೂತೆಯುಮತಿ ಸಮಾಹಿತಚಿತ್ತೆಯುಮಾಗಿ

ಸುತಲಾಭಾರ್ಥಿ ವಿಶೇಷತೀರ್ಥಜಲದಿಂ ಶ್ರೀಖಂಡದಿಂದಕ್ಷತಾ
ಕೃತದಿಂ ಕಾಂತಲತಾಂತಮಾಲಿಕೆಗಳಿಂ ದಿವ್ಯಾನ್ನದಿಂ ರತ್ನರಂ
ಜಿತದೀಪಪ್ರಚಯಂಗಳಿಂದಗರುಧೂಪಸ್ತೋಮದಿಂ ಮಂಗಲೋ
ಚಿತ ನಾನಾಫಲದಿಂ ಲತಾಂಗಿ ಜಿನಪಾದಾಭ್ಯರ್ಚನಂ ಮಾಡಿದಳ್ ॥೪೭॥

ವ॥ ಅಂ[ತ]ನೇಕನಿಯಮನಿಯಮಿತೆಯಾಗಿರ್ದೊಂದು ದಿವಸಂ ಲಕ್ಷ್ಮೀಮಹಾದೇವಿ

ಹೇಮಸರೋಜದೊಳ್ತಳೆದು ಮಾಣಿಕಮಂ ಶರದಭ್ರಶುಭ್ರಮಂ
ತಾಮರಸಪ್ರಸೂನಮನದಕ್ಕೆ ನೆಟಲ್ಪಿಡಿದೊರ್ವಳುತ್ಪಲ
ಶ್ಯಾಮಳೆ ಮಂಗಳಾಭರಣಭೂಷಿತೆ ತಂದದನೀವುದಂ ಲತಾ
ಕೋಮಳೆ ಕಂಡಳಭ್ಯುದಯಕಾರಣಮಂ ಕನಸಂ ನಿಶಾಂತ್ಯದೊಳ್ ॥೪೮॥

ವ॥ ತದನಂತರ[ಮೆ]ಟ್ಚಿರ್ತು ನಿತ್ಯನಿಯಮಂಗಳಂ ತೀರ್ಚಿ[ರ್ಪಿನಂ] ಪರಿವಾರ ವಧೂಜನವಳಕಜಾಳದಿನಳಿಮಾಳೆಯಂ ನೆರಪುವಂತೆ ತರಳಲೋಚನಮರೀಚಿಯಿಂ ದಿಗ್ಭಿತ್ತಿಯಂ ತೆರೆ ಸುತ್ತುವಂತೆ ವಿಭ್ರಮಭ್ರೂಲತಿಕೆಯಿನತನುಚಾಪಮಂ ಪಸರಿಸುವಂತೆ ಬಿಂಬಾಧರಕಾಂತಿಯಿಂ ಕಂತುರಾಗರಸದ ಪೊನಲಂ ತಿರ್ದುವಂತೆ ಮಣಿಭೂಷಣ ಮಯೂಖಮಾಳೆಯಿನಂಬರಮಂ ಚಿತ್ರಿಸುವಂತೆ ಬಳಸಿ ಬರೆ

ಆವೆಡೆ ಹಂಸಿಗೀ ನಡೆಯ ಚಿಲ್ವೆನೆ ನೂಪುರದಿಂಚರಂ ಸ್ಮರಂ
ಜೀವೊಡೆದಂದಮಾಗೆ ಮೃದುಪಾದತಳಂಗಳ ಕೆಂಪುಕೂಡೆ ಕೆಂ
ದಾವರೆವೂಗಳಂ ಕೆದಱುವಂತಿರೆ ಕುಂತಳಸೌರಭಕ್ಕೆ ಭೃಂ
ಗಾವಳಿ ಮೇಲೆ ಪೀಲಿದಟಿಯಂತಿರೆ ಬಂದಳದೊಂದು ಲೀಲೆಯಿಂ ॥೪೯॥

ಆ ವಧು ಬಂದಳಿರ್ದಡೆಗೆ ಸಾಲದೆ ಕಾಂತೆಯ ವಕ್ತ್ರದರ್ಶನಂ
ಕೇವಳಮೇ ವಿಲಾಸವತಿ ಸೋಂಕಿ ಸಮೀಪದೆ ಕುಳ್ಳಿರಿರ್ದಳಿ
ನ್ನೇವುದೊ ಪುತ್ರಲಾಭಶುಭಮಂ ಕನಸಂ ಸತಿ ಪೇಟ್ದಳೆಂದೊಡಿ
ನ್ನೇವೆಸಗೊಳ್ವೆ ಮಾಡವೆ ನೃಪಂಗಿವು ರಾಗದ ಬಳ್ಳಿವಳ್ಳಿಯಂ ॥೫೦॥

ವ॥ ಅಂತರಸನತಿಹರ್ಷಚಿತ್ತನಾ[ಗೆ ಕತಿಪಯ ದಿನದೊಳ್]

ಧವಳಾಪಾಂಗಮರೀಚಿಗಳ್ಪುದಿದುವೆಂಬನ್ನಂ ಕಪೋಳಂ ಬೆಳ
ರ್ತುವು ಭೃಂಗಾವಳಿ ಸುಯ್ಗೆ ಸಾರ್ವತೆಱದಿಂ ಸುರ್ಕುಂಗುರುಳ್ಮಾಲೆ ನೀ
ಳ್ದುವು ತನ್ನೊಳ್ನೆಲೆವೆರ್ಚಿ ರಾಗರಸವಾಗಳ್ತೀವಿ ತಳ್ಳಂಕಗು
ಟ್ಟುವ ಪದ್ಮಾಕರದಂತೆ ಕಾಂತೆ ತಳೆದಳ್ ಬೇಱೊಂದು ಲಾವಣ್ಯಮಂ ॥೫೧॥

ತನು ತನುವಾದ ಗರ್ಭಿಣಿಗೆ ತತ್ಸಮಯೋಚಿತಮಂಗಳಪ್ರಸಾ
ದನಮೆಸೆದತ್ತು ಕಪ್ಪುರದ ಕಂಠಿಕೆ ಬಣ್ಣದ ಸಣ್ಣಮಾಲೆ ತೆಂ
ಗಿನ ತಿರುಳೋಲೆ ತಾವರೆಯನೂಲುಡೆನೂಲ್ಸಿರಿಕಂಡದಣ್ಕೆ ಮು
ತ್ತಿನ ತಿಸರಂ ಮೃಣಾಳಿಕೆಯ ಮುದ್ರಿಕೆ ಪೂವಿನ ಪಿಂಡುಗಂಕಣಂ ॥೫೨॥

ವ॥ ಅಂತು ವಿವಿಧವಿಲಾಸಂಗಳಿಂ ದಿವಸಂಗಳಭಿಲಷಿತಫಳಪ್ರಸವಂಗಳಾಗೆ ಸುಖಪ್ರಸವ ಸಮಯದೊಳ್

ಶುಭವಾರಂ ಶುಭವಾಸರಂ ಶುಭಮುಹೂರ್ತಂ ಕೂಡೆ ತಾರಾಬಲಂ
ಶುಭಮಂ ಮಾಡೆ ಶುಭಗ್ರಹಂ ನಿಲೆ ನಿಜೋಚ್ಚಸ್ಥಾನದೊಳ್ಭೂಭುಜ
ಪ್ರಭುಚಿಹ್ನಂ ಶುಭಲಕ್ಷಣಂ ತನುವಿನೊಳ್ಮೆಯ್ದೋಱೆ ಬಾಲಾರ್ಕಸ
ನ್ನಿಭತೇಜೋನಿಧಿ ನಂದನಂ ಸತಿಗೆ ವಂಶಾನಂದನಂ ಪುಟ್ಟಿದಂ ॥೫೩॥

ವ॥ ಆಗಳವನಿಪತಿ ಸುತೋತ್ಸವಸಂಭ್ರಮಸ್ವಾಂತನಂತಃಪುರಪ್ರವೇಶಯೋಗ್ಯ ಪರಿಮಿತಪರಿಜನಂ [ಬೆರಸು] ಧನಶ್ರೀಮಹಾದೇವಿಯ ಗೃಹಕ್ಕೆ ಬಿಜಯಂಗೆಯ್ದು ಗಣಕಗಣನಿರೂಪಿತ ಶುಭಮುಹೂರ್ತದೊಳ್ ಜಾತಕರ್ಮಕಲ್ಯಾಣಮಂ ಮೆಱೆದು ದಶಮ ದಿನದೊಳ್

ಈ ಧರೆಗೆಲ್ಲಂ ಕನಕಮ
ಹೀಧರಮೇಂ ಮನೆಯೊಳುಂಟೆ ಪೇೞೆನೆ ಪಿರಿದಿ
ತ್ತಾ ಧರಿಣೀಶಂ ಸುತನಂ
ಶ್ರೀಧರ ಶುಭಕರಣನಾಮದೊಳ್ ಯೋಜಿಸಿದಂ ॥೫೪॥

ವ॥ ಅಂತಾ ನಾಮಕರಣಕಲ್ಯಾಣಾನಂತರಂ ಕತಿಪಯದಿನದೊಳ್ ಸಕಲಜನಸುಕೃತ ಸುರಮಹೀರುಹಂ ಬೆಳೆವಂತೆ ಬೆಳೆದು

ಸಿರಿಗೆ ನೆಲೆಯಾದ ಪೊಂದಾ
ವರೆಯ ಮುಗುಳ್ಮೆಲ್ಲಮೆಲ್ಲನಲರ್ದಪು[ದೆ]ಂಬ
ತಿರೆ ದಿವಸಕ್ರಮದಿನಧಃ
ಕರಸಿದನಾ ನೃಪತನೂಭವಂ ಶೈಶವಮಂ ॥೫೫॥

ನಿಡುದೋಳ್ ನಿಳ್ದುವು ನೀಳ್ಕಲುದ್ಧತಸಿತಚ್ಛತ್ರಂಗಳಂ ನಾಡೆಯುಂ
ತೊಡೆಗಳ್ಕೊರ್ವಿದುವುಗ್ರದಂತಿ[ಯ]ನದಿರ್ಪಲ್ ವಕ್ಷವಕ್ಷೋಣಿವಾ
ಯ್ತೆಡೆಯಾಗಲ್ ಪಿರಿದಿಪ್ಪ ಲಕ್ಷ್ಮಿಗೆನೆ ಲೋಕಾಶ್ಚರ್ಯ ಚಾತುರ್ಯಮಂ
ಪಡೆದಂ ಯೌವನದೇೞ್ಗೆಯೊಳ್ಸುಜನಸಸ್ಯಾಂಭೋಧರಂ ಶ್ರೀಧರಂ ॥೫೬॥

ವ॥ ಅಂತು ನವಯೌವನಶ್ರೀಯನಪ್ಪುಕೆಯ್ಯಲೊಡಂ

ಪರಿಪೂರ್ಣಂ ಕೋಶಗೃಹಂ
ಧರೆ ನಿರ್ದಾಯಾದವಾತ್ಮಜಂ ರಾಜ್ಯಸಮು
ದ್ಧರಣಕ್ಷಮನೆನೆ ತನಗಾ
ದೊರೆಯೆನೆ ವೈಶ್ರವಣನರಸುಗೆಯ್ಯುತ್ತಿರ್ದಂ ॥೫೭॥

ವ॥[ಆಗಳಾ] ಮಹೀವಲ್ಲಭನ ದಾನದಕ್ಷಿಣಸಮೀರಂ ಜನಾನುರಾಗಮನೊದವಿಸೆಯುಂ ಭುಜಪ್ರತಾಪತಪನೋತ್ತರಾಯಣಮುತ್ತರೋತ್ತರಮಾಗೆಯುಂ ಭಾಸ್ವನ್ಮಂಡಲಾಗ್ರಮರೀಚಿ ಭೂಮಂಡಳಮಂ ಬೆಳಗೆಯುಂ ಧರ್ಮಾಮೃತರುಚಿ ವಿಶದಮಾಗೆಯುಂ ಯಶಸ್ತಿಳಕಮಖಿಳದಿಙ್ಮುಖಮನಳಂಕರಿಸೆಯುಂ ಬಾಂಧವಕುಳಮಭ್ಯುದಯ ಪರಂಪರೆಯನಪ್ಪುಕೆಯ್ಯೆಯುಂ ಅನುರಕ್ತಾಶೋಕವಲ್ಲರಿ ಪಲ್ಲವಿತವಾಗೆಯುಮಿಂತಿಳಾಕಾಂತೆಗೆ ವಸಂತೋತ್ಸವಮನೀವ ಸಾಮ್ರಾಜ್ಯಂ ವಸಂತ ಸಮಯದೊಳ್ಮಚ್ಚರಿಸುವಂ[ತಿರೆ]

ನನೆದೋಱಿತ್ತು ವಸಂತದೂತಿ ಸೊಬಗಂ ಕೊಂಡಾಡುವೀ ಡೊಂಬುವೇ
ಡೆನುತುಂ ಚಿತ್ತಜನಾಜ್ಞೆಮುತ್ತೆ ದೆಸೆಬಿದ್ದಂ ಬೆರ್ಚಿ ಲಜ್ಜಾರಸಂ
ಮನದಿಂ ಸೂಸಿದುದೆಂಬಿನಂ ನಿಟಿಲದೊಳ್ಕಾಂತಾಕಪೋಳಂಗಳೊಳ್
ಸ್ತನದೊಳ್ತೋಳ ಮೊದಲ್ಗಳೊಳ್ನೆಗೆದುವಂದೋರೊಂದೆ ಘರ್ಮಾಂಬುಗಳ್ ॥೫೮॥

ಆವುದಱೊಳ್ ಪಿಕಪಂಚಮ
ರಾವಮತಿಪ್ರೌಢಮಾದುದದಱಿಂದೆನಗಿ
ನ್ನಾವುದೊ ತೀರದುದೆಂದಿ
ಮ್ಮಾವಿನ ಪಣೆಗತನು ಪಟ್ಟಮಂ ಕಟ್ಟಿಸಿದಂ ॥೫೯॥

ಕುಸುಮಾಸವಕ್ಕೆ ಪೆಱವಂ
ಪೆಸರ್ಗೊಳ್ಳವು ತುಂಬಿ ಬಾಣರಚನೆಗೆ ಪೆಱವಂ
ಪೆಸರ್ಗೊಳ್ಳಂ ಮನಸಿಜನೆನೆ
ಪೊಸಸುಗ್ಗಿಯ ತೊಡವು ಪೆಱತೆ ಮಲ್ಲಿಗೆಯೆ [ವ]ಲಂ ॥೬೦॥

ಚಳಿಕೆಗೆಯಾದು[ದಾ]ವುದಱ ಬಲ್ಮುಗಳಾವುದಱಗ್ರಹಪಲ್ಲವಾ
ವಳಿ ಮುಡಿ[ಯೊ]ಳ್ತೊಡರ್ಚೆ ರತಿಗೊಪ್ಪಮನಿತ್ತುದು ಪುಷ್ಪವಲ್ಲಿಯುಂ

ಫಳತರುವುಂ ದಿಟಕ್ಕೆ ಪೆಱದಾವುದೊ ಮಲ್ಲಿಗೆ ಚೂತವೆಂದೆ ಕ
ಣ್ಗಳ ಪಸಿವೋಡುವನ್ನಮೆಮೆಯಿಕ್ಕದವಂ ಮಧು ನಿಂದು ನೋಡಿದಂ ॥೬೧॥

ಕಳಿಕೆಯ ಮಾವಿನೊ[ಳ್ನಿ]ಡಿಯ ಬಣ್ಣಸರಂ ಮಱದುಂಬಿವೆಣ್ಣ ಕಾ
ಕಳಿಯ ಸರಂ ಪಿಕಾವಳಿಯ ಕಯ್ವೆಸರಂ ಬಗೆಮುಟ್ಟೆ ಪಾಡುವಿಂ
ದೊಳದ ಸರಂ ಧನುರ್ಭರಮನಾಗಿಸವೆಂದಸಮಾಸ್ತ್ರನೈಸರಂ
ಗಳಲಿಸದೀಗಳೀ ನೆಗಟ್ದ ನಾಲ್ಸರದಿಂದಿಸುವಂ ವಿಯೋಗಿಯಂ ॥೬೨॥

ವ॥ ಅತಿ ರಮಣೀಯಮಾ[ದೀ] ಪೊಸ ಸುಗ್ಗಿಯ ಪುಗಿಲೊಳೊಂದು ದಿವಸಮವನಿಪತಿ ದಿನಪ್ರಥಮಯಾಮದೊಳ್ ನರ್ಮಸಚಿವಸಮನ್ವಿತಂ ವಿದ್ವಜ್ಜನಪರಿವೃತಂ ಮಂಗಳಗಾಯಿನೀ ಮಧುರಗೀತಮನಾಲಿಸುತ್ತಮಿರ್ಪಿನಂ

ದ್ವಿಗುಣಿಸೆ ಪತ್ತಿದಿಂಗುಲಿಕದಿಂ ನಖದೀಧಿತಿ ತನ್ನ ಪಿಂತೆ ಮೆ
ಲ್ಲಗೆ ಬರೆ ಕನ್ನೆ ಚಿತ್ರಪಟಧಾರಿಣಿ ಬಣ್ಣದ ಸೀರೆ ಮೇಘವ
ಣ್ಣಿಗೆಯ ಝಳಂಬಮೆಂಬಿವಳವಟ್ಟಿರೆ ಭೂಭುಜನಿರ್ದ ಚಿತ್ರಶಾ
ಲೆಗೆ ನಡೆತಂದನಂದು ನವಯೌವನನೊರ್ವನಪೂರ್ವಚಿತ್ರಕಂ ॥೬೩॥

ವ॥ ಅಂತು ಬಂದು ಕೆಲದೊಳಿರ್ದ ಕನ್ನೆಯ ಕೆಯ್ಯ ಚಿತ್ರಪಟಮಂ ಕೊಂಡು ಬಾಸಣಿಸಿದ ದುಗುಲದ ಸೆಱಗನೋಸರಿಸಿ ಮನೋಜರಾಜವಿಜಯಪತಾಕಾಪಟಮಂ ಬಿರ್ಚುವಂತೆ ಬಿರ್ಚಿ[ಯ] ರಸನ ಪದಪಯೋಜಪಾರ್ಶ್ವದೊಳ್ಪಸರಿಸುವುದುಂ ವಿಳೋಕನ ಕುತೂಹಲನಿಳಾಧಿಪತಿ ನಿಜೋತ್ಸಂಗಸಂಗತಂ ಮಾಡಿ ಸಮುದಾಯಶೋಭೆ ಲೋಚನಾಕೃಷ್ಟಿಯಂ ಪುಟ್ಟಿಸೆ ಬಳ್ಳಿಮಾವಿನ ಪಂಚಪಲ್ಲವದ ಪಲವುಂ ಬಣ್ಣದ ಬೆರಕೆಯುಮನಸುಕೆಯ ಪೊಸದಳಿರಿಂಗುಲಿಕದಣ್ಕೆಯುಮಂ ಕೊಸಗಿನೆಸಳ ಪೊಂಬಣ್ಣಿಮುಮಂ ವಸಂತದೂತಿಯ ಕಪೋತಕಾಂತಿಯುಮಂ ಸುರಹೊನ್ನೆಯ ತಿಳಕದರಲ ಬೆಳ್ಪುಮಂ ದವನದ ತಮಾಳವನದ ಕರ್ಪುಮಂ ಮರುಗದ ಮಯಿಂದವಾಟೆಯ ಪಸುರ್ಪುಮಂ ಬೇಱವೇಱ ಭಾವಿಸಿನೋಡಿ.

ತಿಱದುಕೊಳಲ್ಕೆ ಬಂದಪುವು ಕೆಂದಳಿರಂ ಗಿಳಿ ತಾಮ್ರತುಂಡದಿಂ-
ದಿಱದಪುದಾಮ್ರದೊಳ್ಮಿಡಿಗಳಂ ಬಿಸಕಾಂಡಮನಂಚೆ ಚಂಚುವಿಂ
ಕಿಱಕಿಱದಾಗಿ ಕರ್ಚಿ ಕುಡುಕಂ ಮಱಗಿತ್ತಪುವೆಂಬ ಬಲ್ಮೆ ಕ
ಣ್ದೆಱದವೊಲಿರ್ದ ಚಿತ್ರಕನ ಚಿತ್ರದ ಚಿತ್ರವಿಧಕ್ಕೆ ಮೆಚ್ಚಿದಂ ॥೬೪॥

ತೆರೆ ಕರೆಗಣ್ಮಿದಪ್ಪುವಿವೆ ತಣ್ಣೆಲರಿಂ ತಡಿಯೊಳ್ ರಥಾಂಗವೀ
ನೆರೆವುವೆ ರಾಜಹಂಸ ಚರಣಾಹತಿಯಿಂ ಜಳಬುದ್ಬುದಂಗಳುಂ
ನೊರೆಗಳುಮೀ ತೆರಳ್ದಪುವೆ ಹೇಮಸರೋರುಹಕುಟ್ಮಳಂಗಳೀ
ಬಿರಿವುವೆ ಪೋಲೆ ಪೂಗೊಳನನಿಂತಜನುಂ ಬರೆಯಲ್ಕೆ ಬಲ್ಲನೇ ॥೬೫॥

ಅಲರ್ವಂತಿರ್ದುವು ಕುಟ್ಮಳಂಗಳವಱೊಳ್ಬಂಡುಂಡು ಪೆಣ್ದುಂಬಿಗಳ್
ನಲಿವಂತಿರ್ದುವು ಕೋರಕಂ ಪೊರೆ ಸಡಿಲ್ವಂತಿರ್ದುವೊಟ್ಟಂತೆ ಕೋ
ಗಿಲೆವಿಂಡಿರ್ದುವು ದಿಟ್ಟಿ ನಟ್ಟುದೆನೆ ವರ್ಣವ್ಯಕ್ತಿಯಿಂ ವೃಕ್ಷಗು
ಲ್ಮ ಲತಾಜಾತಿಗಳಿರ್ದುವಿಂತು ಬರೆಯಲ್ ಪೇೞಾರ್ಗಮೇಂ ತೀರ್ಗುಮೇ ॥೬೬॥

ಬಟ್ಟಿದುವಾದ ಕಣ್ಣ ಕರಿಯಾಲಿಯ ಸುತ್ತಣ ಸಣ್ಣ ಬೆಳ್ಪು ನೇ
ರ್ಪಟ್ಟುದು ಕರ್ಬುರಚ್ಛವಿಯ ಚಂಚು ಮನಂಗೊಳಿಸಿತ್ತು ಮೆಯ್ಯ ಬೆ
ಳ್ಪಿಟ್ಟಳವಾಯ್ತು ಕಾಲ್ಗಳರಿದಾಳದ ಮೇಗಣ ಕೆಂಪಿನಣ್ಕೆಯಿಂ
ದಿಟ್ಟಿಗೆ ಬಂದುದಾರ್ಬರೆವರಿಂತಳವಟ್ಟಿರೆ ರಾಜಹಂಸನಂ ॥೬೭॥

ಇಂಗುಳಿಕದಣ್ಕೆಯಿಂ ನಯ
ನಂಗಳ್ ಕಾಡಿಗೆಯ ತೊಡಪದಿಂ ರಂಜಿಸೆ ಸ
ರ್ವಾಂಗಂ ಮುದ್ಗಶ್ಯಾಮತ
ರಂಗಿತಪೃಷ್ಠಂ ಸಪುಷ್ಪನೀ ಪರಪುಷ್ಟಂ ॥೬೮॥

ಪೊಸತಲರ್ದ ವಕುಳರಸದೊಳ್
ಮುಸುಂಬು ಮುಬುಗುವಿನಮೆಱಗಿ ಕೋಡೆಱಕೆಗಳಂ
ಪಸರಿಸಿ ಕಂಪನಲಂಪಿಂ
ದುಸಿರ್ದುಸಿರ್ದೀಂಟಿದುದು ಮಧುಪನೆರ್ದೆಮುಬುಗುವಿನಂ ॥೬೯॥

ವ॥ ಎಂದವನತಿ ಪ್ರೀತಿಯಿಂದವಲೋಕಿಸುತ್ತುಮೀ ಕಳಿಕೆಯಿಂ ಮನಂ ಕಳಿಕೆಗರ್ಚಿದ ಕೋಗಿಲೆಯಂತೆ ನಲಿದುದೀ ಕಂಟಕದಿಂ ಕಂತುರಾಜ್ಯಂ ನಿಷ್ಕಂಟಕಮಾದು[ದೆ]ನುತ್ತು[ಂ] ಮೂಱುಂ ತೆಱದ ಮೊದಲ ಬಣ್ಣಮುಮನವನೋರೋಂದಱೊಳ್ಬೆರಸುವ ಪರಿಣತಿಯು[ಮುಂ] ಪರಿಭಾವಿಸಿ ನೋಡಿ ವಜ್ರಕುಂಡಳದ ಕಾಂತಿ ತಳತ್ತಳಿಸೆ ತಲೆಯಂ ತೂಗಿ

ಅಕಟ! ರೇಖೆಯಿನಪ್ಪ ವರ್ಣದ ಮಿಶ್ರವರ್ಣದೊಳಾದ ಕೌ
ತುಕಮೆ ವೃಕ್ಷಲತಾದಿ ಜಾತಿಯೊಳೋಜೆಯಂ ಗೆಡೆಗೊಂಡ ಚಿ
ತ್ರಕನ ಭಾವಮೆ ಪತ್ರಭಂಗದ ಪೂರ್ಣ ಭಂಗಿಯೆ ಭಾಪು! ಲೌ
ಕಿಕಮಮಾನುಷಮೆಂದು ಕಂಟಕಿತಾಂಗನಾದನಿಳಾಧಿಪಂ ॥೭೦॥

ನಯನಾನಂದಮನುಂಟುಮಾಡಿ ಮಧುವಿಂ ಕೈವಂದುದಂ ಚೀರಫ
ಟ್ಟಿಯ ಮಾಂಡವ್ಯನ ವಿಶ್ವಕರ್ಮನಳವಲ್ತೆಂಬನ್ನಮುದ್ಯಾನಮಾ
ಲೆಯನಾವಂ ರಸಚಿತ್ರಮಾಗೆ ಬರೆವಂ ಪೇೞೆಂದು ಕಾರುಣ್ಯದೃ
ಷ್ಟಿಯೊಳಿತ್ತಂ ಧರಣೀಶ್ವರಂ ಕನಕಮಂ ಭ್ರೂಕೋಟಿಯಿಂ ಕೋಟಿಯಂ ॥೭೧॥

ವ॥ ಅಂತು ಮೆಚ್ಚುಗೊಟ್ಟು ಚಿತ್ರಪಟಮಂ ನೋಡಲುತ್ಕಂಠರಾದ ಸಭಾಜನಕ್ಕೆ ನೀಡುವುದಂ ಮಹಾಪ್ರಸಾದಮೆಂದು ಕಳೆದುಕೊಂಡು ನಿರ್ಮಾಣಿಸಿದ ಚಿತ್ರಕನ ಚಿತ್ರವಿದ್ಯಾಪ್ರಾಗಲ್ಭ್ಯಮಂ ಪ್ರತ್ಯೇಕಮವಲೋಕಿಸಿ

ಬಿಚ್ಚಳಿಸಲ್ಕೆ ನಾಲಗೆಗಳೆಯ್ದವೆನಲ್ ಬನಮಂ ವಿಲೋಕನ
ಕ್ಕಚ್ಚರಿಯಪ್ಪಿನಂ ಬರೆದ ಚಿತ್ರಕನಾವನೊ ದೇವ ದೇವರಂ
ಮೆಚ್ಚಿಸುವನ್ನನೀ ದೊರೆಯನಾವನೋ ಭೂಭುಜನೊಂದು ಕೋಟಿಯಂ
ಮೆಚ್ಚಱಿದೀವನೆಂದು ಪರಿಷಜ್ಜನಮಂದುಲಿಯುತ್ತಮಿರ್ಪಿನಂ ॥೭೨॥

ವ॥ ಆ ಪ್ರಸ್ತಾವದೊಳ್ ಮಧುಪ್ರಸಂಗರಾಗರಸತರಂಗಿತೆಯಾದ ವನಲಕ್ಷ್ಮೀವಿಲಾಸಮಂ ವನಪಾಲಕನವನಿಪಾಲಕಂಗಱಿಪಲೆಂದು ಪೊಂಬಾೞೆಯ ಹಾಳೆಯೊಳಿಮ್ಮಾವಿನ ಕೊನೆಯುಮಂ ಮಲ್ಲಿಗೆಯ ನನೆಯುಮಂ ಚೆನ್ನೆಯ್ದಿಲೆಯೊಳತಿ ಮುಕ್ತದಲರುಮಂ ತಮಾಳದ ತಳಿರುಮಂ ತಾವರೆಯ ಕೋಡೆಲೆಯೊಳಸುಕೆಯ ಕುಡಿಯೆಲೆಯುಮಂ ಸುರಹೊನ್ನೆಯ ಪೂಗೊಂಚಲುಮನೆಳವಾೞೆಯ ಪಸುರೆಲೆಯೊಳ್ ಕೊಸಗಿನ ಕುಸುಮಮುಮಂ ಸಂಪಗೆಯ ಮುಗುಳುಮಂ ಪೊಂಗೇದಗೆಯೆಸಳ ದೋಣಿಯೊಳ್ ತಿಳಕದ ಕಳಿಕೆಯುಮಂ ವಕುಳದ ಮುಕುಳಮುಮಂ ಪ್ರತ್ಯಗ್ರಸಮುತ್ಪನ್ನಪಲಾಶಪತ್ರದೊಳ್ ದವನದ ನಿಡುವೂವುಮಂ ಮರುಗದ ಕುಡಿಯುಮಂ ಬಿಸಲತೆಯೊಳಂ ನೆಯ್ದಿಲ ಸಣ್ಣಕಾವಿನೊಳಂ ಬಿಸತಂತುವಿನೊಳಂ ಕರ್ಬಾಳದ ಬಳ್ಳಿಯೊಳಂ ತೆಂಗಿನ ತಿರುಳೆಲೆಯ ಸುಲಿಕೆಯೊಳಂ ಕೇದಗೆಯ ಬೆಳ್ಸುೞೆಯ ಸಿವುಱೊಳಂ ಬೇಱೆವೇಱೆ ಸುತ್ತಿ ಸೊವಡಿಂಗೆಱಗಿದ ಮಱಿದುಂಬಿ[ಯೆ] ಮುದ್ರೆಯಾಗೆ ತಂದು ಮುಂದಿಟೆಪಿ

ವನಲಕ್ಷ್ಮಿ ನಿನಗೆ ನವಯೌ
ವನಲಕ್ಷ್ಮಿಯನೆಯ್ದೆ ಮಱೆಯಲೆನ್ನಂ ಪಿಕನಿ
ಸ್ವನದಿಂ ಪ್ರಾರ್ಥಿಸಿದಳ್ ದೇ
ವ ನೋಡಲೆಟ್ಟಿರ್ಪುದಾ ಲ[ತಾ]ಕೋಮಳೆಯಂ ॥೭೩॥

ವ॥ ಎಂದು ಬಿನ್ನವಿಸೆ ಮನದೆಗೊಂಡು

ಅಳಿನೀಝುಂಕಾರಮಂ ಕೋಕಿಳಕಳಭಕಳಧ್ವಾನಮಂ ಕೇಳಲುಂ ವೃ
ಕ್ಷಲತಾಸೌಂದರ್ಯಮಂ ನಂದನವಿಹರಣವಿಶ್ರಾಂತಶುದ್ಧಾಂತಕಾಂತಾ
ಜಳಕೇಳೀಲೀಲೆಯಂ ನೋಡಲುಮವರ್ಗನುಲೇಪಂಗಳಂ ವಸ್ತ್ರಭೂಷಾ
ವಳಿಯಂ ಮೆಚ್ಚೀಯಲುಂ ಚಂಪಕಮಧುಮಧುರಾಲೋಕನುತ್ಕಂಠನಾದಂ ॥೭೪॥

ವ॥ ಅನಂತರಂ ರಾಜ್ಯಾಭಿಷವಣಭವನದಂತೆ ಪೂರ್ಣಕುಂಭೋಪಶೋಭಿತಮುಂ ನಕ್ಷತ್ರಚಕ್ರದಂತೆ ಹಸ್ತಪ್ರಶಸ್ತಮುಂ ಘನಸಮಯದಂತೆ ಪುಷ್ಕರವಿರಾಜಿತಮುಂ ವಸಂತಸಮಯ ಸಹಕಾರದಂತಗ್ರಪಲ್ಲವೋಲ್ಲಸಿತಮುಂ ಶಿಶಿರಸಮಯದಂತೆ ಜಾತಿಭಂಗ ಭಂಗುರಮುಂ ನಿದಾಘಸಮಯದಂತಪಘನಮನೋಹರಮುಂ ತನ್ನಂತುದಾತ್ತವಂಶಮುಂ ಭದ್ರಲಕ್ಷಣ ಲಕ್ಷಿತಮುಮಪ್ಪ ಪಟ್ಟವರ್ಧನಮನೇಱಿ

ಲೀಲಾಮಣಿಭೂಷಣರು
ಗ್ಜಾಲಂ ಜಳಜಳಿಸೆ ಗಗನದೊಳ್ ನೃಪರತ್ನಂ
ವ್ಯಾಳಗಜೇಂದ್ರಾರೂಢಂ
ನೀಲಾಚಲರತ್ನಶಿಖರಮಂ ಗೆಲೆವಂದಂ ॥೭೫॥

ಎರಡುಂ ಕೆಲದೊಳ್ ಪಣ್ಣಿದ
ಕರಿಣಿಯ ಮೇಲಿರ್ದ ಚಾಮರಗ್ರಾಹಿಣಿಯರ್
ಕರಮೆಸೆದರ್ ಕಾರಮುಗಿ
ಲ್ಪೊರೆಯೊಳ್ಸಂಚಳಿಪ ಬಳ್ಳಿಮಿಂಚೆಂಬಿನೆಗಂ ॥೭೬॥

ವ॥ ಆ ಪ್ರಸ್ತಾಪದೊಳ್

ಎಳವೆಜೆಯಂತೆ ಕೊಂಕುವಡೆದಂಕುಶಮಂ ಮನುಜೇಂದ್ರಚಂದ್ರಮಂ
ಪೊಳೆಯಿಸುತುಂ ಕಪೋಳದೊಳು ದಂತುಗಳಿಂದಗೆವೊಯ್ಯೆ ವಜ್ರಕುಂ
ಡಳಮುರದೊಳ್ ತಳತ್ತಳಿಸೆ ಹಾರಮರೀಚಿಕಿರೀಟಕಾಂತಿ ಪ
ಜ್ಜಳಿಸೆ ವಿಳಾಸದಿಂದಣೆದು ನೂಂಕಿದನಂಕದ ಪಟ್ಟದಾನೆಯುಂ ॥೭೭॥

ಮುತ್ತಿನ ಕೊಡೆ ಕಣ್ಬೀಲಿಯ
ಸತ್ತಿಗೆ ತಟ್ ಮೇಘಡಂಬರಂ ಬೆಳ್ಗೊಡೆ ತ
ಟ್ಟೆತ್ತಮಿರೆ ಬನಮೆ ಬನಮಂ
ಮುತ್ತುವವೊಲ್ನಡೆದುದೊಡನೆ ರಾಣಿಯವಾಸಂ ॥೭೮॥

ವ॥ [ಅಂತು] ಪೊಜಮಟ್ಟು ಲೀಲೋದ್ಯಾನಕ್ಕಭಿಮುಖನಪ್ಪುದುಂ

ರತಿ ಲಾಸ್ಯಪ್ರೌಢಿಯಂ ಕಂತುಗೆ ನೆಜ್ ಮೆಜೆಯಲ್ಪೂರ್ವರಂಗ ಪ್ರಸಂಗೋ
ಚಿತಮಂ ಪುಷ್ಪಾಂಜಲಿಕ್ಷೇಪಮನೊಡರಿಸಲೆಂದಿರ್ಪುದುಂ ತತ್‌ಕ್ಷಣಪ್ರ
ಸ್ತುತಮಂ ವಿಸ್ತೀರ್ಣಮಂ ಪಚ್ಚೆಯ ಜವನಿಕೆಯಂ ಬಿರ್ಚಿದಂತಿರ್ದುದುಜ್ಜೃಂ
ಭಿತರಂಭಾಸಸ್ಯಪೂಗೀವನವೃತಿಹರಿತಾಕಾಶಮುದ್ಯಾನದೇಶಂ ॥೭೯॥

ವ॥ ಮತ್ತಮತನುರಾಜಮರಕತಕೃತಕಾಚಳದಂತೆಯುಂ ವಸಂತಕರಿಮಕರಕ್ಷುಭಿತ ಶೃಂಗಾರನೀರಾಕರದಂತೆಯುಂ ವಿರಹಿಜನಸಂತಮಸಸ್ತೋಮದಂತೆಯುಂ ಕಱಂಗಿ ಕಟ್ಟಲಿಸಿ ಲೋಚನಪಥಕ್ಕನತಿದೂರವಾಗಿ

ಕಳಿಕೆಯ ಪೊಸದಳಿರ್ಗಳ ಕು
ಟ್ಮಳಂಗಳಲರ್ಗಳ ವಿಚಿತ್ರವರ್ಣದಿನೇಂ ಕ
ಣ್ಗೊಳಿಸಿದುದೊ ಸುರಧನುರ್ಮಂ
ಡಳದಿಂ ಕೇರ್ಗಟ್ಟಿದಂತಿರುದ್ಯಾನವನಂ ॥೮೦॥

ನೆಲಸುತ್ತುಂ ಕೊಳದೊಳ್ಸರೋಜಮುಕುಲಂ ಸಸ್ಮೇರಮಪ್ಪಂತು ಜ
ಕ್ಕುಲಿಸುತ್ತುಂ ಪೊಸತಂ ಲತಾಪ್ರಸವಮಂ ಮುಂಡಾಡಿ ತಣ್ಗಂಪನ
ಗ್ಗಲಿಸುತ್ತುಂ ಪರಪುಷ್ಪಕೀರರವಮಂ ತಂದೊಂದನೊಂದೊಂದಱೊ
ಳ್ಕಲಸುತ್ತುಂ ಬನದಿಂ ವಿನೋದಚತುರಂ ಬಂದತ್ತು ಮಂದಾನಿಲಂ ॥೮೧॥

ವ॥ ಅಂತುಪವನಪವನಂ [ಬರ್ಪುದುಂ]

ಸುರಗಿರಿಯಿಂ ಸುರರಾಜಂ
ಧರೆಯ ವನೋಪಾಂತ ಭೂಮಿಭಾಗಕ್ಕಿಟಿವಂ
ತಿರೆ ಸಿಂಧುರದಿಂದಿಟಿದಂ
ಧರಣೀನಾಥಂ ವಿನೋದವನಪರಿಸರದೊಳ್ ॥೮೨॥

ಎಳಮಿಂಚು ಕಾರಮುಗಿಲಿಂ
ದಿಟಿವಂತಮೃತಾಂಶುಲಕ್ಷ್ಮಿ ಶಶಿಮಂಡಲದಿಂ
ದಿಟಿವಂತೆ ವಾಹನಂಗಳಿ
ನಿಟಿದೆಸೆದುದು ನೃಪನ ಪೆಂಡವಾಸದ ತಂಡಂ ॥೮೩॥

ಸುತ್ತಿದ ಪೆಂಡವಾಸದೆಳವೆಂಡಿರ ಲೋಲಕಟಾಕ್ಷಮಾಲೆ ದಿ
ಗ್ಭಿತ್ತಿಗಕಾಂಡಕಾಂಡಪಟಮಂ ಕುಡೆ ತನ್ಮಣಿಮೇಖಳಾರವಂ
ಮುತ್ತೆ ಮದಾಳಿನೀಮಧುರಸಿಂಜಿತಮಂ ನಡೆತಂದನಂದು ತ
ಟ್ಬೆತ್ತಿದ ಮೇಘಡಂಬರದ ತಣ್ಣೆಟಿಲೊಳ್ ಮನಜೇಂದ್ರಚಂದ್ರಮಂ ॥೮೪॥

ವನಲತೆಯ ಮೇಲೆ ಬಂದಾ
ಮನೋಜನೆಳಲತೆಗಳೆಂಬಿನಂ ಕೋಮಳೆಯರ್
ಮನುಜೇಂದ್ರನೊಡನೆ ಪೊಕ್ಕರ್
ಬನಮಂ ಜನನಯನಸಂಮದಾಳಂಬನಮಂ ॥೮೫॥

ಎನಿತೊಳವು ವನಲತಾತರು
ವನಿತುಮನೊರ್ಮೊದಲೆ ನೋಡುವನಿತಳಿಪು ಕರಂ
ಮನದೊಳ್ಳನೆಕೊನೆವೋಯ್ತೆನೆ
ವನಪಾಲಪುರಸ್ಸರಂ ನೃಪಾಲಂ ತಳರ್ದಂ ॥೮೬॥

ಆನಿರ್ದ ಬನದೊಳುಟಿದುವ
ನೇನಂ ನೃಪ ನೋಟ್ಪೆ ಬರ್ಪುದೆಂಬಂದದಿನಂ

ದೇನುಲಿದುದೊ ಪಿಕಮಧುರ
ಧ್ವಾನದಿನಾರಕ್ತಕೋರಕಂ ಸಹಕಾರಂ ॥೮೭॥

ವ॥ ಆಗಳದಱ ಸಹಜಸೌಂದರ್ಯಮಂ ಸೌಂದರ್ಯಪುರಂದರಂ ನೋಡಿ

ಅಲರ್ಗೊಂಚಲ್ಗಳನೇಱ ತುಂಬಿ ಮಧುಪಾನಕ್ರೀಡೆಯೊಳ್ಸೋರ್ಕಿ ಮಂ
ಜುಳಮಂದ್ರಧ್ವನಿಯಿಂದವೇಂ ಮೊರೆದುವೇ? ವಾಚಂಯಮಂ ಸಂಯಮಂ
ತೊಲಗಿತ್ತೇ ಕನರ್ಗರ್ಚಿ ಕೋಗಿಲೆಗೆ? ಕಾಯಂ ಕರ್ಚಿ ಮೇಣ್ ನಾಟಕಂ
ನಲಿದತ್ತೇ ಗಿಳಿ? ಚೂತವಲ್ಲದ ವೃಥಾಸ್ಥೂಳಾವನೀಜಾತದೊಳ್ ॥೮೮॥

ವ॥ ಎಂದು ಕೆಂದಳಿರಗೊಂದಣದೊಳುಲಿದು ಗಟಿಪುವರಗಿಳಿಯ ಕಳಕಳಮಂ ಕುಸುಮರಸಮಂ ಸವಿದು ಮೊರೆವ ಚಂಚರೀಕದಿಂಚರಮುಮಂ ಕಳಿಕೆಗರ್ಚಿದ ಕಷಾಯಕಂಠಮಾದ ಕಳಕಂಠದ ಕುಂಠಕಂಠಮುಮಂ ಶ್ರುತಿಪಥಕ್ಕತಿಥಿಮಾಡಿ

ಅಸದಳಮಾಯ್ತು ರೂಪಮದವಗ್ಗಳಮಾದುದು ಯೌವನೋದಯಂ
ಪೊಸಸಿರಿವಂತನಾ ಸಿರಿಯುಮಂ ಜನಕಂ ಮಧು ಕೊಟ್ಟನಿಂ ವಿಚಾ
ರಿಸುಗುಮೆ ಚೂತನೊಲ್ದು ಪೊರೆಗುಂ ಗಿಳಿಯಂ ಮುಖರಾಗಿಯಂ ಮಧು
ವ್ಯಸನಿ ಮದಾಳಿಯಂ ಸಹಜವಕ್ರವಚಸ್ವಿಯನನ್ಯಪುಷ್ಪನಂ ॥೮೯॥

ವ॥ ಎಂದು ಮಾಕಂದಮಂ ವಕ್ರೋಕ್ತಿಯಿಂ ಪೊಗೞ್ದು ತಣಿಯದೆ ರಾಜಮಕರಧ್ವಜಂ ಸುಕರಕವಿತಾಮನೋಹರನ ಮೋಗಮಂ ನೋೞ್ಪುದುಂ

ನುಡಿಗಲಿಸಿ ಮಾಣ್ದುದೇ ಕ
ನ್ನಡವಕ್ಕಿಯನಿಸಲನಂಗನಂ ಕಲಿಸಿದುದೆಂ
ದೊಡೆ ಬಿರಯಿಗೆ ಮುನ್ನಿನ ಭವ
ದಿಡುವಗೆ ಚೂತಾಂಕುರಂ ವಿಷಾಂಕುರಮೆ ವಲಂ ॥೯೦॥

ಕರಣಗ್ರಾಮಮನೀ ಮಾ
ಮರಕ್ಕೆ ಮಧು ಬಾಟ್ಕೆಗೊಟ್ಟು ಕಿಸುವಲಗೆಗಳಿಂ

ಬರೆದೆತ್ತಿದ ಶಾಸನಕೇಂ
ದೊರೆಯಾದುವೊ ಸೊನೆಯ ಪನಿ ಪಗಿಲ್ತೆಳದಳಿರ್ಗಳ್ ॥೯೧॥

ವ॥ ಎಂದಾ[ಶು]ಕವಿ[ಯಾ]ಗಿ ಪೇಟಿ ಕೇಳ್ದು ಕಾವ್ಯವಿನೋದಂ ಪುಳಕಿತಶರೀರನಾಗಿ

ಸುಕರಕವಿತಾಮನೋಹರ
ನ ಕವಿತೆಯಂ ಮೆಚ್ಚಿ ಮೆಚ್ಚುಗೊಟ್ಟಂ ಸಹಕಾ
ರಕುಮಾರನೆಂದು ಮಣಿಕನ
ಕಕೋಟಿಯಂ ನೆವದೊಳಿತ್ತನಾ ಧರಣೀಶಂ ॥೯೨॥

ವ॥ ಅಂತು ಮೆಚ್ಚುಗೊಟ್ಟು ಸಹಕಾರಮಹೀರುಹಕ್ಕೆ ಸಹಜಸೌಂದರ್ಯನೆಂದು ತನ್ನ ಹೆಸರನ್ನಿಟ್ಟದಱ ಕೆಲದಲ್ಲಿರ್ದ ಬಳ್ಳಿಮಾವನಡರ್ದ ಬಳ್ಳಿಮಲ್ಲಿಗೆಯಂ ನೋಡಿ

ಅನುರೂಪಮಾಗೆ ಪುಟ್ಟಿಸಿ
ವನಜಭವಂ ಚೂತರಾಜನಂ ಮಲ್ಲಿಗೆಯಂ
ವನಮಿಥುನಂಗಳೊಳೇಂ ಮು
ನ್ನಿನ ತನ್ನ ಜಡಸ್ವಭಾವಮಂ ಮೀಱಿದನೋ ॥೯೩॥

ಕಳಶಂ ಪದ್ಮಾಕರಂ ಕನ್ನಡಿ ಹಿಮರುಚಿ ಕಾಮಾಗ್ನಿ ಹೋಮಾಗ್ನಿ ಪುಂಸ್ಕೋ
ಕಿಳನಾದಂ ವೇದಮಂತ್ರಂ ಕುಡಿ ಗುಡಿ ಮಧು ಮೌಹೂರ್ತಿಕಂ ಪೂತವಲ್ಲಿ
ಕುಳಮೆಲ್ಲಂ ನಿಬ್ಬಣಂ ಬಂದಬಲೆಯರೆನೆ ಚೂತಂಗಮೀ ಮಲ್ಲಿಕಾಕೋ
ಮಳೆಗಂ ಕೊಂಡಾಡಿ ಕೈನೀರೆಱಿದನತನು ಲಾವಣ್ಯಪುಣ್ಯಾಂಬುವಿಂದಂ ॥೯೪॥

ವ॥ ಎಂದವನಿಪತಿ ಸಮಯೋಚಿತವಾಗ್ವಿಳಾಸಮಂ ಮೆಱೆವುದುಮನಂತರ ಮವಸರಂಬಡೆದು ಮಂಗಳಪಾಠಕಂ ಮಲ್ಲಿಕಾವಲ್ಲಭೆಗಭಿಮುಖವಾಗಿ

ರತಿಮದನಂ ವಸಂತಸಮಯಂ ಪುಳಿನಂ ನಳಿನಂ ಕೊಳಂ ಹಿಮ
ದ್ಯುತಿ ಲತೆಮಾವು ಕೀರಕಳಭಂ ಕಳಕಂಠರವಂ ರಥಾಂಗದಂ
ಪತಿ ತಳಿರುಯ್ಯಲೋಪರ ಸುಸಿಲ್ಕನೆವಿಲ್ ನನೆಯಂಬು ಮಂದಮಾ
ರುತನಳಿನೀನಿನಾದಮಿವಱಿಂ ಪೊಸಮಲ್ಲಿಗೆಗಕ್ಕೆ ಮಂಗಳಂ ॥೯೫॥

ಜನಸಂಮೋಹನವಿದ್ಯೆ ತನ್ನ ಮಧುವಿಂ ಪುಟ್ಟಿತ್ತು ಪುಷ್ಪಂಗಳು
ಳ್ಳನಿತುಂ ನೋಂತವೆ ತನ್ನ ಕೀಟಿಸಳ ಸೌಭಾಗ್ಯಕ್ಕೆನಿಪ್ಪಗ್ಗದೀ
ವನದೇವೀಸಖಿಗೀ ವಸಂತವಿಜಯಶ್ರೀದೇವಿಗೀ ಚೂತರಾ
ಜನ ಮಾದೇವಿಗೆ ಮಲ್ಲಿಕಾರಮಣಿಗಂ ಭದ್ರಂ ಶುಭಂ ಮಂಗಳಂ ॥೯೬॥

ವ॥ ಎಂದು ಮಂಗಳವೃತ್ತಂಗಳನೋದಿದ ಮಂಗಳಪಾಠಕಂಗೆ ತದುತ್ಸವ ಮಹಾದಾನಮಂ ಮಾಡಿ ಪಲ್ಲವಿತಲತಾದ್ರುಮಂಗಳಂ ನೋಡುವಲ್ಲಿ

ಮೃದುಪದಪಾತದಿಂದಸುಕೆಯಂ ತಳಿರ್ವೆಱಿಸಿ ಕೇಕರಾಂಶುಪಾ
ತದಿನಲರ್ಗೊಂಚಲಂ ತಿಳಕಮಂ ತಳೆವಂತಿರೆ ಮಾಡಿ ಪರ್ಬಿ ಕೊ
ರ್ಬಿದ ಕುಚದೊತ್ತಿನಿಂ ಕುರವಕಕ್ಕೆ ನವಾಂಕುರಮಂ ನಿಮಿರ್ಚಿ ಬೀ
ಱಿದುದಬಳಾಜನಂ ನೃಪವರಂಗೆ ಮನೋಜಮಹೇಂದ್ರಜಾಳಮಂ ॥೯೭॥

ವ॥ ಆಗಳದಂ ನೋಡಿ ವಿಸ್ಮಯಸ್ಮೇರಮುಖಾರವಿಂದನಾ[ಗೆ]

ಏವುದು ಗುರುಕರ್ಕಶಭೂ
ಷಾವಿಳಸನಮೆಂದು ಪುಷ್ಪಕೋಮಳೆಯರ್ ಪು
ಷ್ಪಾ[ಪ]ಚಯಕ್ಕೊಡರಿಸಿದರ್
ಪೂವಿನ ಪಲ ತೆಱದ ತುಡುಗೆಯಿಂ ಕೈಗೆಯ್ಯಲ್ ॥೯೮॥

ಲೆಕ್ಕಕ್ಕೆ ತಿಱಿಗೆ ತಿಱಿವರ್
ಮಿಕ್ಕರಲನವೇವುವೆಂದು ಮುಗುಳ್ಗಳೊಳಗೆ ಹಾ
ರಕ್ಕೆ ಚಳಿಕೆಗೆ ಬಣ್ಣ ಸ
ರಕ್ಕಾಯ್ದಳ್ ತರುಣಿ ಮಲ್ಲಿಕಾಕುಟ್ಮಳಮಂ ॥೯೯॥

ದ್ವಿಗುಣಿಸೆ ಕೇಕರಾಂಶು ಕುಸುಮಂಗಳನಾರ್ಗವನಂಗರಾಗಮಂ
ತ್ರಿಗುಣಿಸೆ ತೋಳ ಪೆರ್ಮೊಲೆಯ ನಾಭಿಯ ಮೂಲದ ನುಣ್ಪು ನೀಳ್ಕೆ ಮ
ಲ್ಲಿಗೆಯಲರ್ಗೊಂಚಲಂ ಚಪಳಲೋಚನೆ ತೊಟ್ಟನೆ ಕಂಡು ಮನ್ಮಥಂ
ತ್ರಿಗುಣಿಸಿ ತನ್ನ ಕಟ್ಟಿದಲಗಂ ಮೆಱೆದಂ ನೆಱೆ ಗೇಣ ಕೇಣಮಂ ॥೧೦೦॥

ನನೆಗೊಂಬಂ ನೀಳ್ಕಿ ಚಂದ್ರಾತಪಮೆ ಪುದಿದುದೆಂಬನ್ನೆಗಂ ನೋಡಿ ಚಂದ್ರಾ
ನನೆ ಪೂವಂ ಲೀಲೆಯಿಂದಂ ತಿಱಿಯೆ ತಿಳಕದೊಳ್ಮೆತ್ತೆಯುಂ ಕೋರಕಂಗಳ್
ನನೆಗಳ್ ಪುಷ್ಪಂಗಳಂತಂತೊಗೆಯೆ ರತಿ ಲತಾಂತಾಯುಧಂಗಂದು ಸಂಮೋ
ಹನಬಾಣಶ್ರೇಣಿಯಂ ತೀವಿದ ತವದೊಣೆಯಂ ತಾಳ್ದಿದಂತಿರ್ದಳೊರ್ವಳ್ ॥೧೦೧॥

ತೀವಿದ ತನ್ನ ಯೌವನದ ಸೊರ್ಕಿನೊಳುರ್ಕೆ ನಿತಂಬಸೂತ್ರಘಂ
ಟಾವಿತತಸ್ವನಂ ಲಲಿತಯಾನಮೊಡಂಬಡೆ ಲೀಲೆಯಿಂ ಬಯ
ಲ್ದಾವರೆಗಾವಿನೊಳ್ಮೊಲೆಗಳು ಪರಿವೇಷ್ಟಿಸಿಕೊಂಡು ಬರ್ಪ ಲೀ
ಲಾವತಿ ಪೋಲ್ತಳಂಗಜನ ಕಟ್ಟಿದ ಕೊಂಬಿನ ಪಟ್ಟದಾನೆಯಂ ॥೧೦೨॥

ವ॥ ಅಂತು ಕುಸುಮಾಪಚಯವಿನೋದಮಂ ತಿರ್ಚಿ ಮಧುಮಹೀಪಾಲನ ಸಾರಸರಸ್ವಮೆನಿಪ ಕೋರಕಕುಸುಮಕಿಸಲಯಂಗಳಿಂ ನೂಪುರದ ಕಾಲಕಡಗದುಡೆನೂಲಬಣ್ಣ ಸರದೆಕ್ಕಸರದ ತಿಸರದ್ವೈಸರದ ಸಂಕಲೆಯಂ ಪಿಂಡುಗಂಕಣದ ಚಳಿಕೆಗೆಯ ಚೌಕಳಿಯ ಕರ್ಣೋತ್ತಂಸದ ಹಂಸತಿಳಕದ ಪೆಱೆಯ ಕುತ್ತುಂಗಱೆಯ ಮತ್ತಂ ಪಲತೆಱದ ಪೆಸಱ ಪಚ್ಚಮಂ ಸಮೆದು

ಕರಮೆಸೆಯೆ ತಮಗೆ ಪುಷ್ಪಾ
ಭರಣಂ ಕಾಮುಕಮೃಗವ್ಯ ಕೇಳಿಗೆ ಕಾಮಂ
ಸರಲಂ ಪೇಱಿದ ದೀಹದ
ಹರಿಣಿಯನನುಕರಿಸಿ ತರುಣಿಯರ್ ಸೊಗಯಿಸುಗುಂ ॥೧೦೩॥

ವ॥ ಅಂತು ಕೈಗೆಯ್ದು

ಸುಮನೋಭೂಷಣದಿಂ ಜಂ
ಗಮಲತೆಗಳೆನಿಪ್ಪ ಲಲನೆಯರ್ ನೃಪನೇತ್ರ
ಭ್ರಮರಮನಾ ವನಲತೆಯಿಂ
ತಮಗಭಿಮುಖಮಾಗೆ ಮಾಡಿದರ್ ತತ್‌ಕ್ಷಣದೊಳ್ ॥೧೦೪॥

ಮನದೊಳ್ತೆಕ್ಕನೆ ತೀವಿದ
ವನಕೇಳೀರಸಮೆ ಪೊಣ್ಮುವಂತಿರೆ ಮಧ್ಯಂ

ದಿನತಪನತಾಪದಿಂ ಬೆಮ
ರ್ವನಿ ತಲೆದೋಱಿದುವು ತರುಣಿಯರ ತನುಲತೆಯೊಳ್ ॥೧೦೫॥

ವ॥ ಆಗಳವನಿಪತಿ ವಿಳಾಸಿನಿಯರ ಬಱಿಲ್ಕೆಯಂ ಜಳಕೇಳಿಯೊಳ್ಕಳೆಯಲೊಡರಿಸಿ

ಕ್ಷಾರಮಿದೆಂದರ್ಣವಮಂ
ವಾರುಣದಿಕ್ಪಾಲನುಱಿದು ದೇವೀಸಹಿತಂ
ಸ್ವೈರದೆ ಬರ್ಪಂತರಸಂ
ವಾರಸ್ತ್ರೀವೆರಸು ಪೂಗೊಳಕ್ಕೆಟ್ಟಿಂದಂ ॥೧೦೬॥

ಅವಯವಶೋಭೆಯಿಂ ದಿವಿಜಕಾಂತೆಯರಂ ಮಿಗುವೀವಿಲಾಸಿನೀ
ನಿವಹದ ವಕ್ತ್ರದೊಳ್ಸರಸಿಜಂ ಕುಚದೊಳ್ಪೊಣರ್ವಕ್ಕಿ ನೇತ್ರದೊಳ್
ಕುವಳಯಮಲ್ತೆ ಮಚ್ಚರಿಸುತಿರ್ಪುವವಂ ಪಡಿಯಿಟ್ಟು ನೋೞ್ಪೆನೆಂ
ಬವೊಲರಸಂ ವಿಲಾಸತಿಯರ್ವೆರಸೆಯ್ದಿದನಬ್ಜಷಂಡಮಮಂ ॥೧೦೭॥

ವ॥ ಅಂತೆಯ್ದೆವರ್ಪುದುಂ

ಜಳದೇವತೆಯರ್ ಧರಣೀ
ತಳಪತಿಯಂ ನೋಡಲೆಂದು ನೆರೆದಂತೆ ಮನಂ
ಗೊಳಿಸಿದುವು ಸುತ್ತಲುಂ ಸುೞಿ
ವೆಳವೆಂಡಿರ ನೆಱಿಲ ಬಳಗಮಬ್ಜಾಕರದೊಳ್ ॥೧೦೮॥

ವ॥ ಆಗಳ್

ಜಲಕೇಳಿಯುಮಂ ಮೇಳದ
ವಿಳಾಸಿನೀಜನವಿಳಾಸರಸವಿಸರಸುಧಾ
ಜಳಕೇಳಿಯುಮಂ ವಸುಧಾ
ತಳಪತಿ ಮನಮೆಳಸೆ ಕಮಳವನಮಂ ಪೊಕ್ಕಂ ॥೧೦೯॥

ಜಲದೇವತೆಯರ್ಚೆಲ್ವಿಂ
ತಲೆಕೆಳಗಾಗಿರ್ದರೆಂದು ಮಚ್ಚರದಿಂದಂ
ಕೆಲರಿಕ್ಕಿ ಮೆಟ್ಟಿದರ್ ನೃಪ
ಲಲನೆಯರೆನೆ ತಡಿಯೊಳೆಸೆದುವವರ ನೆಟಿಲ್ಗಳ್ ॥೧೧೦॥

ವ॥ ಆ ಸಮಯದೊಳೊರ್ವಳ್

ಕಡುನೀಳೆ ಜಂತ್ರದಂಚೆಯ
ನಡಿಗಡಿಗಾ ನೀರೊಳರ್ದಿದಳ್ನಡೆವೆಡೆಯೊಳ್
ಗಡ ನಾಣ್ಚದೆ ಪುರುಡಿಪುದೆ
ನ್ನೊಡನೆಂದುಯ್ದಲ್ಲಿ ಪುಡುಕುನೀರರ್ದುವವೋಲ್ ॥೧೧೧॥

ವ॥ ಮತ್ತಮಲ್ಲಿ

ಸವತಿಯ ಮೇಲೆ ಜೀರ್ಕೋಲವಿಯಂ ಧರಣೀಶ್ವರನೊತ್ತೆ ಚಂದನಾಂ
ಬುವನನುರಕ್ತೆ ಕಂಡು ಪೆಱಳೊರ್ವಳಣಂ ಜಳಕೇಳಿಯೊಳ್ಪೊದ
ಟ್ದುವೊಲಿರೆ ಕಣ್ಣಕೆಂಪು ಬೆಮರ್ಗಳ್ ಜಳಯಂತ್ರಪಯೋಲವಂಗಳಂ
ತೆವೊಲಿರೆ ಕೋಪದೊಳ್ನಡುಗಿ ನೀರೊಳಗಿರ್ದುಮದೇಂ ಬೆಮರ್ತಳೋ ॥೧೧೨॥

ಧರಣೀಶಂ ಸಿಂಪಿಸೆ ಘುಸೃ
ಣರಸದಿನಂಗನೆಯ ಘನಕುಚಂಗಳ್ ರಜದಿಂ
ಪೊರೆದುವು ಸೆಂದುರದಿಂ ತಲೆ
ವೊರೆದ ಮನೋಭವನ ಕುಂಭಿಕುಂಭಂಗಳವೋಲ್ ॥೧೧೩॥

ಜಲಕೇಳಿಯೋಳ್ಕಟಿಲ್ದುಡಿ
ದಲರ್ಗಳ ಕಾಲ್ದುಡಿಗೆ ತೇಂಕೆ ಜಲದೇವಿಯರ್ಗಂ
ತಲೆದುಡಿಗೆಯಾದುವೆನೆ ನೃಪ
ಲಲನೆಯರ ಮಹಾನುಭಾವಮೇನಚ್ಚರಿಯೋ ॥೧೧೪॥

ವ॥ ಅಂತು ಜಲಕೇಳಿಯಂ ನಿರ್ವರ್ತಿಸಿ ಪಾಲ್ಗಡಲ ಮಡುವಿಂ ಪೊಱಮಡುವ ಪೂರ್ಣಚಂದ್ರನಂತೆ ಮನುಜೇಂದ್ರಚಂದ್ರಂ ಪೂಗೊಳದಿಂ ಪೊರಮಡುವುದುಮೊಡನೊಡನೆ ಕೋಮಳಬಾಹುಲತೆಯಿಂ ನೆಲೆಮೊಲೆಯನವುಂಕಿ ದಕ್ಷಿಣಪಾಣಿ ಪಲ್ಲವದಿಂ ನಿಡುಮುಡಿಯಂ ಪಿಡಿದು ನಾನ್ದ ನಿಱಿಯುಂ ಬಱಿಲ್ದುಡೆಯಂ ತಡಂಗಾಲ್ವೊಯ್ಯೆ ಮೆಯ್ಯ ಬಣ್ಣಂ ಬಳ್ಳಿ ಮಿಂಚಂ ಮಸೆದಂತೆ ತಳತ್ತಳಿಸೆ

ಮೃಗಲೋಚನೆಯರ್ಸಲಿಲಾ
ವಗಾಹಮಂ ಮಾಣ್ದು ಪೊಱಗೆ ನಿಲೆ ಕಟ್ಟಿಲೆ ತಾ
ರಗೆಯನುಗುಳ್ದಪ್ಪುವೆಂಬಿನ
ಮುಗುತಂದುವು ಸಲಿಲಬಿಂದುಗಳ್ಸೋರ್ಮುಡಿಯಿಂ ॥೧೧೫॥

ವ॥ ಅದಲ್ಲದೆಯುಮಾಕೆಗಳ ನಿತಂಬಸೂತ್ರದೊಳ್ಮುಕ್ತಾಫಲದಂತೆಯುಮಾಕೆಗಳ ಕುಚಕಲಶದೊಳ್ ಲಾವಣ್ಯರಸದಂತೆಯುಮಾಕೆಗಳ ಸೆಳ್ಳುಗುರಮೊನೆಯೊಳಂಶುಜಾಳದಂತೆಯುಮಾಕೆಗಳ ಪಾಳಿಯೊಳ್ ದರಹಾಸಕಳಿಕೆಯಂತೆಯುಮಾಕೆಗಳ ನಯನೋತ್ಪಲಂಗಳೊಳ್ ಮಧುಬಿಂದುವಿನಂತೆಯುಮಾಕೆಗಳ ಪೆಱೆನೊಸಲೊಳಮೃತಕಳಿಕೆಯಂತೆಯುಮಾಕೆಗಳಳಕವಲ್ಲರಿಗಳ ಕೊನೆಯೊಳ್ ನನೆಯಂತೆಯು ಮೋರೊಂದು ಜಲಬಿಂದುವಿಡುತಿರ್ಪುದುಮಾ ಸಮಯದೊಳವನಿಪಾಲನಾ ಪೆಸಱ ಪೆಂಡವಾಸದ ವಿಲಾಸಿನೀಸಮುದಯಕ್ಕೆ ತಕ್ಕ ವಿಚಿತ್ರ ವಸ್ತ್ರಾಭರಣಗಂಧಾನುಲೇಪನಂಗಳಂ ದಯೆಗೆಯ್ದು ತಾನುಂ ಕೈಗೆಯ್ದು

ಮಲಯಜಕ್ಷಕರ್ದಮಮೃಗೋದ್ಭವದಿವ್ಯವಿಲೇಪನಂ ಸಮು
ಜ್ಜ್ವಲಮಣೀಭೂಷಣಂ ವಸನಮೆಂಬಿವಱಿಂ ಪೊಸೆದೇಸೆ ತನ್ನೊಳ
ಗ್ಗಲಿಸೆ ಭುಜಂಗರಾಜಸುರರಾಜಮನೋಜವಿಲಾಸಮಿಂತು ಕ
ಣ್ಗೊಳಿಸದೆನಲ್ ಜಗಜ್ಜನವಿಲೋಚನಮಂ ಸೆಱೆಗೆಯ್ದನಾ ನೃಪಂ ॥೧೧೬॥

ವ॥ ಆ ಪ್ರಸ್ತಾವದೊಳ್

ಮಸುಳೆ ದಿನಕರನ ತೇಜಃ
ಪ್ರಸರಂ ನಭಮೆಣ್ಣೆದೊಡೆದ ಕನ್ನಡಿಯೊಲ್ ತಾಂ
ಮಸುಮಸನಾಗಿರ್ದುದು ದೂ
ಳಿಸಂಜೆಯೊಳ್ ದೈನ್ಯಮೇನೊ ನಿಸ್ತೇಜದವೋಲ್ ॥೧೧೭॥

ಜಗುನೆಯ ಕರ್ಮುಡು ನೆಲನಂ
ದಿಗಿಭದ ಮದವಟ್ಟೆ ದೆಸೆಗಳಂ ರಾಹುಶಿರಂ
ಗಗನಮನೆಡೆಗೊಂಡತ್ತೆನೆ
ಜಗಮಂ ಪರ್ವಿದುದು ಬಹಳ ತಮಸಂ ತಮಸಂ ॥೧೧೮॥

ಬಿದಿ ಹರಿನೀಳದೊಳ್ಕಡೆದಜಾಂಡಮನಂಜನದೊಳ್ಪೊರಳ್ಚಿದಂ
ತೊದವಿರೆ ಮರ್ಬು ಸಂದೆಗದೆ ತಮ್ಮೊಡಲಂ ಬಿಡದಂದು ನೋಟ್ಪರೆಂ
ಬುದನೆನೆ ನೋಡಿ ನಿಟ್ಟಿಸುವರಾರಿದು ಪರ್ವತಮೆಂಬಿದುರ್ವಿಯೆಂ
ಬಿದು ದೆಸೆಯೆಂಬಿದಭ್ರಪಥಮೆಂಬ ಚರಾಚರವಸ್ತುಭೇದಮಂ ॥೧೧೯॥

ಅಂಬಿರಿವಿಡುವ ತಮೋದಾ
ನಾಂಬುವಿನೊಳ್ಮುಳುಗಿ ನಿಂದ ನಭಮೆಂಬ ಮದ
ಸ್ತಂಬೇರಮನಾಗಳ್ ಚಿ
ಬ್ಬಂಬೊಯ್ದವೊಲಡಟಿ ತುಱುಗಿದುವು ತಾರಗೆಗಳ್ ॥೧೨೦॥

ವ॥ ಆ ಸಮಯದೊಳ್

ಪೆಱದೆಗೆವ ತಮಂ ತಟ್ಟೆಮೆ
[ದುಱುಗಿತೆನ]ಲ್ಪೂರ್ವದಿಗ್ವಧೂವದನಂ ಕಂ
ಣ್ದೆಱೆದವೊಲದೇಂ ಬೆಳರ್ತುದೊ
ಕಿಱದೆಡೆ ತುಹಿನಾಂಶುಬಿಂಬಮುದಯಿಪ ಪದದೊಳ್ ॥೧೨೧॥

ನವಸಂಧ್ಯಾರಾಗಂ ಪಿಂ
ಗುವುದುಂ ಮದನಂಗೆ ವಜ್ರಖೇಟಕಮಂ ಕೆಂ
ಗವಸಣಿಗೆಗಳೆದು ರತಿ ನೀ
ಡುವಂತೆ ತಳತಳಿಸಿದತ್ತು ಹಿಮಕರಬಿಂಬಂ ॥೧೨೨॥

ವ॥ ಅಂತು ಸುಧಾಸೂತಿಮಂಡಲಮತಿಪ್ರೌಢಮಾಗೆ

ಪುಗಿಸಿದುವಟ್ಟಿ ಪರ್ವತಗುಹೋದರಮಂ ಕೆಲವಂ ಗವಾಕ್ಷದಿಂ
ದುಗಿದುವು ದೇವಸದ್ಮದೊಳಡಂಗಿದುವಂ ಬಯಲಿಂಗೆ ಬಿರ್ದುವಂ
ತಗುಳ್ದಱಿಯಟ್ಟಿ ನುಂಗಿದುವು ಪೆರ್ಮರನಂ ಸೆಱಿಗೆಯ್ದು ಪರ್ಣಸಂ
ಧಿಗಳೆಡೆಯಿಂದಮಿಟ್ಟೊಱಿಸಿ ಕೊಂದವು ಕತ್ತಲೆಯಂ ಹಿಮಾಂಶುಗಳ್ ॥೧೨೩॥

ಕರ್ಪಿಲ್ಲದ ಕಾಡಿಗೆ ಕಂ
ದರ್ಪನ ಜಸಮಿರುಳ ತಣ್ಬಿಸಿಲ್ಬೆಳತಿಗೆ ಮಿಂ
ಚಿರ್ಪಿಲ್ಲದಿಂಗಡಲ್ವಿಧು
ಸರ್ಪನ[ಪೊ]ರೆ ಜಲಕನಾಯ್ತು ಪೊಸವೆಳ್ದಿಂಗಳ್ ॥೧೨೪॥

ವ॥ ಅಂತು ಕಮನೀಯಮಾದ ಕೌಮುದೀಮಹೋತ್ಸವದೊಳವನೀಶ್ವರಂ ತಾರಾಂತಃ ಪುರವೀಥಿಯಂ ಪುಗುವ ಚಂದ್ರನಂತೆ ಸೂಟಿಗೇಱಿಯಂ ಪುಗುತರ್ಪುದು[ಮಲ್ಲಿ] ಮನಸಿಜನ ಮೇಗಿಲ್ಲದ ಬಲ್ಲಾಳ್ತನಕ್ಕೆ ತಲೆಯಂ ತೂಗಿ

ಹರಿಯುರದಲ್ಲಿ ಗೋಪವಧುವಿಂ ಮದನಂ ವಿಜಯಪ್ರಶಸ್ತಿಯಂ
ಬರೆಯಿಸಿದಂ ಹರಂಗರುಣಲೋಚನಮಂ ಪಡೆದಂ ಲಲಾಟದೊಳ್
ಗಿರಿಜೆಯ ಪಾದಯಾವಕದೆ ಮಾಡಿಸಿದಂ ಮೊಗವಿಟ್ಟು ದೇವಸುಂ
ದರಿಗೆ ಸರೋಜಗರ್ಭನನೆನಲ್ ಪೆಱರಂ ಕೊಱಚಾಡಿ ಕಾಡನೇ ॥೧೨೫॥

ವ॥ ಎನುತ್ತುಂ [ಬರ್ಪನ್ನೆಗಂ]

ತಡೆದಿರ್ಪುದೆ ಮಾದೇವಿಯ
ಕಡೆಗಣ್ಗಳ ನೆಯ್ದಿಲೆಸಟ ಬಾಸಿಗದಿಂ ಪೊ
ಯ್ವಡೆಯದೆ ಶಯ್ಯಾಸದನ
ಕ್ಕಡಿಯೆತ್ತೆಂಬಂತೆ ಘಳಿಗೆ ಮೊಟಗಿತ್ತಾಗಳ್ ॥೧೨೬॥

ವ॥ ಅಂತು ಬೆಳಗಪ್ಪ ಜಾವಮಪ್ಪುದುಂ ರತಿಯ ಸೂಟ್ಗೆವರ್ಪ ಕಂದರ್ಪನಂತೆ ರಾಜಮನೋಜಂ ಧನಶ್ರೀಯ ಸೂಟ್ಗೆವಂದನಲ್ಪತಲ್ಪತಳದೊಳ್ ಸುಖಪ್ರಸುಪ್ತನಿರೆ

ತನುಸೋಂಕಿಂ ನಿದ್ರೆಯಿಂದೆೞ್ಚೆಸಿ ಕುಮುದಮಮಂ ನೆಮ್ಮಿ ಕೈಗೆಯ್ದ ಭೃಂಗಾಂ
ಗನೆಯಂ ನೀರೇಜಿನೀಕುಟ್ಮಳದೆಸಟೊೞ್ವೆರೆಯಂ ಬಿರ್ಚೆ ಚಂಡಾಳಿಗೀತ
ಸ್ವನದೊಳ್ತಳ್ತೊಯ್ದು ನೀರ್ವಕ್ಕಿಗಳುಲಿಪುಮನಂಭೋಜಷಂಡಂಗಳೊಳ್ಸೀ
ರ್ಪನಿಯಂ ತರ್ಕೈಸಿತಂದೊಯ್ಯನೆ ಸುೞಿದುದೆಲರ್ಸುಪ್ರಭಾತಪ್ರಭೂತಂ ॥೧೨೭॥

ಉದರದೊಳೀ ಜಗಮಂ ತಾ
ಳ್ದಿದ ಶಾಶ್ವತಲಕ್ಷ್ಮಿವೆತ್ತ ದಿನಪಂ ಸಂಧ್ಯಾಂ
ಬುದಪೀತಾಂಬರವಿಭು ತಾ
ಳ್ದಿದ ಕೌಸ್ತುಭರತ್ನಮೆನಿಸಿದುದು ರವಿಬಿಂಬಂ ॥೧೨೮॥

ವ॥ ಅಂತು ನೇಸರ್ಮೂಡುವುದಂ ರಾಜಸರ್ವಜ್ಞಂ ಶುಚಿಭೂರ್ತನುಮತಿ ಸಮಾಹಿತಚಿತ್ತನುಮಾಗಿ

ಸಿರಿಕಂಡದ ಕೋೞ್ಕೆಸಱೊ
ಳ್ಬೆರಸಿದ ಕತ್ತುರಿಯ ಸಾರವಣೆ ಬೆಳಗಿದ ಕ
ಪ್ಪುರವಳುಕಿನ ಸೊಡರ್ಗಳ್ ಸುಂ
ದರಮೆನೆ ಜಿನಪತಿಯನವನಿಪತಿ ಪೂಜಿಸಿದಂ ॥೧೨೯॥

ವ॥ ಅಂತು ಸಾಮಯಕನಿಯಮಮಂ ನಿರ್ವರ್ತಿಸಿ

ವಿವಿಧಾತೋದ್ಯವಿದಗ್ಧವಾದಕನಿಕಾಯಂ ಗಾಯಕಶ್ರೇಣಿ ವಂ
ದಿವಿತಾನಂ ಬಗೆಗೊಂಡು ಕೊಂಡು ಕೊನೆಯುತ್ತುಂ ಬರ್ಪಿನಂ ಖೇಚರೇಂ
ದ್ರವಿಲಾಸಂ ತನಗೆಕ್ಕಲಾವಣಮೆನಲ್ ಸಂಗೀತಕಾಲೋಕನೋ
ತ್ಸವದಿಂ ನಾಟಕಸಾಲೆಗಂದು ಬಿಜಯಂಗೆಯ್ದಂ ಮಹೀವಲ್ಲಭಂ ॥೧೩೦॥

ವ॥ ಆ ಮಂಡಪಮಂ ಮಂಡಲಿಕಮಕರಧ್ವಜಂ ಮಣಿಮಂಡನಮರೀಚಿಯಿಂದ ಚಿತ್ರಿಸುತ್ತುಮೊಳಪುಗುವುದು [ಮಾ] ಗಳವನೀಶ್ವರ ಪ್ರಸಾದಾವಲೋಕನಮೆ ತನಗೆ ಸಂಗೀತಕಪ್ರವೇಶ ಪ್ರೇರಕಮಾಗೆ

ಕೊರಲಿನಿತು ಬೆರಲ ಪವಣಿಂ
ಕರಮೆ ರಸಂಬಡೆಗುಮೆಂಬ ತೆಱನಱಿದು ಬೆರ
ಲ್ಕೊರಲಾಗೆ ರಾಗಶುದ್ಧಿಯ
ಪರಿಣತಿಯಂ ಮೆಱೆದು ವಾಂಶಿಕಂ ಬಾಜಿಸಿದಂ ॥೧೩೧॥

ವ॥ [ತದನಂತರಂ] ಗೀತದೊಳಮತಿಪ್ರವೀಣನಪ್ಪ ಗಾಣಂ ಪಾಡಲೊಡರಿಸುವುದುಮಾಗಳ್

ವಿತತಘನಾವನದ್ಧ ಸಂಷಿರಂಗಳನೊರ್ಮೆಯೆ ಕೂಡೆ ಕೂಡಿ ಕೊಂ
ಡತಿದ್ರುತವಾದಕರ್ತಗುಳೆ ಬಾಜಿಸೆ ನಿರ್ಭರನೀಲಮೇಘಗ
ರ್ಜಿತಮೊ ಸಮುದ್ರಘೂರ್ಣಿತಮೊ ಪೇಟಿನೆ ನರ್ತನಪೂರ್ವರಂಗಸಂ
ಗತಸಮಹಸ್ತವಿಸ್ತೃತರವಂ ಪುದಿದತ್ತು ನಭೋವಿಭಾಗಮಂ ॥೧೩೨॥

ವ॥ ಅಂತು ವಾದ್ಯವಿದ್ಯಾಪರಿಶ್ರಮಮಂ ಮೆಱೆದು ಪಱೆ ಸನ್ನೆಗೆಯ್ವುದುಂ ಮತ್ತಂ ನರ್ತನಾಲಂಕರಣದಿನಲಂಕರಿಸಿ ನರ್ತಕಿ

ನವರತ್ನಚಿತಮೆನಿಸಿದ
ಜವನಿಕೆಯಂ ಕಳೆಯೆ ರಂಗದೊಳ್ಕಣ್ಗೆಸೆದಳ್
ಧವಳವಿಲೋಚನೆ ಚಿತ್ತೋ
ದ್ಭವನೊಱೆಯಿಂದುರ್ಚಿ ಮಿಸುಗುವಸಿಲತಿಕೆಯವೋಲ್ ॥೧೩೩॥

ಪೊಳೆದಪುವೆಳವಾಳೆಗಳ
ಗ್ಗಳಿಸುವ ಲಾವಣ್ಯರಸತರಂಗಿಯೊಳೆನಲ್
ಲಲನೆಯ ತನುರುಚಿಯೊಳ್ತಳ
ತಳತಳಿಸಿದುವೆಳಸಿ ಬಳಸಿ ನೋಟ್ಟರ ಕಣ್ಗಳ್ ॥೧೩೪॥

ವ॥ ಆ ಸಮಯದೊಳ್

ಮದನಾನುರಾಗಮಂ ಬೀ
ಱಿದಪಳೊ ಸಭೆಗೆನೆ ಸುವರ್ಣಪುಷ್ಪಾಂಜಲಿಯಂ

ಕೆದಱಿದಳಾವಧು ಮದನನೆ
ಕೆದಱಿದವೊಲ್ತನ್ನ ಪೊನ್ನ ಪೊದೆಯಂಬುಗಳಂ ॥೧೩೫॥

ವ॥ ಆಗಳ್ ವಾದಕಂ ಕಯ್ಯೆ ಮನಮಾಗೆ ಕುಡುಪೆ ನಾಲಗೆಯಾಗೆ ತಾಳಾನುಗಮಂ ತಱಗೆಲೆಯ ಮೇಲೆ ನುಣ್ಮಳಲಂ ಬಿಡದೆ ಸುರಿವಂತೆ ಗೀತಾನುಗಮಾಗೆ ಬಿಡದೆ ಬಾಜಿಪಾಗಳ್

ಮನದಿಂ ಭಾವಮುದೀರ್ಣಮಾಗೆ ಮುಖದಿಂ ಕೈಗಣ್ಮೆ ಹಾವಂ ವಿಲೋ
ಚನದಿಂ ಪೊಣ್ಮೆ ವಿಲಾಸಮೋತ್ತರಿಸೆ ಪುರ್ಬಿಂ ವಿಭ್ರಮಂ ಕಿಂಕಿಣೀ
ನಿನದಂ ಗೀತದ ಮೆಯ್ಗೆ ಬಾಜಿಪ ಲಯವ್ಯಕ್ತಾಕ್ಷರವ್ಯಕ್ತಿಯಿಂ
ಜನಸಂಮೋಹನಮಾಗೆ ದೇಸೆವಡೆದತ್ತಾ ನರ್ತಕೀನರ್ತನಂ ॥೧೩೬॥

ಚರಣನಿತಂಬಗ್ರೀವಾ
ಕರಶಾಖಾಜನಿತರೇಚಕಂ ನಯನಮನೋ
ಹರಮಾಗೆ ನೃತ್ಯವಿದ್ಯೆಯೆ
ಪರಿಜಂ ಕೈಕೊಂಡುದೆಂಬಿನಂ ಸೊಗಯಿಸಿದಳ್ ॥೧೩೭॥

ಮದನಮೋಹನಮಂತ್ರನಾದಮೊ ಸೇತುಗಟ್ಟಿದ ಕಾಮಸಂ
ಮದಸುಧಾಬ್ಧಿತರಂಗನಾದಮೊ ಲೋಕಮೆಲ್ಲಮನಿಕ್ಕಿ ಮೆ
ಟ್ಟಿದ ಮನೋಭವಸಿಂಹನಾದಮೊ ಪೇೞಿಸಲ್ ರಸಗೀತದೊಳ್
ಪುದಿದು ವಾದ್ಯದೊಳೊಂದಿ ತಟ್ಟುದು ಕಿಂಕಿಣೀಕಳಝುಂಕೃತಂ ॥೧೩೮॥

ನುಂಗಿದುದು ಸಕಲರಸಮಂ
ಶೃಂಗಾರರಸಪ್ರವಾಹಮೆನೆ ಜನದ ಮನೋ
ರಂಗಪ್ರತಿಷ್ಠೆರತಿಗಾ
ಯ್ತುಂಗಜನಿಂದೆನಿಸಿದತ್ತು ಸಂಗೀತರಸಂ ॥೧೩೯॥

ವ॥ ಅಂತತಿಶಯಮೆನಿಪ ಸಂಗೀತಪ್ರಸಂಗದೊಳ್

ಕೆದಱಿದ ಕಪ್ಪುರವಳುಕಿಂ
ಸುದತಿಯರಲತಗೆಯ ಪಜ್ಜೆಯಿಂ ಮುಡಿಯಿಂ ಸೂ
ಸಿದ ಪುಷ್ಪಮಾಲೆಯಿಂದೆಸೆ
ದುದು ಚಿತ್ರಿಸಿದಂತೆ ಮಧ್ಯಮರಕತರಂಗಂ ॥೧೪೦॥

ವಾರವಿಲಾಸಿನೀಚರಣನೂಪುರನಾದ ನಿತಂಬಸೂತ್ರಘಂ
ಟಾರುತಿ ಯಕ್ಷಕರ್ದಮಮೃಗೋದ್ಭವಚಂದನದಿವ್ಯಸೌರಭಾ
ಸಾರಸಮೀರಣಂ ಕಥಕಗಾಯಕವಾದಕವರ್ಣನಂ ಪ್ರತೀ
ಹಾರಕತರ್ಜನಂ ಪರೆವಿನಂ ಪರಿದಿತ್ತು ನರೇಂದ್ರನೋಲಗಂ ॥೧೪೧॥

ವ॥ ಅಂತೋಲಗಮಮಂ ವಿಸರ್ಜಿಸಿ

ಜನನಾಥಂ ವಶ್ಯಾಂಜನ
ಮೆನಿಸಿದ ಕರವಾಳ ಪೊಳೆವ ನುಣ್ಬೊಗರಿಂದಂ
ತನಗೆ ಬಸಂಮಾಡಿ ಜಯಾಂ
ಗನೆಯಂ ಸೊಬಗಿಂಗೆ ನಾಡೆಯುಂ ಮುಯ್ಯಾಂತಂ ॥೧೪೨॥

ವ॥ ಆ ಮಹೀಭುಜನ ಭುಜಪ್ರತಾಪವಜ್ರಪಾತದಿಂ ಪರನರಪತರುವುನ್ಮೂಲನಮಾಗೆಯುಂ ರಿಪುಕದಂಬನಾಟಕಸೂತ್ರಧಾರಿಯ ಗಜಘಟಾಬೃಂಹಿತದಿಂ ಜಯಶ್ರೀಕಲಾಪಿನೀ ಲಲಿತ ಲಾಸ್ಯಮೆಸೆಯೆಯುಂ ಕರವಾಳಭೈರವನ ಬಾಹುದಂಡ ಮಂಡಲಾಗ್ರವಿದ್ಯುದ್ವಿಳಾಸದಿಂ ವಿರೋಧಿಬಳಮರಾಳ ಮಂಡಳಂ ಭಯಚಕಿತಮಾಗೆಯುಂ ದಾನವಿನೋದನ ದಾನವರ್ಷದಿಂ ವಿಭುಧದ್ರುಮಕದಂಬಮಂಕುರಿತ ಮಾಗೆಯುಂ ಜಗಜ್ಜನ ದಾರಿದ್ರ್ಯನಿದಾಘ ಕನಕಮೇಘನ ದಯಾರಸಪ್ರವಾಹದಿಂ ಜನಾನುರಾಗರಸತರಂಗಿಣಿ ನೆಲೆವೆರ್ಚೆಯುಮಿಂತು ಸಾರ್ವಕಾಲಿಕಮಾದ ನೃಪಚರಿತಮೆಂಬ ಮಟೆಗಾಲಮನೋಲಗಿಸುವಂತೆ

ಮುಗುಳ ತೊಡಂಬೆ ಗಂಟೊಡೆಯ ಮೊಲ್ಲೆಗೆ ಬೆಳ್ಸುಟಿ ಪುಟ್ಟೆ ಪುಟ್ಟ ಕೇ
ದಗೆಗಳ ಸೊರ್ಕು ಚೇತರಿಸೆ ಚಾದಗೆಗಂ ಚಿರವಾಗೆ ರಾಗವಂ
ಚೆಗೆ ಕಿಱುವೀಲಿ ಕಣ್ದೆಱೆಯೆ ಸೋಗೆಗೆ ತಣ್ಣಸು ಪುಟ್ಟೆ ಬೆಟ್ಟಬೇ
ಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಳಂ ॥೧೪೩॥

ತಿಳಿಗೊಳದ ಸುತ್ತಲುಂ ಕ
ಣ್ಗೊಳಿಸಿತು ತಳತಳಿಸುವೆಳಗಱುಂಕೆಯ ಗಜೆ ತ
ಟ್ಟೆಳವಸಲೆ ಪೂರ್ಣಶಶಿಮಂ
ಡಳಮಂಡನಮಾದ ಹರಿತಪರಿವೇಷದವೋಲ್ ॥೧೪೪॥

ಪೊತ್ತುವ ವಡವಾಗ್ನಿಯ ಪೊಗೆ
ಸುತ್ತಿದೊಡುಮ್ಮಳಿಸಿ ಕರ್ಗಿ ಪಡುವಣ ಕಡಲೊಳ್
ನಿತ್ತರಿಸದೆ ನೆಗೆದುವು ಜಳ
ಮತ್ತದ್ವಿಪಘಟೆಗಳೆನಿಸಿದುವು ಘನಘಟೆಗಳ್ ॥೧೪೫॥

ನೆಗೆದ ಮುಗಿಲ್ವೊಯ್ಲಿಂ ತಾ
ರಗೆಗಳ್ಬಿರಿದೊಡೆದು ಸೂಸಿದಪ್ಪುವೆನಲ್ ಮಿಂ
ಚುಗಳಿಕ್ಕುವ ತತ್ತಿಗಳೆನ
ಲುಗುತಂದುವು ತುಱುಗಿ ತೋಱವನಿ ಪೊಸಗಾರೊಳ್ ॥೧೪೬॥

ತೀಡುವ ಪಶ್ಚಿಮಾನಿಳನ ತೀಟದೊಳುತ್ಕಟಮಾಗೆ ರಾಗಮಿ
ರ್ಪೋಡಿದ ಚಂಚುವಂ ತೆಱೆದೆಱಂಕೆ ಸಡಿಲ್ದಿರೆ ಕಂಠನಾಳಮಂ
ನೀಡಿ ವಿಯತ್ತಳಕ್ಕೊಗೆದು ಕಾರಮುಗಿಲ್ವನಿಯಂ ಮನಂ ಕುಳಿ
ರ್ಕೋಡುವಿನಂ ಕರ್ದುಂಕಿ ನಲಿದಾಡಿದುದಾಡಿದುದೊಂದು ಚಾತಕಂ ॥೧೪೭॥

ರಾಗದ ಬಳ್ಳಿ ಚಾದಗೆಗೆ ಕಾಂಚನಚಂಚಳಲಾಸ್ಯನಿರ್ಝರಂ
ಸೋಗೆನವಿಲ್ಗೆ ಮೇಖಳೆ ಘನಾಗಮಲಕ್ಷ್ಮಿಗೆ ದೀಪಮಾಲೆ ಜಾ
ರಾಗಮನಕ್ಕೆ ಜಂತ್ರದುರಿಯೆಣ್ಣೆ ವಿಯೋಗಿಜನಕ್ಕೆನಲ್ ನಭೋ
ಭಾಗದೊಳಂದು ಬಿತ್ತರಿಸಿದತ್ತು ತಟಿಲ್ಲತೆ ಲಾಸ್ಯಲೀಲೆಯಂ ॥೧೪೮॥

ಉಗುಳುತ್ತುಂ ಸಿಡಿಲೆಂಬ ತೋಱಕಿಡಿಯಂ ಕಾಲೂಱೆ ಭೂಭಾಗದೊಳ್
ಗಗನಾಭೋಗಮನೆಯ್ದೆ ನೀಳ್ದು ಘನವೇಣೀಬಂಧಮಂ ಬಿರ್ಚಿ ಮಿಂ
ಚುಗಳೆಂಬುಳ್ಕುವ ದಾಡೆಗಳ್ವೊಳೆಯೆ ಚಂದ್ರಾದಿತ್ಯರಂ ನುಂಗಿ ಬೇ
ಸಗೆಯಂ ಬೆರ್ಚಿಸಿ ಗರ್ಜಿಸುತ್ತುಮೊಗೆದಂ ಕಾರೆಂಬ ಕಾಳಾಸುರಂ ॥೧೪೯॥

ವ॥ [ಇಂತಪ್ಪ] ಘನಸಮಯಮನತಿಕ್ರಮಿಸಿ[ಯ]ತಿಪ್ರಕಾಶಮಾದ ಶರತ್ಪ್ರವೇಶದೊಳ್

[ಪೊ]ರೆಯಿಕ್ಕಿ ಪೋದುವಚಿರಾಂ
ಶುರಸನಘನಕಾಲವಿಷಧರಂಗಳ್ ಗಗನೋ
ದರಗಹ್ವರದೊಳೆನಲ್ತರ
ತರದಿಂ ಪಸರಿಸಿದುವಂದು ಬಿಳಿಯ ಮುಗಿಲ್ಗಳ್ ॥೧೫೦॥

ಇರುಳಿಂದುವಿನೊಡವೋಗದೆ
ಶರದದ ಬೆಳ್ದಿಂಗಳ ಹಿಮಕರಕರ ತಪ್ತಂ
[ತ]ರಳೆ ಕೆನೆಗಟ್ಟಿದಂತಿರೆ
ಪೊರೆವೊರೆಗೊಂಡಿರೆ ಮುಗಿಲ್ಪಗಿಲ್ತುವು ನಭದೊಳ್ ॥೧೫೧॥

ಈಂಗಡಲೊಳಗೋಲಾಡುವ
ಮೀಂಗಳ ಬಳಗಂಗಳೆಂಬಿನಂ ಶರದದ ಬೆ
ಳ್ದಿಂಗಳಲಾಡಿದುವು ಚಕೋ
ರಂಗಳ್ ಚಂದ್ರಾಂಶುಪೂರ್ಣಚಂಚುಪುಟಂಗಳ್ ॥೧೫೨॥

ವ॥ ಅಂತು ಪಸರಿಸಿದ ಶರತ್ಸಮಯದೊಳೊಂದು ದಿವಸಂ ವೈಶ್ರವಣವಲ್ಲಭಂ ಕರುಮಾಡದ ಮೊಗಸಾಲೆಗೆ ಬಿಜಯಂಗೆಯ್ದು ಮಾಣಿಕದ ಮತ್ತವಾರಣದೊಳಿಕ್ಕಿದ ಮುತ್ತಿನ ಬಿತ್ತರಿಗೆಯೊಳ್ಕುಳ್ಳಿರ್ದು ದಿಗವಲೋಕನಂಗೆಯ್ದು

ಕಳವೆಯ ಕೆಯ್ವೊಲಂಗಳ ಪಸುರ್ಪು ದಿಶಾಪಟಳಕ್ಕೆ ಪದ್ಮಿನೀ
ದಳದ ಪಸುರ್ಪು ಪೆರ್ಗೆಜೆಗೆ ತಟ್ಟಿಳವುಲ್ಲ ಪಸುರ್ಪು ಶೈಳಮೇ
ಖಳೆಗೆ ಶುಕಪ್ರತಾನದ ಪಸುರ್ಪು ವಿಯದ್ವಯಳಕ್ಕೆ ಪಚ್ಚೆಯಿಂ
ವಿಳಸಮನಿಕ್ಕಿದಂತೆಸೆಯೆ ಭೂಪತಿ ಮೆಚ್ಚಿ ಶರದ್ವಿಳಾಸಮಂ ॥೧೫೩॥

ವ॥ ಅಂತು ಬೆಳ್ಮುಗಿಲ ತೆಳ್ವಿನಿಂ ಪಳಚ್ಚನಾದ ವಿಯಚ್ಚಕ್ರಮಂ ಕೆಸರ್ಮಸುಳ್ದು ಪಸಲೆಗವಿದ ಧರಾಚಕ್ರಮನಾತ್ಮೀಯಚಿತ್ತಪ್ರಶಸ್ತಿಯಂ ಪಡೆಯೆ ನಿಜಕ್ರೀಡಾಶೈಲದ ಬಯಲೊಳ್ ನೆಲಸಿ ಚತುರಂಗ ಬಳಪ್ರಬಳಭಾರಭಗ್ನಭೋಗೀಂದ್ರ ಫಣಾಸಹಸ್ರಪೂತ್ಕಾರಮಂ ಕೇಳಲುತ್ಕಂಠನಾಗಿ ಪಡೆಯಂ ಪಣ್ಣಿ ಬರವೇಟೆಂದು ಬಳಾಧ್ಯಕ್ಷಂಗೆ ಬೆಸಸುವುದುಂ

ಪೆಡೆಯೊಳಡಂಗೆ ವಾಸುಗಿಯ ನೆತ್ತಿನ ಮಾಣಿಕವಾಟಿ ಕಂಠದೊಳ್
ಪೆಡೆಗಳ ಗೊಂದಣಂ ಸರವಿ ಸುತ್ತಿದವೋಲ್ ತನು ಕೂರ್ಮಪೃಷ್ಠದೊಳ್
ಪಡಲಿಡೆ ಖರ್ಪರಂ ಕುಸಿದು ಕೂರ್ಮಶಿರಂ ಪೊಱಪಾಯ್ದು ಕಣ್ಬುಮು
ಳ್ದೊಡೆವನಿತಾಗೆ ತನ್ನ ಭರದಿಂ ತಳರ್ದತ್ತು ನರೇಂದ್ರಸೈನಿಕಂ ॥೧೫೪॥

ನಳಿದಿರ್ದ ಕೂರ್ಮಪೃಷ್ಠದ
ಕುಟಿಯೋಳ್ ಮಂಡಳಿಸಿ ಕೆಡೆದು ಬಳಭರದಿಂ ಪಾ
ಡಟಿದ ಫಣಿನಾಯಕಂ ಸು
ತ್ತಟಿಯದ ಪೇಟಿಗೆಯ ಪಾವಿನಂತೆವೊಲಿರ್ದಂ ॥೧೫೫॥

ವ॥ ಅಂತು ತಳರ್ವುದುಂ ಅನ್ನೆಗಮಿತ್ತಲಮೃತಜಳಧಿವೇಳೆಯಿಂ ಪೊಱಮಡುವ ಶೇಷನಂತೆ ಚಂದ್ರಕಾಂತದ ಮಂದುರದಿಂ ಪೊಱಮಟ್ಟು ತವದ ಜವದ ಬಿರುದಿಂಗೆ ಗರುಡಂಗೆ ಗಜೆಗಟ್ಟಿದ ಗಜೆಯ ಗಳೆಯಂ ಉಚ್ಚೈಶ್ರವಕ್ಕೆ ಕಟ್ಟಿದ ತೊವಲ ಪಾಪೆಯ ಗಳೆಯುಮಾದಿತ್ಯನೇಱು ಕುದುರೆಗೆ ಕಟ್ಟಿದೇಱು ಕವಡಿಕೆಯ ಗಳೆಯಂ ಮುಂದೆ ಪರಿಯೆ ತನ್ನುಭಯಪಕ್ಷದೊಳಂ ಪರಿವ ಕೆಂಬಟ್ಟೆಯ ಮೇಘಡಂಬರದಿಂದ ಕೆಮ್ಮುಗಿಲ ಕೆಳಗೆ ಪರಿವ ಚಂದ್ರಬಿಂಬಮಂ ವಿಡಂಬಿಸಿ ಕಮಳಗರ್ಭನಲ್ಲಿಗೆವರ್ಪ ಕಳಹಂಸನಂತೆ ಕಲಾಕಮಳಗರ್ಭನಿರ್ದ ಕರುಮಾಡಕ್ಕೆವಂದು

ಅತಿನಿರ್ಮಾಂಸಮುಖಂ ವಿಶಾಳಜಘನಂ ವಿಸ್ತೀರ್ಣವಕ್ಷಂ ಸುಸಂ
ಗತಪಾರ್ಶ್ವಂ ಮೃದುಕೇಸರಂ ನಿಬಿಡಜಂಘಾಕಾಂಡನುದ್ಬದ್ಧಕು
ಕ್ಷಿ ತನುಸ್ನಿಗ್ಧತನೂರುಹಂ ಸರಳವಾಳಂ ಬಂಧುರಸ್ಕಂಧನು
ದ್ಧೃತಕರ್ಣಂ ತುರಗಂ ಮನಂಗೊಳಿಸಿದತ್ತುತ್ತಾರಹೇಷಾರವಂ ॥೧೫೬॥

ಪೊಱಪಾಯ್ದು ಕಡೆದ ನೀಲದ
ತಿಱಕಲ್ಲಂ ಪೋಲ್ತು ನೀರ ಬೊಬ್ಬುಳಿಕೆಯೆನಲ್
ಮಿಱುಗುವ ಕಣ್ ಚೆಲ್ವಿನ ಕ
ಣ್ದೆಱವಿಯನನುಕರಿಸುಗುಂ ತುರಂಗಾಧಿಪನಾ ॥೧೫೭॥

ಬರೆದಂಜನದಿಂ ಕಾಲಂ
ಖುರಮಂ ನಿರ್ವಾಣರೇಖೆದೆಗೆದನಜಂ ಕ

ತ್ತುರಿಯಿಂದಮೆನಿಪ ನಡುಬೆ
ನ್ನ ತೇಱೆಯಿಂದೆಸೆದುದಸದಳಂ ಹಯರಾಜಂ ॥೧೫೮॥

ಖುರದಿಂ ಬಾರಿಸುತುಂ ಧರಾವಳಯಮಂ ತೀವುತ್ತುಮುತ್ತಾರನಿ
ರ್ಭರಹೇಷಾರವದಿಂ ವಿಯದ್ವಿವರಮಂ ಕೆತ್ತುತ್ತಮತ್ಯಂತವಿ
ಸ್ಫುರಿತಪ್ರೋಥಮನೊರ್ಮೆಯುಂ ಕೆದಱುತಂ ಲಾಲಾಂಬುವಂ ಘ್ರಾಣಗ
ಹ್ವರದಿಂ ಘೋರಸಮೀರನಂ ಪಸರಿಸುತ್ತಿರ್ದತ್ತುದಾತ್ತಂ ಹಯಂ ॥೧೫೯॥

ವ॥ ಆಗಳ್

ಇದಱ ಜವಕ್ಕೆ ಸೋಲ್ತು ಗರುಡಂ ಗಱೆಯಿಂ ಕಡು ನೊಚ್ಚನಾದನೇ
ೞದನಿದಱೊಳ್ಕಡಂಗಿ ಪರಿದಾಱದೆ ಕಾಲ್ನಡೆಗೆಟ್ಟು ಗಾಳಿ ಮಾ
ೞದ ಮಱೆವುಲ್ಲೆವೋರಿಯನೆನಲ್ ಪೆಱದೇ ಪಡಿಮಾತೋ ಮಾಡದಿ
ರ್ಪುದೆ ಜವದೇೞ್ಗೆಯಿಂ ಪೆಱವು ಮಾಜಿಗೆ ಭಂಗಮನೀ ತುರಂಗಮಂ ॥೧೬೦॥

ವ॥ ಎಂದು ಕೀರ್ತಿಸಿದ ಗಳಗರ್ತಂಗೆ ಪೊನ್ನ ಪೊಟ್ಟಳದ ಮಟೆಯಂ ಕಱೆದು

ಮಣಿಹರ್ಮ್ಯಸ್ಥಳದಿಂ ನರೇಂದ್ರನಿೞಿದಂ ನಿತ್ಯೋದಯಂ ರತ್ನಭೂ
ಷಣಭಾಸ್ವತ್ಕಿರಣಂ ತಳತ್ತಳಿ[ಪ] ಲೀಲಾಂಭೋಜಹಸ್ತಂ ಹಯ
ಪ್ರಣಯಂ ಕೈಮಿಗೆ ಸಪ್ತಸಪ್ತಿಗೆಣೆಯಾಯ್ತೆಂತಾನುಮೆಂದಾ ನಭೋ
ಮಣಿ ತನ್ನಿರ್ಪ ವಿಮಾನದಿಂದಿೞಿದಿಳಾಭಾಗಕ್ಕೆ ಬರ್ಪಂದದಿಂ ॥೧೬೧॥

ವ॥ ಆಗಳ್

ಪ್ರಣಯಾಳೋಕನರಸದಿಂ
ತಣಿಪುವುದುಂ ದೀಪವರ್ತಿ ನಿಧಿಗೆಱಗುವವೊಲ್
ಗುಣನಿಧಿಗೆ ರಾಜಲೋಕದ
ಮಣಿಮಯಮಕುಟಂಗಳನಿತುಮೇನೆಱಗಿದುವೊ ॥೧೬೨॥

ವ॥ ಅನಂತರಂ

ಸರಮಂ ಮೆಲ್ಲನೆ ತೋಱಿ ದಕ್ಷಿಣಕರಾಂಭೋಜಾತದಿಂ ಸ್ನಿಗ್ಧಕೇ
ಸರಮಂ ನೇರ್ಪಡೆ ನೀವಿ ಕಂಧರಕೆ ಕೈಯಂ ನೀಡಿ ರತ್ನಾಂಶುಭಾ
ಸುರಮಂ ಲಾಘವದಿಂದಮಂಕವಣೆಯಂ ಪಾದಾಗ್ರದಿಂ ಮೆಟ್ಟಿ ತ
ತ್ತುರಗಾಧೀಶನ ಬೆಂಗೆವಂದನನವದ್ಯಂ ರಾಜವಿದ್ಯಾಧರಂ ॥೧೬೩॥

ವ॥ ಆ ಪ್ರಸ್ತಾವದೊಳ್

ಚಿತ್ರಲಯಪ್ರಗಲ್ಭಹಯವಲ್ಗನದಿಂ ಮಣಿಕುಂಡಲಾಂಶುಗಳ್
ಚಿತ್ರಿಸೆ ಗಂಡಭಿತ್ತಿಯನುರಸ್ಥಳರಂಗದೊಳಂಗಹಾರಮಂ
ಸೂತ್ರಿಸೆ ತೋಱಹಾರರುಚಿಮಂಜರಿಗಳ್ ತಳರ್ದಂ ಪುರಾಂಗನಾ
ನೇತ್ರಚಕೋರಮಗ್ಗಲಿಸೆ ಸಂಮದಮಂ ಮನುಜೇಂದ್ರ ಚಂದ್ರಮಂ ॥೧೬೪॥

ವ॥ ಅಂತು ತಳರ್ದು ತಾರಾವೀಧಿಯಂ ಪುಗುವ ಚಂದ್ರನಂತೆ ಬರ್ಪ ಮನುಜೇಂದ್ರ ಚಂದ್ರನಂ ನೋಡಲೆಂದು ನೆರೆದು

ಚರಣಾಲಕ್ತಕರಾಗಮುರ್ವರೆಯೊಳಾರಕ್ತಾಬ್ಜಮಂ ಪಾಸುವಂ
ತಿರೆ ಸಸ್ಮೇರಕಟಾಕ್ಷಮಾಲೆ ಬಯಲೊಳ್ ಕರ್ನೆಯ್ದಿಲಂ ಸೂಸುವಂ
ತಿರೆ ಭೂಷಾರುಚಿ ಶಕ್ರಚಾಪಲತೆಯಂ ದಿಕ್ಚಕ್ರದೊಳ್ ಬೀಸುವಂ
ತಿರೆ ಬಂದೀಕ್ಷಿಸಿದರ್ ಪುರಪ್ರಮದೆಯರ್ಸಾಹಿತ್ಯಸರ್ವಜ್ಞನಂ ॥೧೬೫॥

ಬಾಸಿಗದಂತೆ ಕಣ್ಗೆಸೆದು ತೋಱಿ ತುಱುಂಬಿನೊಳುತ್ತಮಾಂಗದೊಳ್
ಸೇಸೆವೊಲೊಪ್ಪೆ ಹಾರರುಚಿಯಂತುರದೊಳ್ಕರೆಗಣ್ಮೆ ಚಂದನ
ಸ್ಥಾಸಕದಂತೆ ರಂಜಿಸೆ ಭುಜಾಗ್ರದೊಳುಜ್ವಳಕೇಕರಾಂಶುವಿ
ನ್ಯಾಸಮೊಲ್ದು ಕೋಮಳೆಯರೀಕ್ಷಿಸಿದರ್ ಮನುಜೇಂದ್ರಚಂದ್ರನಂ ॥೧೬೬॥

ವ॥ (ಅ)ಲ್ಲಿ ಕೆಲರ್ ಪೊದೆಗೆದಱಿದ ಪೂಗಣೆಗಳಂತೆ ಸಂಗಡದಿನುತ್ತುಂಗಸೌಧ ತಳಮನೇಱಿ ನೋಱಿಪ್ಪಾಗಳ್

ಬಯಸಿದುವಟ್ಟಿ ಪತ್ತಿದುವು ಕೀಲಿಸಿ ನಿಂದುವು ಪೌರವಾರನಾ
ರಿಯರ ಚಳಚ್ಚಕೋರನಯನಂ ಶಫರೀನಯನಂ ಮೃಗಾಂಗನಾ
ನಯನವಲಂಪು ನೂರ್ಮಡಿಸೆ ಸುಗ್ಗಿಯ ಮಲ್ಲಿಗೆ ಕಾರ ಮೊಲ್ಲೆ ಮಾ
ಗಿಯ ಪೊಸನೆಯ್ದಿಲೆಂಬ ಬಗೆ ಕೈಮಿಗೆ ರಾಜಮನೋಜಭೂಪನಂ ॥೧೬೭॥

ವ॥ ಮತ್ತಮೊಂದು ಮಣಿಮಯಮಂದಿರದ ಮಗಿಲ ಜಗಲಿಯೊಳ್ನಿಂದು ಮದನ ಶರಪರವಶೆಯರಾಗಿ

ಒದವಿದಲಂಪು ಕಣ್ಗೊಳಿಳಿವೋಲೆ ಮನಂ ಬಸದಾಗೆ ಪಾಶಮಿ
ಲ್ಲದ ವರುಣಂ ಫಣಾಪಟಳಮಿಲ್ಲದ ಪನ್ನಗರಾಜನಾಲಮಿ
ಲ್ಲದ ಕುಮುದಪ್ರಿಯಂ ಕುಸುಮಸಾಯಕಮಿಲ್ಲದ ಕಂತು ವಜ್ರಮಿ
ಲ್ಲದ ದಿವಿಜೇಂದ್ರನೆಂದಬಲೆಯರ್ ನಡೆ ನೋಡಿದಿರಾ ನರೇಂದ್ರನಂ ॥೧೬೮॥

ವ॥ ಅಂತು ಪುರವಿಳಾಸಿನೀವಿಳೋಕನಾಕರ್ಷಣವಿದ್ಯೆಯಂ ರಾಜಂ ನಿರತಿಶಯ ವಿಳಾಸದಿಂ ಪ್ರಕಟಿಸುತ್ತುಮಗಣ್ಯಪುಣ್ಯವನಿತೆಯರ ತಳಿವ ತೋಱಿಮುತ್ತಿನ ಸೇಸೆಗಳಿನಳಕವಲ್ಲರಿಯಂ ಕುಸುಮಿಸುತ್ತುಂ ಪುರಮಂ ಪೊಱಮಟ್ಟು

ತವೆ ನೋಡಲ್ ನಾಡೆ ಕಣ್ಣುಳ್ಕುವ ರವಿಪಥಮಂ ಕೇತುಹಸ್ತಂಗಳಿಂ ನೀ
ಳ್ಕುವ ಬಿಣ್ಪಿಂ ಭೂತಳಂ ಬಳ್ಕುವ ರಿಪುನೃಪಚಾತುರ್ಬಲಂ ಕಾದಲುಳ್ಳ
ಳ್ಕುವಿಭೋದ್ಯತ್ಕರ್ಣತಾಳಕ್ಷುಭಿತಪವನವಿಕ್ಷೇಪದಿಂ ವಾರ್ಧಿಯಂತು
ಳ್ಕುವ ಸೇನಾಚಕ್ರಮಂ ತೊಟ್ಟನೆ ಸಕಳಮಹಿವಲ್ಲಭಂ ಮುಟ್ಟೆವಂದಂ ॥೧೬೯॥

ವ॥ ಆ ಪ್ರಸ್ತಾವದೊಳ್

ಪವಮಾನಂ ತಣಿದತ್ತು ಗಂಧಗಜದಾನಾಮೋದದಿಂ ಕೇತುಪ
ಲ್ಲವದಿಂ ಚಿತ್ರಿತಮಾದುದಂಬರತಳಂ ಭೂಪಾಳಭೂಷಾಂಶುವಿಂ
ದಿವಸಶ್ರೀ ಪೊಸತಾಯ್ತು ಪೊಯ್ವ ಪಟಹಪ್ರಧ್ವಾನದಿಂದಷ್ಟದಿ
ಗ್ವಿವರಂ ತೀವಿದುವೆಂಬ ತನ್ನ ಬಲಮಂ ಭೂಪಾಳಕಂ ನೋಡಿದಂ ॥೧೭೦॥

ವ॥ ಅಂತು ನೋಡಿ ಉಚ್ಚೈಶ್ರವದಿನಿಟಿವ ನಿಳಿಂಪನಾಯಕನಂತೆ ಭದ್ರವಾಹನದಿಂದಿೞಿದು

ಅಪಗತಕಂಚುಕಂ ಮಣಿವಿಭೂಷಣಕಾಂತಿ ಶರೀರಕಾಂತಿಯಿಂ
ದಪರಿಮಿತಂ ತಳತ್ತಳಿಸೆ ಪಾದಪಯೋಜನಖಾಂಶುಲೇಖೆಯಿಂ
ದುಪವನಮಾರ್ಗಮುಜ್ವಳಿಸೆ ಭೂಭುಜನಂಗಜ ಚಕ್ರವರ್ತಿ ಬಂ
ದಪನೆನೆ ಬಂದುನುಚ್ಚಳಿತ ಚಾಮರನುಚ್ಛ್ರಿತಮೇಘಡಂಬರಂ ॥೧೭೧॥

ವ॥ ಅಂತು ಬಂದು

ಸಿಡಿಲೆಂಬ ಜವನ ಕೊಡಲಿಯ
ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂ ಬಾ
ಯ್ವಿಡೆ ಬೆಟ್ಟು ಕೆಡೆವ ತೆಱದಿಂ
ಕೆಡದಾಲಮನಿದಿರೊಳವನಿಪಾಳಂ ಕಂಡಂ ॥೧೭೨॥

ವ॥ ಅಂತು ಕಂಡು

ತಲೆಯೊಳ್ತಳ್ಪೊಯ್ಯೆ ಬೇರ್ಗಳ್ ಫಣಿಪತಿ ತಲೆಮೆಟ್ಟೆತ್ತಿದಂ ಕುತ್ತೆ ಸುತ್ತುಂ
ಕೆಲಗೊಂ[ಡಾ]ಶಾಗಜಂ ತಾಗಿದುವೆಡೆಗುಡದಾಕಾಶಮಂ ತೀವೆ ತೀವ್ರಾ
ನಿಲನಾಟಂದೊತ್ತಿದಂ ತಿಗ್ಮರುಚಿಕರಸಹಸ್ರಂಗಳಿಂ ಪೊಯ್ದನಡ್ಡಂ
ನಿಲೆ ತೇರ್ಗಂತಲ್ಲದಂದೀ ತರು ಕೆಡೆವುದೆ ಸೌದಾಮಿನೀಪಾತದಿಂದಂ ॥೧೭೩॥

ಎಂದು ಬಗೆ ಪಚ್ಚು ಪಸರಿಸೆ
ಮಂದರಧೈರ್ಯಂ ಧರಾಧಿಪಂ ಸುರಧನುವಂ
ಮುಂದಿಡೆ ಕಿರೀಟಕಿರಣ
ಸ್ಪಂದನಮಡಿಗಡಿಗೆ ತಲೆಯನೇಂ ತೂಗಿದನೋ ॥೧೭೪॥

ವ॥ ಅಂತು ಮನದೊಳೆ ಬಗೆದು ವಿಸ್ಮಯಮೆ ತನಗೆ ವೈರಾಗ್ಯರಸಕ್ಕೆ ಸೇತುವಾಗೆ

ಸ್ಥಿರಮೂಲಮನಾಲದ ಪೆ
ರ್ಮರನಂ ಕಡಿಗೊಂಬುಗೊಂಡ ಕಾಲವ್ಯಾಳ
ದ್ವಿರದಕ್ಕೆ ನರಕಳೇಬರ
ಜರತ್ತೃಣಗ್ರಾಸಮಾತ್ರಮಾವುದೊ ಗಹನಂ ॥೧೭೫॥

ಉಸಿರಂ ಕಾಳೋರಗನುಸಿ
ರ್ದುಸಿರ್ದಿರುಳುಂ ಪಗಲುಮೀಂ[ಟೆ]ಯುಂ ಮತ್ತಂ ಜೀ
ಮಿಸುವಳಿಪಿಂದೆಸಗುವ ಮಾ
ನಿಸನಂ ಸೋಂಕಿದುದು ದೇಹಮೋಹಪಿಶಾಚಂ ॥೧೭೬॥

ಕುತ್ತದ ಪರಿವರಿ ಪಾಪದ
ಬಿತ್ತು ಪರಾಭವ ಬೆಳಸು ಪಸಿದ ಕೃತಾಂತಂ
ಗೆತ್ತಿದ ಬೋನಂ ತನುವೆಂ
ದುತ್ತಮರಜೆದುಟಿದರದಜಿ ನಂಟರ್ತನಮನಂ ॥೧೭೭॥

ತೂಗುವಿನಂ ತಲೆ ಸೆರೆಗ
ಳ್ಬೀಗಿ ಕೊರಲ್ಕುಸಿವಿನಂ ಕಟಿಲ್ವಿನೆಗಂ ಪಲ್
ಬಾಗುವಿನಂ ಬೆನ್ ಮನುಜರ
ಮೂಗಿನ ಮೇಲಾಡುವಂ ಜವಂ ಪೆಕ್ಕಣಮಂ ॥೧೭೮॥

ಆವುದು ಸುಖಮೆಂದೆಳಸುವ
ನಾವಸ್ತುವೆ ದುಃಖಹೇತು ದುಃಖೋಪಶಮಂ
ಜೀವಕ್ಕೆ ಸುಖಭ್ರಾಂತಿಯ
ನೀವುದು ಭಾವಿಪೊಡಸಾರಮೀ ಸಂಸಾರಂ ॥೧೭೯॥

ವ॥ ಅಂತು ಸಂಸಾರಶರೀರಭೋಗನಿರ್ವೇಗಮನಪ್ಪುಕೆಯ್ದು ಪೂರ್ವಾನುಭವ ವಿಷಯಸುಖವಿಮುಖಚಿತ್ತಂ ಮಂತ್ರಶಾಲೆಗೆ ಬಿಜಯಂಗೆಯ್ದನ್ವಯಾಗತ ಮಂತ್ರಿಮಂಡಳ ಮಹಾಪ್ರಧಾನಸೇನಾಪತಿಪುರೋಹಿತರಂ ಬರಿಸಿ ಯಥೋಚಿತಾಸನದೊಳಿರಿಸಿ

ಬರವೇಳ್ದಿಟ್ಟಲೊಡಂ ಸಸಂಭ್ರಮಪದನ್ಯಾಸಂ ಸ್ಫುರತ್ಕರ್ಣಪೂ
ರರುಚಿವ್ಯಾಪ್ತದಿಗಂತರಂ ವಿನಯಮಂ ಮುಂದಿಟ್ಟು ಪೊಕ್ಕಾ ಸಭಾಂ
ತರಮಂ ತಂದೆಯ ಪಾದಪಂಕಜಮನಾಂತಂ ನೆತ್ತಿಯೊಳ್ ಭಕ್ತಿನಿ
ರ್ಭರಚಿತ್ತಂ ನಿಜಧೈರ್ಯನಿರ್ಜಿತಕುಳಕ್ಷೋಣೀಧರಂ ಶ್ರೀಧರಂ ॥೧೮೦॥

ರಾಜಿಸಿದುದು ನಿಟಿಳದೊಳಧಿ
ರಾಜನ ಪದನಖಮಯೂಖಮಂಜರಿ ಪಾದಾಂ
ಭೋಜಾನತನೆನಿಸಿದ ಯುವ
ರಾಜಂಗಧಿರಾಜಪಟ್ಟಮಂ ಕಟ್ಟಿದವೋಲ್ ॥೧೮೧॥

ವಿನಯವಿಳಾಸದಿಂ ವಿನತಮಸ್ತಕನಾಗಿರೆ ನೀಳ್ದ ತೋಳ್ಗಳಿಂ
ತನಯನನಟ್ಟಿಜೆಂ ತೆಗೆದು ತರ್ಕಿಸೆ ತೆಕ್ಕನೆ ತೀವೆ ತತ್ಕುಮಾ
ರನ ತನುವಂ ನೃಪಾಂಗದ ಮರೀಚಿ ಪಳಂಚಲೆದತ್ತು ಪಟ್ಟಬಂ
ಧನಸಮಯೋಚಿತಪ್ರಥಮಮಂಗಳತೀರ್ಥಜಳಾಭಿಷೇಕಮಂ ॥೧೮೨॥

ವ॥ ಅಂತು ತೆಗೆದು ತರ್ಕೈಸಿ ತನ್ನ ಪಾರ್ಶ್ವದೇಶದೊಳ್ ಕುಳ್ಳಿರ್ದ ಮಗನ ಮೊಗಮಂ ನೋಡಿ ಮಗನೆ ರಾಜ್ಯದೊಳ್ನಿಂದು ತಪೋರಾಜ್ಯದೊಳೆಮ್ಮಂ ನಿಲಿಸಿ ನಿಜಾನ್ವಯಾಗತಪರಿಜನಕ್ಕಂ ಜನಪದಜನಕ್ಕಮನುರಾಗಮಪ್ಪಂತು ಸುಖಮನನುಭವಿಸೆಂಬುದುಂ ಕುಮಾರಂ ಮೋಹಾಂಧಕಾರಕಲುಷಿತನುಮತಿಚಕಿತಚಿತ್ತನುಮಾಗಿ ಕೊರಲ ಗಗ್ಗರಿಕೆಯಂ ಸಂವರಿಸಿ

ಅಳವೆ ನಿಜರಾಜ್ಯಲಕ್ಷ್ಮಿಯ
ನೊಳಕೊಳ್ವ ಮಹತ್ವಮೆನಗೆ ಗುಣರತ್ನಮಹಾ
ಜಳನಿಧಿಯಲ್ಲದೆ ಕುಲನದಿ
ಕುಳಮಂ ಬಗೆವೊಡೆ ಕೊಳಂಗಳೊಳಕೊಂಡಪುವೇ ॥೧೮೩॥

ವ॥ ಎಂದು ಬಿನ್ನವಿಸೆ ವೈಶ್ರವಣಮಹಾಮಂಡಳೇಶ್ವರನಂ ನಿನ್ನ ವಿನಯವೃತ್ತಿಗುಚಿತಮಪ್ಪುದಾದೊಡಂ

ಗುಣನಿಧಿ ನೀಂ ನೆಱೆವೈ ಧಾ
ರಿಣಿಯಂ ತಾಳ್ದಲ್ಕೆ ತರುಣಯುವಭೇದಂ ಕಾ
ರಣಮಲ್ತಿಲ್ಲಿಗೆ ಚಿಂತಾ
ಮಣಿಯಾದೊಡೆ ಸಾಲ್ಗುಮಲ್ತೆ ಕಿಱಿದೇಂ ಪಿರಿದೇಂ ॥೧೮೪॥

ವ॥ ಎಂದು ಮತ್ತಮೆನಿತಾನುಂ ಪ್ರಾರ್ಥನೆಗಳಿಂ ತನೂಜಂ ರಾಜ್ಯಪದವಿಯೊಳ್ ನಿಲ್ವಂತು ಮಾಡಿ ಗೃಹಮಹತ್ತರಂಗೆ ಪಟ್ಟಬಂಧಸಮಯಸಮುಚಿತ ವ್ಯಾಪಾರಮಂ ಬೆಸಸಲೊಡಂ

ಶ್ರೀವನಿತಾಕಟಾಕ್ಷರುಚಿಮಂಜರಿಯಂತಿರೆ ಚಾಮರಂ ಜಯ
ಶ್ರೀವನಿತಾಸ್ವಯಂವರವಿನೀಳಸರೋರುಹಮಾಳೆಯಂತೆ ಶೋ
ಭಾವಹಮಾಗೆ ಖಡ್ಗಲತೆ ವೀರರಸಾರ್ಣವಫೇನಪಿಂಡದಂ
ತಾವಗಮೊಪ್ಪೆ ಬೆಳ್ಗೊಡೆ ಮನೋಹರಮಾದುದು ರಾಜ್ಯಮಂಡಪಂ ॥೧೮೫॥

ವ॥ ಅಂತು ಮಂಗಳೋಪಕರಣವಸ್ತುವಿಸ್ತೀರ್ಣಮೆನಿಸಿದ ಮಂಡಪಕ್ಕೆ ಮಹಾಮಂಡಳೇಶ್ವರಂ ವೈಶ್ರವಣಂ ದಕ್ಷಿಣಬಾಹುಲತೆಯಂ ಶ್ರೀಧರಕುಮಾರಭುಜಶಿಖರದ ಮೇಲೆ ನೀಡಿ ಬಂದು ಗುರುಜನಸನಾಭಿಜನಸಮನ್ವಿತಂ ಮೌಹೂರ್ತಿಕನಿರೂಪಿತ ಶುಭಮುಹೂರ್ತದೊಳ್ ಸಲಿಲಸಂಪೂರ್ಣಶಾತಕುಂಭಕಳಶಮನೆತ್ತುವುದುಂ

ತಳಿರ್ವೆಱೆದ ಸುರಭೂಜದ
ಸೆಳೆಗೊಂಬುಗಳೆರಡುಮೊಂದೆ ಪರಿಣತಫಳಮಂ
ತಳೆದಂತವನೀಶನ ಕರ
ತಳದೊಳ್ ರಮಣೀಯಮಾಯ್ತು ಮಂಗಳಕಳಶಂ ॥೧೮೬॥

ಉದಯಗಿರಿಕೂಟಕೋಟಿಯಿ
ನುದಯಿಸುವಿನನೆಳವಿಸಿಲ್ಗಳೆನೆ ಭೂಭುಜನೆ
ತ್ತಿದ ಪೊಂಗಳಸದ ಧಾರಾ
ಕದಂಬಮೆಸೆದತ್ತು ಕನಕರುಚಿಪಿಂಜರಿತಂ ॥೧೮೭॥

ವ॥ ತದನಂತರಂ

ವಿವಿಧಾತೋದ್ಯರವಂ ಪಳಂಚೆ ದೆಸೆಯಿಂ ಮಾಂಗಲ್ಯಗೀತಸ್ವನಂ
ಶ್ರವಣಾನಂದಮನೀಯೆ ಪುಣ್ಯಪಠನಂ ಮೆಯ್ವೆರ್ಚೆ ವಿದ್ವಜ್ಜನ
ಸ್ತವನಂ ಕೈಮಿಗೆ ಬಂದ ವೃದ್ಧಕುಳವೃದ್ಧಾಶೀರವಂ ಪೊಣ್ಮೆ ವೈ
ಶ್ರವಣಂ ತನ್ನ ಮಗಂಗೆ ಪಾರ್ಥಿವಪವಿತ್ರಂ ಪಟ್ಟಮಂ ಕಟ್ಟಿದಂ ॥೧೮೮॥

ವ॥ ಅಂತು ತನ್ನ ವೈರಾಗ್ಯರಸಕ್ಕೆ ಸೇತುಗಟ್ಟುವಂತೆ ಮಗಂಗೆ ಪಟ್ಟಮಂ ಕಟ್ಟಿ

ಕಳೆದಿತ್ತಂ ನಿಜಮುಕುಟಮ
ನಿಳಾಧಿಪಂ ಶ್ರೀಧರಂಗೆ ಭೂತಳಭಾರ
ಕ್ಕಳವಟ್ಟ ಸಿಂಬೆಯಂ ತಂ
ದಿಟಿಪುವ ತೆಱದಿಂ ತದುತ್ತಮಾಂಗದಿನಾಗಳ್ ॥೧೮೯॥

ಯುವರಾಜಂಗರಸಂ ರಾ
ಜ್ಯವಿಳಾಸಮನಿತ್ತು ಪರಮಸಂಯಮಸಾಮ್ರಾ
ಜ್ಯವಿಳಾಸತತ್ಪರಂ ಭಾ
ರವಾಹಕಂ ಪೊಱೆಯನಿೞಿಪಿದಂತೆವೊಲಾದಂ ॥೧೯೦॥

ವ॥ ಅಂತಿರ್ಪುದಂ

ಪರಿಹರಿಪೆನೆನ್ನ ದೋಷಾ
ನುರಾಗಮಂ ಸಾಲ್ವದಖಿಳಪಾವನಮಪ್ಪೀ
ಧರಣೀನಾಥನ ಧರ್ಮಾ
ನುರಾಗಮೆಂಬಂತೆ ಸಂಜೆ ಪರಿದತ್ತಾಗಳ್ ॥೧೯೧॥

ವ॥ ಅಂತು ಶಾಂತರಸವಿಷಯಮಾದ ದಿವಸದವಸಾನಸಮಯದೊಳ್ ಸಂಧ್ಯಾನಿಯಮಮಂ ನಿರ್ವರ್ತಿಸಿ

ಸಕಳಚತುರ್ಗತಿದುಃಖೈ
ಕಕಾರಣಂ ಕ್ರೋಧಮಾನಮಾಯಾಲೋಭಾ

ತ್ಮಕಮಶುಚಿದ್ರವ್ಯಕ್ಷೇ
ತ್ರಕಾಲಭವಭಾವಭೇದಮೀ ಸಂಸಾರಂ ॥೯೨॥

ವ॥ ಎಂದು ಭಾವಿಸುತ್ತುಂ ಸಜ್ಜೆವನೆಗೆ ಬಿಜಯಂಗೆಯ್ದು ಸುಖಪ್ರಸುಪ್ತನಿರೆ

ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ ಚಂದ್ರಮಂಡಳಂ
ಬಾಡಿದ ಮಾಧವೀಮಧುರಮಂಜರಿಯಂತಿರೆ ತಾರಕಾಳಿ ನೀ
ರೋಡಿ ಕಟಿಲ್ದು ಬೀಟ್ವ ಕಳಿವೂಗೆಣೆಯಾಗಿರೆ ತಣ್ಣನಪ್ಪೆಲರ್
ತೀಡೆ ತಪೋವನಂಬೊಲತಿಪಾವನಮಾಯ್ತು ನಭಂ ಪ್ರಭಾತದೊಳ್ ॥೯೩॥

ಗುಣವಟಿಯೆ ನೋವುದೇವುದೊ
ಗುಣದಭ್ಯುದಯಕ್ಕೆ ನೋವು ಚೋದ್ಯಮೆ ದಿವಿಜಾ
ಗ್ರಣಿಗಳನೆಜಗಿಪ ತಪವಿದ
ನೆಣಿಸದೆ ಜಡನಂತೆ ಮೋಹಮೂರ್ಛಿತನಪ್ಪೈ ॥೯೪॥

ವ॥ ಎಂದು ಮಗನ ವಿಷಾದವಹ್ನಿಯಂ ಸುಭಾಷಿತಾಮೃತದಿಂ ನಂದಿಸಿ [ದ] ಸಮಯದೊಳ್

ಪೊರೆದಂ ತನ್ನೊಳಭೇದಮಾಗೆ ಪಿರಿದುಂ ಕೊಂಡಾಡಿದಂ ನಮ್ಮನೀ
ಧರಣೀಶಂ ಧರಣೀಶನಿಂ ನಮಗೆ ಮುನ್ನಂ ದೃಷ್ಟಸೌಖ್ಯಂ ನಿರಂ
ತರಮಾಯ್ತೀಗಳದೃಷ್ಟಸೌಖ್ಯದೆಡೆಗಂ ಸಂದೇಹಮೇಂ ತಾನೆ ದಲ್
ಗುರುವಾದಂ ವಲಮೆಂದು ಪೂಣ್ದುದೊಡವೋಗಲ್ ಮಾನ್ಯರಾಜನ್ಯಕಂ ॥೯೫॥

ವ॥ ಅಂತು ತನ್ನೊಡನೆ ತಪಕ್ಕೆ ತಜೆಸಂದ ಮೂನೂರ್ವರರಸು ಮಕ್ಕಳ್ವೆರಸರಮನೆಯಂ ಪೊರಮಟ್ಟು ರಾಜಮಾರ್ಗ್ಗಂಬಿಡಿದು ಜಿನಾಗಮಪ್ರಧಾನರಪ್ಪ ಶ್ರೀನಾಗದತ್ತಭಟ್ಟಾರಕರಿರ್ದ ಶ್ರೀಪರ್ವತಕ್ಕಭಿಮುಖನಾಗಿ ಪಯಣಂಬೋಗೆವೋಗೆ

ರೌದ್ರವನಚರವಿಕೀರ್ಣಂ
ವಿದ್ರುಮಶೋಭಾವಹಂ ವಿಷೋರಗವಿಷಮಂ
ಮುದ್ರಿಸಿ ದೆಸೆಯಂ ಲವಣಸ
ಮುದ್ರಮನನುಕರಿಸಿದತ್ತಗಣ್ಯಾರಣ್ಯಂ ॥೯೬॥

ವ॥ ಅಂತತಿಭಯಂಕರಾಕಾರಮಪ್ಪ ಕಾಂತಾರಮಂ ದಾಂಟಿ ನಡೆವ ರಾಜಸರ್ವಜ್ಞಂಗೆ ತೊಟ್ಟನೆ ಕಟ್ಟಿದಿರೊಳ್

ಬಹುರತ್ನಚ್ಛಾಯೆಯಿಂ ಚಿತ್ರಿಸಿ ನಿಖಿಳದಿಶಾಭಿತ್ತಿಯಂ ಚೂಳಿಕಾನೋ
ಕಹಶಾಖಾಹಸ್ತದಿಂ ಜಕ್ಕುಲಿಸಿ ರವಿರಥಾಶ್ವಗಳಂ ಗಂಡಶೈಲಾ
ಗ್ರಹಟತ್ಕೂಟಂಗಳಿಂದುದ್ಧರಿಸಿ ದಿವಮನೇಂ ಪೆಂಪುವೆತ್ತತ್ತೊ ಭೂಭೃ
ನ್ನಹಿತಂ ಶ್ರೀಪರ್ವತಂ ನಿರ್ಜ್ಝರಜಳಲಹರೀಲಾಸ್ಯಮಾಂಗಲ್ಯರಂಗಂ ॥೧೯೭॥

ದಿವಿಜರ ಮಾಳ್ಪ ಪೂಜೆಗಳೆ ದೇವಕುಜಂಗಳ ಪುಷ್ಪಮಾಳಿಕಾ
ನಿವಹಮೆ ಬೀಣೆಯಂ ಮಿಡಿವ ಬಂಚಮನೋತ್ತುವ ಡಕ್ಕೆವಾಜಿಪಾ
ಡುವ ಬಗೆಮುಟ್ಟೆ ಪಾಡುವವರಗ್ಗದ ದೇವರೆ ತದ್ಗಿರೀಂದ್ರದಾ
ದಿವಿಜವಿಮಾನದಂತೆ ಬಳಸಿರ್ದ ವಿಶಾಳಜಿನಾಲಯಂಗಳೊಳ್ ॥೧೯೮॥

ವ॥ ಅಂತನಂತಜಿನಭವನಪಾವನಮಪ್ಪ ಗಿರಿದರೀಪ್ರದೇಶಮನೆಯ್ದೆವ[ಂದು]

ಕ್ಷತ್ರಕುಳಪರಿವೃತಂ ನ
ಕ್ಷತ್ರಕುಳಂ ಬೆರಸು ಮೇರುಗಿರಿಯಂ ಬಲಗೊ
ಳ್ವತ್ರಿತನೂಭವನಂತೆ ಪ
ವಿತ್ರಜಿನಾಲಯಮನವನಿಪತಿ ಬಲಗೊಂಡಂ ॥೧೯೯॥

ಜನಪಂ ಪ್ರದಕ್ಷಿಣಂಗೆ
ಯ್ದು ನಿಟಿಳತಟಘಟಿತಕರಪುಟಂ ಭಕ್ತಿಭರಾ
ವನತನಪವರ್ಗಲಕ್ಷ್ಮಿಯ
ಮನಮಂ ಪುಗುವಂತೆ ಚೈತ್ಯಗೃಹಮಂ ಪೊಕ್ಕಂ ॥೨೦೦॥

ವ॥ ಅಂತು ಪೊಕ್ಕು ಸಕಳಭುವನಪ್ರಭುವಿಗಭಿಮುಖನಾಗಿ

ಜಯ ಜಿತವೃಜಿನ ಜಿನೇಶ್ವರ
ದಯಾನದೀಪುಳಿನರಾಜಹಂಸಭವಾಂಭೋ

ಧಿಯ ತಡಿಯನೆಯ್ದಿಸೆನ್ನಂ
ನಯನಿಕ್ಷೇಪಪ್ರಮಾಣಮಾತ್ರದಿನರ್ಹಾ ॥೨೦೧॥

ನೇವಾಳಮೆಂದು ಕೆಲಬರ್
ಪಾವಂ ಪಿಡಿವಂತೆ ದೇವ ನೀನಲ್ಲದರಂ
ದೇವರಿವರೆಂದು ಪಿಡಿದಿ
ನ್ನೇವಿಧಿವಟ್ಟಪರೋ ಮೋಹಮೂರ್ಛೆಯಿನರ್ಹಾ ॥೨೦೨॥

ನಿನಗೆ ರಸವೊಂದೆ ಶಾಂತಮೆ
ಜಿನೇಂದ್ರ ಮನಮಾರಸಾಂಬುನಿಧಿಯೊಳಗವಗಾ
ಹನಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆನಗರ್ಹಾ ॥೨೦೩॥

ಮಣಿಭೂಷಣಭರದಿಂ ತನು
ಕಿಣಮಪ್ಪುದದೇಕೆ ನಿನ್ನ ನಿರ್ಮಳಗುಣಭೂ
ಷಣಮಂ ದಯೆಗೆಯ್ ಪಡೆವೆಂ
ಪ್ರಣಯಮನಪವರ್ಗಲಕ್ಷ್ಮಿಗದಱಿಂದರ್ಹಾ ॥೨೦೪॥

ಸಿಂಗದ ಮಾರ್ದನಿ ಮದಮಾ
ತಂಗಮನಳಜಿಸುವವೊಲ್ ನಿಜಪ್ರತಿಬಿಂಬಂ
ಪಿಂಗದೆ ಮನದೊಳ್ನಿಂದಿರೆ
ಪಿಂಗಿಸುವುದು ಜನನಮರಣದುಃಖಮನರ್ಹಾ ॥೨೦೫॥

ಮೆಚ್ಚಿ ಗಡ ಮುಳಿಯೆ ಗಡ ಬಗೆ
ಬೆಚ್ಚಿರೆ ಬೇಱಾಗೆ ನಿನ್ನ ಪದದೊಳ್ಮನುಜಂ
ಗುಚ್ಚಗತಿ ನೀಚಗತಿ ಪಡೆ
ವಚ್ಚರಿ ಕಣ್ದೆಱೆವ ತೆಱನನಱಿಪೆನಗರ್ಹಾ ॥೨೦೬॥

ಜ್ಯಾಯಂಗೆ ನೀನೆ ವಲಮಾ
ದೇಯಂ ನೀನಲ್ಲದನ್ಯವಸ್ತುಗಳೆಲ್ಲಂ
ಹೇಯಂಗಳೆಂಬ ತತ್ತ್ವೋ
ಪಾಯಮನೆನಗೀವುದೇವೆನುಟಿದುವನರ್ಹಾ ॥೨೦೭॥

ನಿತ್ಯಸುಖಮಾತ್ಮರೂಪಮ
ನಿತ್ಯಸುಖಂ ಮೋಹರೂಪಮೆಂಬ ವಿವೇಕಂ
ಸತ್ಯಸ್ವರೂಪಮದಱೊಳ್
ಗತ್ಯಂತಾನುಭವವಿಭವಮಕ್ಕೆನಗರ್ಹಾ ॥೨೦೮॥

ವ॥ ಎಂದರ್ಹತ್ಪರಮೇಶ್ವರನಂ ನಿರ್ಭರಭಕ್ತಿಯಿಂ ಸ್ತುತಿಗೆಯ್ದು ಯೋಗಿ ಜನಪರಿವೃತನಾಗಿರ್ದ ಬಾಳಚಂದ್ರಾಪರನಾಮಧೇಯರಪ್ಪ ಶ್ರೀನಾಗಭಟ್ಟಾರಕರ ಪಾದಕಮಳಮನಮಳಕಮಳಂಗಳಿಂದರ್ಚಿಸಿ ವಿನಮಿತಶಿರಸ್ಸರೋಜನಾಗಿರ್ಪುದು[ಮ]ನಂತರಮವನೀಶ್ವರಾಗಮನವೃತ್ತಾಂತಮಂ ಮುನೀಶ್ವರಂ ಸವಿಸ್ತರಮಱಿದು

ಕಿಡುವಿಂದ್ರಿಯಸೌಖ್ಯಮನೇಂ
ಪಿಡಿವರೆ ನಿಮ್ಮಂದಿಗರ್ ವಿವೇಕಿಗಳೆಂದುಂ
ಕಿಡದ ಪರಮಾತ್ಮಸುಖಮನೆ
ಪಿಡಿವರದೇನೊನಲಿಯಂತೆ ಪಿಡಿವರೆ ಕಸಮಂ ॥೨೦೯॥

ವ॥ ಎಂಬುದುಮರಸಂ ಮುಕುಲಿತ ಕರಕಮಳನಾಗಿ

ಪರುಸಂ ತರ್ಪುದು ಪೊರ್ದೆ ಹೇಮಪದಮಂ ಲೋಹಕ್ಕೆ ನಿಮ್ಮೀಪದಾಂ
ಬುರುಹಂ ತರ್ಪುದು ದೂರದಿಂ ನೆನೆಯೆ ಮುಕ್ತಿಶ್ರೀಯನಾವಂಗವಂ
ತರವೇನೀಯೆರಡರ್ಕಮೆಂದೆಱಗಿದೆಂ ದೀಕ್ಷಾಪ್ರಸಾದಂ ಭವ
ಚ್ಚರಣಾಂಭೋಜಮದಕ್ಕೆ ಸಾಧಿಸುವೆನಾಂ ಕೈವಲ್ಯಮಾಂಗಲ್ಯಮಂ ॥೨೧೦॥

ವ॥ ಎಂದು ಬಿನ್ನವಿಸಿ ಮುನ್ನೂರ್ವರರಸುಮಕ್ಕಳ್ವೆರಸು ತತ್ತಪೋನಿಧಿಯ ಸನ್ನಿಧಿಯೊಳುತ್ತರಾಭಿಮುಖನಾಗಿ

ಕ್ರಮದಿಂ ಪಂಚಪದಂಗಳಂ ಸ್ಮರಿಯಿಸುತ್ತುಂ ಮೋಹವಲ್ಲೀಪ್ರರೋ
ಹಮನುತ್ಪಾಟಿಸುವಂತೆ ಕುಂತಳಸಹಸ್ರೋತ್ಪಾಟನಂಗೆಯ್ದು ಮು
ಖ್ಯಮನಾತ್ಯಂತಿಕಸೌಖ್ಯಮಂ ಪಡೆವಲಂಪಿಂದಾನೃಪಂ ಜಾತರೂ
ಪಮನುದ್ಧೂತವಿಳೇಪಮಂ ಜಿತಮನೋಜಾಟೋಪಮಂ ತಾಳ್ದಿದಂ ॥೨೧೧॥

ವ॥ ಮತ್ತಂ

ಮೂಲಗುಣೋತ್ತರಗುಣಮಂ
ಶೀಲಮನಳವಡಿಸಿ ಸಮಿತಿಯಂ ಗುಪ್ತಿಗಳಂ
ಪಾಲಿಸಿ ಪಂಚಮಹಾವ್ರತ
ಲೀಲೆಯಿನೆಸೆದಂ ಪ್ರಮಾದಮಿಲ್ಲೆನೆ ಮುನಿಪಂ ॥೨೧೨॥

ವ॥ ಅಂತು ಯಥಾಖ್ಯಾತಚಾರಿತ್ರಸಂಪತ್ತಿವೆತ್ತು ಚತುರ್ವಿಧಶುಕ್ಲಧ್ಯಾನ ಸಮಾಹಿತನು ಪಶಾಂತಗುಣಸ್ಥಾನದೊಳ್ ನಿಂದೊಂದು ತಿಂಗಳ್ಗೆ

ಅನಶನದಿಂ ಸಮಾಧಿ ಬಗೆದಂತಿರೆ ಕೂಡೆ ಶರೀರಭಾರಮಂ
ಮುನಿಪತಿ ಬಿಟ್ಟು ರತ್ನಸದೃಶಂ ಮಱುಮೆಯ್ಪುಳುಕಿಂ ಪಳಚ್ಚನ
ಪ್ಪಿನಮಹಮಿಂದ್ರನಾದನುಪರಾಜಿತನಾಮವಿಮಾನರತ್ನದೊಳ್
ತನಗಳವಟ್ಟು ತೋಱೆ ಸಹಜಾಭರಣಾಂಬರಪುಷ್ಪಮಾಲೆಗಳ್ ॥೨೧೩॥

ವ॥ ಅಲ್ಲಿ

ಹಿಮಕರಬಿಂಬದಿಂ ಕಡೆದುದೋ ಪಳುಕಿಂ ಪಡೆದತ್ತೊ ಪೂಗಳಿಂ
ಸಮೆದುದೊ ಚಂದ್ರಕಾಂತಮಣಿಯಿಂ ಬೆಸಕೆಯ್ದುದೊ ಮೌಕ್ತಿಕಂಗಳಿಂ
ಸಮನಿಸಿದತ್ತೊ ಕೋಮಳಮೃಣಾಳಿಕೆಯಿಂ ಪರಿಪೂರ್ಣಮಾಯ್ತೊ ಪೇ
ಟಿಮಿದೆನೆ ಚೆಲ್ವುವೆತ್ತುದಹಮಿಂದ್ರನ ಪಾಂಡುರದೇಹಮಂಡಳಂ ॥೨೧೪॥

ಹರಿನೀಳಭೂಮಿಯೊಳ್ ಕ
ಪ್ಪುರವಳುಕಿನ ಲೆಪ್ಪದಂತೆ ತನು ನಯನಮನೋ
ಹರಮಾಗೆ ಜಗುನೆಯೊಳ್ ಸಂ
ಚರಿಸುವ ಹಂಸಂಬೊಲೆಸೆದನಮರೋತ್ತಂಸಂ ॥೨೧೫॥

ಪೊಸದ ಸೌರಭಂ ತವದ ಮೆಯ್ಸಿರಿ ಬಾಡದ ದಾಮಮುಟ್ಟೊಡಂ
ಮಾಸದ ಸೀರೆ ಧಾತುಮಳಮಿಲ್ಲದೊಡಲ್ ಪರಿಪೂರ್ಣಯೌವನಂ
ಲೇಸೆನಿಸಿರ್ದ ರೂಪು ಶುಭಲಕ್ಷಣಮೆಂಬಿವನಪ್ಪುಕೆಯ್ದನಾ
ಯಾಸದಿನೀಸಿದಂ ಕಡೆವರಂ ದಿವಿಜಂ ಪರಮಾಯುರಬ್ಧಿಯಂ ॥೨೧೬॥

❖❖

*

ಉತ್ತರ ಭಾಗ

ದಿವದಿಂದಾ ದಿವಿಜಂ ವೈ
ಶ್ರವಣಚರಂ ಚರಮದೇಹಮಂ ಕೈಕೊಳಲೆಂ
ದವತರಿಸಿದಪಂ ಧರೆಗೆಂ
ದವಧಿಯಿನಱಿದೊಸೆದನಂದು ಸೌಧರ್ಮೇಂದ್ರಂ ॥೨೧೭॥

ವ॥ ಅಂತವಧಿವಿಧಾನದಿಂ ಸುರಪ್ರಧಾನನಱಿದು ಧನಪ್ರಧಾನನುಮರಗಣಿಕಾಪ್ರಧಾನೆಯರುಮಂ ಬರಿಸಿ ರೈವೃಷ್ಟಿಯಂ ಮಾಡಿಮೆಂದು ಬೇಱಿವೇಱಿ ನಿಯಮಿಸುವುದುಮಂಗವಿಷಯವಲ್ಲಭನುಂ ಮಿಥಿಳಾಪುರಂಧ್ರೀವಿಳೋಚನಚಕೋರತಾರಾವಲ್ಲಭನು ಮಿಕ್ಷ್ವಾಕುಕುಲಕಮಳಿನೀಕಳಹಂಸನುಂ ಚಿತ್ತಭವನೋತ್ತಂಭಿತ ಪ್ರಭಾವತೀ ಮಹಾದೇವೀಕುಚಕುಂಭನುಮಪ್ಪ ಕುಂಭಮಹಾರಾಜ ಭವನದೊಳ್ ಗರ್ಭಾವತರಣ ಕಲ್ಯಾಣಮಱುದಿಂಗಳೆನೆ

ವಸುಧಾರೆ ಕಱಿಯೆ ಧರಣಿಗೆ
ವಸುಮತಿವೆಸಱಾಯ್ತು ರತ್ನವೃಷ್ಟಿಗಳಿಂ ಚಿ
ತ್ರಿಸೆ ಚಿತ್ರಮಾದುದೆನೆ ಬ
ಣ್ಣಿಸರಾರ್ ಗರ್ಭಾವತರಣಮಂ ಜಿನಪತಿಯಾ ॥೨೧೮॥

ವ॥ ಅಂತು ಕಱಿವ ಕನಕವರ್ಷದೊಡನೆ ಮನಸಿಜವಶೀಕರಣಶರವರ್ಷಮೆನಿಸಿ

ಒದವಿದ ನೂಲ ತೊಂಗಲುಲಿ ನೇವುರದಿಂಚರಮುಣ್ಮಿ ಪೊಣ್ಮೆ ರಾ
ಗದ ತೊಱಿ ಮೇಱಿದಪ್ಪಿ ಕವಿದತ್ತೆನೆ ಭೂಷಣಕಾಂತಿಯುಂ ಕಟಾ
ಕ್ಷದ ಪೊಳೆಪುಂ ತನುಪ್ರಭೆಯುಮಾವರಿಪನ್ನೆವರಂ ಪ್ರಭಾವತೀ
ಸುದತಿಯ ರಾಜಮಂದಿರಮನೇಂ ಪುಗುತಂದರೊ ದೇವಕಾಂತೆಯರ್ ॥೨೧೯॥

ವ॥ ಅಂತು [ಬರ್ಪುದುಂ]

ಆನತಸುರಕಾಂತಾಸಂ
ತಾನದ ಕುಂತಳದ ಚೆನ್ನ ಪೂಗಳ ಪೊಳೆಪಿಂ
ದೇನೆಸೆದುದೊ ವೇದಿಕೆ ತಾ
ರಾನಿಕರಂ ಪುದಿಯೆ ಪೊಳೆವ ಗಗನಸ್ಥಳಿವೋಲ್ ॥೨೨೦॥

ತೊಳಗುವವತಂಸಮುಕ್ತಾ
ಫಲಕಿರಣದೊಳಮರಕಾಮಿನೀಸ್ಮಿತನಯನಂ
ಪೊಳೆದುವು ಪೊಸವೆಳ್ದಿಂಗಳ
ಬಳಸಿಂಗೊಳಗಾದ ಚಳಚಕೋರಂಗಳವೋಲ್ ॥೨೨೧॥

ಬಗೆಗೊಳಿಸಲ್ ಜಿನಾಂಬಿಕೆಯನೀತೆಱದಿಂ ನೆಱೆದಿತ್ತು ಮಜ್ಜನಂ
ಬುಗಿಸುವ ದೇವಪೂಜೆಗೆಡೆಮಾಡುವ ಸಗ್ಗದಲುಳ್ಳ ಬಣ್ಣವ
ಣ್ಣಿಗೆಗಳ ವಸ್ತ್ರಮಂ ಕುಡುವ ಕಲ್ಪಕುಜಂಗಳ ಮಾಲೆವೂವನೋ
ಲಗಿಸುವ ಬೋನಮೆತ್ತುವಗಲೆತ್ತುವ ದೇವವಿಳಾಸಿನೀಜನಂ ॥೨೨೨॥

ವ॥ ಅಂತು ಸುರಸುಂದರೀಸಂದೋಹಂ ಪ್ರಭಾವತೀದೇವಿಯ[ನೋ]ಲಗಿಸುವಲ್ಲಿ ಕೆಲರ್ಕೆಂದಾವರೆಯನೆಳವಿಸಿಲೆಳಸುವಂದಮಾಗೆ ಲಾಕ್ಷಾರಸದಿನಡಿಯೂಡಿಯುಂ ಚರಣ ನಖಚಂದ್ರಮಾಲೆಗೆ ನಕ್ಷತ್ರಮಾಲೆಯನೋಲಗಿಸುವಂತೆ ಮುಕ್ತಾಫಲನೂಪುರಮಂ ತುಡಿಸಿಯುಂ ಪುಳಿನವಲಯಮಂ ಪೊಂದಾವರೆಯ ಬಳ್ಳಿ ಬಳಸಿದಂತೆ ನಿತಂಬವಲಯದೊಳ್ ಮಣಿಮೇಖಳೆಯಂ ತೊಡರ್ಚಿಯುಂ ಮದನ ಮದರದನೀರದನದೊಳ್ ಕೀರ್ತಿಮುಖಮಂ ಕೀಲಿಸುವಂತೆ ಶತಪತ್ರಭಂಗಮಂ ತುಂಗಸ್ತನಭಾಗದೊಳ್ ಸಂಗಳಿಸಿಯುಂ ಪೀವರಪಯೋಧರ ಮಂಡಳಕ್ಕೆ ಪರಿವೇಷಮಂ ಪಡೆವಂತೆ ಪಂಚರತ್ನದ ಬಣ್ಣಸರಮಂ ಕೊರಲೊಳಿಕ್ಕಿಯುಂ ಬಾಹಾಲತೆಯ ಬಿಳಲಂತೆ ರತ್ನಕಾಂತಿ ಕವಲ್ವರಿವಿನಮಂಗದಮನಳವಡಿಸಿಯುಂ ಸಿರಿಸದ ಬಾಸಿಗಮಂ ಭೃಂಗಮಾಲೆ ಬಳಸಿದಂತೆ ನಳಿತೋಳೊಳ್ ನೀಲದ ಪಿಂಡುಗಂಕಣಮನೇಱಿಸಿಯುಂ ನನೆಗಣೆಗೆ ಗಱಿಗಟ್ಟುವಂತಂಗುಳಿಯಂ ರತ್ನಮುದ್ರಿಕೆಯಿಂ ಮುದ್ರಿಸಿಯುಂ ಸ್ಮರವಶೀಕರಣಯಂತ್ರಮಂ ಬರೆವಂತೆ ಕಪೋಳಫಳಕದೊಳ್ ಮಕರಿಕಾಪತ್ರಮಂ ಬರೆದುಂ ಪೊಸಮಸೆಯ ಪೂಗಣೆಗೆ ಪೊಗರಂ ಪಡೆವಂತೆ ನಗೆಗಣ್ಣೊಳಂಜನಮನಣ್ಕೆಗೆಯ್ದುಂ ಕರ್ಣಾಂತ ವಿಶ್ರಾಂತವಿಳೋಚನದೊಳ್ಪಡಿಯಿಟ್ಟು ನೋಟ್ಪಂತೆ ಕಿವಿಯೊಳವತಂಸೋತ್ಪಳಮಂ ತೊಡರ್ಚಿಯುಂ

ಉಗುರ್ಗಳ ಕಾಂತಿಯಿಂದಳಕವಲ್ಲಿಗೆ ನೀರ್ದಳಿವಂತೆ ಮೆಲ್ಲಮೆ
ಲ್ಲಗೆ ತಲೆವಿಕ್ಕಿ ಚಂದ್ರಕಿರಣಂಗಳನಾಗಳೆ ರಾಹು ನುಂಗಿ ಮ
ತ್ತುಗಳ್ದುಪುದೆಂಬಿನಂ ಮುಡಿಸಿ ಮಾಲೆಯ ಸೋರ್ಮುಡಿಯಂ ಲಲಾಟದೊಳ್
ಮೃಗಮದಬಿಂದುವಂ ಪೆಱಗೆ ನುಣ್ಗಜೆಯಂ ಪಡೆವಂತೆ ತಿರ್ದಿದರ್ ॥೨೨೩॥

ವ॥ ಅಂತಚ್ಚರಸಿಯರಿಚ್ಚೆಯಱಿದೋಲಗಿಸುತಿರ್ಪಿನಮೊಂದು ದಿವಸಮಾ ಪ್ರಭಾವತೀ ಮಹಾದೇವಿ ಚತುರ್ಥಸ್ನಾನಾನಂತರಂ

ಮಂಗಳವಸ್ತುಗಳಿಂ ದೇ
ವಾಂಗನೆಯರ್ಮಾಡೆ ಗರ್ಭಶೋಧನಮಂ ಭೂ
ಪಾಂಗನೆ ಕಾಳಿಂದೀ ನಿ
ಸ್ಸಂಗೆಯನಾಕಾಶಗಂಗೆಯ ಗೆಲೆವಂದಳ್ ॥೨೨೪॥

ಸೊಗಯಿಸೆ ಕೊಂಡ ಬೆಳ್ಪಸದನಂ ಸುಲಿಪಲ್ಗಳ ಕಾಂತಿಯುಂ ಮುಗು
ಳ್ನಗೆಯ ವಿಳಾಸಮುಂ ತೊಡೆದ ಚಂದನಮುಂ ಕಡೆಗಣ್ಣ ಬಣ್ಣಮುಂ
ದುಗುಲಮುಮಿಕ್ಕಿದಯ್ಸರದ ತಣ್ಬೆಳಗುಂ ತಡವಾದುವೆಂದವಂ
ನಗುವವೊಲಾದುದಾ ಸತಿಯ ಸೂಡಿವ ಮಲ್ಲಿಗೆಯಚ್ಚವಾಸಿಗಂ ॥೨೨೫॥

ವ॥ ಅಂತು ಬೆಳ್ಪಸದನಂಗೆಯ್ದು

ಅಂಚೆಯ ತುಪ್ಪುಳಂಚೆಯ ದುಕೂಲಪರಿಚ್ಛದಚಾರುತಳ್ಪದಿಂ
ಕಾಂಚನ ಮಂಚದಿಂ ಮರಕತಪ್ರತಿಪಾದುಕದಿಂ ಮದಾಳಿಮಾ
ಳಾಂಚಿತಧೂಪಧೂಮಲತೆಯಿಂ ಘನಸಾರಸುಗಂಧಶುಕ್ತಿಕಾ
ಸಂಚಯದಿಂ ಮನಂಗೊಳಿಪ ಸಜ್ಜೆಗೆವಂದಳದೊಂದು ಲೀಲೆಯಿಂ ॥೨೨೬॥

ವ॥ ಆಗಳಾ ಸಜ್ಜೆವನೆಯೊಳಗೆ

ಪರಿದುದಿಲ್ಲರಸಿಯ ಕುರುಳ ಕಟ್ಟಿಲೆ ಬೇಱೆ
ಪರಿಭವಮಧರಮಣಿಯಿಂದಮಾಯ್ತೆಂದು
ಮರವಟ್ಟಂತಾಯ್ತು ಮಣಿದೀಪ ॥೨೨೭॥

ವ॥ ಅಂತಿರ್ಪುದುಂ ಕುಂಭಮಹಾರಾಜಂ ಸಜ್ಜೆವನೆಗೆ ಬಿಜಯಂಗೆಯ್ದು ಬೆಳ್ದಸದನದ ಪೊಸದೇಸೆಯಿಂ ಕಪ್ಪುರದ ಲೆಪ್ಪದ ಪೆಣ್ಣನನುಕರಿಸಿ ಸಂಭ್ರಮದಿನಿದಿರೇಳ್ವ ನಲ್ಲಳ ನಗೆಮೊಗದಿನೊಸರ್ವ ಲಜ್ಜಾರಸದಿಂ ನಿಜಮನೋರಾಗಲತೆಯನಂಕುರಿತಂ ಮಾಡಿ ಪಾಲ್ಗಡಲ ಮಡುವಿನಂತಿರ್ದ ತಳ್ಪಮಂ ರಾಕಾಶಶಾಂಕನಂತಳಂಕರಿಸಿ ಚತುರಪರಿಹಾಸವಚನಚಂದ್ರಿಕೆಯಿಂ ದೇವಿಯ ಮನಃಕುಮುದಿನಿಯನಲರ್ಚಿ ನಿರಂತರೋತ್ಸವಮನಪ್ಪುಕೆಯ್ದಿರೆ

ಬೆಳಗಪ್ಪ ಜಾವದೊಳ್ ಸತಿ
ವಿಳಾಸವತಿ ತೀರ್ಥನಾಥಜನ್ಮೋತ್ಸವಮಂ
ಗಳಕಾರಣಮಂ ಸ್ವಪ್ನಾ
ವಳಿಯಂ ಪದಿನಾಱುಮಂ ಪ್ರಭಾವತಿ ಕಂಡಳ್ ॥೨೨೮॥

ವ॥ ತದನಂತರಂ

ಸಾರಸನಾದದಿಂದುಲಿದು ಚಂಚಳ ಕಾಂಚನಜಾಳಮಾರ್ಗದಿಂ
ಭೋರೆನೆ ಬಂದು ಸೋಂಕಿ ಸುಖನಿದ್ರೆಯನೆಟ್ಟಿದಿರೆಂದು ಸನ್ನೆಯಿಂ
ಬಾರಿಸುವಂತೆ ತೂಗೆ ತಲೆಯಂ ಸೊಡರ್ಗಳ್ ಸತಿಗೇಂ ಗೃಹಾಬ್ಜಿನೀ
ಸ್ಮೇರಸಖಂ ಪ್ರಭಾತಪವನಂ ಪಡೆದತ್ತೊ ಸುಖಪ್ರಬೋಧಮಂ ॥೨೨೯॥

ವ॥ ಅಂತುಪ್ಪವಡಿಸಿ ನಿತ್ಯನಿಯಮಂಗಳಂ ನಿರ್ವರ್ತಿಸಿ ಸಂತೋಷಮನಪ್ಪುಕೆಯ್ದಿರ್ಪಿನಂ ವೈಶ್ರವಣಚರನಪ್ಪ ಅಪರಾಜಿತವಿಮಾನದಹಮಿಂದ್ರಂ ಚೈತ್ರಶುದ್ಧ ಪ್ರತಿಪದಶ್ವಿನೀನಕ್ಷತ್ರದೊಳ್

ಕಮಳದೆಸೆಟೆಳ್ವೊರೆಯಿಂ ನುಸು
ಳ್ದು ಮೃಣಾಳೀಗರ್ಭದೊಳಗೆ ನೆಲಸುವ ಬಾಳಾ
ರ್ಕಮಯೂಖಮೆಂಬಿನಂ ಮುಖ
ಕಮಳದಿನಾತ್ಮೀಯಗರ್ಭದೊಳ್ ನೆಲಸುವುದುಂ ॥೨೩೦॥

ಗುರುಭರಮಂ ಪಡೆಯದವೋಲ್
ಪರಿಮಳಮತಿಬಹಳಮಾಗಿ ಮಂಜರಿಗೆ ಜಗ
ದ್ಗುರು ಗರ್ಭದೊಳಿರ್ದುಂ ಗುರು
ಭರಖೇದಮನಿತ್ತನಿಲ್ಲ ಗರ್ಭಿಣಿಗಿನಿಸಂ ॥೨೩೧॥

ವ॥ ಅಂತು ನವಮಾಸಂ ಪರಿಪೂರ್ಣಮಾಗೆ

ಕುಸುಮಾಸಾರಪುರಸ್ಸರಂ ಸುರಸರಿದ್ವೀಚೀನಟಂ ತಣ್ಣೆಲರ್
ಕುಸಿಯುತ್ತುಂ ಬರೆ ಪೊತ್ತು ದೇವಪಟಹಪ್ರಧ್ವಾನಮಂ ಮಾರ್ಗಶ್ರೀ
ರ್ಷಸಿತೈಕಾದಶಿಯಂದಿನಶ್ವಿನಿಯೊಳಾ ಸ್ತ್ರೀರತ್ನಮಾಚಾರ ಶೀ
ಲಸರಃಪದ್ಮಿನಿ ಮಲ್ಲಿನಾಥಜಿನನಂ ಪೆತ್ತಳ್ ಜಗನ್ನಾಥನಂ ॥೨೩೨॥

ವ॥ ಆ ಸಮಯದೊಳ್

ಸಿರಿಯ ನೆಲೆಯಂತೆ ವಸುಧೆ ನೀರಜಮಾಯ್ತು ತಿಳಿದುದಂದನುನಯಂಬಡೆದರಂತೆ
ಸರಸಿಜಾಕರಂ ದಕ್ಷಿಣಾವರ್ತಮಾಗೆಸೆದುದು ಶಿಖಿ ಪಾಂಚಜನ್ಯದಂತೆ
ಸುರಭಿಯಾಯ್ತೆಲರಿಂದ್ರನ ಪಯದಂತೆ ನಭಮಪಘನಮಾಯ್ತು ತನುವಿನಂತೆ
ಪರಮಜಿನನುದಯದೊಳಿಂತು ತಳೆದುದಪೂರ್ವವಿಭೂತಿಯಂ ಪಂಚಭೂತಂ ॥೨೩೩॥

ಉದಯಿಪುದುಂ ತ್ರಿಲೋಕತಿಳಕಂ ಗೃಹದೇವತೆಯರ್ ಪ್ರಸನ್ನವೇ
ಷದಿನೊಸೆದಾಡುವಂತೆ ಮಣಿಭಿತ್ತಿಗಳಂ ಮಣಿಕುಟ್ಟಿಮಂಗಳಂ
ಪುದಿದು ಮನಕ್ಕೆ ವಿಸ್ಮಯಮನಿತ್ತುವು ನೃತ್ಯರಸಾಮೃತಪ್ರವಾ
ಹದೊಳವಗಾಹಮಿರ್ದ ಗಣಿಕಾಪ್ರಭೆ[ಯಾ] ಪ್ರತಿಬಿಂಬಲಕ್ಷ್ಮಿಗಳ್ ॥೨೩೪॥

ದೆಸೆಬಿದ್ದಂ ಕುಣಿವಂಗನಾಜನದ ಕಾಂಚೀಘಂಟಿಕಾಘೋಷಮೊಂ
ದೆಸೆಯೊಳ್ ಮಂಗಳಗೀತಮೊಂದೆಸೆಯೊಳಾಶೀರ್ವಾದನಾದಂಗಳೊಂ
ದೆಸೆಯೊಳ್ ಮಂಗಳಪಾಠಕಸ್ತವನ ಮಾಂಗಲ್ಯಾನಕಧ್ವಾನಮೊಂ
ದೆಸೆಯೊಳ್ ಘೂರ್ಣಿಸೆ ಪೂರ್ಣಮಾಯ್ತು ಜಿನಜನ್ಮೋತ್ಸಾಹ ಕೋಳಾಹಳಂ ॥೨೩೫॥

ದಿವಿಜರ್ ಸೂಸದೆ ಕೊಳ್ವ ಪೂಮಟೆಗೆ ದೇವರ್ಪೊಯ್ಯದೋರಂತೆ ಪೊ
ಣ್ಮುವ ಭೇರೀನಿನದಕ್ಕೆ ನಾಕವಿಭವಶ್ರೀ ವಿಸ್ಮಯಂಬಟ್ಟು ತೂ
ಗುವವೋಲ್ತನ್ನ ಕಿರೀಟಮಂ ನಡುಗೆ ತನ್ನಿರ್ದಾಸನಂ ವಾಸವಂ
ಗವಧಿಜ್ಞಾನಮನಂತರಂ ತಿಳಿಪಿದತ್ತೆತ್ತಂ ಜಿನೋತ್ಪತ್ತಿಯಂ ॥೨೩೬॥

ಪತ್ತೊಂಬತ್ತನೆಯ ಜಿನೋ
ತ್ಪತ್ತಿಯನಱಿದಿರ್ದು ಮಣಿಮಯಾಸನದಿಂ ದೇ
ವೋತ್ತಂಸಂ ಕರಕಮಳಮ
ನುತ್ತಂಸಂ ಮಾಡಿ ಪಲವು ಸುಟ್ಟ್‌ಪೊಡಮಟ್ಟಂ ॥೨೩೭॥

ವ॥ ಅಂತು ಪೊಡಮಟ್ಟು ಜನ್ಮಾಭಿಷವಣಕಲ್ಯಾಣೋತ್ಸುಕಚಿತ್ತನಪ್ಪುದು [ಮಾಗಳ್]

ಗಗನಂ ತೆಕ್ಕನೆ ತೀವೆ ಕಾಯಬಲದಿಂ ಶೇಷೋರಗಶ್ರೇಣಿ ಮೇ
ಗೊಗೆದಂತದ್ಭುತಮಾಗೆ ತನ್ನ ಪಲವುಂ ಕೈಗಳ್ ಮಹಾಮೇಘದೊ
ಡ್ಡುಗಳೆಂಬತಿರೆ ಕರ್ಣತಾಳವಿಸರಂ ಕೋಟ್ಕಳ್ ಜಯಶ್ರೀವಿಳಾ
ಸಗೃಹಸ್ತಂಭಶತಂಗಳಂತೊದವೆ ಬಂದತ್ತಭ್ರಮೂವಲ್ಲಭಂ ॥೨೩೮॥

ದಿವಿಜೇಂದ್ರೇಭಕ್ಕೆ ಮೂವತ್ತೆರಡೆ ಮೊಗಮವೋರೊಂದಱೊಳ್ ಕೋಟ್ಕಳೆಂಟೆಂ
ಟವಱೋಳ್ ಚೆಲ್ವಾದುವೋರೊಂದಲರ್ಗೊಳನವಱೊಳ್ ಪದ್ಮಿನೀಕಂದಮೋರೊಂ
ದವಱೊಳ್ ಪುಷ್ಪಾಳಿ ಮೂವತ್ತೆರಡವಱೆಸಟೊಂದಕ್ಕೆ ಮೂವತ್ತೆರಟ್ಟಿ
ಳ್ತುವು ಮೂವತ್ತಿರ್ವರೊಂದೊದೆಸಟ್ಗಿಳೊಳಮರಸ್ತ್ರೀಯರಾಡುತ್ತುಮಿರ್ಪರ್ ॥೨೩೯॥

ವ॥ ಅಂತಗುರ್ವುವಡೆದು ವಿಗುರ್ವಿಸಿದ ದಿವಿಜಗಜಮನೇಱೆ

ಪಲವುಂ ರತ್ನಾತಪತ್ರಂ ಪುದಿಯೆ ಚಮರಜಶ್ರೇಣಿ ತಟ್ಪೊಯ್ಯೆ ಚಿತ್ರಾಂ
ಚಳಚಂಚತ್ಕೇತನಂ ಕಣ್ಗೊಳಿಸೆ ವಿವಿಧತೂರ್ಯಸ್ವನಂ ಪೊಣ್ಮೆ ತನ್ನಿ
ರ್ಕೆಲದೊಳ್ ನಾನಾಮರೇಂದ್ರರ್ಸೊಗಯಿಸೆ ಗಗನಂ ಸಾಲದೆಂಬನ್ನಮೇಟುಂ
ಬಲವೇಟುಂ ವಾರ್ಧಿ ಬರ್ಪಂತೊಡವರೆ ನಡೆಗೊಂಡಂ ಶಚೀಜೀವಿತೇಶಂ ॥೨೪೦॥

ಅಮರಸ್ತ್ರೀಯರ ವಕ್ತ್ರದಿಂ ಶಶಿಮಯಂ ಧಮ್ಮಿಲ್ಲದಿಂ ಭೃಂಗಜಾ
ಳಮಯಂ ಲೋಚನದಿಂ ನಮೋತ್ಪಳಮಯಂ ಭ್ರೂಲೇಖೆಯಿಂದಿಕ್ಷುಚಾ
ಪಮಯಂ ಕೆಂದಳದಿಂ ಸರೋರುಹಮಯಂ ವಕ್ಷೋಜದಿಂ ಚಕ್ರವಾ
ಕಮಯಂ ವ್ಯೋಮಮೆನಲ್ ಸಮರ್ಪಿಸಿದುದಾ ದೇವಾಗಮಂ ರಾಗಮಂ ॥೨೪೧॥

ತೊನೆಯೆ ಕುರುಳ್ ಕದಕ್ಕದಿಸೆ ತುಂಗಕುಚಂ ತೆರೆಸುತ್ತೆ ಲೋಲಲೋ
ಚನರುಚಿ ಜೋಲೆ ಮೇಲುದ ಸಡಿಲ್ತರೆ ನೂಲ್ ನಿಜೆ ಸೂಸೆ ಶಕ್ರಲೋ
ಚನಮನಿತುಂ ಕೃತಾರ್ಥಮೆನೆ ಸಂಗಡದಿಂ ಗೆಡೆವಚ್ಚುರಾಗಮ
ರ್ಚನಮೆನೆ ಬಾನ ಮೇಲೆ ಬಯಲಂಗಣಮಾಡಿದುದಪ್ಸರೋಗಣಂ ॥೨೪೨॥

ನಗೆಮೊಗಮಲ್ಲವು ಶೀತಾಂ
ಶುಗಳೆನೆ ತುಡುಗೆಗಳ ತೋಜಿಮುತ್ತಲ್ಲವು ತಾ
ರಗೆಗಳೆನೆ ನಯನಚಂದ್ರಿಕೆ
ದಿಗಂತಮಂ ಬಳಸೆ ಬಂದರಮರಾಂಗನೆಯರ್ ॥೨೪೩॥

ಕಳವೀಣಾವೇಣುನಾದಂ ಪುದಿಯೆ ಗಗನಮಂ ದೇವಿಯರ್ ವಿಭ್ರಮಂ ಕ
ಣ್ಗೊಳೆ ದಿವ್ಯಾಮೋದಮಾಶಾವಳಯಮನಿತುಮಂ ತೀವೆ ದೇವಾಂಗವಸ್ತ್ರಂ
ಗಳ ಬಣ್ಣಂ ವ್ಯೋಮಮಂ ಚಿತ್ರಿಸೆ ಮಣಿಮಯಭೂಷಾಂಶುವಿಂದಂ ನಭೋಮಂ
ಡಳಮೆಲ್ಲಂ ಶಕ್ರಚಾಪಂಗಳ ಬಳಗದೆ ಕೇರ್ಗಟ್ಟಿದಂತಾಗೆ ಬಂದರ್ ॥೨೪೪॥

ವ॥ ಅಂತು ಮಹಾಮಹಿಮೆಯಿಂ ಸೌಧಮೇಂದ್ರಂ ಪವನಪಥದಿಂ ಮಿಥಿಳಾಪುರ ಕ್ಕವತರಿಸುವುದು [ಮಾಗಳಾತನ] ಬೆಸದಿಂ ಶಚೀಮಹಾದೇವಿ ಕತಿಪಯಪರಿವಾರದೇವೀಪರೀತೆಯಾಗಿ

ಪುಗುತಂದಳ್ ಪೆರ್ದುಡುಗೆಯ
ಸೊಗಯಿಪ ಮಾಣಿಕದ ಪೊಳೆಪು ಬಾಳಾತಪಮಂ
ನಗುವಿನೆಗಂ ದಿವಸಶ್ರೀ
ಪುಗುತರ್ಪವೊಲಾ ಪ್ರಸೂತಿಕಾ ಮಂದಿರಮಂ ॥೨೪೫॥

ವ॥ ಅಂತು ಪೊಕ್ಕು ತನ್ನಿಕೇತನಮಂ ನಿದ್ರಾಮುದ್ರಿತಂ ಮಾಡಿ ಮೂಱುಸೂೞ್ ಬಲಗೊಂಡು ಮನದೆಱಕದಿನೆಱಗಿ ಕಾಂಚನಮಂಚದೊಳ್ ಮಾಯಾಶಿಶುವನಿರಿಸಿ

ಉದಯಾಚಳಮೇಖಳೆ ತಾ
ಳ್ದಿದವೋಲುದಿತೇಂದುಬಿಂಬಮಂ ಶಿಶುವಂ ತಾ
ಳ್ದಿದಳಿಂದ್ರಾಣಿ ಮನೋರಾ
ಗದ ಪೆರ್ಚಿಂ ಪೆರ್ಚೆ ಪುಳಕಕಳಿಕಾಜಾಳಂ ॥೨೪೬॥

ವ॥ ಅಂತು [ತಾಳ್ದಿ] ರಾಜಸದನಮಂ ಪೊರಮಟ್ಟು

ಚಿಂತಿತಫಳದಾಯಕಮಂ
ಚಿಂತಾಮಣಿಯಂ ಕುಳಾಧಿದೇವತೆ ತಂದೀ
ವಂತೆ ಶುಚಿಸ್ವಾಂತೆ ಶಚೀ
ಕಾಂತೆ ಜಿನಾರ್ಭಕನನಿತ್ತಳಿಂದ್ರನ ಕೈಯೊಳ್ ॥೨೪೭॥

ವ॥ ಅಂತೀವುದುಂ ವಿನಮಿತಮಸ್ತಕನಾಗಿ ಸೌಧರ್ಮೇಂದ್ರಂ ದಿವ್ಯವಸನಾಳಂಕೃತಂ ನಿಜೋತ್ಸಂಗದೊಳ್ಕುಳ್ಳಿರಿಸೆ ಆ ಪ್ರಸ್ತಾವದೊಳ್

ಅಮರೀಮಂಗಳಗೀತದೊಳ್ಪುದಿದ ವೀಣಾವೇಣುನಾದಂಗಳಿಂ
ದಮರ್ದಂ ಸಿಂಪಿಸುವಂತೆ ನರ್ತಿಪ ಸುರಸ್ತ್ರೀಸಸ್ಮಿತಾಪಾಂಗದಿಂ
ಕುಮುದಂಗಳ್ ನೆಲೆವೆರ್ಚುವಂತೆಸೆಯೆ ಸೌಧರ್ಮೇಂದ್ರನಿಂದ್ರಾಚಳೇಂ
ದ್ರಮುಖಂ ನೂಂಕಿದನದ್ಭುತಕ್ಕೆ ಮೊಗವಿತ್ತೈರಾವತೇಭೇಂದ್ರಮಂ ॥೨೪೮॥

ಗೋತ್ರನಗಂ ವಿಕಸಿತಶತ
ಪತ್ರವನಂಬೆರಸು ನೆಗೆವವೊಲ್ ನೆಗೆದತ್ತಾ
ಚಿತ್ರಗಜೇಂದ್ರಂ ಚಿತ್ರಿಸೆ
ಸುತ್ರಾಮಸಹಸ್ರ ಲೋಚನಪ್ರಭೆ ನಭಮಂ ॥೨೪೯॥

ಸುರವನಿತಾವಿಳಾಸಗಮನಂ ಸುರಸುಂದರಮಂದಯಾನಮಂ
ಬರದೊಳುಪಾಶ್ರಯಂಬಡೆಯದೆಂದು ಮನಂದರೆ ಶಕ್ರವಿಕ್ರಿಯಾ
ವಿರಚಿತ ಚಂದ್ರಕಾಂತವಿಪುಳೋಪಳವೀಧಿನಭೋವಿಭಾಗದೊಳ್
ಸುರನದಿ ಬೇಱದೊಂದು ಪರಿವಂತೆವೊಲಾಯ್ತು ಸುರಾಚಳಂಬರಂ ॥೨೫೦॥

ವ॥ ಅಂತೆಡೆವಱಿಯದಮರವಾಹಿನಿಯಂತಮರವಾಹಿನಿ ಗಗನಮಾರ್ಗಂಬಿಡಿದು ನಡೆವೆಡೆಯೊಳ್

ವಿದಳಚ್ಚಂಪಕವರ್ಣಮಾದ ಶಿಖಿಕಂಠಚ್ಛಾಯೆವೆತ್ತಿಂದ್ರಚಾ
ಪದ ರೂಪಂ ತಳೆದಭ್ರಕಭ್ರಮೆಯನಾಳ್ದುತ್ತಾಟಳಪ್ರಾಂಶು ತ

ಟ್ಟಿ ದಳತ್ಕಿಂಶುಕಶೋಣಮಪ್ಪ ಸಮಸದ್ವರ್ಣಪ್ರದೇಶಂಗಳಿಂ
ದಿದೆ ಚೆಲ್ವಾದುದು ಮಂದರಾದ್ರಿ ಮದನಂ ವರ್ಣಕ್ರಮಂ ಗೆಯ್ದವೊಲ್ ॥೨೫೧॥

ಕುಡೆ ವೈಡೂರ್ಯಮರೀಚಿಜಾಳಜಳದಿಂ ಮುಂ ಪಾದ್ಯಮಂ ಸೇಸೆಯಂ
ಕುಡೆ ಶೃಂಗಂ ನವಮೇಘಧಿಂ ಸುರಿವ ಮುಕ್ತಾಜಾಳದಿಂದರ್ಘ್ಯಮಂ
ಕುಡೆ ಕಲ್ಪದ್ರುಮಪಲ್ಲವೋಲ್ಲಸಿತಶಾಖಾಹಸ್ತದೊಳ್ತೋರ್ಪ ಪೂ
ಗುಡಿಯಿಂ ಮಂದರಮಂದದೇನಡರ್ದುದೊ ದೇವೇಂದ್ರನೈರಾವತಂ ॥೨೫೨॥

ಅಡರ್ದುದು ಭದ್ರಶಾಳವನಸಾನುವನೆಂಬನಿತರ್ಕೆ ನಂದನ
ಕ್ಕಡರ್ದುದು ಕೀಱಿನಂದನದಿನೊರ್ಮೆಯೆ ಸೌಮನಸಕ್ಕೆವಂದುದಾ
ಯೆಡೆಯಣದೆಂದು ಭಾವಿಸದ ಮುನ್ನಮೆ ಪಾಂಡುಕಮೇಖಳಾವನ
ಕ್ಕಡರ್ದುದಿದೇಂ ಮನಃಪವನವೇಗಿಯೊ ಶಕ್ರನವಿಕ್ರಿಯಾಗಜಂ ॥೨೫೩॥

ವ॥ ಅಂತಮರಪತಿ ಸುರಸಮಿತಿವೆರಸು ನಾಲ್ಕನೆಯ ಮೇಖಳೆಗೆಟ್ಟಿರ್ದುದುಮಾ ಮಹೀಧರದುತ್ತರಪೂರ್ವಭಾಗದೊಳ್

ಪೊಳೆವೆಳವಾಳೆಗಳಿಂ ಕ
ಣ್ಗೊಳಿಸುವ ಪಾಲ್ಗಡಲ ಮಡುವಿದೆನೆ ಸುಟಿವಮರೀ
ಚಳನಯನಪ್ರತಿಬಿಂಬಾ
ವಳಿಯಿಂ ಪಾಂಡುಕಶಿಳಾತಳಂ ಸೊಗಯಿಸುಗುಂ ॥೨೫೪॥

ಆಸಱಿಯೆ ಮಧ್ಯದೊಳ್ ಸಿಂ
ಹಾಸನವಿಂಗಡಲ ನಡುವೆ ತಲೆದೋಱುವ ಭಾ
ಭಾಸುರರತ್ನಾದ್ರಿಯನಪ
ಹಾಸಂ ಮಾಡುವುದನರ್ಘರತ್ನಾಂಶುಗಳಿಂ ॥೨೫೫॥

ವ॥ [ಆ] ಸಿಂಹಾಸನದೊಳ್ ಪೂರ್ವಾಭಿಮುಖನಾಗಿ ಜಿನಾರ್ಭಕನನಿರಿಸುವುದುಂ

ಹರಿಪೀಠಮುದಯಗಿರಿಯಂ
ತಿರೆ ಬಾಳಂ ಬಾಳಭಾನುಮಂಡಳಮೆಂಬಂ
ತಿರೆ ಬಾಳಾತಪಮೆಂಬಂ
ತಿರೆ ತನುರುಚಿ ಪುದಿದುದೊಗೆದು ಗಗನಾಂತರಮಂ ॥೨೫೬॥

ವ॥ ಆ ಸಮಯದೊಳಗರುಧೂಮಲತೆ ಗಗನಮಂಡಳಮನಮರಮಂಗಳಾನಕರವಂ ಬೆರಸು ಪುದಿಯೆ

ಜಯಜಯಘೋಷಣಂಬೆರಸು ಕೈಮುಗಿವಂತಮರರ್ ಸಹಸ್ರಕೋ
ಟಿಯಿನಮರೀಜನಂ ಪರಸುವಂತಮರಾನಕಕೋಟಿ ತಮ್ಮೊಳೊ
ರ್ಮೆಯೆ ಸಮಹಸ್ತದಿಂ ಮೊಟಗುವಂತೆಱೆದರ್ಘನದುಗ್ಧವಾರಿಧಾ
ರೆಯನಮರಾಧಿಪರ್ ಪ್ರಣವಪೂರ್ವಕಮಂದು ಜಿನೋತ್ತಮಾಂಗದೊಳ್ ॥೨೫೭॥

ವ॥ ಆಗಳೇಕಯೋಜನವಿಸ್ತಾರಮುಮಷ್ಟಯೋಜನಾಯಾಮಮುಮೆನಿಸಿದಷ್ಟಾಪದಕಳಶಂಗಳಂ ತಳೆದುಕೊಂಡು

ಎರಡುಂ ದೆಸೆಯೊಳಮಿರ್ದ
ರ್ಸುರಪತಿಗಳ್ಗಮೃತಸಲಿಲಮಂ ಸಂದಿಸಲೆಂ
ದೆರಡೋಳಿಯುಮೇಂ ನಿಮಿರ್ದುವೊ
ಸುರರಿಂ ಕೇರ್ಗಟ್ಟಿದಂತೆ ದುಗ್ಧಾಬ್ಧಿವರಂ ॥೨೫೮॥

ವ॥ ಅಂತೆಯ್ದೆವಂ[ದ]

ದಿವಿಜರ ಪಡೆ ನೀಡುವ ಕುಂ
ಭವೆಲ್ಲಮಂ ತಳೆದು ವಿಕ್ರಿಯಾವಿಭವಸಮು
ದ್ಭವಭುಜಶಾಖಾಶತದಿಂ
ದಿವಿಜೇಂದ್ರಂ ಬೆರ್ಕೆವಲಸು ಕಾಯ್ತುಂತಿರ್ದಂ ॥೨೫೯॥

ತ್ರಿದಶರ್ನೀಡುವ ಶಾತಕುಂಭಕಳಶವ್ರಾತಂಗಳಂ ಪರ್ವಿ ಕೊ
ರ್ವಿದ ವೈಕುರ್ವಣಹಸ್ತದೊಳ್ತಳೆದು ಪುಣ್ಯಕ್ಷೇತ್ರದೊಳ್ ಪುಣ್ಯಸಂ

ಪದಸಸ್ಯಂ ಬೆಳೆವಂತು ಪುಣ್ಯಜಳಮಮಂ ಶಕ್ರಂ ಘಟೀಯಂತ್ರಚ
ಕ್ರದವೊಲ್ ಪೊಯ್ಯೆ ಜಿನಂಗದೇನೆಸೆದುದೋ ಜನ್ಮಾಭಿಷೇಕೋತ್ಸವಂ ॥೨೬೦॥

ವ॥ ತತ್ಸಮದೊಳ್

ತ್ರಿದಶಾಧೀಶನಿನಾದ ಜನ್ಮಸವನಾಂಭಃಪೂರದೊಳ್ ನೀರನೂ
ಡಿದುದೋಲಾಡಿದುದರ್ದಿಕೊಂಡುದು ಮರಳ್ದೀಸಿತ್ತು ತೇಂಕಿತ್ತು ಮು
ಳ್ಗಿದುದಾಳಂದಿರಿದತ್ತು ತೇನಮಿಜೆದತ್ತುತ್ಫೇನಮಂ ಲೀಲೆಯಿಂ
ದಿದು ನೀರಾನೆಯೊ ಪೇಟಿಮೆಂಬಿನೆಗಮಾ ದೇವೇಂದ್ರನ್ಯೆರಾವತಂ ॥೨೬೧॥

ನವರತ್ನಂ ಕರಿ ವಾಜಿ ಕಲ್ಪತರು ದೇವಸ್ತ್ರೀಜನಂ ಲಕ್ಷ್ಮಿಯೆಂ
ಬಿವಱುತ್ಪತ್ತಿಗೆ ಮುಖ್ಯಮಾದುದಮೃತಕ್ಕಾವಾಸಮಾದತ್ತೆನಲ್
ದಿವಿಜೇಂದ್ರಾಚಳದೊಳ್ ಜಿನಾಭಿಷವಣವ್ಯಾಪಾರದೊಳ್ ದೇವದಾ
ನವರಿಂದಾದ ಮಹಾಸಮುದ್ರಮಥನಂ ಭದ್ರಂ ಶುಭಂ ಮಂಗಳಂ ॥೨೬೨॥

ವ॥ ಆ ಸಮಯದೊಳ್

ಅಂಚಿರಮಲ್ಲದೆ ಜಳಕಣ
ಸಂಚಯಮಾವರಿಸೆ ತನುವನಮರೇಂದ್ರಂ ಕ
ಣ್ಗೇಂ ಚೆಲ್ವಾದನೊ ಮುತ್ತಿನ
ಕಂಚುಕಮಂ ತೊಟ್ಟು ನರ್ತನಕ್ಕೊಡರಿಪವೋಲ್ ॥೨೬೩॥

ವ॥ ತದನಂತರಮನೇಕಾರ್ಚನೆಗಳಿಂದರ್ಚಿಸಿ

ಮದನಪತತ್ರಿ ನಿನ್ನ ದೆಸೆಗಾಣದು ಮೋಹಮಹಾಹಿ ನಿನ್ನನ
ಣ್ಮದು ಕಲುಷಾನಲಂ ನಿಜದಯಾರಸದಿಂ ಮಸಿಯಾಯ್ತು ಪಾಪಮಿ
ಲ್ಲದ ಪಯಣಕ್ಕೆ ನಿನ್ನ ನುಡಿ ಸಂಬಳಮಾಯ್ತೆನೆ ಪೆಣ್ಣ ಮಣ್ಣ ಮೋ
ಹದ ಪರಮಾತ್ಮರತ್ತಿರಲಿ ನೀನೆ ಜಗತ್ಸುತನ್ಯೆ ಜಿನೇಶ್ವರಾ ॥೨೬೪॥

ವ॥ ಎಂದು ಸೌಧರ್ಮೇಂದ್ರಂ ವಸ್ತುಸ್ತವ ಗುಣಸ್ತವಂ ಮಾ[ಡೆ] ಅನಂತರಂ

ಜಳದಿಂದರ್ಣವಮಂ ಸೊಡ
ರ್ವೆಳಗಿಂ ದಿನಮಣಿಯನರ್ಚಿಪಂತರ್ಚಿಸಿದಳ್
ಮಳಯಜರಸದಿಂ ಶಚಿ ಮಂ
ಗಳಾರ್ಥಮನತಿಸಹಜಸುರಭಿಯಂ ಜಿನತನುವಂ ॥೨೬೫॥

ವ॥ [ಆಗಳ್]

ಅವತಂಸೋತ್ತಂಸಕಂಠಾಭರಣಕಟಕಮುದ್ರಾಮಣಿಕ್ಷುದ್ರಘಂಟಾ
ನಿವಹಂಗಳ್ ನೂಪುರಂಗಳ್ ಚರಣವಳಯವೆಂಬೀ ವಿಭೂಷಾಳಿ ಸುತ್ರಾ
ಮವಧೂಟೀ ಸೂತ್ರಿತಂ ಕಣ್ಗೊಳಿಸೆ ಕೊನರ್ಗಳಿಂ ಕೋರಕಶ್ರೇಣಿಯಿಂ ಪ
ಲ್ಲವದಿಂ ಚೆಲ್ವಾದ ಕಲ್ಪದ್ರುಮದಗೆಯವೊಲಾ ಬಾಲಕಂ ಲೀಲೆವೆತ್ತಂ ॥೨೬೬॥

ವ॥ ಅಂತು ಕಯ್ಗೆಯ್ದು ನಿಜಕರಕಿಸಲಯಕ್ಕೆ ನೀಡುವುದುಂ

ಚರಮತನು ಸಹಜದಿಂ ಸುಂ
ದರಮದನಿಂದ್ರಾಣಿ ಬಾಳವಂದಮನಳವ
ಟ್ಟಿರೆ ತುಡಿಸೆ ನೋಡಿದಂ ಸಾ
ಸಿರಕಣ್ಗಳುಮೆಯ್ದೆ ತಣಿವಿನಂ ದಿವಿಜೇಂದ್ರಂ ॥೨೬೭॥

ವ॥ ಆಗಳಖಿಳಸುರಸೇನಾವಿಳೋಚನಮದಾಳಿಮಾಳೆ ಬಾಲಕನ ಕರ್ಣಿಕಾರ ಕುಸುಮ–ಸುಕುಮಾರತನುವಂ ಸುತ್ತಿ ಮುತ್ತಿ ಸಂತೋಷದಂತನೆಯ್ದೆ

ಮೊಲೆಯೊತ್ತಿಂ ಶಚಿ ಮೆಯ್ಗೆ ಮಾಡೆ ಪುಳಕಪ್ರೋದ್ಭೇದವಂ ಸೋಂಕಿಲೊಳ್
ನೆಲಸಿರ್ದರ್ಭಕನುಂಟುಮಾಡೆ ನಯನಕ್ಕಾನಂದಮಂ ಪೊಣ್ಮೆಮಂ
ಗಳಭೇರೀರವಮೇಳೆ ಗಂಧಜಮಂ ಸೇನಾಶತಂ ತನ್ನೆರ
ಟ್ಟೆಲದೊಳ್ ಘೂರ್ಣಿಸೆ ಮೇರುವಿಂ ಮಿಥಿಳೆಗೆಯ್ತಂದಂ ಸುರಾಧೀಶ್ವರಂ ॥೨೬೮॥

ಆಗಳಮರೇಂದ್ರಸೈನ್ಯಂ
ಪೋಗಲೊಡಂ ಪೋಗೆ ಕಳಕಳಂ ಮಧುಸಮಯಂ
ಪೋಗೆ ಕಳನಿನದಮುಡುಗಿದ
ಕೋಗಿಲೆಯೆಂತಂತೆ ಬಿನ್ನನಿರ್ದುದಗೇಂದ್ರಂ ॥೨೯॥

ಪಲತೆಱದ ಪಱೆಯ ದನಿಗಳು
ಮುಲಿವಮರರುಮೊಡನೆ ತೊಲಗೆ ಕನಕಾಚಾಳಮೇಂ
ಗೆಲೆವಂದುದೊ ಬಾಜಿಸುತುಂ
ನಿಲಿಸಿದ ಮಣಿಖಚಿತಕನಕಘಂಟಾಕೃತಿಯಂ ॥೨೦॥

ದೆಸೆ ಭೂಷಾರುಚಿಯಿಂ ಕವಿಲ್ಮಸಗುವನ್ನಂ ಭೂತಳಂ ಕೋಟ್ಗೆಸ
ರ್ಮಸಪನ್ನಂ ನಿಜದಂತಿದಾನಜಳದಿಂ ವಜ್ರಾಂಶುವಿಂ ಬಲ್ವಿಸಿ
ಲ್ಮಸಪನ್ನಂ ನಭಮಪ್ಸರೋಗಣದ ಲಾವಣ್ಯಪ್ಲವಂ ಕಾಟ್ಪುರಂ
ಮಸಪನ್ನಂ ನೃಪಗೇಹದೊಳ್ಶತಮಖಂ ಬಂದಂ ಮಹೋತ್ಸಾಹದಿಂ ॥೨೧॥

ವ॥ ಆಗಳನೇಕಮಂಗಳವಸ್ತುವಿಸ್ತೀರ್ಣಮಾಗೆ ವಿರಚಿತಜಾತಕರ್ಮೋತ್ಸವಾನಂತರಂ ರಂಗಮಂ ಪೊಕ್ಕು

ಭಾವಾನುಭಾವವಿಭಾವಂಗಳ್ ರಸಮನು
ದ್ಭಾವಿಸೆ ನಿಂದ ನಿಱಸು ವಿಚಿತ್ರಶೋ
ಭಾವಹಮಾಗೆ ದಿವಿಜೇಂದ್ರಂ ॥೨೨॥

ವ॥ ಅಂತು ನಿಂದು

ರಾಗರಸಂ ಪೊನಲ್ವೊನಲನಟ್ಟುವಿನಂ ಚರಣಾಂಗಹಾರಮಿಂ
ಬಾಗಿರೆ ದೃಷ್ಟಿಭೇದಮಳವಟ್ಟಿರೆ ಚಾರಿಗಳೊಪ್ಪೆ ತನ್ನೊಳಂ
ದಾಗಸದೊಳ್ ದಿಶಾವಳಯದೊಳ್ ಧರೆಯೊಳ್ತನತೊಂದೆ ರೂಪು ನೂ
ಱಾಗಿರೆ ವಿಕ್ರಿಯಾವಿಭವಮಚ್ಚರಿಯಾಗಿರೆ ಶಕ್ರನಾಡಿದಂ ॥೨೩॥

ವ॥ ಅಂತಮರನಾಯಕನಾನಂದನರ್ತನಮಂ ನಿರ್ವರ್ತಿಸಿ ಸಮದಮದನ ಮಲ್ಲಂಗೆ ಮಲ್ಲಿನಾಥನೆಂದು ಪೆಸರನಿಟ್ಟು ನಿಜನಿವಾಸಕ್ಕೆ ಪೋಪುದುಮಿತ್ತಲ್ ಕಾಮಿನೀಕರಸರೋಜ ವನರಾಜಹಂಸನೆನಿ[ಸಿ]

ಶಶಿಲೇಖೆ ಪೂರ್ಣಮಪ್ಪಂ
ತೆ ಶೈಶವಂ ಪಿಂಗೆ ನಿಜಕಳಾಪರಿಪೂರ್ಣಂ
ವಿಶದಯಶೋಭೂಷಣಮಂ
ದಿಶಾವಿಳಾಸಿನಿಗೆ ತತ್ಕುಮಾರಂ ಕೊಟ್ಟಂ ॥೨೭೪॥

ವ॥ ಅಂತು ನಿರಂತರೋಪಚಯಮನಪ್ಪುಕೆಯ್ದು ಕುಮಾರಕಾಲದೊಳ್ [ನಿಲೆ] ಕುಂಭವಲ್ಲಭಂ ಕುಮಾರನ ವಿಕಾರವಿರಹಿತಾಕಾರಮಂ ಮನದೆಗೊಂಡು ತನ್ನೊಳಿಂತೆಂದಂ

ನನೆಯಂಬು ನಾಂಟದಂತಿರೆ
ಮನದೊಡವುಟ್ಟಿತ್ತು ವಜ್ರಕವಚಮೆನಿಪ್ಪೀ
ಜಿನಪತಿ ದಂಪತಿಯೆನಿಪನೆ
ಧನಕ್ಕೆ ಮಾಣಿಕ್ಯದೀಪಮೇನೆಱಗುಗುಮೇ ॥೨೭೫॥

ಗಜಮಂ ಕಟ್ಟುವವೋಲಂ
ಬುಜಸೂತ್ರದಿನೀ ಮನೋಜವೈರಿಯ ಚೇತೋ
ಗಜಮಂ ವಿಳಾಸವತಿಯರ
ಭುಜಲತೆಯ ತೊಡರ್ಪಿನೊಳ್ತೊಡರ್ಚುವನಾವಂ ॥೨೭೬॥

ಮನಮೇನುಂ ಕದಡ[ದು] ಪಳಿ
ಕಿನಜೆಯೆ ಮೇಲೆಱೆದ ನೀರವೋಲದಱಿಂದೀ
ತನ ಬಗೆಗೆ ಮದನರಾಗಂ
ಜನಿಯಿಸದೆಂದುಸಿರದಿರ್ಪುದಲ್ತೆನಗನಯಂ ॥೨೭೭॥

ತನಯಂ ಪರಿಣಯನಪ್ರಾ
ಪ್ತನಾದೊಡಾತಂಗೆ ಮದುವೆಯಂ ಮಾಟ್ಪುದೆ ದಲ್

ಜನಕಂಗೆ ಕೃತ್ಯವಾನದ
ನನುಷ್ಠಿಪೆಂ ತಿಳಿವೆನದಜಿನಾತನ ಬಗೆಯಂ ॥೨೭೮॥

ವ॥ ಎಂದು ನಿಶ್ಚಯಿಸಿ ಗೃಹಮಹತ್ತರಂಗೆ ರಾಜಗೃಹಮಂ ಕಯ್ಗೆಯ್ವಂತು ಬೆಸಸುವುದುಂ

ನೀಲಪ್ರಸ್ತರಿತಂ ಹರಿನ್ಮಣಿಮಯಸ್ತಂಭಾಂಚಿತಂ ಹೇಮಘಂ
ಟಾಲಂಭೂಷವಿಭೂಷಿತಂ ಸ್ಫಟಿಕಭಿತ್ತಿಭ್ರಾಜಿತಂ ರತ್ನದೀ
ಪಾಲೋಕಂ ಮಣಿತೋರಣಾರುಣರುಚಿಚ್ಛನ್ನಂ ಪತಾಕಾಪಟೀ
ಲೋಲಂಬೇಱೆ ವಿವಾಹಮಂಡಪಮದೇಂ ಚಿತ್ತಕ್ಕೆ ಗೊತ್ತಾದುದೋ ॥೨೭೯॥

ವ॥ ಆ ವಿವಾಹಮಂಡಪಮಂ ಮೋಹಮಲ್ಲನಪ್ಪ ಮಲ್ಲಿನಾಥಕುಮಾರಂ ಕಂಡು ಮುನ್ನಂ ತನ್ನ ಪುಟ್ಟಿದಪರಾಜಿತವಿಮಾನಮನವಧಿಬೋಧದಿಂದಱಿದದುವೆ ತನಗೆ ನಿರ್ವೇಗಮಾಗೆ

ಇನ್ನೆವರಂ ಚತುರ್ಗತಿಗಳೊಳ್ತಿರಿತಂದು ಜವಂಗೆ ಪೇಡಿಯಾ
ದೆಂ ನೆಱೆದಂತಕಂಗಿದಿರನಾಂತವನಂ ತವೆ ಮೋದಿ ಸೇಸೆಗೊ
ಳ್ವೆಂ ನೆರೆವೆಂ ಜಯಾಂಗನೆಯೊಳೇವೆನೊ ಮತ್ತಿನ ಪೆಣ್ಣನೆಂದು ತಾಂ
ತನ್ನನೆ ತಾನೆ ಸಾಧಿಸುವ ಧೀರತೆಯಂ ತಳೆದಂ ಕುಮಾರಕಂ ॥೨೮೦॥

ಮೃಡಸುತನಂತೆ ದಂತಹತಿ ಪೊರ್ದದೆ ಶೂದ್ರಕನಂತೆ ಶಕ್ತಿಯಂ
ಕಿಡಿಸದೆ ವಾರ್ಧಿಯಂತೆ ತೆರೆಯೇಱದೆ ಕೋಡಗದಂತೆ ಶಾಖೆಯೊಳ್
ನಡೆಯದೆ ಪೋದೆವೋದ ಮರದಂತೆ ಕರಂ ನರೆಯೇಱದಿಟ್ಟು ಮು
ಪ್ಪಡಸದ ಮುನ್ನಮೇಕೆ ಮನುಜರ್ಮುಱಿದಿಕ್ಕರೊ ಮೋಹಮಲ್ಲನಂ ॥೨೮೧॥

ಜವನೇನಳ್ಕಮೆವಟ್ಟನೇ ಪರಿದು ಮೇಣ್ಕಾಲಂ ಜವಂಗೆಟ್ಟನೇ
ಕಿವಿಕಣ್ನಾಲಗೆಮೂಗುಮೆಯ್ ಜವಜವಕ್ಕೇಂ ಸಲ್ಲದೇ ಯೌವನಂ
ತವದೇ ಕುತ್ತದ ಬಿತ್ತನೇಂ ಪುರಿದರೇ ಕೇಡಿಂಗೆ ಕೇಡಾಯ್ತೆ ಮಾ
ನವರೇನೆಂದು ಜಡಾತ್ಮರೈಹಿಕಸುಖವ್ಯಾಮೋಹಮಂ ಮಾಡುವರ್ ॥೨೮೨॥

ವ॥ ಎಂದಪವರ್ಗ ಸುಖಮನಾಸೆಗೆಯ್ದು ಚತುರ್ಗತಿಯ ದುಸ್ಥಿತಿಯ[ಂ] ಭಾವಿಸಿ

ಪಂಚುಪಜಿಮಾಡಿ ಪಡೆಗುಂ
ಪಂಚತ್ವಮನಾವ ಗತಿಯೊಳಂ ಜವನೆಂದೇಂ
ಪಂಚಶರವೈರಿ ಪಡೆದನೊ
ಪಂಚತ್ವಂ ಪೊರ್ದದೆನಿಪ ಪಂಚಮಗತಿಯಂ ॥೨೮೩॥

ವ॥ ಅನಂತರಂ ಜಗತ್ರಯಜ್ಯಾಯನಭಿಪ್ರಾಯಮನವಧಿಬೋಧದಿಂದಮಱಿದು [ಲೋಕಾಂತಿಕದೇವರ್] ಬಂದು

ನಾನಲ ಬಾನಲ ನೀರಂ
ಮೀನೊಲ್ಲುಂ ರಾಜಹಂಸನೊಲ್ಲುಗಮೆ ಮಿಥ್ಯಾ
ಜ್ಞಾನಿ ಭವಸುಖಮನೊಲ್ವವೊ
ಲೇನೊಲ್ಲುಗಮೆ ಪರಮಪಾವನಜ್ಞಾನಪರಂ ॥೨೮೪॥

ಕುರುಡಂ ಕೋಲಿಂ ಚರಿಯಿಸಿ
ಪರಿವೃತ್ತಿಯನಪ್ಪುಕೆಯ್ವವೊಲಿಂದ್ರಿಯದಿಂ
ದೊರೆಕೊಳ್ವಲ್ಲಜ್ಞಾನಂ
ಮರುಳೇ ಹಿತಮಲ್ತು ನಿನಗೆ ಪರಮಜ್ಞಾನೀ ॥೨೮೫॥

ವ॥ ಎಂದವರನುಮೋದಿಸಿ ಪೋಪುದುಮಿತ್ತಲಮರಪತಿ ಚತುರ್ನಿಕಾಯಾ ಮರೇಂದ್ರಪರಿವೃತಂ ಬಂದು

ಇದು ಜನ್ಮಾಭಿಷವಕ್ಕವತ್ಯಧಿಕವೆಂಬನ್ನಂ ಸುರಶ್ರೇಣಿ ನೀ
ಡಿದ ದುಗ್ಧಾರ್ಣವದುಗ್ಧ ಪೂರ್ಣಘಟಸಂಘಾತಂಗಳಂ ಕೊಂಡು ರಾ
ಗದ ಪೆರ್ಚಿಂದಭಿಷೇಕಮಂ ದಿವಿಜನಾಥಂ ಮಲ್ಲಿನಾಥಂಗೆ ಮಾ
ಡಿದನೆಂಟುಂ ದೆಸೆಯಂ ಪಳಂಚಲೆವಿನಂ ಗಂಭೀರಭೇರೀರವಂ ॥೨೮೬॥

ವ॥ ಅಂತು ಪರಿನಿಷ್ಕ್ರಮಣಕಲ್ಯಾಣಾಭಿಷವಣಂ ತೀ[ರ್ಚೆ]

ಬಾಜಿಸೆ ಮಂಗಳಾನಕಮನಾ ದಿವಿಜೇಂದ್ರನ ದತ್ತಹಸ್ತದೊಳ್
ರಾಜಿಸೆ ಶೋಣಪಾಣಿಕಮಳಂ ಪರಿನಿಷ್ಕ್ರಮಣೋತ್ಸುಕಂ ಮರು
ದ್ವಿಜನಮಾರುತಂ ಕುರುಳನಾಡಿಸೆ ಮುಕ್ತಿವಧೂವಿವಾಹಗೇ
ಹಾಜಿರದಂತುಟಂ ಸಿವಿಗೆಯಂ ಭುವನತ್ರಯನಾಥನೇಜಿದಂ ॥೨೮೭॥

ವ॥ ಆಗಳ್ ಬೆಳಗಲ್ಲದೆ ಬಿಸುಪಿಲ್ಲದಾದಿತ್ಯನುಮಂ ಕಾಂತಿಯಲ್ಲದೆ ಆಯ್ಕಿಲಿಲ್ಲದ ಚಂದ್ರನುಮನುಯ್ವಂತೋರೊರ್ವರೇಟಿಡಿಯನುಯ್ವೆಡೆಯೊಳ್

ಧನದಂ ಶ್ವೇತವನಕ್ಕೆ ಭೂಷಣಮೆನಲ್ ರತ್ನಾಂಶುಭಾಸ್ವನ್ನಿಕೇ
ತನಮಂ ಮಾಡಿದನಾಗಳಲ್ಲಿಗೆ ಸುರಾಧೀಶರ್ಜಿನಾಧೀಶನಂ
ಮನದಿಂ ಬೇಗಮೆನಲ್ ಜಯಂತಶಿಬಿಕಾಸ್ಕಂಧರ್ವಿಚಿತ್ರಾನಕ
ಧ್ವನಿಗಳ್ ಘೂರ್ಣಿಸೆ ತಂದರಾರೊ ಬೆಸಕೆಯ್ಯೆಪುಣ್ಯಸಾಮರ್ಥ್ಯದಿಂ ॥೨೮೮॥

ವ॥ ಆಗಳಲ್ಲಿ ಜಿನವಲ್ಲಭಂ ಪರಿನಿಷ್ಕ್ರಮಣಮಣಿಮಂಡಪಮಧ್ಯಸ್ಥಿತ ಚಂದ್ರ ಕಾಂತಶಿಳಾತಳಮನಳಂಕರಿಸಿ ಪೂರ್ವಾಭಿಮುಖನುಮಂತರ್ಮುಖನುಮಾಗಿ

ಜಯಶಾಲಿ ನಮಸ್ಸಿದ್ಧೇ
ಭ್ಯಯೆನುತ್ತುಂ ಪರಿಯೆ ಜಿನಕುಮಾರಂ ಕುರುಳೋ
ಳಿಯನತ್ತಲ್ವಜಿದಂ ದು
ರ್ಜಯಮೆನಿಸಿದ ಕುಸುಮಚಾಪನಳಿನೀ ಗುಣಮಂ ॥೨೮೯॥

ಇರುಳಶ್ವಿನಿನಕ್ಷತ್ರಂ
ದೊರೆಕೊಳೆ ಮಾರ್ಗಶಿರಶುದ್ಧದೇಕಾದಶಿಯೊಳ್
ಧರಣೀಶರ್ಮೂನೂರ್ವ
ರ್ವೆರಸನಘಂ ಜೈನದೀಕ್ಷೆಯಂ ಕೈಕೊಂಡಂ ॥೨೯೦॥

ವ॥ [ಆಗಳ್] ಪರಿನಿಷ್ಕ್ರಮಣಕಲ್ಯಾಣಮಂ ನಿರ್ವರ್ತಿಸಿ ವಿವಿಧಾರ್ಚನೆಗಳಿಂದರ್ಚಿಸಿವಾಸವಂ ನಿಜನಿವಾಸಕ್ಕೆ ಪೋಪುದುಮಾಮುನೀಶ್ವರಂ ಷಷ್ಠೋಪವಾಸಿನಿಯಮನಿಯಮಿತನಾಗಿರ್ಪುದುಂ

ಕರೆಗಣ್ಮುವ ಶಾಂತರಸಾಂ
ಬುರಾಶಿಯೊಳ್ ಬೆಂಡು ನೆಗೆದ ಮತ್ಸ್ಯಂಗಳವೋಲ್
ಅರೆಮುಗುಳ್ದ ಕಣ್ಗಳೇಂ ಸುಂ
ದರಮಾದುವೊ ಮಲ್ಲಿನಾಥಜಿನಪುಂಗವನಾ ॥೨೯೧॥

ಮೀನಕ್ಷೋಭವಿಹೀನಮಾನಸದವೋಲಚ್ಛಾನನಂ ಮಂದರಂ
ತಾನೆಂಬಂತೆ ವಿನಿಶ್ಚಳಂ ತನು ಶರಚ್ಚಂದ್ರಾಂಶುವೋಲ್ ನಿರ್ಮಳ
ಧ್ಯಾನಂ ಕೂಡೆ ಸಮಾಧಿಸೌಷ್ಠವದೊಳಿರ್ಪನ್ನಂ ಮನಃಪರ್ಯಯ
ಜ್ಞಾನಂ ತನ್ಮುನಿಪಂಗೆ ಪುಟ್ಟಿದುದು ನಿರ್ವಾತಪ್ರದೀಪೋಜ್ವಳಂ ॥೨೯೨॥

ವ॥ ಅಂತು ದೀಕ್ಷಾನಂತರಂ ಚತುರ್ಥಜ್ಞಾನಧರನಾಗಿ ಪಾರಣಾದಿನದೊಳ್ ಬನದಿಂ ಚರ್ಯಗೆ ಪೊಱಮಟ್ಟು ನಂದಿಷೇಣಕ್ಷಿತಿಪತಿಯ ಗೃಹದ್ವಾರದೇಶಕ್ಕೆವಂದು ವಿಶಾಳಪಾಣಿಪಲ್ಲವ ಪುಟದೊಳ್ [ಚರ್ಯೆಯಂ ಪಡೆವಲ್ಲಿ] ಪಂಚಾಶ್ಚರ್ಯಂ[ಗಳ್ ಸಮನಿಸೆ] ಮಲ್ಲಿನಾಥಮುನಿನಾಥಂ ಪರಸಿ [ಶ್ವೇತವನಕ್ಕೆ] ಪೋಪುದು[ಮ]ತ್ತಲಾ ತಪೋ[ವನದೊಳ್]

ಎಸೞಿಂ ಮುಟ್ಟದೆ ತುಂಬಿ ಪುಷ್ಪರಜಮಂ ಕೊಳ್ಗುಂ ಪಿಕಂ ಪಕ್ವಮಾ
ಗಿ ಸಡಿಲ್ದಲ್ಲುಗುತಿರ್ಪ ಪಣ್ಣ ರಸಮಂ ಪೀರ್ಗುಂ ರಥಾಂಗಂ ರತ
ವ್ಯಸನಂಗೆಟ್ಟೆಳಸಿರ್ಕುಮಂಚೆ ಸವಿಗುಂ ಸ್ವಚ್ಛಾಂಬುವಂ ಚಂಚುವಿಂ
ತ್ರಸಮಂ ಬಂಚಿಸಿ ದೇವನಿರ್ದ ಬನದೊಳ್ ಸತ್ಸೇವೆ ಸಾಮಾನ್ಯಮೇ ॥೨೯೩॥

ವ॥ ಮತ್ತಮಾ ತಪೋವನದೊಳ್

ಸ್ವರಚಾರಂ ಸ್ವೈರಚಾರಂ ಶಿಶಿರಮರುತನಂಭೋಜಿನೀರಾಜಿಯೊಳ್ ಸಂ
ಚರಿಸುತ್ತುಂ ಮಾಧವೀಮಂಡಪದೆಡೆಗಳೊಳಾರಯ್ಯುತುಂ ಪುಷ್ಪಲೀಲಾ
ಸ್ತರಣಸ್ಥಾನಂಗಳೊಳ್ ಕಾಮಕರನಱಸುತುಂ ಬಂದು ನಿಷ್ಪನ್ನಯೋಗೀ
ಶ್ವರನಂ ತನ್ನಾಳ್ದನಂ ಕಾಮನನುಱದೆ ತಂಪಗೆಯ್ವನಂ ನೋಡಿ ಕಂಡು ॥೨೯೪॥

ವ॥ ಕಂಡೀಬನಮಪ್ಪೊಡೆ ಮನೋಜರಾಜನೆಱೆವಟ್ಟು ಈ ಬನಮನಂಜದೆ ಪೊಕ್ಕು ವಿಜಗೀಷುವೃತ್ತಿಯನೇಕಾಂಗದೊಳ್ ಮೆಱೆದು ತಪೋರಾಜ್ಯಮದದೋಳ್ಮೆಯ್ಯಱಿಯದೆ ನಿಂದನಿದನೆಮ್ಮರಸಂಗಱಿಪುವೆನೆಂದು ಮನಸಿಜಚಕ್ರವರ್ತಿಯನೆಯ್ದೆವಂದು ಸರ್ವಾಂಗಪ್ರಣತನಾಗಿ

ಇದನೊಂದಂ ಕಂಡೆನಾಶ್ವರ್ಯಮನಖಿಳಮನಾಟಂದ ನಿನ್ನೀ ಭುಜಾಗ
ರ್ವದಗುರ್ವಂ ದೇವ ಪುಲ್ಲಿಂ ಲಘುವೆನೆ ಬಗೆದೇಕಾಂಗದೊಳ್ಕಾದುವುದ್ಯೋ
ಗದೊಳಿರ್ದಂ ಪುಷ್ಪಚಾಪಾಂಚಿತಮಧುಕರಮೌರ್ವೀಲತಾಟಂಕೃತಕ್ಕ
ಳ್ತಿದ ಗೌರೀನಾಥನಿಂ ತಾನಧಿಕನೆ ಜಡನೇಗಜ್ಜಮಂ ಪಣ್ಣಿಕೊಂಡಂ ॥೨೯೫॥

ವ॥ ಎಂದು ಬಿನ್ನಪಂಗೆಯ್ಯಲೊಡಂ ನನೆಗಣೆಯ ದೊಣೆಯಂ ಬಿಗಿದು ಕಂಕೆಲ್ಲೀ ಪಲ್ಲವದ ಕಯ್ಪೊಡೆಯನಳವಡಿಸಿ ಸಹಕಾರಕೋರಕದಂಗುಳಿತ್ರಾಣಮಂ ತೊಡರ್ಚಿ ಮೃದುಮೃಣಾಳಿಕೆಯ ಪಣೆಗಟ್ಟಂ ಕಟ್ಟಿ ಮಾಧವೀಮಧುಬಿಂದುವಿನ ತಿಳಕಮನಿಟ್ಟು ಮೂಱುಂ ಜಗಮನೆಱಗಿಸಿದ ತನ್ನ ತೋಳ್ವಲಮನಲ್ಲದೆ ನೆರಮನಾಸೆಗೆಯ್ಯದೆ ಬಂದು ನೋಡಿ ನಡುವಗಲಿನಾದಿತ್ಯನಂ ನೋಡಿದಂತಸರಪಸರಂಬಡೆಯದೆ

ಚರಮಶರೀರಮಂ ನಡುವ ಕಯ್ದುಗಳಿಲ್ಲ ಮನಕ್ಕೆ ವಜ್ರಪಂ
ಜರಮೊಡಪುಟ್ಟಿ[ದತ್ತಿ] ಸುವೆನಾವುದನೆಂದು ಮನೋಭವಂ ಭಯ
ಜ್ವರವಶವರ್ತಿಯಾಗಿ ನಡುಗುತ್ತಿರೆ ದಕ್ಷಿಣವಾಮಪಾಣಿಗಳ್
ಪರವಶಮಾಗೆ ಬಿರ್ದುವು ಲತಾಂತಶರಂಗಳುಮಿಕ್ಷುಚಾಪಮುಂ ॥೨೯೬॥

ಬಿದಿರೊಳ್ಪುಟ್ಟಿದ ಕಿಚ್ಚಿನಂತೆ ಸುಡೆ ತನ್ನಂ ತನ್ನ ಕೋಪಾನಳಂ
ಮದನಂ ಮುನ್ನಮೆ ಬೆಂದು ತನ್ಮುನಿಯ ಬೋಧಾಳೋಕಸೌಧಾಂಬುವಾ
ಹದಯಾವರ್ಷಣದಿಂ ಕ್ಷಣಂ ತಡೆದನೇ ತಣ್ಣೀರ್ಗಳಿಂ ಬೇವ ಸು
ಣ್ಣದ ಕಲ್ಲಂತಿರೆ ಬೆಂದನುಣ್ಮೆ ಸುರಪುಷ್ಪಾಸಾರಭೇರೀರವಂ ॥೨೯೭॥

ಮದನಂ ಶ್ರೀಮಲ್ಲಿಭಟ್ಟಾರಕನ ವಿಮಳಬೋಧಾನಳಜ್ವಾಳೆಗಳ್ ಸೋಂ
ಕದ ಮುನ್ನಂ ತತ್ತಪೋರಾಶಿಗೆ ಪುಲಿವರೆದತ್ತೆಂಬಿನಂ ಬೂದಿಯಾಗಿ
ರ್ಪುದುಮಾಗಳ್ ಮೋದಿಕೊಂಡಳ್ ರತಿ ಮತಿಮಱೆದಳ್ ಮೆಯ್ಯನೀಡಾಡಿದಳ್ [ಕೂ]
ಟ್ಟುಗಿದಿಗೊಂಡಳ್ ಕಣ್ಣನೀರ್ಗಳ್ ತೆರೆಮಸಗುವಿನಂ ಮಾಣದಟ್ಟಿಳ್ ಬೆಮರ್ತಳ್ ॥೨೯೮॥

ಆಲಿಪರಾರೊ ತುಂಬಿಗಳ ಗೀತಮನುನ್ಮದರಾಜಹಂಸಲೀ
ಲಾಲಸಯಾನಮಂ ಬಯಸಿ ನೋಟ್ಟಿವರಾರೊ ಬಸಂತನಿರ್ಪನಾ
ರೋಲಗದೊಳ್ ವಶೀಕರಣಸಾಯಕದಿಂ ಭುವನತ್ರಯಂಗಳಂ
ಸೋಲಿಪರಾರೊ ನೀಂ ಪುಗೆ ಯಮಾನನಮಂ ರತಿಜೀವಿತೇಶ್ವರಾ ॥೨೯೯॥

ಬಿರಿಮುಗುಳಾರ್ಗೆ ಕೂರ್ಗಣೆಗಳಪ್ಪುವೊ ಕರ್ಬಿನ ಬಿಲ್ಲನಾವನೋ
ಸರಿಸುವನಾರ ಮುಂದೆ ಪರಿಗುಂ ಮಕರಧ್ವಜಮಾರೊ ಮಾಡುವರ್
ಸರಸಿಜಸೂತ್ರದಿಂ [ಗುಣಮುಮಂ] ರತಿ ಲಾಸ್ಯಮನಾರ್ಗೆ ತೋರ್ಪರ್ಖಾ
ರರಗಿಳಿಯೋದನಾಲಿಪರೋ ನೀಂ ಗತಜೀವಿತನಾಗೆ ಮನ್ಮಥಾ ॥೨೦೦॥

ವ॥ ಎಂದು ಶೋಕಶಂಕುಪಾತದಿಂದಟಿಯೆ ನೊಂದು

ಸ್ಮರನ ವಿಯೋಗದೊಳ್ ನೆಗೆದ ಶೋಕದ ದಳ್ಳುರಿ ಸುತ್ತಿ ಮತ್ತೆ ಮೆಯ್
ಪರವಶಮಾಗೆ ಮೋಹಿಸೆ ಮನಂ ನಯನಂ ನಸುಮುಚ್ಚೆ ವಕ್ರಮಾ
ಗಿರೆ ಗಳಕಂದಳಂ ರತಿಗುಸಿರ್ ತವೆ ಪೂವಿನ ಕಂಪು ಪಿಂಗುವಂ
ತಿರದಸು ಪೋದುದೋಪರೊಡಸಾವುದು ಸೈಪಿನೊಳಲ್ಲದಕ್ಕುಮೇ ॥೨೦೧॥

ಅವಗುಣನೆನಿಪ್ಪ ಕಾಮಂ
ಗವಸಾನಮನೀಯೆ ರತಿಯುಮೊಡನಟಿಯೆ ಮುನಿ
ಪ್ರವರಂ ನಿಷ್ಕಾಮಂ ಕ
ರ್ಮಮೆಂಟುಮಮಂ ನೆಱೆಯೆ ಕಿಡಿಸಲುದ್ಯತನಾದಂ ॥೨೦೨॥

ನಯನಂ ನಾಸಾಗ್ರದಳ್ ಕೀಲಿಸೆ ನೆಲಸೆ ಮರಲ್ದಂಕದೊಳ್ ಪಾಣಿಪದ್ಮ
ದ್ವಯಮೇಕಾಗ್ರಂ ಮನಂ ಭ್ರೂಯುಗಳದ ನಡುವಂ ಪೊರ್ದೆ ದೇಹಂ ಸುವರ್ಣಾ
ದ್ರಿಯವೊಲ್ ನಿಷ್ಕಂಪಿತಂ ಕಣ್ಗೆಸೆಯೆ ಕುಸಿಯೆ ಬಾಹ್ಯೇಂದ್ರಿಯಂ ಬಾಹ್ಯ
ಸಾಮಗ್ರಿಯೊಳವ್ಯಗ್ರಪ್ರತಿಷ್ಠಾಪರನೆನಿಸಿದನೇಕಾಂತದೇಶಂ ಮುನೀಶಂ ॥೨೦೩॥

ವ॥ [ಆಗಳ್] ನಾಲ್ಕು ಘಾತಿಗಳಂ ಘಾತಿಸೆ

ಉಪಮಾತೀತನಿಜಪ್ರಕಾಶಗುಣದಿಂ ಪ್ರತ್ಯಕ್ಷಮಪ್ಪಂತು ಮಾ
ಡಿ ಪದಾರ್ಥಂಗಳನೆಲ್ಲಮಂ ಘನತಮೋವಿಧ್ವಂಸನಂಗೆಯ್ದು ವ
ಸ್ತುಪರೀಕ್ಷಾವಿದವಿಶ್ರುತಂ ಪಸರಿಸಿತ್ತುದ್ಯೋತಮಂ ಮಲ್ಲಿನಾ
ಥಪಯಸ್ಸಾಗರಸಂಭವಂ ಸಕಳದಿವ್ಯಜ್ಞಾನರತ್ನಾಂಕುರಂ ॥೨೦೪॥

ವ॥ ಆಗಳವಧಿಬೋಧದಿಂ ಸೌಧರ್ಮದ ದಿವಿಜಪತಿ ಜಿನಪತಿಯ ಕೇವಲ ಜ್ಞಾನೋತ್ಪತ್ತಿಯನಱಿದು [ವಿನತಮಸ್ತಕನಾಗಿ] ಸಮವಸರಣಮಂಡಪಮಂ ಸಮೆವಂತು ಬೆಸಸುವುದುಂ ಪರಮಜಿನಪತಿಯ

ತನು ಘಾತಿಕ್ಷಯದಿಂ ನಭಕ್ಕೆ ನೆಗೆದಂಗೋಪಾಂಗಮಂ ಪೆತ್ತ ಮಿಂ
ಚಿನವೋಲಿರ್ಪುದುಮಾಗಳಾಯೆಡೆಗೆ ಸೌಧರ್ಮೇಂದ್ರನಾದೇಶದಿಂ
ಧನದಂ ನಿರ್ಮಿಸಿದಂ ಸಭಾಸದನಮಂ ಲೋಕತ್ರಯೀನೇತ್ರಮಂ
ಡನಮಂ ಧರ್ಮವಿನಿರ್ಮಿತಾಭ್ಯುದಯಲಕ್ಷ್ಮೀಲಾಸ್ಯಮೆಂಬನ್ನೆಗಂ ॥೩೦೫॥

ವ॥ ಅಂತನತಿಶಯಮೆನಿಪ ಮಂಡಪಮಧ್ಯದೊಳ್

ಪೊರೆಯೆತ್ತಿದ ಕುಡುಮಿಂಚಿನ
ತಿರುಳಂ ಮಸೆದಂತೆ ಮೆಯ್ಯ ಬಣ್ಣಂ ಬಂಬ
ಲ್ದಿರೆಮಸಗೆ ಗಂಧಕುಟಿಯೊಳ್
ಕರಮೆಸೆದಂ ಭುವನವಲ್ಲಭಂ ಮಲ್ಲಿಜಿನಂ ॥೩೦೬॥

ವ॥ ಅನ್ನೆಗಮಿತ್ತಲ್

ಭವನಾವಾಸದವರ್ ಪದಿಂಬರಮರೇಂದ್ರರ್ ವ್ಯಂತರಾವಾಸಸಂ
ಭವರೆಣ್ಬರ್ ಶಶಿಸೂರ್ಯರಿರ್ವರುಟಿದರ್ ಪನ್ನಿರ್ವರಿಂದ್ರರ್ ನಭೋ
ವಿವರಂ ತಮ್ಮ ಬಲಕ್ಕೆ ಸಾಲದೆನೆ ಮೂಱುಂ ಲೋಕಮೊಂದಾಗಿ ಬ
ರ್ಪವೊಲೇಂ ಬಂದರೊ ಮಾಟ್ಪ ಕೌತುಕದಿನಾ ಕೈವಲ್ಯಮಾಂಗಲ್ಯಮಂ ॥೩೦೭॥

ವ॥ [ಆಗಳ್]

ಚರಣನಖಾಂಶು ನೀರ್ದಳಿಯೆ ಪಾದತಳಂ ಕುಸುಮೋಪಹಾರಮಂ
ವಿರಚಿಸೆ ಪದ್ಮರಾಗಮಣಿಮುದ್ರಿಕೆ ತಣ್ಜೊಡರೆತ್ತ ಮೌಕ್ತಿಕಾ
ಭರಣಮರೀಚಿಮಾಳೆ ಗುಡಿಗಟ್ಟೆ ಗೃಹಾರ್ಚನೆ ಪುಟ್ಟೆ ಮೂಱು ಸೂಟ್
ಸುರಪತಿ ಮಲ್ಲಿನಾಥಸಭೆಯಂ ಬಲಗೊಂಡನುದಾತ್ತಭಕ್ತಿಯಿಂ ॥೩೦೮॥

ವ॥ ಅಂತು ಬಲಗೊಂಡು

ಎಮೆಯಿಕ್ಕದ ನಯನಂಗಳ
ಸಮುದಾಯಂ ಮಲ್ಲಿಜಿನನ ಪೆಸಱಿಕ್ಕರದಂ
ತಮರ್ದಿರೆ ನಿಂದಂ ಬಾಗಿಲೊ
ಳಮರೇಂದ್ರಂ ರತ್ನಶಾಸನಸ್ತಂಭದವೊಲ್ ॥೩೦೯॥

ವ॥ ಅಂತು ನಿಂದು ನಿರ್ಭರಭಕ್ತಿಯಿಂದ ಸ್ತುತಿಯಿಸಿ

ಚರುಮಣಿಪರ್ಯಣಕ್ಕೆ ಬಿಡುಮುತ್ತಿನ ಸೇಸೆಗೆ ಧೂಪಭಾಜನ
ಕ್ಕರುಣಮಣಿಪ್ರದೀಪಿಕೆಗೆ ಕಲ್ಪಫಳಕ್ಕೆ ನಮೇರುಪುಷ್ಪಮಂ
ಜರಿಗೆ ಸುಗಂಧಶುಕ್ತಿಕೆಗೆ ಪುಣ್ಯನದೀಜಳಪೂರ್ಣರತ್ನಭಾ
ಸುರಕಳಶಕ್ಕೆ ಮೇರೆ ಪವಣಿಲ್ಲನೆ ಪೂಜಿಸಿದಂ ಸುರಾಧಿಪಂ ॥೩೧೦॥

ವ॥ [ತದನಂತರಂ] ವಿಶಾಖಗಣಾಧಿಪ[ನ]ಶೇಷತತ್ತ್ವಮಂ [ಬೆಸಗೊಳೆ]

ನಿರುಪಾಧಿಪ್ರಸರಂ ನಿರಸ್ತಪುನರುಕ್ತಂ ದ್ರವ್ಯಪರ್ಯಾಯಗೋ
ಚರಮವ್ಯಾಕುಳಮೇಕಯೋಜನ ಜನಾಪ್ತಂ ಸರ್ವಭಾಷಾತ್ಮಕಂ
ಸುರವೃಂದಾರಕಚಕ್ರವರ್ತಿಗುಣಪಪ್ರಶ್ನಾನುಗಂ ಸ್ಯಾತ್ಪದ
ಸ್ಫುರಿತಂ ಪೊಣ್ಮಿದುದಂತನಂತಮಹಿಮಂ ದೇವಂಗೆ ದಿವ್ಯಸ್ವನಂ ॥೩೧೧॥

ವ॥ ಅಂತಪಗತತಾಲೋಷ್ಠಪುಟವ್ಯಾಪಾರಮೆನಿಪ ದಿವ್ಯಧ್ವನಿಯೊಳರ್ಹತ್ಪರಮೇಶ್ವರಂ ಬೆಸಸುವುದುಮುತ್ತಂ ಸಿತಜಿನಚರಣಚಂದ್ರಲೇಖನುಮುನ್ಮೂಲಿತಸಂಸಾರವಿಟಪಿಶಾಖನುಮಪ್ಪ ವಿಶಾಖಗಣಪ್ರಮುಖಂ ಮಾರ್ಗಶಿರಸಿತೈಕಾದಶಿಯ ಪೂರ್ವಾಹ್ಣದೊಳ್ ದ್ವಾದಶಾಂಗದರ್ಥಂಗಳು ಮನಪರಾಹ್ಣದೊಳ್ ಚತುರ್ದಶ ಪೂರ್ವದರ್ಥಪದಂಗಳುಮನವಧಾರಿಸಿ ಪ್ರಥಮಾನುಯೋಗಂ ಕರಣಾನುಯೋಗಂ ಚರಣಾನುಯೋಗಂ ದ್ರವ್ಯಾನುಯೋಗಮೆಂಬ ನಾಲ್ಕುಂ ಕಲ್ಪಮಾಗೆ ಗ್ರಂಥರಚನೆಯಂ ಮಾಡಿ ಸಭಾಜನಹೃದಯಮಣಿಭಾಜನದೊಳ್ ಧರ್ಮಾಮೃತಮಂ ತೀವುತ್ತಮಿರ್ಪುದುಮಾಗಳ್

ಸದಯಸ್ವಾಂತಮಯೂರನೀರದರವಂ ದುರ್ಮೋಹಸಂದೋಹಶೈ
ಳದರೀವಜ್ರರವಂ ದಯಾಮೃತನದೀಕಲ್ಲೋಲಮಾಲಾರವಂ

ಮದನವ್ಯಾಳಗಜೇಂದ್ರಸಿಂಹರವಮೆಂಬನ್ನಂ ಮರುದ್ವಾದಿತಂ
ಪುದಿದತ್ತಂಬರಮೆಲ್ಲಮಂ ಜಿನಸಭಾಪ್ರಸ್ಥಾನಭೇರೀರವಂ ॥೩೧೨॥
ವ॥ ಆಗಳ್

ಕುನಯಕ್ಷೋಣಿಧ್ರಮಂ ಚೂರ್ಣಿಸೆ ನಿಜಮತವಜ್ರಪ್ರಹಾರಂ ತ್ರಿಳೋಕೀ
ಜನಮೋಹಧ್ವಾಂತಮಂ ಸಂಹರಿಸೆ ನಿಜತನುಚ್ಛಾಯೆ ದುರ್ವೃತ್ತಕೀನಾ
ಶನ ಸೇನಾಚಕ್ರಮಂ ಚಾಳಿಸೆ ನಿಜವಿಜಯಾರಂಭಗಂಭೀರಭೇರೀ
ಧ್ವನಿ ಧರ್ಮಾನುಗ್ರಹಾರ್ಥಂ ನಿಜಮೆನೆ ತಳರ್ದಂ ಧರ್ಮಚಕ್ರಾಧಿನಾಥಂ ॥೩೧೩॥

ಗಿಡುಬಳ್ಳಿಮರಂಗಳ್ ದಾಂ
ಗುಡಿಯಿಂ ತಳಿರಿಂದರಲ್ಗಳಿಂ ಪಣ್ಗಳದಿಂ
ಪಡೆದುವು ಚೆಲ್ವಂ ಜಿನಪತಿ
ನಡೆವೆಡೆಯೊಳ್ ನೆಲಸೆ ತಮ್ಮೊಳಾಱುಂ ಋತುಗಳ್ ॥೩೧೪॥

ಮರಕತದ ಜಗಲಿವೋಲು
ರ್ವರೆಯೆಲ್ಲಂ ಸರ್ವಸಸ್ಯದಿಂ ನಯನಮನೋ
ಹರಮೆನೆ ಪಸುರ್ಪುವೆತ್ತುದು
ಪರಮಜಿನೇಶ್ವರನ ಗಗನಗಮನೋತ್ಸವದೊಳ್ ॥೩೧೫॥

ವ॥ ಅಂತು ಸಮವಸರಣ ವಿಹಾರಮಹಾಮಹಿಮೆಯಂ ಮೆರೆಯುತ್ತುಂ

ನೀಡುತ್ತುಂ ಕುಮತಕ್ಕೆ ತೇಜದಟೆವಂ ವಿಖ್ಯಾತಿಯಂ ತಾಳ್ದಿದೊ
ಳ್ನಾಡಂ ಕೂಡೆ ತೊಟಲ್ದು ಭವ್ಯಜನಮಂ ರತ್ನತ್ರಯಾಳಂಕೃತಂ
ಮಾಡುತ್ತುಂ ದೆಸೆವಣ್ಗೆ ಧರ್ಮವಿಜಯಶ್ರೀಕೇಕರಾಳೋಕನಂ
ಕ್ರೀಡಾಮಂಡನಮಾಗೆ ಮಲ್ಲಿಜಿನಪಂ ಸಮ್ಮೇದಮಂ ಮುಟ್ಟಿದಂ ॥೩೧೬॥

ವ॥ ಅಂತು ಬಂದು ಧ್ಯಾನಪ್ರವೃತ್ತನಾಗಿ

ಪ್ರಕೃತಿಗಳಗಲ್ಕೆಯಿಂ ಶು
ಕ್ತಿಕೆಯಿಂ ಪೊಱಮಟ್ಟು ಮೌಕ್ತಿಕಂ ನೀರದಮಾ

ಲಿಕೆಯಿಂ ತೊಲಗಿದ ಶಶಿ ಕಾ
ಳಿಕೆಯಿಂ ಬೇರ್ಪಟ್ಟ ಕನಕಮಿರ್ಪಂತಿರ್ದಂ ॥೩೧೭॥

ವ॥ ಅನಂತರಂ

ಕಿಡೆ ನಿಶ್ಶೇಷಮಘಾತಿ ಪಜ್ಜಳಿಸೆ ತನ್ನೆಂಟುಂ ಗುಣಂ ಕೂಡೆ ನೇ
ರ್ಪಡೆ ದೀಪಾರ್ಚಿಗಳಂತಿರೂರ್ಧ್ವಗತಿ ಮೂಱುಂ ಲೋಕದಿಂ ಮೇಲೆ ಬೆ
ಳ್ಗೊಡೆಯಿರ್ಪಂತೆವೊಲಿರ್ದ ಸಿದ್ಧನಿಳಯಕ್ಕಾನಂದದಿಂ ಬಂದು ಕೈ
ವಿಡಿದಂ ಶಾಶ್ವತಮಪ್ಪ ಮುಕ್ತಿವಧುವಂ ಶ್ರೀಮಲ್ಲಿಭಟ್ಟಾರಕಂ ॥೩೧೮॥

ಪರಮಂ ಫಾಲ್ಗುಣಶುದ್ಧದ
ಭರಣಿಯ ಪಂಚಮಿಯ ಪೂರ್ವರಾತ್ರದೊಳಪವ
ರ್ಗರಮಾವದನಾಂಭೋರುಹ
ಪರಿಮಳಮಂ ಪೀರ್ದನಂತಸುಖಮಯನಾದಂ ॥೩೧೯॥

ವ॥ ಆಗಳ್

ಚಿತ್ರಾತಪತ್ರದಿಂ ಶತ
ಪತ್ರವನಸ್ಥಳಿಯನಿಟಿಸೆ ಗಗನಂ ದೆಸೆಯಂ
ಚಿತ್ರಿಸೆ ಕಿರೀಟಕಿರಣಂ
ದ್ವಾತ್ರಿಂಶತ್ತ್ರಿದಶಪತಿಗಳಂದೆಟ್ಟಿಂದರ್ ॥೩೨೦॥

ವ॥ ಅಂತು ನಿರ್ವಾಣಪೂಜೆಗೆ ನಿಖಿಳಗೀರ್ವಾಣಪತಿಗಳೆಟ್ಟಿರ್ಪಾಗಳ್

ಜ್ಞಾನಕೃಶಾನುವಿಂದಮುರಿದಳ್ಗಿದ ಕಾಮನ ಮೋಹನಾಸ್ತ್ರ ಸಂ
ತಾನಶರಾಸನಾವಳಿಯನೀಕೆಗಳೊಪ್ಪಿಸಲೀ ಜೀನೇಂದ್ರನಾ
ಸ್ಥಾನಿಗೆ ಬಂದರಕ್ಕುಮೆನೆ ರಂಜಿಸೆ ಕೆಂದಳದೊಳ್ ಲತಾಂತಮಾ
ಲಾನಿಕುರುಂಬಮೀಕ್ಷಣಮೆ ಬಂದುದು ಕಿನ್ನರ ಕನ್ಯಕಾಜನಂ ॥೩೨೧॥

ವ॥ ಅಂತರಮರಸಮಿತಿ ಗಗನತಳದಿನವನೀತಳಕ್ಕವತರಿಸಿ [ತೀರ್ಥಂಕರನನರ್ಚಿಸಿ] ಕರಕಿಸಲಯಮಂ ನೊಸಲ್ಗೆ ತಂದು

ಮೊದಲ್ಗಿಡಿಸಿ ಘಾತಿಕರ್ಮಮನಘಾತಿಕರ್ಮಂಗಳಂ
ಬಿದಿರ್ಚಿ ಗುಣಮೆಂಟುಮಂ ತಳೆದನಾಕುಳಂ ಪೊರ್ದಿದೈ
ಸದಾಶಿವನಿವಾಸಮಂ ಚರಮದೇಹಮಂ ಬಿಟ್ಟು ನೀಂ
ತ್ವದೀಯ ಪರಮತ್ವಮಂ ಪಿಡಿದೆ ಮಲ್ಲಿಭಟ್ಟಾರಕಾ ॥೩೨೨॥

ವ॥ ಎಂದು ವಸ್ತುಗುಣರೂಪಸ್ತವನಂಗಳಂ ಮಾಡಿ

ಪರಮಾನಂದದಿನಾಡೆ ತಾಂಡವಮನೀಶಾನೇಂದ್ರನುತ್ಕರ್ಷ ಹ
ರ್ಷರಸಾಡಂಬರದಿಂ ಗಣಂ ಕುಣಿಯ ಲಾಸ್ಯಪ್ರೌಢಿಯಿಂ ದೇವಸುಂ
ದರಿಯರ್ ಮೆಚ್ಚಿಸೆ ಮೆಚ್ಚಿ ಬಿಚ್ಚಳಿಸನಾವಂ ಸರ್ವಗೀರ್ವಾಣಭ
ಕ್ತಿರಸಾವೇಶಕೃತಾರ್ಚನಾತಿಶಯಮಂ ನಿರ್ವಾಣಕಲ್ಯಾಣಮಂ ॥೩೨೩।

ವ॥ ಅಂತು ನಿರ್ವಾಣಪೂಜೆಯಂ ನಿರ್ವರ್ತಿಸಿ ದೇವದೇವರೆಲ್ಲಂ ನಿಜನಿವಾಸಕ್ಕೆ ಪೋಪುದುಂ

ಕುಸುಮಶ್ರೀಖಂಡಕೃಷ್ಣಾಗರು ವಿವಿಧ ಫಳಾದ್ಯರ್ಚನಾದ್ರವ್ಯದಿಂದ
ರ್ಚಿಸಿ ಮತ್ತಂ ತನ್ನ ಚಿತ್ತಂ ತಣಿಯದೆ ನಿರವದ್ಯಂ ಚಿರಸ್ಥಾಯಿ ನಿಚ್ಚಂ
ಪೊಸತೆಂಬೀ ಪೆರ್ಮೆಯಿಂ ಪಾವನಮೆನಿಸಿದ ವಾಕ್ಯೋಪಹಾರಂಗಳಿಂದ
ರ್ಚಿಸಿದಂ ಶ್ರೀಮಲ್ಲಿಭಟ್ಟಾರಕಪದಯುಗಮಂ ಭಾರತೀಕರ್ಣಪೂರಂ ॥೩೨೪॥

ಇದು ಪರಮಜಿನಸಮಯಕುಮುದಿನೀಶರಚ್ಚಂದ್ರ
ಬಾಲಚಂದ್ರಮುನೀಂದ್ರಚರಣನಖಕಿರಣಚಂದ್ರಿಕಾಚಕೋರಂ ಭಾರತೀಕರ್ಣಪೂರಂ
ಶ್ರೀಮದಭಿನವಪಂಪವಿರಚಿತಮಪ್ಪ
ಮಲ್ಲಿನಾಥಚರಿತಪುರಾಣ [ಸಂಗ್ರಹಂ] ಸಂಪೂರ್ಣಂ

❖❖

ಟಿಪ್ಪಣಿಗಳು

೧. ಸುಮನೋವರ್ಷ–ಹೂಮಳೆ; ಉತ್ತಂಸ–ತಲೆಯ ಆಭರಣ, ಕಿರೀಟ; ತಾರಾತರಳ–ನಕ್ಷತ್ರದಂತೆ ಹೊಳೆಯುವ; ಉತ್ತಮಾಂಗ–ತಲೆ; ಶರಜ್ಜ್ಯೋತ್ಸ್ನಾ–ಶರತ್ಕಾಲದ ಬೆಳದಿಂಗಳು; ಪಾಂಡುಚ್ಛತ್ರ–ಬೆಳ್ಗೊಡೆ; ಅಜಿಪು–ತಿಳಿಸು; ದಿವ್ಯಭಾಷಾ–ತೀರ್ಥಂಕರನ ಮುಖದಿಂದ ಪ್ರಕಟವಾಗುವ ಸರ್ವಭಾಷಾತ್ಮಕ ಧ್ವನಿ; ವ್ಯಾಪಾರ–ಬಳಕೆ, ಅವಾಪ್ತಿ–ಪ್ರಾಪ್ತಿ.

ಪಾದ, ಪಾದಪೀಠ, ಉತ್ತಮಾಂಗಗಳ ವರ್ಣನೆಯ ಮೂಲಕ ಮಲ್ಲಿನಾಥನ ಐಶ್ವರ್ಯಸೂಚನೆ ಮತ್ತು ಅವನಿಂದ ಸುಖಯಾಚನೆ, ಈ ಪದ್ಯದ ಉದ್ದೇಶ, ಇಲ್ಲಿಯ ಚಂದ್ರ, ತಾರಾ, ಜ್ಯೋತ್ಸ್ನಾಪದಗಳ ಪರಸ್ಪರ ಸಂಬಂಧವನ್ನು ಗಮನಿಸಿರಿ, ನಾಗಚಂದ್ರನ ಗುರುವಿನ ಹೆಸರೂ ಬಾಲಚಂದ್ರನೆಂಬುದನ್ನು ನೆನೆಯಿರಿ.

೨. ನಯಂ–ಚಾತುರ್ಯ; ಕುಂದದ ವರ್ಣಂ–ಕುಂದಲಾರದ ಬಣ್ಣ, ಕುಂದ (=ಮಲ್ಲಿಗೆ) ದಂತಹ ಶುಭ್ರವರ್ಣ?; 'ಯಾ ಕುಂದೇಂದು....' ಶ್ಲೋಕವನ್ನು ನೆನೆಯಿರಿ, ನಿಜವೆಂಬರೂಪ–ಸಹಜರೂಪ; ಭಂಗಿ–ನಿಲುವು; ಚಾತುರ್ಯ–ನೈಪುಣ್ಯ.

"ಪದವಿನ್ಯಾಸವಿಲಾಸಂ, ಅಂಗವಿಭವಂ, ಚೆಲ್ವಾದ ದೃಷ್ಟಿಪ್ರಸಾದದೊಳೊಂದಾದ ನಯಂ, ಮೃದೂಕ್ತಿ, ವನಿತಾಸಾಮಾನ್ಯವಲ್ತೆಂಬ ಕುಂದದ ವರ್ಣಂ, ನಿಜವೆಂಬ ರೂಪ....." ಎಂದು ಬಿಡಿಸಿ ಓದಬೇಕು.

೩. ಮನ್ನಿಸುಗೆ–ದಯಪಾಲಿಸಲಿ;

ಪಂಪ; ಬೋಧನ ಚಾಲುಕ್ಯವಂಶದ ಸಾಮಂತದೊರೆ ಇಮ್ಮಡಿ ಅರಿಕೇಸರಿಯ ಆಸ್ಥಾನಕವಿ. ಈತನ ಗುರು ದೇವೇಂದ್ರಮುನಿ, ತಂದೆ ಭೀಮಪಯ್ಯ, ತಾಯಿ ಅಬ್ಬಣಬ್ಬೆ, ತಮ್ಮ ಜಿನವಲ್ಲಭ, ತಾಯಿಯ ತವರೂರು ಅಣ್ಣಿಗೆರೆ. ಕೃತಿಗಳು; ಆದಿಪುರಾಣಂ, ವಿಕ್ರಮಾರ್ಜುನ ವಿಜಯಂ (=ಪಂಪಭಾರತಂ).

ಪೊನ್ನ; ಮಳಖೇಡದ ರಾಷ್ಟ್ರಕೂಟಚಕ್ರವರ್ತಿ ಮುಮ್ಮಡಿ ಕೃಷ್ಣರಾಜನ ಆಸ್ಥಾನದಲ್ಲಿ ಅನುಪಲಬ್ಧ ಭುವನೈಕ ರಾಮಾಭ್ಯುದಯ ರಚನೆ ಮತ್ತು ಕವಿಚಕ್ರವರ್ತಿ ಗೌರವ ಸಂಪಾದನೆ, ತರುವಾಯ ಕಲ್ಯಾಣ ಚಾಲುಕ್ಯಚಕ್ರವರ್ತಿ ತೈಲಪನ ಮಂತ್ರಿಗಳಾದ ಮಲ್ಲಪ್ಪಯ್ಯ, ಪುನ್ನಮಯ್ಯರ ಆಶ್ರಯದಲ್ಲಿ ಶಾಂತಿಪುರಾಣ ರಚನೆ, ಇನ್ನೊಂದು ಕೃತಿ ಜಿನಾಕ್ಷರಮಾಲೆ.

ರನ್ನ; ವಿಜಾಪುರ ಜಿಲ್ಲೆಯ ಮುಧೋಳದಲ್ಲಿ ಜನನ, ಕಲ್ಯಾಣ ಚಾಲುಕ್ಯಚಕ್ರವರ್ತಿಗಳಾದ ತೈಲಪ, ಇರಿವಬೆಡಂಗರ ಆಸ್ಥಾನದಲ್ಲಿ ಸಾಹಸ ಭೀಮವಿಜಯಂ (=ಗದಾಯುದ್ಧಂ), ಈ ಚಾಲುಕ್ಯರ

ಮಂತ್ರಿ ನಾಗದೇವನ ಧರ್ಮಪತ್ನಿ ಅತ್ತಿಮಬ್ಬೆಯ ಆಶ್ರಯದಲ್ಲಿ ಅಜಿತಪುರಾಣಂ ರಚನೆ, ಮುಧೋಳದಿಂದ ಹೊರಬಿದ್ದು, ಚಾಲುಕ್ಯರ ಆಸ್ಥಾನ ಪ್ರವೇಶಿಸಿದ ವರೆಗಿನ ಸಾಹಿತ್ಯಕೃಷಿ ಸಂಶೋಧನಾರ್ಹ.

೪. ವೀತರಾಗ–ರಾಗಾದಿಗಳನ್ನು ತ್ಯಜಿಸಿದವ, ಜಿನ; ಕವಿತಾಪರಿಣತಿ–ಕಾವ್ಯಸಿದ್ಧಿ; ಮೆಱೆದ–ಮೆರೆದಂತಹ; ಈ ಕಾವ್ಯ ರಸಾರ್ಣವಪೂರ್ಣಚಂದ್ರನಭಿನವ ಪಂಪಂ–ಈ ಕಾವ್ಯ ರಸಸಾಗರದ ಪೂರ್ಣಚಂದ್ರನು ಅಭಿನವಪಂಪನಾಗಿದ್ದಾನೆ; 'ಸಕಲರಸ'ಗಳಿಂದ ಕೃತಿ 'ರಸಾರ್ಣವ'ವಾಯಿತು; ಕವಿತಾಪರಿಣತಿ'ಯಿಂದ ಕವಿ 'ಪೂರ್ಣಚಂದ್ರ'ನಾದನು.

೫. ಜಿನಪತಿ–ತೀರ್ಥಂಕರ, ಜಿನಾಗಮ–ಜೈನಧರ್ಮ; ಜಿನಗುಣಸಂಪತ್ತು–ತೀರ್ಥಂಕರನ ೪೬ ಗುಣಗಳ ಸಂಪತ್ತು, ಅವು; ಅತಿಶಯಗಳು–೩೪, ಪ್ರಾತಿಹಾರ್ಯಗಳು–೮ ಅನಂತಚತುಷ್ಟಯಗಳು–೪; ಎಱಪಂ–ನಮಸ್ಕರಿಸುತ್ತಾನೆ. ಎಱಗು ಪದದಲ್ಲಿಯ ವೇಗಶಕ್ತಿಯನ್ನು ಊಹಿಸಿಕೊಳ್ಳಬೇಕು.

೬. (ಜ)ನಪತಿಸಭೆ–ರಾಜಸಭೆ, ಹಸ್ತಪ್ರತಿಗಳಲ್ಲಿ ಸಿಗುವ ಪಾಠ 'ಜಿನಪತಿ ಸಭೆ', ಇದರಿಂದ ನಾಗಚಂದ್ರನು ತೀರ್ಥಂಕರನ ಸಮವಸರಣ (=ಜಿನಪತಿಸಭೆ) ಮಂಟಪದಲ್ಲಿ ಪೂಜ್ಯನೆಂಬ ಇತಿಹಾಸ ವಿರುದ್ಧವೂ, ನಂಬಿಕೆ ವಿರೋಧವೂ ಆದ ಅರ್ಥಹೊರಡುವುದರಿಂದ '(ಜ)ನಪತಿಸಭೆ' ಎಂದು ತಿದ್ದಿಕೊಳ್ಳಲಾಗಿದೆ. ನಾಗಚಂದ್ರ, ಹೊಯ್ಸಳರ ಆಸ್ಥಾನದಲ್ಲಿದ್ದನೆಂದು ದೇವಚಂದ್ರನ ಹೇಳಿಕೆ. ಆದರೆ ಕಲ್ಯಾಣ ಚಾಲುಕ್ಯರ ಆಸ್ಥಾನದಲ್ಲಿರುವ ಸಂಭವ ಹೆಚ್ಚು. ಪ್ರಸ್ತಾವನೆಯಲ್ಲಿಯ 'ಜನ್ಮಸ್ಥಳ' ವಿಭಾಗ ನೋಡಿರಿ; ಪದಾರ್ಥನಿಪುಣಂ–ಜೈನಪರಿಭಾಷೆಯಲ್ಲಿ ಹೇಳುವುದಾದರೆ ಜೀವ, ಅಜೀವ, ಆಸ್ರವ, ಬಂಧ, ಸಂವರ, ನಿರ್ಜರೆ, ಮೋಕ್ಷ, ಪಾಪ, ಪುಣ್ಯ–ಈ ಒಂಬತ್ತು 'ಪದಾರ್ಥ'ಗಳ ಸ್ವರೂಪವನ್ನು ಬಲ್ಲವ', ಚಾರುಚರಿತ–ಹಿತಕರವಾದ ಚಾರಿತ್ರ್ಯವುಳ್ಳವ.

೭. ಪದರಚನೆ–ಶಬ್ದಸಂಯೋಜನೆ ('ರೀತಿ ಎಂದು ಕಾವ್ಯಮೀಮಾಂಸೆಯ ಪರಿಭಾಷೆ); ಶ್ರವಣ–ಕಿವಿ; ಅಂಚೆಯ ತುಪ್ಪುೞ + ಅಂಚೆಯಂ–ಹಂಸದ ತುಪ್ಪಳಿನ ತುದಿಯನ್ನು; ತಿರಿಪು–ತಿರುಗಿಸು, ತೀಡು; ಪೊಸಬಗೆ–ಹೊಸಭಾವ; ರಸಭಾವ–ರಸಸ್ಥಿತಿ. 'ಪದರಚನೆ.... ಮೃದುವೆನೆ', 'ಪೊಸಬಗೆ...... ರಸಭಾವದೊಳೋಕುಳಿಯಾಡೆ'– ಹೀಗೆ ಎರಡು ವಾಕ್ಯಗಳು.

೮. ಭವ್ಯಜನ–ರತ್ನತ್ರಯ (ಸಮ್ಯಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ)ದಿಂದ ಶೋಭಿಸುವವರು; ಕಥಾ–ಪೌರಾಣಿಕ ಕಥೆ; ಪರಿಸ್ಪಂದ–ಮಿಡಿತ; ನಿಮಿರ್ಚು–ವಿಸ್ತರಿಸು.

"ಪಿರಿದೆನಿಸಿರ್ದ ರಾಮಕಥೆಯಂ ಕಿಱಿದಾಗಿರೆ...." ಎಂದು ಹೇಳುತ್ತ ಹಿರಿದಾದ ರಾಮಾಯಣವನ್ನು ರಾಮಚಂದ್ರಚರಿತ ಪುರಾಣದಲ್ಲಿ ಕಿರಿದುಗೊಳಿಸಿದ್ದರೆ, ಇಲ್ಲಿ "ಕಿರಿದೀ ಕಥಾಪರಿಸ್ಪಂದಮಿದಂ ನಿಮಿರ್ಚೆ" ಎಂದು ಹೇಳುತ್ತ ಕಿರಿದಾದ ಮಲ್ಲಿನಾಥಪುರಾಣವನ್ನು ಹಿರಿದುಗೊಳಿಸಿದ್ದಾನೆ. ನಾಗಚಂದ್ರ.

ಇಂಥ ಕೃತಿಯನ್ನು ರಚಿಸೆಂದು ಹೇಳಲಿಕ್ಕೂ ಅಭವ್ಯರು ಅನರ್ಹರು; ಭವ್ಯರು ಮಾತ್ರ ಅರ್ಹರು. ಇದೇ ರೀತಿ ಇಂಥ ಕೃತಿಯನ್ನು ಕೇಳಲು ಭವ್ಯರೇ ಅಧಿಕಾರಿಗಳು. ನೋಡಿರಿ; 'ಕೇಳಿರೊ ಭವ್ಯರು ನಿಮಗೊಂದು ಸುಕಥೆಯ ಹೇಳವೆನತಿ ಮೃದುವಾಗಿ (ಭರತೇಶ ವೈಭವ ೧–೧೧), 'ಸತ್ಯಶರಣರು ತಿಳಿವುದೀ ಪ್ರಭುಲಿಂಗಲೀಲೆಯನು' (ಪ್ರಭುಲಿಂಗಲೀಲೆ, ಅ–೧೩).

೯. ವಿಕಥಾ–ಪೌರಾಣಿಕವಲ್ಲದ ಕಥೆ ಅಂದರೆ ಲೌಕಿಕ ಕಥೆ; ಅಲ್ಪಸಂಸ್ತವನ–'ಅಲ್ಪ'ದ ಸ್ತುತಿ; ಎಂಬಿನಂ–ಎನ್ನುವ ಹಾಗೆ; ಕೈಸಾರ್–ಕೈವಶವಾಗು; ಐಹಿಕ–ಇಹಕ್ಕೆ ಸಂಬಂಧಿಸಿದ; ಆಮುತ್ರಿಕ–ಪರಕ್ಕೆ ಸಂಬಂಧಿಸಿದ (ಆಮುತ್ರ=ಪರಲೋಕ); ಆನುಷಂಗಿಕ–ಸಾಮಾನ್ಯ, ಗೌಣ; ನಿಃಶ್ರೇಯಸಶ್ರೀಪದ–ಮೋಕ್ಷಲಕ್ಷ್ಮೀಪದವಿ.

ಇಹ, ಪರ(ಸುಖ)ಗಳು ಸಾಮಾನ್ಯವೆಂಬ ಭಾವನೆ ಮೂಡಿಸುವ (ಅಸಾಮಾನ್ಯವಾದ) ಮುಕ್ತಿಸುಖವು ಕೈಸೇರುತ್ತದೆಯೆಂದು ಅರ್ಥ.

"ನಾಯಕನನ್ಯನಾಗೆ ಕೃತಿ ವಿಶ್ರುತಮಾಗದುದಾತ್ತರಾಘವಂ । ನಾಯಕನಾಗೆ ವಿಶ್ರುತಮೆನಿಪ್ಪುದು....." (ಪಂರಾಸಂ ೧–೪) ಎಂಬ ಪದ್ಯವನ್ನು ನೆನಪಿಸಿಕೊಳ್ಳಿರಿ.

೧೦. ಪುಣ್ಯಹೇತು–ಪುಣ್ಯಕಾರಣ; ಪುದುವೊಕ್ಕು–ಅನ್ಯೋನ್ಯವಾಗಿ ಸೇರಿ; ಆ ರಸಂಗಳ್–ಆ ಮಿಕ್ಕ ರಸಗಳು; ಚಿತ್ರಿತ ಸಿದ್ಧರಸ–ಸಂಸ್ಕಾರಗೊಳಿಸಿದ (?) ಪಾದರಸ (ಇದರ ಸ್ಪರ್ಶದಿಂದ ಲೋಹ ಚಿನ್ನವಾಗುತ್ತದೆ); ಉಪವಿಧ–ತಾಗಲ್ಪಟ್ಟ; ಹೇಮರಸ–ರಸರೂಪದ ಚಿನ್ನ; ಲೋಹರಸ–ರಸರೂಪದ ಲೋಹ, ಈ ಪದ್ಯದ ಭಾವ ಸ್ಪಷ್ಟ, ಅರ್ಥ ಅಸ್ಪಷ್ಟ.

ನವರಸಗಳಲ್ಲಿ ಶಾಂತರಸ ನಿರೂಪಣವೊಂದೇ ಪುಣ್ಯಕಾರಣ; ಮಿಕ್ಕ ರಸನಿರೂಪಣೆ ಪಾಪಕಾರಣವೆಂದು ನಾಗಚಂದ್ರನ ನಂಬಿಕೆ. ಇಲ್ಲಿ "ನಿನಗೆ ರಸವೊಂದೆ ಶಾಂತಮೆ ಜಿನೇಂದ್ರ" (ಮಪುಸಂ, ೨೦೩) ಎಂಬ ವಾಕ್ಯವನ್ನು ಗಮನಿಸಿರಿ. 'ಸ್ತ್ರೀರೂಪಮೆ ರೂಪಂ, ಶೃಂಗಾರವೊಂದೆ ರಸಂ' ಎಂದು ನೇಮಿಚಂದ್ರ, 'ಏಕೋ ರಸಃ ಕರುಣ ಏವ' ಎಂದು ಭವಭೂತಿ ಹೇಳುತ್ತಾರೆ. ಇದು ಅವರವರ ದೃಷ್ಟಿ.

೧೧. ಭರತಮಹೀಶ್ವರನಿಗೆ ತಾರಭೂಧರ (=ಕೈಲಾಸಪರ್ವತ)ದಲ್ಲಿ ವೃಷಸೇನನೆಂಬ ಗಣಧರನು ಪುರುಜಿನ (=ಆದಿತೀರ್ಥಂಕರ)ನ ಸನ್ನಿಧಿಯಲ್ಲಿ ತಿಳಿವಂತೆ ಹೇಳಿದ; ಆಮೇಲೆ ಮಗಧೇಶ್ವರಮಂಡಳಿಕ (=ಶ್ರೇಣಿಕಮಹಾರಾಜ)ನಿಗೆ ವಿಪುಲಾದ್ರಿಯಲ್ಲಿ ಗೌತಮಗಣಧರನು ವರ್ಧಮಾನಜಿನನ ಸನ್ನಿಧಿಯಲ್ಲಿ ತಿಳಿವಂತೆ ಹೇಳಿದ... ಎಂದು ಮುಂತಾಗಿ ಅನ್ವಯ.

೧೨. "ಹಿಮಶೈಲಪ್ರಮುಖಂಗಳಾಱು ಕುಲಶೈಲಂಗಳ್, ವಿಯದ್ವಾಹಿನೀ ಪ್ರಮುಖಂಗಳ್ ಪದಿನಾಲ್ಕು ಗೋತ್ರನದಿಗಳ್, ಶೋಭಾರತಂ ಭಾರತಪ್ರಮುಖಂಗಳ್ ವಿಷಯಗಂಳೇೞು....." ಎಂದು ಅನ್ವಯ.

ಜೈನರ ಪ್ರಕಾರ ಊರ್ಧ್ವ, ಮಧ್ಯ, ಅಧೋ ಎಂದು ಲೋಕಗಳು ಮೂರು, ಮಧ್ಯಲೋಕದ ಮಧ್ಯದಲ್ಲಿ ಜಂಬೂದ್ವೀಪವಿದೆ; ಈ ಜಂಬೂದ್ವೀಪದಲ್ಲಿ ಪೂರ್ವಪಶ್ಚಿಮವಾಗಿ ಹಿಮವನ್, ಮಹಾಹಿಮವನ್, ನಿಷಧ, ನೀಲ, ರುಕ್ಮಿನ್, ಶಿಖರಿನ್ ಎಂಬ ಆರು ಕುಲಪರ್ವತಗಳಿವೆ. (ಹಿಂದುಗಳ ಪ್ರಕಾರ ಏಳು ಕುಲಪರ್ವತಗಳು). ಇವುಗಳಿಂದ ಏಳು ವಿಷಯ (=ದೇಶ)ಗಳು ಅಸ್ತಿತ್ವಕ್ಕೆ ಬಂದಿವೆ. ಅವು; ಭರತ, ಹೈಮವತ, ಹರಿ, ವಿದೇಹ, ರಮ್ಯಕ, ಹೈರಣ್ಯವತ, ಐರಾವತ. ಈ ಜಂಬೂದ್ವೀಪದಲ್ಲಿ ೧೪ ಮಹಾನದಿಗಳಿವೆ. ಅವು; ಗಂಗಾ, ಸಿಂಧು, ರೋಹಿತ್, ರೋಹಿತಾಸ್ಯಾ, ಹರಿತ್, ಹರಿಕಾಂತಾ,

ಸೀತಾ ಸೀತೋದಾ, ನಾರೀ, ನರಕಾಂತಾ, ಸುವರ್ಣಕೂಲಾ, ರೂಪ್ಯಕೂಲಾ, ರಕ್ತಾ, ರಕ್ತೋದಾ, ಕುಲಶೈಲ–ಕುಲಪರ್ವತ; ವಿಯದ್ವಾಹಿನೀ–(ಆಕಾಶ) ಗಂಗಾನದಿ; ಗೋತ್ರನದಿ–ಮುಖ್ಯನದಿ; ಶೋಭಾರತಂ–ಶೋಭೆಯಲ್ಲಿ ಅಸಕ್ತವಾದ; ವಿಷಯ–ನಾಡು.

೧೩. ಈ ಪದ್ಯದಲ್ಲಿ ಮಂದರ ಪರ್ವತ ಮತ್ತು ನಾಗಚಂದ್ರರ ವರ್ಣನೆ ಶ್ಲೇಷೆಯಿಂದ ಬಂದಿದೆ. ದೊರವೆತ್ತುನ್ನತಿಯಿಂ– ೧. ಪ್ರಸಿದ್ಧವಾದ ಎತ್ತರದಿಂದ ೨. ಪ್ರಸಿದ್ಧವಾದ ಹಿರಿಮೆಯಿಂದ; ಸಮಸ್ತವಿಬುಧಪ್ರಸ್ತುತ್ಯ ವಿಖ್ಯಾತಿಯಿಂ–೧. ಎಲ್ಲ ವಿದ್ವಾಂಸರಿಂದ (ಕಾವ್ಯದಲ್ಲಿ) ಸ್ತುತಿಸಲ್ಪಟ್ಟ ಕೀರ್ತಿಯಿಂದ ೨. ಎಲ್ಲ ವಿದ್ವಾಂಸರಿಂದ ಸ್ತುತಿಸಲ್ಪಟ್ಟ ಕೀರ್ತಿಯಿಂದ, ಸ್ಥಿರಸಂಪತ್ತಿಯಿಂ– (ಲೋಹ, ಶಿಲೆ, ಅರಣ್ಯ ಇತ್ಯಾದಿ) ಶಾಶ್ವತವಾದ ಸಂಪತ್ತಿನಿಂದ ೨. ಶಾಶ್ವತವಾದ (ದ್ರವ್ಯ) ಸಂಪತ್ತಿನಿಂದ; ಈ ವಸುಂಧರೆಗೆ ತಾಂ ಮಧ್ಯಸ್ಥನಾದೊಳ್ಪಿನಿಂ–೧. ಈ ಭೂಮಿಗೆ ತಾನು ಮಧ್ಯದಲ್ಲಿರುವ ಲೇಸಿನಿಂದ ೨. ಈ ರಾಜ್ಯಕ್ಕೆ ತಾನು ಮಧ್ಯದಲ್ಲಿರುವ ಲೇಸಿನಿಂದ; ಧರಣೀಭೃತ್ಪತಿ ಪೂಜ್ಯಮಾದ ಮಹಿಮಾವಷ್ಟಂಭದಿಂ– ೧ ಪರ್ವತಶ್ರೇಷ್ಠವೆಂದು ಪೂಜ್ಯವಾದ ಮಹಿಮೆಯ ಅವಲಂಬನದಿಂದ ೨. ಚಕ್ರವರ್ತಿಗೆ ಪೂಜ್ಯನಾದ ಮಹಿಮೆಯ ಅವಲಂಬನದಿಂದ...... ಇತ್ಯಾದಿ; ನಾಡೆ–ಚೆನ್ನಾಗಿ; ಸಾಹಿತ್ಯಸರ್ವಜ್ಞ–ನಾಗಚಂದ್ರನ ಒಂದು ಬಿರುದು, ನಾಗಚಂದ್ರನ ಚರಿತ್ರೆ ಮತ್ತು ವ್ಯಕ್ತಿತ್ವಗಳ ಮೇಲೆ ಬೆಳಕು ಚೆಲ್ಲಿದ ಪದ್ಯವಿದು. ಪ್ರಸ್ತಾವನೆಯ 'ಜನ್ಮಸ್ಥಳ' ವಿಭಾಗ ನೋಡಿರಿ.

೧೩ವ. ಅಪರ–ಪಶ್ಚಿಮ.

೧೪. ಮಾಡ–ಉಪ್ಪರಿಗೆ; ಆಲೀಢ–ಚುಂಬನ, ಆಲಿಂಗನ; ಚೈತ್ಯಗೇಹ–ಜಿನಮಂದಿರ; ಜನಪದ–ದೇಶ; ಅಂಗೋದ್ಭವ ಜಯವನಿತಾಜನ್ಮಗೇಹ–ಕಾಮನ ಜಯವನಿತೆಯ ಜನ್ಮಭೂಮಿ. ಇಲ್ಲಿ ಅಂಗೋದ್ಭವ ಮತ್ತು ವಿದೇಹ (ವಿ+ದೇಹ) ಪದಗಳನ್ನು ಗಮನಿಸಿ.

೧೪ವ. ಪೂರ್ವಾಪರವಿದೇಹ–ಪೂರ್ವವಿದೇಹ, ಪಶ್ಚಿಮವಿದೇಹ, ಮಧ್ಯದಲ್ಲಿರುವ ಮಂದರಪರ್ವತ ಕಾರಣವಾಗಿ ವಿಶಾಲವಾದ ವಿದೇಹಕ್ಷೇತ್ರವನ್ನು ಪೂರ್ವವಿದೇಹ, ಪಶ್ಚಿಮವಿದೇಹವೆಂದು ಕರೆಯಲಾಗುತ್ತದೆ. ಸಂಕಲ್ಪ–ಅಭಿಪ್ರಾಯ.

೧೫. ಇಂದುವ ಪದಿನಾಱುಂ ಕಳೆ–ಚಂದ್ರನ ಹದಿನಾರು ಕಲೆಗಳು; ಪೂರ್ವ ವಿದೇಹ–ಹದಿನಾರು ನಾಡುಗಳನ್ನೊಳಗೊಂಡ ಒಂದು ದೇಶ. ಇದು ಮಂದರಪರ್ವತದ ಪೂರ್ವಪ್ರದೇಶ.

೧೬. ಜೊಂಪ–ಗುಂಪು; ಲತೆ–ಮಲ್ಲಿಗೆ(?), (ಮಾವಿಗೆ ಜೊತೆಯಾಗಿರಬೇಕಾದುದು ಮಲ್ಲಿಗೆ); ಪೂಗವನ –ಅಡಿಕೆಯ ಬನ; ಪೊದರ್–ಹೊದರು, ಗುಂಪು; ಅಪಾಂಗ–ಕಡೆಗಣ್ಣು; ಶೋಭಾವಹ–ಶೋಭೆಯನ್ನು ತರುವ; ವಿಷಯ–ನಾಡು; ರಾಗ–ಅನುರಾಗ, ಸಂತೋಷ,

೧೭. ಜಾನಪದ–ದೇಶ, ಹಳ್ಳಿಪ್ರದೇಶ; ಗಾಡಿ–ಸೊಬಗು; ಅಳಿನೀ–ಹೆಣ್ಣುದುಂಬಿ; ಜಾನಿಸಿ–ಧ್ಯಾನಿಸಿ, ಏಕಚಿತ್ತದಿಂದ, ಸಾರ–ಶ್ರೇಷ್ಠ; ಪರಿಕಾಲ್–ಪ್ರವಾಹ; ಒಯ್ಯನೆ–ಮೆಲ್ಲನೆ; ತೀರಮೆ–ಕೊನೆ, ಗುರಿ; ಪರಿಮ್ಲಾನತೆ–ದಣಿವು; ಸೈತುಬಟ್ಟೆ–ನೇರಮಾರ್ಗ; ವಿಷಯ–೧. ನಾಡು ೨. ಅನುರಾಗ.

"ತೀರಮೆಯುಮಂ ಪಥಿಕರ್ ಮಱೆದು, ಇಲ್ಲೆನಲ್ ಪರಿಮ್ಲಾನತೆ, ಸೈತುಬಟ್ಟೆ ನಡೆಯಲ್ಪಡೆಯರ್....." ಎಂದು ಅನ್ವಯ. ಅಲ್ಲಿಂದ ಕದಲುವ ಆಸೆಯಿಲ್ಲದ ಕಾರಣ ನೇರ ಮಾರ್ಗಬಿಟ್ಟು ಸುಮ್ಮಸುಮ್ಮನೆ ಸುತ್ತುದಾರಿಯನ್ನು ತುಳಿಯುತ್ತಿದ್ದರೆಂದು ಅರ್ಥ. 'ವಿಷಯಾಂತರಾಳ' ಪದದ ಶ್ಲೇಷವನ್ನು ಗಮನಿಸಿರಿ. ಸಾರಪರಿಕಾಲ್ ಇಲ್ಲಿಯ ಅರಿಸಮಾಸವನ್ನು ತಪ್ಪಿಸಬೇಕಾದರೆ 'ಸಾರ'ವನ್ನು ಕನ್ನಡವೆಂದು ವಿವೇಚಿಸಬೇಕು. ಇಲ್ಲವೆ 'ಸಾಲಪರಿಕಾಲ್' ಮೊದಲಾಗಿ ಹೊಸಪಾಠ ಊಹಿಸಬೇಕು.

೧೭ವ. ವಿಷಯವಿಲಾಸಿನೀ-ದೇಶವೆಂಬ ಸ್ತ್ರೀ ('ವಿಷಯ' ಪದದ ಶ್ಲೇಷವನ್ನು ಪರಿಭಾವಿಸಿರಿ); ಸನಾಭಿ-ಸಹಜಾತ, ಅವಳಿ ಮಕ್ಕಳು.

೧೮. ಗಡಣ-ಸಮೂಹ; ಪಾರಾವತ-ಪಾರಿವಾಳ; ಪದವು-ಸಂತೋಷ; ಮೂಡು-ತೇಲು; ಮುಳ್ಕು-ಮುಳುಗು; ಶತಪತ್ರ-ಕಮಲ; ಪತ್ರಶರ-ಎಲೆಯಿಂದ ಮಾಡಿದ ಬಾಣ; ಪತ್ರಭಂಗ-ಸ್ತ್ರೀಯರು ಮೊಲೆ ಕಪೋಲಗಳ ಮೇಲೆ ಬಿಡಿಸಿಕೊಳ್ಳುವ ಎಲೆಗಳ ಚಿತ್ರ.

೧೯. ಪೊಣರ್ವಕ್ಕಿ-ಚಕ್ರವಾಕಪಕ್ಷಿ; ಪುಣಿಲ್ಗಿಡಿದು ಬಱಲ್ವಿನಂ ತಗುಳುತುಂ-ಉಸುಬಿನ ದಿನ್ನೆಯ ಮೇಲೆ ಬೆನ್ನಟ್ಟುತ್ತ?

೧೮ ಮತ್ತು ೧೯ನೇ ಪದ್ಯಗಳಲ್ಲಿ 'ಪೌರವಿಲಾಸಿನೀ'ಯರ ವರ್ಣನೆಯಿದ್ದರೆ ೨೦, ೨೧ನೆಯ ಪದ್ಯದಲ್ಲಿ 'ವಾರವಿಲಾಸಿನೀ'ಯರ ವರ್ಣನೆಯಿದೆ.

೨೦. ಗಂಡನನೊರ್ವಳೂರ್ವಶಿಗೆ... ಕೊಟ್ಟ(ಳ್)-ಶಚಿ; (ಗಂಡನನೊರ್ವಳ್) ಗಂಗೆಗೆ..... ಕೊಟ್ಟ(ಳ್)-ಗೌರಿ; (ಗಂಡನನೊರ್ವಳ್) ಗೋಪಿಗೆ ಕೊಟ್ಟ (ಳ್)-ಲಕ್ಷ್ಮೀ; ಮನಂಗೊಳ್ (ಮನಮಂ + ಕೋಳ್)- ಮನಸ್ಸನ್ನು ಸೆರೆಹಿಡಿ. ರತಿ ಪ್ರೀತಿಸಿದ ಪುರುಷನಿಗೆ ಅಂಗವೇ ಇಲ್ಲ (=ಅನಂಗ) ಎಂಬ ವ್ಯಂಗ್ಯ.

೨೧. ಅಪವರ್ಗ-ಮೋಕ್ಷ; ಎಳಸು-ಇಚ್ಛಿಸು; ಕಾವಂ-ರಕ್ಷಿಸುತ್ತಾನೆ; ದೇವವ್ರತ-ಭೀಷ್ಮ; ಅವಲ್-(ಒನಕೆಯಿಂದ) ಕುಟ್ಟು; ಭ್ರೂವಿಕ್ಷೇಪ-ಹುಬ್ಬಿನ ಹಾರುವಿಕೆ; ಆಟಂದು<ಆಟರ್ (ಧಾ) – ಮೇಲೆಬಿದ್ದು; ಪದವಿಯನಿತ್ತಂ ಮನೋಜಾತಂ..... ಸ್ಮರಂ- ಪದವಿಯನಿತ್ತಂತಹ ಮನೋಜಾತನಾದ ಕಾಮನು.

೨೧ವ. ಕಂಠಿಕಾ-ಕೊರಲ ಸರ; ಮಯೂಖಲೇಖೆ-ಕಿರಣ ರೇಖೆ;

೨೨. ಕರು-೧ ಘನ, ೨. ಎರಕ; ಕಣ್ದೆಱವಿ-ಪ್ರಾತ್ಯಕ್ಷಿಕೆ, ಸಾಕ್ಷಿ, ಕಲ್ವೆಸ-ಶಿಲ್ಪಕಾರ್ಯ; ಓಜೆ-ಕ್ರಮ, ಅಚ್ಚು-ಮುದ್ರೆ; ಕಂಡರಣೆ-ಕಡೆಯುವಿಕೆ; ಮಂಡನ-ಆಭರಣ; ಮರವೆಸ-ಕಾಷ್ಠಕರ್ಮ, ಮರದ ಕೆತ್ತನೆ; ಎಱೆವಟ್ಟು-ಆಶ್ರಯ; ಎರಕ-ಅಚ್ಚು; ಮೊಗ್ಗೆ-ಸಾಧ್ಯವೇ; ಬಿತ್ತರಿಸು-ವಿಸ್ತರಿಸು, ವಿವರಿಸು; ಸಪ್ತ ತಳ-ಏಳು ನೆಲೆ. ಜಾನಪದ ಕಥೆಗಳಲ್ಲಿ ಅರಮನೆಗೆ ಏಳು ಅಂತಸ್ತು ಹೇಳುವುದು ರೂಢಿ; ಬಹುಶಃ ಸಪ್ತಲೋಕಗಳ ಕಲ್ಪನೆಯಲ್ಲಿ ಅರಮನೆಯ ಭವ್ಯತೆಯನ್ನು ಭಾವಿಸುತ್ತಿದ್ದರೆಂದು ತೋರುತ್ತದೆ. ಹರ್ಮ್ಯ-ದೊಡ್ಡಮನೆ, ಅರಮನೆ. "ಕರುಕರುವಿಂಗೆ ಕಣ್ದೆಱವಿ, ಕಲ್ವೆಸದೋಜೆಗೆ ನಚ್ಚಿನಚ್ಚು...." ಎಂದು ಅನ್ವಯ.

೨೩. ವಿತರಣ–ದಾನ;ಆಸೆ<ಆಶಾ–ದಿಕ್ಕು; ಚಾರಿತ್ರ್ಯ–ನಡತೆ, ಆಚಾರ; ಜಿನೋಪದಿಷ್ಟ–ತೀರ್ಥಂಕರನಿಂದ ಉಪದೇಶಿತವಾದ; ವಿಧಿವಾಕ್ಯ–ನಿರ್ಣಾಯಕ ಹೇಳಿಕೆ; ಖ್ಯಾಪನ–ಹೊಗಳುವಿಕೆ; ಈರೇೞುಭುವನಂ–ಹದಿನಾಲ್ಕು ಲೋಕಗಳು; ಎಯ್ದವು–ಪೂರ್ಣವಾಗವು, ಸಾಲವು.

೨೪. ನೋಂತಳ್–(ಪೂರ್ವದಲ್ಲಿ) ವ್ರತಮಾಡಿದಳು; ವಿದ್ರಾವಣ–ಕರಗಿಸುವಿಕೆ; ವಿಶ್ರುತ–ಪ್ರಸಿದ್ಧವಾದ; ಆಶ್ರಯ–ನೆಲೆ

೨೫. ಸನ್ನಿಹಿತ–ಕೂಡಿಕೊಂಡಿರುವ; ತಕ್ಕುದು–ಯೋಗ್ಯವಾದುದು.

೨೬. ಪುಣ್ಗಲೆ–ಗಾಯದ ಕಲೆ; ನರಶಾಸನ–ಮನುಷ್ಯಶರೀರವೆಂಬ ಶಾಸನ,

೨೬ವ. ಅರ್ಣವ–ಸಮುದ್ರ; ವೇಳಾ–ಕಡಲತೀರ; ಕಂಠೀರವ–ಸಿಂಹ; ಅಭಿರಾಮ–ಮನೋಹರ.

ಚಂದ್ರ–ಚಂದ್ರಿಕಾಲಕ್ಷ್ಮಿ, ವಿದ್ಯಾಧರ–ವಿದ್ಯಾಲಕ್ಷ್ಮಿ, ವಿನಯಾರ್ಣವ–ವೇಳಾವನಲಕ್ಷ್ಮಿ, ವಿಕ್ರಾಂತಕಂಠೀರವ–ವೀರಲಕ್ಷ್ಮಿ ಈ ಜೋಡಿಗಳನ್ನು ಗಮನಿಸಿರಿ.

೨೭. ನಿರತಿಶಯ–ಅತ್ಯತಿಶಯ; ನಿಖಿಲ–ಎಲ್ಲ; ಅಗ್ರಮಹಿಷಿ–ಪಟ್ಟದ ರಾಣಿ.

೨೮. ಅತನು ಶ್ರೀಕಾಂತೆ–ರತಿದೇವಿ; ಕಾರ್ಗಾಲ–ಮಳೆಗಾಲ; ಕಳರುತಿ–ಮಧುರಧ್ವನಿ; ಕರ್ಣಿಕಾರ–ಬೆಟ್ಟದಾವರೆ; ದ್ಯುತಿ–ಕಾಂತಿ; ಎೞಗಿಸು–ಮುಗಿಬೀಳುವಂತೆ ಮಾಡು;

"ಕಾರ್ಗಾಲದೊಳ್ ಹಂಸಿ ಲೀಲಾಗತಿಯಿಂ.... ತನ್ನಂತೆ ಚೆಲ್ವ ತಳೆಯವು; ಹೇಮಂತದೊಳ್ ಕೋಗಿಲೆ ಕಳರುತಿಯಿಂ...... ತನ್ನಂತೆ ಚೆಲ್ವಂ ತಳೆಯವು, ಗ್ರೀಷ್ಮದೊಳ್ ಕರ್ಣಿಕಾರಂ..... ತನ್ನಂತೆ ಚೆಲ್ವಂ ತಳೆಯವು" ಎಂದು ಅನ್ವಯ.

ಮಳೆಗಾಲ, ಚಳಿಗಾಲ, ಬೇಸಗೆಕಾಲಗಳಿಗೆ ತಕ್ಕಂತೆ ಸೌಂದರ್ಯ ರೂಪಾಂತರಗಳಿಂದ ಮೆರೆಯುವ ಧಾತ್ರಿಗಿಂತ ಈಕೆ ಚೆಲುವೆ. ಹೀಗಾಗಿ 'ಧಾತ್ರೀಪತಿ' ಇವಳನ್ನು ಧಾತ್ರಿಗಿಂತ ಹೆಚ್ಚು ಪ್ರೀತಿಸುವುದು ಸ್ವಾಭಾವಿಕ. ಇಲ್ಲಿಯ ಗತಿ, ರುತಿ, ದ್ಯುತಿ ಪದಗಳನ್ನು ಗಮನಿಸಿರಿ.

೨೯. ವಜ್ರಲೇಪ–ಗಾಢವಾಗಿ ಅಂಟಿಕೊಳ್ಳುವ ಬಣ್ಣ; ಅನುಬಂಧ–ಯೋಗ್ಯವಾದ ಹೊಂದಿಕೆ; ಆಕೃತಿ–ಶರೀರ; ಪತ್ತುಗೆ–ಹೊಂದಿಕೆ, ಸ್ನೇಹ; ಅನಂಗರಾಗ–ಕಾಮಾಸಕ್ತಿ.

ಇಲ್ಲಿ 'ಓಕಳಿ' ಪದವಿರುವುದರಿಂದ 'ರಾಗ' ಪದಕ್ಕೆ 'ಬಣ್ಣ' ಎಂಬ ಅರ್ಥವೂ ಧ್ವನಿತವಾಗುತ್ತದೆ. 'ಅಮೃತ' (ಅ+ಮೃತ) ಪದದಿಂದ ಶಾಶ್ವತ ಎಂಬ ಅರ್ಥವನ್ನೂ ಊಹಿಸಿಕೊಳ್ಳಬಹುದು.

೨೯ವ. ಕೂಪ–ಬಾವಿ; ನಿಮ್ನ–ತಗ್ಗು; ಅಸಿಯ–ತೆಳ್ಳನೆಯ; ಬಾಸೆ–ಹೊಟ್ಟೆಯ ಮೇಲಿನ ಕೂದಲು; ಬಾಸಣಿಸು–ಮುಚ್ಚು; ನೆಲೆಮೊಲೆ–ಉನ್ನತವಾದ ಮೊಲೆ; ನೆಲೆಮಾಡು–ಆಶ್ರಯಿಸು; ಬಾಯ್ದೆಱೆ–ತುಟಿ; ನಿಱಿದಲೆ–ಗುಂಗುರಗೂದಲುಳ್ಳ ತಲೆ; ಕೈನಿಱಿದಾಡು–ಓರಣಗೊಳಿಸು; ಅಳಿಪು–ಆಸೆ.

೩೦. ಮೇಖಳಾ–ನಡುಪಟ್ಟಿ, ಡಾಬು.

೩೧. ತೇಂಕು–ತೇಲು; ಶ್ರೀವಧು, ಆ ವಧು ಪದಗಳನ್ನು ಲಕ್ಷಿಸಿರಿ.

೩೨. ಅಮೃತಾಂಶುಲೇಖೆ–ಚಂದ್ರಕಳೆ; ಕುವಲಯ–ಕಪ್ಪು (ರಾತ್ರಿ) ಕಮಲ.

೩೨ವ. ಪರೀತ–ಸುತ್ತುವರಿದ; ಸಹಚರೀ–ಸ್ನೇಹಿತೆ.

೩೩. ಪರಿವೇಷ–ಮಂಡಲ, ಚಂದ್ರನ ಸುತ್ತಲೂ ಕಟ್ಟುವ ಬೆಳಕಿನ ವಲಯ; ಪರಿಘಟಿತ–ಸುತ್ತಲೂ ಕೂಡಿದ; ಶಿಶಿರಜವನಂ–ತಂಪಿನಿಂದ ಹುಟ್ಟಿದ ನೀರು, ತಂಪಾದ ನೀರು; ಅಂಭೋಜವನಂ–ಸರೋವರ.

೩೪. ಡಿಂಡೀರಪಿಂಡ–ನೊರೆಯ ಗಟ್ಟಿ; ಹಿಮಾನಿಳ–ತಂಗಾಳಿ; ತೆರಳ್ದು–ಸಾಗಿ; ಸ್ವೈರ–ಸ್ವೇಚ್ಛೆ.

೩೪ವ. ಪದ್ಮರಾಗ–ಕೆಂಪು ಬಣ್ಣ; ಪಾಸೆಱೆ–ಹಾಸುಗಲ್ಲು; ನಿಶ್ಚಳ–ಚಲಿಸದ; ಪಕ್ಷ್ಮಪಾಳಿ–ಕಣ್ಣೆವೆ; ನಯನಪುತ್ರಿಕೆ–ಕಣ್ಣಗೊಂಬೆ; ನೀಡುಂ–ವಿಶೇಷವಾಗಿ; ದೋಹಳ–ಬಯಕೆ.

೩೫. ಎಳವೆಱೆ<ಎಳದು+ಪೆಱೆ–ಬಾಲಚಂದ್ರ; ಬಳೆ–ಬೆಳೆ; ಶುಕ್ತಿಕೆ–ಮುತ್ತಿನ ಚಿಪ್ಪು; ಗರ್ಭಂ–ಗರ್ಭಕೋಶ; ಬಸಿರ್–ಹೊಟ್ಟೆ.

೩೬. ಅಗ್ಗಳಿಸು–ಅಧಿಕವಾಗು; ಸೀರೆಯ ಕೈ–ಬಟ್ಟೆಯಿಂದ ಮಾಡಿದ ಕೈ.

೩೭. ಸೊಡರ್–ದೀಪ; ಹರಿನೀಲ–ಇಂದ್ರನೀಲ; ಕುಟ್ಟಿಮ–ನೆಲಗಟ್ಟು.

೩೮. ದರ–ಸ್ವಲ್ಪ; ರಜ–೧. ಧೂಳಿ ೨. ಪರಾಗ; ಪೊರೆ–ಲೇಪಿಸು; ಕರಿಯಾಲಿ–ಕಣ್ಣಿನ ಕಪ್ಪು ಗುಡ್ಡೆ, ಸರೋಜ, ರಜ, ತುಂಬಿ ಪದಗಳನ್ನು ಲಕ್ಷಿಸಿರಿ.

೩೯. ಕಣ್ಬೀಲಿಯ ಕಣ್–ಕಣ್ಣುಳ್ಳ ನವಿಲುಗರಿಯ ಕಣ್ಣು, ಗಂಡು ನವಿಲಿನ ಗರಿಯ ಕಣ್ಣು; ಕರ್ಚು–ತೊಳೆ.

೪೦. ದಿವಸಶ್ರೀ–ಹಗಲೆಂಬ ಲಕ್ಷ್ಮಿ; ತಿಗ್ಮಾಂಶು–ಸೂರ್ಯ; ಬಾಲಾತಪ–ಎಳವಿಸಿಲು; ತೀವು–ತುಂಬು; ಆವಾಪ್ತಿ–ಪ್ರಾಪ್ತಿ; ಪ್ಲವ–ಮಹಾಪೂರ; ಮುಟ್ಟೆವರು–ಸಮೀಪ ಬರು.

೪೦ವ. ಸ್ಫಾರಿತ–ಅರಳಿದ.

೪೧. ತಿಂಗಳ್–ಚಂದ್ರ.

೪೨. ಮನ್ಯು–ದುಃಖ; ದಳ್ಳಿಸು–ವ್ಯಾಪಿಸು; ಗಗ್ಗರಿಕೆ–ಗದ್ಗದ ಧ್ವನಿ; ಕಂದಳ–ಗದ್ದ; ಬೀಗು–ಉಬ್ಬು.

೪೩. ಕಾವು–ಕಾಂಡ; ಬಿಡುಮುತ್ತು–ಬಿಡಿಮುತ್ತು; ಬಿಡುತರು–ಬಿಚ್ಚು, ಉದುರು,

೪೪. ಎಡೆವಱೆಯದೆ–ಅವಕಾಶ ಕೊಡದೆ, ಪನಿತ–ಹನಿಬಿದ್ದ; ಕನ್ನಡಿಸು–ಪ್ರತಿಬಿಂಬಿಸು.

೪೪ವ. ಸಂಭ್ರಮ–ಉದ್ರೇಕ; ಕ್ಷುಭಿತ–ತಳಮಳಗೊಂಡ; ದೋಹಳ–ಬಯಕೆ; ಜಲಕ್ಕನೆ–ಕೂಡಲೇ

೪೫. ಭವದೀಯ–ನಿನ್ನ; ನಿಕ್ಕುವಂ–ನಿಶ್ಚಯವಾಗಿ.

೪೫ವ. ನೈಮಿತ್ತಿಕ–ಜೋಯಿಸ; ನಿರೂಪಿತ–ಹೇಳಿದ.

೪೬. ಪರ್ವಿದ–ಹಬ್ಬಿದ; ನಾಡೆ–ಚೆನ್ನಾಗಿ; ಧೂಸರಿತ–ಕಪ್ಪಾದ; ನಿಬ್ಬರ< ನಿರ್ಭರ–ಅತಿಶಯ ಭಾರವಾದ; ತೊಟ್ಟನೆ–ಕೂಡಲೇ.

೪೬. ವ. ಸಮಾಹಿತ–ಸಮಾಧಾನ ಹೊಂದಿದ.

೪೭. ಶ್ರೀಖಂಡ–ಶ್ರೀಗಂಧ; ಅಕ್ಷತಾಕ್ಷತ–ತುಂಡಾಗದ ಅಕ್ಕಿಕಾಳು; ಕಾಂತ–ಮನೋಹರ; ಲತಾಂತ–ಹೂ; ಅಗರು–ಸುಗಂಧದ್ರವ್ಯ.

೪೮. ಶರದಭ್ರ–ಶರತ್ಕಾಲದ ಆಕಾಶ; ತಾಮರಸ–(ದ್ಭ)ತಾವರೆ; ಪ್ರಸೂನ–ಹೂ; ನಿಶಾಂತ್ಯ–ರಾತ್ರಿಯ ಕೊನೆಯ ಅವಧಿ.

೪೮ವ. ಅಳಕಜಾಳ–ಕೂದಲಸಮೂಹ; ನೆರಪು–ಸಮೂಹಗೊಳಿಸು; ತೆರೆಸುತ್ತು–ತೆರೆಯ ಹಾಗೆ ಸುತ್ತು; ವಿಭ್ರಮ–ಸಡಗರ; ಅತನುಚಾಪ–ಕಾಮನ ಬಿಲ್ಲು, ಬಿಂಬ–ತೊಂಡೆಹಣ್ಣು. ಅಧರ–ಕೆಳದುಟಿ; ತಿದುರ್ಚು–ಒಪ್ಪಗೊಳಿಸು; “ಪರಿವಾರವಧೂ ಜನಂ.... ಬಳಸಿಬರೆ” ಎಂದು ಅನ್ವಯ.

೪೯. ಪೀಲಿದಜೆ–ನವಿಲುಗರಿಯ ಕೊಡೆ.

೫೦. ಕೇವಳಮೇ?–ಸಾಮಾನ್ಯವೆ?

೫೦ವ. ಕತಿಪಯ–ಕೆಲವು.

೫೧. ಅಪಾಂಗ–ಕಡೆಗಣ್ಣು; ಮರೀಚಿ–ಕಿರಣ; ಪುದಿ–ತುಂಬು; ಸುಯ್–ಉಸಿರು; ಸಾರ್–ಸಮೀಪ ಬರು; ಸುರ್ಕುಂಗುರುಳ್ಮಾಲೆ ನೀಳ್ದವು–ಗುಂಗುರುಗೂದಲು ಮಾಲೆಯಂತೆ ನೇರಗೊಂಡವು. ಇದು ಗರ್ಭಿಣಿಯ ಲಕ್ಷಣ. ನೆಲೆವೆರ್ಚ್ಚು < ನೆಲೆ + ಪೆರ್ಚು–ಹೆಚ್ಚಾಗು; ತಳ್ಳಂಕ–ಹೊಯ್ದಾಡುವಿಕೆ.

೫೨. ತನು–ಕೋಮಲ; ಪ್ರಸಾಧನ–ಅಲಂಕಾರ; ಕಂಠಿಕೆ–ಕೊರಲ ಸರ; ಓಲೆ–ಕಿವಿಯಾಭರಣ, ಉಡೆನೂಲ್–ನಡುವಿಗೆ ಕಟ್ಟುವ ದಾರ, ಕಟಿಸೂತ್ರ; ಅಣ್ಕೆ–ಲೇಪನ; ತಿಸರಂ–ಮೂರು ಎಳೆಯ ಸರ; ಮೃಣಾಳಿಕೆ–ಕಮಲದ ದೇಟು; ಪಿಂಡುಗಂಕಣಂ–ಮುರಿಗೆಬಳೆ.

೫೨ವ. ಅಭಿಲಷಿತಫಳಪ್ರಸವ–ಇಚ್ಛಿತ ಫಲ ನೀಡುವ.

೫೩. ವಾಸರ–ದಿವಸ; ಸನ್ನಿಭ–ಸಮಾನ; ಆನಂದನಂ–ಆನಂದವನ್ನುಂಟು ಮಾಡುವವ.

೫೩ವ. ಸ್ವಾಂತ–ಮನಸ್ಸು; ಗಣಕ–ಜೋಯಿಸ; ಕಲ್ಯಾಣ–ಸಮಾರಂಭ.

೫೪. ಕನಕಮಹೀಧರ–ಬಂಗಾರ ಬೆಟ್ಟ.

೫೪ವ. ಕತಿಪಯ–ಕೆಲವು; ಸುರಮಹೀರುಹ–ಕಲ್ಪವೃಕ್ಷ.

೫೫. ಅಧಃಕರಿಸು–ತ್ಯಜಿಸು.

೫೬. ನೀಳ್ಕಲ್–ನಿಲುಕಿಸಿಕೊಳ್ಳಲು; ಉದ್ಧತ–ಉದ್ಧಟ; ಅದಿರ್–ಅಲ್ಲಾಡು, ನಡುಗು; ಅಕ್ಷೂಣ–ಕೊರತೆಯಿಲ್ಲದ; ಅಂಭೋಧರ–ಮೋಡ.

೫೬ವ. ಅಪ್ಪುಕೆಯ್–ಆಲಿಂಗಿಸು, ಅಂಗೀಕರಿಸು.

೫೭. ಕೋಶಗೃಹ–ದ್ರವ್ಯಭಾಂಡಾರ; ದಾಯಾದ–ಆಸ್ತಿಯ ಬಾಧ್ಯತೆಯುಳ್ಳುವ, ವೈರಿ; ಕ್ಷಮ–ಸಮರ್ಥ.

೫೭ವ. ದಕ್ಷಿಣಸಮೀರ–ತೆಂಕಣ ಗಾಳಿ; ತಪನ–ಸೂರ್ಯ; ಮಂಡಲಾಗ್ರ–ಆಯುಧವಿಶೇಷ; ಅಮೃತರುಚಿ–ಚಂದ್ರ; ವಿಶದ–ನಿರ್ಮಲ, ವಿಸ್ತಾರ.

೫೮. ನನೆದೋಱು–ಮೊಗ್ಗೆಬಿಡು; ವಸಂತದೂತಿ–ಅದಿರ್ಮುತ್ತೆ; ಡೊಂಬು–ಗರ್ವ; ಆಜ್ಞೆ ಮುತ್ತೆ–ಆಜ್ಞೆ ಮುತ್ತಲಾಗಿ; ದೆಸೆಬಿದ್ದಂ (<ದಿಶಾವಿದ್ಧಂ)–ದಿಗಂತದ ವರೆಗೆ, ಕಾಂತಾ–ಚೆಲುವೆ; ಓರೊಂದೆ–ಒಂದೊಂದೆ; ಘರ್ಮಾಂಬು–ಬೆವರು.

೫೯. ಪಂಚಮರಾವ–ಪಂಚಮಧ್ವನಿ; ತೀರ್–ಸಾಧ್ಯವಾಗು; ಇಮ್ಮಾವು–ಸವಿಮಾವು; ವೀರಪಟ್ಟ ಸಂದರ್ಭದಲ್ಲಿ ಪಟ್ಟವನ್ನು ಹಣೆಗೆ ಕಟ್ಟುತ್ತಿದ್ದರೆಂದು ತೋರುತ್ತದೆ. ಪಂಪಭಾರತದ ಭೀಷ್ಮರ ವೀರಪಟ್ಟ ಪ್ರಸಂಗ ನೋಡಿರಿ.

೬೦. ಆಸವ–ಮಕರಂದ.

೬೧. ಚಳಿಕೆ–ಹೂವಿನ ಕಂಕಣ; ಬಲ್ಮುಗುಳ್–ಬಲಿತ ಮುಗುಳು; ಅಗ್ರಪಲ್ಲವ–ಚಿಗುರು; ಪಸಿವು–ಹಸಿವು; ಮಧು–ವಸಂತ.

ಬಲ್ಮುಗುಳ್–ಪುಷ್ಪದಲ್ಲಿ–ಮಲ್ಲಿಗೆ; ಅಗ್ರಪಲ್ಲವ–ಫಳತರು–ಚೂತ ಹೀಗೆ ಮಲ್ಲಿಗೆ, ಮಾಮರಗಳ ಕ್ರಮಸೂಚನೆಯಿದೆ. "ಆವುದಱಗ್ರಪಲ್ಲವಾವಳಿ ಮೂಡಿ[ಯೊ]ಳ್ದೊಡರ್ಚೆ ರತಿಗೊಪ್ಪಮನಿತ್ತುದು" ಎಂದು ಇಡಿಯಾಗಿ ಓದಿರಿ.

೬೨. ಕಳಿಕೆ–ಮುಗುಳು; ನಿಡಿಯ ಬಣ್ಣಸರಂ–ನಿಡಿದಾದ ಬಣ್ಣದ ಮಾಲೆ; ಕಾಕಳಿಯ ಸರಂ–ಮಧುರ ಧ್ವನಿ; ಕಯ್ಪೆಸರಂ–ಒಗರು ಧ್ವನಿ; ಇಂದೊಳದ ಸರಂ–ಇಂದೋಳರಾಗದ ಸ್ವರ (?); ಧನುರ್ಭರ–ಬಿಲ್ಲಿಗೆ ಭಾರ; ಅಸಮಾಸ್ತ್ರ–ಕಾಮ; ಐಸರ–ಐದುಬಾಣ.

ತನ್ನ ಐದು ಸರ (<ಶರ=ಬಾಣ)ಗಳಿಗಿಂತ ಮಾಮರದ ಈ ನಾಲ್ಕು ಸರ (ಮಾಲೆ, ಸ್ವರ)ಗಳು ಹಗುರಾದುದರಿಂದ ಕಾಮನಿಗೆ ಇಷ್ಟ.

೬೨ ವ. ಪುಗಿಲ್–ಪ್ರವೇಶ; ಯಾಮ (> ಜಾವ)–೭ ೧/೨ ಗಳಿಗೆ; ನರ್ಮಸಚಿವ ವಿದೂಷಕ; ಗಾಯಿನೀ–ಹಾಡುವ.

೬೩. ಇಂಗುಲಿಕ–ಒಂದು ಬಗೆಯ ಕೆಂಪು ಬಣ್ಣ; ಮೇಘವಣ್ಣಿಗೆ<ಮೇಘವರ್ಣಿಕಾ–ಮೋಡದ ಬಣ್ಣ; ಝುಳಂಬ–ನಿಲುವಂಗಿ, ಮೇಲುಮುಸುಕು.

೬೩ವ. ಕೊಂಡು–ತೆಗೆದುಕೊಂಡು; ಬಾಸಣಿಸು–ಮುಚ್ಚು; ದುಗುಲ<ದುಕೂಲ–ರೇಶಿಮೆ; ಉತ್ಸಂಗ–ತೊಡೆ; ಸಮುದಾಯಶೋಭೆ–ಸಾವಯವ ಸೌಂದರ್ಯ; ಅಕೃಷ್ಟಿ–ಆಕರ್ಷಣೆ; ಬಳ್ಳಿಮಾವು–ಬಳ್ಳಿಯಿಂದ ಆಲಂಗಿತವಾದ ಮಾಮರ; ಪಂಚಪಲ್ಲವ–ಕೊನರ್, ಅಂಕುರ, ತಳಿರ್, ಮುಗುಳ್, ಅಲರ್ (ನೋಡಿರಿ ಮಪು.೫–೨೬); ಅಣ್ಕೆ–ಲೇಪನ; ಕೊಸಗು–ಬೆಟ್ಟದಾವರೆ; ವಸಂತದೂತಿ–ಅದಿರ್ಮುತ್ತೆ; ಕಪೋತ–ಕಂದು; ತಿಳಕ–ಜಾಜಿ; ಮಯಿಂದವಾಟಿ–ಒಂದು ಜಾತಿಯ ಬಾಳೆ.

೬೪. ತಿಱಿ–ಆಯ್ದುಕೊಳ್ಳು; ತಾಮ್ರತುಂಡ–ಕೆಂಪುಚಂಚು; ಆಮ್ರ–ಮಾಮರ; ಬಿಸಕಾಂಡ–ಕಮಲದ ದೇಟು; ಕುಡುಕ–ಗುಟುಕ; ಬಲ್ಮೆ–ನೈಪುಣ್ಯ; ಕಣ್ದೆಱಿ–ಪ್ರಕಟವಾಗು; ಚಿತ್ರವಿಧ–ಚಿತ್ರಕ್ರಮ.

೬೫. ಕರೆಗಣ್ಮು (ಕರೆಯಂ+ಕಬ್ಬು)–ದಡವನ್ನು ತೊಳೆ, ಮೇರೆಮೀರು; ರಥಾಂಗ–ಚಕ್ರವಾಕಪಕ್ಷಿ; ನೆರೆ–ಮಿಲನಹೊಂದು; ಬುದ್ಬುದ–ನೀರಗುಳ್ಳೆ; ತೆರಳ್–ಹೋಗು, ಚಲಿಸು; ಕುಟ್ಮಳ–ಮೊಗ್ಗೆ; ಪೋಲೆ–ಹೋಲಲಾಗಿ.

೬೬. ಬಂಡು–ಮಕರಂದ; ಕೋರಕಂ–ಸಣ್ಣಮೊಗ್ಗೆ; ಪೊರೆ–ಪದರು; ಊಟ್–ಧ್ವನಿಮಾಡು; ವರ್ಣವ್ಯಕ್ತಿ–ಬಣ್ಣದ ಅಭಿವ್ಯಕ್ತಿ; ಗುಲ್ಮ–ಕಂಟಿ; ತೀರ್–ಸಾಧ್ಯವಾಗು.

೬೭. ಬಟ್ಟಿದುವಾದ–ವರ್ತುಲವಾದ; ಕರ್ಬುರ–ಬಂಗಾರ; ಇಟ್ಟಳ–ಮನೋಹರ; ಅರಿದಾಳ–ಹಳದಿಬಣ್ಣದ ಧಾತು.

೬೮. ಮುದ್ಗ–ಹೆಸರುಕಾಳು; ತರಂಗಿತ--ತರಂಗತರಂಗವಾದ; ಪೃಷ್ಠ–ಹಿಂಭಾಗ; ಪರಪುಷ್ಟ–ಕೋಗಿಲೆ.

೬೯. ವಕುಳ–ಬಕುಳ, ನಾಗಕೇಸರ; ಮುಸುಂಬು–ಮುಖ; ಕೋಡೆಱಕೆ–ಮುದುಡಿದ(?)ರೆಕ್ಕೆ; ಅಲಂಪು–ಸಂತೋಷ.

೬೯ವ. ಕಳಿಕೆಗರ್ಚು–ಚಿಗುರು ಕಚ್ಚು; ಮೂಱುಂ ತೆಱದ ಮೊದಲ ಬಣ್ಣ–ಕೆಂಪು, ಹಳದಿ, ನೀಲಿ ಈ ಮೂಲ ಬಣ್ಣಗಳು.

೭೦. ಗೆಡೆಗೊಳ್–ಸೇರು, ಹೊಂದು; ಪತ್ರಭಂಗ–ಸ್ತ್ರೀಯರು ಸ್ತನ, ಕಪೋಲಗಳ ಮೇಲೆ ರೇಖಿಸಿಕೊಳ್ಳುವ ಎಲೆಗಳ ಚಿತ್ರ; ಅಮಾನುಷ–ಅಸಾಮಾನ್ಯ; ಕಂಟಕಿತ–ರೋಮಾಂಚಿತ.

೭೧. ಮಧು–ವಸಂತ; ಕೈವರು–ಒದಗು, ಸೇರು.

ಚೀರಘಟ್ಟಿ, ಮಾಂಡವ್ಯ, ವಿಶ್ವಕರ್ಮ–ಈ ಚಿತ್ರಶಿಲ್ಪಿಗಳಲ್ಲಿ ಚೀರಘಟ್ಟಿ ಐತಿಹಾಸಿಕ ಪುರುಷನೋ ಪುರಾಣ ವ್ಯಕ್ತಿಯೋ ಸಂದೇಹ. ಮಿಕ್ಕವರು ಪುರಾಣವ್ಯಕ್ತಿಗಳು. ಜಗನ್ನಾಥ ವಿಜಯದಲ್ಲಿಯೂ "ಚಿತ್ರಿಸಲ್ ವಿಶ್ವಕರ್ಮನ ಮಾಂಡವ್ಯನ ಚೀರಘಟ್ಟಿಯಳವಲ್ಲ" (೧೭–೧೧೭) ಎಂದು ಇದೇ ಕ್ರಮವಿದೆ. ಭ್ರೂಕೋಟಿ–ಹುಬ್ಬಿನ ಕೊನೆ.

೭೧ವ. ಕಳೆದುಕೊಂಡು–ತೆಗೆದುಕೊಂಡು; ಪ್ರಾಗಲ್ಭ್ಯ–ಪ್ರೌಢಿಮೆ.

೭೨. ಬಿಚ್ಚಳಿಸು<ವಿಸ್ತರಿಸು (?)–ಹೊಗಳು; ಎಯ್–ಸಮೀಪ ಬರು; ಪೂರ್ಣವಾಗು.

೭೨ವ. ಪಾಳೆ–ಹಾಳೆ; ಕೊನೆ–ಚಿಗುರು; ಅತಿಮುಕ್ತಕ–ಆದಿರ್ಮುತ್ತೆ; ಕೋಡೆಲೆ–ತಂಪಾದ ಎಲೆ; ಕೊಸಗು–ಬೆಟ್ಟದಾವರೆ; ದೋಣಿ–ದೊನ್ನೆ, ಬಟ್ಟಲು; ತಿಳಕ–ಜಾಜಿ; ಪ್ರತ್ಯಗ್ರ–ನವೀನ; ಪಲಾಶ–ಮುತ್ತುಗ; ಬಿಸಲತೆ–ಕಮಲ; ಕಾವು–ಕಾಂಡ; ದೇಟು; ಬಿಸತಂತು–ಕಮಲದ ದೇಟಿನ ಎಳೆ; ಕರ್ಬಾಳ(ಕರಿದು+ಬಾಳ) ಬಳ್ಳಿ–ಒಂದು ಬಗೆಯ ಬಳ್ಳಿ; ಸುಲಿಕೆ–ಸುಲಿದ ಪದರು; ಸಿವುಱು–ಸಿಗುರು; ಸೊವಡು–ಉಗ್ರವಾಸನೆ.

೭೩. ಎಯ್ದೆ–ಚೆನ್ನಾಗಿ; ಎಟ್ಟಿರು–ಎದ್ದುಬರು.

೭೩ವ. ಮನದೆಗೊಳ್–ಮನಃಪೂರ್ವಕ ಸ್ವೀಕರಿಸು, ಸಂತೋಷಗೊಳ್ಳು.

೭೪. ಕಳಭ–ಮರಿ; ಧ್ವಾನ–ಧ್ವನಿ; ವಿಹರಣ–ವಿಹಾರ; ಶುದ್ಧಾಂತ–ಅಂತಃಪುರ; ಅನುಲೇಪ–ಲೇಪಿಸಿಕೊಳ್ಳುವ ಸುಗಂಧದ್ರವ್ಯ; ಚಂಪಕಮಧುಮಧುರಾಲೋಕಂ–ವೈಶ್ರವಣ ಮಹಾರಾಜನ ವಿಶೇಷಣ. ಶಾಸನಗಳಲ್ಲಿ ಅರಸರಿಗೆ ಬಳಸುವ "ಚಂಪಕಾಮೋದ" ಎಂಬ ಬಿರುದನ್ನು ಇಲ್ಲಿ ನೆನೆಯಬೇಕು.

೭೪ವ. ಆಭಿಷವಣ–ಅಭಿಷೇಕ; ಪೂರ್ಣಕುಂಭ–೧, ತುಂಬಿದ ಕೊಡ, ೨. ದೊಡ್ಡ ತಲೆ; ನಕ್ಷತ್ರಚಕ್ರ–ನಕ್ಷತ್ರ ಸಮೂಹ; ಹಸ್ತ–೧. ಹಸ್ತನಕ್ಷತ್ರ೨. ಸೊಂಡಿಲು; ಘನಸಮಯ–ಮಳೆಗಾಲ; ಪುಷ್ಕರ–೧. ನೀರು, ೨. ಸೊಂಡಿಲತುದಿ; ಸಹಕಾರ–ಮಾಮರ; ಪಲ್ಲವ– ೧. ಚಿಗುರು, ೨. ಮುತ್ತು; ಶಿಶಿರಸಮಯ–ಚಳಿಗಾಲ; ಜಾತಿಭಂಗಭಂಗುರ೧. (?), ೨ (?); ನಿದಾಘಸಮಯ–ಬೇಸಗೆಕಾಲ; ಅಪಘನ–೧. ಮೋಡವಿಲ್ಲದ, ೨. ಅವಯವ; ಭದ್ರ–ಮಂಗಲ; ಪಟ್ಟವರ್ಧನ–ಪಟ್ಟದಾನೆ.

೭೫. ರುಕ್–ಕಿರಣ; ಜಳಜಳಿಸು–ಹೊಳೆ, ಪ್ರಕಾಶಿಸು; ವ್ಯಾಳ–ತುಂಟ.

೭೬. ಪಣ್ಣಿದ–ಸಿದ್ಧವಾದ; ಕರಿಣಿ–ಹೆಣ್ಣಾನೆ; ಪೊರೆ–ಪದರು.

೭೭. ಎಳವೆರೆ<ಎಳದು+ಪೆಱ್–ಬಾಲಚಂದ್ರ; ಪೊಳೆಯಿಸು–ತಿರುಗಿಸು; 'ಪೊಳೆ–ಲುಠನೇ', ಕಪೋಳದೊಳು ದಂತುಗಳಿಂದಗೆವೊಯ್ಯೆ ವಜ್ರಕುಂಡಳಂ–ಕರ್ಣಕುಂಡಲಗಳು ಕಪೋಲದಲ್ಲಿ ಪ್ರತಿಬಿಂಬಿಸಲು ಎಂದು ಒಟ್ಟು ಅರ್ಥ. ಪಾಠದೋಷ, ಅರ್ಥ ಸಂದಿಗ್ಧತೆಗಳಿಂದ ಕೂಡಿದೆ ಈ ಭಾಗ; ಅಣೆದು–ಅಪ್ಪಳಿಸಿ; ಅಂಕ–ಪ್ರಸಿದ್ಧ.

೭೮. ಕಣ್ಬೀಲಿ–ನವಿಲುಗರಿ; ಸತ್ತಿಗೆ<ಛತ್ರಿಕಾ–ಕೊಡೆ; ತಟಿ, ಮೇಘಡಂಬರ–ಇವು ಕೊಡೆ ವಿಶೇಷಗಳು; ತಟ್ಟು–ಹೆಣೆದುಕೊಂಡು; ರಾಣಿಯವಾಸ–ಅಂತಃಪುರ.

೭೯. ಲಾಸ್ಯ–ನೃತ್ಯ; ಪೂರ್ವರಂಗ–ನರ್ತನ ಮತ್ತು ನಾಟಕಗಳ ಪ್ರಾರಂಭಕ್ಕೆ ಮೊದಲು ಪೀಠಿಕಾರೂಪದಲ್ಲಿ ಜರುಗುವ ಕೆಲವು ಘಟನೆಗಳು; ಕ್ಷೇಪ–ಚೆಲ್ಲುವಿಕೆ; ಪ್ರಸ್ತುತ–ಸಿದ್ಧವಾದ, ಉಜ್ಜೃಂಭಿತ–ಅರಳಿದ, ಬೆಳೆದ; ರಂಭಾಸಸ್ಯ–ಬಾಳೆಯ ಸಸಿ; ಪೂಗೀವನ–ಅಡಿಕೆಯ ಬನ; ವೃತಿ–ಆವರಣ; ಹರಿತ–ಹಸಿರು; ಆಕಾಶ–ಬಯಲು.

೭೯ವ. ಮರಕತ–ಹಸಿರುರತ್ನ; ಕೃತಕಾಚಳ–ಕೃತ್ರಿಮ ಬೆಟ್ಟ; ಕ್ಷುಭಿತ–ತಳಮಳಗೊಂಡ; ನೀರಾಕರ–ಸಮುದ್ರ; ಸಂತಮಸ–ಕಡುಗತ್ತಲೆ; ಲೋಚನಪಥ–ದೃಷ್ಟಿಪಥ ಅನತಿದೂರ–ಸಮೀಪ.

೮೦. ಸುರಧನು–ಕಾಮನ ಬಿಲ್ಲು; ಕೇರ್–ಗೋಡೆ;

ಕಳಿಕೆ, ತಳಿರು, ಕುಟ್ಮಳ, ಅಲರ್–ಇವುಗಳ ವರ್ಣವ್ಯತ್ಯಾಸ ಮತ್ತು ವರ್ಣಸಂಯೋಜನ ಪ್ರಜ್ಞೆ ನಾಗಚಂದ್ರನ ವರ್ಣಪರಿಜ್ಞಾನಕ್ಕೆ ನಿದರ್ಶನ.

೮೧. ಮುಕುಲ–ಮೊಗ್ಗೆ; ಸ್ಮೇರ–ಮುಗುಳ್ನಗೆ; ಜಕ್ಕುಲಿಸು–ಕಟ್ಟಾಡಿಸು, ವಿನೋದಪಡಿಸು; ಲತಾಪ್ರಸವ–ಹೂ;

ಕ್ರಿಯಾಸಂಕೀರ್ಣತೆಯನ್ನು ಚೆನ್ನಾಗಿ ಚಿತ್ರಿಸುವ ಪದ್ಯವಿದು.

೮೨. ಸುರಗಿರಿ–ಮೇರುಪರ್ವತ; ಉಪಾಂತ–ಸಮೀಪ; ಸಿಂಧುರ–ಆನೆ.

೮೩. ಕಾರಮುಗಿಲ್–ಮಳೆಗಾಲದ ಮೋಡ; ಅಮೃತಾಂಶುಲಕ್ಷ್ಮಿ–ಬೆಳದಿಂಗಳು; ಪೆಂಡವಾಸ–ಅಂತಃಪುರ.

೮೪. ಲೋಲಕಟಾಕ್ಷ–ಚಂಚಲವಾದ ಕಡೆನೋಟ; ಅಕಾಂಡ–ಆಕಸ್ಮಿಕ; ಕಾಂಡಪಟ–ತೆರೆ, ಪರದೆ; ಮೇಖಳೆ–ನಡುಪಟ್ಟಿ, ಡಾಬು; ಸಿಂಜನ–ಗುಂಜಾರವ.

೮೫. ಸಂಮದ–ಉನ್ಮತ್ತತೆ; ಆಳಂಬನ–ಆಶ್ರಯ, ಆಧಾರ.

೮೬. ಅಳಿಪು–ಆಸೆ; ನನೆಕೊನೆವೋಗು–ಚೆನ್ನಾಗಿ ಬೆಳೆ; ಪುರಸ್ಸರಂ–ಮುಂದು ಮಾಡಿಕೊಂಡು; ತಳರ್–ನಡೆ, ಚಲಿಸು.

೮೭. ಧ್ವಾನ–ಧ್ವನಿ; ಆರಕ್ತ–ಕೆಂಪು; ಕೋರಕ–ಮುಗುಳು; ಸಹಕಾರ–ಮಾಮರ,

೮೮. ಮಂದ್ರ–ಸಂಗೀತದಲ್ಲಿ ಮೊದಲನೆಯ ಸಪ್ತಕದ ಸ್ವರ; ವಾಚಂಯಮಂ–ವಚೋನಿಗ್ರಹ; ಕನರ್ಗರ್ಚು–ಚಿಗುರುಕಚ್ಚು; ವೃಥಾ–ವ್ಯರ್ಥ; ಸ್ಥೂಳ–ಸಾಮಾನ್ಯ; ಅವನೀಜಾತ–ಮರ.

೮೮ವ. ಗೊಂದಲ–ಸಮೂಹ; ಚಂಚರೀಕ–ಭ್ರಮರ; ಕಷಾಯ–ಭಾವಾತಿರೇಕ; ಕುಂಠ–ಮಂದ. ಮದಾಂಧ; ಶ್ರುತಿಪಥ–ಕರ್ಣಮಾರ್ಗ, ಕಿವಿ.

೮೯. ಅಸದಳ–ಅಧಿಕ; ಜನಕಂ ಮಧು–ತಂದೆಯಾದ ವಸಂತ; ಪೊರೆ–ಸಲಹು; ಮುಖರಾಗಿ–ಕೆಂಪುಮುಖಿ; ಮಧುವ್ಯಸನಿ–ಮಕರಂದಾಸಕ್ತ; ಅನ್ಯಪುಷ್ಟ–ಕೋಗಿಲೆ.

ರೂಪ, ಯೌವನ, ಸಿರಿ–ಈ ಮೂರು ಪ್ರೌಢಿಮೆಯ ಸಂಕೇತಗಳು, ಮುಖರಾಗ, ಮಧುವ್ಯಸನ, ವಕ್ರವಚನ– ಈ ಮೂರು ಮದಾಂಧತೆಯ ಸಂಕೇತಗಳು.

ರೂಪ–ಮುಖರಾಗ; ಯೌವನ–ಮಧುವ್ಯಸನ; ಸಿರಿ–ವಕ್ರವಚನ ಈ ಜೋಡಿಗಳಲ್ಲಿಯ ಅರ್ಥಸೌಂದರ್ಯವನ್ನು ದೃಷ್ಟಿಸಿರಿ.

೮೯ವ. ಮಾಕಂದ–ಮಾಮರ; ಮಕರಧ್ವಜ–ಕಾಮ.

೯೦. ಇಸು–ಬಾಣಪ್ರಯೋಗ ಮಾಡು; ಇಡುವಗೆ–ಮೂಲ ವೈರಿ;

೯೧. ಕರಣಗ್ರಾಮ–ಪಂಚಕರಣಗಳೆಂಬ ಗ್ರಾಮಗಳು; ಬಾಟ್ಕೆ–ಉಂಬಳಿ; ಕಿಸುವಲಗೆ–ಕೆಂಪು ಹಲಗೆ; ಸೊನೆ–ವನಸ್ಪತಿಗಳಿಂದ ಒಸರುವ ದ್ರವ; ಪಗಿಲ್–ಅಂಟಿಕೊಳ್ಳು.

೯೩. ವನಜಭವ–ಕಮಲಭವ, ಬ್ರಹ್ಮ; ಜಡ–೧. ಮೂಢ, ೨. ನೀರು; "ವನಜಭವಂ..... ಏಂ ಮುನ್ನಿನ ತನ್ನ ಜಡಸ್ವಭಾವಮಂ ಮೀಱಿದನೋ" ಎಂದು ಅನ್ವಯ. ಇಲ್ಲಿ ವನ, ಜಡ ಪದಗಳಿಗೆ ನೀರು ಎಂದು ಅರ್ಥ.

೯೪. ಕಳಶ–ಕೊಡ; ಪದ್ಮಾಕರಂ–(ತುಂಬಿದ) ಸರೋವರ; ಹಿಮರುಚಿ–ಚಂದ್ರ; ಪುಂಸ್ಕೋಕಿಳ–ಗಂಡುಕೋಗಿಲೆ; ಮೌಹೂರ್ತಿಕಂ–ಜೋಯಿಸ ಕೈನೀರೆಱೆ–ಧಾರೆಯೆರೆ.

೯೪ವ. ಅವಸರ–ಅವಕಾಶ.

೯೫. ಪುಳಿನಂ–ಮಳಲದಿನ್ನೆ; ಹಿಮದ್ಯುತಿ–ಚಂದ್ರ; ಕೀರಕಳಭಂ–ಗಿಳಿಮರಿ; ರಥಾಂಗ–ಚಕ್ರವಾಕ; ಓಪರ ಸುಸಿಲ್–ಪ್ರೇಮಿಗಳ ರತಿಕೂಟ; ನನೆವಿಲ್–ಕಾಮನ ಕಬ್ಬುವಿಲ್; ಆದರೆ ಅದು ನನೆಯಿಂದ ಅಥವಾ ನನೆಬಾಣದಿಂದ ಅಲಂಕೃತವಾದುದೆಂದು ಇಲ್ಲಿಯ ಅರ್ಥವಿರಬಹುದು.

೯೬. ಉಳ್ಳನಿಂತು–ಇದ್ದಷ್ಟೂ, ಎಲ್ಲ; ನೋಂತವೆ–ವ್ರತವನ್ನೆ ಮಾಡಿದುವು; ಕೀಟಿಸಳ್–ಕೀಳಾದ ಪಕಳೆ; ಅಗ್ಗ–ಶ್ರೇಷ್ಠ.

೯೭. ಪಾತ–ಬೀಳುವಿಕೆ, ಅಪ್ಪಳಿಸುವಿಕೆ; ಕೇಕರ–ಕುಡಿನೋಟ; ತಿಳಕ–ಜಾಜಿ; ಕುರವಕ–ಮದರಂಗಿ; ಮಹೇಂದ್ರಜಾಳ–ಮಾಯಾವಿದ್ಯೆ.

೯೭ವ. ಸ್ಮೇರ–ಎಳನಗೆ.

೯೮. ಏವುದು–ಏನು ಮಾಡುವುದು, ಎನು ಪ್ರಯೋಜನ, ಅಪಚಯ–ಸಂಗ್ರಹಿಸುವಿಕೆ; ಕೈಗೆಯ್–ಸಿಂಗರಿಸು.

೯೯. ಚಳಿಕೆ–ಹೂವಿನ ಕಂಕಣ; ಕುಟ್ಮಳ–ಮೊಗ್ಗೆ.

೧೦೦. ಕೇಕರ–ಕುಡಿನೋಟ; ಅನಂಗರಾಗ–ಕಾಮಾಸಕ್ತಿ; ನುಣ್ಪು–ನಯ; ನೀಳ್ಕು–ಹಿಗ್ಗು, ಉದ್ದವಾಗು; ಗೇಣಕೇಣ–ಖಡ್ಗದ ಸೇಡು; ಇಲ್ಲಿ ತೋಳು, ಪೆರ್ಮೊಲೆ, ನಾಭಿ–ಈ ಗುಪ್ತಾಂಗತ್ರಯದ ಮತ್ತು 'ತ್ರಿಗುಣಿಸೆ' ಪದದ ಔಚಿತ್ಯವನ್ನು ಗಮನಿಸಬೇಕು.

೧೦೧. ನನೆಗೊಂಬು–ಮೊಗ್ಗೆಗಳ ರೆಂಬೆ; ನೀಳ್ಕಿ–ನಿಲುಕಿಸಿಕೊಂಡು; ಚಂದ್ರಾ ತಪ–ಬೆಳದಿಂಗಳು; ಪುದಿ–ತುಂಬು; ತಿಱಿ–ಆಯ್ದುಕೋ; ತಿಳಕ–ಜಾಜಿ; ಕೋರಕ–ಸಣ್ಣ ಮೊಗ್ಗೆ; ಲತಾಂತಾಯುಧ–ಪುಷ್ಪಬಾಣ, ಕಾಮ; ಸಂಮೋಹನಬಾಣ–ಮೋಹಿಸುವ ಬಾಣ; ಶ್ರೇಣಿ–ಸಮೂಹ; ತೀವು–ತುಂಬು; ತವದೊಣೆ–ಬರಿದಾಗದ ಬತ್ತಳಿಕೆ; ನೋಟಮಾತ್ರದಿಂದ ಜಾಜಿಯಲ್ಲಿ ಮುಗುಳು, ಮೊಗ್ಗೆ, ಹೂ ಹುಟ್ಟಿಸುವುದೂ ಆಯ್ದುಕೊಳ್ಳುವುದೂ ಪದೇಪದೇ ನಡೆದಿದ್ದಿತು.

೧೦೨. ತೀವಿದ–ತುಂಬಿದ; ಉರ್ಕು–ಹೆಚ್ಚಾಗು; ನಿತಂಬಸೂತ್ರ–ನಡುಪಟ್ಟಿ; ವಿತತ–ಹಬ್ಬಿದ; ಯಾನ–ನಡೆಯುವಿಕೆ; ಕಾವು–ಕಾಂಡ, ದೇಟು; ಪರಿವೇಷ್ಟಿಸು–ಸುತ್ತು; ಕಟ್ಟಿದಕೊಂಬು–ಅಣಸು

ಜೋಡಿಸಿದ ಕೋರೆ; ಲೀಲಾವತಿ–ಲೀಲಾಸಕ್ತ ಯುವತಿ; ಮೊಲೆಗೆ ಪರಿವೇಷ್ಟಿಸಿದ ಬಯಲ್ದಾವರೆಯ ದೇಟುಗಳು ಹಸ್ತಿದಂತಕ್ಕೆ ಜೋಡಿಸಿದ ಅಣಸಿನಂತೆ ಕಂಡವೆಂದು ಅರ್ಥ.

೧೦೨ವ. ಕೋರಕ–ಸಣ್ಣಮೊಗ್ಗೆ; ಕಿಸಲಯ–ಚಿಗುರು; ಉಡೆನೂಲ್–ನಡುಪಟ್ಟಿ; ಎಕ್ಕಸರ–ಒಂದು ಎಳೆಯ ಸರ; ತಿಸರ–ಮೂರು ಎಳೆಯ ಸರ; ಐಸರ–ಐದು ಎಳೆಯ ಸರ; ಸಂಕಲೆ–ಸರಪಳಿ; ಪಿಂಡಗಂಕಣ–ಮುರಿಗೆ ಕಂಕಣ; ಚಳಿಕೆ–ಹೂವಿನ ಕಂಕಣ,; ಚೌಕಳಿ–ನಾಲ್ಕು ಹರಳುಗಳ ಕರ್ಣಾಭರಣ; ಕರ್ಣೋತ್ತಂಸ–ಕಿವಿಯ ಆಭರಣ; ಹಂಸತಿಳಕ–ಆಭರಣ ವಿಶೇಷ; ಪೆಱೆ–ಅರ್ಧಚಂದ್ರಾಭರಣ: ಕುತ್ತುಂಗಜೆ–ಆಭರಣ ವಿಶೇಷ; ಪಚ್ಚ–ಆಭರಣ; ಸಮೆ–ಸಿದ್ಧಗೊಳಿಸು.

೧೦೩. ಮೃಗವ್ಯ–ಬೇಟೆ; ದೀಹ–ಬೇಟೆಯ ಆಮಿಷಕ್ಕಾಗಿ ಕಟ್ಟಿದ ಪ್ರಾಣಿ.

೧೦೪. ಸುಮನೋಭೂಷಣ–ಹೂವಿನ ಅಲಂಕಾರ; ಇಲ್ಲಿ ಸುಮನ, ಲತೆ, ಭ್ರಮರ ಪದಗಳನ್ನು ಗಮನಿಸಿರಿ.

೧೦೫. ತೆಕ್ಕನೆ–ಅಧಿಕವಾಗಿ; ತೀವು–ತುಂಬು; ಪೊಣ್ಮು–ಹೊರಸೂಸು; ಮಧ್ಯಂದಿನ–ಮಧ್ಯಾಹ್ನ; ತಪನತಾಪ–ಸೂರ್ಯನ ಉಷ್ಣತೆ.

೧೦೬. ವಾರುಣ–ಸಮುದ್ರಗಳ ಅಧಿಪತಿ; ಈತನು ಅಷ್ಟದಿಕ್ಪಾಲಕರಲ್ಲಿ ಒಬ್ಬ; ಸ್ವೈರ–ಸ್ವೇಚ್ಛೆ; ವಾರಸ್ತ್ರೀ–ವೇಶ್ಯೆ.

೧೦೭. ಪೊಣರ್ವಕ್ಕಿ–ಚಕ್ರವಾಕ ಪಕ್ಷಿ; ಪಡಿಯಿಡು–ಹೋಲಿಸು; ಅಬ್ಜಷಂಡ–ಸರೋವರ.

೧೦೭ವ. ಎಯ್ದೆವರು–ಸಮೀಪ ಬರು.

೧೦೯. ವಿಸರ–ಸಮೂಹ.

೧೧೧. ಜಂತ್ರದಂಚೆ–ಹಂಸಾಕಾರದ ಜೀರ್ಕೊಳವಿ; ಅರ್ದು–ಅದ್ದು; ಪುಡುಕುನೀರ್–ಕುದಿಯುವ ನೀರು.

೧೧೨. ಚಂದನಾಂಬು–ಶ್ರೀಗಂಧ ಮಿಶ್ರಿತ ನೀರು; ಪೊದಟ್–ಪ್ರಕಟವಾಗು; ಪಯೋಲವ–ನೀರಹನಿ; ವೈಶಂಪಾಯನ ಸರೋವರದಲ್ಲಿ ಮುಳುಗಿದ್ದರೂ ಭೀಮನ ಬಿರುನುಡಿ ಕೇಳುತ್ತಲೇ "ನೀರೊಳಗಿರ್ದುಂ ಬೆಮರ್ತನುರಗಪತಾಕಂ" ಎಂದು ರನ್ನ, "ನೀರೊಳಗಿರ್ದುರಿದನಂದು ಕೇಳ್ದಹಿಚಿಹ್ನಂ" ಎಂದು ನೇಮಿನಾಥಪುರಾಣ (೧೨–೧೮೬)ದ ಕರ್ಣಪಾರ್ಯ ಹೇಳುತ್ತಾರೆ. ಮಹಾಭಾರತದ ಈ ಪ್ರಸಂಗದ ಉಕ್ತಿಯನ್ನು ನಾಗಚಂದ್ರ ಮತ್ತು ಪಾರ್ಶ್ವಕವಿಗಳು ಜಲಕ್ರೀಡಾಪ್ರಸಂಗಕ್ಕೆ ಎತ್ತಿ ತಂದಿದ್ದಾರೆ. "ಸವತಿಯ ಮೇಲೆ ಜೀರ್ಕೊಳವಿಯಂ ಧರಣೀಶ್ವರನೊತ್ತೆ.... ಕಂಡು ಪೆಱಳೊರ್ವಳ್.... ನೀರೊಳಗಿರ್ದುಮದೇಂ ಬೆಮರ್ತಳೋ" ಎಂದು ನಾಗಚಂದ್ರ, "ಸವತಿಯ.... ಮೊಲೆಯ ಮೇಲಧಿಪನ ಕಣ್.... ನೆಲಸಿರೆ ನೀರೊಳಗಿರ್ದುಂ ಬೆಮರ್ತಳೊರ್ವಳ್ ಮುನಿಸಿಂ" ಎಂದು ಪಾರ್ಶ್ವಕವಿ (೯–೧೩೧) ಹೇಳುತ್ತಾರೆ. ರನ್ನ, ಕರ್ಣಪಾರ್ಯರು ಭೀಮ–ದುರ್ಯೋಧನರ ಮತ್ಸರಕ್ಕೆ ಬಳಸಿದ ಉಕ್ತಿಯನ್ನು ನಾಗಚಂದ್ರ, ಪಾರ್ಶ್ವಕವಿಗಳು ಸವತಿಮತ್ಸರಕ್ಕೆ ತಿರುಗಿಸಿದ್ದಾರೆ. ಇವುಗಳಿಗೆಲ್ಲ ರನ್ನನೇ ಮೂಲವೆಂಬುದು ತೀರ ಸ್ಪಷ್ಟ. ಆದರೆ ಇವನಿಗೂ ಪಂಪಭಾರತದ ಬೇರೊಂದು

ಸಂದರ್ಭ (೪–೬೪ ಗ)ದಲ್ಲಿ ಬರುವ "ನಸುನಾಣ್ಚಿ ತಲೆಯಂ ಬಾಗಿ ನೆಲನಂ ಬರೆಯುತ್ತುಂ ನೀರೊಳ್ ಮುಳುಂಗಿದರಂತುಮ್ಮನೆ ಬೆಮರುತ್ತುಂ" ಎಂಬ ವಾಕ್ಯ ಅಪ್ರತ್ಯಕ್ಷ್ಯಪ್ರೇರಣೆ ನೀಡಿರಬಹುದೇ?

೧೧೩. ಘುಸೃಣ–ಕುಂಕುಮ; ಪೊರೆ–ಲೇಪಿಸು; ಸೆಂದುರ<ಸಿಂಧೂರ–ಕೆಂಪು ಹುಡಿ; ಕುಂಭಿಕುಂಭ–ಆನೆಯ ತಲೆ.

೧೧೪. ಕಟಿಲ್–ಕಳಚು; ಉಡಿ–ಮುರಿ; ಕಾಲ್ದುಡಿಗೆ–ಕಾಲಿನ ಆಭರಣ; ತೇಂಕು–ತೇಲು; ತಲೆದುಡಿಗೆ–ತಲೆಯ ಆಭರಣ.

೧೧೪ವ. ನಿರ್ವರ್ತಿಸು–ಕೊನೆಗಾಣಿಸು; ನೆಲೆಮೊಲೆ–ಉನ್ನತವಾದ ಮೊಲೆ; ಅವುಂಕು–ಹಿಡಿ; ದಕ್ಷಿಣ ಪಾಣಿ–ಬಲದ ಹಸ್ತ; ಬಟಿಲ್ದ–ಸಡಿಲಿದ; ತಡಂಗಾಲ್–ತೊಡಕಾಲು.

೧೧೫. ಮೃಗಲೋಚನೆ–ಹರಿಣಾಕ್ಷಿ; ಅವಗಾಹ–ಸ್ನಾನ; ಉಗುತರು–ಚೆಲ್ಲು.

೧೧೫ವ. ಮುಕ್ತಾಫಲ–ಮುತ್ತು; ಸೆಳ್ಳುಗುರು–ಚೂಪಾಗಿ ಉದ್ದವಾಗಿ ಇರುವ ಉಗುರು; ಪಾಳಿ–ಕಿವಿಯ ಹಾಲೆ; ಕಳಿಕೆ ಮೊಗ್ಗು; ಮಧುಬಿಂದು–ಮಕರಂದ; ಪೆಜೆನೊಸಲ್–ಅರ್ಧಚಂದ್ರಾಕಾರದ ಹಣೆ, ಓರೊಂದು–ಒಂದೊಂದು; ಬಿಂದುವಿಡು–ಹನಿಹನಿಯಾಗಿ ಉದಿರು; ಪೆಸಱ–ಪ್ರಸಿದ್ಧ; ಪೆಂಡವಾಸ–ಅಂತಃಪುರ.

ಇಲ್ಲಿಯ ಸೂತ್ರ–ಮುಕ್ತಾಫಳ, ಕಳಶ–ರಸ, ಮೊನೆ–ಅಂಶು, ಪಾಳಿ–ಕಳಿಕೆ (?), ಉತ್ಪಲ–ಮಧುಬಿಂದು, ಪೆಜೆ–ಅಮೃತ, ವಲ್ಲರಿ–ನೆನೆ ಈ ಜೊತೆಗಳನ್ನು ಗಮನಿಸಿರಿ.

೧೧೬. ಮಲಯಜ–ಶ್ರೀಗಂಧ; ಯಕ್ಷಕರ್ದಮ–ಸುಗಂಧವಿಶೇಷ, ಮೃಗೋದ್ಭವ–ಕಸ್ತೂರಿ; ವಸನ–ಬಟ್ಟೆ; ಭುಜಂಗರಾಜ–ಆದಿಶೇಷ.

೧೧೭. ದೈನ್ಯಮೇನೊ ನಿಸ್ತೇಜದವೊಲ್–ನಿಸ್ತೇಜದಂತಹ ದೀನತನವು ಯಾವುದು?

೧೧೮. ಜುಗುನೆ–ಯಮುನೆ; ದಿಗಿಭ–ದಿಗ್ಗಜ; ಮದವಟ್ಟೆ–ಮದಜಲಮಾರ್ಗ; ತಮಸಂ ತಮಸಂ–ತಮೋಗುಣವುಳ್ಳ ಕತ್ತಲೆ.

೧೧೯. ಬಿದಿ–ವಿಧಿ, ಬ್ರಹ್ಮ; ಹರಿನೀಳ–ಇಂದ್ರನೀಲ; ಅಜಾಂಡ–ಬ್ರಹ್ಮಾಂಡ; ಅಂಜನ–ಕಾಡಿಗೆ; ಮರ್ಬು–ಮಬ್ಬು, ಕತ್ತಲೆ; ಅಭ್ರಪಥ–ಆಕಾಶ.

೧೨೦. ಅಂಬಿರಿವಿಡು–ಬಾಣಬಿಟ್ಟಂತೆ ಸುರಿ; ದಾನಾಂಬು–ಆನೆಯ ಮದಜಲ; ಸ್ತಂಬೇರ–ಆನೆ; ಚಿಬ್ಬ–ಎದೆಯ ಮೇಲೆ ಬಿಳಿಯ ಕಲೆಗಳುಳ್ಳ ಚರ್ಮರೋಗ; ತುಱುಗು–ದಟ್ಟವಾಗಿ ತುಂಬು.

೧೨೧. ಪೆಱದೆಗೆ–ಹಿಮ್ಮೆಟ್ಟು, ಓಡು; '(ದುರುಗಿತೆನ)' ಪಾಠಕ್ಕೆ ಬದಲು 'ದುಱುಗಲೆನ' ಇಟ್ಟುಕೊಳ್ಳಬೇಕು. ತಟ್ಟಿ + ಎಮೆ + ತುಱುಗಲ್ – ದಟ್ಟವಾದ ಎವೆಗಳ ಗುಂಪು; ಕಣ್ದೆಱೆ–ಪ್ರಕಟವಾಗು; ಬೆಳರ್–ಬೆಳ್ಳಗಾಗು, ಕಾಂತಿಹೊಂದು; ತುಹಿನಾಂಶು ಬಿಂಬ–ಚಂದ್ರಬಿಂಬ; ಪದ–ಸ್ಥಳ.

೧೨೨. ಸಂಧ್ಯಾರಾಗ–ಸಂಜೆಗೆಂಪು; ಖೇಟ–ಢಾಲು; ಕೆಂಗವಸಣಿಗೆ–ಕೆಂಪು ಹೊದಿಕೆ.

೧೨೨ವ. ಸುಧಾಸೂತಿ–ಚಂದ್ರ.

೧೨೩. ಗುಹೋದರ–ಗವಿಯ ಒಳಭಾಗ; ಗವಾಕ್ಷ–ಕಿಡಕಿ; ಉಗಿ–ಸೀಳು, ಚೂರುಚೂರು ಮಾಡು; ದೇವಸದ್ಮ–ದೇವಾಲಯ; ತಗಳ್–ಸಮೀಪಿಸು; ಅಜಿಯಟ್ಟಿ–ಚೆನ್ನಾಗಿ ಬೆನ್ನಟ್ಟಿ; ಹಿಮಾಂಶು–ಚಂದ್ರಕಿರಣ.

೧೨೪. ಬೆಳತಿಗೆ–ಬಿಳಿಪು; ಇರ್ಪು–ರಸ; ಇಂಗಡಲ್–ಕ್ಷೀರಸಾಗರ; ವಿಧುಸರ್ಪ–ಚಂದ್ರನೆಂಬ ಸರ್ಪ; ಪೊರೆ–ಹಾವಿನ ಮೇಲಿನ ಪೊರೆ.

೧೨೪ವ. ಮೇಗಿಲ್ಲದ–ಕೊನೆಯಿಲ್ಲದ.

೧೨೫. ಗೋಪವಧು–ಗೋಪಿಕೆ, ಲಕ್ಷ್ಮಿ; ಅರುಣಲೋಚನ–ಕೆಂಗಣ್ಣು; ಯಾವಕ–ಅಲತಿಗೆ; ಮೊಗವಿಟ್ಟು– (?); ಕೊರಚಾಡು–ಅಣಕಿಸು.

೧೨೬. ಬಾಸಿಗ (ಬಾಸಿಂಗ)– ಹೂಮಾಲೆ; ಅಡಿಯೆತ್ತು–ಹೆಜ್ಜೆಕಿತ್ತು, ನಡೆ; ಘಳಿಗೆ–ಗಡಿಯಾರ.

೧೨೬ವ. ಸೂಟ್–ಯೋಗ್ಯ ಸಮಯ; ಅನಲ್ಪ–ಅಲ್ಪವಲ್ಲದ; ಪ್ರಸುಪ್ತ–ಗಾಢನಿದ್ರಿತ

೧೨೭. ತನು–ಅಲ್ಪ; ಕುಮುದ–ಕಪ್ಪುಕಮಲ; ನೆಮ್ಮು–ಆಶ್ರಯಿಸು; ಕೈಗೆಯ್–ಸಿಂಗರಿಸಿಕೊಳ್ಳು; ನೀರೇಜಿನೀ–ಕಮಲಿನಿ; ಕುಟ್ಮಳ–ಮೊಗ್ಗೆ; ಎಸಟೊವ್ವರೆ–ಎಸಳ ಪದರು; ಚಂಡ–ಉದ್ರಿಕ್ತ; ಅಳಿಗೀತಸ್ವನ–ದುಂಬಿಯ ಗುಂಜಾರವ; ತಳ್ವೊಯ್–ಗಾಢವಾಗಿ ಸೇರು, ಅವಚಿಕೊಳ್ಳು; ಅಂಭೋಜಷಂಡ–ಕಮಲ ಸಮೂಹ; ಸೀರ್ಪನಿ–ತುಂತುರ ಹನಿ; ತಕ್ಕೈಸು–ಅಪ್ಪಿಕೊಳ್ಳು; ಪ್ರಭೂತ–ಹುಟ್ಟಿದ. ಸಮೀರಕ್ರೀಡೆಯನ್ನು ಹೇಳುವ ಈ ಪದ್ಯ, ಅರಸನ ಸಂಭೋಗಕ್ರೀಡೆಯನ್ನೂ ಧ್ವನಿಸುವಂತೆ ತೋರುತ್ತದೆ.

೧೨೮. ದಿನಪಂ–ದಿನವೆಂಬ ಅರಸು; ಸಂಧ್ಯಾಂಬುದ ಪೀತಾಂಬರವಿಭು–ಸಂಧ್ಯಾ ಸಮಯದ ಮೇಘಸದೃಸ ಪೀತಾಂಬರಧಾರಿ, ವಿಷ್ಣು.

"ಉದರದೊಳೀ ಜಗಮಂ ತಾಳ್ದಿದ ದಿನಪಂ (ತಾಳ್ದಿದ) ರವಿಬಿಂಬಂ, ಶಾಶ್ವತಲಕ್ಷ್ಮಿವೆತ್ತ ಸಂಧ್ಯಾಂಬುದ ಪೀತಾಂಬರವಿಭು ತಾಳ್ದಿದ ಕೌಸ್ತುಭರತ್ನಮೆನಿಸಿದುದು" ಎಂದು ಅನ್ವಯ.

೧೨೮ವ. ಸಮಾಹಿತ–ಸಮಾಧಾನ ಹೊಂದಿದ.

೧೨೯. ಸಿರಿಕಂಡ < ಶ್ರೀಖಂಡ–ಶ್ರೀಗಂಧ; ಕೊಟ್ಕೆಸರ್–ತಂಪಾದ ದ್ರವ; ಸಾರವಣೆ–ಸಾರಣೆ, ಲೇಪನ; ಕಪ್ಪುರವಳುಕು (<ಕರ್ಪುರಸ್ಫಟಿಕ) –ಕರ್ಪುರದ ಹಳಕು.

೧೨೯ವ. ಸಾಮಯಕ–ಸಮಯೋಚಿತ.

೧೩೦. ಆತೋದ್ಯ–ವಾದ್ಯ; ವಂದಿ–ಮಂಗಳಪಾಠಕ; ಕೊಂಡುಕೊನೆ–ಹೊಗಳು; ಖೇಚರೇಂದ್ರ–ಇಂದ್ರ; ಎಕ್ಕಲಾವಣ–ಏಕೈಕ ಸೌಂದರ್ಯ; ಸಂಗೀತಕ–ಸಂಗೀತಕ್ಕೆ ಸಂಬಂಧಪಟ್ಟ, "ಗೀತಂ ವಾದ್ಯಂ ನರ್ತನಂ ಚ ತ್ರಯಂ ಸಂಗೀತಮುಚ್ಯತೇ" ಎಂಬುದು ಸಂಗೀತದ ವ್ಯಾಖ್ಯೆ.

೧೩೦ವ. ಮಂಡನಮರೀಚಿ–ಆಭರಣಗಳ ಕಿರಣ.

೧೩೧. ಕೋರಲ್–ಕೊರಳು, ಧ್ವನಿ; ವಾಂಶಿಕ–ಕೊಳಲು ವಾದಕ.

ಕೊರಳು, ಬೆರಳಿನ ಪ್ರಮಾಣವನ್ನನುಸರಿಸಿ ರಸವಡೆಯುವುದೆಂಬ ತತ್ತ್ವವನ್ನರಿತು ಬೆರಳೇ ಕೊರಳಾಗುವಂತೆ ಕೊಳಲು ನುಡಿಸಿದ.

೧೩೧ವ. ಗಾಣಂ–ಗಾಯಕ.

೧೩೨. ವಿತತಘನಾವನದ್ಧಸುಷಿರ–"ತಂತಿಯನ್ನು ಕಟ್ಟಿ ನುಡಿಸುವ ವೀಣೆ ಮೊದಲಾದವು [ವಿ] ತತಗಳೆಂತಲೂ ಚರ್ಮವನ್ನು ಕಟ್ಟಿ ನುಡಿಸುವ ಮೃದಂಗ ಮೊದಲಾದವು ಅನದ್ಧ (ಅವನದ್ಧ) ಗಳೆಂತಲೂ ಕಂಚಿನ ತಾಳ ಮೊದಲಾದವು ಘನಗಳೆಂತಲೂ ಊದಿ ಬಾರಿಸುವ ಕೊಳಲು ಮೊದಲಾದವು ಸುಷಿರವೆಂತಲೂ ವಾದ್ಯಗಳು ನಾಲ್ಕು ಬಗೆಯಾಗಿರುವುವು; (ವಿವೇಕ ಚಿಂತಾಮಣಿ). ದ್ರುತ–ಸಂಗೀತದ ಒಂದು ಲಯ; ಸಮಹಸ್ತ–ಸಮಸಮವಾಗಿ ಬಾರಿಸುವಿಕೆ (?)

೧೩೨ವ. ಪಱೆ–ಹಲಗೆ; ಸನ್ನೆಗೆಯ್–ಸನ್ನೆಮಾಡು, ಸೂಚಿಸು.

೧೩೩. ಜನನಿಕೆ–ತೆರೆ, ಪರದೆ; ಅಸಿಲತಿಕೆ–ಖಡ್ಗ.

೧೩೪. ಎಳವಾಳೆ–ಎಳೆಯ ಮೀನು; ಎಳಸಿ–ಬಯಸಿ, ಇಚ್ಛೈಸಿ,

೧೩೫. ಕೆದಱು–ತೂರು; ಪೊನ್ನಪೊದೆ–ಬಂಗಾರದ ಬತ್ತಳಿಕೆ.

೧೩೫ವ. ಕುಡುಪು–ವಾದನದಂಡ; ತಾಳಾನುಗಂ–ತಾಳಾನುವರ್ತಿ; ಗೀತಾನುಗಂ–ಗೀತಾನುವರ್ತಿ;

೧೩೬. ಉದೀರ್ಣ–ಬೆಳೆ; ಕೈಗಣ್ಮು–ಅಧಿಕವಾಗು; ವಿಭ್ರಮ–ಸಡಗರ; ಕಿಂಕಿಣಿ–ಸಣ್ಣಗೆಜ್ಜೆ; ಗೀತದ ಮೆಯ್–ಹಾಡಿನ ರಚನೆ; ಬಾಜಿಪ–೧. ವಾಚಿಪ, ೨. ಬಾರಿಸುವ; ಲಯವ್ಯಕ್ತಾಕ್ಷರ ವ್ಯಕ್ತಿ–ಲಯವನ್ನು ಪ್ರಕಟಿಸುವ ಅಕ್ಷರಸೂಚನೆ; ದೇಸೆವಡೆ–ಸುಂದರವಾಗು.

ಇಲ್ಲಿಯ ಹಾವ, ಭಾವ, ವಿಲಾಸ, ವಿಭ್ರಮಗಳ ಉಗಮಸ್ಥಾನಗಳನ್ನು ಗಮನಿಸಿರಿ.

೧೩೭. ಗ್ರೀವಾ–ಕುತ್ತಿಗೆ; ಶಾಖಾ–ಭುಜ; ರೇಚಕ–ನರ್ತನದಲ್ಲಿ ಎರಡೂ ಕೈಗಳನ್ನು ಒಮ್ಮೆಲೇ ಚಾಚುವುದು; ಪರಿಜ–ಆಕಾರ, ರೂಪ.

೧೩೮. ಮೋಹನಮಂತ್ರ–ಸಮ್ಮೋಹಿನೀ ಮಂತ್ರ; ಸೇತುಗಟ್ಟಿದ–ತಡೆಹಿಡಿದ; ಕಳಝುಂಕೃತಂ–ಮಧುರ ಝೇಂಕಾರ; ಇಲ್ಲಿ ಮದನ, ಕಾಮ, ಮನೋಭವ ಪದಗಳನ್ನು ಲಕ್ಷಿಸಿರಿ. ಮಂತ್ರನಾದ...... ಗೀತದೊಳ್..... ಪುದಿದು, ಸುಧಾಬ್ಧಿತರಂಗನಾದ...... ವಾದ್ಯದೊಳ್.... ಒಂದಿ; ಸಿಂಹನಾದ..... ಕಿಂಕಿಣೀಕಳಝುಂಕೃತಂ.... ತಟ್ಟುದು– ಈ ಕ್ರಮವನ್ನು ಗಮನಿಸಬೇಕು.

೧೩೯. ಮನೋರಂಗಪ್ರತಿಷ್ಠೆ ರತಿಗಾಯ್ತು–ಮನಸ್ಸೆಂಬ ರಂಗಭೂಮಿಯಲ್ಲಿ ರತಿಗೆ ಪ್ರತಿಷ್ಠಾಪನೆಯಾಯಿತು.

ಶೃಂಗಾರಕ್ಕೆ ರಸಗಳ ರಾಜನೆಂದು ಹೆಸರು. "ಶೃಂಗಾರವೊಂದೆ ರಸಂ" ಎಂದು ನೇಮಿಚಂದ್ರನ ಅಭಿಮತ. "ಶಾಂತಮೆ ಪುಣ್ಯಹೇತುವಘಹೇತುಗಳನ್ಯರಸಂಗಳ್" ಎಂಬ ಭಾವನೆಯ ನಾಗಚಂದ್ರ, ಇಲ್ಲಿ ಶೃಂಗಾರರಸವನ್ನು ಎತ್ತಿಹೊಗಳಿದುದು ಗಮನಾರ್ಹ.

೧೪೦. ಮರಕತರಂಗಂ–ಪಚ್ಚೆಯ ರಂಗಭೂಮಿ.

೧೪೧. ರುತಿ–ಧ್ವನಿ; ಆಸಾರ–ಮಳೆ; ಪ್ರತೀಹಾರಕ–ದ್ವಾರಪಾಲಕ; ತರ್ಜನಂ–ಗದ್ದರಣೆ; ಪರೆ–ವ್ಯಾಪಿಸು, ಹರಡು.

೧೪೨. ವಶ್ಯಾಂಜನ–ವಶೀಕರಣಕ್ಕೆ ಉಪಯೋಗಿಸುವ ಕಾಡಿಗೆ; ಪೊಗರ್–ಕಾಂತಿ; ಬಸಂ–ವಶ; ಮುಯ್ಯಾನ್–ಎದುರಾಗಿ ನಿಲ್ಲು, ಹೆಮ್ಮೆಪಡು.

೧೪೨ವ. ವಜ್ರ–ಇಂದ್ರನ ಆಯುಧ, ಸಿಡಿಲು; ಉನ್ಮೂಲನ–ಬುಡಮೇಲಾಗುವುದು; ಕದಂಬ–ಸಮೂಹ; ಗಜಘಟಾ–ಆನೆಗಳ ಸಮೂಃ; ಬೃಹಿಂತ–ಘೀಳಿಡುವಿಕೆ; ಕಲಾಪಿನಿ–ನವಿಲು (ಕಲಾಪ–ನವಿಲುಗರಿ); ಮಂಡಲಾಗ್ರ–ಆಯುಧವಿಶೇಷ; ವಿದ್ಯುತ್–ಮಿಂಚು; ವರ್ಷ–ಮಳೆ; ದ್ರುಮ–ಮರ; ನಿಧಾಘ–ಬೇಸಗೆ; ನೆಲೆವೆರ್ಚು–ಅಧಿಕವಾಗು.

೧೪೩. ತೊಡಂಬೆ–ಗೊಂಚಲು; ಮೊಲ್ಲೆ–ದುಂಡುಮಲ್ಲಿಗೆ; ಚಾದಗೆ–ಚಾತಕಪಕ್ಷಿ; ಕಿಱುವೀಲಿ–ಸಣ್ಣ ನವಿಲುಗರಿ; ತಣ್ಣಸು–ತಂಪು; ಪಣ್ಣನೆ–ಮೆಲ್ಲಗೆ.

೧೪೪. ಪಸಲೆ–ಹುಲ್ಲು; ಮಂಡನ–ಅಲಂಕಾರ; ಪರಿವೇಷ–ಚಂದ್ರನಿಗೆ ಸುತ್ತುಗಟ್ಟುವ ಬೆಳಕಿನ ಗೆರೆ.

೧೪೫. ಉಮ್ಮಳಿ–ತಳಮಳ; ಕರ್ಗಿ–ಕಪ್ಪಾಗಿ; ನಿತ್ತರಿಸು–ಸಹಿಸು; ಜಳಮತ್ತ ದ್ವಿಪಘಟೆ–ನೀರೊಳಗಿನ ಮದ್ದಾನೆಯ ಸಮೂಹ; ಘನಘಟೆ–ಮೇಘಸಮೂಹ.

೧೪೬. ಪೊಯ್ಲು–ಹೊಡೆತ; ಪಿರಿದು–ವಿಶೇಷವಾಗಿ; ಉಗು–ಚೆಲ್ಲು, ಸುರಿ; ತುಱುಗಿ–ತುಂಬಿ; ತೋಱಿ–ಸ್ಥೂಲ; ಕಾರ–ಮಳೆಗಾಲ.

೧೪೭. ತೀಟ–ತೀಡುವಿಕೆ; ಇರ್ಪೊಡಿದ (ಇರ್ಪು + ಓಡಿದ) –ರಸಹೀನವಾದ, ಒಣಗಿದ; ಎಱಂಕೆ–ರೆಕ್ಕೆ; ವಿಯತ್ತಳ–ಆಕಾಶ; ಒಗೆ–ಚಿಮ್ಮು, ಹಾರು; ಕುಳಿರ್ಕೊಡು–ಅಧಿಕ ತಂಪಾಗು; ಜಾತಕ–ಮಳೆಯ ನೀರು ಕುಡಿದು ಜೀವಿಸುವ ಹಕ್ಕಿ.

೧೪೮. ನಿರ್ಝರ–ಗಿರಿನದಿ; ಮೇಖಳೆ–ನಡುಪಟ್ಟಿ, ಡಾಬು; ಜಂತ್ರ–ದೀವಟಿಗೆ (?); ತಟಿಲ್ಲತೆ–ಬಳ್ಳಿಮಿಂಚು.

೧೪೯. ಆಭೋಗ–ವಿಸ್ತಾರ; ನೀಳ್ದು–ವ್ಯಾಪಿಸಿ; ವೇಣೀಬಂಧ–ಮುಡಿ; ಉಳ್ಕು–ಪ್ರಕಾಶಿಸು; ಬೆರ್ಚು–ಬೆದರು; ಇಲ್ಲಿಯ "ಕಾರೆಂಬ ಕಾಳಾಸುರಂ", ಜಗನ್ನಾಥ ವಿಜಯದ "ಕಾರೆಂಬ ಮಾರದ್ವಿಪಂ" (೪–೨೨), ನೇಮಿನಾಥ ಪುರಾಣದ "ಕಾರೆಂಬ ಗೋಪಾಳಕಂ" (೮–೯) ಎಂಬ ಮಳೆಗಾಲ ವರ್ಣನೆಗಳ ಸಾಮ್ಯವನ್ನು ನೋಡಬೇಕು.

೧೫೦. ಅಚಿರಾಂಶುರಸನ–ಮಿಂಚೆಂಬ ನಾಲಗೆ; ಘನಕಾಲ–ಮಳೆಗಾಲ; ವಿಷಧರ–೧, ಹಾವು ೨. ಮೋಡ; ಗಗನೋದರ–ಗಗನಗರ್ಭ; ತರತರದಿಂ–ಕ್ರಮಕ್ರಮವಾಗಿ; ಮುಗಿಲ್–ಮೋಡ್.

೧೫೧. ಅಹಿಮಕರಕರ–ಸೂರ್ಯಕಿರಣ; ಪೊರೆವೊರೆ–ಲೇಪನ; ಪಗಿಲ್–ವ್ಯಾಪಿಸು; ತಪ್ತಂತೆ +ಅರಳೆ ಎಂದು ಬಿಡಿಸಬೇಕು. 'ತೆರಳೆ' ಎಂದು ಮೂಲ ಪಾಠವಿದೆ. ಇದೇ ಸ್ವೀಕಾರಾರ್ಹ? ತೆರಳೆ–ಮುದ್ದೆ, ಗುಂಪು.

೧೫೨. ಈಂಗಡಲ–ಕ್ಷೀರಸಾಗರ; ಚಂಚುಪುಟ–ಮುಚ್ಚಿದ ಕೊಕ್ಕು.

೧೫೨ಅ. ಕರುಮಾಡ–ಎತ್ತರವಾದ ಮಹಡಿ ಮನೆ; ಮೊಗಸಾಲೆ<ಮುಖ ಶಾಲಾ–ಅಂಗಳ; ವಾರಣ–ಆನೆ, (ಗಜಾಸನದ ಸೂಚನೆ); ಬಿತ್ತರಿಗೆ<ವಿಷ್ಟರಿಕಾ–ಪೀಠ; ದಿಗವಳೋಕನ–ನಿಸರ್ಗಪ್ರೀತಿಗಾಗಿ ದಿಕ್ಕುಗಳನ್ನು ನೋಡುವುದು.

೧೫೩. ಪಸುರ್ಪು–ಹಸಿರು ಬಣ್ಣ; ದಿಶಾಪಟಳ–ದಿಕ್ಕುಗಳ ಸಮೂಹ; ಮೇಖಳೆ–ಪರ್ವತದ ಇಳಿಜಾರು ಪ್ರದೇಶ; ವಿಯದ್ವಳಯ–ಆಕಾಶವಲಯ; ಪಚ್ಚೆ–ಹಸಿರು ರತ್ನ. ಇಲ್ಲಿ ಕ್ರಿಯಾಪದ ಅಧ್ಯಾಹೃತವಾಗಿದೆ.

೧೫೩ಅ. ತೆಳ್ಪು–ತಿಳುವು; ಪಳಚ್ಚನಾದ–ತಳತಳಿಸುವ; ಮಸುಳ್–ಬಾಡು, ಕಳೆಗುಂದು; ಪಸಲೆ–ಹುಲ್ಲು; ಭೋಗೀಂದ್ರ–ಆದಿಶೇಷ; ಫಣಾ–ಹಾವಿನ ಹೆಡೆ; ಪಣ್ಣು–ಸಜ್ಜುಗೊಳಿಸು; ಬಳಾಧ್ಯಕ್ಷ–ಸೈನ್ಯಾಧಿಕಾರಿ.

೧೫೪. ವಾಸುಗಿ–ಆದಿಶೇಷ; ಆಟ್–ಮುಳುಗು; ಗೊಂದಣ–ಸಮೂಹ; ಸರವಿ–ಹಗ್ಗ; ಕೂರ್ಮಪೃಷ್ಠ–ಆಮೆಯ ಬೆನ್ನು; ಪಡಲಿಡು–ಚೆಲ್ಲಾಪಿಲ್ಲೆಯಾಗು; ಖರ್ಪರ–ಆಮೆಯ ಬೆನ್ನಚಿಪ್ಪು; ಕಣ್ತುಮುಳ್ದು (<ಕಣ್+ತುಮುಳ್ದು)– ಕಣ್ಣುಉಬ್ಬಿ (?); ತಳರ್–ಚಲಿಸು, ಹೊರಡು.

೧೫೫. ನಳಿ–ಬಳುಕು; ಕುಟಿ–ಕುಣಿ, ತಗ್ಗು; ಸುತ್ತಟಿಯದ–ಸುರುಳಿ ಬಿಚ್ಚದ; ಪೇಟಿಗೆ–ಹಾವಿನ ಬುಟ್ಟಿ.

೧೫೫ಅ. ಜಳಧಿವೇಳೆ–ಸಮುದ್ರತೀರ; ಮಂದುರ–ಕುದುರೆಯ ಲಾಯ; ತವದ–ಕಡಿಮೆಯಾಗದ; ಜವ–ವೇಗ; ಬಿರುದು–ಅಗ್ಗಳಿಕೆ; ಗಜೆಗಟ್ಟು–ಬಲವಾಗಿ ಕಟ್ಟು; ಗಜೆಯ ಗಳೆ–ಗರಿ ಕಟ್ಟಿದ ಕೋಲು; ಉಚ್ಚೈಶ್ರವ–ಇಂದ್ರನ ಕುದುರೆ; ತೊವಲಪಾಪೆಯ ಗಳೆ–ಚರ್ಮದ ಗೊಂಬೆ ಕಟ್ಟಿದ ಕೋಲು; ಕವಡಿಕೆಯ ಗಳೆ–ಕವಡೆಗಳನ್ನು ಕಟ್ಟಿದ ಕೋಲು; ಪರಿ–ಸಾಗು; ಮೇಘಡಂಬರ–ಛತ್ರವಿಶೇಷ; ವಿಡಂಬಿಸು–ಕೀಳುಮಾಡು; ಕಳಾಕಮಳಗರ್ಭಂ–ಕಲೆಯಲ್ಲಿ ಬ್ರಹ್ಮನಂತಿರುವವ, ವೈಶ್ರವಣಮಹಾರಾಜ.

೧೫೬. ಪಾರ್ಶ್ವ–ಮಗ್ಗಲು, ಪಕ್ಕೆ; ಕೇಸರ–ಕುತ್ತಿಗೆ ಮೇಲಿನ ಕೂದಲು; ಜಂಘಾಕಾಂಡ–ಮೊಳಕಾಲ ಕೆಳಭಾಗ; ಉದ್ಬದ್ಧ–ಚೆನ್ನಾಗಿ ಕಟ್ಟಿದ, ಹುರಿಕಟ್ಟಾದ; ತನು–ಕೋಮಲ; ತನೂರುಹ–ಕೂದಲು, ತುಪ್ಪುಳ; ವಾಳ–ಬಾಲ; ಸ್ಕಂಧ–ಕುತ್ತಿಗೆ; ಉದ್ಧೃತ–ಎದ್ದುನಿಂತ; ಉತ್ತಾರ–ಉಚ್ಚಸ್ವರ.

೧೫೭. ಪೊಱಪಾಯ್ದು–ಹೊರಹಾಯ್ದು; ಕಡೆ–ಕಟೆ, ಕಂಡರಿಸು; ತಿಱಿಕಲ್ಲು–ಆಣೆಕಲ್ಲು; ಬೊಬ್ಬುಳಿಕೆ–ನೀರಗುಳ್ಳೆ; ಚೆಲ್ವಿನ ಕಣ್ದೆಱವು–ಸೌಂದರ್ಯದ ಪ್ರಕಟನೆ.

೧೫೮. ನಿರ್ವಾಣರೇಖೆ- (?).

೧೫೯. ವಿಯದ್ವಿವರ-ಆಕಾಶದ ತೆರಪು; ಕೆತ್ತು-ಕಂಪಿಸು; ಪ್ರೋಥ-ಮೂಗಿನ ಹೊರಳೆಯ ತುದಿ; ಲಾಲಾಂಬು-ಜೊಲ್ಲು; ಘ್ರಾಣಗಹ್ವರ-ಮೂಗಿನ ಹೊರಳೆ.

೧೬೦. ಸೋಲು-ಮೋಹಗೊಳ್ಳು; ನೊಚ್ಚು-ಹಗುರು, ಭಾರವನ್ನು ಕಡಿಮೆ ಮಾಡಿಕೊಂಡು ಗರಿಗಿಂತ ಹಗುರಾದನು; ಕಡಂಗು-ಪ್ರಯತ್ನಿಸು; ಪರಿ-ತೀವ್ರವಾಗಿ ಸಾಗು; ಆಱದೆ-ಸಾಧ್ಯವಾಗದೆ; ಮಾಳ-ಸಣ್ಣ ಗುಡ್ಡ; ಮಱಿವುಲ್ಲೆವೋರಿ-ಗಂಡು ಚಿಗರೆಯ ಮರಿ; ಪೆಱದು-ಮಿಕ್ಕುದು; ಪಡಿಮಾತು-ಪ್ರತಿಮಾತು; ಜವ-ವೇಗ.

"ಇದಱೋಳ್ ಕಡಂಗಿ ಪರಿದಾಱದೆ ಕಾಲ್ನಡೆಗೆಟ್ಟು, ಗಾಳಿ ಏಱಿದಂ ವಾಳದ ಮಱಿವುಲ್ಲೆವೋರಿಯಂ" ಎಂದು ಅನ್ವಯ.

೧೬೦ವ. ಗಳಗರ್ತ-(?); ಪೊಟ್ಟಳ-ಪೊಟ್ಟಣ, ಪುಡಿಕೆ.

೧೬೧. ಹರ್ಮ್ಯ-ಉಪ್ಪರಿಗೆ ಮನೆ; ಭಾಸ್ವತ್-ಹೊಳೆಯುವ; ಲೀಲಾಂಭೋಜಹಸ್ತಂ-೧. ಕಮಲದೊಂದಿಗೆ ಲೀಲಾಸಕ್ತವಾದ ಹಸ್ತ, ೨. ಲೀಲಾಸಕ್ತವಾದ ಕಮಲದಂತಹ ಹಸ್ತ; ಕೈಮಿಗು-ಹೆಚ್ಚಾಗು; ಸಪ್ತಸಪ್ತಿ-ಏಳು ಕುದುರೆಯುಳ್ಳುವ, ಸೂರ್ಯ; ನಭೋಮಣಿ-ಸೂರ್ಯ; ವಿಮಾನ-ನಿವಾಸ. ನಿತ್ಯೋದಯಂ, ರತ್ನಭೂಷಣಭಾಸ್ವತ್ ಕಿರಣಂ, ಲೀಲಾಂಭೋಜಹಸ್ತಂ, ಹಯಪ್ರಣಯಂ-ಈ ವಿಶೇಷಣಗಳು ಇಲ್ಲಿ ಸೂರ್ಯ ಮತ್ತು ವೈಶ್ರವಣ ಇಬ್ಬರಿಗೂ ಅನ್ವಯಿಸುತ್ತವೆ.

೧೬೨. ದೀಪವರ್ತಿ-ದೀಪದ ಕುಡಿ; ನಿಧಿ-ಹೂಳಿಟ್ಟ ದ್ರವ್ಯ.

೧೬೩. ಸರ-ಸ್ವರ, ಧ್ವನಿ; ದಕ್ಷಿಣಕರ-ಬಲಗೈ; ನೇರ್ಪಡು-ಅಚ್ಚುಕಟ್ಟಾಗು, ಹೊಂದಿಕೆಯಾಗು; ನೀವು-ಸವರು, ತೀಡು; ಕಂಧರ-ಕುತ್ತಿಗೆ; ಲಾಘವ-ಚಪಲ; ಅಂಕವಣೆ-ಅಲಂಕೃತವಾದ ಮಣೆ; ಬೆಂಗೆ-ಬೆನ್ನಿಗೆ; ಅನವದ್ಯ-ದೋಷರಹಿತ.

೧೬೪. ಚಿತ್ರಲಯ-ವಿಚಿತ್ರವಾದ ನಡಿಗೆ; ಪ್ರಗಲ್ಭ-ಪ್ರೌಢ; ಹಯವಲ್ಗನ-ಕುದುರೆಯ ನಡಿಗೆ; ಕುಂಡಲಾಂಶು-ಕರ್ಣಾಭರಣದ ಕಿರಣ; ಗಂಡಭಿತ್ತಿ-ಹರವಾದ ಕಪೋಲ; ಉರಸ್ಥಳರಂಗ-ಎದೆಯೆಂಬ ರಂಗಭೂಮಿ; ಅಂಗಹಾರ-ನೃತ್ಯವಿಶೇಷ; ರುಚಿಮಂಜರಿ-ಕಿರಣದ ಗೊಂಚಲು, ಅಗ್ಗಲಿಸು-ವಿಸ್ತಾರವಾಗು; ಇಲ್ಲಿಯ ಅಂಶು, ರುಚಿಮಂಜರಿ, ಚಕೋರ, ಚಂದ್ರ ಪದಗಳ ಅರ್ಥಸಂಬಂಧವನ್ನು ಲಕ್ಷಿಸಿರಿ.

೧೬೪ವ. ತಾರಾವೀಧಿ-ನಕ್ಷತ್ರಬೀದಿ.

೧೬೫. ಅಲಕ್ತಕರಾಗ-ಅಲತಿಗೆಯ ಬಣ್ಣ; ಆರಕ್ತಾಬ್ಜ-ಕೆಂಪು ಕಮಲ; ಸಸ್ಮೇರ ಕಟಾಕ್ಷ-ಎಳನಗೆಯ ನೋಟ; ಭೂಷಾರುಚಿ-ಆಭರಣದ ಕಿರಣ; ಶಕ್ರಚಾಪ-ಇಂದ್ರಧನುಸ್ಸು.

೧೬೬. ಕರೆಗಣ್ಮು (<ಕರೆಯಂ=ತೀರವನ್ನು+ಕಣ್ಮಿ=ತೊಳೆ)–ತುಂಬಿ ತುಳುಕು; ಸ್ಥಾಸಕ–ಲೇಪನ; ಕೇಕರಾಂಶು–ಕುಡಿನೋಟದ ಕಿರಣ; ವಿನ್ಯಾಸ–ಇಡುವಿಕೆ; ಒಜಿಲ್–ಪ್ರೀತಿಸು; ಕೋಮಲೆಯರ ದೃಷ್ಟಿಗಳು ಅರಸನ ತುರುಬಿನಲ್ಲಿ ಬಾಸಿಗ, ಉತ್ತಮಾಂಗದಲ್ಲಿ ಸೇಸೆ, ಉರದಲ್ಲಿ ಹಾರ, ಭುಜಗಳಲ್ಲಿ ಗಂಧಲೇಪನವಾಗಿ ಪರಿಣಮಿಸಿದವು.

೧೬೬ವ. ಪೊದೆಗೆದಜೆದ–ಬತ್ತಳಿಕೆಯಿಂದ ಹೊರಚೆಲ್ಲಿದ; ಸಂಗಡ–ಸಮೂಹ.

೧೬೭. ಚಳತ್–ಹೊಳೆಯುವ; ಶಫರೀ–ಒಂದು ಜಾತಿಯ ಮೀನು; ಮೃಗಾಂಗನಾ–ಜಿಂಕೆ; ಸುಗ್ಗಿಯ ಮಲ್ಲಿಗೆ–ಬೇಸಗೆಯ ಮಲ್ಲಿಗೆ; ಅಲಂಪು–ಸಂತೋಷ; ಕಾರಮೊಲ್ಲೆ–ಮಳೆಗಾಲದ ದುಂಡುಮಲ್ಲಿಗೆ; ಮಾಗಿಯ ಪೊಸನೆಯ್ದಿಲ–ಚಳಿಗಾಲದ ಹೊಸ ಕಪ್ಪು ಕಮಲ; ಕೈಮಿಗು–ಹೆಚ್ಚಾಗು.

"ಬಯಸಿದುವು–ಅಟ್ಟಿಪತ್ತಿದವು–ಕೀಲಿಸಿ ನಿಂದುವು, ಚಳಚ್ಚಕೋರ ನಯನಂ–ಶಫರೀನಯನಂ–ಮೃಗಾಂಗನಾನಯನಂ, ಸುಗ್ಗಿಯ ಮಲ್ಲಿಗೆ–ಕಾರಮೊಲ್ಲೆ–ಮಾಗಿಯ ಪೊಸನೆಯ್ದಿಲ್" ಎಂಬ ಪದವಿನ್ಯಾಸದಲ್ಲಿ ಕ್ರಮಾಲಂಕಾರದ ಯೋಜನೆಯಿದೆ. ಬಯಸು, ಪತ್ತು, ಕೀಲಿಸು ಪದಗಳಲ್ಲಿಯ ಏರಿಕೆ ರೂಪದ ಗಾಢತೆಯನ್ನು ಗಮನಿಸಿರಿ.

೧೬೭ವ. ಮಗಿಲ್–ಮಾಳಿಗೆಯ ತುದಿ.

೧೬೮. ಕಣ್ಗೊಳಳಿವೋಲೆ–(?) ಪಾಠದೋಷದಿಂದಾಗಿ ಅರ್ಥ ಅಸ್ಪಷ್ಟ; ಬಸ–ವಶ; ಪಾಶ–ವರುಣನ ಆಯುಧ; ಫಣಾ–ಹೆಡೆ; ಪಟಳ–ಸಮೂಹ; ಆಲ–ಚಂದ್ರನ ಮಧ್ಯದಲ್ಲಿರುವ ಆಲವೃಕ್ಷರೂಪದ ಕಪ್ಪುಕಲೆ; ಕುಮುದಪ್ರಿಯ–ಚಂದ್ರ; ಸಾಯಕ–ಬಾಣ; ವಜ್ರ–ಇಂದ್ರನ ಆಯುಧ.

೧೬೮ವ. ವಿಳೋಕನ–ನೋಟ; ತಳಿ–ಚೆಲ್ಲು, ಸಿಂಪಡಿಸು; ಅಳಕ–ಕೂದಲು.

೧೬೯. ಕಣ್ಣಳ್ಕು–ಕಣ್ಣು ಕುಕ್ಕು; ರವಿಪಥ–ಆಕಾಶ; ಕೇತುಹಸ್ತ–ಧ್ವಜಪಟ; ನೀಳ್ಕು– ನಿಲುಕಿಸು; ಬಿಣ್ಪು–ಭಾರ; ಬಳ್ಕು–ಹೊಯ್ದಾಡು; ಉಳ್ಳಳ್ಕು–ವಿಶೇಷವಾಗಿ ಅಂಜು; ಇಭ–ಆನೆ; ಉದ್ಯತ್–ಶೋಭಿಸುವ; ಕರ್ಣತಾಳ–(ಯಾವಾಗಲೂ ತಾಳಹಾಕುತ್ತಿರುವ) ಆನೆಯ ಕಿವಿ; ಕ್ಷುಭಿತ–ಕ್ಷೋಭೆಗೊಂಡ; ವಿಕ್ಷೇಪ–ದೂಡುವಿಕೆ; ಸೇನಾಚಕ್ರ–ಸೈನ್ಯ ಸಮೂಹ; ಮುಟ್ಟೆವರು–ಸಮೀಪ ಬರು. "ತಳರ್ದುದು ಕರ್ಣತಾಳ ಪವನಾಹತಿಯಿಂ ಜಳರಾಶಿ" (ಪಂ. ಭಾ. ೧೧–೭೧) ಹೋಲಿಸಿರಿ.

೧೭೦. ದಾನಾಮೋದ–ಮದೋದಕ ಸುಖ; ಕೇತುಪಲ್ಲವ–ಧ್ವಜವೆಂಬ ಚಿಗುರೆಲೆ; ಭೂಷಾಂಶು–ಆಭರಣಗಳ ಕಿರಣ; ಪಟಹ–ಭೇರಿ; ಪ್ರಧ್ವಾನ–ದೊಡ್ಡ ಧ್ವನಿ; ತೀವು–ತುಂಬು.

೧೭೦ವ. ನಿಳಿಂಪನಾಯಕ–ದೇವತೆಗಳ ಒಡೆಯ, ಇಂದ್ರ.

೧೭೧. ಅಪಗತಕಂಚುಕ–ಜಾರಿದ ಉತ್ತರೀಯ; ನಖಾಂಶುಲೇಖೆ–ಉಗುರುಗಳ ಕಿರಣರೇಖೆ; ಉಚ್ಚಳಿತ–ಮೇಲೆ ಚಲಿಸುವ; ಉಚ್ಛ್ರಿತ–ಉನ್ನತವಾದ.

೧೭೨. ಕಡುವೊಯ್ಲು–ದೊಡ್ಡ ಹೊಡೆತ; 'ತನ್ನಂತೆ ಭವ್ಯವೂ ಅನೇಕರಿಗೆ ಆಶ್ರಿತವೂ ಆಗಿದೆ' ಎಂದು ಹೋಗುವಾಗ ಅರಸನಿಂದ ಹೊಗಳಿಸಿಕೊಂಡ, ತಿರುಗಿ ಬರುವಷ್ಟರಲ್ಲಿ ಬುಡಮೇಲಾಗಿ

ಬಿದ್ದ–ಹೀಗೆ ಆಲದಮರದ ಎರಡು ಪ್ರಸಂಗಗಳಿವೆ, ಗುಣಭದ್ರಾಚಾರ್ಯರ ಉತ್ತರಪುರಾಣದಲ್ಲಿ, ನಾಗಚಂದ್ರನಲ್ಲಿ ಹೋಗುವಾಗ ಹೊಗಳಿದ ಪ್ರಸಂಗವಿಲ್ಲದ ಕಾರಣ ಮೂಲದ ಸೊಗಸು ಮಾಯವಾಗಿದೆ.

೧೭೩. ತೆಳ್ಪೊಯ್–ಒಳಸೇರಿ ಹೊಡೆ; ಕುತ್ತು–ಗುದ್ದು, ಹೊಡೆ; ಕೆಲಗೊಳ್–ಸಮೀಪವಾಗಿರು; ಆಶಾಗಜ–ದಿಗ್ಗಜ; ಎಡೆಗುಡದೆ–ಸ್ಥಳಬಿಡದೆ; ಆಟಂದು–ಮೇಲೆ ಬಿದ್ದು; ತಿಗ್ಮರುಚಿ–ತೀಕ್ಷ್ಣ ಕಿರಣವುಳ್ಳವ, ಸೂರ್ಯ; ಸೌದಾಮಿನೀಪಾತ–ಮಿಂಚಿನ ಬೀಳುವಿಕೆ (ಮಿಂಚು ವಸ್ತುವಿಗೆ ತಾಗಿದಾಗ ಸಿಡಿಲೆನಿಸಿಕೊಳ್ಳುತ್ತದೆ).

೧೭೪. ಪಚ್ಚು–ಸೀಳು; ಸುರಧನು–ಕಾಮನ ಬಿಲ್ಲು; ಸ್ಪಂದನ–ಅಲುಗಾಡುವಿಕೆ.

೧೭೫. ಸ್ಥಿರಮೂಲ–ಸ್ಥಿರವಾದ ಬೇರುಳ್ಳ; ಕಳೇಬರ–ಶರೀರ; ಜರತ್ತೃಣಗ್ರಾಸ (ಜರತ್+ತೃಣ+ಗ್ರಾಸ)– ಕತ್ತರಿಸಿದ ಹುಲ್ಲಿನ ತುತ್ತು; ಗಹನ–ಅಸಾಧ್ಯ.

೧೭೬. ಕಾಳೋರಗ–ಯಮನೆಂಬ ಸರ್ಪ; ಅಳಿಪು–ಆಸೆ; ಎಸಗು–(ಬದುಕುವ) ಕಾರ್ಯಮಾಡು.

೧೭೭. ಕುತ್ತ–ಬೇನೆ; ಪರಿವರಿ–ಕ್ಷೇತ್ರ (?); ಬಿತ್ತು–ಬೀಜ; ಬೆಳಸು–ಪೈರು; ಕೃತಾಂತ–ಯಮ; ಎತ್ತು–ಸಿದ್ಧಪಡಿಸು; ಬೋನ–ಆಹಾರ, ಊಟ; ನಂಟರ್ತನ–ನಂಟುತನ, ಸಂಬಂಧ; ಇಲ್ಲಿಯ ಪರಿವರಿ, ಬಿತ್ತು, ಬೆಳಸು, ಬನ ಪದಗಳಲ್ಲಿಯ ಕ್ರಮವನ್ನು ಲಕ್ಷಿಸಿರಿ.

೧೭೮. ಸೆರೆ–ನರ; ಬೀಗು–ಉಬ್ಬು; ಕಪಿಲ್–ಕಳಚು, ಉದಿರು; ಪೆಕ್ಕಣ (<ಪ್ರೇಕ್ಷಣ)–ಪ್ರದರ್ಶನ, ಒಂದು ದೃಶ್ಯಕಲಾ ಪ್ರಕಾರ.

೧೭೯. ಎಳಸು–ಇಚ್ಛಿಸು; ದುಃಖಹೇತು–ದುಃಖಕ್ಕೆ ಕಾರಣ; ಉಪಶಮ–ಸಮಾಧಾನ.

೧೭೯ವ. ನಿರ್ವೇಗ–ವೈರಾಗ್ಯ; ಅಪ್ಪುಕೆಯ್–ಅಂಗೀಕರಿಸು, ಆಲಿಂಗಿಸು; ವಿಮುಖ–ಮುಖ ತಿರುಗಿಸಿದ, ಉದಾಸೀನ; ಮಂತ್ರಶಾಲೆ–ಆಲೋಚನ ಮಂದಿರ; ಅನ್ವಯಾಗತ–ಪರಂಪರೆಯಿಂದ ಬಂದ.

೧೮೦. ಪದನ್ಯಾಸ–ಹೆಜ್ಜೆ ಇಡುವಿಕೆ; ಸ್ಫುರತ್–ಹೊಳೆಯುವ; ಕರ್ಣಪೂರ–ಕಿವಿಯಾಭರಣ; ಆನ್–ಹೊಂದು, ಧರಿಸು; ನಿರ್ಭರ–ತುಂಬಿದ; ನಿರ್ಜಿತ–ಗೆದ್ದ; ಕ್ಷೋಣೀಧರ–ಅರಸ.

೧೮೧. ಅಧಿರಾಜ–ಚಕ್ರವರ್ತಿ; ಮಯೂಖಮಂಜರಿ–ಕಿರಣಗಳ ಗೊಂಚಲು; ಆನತ–ನಮಸ್ಕರಿಸಿದ.

೧೮೨. ವಿನತ–ಬಾಗಿದ; ತರ್ಕಿಸು–ಅಪ್ಪಿಕೊಳ್ಳು; ಪಳಂಚಲೆ ತಾಗು.

೧೮೨ವ. ಚಕಿತ–ಅಂಜಿದ; ಗಗ್ಗರಿಕೆ–ಗದ್ಗದ ಧ್ವನಿ.

೧೮೩. ಅಳವು–ಸಾಧ್ಯ; ಒಳಕೊಶ್–ಒಳಗೆ ಮಾಡಿಕೊಳ್ಳು; ಕುಳನದಿ–ಶ್ರೇಷ್ಠನದಿ.

೧೮೪. ನೆಱೆ-ಸಮರ್ಥ; ತರುಣ ಯುವಭೇದ-ಬಾಲಕ ಯುವಕಭೇದ.

೧೮೪ವ. ಗೃಹಮಹತ್ತರ-ಮನೆವೆರ್ಗ್ಗಡೆ, ಮನೆತನದ ವ್ಯವಸ್ಥೆ ನೋಡಿಕೊಳ್ಳುವ ಅಧಿಕಾರಿ.

೧೮೫. ಫೇನಪಿಂಡ-ನೊರೆಯ ಗಟ್ಟಿ; ಇಲ್ಲಿ ಚಾಮರ, ಖಡ್ಗಲತೆ, ಬೆಳ್ಗೊಡೆಗಳ ವರ್ಣನೆಯಿದೆ.

೧೮೫ವ. ಸನಾಭಿಜನ-ಬಂಧುಜನ; ಮೌಹೂರ್ತಿಕ-ಜೋಯಿಸ; ಶಾತಕುಂಭ-ಬಂಗಾರ; ಕಳಶ-ಕೊಡ.

೧೮೬. ತಳಿರ್ವೆಱೆದ-ಚಿಗುರೆಲೆಗಳಿಂದ ತುಂಬಿದ; ಸೆಳೆಗೊಂಬು-ದೀರ್ಘವಾದ ರೆಂಬೆ; ಪರಿಣತ-ಪಕ್ವ.

೧೮೭. ಕೂಟಕೋಟಿ-ಶಿಖರದ ತುದಿ; ಧಾರಾಕದಂಬ-ಜಲಪ್ರವಾಹದ ಸಮೂಹ; ಪಿಂಜರ-ಹಳದಿ ಬಣ್ಣ.

೧೮೮. ಆತೋದ್ಯ-ವಾದ್ಯ; ಪಳಂಚು-ಹಳಚು, ತಾಗು; ಶ್ರವಣ-ಕಿವಿ; ಮೆಯ್ವೆರ್ಚು-ಹುರಿಗೊಳ್ಳು; ಕೈಮಿಗು-ಅಧಿಕವಾಗು; ವೃದ್ಧ-೧, ಹಿರಿಯ ೨. ವರ್ಧಿತ; ಆಶೀರವಂ-ಆಶೀರ್ವಾದ ಧ್ವನಿ; ಪಾರ್ಥಿವ-ಪೃಥುಯೆಂಬ ಅರಸನ ವಂಶಕ್ಕೆ ಸಂಬಂಧಿಸಿದವ, ರಾಜ.

೧೮೯. ಕಳೆದಿತ್ತಂ-ತೆಗೆದಿಟ್ಟನು.

೧೯೦. ಭಾರವಾಹಕಂ-ಭಾರವನ್ನು ಒಯ್ಯುವವನು; ಪೊಱೆ-ಹೊರೆ.

೧೯೧. ದೋಷಾನುರಾಗ-ಸಂಜೆಗೆಂಪು; ಪರೆ-ವ್ಯಾಪಿಸು.

೧೯೧ವ. ಸಂಧ್ಯಾನಿಯಮ-ಸಂಧಿಕಾಲ (ಮುಂಜಾವು, ಮಧ್ಯಾಹ್ನ, ಸಾಯಂಕಾಲ)ಗಳಲ್ಲಿ ಮಾಡುವ ಪ್ರಾರ್ಥನಾ ವಿಧಿ.

೧೯೨. ಚತುರ್ಗತಿದುಃಖ-ದೇವ, ಮನುಷ್ಯ, ನಾರಕ, ತಿರ್ಯಕ್-ಈ ನಾಲ್ಕು ಭವಗಳೆಂಬ ದುಃಖ; ಕ್ರೋಧ, ಮಾನ, ಮಾಯಾ, ಲೋಭ- ಇವು ಕಷಾಯಗಳು. ಸಂಸರಣ (=ಪರಿವರ್ತನ) ಸ್ಥಿತಿಯುಳ್ಳ ಜೀವವು ಸಂಸಾರಿ. ಇದು ದ್ರವ್ಯಪರಿವರ್ತನ, ಕ್ಷೇತ್ರಪರಿವರ್ತನ, ಕಾಲಪರಿವರ್ತನ, ಭವಪರಿವರ್ತನ, ಭಾವಪರಿವರ್ತನ ಎಂದು ಐದು ಬಗೆಯಾಗಿದೆ. ಈ ಪದ್ಯ ಸಂಸಾರವನ್ನು ಕುರಿತ ವ್ಯಾಖ್ಯೆಯಂತಿದೆ.

೧೯೩. ಸಂಜೆ- (ಮುಂಜಾವಿನ) ಸಂಧ್ಯಾ; ಕಾವಣ-ಮಂಟಪ; ಮಾಧವೀ-ಇರವಂತಿಗೆ; ಮಂಜರೀ-ಹೂ; ತಾರಕಾಳಿ-ನಕ್ಷತ್ರಸಮೂಹ; ನೀರೋಡಿ-ಜಲಾಂಶ ಹಿಂಗಿ; ಕಟಿಲ್-ಕಳಚು; ಕಳಿವೂ-ಹಣ್ಣಾದ ಹೂ. ನಿಸರ್ಗ ವರ್ಣನೆಯ ಮೂಲಕ ವೈಶ್ರವಣನ ಸಧ್ಯಃ ಸ್ಥಿತಿಯನ್ನು ಧ್ವನಿಸುತ್ತದೆ ಈ ಪದ್ಯ.

೧೯೪. ದಿವಿಜಾಗ್ರಣಿ-ದೇವೇಂದ್ರ.

೧೯೪ವ. ವಿಷಾದವಹ್ನಿ-ದುಃಖಾಗ್ನಿ.

೧೯೫. ದೃಷ್ಟಸೌಖ್ಯಂ–ಪ್ರತ್ಯಕ್ಷಸುಖ; ಅದೃಷ್ಟಸೌಖ್ಯಂ–ಪರೋಕ್ಷಸುಖ, ಮೋಕ್ಷಸುಖ; ಮಾನ್ಯ–ಪ್ರತಿಷ್ಠಿತ; ರಾಜನ್ಯಕಂ–ಕ್ಷತ್ರಿಯ ಸಮೂಹ; ಇವರು ಅರಸನ ಪ್ರಾಣವಾಗಿ ನಡೆದುಕೊಳ್ಳುವ 'ವೇಳೆವಾಟಿ' ವರ್ಗವನ್ನು ನೆನಪಿಗೆ ತರುತ್ತಾರೆ.

೧೯೫ವ. ತರೆಸಲ್–ನಿಶ್ಚಯಿಸು.

೧೯೬. ವನಚರ–೧. ಬೇಡ ೨. ಜಲಚರಪ್ರಾಣಿ; ವಿಕೀರ್ಣ–ತುಂಬಿದ, ಪಸರಿಸಿದ; ವಿದ್ರುಮ–೧. ವಿಶೇಷವೃಕ್ಷ ೨. ಹವಳ; ವಿಷೋರಗ ವಿಷಮಂ–ವಿಷಸರ್ಪಗಳಿಂದ ವಿಷಮವಾದುದು.

೧೯೬ವ. ಕಾಂತಾರ–ಅರಣ್ಯ.

೧೯೭. ಚೂಳಿಕಾ–ಶಿಖರ; ಆನೋಕಹ–ವೃಕ್ಷ; ಶಾಖಾಹಸ್ತ–ರೆಂಬೆಗಳೆಂಬ ಕೈ; ಜಕ್ಕುಲಿಸು–ಕಟ್ಟಾಡಿಸು; ಗಂಡಶೈಲ–ದೊಡ್ಡಬಂಡೆ; ಹಟತ್ಕೂಟ–ಹೊಳೆಯುವ ಶಿಖರ; ಉದ್ಧರಿಸು–ಮೇಲೆತ್ತು; ದಿವ–ಆಕಾಶ; ಭೂಭೃನ್ಮಹಿತಂ–ಪರ್ವತಶ್ರೇಷ್ಠ; ನಿರ್ಝರ–ಗಿರಿನದಿ; ಲಹರೀ–ಪ್ರವಾಹ; ಮಾಂಗಲ್ಯರಂಗ–ಮಂಗಲಕರವಾದ ರಂಗಭೂಮಿ.

೧೯೮. ದೇವಕುಜ–ಕಲ್ಪವೃಕ್ಷ; ಬಂಚ (<ವಂಶ)–ಕೊಳಲು; ವಿಮಾನ–ಸ್ವರ್ಗ.

೧೯೯. ಕ್ಷತ್ರಕುಳ–ಕ್ಷತ್ರಿಯ ಸಮೂಹ; ಅತ್ರಿತನೂಭವ–ಚಂದ್ರ.

೨೦೦. ಅಪವರ್ಗಲಕ್ಷ್ಮಿ–ಮೋಕ್ಷಲಕ್ಷ್ಮಿ; ಚೈತ್ಯಗೃಹ–ಜಿನಾಲಯ.

೨೦೧. ವೃಜಿನ–ಪಾಪ; ಪುಳಿನ–ಮಳಲದಿನ್ನೆ; ನಯ–ಒಂದು ವಸ್ತುವನ್ನು ಒಂದು ದೃಷ್ಟಿಯಿಂದ ಅರ್ಥಮಾಡಿಕೊಳ್ಳುವುದು; ನಿಕ್ಷೇಪ–ಒಂದು ವಸ್ತುವನ್ನು ನಾಮ, ಸ್ಥಾಪನಾ, ದ್ರವ್ಯ, ಭಾವಗಳ ಮುಖಾಂತರ ಅರ್ಥಮಾಡಿಕೊಳ್ಳುವುದು, ಪ್ರಮಾಣ–ಒಂದು ವಸ್ತುವನ್ನು ಸರ್ವದೃಷ್ಟಿಗಳಿಂದ ಅರ್ಥಮಾಡಿಕೊಳ್ಳುವುದು.

೨೦೨. ನೇವಾಳ–ಹಾರ; ಏವಿಧಿ–ಯಾವ ಗತಿ.

೨೦೩. ನಾಗಚಂದ್ರನ ಮನಸ್ಥಿತಿಯ ಪ್ರತೀಕ ಈ ಪದ್ಯ.

೨೦೪. ಭರ–ಭಾರ; ಕಿಣ–ದುಡ್ಡು.

೨೦೫. ಮಾತಂಗ–ಆನೆ; ಅಳಜ್–ಅಂಜು.

೨೦೬. ಮೆಚ್ಚೆ ಗಡ ಮುಳಿಯೆ ಗಡ–ಮೆಚ್ಚಲಾರೆನು, ಮುಳಿಯಲೂ ಆರೆನು. ಈ ಉಭಯಗಳಿಂದ ಅತೀತವಾದ ಸ್ಥಿತಿ; ಬೆಚ್ಚು–ಬೆಸೆಯುವಿಕೆ; ಕಣ್ದೆಱ್–ಪ್ರಕಟವಾಗು, ಅನುಭವವುಂಟಾಗು.

೨೦೭. ಜ್ಯಾಯ–ಹಿರಿಯ; ಆದೇಯ–ಸ್ವೀಕಾರಯೋಗ್ಯ, ಗ್ರಾಹ್ಯ; ಏವೆಂ–ಏನು ಮಾಡುವೆನು; ಉಪಾಯ–ವಿಧಾನ.

೨೦೮. ಈವರೆಗಿನ ಎಂಟು ಪದ್ಯಗಳು 'ಅಷ್ಟಕ'ದಂತೆ ಸೊಗಸಾಗಿವೆ.

೨೦೮ವ. ನಿರ್ಭರ–ತುಂಬಿದ; ಅಪರ–ತರುವಾಯದ, ಆಮೇಲಿನ; ಇಲ್ಲಿ ಶ್ರೀನಾಗಭಟ್ಟಾರಕನನ್ನು ಕವಿ ತನ್ನ ಗುರು ಬಾಳಚಂದ್ರನೊಂದಿಗೆ ಸಮೀಕರಿಸಿದ್ದಾನೆ.

೨೦೯. ನಿಮ್ಮಂದಿಗರ್–ನಿಮ್ಮಂಥವರು; ಒನಲಿ–ಜರಡಿ.

೨೦೯ವ. ಮುಕುಲಿತ–ಮುಚ್ಚಿದ, ಜೋಡಿಸಿದ.

೨೧೦. ಪೊರ್ದು–ಹೊಂದು, ಸಮೀಪಿಸು; ಹೇಮಪದ–ಬಂಗಾರದ ಸ್ಥಿತಿ; ಅಕ್ಕೆ–ಆಗಲಿ.

೨೧೧. ಪಂಚಪದ–ಪಂಚಪರಮೇಷ್ಠಿಗಳ ನಮಸ್ಕಾರ ಮಂತ್ರ; ಣಮೋ ಅರಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸಬ್ಬಸಾಹೂಣಂ (ಅರ್ಹಂತರಿಗೆ ನಮಸ್ಕಾರ, ಸಿದ್ಧರಿಗೆ ನಮಸ್ಕಾರ, ಆಚಾರ್ಯರಿಗೆ ನಮಸ್ಕಾರ; ಉಪಾಧ್ಯಾಯರಿಗೆ ನಮಸ್ಕಾರ; ಲೋಕದಲ್ಲಿಯ ಸರ್ವಸಾಧುಗಳಿಗೂ ನಮಸ್ಕಾರ); ಪ್ರರೋಹ–ಬೆಳವಣಿಗೆ; ಜಾತರೂಪ–ಹುಟ್ಟಿದಾಗಿನ ರೂಪ ನಗ್ನರೂಪ; ಉದ್ಧೂತವಿಳೇಪ–(ಸುಗಂಧ–ಮೊದಲಾದ) ಲೇಪನಗಳನ್ನು ತ್ಯಜಿಸಿದ; ಆಟೋಪ–ಗರ್ವ.

೨೧೨. ಮೂಲಗುಣ–ಮುನಿಗಳ ಮೂಲಗುಣಗಳು ೨೮. ಅವು:

೫ ಮಹಾವ್ರತಗಳು; ಅಹಿಂಸೆ, ಸತ್ಯ, ಅಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ, ಅಪರಿಗ್ರಹ (ಸ್ವೀಕರಿಸದಿರುವುದು).

೫ ಸಮಿತಿಗಳು: ಈರ್ಯಾ (ಯಾವ ಪ್ರಾಣಿಗೂ ನೋವಾಗದಂತೆ ನಡೆಯುವುದು); ಭಾಷಾ (ಯಾರ ಮನಸ್ಸಿಗೂ ನೋವಾಗದಂತೆ ಮಾತನಾಡುವುದು); ಏಷಣ (ತನಗಾಗಿ ಸಿದ್ಧಪಡಿಸಿದ ಪರಿಶುದ್ಧ ಆಹಾರ ಸ್ವೀಕರಿಸುವುದು); ಆದಾನ (ತನ್ನ ಕಮಂಡಲು, ಪುಸ್ತಕಗಳನ್ನಿಡುವಾಗ ಪ್ರಾಣಿಹಿಂಸೆಯಾಗದಂತೆ ನೋಡಿಕೊಳ್ಳುವುದು); ಪ್ರತಿಷ್ಠಾನ (ವಿಸರ್ಜಿತ ವಸ್ತುಗಳನ್ನು ಬಿಡುವಾಗಲೂ ಪ್ರಾಣಿಹಿಂಸೆಯಾಗದಂತೆ ನೋಡಿಕೊಳ್ಳುವುದು).

೫ ಇಂದ್ರಿಯ ಸಂಯಮ: ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ–ಇವುಗಳ ಸಂಯಮ.

೬ ಆವಶ್ಯಕಗಳು : ಸಾಮಾಯಿಕ (ಸಮತಾಭಾವ); ತೀರ್ಥಂಕರಸ್ತವನ; ಪಂಚಪರಮೇಷ್ಠಿವಂದನ; ಪ್ರತಿಕ್ರಮಣ (ತಪ್ಪೊಪ್ಪಿಕೊಳ್ಳುವಿಕೆ); ಪ್ರತ್ಯಾಖ್ಯಾನ (ದೋಷವುಂಟಾಗದಂತೆ ಮುಂಜಾಗ್ರತೆ ವಹಿಸುವುದು); ಕಾಯೋತ್ಸರ್ಗ (ಶರೀರದ ಮೇಲಿನ ಮಮತ್ವತ್ಯಾಗ).

ಮತ್ತು ೧. ಕೇಶಲೋಚನ (ಕೂದಲು ಕಿತ್ತುಕೊಳ್ಳುವುದು); ೨. ನಗ್ನತಾ (ಬತ್ತಲೆಯಾಗಿರುವುದು); ೩ ಅಸ್ನಾನ (ಸ್ನಾನಮಾಡದಿರುವುದು); ೪. ಅದಂತಧಾವನ (ಹಲ್ಲು ತಿಕ್ಕದಿರುವುದು); ೫. ಭೂಶಯನ (ನೆಲದ ಮೇಲೆ ಮಲಗುವುದು); ೬. ಸ್ಥಿತಿಭೋಜ (ನಿಂತು ಊಟಮಾಡುವುದು); ೭. ಏಕಭೋಜನ (ದಿನಕ್ಕೆ ಒಮ್ಮೆ ಮಾತ್ರ ಊಟ ಮಾಡುವುದು).

ಉತ್ತರಗುಣ–ಮುನಿಗಳ ಉತ್ತರಗುಣಗಳು ೩೪, ಅವು (೨೨ ಪರೀಷಹ + ೧೨ ತಪಸ್ಸು).

೨೨ ಪರೀಷಹಗಳು : ಗುರಿಸಾಧನೆಗೆ ಅಡ್ಡಿಮಾಡುವ ಹಸಿವು, ನೀರಡಿಕೆ ಇತ್ಯಾದಿ

೨೨ ತೊಂದರೆಗಳು ಪರೀಷಹ. ಇವುಗಳನ್ನು ಜಯಿಸುವುದೇ ಪರೀಷಹಜಯ.

೧೨ ತಪಸ್ಸುಗಳು: ಬಾಹ್ಯತಪಸ್ಸು ೬, ಅಭ್ಯಂತರತಪಸ್ಸು ೬.

ಬಾಹ್ಯತಪಸ್ಸು ೬: ಅನಶನತಪಸ್ಸು (–ಆಹಾರವನ್ನು ತೆಗೆದುಕೊಳ್ಳದಿರುವುದು), ಅವಮೋದರ ತಪಸ್ಸು (–ಆವಶ್ಯಕತೆಗಿಂತ ಕಡಿಮೆ ತಿನ್ನುವುದು), ವೃತ್ತಿಸಂಖ್ಯಾತಪಸ್ಸು (–ಪೂರ್ವಯೋಜಿತ ರೀತಿಯಲ್ಲಿ ದೊರೆತರೆ ಮಾತ್ರ ಭಿಕ್ಷೆ ಸ್ವೀಕರಿಸುವುದು), ರಸತ್ಯಾಗ ತಪಸ್ಸು (–ಹಾಲು, ಮೊಸರು ಇತ್ಯಾದಿ ಇಷ್ಟವಾದ ವಸ್ತುಗಳನ್ನು ಬಿಡುವುದು), ಕಾಯಕ್ಲೇಶ ತಪಸ್ಸು (–ಮಳೆ, ಗಾಳಿ ಮೊದಲಾದವುಗಳನ್ನು ಸಹಿಸುವುದು), ವಿವಿಕ್ತ ಶಯನಾಸನ ತಪಸ್ಸು (–ಏಕಾಂತವಾಗಿ ಮಲಗುವುದು, ಕೂಡುವುದು).

ಅಭ್ಯಂತರ ತಪಸ್ಸು ೬: ಪ್ರಾಯಶ್ಚಿತ್ತ (–ತಪ್ಪನ್ನು ಒಪ್ಪಿಕೊಂಡು ವಿಧಿಸಿದ ಶಿಕ್ಷೆಯನ್ನು ಸ್ವೀಕರಿಸುವುದು), ವಿನಯ (–ಜ್ಞಾನ, ದರ್ಶನ, ಚಾರಿತ್ರಗಳಲ್ಲಿ ಮಿಗಿಲಾದವರಿಗೆ ವಿನಯನಾಗಿರುವುದು), ವೈಯಾವೃತ (–ವೃದ್ಧ, ಅಶಕ್ತಸಾಧು, ದೀನರ ಸೇವೆ ಮಾಡುವುದು), ಸ್ವಾಧ್ಯಾಯ (–ಆಗಮಗ್ರಂಥಗಳನ್ನು ಮನನಮಾಡಿಕೊಳ್ಳುವುದು), ವ್ಯುತ್ಸರ್ಗ (–ದೇಹದ ಮಮತೆಯನ್ನು ಬಿಡುವುದು), ಧ್ಯಾನ (–ಆರ್ತಧ್ಯಾನ, ರೌದ್ರಧ್ಯಾನಗಳಿಗೆ ವಿಮುಖನಾಗಿ ಧರ್ಮಧ್ಯಾನ, ಶುಕ್ಲಧ್ಯಾನಗಳಲ್ಲಿ ತೊಡಗುವುದು).

ಶೀಲ–ಶೀಲಗಳು ೭, ಅವು: ಗುಣವ್ರತ ೩ (ದಿಗ್ವಿರತಿ, ದೇಶವಿರತಿ, ಅನರ್ಥ ದಂಡವಿರತಿ); ಶಿಕ್ಷಾವ್ರತಗಳು ೪ (ಸಾಮಾಯಿಕ, ಪ್ರೋಷಧೋಪವಾಸ, ಭೋಗೋಪಭೋಗ ಪರಿಮಾಣ, ವೃತ್ತಿಪರಿಸಂಖ್ಯಾನ)

ಸಮಿತಿ–ಮೇಲೆ ನೋಡಿರಿ.

ಗುಪ್ತಿ–೧ ಮನೋಗುಪ್ತಿ (–ಸುಖದುಃಖಗಳಿಗೆ ಅತೀತನಾಗಿ ಸಮತಾಭಾವದಿಂದಿರುವುದು), ೨. ವಚನಗುಪ್ತಿ (–ಮಿತಭಾಷಿಯಾಗಿರುವುದು ಅಥವಾ ಮೌನಿಯಾಗಿರುವುದು), ೩ ಕಾಯಗುಪ್ತಿ (–ಆಗಮೋಕ್ತ ಆಚರಣೆಗಳನ್ನು ಪಾಲಿಸುವುದು).

ಪಂಚಮಹಾವ್ರತ–ಮೇಲೆ ನೋಡಿರಿ.

ಪ್ರಮಾದ–ಇವುಗಳ ಸಂಖ್ಯೆ ೧೫:

೪ ಕಷಾಯ: ಕ್ರೋಧ, ಮಾನ, ಮಾಯಾ, ಲೋಭಗಳಿಂದಾಗುವ ಪ್ರಮಾದಗಳು; ೪ ವಿಕಥಾ: ಸ್ತ್ರೀ, ಭೋಜನ, ರಾಷ್ಟ್ರ, ರಾಜಕಥೆಗಳಿಂದಾಗುವ ಪ್ರಮಾದಗಳು; ೫ ಇಂದ್ರಿಯ : ಕಣ್ಣು, ಮೂಗು, ಕಿವಿ, ನಾಲಗೆ, ಚರ್ಮಗಳಿಂದಾಗುವ ಪ್ರಮಾದಗಳು; ೧. ನಿದ್ರೆ, ೨. ಸ್ನೇಹ ಇವುಗಳಿಂದುಂಟಾಗುವ ಪ್ರಮಾದಗಳು;

ಧಾರ್ಮಿಕ ಕ್ರಿಯೆಗಳಲ್ಲಿ ಅನಾದರ ಹುಟ್ಟಿಸುವ ಈ ಪ್ರಮಾದಗಳನ್ನು ತ್ಯಜಿಸಬೇಕು.

೨೧೨ವ. ಯಥಾಖ್ಯಾತ– (ಆಗಮಗಳಲ್ಲಿ) ಯಥಾವತ್ತಾಗಿ ಹೇಳಿದ; ಚತುರ್ವಿಧ ಶುಕ್ಲಧ್ಯಾನ– ಕರ್ಮನಿರ್ಜರೆಗೆ ಸಾಧನವಾದುವು ಬಾಹ್ಯ ಮತ್ತು ಅಭ್ಯಂತರ ಎಂಬ ಎರಡು ಬಗೆಯಾದ ತಪಸ್ಸುಗಳು. ಇವುಗಳಲ್ಲಿ ಅಭ್ಯಂತರ ತಪಸ್ಸಿನ ಆರು ಬಗೆಗಳಲ್ಲಿ ಕೊನೆಯದು ಧ್ಯಾನ; ನಾಲ್ಕು ಬಗೆಯ ಈ

ಧ್ಯಾನದಲ್ಲಿ ಕೊನೆಯದು ಶುಕ್ಲಧ್ಯಾನ. ಪರಿಶುದ್ಧವಾದ ಈ ಧ್ಯಾನದ ಗುರಿ ಕೇವಲ ಮೋಕ್ಷಚಿಂತನೆ, ಇದು ನಾಲ್ಕು ಬಗೆಯಾಗಿದೆ: ಪೃಥಕ್ತ್ವ ವಿತರ್ಕವಿಚಾರ, ಏಕತ್ವ ವಿತರ್ಕವಿಚಾರ, ಸೂಕ್ಷ್ಮಕ್ರಿಯಾಪ್ರತಿಪಾತಿ, ವ್ಯುಪರತ ಕ್ರಿಯಾವಿವರ್ತಿಲ ಸಮಾಹಿತ–ಕೂಡಿದ; ಉಪಶಾಂತಗುಣಸ್ಥಾನ–ಸಂಸಾರದಲ್ಲಿ ಸಿಕ್ಕು ಬಿದ್ದ ಜೀವ ಕ್ರಮಕ್ರಮವಾಗಿ ಮೇಲೇರುತ್ತ ಕರ್ಮಕ್ಷಯ ಮಾಡಿಕೊಂಡು ಮುಕ್ತಿಪಡೆದ ಮಾರ್ಗದಲ್ಲಿ ೧೪ ಮೆಟ್ಟಿಲುಗಳಿವೆ. ಇವುಗಳಿಗೆ "ಗುಣಸ್ಥಾನ"ಗಳೆಂದು ಹೆಸರು, ಇವುಗಳಲ್ಲಿ ೧೧ನೆಯದು ಉಪಶಾಂತಮೋಹ.

೨೧೩. ಅನಶನ–ಬಾಹ್ಯತಪಸ್ಸುಗಳಲ್ಲಿ ಒಂದು; ಆಹಾರ ಸ್ವೀಕರಿಸದಿರುವುದು ಇದರ ಲಕ್ಷಣ; ಸಮಾಧಿ–ಆಹಾರವನ್ನು ತೊರೆದು ರತ್ನತ್ರಯ (ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ)ದಲ್ಲಿ ಸ್ಥಿರವಾಗಿ ಪ್ರಾಣತ್ಯಾಗ ಮಾಡುವುದು; ಬಗೆದು+ಅಂತಿರೆ ಎಂದು ಬಿಡಿಸಬೇಕು; ಮಱುಮೆಯ್–ಪುನರ್ಜನ್ಮ; ಪಳುಕು–ಸ್ಫಟಿಕ; ಪಳಚ್ಚನಪ್ಪಿನಂ–ಹೊಳೆಯುವ ಹಾಗೆ; ಅಹಮಿಂದ್ರ–ಊರ್ಧ್ವಲೋಕದಲ್ಲಿ ಒಂದರ ಮೇಲೊಂದು ೧೬ ಕಲ್ಪ, ೯ ಗ್ರೈಮೇಯಕ ವಿಮಾನ, ೯ ಅನುದಿಶ ವಿಮಾನ, ೫ ಅನುತ್ತರ ವಿಮಾನಗಳಿವೆ. ವಿಮಾನವಾಸಿಗಳಿಗೆ ಅಹಮಿಂದ್ರರೆಂದು ಹೆಸರು; ಅಪರಾಜಿತ–ಅನುತ್ತರ ವಿಮಾನಗಳಲ್ಲಿ ನಾಲ್ಕನೆಯದು. ಸಹಜಾಭರಣಾಂಬರ ಪುಷ್ಪಮಾಲೆಗಳ್–ಸಹಜಾತವಾದ ಆಭರಣ, ಬಟ್ಟೆ ಮತ್ತು ಮಾಲೆಗಳು.

೨೧೪. ಬೆಸಕೆಯ್–ಕಂಡರಿಸು; ಪಾಂಡುರ–ಬಿಳಿಯ.

೨೧೫. ಹರಿನೀಳ–ಇಂದ್ರನೀಲ; ಲೆಪ್ಪ–ಎರಕ; ಅಮರೋತ್ತಂಸ–ದೇವತಾ ಶ್ರೇಷ್ಠ.

೨೧೬. ತವದ–ಕುಂದದ; ದಾಮ–ಹೂವಿನಸರ; ಸೀರೆ (<ಚೀರ)–ವಸ್ತ್ರ; ಧಾತು–ದೇಹದಲ್ಲಿರುವ ರಸ, ರಕ್ತ, ಮಾಂಸ, ಮೇದಸ್ಸು, ಮಜ್ಜಾ, ಅಸ್ಥಿ, ಶುಕ್ಲ ಎಂಬ ಸಪ್ತಧಾತುಗಳು. ಅಳಂ (<ಅಣಂ) ಸ್ವಲ್ಪವೂ; ಅಪ್ಪುಕೆಯ್–ಅಳವಡಿಸಿಕೊಳ್ಳು; ಅಂಗೀಕರಿಸು; ದಿವಿಜಂ–ಅಹಮಿಂದ್ರನಾದ ಈ ದೇವತೆ; ಪರಮಾಯು–ಪೂರ್ಣ ಆಯುಷ್ಯ, ಅನುತ್ತರ ವಿಮಾನವಾಸಿಗಳ ಆಯುಷ್ಯ ೩೩ ಸಾಗರೋಪಮ.

೨೧೭. ದಿವ–ದೇವಲೋಕ; ವೈಶ್ರವಣಚರಂ–ವೈಶ್ರವಣನಾಗಿ ಚರಿಸಿದ ಜೀವ; ಚರಮದೇಹ–ಕೊನೆಯ ದೇಹ, ಮೋಕ್ಷಕ್ಕೆ ಹೋಗುವ ದೇಹ; ಅವಧಿ–ಅವಧಿಜ್ಞಾನ, ಐದು ಬಗೆಯ ಸಮ್ಯಕ್ ಜ್ಞಾನಗಳಲ್ಲಿ ೩ನೆಯದು. ಯಾವುದೇ ಕಾಲದ, ಯಾವುದೇ ದೇಶದ ಘಟನೆಗಳನ್ನು ತಿಳಿಯುವುದು ಇದರ ಲಕ್ಷಣ; ಒಸೆ–ಸಂತೋಷಪಡು; ಸೌಧರ್ಮೇಂದ್ರ–ಊರ್ಧ್ವಲೋಕದ ೧೬ ಕಲ್ಪಗಳಲ್ಲಿ ಮೊದಲಿನದಾದ ಸೌಧರ್ಮಕಲ್ಪದ ಇಂದ್ರ.

೨೧೭ವ. ಸುರಪ್ರಧಾನ–ಇಂದ್ರ; ಧನಪ್ರಧಾನ–ಕುಬೇರ; ರೈವೃಷ್ಟಿ–ಬಂಗಾರ ಮಳೆ; ಪುರಂಧ್ರೀ–ಸ್ತ್ರೀ; ತಾರಾವಲ್ಲಭ–ಚಂದ್ರ; ಉತ್ತಂಭಿತ–ಉದ್ರಿಕ್ತ; ಕುಂಭ–ಕಳಸ; ಗರ್ಭಾವತರಣ ಕಲ್ಯಾಣ–ತೀರ್ಥಂಕರನು ಮಾತೃಗರ್ಭ ಪ್ರವೇಶಿಸುವುದನ್ನು ಮೊದಲುಮಾಡಿ ಮೋಕ್ಷವನ್ನು ಸಾಧಿಸುವ ವರೆಗೆ ಜರುಗುವ ಗರ್ಭಾವತರಣ, ಜನ್ಮಾಭಿಷೇಕ, ಪರಿನಿಷ್ಕ್ರಮಣ, ಕೇವಲಜ್ಞಾನ, ಪರಿನಿರ್ವಾಣಯೆಂಬ ಐದು ಕಲ್ಯಾಣಗಳಲ್ಲಿ ಮೊದಲಿನದು.

೨೧೮. ವಸುಧಾರೆ–ಬಂಗಾರಮಳೆ; ಚಿತ್ರ–ರಮಣೀಯ.

೨೧೮ವ. ಶರವರ್ಷ–ಬಾಣಗಳ ಮಳೆ.

೨೧೯. ನೂಲತೊಂಗಲ್–ಕಟಿಸೂತ್ರದ ಗೊಂಚಲು; ಉಣ್ಮು–ಉಂಟಾಗು; ಪೊಣ್ಮು–ಹೊರಸೂಸು.

೨೨೦. ಆನತ–ಬಾಗಿದ, ನಮಸ್ಕರಿಸಿದ.

೨೨೧. ಅವತಂಸ–ಆಭರಣ; ಮುಕ್ತಾಫಳ–ಮುತ್ತು; ಸ್ಮಿತನಯನ–ನಗೆಗಣ್ಣು; ಬಳಸು–ಆವರಿಸು; ಚಳ–ಚಂಚಲ, ಹೊಳೆಯುವ.

೨೨೨. ಬಗೆಗೊಳಿಸು–ಸಂತೋಷಪಡಿಸು; ಎಡೆಮಾಡು–ಅವಕಾಶಮಾಡು; ಬಣ್ಣವಣ್ಣಿಗೆ (<ವರ್ಣವರ್ಣಿಕಾ)– ಬಣ್ಣ ಬಣ್ಣದ; ಓಲಗಿಸು–ಸೇವೆಮಾಡು; ಬೋನವೆತ್ತು–ಅಡಿಗೆ ಸಿದ್ಧಮಾಡು; ಅಗಲೆತ್ತು–ಊಟಕ್ಕೆ ಸಿದ್ಧಮಾಡು.

೨೨೨ವ. ಎಳಸು–ಇಚ್ಛಿಸು; ಲಾಕ್ಷಾರಸ–ಅಲತಿಗೆ; ಊಡು–ಉಣಿಸು, ಲೇಪಿಸು; ಮದರದನೀ–ಮದ್ದಾನೆ; ರದನ–ಹಲ್ಲು, ಕೋರೆ; ಕೀರ್ತಿಮುಖ–ಕೊಂಬಣಸು(?), ಸಂಗಳಿಸು–ಸಂಗಡಿಸು; ಪೀವರ–ದೊಡ್ಡ; ಪಯೋಧರ–ಮೊಲೆ; ಬಿಳಲ–ಆಗಂತುಕಬೇರು; ಕವಲ್ವರಿ–ಕವಲಾಗಿ ಪ್ರಹಿಸು; ಅಂಗದ–ಭುಜದ ಆಭರಣ; ಸಿರಿಸ (ಶಿರೀಷ)–ಸಿರಿಸಲ; ಪಿಂಡುಗಂಕಣ–ಮುರಿಗೆಕಂಕಣ; ಗಜೆಗಟ್ಟು–ಬಾಣದ ಹಿಂದಿನ ತುದಿಗೆ ಸಮತೋಲನಕ್ಕಾಗಿ ಗರಿ ಕಟ್ಟುವುದು; ಅಂಗುಳಿ–ಬೆರಲು; ಸ್ಮರವಶೀಕರಣ ಯಂತ್ರ–ಸ್ತ್ರೀಪುರುಷರನ್ನು ವಶಮಾಡಿಕೊಳ್ಳಲು ರೇಖೆ ಅಕ್ಷರಾದಿಗಳನ್ನು ಬರೆದ ತಗಡು; ಮಕರಿಕಾಪತ್ರ–ಅಲಂಕಾರಕ್ಕಾಗಿ ಎದೆ, ಕಪೋಲಗಳ ಮೇಲೆ ಬರೆದ ಚಿತ್ರ; ಪೋಸಮಸೆಯ–ಅದೇ ಆಗ ಮಸೆದ; ಪೊಗರ್–ಕಾಂತಿ; ಆಣ್ಕೆಗೆಯ್–ಅಂಟಿಸು, ಲೇಪಿಸು; ಕರ್ಣಾಂತ ವಿಶ್ರಾಂತ–ಕಿವಿಯ ವರೆಗೆ ಹಬ್ಬಿದ; ಪುರುಷವರ್ಣನೆಯನ್ನು ಶಿರಸ್ಸಿನಿಂದ, ಸ್ತ್ರೀವರ್ಣನೆಯನ್ನು ಪಾದದಿಂದ ಪ್ರಾರಂಭಿಸುವುದು ಕವಿಪದ್ಧತಿ.

೨೨೩. ಅಳಕವಲ್ಲಿ–ಕೂದಲೆಂಬ ಬಳ್ಳಿ. ಕಜ್ಜಿ–ಕಪ್ಪು. "ತೋರಮಲ್ಲಿಗೆಯ ತುರುಂಬು ರಾಹುತವೆ ನುಂಗಿದ ಚಂದ್ರನನೊಯ್ಯನೊಯ್ಯನಂದುಗುಟ್ಟುವೊಲೊಪ್ಪಿರಲ್" (ಪಂ. ಭಾ. ೭–೮೮) ವಾಕ್ಯದ ಪ್ರಭಾವ.

೨೨೩ವ. ಅಚ್ಚರಸಿ–ಅಪ್ಸರಾಸ್ತ್ರೀ; ಚತುರ್ಥಸ್ನಾನ–ಮುಟ್ಟಾದ ನಾಲ್ಕನೆಯ ದಿನ ಮಾಡುವ ಸ್ನಾನ.

೨೨೪. ಗರ್ಭಶೋಧನೆ–ಇಂದ್ರನ ಆಜ್ಞೆಯಂತೆ ದೇವತಾಸ್ತ್ರೀಯರು ಜಿನಾಂಬಿಕೆಯ ಗರ್ಭವನ್ನು ಶುದ್ಧಗೊಳಿಸುವುದು; ಕಾಳಿಂದಿ–(ಕಪ್ಪು ನೀರಿನ) ಯಮುನೆ.

೨೨೫. ಬೆಳ್ಪಸದನ– (ಬೆಳ್+ಪಸದನ<ಪ್ರಸಾಧನ) ಬಿಳಿಯ ಅಲಂಕಾರ; ಐಸರ–ಐದು ಎಳೆಯ ಹಾರ; ಸೂಡು–ಧರಿಸು; ಅಚ್ಚವಾಸಿಗ–ಅಚ್ಚಬಾಸಿಂಗ (=ಹಾರ).

೨೨೬. ಪರಿಚ್ಛದ–ಹೊದಿಕೆ; ಚಾರುತಳ್ಪ–ಸುಂದರವಾದ ಹಾಸಿಗೆ; ಪ್ರತಿಪಾದುಕ–(ಮನೆಯೊಳಗೆ ಬಳಸುವ) ಅಮುಖ್ಯಪಾದುಕೆ; ಅಂಚಿತ–ಹೊಳೆಯುವ; ಘನಸಾರ–ಕರ್ಪೂರ; ಸುಗಂಧಶುಕ್ತಿ–ಪರಿಮಳದ ಚಿಪ್ಪು.

೨೨೭. ಪರಿ–ಹರಿದುಹೋಗು; ಅಧರಮಣಿ–ಕೆಳದುಟಿಯೆಂಬ ಮಣಿ; ಮರವಡು–ಮೌನತಾಳು, ಸ್ತಂಭೀಭೂತನಾಗು.

೨೨೭ಎ. ಲೆಪ್ಪ–ಎರಕ; ರಾಕಾಶಶಾಂಕ–ಹುಣ್ಣಿಮೆಯ ಚಂದ್ರ; ಅಪ್ಪುಕೆಯ–ಅಂಗೀಕರಿಸು, ಅಪ್ಪುಕೆಯ್ (=ಆಲಿಂಗಿಸು) ಪದ ರತಿಕ್ರೀಡೆಯನ್ನೂ ಧ್ವನಿಸುತ್ತದೆ.

೨೨೮. ಹದಿನಾರು ಸ್ವಪ್ನಗಳು: ಐರಾವತ, ಬಿಳಿಯ ಎತ್ತು, ಸಿಂಹ, ಲಕ್ಷ್ಮಿ, ಜೋಡುಹೂಮಾಲೆ, ಚಂದ್ರ, ಸೂರ್ಯ, ಜೋಡುಮೀನು, ಜೋಡುಕುಂಭ, ಸರೋವರ, ಸಮುದ್ರ, ಸಿಂಹಾಸನ, ದೇವವಿಮಾನ, ನಾಗವಿಮಾನ, ರತ್ನವೃಷ್ಟಿ, ನಿರ್ಧೂಮ ಅಗ್ನಿ–ಈ ೧೬ ಸ್ವಪ್ನಗಳನ್ನು ತೀರ್ಥಂಕರನ ತಾಯಂದಿರು ಕಾಣುತ್ತಾರೆ.

೨೨೯. ಸಾರಸ–ಸರೋವರಕ್ಕೆ ಸಂಬಂಧಿಸಿದುದು, ನೀರುಹಕ್ಕಿ; ಜಾಳ (ಜಾಳಾಂದ್ರ)–ಕಿಡಕಿ; ಎಟ್ಟಿದಿರ್–ಎಬ್ಬಿಸಬೇಡ; ಬಾರಿಸು–ನಿವಾರಿಸು, ಅಡ್ಡಿಮಾಡು; ಗೃಹಾಬ್ಜಿನೀಸ್ಮೇರಸಖಂ–ಮನೆಯ (ಆವರಣದ)ಲ್ಲಿಯ ಕಮಲಿನಿಗೆ ಮುಗುಳ್ನಗೆಯನ್ನುಂಟು ಮಾಡುವ ಸ್ನೇಹಿತ; ಪ್ರಭೋಧ–ಎಚ್ಚರಿಕೆ, ಜ್ಞಾನ.

೨೨೯ಎ. ಉಪ್ಪವಡಿಸು–ಏಳು (ಪವಡಿಸು–ಮಲಗು)

೨೩೦. ಪೊರೆ–ಪದರು; ಮೃಣಾಳೀ–ಕಮಲದ ದೇಟು; ಮಯೂಖ–ಕಿರಣ; ಮುಖ–ಬಾಯಿ; ಆತ್ಮೀಯ–ತನ್ನ (ಅವಳ).

೨೩೧. ಗುರುಭರ–ಅಧಿಕಭಾರ.

೨೩೨. ಆಸಾರ–ಮಳೆ; ಪುರಸ್ಸರಂ–ಮೊದಲು ಮಾಡಿಕೊಂಡು; ಸುರಸರಿತ್–ದೇವಗಂಗೆ; ವೀಚೀ–ತೆರೆ; ಪಟಹ–ವಾದ್ಯ; ಪ್ರಧ್ವಾನ (ಪ್ರ+ಧ್ವಾನ)–ದೊಡ್ಡ ಧ್ವನಿ.

೨೩೩. ಸಿರಿಯ ನೆಲೆ–ಲಕ್ಷ್ಮಿಯ ವಾಸಸ್ಥಾನ; ನೀರಜ–೧ ಕಮಲ, ೨ ನಿರ್ಮಲ; ತಿಳಿ–೧ ಜ್ಞಾನವನ್ನು ಪಡೆ, ೨ ತಿಳಿಯಾಗು; ಅನುನಯಂ ಬಡೆದರ್–ವಿನಯಶಾಲಿಗಳು; ಸರಸಿಜಾಕರಂ–ಸರೋವರ; ದಕ್ಷಿಣಾವರ್ತಂ–೧ ಬಲಮುರಿಗೆಯುಳ್ಳುದು, ಶಂಖ, ೨ ಮನೆಯಿಂದ ದಕ್ಷಿಣಕ್ಕೆ ಇಡುವ ಯಜ್ಞಾಗ್ನಿ; ಶಿಖಿ–ಅಗ್ನಿ; ಸುರಭಿ–೧ ಮಧುರ, ೨ ಪರಿಮಳ; ಇಂದ್ರನ ಪಯ–ಅಮೃತ; ಅಪಘನ–೧ ಅವಯವ, ೨. ಮೇಘರಹಿತ; ವಿಭೂತಿ–ಮಹಿಮೆ, ವೈಭವ, ಇಲ್ಲಿ ವಸುಧೆ, ಸರಸಿಜಾಕರ, ಶಿಖಿ, ಎಲರ್, ನಭ–ಪದಗಳ ಮೂಲಕ ಪಂಚಭೂತಗಳನ್ನು ಸೂಚಿಸಲಾಗಿದೆ.

೨೩೪. ಒಸೆದಾಡು (ಒಸೆದು+ಆಡು)–ಸಂತೋಷದಿಂದ ಕುಣಿ; ಮಣಿಭಿತ್ತಿ–ಮಣಿಖಚಿತ ಗೋಡೆ; ಮಣಿಕುಟ್ಟಿಮ–ಮಣಿಖಚಿತ ನೆಲಗಟ್ಟು; ಅವಗಾಹ–ಸ್ನಾನ; ಗಣಿಕಾ–ವೇಶ್ಯೆ. "ನೃತ್ಯರಸಪ್ರವಾಹದೊಳಗಾಹಮಿರ್ದ ಗಣಿಕಾಪ್ರಭೆಯಾ ಪ್ರತಿಬಿಂಬ ಲಕ್ಷ್ಮಿಗಳ್ ಮಣಿಭಿತ್ತಿಗಳಂ

ಮಣಿಕುಟ್ಟಿಮಂಗಳಂ ಪುದಿದು ಗೃಹದೇವತೆಯರ್ ಪ್ರಸನ್ನ ವೇಷದಿನೊಸೆದಾಡುವಂತೆ ಮನಕ್ಕೆ ವಿಸ್ಮಯಮನಿತ್ತುವು" ಎಂದು ಅನ್ವಯ.

೨೩೫. ದೆಸೆಬಿದ್ದಂ (<ದಿಶಾವಿದ್ಧಂ) – ದಿಗಂತದ ವರೆಗೆ; ಕಾಂಚೀಘಂಟಿಕಾ–ನಡಪಟ್ಟಿಯ ಗೆಜ್ಜೆ; ಆನಕಧ್ವಾನ–ವಾದ್ಯಧ್ವನಿ; ಘೂರ್ಣಿಸು–ಗರ್ಜಿಸು.

೨೩೬. ಕೊಳ್–ಉಂಟಾಗು; ಓರಂತೆ–ಒಂದೇಸವನೆ; ಪೊಣ್ಮು–ಪ್ರಕಟವಾಗು; ನಾಕವಿಭವ–ಸ್ವರ್ಗದ ವೈಭವ; ನಡುಗೆ–ನಡುಗಿಸಲು; ವಾಸವ–ಇಂದ್ರ; ತಿಳಿಪು–ಸೂಚಿಸು. ತೀರ್ಥಂಕರ ಹುಟ್ಟಿದುದರ ಸೂಚನೆಯಾಗಿ ಇಂದ್ರನಿಗೆ 'ಆಸನ ಕಂಪನ'ವಾಗುವುದೆಂದು ಜೈನಪುರಾಣಗಳ ಹೇಳಿಕೆ.

೨೩೭. ದೇವೋತ್ತಂಸಂ–ದೇವತೆಗಳಿಗೆ ಆಭರಣನಾದವ, ಇಂದ್ರ; ಕರಕಮಳಮಂ+ಉತ್ತಂಸಂ ಮಾಡಿ–ಕರಕಮಲಗಳನ್ನು ತಲೆಗೆ ಆಭರಣವಾಗಿ ಮಾಡಿ, ಜೋಡಿಸಿದ ಕೈಗಳನ್ನು ತಲೆಯ ಮೇಲಿಟ್ಟುಕೊಂಡು; ಸೂಟಿ್–ಸಲ್.

೨೩೭ವ. ಜನ್ಮಾಭಿಷವಣಕಲ್ಯಾಣ–ತೀರ್ಥಂಕರನಿಗೆ ಜರುಗುವ ಎರಡನೆಯ ಕಲ್ಯಾಣ ಮಹೋತ್ಸವ.

೨೩೮. ತೆಕ್ಕನೆ–ಒಮ್ಮೆಲೇ; ಶೇಷೋರಗ–ಆದಿಶೇಷ; ಕೈ–ಸೊಂಡಿಲು; ಕರ್ಣತಾಳ–(ಯಾವಾಗಲೂ ತಾಳಹಾಕುತ್ತಿರುವ) ಆನೆಯ ಕಿವಿ; ಕೋಟ್ಕಳ್ (ಕೋಡು+ಕಳ್)–ಕೋಡುಗಳು; ಅಭ್ರಮೂ–ಹೆಣ್ಣು ಐರಾವತ.

೨೩೯.ಓರೊಂದಱೊಳೆ–ಒಂದೊಂದರಲ್ಲಿ; ಅಲರ್ಗೊಳ–ಹೂಗೊಳ; ಪದ್ಮಿನೀಕಂದ–ಕಮಲದ ಗಡ್ಡೆ. ೩೨ ಮುಖ x ೮ ಕೋಡು x ೧ ಹೂಗೊಳ x ೧ ಕಮಲದ ಗುಡ್ಡೆ x ೩೨ ಪುಷ್ಪ x ೩೨ ಎಸಳು x ೩೨ ಅಮರಸ್ತ್ರೀಯರು = ೮೩೮೮೬೦೮ ಇಷ್ಟು ಜನ ಅಪ್ಸರೆಯರು ಆನೆಯ ಮುಖದಲ್ಲಿ ನರ್ತಿಸುತ್ತಿದ್ದರು.

೨೩೯ವ. ಅಗುರ್ವು–ಭಯಂಕರತೆ; ಮಿಗುರ್ವಿಸು–ಅಚ್ಚರಿಗೊಳಿಸು.

೨೪೦. ಆತಪತ್ರ–ಕೊಡೆ; ಪುದಿ–ದಟ್ಟವಾಗಿ ಸೇರು; ತೂರ್ಯಸ್ವನಂ–ವಾದ್ಯಧ್ವನಿ; ಏಯಿಂಬಲಂ–ದೇವತೆಗಳು, ಗಂಧರ್ವರು, ನರ್ತಕಿಯರು, ಕುದುರೆ, ಎತ್ತು, ರಥ, ಆನೆ; ಒಡವರು–ಒಡನೆ ಬರು, ಜೊತೆಗೂಡಿಬರು; ನಡೆಗೊಳ್ಳು–ಸಾಗು; ಶಚೀಜೀವಿತೇಶಂ–ಇಂದ್ರ.

೨೪೧. ಧಮ್ಮಿಲ್ಲ–ಮುಡಿ, ತುರುಬು; ಭ್ರೂಲೇಖೆ–ಹುಬ್ಬಿನ ರೇಖೆ; ಇಕ್ಷುಚಾಪ–(ಕಾಮನ) ಕಬ್ಬಿನ ಬಿಲ್ಲು; ಕೆಂದಳ–ಕೆಂಪಾದ ಅಂಗೈ; ವಕ್ಷೋಜ–ಮೊಲೆ; ದೇವಾಗಮ–ದೇವತೆಗಳ ಆಗಮನ.

೨೪೨. ತೊನೆ–ತೂಗು, ಅಲ್ಲಾಡು; ಕದಕ್ಕದಿಸು–ಅಟ್ಟಹಾಸದಿಂದ ಅಲ್ಲಾಡು; ರುಚಿ–ಕಿರಣ; ಮೇಲುದ–ಉತ್ತರೀಯ; ನೂಲ್–ನಡುವಿಗೆ ಕಟ್ಟುವ ದಾರ; ನೀಱಿ–ನಿರಿಗೆ; ಗೆಡೆವಚ್ಚುರಾಗ ಮರ್ಚಿನಮೆನೆ–(?) ಪಾಠ ಕೆಟ್ಟಿದೆ; ಅಪ್ಸರೋಗಣ–ಅಪ್ಸರೆಯರ ಸಮೂಹ.

೨೪೩. ಶೀತಾಂಶು–ಚಂದ್ರ; ತುಡುಗೆ–ತೊಡಿಗೆ; ತೋರ–ಸ್ಥೂಲ, ದೊಡ್ಡ.

೨೪೪. ಕಳ–ಮಧುರ; ಪುದಿ–ತುಂಬು; ವಿಭ್ರಮ–ಸಡಗರ; ಕಣ್ಗೊಳ್ಗು–ಕಣ್ಣನ್ನು ಸೆಳೆದುಕೊಳ್ಳು, ಮನೋಹರವಾಗಿ ಕಾಣು; ಆಮೋದ–ಸುವಾಸನೆ; ದೇವಾಂಗ–ರೇಶಿಮೆ; ಭೂಷಾಂಶು–ಭೂಷಣಗಳ ಕಿರಣ; ಶಕ್ರಚಾಪ–ಇಂದ್ರಧನುಸ್ಸು, ಕಾಮನಬಿಲ್ಲು; ಕೇರ್–ಗೋಡೆ; "ದೇವಿಯರ್..... ಬಂದರ್" ಎಂಬುದು ಅನ್ವಯ.

೨೪೪ವ. ಪವನಪಥ–ಆಕಾಶ; ಬೆಸ–ಅಪ್ಪಣೆ; ಕತಿಪಯ–ಕೆಲವು; ಪರೀತೆ–ಸುತ್ತುವರಿಯಲ್ಪಟ್ಟವಳು.

೨೪೫. ಪೆರ್ಮುಡಿಗೆ–ದೊಡ್ಡ ಅಲಂಕಾರ; ಬಾಳಾತಪ–ಬಾಲಸೂರ್ಯಪ್ರಕಾಶ.

೨೪೫ವ. ಎಱಕ–ಪ್ರೀತಿ.

೨೪೬. ಮೇಖಳೆ–ಪರ್ವತದ ಇಳಿಜಾರು ಪ್ರದೇಶ; ಉದಿತ–ಹುಟ್ಟಿದ; ಕಳಿಕಾ–ಮುಗುಳು.

೨೪೭. ಚಿಂತಿತ–ಆಲೋಚಿಸಿದ, ಇಚ್ಛಿಸಿದ; ಶುಚಿಸ್ವಾಂತೆ–ಪವಿತ್ರ ಮನಸ್ಸುಳ್ಳವಳು; ಅರ್ಭಕ–ಕೂಸು.

೨೪೭ವ. ವಿನಿಮಿತ–ವಿಶೇಷ ನಮಸ್ಕರಿಸಲ್ಪಟ್ಟ; ಉತ್ಸಂಗ–ತೊಡೆ.

೨೪೮. ಸಸ್ಮಿತಾಪಾಂಗ–ನಗೆಯುಕ್ತ ಕುಡಿನೋಟ; ಇಂದ್ರಾಚಳೇಂದ್ರಮುಖಂ–ಮಂದರ (ಮೇರು)ಪರ್ವತಕ್ಕೆ ಅಭಿಮುಖನಾದವನು; ಮೊಗವಿತ್ತ–ಮುಖನೀಡಿದ, 'ಮೊಗವೆತ್ತ' ಎಂದು ತಿದ್ದಿಕೊಂಡರೆ 'ಮುಖಪಡೆದ' ಎಂಬ ಅರ್ಥ ಹೇಳಬೇಕಾಗುತ್ತದೆ.

೨೪೯. ಗೋತ್ರನಗ–ಕುಲಪರ್ವತ; ಶತಪತ್ರವನ–ಸರೋವರ; ಸುತ್ರಾಮ–ಇಂದ್ರ.

೨೫೦. ಸುಂದರಮಂದಯಾನ–ಸುಂದರವಾದ ಮಂದಗಮನ; ಉಪಾಶ್ರಯಂ–ಆಶ್ರಯ; ವಿಕ್ರಿಯಾ–ಅಣಿಮಾ, ಗರಿಮಾ ಮೊದಲಾದ ಸಿದ್ಧಿಗಳಿಗೆ ತಕ್ಕಂತೆ ರೂಪಬದಲಿಸಿಕೊಳ್ಳುವ ಸಾಮರ್ಥ್ಯ; ಉಪಳ (<ಉಪಲ)–ಕಲ್ಲು; ಸುರಾಚಳಂಬರಂ–ಮಂದರಪರ್ವತದ ವರೆಗೆ.

೨೫೦ವ. ಎಡೆವರಿಯದೆ–ಅವಕಾಶ ಕೊಡದೆ; ಅಮರವಾಹಿನಿ–೧, ದೇವಗಂಗೆ, ೨. ದೇವತೆಗಳ ಸೈನ್ಯ.

೨೫೧. ವಿದಳತ್–ಅರಳುವ; ಶಿಖಿ–ನವಿಲು; ಅಭ್ರಕ–ಒಂದು ಬಗೆಯ ಹೊಳೆಯುವ ವಸ್ತು; ಉತ್ಪಾಟಳಪ್ರಾಂಶು–ಅರಳಿದ ಪಾಟಲಪುಷ್ಪದ ಕಿರಣ; ದಳತ್–ಅರಳುವ; ಕಿಂಶುಕಶೋಣ–ಮುತ್ತಲದ ಕೆಂಪು; ವರ್ಣಕ್ರಮಂ–ವರ್ಣಸಂಯೋಜನೆ.

೨೫೨. ಮರೀಚಿಜಾಳ–ಕಿರಣಸಮೂಹ; ಪಾದ್ಯ–ಪಾದ ತೊಳೆವ ನೀರು; ಸೇಸೆ–ಅಕ್ಷತೆ; ಶೃಂಗ–ಶಿಖರ; ಮುಕ್ತಾಜಾಳ–ಮುತ್ತುಗಳ ಸಮೂಹ; ಅರ್ಘ್ಯ–ಪೂಜಾದ್ರವ್ಯ; ಶಾಖಾಹಸ್ತ–ರೆಂಬೆಯೆಂಬ ಹಸ್ತ; ಪೂಗುಡಿ–ಹೂವಿನಕುಡಿ.

೨೫೩. ಸಾನು–ಪರ್ವತದ ಇಳಿಜಾರು ಪ್ರದೇಶ; ಕೀಱು (>ಚೀರು)–ಅರಚು; ಆಯೆಡೆಯಣ್ಮದು–ಆ ಸ್ಥಾನದಲ್ಲಿರುವುದು; ಮೇಖಳಾ–ಪರ್ವತದ ಇಳಿಜಾರು ಪ್ರದೇಶ; ಮನಃಪವನವೇಗಿ–ಮನವೆಂಬ

ಗಾಳಿಯ ವೇಗವುಳ್ಳುದು; ಇಲ್ಲಿಯ ಭದ್ರಶಾಳವನ, ನಂದನ, ಸೌಮನಸ, ಪಂಡುಕ–ಇವು ಮೇರುಪರ್ವತದಲ್ಲಿರುವ ವನಗಳು.

೨೫೩ವ. ಮಹೀಧರ–ಪರ್ವತ.

೨೫೪. ಎಳವಾಳೆ–ಎಳೆಯ ಮೀನು; ಪಾಂಡುಕಶಿಳಾ–ಪಾಂಡುಕವನದಲ್ಲಿರುವ ವಿಸ್ತಾರವಾದ ಶಿಲೆ.

೨೫೫. ಸಜೆ–ಬಂಡೆಗಲ್ಲು; ಇಂಗಡಲ–ಸಾಗರ.

೨೫೬. ಹರಿಪೀಠ–ಸಿಂಹಪೀಠ; ಬಾಳ–ಬಾಲಕ; ಬಾಳಭಾನು–ಬಾಲಸೂರ್ಯ; ಬಾಳಾತಪ–ಎಳವಿಸಿಲು; ಬಗೆ–ಚಿಮ್ಮು.

೨೫೬ವ. ಧೂಮಲತೆ–ಬಳ್ಳಿಯಂತೆ ಹಬ್ಬಿದ ಹೊಗೆ; ಆನಕರವ–ವಾದ್ಯಧ್ವನಿ.

೨೫೭. ಎಱೆ–ಸುರಿ, ಹೊಯ್ಯು; ದುಗ್ಧವಾರಿ–ಹಾಲು; ಪ್ರಣವ–ಮಂತ್ರ.

೨೫೭ವ. ಯೋಜನ–ಭೂಮಿಯ ಅಳತೆಯ ಒಂದು ಪ್ರಮಾಣ; ಆಯಾಮ–ಉದ್ದ; ಅಷ್ಟಾಪದ–ಬಂಗಾರ.

೨೫೮. ಓಳಿ–ಸಾಲು; ನಿಮಿರ್–ಸಿದ್ಧವಾಗು; ಕೇರ್–ಗೋಡೆ.

೨೫೯. ಬರ್ಕೆವಲಸು–ಬಕ್ಕೆ ಹಲಸು, ಒಂದು ಜಾತಿಯ ಹಲಸು; ಕಾಯ್ತಂತೆ–ಕಾಯಿಬಿಟ್ಟಂತೆ.

೨೬೦. ತ್ರಿದಶರ್–ದೇವತೆಗಳು; ಶಾತಕುಂಭ–ಬಂಗಾರ; ವೈಕುರ್ವಣ–ವಿಕ್ರಿಯೆಯಿಂದ ಕೂಡಿದ, ನೋಡಿರಿ ೨೫೦; ಘಟೀಯಂತ್ರ–ಏತ.

೨೫೧. ಜನ್ಮಸವನ–ಜನ್ಮಾಭಿಷೇಕ; ಪೂರ–ಮಹಾಪೂರ; ಊಡು–ಉಣ್ಣು, ಕುಡಿ; ಅರ್ದು–ಅದ್ದು, ಮುಳುಗು; ಆಳಂದಿರಿ–ಅಧಿಕವಾಗಿ ಅಲೆದಾಡು; ತೇನ–ಪುನಃ, ಉತ್ಫೇನ–ಮೇಲೆದ್ದ ನೊರೆ.

೨೬೨. ಕರಿ–ಐರಾವತ; ವಾಜಿ–ಉಚ್ಚೈಶ್ರವ; ಆವಾಸ–ಮನೆ; ದಿವಿಜೇಂದ್ರಾಳ–ಮೇರುಪರ್ವತ; ಜಿನಾಭಿಷಣ ವ್ಯಾಪಾರ–ಜಿನಾಭಿಷೇಕ ಕಾರ್ಯಕಲಾಪ.

೨೬೩. ಅಂಚಿರ–(?); ಕಂಚುಕ–ಅಂಗಿ.

೨೬೪. ಮದನಪತತ್ರಿ–ಕಾಮಬಾಣ; ಅಣ್ಮು–ಅಂಟು, ಮುಟ್ಟು; ಕಲುಷಾನಳಂ–ಕಲುಷವೆಂಬ ಬೆಂಕಿ; ಮಸಿ–ಇದ್ದಿಲು; ಸಂಬಳ (<ಶಂಬಲ)–ದಾರಿಬುತ್ತಿ; ಪೆಣ್ಣಮೋಹದ ಪರಮಾತ್ಮ–(ಹೆಣ್ಣನ್ನು ಅರ್ಧಶರೀರ ಮಾಡಿಕೊಂಡ) ಶಿವ; ಮಣ್ಣು ಮೋಹದ ಪರಮಾತ್ಮ (ವಾಮನಾವತಾರದಲ್ಲಿ ಭೂಮಿ ಬೇಡಿದ) ವಿಷ್ಣು.

೨೬೪ವ. ಮುನಿಗಳ ೨೮ ಮೂಲಗುಣಗಳಲ್ಲಿ ಆವಶ್ಯಕಗಳು ೬. ಈ ಆವಶ್ಯಕಗಳಲ್ಲಿ ತೀರ್ಥಂಕರಸ್ತವನವೆಂಬುದೂ ಒಂದು. ಈ ಸ್ತವನ ೩ ಬಗೆಯಾಗಿದೆ. ವಸ್ತುಸ್ತವನ, ರೂಪಸ್ತವನ, ಗುಣಸ್ತವನ.

೨೬೫. ದಿನಮಣಿ–ಸೂರ್ಯ; ಮಂಗಳಾರ್ಥಂ–ಕಲ್ಯಾಣದ ಸಲುವಾಗಿ; ಸಹಜ ಸುರಭಿ–ಸ್ವಾಭಾವಿಕ ಸುಗಂಧವುಳ್ಳ.

೨೬೬. ಅವತಂಸ–ಆಭರಣ; ಉತ್ತಂಸ–ತಲೆಯಾಭರಣ; ಕಟಕ–ಕಡಗ; ಮುದ್ರಾ–ಉಂಗುರ; ಕ್ಷುದ್ರ–ಸಣ್ಣ; ಚರಣವಳಯ–ಕಾಲಕಡಗ, ಸುತ್ರಾಮವಧೂಟೀ–ಇಂದ್ರನ ಹೆಂಡತಿ, ಶಚಿ; ಸೂತ್ರಿತ–ಬಂಧಿತ, ತೊಡಿಸಿದ: ಅಗೆ–ಸಸಿ.

೨೬೬ವ. ಕಯ್ಗೆಯ್–ಅಲಂಕರಿಸು; ಕಿಸಲಯ–ಚಿಗುರು.

೨೬೭. ಚರಮತನು– (ಮೋಕ್ಷವನ್ನು ಸಾಧಿಸುವ) ಕೊನೆಯ ದೇಹ; ಬಾಳವಂದ–ಬಾಲಕಾಭರಣ(?); ತುಡಿಸು–ತೊಡಿಸು; ಎಯ್ದೆ–ಚೆನ್ನಾಗಿ.

೨೬೭ವ. ಕರ್ಣಿಕಾರಕುಸುಮ–ಬೆಟ್ಟದಾವರೆ ಹೂ.

೨೬೮. ಉದ್ಭೇದ–ಮೊಳೆಯುವಿಕೆ; ಸಂಕಿಲ್–ಉಡೆ; ಘೂರ್ಣಿಸು–ಗರ್ಜಿಸು.

೨೬೯. ಕಳನಿನದ–ಮಂಜುಳಧ್ವನಿ; ಬಿನ್ನ–ನೀರವ, ಮೌನ; ಅಗೇಂದ್ರ–ಪರ್ವತ ಶ್ರೇಷ್ಠ, ಮಂದರ ಪರ್ವತ.

೨೭೦. ಪಱೆ–ಹಲಗೆ, ವಾದ್ಯ; ಗೆಲೆವರು–ಮೀರು; ಬಾಜಿಸು–ಬಾರಿಸು; ಘಂಟಾಕೃತಿ–ಗಂಟೆ.

೨೭೧. ಭೂಷಾರುಚಿ–ಭೂಷಣಗಳ ಕಾಂತಿ; ಕವಿಲ್ (<ಕಪಿಲ) ಮಸಗು–ಕೆಂಗಂದು ಬಣ್ಣ ಆವರಿಸು; ಕೋೞ್ಗಿಸರ್ಮಸಗು–ತಂಪಾದ ಕೆಸರು ಆವರಿಸು; ದಾನ ಜಳ–ಮದೋದಕ; ವಜ್ರಾಂಶು–ಇಂದ್ರನ ವಜ್ರಾಯುಧದ ಕಿರಣ; ಪ್ಲವ–ಪ್ರವಾಹ; ಕಾೞ್ಪುರಂ–ಕಾಡಿನ ನದಿ; ಶತಮುಖಂ–ಇಂದ್ರ.

೨೭೨. ಭಾವನುಭಾವವಿಭಾವಂಗಳ್ ರಸಮನುದ್ಭಾವಿಸೆ–ಭಾವ ಅನುಭಾವ ವಿಭಾವಗಳು ರಸವನ್ನು ಹುಟ್ಟಿಸಲಾಗಿ; "ವಿಭಾವಾನುಭಾವವ್ಯಭಿಚಾರೀ ಸಂಯೋಗಾತ್ ರಸನಿಷ್ಪತ್ತಿಃ" ಎಂಬುದು ಭರತ ಹೇಳುವ ರಸಸೂತ್ರ, ಇಲ್ಲಿಯ 'ವ್ಯಭಿಚಾರಿ' (=ಸಂಚಾರಿ)ಗೆ ಬದಲು ನಾಗಚಂದ್ರ 'ಭಾವ'ವನ್ನು ಬಳಸಿದ್ದಾನೆ. ನಿಂದ ನಿಱಿಸು–ನಿಂತ ಭಂಗಿ.

೨೭೩. ಪೊನಲ್–ಪ್ರವಾಹ; ಅಂಗಹಾರ–ನೃತ್ಯ ವಿಶೇಷ; ಚಾರಿ–ನರ್ತನದಲ್ಲಿಯ ಪಾದವಿನ್ಯಾಸದ ವಿಧಾನ; ತನತು–ತನ್ನದು.

೨೭೩ವ. ಸಮದ ಮದನಮಲ್ಲ–ಮದೋನ್ಮತ್ತ ಕಾಮನಿಗೆ ಮಲ್ಲನಾದ.

೨೭೪. ಶಶಿಲೇಖೆ–ಕೋರೆಚಂದ್ರ; ಕಳಾಪರಿಪೂರ್ಣಂ–೧. ಅರುವತ್ತುನಾಲ್ಕು ಕಲೆಗಳಿಂದ ಪರಿಪೂರ್ಣನಾದ ಮಲ್ಲಿನಾಥ ೨. ಹದಿನಾರು ಕಲೆಗಳಿಂದ ಪರಿಪೂರ್ಣನಾದ ಚಂದ್ರ.

೨೭೪ವ. ಉಪಚಯ–ಬೆಳವಣಿಗೆ; ಮನದೆಗೊಳ್–ಮನಸ್ಸಿಗೆ ತಂದುಕೊಳ್ಳು.

೨೭೫. ಒಡವುಟ್ಟು–ಜೊತೆಯಾಗಿ ಹುಟ್ಟು; ಹೂಳಿಟ್ಟ ದ್ರವ್ಯವನ್ನು ಶೋಧಿಸಲು ಮಾಂತ್ರಿಕರು ತೈಲದೀಪವನ್ನು ಬಳಸುವುದು ರೂಢಿ.

೨೭೬. ಅಂಬುಜಸೂತ್ರ–ಕಮಲದ ಎಳೆ; ತೊಡರ್ಪು–ತೊಡಕು; ತೊಡರ್ಚು–ಬಂಧಿಸು.

೨೭೭. ಪಳಿಕಿನಜಿ–ಸ್ಫಟಿಕದ ಕಲ್ಲು; ಅನಯಂ–ಯೋಗ್ಯವಲ್ಲ.

೨೭೮. ಪರಿಣಯನ–ಮದುವೆ; ಅನುಷ್ಠಿಸು–ಆಚರಿಸು.

೨೭೮ಅ. ಗೃಹಮತ್ತರ–ಮನೆವೆರ್ಗಡೆ, ಮನೆತನದ ಆಡಳಿತಗಾರ; ಕೆಯ್ಗೆಯ್–ಅಲಂಕರಿಸು.

೨೭೯. ಪ್ರಸ್ತರ–ಹಾಸುಬಂಡೆ; ಅಂಚಿತ–ಹೊಳೆಯುವ; ಲಂಭೂಷ–ಏಳು ಎಳೆಯ ಹಾರ; ಭ್ರಾಜಿತ–ಹೊಳೆಯುವ; ಆಲೋಕ–ಬೆಳಕು; ರುಚಿಚ್ಛನ್ನ–ಕಿರಣಗಳಿಂದ ಆವರಿಸಲ್ಪಟ್ಟ; ಪತಾಕಾಪಟೀ–ಧ್ವಜಪಟ; ಪೇಱು–ಹೇರು, ಧರಿಸು; ಗೊತ್ತು–ಆಶ್ರಯ, ನೆಲೆ.

೨೮೦. ಚತುರ್ಗತಿ–ದೇವ, ಮಾನವ, ನಾರಕ, ತಿರ್ಯಕ್‌ಯೆಂಬ ಭವಚಕ್ರಗತಿ; ತಿರಿತಂದು–ತಿರುತಿರುಗಿ ಬಂದು; ನೆಱೆದ–ಪೂರ್ಣನಾದ; ಮೋದು–ಹೊಡೆ; ಸೇಸೆಗೊಳ್–ಅಕ್ಷತೆಧರಿಸು; ನೆರೆ–ಕೂಡು; ಏವೆನು–ಏನು ಮಾಡುವೆನು?; ಮತ್ತಿನ–ಮಿಕ್ಕ.

೨೮೧. ಮೃಡಸುತನಂತೆ ದಂತಹತಿ ಪೊರ್ದದೆ–೧, ಗಣಪತಿಯಂತೆ ಹಲ್ಲು ಭಗ್ನಗೊಳಿಸಿಕೊಳ್ಳದೆ (ಏಕದಂತ)೨, ಮುಪ್ಪು ಆವರಿಸಿ ಹಲ್ಲು ಕಳೆದುಕೊಳ್ಳದೆ; ಶೂದ್ರಕನಂತೆ ಶಕ್ತಿಯ ಕೆಡಿಸದೆ–೧. ಶೂದ್ರಕ ಮಹಾರಾಜನಂತೆ ಶಕ್ತಿಯನ್ನೆಲ್ಲ ವ್ಯರ್ಥ ಸಾಹಸಗಳಲ್ಲಿ ವ್ಯಯಗೊಳಿಸದೆ ೨. ಮುಪ್ಪಿಗೆ ಗುರಿಯಾಗಿ ಶಕ್ತಿ ಹಾಳುಮಾಡಿಕೊಳ್ಳದೆ; ವಾರ್ಧಿಯಂತೆ ತೆರೆಯೇಱದೆ–೧, ಸಮುದ್ರದಂತೆ ತೆರೆಗಳನ್ನು ತಾಳದೆ ೨. ಮುಪ್ಪಾವಸ್ಥೆಯಿಂದ ಚರ್ಮ ತೆರೆತೆರೆಗೊಳಿಸಿಕೊಳ್ಳದೆ; ಕೋಡಗದಂತೆ ಶಾಖೆಯೊಳ್ ನಡೆಯದೆ–೧ ಕೋಡಗದ ಹಾಗೆ ರೆಂಬೆರೆಂಬೆಗಳಲ್ಲಿ ಚರಿಸದೆ ೨. ಅಡ್ಡದಾರಿಗಳಲ್ಲಿ ವ್ಯವಹರಿಸದೆ; ಪೋದೆವೋದ ಮರದಂತೆ ಕರಂ ನರೆಯೇಱದೆ–೧ ಹಳೆಯದಾದ (?) ಮರದಂತೆ ಬೆಳ್ಳಗಾಗದೆ ೨. ಕೂದಲು ನರೆಯದೆ; ಮೋಹಮಲ್ಲ–ಮೋಹವೆಂಬ ಪರಾಕ್ರಮಿ.

೨೮೨. ಜವ–ಯಮ; ಅಳ್ಕಮೆ–ಅಜೀರ್ಣ; ಪರಿದು–ನಡೆದು; ಕಾಲ–ಕಾಲಪುರುಷ; ಜವಂಗೆಡು–ಗತಿಗುಂದು; ಜವಜವಕ್ಕೆ–ಯಮನ ವೇಗಕ್ಕೆ; ತವದೆ–ನಾಶವಾಗದೆ?; ಕುತ್ತದ ಬಿತ್ತು–ರೋಗದ ಬೀಜ; ಕೇಡಾಯ್ತೆ–ಕೊನೆಯಾಯಿತೇ?; ಏನೆಂದು–ಯಾತಕ್ಕಾಗಿ; ಐಹಿಕ–ಇಹದ, ಸಂಸಾರದ.

೨೮೨ಅ. ಅಪವರ್ಗ–ಮೋಕ್ಷ.

೨೮೩. ಪಂಚಪಜಿ–ಹರಿಹಂಚು; ಪಂಚತ್ವ–ಸಾವು ಆವ ಗತಿಯೊಳಂ–ಚತುರ್ಗತಿಗಳಿಗೆ ಸಂಬಂಧಿಸಿದ ಯಾವುದೇ ಒಂದು ಗತಿಯಲ್ಲಿಯೂ; ಪಂಚಶರವೈರಿ–ಕಾಮವೈರಿ, ಮಲ್ಲಿನಾಥ; ಪಂಚಮಗತಿ–ಚತುರ್ಗತಿ (ಸಂಸಾರ)ಗಳಿಗೆ ಹೊರತಾದ ಗತಿ, ಮೋಕ್ಷ.

೨೮೩ಅ. ಜ್ಯಾಯ–ಹಿರಿಯ; ಲೋಕಾಂತಿಕದೇವರ್–ಊರ್ಧ್ವಲೋಕದಲ್ಲಿರುವ ೫ನೆಯ ಬ್ರಹ್ಮಕಲ್ಪದ ಕೊನೆಯಲ್ಲಿರುವವರು; ಸಾರಸ್ವತ, ಆದಿತ್ಯ ಮೊದಲಾದ ಇವರು ಎಂಟು ಜನ.

೨೮೪. ನಾನಲ ಬಾನಲ–ಗಲಗಿನಿಂದ ಮುಸುಳಿಸಿದ (ನಾನಲ್–ಗಲಗು).

೨೮೫. ಪರಿವೃತ್ತಿ–ಸುತ್ತುವರಿಯುವಿಕೆ.

೨೮೫ವ. ಚತುರ್ನಿಕಾಯಾಮರರು–ಭವನಪತಿ, ವ್ಯಂತರಿಕ, ಜ್ಯೋತಿಷ್ಯ, ವೈಮಾನಿಕ ಎಂದು ದೇವತೆಗಳಲ್ಲಿ ನಾಲ್ಕು ವಿಧ. ಇವರು ಚತುರ್ನಿಕಾಯಾಮರರು.

೨೮೬. ಜನ್ಮಾಭಿಷವ–ಜನ್ಮಾಭೀಷೇಕ; ದುಗ್ಧಾರ್ಣವ–ಕ್ಷೀರಸಾಗರ; ಘಟಸಂಘಾತ–ಕೊಡಗಳ ಸಮೂಹ; ಪಳಂಚಲೆ–ತಾಗು.

೨೮೬ವ. ಪರಿನಿಷ್ಕ್ರಮಣಕಲ್ಯಾಣ–ಜಿನನಿಗೆ ಸಲ್ಲುವ ಪಂಚಕಲ್ಯಾಣಗಳಲ್ಲಿ ಇದು ಮೂರನೆಯದು.

೨೮೭. ಬಾಜಿಸು–ಬಾರಿಸು; ಮಂಗಳಾನಕ–ಮಂಗಳವಾದ್ಯ; ದತ್ತಹಸ್ತ–(ಆಧಾರವಾಗಿ) ಕೊಟ್ಟ ಕೈ; ಶೋಣ–ಕೆಂಪು; ಪಾಣಿಕಮಲ–ಕರಕಮಲ; ಮರುದ್ವೀಜನಂ–ಮರುತ್‌ದೇವತೆ ಹಿಡಿದ ಬೀಸಣಿಕೆ(?); ಆಜಿರ–ಅಂಗಳ; ಸಿವಿಗೆ (<ಶಿಬಿಕಾ)–ಪಲ್ಲಕ್ಕಿ.

೨೮೭ವ. ಅಯ್ಕಿಲ್–ಹಿಮ, ತಂಪು.

೨೮೮. ಶ್ವೇತವನ–ಮಲ್ಲಿಜಿನನು ಪರಿನಿಷ್ಕ್ರಮಣ ಹೊಂದಿದ ಒಂದು ವನ; ಅಂಶುಭಾಸ್ವತ್–ಕಿರಣಗಳಿಂದ ಹೊಳೆಯುವ; ಜಯಂತಶಿಬಿಕಾಸ್ಕಂಧರ್–ಹೆಗಲ ಮೇಲೆ ಜಯಂತ ಹೆಸರಿನ ಪಲ್ಲಕ್ಕಿ ಹೊತ್ತವರು; ಆನಕ–ವಾದ್ಯ.

೨೮೯. ಜಯಶಾಲಿ–ಜಯಶಾಲಿಯಾದ, ನಮಃ ಸಿದ್ಧೇಭ್ಯಃ–ಸಿದ್ಧರಿಗೆ ನಮಸ್ಕಾರ; ಓಳಿ–ಸಮೂಹ; ಅಳಿನೀಗುಣ–ದುಂಬಿಗಳಿಂದ ಮಾಡಿದ ಬಿಲ್ಲಹೆದೆ. "ಜಯಶಾಲಿ.... ಜಿನಕಮಾರಂ" ಎಂದು ಅನ್ವಯ.

೨೯೦. ಅನಘಂ–ಪಾಪರಹಿತವಾದುದು.

೨೯೦ವ. ಷಷ್ಠೋಪವಾಸ ನಿಯಮ–ಆರು ದಿನಗಳ ಉಪವಾಸವ್ರತ.

೨೯೧. ಕರೆಗಣ್ಮು (ಕರೆಯಂ+ಕಟ್ಟು)–ದಡವನ್ನು ತೊಳೆ, ತುಂಬಿಸೂಸು; ಬೆಂಡುನೆಗೆದ–ಬೆಂಡಾದ, ಬತ್ತಿದ (?); ಅರೆಮುಗುಳ್ದ–ಅರ್ಧಮುಚ್ಚಿದ.

೨೯೨. ಮೀನಕ್ಷೋಭವಿಹೀನ–ಮೀನಗಳಿಂದ ಕ್ಷೋಭೆಗೊಳ್ಳದ; ಮಾನಸ–ಮಾನಸ ಸರೋವರ; ಅಚ್ಛಾನನಂ–ಸ್ವಚ್ಛವಾದ ಮುಖ; ಶರಚ್ಚಂದ್ರಾಂಶು–ಶರತ್ಕಾಲದ ಚಂದ್ರಕಿರಣ; ಸೌಷ್ಠವ–ಮನೋಹರತೆ; ಮನಃಪರ್ಯಯಜ್ಞಾನಂ–ಮತಿಜ್ಞಾನ, ಶ್ರುತಜ್ಞಾನ, ಅವಧಿಜ್ಞಾನ, ಮನಃಪರ್ಯಯಜ್ಞಾನ, ಕೇವಲಜ್ಞಾನ ಎಂದು ಸಮ್ಯಕ್‌ಜ್ಞಾನ ಐದು ಬಗೆಯಾಗಿದೆ. ಇವುಗಳಲ್ಲಿ ಮನಃಪರ್ಯಯವೆಂಬುದು ಅನ್ಯರ ಮನಸ್ಸಿನಲ್ಲಿರುವುದನ್ನು ತಿಳಿದುಕೊಳ್ಳುವ ಜ್ಞಾನ; ನಿರ್ವಾತಪ್ರದೀಪೋಜ್ವಳಂ–ಗಾಳಿಯಿಲ್ಲದ ದೀಪದಂತೆ ಬೆಳಗುವ.

೨೯೨ವ. ಚತುರ್ಥಜ್ಞಾನ–ಸಮ್ಯಕ್‌ಜ್ಞಾನಗಳಲ್ಲಿ ನಾಲ್ಕನೆಯದಾದ ಮನಃಪರ್ಯಯ ಜ್ಞಾನ, ಪಾರಣೆ–ಉಪವಾಸ ಮುಗಿಸಿ ಸ್ವೀಕರಿಸುವ ಆಹಾರ; ಚರ್ಯೆ– (ಮುನಿಯ) ಭಿಕ್ಷಾಟನೆ; ದ್ವಾರದೇಶ–ಬಾಗಿಲು ಪ್ರದೇಶ; ಪುಟ–ಬೊಗಸೆ; ಪಂಚಾಶ್ಚರ್ಯ–ಐದು ಆಶ್ಚರ್ಯಗಳು; ದೇವದುಂದುಭಿ ಮೊಳಗುವುದು, ಹೂಮಳೆ ಕರೆಯುವುದು, ಚಿನ್ನದ ಮಳೆ ಕರೆಯುವುದು, ದೇವತೆಗಳು ಪ್ರಶಂಸೆ ಮಾಡುವುದು, ತಂಗಾಳಿ ಬೀಸುವುದು, ಪಾತ್ರದಾನ ಪ್ರಸಂಗದಲ್ಲಿ ದೇವತೆಗಳಿಂದ ಜರುಗುವ ಆಶ್ಚರ್ಯಗಳಿವು.

೨೯೩. ಪಿಕ–ಕೋಗಿಲೆ; ಇಲ್ಲಿ ಇರಬೇಕಾದ ಯೋಗ್ಯಪಾಠ 'ಶುಕ'; ಉಗು–ಸುರಿ; ರಥಾಂಗ–ಚಕ್ರವಾಕ ಪಕ್ಷಿ; ರತ–ಮಿಲನ, ಸಂಭೋಗ; ಎಳಸು–(ಸಹವಾಸವನ್ನು) ಬಯಸು; ತ್ರಸ–ವಿಶೇಷ ತೊಂದರೆ; ಬಂಚಿಸಿ–ವಂಚಿಸಿ, ಅಲ್ಲಗಳೆದು.

೨೯೪. ಸ್ಮರಚಾರಂ–ಕಾಮದೂತ; ಸ್ವೈರಚಾರಂ–ಮನಬಲ್ಲಂತೆ ನಡೆಯುವವ; ಶಿಶಿರಮರುತ–ತಂಗಾಳಿ; ಅಂಭೋಜಿನೀ–ಸರೋವರ; ರಾಜಿ–ಸಮೂಹ; ಆರಯ್–ನಿರೀಕ್ಷಿಸು; ಸ್ತರಣ–ಹಾಸುವಿಕೆ; ನಿಷ್ಪನ್ನ–ಸ್ಥಿರ; ಉಱದೆ–ಲಕ್ಷ್ಯಕ್ಕೆ ತಾರದೆ.

೨೯೪ವ. ಎಱೆವಟ್ಟು–ಆಶ್ರಯ, ಮನೆ; ವಿಜಗೀಷುವೃತ್ತಿ–ಶೌರ್ಯ; ಮೆಯ್ಯಱಿಯದೆ–ಎಚ್ಚರವಿಲ್ಲದೆ; ಎಯ್ದೆವರು–ಸಮೀಪಬರು.

೨೯೫. ಆಟಂದ–ಮೇಲೆಬಿದ್ದ, ಆಕ್ರಮಿಸಿದ; ಅಗುರ್ವು–ಭಯ; ಅಂಚಿತ–ಹೊಳೆಯುವ; ಮೌರ್ವೀಲತಾ–ಬಿಲ್ಲಹೆದೆಯೆಂಬ ಬಳ್ಳಿ. ಕಜ್ಜ–ಕಾರ್ಯ; ಪಣ್ಣು–ಹಮ್ಮಿಕೊಳ್ಳು.

೨೯೫ವ. ನನೆಗಣೆ–ಮೊಗ್ಗೆಗಳ ಬಾಣ; ದೊಣೆ–ಬತ್ತಳಿಕೆ; ಕಂಕೆಲ್ಲೀ–ಅಶೋಕವೃಕ್ಷ; ಕಯ್ವೊಡೆ–ಬಾಣದ ಹಿಂಭಾಗ, ಕೈಗಟ್ಟು–(?); ಅಂಗುಳಿತ್ರಾಣ–ಬಿಲ್ಲುಗಾರರು ಬೆರಳಿಗೆ ಧರಿಸುವ ಕವಚ; ಮೃಣಾಳಿಕೆ–ಕಮಲದ ದೇಟು; ಮಧುಬಿಂದು–ಮಕರಂದ; ನೆರಂ–ನೆರವು, ಸಹಾಯ; ಅಸರಪಸರಂ ಬಡಿಯದೆ–ಸಹಿಸಲಾರದೆ(?).

೨೯೬. ಕಯ್ದು–ಆಯುಧ, ಬಾಣ; ಇಸು–ಬಾಣ ಪ್ರಯೋಗಮಾಡು, ಹೊಡೆ; ಮನೋಭವ–ಕಾಮ; ದಕ್ಷಿಣವಾಮಪಾಣಿ–ಬಲ ಮತ್ತು ಎಡ ಹಸ್ತ; ಲಲಾಂತ–ಹೂ; ಇಕ್ಷುಚಾಪ–ಕಬ್ಬಿನ ಬಿಲ್ಲು.

೨೯೭. ಬೋಧಾಳೋಕ–ಜ್ಞಾನದೃಷ್ಟಿ; ಸೌಧಾಂಬುವಾಹ–ಅಮೃತಮೇಘ; ದಯಾವರ್ಷಣ–ದಯಾವೃಷ್ಟಿ; ಉಣ್ಮು–ಪ್ರಕಟವಾಗು; ಆಸಾರ–ಮಳೆ. ಹಿಂದೂಗಳ ಪ್ರಕಾರ ಕಾಮನು ಶಿವನ ಉರಿಗಣ್ಣಿನಿಂದ ಸುಟ್ಟುಹೋಗುತ್ತಾನೆ. ಆದರೆ ತನ್ನ ಕೋಪಾಗ್ನಿಯಿಂದಲೇ ಸುಟ್ಟುಹೋದನೆಂದು ಈ ಘಟನೆಗೆ ಹೊಸ ತಿರುವು ಕೊಟ್ಟಿದ್ದಾನೆ, ಅಹಿಂಸಾವಾದಿ ನಾಗಚಂದ್ರ, ಶಿವನ ಕಾಮದಹನಲೀಲೆಗೆ ಈ ಸ್ವರೂಪ ಕೊಟ್ಟವರಲ್ಲಿ ನಾಗಚಂದ್ರನೇ ಪ್ರಥಮ. ಮುಂದೆ ಈ ಘಟನೆ 'ಕಬ್ಬಿಗರ ಕಾವ'ಕ್ಕೆ ವಸ್ತುವಾಯಿತು.

೨೯೮. ಅನಳಜ್ವಾಳೆ–ಅಗ್ನಿಜ್ವಾಲೆ; ಪುಲಿವರೆ–(?), ಇಲ್ಲಿಯ ಪಾಠ 'ಪುರಿವಡೆ' (–ಹರಿದುಹೋಗು) ಇರಬಹುದು; ಮೋದು–ಹೊಡೆ; ಈಡಾಡು–ಚೆಲ್ಲು; ಕೊಳ್ಳುದಿಗೊಳ್–ಕೂಳಿನಂತೆ ಕುದಿ; ಮಸಗು–ಉಂಟಾಗು, ಆವರಿಸು.

೨೯೯. ಆಲಸಯಾನ–ಮಂದಗಮನ; ಸಾಯಕ–ಬಾಣ.

೩೦೦. ಕೂರ್ಗಣೆ–ಹರಿತವಾದ ಬಾಣ; ಓಸರಿಸು–(ಒಂದುಕಡೆ) ಸರಿಸು; ಸರಸಿಜಸೂತ್ರ–ಕಮಲದ ತಂತು; ಪರಿ–ಚಲಿಸು; ಮಕರಧ್ವಜ–ಮಕರಲಾಂಛನವುಳ್ಳ ಕಾಮನ ಧ್ವಜ; ಗುಣ–ಬಿಲ್ಲಿನ ಹೆದೆ; ಗತಜೀವಿತ–ಮೃತ.

೩೦೦ವ. ಶಂಕುಪಾತ–ಭರ್ಚಿಯ ಎರಗುವಿಕೆ.

೩೦೧. ನೆಗೆದ–ಎದ್ದ; ದಳ್ಳುರಿ–ಪ್ರಜ್ವಲಿಸುವ ಉರಿ; ಮೋಹಿಸು–ಮೂರ್ಚೆ ಹೊಂದು; ಗಳ–ಕುತ್ತಿಗೆ; ಕಂದಳ–ಗದ್ದ; ತವು–ಕ್ಷೀಣವಾಗು; ಓಪ–ಗಂಡ; ಸಯ್ಪು–ಪುಣ್ಯ. ಇಲ್ಲಿ ಕಾಮ ಸತ್ತುದು ತನ್ನ ಕೋಪಾಗ್ನಿಯಿಂದ, ರತಿ ಸತ್ತುದು ತನ್ನ ಶೋಕಾಗ್ನಿಯಿಂದ.

೩೦೨. ಕರ್ಮಮೆಂಟು–ಎಂಟು ಕರ್ಮಗಳು; ಜ್ಞಾನಾವರಣೀಯ, ದರ್ಶನಾವರಣೀಯ, ಅಂತರಾಯ, ಮೋಹನೀಯ–ಈ ನಾಲ್ಕು ಘಾತಿಕರ್ಮಗಳು; ಆಯುಃಕರ್ಮ, ನಾಮಕರ್ಮ, ಗೋತ್ರಕರ್ಮ, ವೇದನೀಯಕರ್ಮ–ಈ ನಾಲ್ಕು ಅಘಾತಿಕರ್ಮಗಳು; ನೆರೆಯೆ–ಚೆನ್ನಾಗಿ.

೩೦೩. ನಾಸಾಗ್ರ–ಮೂಗಿನ ತುದಿ; ಕೀಲಿಸು–ಹೊಂದಿಸು; ಮರಲ್–ಅರಳು; ಅಂಕ–ತೊಡೆ; ಭ್ರೂಯುಗಳ–ಎರಡು ಹುಬ್ಬು; ಪೊರ್ದು–ಹೊಂದು; ಬಾಹ್ಯೇಂದ್ರಿಯ–ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮಗಳೆಂಬ ಪಂಚೇಂದ್ರಿಯಗಳು; ಅವ್ಯಗ್ರ–ನಿರಾಸಕ್ತ; ಪ್ರತಿಷ್ಠಾಪರ–ಹಿರಿಮೆ (=ಗೌರವ)ವುಳ್ಳವ; ಏಕಾಂತದೇಶಂ–ಏಕಾಂತಸ್ಥಳದಲ್ಲಿರುವ.

೩೦೩ವ. ಘಾತಿ–ನಾಲ್ಕು ಘಾತಿಕರ್ಮಗಳು. ನೋಡಿರಿ ೩೦೨.

೩೦೪. ವಸ್ತುಪರೀಕ್ಷಾವಿದವಿಶ್ರುತಂ–ವಸ್ತುಪರೀಕ್ಷಾಜ್ಞಾನಗಳಲ್ಲಿ ಶ್ರೇಷ್ಠವಾದುದು; ಉದ್ಯೋತ–ಪ್ರಕಾಶ; ಮಲ್ಲಿನಾಥಪಯಸ್ಸಾಗರಸಂಭವ–ಮಲ್ಲಿನಾಥನೆಂಬ ಕ್ಷೀರಸಮುದ್ರದಲ್ಲಿ ಹುಟ್ಟಿದ; ದಿವ್ಯಜ್ಞಾನ–ಕೇವಲಜ್ಞಾನ.

೩೦೫. ಅವಿನಶ್ವರ–ಶಾಶ್ವತ; ಉನ್ಮೀಲನ–ಅರಳುವಿಕೆ; ಕೈವಲ್ಯಜ್ಞಾನ–ಕೇವಲ ಜ್ಞಾನ; ಘಾತಿಕರ್ಮಗಳ ನಾಶದಿಂದ ಹುಟ್ಟುವ ಇದು ಸಮ್ಯಕ್‌ಜ್ಞಾನದ ಐದು ಬಗೆಗಳಲ್ಲಿ ಕೊನೆಯದು. ಪೂರ್ವಾಹ್ನ–ಮಧ್ಯಾಹ್ನದ ಮೊದಲು; ಸಿತ–ಶುಕ್ಲಪಕ್ಷ.

೩೦೫ವ. ಸಮವಸರಣಮಂಡಪ–ಧರ್ಮ ಬೋಧನ ಪ್ರಸಂಗದಲ್ಲಿ ತೀರ್ಥಂಕರನು ಕುಳಿತುಕೊಳ್ಳುವ ದಿವ್ಯಮಂಟಪ.

೩೦೬. ಘಾತಿಕ್ಷಯ–ಘಾತಿಕರ್ಮಗಳ ನಾಶ; ಧನದ–ಕುಬೇರ; ಸಭಾಸದನ–ಸಮವಸರಣಮಂಟಪ; ಲೋಕತ್ರಯೀನೇತ್ರಮಂಡನ–ಮೂರೂ ಲೋಕದ ಕಣ್ಣಿಗೆ ಆಭರಣವಾದ; ಧರ್ಮವಿನಿರ್ಮಿತಾಭ್ಯುದಯಲಕ್ಷ್ಮೀಲಾಸ್ಯಂ–ಧರ್ಮವೇ ಸೃಷ್ಟಿಸಿದ ಶ್ರೇಯೋಲಕ್ಷ್ಮಿಯ ನರ್ತನ.

೩೦೭. ಪೊರೆಯೆತ್ತಿದ–ಮೇಲಿನ ಪದರು ಕಳಚಿದ; ಕುಡುಮಿಂಚು–ಡೊಂಕಾದ ಮಿಂಚು; ಬಂಬಲ್ದೆರೆಮಸೆಗೆ–ರಾಶಿರಾಶಿಯಾಗಿ ತೆರೆಯಂತೆ ಆವರಿಸಲು; ಗಂಧಕುಟಿ–ಸಮವಸರಣದ ಕೇಂದ್ರಮಂಟಪ.

೩೦೮. ಭವನಾವಾಸದವರ್–ಮಧ್ಯಲೋಕ ಮತ್ತು ನರಕಲೋಕಗಳ ಮಧ್ಯದ ಅಕೃತ್ರಿಮ ಭವನಗಳಲ್ಲಿ ವಾಸಮಾಡುವವರು, ಇಲ್ಲಿ ಇಂದ್ರರು ೧೦ ಜನ; ವ್ಯಂತರಾವಾಸಸಂಭವರ್–ಗಿರಿಗಹ್ವರ ಮೊದಲಾದವುಗಳಲ್ಲಿ ವಾಸಿಸುವ ಕಿನ್ನರಾದಿಗಳು, ಇಲ್ಲಿ ಇಂದ್ರರು ೮ ಜನ; ಗ್ರಹನಕ್ಷತ್ರಗಳಲ್ಲಿ

ವಾಸಿಸುವವರು ಜ್ಯೋತಿಷ್ಯರು, ಇಲ್ಲಿ ಇಂದ್ರರು ೧೪ ಜನ; ಇವರಲ್ಲಿ ಸೂರ್ಯ, ಚಂದ್ರರನ್ನುಳಿದರೆ ೧೨ ಜನ (ಪನ್ನಿರ್ವರು).

ದೇವತೆಗಳಲ್ಲಿ ಅವರ ವಾಸಸ್ಥಾನಗಳನ್ನವಲಂಬಿಸಿ ಭವನವಾಸಿ, ವ್ಯಂತರವಾಸಿ, ಜ್ಯೋತಿಷ್ಯವಾಸಿ, ವಿಮಾನವಾಸಿ ಎಂದು ನಾಲ್ಕು ವಿಧ. ಈಗಾಗಲೇ ಸೌಧರ್ಮೇಂದ್ರನೊಂದಿಗೆ ವಿಮಾನವಾಸಿಗಳು ಬಂದಿದ್ದರು. ಹೀಗಾಗಿ ಈ ಪದ್ಯದಲ್ಲಿ ಮಿಕ್ಕ ಮೂರು ವರ್ಗದ ದೇವತೆಗಳನ್ನು ಮಾತ್ರ ಸೂಚಿಸಲಾಗಿದೆ. ನಭೋವಿವರ–ಆಕಾಶಪಟಲ; ಕೈವಲ್ಯಮಾಂಗಲ್ಯ–ಕೇವಲಜ್ಞಾನೋತ್ಪತ್ತಿಯ ಮಂಗಲಾಚರಣೆ.

೩೦೯. ನಖಾಂಶು–ಉಗುರ ಕಿರಣ; ನೀರ್ದಳಿ–ನೀರನ್ನು ಸಿಂಪಡಿಸು; ಉಪಹಾರ–ಕಾಣಿಕೆ; ಪದ್ಮರಾಗ–ಕೆಂಪು; ತಣ್ಜೊಡರ್–ತಂಪಾದ ದೀವಿಗೆ (ಬೆಳಕು); ಗುಡಿಗಟ್ಟು–ಧ್ವಜವೆತ್ತು; ಗೃಹಾರ್ಚನೆಪುಟ್ಟೆ–ಸಮವಸರಣ ಮಂದಿರಕ್ಕೆ ಪೂಜೆಸಲ್ಲಲು(?); ಬಲಗೊಳ್–ಪ್ರದಕ್ಷಿಣೆ ಹಾಕು.

೩೧೦. ಅಮರ್–ಒಪ್ಪು, ಹೊಂದಿಕೊಳ್ಳು.

೩೧೦ವ. ನಿರ್ಭರ–ತುಂಬಿಸೂಸುವ.

೩೧೧. ಚರುಮಣಿಪರ್ಯಣ–ನೈವೇದ್ಯದ ಮಣಿಖಚಿತ ಪರಿಯಾಣ; ಬಿಡುಮುತ್ತು–ಬಿಡಿಯಾದ ಮುತ್ತು; ಭಾಜನ–ಪಾತ್ರೆ; ನಮೇರುಪುಷ್ಪ–ಮಂದಾರಪುಷ್ಪ; ಶುಕ್ತಿಕೆ–ಚಿಪ್ಪು; ಪವಣ್ (<ಪ್ರಮಾಣ)–ಅಳತೆ.

೩೧೨. ದಿವ್ಯಧ್ವನಿಯ ಲಕ್ಷಣ; ನಿರುಪಾಧಿ ಪ್ರಸರಂ–ನಿಸ್ಸೀಮವಾಗಿ ಹರಡುವುದು; ನಿರಸ್ತಪುನರುಕ್ತಂ–ಪುನರುಕ್ತರಹಿತವಾದುದು; ದ್ರವ್ಯಪರ್ಯಾಯ ಗೋಚರಂ–ಆ ಆ ದ್ರವ್ಯ (=ವಸ್ತು)ಗಳಿಗೆ ಅರ್ಥವಾಗುವ ರೀತಿಯಲ್ಲಿ ಪರ್ಯಾಯಗೊಳ್ಳುತ್ತ ಪ್ರಕಟವಾಗುವುದು; ಅವ್ಯಾಕುಳಂ–ವ್ಯಾಕುಳರಹಿತವಾದುದು, ಪ್ರಶಾಂತವಾದುದು; ಏಕಯೋಜನ ಜನಾಪ್ತಂ–ಒಂದು ಯೋಜನ ವರೆಗಿನ ಜೀವಿಗಳಿಗೆ ಲಭ್ಯವಾಗುವುದು; ಸರ್ವಭಾಷಾತ್ಮಕಂ–ಸಕಲಜೀವಿಗಳ ಭಾಷೆಗಳನ್ನೊಳಗಂಡುದು; ಸುರ ವೃಂದಾರಕ ಚಕ್ರವರ್ತಿ ಗಣಪಪ್ರಶ್ನಾನುಗಂ–ಸುರ, ವೃಂದಾರಕ, ಚಕ್ರವರ್ತಿ, ಗಣಧರರ ಪ್ರಶ್ನೆಗಳಿಗೆ ಅನುಗುಣವಾಗಿ ಉತ್ತರಿಸುವುದು; ಸ್ಯಾತ್ವದಸ್ಫುರಿತಂ–ಸ್ಯಾದ್ವಾದದಿಂದ ಬೆಳಗುವುದು; ಸ್ಯಾತ್–ಒಂದು ವಸ್ತುವಿನ ನಿಜಸ್ಥಿತಿಯನ್ನು ಪ್ರಕಟಿಸುವ ಮಾತಿನ ಏಳು ಸಾಧ್ಯತೆಗಳು. ಅವು; ಸ್ಯಾದಸ್ತಿ, ಸ್ಯಾನ್ನಾಸ್ತಿ, ಸ್ಯಾದಸ್ತಿನಾಸ್ತಿ, ಸ್ಯಾದವಕ್ತವ್ಯಂ, ಸ್ಯಾದಸ್ತ್ಯವ್ಯಕ್ತವ್ಯಂ, ಸ್ಯಾನ್ನಾಸ್ತವ್ಯಕ್ತವ್ಯಂ, ಸ್ಯಾದಸ್ತಿನಾಸ್ತವ್ಯಕ್ತವ್ಯಂ, ಇವುಗಳಿಗೆ 'ಸಪ್ತಭಂಗಿ'ಯೆಂದೂ ಹೆಸರು.

೩೧೨ವ. ಅಪಗತತಾಲೋಷ್ಠಪುಟವ್ಯಾಪಾರಾಂ–ತಾಳುಗೆ ಮತ್ತು ತುಟಿಗಳ (ಚಲನೆಯ) ವ್ಯಾಪಾರದಿಂದ ದೂರವಾದುದು; ಬೆಸಸು–ಅಪ್ಪಣೆ ಕೊಡು, ಹೇಳು; ಉತ್ತಂಸಿತ– ತಲೆಯಾಭರಣ ಮಾಡಿಕೊಂಡ; ಉನ್ಮೂಲಿತ–ಬೇರುಸಹಿತ ಕಿತ್ತು ಹಾಕಿದ; ವಿಟಪಿಶಾಖ–ಮರದ ರೆಂಬೆ; ವಿಶಾಖ–ಮಲ್ಲಿನಾಥನ ಪ್ರಮುಖಗಣಧರನ ಹೆಸರು; ಸಿತ–ಶುಕ್ಲ; ಪೂರ್ವಾಹ್ನ–ಹಗಲಿನ ಪೂರ್ವಾರ್ಧಭಾಗ; ಅಪರಾಹ್ನ–ಹಗಲಿನ ಉತ್ತರಾರ್ಧಭಾಗ.

ದ್ವಾದಶಾಂಗ–೧, ಆಚಾರಾಂಗ, ೨. ಸೂತ್ರಕೃತಾಂಗ, ೩. ಸ್ಥಾನಾಂಗ, ೪. ಸಮವಾಯಾಂಗ, ೫. ವ್ಯಾಖ್ಯಾಪ್ರಜ್ಞಪ್ತಾಂಗ, ೬. ಜ್ಞಾತೃಧರ್ಮಕಥಾಂಗ, ೭. ಉಪಾಸಕಾಧ್ಯಾಯಾಂಗ, ೮. ಅಂತಕೃದ್ಧಶಾಂಗ,

೯. ಅನುತ್ತರೌಪಪಾದಿಕದಶಾಂಗ, ೧೦. ಪ್ರಶ್ನವ್ಯಾಕರಣಾಂಗ, ೧೧. ವಿಪಾಕಸೂತ್ರಾಂಗ, ೧೨. ದೃಷ್ಟಿವಾದಾಂಗ.

ಚತುರ್ದಶಪೂರ್ವ–೧. ಉತ್ಪಾದಪೂರ್ವ, ೨. ಅಗ್ರಾಯಣೀಪೂರ್ವ, ೩. ವಿರ್ಯಾನುವಾದಪೂರ್ವ, ೪. ಅಸ್ತಿನಾಸ್ತಿಪ್ರವಾದಪೂರ್ವ, ೫. ಜ್ಞಾನಪ್ರವಾದಪೂರ್ವ, ೬. ಸತ್ಯಪ್ರವಾದಪೂರ್ವ, ೭. ಆತ್ಮಪ್ರವಾದಪೂರ್ವ, ೮. ಕರ್ಮಪ್ರವಾದಪೂರ್ವ, ೯. ಪ್ರತ್ಯಾಖ್ಯಾನಪೂರ್ವ, ೧೦. ವಿದ್ಯಾನುನಾದಪೂರ್ವ ೧೧. ಕಲ್ಯಾಣವಾದಪೂರ್ವ, ೧೨. ಪ್ರಾಣವಾದಪೂರ್ವ, ೧೩. ಕ್ರಿಯಾವಿಶಾಲಪೂರ್ವ, ೧೪. ತ್ರಿಲೋಕಬಿಂದುಸಾರ ಪೂರ್ವ.

೨೪ ಜನ ತೀರ್ಥಂಕರರ ವರೆಗೂ ಜೈನ ಧಾರ್ಮಿಕಸಾಹಿತ್ಯವನ್ನು ಈ ದ್ವಾದಶಾಂಗ, ಚತುರ್ದಶಪೂರ್ವಗಳ ವ್ಯವಸ್ಥೆಯಲ್ಲಿ ಬೋಧಿಸುತ್ತ ಬಂದರು. ಬಾಯಿಯಲ್ಲಿ ಮಾತ್ರ ರಕ್ಷಿಸಿಕೊಂಡು ಬಂದ ಈ ಸಾಹಿತ್ಯ, ಮಹಾವೀರನ ತರುವಾಯ ನೆನಪಿನಿಂದ ಜಾರುತ್ತ ನಡೆದು, ಇನ್ನೇನು ಎಲ್ಲವನ್ನೂ ಕಳೆದುಕೊಳ್ಳುತ್ತೇವೆಯೆಂಬ ಭಯ ಹುಟ್ಟಲು, ನೆನಪಿದ್ದಷ್ಟನ್ನು ೪ ಅನುಯೋಗ (ವಿಭಾಗ)ಗಳಾಗಿ ಸಂಗ್ರಹಿಸಿದರು. ಅವು:

ಪ್ರಥಮಾನುಯೋಗ: ೨೪ ತೀರ್ಥಂಕರರು, ೧೨ ಚಕ್ರವರ್ತಿಗಳು, ೯ ಬಲದೇವರು, ೯ ವಾಸುದೇವರು, ೯ ಪ್ರತಿವಾಸುದೇವರು–ಈ ತ್ರಿಷಷ್ಟಿಲಕ್ಷಣ ಮಹಾಪುರುಷರ ಚರಿತ್ರೆಯನ್ನೊಳಗೊಳ್ಳುವ ವಿಭಾಗ.

ಕರಣಾನುಯೋಗ: ಮೂರು ಲೋಕಗಳ ಆಕಾರ, ಪ್ರಮಾಣ ಇತ್ಯಾದಿಗಳನ್ನೊಳಗೊಂಡ ವಿಭಾಗ.

ಚರಣಾನುಯೋಗ: ಜೈನ ಮುನಿಗಳ ಮತ್ತು ಶ್ರಾವಕರ ಜೀವನದ ಆಚರಣೆಗಳನ್ನೊಳಗೊಂಡ ವಿಭಾಗ.

ದ್ರವ್ಯಾನುಯೋಗ; ಜೀವ ಅಜೀವ ಮೊದಲಾದವುಗಳ ವಿವರಣೆಯನ್ನೊಳಗೊಂಡ ವಿಭಾಗ.

ಕಲ್ಪ–ಅನುಯೋಗಕ್ಕೆ ಇನ್ನೊಂದು ಹೆಸರು. ಮಣಿಭಾಜನ–ಮಣಿಖಚಿತ ಪಾತ್ರೆ, ತೀವು–ತುಂಬು, ಮಲ್ಲಿನಾಥತೀರ್ಥಂಕರನ ಕಾಲಕ್ಕೆ ಮೇಲೆ ಹೇಳಿದ ೧೨ ಅಂಗ, ೧೪ ಪೂರ್ವಗಳ ವ್ಯವಸ್ಥೆ ಇದ್ದಿತು. ೪ ಅನುಯೋಗಗಳ ವ್ಯವಸ್ಥೆ ಅಸ್ತಿತ್ವಕ್ಕೆ ಬಂದುದು ಮಹಾವೀರನ ಕಾಲದಿಂದೀಚೆ. ಹೀಗಾಗಿ ಪ್ರಾಚೀನವಾದ ಮಲ್ಲಿನಾಥನ ಕಥೆಯಲ್ಲಿ ಇತ್ತೀಚಿನ ಅನುಯೋಗದ ಪ್ರಸ್ತಾಪಮಾಡಿದುದು ಇತಿಹಾಸವಿರೋಧವೆನ್ನಿಸುತ್ತದೆ.

೩೧೩. ಸದಯಸ್ವಾಂತಮಯೂರ–ದಯಾಭಾವವೆಂಬ ನವಿಲು; ನೀರದರವ–ಮೇಘಧ್ವನಿ; ದರೀ–ಸೀಳುವ; ವಜ್ರರವ–ಸಿಡಿಲಧ್ವನಿ–ಕಲ್ಲೋಲಮಾಲಾರವ–ಮಾಲೆ ಮಾಲೆಯಾಗಿ ಬರುವ ತೆರೆಗಳ ಧ್ವನಿ; ವ್ಯಾಳ–ತುಂಟ; ಮರುದ್ವಾದಿತಂ–ಮರುತ್ ದೇವತೆಗಳಿಂದ ಬಾರಿಸಲ್ಪಟ್ಟ (?): ಪ್ರಸ್ಥಾನ–ಹೊರಡುವುದು.

೩೧೪. ಕುನಯ–ಮಿಥ್ಯಾತತ್ತ್ವ; ಕ್ಷೋಣಿಧ್ರ–ಪರ್ವತ; ಚೂರ್ಣಿಸು–ಪುಡಿಮಾಡು; ವಜ್ರಪ್ರಹಾರ–ವಜ್ರಾಯುಧದ ಏಟು (ಸಿಡಿಲಿನ ಏಟು); ಧ್ವಾಂತ–ಕತ್ತಲೆ; ಕೀನಾಶ–ಯಮ; ಸೇನಾಚಕ್ರ–ಸೈನ್ಯಸಮೂಹ; ಚಾಳಿಸು–ಅಲುಗಾಡಿಸು; ಧರ್ಮಾನುಗ್ರಹ–ಧರ್ಮವನ್ನು ದಯಪಾಲಿಸುವುದು; ತಳರ್–ಚಲಿಸು; ಧರ್ಮಚಕ್ರಾಧಿನಾಥ–ಧರ್ಮಚಕ್ರಾಧಿಪತಿ, ತೀರ್ಥಂಕರ,

೩೧೫. ದಾಂಗುಡಿ–ಮುಂದುಮುಂದಕ್ಕೆ ಹಬ್ಬುವ ಕುಡಿ.

೩೧೬. ಮರಕತ–ಹಸಿರು ರತ್ನ; ಜಗಲಿ–ವೇದಿಕೆ; ಉರ್ವರೆ–ಭೂಮಿ; ಸಸ್ಯ–ಸಸಿ(ದ್ಭ); ಪಸುರ್ಪು–ಹಸಿರು.

೩೧೭. ಕುಮತ–ಕೀಳುಧರ್ಮ; ಒಳ್ನಾಡು–ಒಳ್ಳೆಯ ನಾಡು; ತೋಱಿಲ್–ಸಂಚರಿಸು; ರತ್ನತ್ರಯ–ಸಮಕ್‌ದರ್ಶನ, ಸಮ್ಯಕ್‌ಜ್ಞಾನ, ಸಮ್ಯಕ್‌ಚಾರಿತ್ರ; ಕೇಕರಾಳೋಕನಂ–ಪ್ರೇಮಕಟಾಕ್ಷ (ಕೇಕರ–ಕುಡಿನೋಟ); ಮಂಡನ–ಆಭರಣ; ಸಮ್ಮೇದ–ಈಗಿನ ಬಿಹಾರ ರಾಜ್ಯದ ಹರೀಬಾಗ ಜಿಲ್ಲೆಯ ಒಂದು ಬೆಟ್ಟ. ವೃಷಭದೇವ, ವಾಸುಪೂಜ್ಯ, ನೇಮಿನಾಥ, ಪಾರ್ಶ್ವನಾಥರನ್ನು ಬಿಟ್ಟರೆ ಮಿಕ್ಕ ೨೦ ಜನ ತೀರ್ಥಂಕರರು ನಿರ್ವಾಣಹೊಂದಿದುದು ಈ ಕ್ಷೇತ್ರದಲ್ಲಿ. ಇದರ ಈಗಿನ ಹೆಸರು 'ಪಾರಸನಾಥ ಹಿಲ್'.

೩೧೮. ಪ್ರಕೃತಿ–ಕರ್ಮ ಪ್ರಕೃತಿ (ಎಂಟೂ ಬಗೆಯ ಕರ್ಮಗಳ ಉಪಭೇದಗಳು); ಶುಕ್ತಿಕೆ–ಮುತ್ತನ್ನೊಳಗೊಂಡ ಚಿಪ್ಪು; ನೀರದ–ಮೋಡ; ಕಾಳಿಕೆ–ಕಲ್ಮಷ, ಆವರಣ.

೩೧೯. ಅಘಾತಿ–(ನಾಲ್ಕು) ಅಘಾತಿಕರ್ಮಗಳು; ನೋಡಿರಿ ೩೦೨. (ಘಾತಿಕರ್ಮಗಳು ಈ ಮೊದಲು ನಾಶವಾಗಿವೆ. ನೋಡಿರಿ ೩೦೩ವ.); ಪಜ್ವಳಿಸು–ಪ್ರಜ್ವಲಿಸು, ಬೆಳಗು; ಎಂಟುಗುಣ–ಎಂಟು ಕರ್ಮ (೪ ಘಾತಿ + ೪ ಅಘಾತಿ)ಗಳ ನಾಶದಿಂದ ಅನುಕ್ರಮವಾಗಿ ಬೆಳಗುವ ಎಂಟು ಗುಣಗಳು. ಅವು: ಕೇವಲ ಜ್ಞಾನ, ಕೇವಲ ದರ್ಶನ, ಅವ್ಯಾಬಾಧತ್ವ, ಸಮ್ಯಕ್ತ್ವ, ಪರಮ ಸೂಕ್ಷ್ಮತೆ, ಅವಗಾಹನತ್ವ, ಅಗುರುಲಘುತ್ವ, ಅನಂತವೀರ್ಯ; ನೇರ್ಪಡು–ಹೊಂದು; ದೀಪಾರ್ಚಿ–ದೀಪದ ಶಿಖೆ; ಮೂಱುಂ ಲೋಕ–ಅಧೋ, ಮಧ್ಯ, ಊರ್ಧ್ವಲೋಕ; ಸಿದ್ಧನಿಳಯಂ–ಊರ್ಧ್ವಲೋಕದಲ್ಲಿ ೧೬ ಕಲ್ಪಗಳು, ೯ ಗ್ರೈವೇಯಕ ವಿಮಾನಗಳು, ೯ ಅನುದಿಶ ವಿಮಾನಗಳು, ೫ ಅನುತ್ತರ ವಿಮಾನಗಳು ಒಂದರ ಮೇಲೊಂದರಂತೆ ಇವೆ. ಈ ಅನುತ್ತರ ವಿಮಾನಗಳ ಮೇಲೆ ಈಷತ್ ಪ್ರಾಗ್ಭಾರ ಹೆಸರಿನ ಸಿದ್ಧ ಕ್ಷೇತ್ರವಿದೆ. ಇದರ ಮಧ್ಯದಲ್ಲಿದ್ದುದು ಸ್ಫಟಿಕಶುದ್ಧಿಯಿಂದ ಬೆಳಗುವ ಸಿದ್ಧಶಿಲೆ (=ಸಿದ್ಧನಿಳಯ). ಇದರ ಮೇಲೆ ಮುಕ್ತರು ನೆಲೆಸುತ್ತಾರೆ.

೩೨೦. ಪರಮಂ–ಪರಮೇಶ್ವರ; ಅಪವರ್ಗರಮಾ–ಮೋಕ್ಷಲಕ್ಷ್ಮಿ; ಅನಂತಸುಖ–ಜಿನನ ೪೬ ಗುಣಗಳಲ್ಲಿ ಅನಂತಚತುಷ್ಟಯಗಳು ೪. ಇವುಗಳಲ್ಲಿ ಒಂದು ಅನಂತಸುಖ.

೩೨೧. ಚಿತ್ರಾತಪತ್ರ–ಚಿತ್ರವಿಚಿತ್ರವಾದ ಕೊಡೆ; ಶತಪತ್ರವನ–ಸರೋವನ; ಇಟಿಸು–ಹೀಯಾಳಿಸು; ದ್ವಾತ್ರಿಂಶತ್–ಮೂವತ್ತೆರಡು; ತ್ರಿದಶಪತಿ–ದೇವತೆಗಳ ಒಡೆಯ, ಇಂದ್ರ.

೩೨೧ವ. ನಿರ್ವಾಣಪೂಜೆ–ಪಂಚಕಲ್ಯಾಣಗಳಲ್ಲಿ ಕೊನೆಯದಾದ ಪರಿನಿರ್ವಾಣ ಕಲ್ಯಾಣ; ಗೀರ್ವಾಣಪತಿ–ದೇವತೆಗಳ ಒಡೆಯ, ಇಂದ್ರ; ಎಟ್ಟಿರು–ನಡೆದು ಬರು.

೩೨೨. ಕೃಶಾನು–ಅಗ್ನಿ; ಉರಿದಳ್ಗು–ಸುಟ್ಟುನಾಶವಾಗು; ಶರಾಸನ–ಬಿಲ್ಲು; ಆಸ್ಥಾನಿ–ಸಭೆ; ಕೆಂದಳ–ಕೆಂಪಾದ ಅಂಗೈ; ಲತಾಂತ–ಹೂ; ನಿಕುರುಂಬ–ಸಮೂಹ.

೩೨೨ ವ. ಅಮರ ಸಮಿತಿ–ದೇವತೆಗಳ ಸಮೂಹ, ಕಿಸಲಯ–ಚಿಗುರೆಲೆ.

೩೨೩. ಮೊದಲ್ಗಿಡಿಸಿ–ಮೂಲೋತ್ಪಾಟನಗೊಳಿಸಿ; ಬಿದಿರ್ಚು–ಬಿಚ್ಚು, ಸೀಳು; ಅನಾಕುಳಂ–ನಿರಾಯಾಸ; ಸದಾಶಿವನಿವಾಸ–ಮೋಕ್ಷನಿವಾಸ; ತ್ವದೀಯ–ನಿನ್ನ; ಪರಮತ್ವ–ಮೋಕ್ಷಪದವಿ.

೩೨೪. ತಾಂಡವ–ಪುರುಷನರ್ತನ; ಈಶಾನೇಂದ್ರ–ಊರ್ಧ್ವಲೋಕದಲ್ಲಿ ಎರಡನೆಯದಾದ 'ಈಶಾನಕಲ್ಪದ' ಒಡೆಯ; ಬಿಚ್ಚಳಿಸು–ಹೊಗಳು.

೩೨೫. ಶ್ರೀಖಂಡ–ಶ್ರೀಗಂಧ; ಕೃಷ್ಣಾಗರು–ಒಂದು ಪರಿಮಳ ದ್ರವ್ಯ; ನಿರವದ್ಯ–ಕಲಂಕರಹಿತ; ಉಪಹಾರ–ಕಾಣಿಕೆ.

ಅರ್ಚನಾದ್ರವ್ಯದಿಂದರ್ಚಿಸಿ ತಣಿಯದೆ, ವಾಕ್ಯೋಪಹಾರಗಳಿಂದರ್ಚಿಸಿದೆನೆಂದು ಕವಿಯ ಧನ್ಯತಾಭಾವ. ಪಂಪನು ಕವಿತ್ವಕ್ಕೆ ಬಳಸಿದ 'ನಿಚ್ಚಂ ಪೊಸತು' ಎಂಬ ವಿಶೇಷಣವನ್ನು ಅಭಿನವ ಪಂಪನು ಇಲ್ಲಿ ಭಾಷೆಗೆ ಬಳಸಿದ್ದಾನೆ.

❖❖

ಶಬ್ದಮಣಿದರ್ಪಣ ಸಂಗ್ರಹ

ಸಂಪಾದಕರು
ಪ್ರೊ. ಬಿ.ಟಿ. ಸಾಸನೂರ
ಡಾ. ಎಂ. ಎಂ. ಕಲಬುರ್ಗಿ

೧೯೭೪

ರವಿಚಂದ್ರ ಪ್ರಕಾಶನ, ಧಾರವಾಡ

ಕ್ರಿಸ್ತವಾಸಿ

ಕಿಟೆಲ್

ಅವರಿಗೆ

*

ನಮ್ಮ ನುಡಿ

'ಶಬ್ದಮಣಿದರ್ಪಣ', ಕನ್ನಡ ವ್ಯಾಕರಣಸಾಹಿತ್ಯದ ಆಚಾರ್ಯ ಕೃತಿ. ಒಂದರ್ಥದಲ್ಲಿ ಇದು ಕೇಶಿರಾಜನ ಮಹಾಕಾವ್ಯ. ಕಳೆದ ಏಳುನೂರು ವರ್ಷಗಳಿಂದ ಕನ್ನಡಿಗರು ಈ ಶಾಸ್ತ್ರಕೃತಿಯನ್ನು ಕಾವ್ಯಕೃತಿಯ ಮಟ್ಟದಲ್ಲಿ ನಿಲ್ಲಿಸಿ, ಆಸಕ್ತಿಯಿಂದ ಓದುತ್ತ ಬಂದಿದ್ದಾರೆ. ಇದರ ಫಲವಾಗಿ ದರ್ಪಣಕ್ಕೆ ಮೂಡಬಿದರೆ ಹಸ್ತಪ್ರತಿ ಟೀಕಾಕರ್ತೃ, ಹೈದ್ರಾಬಾದ ಹಸ್ತಪ್ರತಿ ವ್ಯಾಖ್ಯಾನಕರ್ತೃ. ಕಂ..... ಸಪ್ಪ, ನಿಟ್ಟೂರ ನಂಜಯ್ಯ, ಲಿಂಗಣಾರಾಧ್ಯ ಇವರಿಂದ ಕನ್ನಡದ ಯಾವ ಕೃತಿಗೂ ಇಲ್ಲದಷ್ಟು ಟೀಕೆ ವ್ಯಾಖ್ಯಾನಗಳು ಹುಟ್ಟಿವೆ. ನಾಡಿನ ತುಂಬ ಇದರ ನೂರಾರು ಹಸ್ತಪ್ರತಿಗಳು ಪ್ರತಿಲೇಖನಗೊಂಡಿವೆ. ಪ್ರಾಚೀನಕಾಲದಲ್ಲಿ ಪಡೆದ ಈ ವಿದ್ವಜ್ಜನಪ್ರಿಯತೆ ಆಧುನಿಕ ಕಾಲದಲ್ಲಿಯೂ ದಟ್ಟವಾಗಿ ಮುಂದುವರಿದಿದೆ.

ಎಚ್.ಎಚ್.ವಿಲ್ಸನ್ ಅವರು ೧೮೨೮ರಲ್ಲಿಸಿದ್ಧಪಡಿಸಿದ "Meckenze collection: A descriptive catalouge of the oriental manuscripts" ಎಂಬ ಕೃತಿಯಲ್ಲಿ Kāsirāja Nighantu and Kāvirājamārga (palm leaves) - A vocabulary of the Karnatak language by Kāviraja and treatise on Grammar and prosody by Tungadēva" ಎಂಬ ಉಲ್ಲೇಖ ಬರುತ್ತದೆ. ಇಲ್ಲಿಯ ಕಾಶಿರಾಜ ನಿಘಂಟು ಕೇಶಿರಾಜನದ ಶಬ್ದಮಣಿ ದರ್ಪಣದ ಧಾತು ಪ್ರಕರಣವೋ, ಪ್ರಯೋಗ ಸಾರ ಪ್ರಕರಣವೋ ಆಗಿರಬೇಕು.

ತರುವಾಯ, ಇದರ ಪರಿಷ್ಕರಣ ಮತ್ತು ಪರಾಮರ್ಶೆ ನಿರಂತರ ಸಾಗಿಬಂದಿದೆ. ಪರಿಷ್ಕರಣದ ಬಗೆಗೆ ಹೇಳುವುದಾದರೆ ಈ ವರೆಗೆ :

೧.	ಜೆ. ಗೆರೆಟ್	೧೮೬೮
೨.	ಎಫ್. ಕಿಟೆಲ್	೧೮೭೨
೩.	ಎಫ್.ಕಿಟೆಲ್	೧೮೯೯
೪.	ಪಂಜೇ ಮಂಗೇಶರಾಯರು	೧೯೨೦
೫.	ಕ.ಸಾ. ಪರಿಷತ್ತು	೧೯೨೦
೬.	ಮದ್ರಾಸ ವಿಶ್ವವಿದ್ಯಾಲಯ	೧೯೩೮
೭.	ಡಿ.ಎಲ್.ನರಸಿಂಹಾಚಾರ್	೧೯೫೯
೮.	ಡಿ.ಎಲ್.ನರಸಿಂಹಾಚಾರ್	೧೯೬೪
೯.	ಪಂಜೇ ಮುಂಗೇಶರಾಯರು	೧೯೬೫
೧೦.	ಡಿ. ಎಲ್. ನರಸಿಂಹಾಚಾರ್	೧೯೬೮
೧೧.	ಡಿ.ಎಲ್. ನರಸಿಂಹಾಚಾರ್	೧೯೭೧

೧೨. ಡಿ.ಎಲ್. ನರಸಿಂಹಾಚಾರ್ ೧೯೭೩

೧೩. ಮದ್ರಾಸ ವಿಶ್ವವಿದ್ಯಾಲಯ ೧೯೭೩

ಹೀಗೆ ಇದು ಹಲವರಿಂದ ಹತ್ತಾರು ಆವೃತ್ತಿಗಳನ್ನು ಕಂಡಿದೆ. ಇವುಗಳಿಗಿಂತ ಉತ್ತಮವಾದ, ಪ್ರಮಾಣಭೂತವಾದ ಆವೃತ್ತಿಯೊಂದನ್ನು ಹೊರತರುವುದು ಇಂದು ತೀರ ಅವಶ್ಯವಿದೆ.

ಈ ಪರಿಷ್ಕರಣದೊಂದಿಗೆ ಇದರ ಪರಿಶೀಲನೆ, ಪರಾಮರ್ಶೆ ಕಾಲಕಾಲಕ್ಕೆ ನಡೆದಿದೆ. ಹೊಸಗನ್ನಡದ ಎರಡನೆಯ ವ್ಯಾಕರಣವೂ ಎರಡನೆಯ ಮುದ್ರಿತ ಕೃತಿಯೂ ಆದ 'A Grammar of the Canarese Language' (೧೮೨೦) ರಚನೆಗೆ ಜಾನ್ ಮೆಕರಲ್ ಅವರು ದರ್ಪಣದಿಂದ ವಿಶೇಷ ಪ್ರಯೋಜನ ಪಡೆದರು. ಆಮೇಲೆ ಅನೇಕರಿಂದ -ಸಾಂದರ್ಭಿಕ ಅಧ್ಯಯನವನ್ನು ಬಿಟ್ಟರೂ - ಇದರ ನೇರ ಅಧ್ಯಯನವು ಸಾಂಪ್ರದಾಯಿಕ ಹಾಗೂ ಆಧುನಿಕ ದೃಷ್ಟಿಯಿಂದ ಗಣನೀಯ ಪ್ರಮಾಣದಲ್ಲಿ ನಡೆಯುತ್ತಲಿದೆ. ಇವುಗಳಲ್ಲಿ ಸಾಂಪ್ರದಾಯಿಕ ವರ್ಗಕ್ಕೆ ಸೇರಿದ ಸಂಗ್ರಹರೂಪದ ಅಧ್ಯಯನವೂ ಒಂದು. ಈ ಪ್ರಯತ್ನಕ್ಕೆ ಮೊದಲು ಕೈಹಾಕಿದವರು ಶ್ರೀ ಗಂಗಾಧರ ಮಡಿವಾಳೇಶ್ವರ ತುರುಮರಿಯವರು. ಬೆಳಗಾವಿಯಿಂದ ಹೊರಡುತ್ತಿದ್ದ 'ಮಠ ಪತ್ರಿಕೆ'ಯ ಮೂಲಕ ಇವರು ಶಬ್ದಮಣಿದರ್ಪಣ ವ್ಯಾಖ್ಯಾನವನ್ನು ಪ್ರಕಟಿಸುತ್ತ 'ಕನ್ನಡದಲ್ಲಿ ಶಬ್ದಮಣಿದರ್ಪಣವೆಂಬುದೊಂದು ಅತ್ಯಮೂಲ್ಯವಾದ ವ್ಯಾಕರಣವುಂಟು, ಅದು ವಸ್ತುತಃ ಹಳಗನ್ನಡ ಭಾಷೆಯ ವ್ಯಾಕರಣಕ್ಕೆ ಮುಖ್ಯವಾದ ಆಶ್ರಯವಾಗುತ್ತದೆ. ಈ ಕಾರಣದಿಂದಲೂ, ಹಳಗನ್ನಡ ಜ್ಞಾನಕ್ಕೆ ಅದು ಅತ್ಯವಶ್ಯವಾಗಿರುವದರಿಂದಲೂ ಅದನ್ನು ಛಾಪಿಸಿದರೆ ನಮ್ಮ ಮಾಸ್ತರ ಜನರಿಗೆ ಬಹು ಲಾಭವಾಗುವುದೆಂದು ನೋಡಿ, ಈ ಪತ್ರಿಕೆಯ ದ್ವಾರವಾಗಿ ಅದನ್ನು ಪ್ರಸಿದ್ಧಿಪಡಿಸುವ ಆಲೋಚನೆ ಮಾಡಿರುತ್ತೇನೆ. ಈ ಕೆಳಗೆ ಬರೆದ ಪ್ರಕಾರ ಒಂದೊಂದು ಸಂಚಿಕೆಯಲ್ಲಿ ಅದರ ಕೆಲವು ಶ್ಲೋಕಗಳನ್ನು ಅರ್ಥಸಹಿತವಾಗಿ ಛಾಪಿಸುವೆವು. ತ್ವರಿತಕ್ಕೆ ಸ್ಥಳ ವೇಳೆ ಶ್ರಮ ಈ ಮೂರುಗಳ ಸಂಕೋಚಕ್ಕೋಸ್ಕರ ಮಂಗಳಾಚರಣ ಮೊದಲಾದ ವ್ಯಾಕರಣ ವಿಷಯಕ್ಕೆ ಸಂಬಂಧಿಸದೆ ಇದ್ದ ಅದರ ಶ್ಲೋಕಗಳನ್ನು ನಡುನಡುವೆ ಬಿಟ್ಟು, ಕೇವಲ ವ್ಯಾಕರಣ ನಿಯಮಗಳುಳ್ಳ ಶ್ಲೋಕಗಳನ್ನು ತೆಗೆದುಕೊಳ್ಳುವದು ಅಗತ್ಯವಾಗಿರುತ್ತದೆ."* ಎಂದು ಪ್ರಾರಂಭದಲ್ಲಿ ಹೇಳಿದುದನ್ನು ಗಮನಿಸಬೇಕು. ಈ ಸಂಗ್ರಹಕಾರ್ಯವನ್ನು ಕೈಗೆತ್ತಿಕೊಂಡ ಎರಡನೆಯವರು ಡಾ. ಎಫ್. ಕಿಟೆಲ್. ಅವರ 'ಹಳಗನ್ನಡ ವ್ಯಾಕರಣ ಸೂತ್ರಗಳು' ಎಂಬ ಕೃತಿಯಲ್ಲಿ : ದರ್ಪಣದ ೧೯೮ ಸೂತ್ರಗಳಿಗೆ ಬರೆದ ಹೊಸಗನ್ನಡ ಗದ್ಯ ಮತ್ತು ಪ್ರಯೋಗಗಳಿವೆ. ಮೂರನೆಯ ಪ್ರಯತ್ನ ಪ್ರೊ. ಎಸ್.ಆರ್, ಮಳಗಿ ಅವರದು. "ಶಬ್ದಮಣಿದರ್ಪಣ ಸಂಗ್ರಹಂ" (೧೯೭೦) ಹೆಸರಿನಲ್ಲಿ ೧೨೧ ಸೂತ್ರ, ೨೨೨ ವೃತ್ತಿಗಳನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ಈ ಮೂರಕ್ಕಿಂತ ತೀರ ಭಿನ್ನವಾಗಿದೆ, ನಮ್ಮ ಸಂಗ್ರಹ. ದರ್ಪಣದ ವಿದ್ಯಾರ್ಥಿ ಎದುರಿಸಬೇಕಾಗುವ ಮೊದಲ ತೊಂದರೆಯೆಂದರೆ ಸೂತ್ರಗಳ ಜಟಿಲತೆ ಮತ್ತು ಪ್ರಯೋಗಗಳ ಗೊಂದಲ, "ಪ್ರಾಸಚ್ಛಂದೋನ್ವಯವಿನ್ಯಾಸದಿನಂತಿಂತು" ಶಬ್ದಗಳನ್ನು ಅಳವಡಿಸಿಕೊಂಡ ಸೂತ್ರಗಳನ್ನು ಅರ್ಥಮಾಡಿಕೊಳ್ಳುವುದು ತುಂಬ ಕ್ಲೇಶಕರವಾಗಿದೆ. ಹಳಗನ್ನಡ ಭಾಷೆಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು ತಮ್ಮ ಶಕ್ತಿಯನ್ನು ವ್ಯಯಿಸಬೇಕಾದ ನಮ್ಮ ವಿದ್ಯಾರ್ಥಿಗಳು, ಈ ಸೂತ್ರವೆಂಬ ಕೋಟೆಯನ್ನು ಭೇದಿಸುವಲ್ಲಿಯೇ ದಣಿದು ನಿಲ್ಲುತ್ತಾರೆ. ಈ ಕಾರಣಕ್ಕಾಗಿಯೇ ಕೇಶಿರಾಜ ವೃತ್ತಿ ಬರೆದಿದ್ದರೂ ೧. ಆ ವೃತ್ತಿಗೆ ಬಳಸಿದ ಭಾಷೆ ಹಳಗನ್ನಡವಾಗಿದೆ., ೨. ಸೂತ್ರಕ್ಕೂ ವೃತ್ತಿಗೂ ಸಂಬಂಧ ತಪ್ಪುವ ರೀತಿಯಲ್ಲಿ ಸೂತ್ರಕ್ಕೆ ಹೊರತಾದ ಹೆಚ್ಚಿನ

---

* ಮಠ ಪತ್ರಿಕೆ ಬೆಳಗಾವಿ : ೧೮೯೬ ಪು. ೪೩-೪೪.

ವಿಷಯಗಳನ್ನು ವೃತ್ತಿಯಲ್ಲಿ ಹೇಳಿದ್ದಾನೆ. ೩. ತರುವಾಯದ ಅಭ್ಯಾಸಿಗಳು ಮಾಡಿದ ಲೋಪ, ಆಗಮ, ಆದೇಶ ರೂಪದ ಪಾಠಗಳಿಂದಾಗಿ ವಿಸ್ತಾರ ಇಲ್ಲವೆ ಸಂಕೋಚ ರೂಪ ಪಡೆದ ವೃತ್ತಿಗೂ ಮೂಲಸೂತ್ರಕ್ಕೂ ಇನ್ನೂ ಸಂಬಂಧ ತಪ್ಪಿದೆ. ವಿದ್ಯಾರ್ಥಿಗಳಿಗೆ ಗೊಂದಲವನ್ನುಂಟುಮಾಡುವ ವೃತ್ತಿಸಂಬಂಧಿ ಈ ಮೂರೂ ತೊಡಕುಗಳನ್ನು ನಿವಾರಿಸುವ ರೀತಿಯಲ್ಲಿ ಸೂತ್ರಕ್ಕೆ "ತಕ್ಕಷ್ಟು" ವೃತ್ತಿಯನ್ನು-ಅದೂ ಹೊಸಗನ್ನಡದಲ್ಲಿ ಬರೆದಿದ್ದೇವೆ; ಇದರಿಂದ ಎಷ್ಟೋ ಕಡೆ ಮೂಲವೃತ್ತಿ ಸಂಗ್ರಹರೂಪಕ್ಕಿಳಿದಿದೆ. ಸೂತ್ರದ ಅನ್ವಯ ಕ್ರಮದಲ್ಲಿಯೆ ಮುನ್ನಡೆದ ಇದು, ಓದುಗನಿಗೆ ಸೂತ್ರವನ್ನು ಸರಸರ ಸುರುಳಿ ಬಿಚ್ಚಿ ತೋರಿಸುತ್ತದೆ. ವೃತ್ತಿಗೆ ಸಂಬಂಧಪಟ್ಟ ನಮ್ಮ ಈ ಪ್ರಯತ್ನ ಈ ಸಂಗ್ರಹದ ಒಂದು ಸಾಧನೆಯೆಂದೇ ಹೇಳಬಹುದು.

ಎರಡನೆಯದಾಗಿ, ಶಬ್ದಮಣಿದರ್ಪಣದಲ್ಲಿ ಪಾಠಾಂತರಕ್ಕೆ ತೀರ ಗುರಿಯಾದ ಭಾಗ, ಪ್ರಯೋಗ. ಇಲ್ಲಿ ಒಂದು ವ್ಯಾಕರಣ ಪ್ರಕ್ರಿಯೆಗೆ ಒಂದಕ್ಕಿಂತ ಹೆಚ್ಚು ಪ್ರಯೋಗಗಳನ್ನು ಕೊಟ್ಟಿದ್ದಾನೆ, ಕೇಶಿರಾಜ. ಕೆಲವು ಸಲ ಮುಂದಿನವರಿಂದ ಸೇರಿದ ಹೊಸ ವ್ಯಾಕರಣ ಪ್ರಕ್ರಿಯೆಗಳೂ, ಅವುಗಳಿಗೆ ಸಂಬಂಧಿಸಿದ ಹೊಸ ಪ್ರಯೋಗಗಳೂ ಅಲ್ಲಲ್ಲಿ ಸೇರಿಕೊಂಡಿವೆ. ಕೆಲವರಂತೂ ಹೀಗೆ ಸೇರಿಸುವಲ್ಲಿ ಸೂತ್ರ -ವೃತ್ತಿ-ಪ್ರಯೋಗಗಳ ತಾಳ-ಮೇಳ ತಪ್ಪಿಸಿದ್ದಾರೆ. ಸೂತ್ರಕ್ಕೆ ತಕ್ಕಷ್ಟೇ ವೃತ್ತಿಯನ್ನು ಬರೆದ ನಾವು, ಈ ಪ್ರಸಂಗದಲ್ಲಿ ವೃತ್ತಿಗೆ ತಕ್ಕಷ್ಟು ಪ್ರಯೋಗವನ್ನು, ಅದೂ ಒಂದು ಪ್ರಕ್ರಿಯೆಗೆ ಒಂದು ಪ್ರಯೋಗವನ್ನು ಕೊಟ್ಟಿದ್ದೇವೆ. ಇದು ಈ ಸಂಗ್ರಹದ ಇನ್ನೊಂದು ಸಾಧನೆಯೆಂದೇ ಹೇಳಬಹುದು. ಇದರಿಂದ ದರ್ಪಣವು ಗಾತ್ರದಲ್ಲಿ ಅರ್ಧದಷ್ಟು ಕಡಿಮೆಯಾಗಿದೆಯಲ್ಲದೆ ಸೂತ್ರ-ವೃತ್ತಿ-ಪ್ರಯೋಗಗಳಲ್ಲಿ ಒಂದು ಸ್ಪಷ್ಟವಾದ ಸಂಬಂಧ, ಅಚ್ಚುಕಟ್ಟಾದ ಕ್ರಮ ಸಾಧ್ಯವಾಗಿದೆ.

ಒಟ್ಟಿನಲ್ಲಿ ನಮ್ಮದು ಸೂತ್ರ ಸಂಗ್ರಹವಲ್ಲ, ಅತಿವ್ಯಾಪ್ತಿಯಿಂದ ಕೂಡಿದ ವೃತ್ತಿಗಳ, ಅದಕ್ಕಿಂತ ಹೆಚ್ಚಾಗಿ ಅವ್ಯವಸ್ಥೆಯಿಂದ ಕೂಡಿದ ಪ್ರಯೋಗಗಳ ವ್ಯವಸ್ಥಿತ ಸಂಗ್ರಹ. ಇದರಿಂದ ದರ್ಪಣ ಮಿತಗಾತ್ರವೂ ಸುಲಭಗ್ರಾಹ್ಯವೂ ಆಗಿದೆಯೆಂದು ನಮ್ಮ ಭಾವನೆ.

ಈ ಕಾರ್ಯದಲ್ಲಿ ಎಷ್ಟೇ ನಿವಾರಿಸಿದರೂ ಕೆಲವು ಸಂದೇಹಗಳು ಉಳಿದುಕೊಂಡವು. ಅದನ್ನು ಅಲ್ಲಲ್ಲಿ ಸೂಚಿಸಿದ್ದೇವೆ. ಅವಶ್ಯವೆನಿಸಿದ ವಿವರಣೆಯನ್ನು ಅಡಿಯಲ್ಲಿಯ "ವಿಚಾರ" ವಿಭಾಗದಲ್ಲಿ ಕೊಟ್ಟಿದ್ದೇವೆ. ಹೊಸದಾಗಿ ಸೇರಿಸಿದ ಪಾಠವನ್ನು ಚೌಕಕಂಸಿನಲ್ಲಿ ಸೂಚಿಸಿದ್ದೇವೆ. ಳಳಯುಕ್ತಪದ, ನಿಜಬಿಂದುಪದ, ಧಾತುಪಟ್ಟಿಗಳನ್ನು ಸಂಗ್ರಹಿಸಿಕೊಟ್ಟ ನಾವು, "ಪ್ರಯೋಗಸಾರ" ಪ್ರಕರಣವನ್ನು ಕೈಬಿಟ್ಟಿದ್ದೇವೆ. ಈ ಎಲ್ಲ ಅಂಶಗಳನ್ನು ಓದುಗರು ಗಮನಿಸಬೇಕು.

ದರ್ಪಣದ ಅಭ್ಯಾಸ ಒಂದೆರಡು ಪ್ರಯತ್ನಗಳಿಂದ ಮುಗಿಯುವುದಲ್ಲ. ಅದು ಗಜಪ್ರಯತ್ನ, ಅಜಪ್ರಯತ್ನಗಳಿಂದ ಮುಂದುವರಿವ ಅಭ್ಯಾಸಪಥ. ಈ ದಾರಿಯಲ್ಲಿ ನಿಟ್ಟೂರ ನಂಜಯ್ಯ ಟೀಕೆ ಬರೆದ, ಲಿಂಗಣಾರಾಧ್ಯ ವೃತ್ತಿ ಬರೆದ, ಕಿಟೆಲ್ ಆಂಗ್ಲ ಟಿಪ್ಪಣೆ ಬರೆದ. ಇವರಂತೆ ನಮ್ಮದೂ ಒಂದು ಪ್ರಾಮಾಣಿಕ ಪ್ರಯತ್ನ. "ಶಬ್ದಪಾರಮಾರ್ಗಂ ಅಶಕ್ಯಂ" ಎಂಬ ಕೇಶಿರಾಜನ ಮಾತನ್ನು ನೆನಪಿಟ್ಟು ಈ ಕಾರ್ಯ ಮಾಡಿದ್ದೇವೆ. ಇಲ್ಲಿಯ ದೋಷಗಳನ್ನು, ಮುದ್ರಣದೋಷಗಳನ್ನು ಸಹೃದಯರು ಮನ್ನಿಸಬೇಕು. ಈ ಕೃತಿಯ ಅಚ್ಚಿನ ಪ್ರತಿಯನ್ನು ಸಿದ್ಧಗೊಳಿಸಿಕೊಟ್ಟ ಶ್ರೀ ರವೀಂದ್ರ ಕರ್ಜಗಿ ಅವರಿಗೂ, ಕ್ಲಿಷ್ಟಕರವಾದ ಮುದ್ರಣಕಾರ್ಯವನ್ನು ಅಂದವಾಗಿ ಪೂರೈಸಿದ, ಪ್ರಕಾಶನದ ಭಾರ ಹೊತ್ತ ಮನೋಹರ ಮುದ್ರಣಾಲಯ ಮತ್ತು ರವಿಚಂದ್ರ ಪ್ರಕಾಶನದ ಒಡೆಯರಾದ ಸೋಮಣ್ಣ ಆಕಳವಾಡಿ ಮತ್ತು ಅವರ ಮಕ್ಕಳು ರವಿ-ಚಂದ್ರ ಅವರಿಗೂ ಕೃತಜ್ಞತೆಗಳು

❖❖

*

ಪ್ರಸ್ತಾವನೆ

೧. ಕನ್ನಡದಲ್ಲಿ ವ್ಯಾಕರಣ ಪಂಥಗಳು ಮತ್ತು ಗ್ರಂಥಗಳು

ಇಂದ್ರಶ್ಚಚಂದ್ರಃ ಕಾಶಕೃತ್ಸ್ನಾಪಿಶಲೀ ಶಾಕಟಾಯನಃ
ಪಾಣಿನ್ಯಮರಜೈನೇಂದ್ರಾಃ ಜಯಂತ್ಯಷ್ಟಾಹಿ ಶಾಬ್ದಿಕಾಃ ॥[೧]

ಈ ಶ್ಲೋಕದಲ್ಲಿ ಇಂದ್ರ, ಚಂದ್ರ, ಕಾಶಕೃತ್ಸ, ಆಪಿಶಲಿ, ಶಾಕಟಾಯನ, ಪಾಣಿನಿ, ಅಮರ, ಜೈನೇಂದ್ರ ಎಂಬ ಸಂಸ್ಕೃತದ ಎಂಟು ಸುಪ್ರಸಿದ್ಧ ವ್ಯಾಕರಣ ಪಂಥಗಳ ಉಲ್ಲೇಖವಿದೆ. ಇದೇ ರೀತಿ ಕನ್ನಡದಲ್ಲಿಯೂ ಶಂಖವರ್ಮ, ಗುಣವರ್ಮ ಮತ್ತು ನಾಗವರ್ಮ ಪ್ರವರ್ತಿತ ಮೂರು ವ್ಯಾಕರಣಪಂಥಗಳಿರಬಹುದೆಂದು ಹಲವರ ಮತ. ಇವರಿಗೆ ಆಧಾರವೆಂದರೆ, ಕಾವ್ಯಾವಲೋಕನದ

ಪ್ರಣುತಗುಣರೆನಿಪ ವಿಬುಧಾ ।
ಗ್ರಣಿಗಳ್ ಕೆಯ್ಕೊಂಡು ಪೊಗಳೆ ಸಲೆ ನೆಗಟ್ಟುವು ಧಾ ।
ರಿಣಿಯೊಳಗೆ ಶಂಖವರ್ಮನ ।
ಗುಣವರ್ಮನ ನಾಗವರ್ಮನಧ್ವಾನಂಗಳ್ ॥[೨]

ಎಂಬ ಪದ್ಯಕ್ಕೆ ಆರ್. ನರಸಿಂಹಾಚಾರ್ ಅವರು ಊಹಿಸಿದ "Nagavarma, Gunavarma and Shankhavarma were the leaders of three famous schools (of composition or Grammar) in Kannada" ಎಂಬ ವಿವರಣೆ.[೩] ಆದರೆ ಮುಂದಿನ ವೈಯಾಕರಣಿಗಳಾಗಲೀ, ಕವಿಗಳಾಗಲೀ ಈ ಪಂಥಗಳನ್ನು ಉಲ್ಲೇಖಿಸಿಲ್ಲ. ವರ್ಮಪದಾಂತ್ಯದವರೇ ಈ ಪಂಥ ಪ್ರವರ್ತಕರಾಗಿರುವುದು ಅಸಹಜ. ಮೇಲಾಗಿ ಯಾವುದೋ ಅನುಪಲಬ್ಧ ಕೃತಿಯ ಪೀಠಿಕಾ ಪ್ರಕರಣಕ್ಕೆ ಸಂಬಂಧಿಸಿರಬಹುದಾದ ಈ ಪದ್ಯದಲ್ಲಿ ಮೂರು ಜನ ಕವಿಗಳ ಕಾವ್ಯಮಾರ್ಗ (ಅಧ್ವಾನ=ಮಾರ್ಗ)ವನ್ನು ಕೀರ್ತಿಸಿರುವ ಸಂಭವವಿದೆ. ಕಾರಣ ಇವರ ವ್ಯಾಕರಣ ಪಂಥಗಳ ಅಸ್ತಿತ್ವದ ವಿಷಯಕ್ಕೆ ಸಂದೇಹ ತಾಳಬೇಕಾಗುತ್ತದೆ.

---

೧. ವೋಪದೇವಕೃತ ಮುಗ್ಧಬೋಧ.

೨. ಕಾಲೋ, ಪು. ೧೧೬

೩. ಕಾಲೋ (೧೦೩) ಮುನ್ನುಡಿ ಪು. ೪೭-೪೮

ಈ ವ್ಯಾಕರಣ ಪಂಥಗಳನ್ನು ಬಿಟ್ಟರೆ ಗಮನಿಸಬೇಕಾದುವು, ವ್ಯಾಕರಣ ಗ್ರಂಥಗಳು. ಕನ್ನಡ ಸಾಹಿತ್ಯದ ಪ್ರಾಚೀನತೆಯಂತೆ ಕನ್ನಡ ಭಾಷೆಗೆ ಬರೆದ ಪ್ರಾಚೀನ ವ್ಯಾಕರಣಗಳ ವಿಷಯವೂ ರಹಸ್ಯದ ಮಡಿಲಲ್ಲಿ ಅಡಗಿದೆ. ಗಂಗರ ಶಾಸನಗಳು ದುರ್ವಿನೀತನನ್ನು (೬ನೆಯ ಶತಮಾನ) 'ಶಬ್ದಾವತಾರಕಾರ' ಎಂದು ಕರೆದಿವೆ.[೪] ಈ ದುರ್ವಿನೀತನ ಗುರು(?) ಪೂಜ್ಯಪಾದನ ಹೆಸರಿನಲ್ಲೂ ಪಾಣಿನೀಯಕ್ಕೆ ಬರೆದ ಟೀಕೆಯಾದ 'ಶಬ್ದಾವತಾರ' ಹೆಸರಿನ ಗ್ರಂಥದ ಉಲ್ಲೇಖ ಸಿಗುತ್ತದೆ.[೫] ಹೀಗಾಗಿ ಇವು ಒಂದೇ ಹೆಸರಿನ ಬೇರೆ ಬೇರೆ ಕೃತಿಗಳೇ? ಒಬ್ಬನ ಹೆಸರಿನಲ್ಲಿ ಇನ್ನೊಬ್ಬ ಬರೆದನೇ? ಒಬ್ಬನ ಕೃತಿಯನ್ನು ಇನ್ನೊಬ್ಬನು ಅನುವಾದಿಸಿದನೇ ? ಎಂಬ ಸಂದೇಹ ಸರಮಾಲೆ ಎದುರಾಗುತ್ತದೆ. ಪೂಜ್ಯಪಾದನ ಸಂಸ್ಕೃತ ಕೃತಿಯನ್ನು ದುರ್ವಿನೀತನು ಕನ್ನಡಿಸಿದನೆಂಬ[೬] ಡಾ. ಸಾಲೆತೊರೆಯವರ ಮಾತಿಗೆ ಆಧಾರಗಳಿಲ್ಲ. ಹೆಸರೇ ಸೂಚಿಸುವಂತೆ 'ಶಬ್ದಾವತಾರ'[೭]ವೊಂದು ವ್ಯಾಕರಣ ಗ್ರಂಥ. ಆದರೆ ಕನ್ನಡ ಭಾಷೆಯನ್ನು ಕುರಿತು ಬರೆದುದೆ ? ಕನ್ನಡ ಭಾಷೆಯಲ್ಲಿ ಬರೆದುದೆ ? ಸಂದೇಹ.

'ಕವಿರಾಜಮಾರ್ಗ' ಕನ್ನಡದ ಒಂದು ವಿಶಿಷ್ಟ ಕೃತಿ. ೯ನೆಯ ಶತಮಾನದ ಈ ಶಾಸ್ತ್ರಕೃತಿಯಲ್ಲಿ ವ್ಯಾಕರಣವಿಷಯವು ವ್ಯಾಪ್ತಿಯಲ್ಲಿ ಅಲಂಕಾರಕ್ಕೆ ಎರಡನೆಯ ಸ್ಥಾನ ಪಡೆದಿದ್ದರೂ ಸ್ವಂತಿಕೆಯಲ್ಲಿ ಪ್ರಥಮಸ್ಥಾನ ಗಳಿಸಿದೆ. ಇವರ ಮೂರೂ ಪರಿಚ್ಛೇದಗಳಲ್ಲಿ ಕನ್ನಡ ಭಾಷೆಯ ಬೀಜ-ಬೇರುಗಳನ್ನು ಸಂಗ್ರಹಿಸಲಾಗಿದೆ.[೮] ಈ ಭಾಷಿಕ ಬೀಜಗಳನ್ನು ತರುವಾಯದ ನಾಗವರ್ಮ, ಕೇಶಿರಾಜಾದಿಗಳು ಉತ್ತು ಬಿತ್ತಿದರು; ಬಿತ್ತಿ ಬೆಳೆದರು. ಹೀಗಾಗಿ ಕನ್ನಡದ ಪ್ರಾಚೀನತಮ ಅಲಂಕಾರ ಗ್ರಂಥವಾದ ಇದು ವ್ಯಾಕರಣ ಗ್ರಂಥವೂ ಹೌದು.

ಜನ್ನನು[೯] "ರನ್ನಂ ವೈಯಾಕರಣಂ ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ" ಎನ್ನುತ್ತ ರನ್ನನಿಗೆ ವೈಯಾಕರಣತ್ವವನ್ನು ಆರೋಪಿಸುತ್ತಾನೆ. ಅಜಿತಪುರಾಣದ

ಅಭಿಮತ ಜೈನೇಂದ್ರವಚೋ ।
ವಿಭವಂ ಶಬ್ದಾನುಶಾಸನ ಪ್ರಭವವಚೋ ।
ವಿಭವವೊಡನೆಸೆಯೆ ರಂಜಿಪ ।
ನುಭಯವ್ಯಾಕರಣಪರಿಣತಂ ಕವಿರತ್ನಂ ||[೧೦]

---

೪. 'ಶಬ್ದಾವತಾರಕಾರ ದೇವಭಾರತಿನಿಬದ್ಧ ಬೃಹತ್ಕಥಃ ಕಿರಾತಾರ್ಜುನೀಯ ಪಂಚದಶಸರ್ಗ ಟೀಕಾಕಾರ ದುರ್ವಿನೀತನಾಮಮಯಃ -EC.XII ತುಮಕೂರ ೨೩ ಹೆಬ್ಬೂರು ಶಾಸನ. 'ಶಬ್ದಾವತಾರಕಾರೇಣ ದೇವಭಾರತೀನಿಬದ್ಧ ವಡ್ಡಕಥೇನ ಕಿರಾತಾರ್ಜುನೀಯೇ ಪಂಚದಶಸರ್ಗ ಟೀಕಾಕಾರೇಣ' MAR 1912 P.35.

೫. 'ಪಾಣಿನೀಯಕ್ಕೆ ಟೀಕಂ ಬರೆದಂ............ ಪೂಜ್ಯಪಾದವ್ರತೀಂದ್ರ'-ಧರ್ಮಪರೀಕ್ಷೆ. 'ಪಾಣಿನೀಯಸ್ಯ ಭೂಯೋ ನ್ಯಾಸಂ ಶಬ್ದಾವತಾರಕೃತ್ವಾ' EC.VIII ನಗರ ೪೬ ಹುಮ್ಮಚ ಶಾಸನ.

೬. Mediaeval Jainism P.23.

೭. ಈ ಹೆಸರನ್ನು ಹೋಲುವ 'ರೂಪಾವತಾರ' ಎಂಬ ಬೌದ್ಧವ್ಯಾಕರಣವೊಂದು ಸಂಸ್ಕೃತದಲ್ಲಿ ಸುಪ್ರಸಿದ್ಧವಾಗಿದೆ. ಈ ರೂಪಾವತಾರದ ಉಲ್ಲೇಖ ತಾಳಗುಂದ ಶಾಸನ (EC.VII SK 185), ಕೊಂಡಗುಳಿಶಾಸನ (EI XXXVII-IV), ಚೋಳ ವೀರ ಕೇಸರಿವರ್ಮನ ತಮಿಳುಶಾಸನ (EI. XXXVII P 190)ಗಳಲ್ಲಿ ಬರುತ್ತದೆ.

೮. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ, ಪು. ೮೯ ನೋಡಿರಿ.

೯. ಅನಂತನಾಥ ಪುರಾಣ ೧೪-೭೩

೧೦. ಅಜಿತಪುರಾಣಂ ೧೨-೪೩

ಎಂಬ ಪದ್ಯವೂ ಮೇಲಿನ ಅಭಿಪ್ರಾಯನ್ನು ಪೋಷಿಸುತ್ತದೆ. ಹೀಗಾಗಿ 'ರನ್ನ ನಿಘಂಟು' ಬರೆದ ಶಾಸ್ತ್ರಮತಿಯು ಕವಿರನ್ನ ವ್ಯಾಕರಣಶಾಸ್ತ್ರವನ್ನೂ ಬರೆದಿರಬಹುದೆಂಬ ಅನುಮಾನಕ್ಕೆ ಅವಕಾಶವಿದೆ.

ನಯಸೇನನೊಬ್ಬ ಪ್ರಾಚೀನ ವೈಯಾಕರಣಿಯೆಂದು ಕರ್ಣಾಟ ಭಾಷಾಭೂಷಣದ "ದೀರ್ಘೋಕ್ತಿರ್ನಯಸೇನಸ್ಯ"[೧೧] ಎಂಬ ಮಾತಿನಿಂದ ತಿಳಿದುಬರುತ್ತದೆ. 'ನಯಸೇನನ ಮತದಂತೆ (ಸಂಬೋಧನೆಯಲ್ಲಿ) ದೀರ್ಘವುಂಟಾಗುತ್ತದೆ' ಎನ್ನುತ್ತ ಇಲ್ಲಿ 'ದೇವಾ ಬಿನ್ನಪಂ' ಎಂಬ ಉದಾಹರಣೆ ಕೊಡುತ್ತಾನೆ, ನಾಗವರ್ಮ. ಮುಳಗುಂದ ಶಾಸನದಲ್ಲಿ ನಯಸೇನನೆಂಬವನ ವರ್ಣನೆ ಹೀಗೆ ಬರುತ್ತದೆ :

"ನಿನಗೇನೆಂಬೆನೋ ಶಾಕಟಾಯನಮುನೀಶನ್ತಾನೆ ಶಬ್ದಾನುಶಾ ।
ಸನದೊಳ್ ಪಾಣಿನಿ ಪಾಣಿನೀಯದೊಳೆ ಚನ್ದ್ರಂ ಚಾನ್ದ್ರದೊಳ್ ತಜ್ಜ್ನೇ ।
ನ್ದ್ರನೆ ಜೈನೇಂದ್ರದೊಳಾ ಕುಮಾರನೆ ಗಡಂ ಕೌಮಾರದೊಳ್ಪೋಲ್ವರೆ ।
ನ್ತೆನೆ ಪೋಲರ್ನಯಸೇನಪಣ್ಡಿತರೊಳನ್ಯರ್ವ್ಯಾರ್ದ್ಧಿವೀತೋರ್ವ್ವಿಯೊಳ್ ॥[೧೨]

ವ ॥ ಇಂತು ಸಮಸ್ತಶಬ್ದಪಾರಾವಾರಪಾರಗರ್ನಯಸೇನಪಣ್ಡಿತದೇವರ್......" ಈತನು ಧರ್ಮಾಮೃತದ ನಯಸೇನನ ಗುರುವಿನ ಗುರುವಾಗಿರಬೇಕು. ನಾಗವರ್ಮ ಹೇಳುವ ಈತನ ವ್ಯಾಕರಣಗ್ರಂಥ ಇನ್ನೂ ಲಭಿಸಿಲ್ಲ.

ನಾಗವರ್ಮ ಎಂಬ ಹೆಸರು ಕನ್ನಡ ಸಾಹಿತ್ಯದ ಜಟಿಲ ಸಮಸ್ಯೆಗಳಲ್ಲಿ ಒಂದು. ಪಂಡಿತರ ಅಭಿಮತದಂತೆ ವ್ಯಾಕರಣಕ್ಷೇತ್ರಕ್ಕೆ ಸಂಬಂಧಿಸಿದವನು, ಇಮ್ಮಡಿ ನಾಗವರ್ಮ. ಕಾವ್ಯಾವಲೋಕನ, ಕರ್ಣಾಟ ಭಾಷಾಭೂಷಣ, ಅಭಿಧಾನ ವಸ್ತುಕೋಶ, ಹಲಾಯುಧ ಟೀಕೆ, ಛಂದೋವಿಚಿತ (ಅನುಪಲಬ್ಧ) ಹೆಸರಿನಿಂದ ಅಲಂಕಾರ, ವ್ಯಾಕರಣ, ನಿಘಂಟು, ಛಂದಸ್ಸು-ಗ್ರಂಥಗಳನ್ನು ಬರೆದ ಈತನೊಬ್ಬ ಸಮಷ್ಟಿಶಾಸ್ತ್ರಜ್ಞ, ಮಲಯಾಳಂ ಭಾಷೆಯ 'ಲೀಲಾತಿಲಕ'ವೆಂಬ ವ್ಯಾಕರಣದ ಮೇಲೆ ಪ್ರಭಾವ ಬೀರಿದ ಈತನ ಕಾವ್ಯಾವಲೋಕನದ ಮೊದಲ ಪ್ರಕರಣವಾದ 'ಶಬ್ದಸ್ಮೃತಿ' ಮತ್ತು 'ಕರ್ಣಾಟ ಭಾಷಾಭೂಷಣ'ಗಳು ಕನ್ನಡ ಭಾಷೆಯನ್ನು ಕುರಿತ ವ್ಯಾಕರಣಗ್ರಂಥಗಳು. ಇವುಗಳಲ್ಲಿ ಒಂದರ ಭಾಷೆ ಕನ್ನಡ, ಇನ್ನೊಂದರದು ಸಂಸ್ಕೃತ. ಶಬ್ದಸ್ಮೃತಿಯಲ್ಲಿ ಸಂಜ್ಞಾ+ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ-ಎಂದು ಐದು ಪ್ರಕರಣ, ೯೬ ಸೂತ್ರಗಳಿವೆ. ಸೂತ್ರ ಉದಾಹರಣೆ ಕೂಡಿ ಒಟ್ಟು ೪೨೩ ಪದ್ಯಗಳಿವೆ. ಸೂತ್ರಕ್ಕೆ ಟೀಕೆ, ಅನ್ವಯ, ವೃತ್ತಿ ಯಾವುದೂ ಇಲ್ಲ. ಕರ್ಣಾಟ ಭಾಷಾಭೂಷಣದಲ್ಲಿ ಸಂಜ್ಞಾ, ಸಂಧಿ, ವಿಭಕ್ತಿ, ಕಾರಕ, ಯುಷ್ಮದಾದಿ, ಸಮಾಸ, ತದ್ಧಿತ, ಆಖ್ಯಾತ, ಅವ್ಯಯ, ನಿಪಾತ -ಎಂದು ೧೦ ಪ್ರಕರಣ, ೨೮೯ ಸೂತ್ರಗಳು ಇವೆ. ಇದಕ್ಕೆ ನಾಗವರ್ಮನೇ ಬರೆದಿರಬಹುದಾದ ವೃತ್ತಿಯಿದೆ; ಬೇರೊಬ್ಬನು ಬರೆದ ಟೀಕೆಯೂ ಇದೆ.[೧೩] ಆ ಕಾಲದಲ್ಲಿ ಸರ್ವಪ್ರಜಾಮಾನ್ಯವಾಗಿದ್ದ ಸಂಸ್ಕೃತದ ಮೂಲಕ ಕನ್ನಡ ಭಾಷಾತತ್ತ್ವಗಳನ್ನು ಕನ್ನಡೇತರರಿಗೂ ತಿಳಿಸಲು ಮಾಡಿದ ಸಾಹಸ, ಈ ಗ್ರಂಥ.

---

೧೧. ಕರ್ಣಾಟಭಾಷಾಭೂಷಣಂ ಸೂ ೭೪ (೧೮೮೪)

೧೨. ಈ ನಯಸೇನನ ವ್ಯಾಕರಣ ಪಾಂಡಿತ್ಯವನ್ನು ಲಕ್ಷ್ಮೇಶ್ವರ (EI.XVI.P.58) ಮತ್ತು ಮೋಟೆಬೆನ್ನೂರ (ಅಪ್ರಕಟಿತ) ಶಾಸನಗಳೂ ಉದ್ಘೋಷಿಸುತ್ತವೆ.

೧೩ 'ಕರ್ಣಾಟಭಾಷಾಭೂಷಣಂ' ಗ್ರಂಥದ ಆವೃತ್ತಿ-I ೯೦೩ ನೋಡಿರಿ.

'ಕಟಕಾಚಾರ್ಯ'ಯೆಂಬುದು ಇಮ್ಮಡಿ ನಾಗವರ್ಮ, ಕೇಶಿರಾಜ, ಸುಮನೋಬಾಣರಿಗೆ ಇರುವ ಬಿರುದು. ಆದುದರಿಂದ ಇಮ್ಮಡಿ ನಾಗವರ್ಮ, ಕೇಶಿರಾಜರಂತೆ ಸುಮನೋಬಾಣನೂ ವೈಯಾಕರಣನಾಗಿರಬಹುದೆಂದು ಶ್ರೀ ಚೆನ್ನಕೇಶವ ಅಯ್ಯಂಗಾರ್ ಅವರ ಮತ.[೧೪] "ಜನನಾಥಂ ಜಗದೇಕನಲ್ಲಿ...." ಪದ್ಯದಲ್ಲಿ ಬರುವ "ಇದಾನೀಂತನಶರ್ವವರ್ಮ"ಬಿರುದನ್ನು ಸುಮನೋಬಾಣನಿಗೆ ಆರೋಪಿಸಿ, ಈತನು ಒಂದು ವ್ಯಾಕರಣಗ್ರಂಥವನ್ನು ಬರೆದಿರಬೇಕೆಂದು ಶ್ರೀ ಎ. ವೆಂಕಟಸುಬ್ಬಯ್ಯ ಹೇಳುತ್ತಾರೆ.[೧೫] ಇವು ತೀರ ದುರ್ಬಲ ಊಹೆಗಳು.

"ರನ್ನಂ ವೈಯಾಕರಣಂ ಜನ್ನಂ ಮೇಣ್ ಕವಿಗಳೊಳಗೆ ವೈಯಾಕರಣಂ"[೧೬] "ನವವೈಯಾಕರಣಂ"[೧೭] ಎಂದು ಹೇಳಿಕೊಳ್ಳುತ್ತಾನೆ, ಜನ್ನ. ಈ ವೈಯಾಕರಣನ ವ್ಯಾಕರಣ ಕೃತಿಯ ಬಗೆಗೆ ಇನ್ನೂ ಸಂದೇಹ.

ಕವಿ ಸುಮನೋಬಾಣನ ಮಗಳ ಮಗನೂ ಮಲ್ಲಿಕಾರ್ಜುನನ ಮಗನೂ ಆದ ಕೇಶಿರಾಜನ ವ್ಯಾಕರಣ ಗ್ರಂಥ 'ಶಬ್ದಮಣಿದರ್ಪಣಂ'. ನಾಗವರ್ಮನ ಶಬ್ದಸ್ಮೃತಿಯ ವಿಸ್ತೃತರೂಪವೆನ್ನಬಹುದಾದ ಇದು ಈ ವರೆಗೆ ಅನೇಕ ಸಲ ಪ್ರಕಟವಾಗಿದೆ.[೧೮] ಆದರೂ ಪ್ರಮಾಣಭೂತ ಪರಿಷ್ಕರಣದ ಕೊರತೆ ಇಂದಿಗೂ ಉಳಿದಿದೆ.

"ಸಕಲಶಾಬ್ದಿಕಜನ ಚೇತನಶ್ಚಮತ್ಕಾರಿಯಪ್ಪ ಕರ್ಣಾಟಕ ಶಬ್ದಾನುಶಾಸನ"ವನ್ನು ರಚಿಸುತ್ತ, ಕನ್ನಡದ ಭಾಷೆಗೆ ಅನುಶಾಸನಾರ್ಹತೆಯಿದೆಯೆಂದು ಘೋಷಿಸಿದ ಭಟ್ಟಾಕಳಂಕದೇವ, ಸಂಸ್ಕೃತ-ಕನ್ನಡ ಉಭಯ ಭಾಷೆಗಳ ಇದ್ದಾಮ ಪಂಡಿತ. ನಾಲ್ಕು ಪಾದ, ೫೯೨ ಸೂತ್ರಗಳ ಈ ಕನ್ನಡ ವ್ಯಾಕರಣ ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ. ಕರ್ಣಾಟ ಭಾಷಾಭೂಷಣದ ವಿಸ್ತೃತರೂಪವೆನ್ನಬಹುದಾದ ಇದಕ್ಕೆ "ಭಾಷಾಮಂಜರಿ" ಹೆಸರಿನ ವೃತ್ತಿ, 'ಮಂಜರಿ ಮಕರಂದ' ಹೆಸರಿನ ವ್ಯಾಖ್ಯಾನಗಳಿವೆ.

ಹೀಗೆ ಕನ್ನಡದಲ್ಲಿ ವ್ಯಾಕರಣಗ್ರಂಥಗಳ ಸೃಷ್ಟಿಕಾರ್ಯ ಸಾಗಿಬಂದಿದೆ. ಇದರ ಜೊತೆ ವ್ಯಾಕರಣದ ಅಧ್ಯಯನವೂ ಇಲ್ಲಿ ಹೀಗೆ ನಡೆದುಬಂದಿದೆ:

"ಕೌಮಾರ ಪಾಣಿನೀಯ ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನಸ್ಥಾನಮುಂ."[೧೯]

"ಶಬ್ದಶಾಸ್ತ್ರದೆಡೆಯೊಳ್ಭವನಸ್ತುತ ಪೂಜ್ಯಪಾದರೆಂಬುದು"[೨೦]

"ವ್ಯಾಕರಣೇ ಶಾಕಟಾಯನೋ"[೨೧]

"ಅಕ್ಷರ ವ್ಯಾಕರಣ ರೂಪಾವತಾರಮಿಂತಿನಿತುಂ ಪೇರ್ದು (ಳ್ದು) ವಾ(ಬಾ)ಲಶಿಕ್ಷೆಯಂ ಮಾರ್ಪ(ಳ್ಪ) ಉಪಾಧ್ಯಾಯರ್ಗೆ"[೨೨]

---

೧೪. ಶಬ್ದಮಣಿದರ್ಪಣಂ (ಮದ್ರಾಸ ಆವೃತ್ತಿ ೧೯೭೩) ಅವತರಣಿಕೆ ಪು. ೫ ಅ.ಟಿ.

೧೫. ಕೆಲವು ಕನ್ನಡ ಕವಿಗಳ ಜೀವನ ಮತ್ತು ಕಾಲವಿಚಾರ (೧೯೨೭) ೧೩೩.

೧೬. ಅನಂತನಾತ ಪುರಾಣಂ ೧೪೭೭

೧೭. ಯಶೋಧರ ಚರಿತೆ ಸಂಗ್ರಹ ಪು. ೫೮

೧೮. ಈ ಗ್ರಂಥದ 'ನಮ್ಮ ನುಡಿ' ನೋಡಿರಿ.

೧೯. EC. VII ಶಿಕಾರಿಪುರ ೧೦೨ ಬಳ್ಳಿಗಾವಿ ಜಿಲ್ಲೆ (೧೧೬೨)

೨೦. EC. VII ಶಿಕಾರಿಪುರ ೧೨೪ ಬಳ್ಳಿಗಾವಿ (೧೦೭೭)

೨೧. BKI-I-i ಡೋಣಿ (೧೦೯೭)ಧಾರವಾಡ ಜಿಲ್ಲೆ

೨೨. EI. XXXVI-iv ಕೊಂಡಗುಳಿ (೧೧೩೨)ವಿಜಾಪುರ ಜಿಲ್ಲೆ

"ಶಬ್ದ ಶಾಸ್ತ್ರ ರೂಪಾವತಾರನ್ಯಾಸ"[೨೩]

"ಶಬ್ದೇ ಪಾಣಿನಿಪಂಡಿತೋ"[೨೪]

ಈ ಉಲ್ಲೇಖಗಳೊಂದಿಗೆ ಮೇಲೆ ಹೇಳಿದ ನಯಸೇನನನ್ನು ಕುರಿತ ಮುಳಗುಂದ ಶಾಸನವನ್ನೂ ಗಮನಿಸಿದರೆ ಚಾಂದ್ರ, ಜೈನೇಂದ್ರ, ಕೌಮಾರ, ಪಾಣಿನೀಯ, ಶಾಕಟಾಯನ, ಶಬ್ದಾನುಶಾಸನ, ರೂಪಾವತಾರ ವ್ಯಾಕರಣಗಳ ಅಭ್ಯಾಸ ಈ ನಾಡಿನಲ್ಲಿ ನಡೆಯುತ್ತಿದ್ದುದು ಸ್ಪಷ್ಟವಾಗುತ್ತದೆ.

ಇದರ ಫಲವೆನ್ನುವಂತೆ ಮೇಲಿನ ಕೆಲವರು ಕನ್ನಡ ಭಾಷೆಯನ್ನು ಕುರಿತು ಕೃತಿಗಳನ್ನು ರಚಿಸಿದರು. ಇವರಲ್ಲಿ ಮೊದಲಿನಿಂದಲೂ ಅಭ್ಯಾಸಿಗಳನ್ನು 'ದರ್ಪಣ'ದ ಮೂಲಕ ತನ್ನತ್ತ ಆಕರ್ಷಿಸಿದ ವ್ಯಕ್ತಿ, ಕೇಶಿರಾಜ.

೨. ಕೇಶಿರಾಜ

ಕವಿ ಸುಮನೋಬಾಣನ ಯಾ
ದವಕಟಕಾಚಾರ್ಯನೆಸೆವ ದೌಹಿತ್ರನೆನಾಂ
ಕವಿ ಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನ ಸುತನೆಂ ||[೨೫]

ಈ ಪದ್ಯದ ಪ್ರಕಾರ, ಕೇಶಿರಾಜನ ತಂದೆ ಯೋಗಿಪ್ರವರನಾದ ಮಲ್ಲಿಕಾರ್ಜುನ, ತಾಯಿಯ ತಂದೆ ಕವಿಯೂ ಯಾದವ ಕಟಕಾಚಾಕರ್ಯನೂ ಆಗಿದ್ದ ಕವಿಸುಮನೋಬಾಣ.

ಇವರಲ್ಲಿ ಸುಮನೋಬಾಣನನ್ನು ತರುವಾಯದ ಅನೇಕ ಕವಿಗಳು ಸ್ತುತಿಸಿದ್ದಾರೆ, ಕೃತಿಗಳು ಲಭ್ಯವಿಲ್ಲ. "ಇವರಲ್ತೆ ಜಿನೇಂದ್ರಪುರಾಣಕರ್ತೃಗಳ್"[೨೬] ಎನ್ನುತ್ತ ಜನ್ನನು ಸೂಚಿಸುವ ಪುಷ್ಪಬಾಣನು ಸುಮನೋಬಾಣನೇ ಆಗಿದ್ದ ಪಕ್ಷದಲ್ಲಿ ಜೈನಮತೀಯನಾದ ಇವನ ಕೃತಿ, ಒಂದು ಜೈನಪುರಾಣವೆನ್ನಬೇಕಾಗುತ್ತದೆ. ಜಗದ್ದಳ ಸೋಮನಾಥನ 'ಕಲ್ಯಾಣಕಾರರ'ವನ್ನು ತಿದ್ದಿ ಒಪ್ಪಗೊಳಿಸಿದವನೀತ.[೨೭] ಅನಂತನಾಥ ಪುರಾಣದ

ಜನನಾಥಂ ಜಗದೇಕನಲ್ಲಿ ಕಟಕೋಪಾಧ್ಯಾಯನಾ ನಾಗವ ।
ರ್ಮನಿದಾನೀಂತನ ಶರ್ವ್ವವರ್ಮ್ಮನೆ ಗಡಂ ಜನ್ನಂಗುಪಾಧ್ಯಾಯನಿಂ ।
ದು ನೃಸಿಂಹಕ್ಷಿತಿನಾಥನಲ್ಲಿ ಕಟಕೋಪಾಧ್ಯಾಯವಾರೆಂಬ ಸೂ ।
ಕ್ತಿನವೀನೋಜ್ವಳಬಾಣನಪ್ಪ ಸುಮನೋಬಾಣಂ ಕವಿಶ್ರೇಷ್ಠರೊಳ್ ||[೨೮]

---

೨೩. EC. VII ಶಿಕಾರಿಪುರ ೧೩೫ ತಾಳಗುಂದ

೨೪. EC, VII ಶಿಕಾರಿಪುರ ೯೨ ಬಳ್ಳೇಗಾವಿ.

೨೫. ಶಮದ ಸೂ ೨

೨೬. ಅನಂತನಾಥ ಪುರಾಣ ೧೨೫

೨೭. ಕಕಚ (೧೯೬೧) ೩೦೨

೨೮. ಅನಂತನಾಥ ಪುರಾಣ ೧-೨೪.

ಈ ಪದ್ಯಕ್ಕೆ "ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿರುವ ನಾಗವರ್ಮನು ಜನ್ನನ ಗುರು, ಕವಿ ಸುಮನೋಬಾಣನು (ಹೊಯ್ಸಳ) ನರಸಿಂಹನ ಕಟಕೋಪಾಧ್ಯಾಯನು"[೨೯] ಎಂದು ಆರ್. ನರಸಿಂಹಾಚಾರ್ ಹೇಳುವ ಅರ್ಥಕ್ಕಿಂತ "ಅಂದು ಜಗದೇಕಮಲ್ಲನಲ್ಲಿ ಕಟಕೋಪಾಧ್ಯಾಯನಾಗಿದ್ದವನು ನಾಗವರ್ಮ, ಇಂದು ಜನ್ನನಿಗೆ ಉಪಾಧ್ಯಾಯನೂ (ಹೊಯ್ಸಳ) ನರಸಿಂಹನಲ್ಲಿ ಕಟಕೋಪಾಧ್ಯಾಯನೂ ಆಗಿರುವವನು ಸುಮನೋಬಾಣ'[೩೦] ಎಂದು ಎ. ವೆಂಕಟಸುಬ್ಬಯ್ಯನವರು ಹೇಳುವ ಅರ್ಥವೇ ಸಮಂಜಸವೆನಿಸುವುದರಿಂದ, ಜನ್ನನು ನಾಗವರ್ಮನ ಶಿಷ್ಯನಲ್ಲ, ಈ ಸುಮನೋಬಾಣನ ಶಿಷ್ಯನೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಈ ಪ್ರಸಗಂದಲ್ಲಿ ಅಡ್ಡಬರುವ 'ಭಾಳಲೋಚನಂ(=ಜನ್ನ) ಕವಿ ಸುಮನೋಬಾಣನ ಮಗನೆಂದಖಿಳಕ್ಷೋಣಿಗೆ ಪೆಸರಾಯ್ತು'[೩೧] ಎಂಬ ಯಶೋಧರಚರಿತೆಯ ವಾಕ್ಯಕ್ಕೆ ಕವಿಚರಿತೆಕಾರರಂತೆ 'ಜನ್ನ ಸುಮನೋಬಾಣನ ಮಗನು' ಎಂಬ ವಾಚ್ಯಾರ್ಥ ಹಚ್ಚದೆ, ಎ.ವೆಂಕಟಸುಬ್ಬಯ್ಯನವರಂತೆ 'ಜನ್ನನು ಸುಮನೋಬಾಣನ ಶಿಷ್ಯ (=ಮಗ)ನು'[೩೨A] ಎಂಬ ವಿಶೇಷಾರ್ಥವನ್ನೇ ಭಾವಿಸಬೇಕು. ಇಷ್ಟೇ ಏಕೆ,

ವಾಣೀ ಪಾರ್ವತಿ ಮಾಡಿದ ।
ಜಾಣೆಂತುಟೊ ಭಾಳಲೋಚನಂ ಕವಿ ಸುಮನೋ ।
ಬಾಣನ ಮಗನೆಂದಖಿಳ ।
ಕ್ಷೋಣಿಗೆ ಪೆಸರಾಯ್ತು ಕೂರ್ಮೆಗಿದು ಕೌತುಕಮೇ ॥[೩೨]

ಈ ಪದ್ಯದಲ್ಲಿ ಬರುವ 'ಕೂರ್ಮೆಗಿದು ಕೌತುಕಮೇ' ಎಂಬುದನ್ನು ಮಗ ಹೇಳುವುದು ಕೃತಕ, ಶಿಷ್ಯ ಹೇಳುವುದು ಸಹಜವೆನಿಸುವುದರಿಂದ, ಸುಮನೋಬಾಣ - ಜನ್ನ ಗುರುಶಿಷ್ಯರೆಂದೇ ಒಪ್ಪಬೇಕಾಗುತ್ತದೆ.


ಸೂಕ್ತಿಸುಧಾರ್ಣವದ ಮಲ್ಲಿಕಾರ್ಜುನನು 'ಯಾದವಕಟಕಾಚಾರ್ಯನಾದ ಸುಕವಿ, ಸುಮನೋಬಾಣನ ಜಾಮಾತೃ' (=ಮಗಳಗಂಡ)[೩೩] ಎಂದೂ, ಕವಿಸುಮನೋಬಾಣನ ದೌಹಿತ್ರ(=ಮಗಳ ಮಗ)ನಾದ ಶಬ್ದಮಣಿದರ್ಪಣದ ಕೇಶಿರಾಜನು 'ಮಲ್ಲಿಕಾರ್ಜುನ ಸುತಂ' ಎಂದೂ ತಮ್ಮನ್ನು ಕರೆದುಕೊಂಡಿದ್ದಾರೆ. ಸುಮನೋ ಬಾಣನ ಅಳಿಯನಾದ ಮಲ್ಲಿಕಾರ್ಜುನನು ಕೇಶಿರಾಜನ ತಂದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ. ಸೂಕ್ತಿಸುಧಾರ್ಣವದಲ್ಲಿ 'ಮುನಿಗಳ ಸಭೆಯೊಳ್ ಪರಮಮುನಿ'[೩೪] ಎಂದು ಕರೆದುಕೊಂಡ ಮಲ್ಲಿಕಾರ್ಜುನನೂ ಬಸುರಾಳ ಶಾಸನೋಕ್ತ

---

೨೯. ಕಕಚ (೧೯೬೧)೩೦೩
೩೦. ಕೆಲವು ಕನ್ನಡ ಕವಿಗಳ ಜೀವನ ಮತ್ತು ಕಾಲವಿಚಾರ (೧೯೨೭)೧೩೩
೩೧. ಯಶೋಧರ ಚರಿತೆ (ಸಂಗ್ರಹ) ಅನುಬಂಧ -೧. ಪ-೨೧
೩೨. ಕೆಲವು ಕನ್ನಡ ಕವಿಗಳ ಜೀವನ ಮತ್ತು ಕಾಲವಿಚಾರ (೧೯೨೭)೧೩೪
೩೨.A ಯಶೋಧರ ಚರಿತೆ (ಸಂಗ್ರಹ) ಅನುಬಂಧ -೧. ಪ-೨೧
೩೩. ಸೂಕ್ತಿಸುಧಾರ್ಣವದ ಅಶ್ವಾಸಾಂತ್ಯ ಗದ್ಯ
೩೪. ಸೂಕ್ತಿ ಸುಧಾರ್ಣವ ೧-೮

ಧರೆ ಪೊಗೞೆ ಚಿದಾನಂದಂ ।
ವಿರಚಿಸಿದಂ ಸತ್ಕವೀಶ್ವರಂ ಶಾಸನಮಂ ॥
ಪರಮಪ್ರಕಾಶಯೋಗೀ ।
ಶ್ವರ ತನಯಂ ಬ್ರಹ್ಮವಿದ್ಯೆಗಾಸ್ಪದರೂಪಂ ॥[೩೫]

ಎಂಬ ಪದ್ಯದಲ್ಲಿ 'ಬ್ರಹ್ಮವಿದ್ಯೆಗಾಸ್ಪದರೂಪಂ' ಎನಿಸಿಕೊಂಡ ಚಿದಾನಂದನೂ ಶಬ್ದಮಣಿದರ್ಪಣದ 'ಯೋಗಿಪ್ರವರ'ಎನಿಸಿದ ಚಿದಾನಂದ ಮಲ್ಲಿಕಾರ್ಜುನನೂ ಒಬ್ಬನೇ ಎಂದು ಪಂಡಿತರು ಹೇಳುವುದು ನಿಜವೆಂದು ತೋರುತ್ತದೆ. 'ಸರಸ ಕವೀಶ್ವರ ಸಭೆಯೊಳ್ ಸರಸ ಕವೀಶಂ[೩೬] ಎನಿಸಿದ ಈತನ ಸಂಕಲನ ಗ್ರಂಥವಾದ ಸೂಕ್ತಿಸುಧಾರ್ಣವವನ್ನು ಬಿಟ್ಟರೆ, ಬೇರೆ ಗ್ರಂಥಗಳಿದ್ದ ಬಗೆಗೆ ಒಂದೂ ಸೂಚನೆ ಸಿಗುವದಿಲ್ಲ.ಈವರೆಗಿನ ವಿವೇಚನೆಯಿಂದ ವ್ಯಕ್ತವಾಗುವ ವಂಶಚಿತ್ರವಿದು.



ದರ್ಪಣದ ಆರಂಭದಲ್ಲಿ[೩೭] ಸುಮನೋಬಾಣನನ್ನು, ಅಂತ್ಯದಲ್ಲಿ[೩೮] ತನ್ನನ್ನು 'ಯಾದವಕಟಕಾಚಾರ್ಯ'ಎಂದು ಸೂಚಿಸಿದ್ದಾನೆ, ಕೇಶಿರಾಜ. ಹೀಗಾಗಿ ದರ್ಪಣ ರಚನೆಯ ಪ್ರಾರಂಭದಲ್ಲಿ ಇಮ್ಮಡಿ ನರಸಿಂಹನ ಕಟಕಾಚಾರ್ಯನಾಗಿದ್ದ ಸುಮನೋಬಾಣನ ನಿವೃತ್ತಿ ಇಲ್ಲವೆ ಮರಣ ಕಾರಣವಾಗಿ ಕೇಶಿರಾಜನು ಅದೇ ಅರಸನ ಅಥವಾ ಮುಂದಿನ ಅರಸನ ಕಾಲದಲ್ಲಿ ಆ ಅಧಿಕಾರವನ್ನು ವಹಿಸಿಕೊಂಡಿರಬೇಕು.

ಕೇಶಿರಾಜ ಜೈನನೆಂದು ಈಗ ಎಲ್ಲ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಆದರೆ ಕೇಶಿರಾಜನ ಅಲಭ್ಯ ಕೃತಿಗಳಾದ ಚೋಲಪಾಲಕ ಚರಿತೆ, ಕಿರಾತ, ಶ್ರೀಚಿತ್ರಮಾಲೆ, ಸುಭದ್ರಾಹರಣ ಎಂಬ ಹೆಸರುಗಳು ಈ ಹೇಳಿಕೆಯನ್ನು ಬೆಂಬಲಿಸುವುದಿಲ್ಲ. ಶಬ್ದಮಣಿದರ್ಪಣದಲ್ಲಿ ಬರುವ ನಿರಾಕಾರ ರೂಪದ ಸರಸ್ವತೀಸ್ತುತಿ, ಶ್ರೀ ವಿಜಯಾದಿ ಜೈನಕವಿಗಳ ಪ್ರಯೋಗ, ಕಾತಂತ್ರವೆಂಬ ಜೈನವ್ಯಾಕರಣದ ಅನುಸರಣೆ ಇವು ಕೇಶಿರಾಜನ ಜೈನತ್ವವನ್ನು ಪೋಷಿಸುವ ನೇರವಾದ ಆಧಾರಗಳಲ್ಲ.

ನಿಟ್ಟೂರ ನಂಜಯ್ಯನ "ಶಬ್ದಕ್ಕೆ ದ್ರವ್ಯತ್ವಮಂ ಜೈನರ್ ಪೇೞ್ದಪರ್"[೩೯] ಎಂಬುದು ಇತ್ತೀಚಿನವನ ಬಾಹ್ಯಪ್ರಮಾಣವೇ ಹೊರತು, ಆಂತರಿಕ ಪ್ರಮಾಣವಲ್ಲ. ಹೀಗೆ ತಾನು ರಚಿಸಿದ ಕೃತಿಗಳಲ್ಲಿ ಕೇಶಿರಾಜ ಜೈನನಾಗಿ ತೋರುವುದಿಲ್ಲ.

ತಂದೆಯ ಹೆಸರು ಮಲ್ಲಿಕಾರ್ಜುನ. ಅವನ ವಿಶೇಷಣಗಳಾದ 'ಚಿದಾನಂದ, ಬ್ರಹ್ಮವಿದ್ಯೆಗಾಸ್ಪದರೂಪಂ' ಎಂಬಿವು ಜೈನವಲ್ಲದ ಪರಿಭಾಷೆಗಳು. ಮಲ್ಲಿಕಾರ್ಜುನನ ತಂದೆಯ ಹೆಸರು 'ಪರಮಪ್ರಕಾಶಯೋಗೀಶ್ವರ'

೩೫. EC III-i ಮಂಡ್ಯ ೧೬೪ ಬಸುರಾಳ (೧೨೭೩) ಇಲ್ಲಿ 'ತನಯ' ಪದಕ್ಕೆ ಶಿಷ್ಯನೆಂಬ ಅರ್ಥವೂ ಇರಬಹುದು.

೩೬. ಸೂಕ್ತಿಸುದಾರ್ಣವ ೧-೮

೩೭. ೩೮. ಶಮದ ಸೂ ೨ ಮತ್ತು ೨೬೪

೩೯. ಶಮದ ಸೂ ೯. ವಿಚಾರಂ

ಎಂಬುದೂ ಜೈನವಲ್ಲದ ಹೆಸರು. ಹೀಗೆ ಪಿತೃಸಂಬಂಧದ ಹಿನ್ನೆಲೆಯಲ್ಲಿಯೂ ಕೇಶಿರಾಜ ಅಜೈನನಾಗಿಯೇ ತೋರುತ್ತಾನೆ.

ಇಂಥ ಪ್ರಸಂಗದಲ್ಲಿ, ಕೇಶಿರಾಜನ ಜೈನತ್ವವನ್ನು ಬೆಂಬಲಿಸುವವರಿಗೆ ಆತನ ಮಾತೃಸಂಬಂಧವೇ ಬಲವಾದ ಆಧಾರ. ಆದರೆ ಇತ್ತೀಚಿನ ಸಂಶೋಧನೆಯ ಪ್ರಕಾರ ಜೈನಕವಿ ಜನ್ನನು ಕೇಶಿರಾಜನ ಅಜ್ಜನಾದ ಸುಮನೋಬಾಣನ ಮಗನಲ್ಲ, ಶಿಷ್ಯ[೪೦] ಇದರಿಂದ ಜನ್ನ -ಕೇಶಿರಾಜನ ಸೋದರಮಾವ -ಸೋದರಳಿಯ ಸಂಬಂಧವೆ ಸಡಿಲಾಗಿ, ಕೇಶಿರಾಜನ ಜೈನತ್ವದ ಪ್ರಬಲ ಆಧಾರವೇ ಕುಸಿದು ಬಿದ್ದಿದೆ. ಜನ್ನ ಹೇಳುವ 'ಜಿನೇಂದ್ರಪುರಾಣಕರ್ತೃ'ಗಳ ಸಾಲಿನ "ಪುಷ್ಪಬಾಣ"ನು ಕವಿ ಸುಮನೋಬಾಣನಾಗದೆ, ಕವಿ ಮನಸಿಜನಾಗಿದ್ದರೆ ಮಾತೃಸಂಬಂಧದ ಹಿನ್ನೆಲೆಯಲ್ಲಿಯೂ ಕೇಶಿರಾಜನು ಅಜೈನನಾಗಿ ತೋರುತ್ತಾನೆ.

ಹೀಗೆ ಸ್ವಂತಕೃತಿ, ಪಿತೃಪರಂಪರೆ, ಮಾತೃಪರಂಪರೆಗಳ ಬಲದಿಂದ ನಿರ್ಣಯಿಸಲು ಸಾಧ್ಯವಾಗದ ಕೇಶಿರಾಜನ ಮತ, ಜೈನವೋ ಅಜೈನವೋ ಎಂಬುದು ಅನ್ಯ ಆಧಾರಗಳನ್ನು ಬಯಸುತ್ತದೆ.

ಕೇಶಿರಾಜನ ಕಾಲನಿರ್ಣಯ, ಆತನ ಮತನಿರ್ಣಯದಷ್ಟು ಜಟಿಲವಾಗಿಲ್ಲ. ಸುಮನೋಬಾಣನ ಕಿರಿಯ ಸಮಕಾಲೀನರು ಶಿಷ್ಯ ಜನ್ನ ಮತ್ತು ಅಳಿಯ ಮಲ್ಲಿಕಾರ್ಜುನ. ಇವರಿಬ್ಬರ ಕಿರಿಯ ಸಮಕಾಲೀನ ಕೇಶಿರಾಜ. ಇವರು ಪೂರೈಸಿದ ಮಿತಿನಿರ್ದೇಶಿತವಾದ ಕೆಲವು ಘಟನೆಗಳ ಮಗ್ಗುಲಲ್ಲಿ ಹೊಯ್ಸಳರ ವಂಶಚಿತ್ರವನ್ನಿಟ್ಟು ಇವರೆಲ್ಲರ ಕಾಲನಿರ್ಣಯವನ್ನು ಹೀಗೆ ಮಾಡಬಹುದು :

	ನರಸಿಂಹ-೧ (೧೧೫೨-೬೩)
೧೧೯೦-ಜನ್ನನ ಆನೆಕೆರೆ ಶಾಸನ[೪೧]	
೧೧೯೭-ಜನ್ನನ ಅಮೃತಾಪುರ ಶಾಸನ[೪೨]	ಬಲ್ಲಾಳ-೧ (೧೧೭೦-೧೨೨೦)
೧೨೦೯-ಜನ್ನನ ಯಶೋಧರ ಚರಿತೆ	"ಚೋಳರಾಜ್ಯ ಪ್ರತಿಷ್ಠಾಚಾರ್ಯ"[೪೫]
೧೨೩೦-ಜನ್ನನ ಅನಂತನಾಥ ಪುರಾಣ	ನರಸಿಂಹ -೨ (೧೨೨೦-೩೮)
೧೨೩೦-ಮಲ್ಲಿಕಾರ್ಜುನನ ಬಸುರಾಳ ಶಾಸನ[೪೩]	"ಚೋಳಕುಲೈಕ ರಕ್ಷಕ[೪೬]
೧೨೩೭-ಮಲ್ಲಿಕಾರ್ಜುನನ ಬಸುರಾಳ ಶಾಸನ[೪೪]	ಸೋಮೇಶ್ವರ(೧೨೩೩-೬೭)
	ನರಸಿಂಹ-೩ (೧೨೫೪-೧೨೯೭) — ರಾಮನಾಥ (೧೨೫೪-೧೨೯೫)

ಈ ವಿವರಗಳ ಹಿನ್ನೆಲೆಯಲ್ಲಿ ಮೇಲಿನ ಕವಿಗಳ ಕಾಲವನ್ನು ಹೀಗೆ ನಿರ್ಣಯಿಸಬಹುದು.

---

೪೦. ನಾಗವರ್ಮನು ಜನ್ನನ ಗುರುವಲ್ಲ ಡಾ.ಎಂ.ಎಂ.ಕಲಬುರ್ಗಿ (ಕರ್ನಾಟಕ ಭಾರತಿ ೭-೧)

೪೧. EC V-ii ಚೆನ್ನರಾಯಪಟ್ಟಣ ೧೭೯. ಅನೆಕೆರೆ (೧೧೯೦), ೪೨. EC VI ತರಿಕೆರೆ ೪೫. ಅಮೃತಾಪುರ (೧೧೯೭)

೪೩. EC III-i ಮಂಡ್ಯ ೧೨೦ ಬಸುರಾಳ (೧೨೩೫) ೪೪. ECIII-ii ಮಂಡ್ಯ ೧೨೨ ಬಸುರಾಳ (೧೨೩೭)

೪೫, ೪೬. ಕರ್ನಾಟಕ ಪರಂಪರೆ ೧ ಪು. ೪೭೨.

೧. ಕವಿಸುಮನೋಬಾಣ : ಈ ವಿದ್ವತ್ಸಮೂಹದಲ್ಲಿ ಹಿರಿಯನಾದವ ಸುಮನೋಬಾಣ. ಜನ್ನನು ಇಮ್ಮಡಿ ನರಸಿಂಹನ ಆಸ್ಥಾನದಲ್ಲಿ ಅನಂತಪುರಾಣವನ್ನು (೧೨೩೦) ಬರೆಯುತ್ತ, "ಇಂದು ನೃಸಿಂಹಕ್ಷಿತಿಪಾಲನಲ್ಲಿ ಕಟಕೋಪಾಧ್ಯಾಯಂ ...ಸುಮನೋಬಾಣಂ" ಎಂದು ಹೇಳಿದ ವರ್ತಮಾನಸೂಚೀ ಮಾತು, ಸುಮನೋಬಾಣನು ಇಮ್ಮಡಿ ನರಸಿಂಹನ ಆಳಿಕೆಯಲ್ಲಿ ಕಟಕೋಪಾಧ್ಯಾಯನಾಗಿದ್ದನೆಂದು ಧ್ವನಿಸುತ್ತದೆ. ಈ ಹಿಂದಿನ ಬಲ್ಲಾಳನ ಆಳಿಕೆಯಲ್ಲಿ ಶಿಷ್ಯ ಜನ್ನನು ಯಶೋಧರ ಚರಿತೆಯನ್ನು ಪೂರೈಸಿದಂತೆ, ಗುರು ಸುಮನೋಬಾಣನು ಆ ಬಲ್ಲಾಳನ ಆಳಿಕೆಯಲ್ಲಿಯೇ ಕಟಕೋಪಾಧ್ಯಾಯತ್ವವನ್ನು ಪ್ರಾರಂಭಿಸಿರಬೇಕು.

೨. ಜನ್ನ : ಈತನು ೧೧೯೦ರಿಂದ ೧೨೩೦ರ ವರೆಗೆ ಬದುಕಿದ್ದನೆಂದು ನಮಗೆ ನಿಶ್ಚಿತ ಗೊತ್ತಾಗುತ್ತದೆ.[೪೭] ಈ ಸಮಯ ವ್ಯಾಪ್ತಿಯಲ್ಲಿ ಬಲ್ಲಾಳ-೧, ನರಸಿಂಹ-೨ ಈ ಇಬ್ಬರ ಆಳಿಕೆಯನ್ನೂ ಕಂಡನೆಂದು, "ಮನ್ನಿಸಿ ಬಲ್ಲಾಳಂ ಕುಡೆ ಜನ್ನಂ ಕವಿಚಕ್ರವರ್ತಿವೆಸರಂ ಪಡೆದಂ" "ನರಸಿಂಹ ಚೋಳಕುಲೋದ್ಧರಣನ.... ಓಲಗದೊಳೆ, ಕವಿಜನಾರ್ಧನದೇವಂ" ಎಂಬ ಯಶೋಧರಚರಿತೆ ಮತ್ತು ಅನಂತನಾತ ಪುರಾಣಗಳಲ್ಲಿಯ ಮಾತುಗಳು ಸಾಕ್ಷಿ ಹೇಳುತ್ತವೆ.

೩. ಮಲ್ಲಿಕಾರ್ಜುನ : ಸುಮನೋಬಾಣನ ಶಿಷ್ಯ ಜನ್ನ, ಅಳಿಯ ಮಲ್ಲಿಕಾರ್ಜುನ. ಇವರಲ್ಲಿ ಬಹುಶಃ ಜನ್ನನಿಗಿಂತ ಮಲ್ಲಿಕಾರ್ಜುನ ಸ್ವಲ್ಪ ಸಣ್ಣವ. ಜನ್ನನು ಬಲ್ಲಾಳ-೧, ನರಸಿಂಹ-೨ರ ಕಾಲದಲ್ಲಿದ್ದರೆ, ಮಲ್ಲಿಕಾರ್ಜುನನು ನರಸಿಂಹ-೨, ಸೋಮೇಶ್ವರ ಕಾಲದಲ್ಲಿದ್ದನು.

೪. ಕೇಶಿರಾಜ : ಈತನ ಕಾಲನಿರ್ಣಯಕ್ಕೆ ನೇರ ಆಧಾರಗಳೆಂದರೆ ಚೋಟಿಪಾಲಕಚರಿತೆ ಮತ್ತು ತಂದೆ ಮಲ್ಲಿಕಾರ್ಜುನ. ಮೇಲಿನ ವಂಶಾವಳಿಯನ್ನು ನೋಡಿದರೆ ಬಲ್ಲಾಳ-೧, ನರಸಿಂಹ-೨ ಇಬ್ಬರಿಗೂ 'ಚೋಟಿ ಪಾಲ' ಹೆಸರು ಅನ್ವಯವಾಗುವಂತಿದೆ. ತಂದೆಯಾದ ಮಲ್ಲಿಕಾರ್ಜುನನೇ ನರಸಿಂಹ-೨ ಮತ್ತು ಸೋಮೇಶ್ವರರ ಮಧ್ಯೆ ಬದುಕಿರುವುದರಿಂದ ಮಗ ಕೇಶಿರಾಜನ 'ಚೋಟಿಪಾಲಕ ಚರಿತೆ'ಯ ಕಥಾನಾಯಕನು ಒಂದನೆಯ ಬಲ್ಲಾಳನಾಗಿರದೆ ಇಮ್ಮಡಿ ನರಸಿಂಹನೇ ಆಗಿರಬೇಕು. ಮಗ ಕೇಶಿರಾಜ ಇಮ್ಮಡಿ ನರಸಿಂಹನ ಆಳಿಕೆಯಲ್ಲಿ ಚೋಟಿಪಾಲಕ ಚರಿತೆಯನ್ನು ಬರೆದರೆ, ತಂದೆ ಮಲ್ಲಿಕಾರ್ಜುನನು ಮುಂದಿನ ತಲೆಮಾರಿನ ಸೋಮೇಶ್ವರನ ಆಳಿಕೆಯಲ್ಲಿ ಸೂಕ್ತಿಸುಧಾರ್ಣವವನ್ನು ರಚಿಸಿದುದರಲ್ಲಿ ತೋರಬಹುದಾದ ವಿರೋಧಾಭಾಸವನ್ನು ಸೂಕ್ತಿ ಸುಧಾರ್ಣವವು ಮಲ್ಲಿಕಾರ್ಜುನನ ಇಳಿವಯಸ್ಸಿನ ಕೃತಿಯೆಂದು ಭಾವಿಸುವುದರ ಮೂಲಕ ತಪ್ಪಿಸಬಹುದು. ಅಂದರೆ ಮಲ್ಲಿಕಾರ್ಜುನನು ಬದುಕಿನ ಬಹುಭಾಗವನ್ನು ಇಮ್ಮಡಿ ನರಸಿಂಹನಲ್ಲಿ, ಅಲ್ಪಭಾಗವನ್ನು ಸೋಮೇಶ್ವರಲ್ಲಿ ಕಳೆದರೆ, ಕೇಶಿರಾಜನು ಚೋಟಿಪಾಲಕಚರಿತೆ ಮೊದಲಾದವುಗಳನ್ನು ಬರೆಯುತ್ತ ಬದುಕಿನ ಅರ್ಧಭಾಗ ಇಮ್ಮಡಿ ನರಸಿಂಹನಲ್ಲಿ, ಅರ್ಧಭಾಗ ಸೋಮೇಶ್ವರನಲ್ಲಿ ಕಳೆದಿರಬಹುದು. ಬಹುಶಃ ಶಬ್ದಮಣಿದರ್ಪಣವು ನರಸಿಂಹ-೨ ಆಳಿಕೆಯ ಕೊನೆಯಲ್ಲಿ ಹುಟ್ಟಿರದೆ, ಸೋಮೇಶ್ವರನ ಆಳಿಕೆಯ ಆರಂಭದಲ್ಲಿ, ಸೂಕ್ತಿಸುಧಾರ್ಣವದ ಸಮಯಕ್ಕೆ ಹುಟ್ಟಿರುವ ಸಾಧ್ಯತೆಯಿದೆ. ಕಾರಣ ಕೇಶಿರಾಜನ ಕಾಲ ಕ್ರಿ.ಶ. ೧೨೬೦ ಎನ್ನುವ ಆರ್. ನರಸಿಂಹಾಚಾರ್

---

೪೭. ಕ್ರಿ.ಶ.೧೧೯೦ರಲ್ಲಿ ಆನೆಕೆರೆ ಶಾಸನ, ೧೨೩೦ರಲ್ಲಿ ಅನಂತನಾಥ ಪುರಾಣಗಳು ರಚಿಸಲ್ಪಟ್ಟವು.

ಅವರ ಹೇಳಿಕೆಯನ್ನು, ನರಸಿಂಹನ ಆಳಿಕೆಯಲ್ಲಿ ಮಾಡಿದ ಗಣ್ಯ ಕಾವ್ಯವ್ಯವಸಾಯವನ್ನು ಗಮನದಲ್ಲಿಟ್ಟುಕೊಂಡು ಸ್ವಲ್ಪ ಹಿಂದೆ ಸರಿಸುವದು ಸೂಕ್ತವೆನಿಸುತ್ತದೆ.

೩. ಕೇಶಿರಾಜನ ಕೃತಿಗಳು

ದೊರೆವಡೆದ ಚೋಟಿಪಾಲಕ।
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ।
ಹರಣಂ ಪ್ರಬೋಧಚಂದ್ರಂ।
ಕಿರಾತಮಿವು ಕೇಶಿರಾಜಕವಿ ರಚಿತಂಗಳ್ ॥[೪೮]

ಈ ಪದ್ಯದಲ್ಲಿ ಹೇಳಿದ ೫ ಕೃತಿಗಳು ಮತ್ತು ಶಬ್ದಮಣಿದರ್ಪಣ - ಹೀಗೆ ಒಟ್ಟು ೬ ಕೃತಿಗಳು ಕೇಶಿರಾಜನ ಸಾರಸ್ವತ ಸಂಪತ್ತು. ಇವುಗಳಲ್ಲಿ ಶ್ರೀಚಿತ್ರಮಾಲೆ ಮತ್ತು ಕಿರಾತಗಳ ವಸ್ತುರೂಪವಾಗಲೀ, ಕಾವ್ಯರೂಪವಾಗಲೀ, ತಿಳಿದುಬಂದಿಲ್ಲ. ಸುಭದ್ರಾಹರಣಂ, ಪ್ರಬೋಧಚಂದ್ರಂ ನಾಟಕಗಳಾಗಿರಬಹುದೆಂದು ಶ್ರೀ ಗೋವಿಂದ ಪೈಗಳ ಮತ.[೪೯] "ಚೋಟಿಪಾಲಕಚರಿತೆ" ಮಾತ್ರ "ಚೋಟಿಕುಲೈಕರಕ್ಷಕ' ಬಿರುದಿನ ಇಮ್ಮಡಿ ನರಸಿಂಹನನ್ನು ಕುರಿತ ಕೃತಿಯೆಂಬುದು ಒಪ್ಪತಕ್ಕ ಮಾತು. ಸೂಕ್ತಿಸುಧಾರ್ಣವದ ಚಂದ್ರೋದಯ ವರ್ಣನೆಯಲ್ಲಿ ಬರುವ,

ಭಾವಿಪ ಸೇವಿಪಾದರಿಪ ಪೇಳಿಪ ಮೇಳಿಪೊನಲ್ವ ಗೆಲ್ವ ಸೋ
ಲ್ವಾವರಿಪೇವಮಂ ಪಡೆವ ಪೊತ್ತಿಪ ಜೊತ್ತಿಪೆಟಲ್ವ ನೆಲ್ವ ಮಾ।
ಯಾವಿಗಳಪ್ಪ ಮುತ್ತು ಮುದಿಗುಂಟಣಿಯರ್ಕಳ ಕೃತ್ರಿಮಂಗಳಂ।
ಭಾವಕಚಕ್ರವರ್ತಿ ಕವಿಕೇಶವದೇವನೆ ಬಲ್ಲನುರ್ವಿಯೊಳ್ ॥[೫೦]

ಈ ಪದ್ಯ ಮತ್ತು ಇದರ ಎಡಬಲದ ಪದ್ಯಗಳು ಕೇಶಿರಾಜಕೃತ (ಚೋಟಿಪಾಲಕ ಚರಿತೆಯಲ್ಲಿಯ)ವೆಂದು ಶ್ರೀ ಎನ್.ಅನಂತರಂಗಾಚಾರ್ ಊಹಿಸುತ್ತಾರೆ.[೫೧] ಇವರು ಕವಿಮಲ್ಲಕೃತ ಕಾವ್ಯಸಾರವನ್ನು ಕುರಿತು, ಇದರಲ್ಲಿ "ನರಸಿಂಹ ಮತ್ತು ಸೋಮಶೇಖರ, ಚಂದ್ರಶೇಖರ (ಶಶಿಶೇಖರ, ಚಂದ್ರಶೇಖರ)ರ ವಿಷಯವಾಗಿ ಅನೇಕ ಪದ್ಯಗಳು ಸಿಕ್ಕುವುವು. ಸೋಮಶೇಖರ, ಚಂದ್ರಶೇಖರ, ಶಶಿಶೇಖರ ಎಂಬಿವು ಸೋಮೇಶ್ವರನ ಪರ್ಯಾಯ ನಾಮಗಳಾಗಿರಬಹುದು. ಈ ಪದ್ಯಗಳೆಲ್ಲವೂ ಕೇಶಿರಾಜನ ಚೋಟಿಪಾಲಕಚರಿತೆಯಿಂದ ಉದ್ಧೃತವಾಗಿರಬಹುದು."[೫೨] " ಮುಗ್ಧಮೋಹನ, ವಿಕ್ರಮತಿಮಿಂಗಲ, ಛಲದಂಕಮಲ್ಲ, ಅಕಳಂಕಮಲ್ಲ, ಜಗದೇಕಮಲ್ಲ, ಅರುಹಂತದೇವ, ಸುಚರಿತ ಕೋವಿದ ಮೊದಲಾದ ಅಂಕಿತಗಳಿಂದ ಮುಗಿಯುವ ಪದ್ಯಗಳು ಮಧ್ಯೆ ಮಧ್ಯೆ ದೊರೆಯುವವು. ಇವುಗಳಲ್ಲಿ ಕೆಲವಾದರೂ ನರಸಿಂಹ, ಸೋಮೇಶ್ವರರ ಬಿರುದುಗಳಿರಬೇಕು. (ಸೂಕ್ತಿಸುಧಾರ್ಣವದ ೩-೨೬ರಲ್ಲಿ ಮಲ್ಲಿಕಾರ್ಜುನನು ಸೋಮೇಶ್ವರನನ್ನು "ಛಲದಂಕರಾಮ ಸೋಮನೃಪಾಲಂ"[೫೩]

---

೪೮. ಶಮದ ಸೂ.೩೩೯

೪೯.ಕ.ಸಾ.ಪ.ಪತ್ರಿಕೆ ೩೧೨ ಎಕನ್ನಡ ನಾಟಕದ ಹಳಮೆ

೫೦. ಸೂಕ್ತಿಸುಧಾರ್ಣವ, ಪು. ೧೯೯

೫೧. ಸೂಕ್ತಿಸುಧಾರ್ಣವ, ಮುನ್ನುಡಿ XVI

೫೨. ಸೂಕ್ತಿಸುಧಾರ್ಣವ, ಮುನ್ನುಡಿ ಅ.ಟಿ. XIX

೫೩.ಸೂಕ್ತಿಸುಧಾರ್ಣವ, ಮುನ್ನುಡಿ ಅ.ಟಿ.

ಎಂದು ಸಂಬೋಧಿಸಿರುವುದನ್ನು ನೋಡಿ) ಎಂದು ಹೇಳುತ್ತಾರೆ. "ನರಸಿಂಹನ ಅಥವಾ ದಕ್ಷಿಣಚಕ್ರವರ್ತಿಯ ಪ್ರಶಂಸಾರೂಪವಾಗಿರುವ ಸೂಕ್ತಿಸುಧಾರ್ಣವದಲ್ಲಿ ದೊರೆಯುವ ಕೆಲವು ಪದ್ಯಗಳು ಕೇಶಿರಾಜಕೃತ ಚೋಳಪಾಲಕ ಚರಿತೆಗೆ ಸೇರಿದುವಾಗಿರಬೇಕು."[೫೪] "ಸ್ವಕೀಯ ಕಾವ್ಯಗಳಿಂದ ಕೇಶಿರಾಜನು ಪ್ರಯೋಗಗಳನ್ನು ತೆಗೆದುಕೊಂಡಿಲ್ಲವೆಂದೂ ಹೇಳುವ ಹಾಗಿಲ್ಲ. ಆಕರಗಳು ಗೊತ್ತಿಲ್ಲದ ಅವೆಷ್ಟೋ ಪ್ರಯೋಗಗಳಲ್ಲಿ ಕನಿಷ್ಠಪಕ್ಷ ಒಂದೆರಡಾದರೂ ಅವನ ಕಾವ್ಯಗಳಿಂದ ಬಂದಿರಬಹುದು"[೫೫] -ಎಂದು ಡಾ.ಡಿ.ಎಲ್.ಎನ್. ಹೇಳಿಕೆ. ಹೀಗಾಗಿ ಸೂಕ್ತಿಸುಧಾರ್ಣವ ಮತ್ತು ಶಬ್ದಮಣಿದರ್ಪಣಗಳು ಕೇಶಿರಾಜನ ಎಲ್ಲ ಕೃತಿಗಳ, ಕೊನೆಯ ಪಕ್ಷ ಚೋಳಪಾಲಕ ಚರಿತೆಯ ಪದ್ಯಗಳನ್ನು ಬಳಸಿಕೊಂಡಿರುವ ಸಾಧ್ಯತೆಯಿದೆ.

ಕೇಶಿರಾಜನ ಸಾಹಿತ್ಯಸಮುದಾಯದಲ್ಲಿ ಈ ಕಾವ್ಯಕೃತಿಗಳೆಲ್ಲ ಕಳೆದುಹೋಗಿ ಶಾಸ್ತ್ರಕೃತಿಯಾದ ಶಬ್ದಮಣಿದರ್ಪಣ ಮಾತ್ರ ಉಳಿದಿದೆ. ಒಂದರ್ಥದಲ್ಲಿ ಕೇಶಿರಾಜನ ಮಹಾಕಾವ್ಯವೆನಿಸಿದ ಇದು, ಕನ್ನಡ ಸಾಹಿತ್ಯದ ಅಮೂಲ್ಯ ಆಸ್ತಿಗಳಲ್ಲಿ ಒಂದು. ಹಳಗನ್ನಡ ಭಾಷಾವ್ಯಾಸಂಗಕ್ಕೆ ಪ್ರಮಾಣಗ್ರಂಥವೆನಿಸಿ ಕಳೆದ ೭೦೦ ವರ್ಷಗಳಿಂದಲೂ ಕನ್ನಡಿಗರ ಮನವನ್ನು ಬೆಳಗುತ್ತ ಬಂದ ಆಚಾರ್ಯಕೃತಿಯಿದು.

೪. ಶಬ್ದಮಣಿದರ್ಪಣಂ

ನಿತ್ಯಪರಿವರ್ತನೆ ಜೀವಂತ ಭಾಷೆಯ ಆರೋಗ್ಯ ಲಕ್ಷಣ. ಹಿಂದೆ ಹೋದ ಹಳೆಯ ರೂಪಗಳನ್ನು ಜೀರ್ಣಿಸಿಕೊಂಡು, ಮುಂದೆ ಬಂದ ಹೊಸ ರೂಪಗಳನ್ನು ದಕ್ಕಿಸಿಕೊಂಡು ಆರೋಗ್ಯಕವಾಗಿ ಬೆಳೆಯುವಲ್ಲಿ ಅದು ಹಲವು ಅವಸ್ಥೆಗಳನ್ನು ಅನುಭವಿಸುತ್ತದೆ. ಶತಮಾನದಿಂದ ಸಹಸ್ರಮಾನಗಳನ್ನು ದಾಟಿಬಂದ ಕನ್ನಡ ಭಾಷೆಯಲ್ಲಿಯೂ ಹೀಗೆ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ. ಹೊಸಗನ್ನಡ ಎಂಬ ಇಂಥ ನಾಲ್ಕು ಅವಸ್ಥೆಗಳು ಮೈದೋರಿವೆ.

ನಡುಗನ್ನಡದ ನೆರಳಿನಲ್ಲಿ ಬದುಕಿದ ಕೇಶಿರಾಜನು ಹಳಗನ್ನಡ ಅವಸ್ಥೆಗೆ ಬರೆದ ವ್ಯಾಕರಣವಾಗಿದೆ, ಶಬ್ದಮಣಿದರ್ಪಣಂ. ಗಜಗ, ಗುಣನಂದಿ, ಮನಸಿಜ, ಸುಜನೋತ್ತಂಸ ಮೊದಲಾದ ಕವಿಗಳ ಕೃತಿಗಳಲ್ಲಿ ಬಳಕೆಯಾದ ಹಳಗನ್ನಡ ಭಾಷೆಯ ರೂಪ - ರಚನೆಗಳ ಅಧ್ಯಯನವೇ ಅವನ ಗುರಿ. ಹೀಗೆ ಒಂದು ಭಾಷೆಯ ಒಂದು ಅವಸ್ಥೆಯನ್ನು ವಿವರಿಸುವ ಅವನ ವ್ಯಾಕರಣವನ್ನು ಆಧುನಿಕ ಪರಿಭಾಷೆಯಲ್ಲಿ 'ವರ್ಣನಾತ್ಮಕ ಭಾಷಾಶಾಸ್ತ್ರ' (Descriptive linguistics) ವರ್ಗಕ್ಕೆ ಸೇರಿಸಬಹುದಾಗಿದೆ. ಆದರೆ ಕೆಲವು ಸಲ ಪೂರ್ವದ ಹಳಗನ್ನವೂ ಪ್ರವೇಶಿಸಿ (ತೇರಯಿಸಿದ-ತೇರ್ರೈಸಿದಂ, ನುಡಿದಂ-ನುಡಿದೊಂ; ಸೂ. ೧೬೮;ನೀತ್ರಿಳಿದುದು-ನೀರ್ಱಿಳಿದುದು:ಸೂ.೧೯೫),ನಡುಗನ್ನಡವೂ ಎಡೆವಾಯ್ದು ಬಂದು (ಸ್ಫೋಟಕ ಲಂಪಟ ಶಬ್ದಯುಗಂ ಜಟಿಕ್ಕೆ ನೆಜೆ ಸಂದೇಹಂ;ಸೂ, ೩೨, ಬೆರಲ್-ಬೆರಳ್ ಕೊರಲ್ -ಕೊರಳ್ ; ಸೂ. ೩೮; ಕೆಲವು ವಿಕಲ್ಪಾರ್ಥ ಬಿಂದುಗಳ್; ಸೂ. ೪೬;ಪಲಗೆ-ಹಲಗೆ;ಪಂದರ್-ಹಂದರ್; ಸೂ. ೧೭೦) ಇದರ 'ವರ್ಣನಾತ್ಮಕ ಭಾಷಾಶಾಸ್ತ್ರತ್ವ'ಕ್ಕೆ ಅತಿವ್ಯಾಪ್ತಿದೋಷ ಪ್ರಾಪ್ತವಾಗುತ್ತದೆ.

---

೫೪. ಶಮದ(೧೯೭೮) ಪ್ರಸ್ತಾವನೆ ಅ.ಟಿ.

೫೫. ಶಮದ (೧೯೬೮) ಪ್ರಸ್ತಾವನೆ

ಹೀಗೆ ಸೀಮೆ ಮೀರಿ ನೋಡಿದುದರ ಫಲವಾಗಿ ಕಣ್ಣಿಗೆ ಒತ್ತಿದ ಪೂರ್ವದ ಹಳಗನ್ನಡ ರೂಪಗಳನ್ನು 'ವಿಕಲ್ಪ'ವೆಂದು ಮನ್ನಿಸಿರುವ ಈ ಕೃತಿಗೆ ನಡುಗನ್ನಡ ರೂಪಗಳು ಗ್ರಾಮ್ಯಾಗ್ರಾಮ್ಯಸೂತಕ ವಿದೂರವೆಂಬ ಅಂಶ ಹೊಳೆದಿಲ್ಲವೆಂದು ವೇದ್ಯವಾಗುತ್ತದೆ.


ಎರಡನೆಯದಾಗಿ, ಭಾಷೆ ನೀರನಿರ್ಮಲವಾದುದು. ಅಲ್ಲಿ ಸಾಧು ಅಸಾಧು ಎಂಬ ಪರಿಗಣನೆಗೆ ಅವಕಾಶವಿಲ್ಲ. ಹೀಗಾಗಿ ಯಾವುದೇ ಭಾಷೆಯಲ್ಲಿ ಗುಣ-ದೋಷಗಳನ್ನು ಎಣಿಸಿ ಹೇಳುವ ಸಾಹಸಕ್ಕೆ ಹೋಗದೆ, ಇದ್ದುದನ್ನು ಇದ್ದಂತೆ ವರ್ಣಿಸಬೇಕು. ಇದಕ್ಕೆ ವ್ಯತಿರಿಕ್ತವೆನ್ನುವಂತೆ ಕೇಶಿರಾಜ ಕೆಲವು ಸಲ 'ಗ್ರಾಮ್ಯರಜೆಯದುಚ್ಚರಿಸುವರ್', 'ಬಗೆಯದೆ ಸತ್ಯಣಾಭ್ಯವ್ಯಹಾರಿಗಳುಸಿರ್ವರ್' ಎಂದು ಹೇಳುವಲ್ಲಿ ನಿರ್ಣಯಾತ್ಮ ಧ್ವನಿ ಕೇಳಿಸಿ, ವರ್ಣನಾತ್ಮಕತೆಗೆ ಭಂಗ ಬಂದಿದೆ.

ಭಾಷೆಯ ಮೂರು ಪ್ರಮುಖ ಘಟಕಗಳು: ವರ್ಣ, ಪದ* ಮತ್ತು ವಾಕ್ಯ. ಇವುಗಳನ್ನು ಕುರಿತವು ವರ್ಣಶಾಸ್ತ್ರ (Phonemics), ಪದಶಾಸ್ತ್ರ (Morphology) ಮತ್ತು ವಾಕ್ಯಶಾಸ್ತ್ರ (Syntax). ಶಬ್ದಮಣಿದರ್ಪಣ ಆರಂಭದಲ್ಲಿ ವರ್ಣದ ಬಗ್ಗೆ, ಅಲ್ಲಲ್ಲಿ ವಾಕ್ಯದ ಬಗ್ಗೆ ಹಲವು ವಿಚಾರಗಳನ್ನು ಮಂಡಿಸಿದ್ದರೂ ಪ್ರಮುಖವಾಗಿ 'ಪದವಿವೇಚನೆ' ಮಾಡುವುದರಿಂದ, ಅದು ಆಧುನಿಕ ಪರಿಭಾಷೆಯಲ್ಲಿ 'ಪದಶಾಸ್ತ್ರ' (Morphology) ವರ್ಗಕ್ಕೆ ಸೇರುತ್ತದೆ. ಹೀಗಾಗಿ ನಾಮಪದ, ಸಮಾಸಪದ, ತದ್ಧಿತಪದ, ಕ್ರಿಯಾಪದ, ಅವ್ಯಯಪದಗಳ ರೂಪರಚನೆಯ ವಿಚಾರವೇ ದರ್ಪಣದ ಮುಕ್ಕಾಲುಪಾಲು ವ್ಯಾಪಿಸಿದೆ.

ಈ ಕಾರ್ಯದಲ್ಲಿ ತಲೆದೋರಿದ ಗುಣ-ದೋಷಗಳ ಅಭ್ಯಾಸಕ್ಕೆ ನಿಂತರೆ ದರ್ಪಣದಲ್ಲಿ ನೆಲೆನಿಂತ ವಿಷಯವನ್ನು ಮೊದಲು 'ಪ್ರಸ್ತುತ', 'ಅಪ್ರಸ್ತುತ'ವೆಂದು ವಿಂಗಡಿಸಬೇಕಾಗುತ್ತದೆ. ಅಪ್ರಸ್ತುತಕ್ಕೆ ಉದಾ: ಪ್ರಾಸ, ಯತಿ ಇತ್ಯಾದಿ. ಆಮೇಲೆ ಪ್ರಸ್ತುತವನ್ನು 'ದೋಷ', 'ಅದೋಷವೆಂದು ವರ್ಗೀಕರಿಸಬಹುದು. ಅಜ್ಞಾನ, ಅನ್ಯಥಾಜ್ಞಾನ, ಅನವಧಾನಗಳಿಂದುಂಟಾದ ಈ ದೋಷಕ್ಕೆ ಉದಾ : ಅಕಾರಾಂತ ಪ್ರಥಮಾವಿಭಕ್ತಿ ಪ್ರತ್ಯಯ 'ಮ್' ಅಥವಾ ಬಿಂದುವೆಂದು ಸಾಧಿಸಹೊರಟುದು. ನಿಜ ಹೇಳುವುದಾದರೆ ಹಳಗನ್ನಡದಲ್ಲಿ ಅಕಾರಾಂತ ನಾಮಪ್ರಕೃತಿಗಳೇ ಇಲ್ಲ; ಕೇವಲ ವ್ಯಂಜನಾಂತ, ಇಕಾರಾಂತ, ಉಕಾರಾಂತ, ಎಕಾರಾಂತ ನಾಮಪ್ರಕೃತಿಗಳಿವೆ. ಇವುಗಳಲ್ಲಿ ವ್ಯಂಜನಾಂತ ಪ್ರಕೃತಿಯನ್ನು ಮರ+ಮ್ ಎಂದು ಸೀಳಿ ಮರ-ಅಕಾರಾಂತ ಪ್ರಕೃತಿ, ಮ್-ಪ್ರತ್ಯಯಮೆಂದು ಭಾವಿಸಿದುದು ತಪ್ಪು. ಆತ ಪೆಂಪು ಮೊದಲಾದ ರೂಪುಗಳ ಬಗ್ಗೆ ನೀಡಿದ ವಿವರಣೆಗಳೆಲ್ಲ ಇಂಥವು. ಇನ್ನು ಅದೋಷವಾಗಿರುವ ವಿಷಯಸಂಪತ್ತಿಯನ್ನು 'ಕ್ರಮವ್ಯತ್ಯಯ' ಭಾಗ, 'ಕ್ರಮಬದ್ಧ ಭಾಗ'ವೆಂದು ವರ್ಗೀಕರಿಸಬಹುದು. ಕ್ರಮವ್ಯತ್ಯಯಕ್ಕೆ ಅಲ್ಲಲ್ಲಿ ಸೂತ್ರಗಳ ಅನುಪೂರ್ವಿ ಹಿಂದು ಮುಂದಾಗಿರುವುದೇ ಉದಾಹರಣೆಯಾಗಿದೆ. ಈ ವರೆಗಿನ ವಿವೇಚನೆಯನ್ನು ಹೀಗೆ ರೇಖಿಸಬಹುದು.

---

* ಇಲ್ಲಿ ವರ್ಣ, ಪದ-ಈ ಪರಿಭಾಷೆಗಳನ್ನು ಸ್ಥೂಲವಾಗಿ ಧ್ವನಿಮಾ, ಆಕೃತಿಮಾಗಳಿಗೆ ಸಮಾನವೆಂದು ಪರಿಗಣಿಸಿದ್ದೇವೆ.



ಇಲ್ಲಿ ಅಪ್ರಸ್ತುತಭಾಗ, ಪ್ರಸ್ತುತಭಾಗದ ದೋಷಭಾಗ, ಅದೋಷಭಾಗದ ಕ್ರಮವ್ಯತ್ಯಯ ಭಾಗಗಳೆಲ್ಲ ದರ್ಪಣದ ದೋಷಗಳು. ಪ್ರಸ್ತುತಭಾಗ, ಪ್ರಸ್ತುತಭಾಗದ ಅದೋಷಭಾಗ, ಅದೋಷಭಾಗದ ಕ್ರಮಬದ್ಧಭಾಗಗಳೆಲ್ಲ ದರ್ಪಣದ ಗುಣಗಳು. ಹೀಗಾಗಿ ಇದರ 'ಪದಶಾಸ್ತ್ರತ್ವ'ಕ್ಕೂ ಅಲ್ಲಲ್ಲಿ ಚ್ಯುತಿಬಂದಿದೆ.

ಒಟ್ಟಿನಲ್ಲಿ, ಹಿಂದೆ ಹೇಳಿದಂತೆ 'ವರ್ಣನಾತ್ಮಕ ಭಾಷಾಶಾಸ್ತ್ರ'ತ್ವ ಮತ್ತು ಈಗ ಹೇಳಿದಂತೆ 'ಪದಶಾಸ್ತ್ರ'ತ್ವ ಕ್ಷೇತ್ರಗಳಲ್ಲಿ ತೋರಿದ ದೋಷಗಳನ್ನು ಋಜುಗೊಳಿಸಿದಾಗ ಮಾತ್ರ ದರ್ಪಣ ಶಾಸ್ತ್ರಶುದ್ಧವಾಗುತ್ತದೆ. ಈ ಕಾರ್ಯ ಬೇರೊಂದು ಸ್ವತಂತ್ರ ಗ್ರಂಥದ ವಿಷಯ. ಹೀಗಿದ್ದೂ ದರ್ಪಣ ಕನ್ನಡದಲ್ಲಿ ಜನಪ್ರಿಯ, ವಿದ್ವಜ್ಜನ ಪ್ರಿಯವಾಗಲು ಕಾರಣ:

೧. ಸಂಸ್ಕೃತ ಭಾಷೆಯಲ್ಲಿಲ್ಲದುದು.

೨. ತನ್ನ ಪ್ರಾಚೀನ ವೈಯಾಕರಣರು ಗಮನಿಸಿದ ಅಂಶಗಳನ್ನು ವಿವರವಾಗಿ ಚರ್ಚಿಸಿದುದು. ಉದಾ: ಱಟಿ-ಕುಳ-ಕ್ಷಳ, ಶುದ್ಧಗೆ, ಸಮಸಂಸ್ಕೃತ, ಶ್ರುತಿ ಸಹ್ಯಸಂಧಿ, ಇತ್ಯಾದಿ.

೩. ತನ್ನ ಪ್ರಾಚೀನ ವೈಯಾಕರಣರು ಗಮನಿಸದ ಹೊಸ ಅಂಶಗಳನ್ನು ಹೇಳಿದುದು.
ಉದಾ: ಶಿಥಿಲದ್ವಿತ್ವ, ಲಿಂಗವೊಂಬತ್ತು ತೆಱಂ, ಗಮಕಸಮಾಸ, ಸತಿ ಸಪ್ತಮಿ, ಧಾತು ಪ್ರಕರಣ, ತದ್ಭವ ಪ್ರಕರಣ ಇತ್ಯಾದಿ.

ಈ ಕಾರಣದಿಂದಾಗಿ ದರ್ಪಣದ ಕ್ಷಿತಿಜ ವಿಸ್ತಾರಗೊಂಡು, ಬಹುಜನರನ್ನು ತನ್ನತ್ತ ಆಕರ್ಷಿಸಲು ಅದಕ್ಕೆ ಸಾಧ್ಯವಾಯಿತು.

❖❖

*

ಪರಿವಿಡಿ

*

ಪೀಠಿಕೆ

೧

ಶ್ರೀ ವಾಗ್ದೇವಿಗೆ ಶಬ್ದದಿ
ನಾವಾವಿಂದ್ರಿಯದ ವಿಷಯಮಂ ಶ್ರೋತ್ರದೊಳು
ದ್ಭಾವಿಪ ನಿರ್ಮಳಮೂರ್ತಿಗಿ
ಳಾವಂದ್ಯೆಗೆ ಶಾಸ್ತ್ರಮುಖದೊಳವನತನಪ್ಪೆಂ

ಐದೂ ಇಂದ್ರಿಯಗಳ ವಿಷಯಗಳನ್ನು ಶ್ರವಣೇಂದ್ರಿಯದ ಮೂಲಕ ಶಬ್ದದಿಂದ ಅನುಭವ ವೇದ್ಯಗೊಳಿಸುವ, ನಿರ್ಮಳಮೂರ್ತಿಯಾದ, ಇಳಾವಂದ್ಯೆಯಾದ ಸರಸ್ವತಿಗೆ ಶಾಸ್ತ್ರ ಪ್ರಾರಂಭದಲ್ಲಿ ನಮಸ್ಕರಿಸುತ್ತೇನೆ.

೨

ಕವಿ ಸುಮನೋಬಾಣನ ಯಾ
ದವಕಟಚಾರ್ಯನೆಸೆವ ದೌಹಿತ್ರನೆನಾಂ
ಕವಿ ಕೇಶವನೆಂ ಯೋಗಿ
ಪ್ರವರ ಚಿದಾನಂದ ಮಲ್ಲಿಕಾರ್ಜುನಸುತನೆಂ

ಕವಿ ಕೇಶವನಾದ ನಾನು ಯಾದವಕಟಕಾಚಾರ್ಯ ಕವಿ ಸುಮನೋಬಾಣನ ಸುವಿಖ್ಯಾತ ಮೊಮ್ಮಗನು; ಯೋಗಿಪ್ರವರ ಚಿದಾನಂದ ಮಲ್ಲಿಕಾರ್ಜುನನ ಮಗನು.

೩

ಗುಣಮಮರೆ ಶಬ್ದಮಣಿದ
ರ್ಪಣ ನಾಮವನಿಟ್ಟು, ನೆಱೆಯೆ ಕರ್ಣಾಟಕ ಲ
ಕ್ಷಣ ಶಬ್ದಶಾಸ್ತ್ರಮಂ ಲಾ
ಕ್ಷಣಿಕರ್ ಪೇೞೆಂದು ಬೆಸಸೆ ಬಗೆವುಗೆ ಪೇೞ್ವೆಂ

(ಶಬ್ದಸಾಮರ್ಥ್ಯವೆಂಬ) ಗುಣವು ಹೊಂದಿಕೊಳ್ಳುವಂತೆ, ಶಬ್ದಮಣಿದರ್ಪಣವೆಂಬ ಹೆಸರನ್ನಿಟ್ಟು, ಕನ್ನಡ ಶಬ್ದಶಾಸ್ತ್ರವನ್ನು ಪರಿಪೂರ್ಣವಾಗಿ ನಿರೂಪಿಸು - ಎಂದು ಲಾಕ್ಷಣಿಕರು ಆಜ್ಞಾಪಿಸಲಾಗಿ ಮನಂಬುಗುವಂತೆ ಹೇಳುತ್ತೇನೆ.

೪

ಅವಧರಿಪುದು ವಿಬುಧರ್, ದೋ
ಷವಿದಱೊಳೇನಾನುಮುಳ್ಳೊಡಂ ಪ್ರಿಯದಿಂ ತಿ

ರ್ಪವುದು, ಗುಣಯುಕ್ತಮುಂ ದೋ
ಷವಿದೂರಮುಮಾಗೆ ಮೆಚ್ಚಿ ಕೈಕೊಳ್ವುದಿದಂ

ವಿದ್ವಾಂಸರು ಗಮನಿಸಬೇಕು; ಇದರಲ್ಲಿ ದೋಷವೇನಾದರೂ ಇದ್ದರೆ ಪ್ರೀತಿಯಿಂದ ತಿದ್ದಬೇಕು; ಗುಣಯುಕ್ತವೂ ದೋಷಮುಕ್ತವೂ ಆಗಲು ಇದನ್ನು ಮೆಚ್ಚಿ ಅಂಗೀಕರಿಸಬೇಕು.

೫

ಗಜಗನ ಗುಣನಂದಿಯ ಮನ
ಸಿಜನಸಗನ ಚಂದ್ರಭಟ್ಟ ಗುಣವರ್ಮ ಶ್ರೀ
ವಿಜಯರ ಪೊನ್ನನ ಪಂಪನ
ಸುಜನೋತ್ತಂಸನ ಸುಮಾರ್ಗಮಿದಱೊಳೆ ಲಕ್ಷ್ಯಂ

ಗಜಗ, ಗುಣನಂದಿ, ಮನಸಿಜ, ಅಸಗ, ಚಂದ್ರಭಟ್ಟ, ಗುಣವರ್ಮ, ಶ್ರೀವಿಜಯ, ಪೊನ್ನ, ಪಂಪ, ಸುಜನೋತ್ತಂಸ (ಮೊದಲಾದವ)ರ ಉದಾತ್ತ ಕಾವ್ಯಮಾರ್ಗ ಇದರಲ್ಲಿ ಲಕ್ಷ್ಯವೆನಿಸಿದೆ.

೬

ಪ್ರಾಸಚ್ಛಂದೋನ್ವಯ ವಿ
ನ್ಯಾಸದಿನಂತಿಂತು ಶಬ್ದಮಿರ್ಕುಂ, ವೃತ್ತಿ
ವ್ಯಾಸಂ ತದ್ವ್ಯಾಕುಲಮೆಂ
ದಾ ಸೂತ್ರಕ್ಕರ್ಥವೃತ್ತಿ ವರ್ತಿಸೆ ಪೇೞ್ದೆಂ

ಪ್ರಾಸ, ಛಂದ, ಅನ್ವಯಗಳ ವಿನ್ಯಾಸದಿಂದ (ಸೂತ್ರದ) ಶಬ್ದಗಳು ಹಿಂದುಮುಂದಾಗಿರುತ್ತವೆ. (ಇದರಿಂದ) ಅರ್ಥವಿಸ್ತಾರವು ಸಂದಿಗ್ಧವೆನಿಸಬಹುದೆಂದು ಸೂತ್ರಗಳಿಗೆ 'ಅರ್ಥವೃತ್ತಿ'*ಯನ್ನು ಬರೆದೆನು.

೭

ಜನಮಂಗೀಕರಿಪುದು ನೆ
ಟ್ಟನೆ ಸಂಬಂಧಾಭಿಧೇಯ ಶಕ್ಯಾನುಷ್ಠಾ
ನ ನಿಜೇಷ್ಟಸಿದ್ಧಿಗಳ್ ನೆಲ
ಸಿ ನಿಂದ ಕಾರಣದೆ ಶಬ್ದಮಣಿದರ್ಪಣಮಂ

ಸಂಬಂಧ, ಅಭಿಧೇಯ, ಶಕ್ಯಾನುಷ್ಠಾನ, ನಿಜೇಷ್ಟಸಿದ್ಧಿಗಳು ಸ್ಫುಟವಾಗಿ ನೆಲೆಗೊಂಡ ಕಾರಣ, ಶಬ್ದಮಣಿದರ್ಪಣವನ್ನು ಜನರು ಸ್ವೀಕರಿಸಬೇಕು.

೮

ಕ್ರಮದಿಂದೆ ಸಂಧಿ ನಾಮಂ
ಸಮಾಸಮಾ ತದ್ಧಿತಂ ಪೊದಳ್ದಾಖ್ಯಾತಂ
ಸಮುದಿತ ಧಾತುವಪಭ್ರಂ
ಶಮವ್ಯಯಂ ಸಂಧಿ ಶಬ್ದಮಣಿದರ್ಪಣದೊಳ್

---

* ಶಬ್ದಮಣಿದರ್ಪಣಕ್ಕೆ ಅರ್ಥವೃತ್ತಿ, ಅನ್ವಯವೃತ್ತಿ, ವ್ಯಾಖ್ಯಾನವೃತ್ತಿ, ಪ್ರಯೋಗಮಿಶ್ರವೃತ್ತಿ-ಹೀಗೆ ನಾಲ್ಕು ಬಗೆಯ ವೃತ್ತಿಗಳು ಸಿಗುತ್ತವೆ. ಇವುಗಳಲ್ಲಿ ಅನ್ವಯವೃತ್ತಿ ಬರೆದವನು ಲಿಂಗಣಾರಾಧ್ಯ. ಪ್ರಸ್ತುತ ಅರ್ಥವೃತ್ತಿ ಬರೆದವನು ಬಹುಶಃ ಕೇಶಿರಾಜ. ಈ ಬಗ್ಗೆ ನೋಡಿರಿ (ಮಾರ್ಗ II, ಶಬ್ದಮಣಿದರ್ಪಣ : ಅರ್ಥವೃತ್ತಿ-ಅನ್ವಯ ವೃತ್ತಿ).

ಶಬ್ದಮಣಿದರ್ಪಣದಲ್ಲಿ ಕ್ರಮವಾಗಿ ಸಂಧಿ, ನಾಮ, ಸಮಾಸ, ತದ್ಧಿತ, ಆಖ್ಯಾತ, ಧಾತು, ಅಪಭ್ರಂಶ, ಅವ್ಯಯ ಎಂಬ ಪ್ರಕರಣಗಳಿವೆ.

೯

ಅನುಕೂಲಪವನನಿಂ ಜೀ
ವನಿಷ್ಟದಿಂ ನಾಭಿಮೂಲದೊಳ್ ಕಹಳೆಯ ಪಾಂ
ಗಿನವೊಲ್ ಶಬ್ದದ್ರವ್ಯಂ
ಜನಿಯಿಸುಗುಂ ಶ್ವೇತಮದಱ ಕಾರ್ಯಂ ಶಬ್ದಂ

ಅನುಕೂಲವಾದ ಉಸಿರಿನಿಂದ, ಜೀವನ ಇಷ್ಟದಿಂದ, ನಾಭಿಮೂಲದಲ್ಲಿ ಕಹಳೆಯಂತೆ (ವ್ಯವಹರಿಸುವ) ಧವಲವರ್ಣದ ಶಬ್ದದ್ರವ್ಯ ಹುಟ್ಟುತ್ತದೆ. ಅದರ ಕಾರ್ಯ ಶಬ್ದ.

೧೦

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವಾ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ

ವ್ಯಾಕರಣದಿಂದ ಪದಸಿದ್ಧಿ; ಆ ಪದಸಿದ್ಧಿಯಿಂದ ಅರ್ಥಜ್ಞಾನ; ಆ ಅರ್ಥಜ್ಞಾನದಿಂದ ತತ್ವಜ್ಞಾನ; ಆ ತತ್ವಜ್ಞಾನದಿಂದ ಮುಕ್ತಿ. ಇದೇ ವಿದ್ವಾಂಸರಿಗೆ ಫಲ.

❖❖

ಸಂಧಿ ಪ್ರಕರಣ

ಸಂಜ್ಞಾ ಸ್ವರೂಪ :

೧೧

ಆರಯೆ ತಚ್ಛಾಸ್ತ್ರವ್ಯವ
ಹಾರಜ್ಞಾನಾರ್ಥಮಾಗಿ ಪೇಟಲ್ಪಡೆಗುಂ
ಧೀರರಿನಕ್ಷರಸಂಜ್ಞಾ
ಕಾರಂ ವ್ಯಾಕರಣದಾದಿಯೊಳ್ ಪರಿವಿಡಿಯಿಂ

ಅಕ್ಷರಸಂಜ್ಞಾಸ್ವರೂಪವು ವ್ಯಾಕರಣದ ಆದಿಯಲ್ಲಿ ಆ ಶಾಸ್ತ್ರದ ವ್ಯವಹಾರಜ್ಞಾನಾರ್ಥವಾಗಿ ವಿದ್ವಾಂಸರಿಂದ ಕ್ರಮವಾಗಿ ಹೇಳಲ್ಪಡುತ್ತದೆ.

೧೨

ಅಕ್ಕರಮುಂ ವರ್ಣಮುಮೆಂ
ದಕ್ಕುಂ ಶುದ್ಧಾಕ್ಷರಕ್ಕೆ ನಾಮಂ, ಬರೆಪಂ
ಬೊಕ್ಕುಚ್ಚರಿಸಲ್ಬಾರದು
ವಕ್ಕರಮಲ್ತವು ಘನಸ್ವನಾದಿ ಧ್ವನಿಗಳ್

ಶುದ್ಧಾಕ್ಷರಕ್ಕೆ ಅಕ್ಷರ, ವರ್ಣ-ಎಂದು (ಪರ್ಯಾಯ) ನಾಮಗಳುಂಟು. ಬರೆಯಲೂ ಉಚ್ಚರಿಸಲೂ ಬಾರದುವು ಅಕ್ಷರಗಳಲ್ಲ; ಅವು ಮೊಳಗು ಮೊದಲಾದ ಧ್ವನಿಗಳು.

೧೩

ವ್ಯವಹರಿಪುವೆರಡು ರೂಪಿಂ
ದವಕ್ಕರಂ, ಶ್ರಾವಣಂ ಸ್ವನೈಕಾಕಾರಂ,
ವಿವಿಧಾಕಾರಂ ಲಿಪಿಭೇ
ದ ವೃತ್ತಿಯಿಂ ಚಾಕ್ಷುಷಂ, ಪುರಾತನಮತದಿಂ

ಪುರಾತನರ ಮತದಂತೆ ಅಕ್ಷರಗಳು ಎರಡು ರೂಪಗಳಲ್ಲಿ ವ್ಯವಹರಿಸುತ್ತವೆ. ಧ್ವನಿಯಲ್ಲಿ ಏಕಾಕಾರವಾಗಿರುವುದು 'ಶ್ರಾವಣ'; ಲಿಪಿಭೇದದಿಂದ ವಿವಿಧಾಕಾರವಾಗಿರುವುದು 'ಚಾಕ್ಷುಷ'.[೧]

---

೧. ವಿಚಾರ : ಓ ओ O ಇವು ಲಿಪಿಭೇದದಿಂದಾದ ವಿವಿಧಾಕಾರದ 'ಚಾಕ್ಷುಷ'ಗಳು. ಆದರೆ ಇವುಗಳ ಶ್ರಾವಣರೂಪ (ವಾದ ಧ್ವನಿ) ಒಂದೇ.

೧೪

ವರ್ಣಂಗಳ ಪಾಠಕ್ರಮ

ಮರ್ಣವವೃತ ಧಾತ್ರಿಯೊಳ್ ಪ್ರಸಿದ್ಧಂ ನಿಜದಿಂ,
ವರ್ಣಂಗಳಕಾರಾದ್ಯಾ
ಪೂರ್ಣತೆಯಂ ಪಡೆವುವಾ ಳಕಾರಂಬರೆಗಂ

ಅಕ್ಷರಗಳನ್ನು ಓದುವ ಅನುಕ್ರಮ ಈ ಲೋಕದಲ್ಲಿ ಸಹಜ ಪ್ರಸಿದ್ಧವಾದುದು. ಆ ಅಕ್ಷರಗಳು (ಸಂಸ್ಕೃತದಲ್ಲಿ) ಅಕಾರದಿಂದ ಳಕಾರದ ವರೆಗೆ (ಕೆಳಗಿನಂತೆ) ಪರಿಪೂರ್ಣತೆಯನ್ನು ಪಡೆಯುತ್ತವೆ.

ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ
ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್
ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್
ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ (=ಕ್ಷಳ)

೧೫

ಕುಳದ ನಿಯಾಮದೊಳೆಂದುಂ
ಕ್ಷಳಕ್ಕೆ ಲಾಕ್ಷರವಿಕಲ್ಪಮಿಲ್ಲ, ವಿಕಲ್ಪಂ
ಕ್ಷಳನಲ್ಲದಿಲ್ಲ ಸಂಸ್ಕೃತ
ದೊಳಾ ಲಕಾರಕ್ಕೆ, ಪೇೞ್ದೆನದಱಿಂ ಕ್ಷಳನಂ

ಕುಳ ಪ್ರಾಸದಲ್ಲಿ (ಬಳಸಬಹುದಾದ) ಕ್ಷಳಕ್ಕೆ (ಪ್ರತಿಯಾಗಿ) ಲ ಅಕ್ಷರ ವಿಕಲ್ಪವಾಗಿಯೂ ಬರಬಾರದು. ಸಂಸ್ಕೃತಭಾಷೆಯಲ್ಲಿ ಲಕಾರಕ್ಕೆ ವಿಕಲ್ಪವಾಗಿ ಕ್ಷಳವಿದೆ. ಆದುದರಿಂದ (ಮೇಲಿನ ಸಂಸ್ಕೃತ ವರ್ಣಮಾಲೆಯಲ್ಲಿ) ಕ್ಷಳ (ಎಂಬ ಹೊಸ ವರ್ಣ)ವನ್ನು ಹೇಳಿದ್ದೇನೆ.

ಕುಳಕ್ಷಳ ಪ್ರಾಸಕ್ಕೆ : ಕಿಳಿಱಿ ಹಯಂಗಳ್ ಗರ್ಜಿಸೆ
ಜಳದ[1] ನಿಭಂಗಳ್.......

ಸ್ವರ ವಿಚಾರ :

೧೬

ತರದಿನಕಾರಂ ಮೊದಲಾ
ಗಿರೆ ಪದಿನಾಲ್ಕುಂ ಸ್ವರಂಗಳಾದಿಯ ಪತ್ತ
ಕ್ಕರಮುಂ ಸಮಾನಮೆನಿಸುಗು
ಮೆರಡೆರಡವಱೊಳ್ ಸವರ್ಣಮೆಂತೋದಿದೊಡಂ

---

೧. ಇಲ್ಲಿ ಜಳವೆಂಬುದು ಸಂಸ್ಕೃತದ ಕ್ಷಳಯುಕ್ತಪದ. ಇದಕ್ಕೆ ಮೂಲವಾದುದು ಸಂಸ್ಕೃತದ ಜಲವೆಂಬ ಪದ.

ಅಕಾರ ಮೊದಲುಗೊಂಡ ೧೪ ಅಕ್ಷರಗಳು 'ಸ್ವರ'ಗಳು. (ಈ ಸ್ವರಗಳ) ಮೊದಲಿನ ೧೦ ಅಕ್ಷರಗಳು 'ಸಮಾನ'ಗಳು. ಈ ಸಮಾನಗಳಲ್ಲಿ ಎರಡೆರಡು ಅಕ್ಷರಗಳು ಯಾವುದೇ ಕ್ರಮ (ಅ ಆ - ಅನುಲೋಮಕ್ರಮ, ಆ ಅ - ವಿಲೋಮಕ್ರಮ)ದಲ್ಲಿದ್ದರೂ (ಅವುಗಳನ್ನು) 'ಸವರ್ಣ'ವೆಂದು ಕರೆಯುತ್ತಾರೆ.

ಸ್ವರಗಳು	:	ಅ ಆ ಇ ಈ ಉ ಊ ಋ ೠ ಌ ೡ ಏ ಐ ಓ ಔ =೧೪
ಸಮಾನಗಳು	:	ಅ ಆ ಇ ಈ ಉ ಊ ಋ ೠ ಌ ೡ =೧೦
ಸವರ್ಣಗಳು	:	ಅನುಲೋಮ - ಅ ಆ, ಇ ಈ, ಉ ಊ, ಋ ೠ, ಌ ೡ
		ವಿಲೋಮ - ಆ ಅ, ಈ ಇ, ಊ ಉ, ೠ ಋ, ೡ ಌ

೧೭

ಕ್ರಮದಿಂ ಹ್ರಸ್ವಕ್ಕಂ ಹ್ರ
ಸ್ವಮೊದವೆ ದೀರ್ಘಕ್ಕೆ ದೀರ್ಘಮೊದವೆ ತಗುಳ್ದುಂ
ಸಮಸಂದಾ ಯುಗಳಂಗಳೊ
ಳಮಳಿನಮಾಗೆಲ್ಲಿಯುಂ ಸವರ್ಣವಿಧಾನಂ

ಆ ಜೋಡಿಗಳಲ್ಲಿ ಕ್ರಮವಾಗಿ ಹ್ರಸ್ವಕ್ಕೆ ಹ್ರಸ್ವ, ದೀರ್ಘಕ್ಕೆ ದೀರ್ಘ ಪರವಾದರೆ (ಅವೂ) 'ಸವರ್ಣ' ಎನಿಸಿಕೊಳ್ಳುತ್ತವೆ.

ಹ್ರಸ್ವಕ್ಕೆ ಹ್ರಸ್ವ : ಅ ಅ ....
ದೀರ್ಘಕ್ಕೆ ದೀರ್ಘ : ಆ ಆ .....

೧೮

ಸವನಿಸಿದೆ ಏ ಒ ಓ ಯೆಂ
ಬಿವು ಕನ್ನಡದೊಳ್ ಸ್ವಭಾವದಿಂದೊಳವು, ಸವ
ರ್ಣವುಮಪ್ಪುವು, ವರ್ಣಾಂಕಂ
ಸವರ್ಣಸಂಜ್ಞೆಯೊಳಮೊದವುಗುಂ ವ್ಯಾಕೃತಿಯೊಳ್

ಎ ಏ, ಒ ಓ ಎಂಬಿವು ಕನ್ನಡಕ್ಕೆ ಸಹಜವಾದುವು. (ಇವು 'ಸವರ್ಣ'ವೂ ಆಗಿವೆ. ವ್ಯಾಕರಣದ (ಪರಿಭಾಷೆಯ)ಲ್ಲಿ (ಈ) 'ಸವರ್ಣ' ಎಂಬುದಕ್ಕೆ (ಪರ್ಯಾಯವಾಗಿ) 'ವರ್ಣ'* ಎಂಬುದೂ ಬಳಕೆಯಾಗುತ್ತದೆ.

ಕನ್ನಡ ಎ ಕಾರಕ್ಕೆ : ಎತ್ತುಂಗೋಲುಂ ವಿರಹಿಗೆ
ಚಿತ್ತಭವಂ ....
ಕನ್ನಡ ಏ ಕಾರಕ್ಕೆ : ಏಟುಂ ಬೆಸನಮುಮಂ ನರಪಾಲಕರುಟಿಗೆ....
ಕನ್ನಡ ಒ ಕಾರಕ್ಕೆ : ಒತ್ತರಮೊತ್ತಿದಂತೆ ಬೆಳಿಗಾಗೆ ಕೃಪಾದಿಗಳ್.....
ಕನ್ನಡ ಓ ಕಾರಕ್ಕೆ : ಓಸರಿಸಿದ ಜವನಿಕೆಯೊಡ
ನೋಸರಿಸಿದನಿಸಲೆ ಕಂತು ....

* ವಿಚಾರ : ಅ ಆ, ಇ ಈ ಮೊದಲಾದ 'ಸವರ್ಣ'ಗಳಿಗೆ ಕ್ರಮವಾಗಿ ಅವರ್ಣ, ಇವರ್ಣಗಳೆಂದು ಕರೆಯುವ ರೂಢಿಯಿದೆ. ಅಂದರೆ ಅವರ್ಣ = ಅ ಆ, ಇವರ್ಣ = ಇ ಈ.

೧೯

ವಿದಿತ ಸಮಾನಂಗಳ ಪೂ
ರ್ವದಕ್ಕರಂ ಹ್ರಸ್ವಮದಱ ಪರದಕ್ಕರಮಂ
ತದು ದೀರ್ಘಮವರ್ಣಂ ಪಿಂ
ಗಿದಾ ಸ್ವರಂ ನಾಮಿಯೆಂದು ಪೇೞಲ್ಪಡೆಗುಂ

ಸಮಾನಸ್ವರಗಳ (ಪ್ರತಿಯೊಂದು ಜೋಡಿಯ) ಮೊದಲ ಅಕ್ಷರ ಹ್ರಸ್ವ. ಅದರ ಮುಂದಿನ ಅಕ್ಷರ ದೀರ್ಘ. ಅವರ್ಣ(=ಅ ಆ)ವನ್ನು ಕಳೆದುಳಿದ ಸ್ವರಗಳು 'ನಾಮಿ'ಯೆಂದು ಹೇಳಲ್ಪಡುತ್ತವೆ.

ಹ್ರಸ್ವಸ್ವರಗಳು : ಅ ಇ ಉ ಋ ಌ ಎ ಒ
ದೀರ್ಘಸ್ವರಗಳು : ಆ ಈ ಊ ೠ ೡ ಏ ಓ
ನಾಮಿ ಸ್ವರಗಳು : ಇ ಈ ಉ ಊ ಋ ೠ ಌ ೡ ಏ ಐ ಓ ಔ

೨೦

ಕ್ರಮದೆ ಗುರು ದೀರ್ಘಮೇಕಾ
ರಮುಖ್ಯಸಂಧ್ಯಕ್ಷರಂಗಳವು ನಿಜದಿಂ, ಹ್ರ
ಸ್ವಮದೇಕಮಾತ್ರಕಂ ದೀ
ರ್ಘಮುಭಯಮಾತ್ರಂ ತ್ರಿಮಾತ್ರಕಂ ಪ್ಲುತಮಕ್ಕುಂ

ಏಕಾರಮುಖ್ಯ ಸಂಧ್ಯಕ್ಷರಗಳು ಸಹಜವಾಗಿ ಗುರುವೂ ದೀರ್ಘವೂ ಆಗಿವೆ. ಹ್ರಸ್ವ ಒಂದು ಮಾತ್ರೆಯುಳ್ಳುದು; ದೀರ್ಘ ಎರಡು ಮಾತ್ರೆಯುಳ್ಳುದು; ಪ್ಲುತ ಮೂರು ಮಾತ್ರೆಯುಳ್ಳುದು.

ಸಂಧ್ಯಕ್ಷರಗಳು* : ಏ=ಅ+ಇ, ಅ+ಈ
ಐ=ಅ+ಏ
ಓ=ಅ+ಉ, ಅ+ಊ
ಔ=ಅ+ಓ

ಹ್ರಸ್ವ ದೀರ್ಘ ಪ್ಲುತ ಪ್ರಯೋಗ : ಕುಕ್ಕೂಕ್ಕೂ[೧] ಎಂದು ಕೋೞಿ ಕೂಗಿದುವಾಗಳ್

೨೧

ಬಿಂದುವನುಸ್ವಾರಂ ತಾ
ನೆಂದಕ್ಕುಂ ಸೊನ್ನೆ, ಮುತ್ತುವೋಲ್ ವೃತ್ತತೆಯಿಂ
ಸಂದಿರ್ಪುದಂತದಡಕಿ
ಲ್ಪೊಂದಿರೆ ಮಣಿಗೊಪ್ಪುವೋಲ್ ವಿಸರ್ಗಮೆನಿಕ್ಕುಂ

ಸೊನ್ನೆ ಬಿಂದುವೆಂದೂ ಅನುಸ್ವಾರವೆಂದೂ ಎನಿಸಿಕೊಳ್ಳುತ್ತದೆ. (ಅದು) ಮುತ್ತಿನಂತೆ ವರ್ತುಲಾಕಾರವಾಗಿರುತ್ತದೆ; ಮಣಿಗೊಪ್ಪಿನಂತೆ ಅಡಕಲುಗೊಂಡಿದ್ದರೆ ವಿಸರ್ಗವೆನಿಸಿಕೊಳ್ಳುತ್ತದೆ.

---

* ವಿಚಾರ : ಸಂಧ್ಯಕ್ಷರಗಳು ಸಂಸ್ಕೃತದಲ್ಲಿವೆ. ಕನ್ನಡದಲ್ಲಿಲ್ಲ.
೧. ಕೇಶಿರಾಜ ಕೊಟ್ಟ ಈ ಪ್ರಯೋಗದ ಮೊದಲ ವರ್ಣ ಹ್ರಸ್ವ(=ಗುರು)ವಾಗಿಲ್ಲವೆಂಬುದನ್ನು ಗಮನಿಸಬೇಕು.

ಬಿಂದು : ಬಂದಂ ಫಲ್ಗುಣನಿಲ್ಲಿ ಸಂದೆಯಮಣಂ ತಾನಿಲ್ಲ
ವಿಸರ್ಗ : ಅಃ ಸಂದೆಯಮಿಲ್ಲ ಮೆಚ್ಚಿದೆಂ

೨೨

ಸ್ವರಪರದೊಳಿರ್ಪ ತೆಱದಿಂ
ದುರುಮುಖ್ಯೋಚ್ಚಾರಣಕ್ಕೆ ಬಾರದ ಕತದಿಂ
ಪರಿಕಿಸೆ ಬಿಂದು ವಿಸರ್ಗಂ
ಸ್ವರಾಂಗಮುಂ ವ್ಯಂಜನಾಂಗಮುಂ ತಾವೆಂಬರ್

ಸ್ವತಂತ್ರ ಉಚ್ಚಾರಣೆಗೆ ಬಾರದ ಕಾರಣ, ಬಿಂದು ವಿಸರ್ಗಗಳು ಸ್ವರದ ಮುಂದೆ ಬಂದು ಸ್ವರಾಂಗ, (ವ್ಯಂಜನರೂಪದಲ್ಲಿ ನಿಂದು) ವ್ಯಂಜನಾಂಗವೆನಿಸಿಕೊಳ್ಳುತ್ತವೆ.[೧]

ಬಿಂದು ಸ್ವರಾಂಗವಾದುದಕ್ಕೆ : ಅಂ, ಆಂ
ವಿಸರ್ಗ ಸ್ವರಾಂಗವಾದುದಕ್ಕೆ : ಅಃ, ಆಃ
ಬಿಂದು ವ್ಯಂಜನಾಂಗವಾದುದಕ್ಕೆ : ಕಂಕಣ>ಕಙ್ಕಣ, ಪಂಚಮ>ಪಞ್ಚಮ,
ಮಂಟಪ>ಮಣ್ಟಪ, ಅಂತರ>ಅನ್ತರ, ಸಂಪಗೆ>ಸಮ್ಪಗೆ
ವಿಸರ್ಗ ವ್ಯಂಜನಾಂಗವಾದುದಕ್ಕೆ : ದುಃ+ಯೋಧನ>ದುರ್+ಯೋಧನ =ದುರ್ಯೋಧನ
ನಮಃ+ತುಂಗ>ನಮಸ್+ತುಂಗ=ನಮಸ್ತುಂಗ

ವ್ಯಂಜನ ವಿಚಾರ :

೨೩

ಪ್ರಕಟತರ ವ್ಯಂಜನಸಂ
ಜ್ಞೆ ಕಕಾರದಿನಾ ಳಕಾರ ಪರ್ಯಂತಂ ಪಂ
ಚಕ ಪಂಚಕಂಗಳಿಂ ಪಂ
ಚಕಮಕ್ಕುಂ ವರ್ಗಮಂತ್ಯವರ್ಣಮವರ್ಗಂ

ಕಕಾರದಿಂದ ಳಕಾರದ ವರೆಗಿನ (ಅಕ್ಷರಗಳು) ವ್ಯಂಜನಗಳು. (ಇವುಗಳಲ್ಲಿ) ಐದೈದು ಅಕ್ಷರಗಳ ಐದು ಗುಂಪುಗಳು ವರ್ಗ; (ಇವುಗಳ) ಕೊನೆಯ ಅಕ್ಷರಗಳು ಅವರ್ಗ.

ವ್ಯಂಜನ : ಕ್ ಖ್ ಗ್ ಘ್ ಙ್, ಚ್ ಛ್ ಜ್ ಝ್ ಞ್,
ಟ್ ಠ್ ಡ್ ಢ್ ಣ್, ತ್ ಥ್ ದ್ ಧ್ ನ್, ಪ್ ಫ್ ಬ್ ಭ್ ಮ್,
ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ (=ಕ್ಷಳ)
ವರ್ಗ : ಕ್ ಖ್ ಗ್ ಘ್ ಙ್
ಚ್ ಛ್ ಜ್ ಝ್ ಞ್
ಟ್ ಠ್ ಡ್ ಢ್ ಣ್

---

೧. ವಿಚಾರ : ಸ್ವರಾಂಗವೆಂದರೆ ಸ್ವರದ ಅಂಗ (=ಅಧೀನ)ವಾಗಿ ಉಚ್ಚಾರಕ್ಕೆ ಸಾಧ್ಯವಾದುದು. ವ್ಯಂಜನಾಂಗವೆಂದರೆ ವ್ಯಂಜನದ ಅಂಗ(=ರೂಪ)ವಾಗಿ ತೋರುವುದು.

ತ್ ಥ್ ದ್ ಧ್ ನ್
ಪ್ ಫ್ ಬ್ ಭ್ ಮ್
ಅವರ್ಗ : ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ (=ಕ್ಷಳ)

೨೪

ವರ್ಗದ್ವಿತೀಯ ವರ್ಣಂ
ವರ್ಗಚತುರ್ಥಾಕ್ಷರಂ ಮಹಾಪ್ರಾಣಮವಂ
ಮಾರ್ಗವಿದರ್ ಸಂಖ್ಯೆಯೊಳಂ
ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ಪರ್

ವರ್ಗದ ಎರಡನೆಯ ಅಕ್ಷರಗಳೂ ನಾಲ್ಕನೆಯ ಅಕ್ಷರಗಳೂ ಮಹಾಪ್ರಾಣಗಳು. ಬಲ್ಲಿದರು ಅವುಗಳನ್ನು ಸಂಖ್ಯೆಯಲ್ಲಿಯೂ ಅನುಕರಣದಲ್ಲಿಯೂ ಪ್ರಯೋಗಿಸುತ್ತಾರೆ.

ವರ್ಗದ ಎರಡನೆಯ ಮಹಾಪ್ರಾಣ : ಖ್, ಛ್, ಠ್, ಥ್, ಫ್
ವರ್ಗದ ನಾಲ್ಕನೆಯ ಮಹಾಪ್ರಾಣ : ಘ್, ಝ್, ಢ್, ಧ್, ಭ್
ಸಂಖ್ಯೆಗೆ : ಪದಿನೆಣ್ಭಾಸಿರ ಲೋಹವಕ್ಕರೆಯ ಜಾತ್ಯಶ್ವಂಗಳಿರ್ಛಾಸಿರಂ
ಅನುಕರಣೆಗೆ : ಖಣಿಲೆನೆ, ಭೋರೆನೆ

೨೫

ಒಳವು ಮಹಾಪ್ರಾಣಂಗಳ್
ವಿಳಸತ್ಕರ್ಣಾಟಭಾಷೆಯೊಳ್ ಕೆಲವು ನಿಜೋ
ಜ್ವಳಮಾಗಿ, ವರ್ಗದಂತ್ಯಂ
ಗಳನಜಿಯನುನಾಸಿಕಾಖ್ಯೆಯಂ ತಳೆದಿರ್ಕುಂ

ವಿಳಸತ್ ಕರ್ಣಾಟಭಾಷೆಯಲ್ಲಿ ಕೆಲವು (ಪದಗಳಲ್ಲಿ) ಮಹಾಪ್ರಾಣಗಳು ಸ್ವಾಭಾವಿಕವಾಗಿ ಇವೆ. (ಪ್ರತಿಯೊಂದು) ವರ್ಗದ ಅಂತ್ಯಗಳು ಅನುನಾಸಿಕ ಸಂಜ್ಞೆಯನ್ನು ತಳೆದಿರುವವೆಂದು ತಿಳಿ.

ಕನ್ನಡದ ಸ್ವಾಭಾವಿಕ ಮಹಾಪ್ರಾಣಕ್ಕೆ : ಖಾಣಂ, ಛಪ್ಪಿಸಿದಂ, ಠಾವು, ಥಟ್ಟು, ಫೇಳಿ,
ಘೋಟಿಗೆ, ಝಳಕಂ, ಢೆಂಕಣಿ, ಧಾಳಿ, ಭಂಗಾರಂ
ಅನುನಾಸಿಕಕ್ಕೆ : ಙ್, ಞ್, ಣ್, ನ್, ಮ್.

೨೬

ಅನುನಾಸಿಕಮುಂ ಯವಲಮ
ನನುನಾಸಿಕಮುಂ ದಲೆಂಬರಾ ಸಂಸ್ಕೃತ ಶ
ಬ್ದನಿಯುಕ್ತ ಲಕಾರದ ನೆಲೆ
ಗೆ ನಿಂದು ಸರಿಯಾಗಿ ಸಲ್ವುದಂ ಕ್ಷಳನೆಂಬರ್

ಯವಲಗಳು ಸಾನುನಾಸಿಕಗಳೆಂದೂ ನಿರನುನಾಸಿಕಗಳೆಂದೂ ಹೇಳುತ್ತಾರೆ. ಸಂಸ್ಕೃತ ಪದದಲ್ಲಿರುವ ಲಕಾರಕ್ಕೆ ಪ್ರತಿಯಾಗಿ (ಅರ್ಥವ್ಯತ್ಯಾಸ ಮಾಡದೆ) ಬರುವ ವರ್ಣಕ್ಕೆ ಕ್ಷಳವೆನ್ನುತ್ತಾರೆ.

ಸಾನುನಾಸಿಕ ಯಕಾರಕ್ಕೆ : ನೋಯಿಸಿದಂ
ನಿರನುನಾಸಿಕ ಯಕಾರಕ್ಕೆ : ಬಯ್
ಸಾನುನಾಸಿಕ ವಕಾರಕ್ಕೆ : ಸೇವಗೆ
ನಿರನುನಾಸಿಕ ವಕಾರಕ್ಕೆ : ಹವಳಂ
ಸಾನುನಾಸಿಕ ಲಕಾರಕ್ಕೆ : ಇಲ್ಲಣಂ
ನಿರನುನಾಸಿಕ ಲಕಾರಕ್ಕೆ : ಹಲಗೆ
ಕ್ಷಳಕ್ಕೆ : ಜಲಂ>ಜಳಂ

೨೭

ಸಮಸಂದಿರ್ದ Xₖ ಮುಮ
ₒₒ₍ಮುಮೊಂದಿದ ಬಿಂದುವುಂ ವಿಸರ್ಗಮುಮೆಂದ
ಕ್ಕುಮಿವೆಯ್ದೆ ಯೋಗವಾಹಂ
ಕ್ರಮದಿಂ ಕಪಯುಗಲಮಿವಱೊಳನುಬಂಧಂಗಳ್

Xₖ (ಜಿಹ್ವಾಮೂಲೀಯ), ₒₒ₍ (ಉಪಧ್ಮಾನೀಯ), ಅಂ (ಬಿಂದು), ಅಃ(ವಿಸರ್ಗ)- ಇವು ಯೋಗವಾಹಗಳು, ಕ್ರಮವಾಗಿ ಇವುಗಳಲ್ಲಿ (= ಜಿಹ್ವಾಮೂಲೀಯ, ಉಪಧ್ಮಾನೀಯಗಳಲ್ಲಿ) ಕ ಮತ್ತು ಪ ಸಂಬಂಧ ಪಡೆದಿರುತ್ತವೆ.

೨೮-೨೯

ಅತಿಪೀಡನದಿಂ ರೇಫಾ
ಶ್ರಿತಮಾದ ಱಕಾರಮುಂ ಸಮಂತು ಡಕಾರಾ
ಶ್ರಿತಮಾದ ಱಟನುಮಂಗೀ
ಕೃತಪದಲತ್ವಕ್ಕೆ ಸಮನೆ ಸಲ್ಲದ ಕುಳನುಂ

ಇವು ವರ್ಣಾವೃತ್ತಿಗೆ ಸ
ಲ್ವುವು ಸಂದುಂ ಪ್ರಾಸದೆಡೆಗೆ ಸಲ್ಲವು, ಯಮಕ
ವ್ಯವಹೃತಿಗಾಗವು, ದೇಶೀ
ಯವೆನಿಪುವಾ ಹ್ರಸ್ವವೆನಿಸಿದೇ ಓ ಸಹಿತಂ

ಒತ್ತಿ ಉಚ್ಚರಿಸಿದರೆ ರೇಫೆಯಿಂದ ಱಕಾರ, ಡಕಾರದಿಂದ ಟಕಾರ ಮತ್ತು ಲಕಾರದಿಂದ ಳಕಾರ (ಕುಳ) ಹುಟ್ಟುತ್ತವೆ.[೧] ಇವು ಅನುಪ್ರಾಸಕ್ಕೆ ಸಲ್ಲುತ್ತವೆ; ಆದರೆ ಪ್ರಾಸ (ಆದಿಪ್ರಾಸ), ಯಮಕಗಳಿಗೆ ಸಲ್ಲುವುದಿಲ್ಲ. ಹ್ರಸ್ವಗಳಾದ ಎ ಒ ಗಳೊಂದಿಗೆ (ಈ ಮೂರೂ) ದೇಶೀಯಗಳೆನಿಸಿಕೊಳ್ಳುತ್ತವೆ.

ರೇಫೆ ಱಕಾರಗಳ ಅನುಪ್ರಾಸಕ್ಕೆ : ಸುರಗಿಱಿದೊಱಗಿದ ಬಿರುದರ
ಕರುಳಂ ಕೊಱೆಕೊಱೆದು ಮರುಳಿರುಳ್ ತಿಂಬೆಡೆಯೊಳ್

---

೧. ವಿಚಾರ : ಪದವೊಂದರಲ್ಲಿಯ 'ಲ'ಕಾರಕ್ಕೆ ಪರ್ಯಾಯವಾಗಿ ಸಲ್ಲದ(=ಸಂದುದಾದರೆ ಅರ್ಥವ್ಯತ್ಯಾಸ ಮಾಡುವ)ಕುಳ– ಎಂದುಸೂತ್ರ(೨೮)ದಲ್ಲಿ ಹೇಳಿದ್ದರೂ, ವೃತ್ತಿಯಲ್ಲಿ 'ಲ'ಕಾರದಿಂದ 'ಳ' ಕಾರ ಹುಟ್ಟುವುದೆಂದು ಕೇಶಿರಾಜ ಹೇಳಿದ್ದಾನೆ.

ಡಕಾರ ಟಕಾರಗಳ ಅನುಪ್ರಾನಕ್ಕೆ : ಕಟಲೆ ನುಡಿದಟಲೆ ಬಗ್ಗಿಸಿ
ಘುಟಿಲನೆ ನಡೆಯೆಂದು ಜಡಿದು ಸಾರಥಿಯಂ

ಲಕಾರ ಳ(ಕುಳ)ಕಾರಗಳ ಅನುಪ್ರಾಸಕ್ಕೆ : ......ದೆಸೆಗಳ।
ನಳುರ್ದು ಸುಡಲ್ಕೆಳರ್ದು ಮಿಳಿರ್ದು ತಳರ್ದತ್ತಾಗಳ್

ರೇಫೆ ಱಕಾರಗಳ (ಆದಿ)ಪ್ರಾಸದೋಷಕ್ಕೆ : ಧುರದೊಳ್ ಪಱಿಮಱಿಯಾಡುವ
ತೆಱದಿಂದುಱದಿಱಿದನೆಂಬ ನಿಯಮಂ ದೂಷ್ಯಂ

ಡಕಾರ ಟಕಾರಗಳ (ಆದಿ)ಪ್ರಾಸದೋಷಕ್ಕೆ : ಕೋಡದಿಱಿದಿಂದ್ರರಾದರ್
ನಾಟಿಗೆಯೊಳ್ ವೀರರೆಂಬ ನಿಯಮಂ ದೂಷ್ಯಂ

ಲಕಾರ ಳ(ಕುಳ)ಕಾರಗಳ (ಅದಿ)ಪ್ರಾಸದೋಷಕ್ಕೆ : ನೆಲದೊಳ್ ಪಗೆ ಪುಗೆ ಫಣಿಯವೊ
ಲೊಳಪೊಕ್ಕಳಱಿಸಿದನೆಂಬ ನಿಯಮಂ ದೂಷ್ಯಂ

ಯಮಕ ದೋಷಕ್ಕೆ : ಕರೆಯಂ ನೆರವಂ ವಂಶಂ
ಕಱಿಯಂ ಪೊತ್ತಪ್ಪುದೆಂದು ಸಂಗರಮುಖದೊಳ್

೩೦

ದಾಡಿಮಮಾ ಕೂಷ್ಮಾಂಡಂ
ಗೌಡಂ ಗುಡಮಡಸಿ ಪೊಡೆವ ಝುಗಡೆ ವಿಡಂಗಂ
ಕೂಡೆ ಕುಳನೇಡಕಮುಮಱಿ
ರೂಢಿಯ ಕುಳನೆಂದು ಱಟದಪಭ್ರಂಶತೆಯೊಳ್

ದಾಡಿಮಂ ಕೂಷ್ಮಾಂಡಂ ಗೌಡಂ ಝುಗಡೆ ವಿಡಂಗಂ ಏಡಕಂ - ಇವು (ಮೊದಲು)ತದ್ಭವದಲ್ಲಿ ಱಟವಾಗಿ, (ಬಳಿಕ)ರೂಢಿಯಲ್ಲಿ ಕುಳವಾಗಿವೆ.

ದಾಡಿಮ>ದಾಟಿಂಬ>ದಾಳಿಂಬ ಇತ್ಯಾದಿ.

೩೧

ಕೃತಿಮಾರ್ಗದೊಳುಂಟು ಟಕಾ
ರ ತಕಾರ ಠಕಾರ ರೇಫದೆಡೆಗಂ ಬಹುಳ
ಸ್ಥಿತಿಯಿಂ ಕ್ಷಳಕಮಪಭ್ರಂ
ಶತೆಯೊಳ್ ಸುಕವೀಂದ್ರರಿಂದೆ ಱಟಾದೇಶಂ

ಸುಕವೀಂದ್ರರಿಂದ ಕಾವ್ಯಮಾರ್ಗದಲ್ಲಿ, ಟಕಾರ ಠಕಾರ ತಕಾರ ರೇಫೆ ಕ್ಷಳಗಳಿಗೆ ಅಪಭ್ರಂಶತೆಯಲ್ಲಿ ವಿಕಲ್ಪವಾಗಿ ಱಟಾದೇಶವಾಗುತ್ತದೆ.

ಟಕಾರಕ್ಕೆ : ಘುಟಿಕೆ>ಗಟಿಗೆ
ಠಕಾರಕ್ಕೆ : ಪೀಠಿಕೆ>ಪೀಟಿಗೆ
ತಕಾರಕ್ಕೆ : ಪ್ರತಿಹಸ್ತ>ಪಟಿಹತ್ತ
ರೇಫೆಗೆ : ಝುಲ್ಲರಿ>ಝುಲ್ಲಟಿ
ಕ್ಷಳಕ್ಕೆ : (ತಾಲಂ>) ತಾಳಂ>ತಾಟಂ

೩೨

ಸ್ಫಟಿಕಂ ಪೇಟಿಕೆ ವೀಟಿಕೆ
ಘುಟಿಕೆ ವರಾಟಂ ಪೊದಳ್ದ ರಘುಟೆ ಕುಳಂ ತಾಂ
ಸ್ಫುಟ ಸಹಿತಂ ಸ್ಫೋಟಿಕ ಲಂ
ಪಟ ಶಬ್ದಯುಗಂ ಱಟಿಕ್ಕೆ ನೆಱೆ ಸಂದೇಹಂ

ಸ್ಫಟಿಕಂ, ಪೇಟಿಕೆ, ವೀಟಿಕೆ, ಘುಟಿಕೆ, ವರಾಟಂ, ರಘುಟೆ, ಸ್ಫುಟ - ಇವು (ತದ್ಭವದಲ್ಲಿ) ಕುಳಗಳಾಗಿವೆ. ಸ್ಫೋಟಿಕ, ಲಂಪಟ- ಇವು ಱಟಿಕ್ಕೆ ಸಂದೇಹ (= ಇವು ಮೂಲತಃ ಱಟಿವಾಗಿರಬಹುದೇ? ಎಂದು ಸಂದೇಹ).

ಸ್ಫಟಿಕಂ-ಪಳಿಕು, ಪೇಟಿಕೆ-ಪೇಳಿಗೆ, ವೀಟಿಕೆ-ವೀಳಿಗೆ, ಘುಟಿಕೆ- ಗುಳಿಗೆ, ರಘುಟೆ- ರಗಳೆ, ಸ್ಫುಟಂ-ಪುಳಂ.

೩೩

ಏಕ ದ್ವಿ ತ್ರಿ ಚತುಃ ಪಂ
ಚಾಕಲಿತಾರ್ಥಂಗಳಾಗಿ ಱಟಿನೊಳವು ನಿಸ
ರ್ಗಾಕೃತಿಯಿಂದವನಾದಿ ಮ
ಹಾಕವಿಕೃತಿದೃಷ್ಟಮಂ ನಿರಾಕುಲಮುಸಿರ್ವೆಂ

ಒಂದರಿಂದ ಐದು ಅರ್ಥಗಳನ್ನೊಳಗೊಂಡ ಱಟಿ(ಯುಕ್ತಪದ)ಗಳು ಸ್ವಾಭಾವಿಕವಾಗಿ ಇವೆ. ಪ್ರಾಚೀನ ಮಹಾಕವಿಗಳ ಕಾವ್ಯಗಳಲ್ಲಿ ಕಾಣುವ ಅವುಗಳನ್ನು ಸ್ಫುಟವಾಗಿ ಹೇಳುತ್ತೇನೆ.

ಒಂದರ್ಥಕ್ಕೆ : ಕಱ್ತೆಯೆಂದು ಗರ್ದಭಂ
ಎರಡರ್ಥಕ್ಕೆ : ಬೀಱೆಂದು ಮಾಡದ ಕೆಯ್ಯುಂ ಪತನಕ್ರಿಯೆಯುಮಕ್ಕುಂ
ಮೂರರ್ಥಕ್ಕೆ : ಪೊಱ್ತೆಂದು ಸಾಮಾನ್ಯ ಕಾಲಮುಂ ಪ್ರಸವಕಾಲಮುಂ ನೇಸಱುಮಕ್ಕುಂ
ನಾಲ್ಕರ್ಥಕ್ಕೆ : ಪಱಿಯೆಂದು ವಸ್ತ್ರವಿಶೇಷಮುಂ ದೂಷಣಮುಂ ನಾಯಂ ಸೋವುವುದುಂ ಲೋಹದ ಘುಟಿಯುಮಕ್ಕುಂ
ಐದರ್ಥಕ್ಕೆ : ಬಱಿಯೆಂದು ಬಟ್ಟೆಯುಂ ವಂಶಮುಂ ಕರೆವನುಂ ಲೇಪಿಸುವುದುಂ ಪಿಂಗಲಿಯ ಬಱಿಗೊರಲುಮಕ್ಕುಂ
.......ಇತ್ಯಾದಿ.

೩೪

ಪಿರಿಯರ್ ಸಲಿಪರ್ ದಡ್ಡ
ಕ್ಕರದ ಱಟಿಕ್ಕೈದೆ ರೇಫೆವೆರಸಿದ ದಡ್ಡ
ಕ್ಕರಮಂ, ಱಟಿನಾಗದನು
ಚ್ಚರಿಸಲ್ಕಾಗಿರ್ದ ತೆಱದಿನಂತದು ಶುದ್ಧಂ

ದ್ವಿತ್ವಾಕ್ಷರದ ಱಟಿಕ್ಕೆ ದ್ವಿತ್ವಾಕ್ಷರದ ರೇಫೆಯನ್ನು ವಿದ್ವಾಂಸರು (ಪ್ರಾಸದಲ್ಲಿ) ಪ್ರಯೋಗಿಸುತ್ತಾರೆ. (ಆ ದ್ವಿತ್ವಾಕ್ಷರದ ರೇಫೆಯನ್ನು) ಱಟಿವಾಗಿ ಉಚ್ಚರಿಸಲಾಗದು; ಇದ್ದ ಸ್ಥಿತಿಯಲ್ಲಿ ಅದು ಶುದ್ಧವಾಗಿರುತ್ತದೆ.

ಬಟ್ಟುದು ಬಳ್ಳವಾಡಿ ನೆಱೆ *ನಂಬಿರ್ದುದಾರುಹತಂ* ಜಿನೇಂದ್ರನಂ ॥
ತಿರ್ದ್ದ ಮಹಾಪುರಾಣಕವಿಗಳ್.........

೩೫

ಝುಳಕಂ ಝುಳಪಿಸಿದಂ ಜಾಂ
ಗುಳು ಬೊಂಬುಳಿಯಾಳಮಾಳಮಂತೆ ಠಮಾಳಂ
ವಳಿಗೆ ನೆಗೞ್ದೊಂದುಳಿ ಜಂ
ಗುಳಿ ಪುತ್ತಳಿ ಗೋಳಿ ಪೇಳಿ ೞಟಿ ಸಂದೇಹಂ

ಝುಳಕಂ, ಝುಳಪಿಸಿದಂ, ಜಾಂಗುಳಿ, ಬೊಂಬುಳಿ, ಆಳಮಾಳಂ, ಠಮಾಳಂ, ವಳಿಗೆ, ಒಂದುಳಿ, ಜಂಗುಳಿ, ಪುತ್ತಳಿ, ಗೋಳಿ, ಪೇಳಿ- ಇವು ೞಟಿಕ್ಕೆ ಸಂದೇಹ (=ಇವು ಮೂಲತಃ ೞಟಿವಾಗಿರಬಹುದೆ? ಎಂದು ಸಂದೇಹ).

೩೬-೩೭

ಇಳಿದಿಳಿಯನೇಳಿದಂ ಸೂ
ಕುಳಿಯೋಕುಳಿ ಕಳಱು ಪೆಳಱು ಮಱುಕುಳಿಯಳಿಯಂ
ಕುಳಿಯಂ ಮೋಳಿಗೆ ಜಾಳಿಗೆ
ತಳಿಗೆಯೊಳಿರ್ಬ್ಬಳಸು ಬಳಸಿಗಂ ಮೊಳೆ ತಾಳಂ

ಆಳಿಸಿದಂ ಪೇಳಿಸಿದಂ
ಕೇಳಂ ಜೂದಾಳಿಯಿಳಿಲೆ ಕಳವಳಮಾ ಮೆ
ಯ್ಮೇಳಂ ಮಾಳಂ ತಾಳಿಗೆ
ಯೀಳಿಗೆಯಿಱುಕುಳಿಯಿವಾದಿಯಾಗಱಿ ಕುಳನಂ

ಇಳಿದು, ಇಳಿಯಂ, ಏಳಿದಂ, ಸೂಕುಳಿ, ಓಕುಳಿ, ಕಳಱು, ಪೆಳಱು, ಮಱುಕುಳಿ, ಅಳಿಯಂ, ಕುಳಿಯಂ, ಮೋಳಿಗೆ, ಜಾಳಿಗೆ, ತಳಿಗೆಯೊಳ್, ಇರ್ಬಳಸು, ಬಳಸಿಗಂ, ಮೊಳೆ, ತಾಳಂ. ಆಳಿಸಿದಂ, ಪೇಳಿಸಿದಂ, ಕೇಳಂ, ಜೂದಾಳಿ, ಇಳಿಲೆ, ಕಳವಳಂ, ಮೇಯ್ಮೇಳಂ, ಮಾಳಂ, ತಾಳಿಗೆ, ಈಳಿಗೆ, ಇಱುಕುಳಿ- ಇವು ಮೊದಲಾದುವು ಕುಳವೆಂದು ತಿಳಿ.

೩೮

ಬೆರಲೊರಲೆರಲ್ಕೊರಲ್ ಸರ
ಲರಲ್ ಪರಲ್ ಮರಲುಮಂತೆ ನರಲುಂ ಮುಂಗೈ
ಸರಲುಂ ಲಾಂತಮಿವಂ ಗ್ರಾ
ಮ್ಯರಱಿಯದುಚ್ಚರಿಸುವರ್ ಕುಳಾಂತ ಭ್ರಮೆಯಿಂ

ಬೆರಲ್, ಒರಲ್, ಎರಲ್, ಕೊರಲ್, ಸರಲ್, ಅರಲ್, ಪರಲ್, ಮರಲ್, ನರಲ್, ಮುಂಗೈ ಸರಲ್- ಇವು ಲಾಂತ ಪದಗಳು. ಗ್ರಾಮ್ಯರು ತಿಳಿಯದೆ ಭ್ರಾಂತಿಯಿಂದ ಇವುಗಳನ್ನು ಕುಳಾಂತವಾಗಿ ಉಚ್ಚರಿಸುತ್ತಾರೆ.

- ಇಲ್ಲಿ ಬಂದಿರುವ ಶೈಥಿಲ್ಯ ಸಮರ್ಥನೀಯವೇ ?

೩೯

ಮರಲರಲೆರಲೆಂಬಿವಱಿಂ
ತರಾಳ ರೇಫಕ್ಕೆ ಲತ್ವಮುಂ ದೊರೆಕೊಳ್ಗುಂ
ಪಿರಿದುಂ ಮಲರಲರೆಲರೆಂ
ದೊರೆವುದು ಕೃತಿಯೊಳ್ ವಿಕಲ್ಪವಿಧಿಯಿಂದಮಿವಂ

ಮರಲ್, ಅರಲ್, ಎರಲ್- ಇವುಗಳ ಮಧ್ಯದ ರೇಫೆಗೆ ಲಕಾರವೂ (ಅಂತ್ಯ ಲಕಾರಕ್ಕೆ ರೇಫೆಯೂ) ಉಂಟಾಗುತ್ತದೆ. ಇವುಗಳನ್ನು ಕಾವ್ಯದಲ್ಲಿ ಮಲರ್, ಅಲರ್, ಎಲರ್ ಎಂದು ವಿಕಲ್ಪವಾಗಿ ಹೇಳಬೇಕು.

೪೦

ಕೊರಲುಂ ಜಿಹ್ವಾಮೂಲಮು
ಮುರಮುಂ ತಾಳುಗೆಯುಮೋಷ್ಠಮುಂ ನಾಸಿಕೆಯುಂ
ಶಿರಮುಂ ದಂತಮುವೆಂದ
ಕ್ಕರಮುದಯಿಪ ತಾಣಮಾದುವೀ ಪೇೞ್ದೆಂಟುಂ

ಕೊರಲು, ಜಿಹ್ವಾಮೂಲ, ಉರ, ತಾಳುಗೆ, ಓಷ್ಠ, ನಾಸಿಕೆ, ಶಿರ, ದಂತ- ಈ ಎಂಟು ವರ್ಣೋತ್ಪತ್ತಿ ಸ್ಥಾನಗಳು.

೪೧

ಕವಿಗಳ್ ಸ್ವರದಿಂ ವರ್ಗದಿ
ನವರ್ಗದಿಂ ಯೋಗವಾಹದಿಂ ದೇಶಿಯೊಳು
ದ್ಭವಮಪ್ಪ ವರ್ಣದಿಂ ಪಂ
ಪಂಚವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ

ವಿದ್ವಾಂಸರು (ಕನ್ನಡ) ಶುದ್ಧಾಕ್ಷರಗಳನ್ನು ಸ್ವರ, ವರ್ಗ, ಅವರ್ಗ, ಯೋಗವಾಹ, ದೇಶಿ- ಎಂದು ಐದು ವಿಭಾಗಗಳಾಗಿ ತಿಳಿಸಿಕೊಡುತ್ತಾರೆ.

೪೨-೪೩

ತರದಿಂ ಪದಿನಾಲ್ಕಕ್ಕುಂ
ಸ್ವರಮಿರ್ಪತ್ತೈದು ವರ್ಣಮವು ವರ್ಗಂ, ತ
ತ್ಪರದೊಂಬತ್ತುಮವರ್ಗಂ,
ಪರಿಭಾವಿಸೆ ಯೋಗವಾಹಮವು ನಾಲ್ಕೆ ವಲಂ

ತಿಳಿ ದೇಶೀಯಮುವ್ವೈದಂ,
ಕಳೆ ನೀಂ ಖು ಇ ವರ್ಣ ಶ ಷ ವಿಸರ್ಗ Xಕ ೦೦ ಬ
ಕ್ಷಳನಂ, ನಾಲ್ವತ್ತೇೞಾ
ಯ್ತುಳೆ ಶುದ್ಧಗೆಯಚ್ಚಗನ್ನಡಕ್ಕೀ ಕ್ರಮದಿಂ

(ಇವು) ಕ್ರಮವಾಗಿ ಸ್ವರಗಳು ಹದಿನಾಲ್ಕು, ವರ್ಗ ಇಪ್ಪತ್ತೈದು, ಅವರ್ಗ ಒಂಬತ್ತು, ಯೋಗವಾಹ ನಾಲ್ಕು, (ಇವುಗಳೊಂದಿಗೆ) ಐದು ದೇಶೀಯ (ವರ್ಣ)ಗಳನ್ನೂ ಪರಿಭಾವಿಸು. ಋ ೠ, ಌ ೡ ಶ, ಷ, ಅಃ (=ವಿಸರ್ಗ), X (=ಜಿಹ್ವಾಮೂಲೀಯ), ೲ (ಉಪಧ್ಮಾನೀಯ), ಳ(ಕ್ಷಳ) ಗಳನ್ನು ಕಳೆ. ಅಚ್ಚಗನ್ನಡಕ್ಕೆ ಶುದ್ಧಗೆಗಳು ನಾಲ್ವತ್ತೇಳಾದುವೆಂದು ಈ ರೀತಿಯಿಂದ ಅಳೆ.

೪೪

ತನು ವಾದ್ಯಂ ನಾಲಗೆ ವಾ
ದನದಂಡಂ ಕರ್ತೃವಾತ್ಮನವನ ಮನೋವೃ
ತ್ತಿನಿಮಿತ್ತಮಾಗಿ ಶಬ್ದಂ
ಜನಿಯಿಸುಗುಂ, ಧವಲವರ್ಣಮಕ್ಷರರೂಪಂ

ತನು ವಾದ್ಯ, ನಾಲಗೆ ವಾದನ ದಂಡ, ಆತ್ಮ ವಾದಕ. ಆತನ ಮನಸ್ಸಿನ ಇಚ್ಛೆಯಂತೆ ಧವಲವರ್ಣದ ಅಕ್ಷರರೂಪದ ಶಬ್ದ(=ಧ್ವನಿ) ಜನಿಸುತ್ತದೆ.

ಪದವಿಚಾರ :

೪೫

ಪದದರ್ಥಮಂ ವಿಭಾಗಿಸು
ವುದಱಿಂದೆ ವಿಭಕ್ತಿಯಂತದಂ ಪ್ರತ್ಯಯಮೆಂ
ಬುದು, ತತ್ಪ್ರತ್ಯಯದಿಂ ಪೂ
ರ್ವದೊಳಿರ್ಕು ಪ್ರಕೃತಿಯೆರಡುಮುಮರ್ದೊದವೆ ಪದಂ

ಪದವನ್ನು ಅರ್ಥವತ್ತಾಗಿ ವಿಭಾಗಿಸುವುದು ವಿಭಕ್ತಿ. ಇದಕ್ಕೆ ಪ್ರತ್ಯಯವೆಂದೂ ಹೆಸರು. ಈ ಪ್ರತ್ಯಯಕ್ಕೆ (ಹೊಂದಿ) ಮೊದಲು ಇರುವುದು ಪ್ರಕೃತಿ. ಈ ಪ್ರಕೃತಿ ಮತ್ತು ಪ್ರತ್ಯಯಗಳು ಕೂಡಿದರೆ ಪದ.

ಗುರು (ಪ್ರಕೃತಿ); ಅಂ(ವಿಭಕ್ತಿ ಪ್ರತ್ಯಯ); ಗುರು+ಅಂ=ಗುರುವಂ(ಪದ)
ಬೇಡು(ಪ್ರಕೃತಿ); ಅಂ(ಆಖ್ಯಾತ ಪ್ರತ್ಯಯ); ಬೇಡು+ಅಂ=ಬೇಡುವಂ(ಪದ)

೪೬

ಕೆಲವು ನಿಜಬಿಂದುಗಳ್ ಕೆಲ
ಕೆಲವು ವಿಕಲ್ಪಾರ್ಥಬಿಂದುಗಳ್ ದ್ವಿತ್ವಂಗಳ್
ಕೆಲವಾ ಶಿಥಿಲದ್ವಿತ್ವಂ
ಕೆಲವುಭಯಮುಮಪ್ಪುದೊಂದು ಪದನಱಿವುದಿದಂ

ಪದಗಳಲ್ಲಿ ಕೆಲವು ನಿಜಬಿಂದುಗಳು, ಕೆಲವು ವಿಕಲ್ಪಬಿಂದುಗಳು, ಕೆಲವು ದ್ವಿತ್ವಗಳು, ಕೆಲವು ಶಿಥಿಲದ್ವಿತ್ವಗಳು, ಕೆಲವು ದ್ವಿತ್ವ-ಶಿಥಿಲದ್ವಿತ್ವಗಳು.

ನಿಜಬಿಂದು ಪದ : ತೋಂಟ, ದಾಂಟು ಇತ್ಯಾದಿ.
ವಿಕಲ್ಪಬಿಂದು ಪದ : ಜಿನುಂಗು-ಜಿನುಗು, ನೊರಂಜು-ನೊರಜು ಇತ್ಯಾದಿ.
ದ್ವಿತ್ವಪದ : ಕಪ್ಪಡಿ, ಕಟ್ಟೆ ಇತ್ಯಾದಿ

ಶಿಥಿಲದ್ವಿತ್ವ ಪದ : ತೆಗಟ್ಬಂ, ಪೊಗಟ್ಬಂ ಇತ್ಯಾದಿ.
ದ್ವಿತ್ವ-ಶಿಥಿಲದ್ವಿತ್ವ ಪದ : ಪೊರಳ್ದಂ, ತಗುಳ್ದಂ ಇತ್ಯಾದಿ.

೪೭-೪೮-೪೯

ಉರ್ದುಂ ಬಿರ್ದುಂ ತರ್ದುಂ
ಮರ್ದುಂ ಗುರ್ದುಂ ಸಮಂತು ತಿರ್ದುಂ ಪರ್ದುಂ
ಗರ್ದುಱುಮುರ್ದಿದುದೆನೆಯುಂ
ಗರ್ದೆಯುಮಾ ಗುರ್ದೆಯುಂ ಸರೇಫಪದಂಗಳ್

ನುರ್ಗಿದುದೆನೆ ನೆರ್ಗಿದುದೆನೆ
ಕಿರ್ಗಿದುದೆನೆ ಜರ್ಗುವಿಟ್ಟುದೆನೆ ಪೆರ್ಗೆರ್ತಾ
ವೊರ್ಗಾದರ್ ಪೆರ್ಗಳಮೆನೆ
ಕುರ್ಗಿದುದೆನೆ ಮಾರ್ಗದೊಳ್ ಸರೇಫಪದಂಗಳ್

ಇರ್ಪುಂ ತೋರ್ಪುಂ ಕೆರ್ಪುಂ
ನೇರ್ಪುಂ ಸಿರ್ಪೆಯುಮಡರ್ಪುಮಾರ್ಪುಂ ಕೂರ್ಪುಂ
ಪರ್ಪರಿಕೆಯುಮೆರ್ಪುಂ ಮೆ
ಯ್ಗರ್ಪುಂ ಮೊದಲಾಗಿ ರೇಫಸಂಯೋಗಂಗಳ್

ಉರ್ದು, ಬಿರ್ದು, ತರ್ದು, ಮರ್ದು, ಗುರ್ದು, ತಿರ್ದು, ಪರ್ದು, ಗರ್ದುಱು, ಉರ್ದಿದುದು, ಗರ್ದೆ, ಗುರ್ದೆ, ನುರ್ಗಿದುದು, ನೆರ್ಗಿದುದು, ಕಿರ್ಗಿದುದು, ಜರ್ಗುವಿಟ್ಟುದು, ಪೆರ್ಗೆರ್ತಾವೊರ್ಗಾದರ್ (?), ಪೆರ್ಗಳಂ, ಕುರ್ಗಿದುದು, ಇರ್ಪು, ತೋರ್ಪು,ಕೆರ್ಪು, ನೇರ್ಪು, ಸಿರ್ಪೆ, ಅಡರ್ಪು, ಆರ್ಪು, ಕೂರ್ಪು, ಪರ್ಪರಿಕೆ, ಎರ್ಪು, ಮೆಯ್ಗರ್ಪು - ಈ ಮುಂತಾದುವು ಸರೇಫಪದಗಳು.

೫೦-೫೧*

ಆರ್ದಂ ಸಾರ್ದಂ ಪಾರ್ದಂ
ತೀರ್ದಂ ಪೋರ್ದಂ ಸಮಂತು ಪೀರ್ದಂ ಕಾರ್ದಂ
ನೋರ್ದಂ ಬಾರ್ದಂ ಗೋರ್ದಂ
ಸೋರ್ದಂ ತಾನೆಂದೊಡಂ ಗುರೂಪಧೆಯೆನಿಕುಂ

ಊರ್ಗಳ್ ಕೇರ್ಗಳ್ ಬೇರ್ಗಳ್
ನಾರ್ಗಳ್ ತೇರ್ಗಳ್ ನೆಗಟ್ತೆಯಾರ್ಗಳ್ ಕೂರ್ಗಳ್
ನೀರ್ಗಳ್ ಸೀರ್ಗಳ್ ತಾರ್ಗಳ್
ಸೂರ್ಗಳ್ ಕಾರ್ಗಳ್ ಗುರೂಪಧಂ ತಾವೆನಿಕುಂ

---

* ಸೂತ್ರ ೪೭ರಿಂದ ೫೧ರ ವರೆಗೆ ಕಿಟೆಲ್ ಆವೃತ್ತಿಯ ಅನುಕ್ರಮವನ್ನು ಅನುಸರಿಸಿದ್ದೇವೆ.

ಆರ್ದಂ, ಸಾರ್ದಂ, ಪಾರ್ದಂ, ತೀರ್ದಂ, ಪೋರ್ದಂ, ಪೀರ್ದಂ, ಕಾರ್ದಂ, ನೋರ್ದಂ, ಬಾರ್ದಂ, ಗೋರ್ದಂ, ಸೋರ್ದಂ, ಊರ್ಗಳ್, ಕೇರ್ಗಳ್, ಬೇರ್ಗಳ್, ನಾರ್ಗಳ್, ತೇರ್ಗಳ್, ಆರ್ಗಳ್, ಕೂರ್ಗಳ್, ನೀರ್ಗಳ್, ಸೀರ್ಗಳ್, ತಾರ್ಗಳ್, ಸೂರ್ಗಳ್, ಕಾರ್ಗಳ್-ಇವು ಗುರೂಪಧೆ (ಇವುಗಳ ಉಪಾಂತ್ಯಸ್ವರ ಗುರು =ದೀರ್ಘ)ಆಗಿವೆ.

ಶಿಥಿಲದ್ವಿತ್ವ ಪದ ವಿಚಾರ :

೫೨

ಪಿಂತಮರ್ದಿರೆ ಟಟಕುಳರೇ
ಫಾಂತಂ ಹ್ರಸ್ವಾದಿಲಿಂಗಮಂತಾಗಳ್ ಮೇ
ಣಂತೆ ಚತುರ್ಥಿಯ ಗೆಯೆ ಮೇ
ಣ್ಮುಂತಮರ್ದಿರೆ ಪಿರಿದುಮೊದವುಗುಂ ಶಿಥಿಲತ್ವಂ

ಹ್ರಸ್ವಾದಿಯಾದ ಟಟಕುಳರೇಫಾಂತವಾದ ನಾಮಪ್ರಕೃತಿ (=ಲಿಂಗ) ಹಿಂದೆ, (ಬಹುವಚನದ) ಗಳ್ ಮತ್ತು ಚತುರ್ಥಿಯ ಗೆ ಮುಂದೆ ಹೊಂದಿಕೊಂಡಿರಲು ಹೆಚ್ಚಾಗಿ ಶಿಥಿಲದ್ವಿತ್ವವುಂಟಾಗುತ್ತದೆ.

ಟಟಾಂತಕ್ಕೆ : ಎಸಟ್ +ಗಳ್=ಎಸಟ್ಗಳ್, ಎಸಟ್+ಗೆ=ಎಸಟ್ಗೆ.

ಕುಳಾಂತಕ್ಕೆ : ಅಮಳ್+ಗಳ್=ಅಮಳ್ಗಳ್, ಅಮಳ್+ಗೆ=ಅಮಳ್ಗೆ
ಅಮಳ್ಗಳ್ ನಯಗುಣವಿಕ್ರಮ
ದಮಳ್ಗಳ್....

ರೇಫಾಂತಕ್ಕೆ : ಬೆಮರ್+ಗಳ್=ಬೆಮರ್ಗಳ್, ಬೆಮರ್+ಗೆ=ಬೆಮರ್ಗೆ.
ಬೆಮರ್ಗಳನೂದಿ ನುಣ್ದೊಡೆಗಳಂ ಪಿಡಿಕೆಯ್ಸಿ....

೫೩

ಗದವಜಕಾರಮವಿದಿರಿರೆ
ಪದಮಧ್ಯಂ ವಿಷಯಮಾಗನೇಕಾಕ್ಷರದೊಳ್
ಪುದಿಯೆ ಲಘೂಪಧೆ ಕೆಲಕೆಲ
ವೊದವಿರ್ಕುಂ ರಾಂತಳಾಂತಮವು ಶಿಥಿಲತೆಯುಂ

ಅನೇಕಾಕ್ಷರಯುಕ್ತವಾದ ಲಘೂಪಧೆಯಾದ ರಾಂತ, ಳಾಂತಗಳಿಗೆ ಗದವಜಕಾರಗಳು ಪರವಾದರೆ ಸಮಾಸಮಧ್ಯದಲ್ಲಿ ಶಿಥಿಲದ್ವಿತ್ವವುಂಟಾಗುತ್ತದೆ.

ರಾಂತಕ್ಕೆ : ಕುಳಿರ್+ಗಾಳಿ=ಕುಳಿರ್ಗಾಳಿ
ತಳಿರ್+ತೋರಣಂ=ತಳಿರ್ದೋರಣಂ
ಬೆಮರ್+ಪನಿ=ಬೆಮರ್ವನಿ
ಕದಿರ್+ಜೊನ್ನಂ=ಕದಿರ್ಜೊನ್ನಂ

ಳಾಂತಕ್ಕೆ : ಮುಗುಳ್+ಕಾಯ್=ಮುಗುಳ್ಗಾಯ್

ಅಮಳ್+ತೊಂಗಲ್=ಅಮಳ್ದೊಂಗಲ್

ಎಸಳ್+ಪಸೆ=ಎಸಳ್ವಸೆ

ಅಮಳ್+ಜಂತ್ರಂ=ಅಮಳ್ಚಂತ್ರಂ

೫೪

ಪುಗೆ ದದಪವಕಾರಂ ವಿಧಿ
ಯ ಗೆಕಾರಂ ವರ್ತಮಾನಕಾಲದ ಗುಂ ಧಾ
ತುಗೆ ಱಟಕುಳರೇಫಾಂತ
ಕ್ಕೊಗೆಗುಂ ಶಿಥಿಲತ್ವಮಗುರುಪೂರ್ವಸ್ಥಿತಿಯಿಂ

ಹ್ರಸ್ವಾದಿಯಾದ ಱಟ ಕುಳ ರೇಫಾಂತ ಧಾತುಗಳಿಗೆ (ಭೂತ, ವರ್ತಮಾನ, ಭವಿಷ್ಯತ್ಕಾಲಗಳ) ದ ಪದ ವ, ವಿಧ್ಯರ್ಥದ ಗೆ, ವರ್ತಮಾನಕಾಲದ ಗುಂ ಪರವಾಗಲು ಶಿಥಿಲದ್ವಿತ್ವವುಂಟಾಗುತ್ತದೆ.

ಱಟಾಂತಕ್ಕೆ : ತೆಗಱ್+ದ+ಅಂ=ತೆಗಱ್ದಂ, ತೆಗಱ್ದಪಂ, ತೆಗಱ್ವಂ, ತೆಗಱ್ಗೆ, ತೆಗಱ್ಗುಂ.

ಕುಳಾಂತಕ್ಕೆ : ಮಗುಳ್+ದ+ಅಂ=ಮಗುಳ್ದಂ, ಮಗುಳ್ದಪಂ, ಮಗುಳ್ವಂ, ಮಗುಳ್ಗೆ, ಮಗುಳ್ಗುಂ.

ರೇಫಾಂತಕ್ಕೆ : ತೊಡರ್+ದ+ಅಂ=ತೊಡರ್ದಂ, ತೊಡರ್ದಪಂ, ತೊಡರ್ವಂ, ತೊಡರ್ಗೆ, ತೊಡರ್ಗುಂ.

೫೫

ಬರ್ದಿಲಂ ಸಗ್ಗಕ್ಕೆ ಪೆಸರ್
ಗರ್ದುಗೆಸೆವಮರ್ದಮರ್ದುವಳ್ಳಿ ಕಂಪಲರ್ದುದೆನ
ಲ್ಕೆರ್ದೆವಾಯದಿರ್ಮುತ್ತೆ ಪೊದ
ಳ್ದೆರ್ದೆಯೆಂಬಿವು ಸಹಜಶಿಥಿಲವೃತ್ತಿಯನಾಳ್ಗುಂ

ಬರ್ದಿಲ(=ಸ್ವರ್ಗ), ಗರ್ದುಗು, ಅಮರ್ದು, ಅಮರ್ದುವಳ್ಳಿ, ಅಲರ್ದುದು, ಎರ್ದೆವಾಯ್, ಅದಿರ್ಮುತ್ತೆ, ಎರ್ದೆ ಎಂಬಿವು ಸಹಜಶಿಥಿಲದ್ವಿತ್ವವನ್ನು ಪಡೆದಿರುತ್ತವೆ.*

೫೬

ನರವುಂ ನೆರವುಂ ದೇವರ
ಬರವುಂ ತೆರವುಂ ನೆಗೞ್ತೆಯೆೞ್ತರವುಂ ಸಂ
ಚರಿಸುವ ನೊಳವುಂ ತಾವರೆ
ಬರ ಮತದಿಂದಂತ್ಯವರ್ಣಲೋಪಮನಾಳ್ಗುಂ

---

* ವಿಚಾರ : ಅಲರ್ದುದು ಎಂಬಲ್ಲಿ ಸಹಜ ಶಿಥಿಲದ್ವಿತ್ವವಿಲ್ಲ; ಸೂತ್ರ ೫೪ ನೋಡಿರಿ. ಅಮರ್ದು–ಅಮರ್ದುವಳ್ಳಿ; ಎರ್ದೆ–ಎರ್ದೆವಾಯ್ ಎಂಬ ಜೋಡಿಪದ ಇಲ್ಲಿ ಅನವಶ್ಯ

ನರವು, ನೆರವು, ಬರವು, ತೆರವು, ಎಟ್ಟಿರವು, ನೊಳವು-ಇವು ಕೆಲವರ ಅಭಿಪ್ರಾಯದಂತೆ ಅಂತ್ಯವರ್ಣ(=ವಕಾರ) ಲೋಪವನ್ನು ಪಡೆಯುತ್ತವೆ.

ನರವು-ನರಂ, ನೆರಂ, ಬರಂ, ತೆರಂ, ಎಟ್ಟಿರಂ, ನೊಳಂ

೫೭

ಪುದಿಗುಂ ನಿರ್ಧಾರಣದ
ಲ್ಲದೆಯೆಂಬ ದೆಕಾರದೆಡೆಗೆ ಪಿರಿದುಂ ಲೋಪಂ,
ಪುದಿಯದು ಲೋಪಂ ಪ್ರತಿಷೇ
ಧದೊಳಲ್ಲದುವೆಂಬ ಪದವನಲ್ತೆನಲಕ್ಕುಂ

ನಿರ್ಧಾರಣಾರ್ಥದ 'ಅಲ್ಲದೆ' ಎಂಬುದರ ದೆಕಾರಕ್ಕೆ ವಿಕಲ್ಪವಾಗಿ ಲೋಪವುಂಟಾಗುತ್ತದೆ. ಪ್ರತಿಷೇಧಾರ್ಥದ ('ಅಲ್ಲದು' ಎಂಬುದರ ದುಕಾರದ)ಲ್ಲಿ ಲೋಪವುಂಟಾಗದು; 'ಅಲ್ಲದು' ಎಂಬ ಪದವನ್ನು 'ಅಲ್ತು' ಎನ್ನಲಾಗುವುದು.

ದೆಕಾರ ಲೋಪಕ್ಕೆ : ಗೊರವನಲ್ಲದೆ ಪೊಗಟೆಂ >ಗೊರವನಲ್ಲ ಪೊಗಟೆಂ

ಅಲ್ತು ಎಂಬುದಕ್ಕೆ (ಲಿಂಗತ್ರಯ) : ಅವನಲ್ತು, ಅವಳಲ್ತು, ಅದಲ್ತು.

(ವಚನತ್ರಯ) : ಒರ್ವನೆ ಗಂಡನಲ್ತೆ ಜಗತೀತಳದೊಳ್.

ಆ ಇರ್ವರೆ ತೋಳ್ಗಳಲ್ತೆ ನೃಪತಿಗೆ ರಣದೊಳ್.

ತೇಜೋನಿಧಿ ಕವಿನಿಳಯದೊಳೀಷತ್ಪ್ರಭರ್ ಮಹಾಪ್ರಭರಲ್ತೇ

೫೮

ಯರಲಣನಳಱಟವರ್ಣೋ
ತ್ಕರಮೆ ವಲಂ ಪದದ ಕಡೆಯೊಳಸ್ವರವಿಧಿಯಂ
ಪಿರಿದುಂ ತಾಳ್ದುಗುಮಿವನಱಿ
ವರೆ ಕನ್ನಡಗಬ್ಬದೊಳ್ ತೊಡಂಕದೆ ಸಲ್ವರ್

ಯ ರ ಲ ಣ ನ ಳ ಱ ಟ ವರ್ಣಗಳು, ಪದಾಂತ್ಯದಲ್ಲಿ ಹೆಚ್ಚಾಗಿ ಸ್ವರರಹಿತವಿಧಿಯನ್ನು ತಳೆದಿರುತ್ತವೆ. ಇವುಗಳನ್ನು ಬಲ್ಲವರೇ ಕನ್ನಡ ಕವಿತ್ವದಲ್ಲಿ ತೊಡಕಿಲ್ಲದೆ ಸಲ್ಲುತ್ತಾರೆ.

ಯಕಾರಕ್ಕೆ	:	ಕೆಯ್, ಮೆಯ್
ರೇಫೆಗೆ	:	ನಾರ್, ಬೇರ್
ಲಕಾರಕ್ಕೆ	:	ಪಾಲ್, ಕೇಲ್
ಣಕಾರಕ್ಕೆ	:	ಪವಣ್, ನಾಣ್
ನಕಾರಕ್ಕೆ	:	ಪೊನ್, ಬೆನ್
ಳಕಾರಕ್ಕೆ	:	ಮಿದುಳ್, ಕುರುಳ್
ಱಕಾರಕ್ಕೆ	:	ಏಱ್, ಬಸಿಱ್
ಟಕಾರಕ್ಕೆ	:	ಬೀಟ್, ಬಾಟ್

ಸಂಧಿ ವಿಚಾರ :

೫೯

ಎರಡುಂ ಪಲವುಂ ವರ್ಣಂ
ಪರಸ್ಪರಂ ಕೂಡುವಂದಮದೆ ಸಂಧಿ ವಲಂ,
ಸ್ವರರಹಿತ ವ್ಯಂಜನಮವು
ಪರವರ್ಣಮನೆಯ್ದುತಿರ್ಪುವಾ ಸಂಹಿತೆಯೊಳ್

ಎರಡು ಇಲ್ಲವೆ ಹಲವು ಅಕ್ಷರಗಳು ಪರಸ್ಪರ ಕೂಡುವ ರೀತಿಯೇ ಸಂಧಿ. ಆ ಸಂಧಿಕಾರ್ಯದಲ್ಲಿ ಸ್ವರರಹಿತ ವ್ಯಂಜನಗಳು ಮುಂದಿನ ಅಕ್ಷರದೊಂದಿಗೆ ಸೇರಿಕೊಳ್ಳುತ್ತವೆ.

ಸ್ವರಯುಕ್ತ ವ್ಯಂಜನಕ್ಕೆ :	ಕೂರ್ತು+ಈವಂ=ಕೂರ್ತೀವಂ
ಸ್ವರರಹಿತ ವ್ಯಂಜನಕ್ಕೆ :	ಜಾಣ್+ಉಂಟು=ಜಾಣುಂಟು
	ಕುರುಳ್+ಕೊಂಕಾಯ್ತು=ಕುರುಳ್ಕೊಂಕಾಯ್ತು

೬೦

ಪದಮಧ್ಯಂ ಪದದಂತ್ಯಂ
ವಿದಗ್ಧರಿಂ ಸಂಧಿವಿಷಯಮೆರಡಕ್ಕುಮಿಳಾ
ವಿದಿತ ಪ್ರಕೃತಿ ಪ್ರತ್ಯಯ
ದೊದವಿದ ಪದಯುಗದ ಬೆರಕೆ ಬೇಡಿರ್ದುದಱಿಂ

ಪಂಡಿತರ ಮತದಂತೆ ಪ್ರಕೃತಿ ಪ್ರತ್ಯಯಗಳ, ಪದಯುಗದ ಬೆರಕೆಯಿಂದ (ಅನುಕ್ರಮವಾಗಿ) ಪದಮಧ್ಯ, ಪದಾಂತ್ಯ ಎಂದು ಸಂಧಿ ಎರಡು ತೆರನಾಗಿದೆ.

ಪದಮಧ್ಯ ಸಂಧಿ - (ನಾಮ + ವಿಭಕ್ತಿ)	:	ಮಾತು+ಇಂ=ಮಾತಿಂ
(ಧಾತು+ವಿಭಕ್ತಿ)	:	ನುಡಿದ+ಅರ್=ನುಡಿದರ್
ಪದಾಂತ್ಯ ಸಂಧಿ-(ನಾಮಪದ+ನಾಮಪದ)	:	ಕಾಮನ+ಅಂಡಲೆ=ಕಾಮನಂಡಲೆ
(ಕ್ರಿಯಾಪದ+ನಾಮಪದ)	:	ಮಾಡಿದರ್+ಅವರ್=ಮಾಡಿದರವರ್

೬೧

ಇದು ಪೂರ್ವಪ್ರಕರಣಮಿಂ
ತಿದಱೊಳ್ ಸಾಕಲ್ಯಸಂಜ್ಞೆ ಪೇ[ಳ್ದು]ವೆನಲ್ವೇ
ಡುದಿತ ಪ್ರಕರಣಗಣಸೂ
ತ್ರದಿಷ್ಟದಿಂ ಸಂಜ್ಞೆಯೊಡನೆ ಪೇೞಲ್ಪಡೆಗುಂ

ಇದು ಪೂರ್ವಪ್ರಕರಣ. ಸಕಲಸಂಜ್ಞೆಗಳು ಇದರಲ್ಲಿ ಹೇಳಲಾಗಿವೆಯೆಂದು ತಿಳಿಯಬೇಡ. ಮುಂಬರುವ ಪ್ರಕರಣಗಳಲ್ಲಿಯ ಸೂತ್ರಗಳ ಇಷ್ಟದಂತೆ (ಅವು) ಸೂಚ್ಯವಾಗಿ ಹೇಳಲ್ಪಡುವವು.

ಸ್ವರ ಸಂಧಿ :

೭೨

ಸ್ವರಮಿದಿರೊಳಿರೆ ವಿಭಕ್ತಿ
ಸ್ವರಕಂ ಪ್ರಕೃತಿಸ್ವರಕ್ಕಮಕ್ಕುಂ ಲೋಪಂ,
ವರ ಸಂಸ್ಕೃತ ಕರ್ಣಾಟಕ
ಮೆರಡಱೊಳಂ ನಾಮರೂಢಿಯಟಿಯದ ಪಕ್ಷಂ

ಸಂಸ್ಕೃತ ಕನ್ನಡಗಳ ಪ್ರಕೃತಿಸ್ವರಕ್ಕೆ ಮತ್ತು (ಈ ಪ್ರಕೃತಿಗಳಿಗೆ ಹತ್ತಿದ ಕನ್ನಡ) ವಿಭಕ್ತಿ ಸ್ವರಕ್ಕೆ ಸ್ವರಪದವಾದರೆ, ಅರ್ಥ ಪ್ರಸಿದ್ಧಿ ಕೆಡದ ಪಕ್ಷದಲ್ಲಿ ಲೋಪವುಂಟಾಗುತ್ತದೆ.

ಸಂಸ್ಕೃತ-ಪ್ರಕೃತಿ ಸ್ವರಲೋಪಕ್ಕೆ	:	ರಾಗ+ಇಸು=ರಾಗಿಸು
ಸಂಸ್ಕೃತ-ವಿಭಕ್ತಿ ಸ್ವರಲೋಪಕ್ಕೆ	:	ಈಶ್ವರನ+ಒಲವು=ಈಶ್ವರನೊಲವು
ಕನ್ನಡ-ಪ್ರಕೃತಿ ಸ್ವರಲೋಪಕ್ಕೆ	:	ಸುತ್ತು+ಓಲೆ=ಸುತ್ತೋಲೆ
ಕನ್ನಡ-ನಾಮ ವಿಭಕ್ತಿ ಸ್ವರಲೋಪಕ್ಕೆ	:	ನೆಲದಿಂದೆ+ಉಣ್ಬಂ=ನೆಲದಿಂದುಣ್ಬಂ
ಕನ್ನಡ-ಕ್ರಿಯಾ ವಿಭಕ್ತಿ ಸ್ವರಲೋಪಕ್ಕೆ	:	ಮಾಡಿದೆವು+ಒಳ್ಪಂ=ಮಾಡಿದೆವೊಳ್ಪಂ
ಸಂಸ್ಕೃತ-ಅರ್ಥ ಕೆಡುವುದಕ್ಕೆ	:	ವಿಧು+ಇದು=ವಿಧಿದು
ಕನ್ನಡ-ಅರ್ಥ ಕೆಡುವುದಕ್ಕೆ	:	ಮಡು+ಇದು=ಮಡಿದು

೭೩

ಆತ್ವದಿನಿವರ್ಣದಿಂ ಮ
ತ್ತೋತ್ವದಿನೈತ್ವದಿನೆವರ್ಣದಿಂ ಮುಂದಕ್ಕುಂ
ಯತ್ವಮದವಧಾರಣೆ ಪರ
ಮತ್ವಂ ಪಿಂತಾಗೆ ಷಷ್ಟಿನಿಯಮದೆ ಯತ್ವಂ

ಆ, ಇ, ಈ, ಎ, ಏ, ಐ, ಓ ಕಾರಗಳಿಗೆ (ಸ್ವರಪರವಾದರೆ) ಅವುಗಳ ಮುಂದೆ ಯಕಾರಾಗಮವಾಗುತ್ತದೆ. ಷಷ್ಠಿಯ ಅಕಾರ ಹಿಂದೆ, ಅವಧಾರಣೆ(ಯ ಎಕಾರ) ಮುಂದೆ ಇರಲು ಯಕಾರಾಗಮವಾಗುತ್ತದೆ.

ಆಕಾರಕ್ಕೆ : ಆ+ಇರ್ದ=ಆಯಿರ್ದ
ಆಯಿರ್ದ ಮಾಟ್ಕೆಯಿಂ ಪರ
ಮಾಯುಷ್ಯಾಂತಂಬರಂ....

ಇಕಾರಕ್ಕೆ : ಪಿಡಿ+ಎಂದು=ಪಿಡಿಯೆಂದು
ಪಿಡಿಯೆಂದಸಿತಾಳಪತ್ರಮಂ ಯತಿ ಕೊಟ್ಟಂ

ಈಕಾರಕ್ಕೆ : ಈ+ಅಲ್=ಈಯಲ್
ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ....

ಎಕಾರಕ್ಕೆ : ಪಸೆ=ಇರ್ದಂ=ಪಸೆಯಿರ್ದಂ
ಪಸೆಯಿರ್ದಂ ಗರುಡವೇಗನೃಪನಂದನೆಯೊಳ್

ಏಕಾರಕ್ಕೆ : ಉಘೇ+ಎಂದು =ಉಘೇಯೆಂದು
....ಭೋಂ ।
ಕನೆ ದೇವಸ್ತ್ರೀಯರಾರಾತ್ರಿಕ್ರಮನುಘೆಯುಘೇಯೆಂದು ತಂದೆತ್ತುತಿರ್ದರ್

ಐಕಾರಕ್ಕೆ : ಭೈ+ಎಂಬಿನಂ=ಭೈಯೆಂಬಿನಂ.

ಒಡೆದದ್ರಿಕ್ಷಿತಿ ಸಂಧಿ ಪತ್ತುವಿಡೆ ಭೈಭೈಯೆಂಬಿನಂ ಕಿಱ್ತು....

ಓಕಾರಕ್ಕೆ : ಜೋ+ಎಂದು =ಜೋಯೆಂದು

....ಅಮರಾಂ ।

ಗನೆಯರ್ ಜೋಯೆಂದು ಪಾಡಿದರ್ ಜೋಗುಳಮಂ

ಅವಧಾರಣೆಗೆ : ಆತನ+ಎ = ಆತನಯೆ

ಆತನಯೆ ತೋರದೊಡೆಗಳಿ

ವಾತನ ನಿಡುದೋಳೆ ನಡೆಯುಮಾತನ ನುಡಿ ದಲ್

೬೪

ಸದಮಲ ಸಂಸ್ಕೃತ ಕರ್ಣಾ
ಟದದಂತಪ್ರಕೃತಿಗಳ್ಗಿಸು ಪ್ರತ್ಯಯಮಿಂ
ತಿದಿರಾಗೆ ಯತ್ವಮನುಕೃತಿ
ಪದಕಂ ಮುಂದನುಕೃತಿಸ್ವರಂ ನಿಲೆ ಯತ್ವಂ

ಸಂಸ್ಕೃತ, ಕನ್ನಡ ಅಕಾರಾಂತಪ್ರಕೃತಿಗಳಿಗೆ 'ಇಸು' ಪ್ರತ್ಯಯ ಪರವಾದರೆ, ಯಕಾರಾಗಮವುಂಟು. (ಅಕಾರಾಂತ) ಅನುಕರಣಪದಕ್ಕೆ ಅನುಕರಣಸೂಚಕ ಸ್ವರ ಪರವಾದರೆ ಯಕಾರಾಗಮವುಂಟು.

ಸಂಸ್ಕೃತಕ್ಕೆ : ಶುದ್ಧ+ಇಸಿದಂ = ಶುದ್ಧಯಿಸಿದಂ

ಕನ್ನಡಕ್ಕೆ : ಕೋರ+ಇಸಿದಂ = ಕೋರಯಿಸಿದಂ

ಅನುಕರಣ ಪದಕ್ಕೆ : ಪಟಪಟ+ಎಂದು = ಪಟಪಟಯೆಂದು

ಪಟಪಟಯೆಂದಾಲಿಕಲ್ಗಳುದಿರ್ದುವು ನಭದಿಂ

೬೫

ಅವತರಿಸಿರ್ಕುಮುವರ್ಣದ
ಋವರ್ಣದೋತ್ವೌತ್ವದಗ್ರದೊಳ್ ಸ್ವರಮಿರೆ ವ
ತ್ವವಿಧಾನಂ ಬಹುಳತೆ ಯ
ತ್ವವತ್ವದೊಳ್ ಸಂಸ್ಕೃತಕ್ಕೆ ತಾನಿಲ್ಲೆಂದುಂ

ಉ, ಊ, ಋ, ೠ, ಓ, ಔ ಕಾರಗಳಿಗೆ ಸ್ವರಪರವಾದರೆ ವಕಾರಾಗಮವಾಗುತ್ತದೆ. ಸಂಸ್ಕೃತ (ಶಬ್ದ)ಕ್ಕೆ ಯಕಾರ ವಕಾರಾಗಮ ಸಂಧಿಗಳಲ್ಲಿ ವಿಕಲ್ಪತೆ ಎಂದಿಗೂ ಇಲ್ಲ.

ಉಕಾರಕ್ಕೆ : ಮನು+ಇನ=ಮನುವಿನ

ಮನುವಿನ ಮಾರ್ಗಂ ಸುರಗುರು

ವಿನಜೆವು....

ಊಕಾರಕ್ಕೆ : ಪೂ+ಇನ=ಪೂವಿನ

ಪೂವಿನ ಬಿಲ್ಲ ಕೊಪ್ಪನೊದೆದೇಜೆಸಿ ತಾವರೆನೂಲ ನಾರಿಯಂ

ಜೇವೊಡೆಗೆಯ್ದು....

ಋಕಾರಕ್ಕೆ : ಹೋತೃ+ಎ=ಹೋತೃವೆ.

ಹೋತೃವೆಯಾನಧ್ವರಿಯೈ

ಭ್ರಾತೃವೆ ನೀನುಟಿದ ಋತ್ವಿಜರ್....

ೠಕಾರಕ್ಕೆ : ೠ+ಎಂದು=ೠವೆಂದು

ಓಕಾರಕ್ಕೆ : ಗೋ+ಇನ=ಗೋವಿನ

ಔಕಾರಕ್ಕೆ : ನೌ+ಅಂ=ನೌವಂ

ಸಂಸ್ಕೃತ ಶಬ್ದದಲ್ಲಿಯ ಯಕಾರ ವಕಾರಾಗಮಗಳ ಅವಿಕಲ್ಪತೆಗೆ:

ನದಿ+ಎಲ್ಲಂ=ನದಿಯೆಲ್ಲಂ

ನದಿಯೆಲ್ಲಂ ಸುರಸಿಂಧುವೆ....

ವಿಧು+ಇಲ್ಲ=ವಿಧುವಿಲ್ಲ.

ವಿಧುವಿಲ್ಲದಿರುಳ್....

೬೬

ಅವಿಕೃತಿಗಳೆವರ್ಣಮೊವ
ರ್ಣವಂತ್ಯವೆನಿಸಿದ ನಿಪಾತಮವಧಾರಣೆ ತ
ಳ್ತ ವಿಶಂಕೆಗಳೆಂಬಿವಱೊಳ್
ವ್ಯವಹರಿಸದು ಸಂಧಿಯಾ ಪ್ಲುತಕ್ಕಮಭಾವಂ

ಎ ಏ, ಒ ಓಕಾರಗಳು ಅಂತ್ಯದಲ್ಲಿರುವ ನಿರ್ವಿಕಾರಿಗಳಾದ ನಿಪಾತ, ಅವಧಾರಣೆ, ವಿಶಂಕೆಗಳಿಗೆ (ಸ್ವರ ಪರವಾದರೆ) ಸಂಧಿಯಾಗುವುದಿಲ್ಲ; ಪ್ಲುತಕ್ಕೂ (ಸ್ವರ ಪರವಾದರೆ) ಸಂಧಿಯಿಲ್ಲ.

ನಿಪಾತಕ್ಕೆ : ಅರೆ+ಎಡೆ=ಅರೆ ಎಡೆ.

ಅರೆ ಎಡೆ ಹಸ್ತಿಶಿಕ್ಷಣವಿಚಕ್ಷಣರಿಂದರೆ ಅಶ್ವಶಿಕ್ಷೆಯಿಂ...

ಎಲೇ+ಇದಲ್ತೆ=ಇಲೇ ಇದಲ್ತೆ.

.... ಎಲೇ ಇದಲ್ತೆ ತುಹಿನಕ್ಷೋಣೀಧ್ರದುತ್ತುಂಗಸಾ

ನುಗುಳೊಳ್....

ಓಹೋ+ಇರಲಿಂ=ಓಹೋ ಇರಲಿಂ.

ಓಹೋ ಇರಲಿಂ ಪೆಱವರ

ಮಹಾತ್ಮ್ಯಮುಂ....

ಅವಧಾರಣೆಗೆ : ಆತನೆ+ಇಂದ್ರಂ=ಆತೆನೆ ಇಂದ್ರಂ.

....ಧನಮುಳ್ಳನಾವೊನಂ

ತಾತನೆ ಇಂದ್ರನಾತನೆ ಗುಣೋನ್ನತನಾತನೆ ಅಂಬುಜೋದರಂ

ವಿಶಂಕೆಗೆ : ಈವನೆ+ಅಃ ಪಿರಿದೀವಂ = ಈವನೆ ಅಃ ಪಿರಿದೀವಂ.

ಇನಿಯನೆ ಬೆಲ್ಲದಿಂದಿನಿಯನೀವನೆ ಅಃ ಪಿರಿದೀವನಿತ್ತುದಂ

ನೆನೆವನೆ ಚಿಃ ಅದಂ ನೆನೆಯಂ

ಆನೆಯೊ+ಅದ್ರಿಯೊ=ಆನೆಯೊ ಅದ್ರಿಯೊ

ಪ್ಲುತಕ್ಕೆ : ಕುಕ್ಕೂಕೂs+ಎಂದು =ಕುಕ್ಕೂಕೂs ಎಂದು.

ಕುಕ್ಕೂಕೂs ಎಂದು ಕೋೞಿ ಕೂಗಿದುವಾಗಳ್

೬೭

ಮೆಚ್ಚಿನೊಳಾಕ್ಷೇಪಕದೊಳ್
ಬೆಚ್ಚೋೞವಭ್ಯುಪಗಮಾರ್ಥದೆಮುಶಬ್ದಂ ಕ
ಟ್ಟಚ್ಚರಿಯ ಗಡಾರ್ಥಾತ್ವಂ
ಬಿಚ್ಚಿರ್ಕುಂ ಸ್ವರಮವಿದಿರೊಳಿರೆ ಖೇದದೊಳಂ

ಮೆಚ್ಚಿನಲ್ಲಿ ಮತ್ತು ಆಕ್ಷೇಪದಲ್ಲಿ ನೆಲೆಸಿದ ಓ, ಅಂಗೀಕಾರಾರ್ಥದ ಎಮು, ಆಶ್ಚರ್ಯಾರ್ಥದ ಗಡ ಶಬ್ದಕ್ಕೆ ಆದೇಶವಾಗಿ ಬರುವ ಆ - ಇವುಗಳಿಗೆ ಸ್ವರ ಪರವಾದರೆ ಸಂಧಿಯಿಲ್ಲ, ಖೇದದಲ್ಲಿಯೂ (ಸಂಧಿಯಿಲ್ಲ).

ಮೆಚ್ಚಿಗೆ	:	ಏನೇನೋ +ಓದಿನ=ಏನೇನೋ ಓದಿನ.
		ಏನೇನೋ ಓದಿನ ಪರಿ ಲೇಸು ಲೇಸು....
ಆಕ್ಷೇಪಕ್ಕೆ	:	ಎಡಱಿದನೋ +ಅವನ=ಎಡಱಿದನೋ ಅವನ.
		ಎಡಱಿದನೋ ಅವನ ನೊಸಲಕ್ಕರಂ ತೊಡೆದುದಕ್ಕುಂ....
ಎಮು ಶಬ್ದಕ್ಕೆ	:	ಸಿಂಗಮಕ್ಕೆಮು+ಅಂಜೆಂ=ಸಿಂಗಮಕ್ಕೆಮು ಅಂಜೆಂ
ಗಡಾರ್ಥದ ಆಕಾರಕ್ಕ	:	(ಪಾಲ್+ಗಡ>ಆ=)ಪಾಲಾ+ಅಮರ್ದಾ=ಪಾಲಾ ಅಮರ್ದಾ.
		ಪಾಲಾ ಅಮರ್ದಾ ಇನಿದು ಗಡಾ....
ಖೇದಕ್ಕೆ	:	ಅಕ್ಕಟಾ+ಇಂದ್ರಂಗೆ=ಅಕ್ಕಟಾ ಇಂದ್ರಂಗೆ.
		ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ

೬೮

ಪೊಱಗೊಳಗು ಪೊಸತು ಪೞದೆಳ
ದಱಿಕೆಯದಂತತೆಯನಾ ಸಮಾಸಾಂತರದೊಳ್
ನೆಱೆ ತಾಳ್ದು ಸಂಧಿಯಾಗದು
ತಱಿಸಂದಿದಿರೊಳ್ ಸ್ವರಂಗಳಾವುವು ನಿಲೆಯುಂ

ಪೊಱಗು ಒಳಗು ಪೊಸತು ಪೞದು ಎಳದು ಎಂಬಿವು ಸಮಾಸ ಮಧ್ಯದಲ್ಲಿ ಅಕಾರಾಂತತೆಯನ್ನು ತಾಳಿ, ಮುಂದೆ ಯಾವ ಸ್ವರ ಬಂದರೂ ಸಂಧಿಯನ್ನು ಹೊಂದುವುದಿಲ್ಲ.

ಪೊಱಗು>ಪೊಱ+ಅಡಿ=ಪೊಱ ಅಡಿ
ಒಳಗು>ಒಳ+ಅಟ್ಟಂ=ಒಳ ಅಟ್ಟಂ
ಪೊಸತು>ಪೊಸ+ಅಡಕೆ=ಪೊಸ ಅಡಕೆ
ಪೞದು>ಪೞ+ಅಲಗು=ಪೞ ಅಲಗು
ಎಳದು>ಎಳ+ಅಂಚೆ=ಎಳ ಅಂಚೆ

೬೯

ಪರಪದಪೂರ್ವಂ ದ್ವಿತ್ವಾ
ಕ್ಷರಮಾಗಿರೆ ಪೂರ್ವಪದದ ಚರಮಂ ಹ್ರಸ್ವಾ
ಕ್ಷರಮಾಗೆ ಸಂಧಿದೋಷಂ
ಸರೇಫಮಿದಿರಾಗೆ ಶಿಥಿಲಮೆಂದನುಕರಿಪರ್

ಪೂರ್ವಪದಾಂತ್ಯ ಹ್ರಸ್ವಾಕ್ಷರವಾಗಿದ್ದರೆ, ಪರಪದಪೂರ್ವ ದ್ವಿತ್ವಾಕ್ಷರವಾಗಿದ್ದರೆ ಸಂಧಿದೋಷ. ಸರೇಫ (ದ್ವಿತ್ವ) ಪರವಾದರೆ (ಅದು)ಶಿಥಿಲವೆಂದು, (ಅಲ್ಲಿ ಸಂಧಿಯನ್ನು) ಒಪ್ಪುತ್ತಾರೆ.*

ಸಂಧಿದೋಷಕ್ಕೆ : ಕೇಳ್ದು+ಸ್ಥಿರಮಿರ್ದು= ಕೇಳ್ದು ಸ್ಥಿರಮಿರ್ದು[೧]

ಸರೇಫ ಸಂಧಿಗೆ : ಪ್ರಣಯದೆ+ತ್ರಿಫಥೆಗೆ=ಪ್ರಣಯದೆ ತ್ರಿಪಥೆಗೆ.[೨]

ಪ್ರಣಯದೆ ತ್ರಿಪಥೆಗೆ ನಡೆತರೆ
ತ್ರಿಣೇತ್ರನೊಲವಿಂದೆ ತಾಳ್ದಿದಂ ಮಸ್ತಕದೊಳ್

೭೦

ಬಗೆಯದೆ ಸತೃಣಾಭ್ಯವಹಾ
ರಿಗಳುಸುರ್ವರ್ ಗದ್ಯಕಾವ್ಯದೊಳ್ ನಿರ್ಬಂಧಂ
ಪುಗದೆಂದರೋಚಿಗಳದಂ
ತೆಗಟೆಂದಾ ಗದ್ಯಪದ್ಯಕಾವ್ಯದೊಳಿಕ್ಕರ್

ಗದ್ಯಕಾವ್ಯದಲ್ಲಿ (ಛಂದೋ)ನಿರ್ಬಂಧವಿಲ್ಲವೆಂದು ಸತೃಣಾಭ್ಯವಹಾರಿಗಳು (=ಹುಲ್ಲು ಆಹಾರವಾದವರು = ಪಶುಸಮಾನರು, ಅವಿವೇಕಿಗಳು) ವಿಚಾರಿಸದೆ (ಆ ಸರೇಫದ್ವಿತ್ವ ಸಂಧಿಯನ್ನು) ಪ್ರಯೋಗಿಸುತ್ತಾರೆ. ಆರೋಚಿಗಳು (=ದೋಷದಲ್ಲಿ ರುಚಿಯಿಲ್ಲದವರು, ವಿವೇಕಿಗಳು) ದೋಷವೆಂದು ಅದನ್ನು ಗದ್ಯಕಾವ್ಯದಲ್ಲಿಯೂ ಪದ್ಯಕಾವ್ಯದಲ್ಲಿಯೂ ಪ್ರಯೋಗಿಸುವುದಿಲ್ಲ.

೭೧

ಕರೆಗತ್ವದಿರ್ಗೆಯಲ್ಲದೆ
ಪರಮಿರೆ, ಪದ್ಯಾರ್ಧ ವಾಕ್ಯವೇಷ್ಟನದೆಡೆಗಂ
ಸ್ಫುರದನುಕೃತಿಗಂ ಸ್ವರಮವು
ಪರಮಿರೆ, ಋತ್ವಕ್ಕಮಂತೆ ಸಂಧಿವಿಕಲ್ಪಂ

ಕರೆ, ಇರ(=ಇರ್+ಅ) ಎಂಬಿವುಗಳಿಗೆ ಕ್ರಮವಾಗಿ ಅಲ್, ಅದೆ ಪರವಾದರೂ ಪದ್ಯಾರ್ಧ, ವಾಕ್ಯವೇಷ್ಟನ, ಅನುಕೃತಿಗಳಿಗೆ ಸ್ವರಪರವಾದರೂ (ಪರದಲ್ಲಿ)ಋಕಾರವಿದ್ದರೂ, ಸಂಧಿವಿಕಲ್ಪತೆಯುಂಟು.

ಅಲ್ ಅದೆಗಳ ವಿಸಂಧಿಗೆ : ಕರೆ+ಅಲ್=ಕರೆ ಅಲ್
ಇರ+ಅದೆ=ಇರೆ ಅದೆ.
ಬಗೆವೊಡಮಿನಿಸಿನಿಸಿರ ಅದೆ....

ಅಲ್ ಅದೆಗಳ ಸಂಧಿಗೆ : ಕರೆ+ಅಲ್=ಕರೆಯಲ್.
ಮೆಯ್ಗರೆಯಲ್ ಪಾಂಡವರ್ಗೆ ನೆಱೆದುವು ಬರಿಸಂ
ಇರ+ಆದೆ=ಇರದೆ.
ಇರದೆ ಗರ್ಜಿಸಿ ಬೊಪ್ಪಲಂ ತಳರ್ದಂ ಜವಂ ತಳರ್ವಂದದಿಂ

ಪದ್ಯಾರ್ಧ ವಿಸಂಧಿಗೆ : ಅಲ್ಲಿಯಿದುಂಟೆಂಬರ್ಥದೊ!

---

* ವಿಚಾರ : ಇಲ್ಲಿ ಹೇಳಿದ ಪೂರ್ವಪದವು ಕನ್ನಡ ಇಲ್ಲವೆ ಕನ್ನಡ ಪ್ರತ್ಯಯ ಪಡೆದ ಸಂಸ್ಕೃತ, ಪರಪದವು ಸಂಸ್ಕೃತ ಎಂಬುದನ್ನು ಗಮನಿಸಬೇಕು.

೧. ಇಲ್ಲಿ ಸ್ಥಿ ಎಂಬ ಒತ್ತಕ್ಷರದ ಹಿಂದಿನ ಅಕ್ಷರವನ್ನು ದೀರ್ಘವೆಂದು ಪರಿಭಾವಿಸಲಾಗಿದೆ. ಇದು ಸಂಧಿದೋಷ.

೨. ಇಲ್ಲಿ ತ್ರಿ ಎಂಬ ಒತ್ತಕ್ಷರದ ಹಿಂದಿನ ಅಕ್ಷರವನ್ನು ದೀರ್ಘವೆಂದು ಪರಿಭಾವಿಸಲಾಗಿಲ್ಲ. ಇದು ಸಂಧಿದೋಷವಲ್ಲ.

ಶಬ್ದಮಣಿದರ್ಪಣ ಸಂಗ್ರಹ : ಸಂಧಿ ...

ಳೆಲ್ಲಿಯುಮುಳ್ಳೊಡೆಯ ವಂತ ಶಬ್ದಮವಕ್ಕುಂ
ಎಲ್ಲಂದದೊಳಂ ಪೋಲಿಸು
ವಲ್ಲಿ ಗುಣಾಧಿಕರೊಳಂತೆವೋಲ್ತಾನಕ್ಕುಂ ||

ಪದ್ಯಾರ್ಧ ಸಂಧಿಗೆ : ಬನದೊಳಗೆ ಪೋಗಿ ಪೂಸ ಪೂ
ವಿನ ಗೊಂಚಲನಕ್ಕ ನಿನಗೆ ತಂದಪ್ಪೆಂ ನೀ
ನಿನಿತೊಂದು ಬೇಗಮಂ ಮಾ
ಣ್ದಿನಿಯನ ಪಕ್ಕದೊಳಿರೆಂದು ಸಖಿ ತೊಲಗುವುದುಂ ||

ವಾಕ್ಯವೇಷ್ಟನ ವಿಸಂಧಿಗೆ :

....ಕಃ
ಕೇನಾರ್ಥೀ ಕೋ ದರಿದ್ರಃ +ಎನುತುಮನಿತುಮಂ ಧರ್ಮಜಂ
ಸೂಚಿಗೊಟ್ಟಂ ।

ವಾಕ್ಯವೇಷ್ಟನ ಸಂಧಿಗೆ : ನ ದೇವಚರಿತಂ ಚರೇತೆನಿಸಿದ್ದೈ ತ್ರಿಲೋಕೇಶ್ವರಾ.

ಅನುಕರಣ ವಿಸಂಧಿಗೆ : ಕವಕ್ಕವ+ಎಲೆ+ಊಊ=ಕವಕ್ಕವ ಎಲೆ ಊಊ.
ಕವಕ್ಕವ ಎಲೆ ಊಊ ಪುಗಲ್ ಪುಗಲೆಂದೊಚ್ಚತಮೂಳ್ವ ಕೋಗಿಲೆಯುಂ

ಅನುಕರಣ ಸಂಧಿಗೆ : ಛುಮ್ +ಎಂಬ=ಛುಮ್ಮೆಂಬ.
ಛುಮ್ಮೆಂಬ ಛಟಚ್ಛಟೆಂಬ....

ಋಕಾರ ವಿಸಂಧಿಗೆ : ಎಸೆಗುಂ+ಋಜ್ವಾಗತಂ=ಎಸಗುಂ ಋಜ್ವಾಗತಂ.
ಎಸೆಗುಂ ಋಜ್ವಾಗತಂ ಕಣ್ಗೊಳಿಸುಗುಮಳವಟ್ಟರ್ಧ ಋಜ್ವಾಗತಂ

ಋಕಾರ ಸಂಧಿಗೆ : ಸರಸಂ+ಋಜು=ಸರಸಮೃಜು.
ಸರಸಮೃಜುವೀರಸೆಂದಾ
ತರುಣಿಯನೊಸೆದಿತ್ತಂ....

೭೨

ಪದಯುಗದ ಸಂಧಿಯುಂ ಬೇ
ಱದೊಂದಸಹ್ಯೋಕ್ತಿ ಪುಟ್ಟೆ ಮಾಡುವುದುಂ ಮಾ
ರ್ಗದೊಳುಳ್ಳ ಸಂಧಿಯುಂ ಕಿಡಿ
ಪುದುಮಾಗದು ತಾಂ ಯಥೇಷ್ಟಮೆಂದಱಿವುಳ್ಳರ್

ಅರಿವುಳ್ಳವರು, (ಸಂಧಿಕಾರ್ಯ) ಯಥೇಷ್ಟವೆಂದು ಬೇರೊಂದು ಅಸಹ್ಯೋಕ್ತಿ ಹುಟ್ಟುವಂತೆ ಎರಡು ಪದಗಳ ಸಂಧಿಮಾಡುವುದೂ, ರೂಢಿಯಲ್ಲಿರುವ ಸಂಧಿಯನ್ನು ಬಿಡಿಸುವುದೂ ಸಲ್ಲದು.

ಸಂಧಿದೋಷಕ್ಕೆ : ಬನ್ನಿಯ ತರು+ಡಕ್ಕೆಗೆ=ಬನ್ನಿಯ ತರುಡಕ್ಕೆಗೆ.
ಬನ್ನಿಯ ತರುಡಕ್ಕೆಗೆ ಸುರ
ಹೊನ್ನೆಯ ತರುಡಮರುಗಕ್ಕೆ ಕಡುನಿಡಿದಪ್ಪಾ
ಚೆನ್ನಂಗಿಯ ತರುಡಾನೆಗೆ
ಪೊನ್ನಂ ಕುಡುವೆಡೆಗೆ ಕಲ್ಪತರುಡಾಕರಸಾ ||
ಪೊಸತು+ಉಲ್ಲಾರ =ಪೊಸತುಲ್ಲಾರಂ

ವಿಸಂಧಿದೋಷಕ್ಕೆ : ಅಸಿಯೊಱೆ<ಅಸಿಯ ಒಱೆ.
ಅಸಿಯ ಒಱೆ ಬೆಸದ ಪೆಟ್ಟಿಗೆ
ಮಿಸುಗುವ ಆರಂ ತೊಳಪ್ಪ ಕನ್ನವುರಂ ಚೆ

ಲ್ವೆಸೆದಿರೆ ಬಲವರ್ಪ ಜನರ್
ಕುಸುಮೇಷುವ ಮೇಳದವರ್ಗಳೆನಿಸಿದರವರೊಳ್ ||

೭೩

ಎರಡುಂ ರೇಫೆಗಳಂ ತಂ
ದುರಣೆಯಿಂ ಕೂಡಿದಂತೆವೊಲ್ ಶ್ರುತಿಕಷ್ಟಂ
ಬರೆ ಸಂಧಿಮಾಡಲಾಗದು
ಕರಡೆಯ ಗಿರ್ಗಟದ ದನಿವೊಲಮರವವೆಂದುಂ

ಎರಡು ರೇಫೆಗಳನ್ನು ತಂದು, ಒತ್ತಾಯದಿಂದ ಕೂಡಿವೆಯೋ ಎನ್ನುವಂತೆ (ಜೋಡಿಸಿ), ಶ್ರುತಿಕಷ್ಟವುಂಟಾಗುತ್ತಿರಲು ಸಂಧಿಯನ್ನು ಮಾಡಲಾಗದು. ಕರಡೆಯ ಮತ್ತು ಗಿರ್ಗಟದ ಧ್ವನಿಗಳಂತೆ ಅವು ಎಂದೂ ಹೊಂದಿಕೆಯಾಗವು.

ಎರಡು ರೇಫೆಗಳ ಸಂಧಿದೋಷಕ್ಕೆ : ಮೂವರ್+ರಾಯರ್=ಮೂವರ್ರಾಯರ್.
ಮೂವರ್ರಾಯರನೆ ಮಾಱುವಂತೆಸೆದಿರ್ಕುಂ

೭೪

ಅವಧಾರಣೆಯನಿಯೋಗ
ವ್ಯವಹೃತಿಯಿಂದಿರೆ ನಿಪಾತವಿಷಯದೊಳಲ್ಪಾ
ರ್ಥವನಾಳ್ದರೆ ವಸ್ತುವಿನ
ರ್ಧವನುಸಿರುತ್ತಿರೆ ತಗಳ್ಚುವುದು ಸಂಹಿತೆಯಂ

ಅವಧಾರಣೆ* ಅನಿಯೋಗ ವ್ಯವಹಾರದಿಂದಿದ್ದರೆ,* 'ಅಲ್ಪ' ಎಂಬ ಅರ್ಥದ ನಿಪಾತವಾದ'ಅರೆ' ಎಂಬುದು ವಸ್ತುವಿನ 'ಅರ್ಧ' ಎಂಬ ಅರ್ಥವನ್ನು ಹೇಳುತ್ತಿದ್ದರೆ ಸಂಧಿಯನ್ನು ಮಾಡಬೇಕು.

ಅವಧಾರಣೆಯ ಅನಿಯೋಗಸಂಧಿಗೆ : ಮಾಮರನಲ್ಲದೆ+ಇಲ್ಲ=ಮಾಮರನಲ್ಲದಿಲ್ಲ.
ಮಾಮರನಲ್ಲದಿಲ್ಲ ತನಿಗಂಪಿನ ಮಲ್ಲಿಗೆಯಲ್ಲದಿಲ್ಲ....
ಅರ್ಧವೆಂಬರ್ಥದ ಅರೆಯ ಸಂಧಿಗೆ : ಅರೆ+ಅಂ=ಅರೆಯಂ
ಕುರುಪತಿಯಂ ವಿಷ್ಣು ಬೇಡಿದಂ ಧರೆಯರೆಯಂ

ವ್ಯಂಜನ ಸಂಧಿ :

೭೫

ಇರೆ ವರ್ಗಪ್ರಥಮಂಗಳ್
ಪರದೊಳ್ ಚಟವರ್ಗಮುೞಿಯೆ ತಮ್ಮ ತೃತೀಯಾ
ಕ್ಷರಮಕ್ಕುಂ ಪದವಿಧಿಯೊಳ್,
ಪರಿಹರಿಸಲ್ಬಾರದಲ್ಲಿ ಬಹುಳಸ್ಥಿತಿಯಂ

- ನಿಯತಾರ್ಥವನ್ನು ಬಿಟ್ಟು ಪ್ರಯೋಗವಾಗಿದ್ದರೆ.

ಸಮಾಸವಾಗುವಾಗ, ಚವರ್ಗ ಟವರ್ಗಗಳಿಗೆ ಹೊರತಾದ ವರ್ಗಪ್ರಥಮಾಕ್ಷರಗಳು ಪರಪದದ ಆದಿಯಲ್ಲಿದ್ದರೆ, (ಅವು) ತಮ್ಮ (ವರ್ಗದ) ತೃತೀಯಾಕ್ಷರಗಳಾಗುತ್ತವೆ. ಅಲ್ಲಿ ವಿಕಲ್ಪತೆಯನ್ನು ದೂರೀಕರಿಸಬಾರದು.

ಕಕಾರದ ತೃತೀಯಾಕ್ಷರಕ್ಕೆ : ಪೞ+ಕನ್ನಡ=ಪೞಗನ್ನಡ.
ಪೞಗನ್ನಡದೆ ಪುದುಂಗೊಳೆ
ಕೊೞೆ ಸಕ್ಕದಮಂ ತಗುಳ್ಚಿ ಜಾಣ್ಕೆಡೆ....
ತಕಾರದ ಸೃತೀಯಾಕ್ಷರಕ್ಕೆ : ಕಣ್+ತೆಱವು=ಕಣ್ದೆಱವು.
ಕಣ್ದೆಱವಿನ ಮೇಲ್ದುಟಿ....
ಪಕಾರದ ತೃತೀಯಾಕ್ಷರಕ್ಕೆ : ತಣ್+ಪುೞಿಲ್=ತಣ್ಬುೞಿಲ್.

....ತ

ಣ್ಬುೞಿಲ ತಳದೊಳ್ ರುದ್ರಂ ಕಂಡಲ್ಲಿ ಕಣ್ಬೊಲನಾಗೆ....
ವಿಕಲ್ಪತೆಗೆ : ತಲೆ+ಕಟ್ಟು=ತಲೆ ಕಟ್ಟು
[ಕಡಿ+ತಲೆ=ಕಡಿ ತಲೆ]
ಏದು+ಪಂದಿ= ಏದು ಪಂದಿ

೭೬

ಒಂದೆರಡರ್ಕೆ ಱಕಾರ
ಕ್ಕಂದಾದಾದೇಶರೇಫೆಗಂ ಡತ್ವಕ್ಕಂ
ಬಂದಾದೇಶ ಱೞಕ್ಕಂ
ಸಂದಿಸದು ತೃತೀಯ ವೃತ್ತಿ ಕತಪಕ್ಕೆಂದುಂ

ಒಂದು ಎರಡುಗಳಿಗೂ ಱಕಾರಕ್ಕೂ ಆದೇಶವಾದ ರೇಫೆ, ಡಕಾರಕ್ಕೆ ಆದೇಶವಾದ ಱೞ-ಇವುಗಳಿಗೆ (ಪರವಾದ) ಕತಪಗಳಿಗೆ ಎಂದೂ (ಅವುಗಳ) ತೃತೀಯಾಕ್ಷರಗಳುಂಟಾಗವು.

ಒಂದಕ್ಕೆ ಆದೇಶವಾದ ರೇಫೆಗೆ : ಒಂದು+ಕೈಸು>ಒರ್+ಕೈಸು=ಒರ್ಕೈಸು
ಒರ್ಕೈಸಿ ಬಿಲ್ಲಮಂಬುಮ
ನುರ್ಕಾಳ್ಗಳ್....
ಒಂದು +ತುತ್ತು>ಒರ್+ತುತ್ತು=ಒರ್ತುತ್ತು.
....ಒರ್ತುತ್ತೆಂಬಿನಂ ತುತ್ತಿ ದೇ
ವಗಣಕ್ಕಚ್ಚರಿಯಾಗೆ ಪಾಱಿ ಸುರರಾಜಾವಾಸಮಂ ಮೆಟ್ಟಿದಂ
ಒಂದು+ಪಿಡಿ>ಒರ್+ಪಿಡಿ=ಒರ್ಪಿಡಿ
ಒರ್ಪಿಡಿಗೂೞುಂ ಸಿಗತನ
ಕರ್ಪಡಮುಂ ರಾಜಸೇವೆಯಿಲ್ಲದೆ....

ಎರಡಕ್ಕೆ ಆದೇಶವಾದ ರೇಫೆಗೆ :
ಎರಡು+ಕೋಡಿ>ಇರ್+ಕೋಡಿ =ಇರ್ಕೋಡಿ.
....ಇರ್ಕೋಡಿಯುಂ ತೀವಿ ನಾಲ್
ದೆಸೆಗಂ ಸೂಸಿ....
ಎರಡು +ತಲೆ>ಇರ್+ತಲೆ=ಇರ್ತಲೆ.
ಇರ್ತಲೆಗೋಜಂ

ಎರಡು+ಪತ್ತು>ಇರ್+ಪತ್ತು=ಇರ್ಪತ್ತು.
ಪೇೞಿದ್ದಿರ್ಪತ್ತು ತೋಳುಂ ದಶಮುಖ ಕುಹರಾಟೋಪಮುಂ

ಱಕಾರಾಕ್ಕಾದೇಶವಾದ ರೇಫೆಗೆ :
ಮಾಱ್+ಕೊರಲ>ಮಾರ್+ಕೊರಲ=ಮಾರ್ಕೊರಲ.
ಮಾರ್ಕೊರಲ ಭೈರವಂ
ಆಱ್+ತು>ಆರ್+ತು=ಆರ್ತು.
ಮದನಮಹೇಶ್ವರನಾರ್ತೀವಂ
ಏಱ್+ಪೆತ್ತರ್>ಏರ್+ಪೆತ್ತರ್+ಏರ್ಪೆತ್ತರ್.
....ಏರ್ಪೆತ್ತರೇರ್ಪೆತ್ತರಂ
ಪದುಳಂ ಮಾಳ್ಪುದು ಚಿತ್ರಮೆಂದು....

ಡಕ್ಕಾರಕ್ಕಾದೇಶವಾದ ಱಟಕ್ಕೆ :
ಕಾಡು+ಕಿಚ್ಚು>ಕಾಟ್+ಕಿಚ್ಚು=ಕಾಟ್ಕಿಚ್ಚು.
ಕಾಟ್ಕಿಚ್ಚು ತಗುಳೆ ತನ್ನೊಳ್
ಕೋಟ್ಕುಟ್ಟಿ ವನದ್ವಿಪೇಂದ್ರವತಿಭಯವಶದಿಂ
ಕಾಡು+ತುಱು>ಕಾಟ್+ತುಱು=ಕಾಟ್ತುಱು.
ಕಾಟ್ತುರು ಮಸಗಿದವೊಲೊಡ್ಡಿದುದು ಕುರುಸೈನ್ಯಂ
ಕಾಡು+ಪುರ>ಕಾಟ್+ಪುರ=ಕಾಟ್ಪುರ.
ಕಾಟ್ಪುರಮಾಗೆ ಕಾವ್ಯರಸಮರ್ಥಮುಮಕ್ಕರಮುಂ ಪ್ರತೀತಿಯಂ
ಮಾಟ್ಪಿನೆಗಂ...

೭೭

ವಿದಿತಸ್ವರದಿನನಾದೇ
ಶದ ಸಹಜವ್ಯಂಜನಂಗಳಿಂ ಪರದ ಪವ
ರ್ಗದ ನೆಲೆಗಕ್ಕು ವತ್ವಂ
ಪದವಿಧಿಯೊಳ್ ಬಹುಳವೃತ್ತಿಯಿಂ ವಾಕ್ಯದೊಳಂ

ಸ್ವರಗಳಿಗೂ ಆದೇಶವಲ್ಲದ ಸಹಜ ವ್ಯಂಜನಗಳಿಗೂ ಪರವಾದ ಪವರ್ಗಕ್ಕೆ ಸಮಾಸ ವಿಷಯದಲ್ಲಿಯೂ ವಾಕ್ಯದಲ್ಲಿಯೂ ಹೆಚ್ಚಾಗಿ ವಕಾರಾದೇಶವಾಗುತ್ತದೆ.

ಸ್ವರಕ್ಕೆ : ಬೆಳೆ+ಪೊಲಂ=ಬೆಳೆವೊಲಂ.
ಬೆಳೆವೊಲನೆತ್ತಲುಂ ಕಿಱಿದೆ ಪರ್ವಿದ ಪೆರ್ವಳೆ....
ಕಡು+ಬೆಳ್ಪು=ಕಡುವೆಳ್ಪು.
ನಡುವಣ ಕರ್ಪುಂ ಕಡೆಯಣ
ಕಡುವೆಳ್ಪುಂ ತುದಿಯ ಕೂರ್ಪುಮೆಸೆದಿರೆ
ಪಟು+ಮಾನಸಂ=ಪಟುವಾನಸಂ.
ಕಳೆಯಲ್ಕಾಗದು ನರಪತಿ
ಕುಳಚಳಬಳದನುವನಱಿವ ಪಟುವಾಸನಂ

ಸಹವ್ಯಂಜನಕ್ಕ : ಬಾಯ್+ಪಱಿ=ಬಾಯ್ವಱಿ.

ಮರುಳ ಬಾಯ್ವಱಿ ಪಱಿಯಾಗಿರೆ....

ಬೇರ್+ಬೆರಸಿ=ಬೇರ್ವೆರಸಿ.

ಬೇರ್ವೆರಸಿ ಕಾಯ್ತ ಪಲಸೆಳ

ನೀರ್ವೋನಲಂ ಕಱಿವ ತೆಂಗು....

ಮೆಲ್+ಮಾತು=ಮೆಲ್ವಾತು.

ಸಾತಿಶಯಾರ್ಥಮಂ ಮೆ

ಲ್ವಾತುಮನೊಸೆದಿತ್ತರೊಲಿದು ತಮಗಿಲ್ಲದುವಂ।

ವಾಕ್ಯದಲ್ಲಿಯ ವತ್ವಕ್ಕೆ : ತಮರೂರ್ಗೆ+ಪೋಪ=ತಮರೂರ್ಗೆವೋಪ.

ತಮರೂರ್ಗೆವೋಪ ಕುಲಜಾಂಗನೆಯರ್

ಕಮಲೋದರಂಗೆ ಪಡೆದರ್ ಮುದಮಂ

ಗರಟಿಗೆ+ಬರ್ಪಂತೆ=ಗರಟಿಗೆವರ್ಪಂತೆ

....ಕಾಮನ

ಗರಟಿಗೆವರ್ಪಂತೆ ಸುತ್ತಿವರ್ಪುವು ಗಿಳಿಗಳ್

೭೮

ಇರೆ ಯಲರಹಿತವ್ಯಂಜನ
ಪರಮಾಗಿ ಸಕಾರಮಲ್ಲಿ, ಬಹುಳಂ ಚತ್ವಂ,
ಅರೆ ಎಡೆಯೊಳ್ ಜತ್ವಂ, ಮೇ
ಣರೆ ಎಡೆಯೊಳ್ ಸಂಖ್ಯೆಯಾಗೆ ನಿಯತಂ ಛತ್ವಂ

ಯಕಾರ ಲಕಾರಗಳನ್ನುಳಿದ ವ್ಯಂಜನಗಳಿಗೆ ಪರವಾಗಿ ಸಕಾರವಿದ್ದರೆ, (ಅದಕ್ಕೆ)ಬಹುಳವಾಗಿ ಚಕಾರ, ಕೆಲವೆಡೆ ಜಕಾರ, ಕೆಲವೆಡೆ ಸಂಖ್ಯೆಯಾದಲ್ಲಿ (ಮಾತ್ರ) ಛಕಾರವುಂಟಾಗುತ್ತದೆ.

ಸಕಾರಕ್ಕೆ ಚಕಾರ : ನುಣ್+ಸರ=ನುಣ್ಚರ.

ನುಣ್ಚರದ ತಿಣ್ಪುಂ ಘನಘೋಷಗಭೀರಂ....

ಸಕಾರಕ್ಕೆ ಜಕಾರ : ಪೊನ್+ಸುರಿಗೆ=ಪೊಂಜುರಿಗೆ.

....ಕಟ್ಟಿದ ಪೊಂ

ಜುರಿಗೆಯೊಳಂ ಜನಮನೇಂ ಮನಂಗೊಳಿಸಿದನೋ

ಸಕಾರಕ್ಕೆ ಛಕಾರ : ನೂರ್+ಸಾಸಿರ=ನೂರ್ಛಾಸಿರ.

ನೂರ್ಛಾಸಿರಂಗಳವೊಲಾಯ್ತು ರಥಂ ಕಡು ವೇಗದಿಂ

ಬಹುಳಕ್ಕೆ : ಕಳ್+ಸವಿ=ಕಳ್ಸವಿ.

ಕಳ್ಸವಿಗೆ ಕುಡಿದು ಧನಮಂ....

ದ್ವಿತ್ವ ಸಂಧಿ :

೭೯

ಮೊದಲೊಳ್ ಹ್ರಸ್ವೈಕಸ್ವರ
ಮೊದವೆ ಪರಂ ಸ್ವರಮದಾಗೆ ಣಳಲಯಳಂಗ

ಳ್ಗುದಯಿಸುಗುಂ ದ್ವಿತ್ವಂ, ಪೂ
ರ್ವದೀರ್ಘಕವ್ಯಯಕೆ ವರ್ಣತತಿಗದ್ವಿತ್ವಂ

ಆದಿಯಲ್ಲಿ ಒಂದು ಹ್ರಸ್ವಸ್ವರವಿದ್ದ ನ ಣ ಲ ಯ ಳ ಗಳಿಗೆ ಸ್ವರ ಪರವಾದರೆ ದ್ವಿತ್ವವುಂಟಾಗುತ್ತದೆ. (ನ ಣ ಲ ಯ ಳ ಗಳ) ಆದಿಯಲ್ಲಿ ದೀರ್ಘವಿದ್ದರೆ, (ಪೂರ್ವಪದ) ಅವ್ಯಯ ಅಥವಾ ಅನೇಕಾಕ್ಷರಯುಕ್ತವಾಗಿದ್ದರೆ ದ್ವಿತ್ವವಿಲ್ಲ.

ನಕಾರ ದ್ವಿತ್ವಕ್ಕೆ : ಬೆನ್+ಅಂ=ಬೆನ್ನಂ.
ಬಿಡುಮುಡಿ ಬೆನ್ನನಪ್ಪಳಿಸೆ....

ಣಕಾರ ದ್ವಿತ್ವಕ್ಕೆ : ಕಣ್+ಏಂ=ಕಣ್ಣೇಂ.
ಮನದೊಳ್ ದಯೆಯಿಲ್ಲದವನ ಕಣ್ಣೇಂ ಪುಣ್ಣೇಂ

ಲಕಾರ ದ್ವಿತ್ವಕ್ಕೆ : ನೆಲ್+ಉಂ=ನೆಲ್ಲುಂ.
ನೆಲ್ಲುಂ ಕೌಂಗುಂ ಮಾವುಂ
ಮಲ್ಲಿಗೆಯುಂ ಬೆಳೆವುವಲ್ಲಿ ಕರ್ವಿನ ರಸದಿಂ

ಯಕಾರ ದ್ವಿತ್ವಕ್ಕೆ : ಮೆಯ್+ಅ=ಮೆಯ್ಯ.
ಮೆಯ್ಯ ಮಸಿ ಕೊರಲ ಬಕ್ಕಳೆ
ಪೊಯ್ಯೆ ಘುಲಿಲ್ಲರೆವ ಕೈಯ ಕಂಕರಿಕೆ....

ಳಕಾರ ದ್ವಿತ್ವಕ್ಕೆ : ಒಳ್+ಆಳ್=ಒಳ್ಳಾಳ್.
ಒಳ್ಳಾಳೆಡೆಗೋದನೊದಱಿ ಚಟ್ಟನೊಳೊವಜಂ

ಆದಿದೀರ್ಘದ ಅದ್ವಿತ್ವಕ್ಕೆ :

ನಕಾರ : ತಾನ್+ಎ=ತಾನೆ.
ತಾನೆ ಗಡಳಿಪಂ ಮೂರ್ಖಂ....

ಣಕಾರ : ನಾಣ್+ಅಂ=ನಾಣಂ.
ನಾಣಂ ಪಿಂಗಿಸಿ ಮುಗ್ಧೆಗೆ
ಜಾಣಂ ಕೈಕೊಳಿಸುವಂತೆ....

ಲಕಾರ : ಕೀಲ್+ಅಂ=ಕೀಲಂ.
ಜಂತ್ರದ ಕೀಲಂ ಕಳೆದಂತಿರಾಯ್ತು....

ಯಕಾರ : ಬಾಯ್+ಒಳ್=ಬಾಯೊಳ್.
ಬಾಯೊಳ್ ಪದಿನಾಲ್ಕು ಲೋಕಮಿರ್ದುದ ಕಂಡೆಂ

ಳಕಾರ : ಆಳ್+ಆಳ್=ಆಳಾಳ್.
ಆಳಾಳೋಳಿಯ ಮಾನಸಂಗೆ ಬಡವಂಗೆ....

ಅವ್ಯಯದ ಅದ್ವಿತ್ವಕ್ಕೆ : ದಲ್+ಇವಂ=ದಲಿವಂ.
ಕಲಿ ದಲಿವಂ ಜವನಲ್ಲಿಯುಂಡಿಗೆದಂದನೋ

ಅನೇಕಾಕ್ಷರದ ಅದ್ವಿತ್ವಕ್ಕೆ: ಪರಲ್+ಎಲ್ಲಂ=ಪರಲೆಲ್ಲಂ.
ಪರಲೆಲ್ಲಂ ಮುತ್ತು ಮಾಣಿಕಂ ಪಾಸಱೆಗಳ್
ಪರುಸಂಗಳ್

೮೦

ಧಾತುಗಲುಂ ಪರಮಾದೊಡ
ಜಾತಂ ದ್ವಿತ್ವಂ, ಯಕಾರದಲ್ಲಿ ವಿಕಲ್ಪಂ,

ಮಾತೇನುಯ್ ಸುಯ್ ಬಯ್

ಧಾತುಗಳೊಳ್ ದ್ವಿತ್ವಮಲ್ಲದಿಲ್ಲ ವಿಕಲ್ಪಂ

(ನ ಣ ಲ ಯ ಳ ಕಾರಗಳು ಅಂತ್ಯದಲ್ಲಿರುವ) ಧಾತುಗೆ ಅಲ್ ಪರವಾದರೆ ದ್ವಿತ್ವವಿಲ್ಲ; ಯಕಾರಾಂತದಲ್ಲಿ ವಿಕಲ್ಪವುಂಟು. ಉಯ್ ನೆಯ್ ಸುಯ್ ಬಯ್ ಧಾತುಗಳಿಗೆ (ಅಲ್ ಪರವಾದರೆ) ದ್ವಿತ್ವ (ನಿತ್ಯ)ವಲ್ಲದೆ ವಿಕಲ್ಪವಿಲ್ಲ.

ಅದ್ವಿತ್ವಕ್ಕೆ : ಎನ್+ಅಲ್=ಎನಲ್, ಎನಲ್ತಕ್ಕಂ

ಉಣ್+ಅಲ್=ಉಣಲ್, ಉಣಲ್ಬಗೆದಂ

ಕಳ್+ಅಲ್=ಕಳಲ್, ಕಳಲ್ನೋಡಿದಂ

ಯಕಾರ ವಿಕಲ್ಪಕ್ಕೆ : ಪೊಯ್+ಅಲ್=ಪೊಯಲ್, ಪೊಯ್ಯಲ್

ಉಯ್, ನೆಯ್, ಸುಯ್ ಬಯ್‌ಗಳ ದ್ವಿತ್ವಕ್ಕೆ :

ಉಯ್+ಅಲ್=ಉಯ್ಯಲ್

ನೆಯ್+ಅಲ್=ನೆಯ್ಯಲ್

ಸುಯ್+ಅಲ್ಲ=ಸುಯ್ಯಲ್

ಬಯ್+ ಅಲ್=ಬಯ್ಯಲ್

೮೧

ಪ್ರತಿಷೇಧದ ಧಾತುವ ಮುಂ

ದೆ ತಱುಂಬೆ ವಿಭಕ್ತಿ, ಪೂರ್ವಕಾಲಕ್ರಿಯೆಯೊಳ್

ಪ್ರತಿಷೇಧದದೆಂಬುದು ಮುಂ

ದೆ ತೋಱೆ ಮೇಣ್ ದ್ವಿತ್ವವೃತ್ತಿ ನಿತ್ಯಮೆನಿಕ್ಕುಂ

ಧಾತುಗಳಿಗೆ ಪ್ರತಿಷೇಧಾರ್ಥದಲ್ಲಿ ಆಖ್ಯಾತವಿಭಕ್ತಿಗಳು ಪರವಾಗಲು, ಭೂತಕಾಲ ಕ್ರಿಯೆಯಲ್ಲಿ ಪ್ರತಿಷೇಧಾರ್ಥದ ಅದೆ ಎಂಬುದು ಪರವಾಗಲು (ಆ ಧಾತುಗಳ ಅಂತ್ಯದ ನ ಣ ಲ ಯ ಳ ಕಾರಗಳಿಗೆ) ದ್ವಿತ್ವ ನಿತ್ಯ.

ವಿಭಕ್ತಿ ಪರವಾಗಲು : ಎನ್+ಅಂ=ಎನ್ನಂ

ಉಣ್+ಅರ್=ಉಣ್ಣರ್

ಮೆಲ್+ಅಯ್=ಮೆಲ್ಲಯ್

ಬಯ್+ಎನ್=ಬಯ್ಯೆನ್

ಕೊಳ್+ಎನ್=ಕೊಳ್ಳೆನ್

ಅದೆ ಪರವಾಗಲು : ಎನ್+ಅದೆ=ಎನ್ನದೆ

ಉಣ್+ಅದೆ=ಉಣ್ಣದೆ

ಒಲ್+ಅದೆ=ಒಲ್ಲದೆ

ಬಯ್+ಅದೆ=ಬಯ್ಯದೆ

ಕೊಳ್+ಅದೆ=ಕೊಳ್ಳದೆ.

❖❖

ನಾಮ ಪ್ರಕರಣ

ಲಿಂಗ =ನಾಮಪ್ರಕೃತಿ :

೬೨

ಕ್ರಿಯೆಯಂ ನುಡಿಯದುದು ವಿಭ
ಕ್ತಿಯನಿಲ್ಲದುದರ್ಥಮುಳ್ಳುದಂತದು ಲಿಂಗಂ,
ನಿಯತ ಚತುರ್ಭೇದಮದಾ
ರಯೆ ಕೃತ್ತದ್ಧಿತಸಮಾಸನಾಮಸ್ಥಿತಿಯಿಂ

ಕ್ರಿಯಾವಾಚಕವಲ್ಲದುದು, ನಾಮವಿಭಕ್ತಿಪ್ರತ್ಯಯಗಳಿಲ್ಲದುದು, ಅರ್ಥವತ್ತಾದುದು ಲಿಂಗ. ಅದು ಕೃತ್, ತದ್ಧಿತ, ಸಮಾಸ ಮತ್ತು ನಾಮ ಎಂದು ನಾಲ್ಕು ತೆರನಾಗಿದೆ.

ಕೃಲ್ಲಿಂಗ : ಮಾಡಿದ.

ಇದಕ್ಕೆ ನಾಮವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಮಾಡಿದಂ, ಮಾಡಿದನಂ, ಮಾಡಿದನಿಂ, ಮಾಡಿದಂಗೆ, ಮಾಡಿದನತ್ತಣಿಂ, ಮಾಡಿದನ, ಮಾಡಿದನೊಳ್-ಎಂದು ಕೃನ್ನಾಮಪದಗಳನ್ನು ರೂಪಿಸಿಕೊಳ್ಳಬಹುದು.

....ತನ್ನ ನೀಳ್ದ ಜಸದಿಂ ಬೆಳ್ದಿಂಗಳಂ ಮಾಡಿದಂ*

ತದ್ಧಿತಲಿಂಗ : ಅಡಪವಳ.

ಇದಕ್ಕೆ ನಾಮವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಅಡಪವಳಂ, ಅಡಪವಳನಂ, ಅಡಪವಳನಿಂ, ಅಡಪವಳಂಗೆ, ಅಡಪವಳನತ್ತಣಿಂ, ಅಡಪವಳನ, ಅಡಪವಳನೊಳ್- ಎಂದು ತದ್ದಿತನಾಮಪದಗಳನ್ನು ರೂಪಿಸಿಕೊಳ್ಳಬಹುದು.

ಅಡಪವಳಂ ಪಡೆವಳ್ಳಂ
ಮಡಿವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ

ಸಮಾಸಲಿಂಗ : ಕುಡುವಿಲ್ಲ.

ಇದಕ್ಕೆ ನಾಮವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಕುಡುವಿಲ್ಲಂ, ಕುಡುವಿಲ್ಲನಂ, ಕುಡುವಿಲ್ಲನಿಂ, ಕುಡುವಿಲ್ಲಂಗೆ, ಕುಡುವಿಲ್ಲನತ್ತಣಿಂ, ಕುಡುವಿಲ್ಲನ, ಕುಡುವಿಲ್ಲನೊಳ್ - ಎಂದು ಸಮಾಸನಾಮ ಪದಗಳನ್ನು ರೂಪಿಸಿಕೊಳ್ಳಬಹುದು.

ಕುಡುವಿಲ್ಲನೆಚ್ಚ ಕೋಲುಂ
ನಡದು ದಲಂದೊರ್ವನೆರ್ದೆಯಂ....

ನಾಮಲಿಂಗ : ಅರಸ**

ಇದಕ್ಕೆ ನಾಮವಿಭಕ್ತಿ ಪ್ರತ್ಯಯಗಳನ್ನು ಹಚ್ಚಿ ಅರಸಂ, ಅರಸನಂ, ಅರಸನಿಂ, ಅರಸಂಗೆ, ಅರಸನತ್ತಣಿಂ, ಅರಸನ, ಅರಸನೊಳ್ - ಎಂದು ನಾಮಪದಗಳನ್ನು ರೂಪಿಸಿಕೊಳ್ಳಬಹುದು.

ಅರಸಂ ಮೂರ್ಖಂ ಸಚಿವರ್
ಸರಸ್ವತೀದ್ರೋಹರ್....

---

* ಇಲ್ಲಿ ಬೆಳ್ದಿಂಗಳನ್ನು ಮಾಡಿದನು ಎಂಬ ಅರ್ಥ ಭಾವಿಸಬಾರದು. ಬೆಳ್ದಿಂಗಳನ್ನು ಮಾಡಿದವನು ಎಂಬ ಅರ್ಥ ಭಾವಿಸಬೇಕು.

** ಅರಸ-ಎಂಬುದು ಪ್ರಕೃತಿ(ಲಿಂಗ)ಯೆಂದು ಕೇಶಿರಾಜನ ಗ್ರಹಿಕೆ. ನಿಜ ಹೇಳುವುದಾದರೆ ಅರಸಂ ಎಂಬುದೇ ಪ್ರಕೃತಿ. ಇದು ಪದವೂ ಹೌದು.

೭೩

ಭೂತಭವಿಷ್ಯತ್ಕ್ರಿಯೆಗಳು
ಪೇತ ವಿಭಕ್ತಿಗಳನುೞಿಯೆ ಕೃತ್ತಪ್ಪುವಸಂ
ಭೂತಂ ಸಂಪ್ರತಿವಿಧಿಗಳೊ
ಳಾ ತೆಱದಿಂ ಮಧ್ಯಮೋತ್ತಮಕ್ರಿಯೆಗಳೊಳಂ

ಭೂತಕಾಲದ ಮತ್ತು ಭವಿಷ್ಯತ್ಕಾಲದ ಕ್ರಿಯಾಪದಗಳು ತಮಗೆ ಹತ್ತಿದ ಆಖ್ಯಾತವಿಭಕ್ತಿಗಳನ್ನು ತೊರೆಯಲಾಗಿ ಕೃಲ್ಲಿಂಗವಾಗುತ್ತವೆ. (ಆದರೆ) ವರ್ತಮಾನ ಕ್ರಿಯಾಪದ, ವಿಧ್ಯರ್ಥ ಕ್ರಿಯಾಪದದಲ್ಲಿ ಹಾಗೂ ಮಧ್ಯಮಪುರುಷ ಕ್ರಿಯಾಪದ, ಉತ್ತಮಪುರುಷ ಕ್ರಿಯಾಪದಗಳಲ್ಲಿ ಕೃಲ್ಲಿಂಗ ಸಂಭವಿಸುವುದಿಲ್ಲ.

ಭೂತಕಾಲದ ಕೃಲ್ಲಿಂಗ : ನಲಿದ.

....ಬಾೞ್ದೆನೆಂದು ಮದನಂ ನಲಿದಂ ನಡೆನೋಡಿ ಚೂತಮಂ

ಇಲ್ಲಿಯ ನಲಿದಂ ಎಂಬುದು ಭೂತಕಾಲದ ಕ್ರಿಯಾಪದ. ಇದು ತನ್ನ ಅಂ ಎಂಬ ಆಖ್ಯಾತ ವಿಭಕ್ತಿಪ್ರತ್ಯಯವನ್ನು ಕಳೆದುಕೊಳ್ಳಲು ಉಳಿಯುವ ನಲಿದ ಎಂಬುದು ಕೃಲ್ಲಿಂಗ. ಇದಕ್ಕೆ ನಾಮವಿಭಕ್ತಿಪ್ರತ್ಯಯ ಹಚ್ಚಿ ಕೃನ್ನಾಮಪದ ಮಾಡಿಕೊಳ್ಳಬಹುದು.

ಭವಿಷ್ಯತ್ಕಾಲದ ಕೃಲ್ಲಿಂಗ : ಪೊಯ್ವ.

ಆ ವೇಶ್ಯಾವಾಟದೊಳ್ ಧೂರ್ಜಟಿಯ ನೊಸಲಕಣ್ಣಂ ಸ್ಮರಂ ನಂದೆ ಪೊಯ್ವಂ

ಇಲ್ಲಿಯ ಪೊಯ್ವಂ ಎಂಬುದು ಭವಿಷ್ಯತ್ಕಾಲ ಕ್ರಿಯಾಪದ. ಇದು ತನ್ನ ಅಂ ಎಂಬ ಆಖ್ಯಾತ ವಿಭಕ್ತಿ ಪ್ರತ್ಯಯವನ್ನು ಕಳೆದುಕೊಳ್ಳಲು ಉಳಿಯುವ ಪೊಯ್ವ ಎಂಬುದು ಕೃಲ್ಲಿಂಗ. ಇದಕ್ಕೆ ನಾಮವಿಭಕ್ತಿ ಪ್ರತ್ಯಯ ಹಚ್ಚಿ ಕೃನ್ನಾಮಪದ ಮಾಡಿಕೊಳ್ಳಬಹುದು.

ಕೃಲ್ಲಿಂಗವಾಗದ ವರ್ತಮಾನ ಕ್ರಿಯಾಪದ : ಮಾಡಿದಪಂ (ಮಾಡಿದಪರ್)
ಕೃಲ್ಲಿಂಗವಾಗದ ವಿಧ್ಯರ್ಥ ಕ್ರಿಯಾಪದ : ಕುಡು(ಕುಡಿಂ)
ಕೃಲ್ಲಿಂಗವಾಗದ ಮಧ್ಯಮಪುರುಷ ಕ್ರಿಯಾಪದ : ಬೇಡಿದಯ್ (ಬೇಡಿದಿರ್)
ಕೃಲ್ಲಿಂಗವಾಗದ ಉತ್ತಮಪುರುಷ ಕ್ರಿಯಾಪದ : ಪಾಡುವೆನ್ (ಪಾಡುವೆವು)

೭೪

ವಿನುತಕ್ರಿಯಾತ್ಮಕಂಗಳು
ಮೆನಿಸುವ ಸಂಸ್ಕೃತದ ಭಾವವಚನಂಗಳನಾ
ಯ್ದು ನಿತರ್ಕಮಿಸು ಪ್ರತ್ಯಯ
ವನೆ ಪತ್ತಿಸಿ ನಿಱಿಸೆ ಬರ್ಕುಮಾ ಕೃಲ್ಲಿಂಗಂ

(ಕನ್ನಡಕ್ಕೆ) ಕ್ರಿಯಾತ್ಮಕಗಳು ಎನಿಸುವ ಸಂಸ್ಕೃತದ ಭಾವವಚನಗಳನ್ನು ಆಯ್ದುಕೊಂಡು, ಅವುಗಳಿಗೆ ಇಸು ಪ್ರತ್ಯಯವನ್ನು ಹಚ್ಚಿದರೆ (ಅವುಗಳಿಂದ) ಕೃಲ್ಲಿಂಗಗಳುಂಟಾಗುತ್ತವೆ.

ಧರ-ಇದು ಸಂಸ್ಕೃತದ ಭಾವವಚನ.
ಧರ+ಇಸು=ಧರಿಸು-ಇದು ಕೃಲ್ಲಿಂಗ
ಈಗ ಧರಿಸುವಂ, ಧರಿಸುವನಂ, ಧರಿಸುವನಿಂ ಎಂಬಂತೆ ಸಪ್ತವಿಭಕ್ತಿಗಳನ್ನು ಹಚ್ಚಬಹುದು.
ಚರಚಯಮಂ ರತ್ನಚಯಮುಮಂ ಧರಿಸುವವೊಲ್*

* ೭೨, ೭೩, ೭೪ನೆಯವು ಕೃಲ್ಲಿಂಗ ಸೂತ್ರಗಳು. ಆದರೆ ಇಲ್ಲಿ ಕೊಟ್ಟಿರುವ ಉದಾಹರಣೆಗಳು ಕೃಲ್ಲಿಂಗಗಳಲ್ಲ, ಕ್ರಿಯಾಪದಗಳೇ ಆಗಿವೆ.

೭೫

ಸಮುಪಾತ್ತಕ್ರಿಯೆಯುಂ ವಾ
ಕ್ಯಮಾಲೆಯುಂ ಸುಕವಿರಚಿತನಾಮಮದಾದಂ
ದಮರ್ಗುಂ ಲಿಂಗಂ, ಮಾರ್ಗ
ಕ್ರಮಮಂ ಕಾಣಲ್ಕೆ ಬರ್ಪುದಾದ್ಯರ ಕೃತಿಯೊಳ್

ಸಮುಪಾತ್ತಕ್ರಿಯೆ, ವಾಕ್ಯಮಾಲೆ ಇವು ಸುಕವಿರಚಿತ ನಾಮವಾದ ಪಕ್ಷದಲ್ಲಿ ಲಿಂಗವಾಗಿ ಪರಿಣಮಿಸುತ್ತವೆ. ಪ್ರಾಚೀನರ ಕಾವ್ಯಗಳಲ್ಲಿ (ಇವುಗಳ) ಪ್ರಯೋಗಪದ್ಧತಿಯನ್ನು ಕಾಣಬಹುದು.

ಸಮುಪಾತ್ತಕ್ರಿಯಾಲಿಂಗ : ನಮೋಸ್ತು.
ನಮೋಸ್ತುಗಳಿರ್ಪಂದದೊಳಿರ್ದಂ
ವಾಕ್ಯಮಾಲಾಲಿಂಗ : ಕೈದುವೊತ್ತರದೇವಂ.
....ತೋಳ್ಗೊ।
ಪ್ಪುವನಾಳ್ದನ ಕೈದು ಕೈದುವೊತ್ತರದೇವಂ ।

೭೬

ಕ್ಷಿತಿಯೊಳೆ ರೂಢಾನ್ವರ್ಥಾಂ
ಕಿತಮೆಂದಾ ನಾಮಮಱೆಗೆ ಮೂದೆಱನಸಮಾ
ಸತೆಯೊಳ್ ನೆಲಸಿರ್ಪುದು ನಿ
ಶ್ಚಿತನಾಮಂ ಪಂಚವರ್ಣಕೃತಪರಿಮಾಣಂ

ರೂಢ, ಅನ್ವರ್ಥ, ಅಂಕಿತ ಎಂದು ನಾಮ ಮೂರು ವಿಧವಾಗಿದೆ. ರೂಢನಾಮ ಸಮಾಸರಹಿತವಾಗಿ ಒಂದರಿಂದ ಐದು ವರ್ಣಗಳ ವರೆಗಿನ ಪ್ರಮಾಣವುಳ್ಳುದಾಗಿದೆ.

ರೂಢನಾಮ : ನೆಲಂ, ಪೊಲಂ ಇತ್ಯಾದಿ
ಗುಣಾನುರೂಪಾನ್ವರ್ಥನಾಮ : ದಾನಿ, ಪರಾಕ್ರಮಿ ಇತ್ಯಾದಿ.
ದಾನಿ ದಯಾಪರನತ್ಯಭಿ
ಮಾನಿ ಪರಾಕ್ರಮಿ ಯಶೋರ್ಥಿ ನೀತಿಜ್ಞಂ ವಿ
ದ್ಯಾನಿಲಯನೆನಿಪ ನೃಪಂ....
ಅರ್ಥಾನುರೂಪಾನ್ವರ್ಥನಾಮ :ಹಿಳ್ಳೆಗಾಲಂ, ನಿಡುಮೂಗಂ, ಕುಸಿಗೊರಲಂ ಇತ್ಯಾದಿ
ಅಂಕಿತನಾಮ : ದೂಳಿಗಂ, ಕಾಟಂ, ಕಸವಂ, ತಿಪ್ಪಂ ಇತ್ಯಾದಿ
ಒಂದರಿಂದ ಐದು ವರ್ಣಪ್ರಮಾಣದ ರೂಢನಾಮ : ಪೂ, ಮರಂ. ಪೊತ್ತಗೆ, ಕವಳಿಗೆ,
ಕಟ್ಟುವತ್ತಿಗೆ.

೭೭

ಒಳ್ಳಿತು ಮೆಲ್ಲಿತು ಬೆಟ್ಟಿತು
ತೆಳ್ಳಿತು ಬಿಸಿದಸಿದು ಕಡಿದು ನಿಡಿದಿನಿದೆಂಬಂ
ತುಳ್ಳುವು ತು ದು ಕಡೆಯೆನೆ ಕೈ
ಕೊಳ್ಳಿಂ ಗುಣವಾಚಿ, ಮೇಣ್ ತುಕಾರಂ ದ್ವಿತ್ವಂ

ಒಳ್ಳಿತು, ಮೆಲ್ಲಿತು, ಬೆಟ್ಟಿತು, ತೆಳ್ಳಿತು. ಬಿಸಿದು, ಅಸಿದು, ಕಡಿದು, ನಿಡಿದು, ಇನಿದು, ಎಂಬಂತೆ ತು, ದುಕಾರಾಂತವುಳ್ಳುವು ಗುಣವಚನ(ಲಿಂಗ)ಗಳು. (ಇವುಗಳಲ್ಲಿ) ತುಕಾರಾಂತಗಳಿಗೆ ದ್ವಿತ್ವವಿಕಲ್ಪವಿದೆ.

ತುಕಾರಾಂತಕ್ಕೆ	:	ಬೆಟ್ಟಿತು, ತೋರಿತು....
ದುಕಾರಾಂತಕ್ಕೆ	:	ಕರಿದು,ಬಿಳಿದು....
ತುಕಾರಂತ ದ್ವಿತ್ವವಿಕಲ್ಪಕ್ಕೆ	:	ಬೆಟ್ಟಿತು-ಬೆಟ್ಟಿತ್ತು, ತೋರಿತು-ತೋರಿತ್ತು....

೮೮

ಅದುವಿದುವುದುವಾವುದುವೆ
ಲ್ಲದು ಪೆಱತೇನ್ ಪೆಱದೆನಿಪ್ಪ ಶಬ್ದಂಗಳ್ ತ
ಪ್ಪದೆ ಸರ್ವನಾಮಮಕ್ಕುಂ ,
ವಿದಗ್ಧರಿವನಱಿದು ನಿಱಿಕೆ ಲಿಂಗಸ್ಥಿತಿಯೊಳ್

ಅದು, ಇದು, ಉದು, ಆವುದು, ಎಲ್ಲದು, ಪೆಱತು, ಏನ್, ಪೆಱದು ಎಂಬ ಶಬ್ದಗಳು ಸರ್ವನಾಮಲಿಂಗಗಳು. ವಿದಗ್ಧರು ಇವುಗಳನ್ನು ಅರಿತು (ತ್ರಿವಿಧ) ಲಿಂಗಸ್ಥಿತಿಯಲ್ಲಿ ನೆಲೆಗೊಳಿಸಬೇಕು.*

೮೯

ಏನೆಂಬ ಸರ್ವನಾಮಂ
ತಾನದು ದಲ್ ಲಿಂಗದೇಕವಚನಂ ನಿಜದಿಂ,
ಪೀನಂ ಬಹುವಚನಾರ್ಥಮ
ನಾನಲ್ ಸಾಲ್ದತ್ತು ಮತ್ತೆ ಕೃತಿಪದ್ಧತಿಯೊಳ್

ಏನ್ ಎಂಬ ಸರ್ವನಾಮ(ಲಿಂಗ)ವು ಸ್ವಭಾವತಃ (ಮೂರು)ಲಿಂಗಗಳ ಏಕವಚನದಲ್ಲಿ ವ್ಯವಹರಿಸುತ್ತದೆ. ಕಾವ್ಯಪದ್ಧತಿಯಲ್ಲಿ ಅದು ಬಹುವಚನ ಸಂದರ್ಭದಲ್ಲಿಯೂ ಪ್ರಯೋಗವಾಗುತ್ತದೆ.

ಏಕವಚನರೂಪಕ್ಕೆ	:	ಅವನೇನ್, ಅವಳೇನ್, ಅದೇನ್
ಬಹುವಚನ ರೂಪಕ್ಕೆ	:	ಆಲಾಪಂಗಳೇನ್, ತತ್ಪರಿಜನಾಲಾಪಂಗಳೇನ್....

೯೦

ಸಮುದಿತ ಸಂಖ್ಯಾವ್ಯಯರಹಿ
ತಮೆನಿಸಿ ವರ್ತಿಪ ನಿಘಂಟುವಿನ ನಾಮಪದೋ
ತ್ತಮವರ್ಣಪ್ರಕೃತಿಗಳಂ
ಸಮಸಂಸ್ಕೃತವೆಸರನಿಟ್ಟು ಲಿಂಗಂ ಮಾಟ್ಪರ್

(ಸಂಸ್ಕೃತದ) ಸಂಖ್ಯೆ, ಅವ್ಯಯಗಳನ್ನು ಹೊರತುಪಡಿಸಿ, ಉತ್ತಮ ನಾಮಪ್ರಕೃತಿಗಳನ್ನು (ಮಾತ್ರ) ಸಮಸಂಸ್ಕೃತವೆಂಬ ಹೆಸರನಿಂದ (ಕನ್ನಡಕ್ಕೆ) ಲಿಂಗವನ್ನಾಗಿ ಮಾಡಿಕೊಳ್ಳುತ್ತಾರೆ.**

ರಾಮ (ಸಂಸ್ಕೃತ)>ರಾಮ(ಸಮಸಂಸ್ಕೃತ) ಇತ್ಯಾದಿ
ಸೀತಾ (ಸಂಸ್ಕೃತ)>ಸೀತೆ (ಸಮಸಂಸ್ಕೃತ) ಇತ್ಯಾದಿ
ಎರಡನೆಯ ಉದಾಹರಣೆಯ ಅಲ್ಪ ವ್ಯತ್ಯಾಸವನ್ನು ಗಮನಿಸಬೇಕು.

* ವಿಚಾರ: 'ಅದು' ಎಂಬುದು ನಪುಂಸಕಲಿಂಗ. ಇದರಿಂದ ಅವನ್(ಪುಲ್ಲಿಂಗ), ಅವಳ್ (ಸ್ತ್ರೀಲಿಂಗ) ರೂಪಗಳು ಸಿದ್ಧಿಸುವುವೆಂಬುದು ಕೇಶಿರಾಜನ ಅಭಿಪ್ರಾಯ. ಈ ನಿಯಮ ಎಲ್ಲದು, ಏನ್ ಇವುಗಳನ್ನು ಹೊರತುಪಡಿಸಿ ಉಳಿದವುಗಳಿಗೆಲ್ಲ ಅನ್ವಯಿಸುತ್ತದೆ.

** ಶಾಲಾ (ಸಂಸ್ಕೃತ), ಶಾಲೆ (ಸಮಸಂಸ್ಕೃತ), ಸಾಲೆ (ತದ್ಭವ) - ಈ ವ್ಯತ್ಯಾಸಗಳನ್ನು ಗಮನಿಸಿರಿ.

೯೧

ವಿದಿತಮೆನಿಪ್ಪವ್ಯಯಮುಂ
ತ್ಯದಾದಿಯಂ ಶತೃ ಞಂತಮುಂ ಸಂಸ್ಕೃತದೊಳ್
ಪದವಿಧಿಯಂ ನೆಱೆ ತಳೆದ
ಲ್ಲದೆ ಕನ್ನಡದಲ್ಲಿ ಲಿಂಗಮಾಗವು ನಿಜದಿಂ

ಸುಪ್ರಸಿದ್ಧ ಅವ್ಯಯಗಳು, ತ್ಯದಾದಿಗಳು, ಶತೃಞಂತಗಳು ಸಂಸ್ಕೃತದಲ್ಲಿ ಸಮಾಸವಾಗದೆ ಕನ್ನಡಕ್ಕೆ ಲಿಂಗವಾಗವು.

ಅವ್ಯಯಕ್ಕೆ : ಅಂತರ್ ಮೊದಲಾದ ಸಂಸ್ಕೃತ ಅವ್ಯಯಗಳಿಗೆ ನೇರವಾಗಿ ಕನ್ನಡದ ಸಪ್ತವಿಭಕ್ತಿಗಳನ್ನು ಹಚ್ಚದೆ, ಅಂತರ್ಮುಖ ಎಂದು ಸಂಸ್ಕೃತ ಸಮಾಸ ಮಾಡಿಕೊಂಡು, ಕನ್ನಡಕ್ಕೆ ಲಿಂಗವಾಗಿ ಸ್ವೀಕರಿಸಿ, ಅಂತರ್ಮುಖಂ,ಅಂತರ್ಮುಖನಂ, ಎಂದು ಮುಂತಾಗಿ ವಿಭಕ್ತಿಗಳನ್ನು ಹಚ್ಚಬೇಕು.

ತ್ಯದಾದಿಗೆ : ಸಂಸ್ಕೃತದ ತ್ಯತ್ ಮೊದಲಾದುವಕ್ಕೆ ನೇರವಾಗಿ ಕನ್ನಡದ ಸಪ್ತವಿಭಕ್ತಿಗಳನ್ನು ಹಚ್ಚದೆ, ತ್ಯತ್ಕಥನ ಎಂದು ಸಂಸ್ಕೃತಸಮಾಸ ಮಾಡಿಕೊಂಡು, ಕನ್ನಡಕ್ಕೆ ಲಿಂಗವಾಗಿ ಸ್ವೀಕರಿಸಿ ತ್ಯತ್ಕಥನಂ, ತ್ಯತ್ಕಥನಮಂ ಎಂದು ಮುಂತಾಗಿ ವಿಭಕ್ತಿಗಳನ್ನು ಹಚ್ಚಬೇಕು.

ಶತೃಞಂತಕ್ಕೆ: ಸಂಸ್ಕೃತದ ಝಣತ್ ಮೊದಲಾದ ಶತೃಞಂತಗಳಿಗೆ ನೇರವಾಗಿ ಕನ್ನಡದ ಸಪ್ತವಿಭಕ್ತಿಗಳನ್ನು ಹಚ್ಚದೆ, ಝಣತ್ಕಂಕಣ ಎಂದು ಸಂಸ್ಕೃತ ಸಮಾಸ ಮಾಡಿಕೊಂಡು, ಕನ್ನಡಕ್ಕೆ ಲಿಂಗವಾಗಿ ಸ್ವೀಕರಿಸಿ, ಝಣತ್ಕಂಕಣಂ, ಝಣತ್ಕಂಕಣಮಂ ಎಂದು ಮುಂತಾದಿ ವಿಭಕ್ತಿಗಳನ್ನು ಹಚ್ಚಬೇಕು.

೯೨

ಏಕದ್ವಿತ್ರ್ಯಾದಿ ಸಮಾ
ಸಾಕೃತಿಯಿಂ ಪ್ರತ್ಯಯಾಂತದಿಂದಿರೆ, ಲಘುವ
ಪ್ಪೇಕಾರಮನತ್ವಮನಿರ
ದಾಕಾರಂ ಬಹುಳದಿಂದೆ ತಳೆದಿರೆ ಲಿಂಗಂ

(ಸಂಸ್ಕೃತದ) ಏಕ, ದ್ವಿ, ತ್ರಿ ಇತ್ಯಾದಿ (ಸಂಖ್ಯಾವಾಚಿ)ಗಳು ಸಮಾಸವಾಗಿ, (ಇಲ್ಲವೆ) ಪ್ರತ್ಯಯಾಂತವಾಗಿ ಇದ್ದರೆ ಮತ್ತು (ಸಂಸ್ಕೃತ) ಆಕಾರಾಂತವು ವಿಕಲ್ಪದಿಂದ ಎಕಾರಾಂತ, ಅಕಾರಾಂತವಾದರೆ (ಕನ್ನಡಕ್ಕೆ) ಲಿಂಗವಾಗುತ್ತವೆ.

ಸಂಖ್ಯಾವಾಚಿ ಸಮಾಸಕ್ಕೆ	:	ಏಕಾಂಗ, ದ್ವಿಮುಖ, ತ್ರಿಲೋಕ....
ಸಂಖ್ಯಾವಾಚಿ ಪ್ರತ್ಯಯಾಂತಕ್ಕೆ	:	ದ್ವಿತಯ, ತ್ರಿತಯ, ಚತುಷ್ಕ....
ಆಕಾರಾಂತ ಎಕಾರಾಂತವಾದುದಕ್ಕೆ	:	ಮಾಲಾ-ಮಾಲೆ, ಶಾಲಾ-ಶಾಲೆ....
ಆಕಾರಾಂತ ಅಕಾರಾಂತವಾದುದಕ್ಕೆ	:	ಕಂಧರಾ-ಕಂಧರ, ಉಪತ್ಯಕಾ-ಉಪತ್ಯಕ....
ಆಕಾರಾಂತದ ವಿಕಲ್ಪಕ್ಕೆ	:	ಗ್ರೀವಾ-ಗ್ರೀವೆ, ಗ್ರೀವ; ಭಿಕ್ಷಾ-ಭಿಕ್ಷೆ, ಭಿಕ್ಷ.

೯೩

ಆದಂ ಹ್ರಸ್ವೈದಂತಮ
ದಾದತ್ವಂ ಹ್ರಸ್ವಮೆನಿಸಿದೀದೂದಂತಂ
ಜ್ಯಾದಿ ಸಮಸ್ತೈಕಾಕ್ಷರ
ಮಾದವಿಕೃತಿಶಬ್ದಮುಕ್ತಿವಿದರಿಂ ಲಿಂಗಂ

(ಸಂಸ್ಕೃತದ) ಅಕಾರಾಂತ (ಶಬ್ದ)ಗಳು ಎಕಾರಾಂತವಾಗಿ. ಈಕಾರಾಂತ ಊಕಾರಾಂತ (ಶಬ್ದ)ಗಳು ಹ್ರಸ್ವಾಂತವಾಗಿ, ಜ್ಯಾ ಮೊದಲಾದ ಎಲ್ಲ ಏಕಾಕ್ಷರ ಶಬ್ದಗಳು ವಿಕಾರರಹಿತವಾಗಿ (ಕನ್ನಡದಲ್ಲಿ) ಲಿಂಗವಾಗುತ್ತವೆ.

ಅಕಾರಾಂತ ಎಕಾರಾಂತವಾದುದಕ್ಕೆ	:	ವಧ-ವಧೆ, ಅಭಿಲಾಷ-ಅಭಿಲಾಷೆ....
ಈಕಾರಾಂತ ಹ್ರಸ್ವವಾದುದಕ್ಕೆ	:	ಲಕ್ಷ್ಮೀ-ಲಕ್ಷ್ಮಿ, ಗೌರೀ-ಗೌರಿ....
ಊಕಾರಾಂತ ಹ್ರಸ್ವವಾದುದಕ್ಕೆ	:	ಸರಯೂ-ಸರಯು, ಕಂಡೂ-ಕಂಡು....
ಏಕಾಕ್ಷರಕ್ಕೆ	:	ಜ್ಯಾ-ಜ್ಯಾ, ಮಾ-ಮಾ, ಶ್ರೀ-ಶ್ರೀ, ಸ್ತ್ರೀ-ಸ್ತ್ರೀ....

೯೪

ಅತ್ವಾಂತಮುಮಿತ್ವಾಂತಮು
ಮೆತ್ವಾಂತಮುಮಾ ಋತಂದಮುಂ ನಿಜಲಿಂಗಂ,
ಋತ್ವಕ್ಕಾರಾದೇಶಂ
***ತತ್ವಂ*ಪೀನಂ, ವಿಧಾತೃಶಬ್ದಂ ರಾಂತಂ**

ಅ, ಇ, ಉ, ಋಕಾರಾಂತಗಳು ನಿಜಸ್ಥಿತಿಯಲ್ಲಿಯೇ ಲಿಂಗಗಳೆನಿಸಿಕೊಳ್ಳುತ್ತವೆ. ಋಕಾರಾಂತಕ್ಕೆ ಆರ ಆದೇಶ ಮತ್ತು [1]ತಕಾರಾದೇಶ[1]ಗಳಾಗುತ್ತವೆ. ವಿಧಾತೃ ಶಬ್ದ ರಾಂತವಾಗುತ್ತದೆ.

ಅಕಾರಾಂತಕ್ಕೆ	:	ಭುವನ-ಭುವನ, ನಳಿನ-ನಳಿನ....
ಇಕಾರಾಂತಕ್ಕೆ	:	ಶ್ರುತಿ-ಶ್ರುತಿ, ಸ್ಮೃತಿ-ಸ್ಮೃತಿ....
ಉಕಾರಾಂತಕ್ಕೆ	:	ಪಶು-ಪಶು, ಶಿಶು-ಶಿಶು....
ಋಕಾರಾಂತಕ್ಕೆ	:	ಪಿತೃ-ಪಿತೃ, ಸವಿತೃ-ಸವಿತೃ....
ಆರಾದೇಶಕ್ಕೆ	:	ಸವಿತೃ-ಸವಿತಾರ, ನೇತೃ-ನೇತಾರ
[1]ತಕಾರಾದೇಶ[1]ಕ್ಕೆ	:	ದಾತೃ-ದಾತ, ಮಾಂಧಾತೃ-ಮಾಂಧಾತ. ಭೀತನ ದಾತನ ಸತ್ಪೋ ಪೇತನ....
ವಿಧಾತೃ ಶಬ್ದದ ರಾಂತಕ್ಕೆ	:	ವಿಧಾತೃ-ವಿಧಾತ್ರ.

ಭೀ....।

ತನಿಕಾಯಕ್ಕೆ ವಿಧಾತ್ರನುಂಡಿಗೆ ಜವಂಗೊಟ್ಟೋಲೆ

೯೫

ಪಿತೃ ಶಬ್ದದೆಡೆಗರಾದೇ
ಶತೆ, ಸಖಿಶಬ್ದಕ್ಕೆ ನೆಟ್ಟನತ್ವಾದೇಶ
ಸ್ಥಿತಿಯಾಗೆ ಲಿಂಗಮಕ್ಕುಂ,
ವಿತರ್ಕಮೇಂ ಪೇೞ್ ಸ್ವರಾಂತಮೀ ಲಿಂಗಂಗಳ್

- ಮೂಲಪಾಠ 'ಅತ್ವಂ' ಇದ್ದಿರಬೇಕು.

1-1ಈ ಸ್ಥಾನಗಳಲ್ಲಿ 'ಅಕಾರಾದೇಶ' ಸೂಕ್ತ ಪಾಠವೆಂದು ತೋರುತ್ತದೆ.

ಪಿತೃ ಶಬ್ದ(ದ ಋಕಾರ)ಕ್ಕೆ ಅರಾದೇಶ, ಸಖಿಶಬ್ದ(ದ ಇಕಾರಾಂತ)ಕ್ಕೆ ಅಕಾರಾದೇಶ ಉಂಟಾಗಲು (ಅವು) ಲಿಂಗವಾಗುತ್ತವೆ.* ಇವು (= ಈ ವರೆಗೆ ವಿವರಿಸಿದುವು) ಸ್ವರಾಂತಲಿಂಗಗಳು.

ಪಿತೃ ಶಬ್ದಕ್ಕೆ : ಪಿತೃ-ಪಿತರ.

....ಬಡವರ ಪಿತರರಂತೆ ಮಱುಗುತ್ತಿರ್ಕುಂ....

ಸಖಿ ಶಬ್ದಕ್ಕೆ : ಸಖಿ-ಸಖ.

ನಿಮಗೆ ಸಖಂ ಕಮಲಸಖಂ....

೯೬

ಜನಮುಲಿವ ಸಂಸ್ಕೃತ ವ್ಯಂ
ಜನಾಂತಲಿಂಗಂಗಳತ್ವಮಂ, ದ್ವಿತ್ವದಿನು
ತ್ವನಿಯೋಗಮನಂತ್ಯಾದ
ರ್ಶನಮಂ ಮೇಣ್ ತಾಳ್ದು ಕನ್ನಡಕ್ಕವು ಲಿಂಗಂ

ಸಂಸ್ಕೃತ ವ್ಯಂಜನಾಂತ ಲಿಂಗಗಳು ಅಕಾರಾಂತವನ್ನು, ದ್ವಿತ್ವಯುಕ್ತ ಉಕಾರಾಂತವನ್ನು ಮತ್ತು ಅಂತ್ಯಾಕ್ಷರಲೋಪವನ್ನು ವಿಕಲ್ಪದಿಂದ ತಾಳಿ ಕನ್ನಡಕ್ಕೆ ಲಿಂಗವಾಗುತ್ತವೆ.

ಅಕಾರಾಂತಕ್ಕೆ	:	ದಿವ್-ದಿವ, ಸ್ರಜ್-ಸ್ರಜ
ದ್ವಿತ್ವಯುಕ್ತ ಉಕಾರಾಂತಕ್ಕೆ	:	ಅಪ್- ಅಪ್ಪು, ಕ್ಷುತ್-ಕ್ಷುತ್ತು
ಅಂತ್ಯಾಕ್ಷರ ಲೋಪಕ್ಕೆ	:	ರಾಜನ್-ರಾಜ, ಮೂರ್ಧನ್-ಮೂರ್ಧ
ವಿಕಲ್ಪಕ್ಕೆ	:	೧. ಯಶಸ್-ಯಶಸ್ಸು, ಯಶ, ತೇಜಸ್-ತೇಜಸ್ಸು, ತೇಜ.
		೨. ವಾಕ್-ವಾಕ್
		೩. ಗೀರ್-ಗೀರ್
		ಶ್ರುತದೇವಿ ವಾಣಿ ವಾಕ್ ಭಾ
		ರತಿ ವಚನಂ ಭಾಷೆ ವಾಚಿ ಗೀರ್ಬ್ರಾಹ್ಮಿ

೯೭.

ಪ್ರಚುರತೆಯಿಂ ಪ್ರಥಮಾಬಹು
ವಚನಂಗಳವೇಕವಚನಕೃತಲಿಂಗಂಗಳ್
ನಿಚಿತ ವಿಸರ್ಗಮನುೞಿದಂ
ದುಚಿತಜ್ಞರ್ ತಿಳಿವುದವನುದಾಹೃತಿಮುಖದಿಂ

(ಸಂಸ್ಕೃತದ) ಪ್ರಥಮಾಬಹುವಚನಗಳು, ತಮ್ಮ ವಿಸರ್ಗವನ್ನು ಕಳೆದುಕೊಳ್ಳಲು (ಕನ್ನಡಕ್ಕೆ) ಏಕವಚನ ಲಿಂಗವೆನಿಸಿಕೊಳ್ಳುತ್ತವೆ. ಇವುಗಳನ್ನು ಉದಾಹರಣೆಗಳ ಮೂಲಕ ಇಂಗಿತಜ್ಞರು ತಿಳಿದುಕೊಳ್ಳಬೇಕು.

ವಿದ್ವಾಂಸಃ-ವಿದ್ವಾಂಸ, ಶ್ರೀಮಂತಃ-ಶ್ರೀಮಂತ.

---

* ವಿಚಾರ: ಸಖಿ ಶಬ್ದ ಸಂಸ್ಕೃತದಲ್ಲಿ ಪುಲ್ಲಿಂಗ.

ಲಿಂಗ :

೯೮

ನೀನಱಿ ಕರ್ನಾಟಕದೊಳ್
ಪೀನಂ ಸ್ತ್ರೀಪುಂನಪುಂಸಕೋಭಯಪುಂಸ್ತ್ರೀ
ಸ್ತ್ರೀನಪ್‌ಸಮಸ್ತವಾಚ್ಯಾ
ನೂನಾವ್ಯಯಮೆಂದು ಲಿಂಗಮೊಂಬತ್ತು ತೆಱಂ

ಕನ್ನಡದಲ್ಲಿ ಸ್ತ್ರೀಲಿಂಗ, ಪುಲ್ಲಿಂಗ, ನಪುಂಸಕಲಿಂಗ, ಪುಂನಪುಂಸಕಲಿಂಗ, ಪುಂಸ್ತ್ರೀಲಿಂಗ, ಸ್ತ್ರೀನಪುಂಸಕಲಿಂಗ, ತ್ರಿವಿಧಲಿಂಗ, ವಾಚ್ಯಲಿಂಗ, ಅವ್ಯಯಲಿಂಗ - ಎಂದು ಲಿಂಗಗಳು ಒಂಬತ್ತು ವಿಧವಾಗಿವೆ.*

ಸ್ತ್ರೀಲಿಂಗಕ್ಕೆ : ಅರಸಿ, ದೇವಿ
ಪುಲ್ಲಿಂಗಕ್ಕೆ : ಅರಸಂ, ದೇವಂ
ನಪುಂಸಕಲಿಂಗಕ್ಕೆ : ಕನ್ನಡಿ, ಕಳಶಂ
ಪುಂನಪುಂಸಕಲಿಂಗಕ್ಕೆ : ರವಿ, ಬಸಂತಂ.
ರವಿ ಮೂಡಿದಂ
ರವಿ ಮೂಡಿದುದು
ಪುಂಸ್ತ್ರೀಲಿಂಗಕ್ಕೆ : ಇವರ್, ತೊಟ್ಟು.
ಇವರ್ ಪುರುಷರ್, ಇವರ್ ಸ್ತ್ರೀಯರ್
ಇವಂ ದೇವರ ತೊಟ್ಟು, ಇವಳ್ ದೇವರ ತೊಟ್ಟು
ಸ್ತ್ರೀನಪುಂಸಕಲಿಂಗಕ್ಕೆ : ಪೆಣ್ಣು, ಸರಸ್ವತಿ.
ಆ ಪೆಣ್ ಜಾಣೆ
ಆ ಪೆಣ್ ಬಂದುದು.
ಸರಸ್ವತಿ ಕೈನೆರವಾಗೆ ಪೇಟ್ದಪಳ್....
ಪರಮ ಜಿನೇಂದ್ರವಾಣಿಯೆ ಸರಸ್ವತಿ ಬೇಱಿದು ಪೆಣ್ಣ ರೂಪಮಂ
ಧರಿಯಿಸಿ ನಿಂದುದಲ್ತು....
ತ್ರಿಲಿಂಗಕ್ಕೆ : ನೀನ್, ಶಿಶು.
ನೀನ್ ಅರಸಂ, ನೀನ್ ಅರಸಿ, ನೀನ್ ಪಶು
[ಶಿಶು ಅವನ್, ಶಿಶು ಅವಳ್, ಶಿಶು ಅದು]
ವಾಚ್ಯ (=ವಿಶೇಷ್ಯಾಧೀನ) ಲಿಂಗಕ್ಕೆ : ಅಭಿಮಾನಿ, ದಾನಿ[೧]
[ಅಭಿಮಾನಿ ಅವನ್, ಅಭಿಮಾನಿ ಅವಳ್, ಅಭಿಮಾನಿ ಅದು]
[ದಾನಿ ಅವನ್, ದಾನಿ ಅವಳ್, ದಾನಿ ಅದು]
ಅವ್ಯಯಲಿಂಗಕ್ಕೆ : ಭೋಂಕನೆ, ಮೆಲ್ಲನೆ,
ಭೋಂಕನೆ ಬಂದಂ,ಭೋಂಕನೆ ಬಂದಳ್,ಭೋಂಕನೆ ಬಂದುದು.
[ಮೆಲ್ಲನೆ ಬಂದಂ, ಮೆಲ್ಲನೆ ಬಂದಳ್, ಮೆಲ್ಲನೆ ಬಂದುದು]

---

* ವಿಚಾರ: ವಾಚ್ಯಲಿಂಗ, ಅವ್ಯಯಲಿಂಗಗಳೆಲ್ಲವೂ ತ್ರಿಲಿಂಗಗಳಾಗುತ್ತವೆ (ನೋಡಿ:ಸೂತ್ರ ೯೯, ೧೦೦). ಆದರೆ ತ್ರಿಲಿಂಗಗಳೆಲ್ಲವೂ ವಾಚ್ಯಲಿಂಗ, ಅವ್ಯಯಲಿಂಗಗಳಾಗಬೇಕಿಲ್ಲ.

೧. ಈ ವಿಶೇಷಣಗಳು ವಿಶೇಷ್ಯದ ಅಧೀನವಾಗಿವೆ.

೯೯

ಬಗೆ ನೀನಾಂ ತಾನೆಂಬು

ಕ್ತಿಗಳುಂ ಗುಣವಚನಸರ್ವನಾಮಬಹುವ್ರೀ

ಹಿಗಳುಂ ಕೃತ್ತದ್ಧಿತಸಂ

ಖ್ಯೆಗಳುಂ ಸಲೆ ವಾಚ್ಯಲಿಂಗಮೆಂದೀ ಕ್ರಮದಿಂ

ನೀಂ, ಆಂ, ತಾಂ, ಎಂಬುವೂ ಗುಣವಚನ, ಸರ್ವನಾಮ, ಬಹುವ್ರೀಹಿಗಳೂ ಕೃತ್ತು, ತದ್ಧಿತ ಸಂಖ್ಯೆಗಳೂ ವಾಚ್ಯಲಿಂಗಗಳು.

ನೀಂ, ಆಂ, ತಾಂ, ಎಂಬಿವಕ್ಕೆ	:ನೀಂ ಕಾಮಂ, ನೀಂ ರತಿ, ನೀಂ ಗಿಳಿ
	ಆಂ ಶಿವಂ, ಆಂ ಗೌರಿ, ಆಂ ನಂದಿ.
	ತಾನವಂ, ತಾನವಳ್, ತಾನದು.
ಗುಣವಚನಕ್ಕೆ	:ಇನಿಯಂ ,ಇನಿಯಳ್, ಇನಿಯದು
ಸರ್ವನಾಮಕ್ಕೆ	:ಪೆಱಂ, ಪೆರಳ್, ಪೆಱತು
ಬಹುವ್ರೀಹಿಗೆ	:ಅವಂ ವಿಮಲಮತಿ, ಅವಳ್ ವಿಮಲಮತಿ, ಅದು ವಿಮಲಮತಿ
ಕೃತ್ತಿಂಗೆ	: ಪಾಡಿದಂ, ಪಾಡಿದಳ್, ಪಾಡಿದುದು
ತದ್ಧಿತಕ್ಕೆ	: ಓದಾಳಿ ಇವಂ, ಓದಾಳಿ ಇವಳ್, ಓದಾಳಿ ಇದು
ಸಂಖ್ಯೆಗೆ	: ಸಾಯಿರ ಗಂಡರ್, ಸಾಯಿರ ಪೆಂಡಿರ್, ಸಾಯಿರ ಮನೆಗಳ್

೧೦೦

ದೊರೆವಡೆದವ್ಯಯಲಿಂಗಂ

ಸರಿ ಸರ್ವವಿಭಕ್ತಿಗಂ ತ್ರಿಲಿಂಗಕ್ಕಂ ತಾಂ

ಸರಿ ವಚನತ್ರಿತಯಕ್ಕಂ

ಸರಿಯೆನಿಸಿ ವಿಕಾರಮಿಲ್ಲದರ್ಥಮನೀಗುಂ

ಅವ್ಯಯಲಿಂಗವು ಸಪ್ತವಿಭಕ್ತಿಗೆ, ಲಿಂಗತ್ರಯಕ್ಕೆ, ವಚನತ್ರಯಕ್ಕೆ ಸಮಾನವೆನಿಸಿ ರೂಪಾಂತರಗೊಳ್ಳದೆ ಅರ್ಥ ನೀಡುತ್ತದೆ.*

ಸಪ್ತವಿಭಕ್ತಿಗಳಿಗೆ-	ಪ್ರಥಮೆ	:	ನಿರ್ನೆರಂ
	ದ್ವಿತೀಯೆ	:	ಬೆಚ್ಚರಂ
	ತೃತೀಯೆ	:	ಅವರ್ಕೆ, ಅಂತಱಿಂದೆ
	ಚತುರ್ಥಿ	:	ಪಚ್ಚನೆ, ಕೆಚ್ಚನೆ
	ಷಷ್ಠಿ	:	ಮತ್ತಿನ
ಲಿಂಗತ್ರಯಕ್ಕೆ :	ಮತ್ತೆ ನೋಡಿದಂ, ಮತ್ತೆ ನೋಡಿದಳ್, ಮತ್ತೆ ನೋಡಿದುದು		

---

* ವಿಚಾರ : ೧. ನಿರ್ನೆರಂ ಮೊದಲಾದ ಅವ್ಯಯಗಳಲ್ಲಿ ಪ್ರಥಮೆ ಮೊದಲಾದ ಪ್ರತ್ಯಯಗಳನ್ನು ಊಹಿಸಿರುವುದು ಸೂಕ್ತವೆನಿಸದು.

೨. 'ಅವ್ಯಯಲಿಂಗಂ ಸರಿ ಸರ್ವವಿಭಕ್ತಿಗಂ' ಎಂಬ ಸೂತ್ರದ ಹೇಳಿಕೆಗೆ ತಕ್ಕಂತೆ ಎಲ್ಲ ವಿಭಕ್ತಿಗಳಿಗೂ ಕೇಶಿರಾಜ ಪ್ರಯೋಗಗಳನ್ನು ಕೊಟ್ಟಿಲ್ಲ.

ವಚನತ್ರಯಕ್ಕೆ : ಭೋಂಕನೋರ್ವಂ ಬಂದಂ.
ಮೆಲ್ಲನಿರ್ವರ್ ನುಡಿದರ್.
ನೆಟ್ಟನೆಲ್ಲರುಂ ಪೋದರ್.

೧೦೧

ಪುರುಷರೆ ಪುಲ್ಲಿಂಗಂ ಸ್ತ್ರೀ
ಯರೆ ತಾಂ ಸ್ತ್ರೀಲಿಂಗಮುೞಿದುವೆಲ್ಲಂ ನಪ್ಪಾ
ಗಿರೆ ಸಲ್ಗುಂ, ಕನ್ನಡದೊಳ್
ಪರಿವರ್ತಿಸವುೞಿದ ಲಿಂಗಮೊಳವಾಗಿರ್ದುಂ

ಪುರುಷರೆ ಪುಲ್ಲಿಂಗ, ಸ್ತ್ರೀಯರೆ ಸ್ತ್ರೀಲಿಂಗ, ಉಳಿದುವೆಲ್ಲ ನಪುಂಸಕಲಿಂಗ. ಕನ್ನಡದಲ್ಲಿ ಮಿಕ್ಕ ಲಿಂಗಗಳಿದ್ದರೂ ವಿಶೇಷವಾಗಿ ಬಳಕೆಯಲ್ಲಿಲ್ಲ.

ಪುಲ್ಲಿಂಗಕ್ಕೆ : ಅರಸಂ, ಕಾಮಂ
ಸ್ತ್ರೀಲಿಂಗಕ್ಕೆ : ಲಕ್ಷ್ಮಿ, ಗೌರಿ
ನಪುಂಸಕಲಿಂಗಕ್ಕೆ : ಮರಂ, ಬಳ್ಳಿ

೧೦೨

ಜನ ಶಬ್ದಮದು ನಪುಂಸಕ
ಮೆನಿಕುಂ, ದುಸ್ಸತ್ಸುಕಾರಮವು ಪೆಱಗಿರೆ ನೆ
ಟ್ಟನೆ ಪುಲ್ಲಿಂಗಂ, ಮತ್ತಾ
ಜನಂ ಮಹಚ್ಛಬ್ದಮಿರೆ ನಪುಂಸಕಮಕ್ಕುಂ

ಜನ ಶಬ್ದ(ಕನ್ನಡದಲ್ಲಿ) ನಪುಂಸಕಲಿಂಗ; (ಅದರ) ಹಿಂದೆ ದುಃ, ಸತ್, ಸು ಇದ್ದರೆ ಪುಲ್ಲಿಂಗ;ಮಹತ್ ಇದ್ದರೆ ನಪುಂಸಕಲಿಂಗ.

ನಪುಂಸಕಲಿಂಗಕ್ಕೆ : ಜನಂ
ಪುಲ್ಲಿಂಗಕ್ಕೆ : ದುರ್ಜನಂ, ಸಜ್ಜನಂ, ಸುಜನಂ
ನಪುಂಸಕಲಿಂಗಕ್ಕೆ : ಮಹಾ(<ಮಹತ್)ಜನಂ

೧೦೩

ಸಂದಿಸಿ ಮಮಿಂಕೆಯುದದೊ
ಳ್ಪೊಂದಿರ್ಪುವು ಸಪ್ತವಿಧವಿಭಕ್ತಿಗಳವು ಮಾ
ರ್ಗಂದಪ್ಪದರ್ಥವಶದಿಂ
ಪಿಂದೆಣಿಸಿದ ವಿವಿಧವಿಧದ ಲಿಂಗಕ್ಕೆಲ್ಲಂ

ಹಿಂದೆ ಹೇಳಿದ ಬೇರೆ ಬೇರೆ ಪ್ರಕಾರದ (ಕೃತ್ ಮೊದಲಾದ) ಲಿಂಗಗಳಿಗೆ (ಪ್ರಥಮೆ, ದ್ವಿತೀಯೆ, ತೃತೀಯೆ, ಚತುರ್ಥಿ, ಪಂಚಮಿ, ಷಷ್ಠಿ, ಸಪ್ತಮಿ ಇವುಗಳ) ಮ್, ಅಮ್,ಇಮ್, ಕೆ, ಅತ್ (=ಅತ್ತಣಿಂ), ಅದ್(=ಅ), ಒಳ್ ಎಂಬ ಸಪ್ತವಿಭಕ್ತಿಗಳು ಕಾರಕವಶದಿಂದ ಹತ್ತುತ್ತವೆ.*

ಸಪ್ತವಿಭಕ್ತಿಗಳಿಗೆ : ಮರಂ, ಮರನಂ, ಮರದಿಂ, ಮರಕ್ಕೆ[1], ಮರದತ್ತಣಿಂ, ಮರದ, ಮರದೊಳ್, ಮರನೇ (ಸಂಬೋಧನೆ).

ವಚನ :

೧೦೪

ಏಕದ್ವಿತ್ವಬಹುತ್ವಮ
ನೇಕದ್ವಿಬಹುತ್ವವಸ್ತುಗಳ್ಗಾಚರಿಪರ್,
ಸ್ವೀಕಾರಂ ಕನ್ನಡದೊಳ
ಗೇಕಬಹುತ್ವಂ, ದ್ವಿವಚನಮುಚಿತದೆ ಬರ್ಕುಂ

ಏಕ, ದ್ವಿ, ಬಹುವಸ್ತುಗಳಲ್ಲಿ (ಕ್ರಮವಾಗಿ) ಏಕವಚನ, ದ್ವಿವಚನ, ಬಹುವಚನಗಳನ್ನು ಹೇಳುತ್ತಾರೆ. ಕನ್ನಡದಲ್ಲಿ ಅಂಗೀಕೃತವಾದುವು ಏಕವಚನ ಬಹುವಚನಗಳು (ಮಾತ್ರ). ದ್ವಿವಚನ ಔಚಿತ್ಯದಿಂದ ಬರುತ್ತದೆ.

ಏಕವಚನಕ್ಕೆ : ಮೇರುವಿದು
ದ್ವಿವಚನಕ್ಕೆ : ಕಣ್ಗಳಿವು
ಬಹುವಚನಕ್ಕೆ : ಕುರುಳ್ಗಳಿವು
ಔಚಿತ್ಯದ ದ್ವಿವಚನಕ್ಕೆ : ನಕುಲಸಹದೇವರ್[2]

೧೦೫

ಸಮನಿಸುಗಮಾ ವಿಭಕ್ತಿಗ
ಳ ಮೊದಲೊಳಾದಂ ಗಳಾಗಮಂ ದ್ವಿತ್ವಬಹು
ತ್ವಮದಾಗೆ, ಗಳಾಗಮಕವು
ಸಮನಿಸುಗುಂ ಸರ್ವನಾಮಗುಣವಚನದೊಳಂ

ದ್ವಿವಚನ ಬಹುವಚನಗಳಲ್ಲಿ ವಿಭಕ್ತಿಗಳ ಮೊದಲು ವಿಶೇಷವಾಗಿ ಗಳ್ ಆಗಮವುಂಟಾಗುತ್ತದೆ. ಸರ್ವನಾಮ ಗುಣವಚನಗಳಲ್ಲಿ ಗಳ್‌ಗೆ ಪ್ರತಿಯಾಗಿ ಅವು ಆದೇಶವಾಗಿ ಬರುತ್ತದೆ.

---

* ವಿಚಾರ : ನಾಮ ಮತ್ತು ಕ್ರಿಯೆಗಳಿಗಿರುವ ಸಂಬಂಧವೇ ಕಾರಕ. ಅದು ಪ್ರಥಮೆಯಲ್ಲಿ ಕರ್ತೃ. ದ್ವಿತೀಯೆಯಲ್ಲಿ ಕರ್ಮ, ತೃತೀಯೆಯಲ್ಲಿ ಕರಣ, ಚತುರ್ಥಿಯಲ್ಲಿ ಸಂಪ್ರದಾನ, ಪಂಚಮಿಯಲ್ಲಿ ಅಪಾದಾನ, ಸಪ್ತಮಿಯಲ್ಲಿ ಅಧಿಕರಣ - ಹೀಗೆ ಆರು ವಿಧವಾಗಿದೆ. ಷಷ್ಠಿಗೆ ಕಾರಕವಿಲ್ಲ.

1. ಚತುರ್ಥಿ ಪ್ರತ್ಯಯವು ಸೂತ್ರದಲ್ಲಿ 'ಕೆ', ಪ್ರಯೋಗದಲ್ಲಿ 'ಕ್ಕೆ' ಇದೆ. ಈ ವ್ಯತ್ಯಾಸ ಚಿಂತನೀಯ.
2. ವಿಚಾರ : ಕಣ್ಗಳಿವು ಎಂಬುದೇ ಔಚಿತ್ಯದ ದ್ವಿವಚನವಾಗಿರುವುದರಿಂದ ನಕುಲಸಹದೇವರ್ ಎಂಬುದನ್ನು ಔಚಿತ್ಯದ ದ್ವಿವಚನಕ್ಕೆ ಪ್ರತ್ಯೇಕ ಪ್ರಯೋಗವನ್ನಾಗಿ ಕೊಡುವ ಅಗತ್ಯವಿರಲಿಲ್ಲ.

ದ್ವಿವಚನಕ್ಕೆ : ತೊಡೆ+ಗಳ್=ತೊಡೆಗಳ್.

ತೊಡೆಗಳ್ ರಂಭಾಸ್ತಂಭದ
ಗೆಡೆಗಳ್ ಕಣ್ಗಳ್ ಮನೋಜವೀರನ ಗೇಣ್ಗಳ್

ಬಹುವಚನಕ್ಕೆ : ಕೊಳ+ಗಳ್=ಕೊಳಗಳ್.

ಕೊಳಗಳ್ ದಳಿತಾಬ್ಜಂಗಳ್
ದಳಿತಾಬ್ಜಂಗಳ್ ಸಮೃದ್ಧ ಮಧುಗಳ್....

ಸರ್ವನಾಮಕ್ಕೆ : ಅದು+ಗಳ್>ಅವು=ಅವು

ಇದು+ಗಳ್>ಇವು=ಇವು
ಉದು+ಗಳ್>ಉವು=ಉವು.

ಅವು ಪಿರಿಯವು ಭಾವಿಪೊಡಿಂ ।
ತಿವು ಕಿಱಿಯವೆನಿಪ್ಪುದಿದುವೆ ಭೇದಂ ನಿಮಗಾ
ವುವು ನೋಟ್ಪೊಡೆ ಮನಕೇಱುವು
ವವನಾಯ್ಕುಳಿಗೊಳ್ಳಿಮೆಂದು ನವರತ್ನಮುಮಂ ॥

ಗುಣವಚನಕ್ಕೆ : ಇನಿದು+ಗಳ್>ಅವು=ಇನಿಯವು.

ಇನಿಯವು ವಿಷಯಸುಖಂ ನಂ
ನಂಜಿನ ಸವಿವೊಲ್....

೧೦೬

ಸಂಗಡಿಪಿ ಸರ್ವನಾಮದ
ಲಿಂಗಾಂತ್ಯಾಕ್ಷರಕಮವುವಿನಾದ್ಯಕ್ಷರಕಂ
ಪಿಂಗದೆ ಲೋಪಂ, ಗುಣವಚ
ನಂಗಳೊಳಂತ್ಯ ದುಕಾರಮಾದೊಡೆ ಲೋಪಂ

ಸರ್ವನಾಮಲಿಂಗದ ಅಂತ್ಯಾಕ್ಷರಕ್ಕೆ ಮತ್ತು (ಬಹುವಚನದ ಪ್ರತ್ಯಯವಾಗಿರುವ) ಅವುವಿನ ಆದ್ಯಕ್ಷರಕ್ಕೆ ತಪ್ಪದೆ ಲೋಪವುಂಟಾಗುತ್ತದೆ; ಗುಣವಚನಗಳಲ್ಲಿ ಅಂತ್ಯ ದುಕಾರವಾಗಿದ್ದರೆ (ಅದು) ಲೋಪಗೊಳ್ಳುತ್ತದೆ.

ಸರ್ವನಾಮಕ್ಕೆ : ಎಲ್ಲದು+ಅವು= ಎಲ್ಲವು.

ಮಾಲೆವೂಗಳೆಲ್ಲವಱ ಕದಂಬಗಂಪನಣಮೊಲ್ಲದೆ....

ಗುಣವಚನಕ್ಕೆ : ಪಿರಿದು+ಅವು=ಪಿರಿಯವು.

ಬಿರಯಿಗಳ ಸುಯ್ಗಳೊಡನೆಯೆ
ಪಿರಿಯವು ದಿವಸಂಗಳಾದುವು

೧೦೭

ಅಕ್ಕುಂ ಕೂಡೆ ತುಕಾರಾಂ
ತಕ್ಕೆ ತೃತೀಯತ್ವಮವುವಿನಾದಿಗೆ ಲೋಪಂ,
ಮಿಕ್ಕಾ ಸ್ತ್ರೀಪುಲ್ಲಿಂಗದೊ
ಳಕ್ಕುಮಿರರ್ದಿರ್ವಿರೆಂದು ಲೋಕೋಕ್ತಿಗಳೊಳ್

(ಗುಣವಚನಗಳಲ್ಲಿ) ಅಂತ್ಯ ತುಕಾರಕ್ಕೆ (ವರ್ಗದ) ತೃತೀಯಾಕ್ಷರವೂ (ಬಹುವಚನದ ಪ್ರತ್ಯಯವಾಗಿರುವ) ಅವುವಿನ ಆದಿಗೆ ಲೋಪವೂ ಉಂಟಾಗುತ್ತವೆ. ಮಿಕ್ಕ ಸ್ತ್ರೀಲಿಂಗ ಪುಲ್ಲಿಂಗಗಳಲ್ಲಿ (ಗಳ್‌ಗೆ ಪ್ರತಿಯಾಗಿ) ಇರ್, ಅರ್, ದಿರ್, ವಿರ್ ಉಂಟಾಗುತ್ತದೆ.

ಗುಣವಚನಕ್ಕೆ : ಬೆಟ್ಟಿತು>ದು+ಅವು=ಬೆಟ್ಟಿದುವು.
ಬೆಟ್ಟಿದುವೆನಿಪ್ಪ ಲೋಹಖುರ ವಳಯಂಗಳ್....

ಇರ್‌ಗೆ : ತೊಟ್ಟು+ಇರ್=ತೊಟ್ಟಿರ್.
....ತದ್ವಾರಾಪುರಸ್ತ್ರೀಯರಂ
ತೊಟ್ಟಿರ್ ಮಾಡಿದ....

ಅರ್‌ಗೆ : ನಂಟ+ಅರ್+ನಂಟರ್.
ನಂಟರ ನಲ್ಲರ ಮಾತುಗೇಳದೋತನೆ ಪರಮಾತ್ಮಂ....*

ದಿರ್‌ಗೆ : ಇವಳ್+ದಿರ್=ಇವಳ್ದಿರ್, ಇವನ್+ದಿರ್=ಇವಂದಿರ್.
ಇವಳ್ದಿರೊಳಿವಂದಿರಂ ವಿಕೃತರೂಪರಂ....

ವಿರ್‌ಗೆ : [ತಾಯ್+ವಿರ್=ತಾಯ್ವಿರ್, ತಂದೆ +ವಿರ್=ತಂದೆವಿರ್].
ಅವನತವಾಗಿ ತಂದೆವಿರ ತಾಯ್ವಿರ ಕಲ್ಪಿಸಿದುಕ್ತಿ ಕೇಳ್ದು

೧೦೮

ಬರೆ ಪುಂಸ್ತ್ರೀಲಿಂಗಮುಮಮ
ರ್ದಿರೆ ಸಂಖ್ಯಾಸರ್ವನಾಮ ಕೃದ್ಗುಣವಚನ
ಸ್ಫುರದುರು ತದ್ಧಿತಮುಂ ಮುಂ
ದರುವಕ್ಕುಮದಂತಲಿಂಗದೊಳ್ ವಿಧಿಲೋಪಂ

ಪುಲ್ಲಿಂಗ, ಸ್ತ್ರೀಲಿಂಗಗಳೂ ಬರಲು, (ಪುಂಸ್ತ್ರೀಲಿಂಗವಾಚಕವಾದ) ಸಂಖ್ಯೆ, ಸರ್ವನಾಮ, ಕೃತ್, ಗುಣವಚನ, ತದ್ಧಿತಗಳೂ ಇರಲು ಮುಂದೆ ಅರ್ ಬರುತ್ತದೆ. ಅಕಾರಾಂತ(ಪುಲ್ಲಿಂಗ)ದಲ್ಲಿ (ಹಿಂದೆ ಹೇಳಿದ ಇರ್, ದಿರ್, ವಿರ್ ಎಂಬ) ವಿಧಿಗೆ ಲೋಪವುಂಟಾಗುತ್ತದೆ (=ಅರ್ ಎಂಬ ವಿಧಿ ಮಾನ್ಯವಾಗುತ್ತದೆ).

ಪುಲ್ಲಿಂಗಕ್ಕೆ : ಕೋವಿದ+ಅರ್=ಕೋವಿದರ್.
....ಕಾರ್ಯವಿಚಾರ
ಕೋವಿದರಿರ್ದು ಪೇಟ್ದೊ[ಡದು] ಬೇಸಱವಾಗದು ನೀತಿಮಾರ್ಗದೊಳ್

ಸ್ತ್ರೀಲಿಂಗಕ್ಕೆ : ದೇವಿ+ಅರ್=ದೇವಿಯರ್

ಸಂಖ್ಯೆಗೆ : ಎರಡು>ಇರ್+ಅರ್=ಇರ್ವರ್.
ತಮ್ಮಿಂದಿರ್ವರುಂ ಕೈದುವಂ ಬಿಸುಟರ್

ಸರ್ವನಾಮಕ್ಕೆ: ಅವನ್(ಳ್)+ಅರ್= ಅವರ್.
ಅವರಿವರುವರಳವೇ ಕಾವ್ಯವಿದ್ಯೆಗಳ್

ಕೃತ್ತಿಂಗೆ : ಮಾಡಿದ+ಅರ್=ಮಾಡಿದರ್.
....ಕಬ್ಬದೊ
ಳೊಡಂಬಡಂ ಮಾಡಿದರ್ ಪುರಾತನ ಕವಿಗಳ್ ।

---

* ವಿಚಾರ : ತೊಟ್ಟಿರ್, ನಂಟರ್ ಪದಗಳು ಸ್ತ್ರೀಲಿಂಗವೂ, ಪುಲ್ಲಿಂಗವೂ ಆಗುತ್ತದೆ. ಹೀಗಾಗಿ ಇಲ್ಲಿ ಸ್ತ್ರೀಲಿಂಗಕ್ಕೂ, ಪುಲ್ಲಿಂಗಕ್ಕೂ ಪ್ರತ್ಯೇಕ ಪ್ರಯೋಗಗಳನ್ನು ಕೊಟ್ಟಿದ್ದರೆ ಹೆಚ್ಚು ಔಚಿತ್ಯಪೂರ್ಣವಾಗುತ್ತಿತ್ತು.

ಗುಣವಚನಕ್ಕೆ : ಬಲ್ಲಿತು>ದು+ಅರ್=ಬಲ್ಲಿದರ್.
ಎನಗೆ ಬಲ್ಲಿದರಾಗಲಾರ್ಪರೆ ಗಾವಿಲರ್....

ತದ್ಧಿತಕ್ಕೆ : ಮಣಿಗಾಱ+ಅರ್=ಮಣಿಗಾಱರ್.
ಮಣಿಗಾಱರ ಕಂಚಗಾಱರೊಱೆಗಾಱರ....

ವಿಧಿಲೋಪಕ್ಕೆ : ಸುರ+ಅರ್=ಸುರರ್

೧೦೯

ಪವರ್ಣೊಳಮಾ ಸಂಖ್ಯೆಯೊಳಂ
ವ್ಯವಹರಿಕುಂ ವತ್ವಮಲ್ಲಿ ಬಶ್ರುತಿಯುಂ ಸಂ
ಭವಿಕುಮದಂತಂ ನಿಲೆ ಬಿಂ
ದು ವಿಕಲ್ಪಂ, ಬತ್ವಮೊರ್ಮೆ ಲೋಪಮನಾಳ್ಗುಂ

(ಪುಲ್ಲಿಂಗ ಸ್ತ್ರೀಲಿಂಗ ರೂಪದ) ಪ್ರಮಾಣವಾಚಿ, ಸಂಖ್ಯಾವಾಚಿಗಳಲ್ಲಿ ವಕಾರ ಬರುತ್ತದೆ. ಕೆಲವು ಸಲ ಅಲ್ಲಿ (ವಕಾರದಲ್ಲಿ) ಬಕಾರವೂ ಸಂಭವಿಸುತ್ತದೆ; ಅಕಾರಾಂತಕ್ಕೆ ವಿಕಲ್ಪವಾಗಿ ಬಿಂದು ಬರುತ್ತದೆ; ಬಕಾರವು ಒಮ್ಮೊಮ್ಮೆ ಲೋಪವಾಗುತ್ತದೆ.

ಪ್ರಮಾಣದ ವಕಾರಕ್ಕೆ : ಎಲ್ಲರು +ಅರ್=ಎಲ್ಲವರ್
ಎಲ್ಲವರಂತೆವೊಲ್ ನುಡಿವರಲ್ಲರವರ್....

ಸಂಖ್ಯೆಯ ವಕಾರಕ್ಕೆ : ಮೂವತ್ತುಮೂ(<ಮೂರು)+ಅರ್=ಮೂವತ್ತು ಮೂವರ್.
ಮೂವತ್ತುಮೂವರಾದರ್ ದೇವರ್....

ವಕಾರಕ್ಕೆ ಪರವಾದ ಬಕಾರಕ್ಕೆ (ಪ್ರಮಾಣ) : ಅನಿತು+ಅರ್=ಅನಿಬರ್
(ಸಂಖ್ಯೆ) : ಎರಡು>ಇರ್+ಅರ್=ಇರ್ಬರ್.
....ನೆನೆದರಸುಗ
ಳನಿಬರುಮಂ ಕಾದಿ ಗೆಲ್ದನೊರ್ಬನೆ ಪಾರ್ಥಂ ।

ಅಕಾರಾಂತ ಬಿಂದುವಿಗೆ : ಪಲವು>ಪಲ+ಅರ್=ಪಲಂಬರ್
ಅಕಾರಾಂತ ಬಿಂದುವಿಕಲ್ಪಕ್ಕೆ : ಪಲವು>ಪಲ+ಅರ್=ಪಲಬರ್
ಬಕಾರ ಲೋಪಕ್ಕೆ : ಪಲವು>ಪಲ+ಅರ್=ಪಲರ್

೧೧೦

ಪವಣಂ ಸೂಚಿಪ ಸಂಖ್ಯೆಯ
ನವಿಶೇಷದಿನುಸಿರ್ವ ರೂಢಿಯನಿತಿನಿತೆನಿತೆ
ಲ್ಲವು ಕೆಲವು ಪಲವು ತಾಮುಂ
ತ್ಯವರ್ಣಲೋಪಮನೆ ವತ್ವವೊದವಿರೆ ಪಡೆಗುಂ

ಪ್ರಮಾಣವಾಚಕವಾದ ಅನಿತು, ಇನಿತು, ಎನಿತು ಎಂಬಿವೂ ಅನಿರ್ದಿಷ್ಟ ಸಂಖ್ಯಾವಾಚಕವಾದ ಎಲ್ಲವು, ಕೆಲವು, ಪಲವು ಎಂಬಿವೂ ವಕಾರ ಪರವಾಗಿದ್ದರೆ ಅಂತ್ಯವರ್ಣ ಲೋಪವನ್ನು ಪಡೆಯುತ್ತವೆ.

ಪ್ರಮಾಣಕ್ಕೆ : ಅನಿತು>ಅನಿ+ಅರ್=ಅನಿಬರ್
ಇದರಂತೆ ಇನಿಬರ್, ಎನಿಬರ್

ಸಂಖ್ಯೆಗ : ಎಲ್ಲವು>ಎಲ್ಲ+ಅರ್=ಎಲ್ಲವರ್
ಇದರಂತೆ ಕೆಲವರ್, ಪಲವರ್

೧೧೧

ವಿಕಲಂ ಪೆಱವಱೊಳರ್ವಿ
ರ್ಗೆ ಕಳಾಗಮಮಂತೆ ಸರ್ವನಾಮದೊಳಂ ತಾಂ
ಪ್ರಕಟಂ ಗಳಾಗಮಂ, ತಿಳಿ
ವಿಕಲ್ಪದಿಂದಪ್ಪುದಲ್ತೆ ಗಳ್ದಿರ್ವಿರ್ಗಂ

ಕೆಲವೆಡೆ ಅರ್ ವಿರ್‌ಗಳ ಪರದಲ್ಲಿ ವಿಕಲ್ಪದಿಂದ ಕಳ್ ಆಗಮವುಂಟಾಗುತ್ತದೆ. ಅದೇ ಪ್ರಕಾರ ಸರ್ವನಾಮದಲ್ಲಿ (ಅರುವಿನ ಪರದಲ್ಲಿ)ಗಳ್ ಆಗಮ ಪ್ರಕಟವಾಗುತ್ತದೆ. ದಿರ್ ವಿರ್‌ಗಳಗೆ ಪ್ರತಿಯಾಗಿ ವಿಕಲ್ಪದಿಂದ ಗಳ್ ಬರುತ್ತದೆ.

ಅರ್ ಪರದ ಕಳಾಗಮಕ್ಕೆ	:	ಬುಧರ್+ಕಳ್=ಬುಧರ್ಕಳ್. ಸದಭಿಮತ ಕಾವ್ಯಪದವಿ[ಧಿ] ವಿದೂರಗತಮಾ[ಗೆ] ಪರಿಹರಕ್ಕೆ ಬುಧರ್ಕಳ್
ವಿರ್ ಪರದ ಕಳಾಗಮಕ್ಕೆ	:	ತಾಯ್ವಿರ್+ಕಳ್=ತಾಯ್ವಿರ್ಕಳ್
ಅರ್ವಿರ್ಗಳಿಲ್ಲದ ಕಳಾಗಮಕ್ಕೆ	:	ಮಗು+ಕಳ್=ಮಕ್ಕಳ್
ಸರ್ವನಾಮಪರದ ಗಳಾಗಮಕ್ಕೆ	:	ಅವರ್+ಗಳ್=ಅವರ್ಗಳ್
ವಿಕಲ್ಪದಿಂದ ದಿರ್‌ಗೆ ಗಳ್	:	ಅಣ್ಣಂದಿರ್>ಅಣ್ಣಂಗಳ್
ವಿಕಲ್ಪದಿಂದ ವಿರ್‌ಗೆ ಗಳ್	:	ಅತ್ತೆವಿರ್>ಅತ್ತೆಗಳ್

೧೧೨

ಸವನಿಪುದಯತ್ನಕೃತಗೌ
ರವಮುಖದೊಳ್ ಗುರುಮುನೀಶ್ವರಾದಿ ವಿಶಿಷ್ಟೋ
ದ್ಭವವಿನಯದೊಳೊಂದಿದಸ
ಹ್ಯವೃತ್ತಿಯೊಳ್ ತಾಂ ಬಹುತ್ವಮೇಕತ್ವದೊಳಂ

(ಹಿರಿಯರಿಗೆ ಸಲ್ಲಿಸುವ) ಪ್ರಯತ್ನರಹಿತಗೌರವ ಸಂದರ್ಭದಲ್ಲಿ. ಗುರುಮುನೀಶ್ವರಾದಿ ವಿಶಿಷ್ಟರ ವಿಷಯವಾಗಿ ಮೂಡುವ ವಿನಯದಲ್ಲಿ, ಒದಗಿದ ಅಸಹ್ಯವೃತ್ತಿಯಲ್ಲಿ ಏಕವಚನಕ್ಕೆ ಪ್ರತಿಯಾಗಿ ಬಹುವಚನ ಪ್ರಯೋಗವಾಗುತ್ತದೆ.

ಪ್ರಯತ್ನರಹಿತ ಗೌರವಕ್ಕೆ	:	ಎಮ್ಮ ತಂದೆ>ಎಮ್ಮ ತಂದೆಗಳ್ ಎಮ್ಮ ತಾಯ್>ಎಮ್ಮ ತಾಯ್ಗಳ್
ವಿಶಿಷ್ಟರ ವಿಷಯಕ್ಕೆ	:	ಸ್ವಾಮಿ>ಸ್ವಾಮಿಗಳ್. ಶ್ರೀಮತ್ಸಮಂತಭದ್ರ ಸ್ವಾಮಿಗಳ....
ಅಸಹ್ಯವೃತ್ತಿಗೆ	:	ಬಡವಾದಿರರಸ ಕಾಲೊಳ್ ನಡೆದಪಿರೊಡನಾರುಮಿಲ್ಲ ಕಟಿಲೆಗಳೇಂ ನಿ। ಮ್ಮುಡಿಯೊಳಗೆ ಪಡುವ ದೇಗುಲ ದೆಡೆಯಾವುದು? ಕುಡದ ನಿಮಗಮೀಯೆಡರಾಯ್ತೇ ॥

೧೧೩

ಉದಯಿಸುಗುಂ ಗಳ್ದಿರ್ಗಳ
ಮೊದಲೊಳದಂತಕ್ಕೆ ಬಿಂದು ಪುಂಸ್ತ್ರೀಲಿಂಗ
ಕ್ಕದು ನಪ್ಪಿನೊಳ್ ವಿಕಲ್ಪಂ,
ಪುದಿದಿರೆ ಗಳ್ ಬಿಂದು ನಿಯತಮದು ಸಂಸ್ಕೃತದೊಳ್

ಅಕಾರಾಂತ ಪುಲ್ಲಿಂಗ ಸ್ತ್ರೀಲಿಂಗಗಳಿಗೆ (ಪರವಾದ) ಗಳ್ ದಿರ್‌ಗಳ ಆದಿಯಲ್ಲಿ ಬಿಂದು ಬರುತ್ತದೆ. (ಅಕಾರಾಂತ) ನಪುಂಸಕಲಿಂಗಕ್ಕೆ (ಗಳ್ ಪರವಾಗಲು) ಅದು (=ಆದಿಯ ಬಿಂದು) ವಿಕಲ್ಪ; (ಅಕಾರಾಂತ) ಸಂಸ್ಕೃತ (ಶಬ್ದ)ಕ್ಕೆ ಗಳ್ ಪರವಾದರೆ (ಆದಿಯ)ಬಿಂದು ನಿತ್ಯ.

ಪುಲ್ಲಿಂಗಕ್ಕೆ : ಅಣ್ಣ+ಗಳ್=ಅಣ್ಣಂಗಳ್, ಅಣ್ಣ+ದಿರ್=ಅಣ್ಣಂದಿರ್
ಸ್ತ್ರೀಲಿಂಗಕ್ಕೆ : ಅಕ್ಕ+ಗಳ್=ಅಕ್ಕಂಗಳ್, ಅಕ್ಕ+ದಿರ್ =ಅಕ್ಕಂದಿರ್
ನಪುಂಸಕಲಿಂಗ ವಿಕಲ್ಪ ಬಿಂದುವಿಗೆ : ಮರ+ಗಳ್= ಮರಂಗಳ್, ಮರಗಳ್
ಸಂಸ್ಕೃತದ ನಿತ್ಯಬಿಂದುವಿಗೆ : ಗುಣ+ಗಳ್=ಗುಣಂಗಳ್

೧೧೪

ಪರದೊಳ್ ಸ್ವರಮಿರೆ ಬಿಂದುಗೆ
ದೊರೆಕೊಳ್ಗುಂ ನತ್ವಮತ್ವಮಾ ಮತ್ವಕ್ಕು
ಚ್ಚರಿಪರ್ ವತ್ವಮುಮರೆಬರ್,
ನಿರವದ್ಯಂ ನಿಜಮಕಾರದೆಡೆಗಂ ವತ್ವಂ

ಪರದಲ್ಲಿ ಸ್ವರವಿದ್ದರೆ ಬಿಂದುವಿಗೆ ನಕಾರ ಮಕಾರಗಳು ಪ್ರಾಪ್ತವಾಗುತ್ತವೆ. ಕೆಲವರು ಆ ಮಕಾರಕ್ಕೆ (ಪ್ರತಿಯಾಗಿ) ವಕಾರವನ್ನು ಉಚ್ಚರಿಸುತ್ತಾರೆ. ಸಹಜ ಮಕಾರಕ್ಕೂ ವಕಾರವುಂಟಾದರೆ ದೋಷವೇನಿಲ್ಲ.

ನಕಾರಕ್ಕೆ : ಪೊಲಂ +ಅಱಿಯದ =ಪೊಲನರಿಯದ.
ಪೊಲನಱಿಯದ ನೆಲನಱಿಯದ ।
ಕೆಲನಱಿಯದ ಮಿಗದ ಮೂಱು ವಿಧಮಱಿಯದ....
ಮಕಾರಕ್ಕೆ : ನಿರಾಕುಳಂ +ಆಗಿ=ನಿರಾಕುಳಮಾಗಿ.
ಆಯಿರ್ದ ಮಾಟ್ಕೆಯೊಳೆ ಪರ
ಮಾಯುಷ್ಯಾಂತಂಬರಂ ನಿರಾಕುಳಮಾಗಿ
ರ್ಪಾಯಿರವಿನ....
ವಕಾರಕ್ಕೆ : ನಾಸಿಕಂ+ಅಡ್ಡಂ =ನಾಸಿಕಮಡ್ಡಂ>ನಾಸಿಕವಡ್ಡಂ
ನಾಸಿಕವಡ್ಡಂ ಬಂದಂದಮನೀಕ್ಷಿಸಿ....
ನಿಜ ಮಕಾರದ ವಕಾರಕ್ಕೆ: ತಿಮಿರ್>ತಿವಿರ್, ತೆಮರ್>ತೆವರ್

ವಿಭಕ್ತಿ :

೧೧೫

ಬಿಂದುವದಂತಕ್ಕುಱಿದೆಡೆ
ಗೆಂದುಂ ಪ್ರಥಮೈಕವಚನದೊಳ್ ಲೋಪಮದಂ
ತಂ ದೊರೆವಡೆದಿದಿರೊಳ್ ಸ್ವರ

ಮೊಂದಿರೆ ಪುಲ್ಲಿಂಗದಲ್ಲಿ ನಾಗಮಮಕ್ಕುಂ

ಅಕಾರಾಂತಕ್ಕೆ ಪ್ರಥಮಾ ವಿಭಕ್ತಿಯ ಏಕವಚನದಲ್ಲಿ ಬಿಂದು ಬರುತ್ತದೆ.* ಮಿಕ್ಕೆಡೆಗೆ (=ಅಕಾರಾಂತವಲ್ಲದಲ್ಲಿ) ಆ ಬಿಂದು ಬರುವದಿಲ್ಲ. ಅಕಾರಾಂತ ಪುಲ್ಲಿಂಗದ ಎದುರಿನಲ್ಲಿ ಸ್ವರ ಬಂದರೆ ನ್ ಆಗಮವಾಗುತ್ತದೆ.[೧]

ಬಿಂದುವಿಗೆ : ವೇದವಿದ+ಂ=ವೇದವಿದಂ.
ವೇದವಿದಂ ಕಾಲತ್ರಯ
ವೇದಿ....

ಬಿಂದುಲೋಪಕ್ಕೆ : ಪುಲಿ, ಗಿಡು, ಎರಲೆ, ಪುಲ್

ನಕಾರಾಗಮಕ್ಕೆ : ಅವ+ಅಂ=ಅವನಂ, ಅವ+ಒಳ್ಳಿದಂ=ಅವನೊಳ್ಳಿದಂ

೧೧೬

ವಿತತ ನಪುಂಸಕಲಿಂಗ
ದ್ವಿತೀಯೆಯೊಳ್ ಮತ್ವನತ್ವವಿಧಿ, ಮತ್ವಮೆ ಸಂ
ಗತಿವಡೆಗುಂ ಸಂಸ್ಕೃತದೊಳ್,
ತೃತೀಯೆ ಮೊದಲಾದುವರ್ಕೆ ದಾಗಮಮಕ್ಕುಂ

(ಅಕಾರಾಂತ) ನಪುಂಸಕಲಿಂಗ(ಕ್ಕೆ) ದ್ವಿತೀಯಾ ಪ್ರತ್ಯಯ (ಪರವಾ)ದಲ್ಲಿ ಮಕಾರ ನಕಾರಗಳು ಆಗಮವಾಗುತ್ತವೆ. ಸಂಸ್ಕೃತದಲ್ಲಿ ಮಕಾರವೇ ಸೇರುತ್ತದೆ. ತೃತೀಯಾ ವಿಭಕ್ತಿ ಮೊದಲಾದವುಗಳಿಗೆ ದಕಾರಾಗಮವಾಗುತ್ತದೆ.

ಮಕಾರಾಗಮಕ್ಕೆ : ಬೆಟ್ಟ+ಅಂ=ಬೆಟ್ಟಮಂ

ನಕಾರಾಗಮಕ್ಕೆ : ಪೊಲ+ಅಂ=ಪೊಲನಂ

ಸಂಸ್ಕೃತದಲ್ಲಿ ಮಕಾರಾಗಮಕ್ಕೆ : ಕುಲ+ಅಂ =ಕುಲಮಂ.
ಕುಲಮಂ ಚಲಮಂ ವಿದ್ಯಾ
ಬಲಮಂ ಶೌರ್ಯಾವಲೇಪಮಂ ಪೊಗೞ್ ನೆಲಂ

ದಕಾರಾಗಮಕ್ಕೆ : ಮನಂ+ಇಂ=ಮನದಿಂ.
ಮನದಿಂ ಬೇಗಂ ಮುಟ್ಟಿದಂ....

೧೧೭

ಸಮನಿಸಿ ತೋಱಿಸುಗುಮಿಮಿಂ
ದಮಿಂದೆಯೆಂಬಿವು ತೃತೀಯೆಯೊಳ್ ಮತ್ತಮೆಕಾ
ರಮದೊಂದೆ ಮೇಣ್ ತೃತೀಯೆಗೆ
ಸಮುಚಿತಮಾದೇಶಮಱಿದುಕೊಳ್ಗೀ ಕ್ರಮದಿಂ

---

* ವಿಚಾರ : "ಮಮಿಂಕೆಯದದೊಳ್...." ಸೂತ್ರ(೧೦೩) ದ ಪ್ರಕಾರ ಪ್ರಥಮಾ ಪ್ರತ್ಯಯ 'ಮ್'.

೧. ಕನ್ನಡದಲ್ಲಿ ಪ್ರಥಮಾ ವಿಭಕ್ತಿಗೆ ಸ್ವತಂತ್ರ ಪ್ರತ್ಯಯವಿಲ್ಲ. ಅಲ್ಲಿ ಪ್ರಕೃತಿಯೇ ಪದವಾಗಿ ನಿಲ್ಲುತ್ತದೆ. ಈ ಭಾಷೆಯಲ್ಲಿ ಇ (ಪುಲಿ), ಉ(ಗಿಡು), ಎ(ಎರಲೆ), ವ್ಯಂಜನ(ಪುಲ್) ಅಂತ್ಯವುಳ್ಳ ಪ್ರಕೃತಿಗಳಿವೆ.ಅಂತ್ಯದಲ್ಲಿ ಮ್(ಅವಮ್)ನ್(ಅವನ್) ವ್ಯಂಜನವುಳ್ಳ ಪ್ರಕೃತಿಗಳೇ ಅಧಿಕ. ಇವುಗಳನ್ನು ಕೆಲವೊಮ್ಮೆ ಬಿಂದುವಾಗಿ(ಅವಂ)ಉಚ್ಚರಿಸುತ್ತಾರೆ. ಇವುಗಳಲ್ಲಿ ಬಿಂದು, ಮ್ ಗಳನ್ನು ಪ್ರತ್ಯಯವೆಂದು, ನ್ ಆಗಮವೆಂದು ಕೇಶಿರಾಜ ತಪ್ಪಾಗಿ ಭಾವಿಸಿದ್ದಾನೆ.

ತೃತೀಯೆಯಲ್ಲಿ ಇಂ, ಇಂದಂ, ಇಂದೆ ಎಂಬಿವು (ಪ್ರತ್ಯಯಗಳಾಗಿ) ತೋರುತ್ತವೆ. ಇದಲ್ಲದೆ ತೃತೀಯೆಗೆ (ಇಮಾದಿಗಳಿಗೆ ಪ್ರತಿಯಾಗಿ) ಎಕಾರವೊಂದೇ ಔಚಿತ್ಯಪೂರ್ಣ ಆದೇಶವಾಗಿ ಬರುತ್ತದೆ. ಈ ರೀತಿಯನ್ನು ಅರಿತುಕೊಳ್ಳಿರಿ.*

ಇಂ, ಇಂದಂ, ಇಂದೆಗಳಿಗೆ : ವಾಹಳಿ+ಇಂ=ವಾಹಳಿಯಿಂ.
ತುರಗದ ವಾಹಳಿಯಿಂ....
ಭಯ+ಇಂದಂ=ಭಯದಿಂದಂ.
ಭಯದಿಂದಂ ಮುಳಿಸಿಂದಂ...
ಕುಡಿಯಳ್ಳೆಗಳ್+ಇಂದೆ=ಕುಡಿಯಳ್ಳೆಗಳಿಂದೆ.
ತೊಡೆ ಸಂಕಲೆಯಿಕ್ಕಿದವೊಲ್
ಕುಡಿಯಳ್ಳೆಗಳಿಂದೆ ಸುರಿದುವಿರ್ಕೆಲಕೆ ಕರುಗ್ಗಳ್ ॥

ಆದೇಶದ ಎಕಾರಕ್ಕೆ : ಕ್ರಮ+ಎ=ಕ್ರಮದೆ.
ಬಗೆದಂತಾಗೆ ಸುರೇಂದ್ರರಿಂ ಕ್ರಮದೆ ಕಲ್ಯಾಣದ್ವಯಂ ಜೈನದೀ
ಕ್ಷೆಗೆ ಪೂಣ್ದು....

೧೧೮

ವಿದಿತಮುವರ್ಣ ಋವರ್ಣೌ
ತ್ವದೊಳಂ ಹ್ರಸ್ವೈತ್ವದೊಳಮಿನಾಗಮವಿಧಿ ತ
ಪ್ಪದು, ವತ್ವಸಂಧಿಯೊಳ
ಮುದಿತ ತೃತೀಯೆಯೊಳಮೞಿ ವಿಕಲ್ಪ ಸ್ಥಿತಿಯಿಂ

ಉ ಊ, ಋ ೠ, ಎ, ಓ ಔಕಾರಗಳಿಗೆ (ತೃತೀಯೆ ಮುಂತಾದವುಗಳಲ್ಲಿ) ತಪ್ಪದೆ ಇನಾಗಮವುಂಟು. ವತ್ವಸಂಧಿಯಲ್ಲಿ ಮತ್ತು ತೃತೀಯೆಯಲ್ಲಿ (ಇನಾಗಮ)ವಿಕಲ್ಪವೆಂದು ತಿಳಿ. ಉಕಾರಕ್ಕೆ :

ತಳಿರ್ವಾಸು+ಇಂದೆ=ತಳಿರ್ವಾಸಿನಿಂದೆ.
ತಳಿರ್ವಾಸಿನಿಂದೆ ಸೆಜ್ಜೆಗೆ
ಕೆಳದಿಯರೆಂತಕ್ಕೆ ಕೊಂಡು ಪೋದರ್ ವಿರಹಾ
ಕುಳೆಯಂ....

ಊಕಾರಕ್ಕೆ : ಪೂ+ಅ=ಪೂವಿನ.
ಪೂವಿನ ಬಿಲ್ಲ ಕೊಪ್ಪನೊದೆದೇೞಿಸಿ ತಾವರೆ ನೂಲ ನಾರಿಯಂ
ಜೇವೊಡೆಗೆಯ್ದು....

ಋಕಾರಕ್ಕೆ : ಪಿತೃ+ಅ=ಪಿತೃವಿನ

ೠಕಾರಕ್ಕೆ : ೠ+ಅ=ೠವಿನ

ಎಕಾರಕ್ಕೆ : ಮತ್ತೆ+ಅ=ಮತ್ತಿನ.
ಮತ್ತಿನ ಮತ್ತಿನ ಬೇರ್ಗಳ
ಬಿತ್ತುಗಳಾ ನದಿಯೊಳೇನೊ ಸುಜನೋತ್ತಂಸಾ

---

* ವಿಚಾರ : ಅಕಾರಾಂತ ನಪುಂಸಕಲಿಂಗ ಪ್ರಕೃತಿಗೆ ಮಾತ್ರ ಎಕಾರ ಪ್ರತ್ಯಯ ಬರುವುದನ್ನುಗಮನಿಸಬೇಕು.

ಓಕಾರಕ್ಕೆ : ಗೋ+ಅ=ಗೋವಿನ
ಔಕಾರಕ್ಕೆ : ಗ್ಲೌ+ಅ=ಗ್ಲೌವಿನ
ವತ್ವಸಂಧಿಯ ಇನಾಗಮಕ್ಕೆ : ಮನು+ಇಂ=ಮನುವಿಂ, ಮನುವಿನಿಂ.
ಮನುವಿನ ಮಾರ್ಗಂ ಸುರಗುರು ।
ವಿನಱಿವು ಪವಮಾನಸೂನುವೊಂದಾಯತಿ....।
ತೃತೀಯೆಯ ವಿಕಲ್ಪ ಇನಾಗಮಕ್ಕೆ : ಮಾತು+ಇಂ =ಮಾತಿಂ, ಮಾತಿನಿಂ

೧೧೯

ಪಗಲಿರುಳೆಂಬಲ್ಲಿ ವಿಕ
ಲ್ಪಗತಿಯಿನಾ ವ್ಯಂಜನಾಂತದೊಳ್ ಪೇೞ್ವರ್ ಸೂ
ರಿಗಳಾಗಳೀಗಳೆಂಬೆಡೆ
ಗಗಲ್ಚರುೞಿದೆಡೆಗಿನಾಗಮಂ ದೋಷಕರಂ

ವಿದ್ವಾಂಸರು ವ್ಯಂಜನಾಂತಗಳಾದ ಪಗಲ್, ಇರುಳ್ ಎಂಬಿವುಗಳಿಗೆ ವಿಕಲ್ಪವಾಗಿ (ಇನಾಗಮವನ್ನು) ಹೇಳುತ್ತಾರೆ. ಆಗಳ್, ಈಗಳ್ ಎಂಬಿವುಗಳಲ್ಲಿ (ಇನಾಗಮವನ್ನು) ತೊಲಗಿಸರು. ಉಳಿದೆಡೆಗೆ ಇನಾಗಮ ದೋಷಕರವಾದುದು.

ವಿಕಲ್ಪಕ್ಕೆ : ಪಗಲ್+ಅ=ಪಗಲ, ಪಗಲಿನ, ಇರುಳ್+ಅ=ಇರುಳ, ಇರುಳಿನ,
ಪಗಲಂತಿರ್ದಚ್ಚವೆಳ್ದಿಂಗಳನಿನಕಿರಣಶ್ರೇಣಿ ಗೆತ್ತು....
ಪಗಲಿನ ರವಿ ಕಿರಣಂಗಳೆ
ಮಗುಟ್ದೀಗಳ್....
ಇರುಳ ಸರೋಜವಾದುದರಿರಾಯರ ಸಂಸಾರಂ ....
....ಗುಹಾ
ಗಹ್ವರದೊಳಗಿರುಳಿನ ಚ
ಕ್ರಾಹ್ವಯದವೊಲಿರ್ದವಂ ಸುಖಂಬಡೆದಪನೇ ॥
ನಿತ್ಯಕ್ಕೆ : ಆಗಳ್+ಅ+ಆಗಳಿನ, ಈಗಳ್+ಅ=ಈಗಳಿನ.
ಆಗಳಿನ ಕಜ್ಜಮನೇಗಮೆ ಗೆಯ್ದುಪುದೆಂದು ....
....ಆವ ರೀತಿ ಪೇ
ೞೆಂದೊಡೆ ಬಯ್ವರೀಗಳಿನ ದೇಸಿಗೆವಿಟ್ಟ ಮಹಾಕವೀಶ್ವರರ್

೧೨೦

ಜನಿಯಿಪುದುದಂತಕೃತ್ಸ
ರ್ವನಾಮಗುಣವಚನಸಂಖ್ಯೆಗಳ್ಗೆ ಪವಣ್ಗಂೞಿ
ವಿನಮಱ್ಕಾರಂ ದಿಗ್ವಾ
ಚಿ ನಿಲೆ ತೃತೀಯಾದಿಗಣ್ ಪ್ರಯೋಗಿಸೆ ಪಡುಗುಂ

ಉಕಾರಾಂತ ಕೃತ್, ಸರ್ವನಾಮ, ಗುಣವಚನ, ಸಂಖ್ಯಾವಾಚಿ, ಪ್ರಮಾಣವಾಚಿಗಳಿಗೆ ತೃತೀಯೆ ಮೊದಲಾದವುಗಳಲ್ಲಿ ಅಱ್ಕಾರವುಂಟಾಗುತ್ತದೆ. ದಿಗ್ವಾಚಿಯಲ್ಲಿ ಅಣ್ ಪ್ರಯೋಗವಾಗುತ್ತದೆ.
ಕೃತ್ತಿಂಗೆ : ಮಾಡಿದುದು+ಇಂ=ಮಾಡಿದುದಱಿಂ
ಸರ್ವನಾಮಕ್ಕೆ : ಅದು+ಅಲ್ಲಿ=ಅದಱಲ್ಲಿ

ಅದಱಲ್ಲಿ ಮೂಷೆಯಿಟ್ಟೆಱ
ಗಿದ ತೆಱದಿಂ ಕೊರ್ವಿದೆಕ್ಕಲಂ....

ಗುಣವಚನಕ್ಕೆ : ಕಿಱಿದು+ಒಳ್=ಕಿಱಿದಱೊಳ್.
ಕಿಱದಱೊಳೆ ಪಿರಿದುಮರ್ಥಮ
ನಱುಪಲ್ ನೆಱೆವಾತನಾತನಿಂದಂ ಜಾಣಂ ।

ಸಂಖ್ಯಾವಾಚಿಗೆ : ಮೂಱು+ಇಂ=ಮೂಱಱಿಂ

ಪ್ರಮಾಣವಾಚಿಗೆ : ಅನಿತು+ಇಂ=ಅನಿತಱಿಂ

ದಿಗ್ವಾಚಿಯ ಅಣ್ಗೆ : ಮೂಡು+ಇಂ=ಮೂಡಣಿಂ
ಮುಂತು+ಇಂ=ಮುಂತಣಿಂ

೧೨೧

ಪುರುಷಪರಮಾದೊಡತ್ವಂ
ದೊರೆಕೊಳ್ಗುಮದಣ್ ತಗುಳ್ದ ದಿಗ್ವಾಚಕದೊಳ್,
ಪರದಿಗ್ವಾಚಕದೊಳ್ ಸಂ
ಚರಿಸುವುದಾ ತೆಱದೆ ದತ್ವವಿಧಿ ಶಾಬ್ದಿಕರಿಂ

ಪುಲ್ಲಿಂಗವಾಗಬೇಕಾದರೆ ಅಣ್ ಹತ್ತಿದ ದಿಗ್ವಾಚಕದಲ್ಲಿ ಶಾಬ್ದಿಕರಿಂದ ಅಕಾರವುಂಟಾಗುತ್ತದೆ. ಅನ್ಯ ದಿಗ್ವಾಚಕದಲ್ಲಿ ಅದೇ ಪ್ರಕಾರ ದಕಾರವುಂಟಾಗುತ್ತದೆ.

ಅಕಾರಕ್ಕೆ : ಅತ್ತಣ್+ಅ=ಅತ್ತಣಂ

ದಕಾರಕ್ಕೆ : ಕೆಲ+ದ=ಕೆಲದಂ.
ಅತ್ತಣನಿತ್ತಣಂ ಕೆಲದನಲ್ಲಿದನಿಲ್ಲಿದನೀಗಳೆಂಬಿನಂ
ಮುತ್ತಿದನೊಂದೆ ತೇರೊಳಮರೇಂದ್ರಸುತಂ ಕುರುವೃಂದಮೆಲ್ಲಮಂ ॥

೧೨೨

ಏನೇತಱಿನಿಕುಮಾದಿಯೊ
ಳಾ ನೆಗಟ್ದ ಚತುರ್ಥಿಗಕ್ಕುಮೇತರ್ಕೇಕೆಂ
ಬೀ ನುಡಿಯೇತಱ್ ಪ್ರಕೃತಿಯೆ
ತಾನಕ್ಕುಂ ತತ್ತೃತೀಯೆ ಮೊದಲಾದುವಱೊಳ್

(ಏನ್ ಎಂಬುದು) ಪ್ರಥಮಾವಿಭಕ್ತಿಯಲ್ಲಿ ಏನ್, ಏತಱ್ ಎಂದಾಗುತ್ತದೆ. ಚತುರ್ಥಿಗೆ ಏತರ್ಕೆ, ಏಕೆ ಎಂಬ ರೂಪಗಳಾಗುತ್ತವೆ. ತೃತೀಯ ಮೊದಲಾದವುಗಳಲ್ಲಿ ಏತಱ್ ಎಂಬುದೇ ಪ್ರಕೃತಿಯಾಗಿರುತ್ತದೆ.

ಪ್ರಥಮೆಗೆ : ಏನ್, ಏತಱ್.

....ಏ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್....
ಗತಿಯಂ ಪಡೆದೇತಱೌತನೇ ಗತಿಯೆಂದಳ್.

ಚತುರ್ಥಿಗೆ : ಏತರ್ಕೆ, ಏಕೆ.
ಏತರ್ಕೆ ಮುಳಿಸೆಂದು ನೊಂದು ನುಡಿದಂ.
ಏಕೆಂದಱಿಯೆಂ ದಶಥ
ರ್ಮಾಕಳಿತ ಕರಾಗ್ರನಾದನೆನಗಿದು ಚೋದ್ಯ ॥

ತೃತೀಯಾದಿಗೆ : ಏತಱಿಂ, ಏತರ್ಕೆ, ಏತಱತ್ತಣಿಂ, ಏತಱೊಳ್.

ಏತಱ ಮಾತೊ ಭೂತಳದೊಳರ್ಥವಿಹೀನನ ಶೌಚಮಣ್ಮು....

೧೨೩

ಒದವುವುದದಂತ ಪುಲ್ಲಿಂ
ಗದೊಳ್ ಗೆಯೆಂದಾದಿ ಬಿಂದುವಿಂ, ದ್ವಿತ್ವಂ ಮೇ
ಣೊದವುವುದು ನಪುಂಸಕಲಿಂ
ಗದೊಳ್ ಚತುರ್ಥಿಗೆ ಗೆಯಕ್ಕುಮುೞಿದೆಡೆಗೆಲ್ಲಂ

ಚತುರ್ಥಿಗೆ ಅಕಾರಾಂತ ಪುಲ್ಲಿಂಗದಲ್ಲಿ (ಕೆ ಪ್ರತ್ಯಯಕ್ಕೆ ಪ್ರತಿಯಾಗಿ) ಆದಿಬಿಂದುವಿನೊಡನೆ ಗೆ ಪ್ರಾಪ್ತವಾಗುತ್ತದೆ;(ಅಕಾರಾಂತ) ನಪುಂಸಕಲಿಂಗದಲ್ಲಿ ವಿಕಲ್ಪದಿಂದ ದ್ವಿತ್ವ ಒದಗುತ್ತದೆ; ಮಿಕ್ಕೆಡೆಗೆ (=ಅಕಾರಾಂತವಲ್ಲದ ಸ್ವರ, ವ್ಯಂಜನಾಂತ ಪ್ರಕೃತಿಗಳಿಗೆ ಲಿಂಗ ವಚನ ವ್ಯವಸ್ಥೆಯಿಲ್ಲದೆ) ಗೆ ಪ್ರತ್ಯಯವುಂಟಾಗುತ್ತದೆ.

ಪುಲ್ಲಿಂಗಕ್ಕೆ : ಅರಸ+ಂಗೆ=ಅರಸಂಗೆ.

ಅರಸಂಗಮರಸಿಗಂ ಪು
ಟ್ಟಿ ರಾಜಸುತನೆನಿಸಿ ಹಂದೆಯುಂ ಲೋಭಿಯುಂ....

ನಪುಂಸಕಲಿಂಗ ವಿಕಲ್ಪ ದ್ವಿತ್ವಕ್ಕೆ : ಬನ+ಕೆ=ಬನಕೆ, ಬನಕ್ಕೆ.

ಮಿಕ್ಕೆಡೆಯ ಗೆಕಾರಕ್ಕೆ : ಕವಿ+ಗೆ=ಕವಿಗೆ(ಪು.) ಆಕೆ+ಗೆ=ಆಕೆಗೆ(ಸ್ತ್ರೀ), ತನು+ಗೆ =ತನುಗೆ(ನ).

ಕವಿಗೆ ಕೇಡಿಲ್ಲೆಂತುಂ.
ಆಕೆಗೆ ಕಡಿಲೆಂದಾತಂ ನುಡಿದಂ.
ತನುಗೆ ಭೂಷಣಂ ಪೊೞಯಲ್ತೆ.
ನೀನ್+ಗೆ=ನಿನಗೆ (ಏ ವ.)
ಕಿವಿಗಳ್+ಗೆ=ಕಿವಿಗಳ್ಗೆ (ದ್ವಿ.ವ.)
ಕುರುಳ್ಗಳ್+ಗೆ=ಕುರುಳ್ಗಳ್ಗೆ (ಬ.ವ.)
ಆವುದು ಸಂಕಟಂ ನಿನಗೆ ನಿಲ್ಲಜ ನಿಲ್ಲಜ....
ಸೈತಿರು ಕಿವಿಗಳ್ಗೆ ಕರ್ಣಪೂರಮನಿಡುವೆಂ.
ಅವಳ ಕುರುಳ್ಗಳ್ಗೆ ಮಾಲೆದುಂಬಿಗಳೆಣೆಯೇ.

೧೨೪

ಅಮರ್ದಿರದು ತೃತೀಯತ್ವಂ
ಸಮಾಸವದ್ಭಾವಮಾದ ತಾಣದೊಳೆಲ್ಲಂ
ಸಮಸಂದ ಚತುರ್ಥಿಗೆ, ಕಾ
ವ್ಯಮಾರ್ಗದೊಳ್, ಲಕ್ಷ್ಯಮುಂಟು ತಾನೀ ತೆಱದಿಂ

ಸಮಾಸದ ಭಾವವುಳ್ಳ ಸ್ಥಾನಗಳಲ್ಲಿ ಚತುರ್ಥೀ ವಿಭಕ್ತಿಗೆ ತೃತೀಯ ವರ್ಣವುಂಟಾಗುವುದಿಲ್ಲ. ಕಾವ್ಯಮಾರ್ಗದಲ್ಲಿ ಈ ರೀತಿಯ ಪ್ರಯೋಗಗಳುಂಟು.

ಸಮಾಸಸದ್ಭಾವಕ್ಕೆ : ಅದರ್ಕೆ (=ಅದಱ್>ರ್+ಕೆ).

....ಶರೀರಭೋಗಮಂ
ತೊಱೆದನದರ್ಕವಂಗೆ ಕುಡಲಾಗದನಲ್ಪನಿತಂಬಬಿಂಬೆಯಂ.

೧೨೫

ಪಿರಿದುಂ ಚತುರ್ಥಿ ಸಂಸ್ಕೃತ
ಪುರುಷಸ್ತ್ರೀವಿಷಯವಿಹಿತಬಹುವಚನದೊಳೊಂ
ದಿರೆ ಶಿಥಿಲವೃತ್ತಿ ತಾನು
ಚ್ಚರಿಪರ್ಗೆ ಯಥೇಷ್ಟಮೆಂದು ತಿಳಿಗೀ ಕ್ರಮದಿಂ

ವಿಶೇಷವಾಗಿ, ಸಂಸ್ಕೃತದ ಪುಲ್ಲಿಂಗ ಸ್ತ್ರೀಲಿಂಗ ಬಹುವಚನಗಳಲ್ಲಿ ಚತುರ್ಥೀ ಪ್ರತ್ಯಯ ಸೇರಿರಲು, ಶಿಥಿಲವೃತ್ತಿ ಉಚ್ಚರಿಸುವವರ ಇಷ್ಟವನ್ನವಲಂಬಿಸಿರುತ್ತದೆಯೆಂದು ತಿಳಿಯಬೇಕು.

ವಿಕಲ್ಪ ಶಿಥಿಲಕ್ಕೆ : ಬುಧರ್ಗೆ-ಬುಧರ್ಗ್ಗೆ, ಕಾಂತೆಯರ್ಗೆ-ಕಾಂತೆಯರ್ಗ್ಗೆ.

೧೨೬

ಅತ್ತಣಿನೆಂದು ನಿಮಿರ್ಚುವ
ರತ್ತೆಂದಾಗಿರ್ದ ಪಂಚಮಿಯನಲ್ಲಿ ಕೆಲರ್
ಪತ್ತಿಸುವರ್ ಮೂದೆಱನಂ
ಪೆತ್ತ ತೃತೀಯೆಯನೆಕಾರಮಂ ಪರಿಹರಿಪರ್

ಅತ್ ಎಂಬ ಪಂಚಮೀಪ್ರತ್ಯಯವನ್ನು ಅತ್ತಣಿಂ ಎಂದು ಬೆಳೆಸುತ್ತಾರೆ. ಅಲ್ಲಿ (ಅತ್ತಣ್ ಎಂಬುದಕ್ಕೆ) ಕೆಲವರು ತೃತೀಯೆಯ ಮೂರೂ ಪ್ರತ್ಯಯ (ಇಂ, ಇಂದಂ, ಇಂದೆ)ಗಳನ್ನು ಹಚ್ಚುತ್ತಾರೆ; ಆದರೆ (ಈ ಮೂರಕ್ಕೂ ಆದೇಶವಾಗಿ ಬರುವ) ಎಕಾರವನ್ನು ಹಚ್ಚುವುದಿಲ್ಲ.

ಪಂಚಮಿಗೆ : ಅತ್>ಅತ್ತಣ್+ಇಂ=ಅತ್ತಣಿಂ.

...ಆಳ್ದನ ನಂಟರತ್ತಣಿಂ
ದವದಳಮಾಯ್ತು ಪೋಯ್ತು ರವಣಂ....

ಪಂಚಮಿಯ ಮೇಲಿನ ತೃತೀಯೆಗೆ : ಕೆಱೆಯತ್ತಣಿಂ, ಕೆಱೆಯತ್ತಣಿಂದೆ.
ಕೆಱೆಯತ್ತಣೆ ಎನ್ನಬಾರದು.

೧೨೭

ಆದರಿಪರ್ ಕೆಲಬರ್ ದೀ
ರ್ಘಾದೇಶಮನಗ್ರದಲ್ಲಿ ಷಷ್ಠಿಯಕಾರ
ಕ್ಕಾ ದೀರ್ಘಮನಿರದರೆಬರ್
ಖೇದದ ಸಂಭ್ರಮದ ಮೆಯ್ಯೊಳುತ್ಪಾದಿಸುವರ್

ಕೆಲವರು ಷಷ್ಠಿಯ ಅಕಾರಕ್ಕೆ ದೀರ್ಘಾದೇಶವನ್ನು ಹೇಳುತ್ತಾರೆ. ಆ ದೀರ್ಘವನ್ನು ಕೆಲವರು ಖೇದದ ಮತ್ತು ಸಂಭ್ರಮದ ಪ್ರಸಂಗಗಳಲ್ಲಿ ಪ್ರಯೋಗಿಸುತ್ತಾರೆ.

ಷಷ್ಠಿಯ ದೀರ್ಘಾದೇಶಕ್ಕೆ : ಕುವರಂಕರಾಮಂ+ಅ=ಕುವರಂಕರಾಮನ(>ನಾ).
ದೊರೆಯೆನಿಸಿತ್ತು ಭಾರತಕೆ ಗೆಲ್ದ ರಣಂ ಕುವರಂಕರಾಮನಾ

ಖೇದಕ್ಕೆ : ಅಕ್ಕಟ > ಅಕ್ಕಟಾ

....ಅಕ್ಕಟಾ ಮರು

ಳ್ದುಂಬಿಗಳೇಕೆ ಸಂಪಗೆಗಳೊಳ್ ಪಗೆಗೊಂಡುವೊ ನಿರ್ನಿಮಿತ್ತದಿಂ

ಸಂಭ್ರಮಕ್ಕೆ : ಗಡ>ಗಡಾ.

ಬೇಡ ಗಡಾ ಬೇಡ ಗಡಾ ನಿನಗಾತನೊಳ್ ಚಲಂ

೧೨೮

ಅವಿಶೇಷದಿನಾ ದೀರ್ಘ

ವ್ಯವಹೃತಿ ಶಬ್ದಾಂತರಾಳದೊಳ್ ಪಕ್ಷದಿನು

ದ್ಭವಿಕುಂ, ದ್ವಿತೀಯೆಗಂ ಮುಂ

ದವತರಿಸಲೊಡಂ ಸ್ವರಪ್ರಪೂರ್ವಪದಂಗಳ್

ಕೆಲವರ ಅಭಿಮತದಂತೆ, ಶಬ್ದಾಂತರಾಳದಲ್ಲಿ ವಿಶೇಷ ಕಾರಣವಿಲ್ಲದೆ ದೀರ್ಘೀಕರಣವುಂಟಾಗುತ್ತದೆ. ದ್ವಿತೀಯಾ ವಿಭಕ್ತಿಗೂ ಸ್ವರಪೂರ್ವಪದಗಳು ಪರವಾದರೆ (ದೀರ್ಘೀಕರಣವುಂಟಾಗುತ್ತದೆ).

ಶಬ್ದಾಂತರಾಳ ದೀರ್ಘಕ್ಕೆ : ಆರೊಗಿಸಿದಂ-ಆರೋಗಿಸಿದಂ, ಗೆಯಂಗಂ-, ಗೆಯಾಂಗಂ.

ಗೆ[ಯಾಂ]ಗಕ್ಕೆ ತಾನೆ ಸೋಲ್ವನೆಟ್ಟುವೊಜಂಗಂ

ದ್ವಿತೀಯಾ ದೀರ್ಘಕ್ಕೆ : ಬಿಲ್ಲಂ+ಅದಂ=ಬಿಲ್ಲನದಂ>ಬಿಲ್ಲಾನದಂ.

ಎನಿತ್ತೆನಿತ್ತಂಬುಜಪತ್ರನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುವಂ ॥

೧೨೯

ಅಲ್ಲಿಯೊಳೆಂಬಿವು ಮಿಕ್ಕೆಡೆ

ಗೆಲ್ಲಂ ದಿಗ್ವಾಚಿಯಪ್ಪದಂತಕ್ಕಲ್ಮ

ತ್ತಲ್ಲಿಯುದಂತಕ್ಕೆತ್ವಂ

ಬಲ್ಲರ ಮತದಿಂ ವಿಕಲ್ಪವಿಧಿ ಸಪ್ತಮಿಯೊಳ್

ಸಪ್ತಮಿಯಲ್ಲಿ ದಿಗ್ವಾಚಿಯಾದ ಅಕಾರಾಂತಕ್ಕೆ ಅಲ್, ಉಕಾರಾಂತಕ್ಕೆ ಎತ್ವ-ಇವು ವಿಕಲ್ಪದಿಂದ ಪ್ರಯೋಗವಾಗುತ್ತವೆ. ಮಿಕ್ಕೆಡೆಗೆ(=ದಿಗ್ವಾಚಿಗಳಲ್ಲದೆಡೆಗೆ) ಅಲ್ಲಿ, ಒಳ್ (ಪ್ರಯೋಗವಾಗುತ್ತವೆ).

ಅಕಾರಾಂತದ ಅಲ್ಗೆ (ವಿಕಲ್ಪ) : ಪಡುವ- ಪಡುವಲ್.

ಪಡುವ ಮೂಡ ತೆಂಕ ಬಡಗ ಪೊಡವಿಪತಿಗಳಿಲ್ಲೆನಲ್
ನಡೆದು ಗೆಲ್ದು....
ಮೂಡಲಿರ್ದ ಪದದೊಳ್ ತಾರಾಮನೋವಲ್ಲಭಂ....

ಉಕಾರಾಂತದ ಎತ್ವಕ್ಕೆ(ವಿಕಲ್ಪ): ಪೊಜಗು- ಪೊಜಗೆ.

ಕವಿ ಪೊಜಗಿರೆ ಕೀಟಿಕೊಳಗಿರ
ಲವಿರಳಮಾ ತುರಗಮುಖಮೊ ನೃಪಮಂದಿರಮೋ.

ಅಲ್ಲಿ, ಒಳ್ ಎಂಬಿವಕ್ಕೆ : ಸಭೆಯಲ್ಲಿ, ಸಭೆಯೊಳ್.

ಸಭೆಯೊಳ್ ನುಡಿದಂ ನವಮೇಘನಾದದಿಂ

೧೩೦

ಸಮನಿಪುದು ಮುಂದು ಪಿಂದೆಂ
ಬಿವಱಂತ್ಯಕ್ಕಱಿ ವಿಕಲ್ಪದಿಂದೆ ತುಕಾರಂ
ವ್ಯವಹರಿಪುದೆತ್ವ ವಿಧಿ ಬ
ಲ್ಲವರಿಂ ಮೇಲೆಂದು ಪೇೞ್ವ ಬೀೞಿಕ್ಕರಕಂ

ಮುಂದು ಪಿಂದು ಎಂಬಿವುಗಳ ಅಂತ್ಯಕ್ಕೆ ವಿಕಲ್ಪದಿಂದ ತುಕಾರವುಂಟಾಗುತ್ತದೆ. (ಅವುಗಳ ಕೊನೆಗೆ) ಎಕಾರ(ವೂ) ಬರುತ್ತದೆ. ಮೇಲ್ ಎಂಬಲ್ಲಿಯ ವ್ಯಂಜನಾಕ್ಷರಕ್ಕೂ ವಿದ್ವಾಂಸರಿಂದ (ಎಕಾರ ವ್ಯವಹರಿಸಲ್ಪಡುತ್ತದೆ).

ತುಕಾರಕ್ಕೆ : ಮುಂದು-ಮುಂತು, ಪಿಂದು-ಪಿಂತು.
ಎಕಾರಕ್ಕೆ : ಮುಂದೆ-ಮುಂತೆ, ಪಿಂದೆ-ಪಿಂತೆ
ಮೇಲ್ ಎಂಬುದಕ್ಕೆ : [ಮೇಲ್+ಎ=ಮೇಲೆ].

....ಆನೆಯ ಮೇಲೆಯುಮಾಳ ಮೇಲೆಯುಂ
ಕುದುರೆಯ ಮೇಲೆಯುಂ ಪರಿದುದೊಂದೆ ಗಜಂ ಭುವನೈಕರಾಮನಾ

೧೩೧

ಮೊದಲೆರಡು ವಿಭಕ್ತಿಯೊಳಂ
ಪೊದಱ್ಗುಮಲ್ ಕಾಲವಾಚಿಯಂದಿಂದುಂದೆಂ
ಬುದುಮೇಕರೂಪಮಾಗಿ
ರ್ಪುದು ಮೊದಲೆರಡುಂ ವಿಭಕ್ತಿಗಂ ಸಪ್ತಮಿಗಂ

(ಸಪ್ತಮಿಯ) ಅಲ್ ಎಂಬುದು ಪ್ರಥಮೆಗೂ ದ್ವಿತೀಯೆಗೂ ಹತ್ತುತ್ತದೆ. ಕಾಲವಾಚಿಗಳಾದ ಅಂದು, ಇಂದು, ಉಂದು ಎಂಬ ಶಬ್ದಗಳು ಪ್ರಥಮೆ, ದ್ವಿತೀಯೆ, ಸಪ್ತಮಿಗಳಿಗೆ ಏಕರೂಪವಾಗಿರುತ್ತವೆ.

ಪ್ರಥಮೆ ದ್ವಿತೀಯೆಗಳ ಅಲ್‌ಗೆ : ಮೂಡಲ್, ಮೂಡಲ್, ಮೂಡಣಿಂ, ಮೂಡಣ್ಗೆ, ಮೂಡಣತ್ತಣಿಂ, ಮೂಡಣ, ಮೂಡಲ್
ಅಂದು ಮೊದಲಾದವುಗಳಿಗೆ : ಅಂದು, ಅಂದು, ಅಂದಿಂ, ಅಂದಿಂಗೆ, ಅಂದಿನತ್ತಣಿಂ, ಅಂದಿನ, ಅಂದು.

ಇದೇ ರೀತಿ ಇಂದು ಉಂದುಗಳಿಗೆ ವಿಭಕ್ತಿ ಪ್ರತ್ಯಯ ಅಂಟಿಸುವುದು.

೧೩೨

ಪುದಿಗುಮದಂತಕೆ ಪುಲ್ಲಿಂ
ಗದವೋಲ್ ಕಿಱಿದೆಡೆಗಳಲ್ಲಿಯೆಲ್ಲಂ ಸ್ತ್ರೀಲಿಂ
ಗದೊಳಂ ಪುಂನಪ್ಸಿನೊಳಂ
ಪುದಿಗುಂ, ತಿಳಿ ಬಹುಳಮಾದುದಾಹರಣೆಗಳಿಂ

ಕೆಲವು ಸಲ (ಅಕಾರಾಂತ) ಪುಲ್ಲಿಂಗದಂತೆ ಅಕಾರಾಂತ ಸ್ತ್ರೀಲಿಂಗಕ್ಕೂ ಪುಂನಪುಂಸಕ ಲಿಂಗಕ್ಕೂ* ಎಲ್ಲ (ವಿಭಕ್ತಿಪೂರ್ವ ಆಗಮಗಳು) ಹತ್ತುತ್ತವೆ. (ಇವುಗಳನ್ನು) ಉದಾಹರಣೆಗಳಿಂದ ಅರಿಯಬೇಕು.

---

* ವಿಚಾರ : ಈ ಸಂದರ್ಭದಲ್ಲಿ ಪುಂನಪುಂಸಕವೆಂದರೆ ಗಂಡಾದ ನಪುಂಸಕ.

ಅಕಾರಾಂತ ಸ್ತ್ರೀಲಿಂಗಕ್ಕೆ :

ಅಕ್ಕಂ, ಅಕ್ಕನಂ, ಅಕ್ಕನಿಂ, ಅಕ್ಕಂಗೆ, ಅಕ್ಕನತ್ತಣಿಂ, ಅಕ್ಕನ, ಅಕ್ಕನೊಳ್,

ಅಕಾರಾಂತ ಪುಂನಪುಂಸಕಲಿಂಗಕ್ಕೆ :

ಹರಿಣಂ,ಹರಿಣನಂ, ಹರಿಣನಿಂ, ಹರಿಣಂಗೆ, ಹರಿಣನತ್ತಣಿಂ, ಹರಿಣನ, ಹರಿಣನೊಳ್.

೧೩೩

ಅಮುಮೆಂದುಸಿರ್ವ ಸಮುಚ್ಚಯ
ದುಮುವಿಧಿ ನಿರುತಂ ದ್ವಿತೀಯೆಯೊಳ್ ಪೊಕ್ಕಿರ್ಕುಂ,
ಸಮನಿಸವೆಂದುಂ ಷಷ್ಠಿಯೊ
ಳಮುಮವು ಮಿಕ್ಕಿನ ವಿಭಕ್ತಿಗಳ ಮೇಲಿರ್ಕುಂ

ಅಂ, ಉಂ, ಎಂಬ ಸಮುಚ್ಚಯವಾಚಕ ಪ್ರತ್ಯಯಗಳಲ್ಲಿ ಉಂ ಎಂಬುದು ದ್ವಿತೀಯಾ ವಿಭಕ್ತಿಯ ಒಳಗೆ (=ಪ್ರಕೃತಿ ಪ್ರತ್ಯಯಗಳ ನಡುವೆ) ಹತ್ತುತ್ತದೆ; ಅಂ ಉಂ ಎಂಬಿವು ಷಷ್ಠಿಯಲ್ಲಿ ಎಂದಿಗೂ ಹತ್ತುವುದಿಲ್ಲ, (ಆದರೆ) ಅವು ಮಿಕ್ಕ ವಿಭಕ್ತಿಗಳಲ್ಲಿ ಮುಂದೆ ಹತ್ತುತ್ತವೆ.

ದ್ವಿತೀಯೆಯ ಒಳಗಿನ ಉಮುವಿಗೆ : ಪುಲಿ+ಉಂ+ಅಂ=ಪುಲಿಯುಮಂ.

ಒಂದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕವಿಲೆಯುಮಂ

ಮಿಕ್ಕ ವಿಭಕ್ತಿಗಳ ಮುಂದಿನ ಸಮುಚ್ಚಯಕ್ಕೆ :

ನರ+ಉಂ=ನರನುಂ.
ನರನುಂ ನರನಂದನನುಂ
ಗುರುವುಂ ಗುರುಸುತನುಂ....
ಕಾಲಿಂದೆ+ಉಂ=ಕಾಲಿಂದೆಯುಂ.
ಕಾಲಿಂದೆಯುಂ ಕೈಯಿಂದೆಯುಂ ಘಟ್ಟಿಸಿದಂ
ದ್ರೋಣಂಗೆ+ಅಂ=ದ್ರೋಣಂಗಂ, ಅವಂಗೆ+ಉಂ=ಅವಂಗೆಯುಂ.
ದ್ರೋಣಂಗಂ ನಿನಗಂ ಬಿಲ್
ಜಾಣಿಕೆಯದು ಸಕ್ಕಸಮನೆ ....
....ವಂ
ಚಿಸುವುದವಂಗೆಯುಂ ನಿನಗೆಯುಂ ಸಹಜಂ ಬಿಡಿಸಲ್ಕೆ ಬರ್ಕುಮೇ
ಜಾದಿಯತ್ತಣಿಂದೆ+ಉಂ=ಜಾದಿಯತ್ತಣಿಂದೆಯುಂ.
ಜಾದಿಯತ್ತಣಿಂದೆಯುಂ ಕೇದಗೆಯತ್ತಣಿಂದೆಯುಂ ಕಂಪು ಬಂದುದು.
ಚಲದೊಳ್+ಅಂ=ಚಲದೊಳಂ. ಅಲ್ಲಿ+ಉಂ=ಅಲ್ಲಿಯುಂ.
ಚಲದೊಳಮಾಚಾರದೊಳಂ
ಕಲಿತನದೊಳಂ....
ಅಲ್ಲಿಯುಮಿಲ್ಲಿಯುಮೆಲ್ಲಿಯುಂ ನರಂ

೧೩೪

ಎಲ್ಲಿಯುಮಾಮಂತ್ರಣದೊಳ್
ಬಲ್ಲರ್ ಪ್ರಥಮೈಕವಚನಮಂ ಲೋಪಿಸುವರ್,

ನಿಲ್ಲದೆ ವಿಕಲ್ಪಮುಖದಿಂ
ಸೊಲ್ಲಿಸುವರ್ ಹ್ರಸ್ವದೀರ್ಘಕಾಕುಗಳೆರಡಂ

ಬಲ್ಲವರು ಸಂಬೋಧನೆಯಲ್ಲಿ (ಸ್ವರಾಂತಗಳಿಗೆ ಹತ್ತಿದ) ಪ್ರಥಮಾ ಏಕವಚನ ಪ್ರತ್ಯಯವನ್ನು ಲೋಪಿಸುತ್ತಾರೆ; ಹ್ರಸ್ವ ದೀರ್ಘ ಎಂಬೆರಡು ಕಾಕುಗಳನ್ನೂ ವಿಕಲ್ಪದಿಂದ ಹೇಳುತ್ತಾರೆ.

ಪ್ರಥಮಾ ಏಕವಚನ ಪ್ರತ್ಯಯ ಲೋಪಕ್ಕೆ : ಕುಸುಮಾಯುಧಂ>ಕುಸುಮಾಯುಧ.
ಬೆಸೆಯದಿರ್ ಕುಸುಮಾಯುಧ ನಿನ್ನ ಬಲ್ಬು ಪೆಣ್ಮಕ್ಕಳೊಳಲ್ಲದಿಲ್ಲ

ಹ್ರಸ್ವ ಕಾಕುವಿಗೆ : [ಊರ್ವಶಿ]
ಎಲೆ ಎಲೆ ರಂಭೆಯೂರ್ವಶಿ ತಿಲೋತ್ತಮೆ ಮೇನಕೆ ಮಂಜುಘೋಷೆ

ದೀರ್ಘ ಕಾಕುವಿಗೆ : ಜಿನೇಂದ್ರ>ಜಿನೇಂದ್ರಾ.
ಸುಖಸಂಪದಮಂ ಮಾಳ್ಪುದೆಮಗೆ ಪರಮಜಿನೇಂದ್ರಾ

೧೩೫

ಅವಿಶೇಷದೆ ಲಿಂಗಾಂತ್ಯ
ಕ್ಕೆವರ್ಣಮೊದವುವುದೆವರ್ಣಮೊದವಿದದಂತ
ಕ್ಕವತರಿಕುಂ ಬಿಂದುವಬಿಂ
ದುವಾಗಿ ಬಹುವಚನದರ್ವನಡರ್ವುದೆವರ್ಣಂ

(ಸಂಬೋಧನೆಯಲ್ಲಿ) ಸಾಮಾನ್ಯವಾಗಿ ಲಿಂಗದ ಅಂತ್ಯಕ್ಕೆ ಎವರ್ಣ ಒದಗುತ್ತದೆ. ಎವರ್ಣ ಒದಗಿದ ಅಕಾರಾಂತಕ್ಕೆ ಬಿಂದು ಬರುತ್ತದೆ. ಬಿಂದುವಿಲ್ಲದೆ ಎವರ್ಣವು ಬಹುವಚನದ ಆರ್ ಪ್ರತ್ಯಯಕ್ಕೆ ಹತ್ತುತ್ತದೆ.

ಎವರ್ಣಕ್ಕೆ : ನೀಳಕುಂತಳೆ+ಎ= ನೀಳಕುಂತಳೆಯೆ.
ಅಳಿಕುಳನೀಳಕುಂತಳೆಯೆ ಕೋಕಿಲನಾದೆಯೆ ಹಂಸಯಾನೆಯೇ
ಮಾವು+ಎ=ಮಾವೇ.
ಎಳಮಾವೇ ತಳಿರುಯ್ಯಲೇ

ಬಿಂದುಯುಕ್ತ ಎವರ್ಣಕ್ಕೆ : ಚಂದ್ರ+ಂ+ಏ= ಚಂದ್ರನೇ.
ಚಂದ್ರನೇ ಕೊಳನೇ ನಂದನಮೇ ಲತಾಭವನಮೇ.

ಅರುಪಿನ ಮೇಲಿನ ಎವರ್ಣಕ್ಕೆ :
ಭಟ್ಟ+ಅರ್+ಎ =ಭಟ್ಟರೆ, [ದೇವ+ಆರ್+ಏ=ದೇವರೇ.]
ಭಟ್ಟರೆ ಬಂದಿರೇ ಮನೆಗೆ....
ದೇವರೇ ಕರುಣಿಸಿದಿರೆ ....

೧೩೬

ಪಿರಿದುಂ ದ್ವಿತ್ವಬಹುತ್ವಂ
ಬರೆ ಗಳ್ ಕಳ್ಗುಂಟಿರಾಗಮುಂ, ಬಹುವಚನ
ಸ್ಫುರಿತಕ್ರಿಯೆಗೇಕತೆ, ನಿಜ
ಪರಿಣತೆ ಮೇಣ್ ಧಾತುಗೇಕವಚನದೊಳತ್ವಂ

(ಸಂಬೋಧನೆಯಲ್ಲಿ) ದ್ವಿವಚನ ಬಹುವಚನಗಳ ಗಳ್ ಕಳ್-ಇವುಗಳಿಗೆ ವಿಶೇಷವಾಗಿ ಇರಾಗಮವಾಗುತ್ತದೆ. (ಸಂಬೋಧನೆ ಏಕವಚನದಲ್ಲಿದ್ದರೆ) ಬಹುವಚನ ಕ್ರಿಯಾಪದಕ್ಕೆ ಏಕವಚನಾರ್ಥಾವಿರುತ್ತದೆ. ಧಾತು ಏಕವಚನದಲ್ಲಿ ಇದ್ದಂತಿರುತ್ತದೆ; (ಕೆಲವು ಸಲ) ಅಕಾರಾಂತವಾಗುತ್ತದೆ.

ಇರಾಗಮಕ್ಕೆ : ನಂದನಂಗಳ್+ ಇರ = ನಂದನಂಗಳಿರ,ಬುಧರ್ಕಳ್+ಇರ=ಬುಧರ್ಕಳಿರ.
ಸುರತರು ನಂದನಂಗಳಿರ....
ಬುಧರ್ಕಳಿರ ನಿಮ್ಮ ಗುಣಸ್ತುತಿ ಕಾವ್ಯಮಾರ್ಗದೊಳ್

ಬಹುವಚನ ಕ್ರಿಯಾಪದದ ಏಕವಚನಾರ್ಥಕ್ಕೆ :
ಅಱಿಯಿರೆ ನೀನುಮಾಮುಮೊಡನೋದಿದೆವೆಂಬುದನಣ್ಣ....*

ನಿಜಧಾತುವಿಗೆ : ಪಾಡು
ಪಾಡೆಲೆ ತುಂಬಿ ಬಗ್ಗಿಸೆಲೆ ಕೋಗಿಲೆ ತೀಡೆಲೆ ಗಂಧವಾಹ.

ಧಾತುವಿನ ಅತ್ವಕ್ಕೆ : ಬರ್>ಬಾರ, ನೋಡು>ನೋಡ. ಆರಯ್>ಆರಯ.
ಕೇಳು>ಕೇಳ, ಕುಡು>ಕುಡ.
ಬಾರ ಮರಾಳಿಕಾಗಮನೆ ನೋಡ ಚಕೋರವಿಲೋಲನೇತ್ರೆ ನಿಂ
ದಾರಯ ಪೀವರಸ್ತನನಿತಂಬಭರಾಲಸೆ ಕೇಳ ಕಾಮಕಾ
ಳೋರಗಕೇಶಪಾಶೆ ಎನಗುತ್ತರಮಂ ಕುಡ ಚಾರುವೇಣುವೀ
ಣಾರವೆ ನೀನದಾರ ಮಗಳೆಲ್ಲಿಗೆ ಪೋದಪೆ ಯಾವುದಾಶ್ರಯಂ ।

ಕಾರಕ :

೧೩೭

ಅಭಿರೂಪದಿನಾ ಪ್ರಥಮಾ
ವಿಭಕ್ತಿ ಲಿಂಗಾರ್ಥವಚನಸಂಬೋಧನದೊಳ್
ಪ್ರಭವಿಪ್ಪುದಾ ದ್ವಿತೀಯಾ
ವಿಭಕ್ತಿ ಕರ್ಮದೊಳನಾಕುಲಂ ವರ್ತಿಸುಗುಂ

ಲಿಂಗ, ಅರ್ಥ, ವಚನ, ಸಂಬೋಧನೆಗಳಲ್ಲಿ ಪ್ರಥಮಾವಿಭಕ್ತಿ ವ್ಯಕ್ತವಾಗಿ ತೋರುತ್ತದೆ. ಕರ್ಮದಲ್ಲಿ ದ್ವಿತೀಯಾ ವಿಭಕ್ತಿ ಸಂದೇಹವಿಲ್ಲದೆ ವರ್ತಿಸುತ್ತದೆ.

ಲಿಂಗಕ್ಕೆ : ಇಂದ್ರಂ, ಕಾಮಿನಿ, ಆನೆ
ಅರ್ಥಕ್ಕೆ : ನಿಡಿಯಂ, ಗುಜ್ಜಂ, ಕೆಂಚಂ
ವಚನಕ್ಕೆ : ಒಂದು, ಎರಡು, ಮೂಱು
ಸಂಭೋಧನೆಗೆ : ಎಲೆ ದೇವ ರಕ್ಷಿಸು
ದ್ವಿತೀಯಾ ವಿಭಕ್ತಿಯ ಕರ್ಮಕ್ಕೆ : ತ್ರಿತಯ+ಅಂ=ತ್ರಿತಯಮಂ.
ಪಡೆದಂ ಪದ್ಮಜನೀ ಜಗತ್ರಿತಯಮಂ

---

* ವಿಚಾರ : ಅಱಿಯಿರೆ-ಎಂಬುದು ಬಹುವಚನ ಕ್ರಿಯಾಪದವಾಗಿದ್ದರೂ ಇದರ ಅರ್ಥಏಕವಚನವೇ.

೧೩೮

ಪ್ರವಿದಿತ ತತ್ಕರ್ಮ೦ ಕ
ರ್ತೃವಿನೀಪ್ಸಿತತಮಪದಾರ್ಥಮದು ನಾಲ್ಕುಂ ಭೇ
ದವನಾಳ್ದಿರ್ಕುಂ, ನಿರ್ವ
ರ್ತ್ಯ ವಿಕಾರ್ಯ೦ ಪ್ರಾಪ್ಯ ವೈಷಯಿಕಮೆಂದೆತ್ತಂ

ಆ ಕರ್ಮವೆಂಬುದು ಕರ್ತೃವಿನ ಇಷ್ಟವಸ್ತು. ಅದು ನಿರ್ವರ್ತ್ಯ, ವಿಕಾರ್ಯ, ಪ್ರಾಪ್ಯ, ವೈಷಯಿಕ ಎಂದು ನಾಲ್ಕು ತೆರನಾಗಿದೆ.

ಕರ್ಮಕ್ಕೆ	:	ತುಡುಗೆಯಂ ತೊಟ್ಟಂ
ನಿರ್ವರ್ತ್ಯಕ್ಕೆ	:	ಮನೆಯಂ ಮಾಡಿದಂ
ವಿಕಾರ್ಯಕ್ಕೆ	:	ಕಾಯಂ ಪೋಟ್ಟಿಂ
ಪ್ರಾಪ್ಯಕ್ಕೆ	:	ಮನೆಯಂ ಸಾರ್ದಂ
ವೈಷಯಿಕಕ್ಕೆ	:	ನೇಸಱಂ ನೋಡಿದಂ, ಗೀತಮಂ ಕೇಳ್ದಂ, ನಲ್ಲಳನಪ್ಪಿದಂ, ರಸಮಂ ಪೀರ್ದಂ, ಪೂವಂ ಮೂಸಿದಂ.

೧೩೯

ತೊಡರ್ದಿಪ್ಪಾನಿಷ್ಟದೊಳೆಡೆ
ಯುಡುಗದೆ ಕಾಲಾಧ್ವದೊಳ್ ದ್ವಿತೀಯೆಯೆ ಮತ್ತಂ
ನುಡಿಗುಂ ತೃತೀಯೆ ಪೇಟಲ್
ಪಡೆಗುಂ ಸಲೆ ಕರ್ತೃಕರಣಹೇತುಸ್ಥಿತಿಯೊಳ್

ಇಷ್ಟ, ಅನಿಷ್ಟ, ಕಾಲ, ಅಧ್ವಗಳಲ್ಲಿ ಮತ್ತೆ ದ್ವಿತೀಯೆಯೇ ವ್ಯವಹರಿಸುತ್ತದೆ. ಕರ್ತೃ, ಕರಣ, ಹೇತುಗಳಲ್ಲಿ ತೃತೀಯೇ ಹೇಳಲ್ಪಡುತ್ತದೆ.

ಇಷ್ಟಕ್ಕೆ	:	ನೇವಳಮಂ ತೆಗೆದಂ
ಅನಿಷ್ಟಕ್ಕೆ	:	ಪಾವಂ ದಾಂಟಿದಂ
ಕಾಲಕ್ಕೆ	:	ಅಱುದಿಂಗಳಂ ತಳ್ವಿದಂ
ಅಧ್ವಕ್ಕೆ	:	ಅರೆಗಾವುದಮಂ ಪರಿದಂ
ಕರ್ತೃವಿಗೆ	:	ಪದಕಮಕ್ಕಸಾಲೆಯಿಂ ಮಾಡೆಪಟ್ಟುದು
ಕರಣಕ್ಕೆ	:	ಕೊಡಲಿಯಿಂ ಕಡಿದಂ
ಹೇತುವಿಗೆ	:	ಓಲಗದಿಂ ಪಡೆದಂ

೧೪೦-೧೪೧

ನುತ ಸಂಪ್ರದಾನ ರೂಢಂ
ಚತುರ್ಥಿಯದು ರುಚಿಯೊಳೀರ್ಷ್ಯೆಯೊಳ್ ಮಚ್ಚರದೊಳ್
ಹಿತದೊಳ್ ಸಂಭೀತಿಯೊಳು
ನ್ನತಿಯೊಳ್ ಸ್ವಸ್ತ್ಯಾದಿಯೊಳ್ ಸ್ವಭಾವಸ್ಥಿತಿಯೊಳ್

ಪ್ರವಿದಿತ ಹೇತುವಿನೊಳ್ ಸಂ
ದವನತಿಯೊಳ್ ಪ್ರಾಣ್ಯನಾದರಸ್ಮರಣದೊಳು
ದ್ಭವಿಸಿದನೀಪ್ಸಿತದೊಳ್ ಸದೃ
ಶವೃತ್ತಿಯೊಳ್ ಪ್ರತಿನಿಧಾನದೊಳಮಿಷ್ಟದೊಳಂ

ಸಂಪ್ರದಾನದಲ್ಲಿ ಚತುರ್ಥಿ ಬಳಕೆಯಾಗುತ್ತದೆ. ಅದು ರುಚಿ, ಈರ್ಷ್ಯೆ, ಮತ್ಸರ, ಹಿತ, ಭೀತಿ, ಉನ್ನತಿ, ಸ್ವಸ್ತ್ಯಾದಿ, ಸ್ವಭಾವ, ಕಾರಣ, ನಮಸ್ಕಾರ, ಅನಾದರ, ಅನಿಷ್ಟ, ಸಾದೃಶ್ಯ, ಪ್ರತಿನಿಧಿ, ಇಷ್ಟ-ಇವುಗಳಲ್ಲಿ ವ್ಯವಹರಿಸುತ್ತದೆ.

ಸಂಪ್ರದಾನಕ್ಕೆ	:	ಬ್ರಾಹ್ಮಣಂಗೆ ಗೋವಂ ಕೊಟ್ಟಂ
ರುಚಿಗೆ	:	ಕೂಸಿಂಗೆ ಲಡ್ಡುಗೆಯಟ್ಟಿ
ಈರ್ಷ್ಯೆಗೆ	:	ಕವಿಗೆ ಕವಿ ಮುನಿವಂ
ಮತ್ಸರಕ್ಕೆ	:	ಸವತಿಗೆ ಸವತಿ ಪುರುಡಿಪಳ್
ಹಿತಕ್ಕೆ	:	ಪಶುವಿಂಗೆ ಹಿತಂ ತೃಣಂ
ಭೀತಿಗೆ	:	ಪಾಪಕ್ಕಂಜುಗುಂ ತಕ್ಕಂ
ಉನ್ನತಿಗೆ	:	ಲೋಕಕ್ಕಧಿಕನೀತಂ
ಸ್ವಸ್ತ್ಯಾದಿಗೆ	:	ಸಮನಿಸುಗೆ ಜಗಕ್ಕೆಲ್ಲಿಯುಮಾಯುಂ ಪ್ರಮೋದಮುಂ....
ಸ್ವಭಾವಕ್ಕೆ	:	ಕಪಿಗೆ ಚಪಲತೆ
ಕಾರಣಕ್ಕೆ	:	ಮಟೆಗೆ ಮುಗಿಲ್
ನಮಸ್ಕಾರಕ್ಕೆ	:	ದೇವರ್ಗೆ ಪೊಡಮಟ್ಟಂ
ಅನಾದರಕ್ಕೆ	:	ಮಾನಸರಂ ಪುಲ್ಗೆ ಕಷ್ಟಮಾಗಿ ನೆನೆವಂ
ಅನಿಷ್ಟಕ್ಕೆ	:	ಆತಂಗೆ ವಿಷವಮನಿಕ್ಕಿದಂ
ಸಾದೃಶ್ಯಕ್ಕೆ	:	ಐರಾವತಕ್ಕೆ ಸುಪ್ರತೀಕಮೋರಗೆ
ಪ್ರತಿನಿಧಿಗೆ	:	ಜೇನುತುಪ್ಪಕ್ಕೆ ಸಕ್ಕರೆ ಸಲ್ಬುದು
ಇಷ್ಟಕ್ಕೆ	:	ಭಕ್ತಂಗೆ ವರಮನಿತ್ತಂ

೧೪೨

ಆದಂ ಪಂಚಮಿಯಪ್ಪುದ
ಪಾದಾನಸ್ಥಲದೊಳದೆ ದಲೊದವುಗುಮಾತಂ
ಕಾದಾನೇಷ್ಟಾನಿಷ್ಟಾ
ಸಾದಿತಹೇತುವಿನೊಳುದಯದೊಳ್ ಗೌರವದೊಳ್

ಅಪಾದಾನದಲ್ಲಿ ಪಂಚಮಿ ಉಂಟಾಗುತ್ತದೆ. ಅದು ಭಯ, ಸ್ವೀಕಾರ, ಇಷ್ಟ, ಅನಿಷ್ಟ, ಹೇತು, ಉದಯ, ಗುರುತ್ವ - ಇವುಗಳಲ್ಲಿ ವರ್ತಿಸುತ್ತದೆ.

ಅಪಾದಾನಕ್ಕೆ	:	ಮರದತ್ತಣಿಂ ಪಣ್ಣುದಿರ್ದುದು
ಭಯಕ್ಕೆ	:	ಅರಸನತ್ತಣಿಂ ದಾಟಿ ಬಂದುದು
ಸ್ವೀಕಾರಕ್ಕೆ	:	ಸ್ವಾಮಿಯತ್ತಣಿಂ ನಿರ್ವಾಹಮಾದುದು
ಇಷ್ಟಕ್ಕೆ	:	ರಂಭೆಯತ್ತಣಿಂ ಸುಖಂ ಪ್ರಾಪ್ತಿಸಿದುದು
ಅನಿಷ್ಟಕ್ಕೆ	:	ಪಗೆಯತ್ತಣಿಂ ಬಂಧನಂ ಬಂದುದು

ಹೇತುವಿಗೆ	:	ಉದ್ಯೋಗದತ್ತಣಿಂ ಸಿರಿ ಬಂದುದು
ಉದಯಕ್ಕೆ	:	ಸದ್ವಂಶದತ್ತಣಿಂ ಪುಟ್ಟಿದಂ
ಗುರುತ್ವಕ್ಕೆ	:	ಕೃಷ್ಣನತ್ತಣಿಂ ಪಿರಿಯಂ ಬಲಭದ್ರಂ

೧೪೩

ಪತಿಕುಲಜಾತ್ಯವಯವವಿ
ಶ್ರುತಲಕ್ಷಣಸನ್ನಿಧಾನಸಂಸ್ಪರ್ಶಸಮಾ
ಗತಸಂಬಂಧದೊಳಂ ತ
ದ್ಗತಸಂಬಂಧದೊಳಮುಂಟು ಷಷ್ಠಿಗೆ ಯೋಗಂ

ಸ್ವಾಮಿ, ಕುಲ, ಜಾತಿ, ಅವಯವ, ಲಕ್ಷಣ, ಸನ್ನಿಧಾನ, ಸಂಸ್ಪರ್ಶ, ಸಂಬಂಧ - ಇವುಗಳ ಸಂಬಂಧಗಳಲ್ಲಿ ಷಷ್ಠಿ ಬರುತ್ತದೆ.

ಸ್ವಾಮಿ ಸಂಬಂಧಕ್ಕೆ	:	ಊರೊಡೆಯಂ
ಕುಲ ಸಂಬಂಧಕ್ಕೆ	:	ಎಮ್ಮಳಿಯಂ
ಜಾತಿ ಸಂಬಂಧಕ್ಕೆ	:	ಆನೆಯ ಘಟೆ
ಅವಯವ ಸಂಬಂಧಕ್ಕೆ	:	ಮರದ ಕೊಂಬು
ಲಕ್ಷಣ ಸಂಬಂಧಕ್ಕೆ	:	ಟೊಪ್ಪಿಗೆಯ ಮಾನಸಂ
ಸನ್ನಿಧಾನ ಸಂಬಂಧಕ್ಕೆ	:	ಕೆಱೆಯ ಕೋಡಿ
ಸಂಸ್ಪರ್ಶ ಸಂಬಂಧಕ್ಕೆ	:	ತೋಳ ಬಂದಿ
ಸಂಬಂಧ ಸಂಬಂಧಕ್ಕೆ	:	ನೊಸಲಕಣ್ಣ ದೇವಂ

೧೪೪

ಧೀರರಿನಾವುದು ತಾನಾ
ಧಾರಮದಧಿಕರಣಮಲ್ಲಿ ಸಪ್ತಮಿ ತಿಳಿ ನಿ
ರ್ಧಾರಣವಿಷಯವ್ಯಾಪಕ
ಸಾರವ್ಯವಹಾರಕಾಲಸತ್ಯರ್ಥಗತಂ

ಆಧಾರವಾಗಿರುವುದೆ ಅಧಿಕರಣ. ಅಲ್ಲಿ ಸಪ್ತಮಿಯುಂಟು. ಅದು ನಿರ್ಧಾರಣ (ಗುಣ, ಕ್ರಿಯೆ), ವಿಷಯ, ವ್ಯಾಪಕ. ವ್ಯವಹಾರ, ಕಾಲ, ಸತ್ಯರ್ಥಗಳನ್ನೊಳಗೊಂಡಿರುತ್ತದೆ,

ಅಧಿಕರಣಕ್ಕೆ	:	ಪಾಸಿನೊಳ್ ನಿದ್ರೆಗೆಯ್ದಂ
ನಿರ್ಧಾರಣಕ್ಕೆ(ಗುಣ)	:	ರತ್ನಂಗಳೊಳ್ ಮಾಣಿಕ್ಯಮುತ್ತಮಂ
(ಕ್ರಿಯೆ)	:	ಕಾದುವರೊಳೀತಂ ಮೆಯ್ಗಲಿ
ವಿಷಯಕ್ಕೆ	:	ಮೊಗದೊಳ್ಮೆಲ್ದಂ
ವ್ಯಾಪಕಕ್ಕೆ	:	ಪೂವಿನೊಳ್ಕಂಪು
ವ್ಯವಹಾರಕ್ಕೆ	:	ವಸಂತದೊಳ್ ಮಾವು ಕೈವಂದುದು
ಸತ್ಯರ್ಥಕ್ಕೆ	:	ಬರೆ ಕಂಡಂ = ಬರ್ಪೆಡೆಯೊಳ್ಕಂಡಂ

ವಿಭಕ್ತಿ ಪಲ್ಲಟ :

೧೪೫

ಇಂತೀ ಪೇೞ್ದ ವಿಭಕ್ತಿಗ
ಳೆಂತುಂ ಪಲ್ಲಟಿಸುಗುಂ ಯಥೇಷ್ಟಂ ಪ್ರಥಮಾ
ರ್ಥಂ ತೋಱೆಯುಂ ದ್ವಿತೀಯಾ
ರ್ಥಂ ತೋಱೆಯುಮಲ್ಲಿ ಷಷ್ಠಿ ದೊರೆಕೊಂಡಿರ್ಕುಂ

ಹೀಗೆ ಹೇಳಿದ ಸಪ್ತವಿಭಕ್ತಿಗಳು ಇಷ್ಟಾನುವರ್ತಿಯಾಗಿ ಪಲ್ಲಟಗೊಳ್ಳುತ್ತವೆ. ಪ್ರಥಮಾರ್ಥ, ದ್ವಿತೀಯಾರ್ಥಗಳು ತೋರಿದರೂ ಷಷ್ಠಿ ಬರುತ್ತದೆ.

ಪ್ರಥಮಾರ್ಥದ ಷಷ್ಠಿಗೆ : ನೃಪಂ>ನೃಪನ.
ನಿಶ್ಶಂಕೆಯಿಂ ನೃಪನ ಪೇೞೆ

ದ್ವಿತೀಯಾರ್ಥದ ಷಷ್ಠಿಗೆ : ನಾಡಂ>ನಾಡ*
ತೆಂಕನಾಡ ಮಱೆಯಲ್ಕೆಂದುಂ ಮನಂ ಬರ್ಕುಮೇ

೧೪೬

ಸ್ವಾರ್ಥಂ ಪ್ರಥಮಾರ್ಥತೃತೀ
ಯಾರ್ಥಚತುರ್ಥ್ಯರ್ಥದೊಳ್ ದ್ವಿತೀಯೆ ತೃತೀಯೋ
ಕ್ತಾರ್ಥದೊಳಾ ಸಪ್ತಮಿಯೆ ಸ
ಮರ್ಥಂ ಪಂಚಮಿಯೊಳಂ ತೃತೀಯೆ ಸಮರ್ಥಂ

ಪ್ರಥಮಾರ್ಥ, ತೃತೀಯಾರ್ಥ, ಚತುರ್ಥ್ಯರ್ಥಗಳಲ್ಲಿ ದ್ವಿತೀಯೆ ಬಳಕೆಯಾಗುತ್ತದೆ. ತೃತೀಯಾರ್ಥದಲ್ಲಿ ಸಪ್ತಮಿ, ಪಂಚಮ್ಯರ್ಥದಲ್ಲಿ ತೃತೀಯೆ (ಬರಲು) ಸಮರ್ಥವಾಗುತ್ತವೆ.

ಪ್ರಥಮಾರ್ಥದ ದ್ವಿತೀಯೆಗೆ : ನುಣ್ಪುಳ್ಳಂ-ನುಣ್ಪನುಳ್ಳಂ

ತೃತೀಯಾರ್ಥದ ದ್ವಿತೀಯೆಗೆ :
ದೇವರಂ ಪೂವಿಂದರ್ಚಿಸಿದಂ-ದೇವರಂ ಪೂವನರ್ಚಿಸಿದಂ

ಚತುರ್ಥ್ಯರ್ಥದ ದ್ವಿತೀಯೆಗೆ :
ಪೊನ್ನಂ ಬಡ್ಡಿಗೆ ಕೊಟ್ಟಂ -ಪೊನ್ನಂ ಬಡ್ಡಿಯಂ ಕೊಟ್ಟಂ

ತೃತೀಯಾರ್ಥದ ಸಪ್ತಮಿಗೆ :
ಕೊಡಲಿಯಿಂ ಕಡಿದಂ-ಕೊಡಲಿಯೊಳ್ ಕಡಿದಂ

ಪಂಚಮ್ಯರ್ಥದ ತೃತೀಯೆಗೆ :
ತಿಳಿಗೊಳದತ್ತಣಿಂ ಪಾಱಿದುವು-ತಿಳಿಗೊಳದಿಂದೆ ಪಾಱಿದುವು

---

* ವಿಚಾರ : ನಾಡ ಎಂಬುದು ಷಷ್ಠಿಯಲ್ಲ; ದ್ವಿತೀಯೆಯ ಇನ್ನೊಂದು ರೂಪ.

೧೪೭

ಕೃತಿಯುಕ್ತಂ ಷಷ್ಠಿಯೊಳಂ
ದ್ವಿತೀಯೆಯೊಳಮಾ ಚತುರ್ಥಿ ಸಪ್ತಮಿಯೊಳ್ ಸಂ
ಗತಮಾ ಪ್ರಥಮಾಷಷ್ಠೀ
ಚತುರ್ಥಿಗಳ್ ಪ್ರಥಮೆಯುಂ ದ್ವಿತೀಯೆಯೊಳಕ್ಕುಂ

ಷಷ್ಠಿಯಲ್ಲಿ, ದ್ವಿತೀಯೆಯಲ್ಲಿ ಚತುರ್ಥಿ; ಸಪ್ತಮಿಯಲ್ಲಿ ಪ್ರಥಮೆ; ಷಷ್ಠಿ, ಚತುರ್ಥಿ, ದ್ವಿತೀಯೆಯಲ್ಲಿ ಪ್ರಥಮೆ ಉಂಟಾಗುತ್ತವೆ.

ಷಷ್ಠ್ಯರ್ಥದ ಚತುರ್ಥಿಗೆ	:	ಎರ್ದೆಯಾಣ್ಮಂ-ಎರ್ದೆಗಾಣ್ಮಂ
ದ್ವಿತೀಯಾರ್ಥದಲ್ಲಿ ಚತುರ್ಥಿಗೆ	:	ಆಕೆಯಂ ತಿಳಿಪಿದಂ -ಆಕೆಗೆ ತಿಳಿಪಿದಂ
ಸಪ್ತಮ್ಯರ್ಥದ ಪ್ರಥಮೆಗೆ	:	ಒಂದು ದಿನದೊಳ್ ಬಂದಂ -ಒಂದು ದಿನಂ ಬಂದಂ
ಸಪ್ತಮ್ಯರ್ಥದ ಷಷ್ಠಿಗೆ	:	ರಸಿಕರೊಳ್ ಚಕ್ರವರ್ತಿ-ರಸಿಕರ ಚಕ್ರವರ್ತಿ
ಸಪ್ತಮ್ಯರ್ಥದ ಚತುರ್ಥಿಗೆ	:	ತಾವರೆಯೊಳ್ ಪುಟ್ಟಿದಂ-ತಾವರೆಗೆ ಪುಟ್ಟಿದಂ
ದ್ವಿತೀಯಾರ್ಥದ ಪ್ರಥಮೆಗೆ	:	ಒಂದು ವರ್ಷಮನಿರ್ದಂ-ಒಂದು ವರ್ಷಮಿರ್ದಂ

ವಚನಪಲ್ಲಟ:

೧೪೮

ಅಕ್ಕುಂ ಜಾತಿಯೊಳೇಕ
ತ್ವಕ್ಕೆ ಬಹುತ್ವಂ, ಬಹುತ್ವದೆಡೆಗೇತಕ್ಕಂ
ಪೊಕ್ಕು ವಿಶೇಷಣಮಕ್ಕುಂ
ಮೊಕ್ಕಳಮಾ ಜಾತಿಯಲ್ಲದಲ್ಲಿಯುಮೆಂಬರ್

ಜಾತಿವಾಚಕದಲ್ಲಿ ಏಕವಚನಕ್ಕೆ ಬಹುವಚನದ ಅರ್ಥವುಂಟಾಗುವುದುಂಟು (-ಕ್ರಿಯಾಪದ ಬಹುವಚನವಾಗಿದ್ದರೆ). ಜಾತಿವಾಚಕವಲ್ಲದಲ್ಲಿಯೂ ಏಕಚವನವು ಬಹುವಚನಕ್ಕೆ ಪ್ರತಿಯಾಗಿ ಬಂದು, ವಿಶೇಷಣರೂಪದಲ್ಲಿರುತ್ತದೆ.

ಜಾತಿವಾಚಕಕ್ಕೆ : ಆನೆ ನೂಂಕಿದವು=ಆನೆಗಳ್ ನೂಂಕಿದುವು
ಜಾತಿವಾಚಕವಲ್ಲದುದಕ್ಕೆ : ಮಹೇಂದ್ರಮಹೈಶ್ವರ್ಯಮಿವೆಲ್ಲಮಧ್ರುವಂ=ಮಹೇಂದ್ರ-
ಮಹೈಶ್ವರ್ಯಮಿವೆಲ್ಲಮಧ್ರುವಂಗಳ್

೧೪೯

ಏಕತೆಯೆ ತನಗೆ ಬಹುತೆಯ
ನಾಕರಿಸದು ಜಾತಿ, ತಾಂ ವಿಶೇಷಣಮುಖದಿಂ
ದಾ ಕಾರಕಮೇಕತ್ವಮ
ನೇಕತ್ವಮನಾ ಕ್ರಿಯಾಪದಂ ಪಡೆಯಲೊಡಂ

ವಿಶೇಷಣವಾಗಿರುವ ಕಾರಕ ಏಕವಚನದಲ್ಲಿದ್ದರೆ, (ವಿಷೇಷಣವಾಗಿರುವ) ಕ್ರಿಯಾಪದ ಏಕವಚನದಲ್ಲಿದ್ದರೆ (ವಿಶೇಷ್ಯವಾಗಿರುವ) ಜಾತಿವಾಚಕ ಶಬ್ದ ಏಕವಚನವೇ ಆಗಿರುತ್ತದೆ; ಅದು ಬಹುವಚನಾರ್ಥವನ್ನು ಪಡೆಯದು.

ವಿಶೇಷಣವಾಗಿರುವ ಕಾರಕಕ್ಕೆ : ಇಂತುಟು ಕುದುರೆ
ವಿಶೇಷಣವಾಗಿರುವ ಕ್ರಿಯೆಗೆ : ನಡೆದುದು ಹಂಸೆ

೧೫೦

ನೀನಱಿ ಸಂಖ್ಯೇಯದ ಸಂ
ಖ್ಯಾನದ ದೊರೆವೆತ್ತ ಭಾವದೇತಕೆ ಬಹುತಾ
ಧೀನಂ, ವಿಶೇಷಣಂ ಬಹು
ತಾನತಮೆ ವಿಶೇಷ್ಯಮೇಕವಚನಮೆಯಕ್ಕುಂ

ಸಂಖ್ಯಾವಸ್ತು, ಸಂಖ್ಯಾವಾಚಿ, ಭಾವನಾಮ-ಇವುಗಳ ಏಕವಚನ ಬಹುವಚನಾರ್ಥವುಳ್ಳುದು. ವಿಶೇಷಣ ಬಹುವಚನವಾಗಿದ್ದರೂ ವಿಶೇಷ್ಯ ಏಕವಚನವಾಗಿರಬಲ್ಲುದು.

ಸಂಖ್ಯಾವಸ್ತುವಿಗೆ : ಪತ್ತು ದೆಸೆ =ಪತ್ತು ದೆಸೆಗಳ್
ಸಂಖ್ಯಾವಾಚಿಗೆ : ನಾಲ್ಕು=ನಾಲ್ಕುಗಳ್
ಭಾವಕ್ಕೆ : ಕುರುಳ್ಗಳ ಕರ್ಪು=ಕುರುಳ್ಗಳ ಕರ್ಪುಗಳ್
ವಿಶೇಷ್ಯದೇಕವಚನಕ್ಕೆ : ನೇರಿದುವು ಬೆರಲ್=ನೇರಿದುವು ಬೆರಲ್ಗಳ್

ಇತರ :

೧೫೧

ವಿದಿತ ವಿಶೇಷಣಪದಮವು
ಮೊದಲ ವಿಭಕ್ತಿಗಳನಾಳ್ದು ವಾಕ್ಯದ ಮೊದಲೊಳ್
ಪದವೆತ್ತುವಗ್ರಕಾರಕ
ಪದದ ವಿಭಕ್ತಿಯನೆ ತಳೆವುವನ್ವಯಮುಖದೊಳ್

ವಾಕ್ಯದ ಮೊದಲಲ್ಲಿರುವ ಪ್ರಮಾವಿಭಕ್ತಿರೂಪದ ವಿಶೇಷಣಪದಗಳು ಅನ್ವಯ ಪ್ರಸಂಗದಲ್ಲಿ (ಆ ವಾಕ್ಯದ) ಕೊನೆಯ ಕಾರಕ ಪದದ ವಿಭಕ್ತಿಯನ್ನು ಪಡೆಯುತ್ತವೆ.

ವೀರನುದಾರಂ ಶುಚಿಗಂ
ಭೀರಂ ನಯಶಾಲಿ ಕೈದುವೊತ್ತರ ದೇವಂ
ಗಾರೆಜಿಗರ್ ನೃಪತುಂಗಂಗೆ

ಅನ್ವಯ : ವೀರಂಗೆ ಉದಾರಂಗೆ ಶುಚಿಗೆ ಗಂಭೀರಂಗೆ ನಯಶಾಲಿಗೆ
ಕೈದುವೊತ್ತರ ದೇವಂಗೆ ನೃಪತುಂಗಂಗೆ ಆರೆಜಿಗರ್

೧೫೨

ಕೂಡಿನುಡಿವೆಡೆಯೊಳೆಂದುಂ
ಕೂಡದು ಲಿಂಗತ್ರಯಕ್ಕೆ ತರತಮಭಾವಂ,
ನೀಡುಂ ವಾಕ್ಯದ ಕಡೆಯೊಳ್
ಕೂಡಿರ್ದುದದಾವುದದುವೆ ಮುಖ್ಯಮೆನಿಕ್ಕುಂ

ಕೂಡಿ ನುಡಿಯುವಲ್ಲಿ ಲಿಂಗತ್ರಯಕ್ಕೆ ಎಂದಿಗೂ ತರತಮಭಾವ ಸಲ್ಲದು; ವಾಕ್ಯದ ಕೊನೆಯಲ್ಲಿದ್ದುದು (=ಇದ್ದ ಲಿಂಗ) ಮಾತ್ರ ಮುಖ್ಯವೆನಿಸಿಕೊಳ್ಳುತ್ತದೆ.

ಸೇನೆಯುಮರಸಿಯುಮರಸನುಂ ಬಂದರ್.
ಆನೆಯುಮರಸನುಮರಸಿಯುಂ ಬಂದರ್.
ಅರಸನುಮರಸಿಯುಂ ಚತುರಂಗಬಲಮುಂ ಬಂದುವು.

೧೫೩

ವ್ಯವಹರಿಸುವಿನಂ ಪ್ರಥಮೈ
ಕವಚನಮುಂ ಪಲವನೋದಿ ವಾಕ್ಯದ ನಿರ್ವಾ
ಹವನಳವಡಿಪೆಡೆಯೊಳ್ ಪುಗಿ
ಸುವರ್ ಕ್ರಿಯಾನೇಕವಚನಮುಂ ಮಾರ್ಗವಿದರ್*

ವಿದ್ವಾಂಸರು (ವಾಕ್ಯದ ಮೊದಲಲ್ಲಿ) ಹಲವು ಪ್ರಥಮಾ ಏಕವಚನಗಳನ್ನು ಹೇಳಿ, ಆ ವಾಕ್ಯವನ್ನು ಪೂರ್ತಿಗೊಳಿಸುವಲ್ಲಿ ಬಹುವಚನ ಕ್ರಿಯಾಪದವನ್ನಿಡುತ್ತಾರೆ.

ಅವತಂಸೋತ್ಪಲತಾಡನಂ ಕನಕಕಾಂಚೀಬಂಧನಂ ನೂಪುರಾ
ರವ ಝುಂಕಾರಿತ ಚಾರುವಾಮಚರಣಾಘಾತಂ ಚಲದ್ಭ್ರೂಲತಾ
ಗ್ರವಿಭಾಗೋತ್ಕಟ ತರ್ಜನಂ ತರಲತಾ ತಾಮ್ರಾಧರಂ ಚಕ್ರಿಗಿ
ತ್ತುವಲಂಪಂ ಪ್ರಣಯಪ್ರಕೋಪ ಸುರತಪ್ರಾರಂಭದೊಳ್ ಕಾಂತೆಯಾ||

೧೫೪

ಅವನವಳದೆಂಬಿವಿರ್ದಂ
ತೆವೊಲಿರ್ದಪುವಾವನಾವಳಾವುದು ತಾನೆಂ
ಬಿವವಂ ಪಾರದೆ ನಿಲಲಱಿ
ಯುವನ್ವಯಂ ತಾಗುವಲ್ಲಿ ವಾಕ್ಯೋವಿದರಿಂ

ಅವನ್, ಅವಳ್, ಅದು ಎಂಬಿವು ಸ್ವತಂತ್ರ ಪದಗಳು. ಆವನ್, ಆವಳ್, ಆವುದು, ತಾನ್ ಎಂಬಿವು ಅನ್ವಯಪ್ರಸಂಗದಲ್ಲಿ ಅವು (ಅವನ್, ಅವಳ್, ಅದು) ಗಳನ್ನು ಅವಲಂಬಿಸದೆ ನಿಲ್ಲಲಾರವು (=ನಿಲ್ಲಲಾರದ ಪರತಂತ್ರ ಪದಗಳು).

ಸ್ವತಂತ್ರಾನ್ವಯಕ್ಕೆ : ಪೊನ್ನುಳ್ಳವನೆ ಕುಲೀನಂ, ಸೊಬಗುಳ್ಳವಳೆ ಪೆಣ್, ಅದೆ ರೂಢಂ.
ಪರತಂತ್ರಾನ್ವಯಕ್ಕೆ : ಆವನಧಿಕಪುಣ್ಯನವನೆ ಸೇವ್ಯಂ.
ಆವಳ್ ಪತಿವ್ರತೆಯವಳೆ ಮಾನ್ಯೆ.
ಆವುದು ಚೆಲ್ವಾದುದದೆ ದರ್ಶನೀಯಂ.
ತಾನವಂ ಚದುರಂ, ತಾನವಳ್ ಚದುರೆ, ತಾನದು ಪಿರಿದು.

---

* ವಿಚಾರ : ಸೂ. ೧೫೩. ೧೫೫ ವಚನಪಲ್ಲಟ ವಿಭಾಗದಲ್ಲಿ ಬರಬೇಕಿತ್ತು.

೧೫೫

ಯುಗಳಾರ್ಥದ ಬಹುವಚನ
ಕ್ಕೊಗೆತಂದಾವಿಷ್ಟಲಿಂಗದೆಡೆಗೇಕತ್ವಂ
ನೆಗಟ್ದುಂ, ಕ್ರಿಯಾವಿಶೇಷಣ
ಮಗಲದೆ ನಿಂದೆಡೆಗಮಱಿವರಿಂದೇಕತ್ವಂ

ಯುಗಳಾರ್ಥದ ಬಹುವಚನಕ್ಕೆ, ಆವಿಷ್ಟಲಿಂಗಕ್ಕೆ ಏಕವಚನ ಬರುತ್ತದೆ. ಕ್ರಿಯಾ ವಿಶೇಷಣವಿರುವಲ್ಲಿಯೂ ಬಲ್ಲವರಿಂದ ಏಕವಚನ (ಬರುತ್ತದೆ).

ಯುಗಳಾರ್ಥದ ಏಕವಚನಕ್ಕೆ : ಪದಯುಗಂ (=ಪದಯುಗಂಗಳ್)

ಆವಿಷ್ಟಲಿಂಗದ* ಏಕವಚನಕ್ಕೆ : ವೇದಂಗಳ್ ಪ್ರಮಾಣಂ (=ವೇದಂಗಳ್ ಪ್ರಮಾಣಂಗಳ್)

ಕ್ರಿಯಾವಿಶೇಷಣದ ಏಕವಚನಕ್ಕೆ : ಏನೆಂಬ ಪೆಂಪೊ (=ಎಂತಹವರ್ಗಳ್ ಎಂಬ ಪೆಂಪೊ)

ಇಲ್ಲಿ 'ಏನ್'ಎಂಬ ಕಾರಕವು 'ಎಂಬ' ಕ್ರಿಯೆಗೆ ವಿಶೇಷಣವಾಗಿದೆ.

ಏನೆಂಬ ಪೆಂಪೊ ಮನುವುಂ ।
ತಾನುಂ, ಸಚ್ಚರಿತರಮರಕುಜಮುಂ ತಾನುಂ, ॥
ದಾನಿಗಳಂಭೋನಿಧಿಯುಂ ।
ತಾನುಂ, ಗಂಭೀರನೆನಿಪನುದಯಾದಿತ್ಯಂ ॥

೧೫೬

ಸಾರಮದಧ್ಯಾರೋಪಂ
ಕಾರಕಕಂ ಕ್ರಿಯೆಗಮುಗಲೆ ನೇಯದ ದೋಷಂ,
ಧೀರರ್ಕಳಿಂ ವಿಶಂಕೆಯೆ
ಕಾರಕ್ಕಂ ಪೇಟ್ದುದಾ ಸಮುಚ್ಚಯದುಮುಗಂ

ನೇಯದ ದೋಷ ತೊಲಗುವ ಪಕ್ಷದಲ್ಲಿ ಕಾರಕಕ್ಕೂ ಕ್ರಿಯೆಗೂ ಅಧ್ಯಾರೋಪ (ಮಾಡುವುದು) ಯೋಗ್ಯಾವಾದುದು. ವಿಶಂಕೆಯ ಎಕಾರಕ್ಕೂ ಸಮುಚ್ಚಯದ ಉಮುವಿಗೂ ವಿದ್ವಾಂಸರು (ಅಧ್ಯಾರೋಪವನ್ನು) ಹೇಳಬೇಕು.

ಕಾರಕಕ್ಕೆ : ಕರ್ಣನುಂ ದಾನಿ ಮೇಣೀತನುಂ.
ಇಲ್ಲಿ 'ದಾನಿ' ಎಂಬ ಇನ್ನೊಂದು ಪದ ಅಧ್ಯಾರೋಪವಾಗಿದೆ.

ಕ್ರಿಯೆಗೆ : ಪುರುಷೋತ್ತಮಂ ಮನುಷ್ಯ ಮಾತ್ರಮೆ?
ಇಲ್ಲಿ 'ಅಲ್ಲ' ಎಂಬುದು ಅಧ್ಯಾರೋಪವಾಗಿದೆ

ವಿಶಂಕೆಯ ಎತ್ವಕ್ಕೆ : ಉಱಿಮಂಜೆಗೆ ಬೆರ್ಚೆಮೆ ಬೆಸ
ಕೆಱಗೆಮೆ ದೇವ....
ಇಲ್ಲಿ 'ಉಱಿಮೆ' ಎಂಬಲ್ಲಿಯ ವಿಶಂಕೆಯ ಎತ್ವ ಅಧ್ಯಾರೋಪವಾಗಿದೆ.

ಸಮುಚ್ಚಯದುಮುವಿಗೆ:

....ಆಯುಂ
ಸಿರಿ ತಾಯುಂ ತಂದೆ ಕಣ್ಣುಂ ಗತಿಯೆನಿಸಿದಪಂ ಸಿಂಹಸೇನಕ್ಷಿತೀಶಂ.

ಇಲ್ಲಿಯ 'ಸಿರಿ', 'ತಂದೆ', 'ಗತಿ' ಪದಗಳಲ್ಲಿ ಸಮುಚ್ಚಯದ ಉಂ ಪ್ರತ್ಯಯ ಅಧ್ಯಾರೋಪವಾಗಿದೆ.

---

* ವಿಶೇಷ್ಯದ ಅಧೀನವಾಗಿರುವ ವಿಶೇಷಣವೆಂಬ ಲಿಂಗ.

೧೫೭

ಪೀನಂ ಪ್ರಥಮೆಗೆ ನೀನಾಂ
ತಾನೆಂದಱಿ ನಿನಗೆಯೆನಗೆ ತನಗೆಂದು ಚತು
ರ್ಥೀ ನಿರ್ದೇಶಕ್ಕಿತರ
ಸ್ಥಾನಕ್ಕಸ್ವರದಿನಿರ್ಪ ನಿನ್ನೆನ್‌ತಂಗಳ್

ಪ್ರಥಮೆಗೆ ನೀನ್ ಆನ್ ತಾನ್, ಚತುರ್ಥಿಗೆ ನಿನಗೆ ಎನಗೆ ತನಗೆ, ಇತರ ಸ್ಥಾನಗಳಿಗೆ ಸ್ವರರಹಿತವಾದ ನಿನ್, ಎನ್, ತನ್ ಎಂಬಿವು (ಪ್ರಕೃತಿಯಾಗಿ ವ್ಯವಹರಿಸುತ್ತವೆ).

ಪ್ರಥಮೆಗೆ : ನೀನಾರ್ಗಾನಾರ್ಗೆ ತಾನಾರ್ಗಿದನೆನಗುಸಿರಲ್ವೇಡ....
ಚತುರ್ಥಿಗೆ : ನಿನಗೆನಗೆ ತನಗೆ ತೀರ್ಗುಮೆ
ಹನುಮಂತನ ಶಕ್ತಿಸಾಹಸಂ ರಿಪುವಿಜಯಂ ॥
ಇತರ ಸ್ಥಾನಗಳಿಗೆ : ನಿನ್ನಂ, ನಿನ್ನಿಂ, ನಿನ್ನತ್ತಣಿಂ, ನಿನ್ನ, ನಿನ್ನೊಳ್
ಇದೇ ರೀತಿ ಎನ್, ತನ್‌ಗಳನ್ನು ಅರಿಯಬೇಕು.

೧೫೮

ನಿನತೆನತು ತನತೆನಿಪ್ಪುವು
ಜನಿಯಿಸುಗುಂ ನಿನ್ನದೆನ್ನದುಂ ತನ್ನದೆನಿ
ಪ್ಪಿನಿತಱೊಳಂ, ಮೇಣ್ ದ್ವಿತ್ವದಿ
ನನೇಕದೊಳ್ ನತ್ವದೆಡೆಗೆ ಮತ್ವಂ ಬರೆಯುಂ

ನಿನ್ನದು ಎನ್ನದು ತನ್ನದುಗಳಿಗೆ ನಿನತು ಎನತು ತನತುಗಳು ಮತ್ತು ಇವುಗಳಿಗೆ ದ್ವಿತ್ವ ರೂಪ (ನಿನತ್ತು, ಎನತ್ತು, ತನತ್ತು)ಗಳು ಹುಟ್ಟುತ್ತವೆ. ಬಹುವಚನದಲ್ಲಿ ನಕಾರಕ್ಕೆ ಪ್ರತಿಯಾಗಿ ಮಕಾರ ಬರುತ್ತದೆ.

ನಿನತಾದಿಗೆ : ನಿನತು ಚಲಮೆನತು ಶೌರ್ಯಂ
ತನತು ಮಹಾಧೈರ್ಯಮವನಿಪತಿಗೆ....
ದ್ವಿತ್ವಕ್ಕೆ : ಮುನಿಸು ನಿನತ್ತು ಸೈರಣೆ
ಯೆನತ್ತು ಕೆಳದಿಗೆ ತನತ್ತು ಸಂದಿಸುವೆಸಕಂ ।
ಬಹುವಚನಕ್ಕೆ : ನಿಮತು, ನಿಮತ್ತು; ಎಮತು, ಎಮತ್ತು; ತಮತು, ತಮತ್ತು.

೧೫೯

ಇದಿರೊಳ್ ಸ್ವರಾದಿಸಂಖ್ಯೆಗ
ಳೊದವಿರೆ ನಿಮ್ಮೆಮ್ಮತಮ್ಮನಿಪ್ಪಿವು ಪಿಂತ
ಣ್ದೊದವಿರೆ ನಡುವಣ್ಣುತುವ
ಪ್ಪುದಿವಱ ಬಹುವಚನದಲ್ಲಿ ಪುಗಿಸದಿರೊಂದಂ

ಮುಂದೆ ಸ್ವರಾದಿ ಸಂಖ್ಯಾವಾಚಿಗಳಿರಲು ಹಿಂದೆ ನಿಮ್ಮ ಎಮ್ಮ ತಮ್ಮ ಪದಗಳಿರಲು ನಡುವೆ ಉತು ಆಗಮವಾಗುತ್ತದೆ. ಬಹುವಚನವಾದ ಈ ಪದಗಳಲ್ಲಿ (ಏಕವಚನವಾದ) ಒಂದು ಎಂಬುದನ್ನು ಸೇರಿಸದಿರು.

ಉತುವಾಗಮಕ್ಕೆ : ನಿಮ್ಮುತಿರ್ವರುಂ, ಎಮ್ಮುತಯ್ವರುಂ, ತಮ್ಮುತಱುವರುಂ.

೧೬೦

ಎತ್ತಣದೆಂಬೀ ಶಬ್ದಮ
ನೆತ್ತಣ್ತೆಂದಿಂತು ಕೂಡಿನುಡಿಯಲ್ಕಕ್ಕುಂ,
ಮತ್ತಾರದೆಂಬುದಂ ವಿಬು
ಧೋತ್ತಮರಾರ್ತೆಂದು ಕೂಡಿ ನುಡಿಯಲ್ಕಕ್ಕುಂ

ಎತ್ತಣದು ಎಂಬ ಶಬ್ದವನ್ನು ಎತ್ತಣ್ತು ಎಂದು ಹೇಳಬಹುದು. ಆರದು ಎಂಬ ಶಬ್ದವನ್ನು ಆರ್ತು ಎಂದು ಹೇಳಬಹುದು.

ಎತ್ತಣ್ತು ಪದಕ್ಕೆ : ಎತ್ತಣದು>ಎತ್ತಣ್ತು .
....ದೆಸೆಯೆತ್ತಣ್ತಾ ।
ಗಸಮೆತ್ತಣ್ತುರ್ವಿಯೆನಿಸಿ ಪರ್ಬಿದುದು ತಮಂ ॥

ಆರ್ತು ಪದಕ್ಕೆ : ಆರದು>ಆರ್ತು.
ಆರ್ತೀ ತುರಂಗಮಿಂತಿದ
ನಾರ್ತಂದರ್ ದಿವ್ಯವಸ್ತುವಂ....

೧೬೧

ಅದುವಿದುವುದುವೆಂಬಿವಱಂ
ತ್ಯ ದುಕಾರಕ್ಕೊದವುಗುಂ ವಕಾರಂ ಪುಲ್ಲಿಂ
ಗದೊಳಲ್ಲಿ ತಕಾರಂ ಮೇ
ಳೊದವಿರೆ ಬೆಚ್ಚರದೆ ಬರ್ಕುಮಾದಿಗೆ ದೀರ್ಘಂ

ಅದು ಇದು ಉದು ಎಂಬ ಪದಗಳ ಅಂತ್ಯ ದುಕಾರಕ್ಕೆ ಪುಲ್ಲಿಂಗದಲ್ಲಿ ವಕಾರ ಉಂಟಾಗುತ್ತದೆ. ಅಲ್ಲಿ (ಆ ದುಕಾರಕ್ಕೆ) ತಕಾರಾದೇಶವಾದರೆ ಆದ್ಯಕ್ಷರಕ್ಕೆ ದೀರ್ಘವುಂಟಾಗುತ್ತದೆ.

ವಕಾರಾದೇಶಕ್ಕೆ : ಅದು>ಅವ, ಇದು >ಇವ, ಉದು>ಉವ.
ತಕಾರಾದೇಶಕ್ಕೆ : ಅದು>ಆತ, ಇದು>ಈತ, ಉದು>ಊತ.
ಆತಂ ದುರ್ಯೋಧನನಿಂ ।
ತೀತಂ ರವಿಜಾತನೂತನಶ್ವತ್ಥಾಮಂ ॥

೧೬೨

ಆವುದೇನಿಪ್ಪೀ ಶಬ್ದ
ಕ್ಕಾವಂ ಬಹುವಚನದೆಡೆಯೊಳಾರೆಲ್ಲದೆನಿ
ಪ್ಪಾ ವಚನಮದೇಕತ್ವಮ
ನಾವರಿಸಿದೊಡೆಲ್ಲಮೆಂದೆ ಆಯ್ತಾದೇಶಂ

ಆವುದು ಎಂಬ ಶಬ್ದಕ್ಕೆ (ಪುಲ್ಲಿಂಗ ಏಕವಚನದಲ್ಲಿ) ಆವಂ, (ಪುಲ್ಲಿಂಗ) ಬಹುವಚನದಲ್ಲಿ ಆರ್ (ಎಂದು ಆದೇಶವಾಗುತ್ತವೆ). ಎಲ್ಲದು ಎಂಬ ಬಹುವಚನವು ಏಕವಚನವನ್ನು ಪಡೆದರೆ ಎಲ್ಲಂ ಎಂದೇ ಆದೇಶವಾಗುತ್ತದೆ.

ಆವಂ ಎಂಬುದಕ್ಕೆ : ಆವುದು>ಆವಂ.

ಆವಂ ಮುರನಂ ಕೊಂದನ
ದಾವಂ ಬಕಕಂಸಕೇಶಿಗಳನದಟಲೆದಂ ॥

ಆರ್ ಎಂಬುದಕ್ಕೆ : ಆವಂ>ಆರ್.

ಆರ್ಮೆಯ್ವೋರ್ಪರಾರ್ಮಲೆವರಾರ್ಪೊಣರ್ವರ್....

ಎಲ್ಲಂ ಎಂಬುದಕ್ಕೆ : ಎಲ್ಲದು>ಎಲ್ಲಂ.

ಪರಲೆಲ್ಲಂ ಮುತ್ತು ಮಾಣಿಕಂ

೧೬೩

ಪೆಱತೆಂಬಿವಱಂತ್ಯಾಕ್ಷರ
ಮಱಿಗುಂ, ಗುಣವಚನದಂತ್ಯ ದುತ್ವಕ್ಕತ್ವಂ
ನೆಱಿಗುಂ, ತುಕಾರಮಿರೆ ಬಂ
ದೆಱಗುಗುಮಾ ತಾಣದೊಳ್ ದಕಾರಾದೇಶಂ

(ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ) ಪೆಱತು, (ಪೆಱದು) ಎಂಬಿವುಗಳ ಅಂತ್ಯಾಕ್ಷರಕ್ಕೆ ಲೋಪವುಂಟಾಗುತ್ತದೆ. ಗುಣವಚನದ ಅಂತ್ಯ ದುಕಾರಕ್ಕೆ ಅಕಾರಾದೇಶವಾಗುತ್ತದೆ. (ಗುಣವಚನದ ಅಂತ್ಯಕ್ಕೆ) ತುಕಾರವಿದ್ದರೆ ಆ ಸ್ಥಾನದಲ್ಲಿ ದಕಾರಾದೇಶವುಂಟಾಗುತ್ತದೆ.

ಅಂತ್ಯಾಕ್ಷರ ಲೋಪಕ್ಕೆ : ಪೆಱತು>ಪೆಱ>ಪೆಱಂ, ಪೆಱಳ್.

....ನರನೆಂ ।
ಬಾತಂ ಪೆಱನಲ್ಲನೀತನಾಗಲೆವೇೞ್ಕುಂ ॥

ಅಕಾರಾದೇಶಕ್ಕೆ : ಇನಿದು>ಇನಿಯ>ಇನಿಯಂ, ಇನಿಯಳ್.

ಇನಿಯನೆ ಬೆಲ್ಲದಿಂದಿನಿಯನೀವನೆ ಆಃ ಪಿರಿದೀವನಿತ್ತುದಂ
ನೆನೆವನೆ ಚೀಃ ಅದಂ ನೆನೆಯಂ ....

ದಕಾರಾದೇಶಕ್ಕೆ : ಕೂರಿತು>ಕೂರಿದ>ಕೂರಿದಂ, ಕೂರಿದಳ್.

ಕೂರಿದನುಂ ನೇರಿದನುಂ
ಕೂರಸಿಯಂತೆನಿಸಿ ಮೆಱಿವನಾ ನರನಾಥಂ ॥

೧೬೪

ಎಳದು ಪೞದೆಂಬ ಶಬ್ದಂ
ಗಳ ಮಧ್ಯಕ್ಕುಂಟೆಕಾರಮುತ್ವಂ ಬಱಿದೆಂ
ದೊಳಱುವ ಱಿಕಾರದೊಳ್, ನೀಂ
ತಿಳಿ ಪೊಸತಱ ಕಡೆಗೆ ಬಿಂದುವೆರಸು ಬಕಾರಂ

(ಪುಲ್ಲಿಂಗ ಸ್ತ್ರೀಲಿಂಗಗಳಲ್ಲಿ) ಎಳದು, ಪೞದು ಎಂಬ ಶಬ್ದಗಳ ಮಧ್ಯಕ್ಕೆ ಎಕಾರವುಂಟಾಗುತ್ತದೆ. ಬಱಿದು ಎಂಬ ಪದದ ಱಿಕಾರದಲ್ಲಿಯ ಇಕಾರಕ್ಕೆ ಉಕಾರ, ಪೊಸತು ಎಂಬುದರ ಕೊನೆಗೆ ಬಿಂದುವೆರಸು ಬಕಾರ (ಉಂಟಾಗುತ್ತವೆ).

ಎಳದು ಪೞದೆಂಬಿವಕ್ಕೆ : ಎಳದು>ಎಳೆಯ>ಎಳೆಯಂ, ಎಳೆಯಳ್.

ಪೞದು>ಪೞೆಯ>ಪೞೆಯಂ, ಪೞೆಯಳ್.

ಬಱೆದೆಂಬಿವಕ್ಕೆ : ಬಱೆದು>ಬಱುವ>ಬಱುವಂ, (ಬಱುವಳ್).

ಪೊಸತೆಂಬುದಕ್ಕೆ : ಪೊಸತು>ಪೊಸಂಬ>ಪೊಸಂಬಂ, (ಪೊಸಂಬಳ್).

ವಿಚಾರಿಸುದುಂತೆ ಪೊಸಂಬರೊತ್ತೆಯಂ ಕೊಳ್ವುದು ತಕ್ಕುದಲ್ತು.

೧೬೫

ಅದುವಿದುವುದುವೆಂಬಿವಱಿಂ
ತ್ಯದೊಳ್ ವಳಾದೇಶವಿಧಿ, ಕೆಕಾರಂ ಮೇಣ್ ಬಂ
ದೊದವಿರೆ ಬರ್ಕುಂ ಸ್ತ್ರೀಲಿಂ
ಗದೊಳಂ ಪುಲ್ಲಿಂಗದಂತಿರಾದಿಗೆ ದೀರ್ಘಂ

ಅದು, ಇದು, ಉದು ಎಂಬಿವುಗಳ ದುಕಾರಕ್ಕೆ (ಸ್ತ್ರೀಲಿಂಗದಲ್ಲಿ) ವಳ್ ಆದೇಶವಾಗುತ್ತದೆ ಮತ್ತು (ಆ ದುಕಾರಕ್ಕೆ) ಕೆಕಾರ (ಆದೇಶವಾಗಿ) ಬಂದರೆ, ಪುಲ್ಲಿಂಗದಂತೆ ಆದ್ಯಕ್ಷರಕ್ಕೆ ದೀರ್ಘ ಬರುತ್ತದೆ.

ವಳಾದೇಶಕ್ಕೆ : ಅದು>ಅವಳ್, ಇದು>ಇವಳ್, ಉದು>ಉವಳ್.

ಕೆಕಾರಾದೇಶಕ್ಕೆ : ಅದು+ಕೆ=ಆಕೆ, ಇದು+ಕೆ=ಈಕೆ, ಉದು+ಕೆ=ಊಕೆ

೧೬೬

ಕೆಲಕೆಲವು ಸಕ್ಕದದ ಮೂ
ಱುಲಿಂಗಮುಂ ರೂಢಿವೆತ್ತ ಕರ್ಣಾಟಕದೊಳ್
ನಿಲೆ ನಪ್ಪುಱಿ ಸಜ್ಜನಮದು
ಕುಲವಧುವೆಂಬಲ್ಲಿ ಕನ್ನಡಂ ನಪ್ಪದುವುಂ

ಕೆಲವು ಸಂಸ್ಕೃತದ ಮೂರು ಲಿಂಗಗಳು ಕನ್ನಡದಲ್ಲಿ ನೆಲೆಸಿದರೆ ನಪುಂಸಕವಾಗುತ್ತವೆ. ಸಜ್ಜನ ಶಬ್ದ, ಕನ್ನಡದಲ್ಲಿ ಕುಲವಧು ಎಂಬ ಅರ್ಥವನ್ನು ಕೊಡುತ್ತಿದ್ದರೆ ನಪುಂಸಕವಾಗುತ್ತದೆ.[1]

ಪುಲ್ಲಿಂಗಕ್ಕೆ : ವೃಕ್ಷಂ ತಳಿರ್ತುದು.

ಸ್ತ್ರೀಲಿಂಗಕ್ಕೆ : ಧರೆ ಬೆಳೆದುದು.

ನಪುಂಸಕಲಿಂಗಕ್ಕೆ: ಕುಲಂ ಮೇಲೆನಿಸಿದುದು.

ಸಜ್ಜನ ಶಬ್ದಕ್ಕೆ : ಆ ಸತಿ ಸಜ್ಜನಂ.

ಈ ಪ್ರಯೋಗದಲ್ಲಿ ನಪುಂಸಕಲಿಂಗದ ಅರ್ಥವಿದೆ.

---

1. ವಿಚಾರ : ಸಜ್ಜನ ಶಬ್ದ ಸಂಸ್ಕೃತದಲ್ಲಿ ಪುಲ್ಲಿಂಗ.

೧೬೭

ನೆಲಸಿರ್ದ ವಿಶೇಷಣದಿ
ಷ್ಯಲಿಂಗಮೆನಿಪುದು ವಿಶೇಷ್ಯಮದಱಿಷ್ಟದಿನ
ಗ್ಗಲಿಕುಂ ವಿಶೇಷಣದ ಲಿಂ
ಗಲಕ್ಷಣಂ ದೋಷರಹಿತಮಿದು ರೂಪಕದೊಳ್

ವಿಶೇಷ್ಯದ ಲಿಂಗ ವಿಶೇಷಣದ ಲಿಂಗದ ಇಷ್ಟದಂತೆ, ವಿಶೇಷಣದ ಲಿಂಗ ವಿಶೇಷ್ಯದ ಲಿಂಗದ ಇಷ್ಟದಂತೆ ವರ್ತಿಸುತ್ತವೆ. ಇದು ರೂಪಕದಲ್ಲಿ ದೋಷರಹಿತವಾದುದು.

ವಿಶೇಷಣದ ಬಲಕ್ಕೆ :
ಉದಯಾಸ್ತೋನ್ನತಶೈಲಸೇತು ಹಿಮವತ್ಕುಕ್ಷಿಲಪರ್ಯಂತ ಸಂಪದೆಯಂ....
ನೆಲನಂ ಸಾಧಿಸಿ....
ಇಲ್ಲಿ ವಿಶೇಷ್ಯವಾಗಿರುವ ನೆಲಂ ಎಂಬ ನಪುಂಸಕಲಿಂಗವು ವಿಶೇಷಣವಾಗಿರುವ ಧರಾವನಿತೆ ಎಂಬರ್ಥದ ಸ್ತ್ರೀಲಿಂಗಭಾವವನ್ನು ಪಡೆಯುತ್ತದೆಯೆಂದು ಭಾವಿಸಬೇಕು.
ವಿಶೇಷ್ಯದ ಬಲಕ್ಕೆ :

ಆತಂ ಜಗದ್ದರ್ಪಣಂ, ಆ ಪೆಣ್ ಜಗದ್ದರ್ಪಣರ[1] ಅದು ಜಗದ್ದರ್ಪಣಂ.[2]

೧೬೮

ಪದಮಧ್ಯವತ್ವಯತ್ವ
ಕ್ಕೊದವುಗುಮೌತ್ವೈತ್ವ ವಿಧಿಯದಂತಕ್ಕೊತ್ವಂ
ಪುದಿದಿರ್ಕುಂ ಹ್ರಸ್ವತೆಯಿಂ,
ವಿದಿತವಿಕಲ್ಪಂ ತಗುಳ್ಗುಮೀ ಮೂಱಱೊಳಂ

ಪದಮಧ್ಯದ ವಕಾರ ಯಕಾರಗಳಿಗೆ ಔಐಕಾರಗಳುಂಟಾಗುತ್ತವೆ. ಪದಾಂತ್ಯದ ಅಕಾರಕ್ಕೆ ಒಕಾರವುಂಟಾಗುತ್ತದೆ. ಈಮೂರರಲ್ಲಿಯೂ ವಿಕಲ್ಪತೆಯುಂಟು.

ವಕಾರಕ್ಕೆ ಔಕಾರ	:	ಕವುಂಗು-ಕೌಂಗು
ಯಕಾರಕ್ಕೆ ಐಕಾರ	:	ತೇರಯಿಸಿದಂ -ತೇರೈಸಿದಂ
ಅಕಾರಕ್ಕೆ ಒಕಾರ	:	ನುಡಿದಂ-ನುಡಿದೊಂ.

೧೬೯

ಅಸಮಾಸದೊಳಂ ದೊರೆವೆ
ತ್ತ ಸಮಾಸದೊಳಂ ಣಕಾರದಿಂ ಪರದೊಳ್ ಸಂ
ದಿಸಿದ ನಕಾರಂ ಣತ್ವಂ
ಪ್ರಸಿದ್ಧಮುಚ್ಚರಿಸುವರ್ಗೆ ದುಷ್ಕರಮದುವುಂ

---

1. ಜಗದ್ದರ್ಪಣೆ ಎಂಬ ಸ್ತ್ರೀಲಿಂಗಭಾವ ಇಲ್ಲಿದೆ.
2. ಅದು ಜಗದ್ದರ್ಪಣವಾಗಿದೆ ಎಂಬ ನಪುಂಸಕಲಿಂಗಭಾವ ಇಲ್ಲಿದೆ.

ಅಸಮಾಸದಲ್ಲಿ ಮತ್ತು ಸಮಾಸದಲ್ಲಿ ಣಕಾರಕ್ಕೆ ಪರವಾದ ನಕಾರ ಣಕಾರವಾಗುತ್ತದೆ; ಆ ಪ್ರಯೋಗ ಉಚ್ಚರಿಸುವವರಿಗೆ ದುಷ್ಕರವಾದುದು.

ಅಸಮಾಸಕ್ಕೆ : ಕಣ್+ನೊಂದಪುದು=ಕಣ್ಣೊಂದಪುದು.

ಸಮಾಸಕ್ಕೆ : ತಣ್+ನೆಟಿಲ್=ತಣ್ಣೆಟಿಲ್.

೧೭೦

ಸಂದ ಪಕಾರಕ್ಕೆ ಹಕಾ
ರಂ ದೊರೆಕೊಳ್ಗುಂ ವಿಕಲ್ಪದಿಂ, ಸಂಯೋಗಂ
ಸಂದಿಸಿದೊಡೆ ದುಷ್ಕರಮದು
ಸುಂದರಮಾ ದೇಶಿಯಿಂದಮೆಂಬಱ್ ವಿಬುಧಱ್

(ಕನ್ನಡ ಶಬ್ದದ) ಪಕಾರಕ್ಕೆ ವಿಕಲ್ಪದಿಂದ ಹಕಾರವುಂಟಾಗುತ್ತದೆ. (ಆ ಪಕಾರವು) ದ್ವಿತ್ವವಾಗಿದ್ದರೆ (ಹಕಾರವನ್ನು) ಮಾಡಬಾರದು. ಅದು (=ಪ-ಹ ವ್ಯತ್ಯಾಸ) ದೇಶಿಯಲ್ಲಿ ಸುಂದರವೆಂದು ವಿದ್ವಾಂಸರು ಹೇಳುತ್ತಾರೆ.

ಹಕಾರಕ್ಕೆ : ಪಲಗೆ-ಹಲಗೆ, ಪಂದರ್-ಹಂದರ್

ದ್ವಿತ್ವಕ್ಕಿಲ್ಲದುದಕ್ಕೆ : ತಪ್ಪು, ಟಿಪ್ಪಣಂ, ಮುಪ್ಪುರಿ.

೧೭೧

ಅಂತಹನಿಂತಹನುಂತಹ
ನೆಂತಹನೆಂದಿಂತು ಪದ್ವಿರುಕ್ತಿಗೆ ಹತ್ವಂ,
ಭ್ರಾಂತೇಂ ಗಡಾರ್ಥದೊಳ್ ಮೇ
ಣಂತವಱಿಡೆಗನ್ನನಿನ್ನನುನ್ನನುಮೆನ್ನಂ

(ಅಂತಪ್ಪ ಇಂತಪ್ಪ ಉಂತಪ್ಪ ಎಂತಪ್ಪ ಪದಗಳ) ದ್ವಿತ್ವ ಪಕಾರಕ್ಕೆ ಅಂತಹ ಇಂತಹ ಉಂತಹ ಎಂತಹ ಎಂಬಂತೆ ಹಕಾರ ಉಂಟಾಗುತ್ತದೆ. ಗಡಾರ್ಥಯುತವಾದ ಅವುಗಳಿಗೆ (=ಅಂತಹಂ ಗಡ, ಇಂತಹಂ ಗಡ, ಉಂತಹಂ ಗಡ, ಎಂತಹಂ ಗಡ ಎಂಬ ಶಬ್ದಗಳಿಗೆ) ಅನ್ನಂ, ಇನ್ನಂ, ಉನ್ನಂ, ಎನ್ನಂ (ಉಂಟಾಗುತ್ತವೆ).

ಹಕಾರಕ್ಕೆ : ಅಂತಪ್ಪಂ>ಅಂತಹಂ, ಇಂತಪ್ಪಂ>ಇಂತಹಂ, ಉಂತಪ್ಪಂ>ಉಂತಹಂ,
ಎಂತಪ್ಪಂ>ಎಂತಹಂ.

ಅನ್ನಂ ರೂಪಗಳಿಗೆ : (ಸಿಡಿಲ್+ಅಂತಹಂ)>ಸಿಂಡಿಲಂತಹಂ+ಗಡ=ಸಿಡಿಲನ್ನಂ.
ಸಿಡಿಲನ್ನಂ ಸಿಂಗದನ್ನಂ ಪುರಹರನುರಿಗಣ್ಣನ್ನನೀ ನಾರಸಿಂಹಂ

೧೭೨

ಮನಕಾರದ ಪರದೊಳ್ ವ್ಯಂ
ಜನಮಿರ್ದೊಡಮಿಲ್ಲದೊಡಮನುಸ್ವಾರಂ ಸಂ
ಜನಿಯಿಪುದು, ವರ್ಗಮಿದಿರಿರೆ
ತನಗೆ ವಿಕಲ್ಪದೆ ತದೀಯ ಪಂಚಮಮಕ್ಕುಂ

ಮಕಾರ ನಕಾರಗಳಿಗೆ ಪರವಾಗಿ ವ್ಯಂಜನವಿದ್ದರೂ, ಇಲ್ಲದಿದ್ದರೂ (ಅಲ್ಲಿ) ಬಿಂದು ತಲೆದೋರುತ್ತದೆ. (ಆ ಬಿಂದುವಿಗೆ) ಪರವಾಗಿ ವರ್ಗಾಕ್ಷರವಿದ್ದರೆ (ಅಲ್ಲಿ) ವಿಕಲ್ಪದಿಂದ ವರ್ಗದ ಪಂಚಮಾಕ್ಷರ ತಲೆದೋರುತ್ತದೆ.

ಪರದಲ್ಲಿ ವ್ಯಂಜನವುಳ್ಳ ಮಕಾರ ಬಿಂದುವಾದುದಕ್ಕೆ :

ನೀಮ್+ಯೋಗ್ಯರ್=ನೀಂ ಯೋಗ್ಯರ್, ಆಮ್+ಸುಖಿಗಳ್=ಆಂ ಸುಖಿಗಳ್.

ಪರದಲ್ಲಿ ವ್ಯಂಜನವುಳ್ಳ ನಕಾರ ಬಿಂದುವಾದುದಕ್ಕೆ:

ಆನ್+ವಾದಿ=ಆಂ ವಾದಿ, ನೀನ್+ಶುಚಿ=ನೀಂ ಶುಚಿ.

ಪರದಲ್ಲಿ ವ್ಯಂಜನವಿಲ್ಲದ ಮಕಾರ ಬಿಂದುವಾದುದಕ್ಕೆ : ನೀಮ್-ನೀಂ, ಆಮ್-ಆಂ.

ಪರದಲ್ಲಿ ವ್ಯಂಜನವಿಲ್ಲದ ನಕಾರ ಬಿಂದುವಾದುದಕ್ಕೆ : ನೀನ್-ನೀಂ, ಆನ್-ಆಂ.

ವರ್ಗಪಂಚಮಕ್ಕೆ : ಅವಂ ಕಡುಗಲಿ=ಅವಙ್ಕಡುಗಲಿ.

ತಾಂ ಚಲವಾದಿ=ತಾಞ್ಚಲವಾದಿ.

ಕರಂ ಟಕ್ಕು =ಕರಣ್ಟಕ್ಕುಂ.

ಕೆಂದಳಿರ್=ಕೆನ್ದಳಿರ್

ಕೆಂಮಣ್=ಕೆಮ್ಮಣ್.

❖❖

ಸಮಾಸ ಪ್ರಕರಣ

ಪೀಠಿಕೆ :

೧೭೩

ಕಱು ತಾಯ ಬೞಿಯನುೞಿಯದ
ತೆಱದಿಂದಂ ನಾಮಪದಮದರ್ಥಾನುಗಮಾ
ಗೆಱಗೆ ಸಮಾಸಂ ನೆಗೞ್ಗುಂ
ನೆಱೆ ಪೋಕುಂ ಮಧ್ಯಗತವಿಭಕ್ತಿಗಳವಱೊಳ್

ಕರು ತಾಯ ಬಳಿಯನುಳಿಯದ ರೀತಿಯಲ್ಲಿ ನಾಮಪದವು ಅರ್ಥಾನುಸಾರಿಯಾಗಿ (ಇನ್ನೊಂದು ಪದಕ್ಕೆ) ಹೊಂದಿಕೊಂಡರೆ ಸಮಾಸ ಘಟಿಸುತ್ತದೆ. (ಆಗ) ಅವುಗಳ ಮಧ್ಯದಲ್ಲಿರುವ ವಿಭಕ್ತಿಗಳು ಲೋಪಗೊಳ್ಳುತ್ತವೆ.

ಸಮಾಸಕ್ಕೆ : ತೊಱೆಯ+ಮಾವು=ತೊಱೆಮಾವು, ನೀರಂ+ಕುಡಿದಂ=ನೀರ್ಗುಡಿದಂ.
ಮೆಲ್ಲಿತು+ಅಡಿ=ಮೆಲ್ಲಡಿ

೧೭೪

ಇರ್ದುದನಟಿಯದೆ ನಯದಿಂ
ಪೊರ್ದುವುವಾಗಮಮವೆಯ್ದೆ ಪೋಪುವು ಲೋಪಂ
ಬೊರ್ದಿ ವಿಭಕ್ತಿಯ ಬೞಿವಿಡಿ
ದಿರ್ದುದನಟಿದಿರ್ಪುದರಿಯವೊಲಾದೇಶಂ

ಇದ್ದುದನ್ನು ಕೆಡಿಸದೆ ನಯವಾಗಿ ಸೇರಿಕೊಳ್ಳುವುವು ಆಗಮ. ಅವು ವಿಭಕ್ತಿ ಪ್ರತ್ಯಯದೊಡನೆ ಪೂರ್ತಿಯಾಗಿ ಲೋಪಹೊಂದಿ ಹೋಗುತ್ತವೆ. ವೈರಿಯಂತೆ ಇದ್ದುದನ್ನು ಕೆಡಿಸಿ ಬರುವುದು ಆದೇಶ.

ಆಗಮಕ್ಕೆ : (ತೆಂಕ+ಅಣ್[೧]+ಅ)>ತೆಂಕಣ.
ಆಗಮ-ವಿಭಕ್ತಿಗಳ ಲೋಪಕ್ಕೆ : ತೆಂಕಣ+ವಂಕ=ತೆಂಕವಂಕ.
ತೆಂಕವಂಕದೊಳಸಂಖ್ಯಬಲಂ ನಿ
ಶ್ಯಂಕೆಯಿಂ....
ಆದೇಶಕ್ಕೆ : ಕಿಱಿದು>ಕುತ್+ಅಡಿ=ಕುತ್ತಡಿ.
ಕುತ್ತಡಿ ಸಿಲ್ಕುತಿರ್ಕೆ....

---

೧. ಇಲ್ಲಿ ಅಣ್ ಆಗಮ.

ಸಂಸ್ಕೃತ ಷಟ್ಸಮಾಸಗಳು :

೧೭೫

ಪರಪದದೊಳರ್ಥವರ್ತನ
ಮಿರೆ ತತ್ಪುರುಷಂ, ಸಮಂತದೇಕಾಶ್ರಯಮಾ
ಗಿರೆ ಕರ್ಮಧಾರಯಂ, ನೆಲ
ಸಿರೆ ಮೊದಲೊಳ್ ಸಂಖ್ಯೆಯದೆ ವಲಂ ದ್ವಿಗುವಕ್ಕುಂ

ಪರಪದದಲ್ಲಿ ಅರ್ಥ ಪ್ರವರ್ತಿಸುತ್ತಿದ್ದರೆ[೧] ತತ್ಪುರುಷ ಸಮಾಸ,. ಅದು (=ತತ್ಪುರುಷ ಸಮಾಸ) ಏಕಾಶ್ರಯವಾಗಿದ್ದರೆ ಕರ್ಮಧಾರಯ ಸಮಾಸ.[೨] ಪೂರ್ವದಲ್ಲಿ ಸಂಖ್ಯೆ ನೆಲಸಿದ್ದರೆ ಅದು(=ಕರ್ಮಧಾರಯ ಸಮಾಸವು) ದ್ವಿಗು ಸಮಾಸ.

ತತ್ಪುರುಷಕ್ಕೆ : ಮಲ್ಲಿಗೆಯ+ನನೆ=ಮಲ್ಲಿಗೆನನೆ

ಕರ್ಮಧಾರಯಕ್ಕೆ : ಕಿಱಿದು+ಕೂಸು=ಕಿಱುಗೂಸು.
ಕಿಱುಗೂಸಾಗಿಯುಪಾಯಮಂ ಮಱೆದನೇ....

ದ್ವಿಗುವಿಗೆ : ಎರಡು+ಬಾಳ್=ಇರ್ಬಾಳ್.
[ಇರ್ಬಾಳ್] ಮೂವಾಳಿಕ್ಕಿ
[ದುರ್ಬರೆ]ಯೊಳ್....

೧೭೬

ಪದನೆರಡು ಪಲವು ಮೇಣ್ ಪರ
ಪದಾರ್ಥಮಂ ಬಯಸುತಿರೆ ಬಹುವ್ರೀಹಿ, ಪದಾ
ರ್ಥದ ಗಡಣಂ ದ್ವಂದ್ವಮೆನಿ
ಪ್ಪುದವ್ಯಯೀಭಾವಮಾದಿಪದಮುಖ್ಯತೆಯಿಂ

ಎರಡು ಅಥವಾ ಹಲವು ಪದಗಳು (ಸೇರಿ) ಬೇರೊಂದು ಪದ(ದ ಅರ್ಥ)ವನ್ನು ಬಯಸುತ್ತಿದ್ದರೆ ಬಹುವ್ರೀಹಿ ಸಮಾಸ. ಪದಗಳ ಸಮೂಹ ದ್ವಂದ್ವಸಮಾಸ. ಪೂರ್ವಪದ ಮುಖ್ಯವಾಗಿದ್ದರೆ ಅವ್ಯಯೀಭಾವ ಸಮಾಸ.

ಬಹುವ್ರೀಹಿಗೆ : (ಕಡಿದು ಚಾಗಂ ಉಳ್ಳವಂ)>ಕಡು+ಚಾಗಿ=ಕಡುಚಾಗಿ.

ದ್ವಂದ್ವಕ್ಕೆ : ಆಟಂ+ಪಾಟಂ+ಕೂಟಂ=ಆಟಪಾಟಕೂಟಂಗಳ್.
....ಆಟಪಾಟಕೂ
ಟಂಗಳ ಕೇಳಿಗೆಯ್ದಿಸದು....

ಅವ್ಯಯೀಭಾವಕ್ಕೆ: (ಪೊಡೆಯ ಕೆಳಗು)>ಕೆಳಗು+ಪೊಡೆ=ಕಿಱ್ಪೊಡೆ

೧೭೭

ಅಡಿಮೇಗುಗಳಂತ್ಯಾಕ್ಷರ
ದೆಡೆಗಕ್ಕುಂ ಬಿಂದು, ಮುಂದುಪಿಂದುಗಳಂತ್ಯ
ಕ್ಕೊಡರಿಸುಗುಂ ಲೋಪಂ ,ನೋ
ಳ್ಪೊಡವ್ಯಯೀಭಾವದೊಳ್ ಕೆಳಗು ಕಿಱಿನಿಕ್ಕುಂ

---

೧. ಪರಪದದಲ್ಲಿ ಅರ್ಥ ಪ್ರವರ್ತಿಸುತ್ತಿದ್ದರೆ ಅಂದರೆ ಉತ್ತರಪದ ಪ್ರಧಾನವಾಗಿದ್ದರೆ ಅಥವಾ ಉತ್ತರಪದ ಪ್ರಥಮಾವಿಭಕ್ತಿಯಿಂದ ಕೂಡಿದ್ದರೆ ಎಂದು ಅರ್ಥ.

೨. ವಿಚಾರ : ಏಕಾಶ್ರಯ, ಸಮಾನಾಶ್ರಯ, ಸಮಾನಾಧಿಕರಣ-ಇವು ಒಂದೇ ಅರ್ಥದ ಪದಗಳು. ಏಕಾಶ್ರಯವಾಗಿರುವುದೆಂದರೆ ಉಭಯ ಪದಗಳು ಒಂದೇ ವಿಭಕ್ತಿಯಲ್ಲಿ ಅಂದರೆ ಪ್ರಥಮಾ ವಿಭಕ್ತಿಯಲ್ಲಿರುವುದು.

ಅವ್ಯಯೀಭಾವದಲ್ಲಿ (ಪೂರ್ವಪದಗಳಾಗಿರುವ) ಅಡಿ ಮೇಗುಗಳ ಅಂತ್ಯಾಕ್ಷರಕ್ಕೆ ಬಿಂದು ಬರುತ್ತದೆ; ಮುಂದು ಪಿಂದುಗಳ ಅಂತ್ಯಾಕ್ಷರಕ್ಕೆ ಲೋಪವುಂಟಾಗುತ್ತದೆ; ಕೆಳಗು ಎಂಬುದು ಕಿೞ್ ಎಂದಾಗುತ್ತದೆ.

ಅಡಿ ಮೇಗುಗಳ ಅಂತ್ಯಾಕ್ಷರಕ್ಕೆ ಬಿಂದು :

(ಕಯ್ಯ ಅಡಿ)>ಅಡಿ+ಕಯ್=ಅಂಗಯ್.

(ಕಾಲ ಮೇಗು)>ಮೇಗು+ಕಾಲ್=ಮೇಂಗಾಲ್.

ಉದ್ದಮಾಗಿ ಬಿಗಿ ಮೇಂಗಾಲ್....

ಮುಂದು ಪಿಂದುಗಳ ಅಂತ್ಯಾಕ್ಷರಕ್ಕೆ ಲೋಪ :

(ಕಯ್ಯ ಮುಂದು)>ಮುಂದು ಕಯ್=ಮುಂಗಯ್

(ಕಾಲ ಪಿಂದು)>ಪಿಂದು ಕಾಲ್=ಪಿಂಗಾಲ್

ಕೆಳಗು ಎಂಬುದಕ್ಕೆ ಕಿೞ್:

(ಕೆಱೆಯ ಕೆಳಗು)> ಕೆಳಗು+ಕೆಱೆ=ಕೆೞ್ಗೆರೆ

ಕನ್ನಡ ಕ್ರಿಯಾಸಮಾಸ-ಗಮಕಸಮಾಸ :

೧೭೮

ವಿದಿತಂ ಕ್ರಿಯಾಸಮಾಸಂ
ಮೊದಲೊಳ್ ಕಾರಕಮುಮಗ್ರದೊಳ್ ಕ್ರಿಯೆಯುಂ ಸ
ನ್ನಿದಮಾಗೆ, ಬಿಂದು ಸಕ್ಕದ
ದದಂತದೊಳ್, ಕನ್ನಡಕ್ಕೆ ಮೇಣುತ್ವದೊಳಂ

ಮೊದಲಲ್ಲಿ ಕಾರಕವೂ ಅಗ್ರದಲ್ಲಿ ಕ್ರಿಯೆಯೂ ಕೂಡಿಕೊಂಡರೆ ಕ್ರಿಯಾಸಮಾಸ.* (ಪೂರ್ವಪದವಾದ) ಸಂಸ್ಕೃತದ ಅಕಾರಾಂತಕ್ಕೆ ಬಿಂದುವುಂಟು. ಕನ್ನಡದ (ಅಕಾರಾಂತಕ್ಕೂ) ಉಕಾರಾಂತಕ್ಕೂ (ವಿಕಲ್ಪ ಬಿಂದುವುಂಟು).

ಕ್ರಿಯಾಸಮಾಸಕ್ಕೆ : ಬಳೆಯಂ ತೊಟ್ಟಂ =ಬಳೆದೊಟ್ಟಂ.

ಸಂಸ್ಕೃತದ ಬಿಂದುವಿಗೆ : ರಂಗಮಂ ಪೊಕ್ಕಂ=ರಂಗಂಬೊಕ್ಕಂ.

ರಂಗಂಬೊಕ್ಕಾಡುವಂತೆ ಪೆಂಡಿರೆ ಗಂಡರ್

ಕನ್ನಡದ (ವಿಕಲ್ಪ) ಬಿಂದುವಿಗೆ : ಕಡಮಂ ಕೊಂಡಂ=ಕಡಂಗೊಡಂ, ಕಡಗೊಂಡಂ.

....ಕಾ|

ವೇರಿಯ ಕಾಲನಾ ತಿಗುಳನೇಂ ಕಡಗೊಂಡನೊ ಬಡ್ಡಿಗೊಂಡನೋ ||

ಮಾತಂ ಕುಟ್ಟಿದಂ=ಮಾತುಂಗುಟ್ಟಿದಂ, ಮಾತುಗುಟ್ಟಿದಂ,

ಬಱುಮಾತುಗುಟ್ಟಿ ಪೋಪರೆ ಗಂಡರುಂ....

---

* ವಿಚಾರ : (೧) ಷಷ್ಠಿಗೆ ಕಾರಕವಿಲ್ಲದುದರಿಂದ ಅದು ಕ್ರಿಯಾಸಮಾಸದಲ್ಲಿ ಪೂರ್ವಪದವಾಗದು. ಪ್ರಥಮೆಗೆ ಕಾರಕವಿದ್ದರೂ ಅದು ಕರ್ತೃವಾಗಿರುವುದರಿಂದ ಕ್ರಿಯಾಸಮಾಸವನ್ನು ರೂಪಿಸದೆ ವಾಕ್ಯವನ್ನು ರೂಪಿಸುತ್ತದೆ. ಆದುದರಿಂದ ಅದೂ ಪೂರ್ವಪದವಾಗದು. ಮಿಕ್ಕ ಕಾರಕಗಳಲ್ಲಿ ಕರ್ಮಕಾರಕವೇ ವಿಶೇಷವಾಗಿ ವ್ಯವಹರಿಸುತ್ತದೆ. (೨) ಕ್ರಿಯಾಸಮಾಸದಲ್ಲಿ ಅರಿಸಮಾಸ ದೋಷವಿಲ್ಲ. ಚಕ್ರಮಂ+ಕೊಳ್ =ಚಕ್ರಂಗೊಳ್.

೧೭೯

ಜನಿಯಿಸುಗುಂ ಸಂಖ್ಯಾಸ
ರ್ವನಾಮಗುಣವಚನಕೃತ್ಪ್ರಪೂರ್ವಂ ಗಮಕಂ,
ತನಗತ್ವಂ ಪೆಱಗಿತ್ವಂ,
ತನಗರಿಪದನಿಲ್ಲ, ಕರ್ಮಧಾರಯಮದುವುಂ

ಸಂಖ್ಯೆ, ಸರ್ವನಾಮ, ಗುಣವಚನ, ಕೃತ್ತುಗಳು ಪೂರ್ವದಲ್ಲಿರಲು (ಕಾರಕ ಪರದಲ್ಲಿರಲು) ಗಮಕ ಸಮಾಸವುಂಟಾಗುತ್ತದೆ. (ಪೂರ್ವಪದವಾದ ಗುಣವಚನದ ಅಂತ್ಯಾಕ್ಷರ ಲೋಪವಾಗಿ ಉಳಿಯುವ) ಇಕಾರದ ಮುಂದೆ ಅಕಾರ (ಬರುತ್ತದೆ).ಅದಕ್ಕೆ ಅರಿಸಮಾಸ ದೋಷವಿಲ್ಲ. ಅದು ಕೂಡ ಕರ್ಮಧಾರಯ(ದ ಒಂದು ಪ್ರಭೇದ)ವಾಗಿದೆ.

ಸಂಖ್ಯೆಗೆ : ಮೂವತ್ತು+ಆಱು=ಮೂವತ್ತಾಱು.
ಮೂವತ್ತಾಱುಂ ಗುಣಂಗಳ್ ತಮಗಮರ್ದಿರೆ....
ಸರ್ವನಾಮಕ್ಕೆ : (ಆವುದು>) ಆವಂ+ನಾಯಕಂ=ಆವನಾಯಕಂ
ಆವ ರಾವುತರಾವ ವಾಜಿಗಳಾವುವಾನೆಗಳಾವನಾ
ಳಾವ ನಾಯಕರೋ .... ನಿಮ್ಮೀ ವ್ಯೂಹಸಂದೋಹದೊಳ್ ॥
ಗುಣವಚನಕ್ಕೆ : ಅಸಿದು>ಅಸಿ+ಅ>ಅಸಿಯ+ನಡು= ಅಸಿಯ ನಡು....
ಅಸಿಯ ನಡು ಪಸಿಯ ಬಣ್ಣಂ
ಮಿಸುಪ ರದಂ....
ಕೃತ್ತಿಗೆ : ಪಾಡುವುದು ತುಂಬಿ>ಪಾಡುವ + ತುಂಬಿ=ಪಾಡುವತುಂಬಿ.
ಪಾಡುವ ತುಂಬಿ ಕೋಡುವಪುೞಿಲ್....
ಅರಿಸಮಾಸ ನಿರ್ದೋಷಕ್ಕೆ : ಪೂಸಿದುದು ಭಸ್ಮಂ>ಪೂಸಿದ+ಭಸ್ಮಂ=ಪೂಸಿದ ಭಸ್ಮಂ.
ಪಿಂಗೆ ಪೂಸಿದ ಭಸ್ಮಪರಾಗಂ ಪೊಣ್ಮುವ ಘರ್ಮಜಲಂಗಳಾ
ಪಾಂಗು....

೧೮೦

ಅದುವಿದುವುದುಗಾಯೀಯೂ
ವೊದವುಗುಮಾದೇಶಮಾಗಿ ಗಮಕದೊಳಾಯೆಂ
ಬುದು ಪೂರ್ವಪರಾಮರ್ಶೆಗ
ಮೊದವುಗುಮಾ ರೂಢಿಗಂ ಕವೀಶ್ವರಮತದಿಂ

ಗಮಕಮಾಸದಲ್ಲಿ ಅದು, ಇದು, ಉದುಗಳಿಗೆ ಆ , ಈ, ಊ ಆದೇಶವಾಗುತ್ತವೆ. ಕವೀಶ್ವರರ ಮತದಂತೆ ಆ ಎಂಬುದು ಪೂರ್ವಸ್ಮರಣೆಗೂ, ಪ್ರಸಿದ್ಧಿಗೂ ಬರುತ್ತದೆ.

ಆ ಈ ಊ ಆದೇಶಕ್ಕೆ : ಅದು=ಬನಂ=ಆಬನಂ, ಇದು+ಬನಂ=ಈಬನಂ.
ಉದು+ಬನಂ=ಊಬನಂ.
...ಆಬನವೀಬನ
ವೂಬನವೆನ್ನದೆ ತೊೞಲ್ದು ಪೂಗೊಯ್ದರವರ್ ।
ಸ್ಮರಣಕ್ಕೆ : ನೆನೆದನಾ ಹಿರಣ್ಯಕನದೊಂದು ಬಿಟ್ಟಂದಮಂ.
ಪ್ರಸಿದ್ಧಿಗೆ : ಗಜಹಯರೂಢಿಯೊಳಾ ಭಗದತ್ತನಿನಾ ನಳಿನಿಂ ಮಿಗಿಲಾದಂ.

ಸಮಾಸಕ್ರಿಯೆ :

೧೮೧

ಗದಬಜಕಾರಮವಿದಿರಿರೆ
ಮೊದಲ ಪದಂ ತಾಂ ಕೃದಂತಮಾಗಿರೆ ದೊರೆಕೊ
ಳ್ವುದನುಸ್ವಾರಮುದಂತದೊ
ಳಿದಂತದೊಳ್ ಕರ್ಮಧಾರಯಂ ಬರೆ ಬಹುಳಂ

ಕರ್ಮಧಾರಯದಲ್ಲಿ ಪೂರ್ವಪದ ಉಕಾರಾಂಕ ಇಕಾರಾಂತ ಕೃತ್ತಾಗಿರಲು, ಗದಬಜ ಕಾರಗಳು ಎದುರಿಗಿರಲು, ಮಧ್ಯದಲ್ಲಿ ಬಿಂದು ಬರುತ್ತದೆ. ವಿಕಲ್ಪವಾಗಿ ಕೃತ್ತಿಲ್ಲದಲ್ಲಿಯೂ ಬಿಂದು ಬರುತ್ತದೆ.

ಉಕಾರಾಂತಕ್ಕೆ : ಇಡುಕು+ಕಬ್ಬಂ=ಇಡುಕುಂಗಬ್ಬಂ.
ಇಡುಕುಂಗಬ್ಬಂ ಮುಕ್ತಕ
ಮೊಡಂಬಡಂ ಪಡೆಯೆ....
ಆಡು +ತೊಲೆ=ಆಡುಂದೊಲೆ.
....ಎತ್ತುವೇತದಾ।
ಡುಂದೊಲೆಯಂತೆ ಕಣ್ಗೆಸೆದುದೇಱಿದಿಭಂ ಕದನತ್ರಿಣೇತ್ರನಾ ॥
ಪಾಱು+ಬಳೆ=ಪಾಱುಂಬಳೆ.
ಪಾಱುಂಬಳೆ ನಾರಾಚಂ
ತೂಱುವ ಸರಲ್............
ಏಱು+ಜವ್ವನಂ=ಜಱುಂಜವ್ವನಂ.
ಏರುಂಜವ್ವನದೊಳ್ ಸೊ
ಕ್ಕೇಱಿದ ನೀಱೆಯರ

ಇಕಾರಾಂತಕ್ಕೆ : ಸಿಡಿ+ತಲೆ>ಸಿಡಿ+ಉ+ತಲೆ=ಸಿಡಿಯುಂದಲೆ.
ಇಟಿ+ಪೊಟ್ಟು>ಇಟಿ+ಉ+ಪೊಟ್ಟು=ಇಳಿಯುಂಬೊಟ್ಟು.

ವಿಕಲ್ಪಕ್ಕೆ : ಬೆಟ್ಟುಂಬೊಟಿ (ಕೃತ್ತಿಲ್ಲದಿದ್ದರೂ ಇಲ್ಲಿ ಬಿಂದು ಆಗಮಿಸಿದೆ).

೧೮೨

ಸುಡುಗಾಡಿಡುಗಿರ್ಚಡುಗೂ
ಟುಡುಗೊಱೆಯುಂ ಮಾಱುದಾಂಟು ಬಿಡುಗಣ್ ಬಿಡುವಾಯ್
ತುಡುಜೊಡರಱುಗೆಱೆಯೆಂಬಿವು
ಪಡೆಯವು ಬಿಂದುವನುದಂತವೃತ್ತಿಯನಾಳ್ದಂ

ಸುಡುಗಾಡು, ಇಡುಗಿರ್ಚು, ಅಡುಗೂಟ್, ಉಡುಗೊಱೆ, ಮಾಱುದಾಂಟು, ಬಿಡುಗಣ್, ಬಿಡುವಾಯ್, ತುಡುಜೊಡರ್, ಅಱುಗೆಱೆ -ಇವು (ಪೂರ್ವಪದದ ಅಂತ್ಯದಲ್ಲಿ) ಉಕಾರಂತವಾಗಿದ್ದರೂ ಬಿಂದುವನ್ನು ಪಡೆಯಲಾರವು.

೧೮೩

ಕೃತ್ತಿರದೆಯುಮುತ್ವಾತ್ವಾ
ಯತ್ತಮನುಸ್ವಾರಮಸ್ವರದ ನಣಕತ್ವಂ
ಮತ್ತೆ ಳಕಾರಕ್ಕುತ್ವಂ
ಪತ್ತಲೊಡಂ ಬಿಂದು ಬಂದು ನೆಲೆಗೊಂಡಿರ್ಕುಂ

(ಪೂರ್ವಪದ) ಕೃತ್ತಾಗಿರದಿದ್ದರೂ ಉಕಾರಾಂತ ಅಕಾರಾಂತಗಳಿಗೆ ಬಿಂದು ಬರುತ್ತದೆ. ನಕಾರ ಣಕಾರಗಳಿಗೆ ಅಕಾರವೂ ಳಕಾರಕ್ಕೆ ಉಕಾರವೂ ಹತ್ತಿದರೆ ಬಿಂದು ಬಂದು ಸೇರುತ್ತದೆ.

ಉಕಾರಾಂತಕ್ಕೆ : ತಾಱು+ಬಳೆ=ತಾಱುಂಬಳೆ.
ತಾಱುಂಬಳೆ ಬಿಟ್ಟ ಚಂಚು ಬೆಮರಿಂ ಕಡೆಗೆನ್ನೆಗೆ ಬಾನಲಾದ ಬೊಟ್ಟು
ಅಕಾರಾಂತಕ್ಕೆ : ಜಕ್ಕ+ತೊಟಲಿ=ಜಕ್ಕಂದೊಟಲಿ.
....ಜವನೇಱಿದೊಂದು ಜ
ಕ್ಕಂದೊಟಲಂತೆ ಕಣ್ಗೆಸೆದುದೇಱಿದಿಭಂ ಭುವನೈಕರಾಮನಾ ॥
ನಕಾರಕ್ಕೆ : ಮೀನ್>ಮೀನ+ಪುಳು=ಮೀನಂಬುಳು
ಣಕಾರಕ್ಕೆ : ಕಣ್>ಕಣ್ಣ+ತೊಟಲಿ=ಕಣ್ಣಂದೊಟಲಿ
ಳಕಾರಕ್ಕೆ : ಬೆಳ್>ಬೆಳ್ಳು+ಬಟ್ಟೆ=ಬೆಳ್ಳುಂಬಟ್ಟೆ.

೧೮೪

ಪೆಡವೆಂಬಾದೇಶಂ ಬಂ
ದೆಡೆಗೊಳ್ಗುಂ ಪೆಱಗೆನಿಪ್ಪ ಶಬ್ದದೊಳದು ತಾಂ
ಪಡೆಗುಂ ಬಿಂದುವನರೆಬರ್
ತಡಗಾಲೆಂಬಂತಬಿಂದುವುಮನಾಚರಿಪರ್

(ಪೂರ್ವದಲ್ಲಿರುವ) ಪೆಱಗು ಎಂಬ ಶಬ್ದಕ್ಕೆ ಪೆಡ ಎಂಬ ಆದೇಶವಾಗುತ್ತದೆ. (ಆಗ) ಅದು ಬಿಂದುವನ್ನು ಪಡೆಯುತ್ತದೆ. ಕೆಲವರು 'ತಡಗಾಲ್' ಎಂಬಂತೆ (ಇದನ್ನು) ಅಬಿಂದುವಾಗಿ ಪ್ರಯೋಗಿಸುತ್ತಾರೆ.

ಪೆಡಮಾದೇಶಕ್ಕೆ : ಪೆಱಗು>ಪೆಡ+ಮೆಟ್ಟು=ಪೆಡಂಮೆಟ್ಟು.
ಪೆಡಂಮೆಟ್ಟದೆ ಸೂಟಿಱಿದುದೇಱಿದಿಭಂ ಭುವನೈಕರಾಮನಾ.
ಅಬಿಂದುವಿಗೆ : ಪೆಱಗು>ಪೆಡ+ಮೆಟ್ಟು=ಪೆಡಮೆಟ್ಟು.
ಪೆಡಮೆಟ್ಟಿಂ ಬರ್ಪ ದುರ್ಯೋಧನನಿಭಘಟೆಯಂ....

೧೮೫

ಪದವಿಧಿ ಕನ್ನಡಕಂ ಸ
ಕ್ಕದಕ್ಕಮಿಲ್ಲಾದ್ಯರಿಂದೆ ಸಂದುವನಱಿದಿ
ರ್ಪುದು, ಬಿರುದಾವಳಿಯೊಳ್ ಪೇ
ೞ್ವುದು ಪೆಱವಱೊಳಾಗದಿದು ವಿರುದ್ಧಸಮಾಸಂ

ಕನ್ನಡ ಶಬ್ದಕ್ಕೂ ಸಂಸ್ಕೃತ ಶಬ್ದಕ್ಕೂ ಸಮಾಸವಿಲ್ಲ. ಶಿಷ್ಟರಿಂದ ಸಲುವಳಿಯಾದುವನ್ನು ತಿಳಿದಿರಬೇಕು (ಮನ್ನಿಸಬೇಕು). ಬಿರುದಾವಳಿಯಲ್ಲಿ ಹೇಳಬಹುದು, ಮಿಕ್ಕೆಡೆಗಳಲ್ಲಿ ಸಲ್ಲದು; ಇದು ಅರಿಸಮಾಸ.

ಅರಿಸಮಾಸಕ್ಕೆ : ಅರಸು+ಕುಮಾರಂ=ಅರಸುಕುಮಾರಂ.
ಶಿಷ್ಟಪ್ರಯೋಗಕ್ಕೆ : ಕೂರ್+ಅಸಿ=ಕೂರಸಿ.
ಬಿರುದಿಗೆ : ಅಂಕ+ತ್ರಿಣೇತ್ರಂ=ಅಂಕತ್ರಿಣೇತ್ರಂ.

೧೮೬

ಸವನಿಸುವುದೆಲ್ಲ ಶಬ್ದ
ಕ್ಕೆ ವಿಕಲ್ಪದೆ ದೀರ್ಘವಿಧಿ, ಮಹಚ್ಛಬ್ದಕ್ಕು
ದ್ಭವಿಕುಂ ಮಾದೇಶಂ, ದೋ
ಷವಿಲ್ಲ ಸಂಸ್ಕೃತಪದಂ ಪರಕ್ಕೊದವಲೊಡಂ

ಎಲ್ಲ ಶಬ್ದಕ್ಕೆ ವಿಕಲ್ಪದಿಂದ ದೀರ್ಘವಿಧಿ ಉಂಟಾಗುತ್ತದೆ. ಮಹತ್ ಶಬ್ದಕ್ಕೆ ಮಾ ಆದೇಶವಾಗುತ್ತದೆ. (ಇವುಗಳ) ಮುಂದೆ ಸಂಸ್ಕೃತಪದ ಬಂದರೂ (ಅರಿಸಮಾಸ) ದೋಷವಿಲ್ಲ.

ದೀರ್ಘವಿಕಲ್ಪಕ್ಕೆ : ಎಲ್ಲ ಧನಂ, ಎಲ್ಲಾ ಧನಂ; ಎಲ್ಲ ರತ್ನಂ, ಎಲ್ಲಾ ರತ್ನಂ.
ಎಲ್ಲಂಗಮೆಲ್ಲಧನಮುಮ
ನೆಲ್ಲೆಡೆಯೊಳಮೆಲ್ಲ ತೆಱದೊಳಂ ಕುಡುಗೆಮಗೆ....
ಎಲ್ಲಾ ರತ್ನಂಗಳುಮನೊಳಕೊಂಡೊಳ್ಪನಂಬೋಧಿ ಲೋಕ
ಕ್ಕೆಲ್ಲಂ ಬೀಱಲ್....
ಮಾದೇಶಕ್ಕೆ : ಮಹಾ>ಮಾ+ದಾನಿ=ಮಾದಾನಿ (ದಾನಿ-ಸಂಸ್ಕೃತ).
ಮಾದಾನಿ ಶೌರ್ಯಧನನುದಿ
ತೋದಿತ ಪುಣ್ಯ....
ಮಹಾ>ಮಾ+ನಾಮಿ=ಮಾನಾಮಿ (ನಾಮಿ-ಕನ್ನಡ)
ಮಾನಾಮಿಯ ಸಾಣೆಯಾಯ್ತು ತನು ಧವಳುಕನಾ.

೧೮೭

ನೆಲೆಗೊಳ್ಗುಂ ಪೂರ್ವಪದಾಂ
ತ್ಯಲೋಪಮದು ಬಹುಳದಿಂದೆ ತತ್ಪುರುಷಕ್ಕ
ಗ್ಗ ಲಿಪುದುಚಿತಾಕ್ಷರಾಗಮ
ಮೊಲೆಗುಂ ಕೆಳಗಣ್ಗೆ ಕಿೞ್ ಕಿನೆಂಬಾದೇಶಂ

ತತ್ಪುರುಷಸಮಾಸದ ಪೂರ್ವಪದಾಂತ್ಯಕ್ಕೆ ವಿಕಲ್ಪದಿಂದ ಲೋಪವುಂಟಾಗುತ್ತದೆ; (ಲೋಪದೊಂದಿಗೆ) ಉಚಿತಾಕ್ಷರಾಗಮವೂ ಉಂಟಾಗುತ್ತದೆ. ಕೆಳಗು ಎಂಬುದಕ್ಕೆ ಕಿೞ್, ಕಿನ್ ಎಂದು ಆದೇಶವಾಗುತ್ತವೆ.

ಪದಾಂತ್ಯ ಲೋಪಕ್ಕೆ : ತೆಂಕಣ>ತೆಂಕ+ಗಾಳಿ=ತೆಂಗಾಳಿ.
ತೆಂಗಾಳಿ ಭೃಂಗಾಳಿ ಪುಂಸ್ಕೋಕಿಲನಾದಂ ವೇದನಾದಂ.

ಉಚಿತಾಕ್ಷರಾಗಮಕ್ಕೆ	:	ಕಂಪಿನ>ಕಮ್ಮಂ+ಕಣೆ=ಕಮ್ಮಂಗಣೆ.

ಕಮ್ಮಂಗಣೆಯಿಂದೆಚ್ಚಪ।
ನಿಮ್ಮಾವಿನ ಪೊದಱೊಳಿರ್ದು ವಿರಹಿವ್ರಜಮಂ ॥

ಕಿಱಿದೇಶಕ್ಕೆ	:	ಕೆಳಗಣ>ಕಿಱ್+ಕೊಂಬು=ಕಿಱ್ಕೊಂಬು.
ಕಿನಾದೇಶಕ್ಕೆ	:	ಕೆಳಗಣ>ಕಿನ್+ನೆಲಂ=ಕಿನ್ನೆಲಂ.

೧೮೮

ಅಕ್ಕುಂ ಪದಾಂತ್ಯಲೋಪಂ
ತಕ್ಕಂತಿರೆ ಕರ್ಮಧಾರಯಕ್ಕಂ ದ್ವಿಗುಗಂ,
ಮಿಕ್ಕಾ ದ್ವಂದ್ವಕ್ಕಂ ಮೇ
ಲಕ್ಕರಿಗರಿನಾ ಕ್ರಿಯಾಸಮಾಸೋಪೇತಂ

ಕರ್ಮಧಾರಯಕ್ಕೂ ದ್ವಿಗುವಿಗೂ ದ್ವಂದ್ವಕ್ಕೂ (ಪೂರ್ವ)ಪದಾಂತ್ಯ ಲೋಪವಾಗುತ್ತದೆ. ಬಲ್ಲಿದರಿಂದ (ಅಂಥ ಲೋಪ) ಕ್ರಿಯಾಸಮಾಸದಲ್ಲಿಯೂ ಉಂಟು.

ಕರ್ಮಧಾರಯಕ್ಕೆ: ಪೊಲ್ಲದು+ಮೊಗಂ=ಪೊಲ್ಲಮೊಗಂ.
ಪೊಲ್ಲಮಾನಸರ ಪೊಲ್ಲಮೊಗಂ.
ದ್ವಿಗುವಿಗೆ : ಪಲವು +ಕಣ್=ಪಲಗಣ್.
ಪಾದರಿಗಂ ಪಲಗಣ್ಣಿನದೇನನೀವಂ...
ದ್ವಂದ್ವಕ್ಕೆ : ತಮ್ಮ+ತಮ್ಮ=ತಂತಮ್ಮ.
ತಂತಮ್ಮ ರಾಜ್ಯಚಿಹ್ನಂ
ತಂತಮ್ಮ ಮಹಾವಿಭೂತಿ ತಂತಮ್ಮ ಬಲಂ ॥
ಕ್ರಿಯಾಸಮಾಸಕ್ಕೆ : ಏನಂ+ಪೇೞ್ವೆನ್=ಏವೇೞ್ವೆನ್
ಏವೇೞ್ವೆನವನ ಚಾಗದ ಪೆಂಪಂ....

೧೮೯

ದೊರಕೊಳ್ವುದತ್ವವಿಧಿಯಂ
ತರಾಳದೊಳ್, ಬಹುಳವಾಗಿ ಮಧ್ಯಪದಕ್ಕಂ
ದೊರೆಕೊಳ್ವುದದರ್ಶನವಿಧಿ
ವಿರಳತೆಯಿಂ ಕರ್ಮಧಾರಯಕ್ಕಱಿವವರಿಂ

ಕರ್ಮಧಾರಯದ ಅಂತರಾಳದಲ್ಲಿ ವಿಕಲ್ಪವಾಗಿ ಅಕಾರ ತಲೆದೋರುತ್ತದೆ. ಬಲ್ಲವರಿಂದ ಮಧ್ಯಪದಕ್ಕೂ ವಿರಳವಾಗಿ ಲೋಪವುಂಟಾಗುತ್ತದೆ.

ಅತ್ವಕ್ಕೆ : ಬೆಟ್ಟಿತ್ತು>ಬೆಟ್ಟ+ಬೇಸಗೆ=ಬೆಟ್ಟವೇಸಗೆ.
.... ಬೆಟ್ಟವೇ
ಸಗೆಯ ಬಿಸಿಲ್ಗೆ ತೀಡಿದುದು ತಣ್ಣನೆ ಪಣ್ಣನೆ ಪಶ್ಚಿಮಾನಿಲಂ ।
ಮಧ್ಯಪದ ಲೋಪಕ್ಕೆ : ಅಲರ್+ಅಂತಪ್ಪ+ಕಣ್=ಅಲರ್ಗಣ್.

೧೯೦

ಮುಂದಣ ಪದಂ ವಿಶೇಷ್ಯದೊ
ಳೊಂದಿರೆ ಪಿಂದಿರ್ದ ಪದದುಪಾಂತ್ಯಸ್ವರದಿಂ
ಸಂದಿಪುದು ಲೋಪಮಾದಿಯೊ
ಳೊಂದಿದಿಕಾರಕ್ಕೆಕಾರವಿಧಿ ಬಹುಳತೆಯಿಂ

ಪರಪದ ವಿಶೇಷ್ಯವಾಗಿದ್ದರೆ ಪೂರ್ವಪದದ ಉ ಪಾಂತ್ಯಸ್ವರಸಹಿತವಾಗಿ ಮುಂದಿನ ಭಾಗಕ್ಕೆ ಲೋಪವುಂಟಾಗುತ್ತದೆ. (ಆಗ)ಪೂರ್ವಪದದ ಆದಿಯ ಇಕಾರಕ್ಕೆ ವಿಕಲ್ಪದಿಂದ ಏಕಾರ ಬರುತ್ತದೆ.

ಉಪಾಂತ್ಯ ಸ್ವರಲೋಪಕ್ಕೆ : ತೆಳ್ಪಿತು+ಬಸಿಱ್ =ತೆಳ್ಪಸಿಱ್.
ಆದಿಯ ಎತ್ವಕ್ಕೆ : ಪಿರಿದು+ಮರಂ=ಪೆರ್ಮರಂ.
ವಿಕಲ್ಪಕ್ಕೆ : ಇನಿದು+ಮಾವು=ಇಮ್ಮಾವು.

೧೯೧

ಅಗುರುಪದಾದಿಗೆ ದೀರ್ಘಂ
ನೆಗೞ್ಗುಂ ಮತ್ತಲ್ಲಿ ಬಂದು ಣಟಳನತಂಗಳ್
ಪುಗೆ ಪೆಱತೇಂ ದ್ವಿರ್ಭಾವಂ
ನೆಗೞ್ಗುಂ ಸ್ವರಮಿದಿರೊಳೊದವೆ ಬಹುಳತೆಯಿಂದಂ

ಸ್ವರ ಪರದಲ್ಲಿದ್ದರೆ (ಪೂರ್ವ)ಪದದ ಆದಿಹ್ರಸ್ವಕ್ಕೆ ವಿಕಲ್ಪದಿಂದ ದೀರ್ಘವುಂಟಾಗುತ್ತದೆ. ಅಲ್ಲಿ(ಪೂರ್ವಪದದ ಅಂತ್ಯಕ್ಕೆ) ಣ, ಟ, ಳ, ನ, ತಕಾರಗಳು ಬಂದಿರಲು (ಅವುಗಳಿಗೆ) ದ್ವಿತ್ವವುಂಟಾಗುತ್ತದೆ.

ದೀರ್ಘಕ್ಕೆ : ಪಿರಿದು>ಪೇರ್+ಆನೆ=ಪೇರಾನೆ.
ವಿಕಲ್ಪಕ್ಕೆ* : ಇನಿದು>ಈಂ+ಕಡಲ್=ಈಂಗಡಲ್.
ಈಂಗಡಲೊಳ್ಪುವೆತ್ತ ಪಸೆ ಕನ್ನಡಿ ಚಂದ್ರಮಂ....
ಣಕಾರದ್ವಿತ್ವಕ್ಕೆ : ಪೆಣ್+ಉಡೆ=ಪೆಣ್ಣುಡೆ
ಟಕಾರದ್ವಿತ್ವಕ್ಕೆ : ಕಡಿದು>ಕಟ್+ಆಯಂ=ಕಟ್ಟಾಯಂ.
ಳಕಾರದ್ವಿತ್ವಕ್ಕೆ : ಒಳ್ಳಿತು>ಒಳ್+ಆಳ್=ಒಳ್ಳಾಳ್.
ಒಳ್ಳಾಳೆಡೆಗೋದನೊದಱಿ ಚಟ್ಟನೊಳೊವಜಂ
ನಕಾರದ್ವಿತ್ವಕ್ಕೆ : ಇನಿದು>ಇನ್+ಉಣಿಸು=ಇನ್ನುಣಿಸು.
ತಕಾರದ್ವಿತ್ವಕ್ಕೆ : ಕಿರಿದು>ಕಿತ್+ಈಳೆ=ಕಿತ್ತೀಳೆ.

---

* ವಿಚಾರ : ಇಲ್ಲಿ ವಿಕಲ್ಪವೆಂದರೆ ಉತ್ತರಪದಾದಿಯು ವ್ಯಂಜನವೂ ಆಗಿರಬಹುದೆಂದರ್ಥ.

೧೯೨

ಕಡಿದು ನಿಡಿದೆಂಬ ನಡುವೆಂ

ಬ ಡಕಾರಂ ಟತ್ವಮಾಯ್ತು ಕಿಱಿದರ್ಕೆ ಕುಱಿಂ

ಬೆಡೆಯಲ್ಲಿ ತಕಾರಂ ಸ್ವರ

ಮಡಸೆ ಪರಕ್ಕುತ್ವಮಸ್ವರಂ ನಿಲೆ ಪರದೊಳ್

ಸ್ವರ ಪರದಲ್ಲಿರಲು ಕಡಿದು, ನಿಡಿದು, ನಡು ಎಂಬುವುಗಳ ಡಕಾರ ಟಕಾರವಾಗುತ್ತದೆ. ಕಿಱಿದು ಪದ(ಕ್ಕೆ ಆದೇಶವಾ)ದ ಕುಱ್ ಎಂಬುದರ (ಕೊನೆಯ)ಲ್ಲಿ ತಕಾರಾದೇಶವಾಗುತ್ತದೆ. ವ್ಯಂಜನ ಪರದಲ್ಲಿರಲು (ಪೂರ್ವಪದದ ಅಂತ್ಯಾಕ್ಷರಕ್ಕೆ) ಉಕಾರ ಬರುತ್ತದೆ.

ಟಕಾರಕ್ಕೆ : ಕಡಿದು>ಕಟ್+ಆಳ್=ಕಟ್ಟಾಳ್
ನಿಡಿದು>ನಿಟ್+ಅಡಕಿಲ್=ನಿಟ್ಟಡಕಿಲ್
ನಡು>ನಟ್+ಅಡವಿ=ನಟ್ಟಡವಿ.
ತಕಾರಕ್ಕೆ : ಕಿಱಿದು>ಕುಱ್+ಎಸಳ್=ಕುತ್ತೆಸಳ್
ಉಕಾರಕ್ಕೆ : ಕಡಿದು>ಕಡು+ಗಾಳಿ=ಕಡುಗಾಳಿ
ನಿಡಿದು>ನಿಡು+ತೋಳ್=ನಿಡುದೋಳ್
ನಡು*+ಮಾಳಂ=ನಡುಮಾಳಂ.
ನಡುಮಾಳಂ ಮುಂದೆ ನೀರಿಲ್ಲಣಮೆ ಮಗುಟ್ಟೊಡಂ ಪಿಂದಣೂರ್ಗೆಂಟು
ಕಿಱಿದು>ಕಿಱು+ನಾಯ್=ಕಿಱುನಾಯ್.
ಪೆರ್ವಲೆ ಬಡಿಕೋಲ್ ಕಿಱುನಾಯ್....
ಕಿಱಿದು>ಕುಱು+ಗಿಡ=ಕುಱುಗಿಡ.

೧೯೩

ಜನಿಯಿಸುಗುಂ ಪಚ್ಚನೆ ಕೆ

ಚ್ಚನೆ ಬೆಚ್ಚನೆಗಳ ಚಕಾರದೊಳ್ಮತ್ವಂ, ಕೆ

ಚ್ಚನೆಯಾದಿಗೆ ಚತ್ವಂ, ಮೇ

ಣನಿತಱ ಮತ್ವಂ ಸುಕಾರಮೆತ್ವಕ್ಕಿತ್ವಂ

(ವ್ಯಂಜನ ಪರದಲ್ಲಿರಲು) ಪಚ್ಚನೆ, ಕೆಚ್ಚನೆ, ಬೆಚ್ಚನೆಗಳ ಚಕಾರಕ್ಕೆ ಮಕಾರವುಂಟಾಗುತ್ತದೆ. ಕೆಚ್ಚನೆ ಪದದ ಆದಿಗೆ ಚಕಾರವುಂಟಾದುತ್ತದೆ. ಈ ಎಲ್ಲ ಶಬ್ದಗಳ (ಅಂತ್ಯದ) ಮಕಾರ ಸುಕಾರವಾಗಿ (ಆದಿಯ) ಎಕಾರಕ್ಕೆ ಇಕಾರ ಬರುತ್ತದೆ.

ಮಕಾರಕ್ಕೆ : ಪಚ್ಚನೆ>ಪಮ್+ತಳಿರ್=ಪಂದಳಿರ್.
ಪಂದಳಿರ ತೋರಣಂ ತ
ಳ್ತೊಂದಿದ ಕೆಂಗುಡಿಯ................
ಕೆಚ್ಚನೆ>ಕೆಮ್+ಬಟ್ಟೆ=ಕೆಂಬಟ್ಟೆ.

....ಕೆಂ

* ವಿಚಾರ : ಸಹಜ ಉಕಾರಾಂತವಾದ ನಡು ಎಂಬ ಪದವನ್ನು ಇಲ್ಲಿ ಹೇಳುವ ಅಗತ್ಯವಿರಲಿಲ್ಲ.

ಬಟ್ಟೆಯ ತಲೆಕಟ್ಟು ಪಾಱುವುರುವುರುಳಿಗಳಂ
ಬೆಚ್ಚನೆ>ಬೆಮ್+ನೀರ್=ಬೆನ್ನೀರ್.
ಎನಿತುಂ ಕಾಯ್ದುಂ ಬೆನ್ನೀಱ್
ಮನೆ ಸುಡದೆಂಬಂತೆ ನಿನಗವರ್ ನಿಲೆ ಕಾಯ್ದುಂ
ಮನದೊಳ್ ಪೊಲ್ಲದನೆಂದುಂ
ನೆನೆಯರದಂ ನಂಬು ಕುರುಕುಲಾನ್ವಯಭಾನೂ

ಚಕಾರಕ್ಕೆ : ಕೆಚ್ಚನೆ>ಚೆಮ್+ನೆಯ್ದಿಲ್=ಚೆನ್ನೆಯ್ದಿಲ್
ಆಲರ್ದಂಭೋರುಹಷಂಡಮುಳ್ಳಲರ್ದ ಚೆನ್ನೆಯ್ದಿಲ್ಗೊಳಂ......

ಆದಿ ಇಕಾರ ಅಂತ್ಯ ಸುಕಾರಕ್ಕೆ : ಕೆಚ್ಚನೆ>ಕಿಸು+ಸಂಜೆ=ಕಿಸುಸಂಜೆ.
ಪೋಲ್ತಂ ಕಿಸುಸಂಜೆ ಕವಿದ ನೀಲಾಚಲಮಂ.
ಬೆಚ್ಚನೆ>ಬಿಸು+ನೆತ್ತರ್=ಬಿಸುನೆತ್ತರ್.
ಬಿಸುನೆತ್ತರ ಧಾರೆಗೆ ಬಾಯನೊಡ್ಡಿ ಮೆಯ್ಮೆಣದೆ
ಪಚ್ಚನೆ>ಪಸು+ಗಱಿ=ಪಸುಂಗಱಿ.
ಇಲ್ಲಿ ಸುಕಾರವುಂಟಾಗಿಯೂ ಆದಿಯಲ್ಲಿ ಅಕಾರವಿರುವುದರಿಂದ
ಇಕಾರವಾಗಿಲ್ಲ.

೧೯೪

ಪದದ ಕಡೆಯಣ ಡಕಾರ
ಕ್ಕುದಯಿಪುದು ಟಕಾರಮಾ ಱಕಾರಕ್ಕೊದವಿ
ಪುರ್ದು ರೇಫಂ ವ್ಯಂಜನಪದ
ಮಿದಿರೊಳ್ ಸಂದಿಸೆ, ಸಮಾಸದೊಳ್ ಬಹುಳತೆಯಿಂ

ಸಮಾಸದಲ್ಲಿ, ವಿಕಲ್ಪವಾಗಿ (ಅಸಮಾಸದಲ್ಲಿ), ವ್ಯಂಜನಾದಿಪದ ಪರದಲ್ಲಿದ್ದರೆ (ಪೂರ್ವ) ಪದದ ಕಡೆಯ ಡಕಾರಕ್ಕೆ ಟಕಾರ ಹುಟ್ಟುತ್ತದೆ. ಱಕಾರಕ್ಕೆ ರೇಫೆಯುಂಟಾಗುತ್ತದೆ.

ಸಮಾಸದಲ್ಲಿ ಟಕಾರಕ್ಕೆ : ಎರಡು>ಎರಟ್+ಮಾತು=ಎರಟ್ಮಾತು.
ಎರಟ್ಮಾತಾಡಿ ಬಟ್ಟಿಂ ಜಗ
ದ್ವಳಯಕ್ಕೊರ್ನುಡಿಕಾಱನಾದನ್....

ಸಮಾಸದಲ್ಲಿ ರೇಫಕ್ಕೆ : ಐಱ್>ಐರ್+ಪೆತ್ತರ್=ಐರ್ಪೆತ್ತರ್.
....ಐರ್ಪೆತ್ತರೇರ್ಪೆತ್ತರಂ
ಪದುಳಂ ಮಾಟ್ಪುದು ಚಿತ್ರಮೆಂದು........

ಅಸಮಾಸದಲ್ಲಿ ಟಕಾರಕ್ಕೆ : ಬೆಗಡು>ಬೆಗಟ್+ಪ=ಬೆಗಟ್ಪ.
ನಿನ್ನ ಬೆಗಟ್ಪ ಭಂಗಿ ಕರಮುಕ್ಕೆವಮಾಗಿ ಮನಕ್ಕೆ ತೋಱುಗುಂ

ಅಸಮಾಸದಲ್ಲಿ ರೇಫಕ್ಕೆ : ನೇಸಱ್ +ಮೂಡಿದುದು=ನೇಸರ್ಮೂಡಿದುದು.
....ನೇಸ
ರ್ಮೂಡಿದುದು ಬಕಂಗೆ ಮಿಟ್ಟು ಮೂಡುವ ತೆಱದಿಂ

೧೯೫

ಕಿಱಿದರ್ಕಾದೇಶಂ ಕುಱು,
ಬಿಱುವೆಂಬಿದು ಬೆಟ್ಟಿತರ್ಕೆ, ಕೊಂಕಿಂಗೆ ಕುಡೆಂ
ದಱಿ, ರೇಫೆ ತಳ್ತ ವರ್ಣ
ಕ್ಕೆಱಗಿರ್ಕುಂ ದ್ವಿತ್ವವೃತ್ತಿಯಸಮಾಸದೊಳಂ

ಕಿಱಿದು ಪದಕ್ಕೆ ಕುಱು, ಬೆಟ್ಟಿತು ಪದಕ್ಕೆ ಬಿಱು, ಕೊಂಕು ಪದಕ್ಕೆ ಕುಡು ಎಂದು ಆದೇಶವುಂಟಾಗುತ್ತದೆ. ರೇಫಯುಕ್ತವಾದ ಅಕ್ಷರಕ್ಕೆ (ಸಮಾಸದಲ್ಲಿ ಮತ್ತು) ಅಸಮಾಸದಲ್ಲಿ ದ್ವಿತ್ವವುಂಟಾಗುತ್ತದೆ.

ಕುಱು ಎಂಬುದಕ್ಕೆ : ಕಿಱಿದು>ಕುಱು+ಕಯ್=ಕುರುಗಯ್.
ಅಚ್ಚಡಕಿಲ್ ಕುಱುಗಯ್ ಮಡಂ ಮೊಗಂ
ಬಿಱು ಎಂಬುದಕ್ಕೆ : ಬೆಟ್ಟಿತು>ಬಿಱು+ಗಾಳಿ=ಬಿಱುಗಾಳಿ.
....ಬೀ।
ಸುವ ಬಿಱುಗಾಳಿ ಕೊಳ್ವ ಮಟೆ ಪೊಯ್ವ ಸಿಡಿಲ್ ಛಿಳಿಲೆಂಬ ಮಿಂಚು.
ಕುಡು ಎಂಬುದಕ್ಕೆ : ಕೊಂಕು>ಕುಡು+ಮಿಂಚು=ಕುಡುಮಿಂಚು.
ಕುಡುಮಿಂಚಂ ಮಸೆದನ್ನರಪ್ಪ ಪಲರೊಳ್ವೆಂಡಿರ್.
ಸಮಾಸದಲ್ಲಿ ರೇಫಯುಕ್ತಾಕ್ಷರ ದ್ವಿತ್ವಕ್ಕೆ : ಕಾರ್ಗ್ಗಾಲ್.
ಕಾರ್ಗ್ಗಾಲದ ಮಿಂಚಿನಂತೆ ಪೊಳೆದುವು ಬಾಳ್ಗಳ್.
ಅಸಮಾಸದಲ್ಲಿ ರೇಫಯುಕ್ತಾಕ್ಷರ ದ್ವಿತ್ವಕ್ಕೆ: ನೀರ್ತ್ತಳಿದುದು.
ಬೆಳಗಿದುವೆಂಟುಂ ದೆಸೆ ನೀ
ರ್ತ್ತಳಿದುದು.

೧೯೬

ಇತರೇತರಕ್ರಿಯಾಸಂ
ಹತಮದು ತಾನಾವುದಲ್ಲಿ ಮತ್ತೆ ಬಹುವ್ರೀ
ಹಿ ತಗಳ್ಗುಮಾತ್ವವಿಧಿ ಸಂ
ಗತಮಾದಿಪದಾಂತ್ಯದಲ್ಲಿ ಚರಮಕ್ಕಿತ್ವಂ

ಪರಸ್ಪರ ಕ್ರಿಯೆಗಳಿಂದ ಮಾಡುವ ಯುದ್ಧದ ವಿಷಯದಲ್ಲಿ ಬಹುವ್ರೀಹಿ ಬರುತ್ತದೆ. (ಅದರ) ಮೊದಲ ಪದದ ಕೊನೆಗೆ ಆತ್ವ, ಪರಪದದ ಕೊನೆಗೆ ಇತ್ವ ತಲೆದೋರುತ್ತವೆ.

ಖಡ್ಗದಿಂ ಖಡ್ಗದಿಂ ಮಾಡುವ ಯುದ್ಧಂ =ಖಡ್ಗಾಖಡ್ಗಿ
ಮುಷ್ಟಿಯಿಂ ಮುಷ್ಟಿಯಿಂ ಮೈಯೊಡ್ಡಿ ಮಾಡುವ ಯುದ್ಧಂ =ಮುಷ್ಟಾಮುಷ್ಟಿ

೧೯೭

ಅಡಸುವುದು ಬಹುವ್ರೀಹಿಯ
ಕಡೆಗತ್ವಂ ಬಹುಳಮಗ್ರಮಿಲ್ಲೆಂದಿರೆ ತಾಂ
ಕಡೆಗಕ್ಕುಂ ಲಿತ್ವಂ, ಕೊ
ಲ್ವೆಡೆಯೊಳ್ ಕುಲಿಯೆಂಬುದಕ್ಕುಮಂತ್ಯಾದೇಶಂ

ಬಹುವ್ರೀಹಿಯ ಅಂತ್ಯಕ್ಕೆ ವಿಕಲ್ಪದಿಂದ ಅತ್ವ ಬರುತ್ತದೆ. ಪರದಲ್ಲಿ ಇಲ್ ಪದವಿದ್ದರೆ ಲಿತ್ವವಾಗುತ್ತದೆ. ಕೊಲ್ ಪದವಿದ್ದರೆ ಕುಲಿ ಎಂಬ ಆದೇಶವಾಗುತ್ತದೆ.

ಅಕಾರಕ್ಕೆ : ಕುಡುವಿಲ್+ಅ+ಅಂ=ಕುಡುವಿಲ್ಲಂ.

ಕುಡುವಿಲ್ಲನೆಚ್ಚ ಕೋಲುಂ
ನಡದು ದಲಂದೊರ್ವನೆರ್ದೆಯನೊಳ್ಗಬ್ಬಮುಮೊ
ಳ್ನುಡಿಯುಂ ಗೇಯಮುಮುರ್ಚದ
ಕಡುಗಲ್ಲೆರ್ದೆಯೆರ್ದೆಯನಂಬು ಮೇಣುರ್ಚುಗುಮೇ ||

ವಿಕಲ್ಪಕ್ಕೆ : ನಿಡುಮೂಗು+ಇ=ನಿಡುಮೂಗಿ

ಲಿಕಾರಕ್ಕೆ : ಪಲ್+ಇಲ್>ಇಲಿ=ಪಲ್ಲಿಲಿ.

ಸೊಗಯಿಸುಗುಮೆ ಪಲ್ಲಿಲಿವಾ
ಯಗಿಲಿಲಿ ಗಂಧಂ ಸಮಂತು ಕೂರಿಲಿ ಕುಡುಗೋಲ್
ಮಿಗೆ ನಾಣಿಲಿಯೆನಿಸುವ ವಧು
ನಗೆಗೆಡೆಯಕ್ಕುಂ ಸಮಸ್ತ ಜಗತೀತಳದೊಳ್||

ಕುಲಿ ಎಂಬುದಕ್ಕೆ : ಮೀನ್+ಕೊಲ್>ಕುಲಿ=ಮೀಂಗುಲಿ.

೧೯೮

ದೊರೆಕೊಳ್ಳುದಖಿಳವೈಯಾ
ಕರಣರಿನೊಂದೆಂಬುದರ್ಕೊರೆಂಬಾದೇಶಂ,
ಎರಡರ್ಕಮಿರಾದೇಶಂ
ದೊರೆಕೊಳ್ಗುಮದಲ್ಲದಂದುಕಾರಾಭಾವಂ

ಸಮಸ್ತ ವ್ಯಾಕರಣಜ್ಞರಿಂದ ಒಂದು ಎಂಬುದಕ್ಕೆ ಒರ್ ಆದೇಶವಾಗುತ್ತದೆ. ಎರಡು ಎಂಬುದಕ್ಕೆ ಇರ್ ಆದೇಶವಾಗುತ್ತದೆ; ಇಲ್ಲವೆ ಉಕಾರ ಲೋಪವಾಗುತ್ತದೆ.

ಒರ್ ಆದೇಶಕ್ಕೆ : ಒಂದು>ಒರ್+ಪಿಡಿ=ಒರ್ಪಿಡಿ.

ಒರ್ಪಿಡಿಗೂಟುಂ ಸಿಗತನ
ಕರ್ಪಡಮುಂ ರಾಜಸೇವೆಯಿಲ್ಲದೆ ಬಾರಂ....

ಇರ್ ಆದೇಶಕ್ಕೆ : ಎರಡು>ಇರ್+ತಡಿ=ಇರ್ತಡಿ.

ಇರ್ತಡಿಯ ಪೂಮರಂಗಳ
ಪೋರ್ತಂ ಕಪಿಕುಲದೊಳಾದೊಡಲ್ಲೊಕ್ಕಲರಿಂ

ಉಕಾರ ಲೋಪಕ್ಕೆ : ಎರಡು>ಎರಟ್+ಮಾತು=ಎರಟ್ಮಾತು.

....ಎರಟ್ಮಾತಾಗಿ ಬಟ್ಟುಂ ಜಗ
ದ್ವಳಯಕ್ಕೊರ್ನುಡಿಕಾಱನಾದನಯಶಕ್ಕಂಜಿ....

೧೯೯

ಚರಮಕ್ಕದರ್ಶನಂ ಮೂ
ಱಿರೆ, ಬರೆ ಕಪವರ್ಗಮಗ್ರದೊಳ್ ದ್ವಿರ್ಭಾವಂ
ಪಿರಿದುಂ ಹ್ರಸ್ವಂ ಮೊದಲೊಳ್,
ಸ್ವರಮಿದಿರಿರೆ ಮೂಱಱಲ್ಲಿ ಮುಯ್ಯಾದೇಶಂ

(ವ್ಯಂಜನ ಪರವಾದರೆ) ಮೂಱು ಎಂಬ ಪದದ ಕಡೆಯಕ್ಷರಕ್ಕೆ ಲೋಪವುಂಟಾಗುತ್ತದೆ. ಕವರ್ಗ ಪವರ್ಗಗಳು ಪರವಾದರೆ (ಅವುಗಳಿಗೆ) ದ್ವಿತ್ವ ಮತ್ತು (ಪೂರ್ವ ಪದದ ಆದಿಗೆ) ಹ್ರಸ್ವ ಉಂಟಾಗುತ್ತವೆ. ಸ್ವರ ಪರವಾದರೆ ಮೂಱು ಪದಕ್ಕೆ ಮುಯ್ ಆದೇಶವಾಗುತ್ತದೆ.

ಅಂತ್ಯ ಲೋಪಕ್ಕೆ : ಮೂಱು>ಮೂ+ತಲೆ=ಮೂದಲೆ.

....ಚೋ

ಟನ ತಲೆ ನಾಳೆ ಮೂದಲೆಗೆ ಬಾರದೆ ಮಾಣ್ಬುದೆ ದೇವ.

ಹ್ರಸ್ವ ದ್ವಿತ್ವಗಳಿಗೆ : ಮೂಱು>ಮೂ+ಕೊಡೆ =ಮುಕ್ಕೊಡೆ.

ಮುಕ್ಕೊಡೆ ಪುಷ್ಪವೃಷ್ಟಿ ಸುರದುಂದುಭಿ....

ಮುಯ್ ಎಂಬುದಕ್ಕೆ: ಮೂಱು>ಮುಯ್+ಏೞ್=ಮುಯ್ಯೇೞ್

ಚಲದಿಂ ಮುಯ್ಯೇೞು ಸೂೞ್ ಕ್ಷತ್ರಿಯರನಱಿಸಿ ಕೊಂದಿ-

ಕ್ಕಿದಾ ಜಾಮದಗ್ನ್ಯಂ.

೨೦೦

ಅಕ್ಕುಂ ಲೋಪಂ ನಾಲ್ಕ
ಯ್ದಿರ್ಕಂತ್ಯಕ್ಕಾಱಱಾದಿಯೊಳ್ ಹ್ರಸ್ವಂ, ತಾ
ನಕ್ಕುಮದೇೞರ್ಕೇೞಿಂ
ದಕ್ಕುಂ, ಚರಮಕ್ಕೆ ಲೋಪಮೆಂಟರ್ಕಕ್ಕುಂ

ನಾಲ್ಕು ಅಯ್ದುಗಳ ಅಂತ್ಯಕ್ಕೆ ಲೋಪವುಂಟಾಗುತ್ತದೆ. ಆಱರ ಆದಿಗೆ ಹ್ರಸ್ವವುಂಟಾಗುತ್ತದೆ. ಏೞಕ್ಕೆ ಏೞ್ ಎಂದಾಗುತ್ತದೆ. ಎಂಟರ ಅಂತ್ಯಕ್ಕೆ ಲೋಪುವುಂಟಾಗುತ್ತದೆ.

ನಾಲ್ಕಕ್ಕೆ : ನಾಲ್ಕು>ನಾಲ್+ಬೆರಲ್=ನಾಲ್ವೆರಲ್.

ಉರಗಂ ಕೊಂಡಲ್ಲಿಗೆ ನಾ

ಲ್ವೆರಲನಿತಂ ಕಳೆದು ಕಟ್ಟೆ....

ಅಯ್ದಕ್ಕೆ : ಅಯ್ದು>ಅಯ್+ಬಾಯ್=ಅಯ್ವಾಯ್.

....ಉರಗಶಯ್ಯೆಯ

ನೇಱಿದನಯ್ವಾಯ ಶಂಖಮಂ ಪೂರಿಸಿದಂ

ಆಱಕ್ಕೆ : ಆಱು>ಅಱು+ತಿಂಗಳ್=ಅಱುದಿಂಗಳ್.

ಅಱುದಿಂಗಳಾಯುವುಂಟೆನೆ

ಮಱುಗುವುದಂ ನಲ್ಲರಲ್ಲಿ....

ಏೞಕ್ಕೆ : ಏೞು>ಏೞ್+ಪೊರೆ=ಏೞ್ಪೊರೆ.

ಕರಗುಗುಮೇೞ್ಪೊರೆಯೆನಿಪ್ಪ ಕುರುವುಂ ಬೇಗಂ

ಎಂಟಕ್ಕೆ : ಎಂಟು>ಎಣ್+ದೆಸೆ=ಎಣ್ದೆಸೆ.

ನಿಜಸೈನ್ಯಭಾರದಿಂದೆಣ್ದೆಸೆಯಾನೆಗಳ್ ಕುಸಿದು ಕುರ್ಗಿದುವು.

೨೦೧

ಪತ್ತು ಪರಮಾಗಲೊಡಮೊಂ
ಬತ್ತು ತೊಮೆಂದಕ್ಕುಮಗ್ರದೊಳ್ ನೂಱಿರೆ ಮೇಣ್
ಮತ್ತಂ ಸಾಸಿರಮಿರೆ ನೆಲ
ಸಿತ್ತೊಂಬಯ್ಯೆಂದು ವಿಬುಧರಿಂದಾದೇಶಂ

ಪತ್ತು ಪರವಾಗಲು, ಒಂಬತ್ತು ತೊಮ್ ಎಂದಾಗುತ್ತದೆ; ನೂಱು ಮತ್ತು ಸಾಸಿರ ಪರವಾಗಲು, ಒಂಬಯ್ ಎಂದು ಆದೇಶವಾಗುತ್ತದೆ.

ತೊಮ್ ಮತ್ತು ಒಂಬಯ್ ಆದೇಶಕ್ಕೆ :

ಒಂಬತ್ತು>ತೊಮ್+ಪತ್ತು=ತೊಂಬತ್ತು
ಒಂಬತ್ತು>ಒಂಬಯ್+ನೂಱು=ಒಂಬಯ್ನೂಱು
ಒಂಬತ್ತು>ಒಂಬಯ್+ಸಾಸಿರಂ=ಒಂಬಯ್ಸಾಸಿರಂ.

....ತೊಂಬತ್ತೊಂಬ
ಯ್ಸಾಸಿರಯೋಜನಮಂ ನೆಗೆ
ದಾ ಸುರಗಿರಿ....

೨೦೨

ಪತ್ತರ್ಕೆ ಪಯಿನ್ನೆಂದಾ
ದತ್ತಾದೇಶಂ, ಸಮಂತು ಸಾಸಿರಮಿದಿರೊಳ್
ಪತ್ತುಗೆಗೊಳೆ ನೂಱರ್ಕಂ
ಮತ್ತಂ ಸಾಸಿರಕಮಂತ್ಯಲೋಪಂ ವಿರಳಂ

ಸಾಸಿರಂ ಪರದಲ್ಲಿದ್ದರೆ ಪತ್ತಕ್ಕೆ ಪಯಿನ್ ಎಂಬ ಆದೇಶವಾಗುತ್ತದೆ. (ಸ್ವರ ವ್ಯಂಜನಗಳು ಪರವಾದೊಡೆ) ನೂಱು ಮತ್ತು ಸಾಸಿರ ಎಂಬಿವುಗಳ ಅಂತ್ಯಸ್ವರ ಕೆಲವೆಡೆ ಲೋಪವಾಗುತ್ತದೆ.

ಪಯಿನ್ ಆದೇಶಕ್ಕೆ : ಪತ್ತು>ಪಯಿನ್+ಸಾಸಿರಂ =ಪಯಿಂಛಾಸಿರಂ.

ಪಡಲಿಟ್ಟಂತಿರೆ ಮಾಟಿಪ್ಪಿನೋವದೆ ಪಯಿಂಛಾಸಿರ್ವರಂ ಯುದ್ಧದೊಳ್

ಅಂತ್ಯಸ್ವರಲೋಪಕ್ಕೆ : ನೂಱು>ನೂಱ್+ಮಡಿ=ನೂರ್ಮಡಿ
ಸಾಸಿರ>ಸಾಸಿರ್+ಅರ್=ಸಾಸಿರ್ವರ್
ಸಾಸಿರ್ವರ್ ವನಿತೆಯರ
ಯ್ಸಾಸಿರ್ವರ್ ಪ್ರಿಯತನೂಜರಱಿಕೆಯ ಪದಿನೆ
ಣ್ಛಾಸಿರ್ವರರಸುಗಳ್....

೨೦೩

ಪತ್ತರ್ಕೆ ಪನ್ನೆನಿಕ್ಕುಮ
ದುತ್ತರಕೊಂದೆರಡು ನೆಲಸೆ, ಪದಿಯೆಂದಕ್ಕುಂ
ಮತ್ತೊದವಿ ಮೂಱು ನಾಲ್ಕಿರೆ,
ಸುತ್ತೇಂ ಸ್ವರಮಿರೆ ನಕಾರವಿಧಿ ಮುಂದೆಲ್ಲಂ

ಪತ್ತು ಎಂಬುದಕ್ಕೆ ಪರದಲ್ಲಿ ಒಂದು ಎರಡು ಇರಲು ಪನ್ ಎಂದಾಗುತ್ತದೆ; ಮೂಱು ನಾಲ್ಕು ಇರಲು ಪದಿಯೆಂದಾಗುತ್ತದೆ; ಸ್ವರವಿರಲು (ಪದಿ ಎಂಬುದರ ಮೇಲೆ) ನಕಾರಾಗಮವಾಗುತ್ತದೆ.

ಪನ್ ಎಂಬುದಕ್ಕೆ : ಪತ್ತು>ಪನ್+ಎರಡು=ಪನ್ನೆರಡು.

ಸಾರಲ್ ಸಲ್ಲದು ಪನ್ನೆರಟ್ಬರಿಸಮಂ ನಾಡಂತಡಂಗಿರ್ಪುದು....

ಪದಿಯೆಂಬುದಕ್ಕೆ : ಪತ್ತು>ಪದಿ+ಮೂಱು=ಪದಿಮೂಱು

ಪತ್ತು>ಪದಿ+ನಾಲ್ಕು=ಪದಿನಾಲ್ಕು.

....ಬಾಯಂ

ತೆಱೆದೊಡೆ ಪದಿನಾಲ್ಕು ಲೋಕಮಿರ್ದುವು ಬಸಿಱೊಳ್ ||

ನಕಾರಾಗಮಕ್ಕೆ : ಪತ್ತು>ಪದಿ+ನ್+ಐದು=ಪದಿನೈದು.

ಇದೇ ರೀತಿ ಪದಿನಾರು, ಪದಿನೇೞು, ಪದಿನೆಂಟು.

ಪದಿನೆಂಟು ಸ್ಥಲವರ್ಣನ

ಮಿದರ್ಕೆ ಮೆಯ್ಯುಚ್ಚಮೆನಿಸಿ ಪೇೞ್ವೆಂ ||

೨೦೪

ಅತಿಶಯತರಾರ್ಥ ವೀಪ್ಸಾ
ನ್ವಿತ ನಾಂತಾವ್ಯಯಪದಕ್ಕಮನುಕೃತಿಪದಕಂ
ಕೃತಮಂತ್ಯಲೋಪಮಿತರಾ
ಗತಮತ್ವಂ ನಡುವಿನಂತೆ ಕಡೆಗಂ ಟತ್ವಂ

ಅತಿಶಯಾರ್ಥದ ವೀಪ್ಸೆಯಿಂದ ಕೂಡಿದ ನಕಾರಾಂತ ಅವ್ಯಯಪದಕ್ಕೆ, (ನಕಾರಾಂತ) ಅನುಕೃತಿಪದಕ್ಕೆ ಅಂತ್ಯಲೋಪವುಂಟಾಗುತ್ತದೆ. ಮಿಕ್ಕೆಡೆಗೆ ಅಕಾರಾಗಮವಾಗುತ್ತದೆ; (ಆಗ) ನಡು ಶಬ್ದದಲ್ಲಾಗುವಂತೆ ಕಡೆ ಶಬ್ದದಲ್ಲಿಯೂ (ಡಕಾರಕ್ಕೆ) ಟಕಾರವಾಗುತ್ತದೆ.

ಅವ್ಯಯಪದಾಂತ್ಯ ಲೋಪಕ್ಕೆ : ಸಪ್ಪನೆ +ಸಪ್ಪನೆ-ಸಪ್ಪಸಪ್ಪನೆ.

ಸಪ್ಪಸಪ್ಪನೆ ರಸಂ...

ಅನುಕರಣಪದಾಂತ್ಯ ಲೋಪಕ್ಕೆ : ಚಳನೆ+ಚಳನೆ=ಚಳಚಳನೆ.

....ಚ

ಳಚಳನೆ ಮಿಂಚಿತ್ತು ಸಿಡಿಲ ಕೈದೀವಿಗೆವೊಲ್ ||

ಅತ್ವಯುಕ್ತ ಟಕಾರಕ್ಕೆ : ನಡು+ನಡು=ನಟ್ಟನಡು, ಕಡೆ+ಕಡೆ=ಕಟ್ಟಕಡೆ.

ಕಟ್ಟಕಡೆ ಪೆರ್ವಟ್ಟೆ ಕರಂ ಗೆಂಟು....

೨೦೫

ತುದಿ ಮೊದಲೆಂಬ ದಕಾರ
ಕ್ಕುದಯಿಸುಗುಂ ದ್ವಿತ್ವವೃತ್ತಿಯಿಂದೆ ತಕಾರಂ,
ಮೊದಲೆಂಬ ಲಕಾರಕ್ಕ
ಪ್ಪುದದರ್ಶನವಿಧಿ ವಿಶೇಷಮುಂ ನುಡಿವೆಡೆಯೊಳ್

ವಿಶೇಷವನ್ನು ಹೇಳುವಲ್ಲಿ ತುದಿ ಮೊದಲ್‌ಗಳ ದಕಾರಕ್ಕೆ ದ್ವಿತ್ವರೂಪದ ತಕಾರ ಹುಟ್ಟುತ್ತದೆ. ಮೊದಲ್ ಎಂಬುದರ ಲಕಾರಕ್ಕೆ ಲೋಪವುಂಟಾಗುತ್ತದೆ.

ತುದಿ+ತುದಿ =ತುತ್ತತುದಿ, ಮೊದಲ್+ಮೊದಲ್ =ಮೊತ್ತಮೊದಲ್.

೨೦೬

ದೂರಾಭೀಕ್ಷ್ಣವೀಪ್ಸೋ
ದಾರಾನುಕೃತಿ ಕ್ರಿಯಾಸಮಭಿಹಾರ ಸಮೀ
ಪೋರುತರಚಾಪಲಾದಿಗೆ
ಸಾರಂ ಬುಧರಿಂ ಪದಕ್ಕೆ ಯುಗಲೋಚ್ಚರಣಂ

ದೂರ, ಅಭೀಕ್ಷ್ಣ, ವೀಪ್ಸೆ, ಅನುಕೃತಿ, ಕ್ರಿಯಾಸಮಭಿಹಾರ, ಸಮೀಪ, ಚಪಲತೆ, ಮೊದಲಾದವುಗಳಲ್ಲಿ ವಿದ್ವಾಂಸರ ಮತದಂತೆ ಪದವೊಂದನ್ನು ಎರಡು ವೇಳೆ ಉಚ್ಚರಿಸುವುದು ಲೇಸು.

ದೂರಕ್ಕೆ : ತೋರ್ಪುದು ತೋರ್ಪುದು.
ಆ ತೋರ್ಪುದಾತೋರ್ಪುದೆ ಬಾನೊಳ್ ಧ್ವಜಪಟಂ....
ಅಭಿಕ್ಷ್ಣಕ್ಕೆ : ಓದಿ ಓದಿ.
ಗಿಳಿಯೊಡನೋದಿಯೋದಿ ನುಡಿಗಲ್ತು ಮದಾಲಸರಾಜಹಂಸಮಂ
ಡಳಿಯೊಡನಾಡಿಯಾಡಿ ನಡೆಗಲ್ತು....
ವೀಪ್ಸೆಗೆ : ಊರೂರೊಳ್.
ಊರೂರೊಳ್ ಕೇರಿಕೇರಿಯೊಳ್ ಮನೆ ಮನೆಯೊಳ್
ಅನುಕೃತಿಗೆ : ಭೋರ್ಭೋರೆನೆ.
....ಭೋರ್ಭೋ
ರೆನೆ ಪಾಯ್ವುದು ಹಿಮನಗಕ್ಕೆ ಗಂಗಾಸ್ರೋತಂ
ಕ್ರಿಯಾಸಮಭಿಹಾರಕ್ಕೆ : ಇದಿರ್ಚಿದಿರ್ಚು.
ಇದಿರ್ಚಿದಿರ್ಚೆನೆ ಜಟಾಯು ರಾವಣನೆಂಗುಂ
ಸಮೀಪಕ್ಕೆ : ಇದೆ ಇದೆ.
ಇದೆ ಇದೆ ಸಾರ್ಕೆ ಸಾರ್ಕೆ ಗಣಕಾವಳಿ ಪೇೞ್ದ ಮಹೂರ್ತಂ....
ಚಪಳತೆಗೆ : ಒಪ್ಪಿಸೊಪ್ಪಿಸು.

೨೦೭

ಕವಿಮಾರ್ಗಗತ ಸಮಾಸಮ
ನವನೆನ್ನಱಿವನಿತನೆಯ್ದೆ ಪೇೞ್ದೆಂ ಲೋಕ
ವ್ಯವಹಾರದಿಂದಮಿನ್ನುೞಿ
ದುವನಱಿವುದು ಶಬ್ದಪಾರಮಾರ್ಗಮಶಕ್ಯಂ

ಕವಿಮಾರ್ಗದಲ್ಲಿ ಪ್ರಯೋಗವಾದ ಸಮಾಸಗಳನ್ನು ನನಗೆ ತಿಳಿದಷ್ಟು ಹೇಳಿದ್ದೇನೆ, ಮಿಕ್ಕವುಗಳನ್ನು ಲೋಕವ್ಯವಹಾರದಿಂದ ತಿಳಿದುಕೊಳ್ಳಬೇಕು. ಶಬ್ದಗಳ ಕೊನೆ (ಮುಟ್ಟುವುದು) ಯಾರಿಗೂ ಶಕ್ಯವಿಲ್ಲ.

❖❖

ತದ್ಧಿತ ಪ್ರಕರಣ

ತದ್ಧಿತನಾಮು

೨೦೮

ಪರಿನಿರ್ಮಿಪ ಮಾಱಾಡುವ
ದೊರೆವಡೆದ ನಿಯೋಗದನೃತದಜೀತದ ಋಣದಾ
ಚರಣದ ಶಿಲ್ಪದ ಮೂಲದ
ನರನಂ ಪೇೞ್ವಲ್ಲಿ ಮಾೞ್ಕೆಗಪ್ರತ್ಯಯಮಂ

ಮಾಡುವ, ಮಾಱುವ, ನಿಯೋಗದ, ಅನೃತದ, ಅಜೀತದ, ಋಣದ,ಆಚರಣದ, ಶಿಲ್ಪದ, ಮೂಲದ ವ್ಯಕ್ತಿಗಳನ್ನು ಸೂಚಿಸುವಲ್ಲಿ ಇಗ ಎಂಬ (ತದ್ಧಿತ)ಪ್ರತ್ಯಯವನ್ನು ಹಚ್ಚಬೇಕು.

ಮಾಡುವವನಿಗೆ : ಕಬ್ಬ+ಇಗ=ಕಬ್ಬಿಗ.
....ಕಬ್ಬಿಗಗಳ್ಳರೆಂದು ಕೂ
ಸಾಡಿಸಬಾರದಕ್ಕರದ ರಾಜ್ಯದೊಳೀ ಕವಿಚಕ್ರವರ್ತಿಯಾ ||

ಮಾಱುವವನಿಗೆ : ಗಂದ+ಇಗ=ಗಂದಿಗ.
ಗಂದಿಗನೇರಣಿಗಂ ಸರ
ವಂದಿಗನಾ ಪಟ್ಟಸಾಲಿಗಂ ....

ನಿಯೋಗದವನಿಗೆ : ಚಾಮರ+ಇಗ=ಚಾಮರಿಗ.

ಅನೃತದವನಿಗೆ : ಪುಸಿ+ಇಗ=ಪುಸಿಗ.

ಅಜೀತದವನಿಗೆ : ಪೊಲಂಬು+ಇಗ=ಪೊಲಂಬಿಗ.
ಕೃತಿಮಾರ್ಗದೊಳ್ ಪೊಲಂಬಿಗನೀತಂ....

ಋಣದವನಿಗೆ : ಸಾಲ+ಇಗ=ಸಾಲಿಗ.

ಆಚರಣದವನಿಗೆ : ದೇಗುಲ+ಇಗ=ದೇಗುಲಿಗ.

ಶಿಲ್ಪದವನಿಗೆ : ಚಿಪ್ಪ+ಇಗ=ಚಿಪ್ಪಿಗ.

ಮೂಲದವನಿಗೆ : ಮೂಲ+ಇಗ=ಮೂಲಿಗ.

೨೦೯

ನಡೆಯಿಸುವನೀತನಿದನೆಂ
ಬೆಡೆಯೊಳ್ ವಳವಳ್ಳಮಕ್ಕುಮಾಯ್ತುಮುಮಕ್ಕುಂ,
ವಡಿಗಪ್ರತ್ಯಯಮಕ್ಕುಂ
ಬಿಡದಿಕ್ಕುವನೀತನಿದನೆನಿಪ್ಪೊಂದೆಡೆಯೊಳ್

ಈತನು ಇದನ್ನು(=ಈ ನಿಯೋಗವನ್ನು) ನಡೆಯಿಸುವನೆಂಬಲ್ಲಿ ವಳ, ವಳ್ಳ, ಆಯ್ತ ಪ್ರತ್ಯಯಗಳು ಹತ್ತುತ್ತವೆ. ಈತನು ಇದನ್ನು ಬಿಡದೆ ಇಕ್ಕುವನೆಂಬಲ್ಲಿ ವಡಿಗ ಪ್ರತ್ಯಯವುಂಟಾಗುತ್ತದೆ.

ವಳಕ್ಕೆ : ಆಡು+ವಳ=ಆಡುವಳ.

ವಳ್ಳಕ್ಕೆ : ಮಡಿ+ವಳ್ಳ=ಮಡಿವಳ್ಳ.

ಮಡಿವಳ್ಳನಡಪವಳ್ಳಂ
ಪಡೆವಳ್ಳಂ ಸೆಜ್ಜೆವಳ್ಳನಜ್ಜಂ ಬೆಜ್ಜಂ
ಅಡುವಳನೆಂದಿಂತಿವರಂ
ಕಂಡಗಿ ಬಿಡೆ ಜಡಿಯದಿರ್ಕೆ ನಯವಱಿವರಸಂ ||

ಆಯ್ತಕ್ಕೆ : ಝಳಂಬ+ಆಯ್ತ=ಝಳಂಬಾಯ್ತ.

ಆಯ್ತಬ್ಧಿಯೆ ಘೂರ್ಣಿಸುವಂ
ತಾಯ್ತರಮನೆಯೊಳಗೆ ಪುಗುವ ಪೊಱಮಡುವ ಝಳಂ
ಬಾಯ್ತರ ಸೂಟೌಯ್ತರ ಕ
ಲ್ಲಾಯ್ತರ ಡಂಗಾಯ್ತರಚ್ಚುಳಾಯ್ತರ ರಭಸಂ ||

ವಡಿಗಕ್ಕೆ : ಪುಲ್ಲ+ವಡಿಗಂ=ಪುಲ್ಲವಡಿಗಂ

೨೧೦

ಇವಱೊಳ್ ವ್ಯವಹರಿಪಂ ಮಾ
ಡುವನಿವನೆಂಬಲ್ಲಿ ಕಾಱಗಾಱಂಗಳ್ ಸಂ
ಭವಿಕುಂ, ಗಾಱಾದಿಗೆ ಲೋ
ಪವಾದಿಯೊಳ್ ಕಮ್ಮ ಕುಂಬಯುಗಮೊದವಲೊಡಂ

ಈತನು ಇವುಗಳೊಂದಿಗೆ ವ್ಯವಹರಿಸುವನೆಂಬಲ್ಲಿ ಕಾಱ ಪ್ರತ್ಯಯವುಂಟಾಗುತ್ತದೆ. ಇವನು(-ಈ ಕೆಲಸಗಳನ್ನು) ಮಾಡುವನೆಂಬಲ್ಲಿ ಗಾಱ ಪ್ರತ್ಯಯವುಂಟಾಗುತ್ತದೆ. ಕಮ್ಮ, ಕುಂಬ ಶಬ್ದಗಳು ಆದಿಯಲ್ಲಿರಲು ಗಾಱ ಪ್ರತ್ಯಯದ ಆದಿಗೆ ಲೋಪವುಂಟು.

ಕಾಱಕ್ಕೆ : ನಗೆವಡಿ+ಕಾಱಂ= ನಗೆವಡಿಕಾಱಂ.

ನಗೆವಡಿಕಾಱಂ ನೀಱಂ
ಪಗೆಕಾಱಂ ಪಾಟಕಾಱನೊಳ್ನುಡಿಕಾಱಂ....

ಗಾಱಕ್ಕೆ : ಮಾಲೆ+ಗಾಱಂ=ಮಾಲೆಗಾಱಂ.

ಆಣೆಯರಮೆಸೊದೆಪ್ಪಿರ್ಪುವು
ಮಣಿಗಾಱರ ಕಂಚಗಾಱರೊಟಿಗಾಱರ ತಿಂ
ತಿಣಿಯೆನಿಪ ಮಾಲೆಗಾಱರ
ಗಣನಾತೀತಂಗಳಾಪಣಂಗಳೆ ಪೊಟಲೊಳ್ ||

ಗಕಾರ ಲೋಪಕ್ಕೆ : ಕಮ್ಮ+ಗಾಱಂ=ಕಮ್ಮಱಂ. ಕುಂಬ+ಗಾಱಂ=ಕುಂಬಱಂ

೨೧೧

ಪರದೊಳ್ ಗಾಱಪ್ರತ್ಯಯ
ಮಿರೆ ಸಲ್ಗುಂ ಬಿಂದು ಮೇಣಕಾರಮುದಂತ
ಕ್ಕೊರೆವರಿಚಪ್ರತ್ಯಯಮಂ
ಪಿರಿದುಂ ತದ್ಭವನೊಳುಪಧೆಗಕ್ಕುಂ ಹ್ರಸ್ವಂ

ಗಾಜಿ ಪ್ರತ್ಯಯ ಪರದಲ್ಲಿದ್ದರೆ (ಪೂರ್ವಪದದ)ಉಕಾರಾಂತದ ಮುಂದೆ ಬಿಂದು ಬರುತ್ತದೆ. ಕೆಲವೆಡೆ (ಆ ಉಕಾರಕ್ಕೆ) ಅಕಾರವುಂಟಾಗುತ್ತದೆ. ಅದರೊಳಗೆ ಅವನು ಹುಟ್ಟಿದನೆಂಬಲ್ಲಿ ಇಚ ಪ್ರತ್ಯಯ ಹೇಳಲ್ಪಡುತ್ತದೆ; ಕೆಲವೆಡೆ ಉಪಧೆಗೆ* ಹ್ರಸ್ವ ಬರುತ್ತದೆ.

ಬಿಂದುವಿಗೆ : ಓದು+ಗಾಜಿ=ಓದುಂಗಾಜಿ.
ಅಕಾರಾಂತಕ್ಕೆ : ಕಂಚು>ಕಂಚ+ಗಾಜಿ=ಕಂಚಗಾಜಿ.
ಇಚ ಪ್ರತ್ಯಯಕ್ಕೆ : ಪೊಟಿಲ್+ಇಚ=ಪೊಟಲಿಚ.
ಉಪಧೆಯ ಹ್ರಸ್ವಕ್ಕೆ : ಕಾಲೂರ್>ಕಾಲುರ್+ಇಚ=ಕಾಲುರಿಚ

೨೧೨

ಘನಮಾಗಿ ವರ್ತಿಸುವನೀ
ತನಿವಜಿಯೊಳೆಂಬಲ್ಲಿ ಕುಟಿಗ ಗಪ್ರತ್ಯಯಮುಂ
ಟೆನಿಸುಗುಮುಳಿಗ ಪ್ರತ್ಯಯ
ಮನುಕೂಲಂ ಬಾಳ್ವನಿದಱೊಳಿವನೆಂಬೆಡೆಯೊಳ್

ಇವನು ಇವುಗಳೊಳಗೆ ವಿಶೇಷವಾಗಿ ವರ್ತಿಸುವನೆಂಬಲ್ಲಿ ಕುಟಿಗ ಮತ್ತು ಗ ಪ್ರತ್ಯಯಗಳು ಉಂಟಾಗುತ್ತವೆ. ಇವನು ಇದರೊಳಗೆ ಅನುಕೂಲವಾಗಿ ಬದುಕುವನೆಂಬಲ್ಲಿ ಉಳಿಗ ಪ್ರತ್ಯಯವುಂಟಾಗುತ್ತದೆ.

ಕುಟಿಗ ಪ್ರತ್ಯಕ್ಕೆ : ಕಲ್+ಕುಟಿಗ=ಕಲ್ಕುಟಿಗ
ಗ ಪ್ರತ್ಯಯಕ್ಕೆ : ಬೀದಿ+ಗ=ಬೀದಿಗ
ಉಳಿಗ ಪ್ರತ್ಯಯಕ್ಕೆ : ಮಣ್+ಉಳಿಗ=ಮಣ್ಣುಳಿಗ.

೨೧೩

ಒದವುವುದು ಗುಳಿಪ್ರತ್ಯಯ
ಮದು ಪೂರ್ವದ ಬಿಂದುವೆರಸು ಶೀಲಗ್ರಹಣಾ
ರ್ಥದೊಳೆತ್ತಮುಣಿಪ್ರತ್ಯಯ
ಮೊದವುಗುಮನ್ವಿತದಿನುಣ್ಬನಿದನೆಂಬೆಡೆಯೊಳ್

ಶೀಲಗ್ರಹಣಾರ್ಥದಲ್ಲಿ ಆದಿಬಿಂದು ಸಮೇತವಾಗಿ ಗುಳಿ ಪ್ರತ್ಯಯವುಂಟಾಗುತ್ತದೆ. ಈ ವಸ್ತುವನ್ನು ಈತನು ಉಣ್ಣುವನು ಎಂಬೆಡೆಯ ಎಲ್ಲಿ ಉಣಿ ಪ್ರತ್ಯಯ ಬರುತ್ತದೆ.

ಗುಳಿ ಪ್ರತ್ಯಯಕ್ಕೆ : ಅಡು+ಗುಳಿ=ಅಡುಗುಳಿ.
ಉಣಿ ಪ್ರತ್ಯಯಕ್ಕೆ : ಅಮರ್ದು+ಉಣಿ=ಅಮರ್ದುಣಿ.

೨೧೪

ಉಕಕುಳಿಯಾಳಿಪ್ರತ್ಯಯ
ಮಿಕಮುಂ ಶೀಲಾದಿ ವಿಶ್ರುತಾರ್ಥದೊಳಡಿಗ
ಪ್ರಕಟ ಪ್ರತ್ಯಯಮಕ್ಕುಂ
ಸುಕವಿಗಳಿಂ ತದನುಕೂಲವರ್ತನವಿಧಿಯೊಳ್

---

* ಉಪಧಾ=ಅಂತ್ಯಾತ್ ಪೂರ್ವಂ. Last but one.

ಶೀಲ ಮೊದಲಾದ ಪ್ರಸಿದ್ಧಾರ್ಥಗಳಲ್ಲಿ ಉಕ. ಕುಳಿ, ಆಳಿ, ಇಕ ಪ್ರತ್ಯಯಗಳುಂಟಾಗುತ್ತವೆ. ಆ ಶೀಲ ಮೊದಲಾದ ಪ್ರಸಿದ್ಧಾರ್ಥದೊಳಗೆ ಅನುಕೂಲವಾಗಿ ವರ್ತಿಸುವಲ್ಲಿ ಅಡಿಗ ಪ್ರತ್ಯಯವುಂಟಾಗುತ್ತದೆ.

ಉಕ ಪ್ರತ್ಯಯಕ್ಕೆ : ಅಂಟು+ಉಕ=ಅಂಟುಕ.
ಕುಳಿ ಪ್ರತ್ಯಯಕ್ಕೆ : ಓಡು+ಕುಳಿ=ಓಡುಕುಳಿ.
ಆಳಿ ಪ್ರತ್ಯಯಕ್ಕೆ : ಓದು+ಆಳಿ=ಓದಾಳಿ
ಮಾಱಾಳಿಯುಮೋದಾಳಿಯು
ಮೇಱಾಳಿಯುಮಪ್ಪನಾಗಿ ಪಡಪಾಳಿಯೆ ಕೇಳ್....
ಇಕ ಪ್ರತ್ಯಯಕ್ಕೆ : ಹುಸಿ+ಇಕ=ಹುಸಿಕ.
ಅಡಿಗ ಪ್ರತ್ಯಯಕ್ಕೆ : ಪಾವು+ಅಡಿಗ=ಪಾವಡಿಗ.

೨೧೫

ವ್ಯವಹರಣ ತದಾಚರಣ
ಪ್ರವಣನೊಳಕ್ಕುಂ ಸಮಂತುಗಪ್ರತ್ಯಯಮೊಂ
ದುವುದಟಿಗ ಪ್ರತ್ಯಯಮಾ
ಡುವ ದೀವಿಗೆವಿಡಿವ ಹರದುಗೆಯ್ವನಿಬರೊಳಂ

ವ್ಯವಹರಿಸುವವನಲ್ಲಿ, ಆಚರಿಸುವವನಲ್ಲಿ ಉಗ ಪ್ರತ್ಯಯವುಂಟಾಗುತ್ತದೆ. (ಗಟಿವಿಡಿದು) ಆಡುವವನಲ್ಲಿ, ದೀವಿಗೆ ಹಿಡಿಯುವವನಲ್ಲಿ, ವ್ಯವಹಾರ ಮಾಡುವವನಲ್ಲಿ ಅಟಿಗ ಪ್ರತ್ಯಯ ಸೇರುತ್ತದೆ.

ಉಗ ಪ್ರತ್ಯಯಕ್ಕೆ : ನಾರು+ಉಗ=ನಾರುಗ, ಊರು+ಉಗ=ಊರುಗ.
ಅಟಿಗ ಪ್ರತ್ಯಯಕ್ಕೆ : ಕೋಲ್+ಅಟಿಗ=ಕೊಲ್ಲಟಿಗ
ದೀವ+ಅಟಿಗ=ದೀವಟಿಗ
ಮಾವು+ಅಟಿಗ=ಮಾವಟಿಗ.

೨೧೬

ಏನಾನುಮೊಂದು ಭಾವಮ
ನಾನಲ್ ಸಲ್ವವನೊಳಱಿಗೆ ಕಪ್ರತ್ಯಯಮಂ,
ಪೀನಂ ತದ್ವರ್ತನಗತ
ಮಾನವನೊಳ್ ತಿಳಿಗೆ ಮತ್ತಿಲಪ್ರತ್ಯಯಮಂ

ಯಾವುದಾದರೊಂದು ಭಾವವನ್ನು ತಳೆದಿರುವವನಲ್ಲಿ ಕ ಪ್ರತ್ಯಯ (ಬರುವುದೆಂದು) ತಿಳಿಯಬೇಕು. ಅದರೊಳಗೆ ಆತನು ವರ್ತಿಸುವನೆಂಬಲ್ಲಿ ಇಲ ಪ್ರತ್ಯಯ (ಬರುವುದೆಂದು)ಭಾವಿಸಬೇಕು.

ಕ ಪ್ರತ್ಯಯಕ್ಕೆ : ಬಡ+ಕ=ಬಡಕ
ಇಲ ಪ್ರತ್ಯಯಕ್ಕೆ : ಪಡೆ+ಇಲ=ಪಡೆಯಿಲ.

೨೧೭

ಇದಱೊಳಿದುಂಟೆಂಬರ್ಥದೊ
ಳುದಯಿಪುದುಳ್ಳೊಡೆಯವಂತ ಶಬ್ದಂ ಕೈಕೊ
ಳ್ವುದು, ವಣಿಗಪ್ರತ್ಯಯಮು
ಣ್ಬುದು ಜೀವಿತಮಾಗಿ ಬಱಿದೆ ತಿನುತಿರ್ಪವನೊಳ್

ಇದರೊಳಗೆ ಇದು ಉಂಟೆಂಬ ಅರ್ಥದಲ್ಲಿ ಉಳ್ಳ, ಒಡೆಯ, ವಂತ ಎಂಬ ಪ್ರತ್ಯಯಗಳುಂಟಾಗುತ್ತವೆ. ಊಟವೇ ಜೀವಿತವಾಗಿ ಬಾಳುವವನಲ್ಲಿ ವಣಿಗ ಪ್ರತ್ಯಯವನ್ನು ಸ್ವಿಕರಿಸಬೇಕು.

ಉಳ್ಳ ಪ್ರತ್ಯಯಕ್ಕೆ : ಧನಂ+ಉಳ್ಳ=ಧನಮುಳ್ಳ.
ಒಡೆಯ ಪ್ರತ್ಯಯಕ್ಕೆ : ಜಾಣ್+ಒಡೆಯ=ಜಾಣೊಡೆಯ.
ವಂತ ಪ್ರತ್ಯಯಕ್ಕೆ : ಸಿರಿ+ವಂತ=ಸಿರಿವಂತ
ವಣಿಗ ಪ್ರತ್ಯಯಕ್ಕೆ : ಕೂಟ್+ವಣಿಗ=ಕೂಟ್ವಣಿಗ.

೨೧೮

ಅನೆಯ ಪ್ರತ್ಯಯಮನಿತಿನಿ
ತೆನಿತೆಂಬ ಲಸತ್ಪ್ರಮಾಣಪೂರಣದೊಳ್ ನೆ
ಟ್ಟನೆ ಸಂಖ್ಯಾಪೂರಣದೊಳ್
ಜನಿಯಿಪುದು, ಮೆಯೆಂಬುದಕ್ಕುಮೆಣಿಸುವ ಸೂಟಿಯೊಳ್

ಅನಿತು ಇನಿತು ಎನಿತು ಎಂಬ ಪ್ರಮಾಣಕ್ರಮವಾಚಿಗಳಲ್ಲಿ ಮತ್ತು ಸಂಖ್ಯಾಕ್ರಮ ವಾಚಿಗಳಲ್ಲಿ ಆನೆಯ ಪ್ರತ್ಯಯವುಂಟು. ಎಣಿಸುವ ಸರತಿಯಲ್ಲಿ ಮೆ ಪ್ರತ್ಯಯವುಂಟು.

ಪ್ರಮಾಣಕ್ರಮವಾಚಿಯ ಆನೆಯ ಪ್ರತ್ಯಯಕ್ಕೆ: ಅನಿತನೆಯ, ಇನಿತನೆಯ, ಎನಿತನೆಯ. ಸಂಖ್ಯಾಕ್ರಮವಾಚಿಯ ಆನೆಯ ಪ್ರತ್ಯಯಕ್ಕೆ : ಒಂದನೆಯ, ಎರಡನೆಯ ಮೂಱನೆಯ.

ಮೆ ಪ್ರತ್ಯಯಕ್ಕೆ : ಒರ್ಮೆ, ಇರ್ಮೆ, ಮೂರ್ಮೆ.

೨೧೯

ಕಾಂತಾವಿಷಯದೊಳಾದಮ
ದಂತಕ್ಕಿತಿಯುಂ ತದಾದಿಲೋಪಮುವಕ್ಕುಂ,
ಭ್ರಾಂತೇನಳಂತಮುಂ ನೆಗ
ೞ್ಗುಂ, ತೋಱದದರ್ಕದಂತದಲ್ಲಿ ವಿಕಲ್ಪಂ

ಸ್ತ್ರೀವಿಷಯದಲ್ಲಿ ವಿಶೇಷವಾಗಿ ಅಕಾರಾಂತಕ್ಕೆ ಇತಿ ಪ್ರತ್ಯಯುವುಂಟು. ಆ ಪ್ರತ್ಯಯದ ಆದಿಗೆ ಲೋಪವೂ (ಕೆಲವೆಡೆ) ಉಂಟು; ಅಳಂತವೂ ಉಂಟು, ಅಕಾರಾಂತದಲ್ಲಿ ಅದಕ್ಕೆ (=ಅಳ್ ಪ್ರತ್ಯಯಕ್ಕೆ) ವಿಕಲ್ಪವಿಲ್ಲ.

ಇತಿಗೆ : ಚಾಮರಿಗ+ಇತಿ=ಚಾಮರಿಗಿತಿ.
ಇಕಾರಲೋಪಕ್ಕೆ : ಮಾಲೆಗಾಱ+ತಿ(<ಇತಿ)=ಮಾಲೆಗಾರ್ತಿ.
ಅಳಂತಕ್ಕೆ : ಅವ+ಅಳ್=ಅವಳ್.
ಇನಿಯ (<ಇನಿದು)+ಅಳ್=ಇನಿಯಳ್

೨೨೦

ಚರಮಸ್ವರಕ್ಕೆ ಚರಮಾ
ಕ್ಷರಕಕ್ಕುಂ ಲೋಪಮಗ್ರದೊಳ್ ತದ್ಧಿತಮೊಂ
ದಿರೆ, ತನ್ನೊಳಾ ಸಮಾಸಾಂ
ತರದಾಖ್ಯಾತಕದ ಲಕ್ಷಣಂ ವ್ಯವಹರಿಕುಂ

ಪರದಲ್ಲಿ ತದ್ಧಿತಪ್ರತ್ಯಯವಿದ್ದರೆ (ಪೂರ್ವಪದದ) ಅಂತ್ಯಸ್ವರಕ್ಕೆ ಮತ್ತು ಅಂತ್ಯಾಕ್ಷರಕ್ಕೆ ಲೋಪವುಂಟು. ಆ ತದ್ಧಿತ ಪದದಲ್ಲಿ ಸಮಾಸಾಂತರಾಳದ ಮತ್ತು ಆಖ್ಯಾತದ ಲಕ್ಷಣಗಳು ತಲೆದೋರುತ್ತವೆ.

ಅಂತ್ಯ ಸ್ವರಲೋಪಕ್ಕೆ : ತೆಲುಂಗ+ಇತಿ=ತೆಲುಂಗಿತಿ
ಅಂತ್ಯಾಕ್ಷರಲೋಪಕ್ಕೆ : ಏಱು+ತ=ಏತ.
ಸಮಾಸ ಲಕ್ಷಣಕ್ಕೆ : (ಮಾಲೆಗಾಱ>) ಮಾಲೆಗಾರ+ತಿ(<ಇತಿ)=ಮಾಲೆಗಾರ್ತಿ.
ಆಖ್ಯಾತ ಲಕ್ಷಣಕ್ಕೆ : ಆಡು+ಅ=ಆಟ.

೨೨೧

ಇತ್ವದೊಳುತ್ವದೊಳಾ ಹ್ರ
ಸ್ವೈತ್ವದೊಳೊಂದಿದ ವಕಾರಮಕ್ಕುಂ ಭಾವ
ಕ್ಕತ್ವಂ ಪಿರಿದುಂ ಪೆಱಗುಂ
ಟತ್ವಂ ಹ್ರಸ್ವೈತ್ವತತ್ವಮದು ಕೆಲವೆಡೆಯೊಳ್

ಭಾವಕ್ಕೆ ಇಕಾರ ಉಕಾರ ಎಕಾರಯುಕ್ತ ವಕಾರವುಂಟು; (ಆಗ) ಅದರ ಹಿಂದೆ ಅಕಾರವುಂಟು. ಕೆಲವೆಡೆ ಅಕಾರಯುಕ್ತ ಇಲ್ಲವೆ ಎಕಾರಯುಕ್ತ ತಕಾರವೂ ಉಂಟು.

ವಕಾರಕ್ಕೆ : ಅಳ್>ಅಳ+ವಿ=ಅಳವಿ.
ತೆರ್>ತೆರ+ವು=ತೆರವು.
ಮಱ್>ಮಱ+ವೆ=ಮಱವೆ.
ತಕಾರಕ್ಕೆ : ಅಱ್+ತ=ಅಱಿತ.
ತೆಕಾರಕ್ಕೆ : ನೆಗಟ್+ತೆ=ನೆಗಟ್ತೆ

೨೨೨

ಪ್ರಕಟಂ ಚೇತನಭಾವದೊ
ಳಿಕೆ ತನಮುಮೆಯಕ್ಕುಮುೞಿದ ಭಾವದೊಳಮೆಯುಂ
ಗೆಕೆಮೆಗಳುಮುತ್ವದಿತ್ವದ
ಪಕಾರಮುಂ ಮತ್ತುಕಾರಮುಂ ಸಮಸುಗುಂ

ಚೇತನ ಭಾವದಲ್ಲಿ ಇಕೆ, ತನ, ಉಮೆ ಪ್ರತ್ಯಯಗಳು ಪ್ರಸಿದ್ಧವಾಗಿವೆ. ಮಿಕ್ಕಭಾವಗಳಲ್ಲಿ ಅಮೆ, ಗೆ, ಕೆ, ಮೆ, ಪು,ಪಿ, ಉ ಪ್ರತ್ಯಯಗಳು ಬರುತ್ತವೆ.

ಇಕೆಗೆ : ಉನ್ನತ+ಇಕೆ=ಉನ್ನತಿಕೆ.
ತನಕ್ಕೆ : ಕಲಿ+ತನ=ಕಲಿತನ.

ಉಮೆಗೆ : ತಕ್ಕ+ಉಮೆ=ತಕ್ಕುಮೆ.

ಅಮೆಗೆ : ತೀರ್+ಅಮೆ=ತೀರಮೆ.

ಗೆಕಾರಕ್ಕೆ : ಉಡು+ಗೆ=ಉಡುಗೆ.

ಕೆಕಾರಕ್ಕೆ : ಕಾಣ್+ಕೆ=ಕಾಣ್ಕೆ.

ಮೆಕಾರಕ್ಕೆ : ಒಲ್+ಮೆ=ಒಲ್ಮೆ.

ಪುಕಾರಕ್ಕೆ : ತಣ್+ಪು=ತಣ್ಪು.

ಪಿಕಾರಕ್ಕೆ : ಕಲ್+ಪಿ=ಕಲ್ಪಿ.

ಉಕಾರಕ್ಕೆ : ಕಿವುಡ+ಉ=ಕಿವುಡು.

೨೨೩

ಪಿರಿದೆಂಬೀ ರೇಫಕ್ಕಾ
ಚರಿಪರ್ ಭಾವಾರ್ಥಮಪ್ಪುದೊಂದು ಪುಕಾರಂ
ಪರಮಾಗೆ ಬಿಂದುವಂ ವಾ
ಕ್ಪರಿಣತರಿಂ ಸಿದ್ಧಮಾಯ್ತು ಪೆಂಪೆಂಬ ಪದಂ

ಭಾವಾರ್ಥದ ಪುಕಾರ ಪರವಾಗಲು, ಪಿರಿದು ಎಂಬ ಶಬ್ದದ ರೇಫಕ್ಕೆ ಬಿಂದು (ಮತ್ತು ಹಿಂದಿನ ಇತ್ವಕ್ಕೆ ಎತ್ವ) ವನ್ನು ಪ್ರಯೋಗಿಸುತ್ತಾರೆ. (ಆಗ) ವಾಕ್ಪರಿಣತರಿಂದ ಪೆಂಪು ಎಂಬ ಪದ ಸಿದ್ಧವಾಗುತ್ತದೆ.

ಪಿರಿದು>ಪೆರ್>ಪೆಂ+ಪು=ಪೆಂಪು.

೨೨೪

ಮೊದಲಿತ್ವಕ್ಕೇತ್ವಮುಮು
ತ್ವದೊಳೋತ್ವಮುಮೆಸೆವ ದೀರ್ಘಮುಂ ಚರಮಕ್ಕ
ತ್ವದ ವಿಧಿಯುಂ ಧಾತುಗೆ ಭಾ
ವದೊಳಕ್ಕುಂ ಧಾತು ನಿಜದೆ ಭಾವಮದಕ್ಕುಂ

ಧಾತುಗಳಿಗೆ ಭಾವಾರ್ಥದಲ್ಲಿ ಆದಿಯ ಇತ್ವಕ್ಕೆ ಏತ್ವವೂ ಉತ್ವಕ್ಕೆ ಓತ್ವವೂ ದೀರ್ಘೀಕರಣವೂ ಅಂತ್ಯಕ್ಕೆ ಅತ್ವವೂ ಉಂಟಾಗುತ್ತವೆ;ಸಹಜ ಧಾತುವೂ ಭಾವನಾಮವಾಗುತ್ತದೆ.

ಏತ್ವಕ್ಕೆ : ಕಿಡು>ಕೇಡು.

ಓತ್ವಕ್ಕೆ : ಕುಡು>ಕೋಡು.

ದೀರ್ಘಕ್ಕೆ : ಬಿಡು>ಬೀಡು, ಸುಡು>ಸೂಡು.

ಅತ್ವಕ್ಕೆ : ಆಡು+ಅ=ಆಟ.

ಸಹಜ ಧಾತುವಿಗೆ : ನಡೆ.

೨೨೫

ವೋಲೆಂಬಂತೆಂಬೆರಡುಂ
ಪೋಲಿಸುವೆಡೆಗಾದುವಂತೆವೋಲೆನಲಕ್ಕುಂ,
ವೋಲೊಳ್ ಹ್ರಸ್ವಮುಮಕ್ಕುಂ
ಮೇಲತ್ವಕ್ಕುಂಟು ಬಿಂದು ವತ್ವಂ ಬತ್ವಂ

ಹೋಲಿಸುವಲ್ಲಿ ವೋಲ್ ಎಂಬ, ಅಂತೆ ಎಂಬ ಎರಡು ಪ್ರತ್ಯಯಗಳುಂಟು. ಅಂತೆವೋಲ್ ಎಂದೂ ಹೇಳಬಹುದು. ವೋಲ್ ಎಂಬುದು ಹ್ರಸ್ವ(ವೊಲ್)ವಾಗಲೂ ಬಹುದು. (ಆಗ) ಅಕಾರಾಂತಕ್ಕೆ ಬಿಂದು ಪರವಾದಾಗ ವಕಾರಕ್ಕೆ ಬಕಾರ ಬರುತ್ತದೆ.

ವೋಲ್‌ಗೆ : ಜಲನಿಧಿಯ+ವೋಲ್=ಜಲನಿಧಿವೋಲ್.
ಜಲನಿಧಿವೋಲ್ ಗಂಭೀರಂ
ಬಲವೈರಿಯವೋಲ್ ಸಮಗ್ರವಿಭವಸನಾಥಂ ||

ಅಂತೆಗೆ : ಗಿರಿಯ+ಅಂತೆ=ಗಿರಿಯಂತೆ.
ಗಿರಿಯಂತೆ ಬಿಣ್ಣಿದಂ ಸುರ
ಕರಿಯಂತೆ ಬಲಾಢ್ಯನಬ್ಧಿಯಂತೆ ಗಭೀರಂ ||

ಅಂತೆವೋಲ್‌ಗೆ : ರವಿಸುತನ+ಅಂತೆವೋಲ್=ರವಿಸುತನಂತೆವೋಲ್.
ರವಿಸುತನಂತೆವೋಲಧಿಕ ದಾನಿ ಪರಾಕ್ರಮಿ ಸಿಂಗದಂತೆವೋಲ್.

ವೊಲ್‌ಗೆ : ಕಡಲ+ವೊಲ್=ಕಡಲವೊಲ್
ಆ ಮುನೀಶ್ವರಂ ಶಾಂತರಸದ ಕಡಲವೊಲಿರ್ದಂ

ಬಿಂದುವೆರಸು ಬಕಾರಕ್ಕೆ : ಇಂದ್ರ+ವೋಲ್=ಇಂದ್ರ+ಅಂ+ಬೋಲ್=ಇಂದ್ರಂಬೋಲ್.
ಇಂದ್ರಂಬೋಲ್ ವಿಭವಯುತಂ
ಚಂದ್ರಂಬೋಲ್ ಕಾಂತಿವಂತನಾದಿತ್ಯಂಬೋಲ್
ಸಾಂದ್ರ ಪರಿಪೂರ್ಣತೇಜನು ।
ಪೇಂದ್ರಂಬೋಲ್ ನೀತಿನಿಪುಣನಾ ನರನಾಥಂ ||

೨೨೬

ಒದವಿರ್ಕುಂ ಸಂಸ್ಕೃತವೆ
ನ್ನದೆ ಕನ್ನಡವೆನ್ನದಾಯಿಲಪ್ರತ್ಯಯಮಂ
ತದು ತಾವಿವು ಮೊದಲಾಗಱಿ
ವುದನ್ವಿತರ್ ಮಿಕ್ಕ ತದ್ಧಿತಪ್ರತ್ಯಯಮಂ

ಸಂಸ್ಕೃತ ಮತ್ತು ಕನ್ನಡವೆಂಬ ಭೇದವಿಲ್ಲದೆ ಆಯಿಲ ಪ್ರತ್ಯಯ ಸೇರುತ್ತದೆ. ಇವು ಮೊದಲಾಗಿ ಮಿಕ್ಕ ತದ್ಧಿತ ಪ್ರತ್ಯಯಗಳನ್ನು ವಿದ್ವಾಂಸರು ತಿಳಿದುಕೊಳ್ಳಬೇಕು.

ಸಂಸ್ಕೃತಕ್ಕೆ : ಗಾಢ+ಆಯಿಲ=ಗಾಢಾಯಿಲ.
ಕನ್ನಡಕ್ಕೆ : ಓಜ+ಆಯಲ=ಓಜಾಯಿಲ.

❖❖

ಆಖ್ಯಾತ ಪ್ರಕರಣ

೨೨೭

ಕ್ರಿಯೆಯರ್ಥದ ಮೂಲಂ ಪ್ರ
ತ್ಯಯರಹಿತಂ ಧಾತುವದನಭಾವಕ್ರಿಯೆಯೊಳ್
ನಿಯತಂ ನಿಶ್ಚಯಿಪುದು ಬುಧ
ಚಯಮಾ ಧಾತುಗೆ ವಿಭಕ್ತಿಯಾಱಾಗಿರ್ಕುಂ

ಕ್ರಿಯಾರ್ಥಕ್ಕೆ ಮೂಲವಾದುದು; ಪ್ರತ್ಯಯರಹಿತವಾದುದು ಧಾತು. ಅದನ್ನು ವಿದ್ವಾಂಸರು ನಿಷೇಧಕ್ರಿಯೆಯಲ್ಲಿ ನಿಶ್ಚಯಿಸಿಕೊಳ್ಳಬೇಕು. ಆ ಧಾತುವಿಗೆ ವಿಭಕ್ತಿಗಳು ಆರು.

ಮಾಡಿದಂ ಎಂಬ ಕ್ರಿಯೆಯ ನಿಷೇಧರೂಪ ಮಾಡಂ. ಇದರ ಅಮ್ ಎಂಬ ವಿಭಕ್ತಿಯನ್ನು ಕಳೆಯಲು ಉಳಿಯುವ ರೂಪ ಮಾಡು; ಇದು ಧಾತು.

೨೨೮

ಅಮರಯಿರೆನೆವುಗಳಕ್ಕುಂ
ಕ್ರಮದೇಕಾನೇಕವಚನದೊಳ್ ಪ್ರತ್ಯೇಕಂ
ಸಮನಿಸೆ ಯುಗಲತೆಯಾಖ್ಯಾ
ತಮಾರ್ಗದೊಳ್ ನೆಲಸಿ ನಿಂದ ಪುರುಷತ್ರಯಕಂ

ಆಖ್ಯಾತಮಾರ್ಗದಲ್ಲಿ ನೆಲೆಸಿನಿಂತ ಪ್ರಥಮ, ಮಧ್ಯಮ ಮತ್ತು ಉತ್ತಮಪುರುಷಗಳಿಗೆ ತಲಾ ಎರಡರಂತೆ ಏಕವಚನ ಬಹುವಚನಗಳಲ್ಲಿ ಅಮ್, ಅರ್, ಅಯ್, ಇರ್, ಎನ್, ಎವು(ಎಂಬ ವಿಭಕ್ತಿಗಳು) ಹತ್ತುತ್ತದೆ.

ಪ್ರಥಮ ಪುರುಷದ ಏಕವಚನದ ಅಮ್‌ಗೆ : ಒಗೆ+ದ+ಅಂ=ಒಗೆದಂ.
....ಒಗೆದಂ ಶ್ರೀಗಂಗಚಕ್ರಾಯುಧಂ
ಪ್ರಥಮ ಪುರುಷದ ಬಹುವಚನದ ಆರ್‌ಗೆ : ಕಟ್ಟು+ದ+ಅರ್=ಕಟ್ಟಿದರ್,
....ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರಿಕ್ಕಿ ಮೆಟ್ಟಿದರಿದೇನಳವಗ್ಗಳವೋ ಕವೀಂದ್ರರಾ ||
ಮಧ್ಯಮಪುರುಷದ ಏಕವಚನದ ಅಯ್‌ಗೆ : ತೆಗೆ+ದ+ಅಯ್=ತೆಗೆದಯ್.
ತೆಗೆದಯ್ ಮೋಕ್ಷದ ಬಟ್ಟೆಯಂ....
ಮಧ್ಯಮಪುರುಷದ ಬಹುವಚನದ ಇರ್‌ಗೆ : ಏಳಿಸು+ಇರ್=ಏಳಿಪಿರ್.
ವಿಹಂಗಮಮಿದೆಂದೇಕಬ್ಬೆ ನೀಮೇಳಿಪಿರ್
ಉತ್ತಮಪುರುಷದ ಏಕವಚನದ ಎನ್‌ಗೆ : ಒಡರ್ಚು+ದ+ಎನ್=ಒಡರ್ಚಿದೆಂ.
....ಜನೋದಯಂಗಿದಂ ಪೇೞಲೊಡರ್ಚಿದೆಂ.

ಉತ್ತಮಪುರುಷದ ಬಹುವಚನದ ಎವುಗೆ : ಆನ್+ವ(>ಪ)+ಎವು=ಆಂಪೆವು.

....ಕೃಪನಂ ಸಂಗ್ರಾಮದೊಳಾಂಪೆವರಾತಿಯಂ

೨೨೯

ಬೆಳೆಯೆಂಬ ಧಾತು ಸಸ್ಯಾ
ವಳಿಯೊಳ್ ಬಳೆಯೆಂಬ ಧಾತು ಮಿಕ್ಕೆಡೆಯೊಳ್ ಸಂ
ಗಳಿಕುಂ, ತಿಳಿಯಲ್ಬರ್ಪುದು
ಬೆಳೆ ಬಳವಿಗಳೆಂಬ ಭಾವವಚನದ್ವಯದೊಳ್

ಸಸ್ಯಾವಳಿಯಲ್ಲಿ ಬೆಳೆ ಎಂಬ ಧಾತು, ಮಿಕ್ಕ ವಸ್ತುಗಳಲ್ಲಿ ಬಳೆ ಎಂಬ ಧಾತು ಬಳಕೆಯಾಗುತ್ತವೆ.(ಇವುಗಳ) ಭಾವವಚನದ್ವಯದಲ್ಲಿ (ಕ್ರಮವಾಗಿ) ಬೆಳೆ, ಬಳವಿಗಳನ್ನು ಪರಿಗಣಿಸಬೇಕು.

ಬೆಳೆ ಧಾತುವಿಗೆ : ಬೆಳೆ+ವ+ಉವು+ಬೆಳೆವುವು.
ನೆಲ್ಲುಂ ಕೌಂಗುಂ ಮಾವುಂ ।
ಮಲ್ಲಿಗೆಯುಂ ಬೆಳೆವುವಲ್ಲಿ ಕರ್ವಿನ ರಸದಿಂ ॥

ಬಳೆ ಧಾತುವಿಗೆ : ಬಳೆ+ದ+ಆಂ=ಬಳೆದಂ
....ಮೃದುಮುಗ್ಧಾ
ಳಾಪಂ ಬಳೆದಂ ಸರಸ್ವತೀಮಣಿಹಾರಂ ॥

ಬೆಳೆ ಎಂಬ ಭಾವವಚನಕ್ಕೆ : ಬೆಳೆ+ಗಳ್=ಬೆಳೆಗಳ್
ಬೆಳೆಗಳ್ ಕಳನಂ ಪೊಕ್ಕುವು
ಬೆಳಸುಂ ಕುಂದದು ಪೊದಟ್ಟಿ ಪಾಟಿನೊಳೆಂದುಂ॥

ಬಳವಿ ಎಂಬ ಭಾವವಚನಕ್ಕೆ : ತನುಜನ ಬಳವಿಯನೆ ನೋಡಿ ಜನಕಂ ನಲಿದಂ.

೨೩೦

ವಿನುತಗುಣವಚನದೊಳ್ ಸ
ರ್ವನಾಮದೊಳ್ ಸಂಖ್ಯೆಯೊಳ್ ಪ್ರವರ್ತಿಪುವಾಖ್ಯಾ
ತನಿಯುಕ್ತ ವಿಭಕ್ತಿಗಳವು
ಘನತರಸಂಸ್ಕೃತ ಗುಣೋಕ್ತಿಯೊಳಮುಮರ್ದಿರ್ಕುಂ

ಗುಣವಚನದಲ್ಲಿ, ಸರ್ವನಾಮದಲ್ಲಿ, ಸಂಖ್ಯೆಯಲ್ಲಿ ಆಖ್ಯಾತವಿಭಕ್ತಿಗಳು ವ್ಯವಹರಿಸುತ್ತವೆ. ಸಂಸ್ಕೃತ ಗುಣವಚನದಲ್ಲಿಯೂ ಅವು ಹೊಂದಿಕೊಳ್ಳುತ್ತವೆ.

ಗುಣವಚನಕ್ಕೆ : ಒಳ್ಳಿದಂ, ಒಳ್ಳಿದರ್, ಒಳ್ಳಿದಯ್, ಒಳ್ಳಿದಿರ್ (ಒಳ್ಳಿದರಿರ್);
ಒಳ್ಳಿದೆಂ, ಒಳ್ಳಿದೆವು(ಒಳ್ಳಿದರೆವು).

ಸರ್ವನಾಮಕ್ಕೆ : ಪೆಱಂ, ಪೆಱರ್, ಪೆಱಯ್, ಪೆಱಿರ್ (ಪೆಱರಿರ್);
ಪೆಱೆನ್ (ಪೆಱನೆನ್). ಪೆಱೆವು(ಪೆಱರೆವು).

ಸಂಖ್ಯೆಗೆ : ಒರ್ವಂ, ಒರ್ವರ್; ಒರ್ವಯ್, ಒರ್ವಿರ್(ಒರ್ವರಿರ್).
ಒರ್ವೆನ್ (ಒರ್ವನೆನ್),ಒರ್ವೆವು (ಒರ್ವರೆವು)

ಸಂಸ್ಕೃತ ಗುಣವಚನಕ್ಕೆ : ಉದ್ಧತಂ, ಉದ್ಧತರ್; ಉದ್ಧತನಯ್, ಉದ್ಧತರಿರ್.
ಉದ್ಧತನೆಂ, ಉದ್ಧತರೆವು.

೨೩೧

ಆದೇಶಮಾಗಿ ಮುಂ ಗ

ಳ್ಗಾದರುವದು ನಿಲ್ಕುಮಿರ್ಗಮೆವುಗಂ ಪೂರ್ವ

ಕ್ಕಾದಿಗೆ ನತ್ವಮದೆನ್ಪರ

ಮಾದೊಡೆ ಕೆಲರಿಂದೆ ಬಿಂದುವೆವುವಿನ ವತ್ವಂ

ಈ ಮೊದಲು ಹೇಳಿದ (ಪುಲ್ಲಿಂಗ ಸ್ತ್ರೀಲಿಂಗ ಬಹುವಚನದ) ಗಳ್‌ಗೆ ಆದೇಶವಾಗಿ ಬರುವ ಅರ್ ಎಂಬುದು, (ಮಧ್ಯಮಪುರುಷ ಬಹುವಚನದ) ಇರ್ ಎಂಬುದಕ್ಕೂ (ಉತ್ತಮಪುರುಷ ಬಹುಚನದ) ಎವು ಎಂಬುದಕ್ಕೂ ಆದಿಯಲ್ಲಿ (ವಿಕಲ್ಪವಾಗಿ) ಸೇರುತ್ತದೆ; (ಉತ್ತಮಪುರುಷ ಏಕವಚನದ) ಎನ್ ಪರವಾದರೆ (ಅದರ) ಆದಿಗೆ (ವಿಕಲ್ಪವಾಗಿ) ನಕಾರವುಂಟಾಗುತ್ತದೆ; ಕೆಲವರಿಂದ (ಉತ್ತಮಪುರುಷ ಬಹುವಚನದ) ಎವುವಿನ ವತ್ವ ಬಿಂದುವಾಗುತ್ತದೆ.

ಇರ್ ಪ್ರತ್ಯಯದ ಆದಿಯ ಅರ್‌ಗೆ : ಕೂರಿದ+ಅರ್+ಇರ್=ಕೂರಿದರಿರ್.

ಕೂರಿದರಿರ್ ಕಾಳೆಗದೊಳ್

ಎವು ಪ್ರತ್ಯಯದ ಆದಿಯ ಅರ್‌ಗೆ : ಪಿರಿ+ಅರ್+ಎವು=ಪಿರಿಯರೆವು.

ಪಿರಿಯರೆವೆಂದು ಧಿಕ್ಕರಿಸಿ ಬಯ್ವುದು ತಕ್ಕುದೆ....

ಎನ್ ಪ್ರತ್ಯಯದ ಆದಿಯ ನಕಾರಕ್ಕೆ : ಅತಿಚತುರ+ನ್+ಎನ್=ಅತಿಚತುರನೆಂ.

ಅತಿಚತುರನೆಂ ಕಲಾಪಂ ।

ಡಿತನೆಂ ಕೃತಿಲಕ್ಷಣಾವಧಾನನೆಂ....॥

ಎವು ಪ್ರತ್ಯಯದ ವತ್ವ ಬಿಂದುವಿಗೆ : ತಿರ್ದುವೆವು>ತಿರ್ದುವೆಂ.

ಅವರಾ[ರರೆ]ಮ್ಮಾಳ್ದನೆಡಱನಾಮೆ ತಿರ್ದುವೆಂ.

೨೩೨

ದದಪವಕಾರಂಗಳ್ ತ

ಪ್ಪದೆ ಕಾಲತ್ರಯವಿಭಕ್ತಿಮೂಲದೊಳಕ್ಕುಂ

ದದಪಾದಿಗಿದಾಗಮಮ

ಪ್ಪುದು ವತ್ವಕ್ಕಿಲ್ಲದುಂ ತ್ರಿವಚನಾನುಗತಂ

(ಭೂತ ವರ್ತಮಾನ ಮತ್ತು ಭವಿಷ್ಯತ್) ಕಾಲತ್ರಯದ ದ, ದಪ, ವಕಾರಗಳು ತಪ್ಪದೆ (ಪುರುಷತ್ರಯದ) ವಿಭಕ್ತಿಗಳ ಆದಿಯಲ್ಲಿ ಸೇರುತ್ತವೆ. (ಉಕಾರಾಂತ ಧಾತುವಿಗೆ ಪರವಾದ) ದ, ದಪಗಳ ಆದಿಯಲ್ಲಿ ಇಕಾರಾಗಮವುಂಟಾಗುತ್ತದೆ. ವಕಾರದ (ಆದಿಯ)ಲ್ಲಿ (ಇಕಾರಾಗಮ) ಉಂಟಾಗದು, ಅದು (=ಇಕಾರಾಗಮ) ಮೂರೂ ವಚನಗಳಲ್ಲಿ ಸೇರಿರುತ್ತದೆ.

ದಕಾರಕ್ಕೆ : ಗೆಲ್+ದ+ಅಂ=ಗೆಲ್ದಂ.

....ಒರ್ವನೆ ಗೆಲ್ದಂ ನಿವಾತಕವಚಾಸುರರಂ

ದಪಕಾರಕ್ಕೆ : ಎಟ್ಟಿರ್+ದಪ+ಅಂ=ಎಟ್ಟಿಂದಪಂ

....ವಸಂತರಾಜನೆ

ಟ್ಟಿಂದಪನಿಂದು ನಾಳೆ ಬರ್ದುಕಿಲ್ಲ ವಿಯೋಗಿಗೆ ಪಂಕಜಾನನೇ.

ವಕಾರಕ್ಕೆ : ಪಡೆ+ವ+ಅಂ=ಪಡೆವಂ

ಬಹುತಾಪಕ್ಕೆ ಬಿಗುರ್ತು ವಿಷ್ಣು ಪಡೆವಂ ಮತ್ಸ್ಯಾವತಾರಕ್ಕೆ

ದಕಾರದಾದಿಯ ಇಕಾರಾಗಮಕ್ಕೆ : ತಾಗು+ಇ+ದ+ಅಂ=ತಾಗಿದಂ.
ಒರ್ವನೆ ಮತ್ಸ್ಯನಂ ತಳರೆ ತಾಗಿದನಾಜಿಯೊಳ್....

ದಪಕಾರದಾದಿಯ ಇಕಾರಾಗಮಕ್ಕೆ : ಅಂಜಿಸು+ಇ+ದಪ+ಅಂ=ಅಂಜಿಸಿದಪಂ.
....ಅಂಜಿಸಿದಪಂ ಮೂಲೋಕಮಂ ತಾರಕಂ

ವಕಾರದಾದಿಯ ಇಕಾರಾಗಮ ರಾಹಿತ್ಯಕ್ಕೆ : ಮಾಡು+ವ+ಅಂ=ಮಾಡುವಂ
ಮರುತ್ತರಂಗಿಣಿಯನಂದಾಲಿಂಗನಂ ಮಾಡುವಂ.

೨೩೩

ಪರಿಭಾವಿಸೆ ಕಾಲತ್ರಯ
ಪರಿಣಾಮಿಗಳೆನಿಸಿ ನೆಗಟ್ದ ಮೂಱುಂ ಕ್ರಿಯೆಯೊಳ್
ನಿರುತಂ ಪ್ರತಿಷೇಧಕ್ರಿಯೆ
ಬರೆ ಭೂತಾರ್ಥದೊಳೆ ಸಲ್ವುದೆಂಬರ್ ಪಿರಿಯರ್

ಕಾಲತ್ರಯದಲ್ಲಿ ವ್ಯತ್ಯಾಸಗೊಳ್ಳುವ ಮೂರೂ ಕ್ರಿಯಾಪದಗಳಲ್ಲಿ ಪ್ರತಿಷೇಧರೂಪ ಬರಲು, (ಆ ಪ್ರತಿಷೇಧ ರೂಪಗಳು) ಭೂತಕಾಲ (ಪ್ರತಿಷೇಧ)ದ ರೂಪವನ್ನೇ ತಾಳುವುವೆಂದು ವಿದ್ವಾಂಸರು ಹೇಳುತ್ತಾರೆ.

ಮಾಡಿದಂ (ಭೂ.ಕಾ.)-ಮಾಡಂ(ನಿಷೇಧ)
ಮಾಡಿದಪಂ (ವ.ಕಾ.)- ಮಾಡಂ(ನಿಷೇಧ)
ಮಾಡುವಂ (ಭ.ಕಾ.)-ಮಾಡಂ (ನಿಷೇಧ)

೨೩೪

ಪುರುಷತ್ರಯಮವು ಸ್ವಾರ್ಥೋ
ಚ್ಚರಿತಂಗಳ್ ಯುಗಪದುಕ್ತಿಗುತ್ತಮಪುರುಷಂ
ಪರಮದನುೞಿದಿರೆ ಮಧ್ಯಮ
ಪುರುಷಂ ಕ್ರಮಗಣನಮಿರೆಯುಮೊಲ್ದಂತಿರೆಯುಂ

ಪುರುಷತ್ರಯಗಳು ತಮತಮಗೆ ಸ್ವತಂತ್ರಗಳು. (ವಾಕ್ಯದಲ್ಲಿ)ಕೂಡಿ ನುಡಿಯುವಾಗ (ಇವು) ಕ್ರಮವಾಗಿದ್ದರೂ ಕ್ರಮವ್ಯತ್ಯಯವಾಗಿದ್ದರೂ ಉತ್ತಮಪುರುಷ ಮುಖ್ಯ; ಅದನ್ನು(=ಆ ಉತ್ತಮಪುರುಷವನ್ನು) ಬಿಟ್ಟರೆ ಮಧ್ಯಮಪುರುಷ ಮುಖ್ಯ.

ಸ್ವತಂತ್ರಾರ್ಥಕ್ಕೆ : ಆತನಿರ್ದಂ-ಅವರಿರ್ದರ್.
ನೀನ್ ಕಂಡಯ್-ನೀಂ ಕಂಡಿರ್.
ಆನ್ ಕೇಳ್ದೆಂ-ಆಂ ಕೇಳ್ದೆವು.

ಉತ್ತಮಪುರುಷ ಮುಖ್ಯತ್ವಕ್ಕೆ -
(ಕ್ರಮ) : ಆತನುಂ ನೀನುಮಾನುಂ ಪೊೞಗಾಗಿರ್ದೆವವನಿಪತಿಗೆ ಪಿಸುಣರಿಂ.
(ಕ್ರಮವ್ಯತ್ಯಯ) : ನೀನುಮಾತನುಮಾನುಂ ಮಣಿಕೂಟನಗಕ್ಕೆ ಪೋಪೆವು.
ಆತನುಮಾನುಂ ನೀನುಂ ಕಜ್ಜದ ತೆಱನಱಿದು ಪೇೞ್ವೆವು.
ಆನುಂ ನೀನುಮಾತನುಂ ಬೆಸಕೆಯ್ವೆವು.

ಮಧ್ಯಮಪುರುಷ ಮುಖ್ಯತ್ವಕ್ಕೆ-

(ಕ್ರಮ) ; ಆತನುಂ ನೀನುಂ ಕೂಡಿದಿರಪ್ಪೊಡಾವಹಕ್ಕೆ ಕಿಚ್ಚುಂ ಗಾಳಿಯುಂ ಕೂಡಿದಂತೆ.

(ಕ್ರಮವ್ಯತ್ಯಯ) : ನಾಳಿನ ದಿನದೊಳ್ ನೀನುಮಾತನುಂ ಕೂಡಿದಪಿರ್.

೨೩೫

ತಿಳಿ ತಾಂ ನೀನಾನೆಂಬ
ರ್ಥಳಂಬಿಗಳ್ ಪ್ರಥಮಮಧ್ಯಮೋತ್ತಮಪುರುಷಂ
ಗಳವೇಕವಚನಮೊರ್ವನ
ಬಳಕೆಗೆ ಬಹುವಚನಮೆಲ್ಲರಂ ಪೇೞ್ವೆಡೆಯೊಳ್

ಪ್ರಥಮಪುರುಷ, ಮಧ್ಯಮಪುರುಷ, ಉತ್ತಮಪುರುಷಗಳು ತಾಂ, ನೀಂ, ಆಂ ಎಂಬ ಅರ್ಥಗಳನ್ನು ಅವಲಂಬಿಸಿವೆ; ಅವು ಒಬ್ಬನನ್ನು ಕುರಿತು ಹೇಳುವಾಗ ಏಕವಚನ, ಎಲ್ಲರನ್ನು ಕುರಿತು ಹೇಳುವಾಗ ಬಹುವಚನ.

ಪ್ರಥಮಪುರುಷಕ್ಕೆ : ತಾಂ+ಎಚ್ಚಂ=ತಾನೆಚ್ಚಂ (ಏ. ವ),
....ತಾನೆಚ್ಚಂ ಪೊಚ್ಚಮಲ್ಲದರಿವಾಹಿನಿಯಂ
ತಾಂ+ಆಂ=ತಾವಾ(ಬ. ವ.)
....ತಾವಾ ಸವ್ಯಸಾಚಿಯೊಳ್ ತೊಡರ್ದೞಿಯರ್

ಮಧ್ಯಮಪುರುಷಕ್ಕೆ : ನೀಂ (ಏ. ವ.)
....ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂಟ್ಟಿಡವಾಯ್ತು....
ನೀಂ+ಇರೆ=ನೀಮಿರೆ (ಬ. ವ.)
ನೀಮಿರೆ ಮತ್ತವಾರಣಮುಮಂ ತಾರಕಚಕ್ರವರ್ತಿಗೆ....

ಉತ್ತಮ ಪುರುಷಕ್ಕೆ : ಆಂ+ಅಱಿವೆಂ=ಆನಱಿವೆಂ (ಏ. ವ.)
ಆನಱಿವೆಂ ಪೃಥೆಯಱಿವಳ್
ದಾನವರಿಪುವಱಿವನರ್ಕವಱಿವಂ ದಿವ್ಯ ।
ಜ್ಞಾನಿ ಸಹದೇವನಱಿವಂ
ನೀನಾರ್ಗೆಂದಾರುಮಱಿಯರಂಗಾಧಿಪತೀ ॥
ಆಂ+ಅಱಿವೊಡೆ=ಆಮಱಿವೊಡೆ (ಬ. ವ.)
ಆಮಱಿವೊಡಮುಸಿರಲಮ್ಮೆವಾಳ್ದನ ಗತಿಯಂ

೨೩೬

ಉದುವುವುವೆಂಬಾದೇಶಂ
ಪುದಿದಿರ್ಕುಂ ಪ್ರಥಮಪುರುಷದೇಕಬಹುತ್ವ
ಕ್ಕೊದವಿರ್ದ ನಪುಂಸಕಲಿಂ
ಗದೊಳುದು ಭಾವಾರ್ಥದಲ್ಲಿಯುಂ ಸಂಗಳಿಕುಂ

ನಪುಂಸಕಲಿಂಗದಲ್ಲಿ, ಪ್ರಥಮಪುರುಷ ಏಕವಚನ ಬಹುವಚನಗಳಿಗೆ (ಕ್ರಮವಾಗಿ) ಉದು, ಉವು ಎಂಬ ಆದೇಶಗಳುಂಟು. ಭಾವಾರ್ಥದಲ್ಲಿಯೂ ಉದು ಬರುತ್ತದೆ.

ಏಕವಚನಕ್ಕೆ : ಕರೆ+ದ+ಉದು=ಕರೆದುದು.
ಕರೆದುದು ಕಣ್ಣ ಬೆಳ್ಪನಧರಂ ಕುರುಳೋಳಿಗೆ ಸುರ್ಕಿನೋಲಗಂ
ಪರೆದುದು....

ಬಹುವಚನಕ್ಕೆ : ನಿಮಿರ್+ದ+ಉವು=ನಿಮಿರ್ದುವು.

ನಿಮಿರ್ದುವು ಪೊಳೆದುವಳುಂಕಿದು
ವಮರ್ದುವು ಚುಂಬಿಸಿದುವಪ್ಪಿದುವು ಸಂಭ್ರಮದಿಂ।
ಸಮದೃಷ್ಟಿಯಾಗಿ ಸಿಲ್ಕಿದು
ವೆಮೆಯಿಕ್ಕಲ್ಮಱೆದುವವಳ ಧವಳಕಟಾಕ್ಷಂ ॥

ಭಾವಕ್ಕೆ : ಈ+ಉದು=ಈವುದು

ಈವುದು ಕರ್ಣಂಗೆ ಸಹಜಮಾರೋಪಿತಮೇ

೨೩೭

ನೆಗೞ್ದಾ ನಪುಂಸಕೈಕೋ
ಕ್ತಿಗೆ ಕೆಲರಿತುವಿತ್ತುವತ್ತುವೆಂದುಸಿರ್ವರ್, ನೆ
ಟ್ಟಗೆ ಪುಗಿಸುವರಂತೇಕೋ
ಕ್ತಿಗೆ ತಾಂ ಸ್ತ್ರೀವಿಷಯಮಾಗಳಂತಸ್ಥಿತಿಯಂ

ಆ ನಪುಂಸಕಲಿಂಗ (ಪ್ರಥಮ ಪುರುಷ) ಏಕವಚನ (ಉದು ಎಂಬುದ)ಕ್ಕೆ ಕೆಲವರು ಇತು, ಇತ್ತು, ಅತ್ತುಗಳನ್ನು ಹೇಳುತ್ತಾರೆ. ಸ್ತ್ರೀಲಿಂಗವಾಗಿದ್ದ ಪಕ್ಷದಲ್ಲಿ (ಆ) ಏಕವಚನಕ್ಕೆ ಅಂತ್ಯದಲ್ಲಿ ಅಳ್ ಎಂಬುದನ್ನು ಸೇರಿಸುತ್ತಾರೆ.

ಇತುಗೆ : ಮುಟ್ಟು+ಇತು=ಮುಟ್ಟಿತು.

ಮುಟ್ಟಿತು ಮುಟ್ಟದು ದಿವವಂ
ಮೆಟ್ಟಿತು ಮೆಟ್ಟದು ರಸಾತಳಾಗ್ರಮಂ....

ಇತ್ತುಗೆ : ಓಡು+ಇತ್ತು=ಓಡಿತ್ತು.

ಈಶ್ವರನ ಮನಮಲ್ಲಾಡಿತೋಡಿತ್ತು ಕಿನ್ನರಸೈನ್ಯಂ

ಅತ್ತುಗೆ : ಇರ್+ದ+ಅತ್ತು=ಇರ್ದತ್ತು.

ಈಶ್ವರ ಶಿರಃಕರೋಟಿ ನಗುವಂತಿರ್ದತ್ತು ರಾಗಾಧರಂ

ಅಳ್ಗೆ : ತಡೆ+ದ+ಅಳ್=ತಡೆದಳ್.

ತಡೆದಳ್ ಬಾಸಿಗವಿಕ್ಕುವಾಕೆ....

೨೩೮

ಸವನಾಗಿ ಭೂತದೊಳ್ ಲಿಂ
ಗವಚನದೊಳ್ ತಳ್ತು ವರ್ತಮಾನಭವಿಷ್ಯ
ದ್ವ್ಯವಹೃತಿಗಳ ಗುಂ ಕುಂ ಸ
ಲ್ವುವು ತಾವನ್ಯೈಕವಚನದೊಳ್ ನೆಲಸಿರ್ದುಂ

ವರ್ತಮಾನಕಾಲ, ಭವಿಷ್ಯತ್ಕಾಲಗಳಲ್ಲಿ ವ್ಯವಹರಿಸುವ ಗುಂ ಕುಂ ಎಂಬಿವು (ಮೂಲತಃ) ಪ್ರಥಮಪುರುಷ ಏಕವಚನಕ್ಕೆ ಸಂಬಂಧಿಸಿದ್ದರೂ ಭೂತಕಾಲ, ಲಿಂಗತ್ರಯ, ವಚನತ್ರಯಗಳಲ್ಲಿ ವ್ಯತ್ಯಾಸಗೊಳ್ಳದೆ ಸಲ್ಲುತ್ತವೆ.

ವರ್ತಮಾನಕಾಲ ಭವಿಷ್ಯಂತಿಗಳಿಗೆ :

ಎಮಗೀಗಳೆ ಸೂಚಿಸುಗುಮವರ್ ನಾಳೆ ಕಾಣ್ಗುಂ.
ಕೇಳ್ವಾತನ ಕಿವಿಯುಂ ಕನಲ್ದು ಕರಿಮುರಿವೋಕುಂ

ಭೂತಕಾಲಕ್ಕೆ : ಅಂದು ಮಾಡುಗುಂ, ಅಂದು ಮಾಟ್ಕುಂ

ಲಿಂಗತ್ರಯಕ್ಕೆ : ಭೂವಳಯಾಧಿಪಂ ನುಡಿಗುಮಾ ದೂತಂಗೆ ಸ್ವಚಿತ್ತಗತಾರ್ಥಮಂ.

ಸಸಿಯಂ ನೋಡಿ ತಳೋದರಿ
ಬಿಸುಸುಯ್ಗುಂ ಬಯ್ಗುಮಂತೆ ಮಾಡಿದ ಬಿದಿಯಂ.
ಕೋಗಿಲೆಯುಲಿಗುಂ ಬೀಸುಗುಂ ಗಂಧವಾಹಂ.

ವಚನತ್ರಯಕ್ಕೆ :

ಒರ್ವನೆ ಗೆಲ್ಗುಂ ಕಿರೀಟಿ ಕೌರವಬಲಮಂ.
ಬಲನಾರಾಯಣರಿರ್ವರುಂ ನುಡಿಗುಮಾ ದೂತಂಗೆ.
ಮೂದೇವರುಮಂ ಮೂಜು ಕೋಣೆವುಗಿಸುಗುಮಸುರರ್.

೨೩೯

ಇಸುವಿನ ಸುಕಾರಮಂ ಲೋ
ಪಿಸುವರ್ ಕುಂ ಪರದೊಳಾಗೆ, ಕುಂಗೆ ಕೆಲಂಬರ್
ಪೊಸಯಿಸುವರ್ ದ್ವಿರ್ಭಾವಮ
ನೆಸಗಲದಂ ಬೇಡ ಕಿವಿಗೆ ಸೊಗಯಿಸದೆಡೆಯೊಳ್

(ಧಾತುವಿಗೆ) ಕುಂ ಪರವಾದರೆ ಇಸುವಿನ ಸುಕಾರವನ್ನು ಲೋಪಿಸುತ್ತಾರೆ. ಕೆಲವರು ಕುಂಗೆ ದ್ವಿತ್ವವನ್ನು ಹೇಳುತ್ತಾರೆ. ಕಿವಿಗೆ ಸೊಗಯಿಸದಲ್ಲಿ ಅದನ್ನು (=ಕುಂ ದ್ವಿತ್ವವನ್ನು) ಮಾಡಕೂಡದು.

ಸುಕಾರಲೋಪಕ್ಕೆ : ಕೇಳಿಸು+ಕುಂ=ಕೇಳಿಕುಂ.
ಇಂದಿನ ದಿನದೊಳ್ ರಂಭೆ ಕೇಳಿಕುಂ ಪೆಕ್ಕಣಮಂ

ದ್ವಿತ್ವಕ್ಕೆ : ಪಾಲಿಸು+ಕುಂ=ಪಾಲಿಕ್ಕುಂ
ಪಾಲಿಕ್ಕುಂ ಜಗಮನೆಲ್ಲಮಂ ಕಮಲಭವಂ.

ಕಿವಿಗೆ ಸೊಗಯಿಸದೆಡೆಗೆ : ಒಂದಿಸು+ಕುಂ =ಒಂದಿಕ್ಕುಂ
ಬಿಡಿಸು+ಕುಂ=ಬಿಡಿಕ್ಕುಂ.

೨೪೦

ಸೊಗಯಿಪುವು ಗೆಕೆಗಳನ್ಯೋ
ಕ್ತಿಗೆ ವಿಧ್ಯರ್ಥಕ್ಕೆ ಮಧ್ಯಮೋತ್ತಮಪುರುಷ
ಪ್ರಗತ ಬಹೂಕ್ತಿಯೊಳಿಮುಮೆಂ
ದೊಗೆತರ್ಕುಂ ಯುಗಪದುಕ್ತಿಯೊಳ್ ಕ್ರಮದಿಂದಂ

ವಿಧ್ಯರ್ಥದ ಪ್ರಥಮಪುರುಷಕ್ಕೆ ಗೆ ಕೆ ಪ್ರತ್ಯಯಗಳುಂಟಾಗುತ್ತವೆ. ಯುಗಪದುಕ್ತಿಯಲ್ಲಿ ಮಧ್ಯಮಪುರುಷ ಉತ್ತಮಪುರುಷ ಬಹುವಚನಗಳಿಗೆ ಕ್ರಮವಾಗಿ ಇಂ ಅಂ ಬರುತ್ತವೆ.

ಪ್ರಥಮ ಪುರುಷ ಏಕವಚನದ ಗೆಕಾರ ಕೆಕಾರಗಳಿಗೆ :
ಅವಂ ಕುಡುಗೆ.
ಪಾಳಿಸುತಿರ್ಕೆ ವಿಷ್ಣು ಪರಿಪಾಳಿಕೆ ಜಿಷ್ಣುವಲಂಕರಿಷ್ಣು.

ಪ್ರಥಮಪುರುಷಬಹುವಚನದ ಗೆಕಾರ*ಕೆಕಾರಗಳಿಗೆ :
ಅತಿರಥ ಮಹಾರಥರ್ಕಳ್
ಪ್ರತಿಮುಖಮಾಗೊಡ್ಡಿ ನಿಲ್ಕೆ....

---

* ವಿಚಾರ: ಗೆಕಾರಕ್ಕೆ ಪ್ರಯೋಗವನ್ನು ಕೊಟ್ಟಿಲ್ಲ.

ಯುಗಪದುಕ್ತಿಯ ಉತ್ತಮಪುರುಷ ಬಹುವಚನದ ಇಂಗೆ: ಸಮಕಟ್ಟು+ಇಂ=ಸಮಕಟ್ಟಿಂ.
ವ್ಯಾಳದಂತಿಕುಲಮಂ ಸಮಕಟ್ಟಿಂ.
ಯುಗಪದುಕ್ತಿಯ ಉತ್ತಮಪುರುಷ ಬಹುವಚನದ ಅಂಗೆ : ತಾಗು+ಅಂ=ತಾಗುವಂ.
ಅನಿಬರುಮೊಂದಾಗಿ ತಾಗುವಂ ಫಲ್ಗುಣನೊಳ್.

೨೮೧

ಪರಿಣಮಿಸಿರ್ಕುಂ ಪ್ರಕೃತಿ
ಸ್ವರೂಪದಿಂ ಮಧ್ಯಮೈಕವಚನಂ ವಿಧಿಯೊಳ್
ದೊರೆಕೊಳ್ಗುಮುತ್ವಮಿರ್ಗಂ
ಕುರಿಪುದು ವಿಧಿಯಾ ಕ್ರಿಯಾಸಮಭಿಹಾರದೊಳಂ

ವಿಧ್ಯರ್ಥದಲ್ಲಿ ಮಧ್ಯಮಪುರುಷ ಏಕವಚನವು ಪ್ರಕೃತಿಸ್ವರೂಪದಲ್ಲಿರುತ್ತದೆ. ಇರ್ (ಎಂಬ ಧಾತು)ಗೆ ಉಕಾರ ದೊರೆಕೊಳ್ಳುತ್ತದೆ. ಕ್ರಿಯಾಸಮಭಿಹಾರದಲ್ಲಿಯೂ ವಿಧ್ಯರ್ಥ ತಲೆದೋರುತ್ತದೆ.*

ಪ್ರಕೃತಿ ಸ್ವರೂಪಕ್ಕೆ : ವಾಯಸದಂತೆ ನೋಡು ಬಕದಂತಿರೆ ಮೆಲ್ಲನೆ ಮೆಟ್ಟು....
ಇರ್ ಧಾತುವಿನ ಉಕಾರಕ್ಕೆ : ಇರು ಮರುಳೆ ಶುಷ್ಕವೈಯಾ
ಕರಣಂಗಂ....
ಕ್ರಿಯಾಸಮಭಿಹಾರದ ವಿಧ್ಯರ್ಥಕ್ಕೆ : ನಡೆನಡೆಯೆಂದೇಂ ನಡೆದುದೊ
ಪಡೆ ಪಡೆದಚ್ಚರಿಯನಾ ಸುರಾಪಗೆ ವರೆಗಂ ||

೨೮೨

ಧಾತುಗಿಸು ಕನ್ನಡಕ್ಕಾ
ಹೇತುವಿನೊಳ್ ಸ್ವಪರಕರ್ತೃವೊಳ್, ಸಂಸ್ಕೃತದಾ
ಧಾತುಗನೇಕಾಕ್ಷರಕಿಸು
ಜಾತಂ ನಿಜಕರ್ತೃವೊಳ್ ಪ್ರಯೋಜನದೆಡೆಯೊಳ್

ಕನ್ನಡ ಧಾತುವಿಗೆ ಹೇತುವಿನಲ್ಲಿ, ಸ್ವಕರ್ತೃವಿನಲ್ಲಿ, ಪರಕರ್ತೃವಿನಲ್ಲಿ ಇಸು ಪ್ರತ್ಯಯವುಂಟು. ಸಂಸ್ಕೃತದ ಅನೇಕಾಕ್ಷರ ಧಾತುವಿಗೆ ಸ್ವಕರ್ತೃವಿನಲ್ಲಿ ಪ್ರಯೋಜನದಲ್ಲಿ ಇಸು (ಪ್ರತ್ಯಯ) ಉಂಟು.

ಕನ್ನಡ ಧಾತುವಿನ ಹೇತುವಿಗೆ : ಕಾಣ್+ಇಸು+ದಂ=ಕಾಣಿಸಿದಂ.
ಮೃಗಗಣಮಂ ಪೋದ ಪಜ್ಜೆಯಿಂ ಕಾಣಿಸಿದಂ
ಕನ್ನಡ ಧಾತುವಿನ ಸ್ವಕರ್ತೃವಿಗೆ : ದಳ್+ಇಸು+ದಂ=ದಳ್ಳಿಸಿದಂ.
ಘೃತಾಹುತಿವಡೆದನಲನಂತೆ ಮಿಗೆ ದಳ್ಳಿಸಿದಂ.
ಕನ್ನಡ ಧಾತುವಿನ ಅನ್ಯಕರ್ತೃವಿಗೆ : ಕಡೆ+ಇಸು+ದಂ=ಕಡೆಯಿಸಿದಂ.
ಕಡೆಯಿಸಿದಂ ಸುರರಿನಸುರರಿಂ ಪಾಲ್ಗಡಲಂ.
ಸಂಸ್ಕೃತ ಧಾತುವಿನ ಸ್ವಕರ್ತೃವಿಗೆ : ಖಂಡ+ಇಸು+ದಂ=ಖಂಡಿಸಿದಂ.
ಬರ್ಪಂಬಂ ನಿಶಿತವಿಶಿಖದಿಂ ಖಂಡಿಸಿದಂ.
ಸಂಸ್ಕೃತ ಧಾತುವಿನ ಪ್ರಯೋಜನ ವಸ್ತುವಿಗೆ : ಚಿತ್ರ+ಇಸು+ದಂ=ಚಿತ್ರಿಸಿದಂ.

---

* ವಿಚಾರ : ಕ್ರಿಯಾಸಮಭಿಹಾರ=ಕ್ರಿಯೆಯ ಪುನರುಕ್ತಿ. ಇಲ್ಲಿ ಇರು ಎಂಬುದರ ಸಮಭಿಹಾರ ಪ್ರಯೋಗವನ್ನು ಕೊಟ್ಟಿಲ್ಲ.

೨೪೩

ನೆಗೞ್ದಿರ್ದ ರೇಫಱಟನಾಂ

ತಗಾಂತಸಾಂತೋತ್ವದಿದಿರ ವತ್ವಂ ಪತ್ವಂ

ಪುಗುಗುಂ ದ್ವಿತ್ವಂ ಮೇಣ್ ಸುಗು

ಯುಗಕ್ಕೆ ಲೋಪೋಕ್ತಿ ನಾಂತಣಾಂತಂ ಬತ್ವಂ

ರೇಫೆ, ಱಕಾರ, ಟಕಾರ, ನಕಾರ, ಗಕಾರ, ಸಕಾರ, ಓಕಾರಾಂತ ಧಾತುಗಳ ಪರದಲ್ಲಿಯ (ಭವಿಷ್ಯತ್ಕಾಲದ) ವಕಾರ ಪಕಾರವಾಗುತ್ತದೆ; (ಆ ಪಕಾರ)ವಿಕಲ್ಪದಿಂದ ದ್ವಿತ್ವವಾಗುತ್ತದೆ. ಸಕಾರ ಗಕಾರಾಂತ (ಧಾತುಗಳ ಅಂತ್ಯ)ಕ್ಕೆ ಲೋಪುವುಂಟಾಗುತ್ತದೆ. (ಧಾತು) ನಕಾರ ಣಕಾರಾಂತವಾಗಿದ್ದರೆ (ಪರದ ವಕಾರಕ್ಕೆ) ಬಕಾರವುಂಟಾಗುತ್ತದೆ.

ರೇಫಕ್ಕೆ : ಇರ್+ವ>ಪ+ಅಂ=ಇರ್ಪಂ.
ಆ ಪುರದೊಳಿರ್ಪನಿನಕುಲ
ದೀಪಂ ವಿಪುಲಪ್ರತಾಪಂ.

ಱಕಾರಕ್ಕೆ : ತೋಱ್>ತೋರ್+ವ>ಪ+ಅಂ=ತೋರ್ಪಂ.
ಮಾರ್ಪಡೆಗೆ ತೋಳಬಾಳ ಕೂರ್ಪಂ ತೋರ್ಪಂ

ಟಕಾರಕ್ಕೆ : ಬಿಸುಡು>ಬಿಸುಟ್+ವ>ಪ+ಅಂ=ಬಿಸುಟ್ಪಂ.
....ಏಳಿದಿಕೆಗಂಡು ಬಿಸುಟ್ಪನೆಂಬಿನಿತು....

ನಕಾರಕ್ಕೆ : ಆನ್+ವ>ಪ+ಅಂ=ಆಂಪಂ.
....ಮಲೆದು ನರನೊಳಾಂಪಂ ಗಾಂಪಂ

ಗಕಾರಕ್ಕೆ : ಮಿಱುಗು+ವ>ಪ+ಅಂ=ಮಿಱುಪಂ
ಲಲಾಟದೊಳ್ ಮಿಱುಪ ಕಣ್ಣುರಿಯಂತೆ....

ಸಕಾರಕ್ಕೆ : ಬರಿಸು+ವ>ಪ+ಉದು=ಬರಿಪುದು.
ನಿನ್ನೊಡನೊಂದು ಭಾಗಮಂ ಬರಿಪುದು ಕಾಪುಮಾಡುವುದು.

ಓಕಾರಕ್ಕೆ : ಓ+ವ>ಪ+ಅಂ=ಓಪಂ.

ದ್ವಿತ್ವಕ್ಕೆ : ಉದಯಿಸು+ವ>ಪ+ಅಂ=ಉದಯಿಪ್ಪಂ
ಉದಯಿಪ್ಪಂ ಗಂಡಮಾರ್ತಾಂಡನಲರ್ಚುಗೆಮ್ಮ....

ಸಕಾರ, ಗಕಾರಾಂತ ಧಾತುಗಳ ಅಂತ್ಯಲೋಪಕ್ಕೆ ಮೇಲಿನ ಪ್ರಯೋಗಗಳನ್ನು ನೋಡಬಹುದು.

ನಕಾರಕ್ಕೆ : ತಿನ್+ವ>ಬ+ಅಂ=ತಿಂಬಂ
....ಅಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ....

ಣಕಾರಕ್ಕೆ : ಉಣ್+ವ >ಬ+ಅಂ=ಉಣ್ಬಂ
ತಿರಿದುಣ್ಬಂ ಹರನಗ್ನಿ ಕಾಡಕಸವಂ ತಿಂದಿರ್ಪಂ....

೨೪೪

ದಪದ ಪಕಾರಕ್ಕಂ ಸಂ

ದಿಪುದು ವಿಕಲ್ಪದೆ ಬುಧರ್ಕಳಿಂ ದ್ವಿತ್ವಂ, ಸಂ

ದಿಪುದು ನಕಾರಂ ನೋ ಧಾ

ತುಪರದೊಳಾ ದದಪಮೊದವೆ, ನೋಗಂ ಹ್ರಸ್ವಂ

ದಪ ಎಂಬುದರ ಪಕಾರಕ್ಕೂ ವಿದ್ವಾಂಸರಿಂದ ವಿಕಲ್ಪವಾಗಿ ದ್ವಿತ್ವವುಂಟಾಗುತ್ತದೆ. ನೋ ಧಾತುವಿನ ಪರದಲ್ಲಿ ದ ಪದಗಳಿರಲು ನಕಾರವುಂಟಾಗುತ್ತದೆ. ಆಗ ನೋ ಎಂಬುದಕ್ಕೆ ಹ್ರಸ್ವವುಂಟಾಗುತ್ತದೆ.

ದ್ವಿತ್ವ ವಿಕಲ್ಪಕ್ಕೆ : ನಿಲಿಸಿದಂ, ನಿಲಿಸಿದಪ್ಪಂ,
ಇಱಿದಪ್ಪಂ ಮಗಧೇಶನಂ ನಿಲಿಸಿದಪ್ಪಂ ಚೋಟನಂ ಭಾಷೆಯಂ
ಹರಿ ಕೇಳ್....

ನೋ ಧಾತುವಿಗೆ : ನೋ>ನೊ+ನ್+ದ+ಅಂ=ನೊಂದಂ.
ನೋ>ನೊ+ನ್+ದಪ+ಅಂ=ನೊಂದಪಂ.

೨೪೫

ಸತತಂ ಮಧ್ಯಮಪುರುಷ
ಪ್ರತಿಷೇಧದ ವಿಧಿಯೊಳಂ ಪ್ರಯೋಜನವಸ್ತ್ವಾ
ಶ್ರಿತ ಹೇತುಕ್ರಿಯೆಯೊಳಮ
ನ್ವಿತಮಲ್ಕ್ರಿಯೆ ತಾಂ ಕ್ರಿಯಾರ್ಥಮಪ್ಪೆಡೆಗಳೊಳಂ

ಮಧ್ಯಮಪುರುಷ ಪ್ರತಿಷೇಧದ ವಿಧ್ಯರ್ಥದಲ್ಲಿಯೂ ಪ್ರಯೋಜನ ವಸ್ತುವಿಗೆ ನಿಮಿತ್ತವಾದ ಕ್ರಿಯೆಯಲ್ಲಿಯೂ ಕ್ರಿಯೆಯು ಕ್ರಿಯಾರ್ಥವನ್ನು ಹೇಳುವಲ್ಲಿಯೂ ಅಲ್ ಪ್ರತ್ಯಯ ಹತ್ತುತ್ತದೆ.

ವಿಧ್ಯರ್ಥಕ್ಕೆ : ಮೀಱ್+ಅಲ್+ಇಂ=ಮೀಱಲಿಂ.
ಬಿಲ್ಲೆಱೆಯನೆಂದುದೆ ಮಾತು ಮೀಱಲಿಂ ....

ಪ್ರಯೋಜನ ವಸ್ತುಕ್ರಿಯೆಗೆ : ಇಱಿ+ಅಲ್ =ಇಱಿಯಲ್
ಇಱಿಯಲ್ ತಕ್ಕಳವರ್ಥಿಗಳ್ಗೆ ಬಿಡದೀಯಲ್ ತಕ್ಕ ಸಂಪತ್ತಿ....

ಕ್ರಿಯಾರ್ಥದ ಕ್ರಿಯೆಗೆ : ಈ+ಅಲ್=ಈಯಲ್.
ಈಯಲ್ಬಂದತ್ತು ಕಲ್ಪಾಂಘ್ರಿಪಮಭಿಮತಮಂ.

೨೪೬

ಸಂದಿಪುದಲುವಿನ ಪರದೊಳ್
ಬಂದು ಕೆಕಾರಮುಮದೊರ್ಮೆ ವೈಕಲ್ಪಿಕದಿಂ
ಸಂದಿಪುದಲ್ಗಂ ಲೋಪಂ
ಬಂದಾ ಪ್ರತಿನಿಷೇಧವಿಧಿಯುಮೊದವದ ಪಕ್ಷಂ

(ಮಧ್ಯಮಪುರುಷ) ಪ್ರತಿಷೇಧದ ವಿಧ್ಯರ್ಥ ಪ್ರಾಪ್ತವಾಗದ ಪಕ್ಷದಲ್ಲಿ, ಅಲ್ ಎಂಬುದರ ಮುಂದೆ ಕೆಕಾರ ಬರುತ್ತದೆ. ವಿಕಲ್ಪದಿಂದ ಅಲ್‌ಗೆ ಲೋಪವುಂಟಾಗುತ್ತದೆ.

ಕೆಕಾರಕ್ಕೆ : ಬಿತ್ತರಿಸು+ಅಲ್+ಕೆ=ಬಿತ್ತರಿಸಲ್ಕೆ.
....ಬಿತ್ತರಿಸಲ್ಕೆವೇೞ್ ಸುವರ್ಣೋತ್ಕರಮಂ....

ಅಲುವಿನ ವಿಕಲ್ಪಲೋಪಕ್ಕೆ : ತರಲ್ವೇೞ್, ತರವೇೞ್.
ತರವೇೞ್ ಸನ್ನದ್ಧವಾಜಿಸಾಧನಮಂ.

೨೪೭

ಪ್ರತಿಪಾದ್ಯಮಿತ್ವಮುತ್ವಂ
ಮತಿವಂತರಿನೆಯ್ದೆ ಪೂರ್ವಕಾಲಕ್ರಿಯೆಗಾ
ಯುತುಮುತ್ತುಮುತ್ತೆಯುತೆಯೆಂ
ದು ತಗುಳ್ಗುಂ ವರ್ತಮಾನವಿಹಿತಕ್ರಿಯೆಯೊಳ್

ವಿದ್ವಾಂಸರಿಂದ ಭೂತಕಾಲಕ್ರಿಯೆಗೆ ಇಕಾರ ಉಕಾರಗಳು ಪ್ರಯೋಗಿಸಲ್ಪಡುತ್ತವೆ. ವರ್ತಮಾನಕ್ರಿಯೆಯಲ್ಲಿ ಉತುಂ, ಉತ್ತುಂ, ಉತ್ತೆ, ಉತೆಗಳು ಹತ್ತುತ್ತವೆ.

ಭೂತಕಾಲದ ಇಕಾರಕ್ಕೆ : ತಿರ್ದು+ಇ=ತಿರ್ದಿ.
ತಿರ್ದಿ ನರನುದ್ವಮಿಸೆ ಜೀ
ಟಿಟ್ಟಂ....

ಭೂತಕಾಲದ ಉಕಾರಕ್ಕೆ : ಕುಡಿ+ದ+ಉ=ಕುಡಿದು.
ಮಿಂದುಂಡು ಕುಡಿದು ಮಗುಟ್ದುಂ
ಬಂದಿರ್ದೊಡಮಿರ್ಪಂ....

ವರ್ತಮಾನದ ಉತುಗೆ : ಸೂಸು+ಉತಂ= ಸೂಸುತುಂ.
ಸೂಸುತುಂ ನದನದ್ಯಚ್ಚಜಲಂಗಳಂ

ವರ್ತಮಾನದ ಉತ್ತುಗೆ : ಕೆದಱ್+ಉತ್ತುಂ=ಕೆದಱುತ್ತುಂ,
ಕೆದಱುತ್ತುಂ ಮಣಲಂ....

ವರ್ತಮಾನದ ಉತ್ತೆಗೆ : ಕಾದು+ಉತ್ತೆ=ಕಾದುತ್ತೆ
....ಪೋ ಪೋಗು ಕಾದುತ್ತೆ ಕ
ಣ್ಗುತ್ತಲ್ ಬಂದಪೆ ಸಲ್ಲವೆಮ್ಮೊಳಿವು....

ವರ್ತಮಾನದ ಉತೆಗೆ : ತಿಱು+ಉತೆ=ತಿಱುತೆ
ತನ್ನಂಬೆಗೆ ಪೇಟ್ದುದಂ ತಿಱುತಿರ್ಪರ್

೨೪೮

ದ ದಪಂಗಳ್ ಪರದೊಳ್ ತಾ
ಮೊದವಿರೆ ಮೀಯೆಂಬುದರ್ಕೆ ತರ್ಬರ್ಗಳ್ಗೊಂ
ದಿದ ಕೊಲ್ಸಲ್ಗಳಮರ್ದಿ
ರ್ಪುದು ನತ್ವಂ ನಿಲ್ಗೆ ಬಲ್ಲರಿಂದೆ ವಿಕಲ್ಪಂ

ಪರದಲ್ಲಿ (ಭೂತಕಾಲದ) ದ, (ವರ್ತಮಾನಕಾಲದ) ಪದಗಳು ಇರಲು ಮೀ (ಧಾತುವಿನ ದೀರ್ಘ), ತರ್ ಬರ್ (ಧಾತುಗಳ ರೇಫ), ಕೊಲ್ ಸಲ್ (ಧಾತುಗಳ ಲಕಾರ)ಗಳಿಗೆ ನಕಾರಾದೇಶವಾಗುತ್ತದೆ. ನಿಲ್ ಎಂಬುದರ ವಿಷಯದಲ್ಲಿ ಇದು ವಿಕಲ್ಪ.

ನಕಾರಾದೇಶಕ್ಕೆ : ಮೀ+ದಂ>ಮಿನ್+ದಂ=ಮಿಂದಂ
ಅಲರಮಟಿಯೊಳ್ ಮಿಂದಂ ಭೂಪಾಲಮನ್ಮಥನಾಜಿಯೊಳ್....
ತರ್+ದಂ>ತನ್+ದಂ=ತಂದಂ.
ನಡೆತಂದಂ ಮೇರೆದಪ್ಪಿ ಕವಿವಂಬುಧರಂಬೊಲ್.

ಬರ್+ದ>ಇನ್+ದಂ=ಬಂದಂ.

ಬಂದಂ ಫಲ್ಗುಣನಿಲ್ಲಿ ಸಂದೆಯಮಣಂ ತಾನಿಲ್ಲ.

ಕೊಲ್+ದಂ>ಕೊನ್+ದಂ=ಕೊಂದಂ.

ಕೊಂದಂ ಕೊಲ್ವಂತೆ ರಸಮನಂಜನಸಿದ್ಧಂ

ಸಲ್+ದಂ>ಸನ್+ದಂ=ಸಂದಂ.

ಬೇಡರ ವೋಲ್ ಮಸಗಿ ತುಱುಗೊಳಲ್ ತಱಿಸಂದಂ.

ಇದೇ ರೀತಿ ಮಿಂದಪಂ, ತಂದಪಂ. ಬಂದಪಂ,ಕೊಂದಪಂ. ಸಂದಪಂ,

ವಿಕಲ್ಪದ ನಿಲ್ಗೆ : ನಿಲ್+ದಂ>ನಿನ್+ದಂ=ನಿಂದಂ, ನಿಲ್+ದಂ>ತಂ=ನಿಲ್ತಂ.

ಮಂಡಲವ್ಯೂಹವನೊಡ್ಡಿನಿಂದನಿಱಿಯಲ್ ನಿಂದಂ...

ನಿಲ್ತಂ ಬೆನ್ನೊಳ್ ಗಾಂಡೀವಿ

ಇದೇ ರೀತಿ ನಿಂದಪಂ, ನಿಲ್ತಪಂ.

೨೪೯

ಪ್ರಕೃತಿಯ ಪೂರ್ವದಿಕಾರದೊ
ಉಕಾರದೊಳ್ ಹ್ರಸ್ವದೇತ್ವಮೋತ್ವಂ ಬಹುಲಂ
ಪ್ರಕಟಂ, ತರ್ ಬರ್ಗಳ ಮೊದ
ಲಕಾರದೊಳ್ ದೀರ್ಘವಿಧಿ ವಿಲೋಮಕ್ರಿಯೆಯೊಳ್

(ದ ದಪಗಳು ಪರವಾದ) ಪ್ರಕೃತಿಗಳ ಮೊದಲ ಇಕಾರ, ಉಕಾರಗಳಿಗೆ ಕ್ರಮವಾಗಿ ವಿಕಲ್ಪದಿಂದ ಎ. ಒ. ಆದೇಶವಾಗುತ್ತವೆ. ಪ್ರತಿಷೇಧಕ್ರಿಯೆಯಲ್ಲಿ ತರ್ ಬರ್ (ಧಾತು)ಗಳ ಮೊದಲ ಅಕಾರಕ್ಕೆ ದೀರ್ಘವುಂಟಾಗುತ್ತದೆ.

ಇಕಾರದ ಎಕಾರಕ್ಕೆ : ಗಿಱು+ದ+ಅಂ=ಗೆತ್ತಂ.

ಮಗಿಲಂ ಮಾರಾನೆ ಗೆತ್ತಂ....

ಉಕಾರದ ಒಕಾರಕ್ಕೆ : ಕುಡು+ದ+ಅಂ=ಕೊಟ್ಟಂ

...ಎನಿತುಮನಿತುಮಂ ಧರ್ಮಜಂ ಸೂಱೆಗೊಟ್ಟಂ.

ಇದೇ ರೀತಿ ಗೆತ್ತಪಂ, ಕೊಟ್ಟಪಂ.

ವಿಕಲ್ಪಕ್ಕೆ : ಇರ್+ದ+ಅಂ=ಇರ್ದಂ, ಉಡು+ದ+ಅಂ=ಉಟ್ಟಂ.

ಪಸೆಯಿರ್ದಂ ಗರುಡವೇಗನೃಪನಂದನೆಯೊಳ್.

ಆಗಳೆ ಗಂಡುಡಿಗೆಯುಟ್ಟು, ಬಿಟ್ಟು ಹಿಣಿಲಂ ತುಱುಬಂ.

ಇದೇ ರೀತಿ ಇರ್ದಪಂ, ಉಟ್ಟಪಂ.

ಪ್ರತಿಷೇಧಕ್ರಿಯೆಯ ದೀರ್ಘಕ್ಕೆ : ತರ್+ಅಂ>ತಾರಂ.

ಪತಿಗೆಂದುಂ ಯುದ್ಧದೊಳ್ ಬನ್ನಮಂ ತಾರಂ.

೨೫೦

ಧಾತುಗಳಂತ್ಯದ ವರ್ಗೋ
ಪೇತತೃತೀಯಾಕ್ಷರಕ್ಕೆ ತಾಂ ಪ್ರಥಮತ್ವಂ
ಮಾತೇಂ ವ್ಯಂಜನರೂಪದಿ
ನೇತೆಱದಿಂ ಸ್ವಂತಧಾತುಗಕ್ಕುಂ ಚತ್ವಂ

(ದ ಪದಗಳು ಪರವಾದ ಹ್ರಸ್ವಾದಿ ಉಕಾರಾಂತ) ಧಾತುಗಳ ಅಂತ್ಯದ ವರ್ಗ ತೃತೀಯಾಕ್ಷರಗಳಿಗೆ, ವ್ಯಂಜನರೂಪದಿಂದ (ಅವುಗಳ) ಪ್ರಥಮಾಕ್ಷರಗಳು ಆದೇಶವಾಗುತ್ತವೆ; ಸುಕಾರಾಂತ ಧಾತುವಿಗೆ ಚಕಾರಾದೇಶವಾಗುತ್ತದೆ.

ಗಕಾರದ ಕಕಾರಕ್ಕೆ : ಪುಗು+ದ+ಅಂ=ಪೊಕ್ಕುಂ.
ಪೊಕ್ಕನಂದು ನಿಜಮಂದಿಮಂ ಪರಸೈನ್ಯಭೈರವಂ
ಡಕಾರದ ಟಕಾರಕ್ಕೆ : ಕುಡು+ದ+ಅಂ=ಕೊಟ್ಟಂ.
ಪಿಡಿಯೆಂದಸಿತಾಳಪತ್ರಮಂ ಯತಿ ಕೊಟ್ಟಂ.
ದಕಾರದ ತಕಾರಕ್ಕೆ : ಮುದು+ದ+ಅಂ=ಮುತ್ತಂ.
ಮುತ್ತದು ನೇಸಱ ತೇಜಂ
ಸತ್ತುದು ದಾವಾಗ್ನಿ....
ಸಕಾರದ ಚಕಾರಕ್ಕೆ : ಬಿಸು+ದ+ಅಂ=ಬೆಚ್ಚಂ.
ಕಳ್ಳವೆಳ್ಳಿವಟ್ಟಲ್ ಬಾಯೊಳ್ ಬೆಚ್ಚಂತಿರೆ ಸತಿ....
ಇದೇ ರೀತಿ ಪೊಕ್ಕಪಂ, ಕೊಟ್ಟಪಂ, ಮುತ್ತಪಂ, ಬೆಚ್ಚಪಂ.

೨೫೧

ಱಾಂತದೊಳಂ ಮೃತಿದಾನಾ
ರ್ಥಾಂತದೊಳಂ ವ್ಯಂಜನದ ತಕಾರಂ, ದೀರ್ಘಂ
ಪಿಂತಿರೆ ಬರ್ಕುಂ ಹ್ರಸ್ವತೆ,
ಱಾಂತಕ್ಕಂ ರೇಫಮೊರ್ಮೆ ತವುಗೆ ಪಕಾರಂ

(ದ ದಪಗಳು ಪರವಾದ) ಱಾಂತ(ಧಾತುವಿನ ಱಕಾರ)ದಲ್ಲಿ, ಸಾ(=ಮೃತಿ) ಈ (=ದಾನ) ಎಂಬ ಧಾತುಗಳ ಪರದಲ್ಲಿ ವ್ಯಂಜನರೂಪದ ತಕಾರ ಬರುತ್ತದೆ. (ಆಗ ಧಾತುವಿನ) ಆದಿಯ ದೀರ್ಘಕ್ಕೆ ಹ್ರಸ್ವ ಬರುತ್ತದೆ. ಕೆಲವು ಸಲ ಱಾಂತಕ್ಕೆ ರೇಫೆಯುಂಟಾಗುತ್ತದೆ. ತವುಗೆ (=ತವು ಧಾತುವಿನ ವಕಾರಕ್ಕೆ) ಪಕಾರಾದೇಶವಾಗುತ್ತದೆ.

ಱಕಾರದ ತಕಾರಕ್ಕೆ : ಗೆಱು+ದ+ಅಂ=ಗೆತ್ತಂ
ಸಾಳಭಂಜಿಕೆ ಗೆತ್ತು ನೋಡಿದಂ ಲತಾಕೋಮಲೆಯಂ.
ಸಾ ಧಾತುವಿಗೆ : ಸಾ+ದ+ಅರ್=ಸತ್ತರ್.
ಸತ್ತರ್ ಕಾದಿ ನಿನ್ನುಳ್ಳರೆಲ್ಲರುಂ ಬೆನ್ನಿತ್ತರ್ ಕೆಲರ್
ಈ ಧಾತುವಿಗೆ : ಈ+ದ+ಅಂ=ಇತ್ತಂ.
....ನಗೆಮೊಗ
ದೊಳುಗಿದು ಕವಚಮನಿಂದ್ರಂಗಿತ್ತಂ ಕರ್ಣಂ.
ಱಕಾರವ ರೇಫೆಗೆ : ಅಱು+ದ+ಅಂ=ಅರ್ತಂ.
ಅರ್ತ ಕದಂಪು ಬತ್ತಿದ ಕಾಲುಂ....
ತವುಗೆ : ತವು+ದ+ಅಂ=ತಪ್ಪಂ.
ತಪ್ಪಂ ತನ್ನೊಳ್ ಪಳಂಚಿ ಕಿಡಿಗುಟ್ಟಿ, ತಪ್ಪುವಂಬುಗಳನವಂ.

೨೫೨

ನಿರುತಂ ಕಚಟತಪಂಗಳ

ಪರದ ದಕಾರಕ್ಕೆ ಪೂರ್ವ ರೂಪಮದಕ್ಕುಂ,

ಪರವರ್ಣಂ ಧಾತ್ವಂತ್ಯದೊ

ಳಿರೆ ಡತ್ವಂ, ಮೇಣ್ ತಕಾರಮೊರ್ಮೆ ಟಕಾರಂ

ಕಚಟತಪಗಳ ಪರದ ದಕಾರಕ್ಕೆ ಪೂರ್ವಾಕ್ಷರದ (=ಕಚಟತಪಗಳ) ರೂಪ ಒದಗುತ್ತದೆ. (ಕಚಟತಪಗಳಿಗೆ) ಅನ್ಯವಾದ ವರ್ಣಗಳು ಧಾತ್ವಂತ್ಯದಲ್ಲಿದ್ದರೆ (ಪರದ ದಕಾರಕ್ಕೆ) ಡಕಾರ, ತಕಾರ, ಒಮ್ಮೆ ಟಕಾರ ಬರುತ್ತದೆ.

ಕಕಾರಕ್ಕೆ : ಮಿಗು+ದ+ಅರ್=ಮಿಕ್ಕರ್.
....ತಕ್ಕರಂ
ಮಿಕ್ಕರದೇಕೆ ಮನ್ನಿಸುವರಕ್ಕರವೋದದ ಕಲ್ಲಪಾಪೆಗಳ್.

ಚಕಾರಕ್ಕೆ : ಇಸು+ದ+ಅರ್=ಎಚ್ಚರ್.
ಮಣಿಯದೆ ಕುಣಿದಿದಿರನದಿರೆ ಕೂಕಿಱಿದೆಚ್ಚರ್

ಟಕಾರಕ್ಕೆ : ಬಿಡು+ದ+ಅರ್=ಬಿಟ್ಟರ್.
ಬೆಕ್ಕಸಂಬಟ್ಟು ಬಾಯಂ ಬಿಟ್ಟರ್ ಭೀಷ್ಮರ್.

ತಕಾರಕ್ಕೆ : ಗಿಱು+ದ+ಅರ್=ಗೆತ್ತರ್
ಮುಗಿಲಂ ಮಾರಾನೆ ಗೆತ್ತರ್

ಪಕಾರಕ್ಕೆ : ತವು+ದ+ಅಂ=ತಪ್ಪಂ
ತಪ್ಪಂ ತನ್ನೊಳ್ ಪಳಂಚಿ ಕಿಡಿಗುಟ್ಟಿ ತಪ್ಪುವಂಬುಗಳನವಂ.

ಡಕಾರಕ್ಕೆ : ಕೊಳ್+ದ+ಅಂ=ಕೊಂಡಂ
ಭುವನತ್ರಿಣೇತ್ರರುಚಿಯಂ ಕೈಕೊಂಡನಾ ಪಾಂಡವಂ

ತಕಾರಕ್ಕೆ : ಪೋಲ್+ದ+ಅಂ=ಪೋಲ್ತಂ
ಮಱಸೊಂದಿದ ಪುಲಿಯನಾಗಳಿನಿಸಂ ಪೋಲ್ತಂ

ಟಕಾರ್ಕೆ : ಅಣ್+ದ+ಅಂ=ಅಂಟಂ.
ಅಂಟಂ ಬೆರಲಂಟವು ಪೊಕ್ಕುಟನುಗುರಿಸಿದುವು ತುಱುಂಬಂ

೨೫೩

ನೆಗಳ್ಗುಂ ಲೋಪಂ ಪೋಗಾ

ಗುಗಳ ಗಕಾರಕ್ಕೆ ದದಪಮಿರೆಯುಂ, ದತ್ವ

ಕ್ಕೊಗೆದಸ್ವರಯತ್ವಂ ಪ

ತ್ತುಗೆಗೊಂಡುದುಗಾದ ತುತ್ವದೊಳ್ ನೆಲಸಿರೆಯುಂ

ದ ಪದಗಳು ಪರದಲ್ಲಿರಲು ಪೋಗು, ಆಗುಗಳ ಗಕಾರಕ್ಕೆ ಲೋಪವುಂಟಾಗುತ್ತದೆ. (ಭೂತಕಾಲದ) ದಕಾರಕ್ಕೆ ಉಂಟಾದ ವ್ಯಂಜನ ಯಕಾರವು ಉದುವಿಗೆ ಉಂಟಾದ ತುಕಾರದಲ್ಲಿ ನೆಲಸಿದ್ದರೂ (ಪೋಗು, ಆಗುಗಳ ಗಕಾರಕ್ಕೆ ಲೋಪವುಂಟು).

ಪೋಗು>ಪೋ+ದ+ಅಂ=ಪೋದಂ.
ಪೋಗು>ಪೋ+ದಪ+ಅಂ=ಪೋದಪಂ.
ಆಗು>ಆ+ದ+ಅಂ =ಅದಂ.
ಆಗು>ಆ+ದಪ+ಅಂ=ಆದಪಂ.

ಪೋಗು>ಪೋ+(ದ>)ಯ್+(ಉದು>)ತು=ಪೋಯ್ತು
(ಆಗು>)ಆ+(ದ>)ಯ್+(ಉದು>)ತು=ಆಯ್ತು.
ಪೊಮ್ಮರೆವೊಲ್ ಪೊಳೆದು ಪಾಱಿ ಪೋದಂ ಶ್ವೇತಂ.
ಕೊಂಬಿಱಿಪಿದ ಮರದಿಂದಗ್ಗಳಂ ತಿಣ್ಣಮಾದಂ.
ಇದೇ ರೀತಿ ಪೋದಪಂ, ಆದಪಂ.
ಪುಂಸ್ಕೋಕಿಲಧ್ವನಿ ತಾನೀರೆಲೆವೋಯ್ತು.
ಭೀಷಣಮಾಯ್ತು ಸೈನ್ಯಮಹಾರ್ಣವಂ.

೨೫೪

ಪರದೊಳ್ ವಿಧಿಯ ಕೆಕಾರಂ
ಬರೆ ಕುಂ ಬರೆ ಪೋಗೆನಿಪ್ಪ ಧಾತುವಿನಂತ್ಯಾ
ಕ್ಷರಲೋಪಂ, ಚರಮಂ ವಿ
ಸ್ವರಮಾದ್ಯಂ ಹ್ರಸ್ವಮಕ್ಕುಮಾಗೆಂಬುದಱೊಳ್

ಪರದಲ್ಲಿ ವಿಧ್ಯರ್ಥದ ಕೆ, (ವರ್ತಮಾನ ಭವಿಷತ್ಕಾಲಗಳ) ಕುಂ ಬರಲು ಪೋಗು ಎಂಬ ಧಾತುವಿನ ಅಂತ್ಯಾಕ್ಷರ ಲೋಪವಾಗುತ್ತದೆ. ಆಗು ಎಂಬ ಧಾತುವಿನಲ್ಲಿ ಅಂತ್ಯ ಸ್ವರಲೋಪವಾಗಿ ಆದಿಸ್ವರ ಹ್ರಸ್ವವಾಗುತ್ತದೆ.

ಪೋಗು ಧಾತುವಿಗೆ : (ಪೋಗು>)ಪೋ+ಕೆ=ಪೋಕೆ.
ಪೋಕೆ ಬರ್ಕೆ ಮುಳಿಸಿಲ್ಲೆಮಗಾತನೊಳಾವ ಪಾಂಗಿನಿಂ.
(ಪೋಗು>) ಪೋ+ಕುಂ=ಪೋಕುಂ.
ಪೊಱಮಾಱಿದೆ ಸೈತು ಪೋಕುಮೇ ಪರಸೈನ್ಯಂ
ಆಗು ಧಾತುವಿಗೆ : ಆಗು>ಅಕ್+ಕೆ=ಅಕ್ಕೆ.
ವೇದದೊಳೋದಿದಾಯು ನಿನಗಕ್ಕೆ ಚಿರಂ ಕಲಿಕಾಲಸೂದನಾ.
ಆಗು>ಅಕ್+ಕುಂ+ಅಕ್ಕುಂ.
ಪ್ರಾಯಂ ಕೂಸಾದೊಡಭಿ
ಪ್ರಾಯಂ ಕೂಸಕ್ಕುಮೆ....

೨೫೫

ಅವತರಿಸಿರ್ಕುಮದುಳ್ ಧಾ
ತುವಿನ ಳಕಾರಕ್ಕೆ ಣತ್ವಮುದುಗೆ ಟುಕಾರಂ,
ಪ್ರವಿಲೋಮಕ್ರಿಯೆಗದುವೆಂ
ದವೆಂದು ಬಂದಿರ್ಕುಮುದುಗಮುವುಗಂ ಪ್ರಚುರಂ

ಉಳ್ ಧಾತುವಿನ ಳಕಾರಕ್ಕೆ ಣತ್ವ, (ಆಖ್ಯಾತ ಪ್ರತ್ಯಯವಾದ)ಉದುವಿಗೆ ಟುತ್ವ ಆದೇಶವಾಗುತ್ತದೆ. ನಿಷೇಧಕ್ರಿಯೆಯಲ್ಲಿ ಉದುವಿಗೂ ಉವುವಿಗೂ (ಅನುಕ್ರಮವಾಗಿ) ಅದು, ಅವು ಆದೇಶವಾಗುತ್ತವೆ.

ಉಳ್ ಧಾತುವಿಗೆ : (ಉಳ್>)ಉಣ್+ (ಉದು>)ಟು=ಉಣ್ಟು.
ಉಣ್ಟು, ಭುಜಾಬಲಂ ಪಿರಿದು ಚಾಗದ ಮೈಸಿರಿ....
ನಿಷೇಧ ಕ್ರಿಯೆಗೆ : ಪುಟ್ಟು+(ಉದು>)ಅದು=ಪುಟ್ಟದು.
ವಿಪುಲಕಲಾಪಕೋಪಶಿಖಿ ಪುಟ್ಟದು.

ನೆಱೆ+(ಉವು>) ಅವು =ನೆಱೆಯವು.
ತುಱುಗಳ ಮೆಯ್ಗಳ ರೋಮಂ
ನೆಱೆಯವು ದಲ್....

೨೫೬

ಣತ್ವಂ ಕೊಳ್ ಧಾತ್ವಂತ್ಯ
ಕ್ಕುತ್ವಕ್ಕುಳ್ ಧಾತುಪೂರ್ವದೊಳ್ ನೆಗಟ್ಟುಂ ಪ್ರ
ಸ್ತೋತ್ವಂ ಪುರುಷತ್ರಯದೊಳ್
ದತ್ವನಿಷೇಧಂ, ಬಹುತ್ವದುವುಗಮವಕ್ಕುಂ

(ದ ದಪಗಳು ಪರವಾದರೆ)ಕೊಳ್ ಧಾತುವಿನ ಅಂತ್ಯಕ್ಕೆ ಣಕಾರಾದೇಶವಾಗುತ್ತದೆ. ಪುರುಷತ್ರಯದಲ್ಲಿಉಳ್ ಧಾತುವಿನ ಪೂರ್ವದ ಉಕಾರಕ್ಕೆ ಒಕಾರಾದೇಶವೂ (ಭೂತಕಾಲದ) ದಕಾರ ಲೋಪವೂ ಉಂಟಾಗುತ್ತವೆ. (ನಪುಂಸಕಲಿಂಗ) ಬಹುವಚನದ ಉವು ಎಂಬುದಕ್ಕೆ ಅವು ಬರುತ್ತದೆ.*

ಕೊಳ್ ಧಾತುವಿಗೆ : (ಕೊಳ್>)ಕೊಣ್+ದ+ಅಂ=ಕೊಣ್ಡಂ
ಭುವನತ್ರಿಣೇತ್ರರುಚಿಯಂ ಕೈಕೊಣ್ಡನಾ ಪಾಂಡವಂ.
ಉಳ್ ಧಾತುವಿಗೆ : (ಉಳ್>)ಒಳ್+ದ+ಅಂ=ಒಳಂ.
ಪೇಟನಿತರ್ಕಮೊಳಂ ಮುರಾಂತಕಂ.
ಇದೇ ರೀತಿ ಒಳರ್, ಒಳಯ್, ಒಳಿರ್, ಒಳೆನ್, ಒಳೆವು
ನಪುಂಸಕಲಿಂಗಕ್ಕೆ : (ಉಳ್>)ಒಳ್+(ಉವು>)ಅವು=ಒಳವು.
ನೀನಿಲ್ಲದಿವೆಲ್ಲಮೊಳವೆ ಭಾನುತನೂಜಾ.

೨೫೭

ಇನೆಗಮುದುಮನ್ನಮನ್ನೆಗ
ಮಿನಮಲೊಡಂ ಸೊನ್ನೆವೆರಸು ಸತ್ಯರ್ಥದೆಕಾ
ರ ನಿಜಸ್ಥಾನದೊಳಪ್ಪುವಿ
ವನುಕೂಲಂ, ಮತ್ತೆಕಾರದಾದಿಯೊಳಲೊಡಂ

ಸತಿಸಪ್ತಮಿಯ ಎಕಾರದ ಸ್ಥಾನದಲ್ಲಿ ಇನೆಗಂ, ಉದುಂ, ಅನ್ನಂ, ಅನ್ನೆಗಂ, ಇನಂ, ಅಲೊಡಂ, ಇವು ಬಿಂದು ಸಮೇತ ಬರುತ್ತವೆ. ಆ ಎಕಾರದ ಹಿಂದೆ ಕೆಲವು ಸಲ ಅಲೊಡಂ ಎಂಬುದು (ಆಗಮವಾಗಿ) ಬರುತ್ತದೆ.

ಸತಿಸಪ್ತಮಿಯ ಎಕಾರಕ್ಕೆ : ಅದಿರ್+ಎ=ಅದಿರೆ.
ನೆಲನದಿರೆ ನೋಟಕರ್ ಕ
ಣ್ಣಲಸೆ ಮನಂ ಕೊರಗೆ....
ಇನೆಗಂ ಎಂಬುದಕ್ಕೆ : (ನುರ್ಗಾಗು>)ನುರ್ಗಪ್ಪ+ಇನೆಗಂ=ನುರ್ಗಪ್ಪಿನೆಗಂ
ಕಾಮ ಕರಂ ಕರಮಡಂಗಿ ನುರ್ಗಪ್ಪಿನೆಗಂ
ಕಾಮದನಡಂಗೆವೊಯ್ದಂ.

---

* ವಿಚಾರ : ಭೂತಕಾಲದ ದಕಾರದಂತೆ ವರ್ತಮಾನ ಕಾಲದ ದಪ, ಭವಿಷ್ಯತ್ಕಾಲದ ವ ಇವೂ ಲೋಪವಾಗುತ್ತವೆ.

ಉದುಂ ಎಂಬುದಕ್ಕೆ : ಎನ್+ವ+ಉದುಂ=ಎಂಬುದುಂ
ಬರವೇಟಿಂಬುದುಮಂಜನಾಚಲದವೊಲ್ ಕಣ್ಗೊಪ್ಪಿ ಬರ್ಪಂಬುಜೋದರನಂ....

ಅನ್ನಂ ಎಂಬುದಕ್ಕೆ : ನೆಗೆ+ವ+ಅನ್ನಂ=ನೆಗೆವನ್ನಂ.
ಉದ್ದದೆ ನೆಗೆವನ್ನಂ ಪೊಯ್ಯಲೆಂದವ್ವಳಿಪುದು....

ಅನ್ನೆಗಂ ಎಂಬುದಕ್ಕೆ : ಬರ್+ವ+ಅನ್ನೆಗಂ=ಬರ್ಪನ್ನೆಗಂ.
ಓಲೆಯೊಡನೆ ಮುತ್ತುಂಗಾಲೊಳ್ ನರೆ ಬರ್ಪನ್ನೆಗಮಿರು.

ಇನಂ ಎಂಬುದಕ್ಕೆ : ಪುಗು+ವ +ಇನಂ=ಪುಗುವಿನಂ
....ಗಂಗೆಯ
ಮಡುಗಳನಡಹಡಿಸಿ ಪುಗುವಿನಂ ಭಯವಶದಿಂ.

ಅಲೊಡಂ ಎಂಬುದಕ್ಕೆ : ನುಡಿ+ಅಲೊಡಂ=ನುಡಿಯಲೊಡಂ.
ಕುರುಕುಲಾಧಿಪಂ ನುಡಿಯಲೊಡಂ

ಏಕಾರದ ಹಿಂದಿನ ಅಲೊಡಂ ಎಂಬುದಕ್ಕೆ : ಅಲೊಡಂ+ಎ =ಅಲೊಡನೆ.
ಬರಲೊಡನೆ ಕೊಟ್ಟಂ.

೨೫೮

ನೆಗಟ್ಟುಂ ಸಂಪ್ರತಿಗಂ ಭಾ
ವಿಗಮನ್ನೆಗಮನ್ನಮಿನೆಗಮಿನಮೆಂಬಿವು ಸೂ
ರಿಗಳಿಂದುದುಮಲೊಡಂಗಳ್
ನೆಗಟ್ಟುಂ ಭೂತಾರ್ಥದಲ್ಲಿ ಸತಿಸಪ್ತಮಿಯೊಳ್

ಸತಿಸಪ್ತಮಿಯಲ್ಲಿ ವರ್ತಮಾನಕಾಲ ಭವಿಷ್ಯತ್ಕಾಲಗಳಿಗೆ ಅನ್ನೆಗಂ, ಅನ್ನಂ, ಇನೆಗಂ, ಇನಂ ಎಂಬಿವೂ ಭೂತಕಾಲಕ್ಕೆ ಉದುಂ ಅಲೊಡಂ ಎಂಬಿವೂ ಬರುತ್ತವೆ.

ವರ್ತಮಾನಕಾಲಕ್ಕೆ : ನೆನೆವನ್ನೆಗಂ ಬಂದಂ, ಕೊಲ್ವನ್ನಮಿಕ್ಕಿ ಕೊಂದಂ.
ಬಿನ್ನಯಿಸುವಿನೆಗಮೆಡೆಗೊಂಡಂ, ಇದಿರ್ವಪ್ಪಿನಮಪ್ಪಿಕೊಂಡಂ.

ಭವಿಷ್ಯತ್ಕಾಲಕ್ಕೆ : ಈವನ್ನೆಗಮಿರ್ದಂ, ಬರಂಬಡೆವನ್ನಮಾರಾಧಿಸಿದಂ.
ಅವಧಿ ಬರ್ಪಿನೆಗಂ ಸೈರಿಸಿದಂ, ಬೆಳಗಪ್ಪಿನಂ ಕೇಳಿಸಿದಂ.

ಭೂತಕಾಲಕ್ಕೆ : ಓಲಗಂ ಪರೆವುದುಮಾಲೋಚನೆಗೆ ಪೊಕ್ಕಂ.
ಪಾವಸೆ ಕಿಡಲೊಡಂ ನೀರ್ ತಿಳಿದುದು.

೨೫೯

ಅನ್ನೆಗಮಿನ್ನೆಗಮೆನ್ನೆಗ
ಮೆನ್ನದೆ ಕಡೆಗುಂಟು ಲೋಪಮಿದಿರೊಳ್ ಸೀಮೋ
ತ್ಪನ್ನಂ ವರಂ ವರೆಗಮಿರೆ
ಕೆನ್ನಂ ಪೆಱವರ್ಕೆ ಲೋಪವಿಧಿ ಮುಟ್ಟೆನೆಯುಂ

ಪರದಲ್ಲಿ ಸೀಮಾರ್ಥದ ವರಂ, ವರೆಗಂ ಇರಲು ಅನ್ನೆಗಂ, ಇನ್ನೆಗಂ, ಎನ್ನೆಗಂ ಎಂಬಿವುಗಳ ಅಂತ್ಯ (ಗಕಾರ)ಕ್ಕೆ ಲೋಪವುಂಟು. ಮುಟ್ಟೆ ಎಂಬುದೂ ಸೀಮಾರ್ಥ ಶಬ್ದ.*

---

* ವಿಚಾರ: 'ಕೆನ್ನಂ ಪೆಱವರ್ಕೆ ಲೋಪವಿಧಿ' ಎಂಬ ವಾಕ್ಯದ ಅರ್ಥ ಸ್ಪಷ್ಟವಾಗಿಲ್ಲ.

ಗಕಾರಲೋಪಕ್ಕೆ : ಎನ್ನೆವರಂ ಸಿರಿ ತಮಗುಂ

ಟನ್ನೆವರಂ ಸೇವ್ಯರಲ್ತೆ ಖಳರುಂ....

ಇನ್ನೆವರಂ ಗುಱಿಯಾದುದಿಲ್ಲ ಕಾಮಕರಮುಕ್ತಬಾಣಹತಿಗೆ....

ಮುಟ್ಟೆಂಬುದಕ್ಕೆ : ....ಆನಱಿಯೆನಾತಂ ಮುಟ್ಟೆ ಸಂಗ್ರಾಮಮಂ....

೨೬೦

ವಿದಿತೋಭಯಕರ್ತೃಕಮೆನಿ
ಸಿದ ಸತಿಸಪ್ತಮಿಗೆಕಾರಪ್ಪುದದರ್ಕಂ
ಜದೆ ಕೆಲರಲ್ವಂ ಪೇೞ್ವರ್,
ಚದುರರದಂ ಮೆಚ್ಚರಲೊಡಮೆಂದೊಡೆ ಶುದ್ಧಂ

ಎರಡು ಕರ್ತೃಗಳನ್ನುಳ್ಳ ಸತಿಸಪ್ತಮಿಗೆ ಎಕಾರವುಂಟಾಗುತ್ತದೆ. ಅದಕ್ಕೆ (=ಆ ಎಕಾರಕ್ಕೆ ಪ್ರತಿಯಾಗಿ) ಕೆಲವರು ಅಲ್ ಪ್ರಯೋಗಿಸುತ್ತಾರೆ. ಅದನ್ನು ವಿದ್ವಾಂಸರು ಮೆಚ್ಚುವುದಿಲ್ಲ. (ಆದರೆ) ಅಲೊಡಂ ಎಂದು ಹೇಳಿದರೆ ಶುದ್ಧವೆನಿಸುತ್ತದೆ.

ಎರಡು ಕರ್ತೃಗಳನ್ನುಳ್ಳ ಸತಿಸಪ್ತಮಿಗೆ : ಗಾಯಕಂ ಪಾಡೆ ದೇವಂ ಮೆಚ್ಚಿದಂ

ಅಲ್ಗೆ : ....ಪಾದಪದ್ಮಂ

ಗಳನಂದೊತ್ತುತ್ತಿರಲ್ ಶೂದ್ರಕನೃಪತಿ ಸುಖಾಸೀನನಾಗಿರ್ದನಾಗಳ್

ಆಲೊಡಂ ಎಂಬುದಕ್ಕೆ : ವಸಂತಂ ಬರಲೊಡಂ ಕೋಗಿಲೆಯುಲಿಗುಂ

೨೬೧

ಪಿರಿದುಂ ಪಕ್ಷಾಂತರಮಂ
ನಿರವಿಪೆಕಾರಂ ನಿಜಾಂತಮಾದೊಡೆ ಶಬ್ದಂ
ಪರಿಕಿಸೆ ಧಾತ್ವಂತ್ಯದೊಳಾ
ವರಿಸಿರ್ಕುಂ ಲಿಂಗವಚನಪುರುಷಾಯತ್ತಂ

ಪಕ್ಷಾಂತರವನ್ನು ಹೇಳುವ ಎಕಾರಾಂತ ಒಡೆ ಶಬ್ದವು ಲಿಂಗತ್ರಯ, ವಚನತ್ರಯ, ಪುರುಷತ್ರಯಗಳಲ್ಲಿ ಹೊಂದಿ, ಧಾತುವಿನ ಕಡೆಯಲ್ಲಿ ನೆಲೆಸಿರುತ್ತದೆ.

ಲಿಂಗತ್ರಯಕ್ಕೆ : ನೋೞ್ಪೊಡವಳ್ ಕಿರಿಯಳ್.

ಸತ್ಯಮಂ ನುಡಿವೊಡವಂ ನುಡಿಗುಂ.

ತೀಡುವೊಡಲ್ಲಿ ಕಮ್ಮೆಲರ್ ತೀಡುಗುಂ

ವಚನತ್ರಯಕ್ಕೆ : ಕಾದುವೊಡೊರ್ವನೆ ಬಲ್ಲಿದಂ.

ಪೋರಿಸುವೊಡಿರ್ವರುಂ ತಕ್ಕರ್.

ನುಡಿವೊಡೆಲ್ಲರುಂ ಮಾತಱಿಯರ್.

ಪುರುಷತ್ರಯಕ್ಕೆ : ಪೊರ್ದುವೊಡವನೊಳ್ಳಿದಂ, ತಿರ್ದುವೊಡವರೊಳ್ಳಿದರ್

ಬೇೞ್ಪೊಡೆ ನೀನೊಳ್ಳಿದಯ್, ಈವೊಡೆ ನೀವೊಳ್ಳಿದಿರ್

ಭಾವಿಪೊಡಾನೊಳ್ಳಿದಂ, ಸೇವಿಪೊಡಾಮೊಳ್ಳಿದೆವು

೨೬೨

ಧಾತುಗಳವು ನಾನಾರ್ಥೋ
ಪೇತಂಗಳ್, ಲಕ್ಷ್ಯಸಿದ್ಧಿ ವಿಡಿದುವನಱಿದ
ನ್ವಿತರೆ ಕ್ರಿಯಾನುಕೂಲಂ
ಮಾತೇಂ ಪೂರಿಸುಗೆ ಮತ್ತಮುೞಿದುವನಿದಱೊಳ್

ಧಾತುಗಳು ಹಲವು ಅರ್ಥಗಳನ್ನೊಳಗೊಂಡುವು. ಉದಾಹರಣೆಗಳಲ್ಲಿ ಮಾನ್ಯವಾದವುಗಳನ್ನು ತಿಳಿದು, ಮಿಕ್ಕವುಗಳನ್ನು ಕ್ರಿಯಾನುಕೂಲತೆಯಿಂದ ಈ ಆಖ್ಯಾತ ಪ್ರಕರಣದಲ್ಲಿ ವಿದ್ವಾಂಸರು ಸಮಾವೇಶಗೊಳಿಸಲಿ.

೨೬೩

ಕ್ರಿಯೆಯ ಪದಂ ತಾಂ ಕರ್ತೃ
ಪ್ರಯುಕ್ತಮಾಗಲ್ಲಿಯೇನದೆಂಬಿಚ್ಛೆಯನಾ
ಶ್ರಯಿಪುದು ಸಕರ್ಮಕಮದಲ್
ಪ್ರಯುಕ್ತ ಪಡುಧಾತು ಸರ್ವಧಾತುಗೆಯಕ್ಕುಂ

ಕ್ರಿಯಾಪದವು ಕರ್ತೃಪದದೊಡನೆ ನಿಂತು, ಏನದು ಎಂಬ ಅಪೇಕ್ಷೆಯನ್ನು ಆಶ್ರಯಿಸುವುದು ಸಕರ್ಮಕ (ಪ್ರಯೋಗ). (ಅಲ್ಲಿ) ಸಕಲ ಧಾತುಗಳಿಗೆ ಅಲ್ ಎಂಬುದರೊಡನೆ ಕೂಡಿದ ಪಡು ಧಾತು ಹತ್ತುತ್ತದೆ.

ಮಾಡಲ್ಪಟ್ಟುದು ಘಟಂ ಕುಂಬಱನಿಂ, ನೋಡಲ್ಪಟ್ಟನರಸನಂಗನೆಯಿಂ,
ಬಯಸಲ್ಪಟ್ಟಳ್ ತರುಣಿ ರಮಣನಿಂ.

*

ಕವಿತಾಪ್ರೌಢಿಯೊಳಬ್ಜಸಂಭವನೆ ಕರ್ತಾರಂ ಕ್ರಿಯಾಕೌಶಲಂ
ಸ್ತವನೀಯಂ ತದಧೀನವಾದಖಿಲಶಾಸ್ತ್ರಾಮ್ನಾಯಮಂ ಕೂಡೆ ಬ
ಲ್ಲವರಿಲ್ಲೆನ್ನದಿರೊರ್ವನಿಂದಭಿನವಬ್ರಹ್ಮಂ ಗಡೆಂಬಂತೆ ತೋ
ಱುವನಾತ್ಮೀಯವಚೋವಿಚಿತ್ರತರವಿದ್ಯಾವೇಶವಂ ಕೇಶವಂ ॥

ಕವಿತ್ವದ ಬಲ್ಮೆಯಲ್ಲಿ ಬ್ರಹ್ಮನೆ ಕರ್ತೃ, ಕ್ರಿಯಾಕುಶಲ, ಸ್ತುತಿಯೋಗ್ಯ. ಅವನ ಆಧೀನವಾಗಿರುವ ಸಮಸ್ತಶಾಸ್ತ್ರಸಂಪ್ರದಾಯವನ್ನು (ಬೇರಾರೂ)ಚೆನ್ನಾಗಿ ಬಲ್ಲವರಿಲ್ಲ ಎನ್ನದಿರು. ಇಂದು ಕವಿ ಕೇಶವನು "ಅಭಿನವಬ್ರಹ್ಮ" ಎಂಬಂತೆ ಆತ್ಮೀಯ ವಚೋವಿಚಿತ್ರತರ ವಿದ್ಯಾವೇಶವನ್ನು ಪ್ರಕಟಿಸುತ್ತಾನೆ.

❖❖

ಧಾತು ಪ್ರಕರಣ

೨೬೪

ವೇದಸಮನಾಗಿ ಭೀಮನಿ
ನಾದುದು ಸಂಸ್ಕೃತದ ಧಾತುವಾ ತೆಱದಿಂದಂ
ಯಾದವಕಟಕಾಚಾರ್ಯನಿ
ನಾದುದು ಕರ್ಣಾಟಧಾತು ಕವಿಕೇಶವನಿಂ

(ವೈಯಾಕರಣ) ಭೀಮನಿಂದ, ವೇದಗಳಂತೆ ಪ್ರಮಾಣವಾದ ಸಂಸ್ಕೃತ ಧಾತುಕೋಶವುಂಟಾಯಿತು. ಅದೇ ರೀತಿ ಯಾದವಕಟಕಾಚಾರ್ಯನಾದ ಕವಿಕೇಶವನಿಂದ ಕರ್ನಾಟಕ ಧಾತುಕೋಶವುಂಟಾಯಿತು.

೨೬೫

ದೊರೆವಡೆದ ಮಹಾಪ್ರಾಣಾ
ಕ್ಷರಾಂತದಿಂ ಜಞಶಷಾಂತಹಾಂತಕ್ಷಾಂತೋ
ದ್ಧರಣದಿನುದ್ಭವಿಸವು ಬ
ಲ್ಲರ ಮತದಿಂ ಧಾತು ತಿಳಿವುದವನೀ ಕ್ರಮದಿಂ
"ಕ್ರಿಯಾರ್ಥೋ ಧಾತುಃ"

ಬಲ್ಲವರ ಅಭಿಮತದಂತೆ ಮಹಾಪ್ರಾಣ, ಜ, ಞ, ಶ, ಷ, ಹ, ಕ್ಷ ಇವು ಅಂತ್ಯವಾಗಿರುವ ಧಾತುಗಳು (ಕನ್ನಡದಲ್ಲಿ) ಉಂಟಾಗವು. ಅವುಗಳನ್ನು ಈ ಕ್ರಮದಲ್ಲಿ ತಿಳಿಯಬೇಕು.

ಸ್ವರಧಾತುವಿಗೆ	:	ಈ-ಪ್ರದಾನೇ, ಓ-ಸ್ನೇಹೇ
ಕಾಂತಕ್ಕೆ	:	ಉಲುಕು-ಶರೀರಸ್ಫುರಣೇ, ಮುಱುಕು-ಮುಖವಿಕಾರೇ.
ಗಾಂತಕ್ಕೆ	:	ಉಗ್ಗು-ವಚನನಿರೋಧೇ, ಹರಗು-ಸಸ್ಯಕ್ರಿಯಾಯಾಂ.
ಚಾಂತಕ್ಕೆ	:	ಎಚ್ಚು-ಅಂಜನಕ್ರಿಯಾಯಾಂ, ಕಿಮುಚ್ಚು-ಹಸ್ತಮರ್ದನೇ
ಜಾಂತಕ್ಕೆ	:	ಅಂಜು-ಭಯೇ, ಪಿಂಜು-ಪೃಥಕ್ಕರಣೇ.
ಟಾಂತಕ್ಕೆ	:	ಕುಟ್ಟು-ತಾಡನೇ, ಸುಟ್ಟು-ಅಂಗುಲಿದರ್ಶನೇ.
ಡಾಂತಕ್ಕೆ	:	ಇಡು-ಕರವಿಮೋಚನೇ, ಚಿವುಡು-ನಖಚ್ಛೇದೇ.
ಣಾಂತಕ್ಕೆ	:	ಕುಣಿ-ನರ್ತನೇ, ಮಾಣ್-ನಿವಾರಣೇ.
ತಾಂತಕ್ಕೆ	:	ಕುತ್ತು-ಘಾತನೇ, ಸುತ್ತು-ವೇಷ್ಟನೇ.
ದಾಂತಕ್ಕೆ	:	ಓದು-ಪಠನೇ, ಹೊಂದು-ಮರಣೇ.
ನಾಂತಕ್ಕೆ	:	ಒನೆ-ಶೂರ್ಪಕರಣೇ, ತಿನ್-ಖಾದನೇ.
ಪಾಂತಕ್ಕೆ	:	ಕೆಡಪು-ಪತನೇ, ಗಟಪು-ಬಹುಭಾಷಣೇ.

ಬಾಂತಕ್ಕೆ	:	ಕೊರ್ಬು-ಸಮೃದ್ಧೌ, ಪರ್ಬು-ವಿಸ್ತಾರೇ.
ಮಾಂತಕ್ಕೆ	:	ಕುಮ್ಮು-ಮುಸಲಕ್ರಿಯಾಯಾಂ, ಕೆಮ್ಮು -ಖಾಸೇ.
ಯಾಂತಕ್ಕೆ	:	ತೊಯ್-ಸಾರ್ದ್ರತ್ವೇ, ಪಾಯ್-ಲಂಘನೇ.
ರಾಂತಕ್ಕೆ	:	ಕೆರೆ-ನಖಕ್ರಿಯಾಯಾಂ, ಮುರಿ -ವಕ್ರಭಾವೇ.
ಲಾಂತಕ್ಕೆ	:	ಕೆಲೆ-ಉತ್ಸಾಹಧ್ವನೌ, ಜೋಲ್-ಆಲಂಬನೇ.
ವಾಂತಕ್ಕೆ	:	ಓವು-ಪಾಲನೇ, ತವು-ಕ್ಷಯೇ.
ಸಾಂತಕ್ಕೆ	:	ಹುಸಿ-ಅನೃತೇ, ಮೂಸು-ಆಘ್ರಾಣೇ.
		ಚಿತ್ರಿಸು-ಚಿತ್ರವಿಲೇಖನೇ, ಪುಂಜಿಸು-ರಾಶೌ.
		ಕನವರಿಸು-ನಿದ್ರಾವಿಕಾರೇ, ಗುಡಿಸು-ಪುಂಜೀಕರಣೇ.
		ಓದಿಸು-ಶಾಸ್ತ್ರಶಿಕ್ಷಾಯಾಂ, ಬರೆಯಿಸು-ಲೇಖನೇ.
ೞಾಂತಕ್ಕೆ	:	ಕಾೞು-ವಮನೇ, ಕೇೞು-ಶೂರ್ಪಕರಣೇ.
ೞಾಂತಕ್ಕೆ	:	ಅೞ್-ರೋದನೇ, ಉೞ್-ಹಲಕ್ರಿಯಾಯಾಂ.
ಳಾಂತಕ್ಕೆ	:	ಉರುಳ್-ನಿಮ್ನಪತನೇ, ಮುಳ್-ಕಂಟಕೇ.

❖❖

ಅಪಭ್ರಂಶ ಪ್ರಕರಣ

೨೬೬

ಈಕ್ಷಿಸಿ ಶಿಕ್ಷಾಸೂತ್ರದ
ಲಕ್ಷಣಮಂ ಲೋಕರೂಢಿ ಕಿಡದವೊಲಱಿವರ್
ಲಕ್ಷಿಪುದು ನುಡಿಗಳೊಳ್ ಬಹು
ಲಾಕ್ಷೇಪಣಮಿಲ್ಲದಿರೆಯುಮಱಿಯದ ಕೆಲವಂ

ಶಿಕ್ಷಾಸೂತ್ರದ ಲಕ್ಷಣಗಳನ್ನು ಗಮನಿಸಿ, ಲೋಕರೂಢಿ ಕೆಡದಂತೆ (ಎಚ್ಚರ ವಹಿಸಿ), ನುಡಿಗಳಲ್ಲಿ ಬಹುಳ ಆಕ್ಷೇಪಣೆಗಳು ಇಲ್ಲದಂಥ ಅಪರೂಪದ ಕೆಲವನ್ನು (=ಕೆಲವು ತದ್ಭವಗಳನ್ನು)ಇಲ್ಲಿ ಅವಲೋಕಿಸಬೇಕು.

೨೬೭

ಸಕ್ಕದದ ತದ್ಭವಂಗಳ
ಲಕ್ಕಣಮಂ ಕನ್ನಡಕ್ಕೆ ಲಕ್ಷಿಸಿ ಪೇೞ್ವೆಂ,
ಸಕ್ಕದದ ಶಷದ್ವಿತಯ
ಕ್ಕಕ್ಕುಂ ಸತ್ವಂ ಪ್ರಸಿದ್ಧಿಯಿಂದೆಲ್ಲೆಡೆಯೊಳ್

ಸಂಸ್ಕೃತ ತದ್ಭವಗಳ ಲಕ್ಷಣಗಳನ್ನು ಕನ್ನಡಕ್ಕೆ ಅನ್ವಯಿಸಿ ಹೇಳುತ್ತೇನೆ, ಸಂಸ್ಕೃತದ ಶಷಗಳಿಗೆ ಎಲ್ಲೆಡೆಯಲ್ಲಿ ಸಕಾರವುಂಟಾಗುತ್ತದೆ.

ಶಕಾರಂಕ್ಕೆ ಸಕಾರ : ಶಾಲೆ-ಸಾಲೆ, ಕಲಶಂ-ಕಳಸಂ, ಸಂಶಯಂ-ಸಂಸಯಂ
ಷಕಾರಕ್ಕೆ ಸಕಾರ : ಭಾಷೆ-ಬಾಸೆ, ವಿಷಯಂ-ವಿಸಯಂ, ಮಷಿ-ಮಸಿ.

೨೬೮

ವಿರಲಂ ಮಾಡಿದ ದಡ್ವ
ಕ್ಕರದ ಮೊದಲ್ಗತ್ವಮಿತ್ವಮುತ್ವಮುಮಕ್ಕುಂ,
ದೊರೆಕೊಳ್ಗುಮತ್ವದಿತ್ವದ
ಪರವರ್ಣಂ ದೀರ್ಘಮಾದ ಪಕ್ಷಂ ಹ್ರಸ್ವಂ

ವಿರಳಗೊಳಿಸಿದ ದ್ವಿತ್ವಾಕ್ಷರದ ಮೊದಲಿಗೆ (=ಮೊದಲ ವ್ಯಂಜನಕ್ಕೆ) ಅಕಾರ, ಇಕಾರ, ಉಕಾರಗಳುಂಟಾಗುತ್ತವೆ. ಇಂಥ ಅಕಾರ ಇಕಾರಗಳ ಮುಂದಿನ ಅಕ್ಷರ ದೀರ್ಘವಾಗಿದ್ದ ಪಕ್ಷದಲ್ಲಿ (ಅದು) ಹ್ರಸ್ವವಾಗುತ್ತದೆ.

ಅಕಾರಕ್ಕೆ : ಇಂದ್ರಂ -ಇಂದರಂ
ಇಕಾರಕ್ಕೆ : ಗಿರ್ಗಟಂ -ಗಿರಿಗಟಂ.

ಉಕಾರಕ್ಕೆ : ಪದ್ಮಂ-ಪದುಮಂ

ಅಕಾರದ ಮುಂದಣ ದೀರ್ಘಕ್ಕೆ ಹ್ರಸ್ವ : ತ್ರಾಸು>ತರಾಸು>ತರಸಂ.

ಇಕಾರದ ಮುಂದಣ ದೀರ್ಘಕ್ಕೆ ಹ್ರಸ್ವ : ವ್ಯಾಧಿ>ಬಿಯಾದಿ>ಬಿಯದಿ.

೨೬೯

ವರ್ಗಪ್ರಥಮಂಗಳ್ ತ
ದ್ವರ್ಗತೃತೀಯಂಗಳಪ್ಪುವುಟಿಯೆ ಪವರ್ಗಂ,
ವರ್ಗದ್ವಿತೀಯವರ್ಣಂ
ವರ್ಗಪ್ರಥಮಂ, ಚತುರ್ಥಮಱಿಗೆ ತೃತೀಯಂ

ಪವರ್ಗವನ್ನುಳಿದ ವರ್ಗಪ್ರಥಮಗಳು (=ಕ ಚ ಟ ತ) ಆ ವರ್ಗದ ತೃತೀಯ (= ಗ ಜ ಡ ದ)ಗಳಾಗುತ್ತವೆ. ವರ್ಗದ ದ್ವಿತೀಯ ವರ್ಣವು ಪ್ರಥಮವರ್ಣವಾಗುತ್ತದೆ. ಚತುರ್ಥ (ವರ್ಣ)ವು ತೃತೀಯವರ್ಣವಾಗುತ್ತದೆ.

ಕಕಾರಕ್ಕೆ ಗಕಾರ	:	ಆಕಾಶಂ -ಆಗಸಂ, ಮಲ್ಲಿಕೆ-ಮಲ್ಲಿಗೆ
ಚಕಾರಕ್ಕೆ ಜಕಾರ	:	ಸೂಚೀ-ಸೂಜಿ, ವಾಚನಾ-ಬಾಜನೆ
ಟಕಾರಕ್ಕೆ ಡಕಾರ	:	ಕಟಕಂ-ಕಡಗಂ, ಕುಟಿ-ಗುಡಿ.
ತಕಾರಕ್ಕೆ ದಕಾರ	:	ವಸತಿ-ಬಸದಿ, ಚತುರಂ-ಚದುರಂ
ಖಕಾರಕ್ಕೆ ಕಕಾರ	:	ಖಳಂ-ಕಳಂ, ಶಂಖಂ-ಶಂಕಂ.
ಛಕಾರಕ್ಕೆ ಚಕಾರ	:	ಛವಿ-ಚವಿ.
ಠಕಾರಕ್ಕೆ ಟಕಾರ	:	ಕಂಠಿಕಾ-ಕಂಟಿಕೆ, ಶುಂಠಿ-ಸುಂಟಿ
ಥಕಾರಕ್ಕೆ ತಕಾರ	:	ಕಥೆ-ಕತೆ, ಮಿಥಿಳೆ-ಮಿತಿಳೆ.
ಫಕಾರಕ್ಕೆ ಪಕಾರ	:	ಫಲಕಂ-ಪಲಗೆ,ಗುಂಫನಂ-ಗುಂಪನಂ
ಘಕಾರಕ್ಕೆ ಗಕಾರ	:	ಘಂಟೆ-ಗಂಟೆ, ನಿಘಂಟು-ನಿಗಂಟು, ಸಂಘಂ-ಸಂಗಂ
ಝಕಾರಕ್ಕೆ ಜಕಾರ	:	ಝಗಟೆ-ಜಗಳೆ, ಝಂಝಾ-ಜಂಜು.
ಢಕಾರಕ್ಕೆ ಡಕಾರ	:	ಢಕ್ಕೆ-ಡಕ್ಕೆ.
ಧಕಾರಕ್ಕೆ ದಕಾರ	:	ಧನು-ದನು,. ಸಿಂಧುರಂ-ಸಿಂದುರಂ, ವಿಧಿ-ಬಿದಿ.
ಭಕಾರಕ್ಕೆ ಬಕಾರ	:	ಶುಭಂ-ಸುಬಂ, ಭೇರಿ-ಬೇರಿ.

೨೭೦

ಖತ್ವಕ್ಕೆ ಬಹುಳತೆಯಿಂ
ಗತ್ವಂ, ಛತ್ವಂ ದ್ವಿರುಕ್ತಿಯಿಂ ಕೂಡಿರೆ ಮೇಣ್
ಯತ್ವಾನ್ವಿತಮಿರೆ ಚತ್ವಂ
ದ್ವಿತ್ವಂ, ಛತ್ವಕ್ಕೆ ಸತ್ವಮುಂಟರೆ ಎಡೆಯೊಳ್

ಖಕಾರಕ್ಕೆ ಗಕಾರ, ದ್ವಿತ್ವದ ಛಕಾರಕ್ಕೆ ಮತ್ತು ಯಕಾರ ಬೆರಸಿದ ಛಕಾರಕ್ಕೆ ದ್ವಿತ್ವ ಚಕಾರ, ಕೆಲವೆಡೆ ಛಕಾರಕ್ಕೆ ಸಕಾರ ತಲೆದೋರುತ್ತವೆ.

ಖಕಾರಕ್ಕೆ ಗಕಾರ : ವೈಶಾಖಂ-ಬೇಸಗೆ.

ದ್ವಿತ್ವದ ಛಕಾರಕ್ಕೆ ದ್ವಿತ್ವದ ಚಕಾರ : ಇಚ್ಛೆ-ಇಚ್ಚೆ, ಮಚ್ಛರಂ-ಮಚ್ಚರಂ.

ಯಕಾರ ಬೆರಸಿದ ಛಕಾರಕ್ಕೆ ದ್ವಿತ್ವಚಕಾರ : ಮಛ್ಯಂ-ಮಚ್ಚಂ, ಅಛ್ಯಂ-ಅಚ್ಚಂ.

ಛಕಾರಕ್ಕೆ ಸಕಾರ : ಛತ್ರಿಕಾ -ಸತ್ತಿಗೆ

೨೭೧

ಅರಮೆ ಠಕಾರಂ ಡಟದಿಂ
ಪರಿಣಮಿಕುಂ, ಸತ್ವಮಿಶ್ರಮಪ್ಪ ಥಕಾರಂ
ಬರೆಯುಂ ತಕಾರಮಕ್ಕುಂ
ಸ್ವರಾನ್ವಿತಂ, ಥತ್ವಮೊರ್ಮೆ ದಟಹಮುಮಕ್ಕುಂ

ಕೆಲವೆಡೆಯಲ್ಲಿ ಠಕಾರವು ಡಕಾರ ಮತ್ತು ಟಕಾರವಾಗಿ ಪರಿಣಮಿಸುತ್ತದೆ. ಸಕಾರಯುಕ್ತ ಥಕಾರಕ್ಕೆ ಸ್ವರಾನ್ವಿತ ತಕಾರವುಂಟಾಗುತ್ತದೆ. ಥಕಾರವು ದಕಾರ, ಟಕಾರ, ಹಕಾರವಾಗುತ್ತದೆ.

ಠಕಾರಕ್ಕೆ ಡಕಾರ	: ಕುಠಾರಂ-ಕೊಡಲಿ, ಮಠಂ-ಮಡಂ.
ಠಕಾರಕ್ಕೆ ಟಕಾರ	: ಮಠಿಕೆ-ಮಟಿಗೆ, ಪೀಠಿಕೆ-ಪೀಟಿಗೆ.
ಸಕಾರಯುಕ್ತ ಥಕಾರಕ್ಕೆ ತಕಾರ	: ಸಂಸ್ಥೆ-ಸಂತೆ, ಸ್ಥಾನಂ-ತಾಣಂ.
ಥಕಾರಕ್ಕೆ ಧಕಾರ	: ವೀಥಿ-ಬೀದಿ.
ಥಕಾರಕ್ಕೆ ಟಕಾರ	: ಗ್ರಂಥಿ-ಗಂಟು.
ಥಕಾರಕ್ಕೆ ಹಕಾರ	: ಗಾಥೆ-ಗಾಹೆ.

೨೭೨

ಅವತರಿಸಿರ್ಕುಂ ಪತ್ವ
ಕ್ಕೆ ವತ್ವಹತ್ವವ್ಯವಸ್ಥೆ ಕೆಲಕೆಲವೆಡೆಯೊಳ್,
ಸವನಿಸುಗಂ ಬತ್ವಕ್ಕೊ
ರ್ಮೆ ವತ್ವವಿಧಿ, ವತ್ವದೆಡೆಗೆ ಬತ್ವಂ ಬಹುಳಂ

ಪಕಾರಕ್ಕೆ ವಕಾರ, ಹಕಾರಗಳು ತಲೆದೋರುತ್ತವೆ. ಬಕಾರಕ್ಕೆ ವಕಾರವುಂಟಾಗುತ್ತದೆ. ವಕಾರಕ್ಕೆ ಬಕಾರವುಂಟಾಗುತ್ತದೆ.

ಪಕಾರಕ್ಕೆ ವಕಾರ	:	ವಾಪಿ-ಬಾವಿ, ತ್ರಿಪದಿ-ತ್ರಿವದಿ.
ಪಕಾರಕ್ಕೆ ಹಕಾರ	:	ಪಾದುಕಂ-ಹಾವುಗೆ, ಗೋಪುರಂ-ಗೋಹುರಂ
ಬಕಾರಕ್ಕೆ ವಕಾರ	:	ಕಬಲಂ-ಕವಳಂ, ಶಬಂ-ಸವಂ.
ವಕಾರಕ್ಕೆ ಬಕಾರ	:	ವಸಂತಂ-ಬಸಂತಂ

೨೭೩

ಘನಮಿಲ್ಲ ಯತ್ವದೊಳ್ ಗ
ತ್ವನತ್ವವಿಧಿ, ಪಿರಿದು ಜತ್ವವಿಧಿ, ಮತ್ತಂ ದ
ತ್ವನಿಯುಕ್ತಯತ್ವಮುಂ ಜ
ತ್ವನಿಯತಮಂ ಕೆಲವು ಶಬ್ದದೊಳ್ ತಾಳ್ದಿರ್ಕುಂ

ಯಕಾರಕ್ಕೆ ಗಕಾರ ನಕಾರಗಳು ಹೆಚ್ಚಾಗಿ ಬರುವುದಿಲ್ಲ. (ಆ ಯಕಾರಕ್ಕೆ) ಜಕಾರಾದೇಶವೂ ಉಂಟು. ಕೆಲವು ಶಬ್ದಗಳಲ್ಲಿ ದಕಾರಯುಕ್ತ ಯಕಾರವು ದ್ವಿತ್ವ ಜಕಾರ ರೂಪವನ್ನು ಪಡೆಯುತ್ತದೆ.

ಯಕಾರಕ್ಕೆ ಗಕಾರ	:	ದ್ವಿತೀಯೆ-ಬಿದಿಗೆ.
ಯಕಾರಕ್ಕೆ ನಕಾರ	:	ಯುಗಂ-ನೊಗಂ.

ಯಕಾರಕ್ಕೆ ಜಕಾರ : ಯೋಗಿ-ಜೋಗಿ, ದುರ್ಯೋಧನಂ-ದುಜ್ಜೋದನಂ.
ದಕಾರಯುಕ್ತ ಯಕಾರಕ್ಕೆ ದ್ವಿತ್ವಜಕಾರ : ವಿದ್ಯೆ-ಬಿಜ್ಜೆ, ಉದ್ಯೋಗಂ-ಉಜ್ಜುಗಂ.

೨೭೪

ವ್ಯವಹರಿಕುಂ ಲೋಪಂ ದ್ಯೂ
ತವಿಂಧ್ಯವಂಧ್ಯಾಪ್ರಶಸ್ತಸಂಧ್ಯಾಧ್ಯಾನ
ಪ್ರವಿದಿತ ದಧಕಾರಂಗ
ಳ್ಗವಶಿಷ್ಟ ಯಕಾರಮಂತೆ ಜತ್ವಮನಾಳ್ಗುಂ

ದ್ಯೂತ, ವಿಂಧ್ಯ, ವಂಧ್ಯಾ, ಸಂಧ್ಯಾ, ಧ್ಯಾನಗಳಲ್ಲಿಯ ದಧಕಾರಗಳಿಗೆ ಲೋಪವುಂಟಾಗುತ್ತದೆ. (ಆಗ) ಉಳಿದು ನಿಂತ ಯಕಾರವು ಜಕಾರವಾಗುತ್ತದೆ.

ದಕಾರ ಲೋಪಗೊಂಡು ಉಳಿದ ಯಕಾರ, ಜಕಾರವಾದುದಕ್ಕೆ : ದ್ಯೂತಂ-ಜೂದು.
ಧಕಾರ ಲೋಪಗೊಂಡು ಉಳಿದ ಯಕಾರ ಜಕಾರವಾದುದಕ್ಕೆ : ವಂಧ್ಯಾ-ಬಂಜೆ.
ಸಂಧ್ಯಾ-ಸಂಜೆ.
ಧ್ಯಾನಂ-ಜಾನಂ.

೨೭೫

ನೆಗಟ್ಟುಂ ದ್ವಿತ್ವಾಗ್ರದ ರೇ
ಫೆಗೆ ಲೋಪಂ, ವರ್ಣಮಿಶ್ರರೇಫಕ್ಕಂ ತಾಂ
ನೆಗಟ್ಟುಂ ಲೋಪಂ, ಬಹುಳದೆ
ನೆಗಟ್ಟುಂ ವೃತರೇಫಮಡಿಯೊಳಾ ವರ್ಣದ ವೋಲ್

ದ್ವಿತ್ವಾಗ್ರದ ರೇಫೆಗೆ ಲೋಪವುಂಟಾಗುತ್ತದೆ. ವರ್ಣ ಮಿಶ್ರ ರೇಫೆಗೂ ಲೋಪವುಂಟಾಗುತ್ತದೆ. ವಿಕಲ್ಪದಿಂದ ವೃತರೇಫೆ ಆ (=ತನ್ನ ಮೇಲಿನ) ವರ್ಣದ ಹಾಗೆ ಅಡಿಯಲ್ಲಿ (ರೂಪ)ಪಡೆಯುತ್ತದೆ.

ದ್ವಿತ್ವಾಗ್ರರೇಫ ಲೋಪಕ್ಕೆ : ಕರ್ತ್ತರಿ-ಕತ್ತರಿ, ವರ್ತ್ತಿ-ಬತ್ತಿ
ವರ್ಣಮಿಶ್ರರೇಫ ಲೋಪಕ್ಕೆ : ತಂತ್ರಿ-ತಂತಿ, ದ್ರೋಣಿ-ದೋಣಿ.
ವೃತರೇಫೆ ತನ್ನ ಮೇಲಿನ ವರ್ಣವಾದುದಕ್ಕೆ : ವೇತ್ರಂ-ಬೆತ್ತಂ, ಪುತ್ರಿಕೆ-ಪುತ್ತಿಗೆ.

೨೭೬

ದ್ವಿತ್ವಂಬೆರೆಸಿದ ಕತ್ವಂ
ಚತ್ವಂ ಖತ್ವಂ ಯಥಾಪ್ರಯೋಗದಿನಕ್ಕುಂ
ಕ್ಷತ್ವಕ್ಕೆ, ಬಹುಳದಿಂದಂ
ಸತ್ವಂ, ಕತ್ವಂ ದ್ವಿರುಕ್ತಿಯಿಲ್ಲರೆ ಎಡೆಯೊಳ್

ಕ್ಷಕಾರಕ್ಕೆ ವಿಕಲ್ಪದಿಂದ ದ್ವಿತ್ವ ಬೆರೆಸಿದ ಕಕಾರ ಚಕಾರ ಖಕಾರಗಳು ಪ್ರಯೋಗವಾಗುತ್ತವೆ. (ಕ್ಷಕಾರಕ್ಕೆ) ಸಕಾರವಾಗುತ್ತದೆ. ಕೆಲವೆಡೆ ಕಕಾರಕ್ಕೆ ದ್ವಿತ್ವವಿಲ್ಲ.

ಕ್ಷಕಾರಕ್ಕೆ ದ್ವಿತ್ವ ಕಕಾರ : ಪಕ್ಷಂ-ಪಕ್ಕಂ, ಅಕ್ಷರಂ-ಅಕ್ಕರಂ.
ಕ್ಷಕಾರಕ್ಕೆ ದ್ವಿತ್ವ ಚಕಾರ : ಅಕ್ಷಂ-ಅಚ್ಚು, ಅಕ್ಷಿ-ಅಚ್ಚಿ.

ಕ್ಷಕಾರಕ್ಕೆ ದ್ವಿತ್ವ ಖಕಾರ	:	ಪ್ರಕ್ಷಾಳಂ-ಪಖ್ಖಾಳಂ.
ಕ್ಷಕಾರಕ್ಕೆ ಸಕಾರ	:	ಕ್ಷಪಣಂ-ಸವಣಂ, ಕ್ಷೇಮ-ಸೇಮಂ.
ಕ್ಷಕಾರಕ್ಕೆ ದ್ವಿತ್ವವಲ್ಲದ ಕಕಾರ	:	ಪರೀಕ್ಷೆ-ಪರಿಕೆ, ಕ್ಷೀರಂ-ಕೀರಂ

೨೭೭

ಪಡೆಗುಂ ಮತ್ವಂ ವತ್ವಮ
ನಡಸಿದ ಚತ್ವಕ್ಕೆ ಸತ್ವ ದತ್ವಂ ಶಷತಂ
ಪಡೆಗುಂ ಚತ್ವಮನೆತ್ತಂ
ಪಡೆಗುಂ ಬಹುಳದೆ ಹಕಾರದೆಡೆಯಂ ಯಗಣಂ

ಮಕಾರವು ವಕಾರವನ್ನು ಪಡೆಯುತ್ತದೆ. ಚಕಾರಕ್ಕೆ ಸಕಾರ ದಕಾರಗಳುಂಟಾಗುತ್ತವೆ. ಶ, ಷ ತಕಾರಗಳು ಚಕಾರವನ್ನು ಹೊಂದುತ್ತವೆ. ಹಕಾರದ ಸ್ಥಾನವನ್ನು ವಿಕಲ್ಪದಿಂದ ಯಕಾರ ಗಕಾರ ಣಕಾರಗಳು ವ್ಯಾಪಿಸುತ್ತವೆ.

ಮಕಾರಕ್ಕೆ ವಕಾರ	:	ಕಾಮಂ-ಕಾವಂ, ಚಾಮುಂಡಿ-ಚಾವುಂಡಿ.
ಚಕಾರಕ್ಕೆ ಸಕಾರ	:	ಚೂರ್ಣಂ-ಸುಣ್ಣಂ, ಕ್ರಕಚ-ಕರಗಸಂ
ಚಕಾರಕ್ಕೆ ದಕಾರ	:	ಉಚ್ಚ-ಉದ್ದಂ
ಶಕಾರಕ್ಕೆ ಚಕಾರ	:	ಶಷ್ಕುಲಿ-ಚಕ್ಕುಲಿ, ನಿಶ್ಚಲಂ-ನಿಚ್ಚಳಂ, ವಂಶಂ-ಬಂಚಂ
ಷಕಾರಕ್ಕೆ ಚಕಾರ	:	ಷಷ್ಠಿ-ಚಟ್ಟಿ.
ತಕಾರಕ್ಕೆ ಚಕಾರ	:	ನರ್ತಕಿ-ನಚ್ಚಣಿ, ನಿತ್ಯಂ-ನಿಚ್ಚಂ.
ಹಕಾರಕ್ಕೆ ಯಕಾರ	:	ಕುಹಕಂ-ಕೊಯಕಂ.
ಹಕಾರಕ್ಕೆ ಗಕಾರ	:	ಸಿಂಹಂ-ಸಿಂಗಂ.
ಹಕಾರಕ್ಕೆ ಣಕಾರ	:	ಸನ್ನಾಹಂ-ಸನ್ನಣಂ.

೨೭೮

ತಳೆಗುಂ ಮೇಗಣ ಕಸಪಂ
ತಳದ ತಕಾರಸ್ವರೂಪಮಂ, ಮೇಗೆ ತಗು
ಳ್ದಿಳಸಿದ ಹಕಾರಮುಂ ತಳ
ದೊಳಿರ್ದ ಮನಕಾರರೂಪಮಂ ಧರಿಯಿಸುಗುಂ

ಮೇಲಿನ ಕಸಪವರ್ಣಗಳು ಕೆಳಗಿನ ತಕಾರದ ರೂಪವನ್ನು ಹೊಂದುತ್ತವೆ. ಮೇಲೆ ಹೊಂದಿಕೊಂಡಿರುವ ಹಕಾರವೂ ಕೆಳಗಿರುವ ಮಕಾರ ನಕಾರ ರೂಪವನ್ನು ಧರಿಸುತ್ತದೆ.

ಮೇಲಿನ ಕಕಾರ ಕೆಳಗಿನ ತಕಾರವಾದುದಕ್ಕೆ	:	ಶುಕ್ತಿ-ಸುತ್ತಿ.
ಮೇಲಿನ ಸಕಾರ ಕೆಳಗಿನ ತಕಾರವಾದುದಕ್ಕೆ	:	ಪುಸ್ತಕ-ಹೊತ್ತಗೆ.
ಮೇಲಿನ ಪಕಾರ ಕೆಳಗಿನ ತಕಾರವಾದುದಕ್ಕೆ	:	ಸಪ್ತಮಿ-ಸತ್ತವಿ, ಗುಪ್ತಂ-ಗುತ್ತಂ
ಮೇಲಿನ ಹಕಾರ ಕೆಳಗಿನ ಮಕಾರವಾದುದಕ್ಕೆ	:	ಬ್ರಹ್ಮ-ಬೊಮ್ಮ.
ಮೇಲಿನ ಹಕಾರ ಕೆಳಗಿನ ನಕಾರವಾದುದಕ್ಕೆ	:	ಚಿಹ್ನಂ-ಚಿನ್ನಂ.

೨೭೯

ತಳದ ಮಕಾಕ್ಷರರೂಪಂ

ಘುಳಿಯಿಪುದಗ್ರದ ಷಕಾರಮಗ್ರತಕಾರಂ

ತಳದ ಪಫನಮೆ ದಲಕ್ಕುಂ,

ತಳದ ನಮಾಕ್ಷರಮೆಯಕ್ಕುಮಗ್ರದ ಣಣಮುಂ

ಮೇಲಿನ ಷಕಾರ, ಕೆಳಗಿನ ಮಕಾರ ಕಕಾರಗಳ ರೂಪವನ್ನು ಪಡೆಯುತ್ತದೆ. ಮೇಲಿನ ತಕಾರ ಕೆಳಗಿನ ಪಕಾರ, ಫಕಾರ ನಕಾರವಾಗುತ್ತದೆ. ಮೇಲಿನ ಣಕಾರ, ನಕಾರಗಳು ಕ್ರಮವಾಗಿ ಕೆಳಗಿನ ನಕಾರ, ಮಕಾರಗಳಾಗುತ್ತವೆ.

ಮೇಲಿನ	ಷಕಾರ	ಕೆಳಗಿನ	ಮಕಾರವಾದುದಕ್ಕೆ	:	ಊಷ್ಮೆ-ಉಮ್ಮೆ.
"	"	"	ಕ "	:	ಶಷ್ಕುಲಿ-ಚಕ್ಕುಲಿ.
"	ತ	"	ಪ "	:	ಉತ್ಪಟ-ಉಪ್ಪಡಂ
"	"	"	ಫ "	:	ಸತ್ಫಲಂ-ಸಪ್ಪಳಂ.
"	"	"	ನ "	:	ರತ್ನಂ-ರನ್ನಂ
"	ಣ	"	ನ "	:	ಜೀರ್ಣ್ಣಂ-ಜಿನ್ನಂ, ಕರ್ಣ್ಣಾಟಂ-ಕನ್ನಡಂ.
"	ನ	"	ಮ "	:	ಉನ್ಮತ್ತಂ-ಉಮ್ಮತಂ.

೨೮೦

ಜಲತದ ಕೆಳಗಣ ವತ್ವಂ

ನಲತವಪಾಕ್ಷರದ ಕೆಳಗೆ ಕೂಡಿದ ಯತ್ವಂ

ಸಲೆ ಗತ್ವದ ಕೆಳಮ್ಮೆಯೊಳ್

ನೆಲಸಿದ ನತ್ವಂ ತದಾಕೃತಿಯನಾಳ್ದಿರ್ಕುಂ

ಜಕಾರ ಲಕಾರ ತಕಾರಗಳ ಕೆಳಗಿನ ವಕಾರವೂ, ನಕಾರ ಲಕಾರ ತಕಾರ ವಕಾರ ಪಕಾರಗಳ ಕೆಳಗಿನ ಯಕಾರವೂ, ಗಕಾರದ ಕೆಳಗಿನ ನಕಾರವೂ ಆ (=ತಂತಮ್ಮ ಮೇಲಿನ ಅಕ್ಷರಗಳ) ರೂಪಗಳನ್ನು ತಾಳುತ್ತವೆ.

ಕೆಳಗಿನ	ವಕಾರ	ಮೇಲಿನ	ಜಕಾರವಾದುದಕ್ಕೆ	:	ಉಜ್ವಲಂ-ಉಜ್ಜಳಂ.
"	"	"	ಲ "	:	ಬಿಲ್ವಪತ್ರಂ-ಬೆಲ್ಲವತ್ತಂ.
"	"	"	ತ "	:	ಸತ್ವಕಂ-ಸತ್ತುಗಂ.
"	ಯ	"	ನ "	:	ಕನ್ಯಕೆ-ಕನ್ನಿಕೆ.
"	"	"	ಲ "	:	ಪಲ್ಯಯನಂ-ಹಲ್ಲಣ.
"	"	"	ತ "	:	ಮೃತ್ಯು-ಮಿತ್ತು.
"	"	"	ವ "	:	ಕಾವ್ಯಂ-ಕಬ್ಬಂ(<ಕವ್ವಂ)
"	"	"	ಪ "	:	ಲೇಪ್ಯಂ-ಲೆಪ್ಪಂ
"	"	"	ಗ "	:	ಅಗ್ನಿ-ಅಗ್ಗಿ, ಲಾಗ್ನಿಕಂ-ಲಗ್ಗಿಗಂ

೨೮೧

ವರಜಯತಡ ವರ್ಣಮನಾ

ಚರಿಪುದು ತಾಂ ಬೇಱವೇಱ ಪದಚಯದೊಳ್ ಸಂ

ಚರಿಪ ದಕಾರಕ್ಕಾದಂ,
ದೊರೆಕೊಳ್ಗುಂ ಕೆಲವು ಶಬ್ದದಾದಿಗೆ ದೀರ್ಘಂ

ಶಬ್ದಗಳಲ್ಲಿ ಬಳಕೆಯಾದ ದಕಾರಕ್ಕೆ ವಕಾರ, ರಕಾರ, ಜಕಾರ, ಯಕಾರ, ತಕಾರ, ಡಕಾರಗಳನ್ನು ಯೋಜಿಸಬೇಕು. ಕೆಲವು ಶಬ್ದಗಳ ಆದಿಗೆ ದೀರ್ಘವುಂಟಾಗುತ್ತದೆ.

ದಕಾರಕ್ಕೆ ವಕಾರ : ಪಾದುಕಂ-ಹಾವುಗೆ.
ದಕಾರಕ್ಕೆ ರಕಾರ : ಕದಂಬಂ-ಕರಂಬಂ
ದಕಾರಕ್ಕೆ ಜಕಾರ : ಗದೆ-ಗಜೆ.
ದಕಾರಕ್ಕೆ ಯಕಾರ : ಪದಂ-ಪಯಂ.
ದಕಾರಕ್ಕೆ ತಕಾರ : ದರ್ದುರ-ತರ್ದುರ.
ದಕಾರಕ್ಕೆ ಡಕಾರ : ವಿಚ್ಛಂದು-ವಿಚ್ಚಂಡಂ.
ಶಬ್ದಗಳ ಆದಿಯ ದೀರ್ಘಕ್ಕೆ : ಕಹಳೆ-ಕಾಳೆ.

೨೮೨

ಪದದಾದಿಯ ಋತ್ವಕ್ಕಿ
ತ್ವದೆತ್ವದತ್ವದ ವಿಧಾನಮುತ್ವಂ ಬಹುಳಂ
ಪುದಿದಿರ್ಕುಮಮೃತಶಬ್ದಾಂ
ತದಲ್ಲಿಯುಂ ಬ್ರಹ್ಮಶಬ್ದದಂತಿರೆ ರೇಫಂ

ಪದದ ಆದಿಯ ಋಕಾರಕ್ಕೆ ಇಕಾರ, ಎಕಾರ, ಅಕಾರಗಳು ಮತ್ತು ವಿಕಲ್ಪದಿಂದ ಉಕಾರವು ಉಂಟಾಗುತ್ತವೆ. ಬ್ರಹ್ಮ ಶಬ್ದದ ಹಾಗೆ ಅಮೃತ ಶಬ್ದದ ಕೊನೆಗೆ ರೇಫೆ ಬರುತ್ತದೆ.

ಋಕಾರಕ್ಕೆ ಇಕಾರ : ಋಣಂ-ರಿಣಂ, ಶೃಂಗಾರಂ-ಸಿಂಗಾರಂ.
" ಎ " : ಹೃದಯಂ-ಹೆದೆಯಂ.
" ಅ " : ವೃಷಭಂ-ಬಸವಂ.
" ಉ " : ಮೃದ್ವೀಕೆ-ಮುದ್ದಿಕೆ.
ಬ್ರಹ್ಮ ಶಬ್ದದ ಹಾಗೆ ಅಮೃತ ಶಬ್ದದ ಕೊನೆಯ ರೇಫಕ್ಕೆ : ಬ್ರಹ್ಮಂ-ಬರ್ಮಂ.
ಅಮೃತಂ-ಅಮರ್ದು.

೨೮೩

ಆದಿಯೊಳಿರ್ದತ್ವಕ್ಕು
ತ್ವಾದೇಶಮುಮಿತ್ವವೃತ್ತಿಯುಂ ಹತ್ವಮುಮಾ
ಪಾದಿತಮಕ್ಕುಂ ಜ್ಞತ್ವ
ಕ್ಕಾದಿಯನುೞಿದು ನ್ನನಕ್ಕುಮದು ಬಹುಳತೆಯಿಂ

(ಪದದ) ಆದಿಯಲ್ಲಿರುವ ಅಕಾರಕ್ಕೆ ಉಕಾರ, ಇಕಾರ, ಹಕಾರಾದೇಶವಾಗುತ್ತವೆ. ಆದಿಯಲ್ಲಿಲ್ಲದ ಜ್ಞಕಾರಕ್ಕೆ ವಿಕಲ್ಪದಿಂದ ನ್ನಕಾರವುಂಟಾಗುತ್ತದೆ.

ಆದಿಯ ಅಕಾರಕ್ಕೆ ಉಕಾರ : ಅಂಗುಷ್ಟಂ-ಉಂಗುಟಂ
" " ಇ " : ಅಂಗಾರಂ-ಇಂಗಳಂ.

"   "   ಹ "   : ಅಗ್ನಿ-ಹಗ್ಗಿ.
ಆದಿಯಲ್ಲದ ಜ್ಞ ಕಾರಕ್ಕೆ ನ್ನ ಕಾರ : ವಿಜ್ಞಾಪನಂ-ಬಿನ್ನಪಂ, ಸಂಜ್ಞೆ-ಸನ್ನೆ.
ವಿಕಲ್ಪಕ್ಕೆ : ಆಜ್ಞೆ-ಆಣೆ.

೨೮೪

ಪದದಾದಿಯುವರ್ಣಕ್ಕೌ
ತ್ವದತ್ವದೆಡೆಗೊತ್ವಮುಂ ಪೊದಳ್ದೋತ್ವಮುಮ
ಪ್ಪುದು ವೈಕಲ್ಪಿಕದಿಂ, ಶ
ಬ್ದವಾದಿ ದೀರ್ಘಕ್ಕೆ ಪಿರಿದುಮಕ್ಕುಂ ಹ್ರಸ್ವಂ

ವಿಕಲ್ಪದಿಂದ ಪದದ ಆದಿಯ ಅ, ಉ, ಊ, ಔ ಕಾರಗಳಿಗೆ ಒ, ಓಕಾರಗಳುಂಟಾಗುತ್ತವೆ. ಪದಗಳ ಆದಿದೀರ್ಘಕ್ಕೆ ಹ್ರಸ್ವವುಂಟಾಗುತ್ತದೆ.

ಅಕಾರಕ್ಕೆ ಒಕಾರ : ಸ್ವರ್ಣ-ಸೊನ್ನೆ.
ಅಕಾರಕ್ಕೆ ಓಕಾರ : ಮಯೂರಂ-ಮೋರಂ.
ಉಕಾರಕ್ಕೆ ಒಕಾರ : ಮುಖಂ-ಮೊಗಂ.
ಉಕಾರಕ್ಕೆ ಓಕಾರ : ಕುಮಾರಂ-ಕೋವರಂ
ಊಕಾರಕ್ಕೆ ಓಕಾರ : ಕೂಟಂ-ಕೋಡಂ.
ಔಕಾರಕ್ಕೆ ಒಕಾರ : ಸೌರಾಷ್ಟ್ರಂ-ಸೊರಟಂ.
ಔಕಾರಕ್ಕೆ ಓಕಾರ : ಕೌಪೀನಂ-ಕೋವಣಂ.
ಆದಿದೀರ್ಘಕ್ಕೆ ಹ್ರಸ್ವ : ಗೂರ್ಜರಂ-ಗುಜ್ಜರಂ.

೨೮೫

ಅಕ್ಕುಮೆವರ್ಣಂ ಭಾವಿಸೆ
ತಕ್ಕಂತೆ ಪದಾದಿಯಿತ್ವದತ್ವದ ಸಂಸ್ಥಾ
ನಕ್ಕಂ ಮತ್ತೈತ್ವಕ್ಕಂ,
ಮಿಕ್ಕಾದಿ ಹಕಾರಮಸ್ವರದೆ ಲೋಪಿಸುಗುಂ

ಪದದ ಆದಿಯ ಇಕಾರ ಅಕಾರ ಸ್ಥಾನಗಳಿಗೆ ಮತ್ತು ಐಕಾರಕ್ಕೆ ಎ ಏಕಾರಗಳು ತಲೆದೋರುತ್ತವೆ. ಉಳಿದೆಡೆಗಳಲ್ಲಿ ಪದದ ಆದಿಯ ಹಕಾರ ವ್ಯಂಜನರೂಪದಿಂದ ಲೋಪವಾಗುತ್ತದೆ.

ಪದಾದಿಯ ಇಕಾರಕ್ಕೆ ಎಕಾರ : ದಿವಸಂ-ದೆವಸಂ.
"   "   ಏಕಾರ : ನಿಯಮಂ-ನೇಮಂ.
"   ಅಕಾರಕ್ಕೆ ಎಕಾರ : ಜಟಾ-ಜೆಡೆ.
"   "   ಏಕಾರ : ವ್ಯವಹಾರಂ-ಬೇಹಾರಂ.
"   ಐಕಾರಕ್ಕೆ ಎಕಾರ : ವೈದ್ಯಂ-ಬೆಜ್ಜಂ.
"   "   ಏಕಾರ : ವೈಶಾಖಂ-ಬೇಸಗೆ.
"   ವ್ಯಂಜನ ಹಕಾರ ಲೋಪಕ್ಕೆ : ಹಂಸೆ-ಅಂಚೆ.

೨೮೬

ಅಕ್ಕುಂ ಸ್ಪರ್ಶಸ್ಪಟಿಕ
ಸ್ಫಿಕ್ಕಾಸ್ಫೋಟಕದೊಳಂ ಸ್ತುತಿಸ್ತಿಮಿತಸ್ತೋ
ಮಕ್ಕಿರ್ದ ಪದಾದಿ ಸಕಾ
ರಕ್ಕಂ ಲೋಪಂ ಶ್ಮಶಾನದಾ ಶತ್ವಕ್ಕಂ

ಸ್ಪರ್ಶ, ಸ್ಪಟಿಕ. ಸ್ಫಿಕ್ಕಾ, ಸ್ಫೋಟಕ, ಸ್ತುತಿ, ಸ್ತಿಮಿತ, ಸ್ತೋಮ ಪದಗಳ ಆದಿಯ ಸಕಾರಕ್ಕೂ ಶ್ಮಶಾನದ(ಆದಿಯ) ಶಕಾರಕ್ಕೂ ಲೋಪವುಂಟಾಗುತ್ತದೆ.

ಸ್ಪರ್ಶಂ-ಪರುಸಂ, ಸ್ಪಟಿಕಂ-ಪಳಿಕು, ಸ್ಫಿಕ್ಕಾ-ಹಿಕ್ಕೆ, ಸ್ಫೋಟಕಂ-ಹೋಳಿಗೆ, ಸ್ತುತಿ-ತುತಿ, ಸ್ತಿಮಿತಂ-ತಿಮಿತಂ, ಸ್ತೋಮಂ-ತೋಮಂ, ಶ್ಮಶಾನಂ-ಮಸಣಂ.

೨೮೭

ಪದಮಧ್ಯದ ದೀರ್ಘಕ್ಕ
ಪ್ಪುದು ಪೀನಂ ಹ್ರಸ್ವಮೋತ್ವಮಾದಂದುತ್ವಂ
ಪುದಿದುತ್ವಕ್ಕಿತ್ವಮುಮ
ತ್ವದ ಮೆಯ್ಯುಮದತ್ವದಲ್ಲಿಗಿತ್ವಾದೇಶಂ

ಪದಮಧ್ಯದ ದೀರ್ಘಕ್ಕೆ ಹ್ರಸ್ವವುಂಟಾಗುತ್ತದೆ. (ಪದಮಧ್ಯವು) ಓಕಾರವಾಗಿದ್ದಲ್ಲಿ ಉಕಾರ ಬರುತ್ತದೆ. (ಪದಮಧ್ಯದ) ಉಕಾರಕ್ಕೆ ಇಕಾರ ಅಕಾರಗಳೂ ಅಕಾರಕ್ಕೆ ಇಕಾರವೂ ಆದೇಶವಾಗುತ್ತವೆ.

ಪದಮಧ್ಯದ ದೀರ್ಘಕ್ಕೆ ಹ್ರಸ್ವ	:	ಆಕಾಶಂ-ಆಗಸಂ.
" ಓಕಾರಕ್ಕೆ ಉಕಾರ	:	ಅಶೋಕೆ-ಅಸುಗೆ.
" ಉಕಾರಕ್ಕೆ ಇಕಾರ	:	ಆಯುಷ್ಯಂ-ಆಯಿಸಂ.
" ಉಕಾರಕ್ಕೆ ಅಕಾರ	:	ಮಾನುಷ್ಯಂ-ಮಾನಸಂ.
" ಅಕಾರಕ್ಕೆ ಇಕಾರ	:	ಕನ್ಯಕಾ-ಕನ್ನಿಕೆ.

೨೮೮

ಪದಮಧ್ಯದೇತ್ವದೊಳಮೀ
ತ್ವದೊಳಂ ತಾನತ್ವಮತ್ವಮಿರ್ದಂದುತ್ವಂ
ವಿದಿತಾತ್ವಕ್ಕಕ್ಕುಂ ಹ್ರ
ಸ್ವದೆತ್ವವಿಧಿ ಬಹುಲವೃತ್ತಿಯಿಂ ಕೆಲವೆಡೆಯೊಳ್

ಪದಮಧ್ಯದ ಏಕಾರದಲ್ಲಿಯೂ ಈಕಾರದಲ್ಲಿಯೂ ಅಕಾರವುಟಾಗುತ್ತದೆ. ಅಕಾರವಿದ್ದ ಪಕ್ಷದಲ್ಲಿ ಉಕಾರವಾಗುತ್ತದೆ. ಕೆಲವೆಡೆ ಆಕಾರಕ್ಕೆ ವಿಕಲ್ಪದಿಂದ ಎಕಾರವಾಗುತ್ತದೆ.

ಪದಮಧ್ಯದ ಏಕಾರಕ್ಕೆ ಅಕಾರ	:	ಆಲೇಖಂ-ಆಳಕಂ.
" ಈಕಾರಕ್ಕೆ "	:	ಮರೀಚಂ-ಮೆಳಸು.

"	ಅಕಾರಕ್ಕೆ ಉಕಾರ	:	ಸತ್ವಕಂ-ಸತ್ತುಗಂ.
"	ಆಕಾರಕ್ಕೆ ಎಕಾರ	:	ಅನ್ಯಾಯಂ-ಅನ್ನೆಯಂ.

೨೮೯

ಅವತರಿಸಿರ್ಕುಂ ಪದಮ
ಧ್ಯವರ್ಣದೊಳ್ ಲೋಪವೃತ್ತಿ ಬಹುಳತೆಯಿಂ ತ
ದ್ಭವಮಾದಿಯ ಬತ್ವಂ ಭೈ
ತ್ವವೈತ್ವವಿಧಿಯತ್ವದಾತ್ವದೊಳ್ ದೊರೆಕೊಳ್ಗುಂ

ಪದಮಧ್ಯ ವರ್ಣದಲ್ಲಿ ವಿಕಲ್ಪದಿಂದ ಲೋಪವುಂಟಾಗುತ್ತದೆ. (ಪದದ) ಆದಿಯ ಬಕಾರವು ಭೈಕಾರವಾಗಿ ಪ್ರಕಟವಾಗುತ್ತದೆ. (ಪದದ ಆದಿಯ) ಅಕಾರ, ಆಕಾರಗಳಲ್ಲಿ ಐಕಾರ ಪ್ರಾಪ್ತವಾಗುತ್ತದೆ.

ಪದಮಧ್ಯವರ್ಣ ಲೋಪಕ್ಕೆ	:	ನಿಯಮಂ-ನೇಮಂ.
ಬಕಾರಕ್ಕೆ ಭೈಕಾರ	:	ಬಹಿತ್ರಂ-ಭೈತ್ರಂ
ಅಕಾರಕ್ಕೆ ಐಕಾರ	:	ಮಹಿಮೆ-ಮೈಮೆ.
ಆಕಾರಕ್ಕೆ ಐಕಾರ	:	ವ್ಯಾಹಾಳಿ-ವೈಹಾಳಿ.

೨೯೦

ಸಮನಿಸುಗುಂ ಗತ್ವಂ ಶ
ಬ್ದಮಧ್ಯ ಮತ್ವಕ್ಕಮಂತೆ ಳತ್ವಕ್ಕಂ ಕ
ತ್ವಮದಿರ್ದೊಡೆ ವತ್ವಂ ಯು
ತ್ವಮಿಶ್ರಧತ್ವಕ್ಕೆ ದತ್ವಮತ್ವಕ್ಕಿತ್ವಂ

ಪದಮಧ್ಯದ ಮಕಾರಕ್ಕೂ ಳಕಾರಕ್ಕೂ ಗಕಾರವುಂಟಾಗುತ್ತದೆ; ಕಕಾರವಿದ್ದರೆ ವಕಾರವುಂಟಾಗುತ್ತದೆ. ಯಕಾರದಿಂದ ಕೂಡಿದ ಧಕಾರಕ್ಕೆ ದಕಾರ, (ಅದರ) ಅಕಾರಕ್ಕೆ ಇಕಾರ ಪ್ರಾಪ್ತವಾಗುತ್ತದೆ.

ಪದಮಧ್ಯ	ಮಕಾರಕ್ಕೆ		ಗಕಾರ	:	ಯಮುನೆ-ಜಗುನೆ.
"	ಳ	"	"	:	ಜಳೂಕೆ-ಜಿಗುಳೆ.
"	ಕ	"	ವಕಾರ	:	ಸೀಕರಂ-ಸೀವರಂ.

ಯಕಾರದಿಂದ ಕೂಡಿದ ಧಕಾರಕ್ಕೆ ಇಕಾರದಿಂದ ಕೂಡಿದ ದಕಾರ: ಅಧ್ಯಕ್ಷಂ-ಅದ್ದಿಕಂ.

೨೯೧

ಪದಮಧ್ಯ ತಕಾರಕ್ಕ
ಪ್ಪುದೊರ್ಮೆ ರೇಫಂ ಟಕಾರಮೊರ್ಮೆ ಗಕಾರಂ
ಪುದಿದಿರ್ಕುಮೊರ್ಮೆ ತಾನಂ
ತ್ಯದೊಳೊಂದಿರೆ ಡತ್ವಮೊರ್ಮೆಯೊರ್ಮೆ ಹಕಾರಂ

ಪದಮಧ್ಯ ತಕಾರಕ್ಕೆ ಒಮ್ಮೆ ರೇಫೆ, ಒಮ್ಮೆ ಟಕಾರ, ಒಮ್ಮೆ ಗಕಾರಗಳುಂಟಾಗುತ್ತವೆ. ಅದು (=ತಕಾರ) ಪದಾಂತ್ಯದಲ್ಲಿದ್ದರೆ ಒಮ್ಮೆ ಡಕಾರ, ಒಮ್ಮೆ ಹಕಾರವುಂಟಾಗುತ್ತವೆ.

ಪದಮಧ್ಯ ತಕಾರಕ್ಕೆ ರೇಫೆ	:	ಖಾತಿಕೆ-ಖಾರಿಗೆ.
" " ಟಕಾರ	:	ಪತ್ತನಂ-ಪಟ್ಟಣಂ
" " ಗಕಾರ	:	ಉತ್ಕಟಂ-ಉಗ್ಗಡಂ
ಪದಾಂತ್ಯ ತಕಾರಕ್ಕೆ ಡಕಾರ	:	ಸಂಘಾತಂ-ಸಂಗಡಂ
" " ಹಕಾರ	:	ತ್ವರಿತಂ-ತುರಿಹಂ.

೨೯೨

ತಿಳಿ ಬಹುಳದೆ ಶಬ್ದಾಂತಂ
ಗಳ ನತ್ವಜ್ಞತ್ವಕತ್ವದೆಡೆಗೆ ಣಕಾರಂ
ತಳೆಗುಮದಂತಪದಾಂತಂ
ಗಳೆತ್ವಮುಮನಿತ್ವವೃತ್ತಿಯುಮನುತ್ವಮುಮಂ

ಪದಾಂತ್ಯದ ನಕಾರ, ಜ್ಞ ಕಾರ, ಕಕಾರಗಳಿಗೆ ವಿಕಲ್ಪದಿಂದ ಣಕಾರವುಂಟಾಗುತ್ತದೆ. ಪದಾಂತ್ಯದ ಅಕಾರವು ಎಕಾರ ಉಕಾರಗಳನ್ನು ಪಡೆಯುತ್ತದೆ.

ಪದಾಂತ್ಯದ ನಕಾರಕ್ಕೆ ಣಕಾರ	:	ಪತ್ತನಂ-ಪಟ್ಟಣಂ
" ಜ್ಞ " "	:	ಆಜ್ಞೆ-ಆಣೆ
" ಕ " "	:	ನರ್ತಕಿ-ನಚ್ಚಣಿ.
ಪದಾಂತ್ಯದ ಕಕಾರಕ್ಕೆ ವಿಕಲ್ಪದ ಗಕಾರ	:	ಶುನಕಂ-ಸೊಣಗಂ.
ಪದಾಂತ್ಯದ ಅಕಾರಕ್ಕೆ ಎಕಾರ	:	ಜೀರಕಂ-ಜೀರಗೆ.
" " ಇಕಾರ	:	ಮಾಘಂ-ಮಾಗಿ.
" " ಉಕಾರ	:	ಪಿಷ್ಟಂ-ಪಿಟ್ಟು.

೨೯೩

ನೆಲೆಗೊಂಡುತ್ವಕ್ಕಿತ್ವಂ
ಕೆಲವೆಡೆಯಿತ್ವಕ್ಕಮುತ್ತಮುಂ ಹ್ರಸ್ವತೆಯ
ಗ್ಗಲಿಸಿರ್ದೆತ್ವಮುಮಂತ್ಯ
ಸ್ಥಲಸ್ವರಕ್ಕೊರ್ಮೆ ಲೋಪಮುಂ ಸಂಭವಿಕುಂ

(ಪದಾಂತ್ಯದಲ್ಲಿ) ನೆಲೆಗೊಂಡ ಉಕಾರಕ್ಕೆ ಇಕಾರ, ಕೆಲವೆಡೆ ಇಕಾರಕ್ಕೆ ಉಕಾರ ಎಕಾರಗಳು ಉಂಟಾಗುತ್ತವೆ. (ಪದದ) ಅಂತ್ಯಸ್ವರಕ್ಕೆ ಲೋಪವೂ ಸಂಭವಿಸುತ್ತದೆ.

ಪದಾಂತ್ಯದ ಉಕಾರಕ್ಕೆ ಇಕಾರ	:	ಖರ್ಜು-ಕಜ್ಜಿ.
" ಇ " ಉಕಾರ	:	ಗ್ರಂಥಿ-ಗಂಟು.
" ಇ " ಎಕಾರ	:	ಪುಷ್ಕರಿಣಿ-ಹೊಕ್ಕರಣೆ.
ಅಂತ್ಯಸ್ವರ ಲೋಪಕ್ಕೆ	:	ಮೀನಂ-ಮೀನ್, ಮುಕುಲಂ-ಮುಗುಳ್.

೨೯೪

ಮಹಿಪೊಗಟ್ಟಾಶ್ಚರ್ಯ ಪ್ರ
ಗ್ರಹ ವಿಜ್ಞಾಪನ ಕಪಿಂಜಲಾಂಗಿರಸಾಂತ್ಯ

ಕ್ಕೆ ಹಿತಂ ಲೋಪವಿಧಾನಂ
ಗ್ರಹಣಕ್ಕಂ ಗರಣಮಾಯ್ತು ಶಬ್ದಾದೇಶಂ

ಆಶ್ಚರ್ಯ, ಪ್ರಗ್ರಹ, ವಿಜ್ಞಾಪನ, ಕಪಿಂಜಲ, ಆಂಗಿರಸ(ಪದ)ಗಳ ಅಂತ್ಯಕ್ಕೆ ಲೋಪವೊದಗುತ್ತದೆ. ಗ್ರಹಣ ಶಬ್ದಕ್ಕೆ ಗರಣ ಆದೇಶವಾಗುತ್ತದೆ.

ಆಶ್ಚರ್ಯ-ಅಚ್ಚರಿ, ಪ್ರಗ್ರಹಂ-ಹಗ್ಗಂ, ವಿಜ್ಞಾಪನಂ-ಬಿನ್ನಪಂ.
ಕಪಿಂಜಲಂ-ಕವಿಂಜು, ಆಂಗಿರಸಂ-ಆಂಗಿರಂ, ಗ್ರಹಣಂ-ಗರಣಂ

೨೯೫

ಕೂರ ಪ್ರಾಕಾರಂಗಳ
ಮೇರೆಯ ರೇಫಕ್ಕೆ ತರದೆ ಟಳಲತ್ವಂಗಳ್
ಪೂರಿಪುವಸ್ವರವಿಧಿಯಿಂ
ಸಾರಂ ಗ್ರಾಮೀಣ ಣತ್ವದೆಡೆಗೆ ಲಕಾರಂ

ಕೂರ, ಪ್ರಾಕಾರ(ಪದ)ಗಳ ಅಂತ್ಯ ರೇಫಕ್ಕೆ ಕ್ರಮವಾಗಿ ವ್ಯಂಜನರೂಪದ ಟಕಾರ. ಲಕಾರಗಳುಂಟಾಗುತ್ತವೆ. ಗ್ರಾಮೀಣ(ಶಬ್ದ)ದ ಣಕಾರಕ್ಕೆ ಲಕಾರವು ಯೋಗ್ಯವಾದುದು.

ಕೂರಾಂತ್ಯಕ್ಕೆ ಟಕಾರ : ಕೂರಂ-ಕೂಟ್.
ಪ್ರಾಕಾರಾಂತ್ಯಕ್ಕೆ ಲಕಾರ : ಪ್ರಾಕಾರಂ-ಪಾಗಲ್
ಗ್ರಾಮೀಣದ ಣಕಾರಕ್ಕೆ ಲಕಾರ : ಗ್ರಾಮೀಣ-ಗಾವಿಲಂ.

೨೯೬

ಶಸದಧಲಜಳತದಿಂ ಕೆಳ
ಗೆ ಸಲ್ವ ವತ್ವಂ ಸ್ನುಕಾರನತ್ವಂ ಮತ್ತಂ
ಜಸಕನವಶಷದ ಯತ್ವಂ
ಪ್ರಸನ್ನಭಾವದೊಳೆ ತಳ್ತು ಲೋಪಮನಾಳ್ಗುಂ

ಶ ಸ ದ ಧ ಲ ಜ ಳ ತಕಾರಗಳ ಕೆಳಗಿನ ವಕಾರ, ಸ್ನುಕಾರದ ಕೆಳಗಿನ ನಕಾರ, ಜ ಸ ಕ ನ ವ ಶ ಷಗಳ (ಕೆಳಗಿನ) ಯಕಾರಗಳು ಲೋಪವಾಗುತ್ತವೆ.

ಶಕಾರಾದಿಗಳ ಕೆಳಗಿನ ನಕಾರ ಲೋಪಕ್ಕೆ :
ಈಶ್ವರಂ-ಈಸರಂ, ಸರಸ್ವತಿ-ಸರಸತಿ, ದ್ವೀಪಂ-ದೀವಂ, ಧ್ವನಿ-ದನಿ.
ಸುಲ್ವಂ-ಸುಲು, ಸುಲ್, ಜ್ವರಂ-ಜರಂ, ಖಿಳ್ವಂ-ಕೀಳ್(?), ತ್ವರಿತಂ-ತುರಿಹಂ,
ಸ್ನುಕಾರದ ಕೆಳಗಿನ ನಕಾರ ಲೋಪಕ್ಕೆ : ಸ್ನುಷಾ-ಸೊಸೆ,
ಜಕಾರಾದಿಗಳ ಕೆಳಗಿನ ಯಕಾರ ಲೋಪಕ್ಕೆ :
ಜ್ಯೋತಿ-ಜೋತಿ. ಅಮಾವಾಸ್ಯೆ-ಅಮಾವಾಸೆ, ಮಾಣಿಕ್ಯ-ಮಾಣಿಕಂ.
ನ್ಯೂನಂ-ನೂನಂ, ವ್ಯವಹಾರಂ-ಬೆವಹಾರಂ, ಶ್ಯಾಮವರ್ಣಂ-ಸಾಮವರ್ಣಂ.
ಆಯುಷ್ಯಂ-ಆಯಿಸಂ.

೨೯೭

ಯತ್ವದ ಸತ್ವದ ಚತ್ವದ
ದತ್ವದ ವಿಧಿ ಜತ್ವದಲ್ಲಿ ಸಂಭವಿಸಿರ್ಕುಂ
ಭತ್ವಕ್ಕೆ ಹಪವಮಕ್ಕುಂ
ರತ್ವಕ್ಕಂ ಲಳಮುಮಕ್ಕುಮೋರೊಂದೆಡೆಯೊಳ್

ಜಕಾರದಲ್ಲಿ ಯಕಾರದ, ಸಕಾರದ, ಚಕಾರದ, ದಕಾರದ(ಆದೇಶ)ವಿಧಿ ಸಂಭವಿಸುತ್ತದೆ. ಭಕಾರಕ್ಕೆ ಹ ಪ ವಕಾರಗಳುಂಟಾಗುತ್ತವೆ. ರಕಾರಕ್ಕೂ ಕೆಲವೆಡೆಗಳಲ್ಲಿ ಲ ಳ ಕಾರಗಳುಂಟು.

ಜಕಾರಕ್ಕೆ ಯಕಾರ	:	ರಾಜಂ-ರಾಯಂ
" ಸಕಾರ	:	ಕುಟಜಕಂ-ಕೊಡಸಿಗೆ
" ಚಕಾರ	:	ಲಾಮಜ್ಜಂ-ಲಾಮಂಚಂ
" ದಕಾರ	:	ಮುಂಜಂ-ಮೊದೆ.
ಭಕಾರಕ್ಕೆ ಹಕಾರ	:	ವಲ್ಲಭಂ-ಬಲ್ಲಹಂ.
" ಪಕಾರ	:	ಭಿಂಡಿವಾಲಂ-ಪಿಂಡಿವಾಳಂ.
" ವಕಾರ	:	ವೃಷಭಂ-ಬಸವಂ.
ರೇಫೆಗೆ ಲಕಾರ	:	ಕುಠಾರಂ-ಕೊಡಲಿ
" ಳಕಾರ	:	ಮರೀಚಂ-ಮೆಳಸು.

೨೯೮

ಡತ್ವಂ ಜತ್ವಂ ದ್ವಿತ್ವಾ
ದ್ವಿತ್ವ ಧಕಾರಕ್ಕೆ ಯೋಗವಾಹಮನಾಳ್ದಾ
ಷತ್ವಕ್ಕೆ ಡತ್ವ ಟತ್ವಂ
ದ್ವಿತ್ವದಿನಕ್ಕುಂ ಟಕಾರಮೊರ್ಮೆದ್ವಿತ್ವಂ

ದ್ವಿತ್ವ ಮತ್ತು ಅದ್ವಿತ್ವ ಧಕಾರಕ್ಕೆ (ಕ್ರಮವಾಗಿ ದ್ವಿತ್ವ ಮತ್ತು ಅದ್ವಿತ್ವ)ಡಕಾರ ಜಕಾರಗಳುಂಟಾಗುತ್ತವೆ. ಯೋಗವಾಹವನುಳ್ಳ ಷಕಾರಕ್ಕೆ ದ್ವಿತ್ವರೂಪದಿಂದ ಡಕಾರ ಟಕಾರಗಳುಂಟಾಗುತ್ತವೆ. ಟಕಾರವು ಒಮ್ಮೆ ಅದ್ವಿತ್ವವಾಗುತ್ತದೆ.

ದ್ವಿತ್ವ ಧಕಾರತ್ಕೆ ದ್ವಿತ್ವ ಡಕಾರ	:	ವರ್ದ್ಧಕಿ-ಬಡ್ಡಗಿ.
" ಜ "	:	ಪದ್ಧತಿ-ಪಜ್ಜೆ.
ಅದ್ವಿತ್ವ ಧಕಾರಕ್ಕೆ ಅದ್ವಿತ್ವ ಡಕಾರ	:	ವರ್ಧಕಿ-[ಬಡಗಿ?]
" ಜ "	:	ಧಾತು-ಜಾದು.
ಯೋಗವಾಹದ ಷಕಾರಕ್ಕೆ ದ್ವಿತ್ವದ ಡಕಾರ	:	ಕಾಷ್ಠಂ-ಕಡ್ಡಿ.
" " " ಟ "	:	ಷಷ್ಟೀ-ಚಟ್ಟಿ.
" " ಅದ್ವಿತ್ವದ "	:	ಸೌರಾಷ್ಟ್ರ-ಸೊರಟಂ.

೨೯೯

ವಿದಿತಂ ದಾಡಿಮಕೂಷ್ಮಾಂ

ಡದ ಮತ್ವಸ್ಥಾನದಲ್ಲಿ ಬತ್ವಂ, ಕೂಷ್ಮಾಂ

ಡದ ಷತ್ವಕ್ಕಂ ಬಿಂದುಗ

ಮುದಯಿಸುಗುಂ ಲೋಪವೃತ್ತಿ ಲಕ್ಷಣವಿಧಿಯಿಂ

ದಾಡಿಮ ಕೂಷ್ಮಾಂಡಗಳ ಮಕರಸ್ಥಾನದಲ್ಲಿ ಬಕಾರ ಬರುತ್ತದೆ. ಕೂಷ್ಮಾಂಡದ ಷಕಾರಕ್ಕೂ ಬಿಂದುವಿಗೂ ಲೋಪವುಂಟಾಗುತ್ತದೆ.

ದಾಡಿಮದ ಮಕಾರಕ್ಕೆ ಬಕಾರ : ದಾಡಿಮಂ-ದಾಳಿಂಬಂ.
ಕೂಷ್ಮಾಂಡದ ಮಕಾರಕ್ಕೆ ಬಕಾರ : ಕೂಷ್ಮಾಂಡಂ-ಕುಂಬಳಂ
" ಷಕಾರ ಬಿಂದುಗಳಿಗೆ ಲೋಪ : ಕೂಷ್ಮಾಂಡಂ -ಕುಂಬಳಂ

೩೦೦

ಸಮನಿಸುಗುಮಾದಿವರ್ಣಾಂ

ತಿಮದೊಳಮೆರಡನೆಯ ವರ್ಣದಂತಿಮದೊಳಮಾ

ಸಮುಚಿತ ಬಿಂದು ಸ್ಥಿತಿ, ಬಿಂ

ದುಮಂತಶಬ್ದಕ್ಕೆ ಬಿಂದು ಲೋಪಂ ಬಹುಳಂ

(ಪದದ)ಪ್ರಥಮಾಕ್ಷರದ ಕೊನೆಗೂ ದ್ವಿತೀಯಾಕ್ಷರದ ಕೊನೆಗೂ ಬಿಂದು ಬರುತ್ತದೆ. ಬಿಂದುವುಳ್ಳ ಶಬ್ದಗಳಿಗೆ ವಿಕಲ್ಪದಿಂದ ಬಿಂದುಲೋಪ (ಸಂಭವಿಸುತ್ತದೆ).

ಪ್ರಥಮಾಕ್ಷರದ ಕೊನೆಯ ಬಿಂದುವಿಗೆ : ಮರ್ಕಟಂ-ಮಂಕಡಂ
ದ್ವಿತೀಯಾಕ್ಷರದ " " : ದಾಡಿಮಂ-ದಾಳಿಂಬಂ
ಬಿಂದುವುಳ್ಳ ಶಬ್ದಗಳ ಬಿಂದುಲೋಪಕ್ಕೆ : ಸಂಸ್ಕೃತಂ-ಸಕ್ಕದಂ
ವಿಕಲ್ಪಕ್ಕೆ : ಅಂಕುಶಂ-ಅಂಕುಸಂ.

೩೦೧

ಪದದೆರಡನೆಯಕ್ಕರದ

ತ್ವದೊಳೆತ್ವಂ ಹ್ರಸ್ವದೆತ್ವಮಾತ್ವಕ್ಕೂತ್ವ

ಕ್ಕುದಯಿಕುಮತ್ವಸ್ಥಿತಿ ಬಹು

ಳದೆ ದೀರ್ಘಂ ಹ್ರಸ್ವಮಾ ತೃತೀಯಾಕ್ಷರಕಂ

ಪದದ ಎರಡನೆಯಕ್ಷರದ ಅಕಾರಕ್ಕೆ ಎಕಾರ, ಆಕಾರಕ್ಕೆ ಎಕಾರ, ಊಕಾರಕ್ಕೆ ಅಕಾರವುಂಟಾಗುತ್ತದೆ. ವಿಕಲ್ಪದಿಂದ ಮೂರನೆಯಕ್ಷರದ ದೀರ್ಘ ಹ್ರಸ್ವವಾಗುತ್ತದೆ.

ಎರಡನೆಯಕ್ಷರದ ಅಕಾರಕ್ಕೆ ಎಕಾರ : ಉಜ್ಜಯನಿ-ಉಜ್ಜೆಣಿ.
" ಆಕಾರಕ್ಕೆ " : ರಸಾಯನಂ-ರಸೆಯನಂ.
ಎರಡನೆಯಕ್ಷರದ ಊಕಾರಕ್ಕೆ ಅಕಾರ : ನಿರೂಪಿಸಿದಂ-ನಿರವಿಸಿದಂ.
ಮೂರನೆಯಕ್ಷರದ ದೀರ್ಘಕ್ಕೆ ಹ್ರಸ್ವ : ವರ್ಧಮಾನಂ-ಬದ್ಧವಣಂ.

೩೦೨

ವ್ಯವಹರಿಸುಗುಮತ್ವಕ್ಕಿ
ತ್ವವಿಧಾನಂ ಹ್ರಸ್ವದೋತ್ವಮುತ್ವಂ ಶಬ್ದ
ಪ್ರವಿದಿತಮಾದುತ್ವಕ್ಕ
ತ್ವವೃತ್ತಿ ಮೂಱನೆಯ ವರ್ಣದೊಳ್ ನೆಲೆಗೊಳ್ಗುಂ

(ಪದದ) ತೃತೀಯಾಕ್ಷರ ಅಕಾರಕ್ಕೆ ಇಕಾರ, ಉಕಾರ, ಒಕಾರಗಳು ಬಳಕೆಯಾಗುತ್ತವೆ; ಉಕಾರಕ್ಕೆ ಅಕಾರ ತಲೆದೋರುತ್ತದೆ.

ತೃತೀಯಾಕ್ಷರದ ಅಕಾರಕ್ಕೆ ಇಕಾರ	:	ಹಿಂಗೂಲಕಂ-ಇಂಗುಲಿಕಂ.
" ಅಕಾರಕ್ಕೆ ಉಕಾರ	:	ಆಲಸ್ಯಕಂ-ಆಲಸುಗೆ.
" ಅಕಾರಕ್ಕೆ ಒಕಾರ	:	ಸುರಪರ್ಣಿ-ಸುರಹೊನ್ನೆ.
" ಉಕಾರಕ್ಕೆ ಅಕಾರ	:	ಕುಸ್ತುಂಬುರು-ಕೊತ್ತಂಬರಿ.

೩೦೩

ದೊರೆಕೊಳ್ಗುಂ ನಾಲ್ಕನೆಯ
ಕ್ಕರದತ್ವಕ್ಕೋತ್ವವೃತ್ತಿ ಶಬ್ದಂಗಳೊಳಿ
ರ್ದೆರಡನೆಯ ಮೂಱನೆಯ ಸಂ
ಚರಿಸುವ ನಾಲ್ಕನೆಯ ವರ್ಣಮಕ್ಕುಮಭಾವಂ

(ಪದದ) ನಾಲ್ಕನೆಯಕ್ಷರದ ಅಕಾರಕ್ಕೆ ಒಕಾರ ಬರುತ್ತದೆ. ಶಬ್ದಗಳಲ್ಲಿರುವ ಎರಡನೆಯ, ಮೂರನೆಯ, ನಾಲ್ಕನೆಯಕ್ಷರಗಳು ಲೋಪ ಹೊಂದುತ್ತವೆ.

ನಾಲ್ಕನೆಯಕ್ಷರದ ಅಕಾರಕ್ಕೆ ಒಕಾರ	:	ಆಟರೂಷಕಂ -ಆಡಸೋಗೆ.
ಎರಡನೆಯಕ್ಷರ ಲೋಪಕ್ಕೆ	:	ವ್ಯವಹಾರಂ-ಬೇಹಾರಂ.
ಮೂರನೆಯಕ್ಷರ "	:	ಅಮಾವಾಸ್ಯೆ-ಅವಸೆ.
ನಾಲ್ಕನೆಯಕ್ಷರ "	:	ಉತ್ತರೀಯಕಂ-ಉತ್ತರಿಗೆ.

೩೦೪

ಪದನೆರಡುಂ ತದ್ಭವದೊಳ್
ಪುದಿದಿರೆ ಮಾಳ್ಪುದು ಸಮಾಸಮುಂ ಪದಯುಗದೊಳ್
ಪದವೊಂದೇಗೆಯ್ದುಂ ವಿಧಿ
ಗೊದವದೆ ನಿಲೆಯುಂ ಸಮಾಸಮುಂಟರೆ ಎಡೆಯೊಳ್

(ಸಂಸ್ಕೃತದ) ಎರಡೂ ಪದಗಳು ತದ್ಭವವಾದರೆ ಮಾತ್ರ ಸಮಾಸವನ್ನು ಮಾಡಬೇಕು. ಎರಡರಲ್ಲಿ ಒಂದು ಪದ ಏನು ಮಾಡಿದರೂ (ತದ್ಭವ)ವಿಧಿಗೆ ಒಳಗಾಗದೆ ನಿಂತರೂ ಕೆಲವೆಡೆ ಸಮಾಸವಾಗುವುದುಂಟು.

ಎರಡು ತದ್ಭವಗಳ ಸಮಾಸಕ್ಕೆ	:	ಸ್ಥಾನದೀಪಿಕೆ-ತಾಣದೀವಿಗೆ.
ಉತ್ತರಪದ ಮಾತ್ರ ತದ್ಭವವಾದ ಸಮಾಸಕ್ಕೆ	:	ಪರಬ್ರಹ್ಮಂ-ಪರಬೊಮ್ಮಂ.
ಪೂರ್ವಪದ ಮಾತ್ರ ತದ್ಭವವಾದ ಸಮಾಸಕ್ಕೆ	:	ಶನಿವಾರಂ-ಸಣಿವಾರಂ.

೩೦೫

ಏಕ ದ್ವಿ ತ್ರಿ ಚತುಃ ಶ
ಬ್ದಾಕೃತಿಗೆಕ್ಕ ದು ತಿ ಚೌಗಳಾದೇಶಂಗಳ್
ಸ್ವೀಕೃತಸಮಾಸಪೂರ್ವದೊ
ಳಾಕರಿಪರ್ ಪ್ರತ್ಯಯಾಂತದೊಳಮೀ ವಿಧಿಯಂ

ಸಮಾಸದ ಪೂರ್ವಪದದಲ್ಲಿರುವ ಏಕ, ದ್ವಿ, ತ್ರಿ, ಚತುಃಗಳಿಗೆ ಎಕ್ಕ, ದು, ತಿ, ಚೌಗಳಾ ದೇಶವಾಗುತ್ತವೆ. ಪ್ರತ್ಯಯಾಂತಗಳಿಗೂ ಈ ನಿಯಮವನ್ನು ಹೇಳುತ್ತಾರೆ.

ಪೂರ್ವದ ಏಕಕ್ಕೆ ಎಕ್ಕ	:	ಏಕಶರಂ-ಏಕ್ಕಸರಂ.
" ದ್ವಿಗೆ ದು	:	ದ್ವಿಗುಣಂ-ದುಗುಣಂ
" ತ್ರಿಗೆ ತಿ	:	ತ್ರಿಪದಿ-ತಿವದಿ.
" ಚತುಃ ಗೆ ಚೌ	:	ಚತುಃಪಟ್ಟಂ-ಚೌವಟ್ಟಂ.
ಪ್ರತ್ಯಯಾಂತ ಶಬ್ದಗಳಿಗೆ	:	ದ್ವಿಕಂ-ದುಗಂ, ತ್ರಿಕಂ-ತಿಗಂ, ಚತುಷ್ಕಂ-ಚೌಕಂ.

೩೦೬

ಸಮಸಂದ ಸಹ ಮಹಚ್ಛ
ಬ್ದಮೆ ಸಾಮಾದೇಶದಿಂ ಸಮಾಸಾದಿಯೊಳಂ
ತಮರ್ದಿಕ್ಕುಂ ಪರಪದಪೂ
ರ್ವಮದುಂ ವ್ಯಂಜನದೊಳೊಂದೆ ಬಹುಳತೆಯಿಂದಂ

ಪರಪದ ಪೂರ್ವವು ವ್ಯಂಜನವಾಗಿದ್ದರೆ, ಸಮಾಸದ ಪೂರ್ವಪದದಲ್ಲಿರುವ ಸಹ, ಮಹತ್ ಶಬ್ದಗಳು ವಿಕಲ್ಪವಾಗಿ ಸಾ, ಮಾ ಎಂಬ ಆದೇಶರೂಪದಿಂದ ನಿಲ್ಲುತ್ತವೆ.

ಸಹಕ್ಕೆ	:	ಸಹದೇವಂ-ಸಾದೇವಂ.
ಮಹತ್‌ಗೆ	:	ಮಹಾದೇವಂ-ಮಾದೇವಂ
ವಿಕಲ್ಪಕ್ಕೆ	:	ಸಹಜಾತಂ-ಸಹಜಾತಂ, ಮಹಾಗಜಂ-ಮಹಾಗಜಂ.

೩೦೭

ಪರದೊಳ್ ಪಬಮಂಗಳ್ ನೆಲ
ಸಿರೆ ವತ್ವಂ ಪೀನಮಾ ಪಕಾರಮದೂತ್ವಂ
ಬೆರಸಿರೆ ತಾಂ ಹ್ರಸ್ವತೆಯುಂ
ತರೆಂಬ ಶಬ್ದಾಂತರೇಫೆಗಕ್ಕುಂ ಲೋಪಂ

ಪರಪದದ (ಮೊದಲ)ಲ್ಲಿ ಪಕಾರ, ಬಕಾರ ಮಕಾರಗಳು ನೆಲೆಸಿದ್ದರೆ (ಅವುಗಳಿಗೆ) ವಕಾರ; ಆ ಪಕಾರವು ಊಕಾರಗಳನ್ನೊಳಗೊಂಡಿದ್ದರೆ (ಆ ಊಕಾರಕ್ಕೆ) ಹ್ರಸ್ವತೆ ಬರುತ್ತದೆ. ಅಂತರ್ ಶಬ್ದದ ಅಂತ್ಯ ರೇಫಕ್ಕೆ ಲೋಪವುಂಟು.

ಪರಪದದ ಮೊದಲ ಪಕಾರಕ್ಕೆ ವಕಾರ : ಚಂದ್ರ+ಪುರಂ=ಚಂದವುರಂ.
" " ಬ " " : ದಿಶಾ+ಬಲಿ=ದೆಸೆವಲಿ

"   "   ಮ "   "   : ರತ್ನ+ಮಣಿ=ರನ್ನವಣಿ
" ಪಕಾರದ ಊಕಾರಕ್ಕೆ ಹ್ರಸ್ವ   : ಕರ್ಣ+ಪೂರಂ=ಕನ್ನವುರಂ.
ಅಂತರ್ ಶಬ್ದದ ಅಂತ್ಯ ರೇಫ ಲೋಪಕ್ಕೆ : ಅಂತರ್+ಪುರಂ(ಅಂತಃಪುರ)=ಅಂತವುರಂ.

೩೦೮

ಉದಯಿಪುದು ತೃತೀಯತೆ ಪೂ
ರ್ವದ ಸೂತ್ರವಿಧಾನದಿಂದೆ ಕತಪಕ್ಕೆ ತಗು
ಳ್ವುದು ದೀರ್ಘಂ ಪೂರ್ವಪದಾಂ
ತ್ಯದೊಳುತ್ತರಪದದ ಮೊದಲೊಳೊದವಿರೆ ಲೋಪಂ

ಪೂರ್ವೋಕ್ತ ಸೂತ್ರ ನಿಯಮದಂತೆ (ಪರದ) ಕತಪಕಾರಗಳಿಗೆ ತೃತೀಯಾಕ್ಷರಗಳುಂಟಾಗುತ್ತವೆ. ಉತ್ತರಪದದ ಮೊದಲಲ್ಲಿ ಲೋಪವುಂಟಾದರೆ ಪೂರ್ವಪದಾಂತ್ಯದಲ್ಲಿ ದೀರ್ಘವುಂಟಾಗುತ್ತದೆ.

ಪರದ ಕಕಾರಕ್ಕೆ ತೃತೀಯಾಕ್ಷರ : ಮಾನುಷ್ಯಕಾವ್ಯಂ-ಮಾನಸಗಬ್ಬಂ.
"   ತಕಾರಕ್ಕೆ   "   : ಮಾಲಾತೋರಣಂ-ಮಾಲೆದೋರಣಂ*
ಉತ್ತರಪದಾದಿಗೆ ಲೋಪ ಮತ್ತು ಪೂರ್ವಪದಾಂತ್ಯಕ್ಕೆ ದೀರ್ಘ :
ಕಾಂಸ್ಯತಾಳಂ-ಕಂಸಾಳಂ.

೩೦೯

ಪರಪದದಾದಿಗೆ ಲೋಪಂ
ದೊರೆಕೊಳ್ಗುಂ ಕೆಲವಱಲ್ಲಿ ಪೂರ್ವಪದಾಂತ್ಯ
ಕ್ಕಿರದಕ್ಕುಂ ಲೋಪಂ ವ್ಯವ
ಹರಿಪ ಸಮಾಸಂಗಳಲ್ಲಿ ಕೆಲಕೆಲವೆಡೆಯೊಳ್

ಕೆಲವು (ಸಮಾಸ)ಗಳಲ್ಲಿ ಉತ್ತರಪದದ ಆದಿಗೆ ಲೋಪವುಂಟಾಗುತ್ತದೆ. ಇನ್ನು ಕೆಲವು ಸಮಾಸಗಳಲ್ಲಿ ಪೂರ್ವಪದಾಂತ್ಯಕ್ಕೆ ಲೋಪವುಂಟಾಗುತ್ತದೆ.

ಉತ್ತರಪದಾದಿ ಲೋಪಕ್ಕೆ   : ಚರ್ಮ+ಪಟ್ಟಿಕೆ=ಚಮ್ಮಟಿಗೆ.
ಪೂರ್ವಪದಾಂತ್ಯ ಲೋಪಕ್ಕೆ : ದೇವ+ಕುಲಂ=ದೇಗುಲಂ

೩೧೦

ಆವಗಮಾಕಾರಾಗಾ
ರಾವಳಿಕೆಗಳಿವು ಸಮಾಸದುತ್ತರಪದನಾ
ಗಾವರಿಸಿರ್ಕುಂ ಲೋಪಂ
ಭಾವಿಪೊಡೆರಡನೆಯ ವರ್ಣದೊಳಮಾದಿಯೊಳಂ

ಆಕಾರ, ಆಗಾರ, ಆವಳಿಕೆ(ಶಬ್ದ)ಗಳು ಸಮಾಸದ ಉತ್ತರಪದವನ್ನಾಶ್ರಯಿಸುತ್ತವೆ. (ಅವುಗಳ) ಎರಡನೆಯ ಅಕ್ಷರದಲ್ಲಿಯೂ ಮೊದಲನೆಯ ಅಕ್ಷರದಲ್ಲಿಯೂ ಲೋಪವುಂಟಾಗುತ್ತದೆ.

ಆಕಾರಕ್ಕೆ : ಚಿತ್ರಾಕಾರಂ(ಚಿತ್ರ+ಆಕಾರಂ)-ಚಿತ್ತಾರಂ
ಆಗಾರಕ್ಕೆ : ದೇವಾಗಾರಂ(ದೇವ+ಆಗಾರಂ)-ದೇವಾರಂ.

ಆವಳಿಕೆಗೆ : ದೀಪಾವಳಿಕೆ (ದೀಪ+ಆವಳಿಕೆ)-ದೀಪಾಳಿಗೆ.
ಉತ್ತರಪದದ ಮೊದಲನೆಯ ಅಕ್ಷರದ ಲೋಪಕ್ಕೆ : ದೀವಳಿಗೆ.

೩೧೧

ದರ ದಾರ ಬಾರಮಕ್ಕುಂ
ಪರದಾ ದ್ವಾರಕ್ಕೆ ಪೂರ್ವದೊಳ್ ತದ್ಭವಮಾ
ಗಿರೆ ಸಿರಿಯ ವಂಕ ಪಾಣಿಯ
ಮಿರೆ ಕಂಟಿಯಮುಚಿತವಿಧಿ ವಿಕಲ್ಪವಿಧಾನಂ

ಪೂರ್ವಸ್ಥಾನದಲ್ಲಿ ತದ್ಭವದಿಂದ (ಶ್ರೀ>)ಸಿರಿಯ, (ವಕ್ರಂ>) ವಂಕ, (ಪಾನೀಯಂ>) ಪಾಣಿಯ ಶಬ್ದಗಳಿದ್ದರೆ ಪರದ ದ್ವಾರ (ಶಬ್ದ)ಕ್ಕೆ ದರ, ದಾರ, ಬಾರ ರೂಪಗಳುಂಟಾಗುತ್ತವೆ. (ಕಂಟಕ>) ಕಂಟಿಯ ಶಬ್ದವಿದ್ದರೆ ಔಚಿತ್ಯದ ವಿಕಲ್ಪತೆಯುಂಟು.

ಪೂರ್ವದ ಸಿರಿಯಕ್ಕೆ : ಶ್ರೀ+ದ್ವಾರಂ>ಸಿರಿಯದರಂ, ಸಿರಿಯದಾರಂ, ಸಿರಿಯಬಾರಂ.
" ವಂಕಕ್ಕೆ : ವಕ್ರ+ದ್ವಾರಂ>ವಂಕದರಂ, ವಂಕದಾರಂ, ವಂಕಬಾರಂ.
" ಪಾನೀಯಕ್ಕೆ : ಪಾನೀಯ+ದ್ವಾರಂ>ಪಾಣಿಯದರಂ,ಪಾಣಿಯದಾರಂ, ಪಾಣಿಯಬಾರಂ.
" ಕಂಟಿಯಕ್ಕೆ : ಕಂಟಕ+ದ್ವಾರಂ>ಕಂಟಿಯಬಾರಂ.

೩೧೨-೩೧೩

ಮಣಿ ಮಂಚಂ ಪಟ್ಟಂ ತೋ
ರಣಮಟ್ಟಂ ಗೋಣಿ ಸಬಳಮಂಕಂ ಲತೆ ಕಂ
ಕಣಮೆಸೆವ ಕೋಂಟೆ ಬಲವಂ
ಗಣಂ ಬಿಲಂ ಬಂದಿ ಮಾಲೆ ಗಾಳಂ ಗಂಡಂ

ಗಲ್ಲಂ ಮಲ್ಲಂ ತಳಮಿಂ
ತೆಲ್ಲಂ ತತ್ಸಮಮುಮಿವಱುದಾಹರಣೆಗಳಂ
ಸೊಲ್ಲಿಸುವೆನೆರಡು ಮೆಯ್ಗಂ
ಬಲ್ಲರ್ಗಳ್ ಮೆಚ್ಚುತಿರೆ ಸಮಾಸೋಕ್ತಿಗಳಿಂ

ಮಣಿ, ಮಂಚಂ, ಪಟ್ಟಂ, ತೋರಣಂ, ಅಟ್ಟಂ, ಗೋಣಿ, ಸಬಳಂ, ಅಂಕಂ, ಲತೆ, ಕಂಕಣಂ, ಕೋಂಟೆ, ಬಲಂ, ಅಂಗಣಂ, ಬಿಲಂ, ಬಂದಿ, ಮಾಲೆ, ಗಾಳಂ, ಗಂಡಂ, ಗಲ್ಲಂ, ಮಲ್ಲಂ, ತಳ-ಇವೆಲ್ಲ ತತ್ಸಮ(=ಸಂಸ್ಕೃತಕ್ಕೂ ಕನ್ನಡಕ್ಕೂ ಸರಿ) ಪದಗಳು. ಇವುಗಳ ಉದಾಹರಣೆಗಳನ್ನು ಬಲ್ಲವರು ಮೆಚ್ಚುವಂತೆ ಸಮಾಸೋಕ್ತಿಯಿಂದ ಎರಡರಲ್ಲಿ (=ಸಂಸ್ಕೃತ ಮತ್ತು ಕನ್ನಡದಲ್ಲಿ)ಯೂ ಹೇಳುತ್ತೇವೆ.

ಮಣಿಗೆ ; ಮುಕುಟಮಣಿ (ಸಂ), ಉಡೆವಣಿ (ಕ)
ಮಂಚಕ್ಕೆ : ರತ್ನಮಂಚಂ (ಸಂ), ತೂಗುಮಂಚಂ (ಕ)

ಪಟ್ಟಕ್ಕೆ	:	ಪಟ್ಟಮಹಿಷಿ (ಸಂ),	ಪಟ್ಟಗದ್ದಿಗೆ (ಕ)
ತೋರಣಕ್ಕೆ	:	ಮಕರತೋರಣಂ(ಸಂ).	ತಳಿರ್ದೋರಣಂ (ಕ)
ಅಟ್ಟಕ್ಕೆ	:	ಅಟ್ಟಹಾಸಂ (ಸಂ),	ಅಟ್ಟವಗಲ್(ಕ)
ಗೋಣಿಗೆ	:	ಗೋಣಿಕಾಪುತ್ರಂ (ಸಂ),	ಕಿಱುಗೋಣಿ (ಕ)
ಸಬಳಕ್ಕೆ	:	ಸಬಳತ್ರಿನೇತ್ರಂ (ಸಂ),	ಸಬಳದೆಱೆ (ಕ)
ಅಂಕಕ್ಕೆ	:	ಮೃಗಾಂಕಂ (ಸಂ),	ಕಟ್ಟಂಕಂ (ಕ)
ಲತೆಗೆ	:	ವನಲತೆ (ಸಂ),	ಎಳಲತೆ (ಕ)
ಕಂಕಣಕ್ಕೆ	:	ಹಸ್ತಕಂಕಣಂ (ಸಂ)	ಗುಬ್ಬಿಗಂಕಣಂ (ಕ)
ಕೋಂಟೆಗೆ	:	ಧೂಳಿಕೋಂಟೆ (ಸಂ),	ಹತ್ತುಗೋಂಟೆ (ಕಂ)
ಬಲಕ್ಕೆ	:	ಭೂಬಲಂ (ಸಂ),	ನೆಲವಲಂ (ಕ)
ಅಂಗಣಕ್ಕೆ	:	ಅಂಗಣವಲಯಂ (ಸಂ),	ಅಂಗಣವಾವಿ (ಕ)
ಬಿಲಕ್ಕೆ	:	ಬಿಲದ್ವಾರಂ (ಸಂ)	ಪೆರ್ಬಿಲಂ(ಕ)
ಬಂದಿಗೆ	;	ಬಂದಿಗ್ರಹಣಂ (ಸಂ),	ಬಲ್ವಂದಿಕಾಱಂ (ಕ)
ಮಾಲೆಗೆ	:	ವನಮಾಲೆ(ಸಂ),	ಪೂಮಾಲೆ (ಕ)
ಗಾಳಕ್ಕೆ	:	ಗಳಗಾಳಂ (ಸಂ)	ಸಣ್ಣಗಾಳಂ (ಕ)
ಗಂಡಕ್ಕೆ	:	ಗಂಡಗರ್ವಂ (ಸಂ),	ಗಂಡಗಲಿ (ಕ)
ಗಲ್ಲಕ್ಕೆ	:	ಗಲ್ಲಸ್ಥಳಂ (ಸಂ)	ತೆಳ್ಗಲ್ಲಂ (ಕ)
ಮಲ್ಲಕ್ಕೆ	:	ಮಲ್ಲಮುರಾಂತಕಂ(ಸಂ),	ಮಲ್ಲಗಾಳಗಂ(ಕ)
ತಳಕ್ಕೆ	:	ಕರತಳಂ (ಸಂ),	ಕೆಂದಳಂ (ಕ)

೩೧೪

ಸಕ್ಕದಮಂ ಮಱೆಗೊಳ್ಳದೆ
ಚೊಕ್ಕಳಿಕೆಯಿನಚ್ಚಗನ್ನಡಂ ಬೇಟ್ಪರ ಕೈ
ವೊಕ್ಕ ನಿಧಿಯೆನಿಪಪಭ್ರಂ
ಶಕ್ಕಂ ದೇಶೀಯಪದಕಮುಂಟು ಸಮಾಸಂ

ಸಂಸ್ಕೃತವನ್ನು ಆಶ್ರಯಿಸದೆ, ಚೊಕ್ಕಟವಾಗಿ ಅಚ್ಚಗನ್ನಡವನ್ನು ಬಯಸುವವರ ಕೈಗೆ ಬಂದ ನಿಧಿ ಎನಿಸುವ ಅಪಭ್ರಂಶಕ್ಕೂ ದೇಶೀಯ ಪದಕ್ಕೂ ಸಮಾಸವುಂಟು.

ಅಪಭ್ರಂಶಕ್ಕೂ ದೇಶೀಯ ಪದಕ್ಕೂ ಸಮಾಸ : ಶಯ್ಯಾ>ಸೆಜ್ಜೆ+ಮನೆ=ಸೆಜ್ಜೆವನೆ.

ಅಪಭ್ರಂಶ ಸಮಾಸಕ್ಕೂ ದೇಶೀಯ ಪದಕ್ಕೂ ಸಮಾಸ :

ಸ್ಥಾನ+ದೀಪಿಕಾ>ತಾಣದೀವಿಗೆ+ಬೆಳಗು=ತಾಣದೀವಿಗೆವೆಳಗು.

ತತ್ಸಮ ಸಮಾಸಕ್ಕೂ ದೇಶೀಯ ಪದಕ್ಕೂ ಸಮಾಸ :

ಸಬಳ+ಗದ್ಯಾಣ>ಸಬಳಗದ್ಯಾಣ+ತೆಱೆ=ಸಬಳಗದ್ಯಾಣದೆಱೆ.

❖❖

ಅವ್ಯಯ ಪ್ರಕರಣ

೩೧೫

ಅನುಕೃತಿಪದವೊದವೆಯುಮದು
ವನೆಯೆಂಬೆರಡುಂ ಪದಾಂತ್ಯದೊಳ್ ಬರೆಯುಂ ನೆ
ಟ್ಟನೆ ತಾವವ್ಯಯಮಪ್ಪುವ
ವನೆಯ ನಕಾರಂ ವಿಕಲ್ಪದಿಂದೆ ಗಕಾರಂ

ಅನುಕರಣಪದಗಳೂ ಅದು, ಅನೆ, ಅಂತ್ಯದಲ್ಲಿರುವ ಪದಗಳೂ ಅವ್ಯಯವೆನಿಸುತ್ತವೆ. ಅನೆ ಎಂಬುದರ ನಕಾರ ವಿಕಲ್ಪದಿಂದ ಗಕಾರವಾಗುತ್ತದೆ.

ಅನುಕರಣದ ಪದ : ಧಿಗಿಲನೆ, ಭುಗಿಲನೆ.
ಅದುಗೆ : ನೂಂಕದು, ತೆತ್ತದು.
ಆನೆಗೆ : ಕಮ್ಮನೆ, ಮೆಲ್ಲನೆ
ಆನೆಯ ನಕಾರಕ್ಕೆ ವಿಕಲ್ಪ ಗಕಾರ : ನೆಟ್ಟನೆ-ನೆಟ್ಟಗೆ.

೩೧೬

ಸೊಲ್ಲೊಳ್ ಕ್ರಿಯಾತ್ಮಕಾವ್ಯಯ
ಮಿಲ್ಲೆಂಬುದು ಕೀಱಿದೆಂಬುದಾಕೀರ್ಣಾರ್ಥಂ
ಬಲ್ಲರ್ಗೆ ನಿರ್ನಿಮಿತ್ತಾ
ರ್ಥೋಲ್ಲಸಿತಂ ನಿರ್ನೆರೆಂಬುದುಂ ನಿರ್ನೆರಮುಂ

ಇಲ್ಲ ಎಂಬುದು ಕ್ರಿಯಾಸ್ವರೂಪದ ಅವ್ಯಯ, ಕೀಱಿದು ಎಂಬುದು ದಟ್ಟವಾಗಿ ಎಂಬ ಅರ್ಥವುಳ್ಳುದು, ನಿರ್ನೆರ್ ಎಂಬುದೂ ನಿರ್ನೆರಂ ಎಂಬುದೂ ಅಕಾರಣವಾಗಿ ಎಂಬ ಅರ್ಥವುಳ್ಳುವು.

೩೧೭

ನೆಗೞ್ಗುಂ ಮೌನಾರ್ಥಂ ಸು
ಮ್ಮಗೆ ಸುಮ್ಮನೆಯುಸಿಕನೆಂದು ನುಡಿವವ್ಯಯದೊಳ್
ಪುಗುಗುಂ ಗುಜುಗುಮ್ಮಗೆ ಬಿ
ನ್ನಗೆ ಬಿನ್ನನೆಯೆನಲೊಡಂ ಕ್ರಿಯಾಶೂನ್ಯಾರ್ಥಂ

ಸುಮ್ಮಗೆ, ಸುಮ್ಮನೆ, ಉಸಿಕನೆ ಎಂದು ಹೇಳುವ ಅವ್ಯಯಗಳಲ್ಲಿ ಮೌನದ ಅರ್ಥವುಂಟು. ಗುಜುಗುಮ್ಮಗೆ, ಬಿನ್ನಗೆ, ಬಿನ್ನನೆ ಎಂಬೆಡೆಗಳಲ್ಲಿ ಕ್ರಿಯಾಶೂನ್ಯದ ಅರ್ಥವುಂಟು.

೩೧೮

ಆನುಮೆನಿಪ್ಪವ್ಯಯಮಂ
ಸ್ಥಾನದಿಶಾಕಾಲಸಂಖ್ಯೆಗಳೊಳುಸಿರ್ವರ್ ಮ
ತ್ತೇನುಮೆನಿಪ್ಪರ್ಥಮನಿರ
ದಾನಿಪರಣಮಾಣಮೆಂದು ನುಡಿವವ್ಯಯದೊಳ್

ಸ್ಥಾನ, ದೆಸೆ, ಕಾಲ, ಸಂಖ್ಯೆಗಳಲ್ಲಿ ಆನು ಎಂಬ ಅವ್ಯಯವನ್ನು ಹೇಳುತ್ತಾರೆ. ಅಣಂ ಆಣಂ ಎಂಬ ಅವ್ಯಯಗಳಲ್ಲಿ ಏನುಂ ಎಂಬ ಅರ್ಥವನ್ನು ಆರೋಪಿಸುತ್ತಾರೆ.

ಸ್ಥಾನಕ್ಕೆ : ಎಲ್ಲಿಯಾನುಂ.
ದೆಸೆಗೆ : ಎತ್ತಾನುಂ.
ಕಾಲಕ್ಕೆ : ಎಂದಾನುಂ.
ಸಂಖ್ಯೆಗೆ : ಒಂದಾನುಂ, ಎರಡಾನುಂ, ಪತ್ತಾನುಂ, ನೂಱಾನುಂ.
ಅಣಕ್ಕೆ : ಕಾರ್ಯಮಣಮಿಲ್ಲ.
ಆಣಕ್ಕೆ ; ಗುಣಮಾಣಮಿಲ್ಲ.

೩೧೯

ನಾಡೆಯೆಡೆಯಾವಗಂ ನೆಱೆ
ನೀಡುಂ ಕರಮಾದಮೆಯ್ದೆ ನೂಳದು ಪಿರಿದುಂ
ನೀಡು ಮಿಗೆ ಕೆನ್ನಮೆಲ್ಲಂ
ರೂಢಿಯನುಳ್ಳುದುಮಿವವ್ಯಯದೊಳಧಿಕಾರ್ಥಂ

ನಾಡೆ, ಎಡೆ, ಆವಗಂ, ನೆಱೆ, ನೀಡುಂ, ಕರಂ, ಆದಂ, ಎಯ್ದೆ, ನೂಳದು, ಪಿರಿದುಂ, ನೀಡು, ಮಿಗೆ, ಕೆನ್ನಂ-ಈ ಎಲ್ಲ ಪ್ರಸಿದ್ಧ ಅವ್ಯಯಗಳು ಆಧಿಕ್ಯದ ಅರ್ಥವನ್ನೊಳಗೊಂಡಿವೆ.

೩೨೦

ಭೋಂಕನೆ ಚೆಕ್ಕನೆ ಭೋರನೆ
ಭೋಂಕಲ್ ಚಡುಪುಡನೆ ಗಿಱ್ಱತಿಱ್ಱನೆಯುಂ ಮ
ತ್ತಂ ಕಡು ಚೆಚ್ಚರ ಬೆಚ್ಚರ
ಮುಂ ಕೂಡಿರೆ ತಮ್ಮೊಳೊದವುಗುಂ ಶೀಘ್ರಾರ್ಥಂ

ಭೋಂಕನೆ, ಚೆಕ್ಕನೆ, ಭೋರನೆ, ಭೋಂಕಲ್, ಚಡುಪುಡನೆ, ಗಿಱತಿಱನೆ, ಚೆಚ್ಚರ, ಬೆಚ್ಚರಂ ಇವು ಶೀಘ್ರತೆಯ ಅರ್ಥದ ಅವ್ಯಯಗಳು.

೩೨೧

ಏಗಂ ವಲಂ ವೆಱಂ ದಲ್
ತಾಗುಗುಮತಿನಿಶ್ಚಯಾರ್ಥಮಂ ತಾನಿತರಾ
ರ್ಥಾಗತಮದು ಮತ್ತಿನ ನುಡಿ
ಯೇಗೆಯ್ದುಂ ಬೇಱೆವೇಱೆಯೆನೆ ಪೃಥಗರ್ಥಂ

ಏಗಂ, ವಲಂ, ವೇಱಂ, ದಲ್-ಇವು ಅತ್ಯಂತ ನಿಶ್ಚಯತೆಯ ಅರ್ಥವನ್ನು ಪಡೆದಿವೆ. ಮತ್ತಿನ ಎಂಬ ಶಬ್ದ ಇತರ ಎಂಬ ಅರ್ಥವುಳ್ಳುದು. ಬೇಱಿವೇಱಿಂದರೆ ವಿಂಗಡವೆಂದು ಅರ್ಥ.

೩೨೨

ಅನುತಿಟ್ಟನೆ ತಿಱನೆ ಬ
ಟ್ಟನೆಯೆಂಬಿವಱೊಳ್ ಭ್ರಮಾರ್ಥಮೊಯ್ಯನೆಯೆನೆ ನೆ
ಟ್ಟನೆಯೆನೆ ನೆಟ್ಟಗೆಯೆನೆ ಬಂ
ದು ನಿಲ್ಕುಮಿವಱೊಳ್ ಪರಿಸ್ಫುಟಾರ್ಥವಿಧಾನಂ

ಅನುತಿಟ್ಟನೆ, ತಿಱ್ಱನೆ, ಬಟ್ಟನೆ ಎಂಬಿವುಗಳಲ್ಲಿ ಭ್ರಮಣಾರ್ಥವಿದೆ. ಒಯ್ಯನೆ, ನೆಟ್ಟನೆ, ನೆಟ್ಟಗೆ ಎಂಬಿವುಗಳಲ್ಲಿ ಪರಿಸ್ಫುಟಾರ್ಥ ನೆಲಸಿದೆ.

೩೨೩

ವೇದನೆಯೊಳಹಹ ಎಂಬುದು,
ಖೇದದೊಳಚ್ಚರಿಯೊಳಕ್ಕಟಾ ಎಂಬುದು, ತತ್
ಖೇದವಿಡಂಬನಕರುಣಾ
ನಾದದೊಳಯ್ಯೋ ಎನಿಪ್ಪುದವತರಿಸಿರ್ಕುಂ

ವೇದನೆಯಲ್ಲಿ ಅಹಹ ಎಂಬುದು, ಖೇದದಲ್ಲಿ ಮತ್ತು ಆಶ್ಚರ್ಯದಲ್ಲಿ ಅಕ್ಕಟಾ ಎಂಬುದು, ಖೇದ ವಿಡಂಬನ ಕರುಣೆಗಳಲ್ಲಿ ಅಯ್ಯೋ ಎಂಬುದು ಅವತರಿಸುತ್ತವೆ.

೩೨೪

ಸವನಿಪುದೋಹೋಹೋ ಎನೆ
ನಿವಾರಣಾರ್ಥಂ, ಸಹಾರ್ಥಮೊಡನೆನೆ, ಹಸನ
ವ್ಯವಹೃತಿ ಗಹಗಹ ಎನೆ ಪಿರಿ
ದುವೆಂಬಭಿಪ್ರಾಯದಲ್ಲಿ ಸೋಡಂಬಾಡಂ

ಓಹೋ, ಹೋ ಎನ್ನಲು ನಿವಾರಣಾರ್ಥ ಪ್ರಾಪ್ತವಾಗುತ್ತದೆ. ಒಡನೆ ಎಂದರೆ ಸಹಾರ್ಥ; ಗಹಗಹ ಎಂದರೆ ನಗುವ ಕ್ರಿಯೆ; ಪಿರಿದು ಎಂಬ ಅರ್ಥದಲ್ಲಿ ಸೋಡಂ ಬಾಡಂ.

೩೨೫

ಪರಿವಿಡಿಯಿಂದಃ ಆಃ ಎಂ
ಬೆರಡುಂ ವಿಸ್ಮಯ ವಿಡಂಬನ, ವ್ಯಸನ ಸುಖ
ಸ್ಫುರಿತಾರ್ಥದೊಳುಃ ಎಂಬುದು
ಪಿರಿದುಮಸಹ್ಯಾರ್ಥದೊಳ್ ಪ್ರಯೋಗಿಸೆ ಪಡೆಗುಂ

ಅಃ ಆಃ ಎಂಬಿವು ಕ್ರಮವಾಗಿ ವಿಸ್ಮಯ ವಿಡಂಬನಗಳಲ್ಲಿ, ಉಃ ಎಂಬುದು ವ್ಯಸನ ಸುಖ ಅಸಹ್ಯಾರ್ಥಗಳಲ್ಲಿ ಬಳಕೆಯಾಗುತ್ತವೆ.

೩೨೬

ಸ್ಮರಣ ವಿಚಾರಾಮಂತ್ರಣ
ಪರಿಗತವೆನಿಸಿರ್ಪುವೆಲೆಲೆ ಏ ಎಂಬಿವು ಸಂ
ಚರಿಸುವುದನುಮತದೊಳ್ ಬ
ಲ್ಲರಿನೇಕಾರಮದೆಕಾರಮವಧಾರಣೆಯೊಳ್

ಎಲೆಲೆ, ಏ ಎಂಬಿವು ಸ್ಮರಣ, ವಿಚಾರ, ಸಂಬೋಧನಗಳಲ್ಲಿ ಹೊಂದಿಕೊಂಡಿರುತ್ತವೆ. ಬಲ್ಲವರ ಅಭಿಪ್ರಾಯದಂತೆ ಏಕಾರ, ಎಕಾರಗಳು ಅವಧಾರಣೆಯಲ್ಲಿ ವ್ಯವಹರಿಸುತ್ತವೆ.

೩೨೭

ಮತ್ತೆಂಬುದು ಪುನರರ್ಥದೊ
ಳೆತ್ತಾನುಮದೆಲ್ಲಿಯಾನುಮೆಂಬರ್ಥದೊಳಾ
ಯತ್ತಂಗಳರಮೆ ಅರೆಗಳ್
ಸುತ್ತೇಂ ತರಳಾರ್ಥದಲ್ಲಿ ಬೆಳ್ಪಳಮಕ್ಕುಂ

ಪುನಃ ಎಂಬರ್ಥದಲ್ಲಿ ಮತ್ತೆ ಎಂಬುದು, ಎತ್ತಾನುಂ ಎಲ್ಲಿಯಾನುಂ ಎಂಬ ಅರ್ಥದಲ್ಲಿ ಅರಮೆ, ಅರೆ ಎಂಬಿವು ಬರುತ್ತವೆ. ಬೆಳ್ಪಳಂ ಎಂಬುದು ಚಾಂಚಲ್ಯಾರ್ಥದಲ್ಲಿ ಪ್ರಯೋಗವಾಗುತ್ತದೆ.

೩೨೮

ಸಲೆಯೆಂಬುದು ನಿತ್ಯಾರ್ಥಾ
ವಲಂಬಿ ಹುಂಮೆನೆಯುಮಲ್ತೆಯಲ್ಲವೆ ಎನೆಯುಂ
ಫಲಿಯಿಸುಗುಂ ಪ್ರಶ್ನಾರ್ಥೋ
ಜ್ವಲಾನುಮಾನಾರ್ಥಯುಗಳಮವು ಶಾಬ್ದಿಕರಿಂ

ಸಲೆ ಎಂಬುದು ನಿತ್ಯಾರ್ಥದಲ್ಲಿ, ಹುಂ. ಅಲ್ತೆ, ಅಲ್ಲ[ವೆ] ಎಂಬಿವು ಪ್ರಶ್ನಾರ್ಥದಲ್ಲಿ ಮತ್ತು ಅನುಮಾನಾರ್ಥದಲ್ಲಿ ಬಳಕೆಯಾಗುತ್ತವೆ.

೩೨೯

ಅಮುಮೆಂಬಿವೆರಡುಮುಮರ್ಗುಂ
ಸಮುಚ್ಚಯಾರ್ಥದೊಳೆ ಏ ಒ ಓ ಎಂಬಿವು ಶ
ಬ್ದಮನಪ್ಪಿ ವಿಶಂಕಾಪ್ರ
ಶ್ನಮಂಡಲಾಕ್ಷೇಪಕಾರ್ಥದೊಳ್ ವರ್ತಿಸುಗುಂ

ಸಮುಚ್ಚಯಾರ್ಥದಲ್ಲಿ ಅಂ ಉಂ ಎಂಬಿವೆರಡು ಬಳಕೆಯಾಗುತ್ತವೆ. ವಿಶಂಕೆ, ಪ್ರಶ್ನೆ ಮತ್ತು ಆಕ್ಷೇಪಕ ಅರ್ಥಗಳಲ್ಲಿ ಎ ಏ ಒ ಓ ಎಂಬಿವು ಶಬ್ದಗಳನ್ನು ಹೊಂದಿಕೊಂಡು ವರ್ತಿಸುತ್ತವೆ.

೩೩೦

ಮೆಱೆಗುಂ ಸುಮ್ಮನೆ ಸುಮ್ಮಗೆ
ಬಱಿದಲ್ಲವಱೆಂಬ ಮಾತಕಾರಣದೊಳ್ ಪೊ
ಚ್ಚಱುಗುಂ ತೃತೀಯೆ ಬಂದಂ
ತಱಿನೆಂಬ ಪದಕ್ಕಮಾ ಎಕಾರಕ್ಕಿತರಂ

ಸುಮ್ಮನೆ, ಸುಮ್ಮಗೆ, ಬಱಿದೆ, ಅಲ್ಲವಜ್ ಎಂಬಿವು ಅಕಾರಣವಾಗಿ ಎಂಬರ್ಥದಲ್ಲಿ ಪ್ರಯೋಗವಾಗುತ್ತವೆ. ಅಂತಱಿಂ ಎಂಬ ಪದಕ್ಕೆ ಎಕಾರವನ್ನುಳಿದು ತೃತೀಯಾ ಪ್ರತ್ಯಯಗಳು (ಇಂ, ಇಂದಂ, ಇಂದೆ) ಬಂದು ಸೇರುತ್ತವೆ.

೩೩೧

ಬಟಿಕೆ ಬಟಿಕ್ಕಂ ಬಟಿಕಂ
ಬಟಿಕ್ಕೆ ಬಟಿಯಂ ಪ್ರಸಿದ್ಧ ಪಶ್ಚಾದರ್ಥಂ
ಘಟಿಯಿಪುದು ವಿಕಲ್ಪಾರ್ಥಂ
ಕಟಿಲದೆ ಮೇಣೆಂಬ ಶಬ್ದದೊಳ್ ಶಾಬ್ದಿಕರಿಂ

ಶಾಬ್ದಿಕರಿಂದ ಬಟಿಕೆ, ಬಟಿಕ್ಕಂ, ಬಟಿಕಂ, ಬಟಿಕ್ಕೆ, ಬಟಿಯಂ ಎಂಬಿವುಗಳಿಗೆ ಅನಂತರ ಎಂಬ ಅರ್ಥ ಘಟಿಸುತ್ತದೆ. ಮೇಣ್ ಎಂಬ ಶಬ್ದಕ್ಕೆ ವಿಕಲ್ಪಾರ್ಥ ತಪ್ಪದೆ ಬರುತ್ತದೆ.

೩೩೨

ಪೌವನೆಯಾಕಸ್ಮಿಕಭಯ
ಭಾವಿತವಂತಿಂತುಗಳ್ ಪದಾಪೂರಣದೊಳ್
ಕೋವುವು ಚಿಃ ಇಸ್ಸೀಗಳ್
ತಾವೊಗೆದು ಜುಗುಪ್ಸನಾರ್ಥದಳ್ ವರ್ತಿಸುಗುಂ

ಪೌವನೆ ಎಂಬುದು ಆಕಸ್ಮಿಕಭಾವ, ಭಯಭಾವಗಳಿಂದ ಕೂಡಿದೆ. ಅಂತು ಇಂತು ಎಂಬಿವು ಪಾದಪೂರ್ಣತೆಗಾಗಿ ಸೇರುವುವು. ಚಿಃ ಇಸ್ಸಿ ಎಂಬಿವು ತಿರಸ್ಕಾರಭಾವದಲ್ಲಿ ವರ್ತಿಸುವುವು.

೩೩೩

ಉಪಮಾನಾರ್ಥದೊಳಿವು ವ
ರ್ತಿಪುವಂತಿರೆಯಂತೆವೋಲ್ ವೋಲ್ಗಳ್ ರಂ
ಜಿಪುವು ಗಡ ಗಳ ಗಡಂಗಳು
ಮುಪಚಿತವಾರ್ತೆಯೊಳಮುಚಿತ ಸಂಭಾಷಣೆಯೊಳ್

ಅಂತಿರೆ, ಅಂತೆ, ಅಂತೆವೋಲ್, ವೋಲ್ ಎಂಬಿವು ಉಪಮಾನಾರ್ಥದಲ್ಲಿ ವರ್ತಿಸುತ್ತವೆ. ಗಡ, ಗಳ, ಗಡಂ ಎಂಬಿವು ಸಂಭಾಷಣೆಯಲ್ಲಿ ಉಪಚಾರಭಾವವನ್ನು ವ್ಯಕ್ತಪಡಿಸುವಾಗ ತೋರುತ್ತವೆ.

೩೩೪

ಮತ್ತೆಂಬರ್ಥದೊಳುಸಿರ್ವರ್
ಬಿತ್ತಗರಾ ಬಲ್ಲೆ ಬಱಿಗಳಂ ಕಾಲಾರ್ಥಂ
ಪತ್ತುವುದಂದಿಂದುಂದಂ
ದೆತ್ತಂ ನುಡಿವವ್ಯಯಂಗಳೊಳ್ ವಾಗ್ಮಿದರಿಂ

ಬಲ್ಲೆ, ಬಱಿ ಎಂಬ ಪದಗಳನ್ನು ಮತ್ತೆ ಎಂಬ ಅರ್ಥದಲ್ಲಿ ವಿದ್ವಾಂಸರು ಹೇಳುತ್ತಾರೆ. ಅಂದು, ಇಂದು, ಉಂದು, ಎಂದು - ಈ ಅವ್ಯಯಗಳಲ್ಲಿ ವಾಗ್ಮಿದರಿಂದ ಕಾಲಾರ್ಥವು ಹೊಂದಿಕೆಯಾಗುತ್ತದೆ.

೩೩೫

ಭ್ರಾಂತಿಯನುಱಿದಂತಿಂತುಂ
ತೆಂತೆಂಬಿವು ತಾಂ ಪ್ರಕಾರಕಾಲ್ಯಾರ್ಥಂಗಳ್
ಮುಂತೆ ಚತುರ್ಥೀ ಷಷ್ಠೀ
ಕಾಂತಂಗಳವೆಂದು ತಿಳಿಗೆ ಪೇಳ್ವವ್ಯಯಮಂ

ಅಂತು, ಇಂತು, ಉಂತು, ಎಂತು-ಇವು ನಿಸ್ಸಂದೇಹವಾಗಿ ಪ್ರಕಾರಕಾಲ್ಯಾರ್ಥಗಳು (=ಆ ಪ್ರಕಾರ, ಈ ಪ್ರಕಾರ ಎಂಬ ಅರ್ಥ ಹೇಳುವವು). ಇನ್ನು ಮುಂದೆ ಹೇಳುವ ಅವ್ಯಯಗಳು ಚತುರ್ಥೀ, ಷಷ್ಠಿಯುತಗಳೆಂದು ತಿಳಿಯಬೇಕು.

೩೩೬-೩೩೭

ತಳೆಗುಂ ಕಾಲಾರ್ಥಮನಾ
ಗಳೀಗಳೆಂಬಾಗಡೀಗಡೆಂಬಿವು ಬಿಂದೂ
ಜ್ವಳಮುಮಿವುದಯಮನುಸಿರ್ವುವು
ತಿಳಿ ಸವಳದೆ ಪೊಟ್ಟಿಡೆನೆ ಸವಳ್ತಡೆಯೆನೆಯುಂ

ಸವಸಂದ ಕಾಲವಾಚಕ
ಮಿವು ನಾಡಿದು ನಾಳೆ ನಿನ್ನೆ ಮೊನ್ನೆಗಳಾದಂ
ಬವರಿಪುವೀವಱು ಮೊನೆಯೇ
ಡಿವು ಕಿಂಚಿದ್ಭೂತ ಭೂತಕಾಲದ್ವಯದೊಳ್

ಆಗಳ್ ಈಗಳ್ ಎಂಬ, ಆಗಡು ಈಗಡು ಎಂಬ - ಇವು ಬಿಂದು ಸಹಿತವಾಗಿಯೂ ಕಾಲಾರ್ಥದಲ್ಲಿ ಪ್ರಯೋಗವಾಗುತ್ತವೆ. ಸವಳದೆ, ಪೊಟ್ಟಿಡೆ, ಸವಳ್ತಡೆ-ಇವು ಉದಯಕಾಲದ ಅರ್ಥವನ್ನು ಹೇಳುತ್ತವೆ. ನಾಡಿದು, ನಾಳೆ, ನಿನ್ನೆ, ಮೊನ್ನೆ- ಇವು ಕಾಲವಾಚಕ ಅವ್ಯಯಗಳು. ಕಿಂಚಿದ್ಭೂತಕಾಲ ಮತ್ತು ಭೂತಕಾಲ ಇವುಗಳಲ್ಲಿ (ಕ್ರಮವಾಗಿ) ಈವಱು, ಮೊನೆಯೇಡು ಎಂಬ ಶಬ್ದಗಳು ಬಳಕೆಯಾಗುತ್ತವೆ.

ಇವುಗಳ ಚತುರ್ಥೀ ಮತ್ತು ಷಷ್ಠೀ ರೂಪಗಳು :
ಆಗಳಿಂಗೆ, ಈಗಳಿಂಗೆ, ಆಗಂಡಿಗೆ, ಈಗಡಿಂಗೆ, ಸವಳ್ತಡಿಂಗೆ, ಪೊಟ್ಟಿಡಿನ.
ಆಗಳಿನ, ಈಗಳಿನ, ಆಗಡಿನ, ಈಗಡಿನ, ಸವಳ್ತಡಿನ, ಪೊಟ್ಟಿಡಿನ.

ನಾಳಿಂಗೆ, ನಾಡಿದಿಂಗೆ, ನಿನ್ನಿಂಗೆ, ಮೊನ್ನಿಂಗೆ, ಈವಜಿಂಗೆ, ಮೊನೆಯೇಡಿಂಗೆ.

ನಾಳಿನ, ನಾಡಿದಿನ, ನಿನ್ನಿನ, ಮೊನ್ನಿನ, ಈವಜಿನ, ಮೊನೆಯೇಡಿನ.

***

ಸಮಾಪ್ತಿ ವಾಕ್ಯಗಳು

೩೩೮

ನಡೆದುದೆ ಮಾರ್ಗಂ ಪದವಿಡ
ಲೊಡರಿಸಿದುದೆ ಭಂಗಿ ಕೇಶವಂಗಿದಿರುಂಟೇ
ತೊಡಗಿದ ಕೃತಿಗಳೊಳಾನೆಯ
ನಡು ಬಡವೇ ತಾನೆ ಲೋಕದೊಳ್ ಲಾಕ್ಷಣಿಕಂ

ನಡೆದುದೇ ಮಾರ್ಗ, ಪದವಿಡತೊಡಗಿದುದೇ ರೀತಿ, ತೊಡಗಿದ ಕೃತಿಗಳಲ್ಲಿ ಕೇಶಿರಾಜರಿಗೆ ಇದಿರುಂಟೆ? ಆನೆಯ ನಡು ಬಡವೇ? ಲೋಕದಲ್ಲಿ ತಾನೊಬ್ಬನೇ ಲಾಕ್ಷಣಿಕ.

೩೩೯

ದೊರೆವಡೆದ ಚೋೞಪಾಲಕ
ಚರಿತಂ ಶ್ರೀಚಿತ್ರಮಾಲೆಯಂತೆ ಸುಭದ್ರಾ
ಹರಣಂ ಪ್ರಬೋಧಚಂದ್ರಂ
ಕಿರಾತಮಿವು ಕೇಶಿರಾಜಕವಿ ರಚಿತಂಗಳ್

ಪ್ರಸಿದ್ಧವಾದ ಚೋೞಪಾಲಕ ಚರಿತಂ, ಶ್ರೀಚಿತ್ರಮಾಲೆ, ಸುಭದ್ರಾಹರಣಂ, ಪ್ರಬೋಧ ಚಂದ್ರಂ, ಕಿರಾತಂ-ಇವು ಕೇಶಿರಾಜಕವಿಯಿಂದ ರಚಿತವಾದುವು.

೩೪೦

ಸಿರಿಗೀಕ್ಷಿಪ ರಸಚಿತ್ರಂ
ಸರಸತಿಗೆರಡನೆಯ ಬೀಣೆಯೆನೆ ಸೌಭಾಗ್ಯಂ
ಕರಮಾದುದೆಂದು ಬುಧರಾ
ದರಿಪರ್ ಮೆಚ್ಚೆಂದೆ ಶಬ್ದಮಣಿದರ್ಪಣಮಂ

ಲಕ್ಷ್ಮಿಗೆ ಅವಲೋಕನಯೋಗ್ಯವಾದ ರಸಚಿತ್ರ, ಸರಸ್ವತಿಗೆ ಎರಡೆಯ ವೀಣೆ ಎನ್ನುವಂತೆ (ಈ ಕೃತಿಯ) ಸೌಂದರ್ಯ ಮಿಗಿಲಾದುದು- ಎಂದು ವಿದ್ವಾಂಸರು ಶಬ್ದಮಣಿದರ್ಪಣವನ್ನು ಮೆಚ್ಚುಗೆಯದೆಂದೇ ಆದರಿಸುತ್ತಾರೆ.

೩೪೧

ಆರ್ಯನ ಯಾದವಕಟಕಾ
ಚಾರ್ಯನ ಕೇಶವನ ಶಬ್ದಮಣಿದರ್ಪಣಮಂ
ಸೂರ್ಯೇಂದು ಮೇರುವಾರಿಧಿ
ಪರ್ಯಂತ ಪರೆದು ನಿಲ್ಕನಾಕುಳದಿಂದಂ

ಮಾನ್ಯನಾದ, ಯಾದವಕಟಕಾಚಾರ್ಯನಾದ ಕೇಶಿರಾಜನ ಶಬ್ದಮಣಿದರ್ಪಣ "ಸೂರ್ಯೇಂದು ಮೇರುವಾರಿಧಿಪರ್ಯಂತ" ನಿರ್ವಿಘ್ನವಾಗಿ ವ್ಯಾಪಿಸಿ ನಿಲ್ಲಲಿ.

೩೪೨

ಗಮಕಸಮಾಸದಿಂ ಱಟಕುಳಕ್ಷಳದಿಂ ಶ್ರುತಿಸಹ್ಯಸಂಧಿಯಿಂ
ಸಮುಚಿತಮಾಗಿ ಬರ್ಪ ಸತಿಸಪ್ತಮಿಯಿಂ ಸಮಸಂಸ್ಕೃತೋಕ್ತಿಯಿಂ
ವಮಹಪಭೇದದಿಂ ವಿರಹಿತಾವ್ಯಯಸಂಸ್ಕೃತಲಿಂಗದಿಂ ಪದೋ
ತ್ತಮಶಿಥಿಲತ್ವದಿಂ ಯತಿವಿಲಂಘನದಿಂದರಿದಲ್ತೆ ಕನ್ನಡಂ

ಗಮಕಸಮಾಸ. ಱಟ ಕುಳ ಕ್ಷಳ, ಶ್ರುತಿಸಹ್ಯಸಂಧಿ, ಸತಿಸಪ್ತಮಿ, ಸಮಸಂಸ್ಕೃತ, ವಮ-ಹಪ ಭೇದ, ವಿರಹಿತಾವ್ಯಯಸಂಸ್ಕೃತಲಿಂಗ, ಶಿಥಿಲದ್ವಿತ್ವ, ಯತಿವಿಲಂಘನ - ಇವುಗಳಿಂದ ಕನ್ನಡ ಅಸಾಧಾರಣವೆನಿಸಿದೆಯಲ್ಲವೇ ?

❖❖

ಸೂತ್ರ ಪದ್ಯಗಳ ಅಕಾರಾದಿ

(ಮುಂದಿನ ಅಂಕಿ ಸೂತ್ರವನ್ನು ಸೂಚಿಸುತ್ತದೆ)

❖❖

ಸಿದ್ಧನಂಜೇಶ ಕೃತ

ತೋಂಟದ ಸಿದ್ಧೇಶ್ವರನ

ಭಾವರತ್ನಾಭರಣಸ್ತೋತ್ರ

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

ಪ್ರೊ. ಬಿ. ಆರ್. ಹಿರೇಮಠ

೧೯೭೪

ವೀರಶೈವ ಅಧ್ಯಯನಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ

ಡಂಬಳ–ಗದಗ

ವೀರಶೈವ ಷಟ್ಸ್ಥಲಜ್ಞಾನಪ್ರಭಾಪುಂಜರಂಜಿತರೂ

ವಚನಸಾಹಿತ್ಯದ ದ್ವಿತೀಯಘಟ್ಟದ ಅದ್ವಿತೀಯ ಅನುಭಾವಿಗಳೂ


ಶಿವಯೋಗಿಸಾರ್ವಭೌಮರೂ ಆದ

ಶ್ರೀಮದನಾದಿನಿರಂಜನಜಗದ್ಗುರು

ಶ್ರೀ ತೋಂಟದ ಸಿದ್ಧಲಿಂಗಶಿವಯೋಗಿಗಳವರ

ದಿವ್ಯ ಪಾದಾರವಿಂದಗಳಲ್ಲಿ

ಅರ್ಪಿತ



ಶ್ರೀಮದನಾದಿನಿರಂಜನಜಗದ್ಗುರು

ಶ್ರೀ ತೋಂಟದ ಸಿದ್ಧಲಿಂಗಶಿವಯೋಗಿಗಳು

*

ಪ್ರಸ್ತಾವನೆ

ಲಿಂಗಾಯತ ಕವಿಗಳಲ್ಲಿ ಚಿಕ್ಕನಂಜೇಶ ಅಥವಾ ಸಿದ್ಧನಂಜೇಶನದು ಎದ್ದುಕಾಣುವ ಹೆಸರು. ನೀಲಗುಂದದ ಅನ್ನದಾನೇಶ್ವರನ ಶಿಷ್ಯ ಕುರುವತ್ತಿಯ ನಂಜೇಶ; ಕುರುವತ್ತಿಯ ನಂಜೇಶನ ಶಿಷ್ಯ ಹೂಲಿಯ ಸಿದ್ಧನಂಜೇಶ; ಈತನ ಹೆಂಡತಿ ಚೆನ್ನವೀರಾಂಬೆ. ಈ ಹೂಲಿಯ ಸಿದ್ಧನಂಜೇಶನ ಹಿರಿಯ ಮಗ ನಂದೀಶ. ಕಿರಿಯ ಮಗ ಮತ್ತು ಶಿಷ್ಯ ಪ್ರಸ್ತುತ ಕವಿ ಚಿಕ್ಕನಂಜೇಶ ಅಥವಾ ಸಿದ್ಧನಂಜೇಶ.

ಹೂಲಿಯ ಸಿದ್ಧನಂಜೇಶನ ಶಿಷ್ಯನಾಗಿದ್ದ ಕಾಲದಲ್ಲಿ ಚಿಕ್ಕನಂಜೇಶನೆಂಬ ಹೆಸರೂ ನಂದ್ಯಾಲಪುರದ ಮಠಾಧಿಪತಿಯಾಗಿದ್ದ ಕಾಲದಲ್ಲಿ ಸಿದ್ಧನಂಜೇಶನೆಂಬ ಹೆಸರೂ ಈತನಿಗೆ ಇದ್ದುದಾಗಿ ತಿಳಿದುಬರುತ್ತದೆ. ಹೀಗಾಗಿ ಇವನು ಆಯುಷ್ಯದ ಪೂರ್ವಾರ್ಧವನ್ನು ಹೂಲಿಯಲ್ಲಿ, ಉತ್ತರಾರ್ಧವನ್ನು ಶ್ರೀಶೈಲದ ನೆರೆಯ ನಂದ್ಯಾಲಪುರದಲ್ಲಿ ಕಳೆದುದು ಸ್ಪಷ್ಟ.

* * *

ಕವಿಯು ತನ್ನ ಕಾಲದ ಬಗ್ಗೆ ಮೌನ ತಳೆದಿದ್ದಾನೆ. ಸುಮಾರು ೧೬೦೦ ರಲ್ಲಿದ್ದ ಸಂಪಾದನೆಯ ಸಿದ್ಧವೀರಾಚಾರ್ಯನ ಹೆಸರನ್ನು ರಾಘವಾಂಕಚಾರಿತ್ರದ ಅಂತ್ಯಭಾಗದಲ್ಲಿ ಹೇಳಿರುವುದರಿಂದ ಅವನ ಕಾಲಕ್ಕೂ ಈಚೆ ಅಂದರೆ ಸುಮಾರು ೧೬೫೦ರಲ್ಲಿ ಸಿದ್ಧನಂಜೇಶ ಜೀವಿಸಿರಬಹುದೆಂದು ಕವಿಚರಿತೆಕಾರರ ಮತ.[೧] ಈತ ವೀರಶೈವಾಮೃತಮಹಾಪುರಾಣದ (ಕ್ರಿ.ಶ. ೧೫೩೦) ಮಲ್ಲಣಾರ್ಯನನ್ನು ನೆನೆದರೆ, ಈತನನ್ನು ಕೊಟ್ಟೂರೇಶಪುರಾಣದ (ಕ್ರಿ.ಶ. ೧೬೭೯) ಬಸವಲಿಂಗನು ನೆನೆದಿರುವ ಕಾರಣ ಕವಿಯ ಕಾಲ ಕ್ರಿ. ಶ. ೧೫೩೦–೧೬೭೯ರ ಮಧ್ಯ ನಿಲ್ಲುತ್ತದೆ. ಅಂದರೆ ೧೬ನೆಯ ಶತಮಾನದ ಉತ್ತರಾರ್ಧವಾಗುತ್ತದೆಯೆಂದು ಪ್ರೊ. ಎಸ್. ಎಸ್. ಭೂಸನೂರಮಠರ ಅಭಿಪ್ರಾಯ.[೨]

ಈಗ ಲಭಿಸಿದ "ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ"ದಲ್ಲಿ (ತೋಂಟದ) ಸಿದ್ಧೇಶ್ವರಪುರಾಣದ ಕರ್ತೃ ಶಾಂತೇಶನ ಲಿಂಗೈಕ್ಯದ ವಿಷಯ (ಪದ್ಯ ೭೯) ಬರುವುದರಿಂದ ಸಿದ್ಧನಂಜೇಶನು ವೀರಶೈವಾಮೃತಮಹಾಪುರಾಣದ ರಚನೆಯ ಕಾಲವಾದ ಕ್ರಿ.ಶ. ೧೫೬೧ ರ ತರುವಾಯದವನೆಂದು ವೇದ್ಯವಾಗುತ್ತದೆ.

---

೧. ಕ. ಕ. ಚ. II, ಪುಟ–೩೮೧. ೨. ಗುರುರಾಜಚಾರಿತ್ರ : ಪ್ರಸ್ತಾವನೆ, ಪುಟ–೯.

ಶಾಂತೇಶನಿಗೆ ಲಿಂಗೈಕ್ಯವನ್ನು ಕರುಣಿಸಿದವರು ತೋಂಟದಾರ್ಯರೆಂದು ಇಲ್ಲಿ (ಪದ್ಯ-೭೯) ಹೇಳಿರುವ ಕಾರಣ ಈ ಕೃತಿಗೆ ವಸ್ತುವಾದ ತೋಂಟದಾರ್ಯರು ಕ್ರಿ. ಶ. ೧೫೬೧ರಲ್ಲಿ ಇನ್ನೂ ಜೀವಿಸಿದ್ದರೆಂದು ಸ್ಪಷ್ಟವಾಗುತ್ತದೆ. ಈ ತೋಂಟದಾರ್ಯರ ತರುವಾಯ ಪಟ್ಟಕ್ಕೆ ಬಂದ ಬೋಳಬಸವೇಶ್ವರನು ಐಕ್ಯವಾದ ವಿಷಯವನ್ನೂ ಹೇಳಿ ಹೋಳಿನ ದೊಡ್ಡಹಂಪಯ್ಯ, ಚಿಕ್ಕಹಂಪಯ್ಯರ ಚರಿತ್ರೆಯೊಂದಿಗೆ ಮುಕ್ತಾಯವಾಗುತ್ತದೆ, ಈ ಸಿದ್ಧನಂಜೇಶನ ಗುರುರಾಜಚಾರಿತ್ರ. ಬಹುಶಃ ಈ ದೊಡ್ಡಹಂಪಯ್ಯನ ವಿಷಯ ಕ್ರಿ.ಶ. ೧೬೧೬ರ ಕವಲೇದುರ್ಗ ಶಾಸನದಲ್ಲಿ[3] ಬರುವುದರಿಂದ ಸಿದ್ಧನಂಜೇಶ ಕ್ರಿ.ಶ. ೧೬೧೬ ರ ತರುವಾಯದವನೆಂದು ಹೇಳಬೇಕಾಗುತ್ತದೆ.

ಇನ್ನೂ ಮುಂದುವರಿದರೆ ಕವಿಯ ಗುರು ಸಿದ್ಧನಂಜೇಶನಿಗೆ ಹೋಳಿವ ಗಡ್ಡದ ರಾಚವಟ್ಟಿಯಯ್ಯ, ಚೆಲುವ ಮುತ್ತಿನಕಂಥೆ ರಾಚವಟ್ಟಿಯದೇವ, ಪೌರಾಣಗಳ ಪೇಳ್ವ ರಾಚವಟ್ಟಿಯದೇವ ಎಂಬುವರು ಶಿಷ್ಯರಾಗಿದ್ದರೆಂದು ಗುರುರಾಜಚಾರಿತ್ರದಲ್ಲಿ (೧-೪೩) ಹೇಳಾಗಿದೆ. ಕ್ರಿ.ಶ. ೧೭೦೯ರ ಕವಲೇದುರ್ಗ ಶಾಸನದಲ್ಲಿ[4] ದತ್ತಿ ಸ್ವೀಕರಿಸಿದ ಉತ್ತರಪುರಾಣದ ರಾಚವಟ್ಟಿದೇವನು "ಪೌರಾಣಗಳ ಪೇಳ್ವ ರಾವಟ್ಟಿಯದೇವ"ನಾಗಿರಲು ಸಾಧ್ಯವಿರುವುದರಿಂದ ಈ ರಾಚವಟ್ಟಿಗೆ ಶಿಷ್ಯಬಂಧುವಾದ ಕವಿ ಸಿದ್ಧನಂಜೇಶನೂ ಇದೇ ಸುಮಾರಿಗೆ ಬದುಕಿರಬಹುದು. ಕಾರಣ ಪ್ರೊ. ಎಸ್. ಎಸ್. ಭೂಸನೂರಮಠರು ಹೇಳುವಂತೆ ಈ ಕವಿಯ ಕಾಲ ೧೬ನೆಯ ಶತಮಾನದ ಉತ್ತರಾರ್ಧವಲ್ಲ; ಕವಿಚರಿತೆಕಾರರು ಹೇಳುವಂತೆ ಕ್ರಿ. ಶ. ೧೬೫೦ ಮತ್ತು ಇನ್ನೂ ಸ್ವಲ್ಪ ಮುಂದು ಎನ್ನಬೇಕಾಗುತ್ತದೆ. ಇದರಿಂದ ಕ್ರಿ.ಶ. ೧೬೭೯ ರಲ್ಲಿದ್ದ ಕೊಟ್ಟೂರೇಶ್ವರ ಪುರಾಣದ ಕರ್ತೃ ಬಸವಲಿಂಗನು ಈ ಸಿದ್ಧನಂಜೇಶನನ್ನು ಹೊಗಳಿದನೆಂಬುದಕ್ಕೂ ವ್ಯತ್ಯಯ ಬರುವುದಿಲ್ಲ.

* * *

ಸಿದ್ಧನಂಜೇಶನು ೧. ರಾಘವಾಂಕಚರಿತೆ ೨. ಗುರುರಾಜಚಾರಿತ್ರ ೩. ಬಸವಶತಕ ೪. ತೋಂಟದ ಸಿದ್ಧದೇಶಿಕನ ಭಾವರತ್ನಾಭರಣಗಳು ತನ್ನ ಕೃತಿಗಳೆಂದು ಗುರುರಾಜಚಾರಿತ್ರದಲ್ಲಿ ಹೇಳಿಕೊಂಡಿರುವನು. ಇವುಗಳಲ್ಲಿ ಮೊದಲಿನ ಎರಡು ಬಹುದಿನಗಳ ಹಿಂದೆ ಲಭಿಸಿ ಪ್ರಕಟವಾಗಿವೆ. ಮಿಕ್ಕ ಎರಡರಲ್ಲಿ ಬಸವಶತಕ ಇನ್ನೂ ಸಿಕ್ಕಿಲ್ಲ. "ತೋಂಟದ ಸಿದ್ಧದೇಶಿಕನ ಭಾವರತ್ನಾಭರಣ" ವು " ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ" ಹೆಸರಿನಿಂದ ಸಿಕ್ಕು ಈಗ ಪ್ರಕಟವಾಗುತ್ತಲಿದೆ.

ಸಿದ್ಧನಂಜೇಶನು 'ವಸ್ತುಕ ವರ್ಣಕ' ಗಳಿಂದ ತನ್ನ ಕೃತಿಗಳನ್ನು ಬರೆದಿರುವೆನೆಂದು ಗುರುರಾಜಚಾರಿತ್ರದಲ್ಲಿ ಹೇಳಿರುವನು. ಷಟ್ಪದಿಯಲ್ಲಿರುವ ಗುರುರಾಜಚಾರಿತ್ರ ಮತ್ತು ರಾಘವಾಂಕಚಾರಿತ್ರ, ೧೦೦ ಪದ್ಯಗಳ ಅನುಪಲಬ್ಧ ಬಸವಶತಕಗಳನ್ನು ಬಿಟ್ಟರೆ ಉಳಿಯುವ ಈ

---

೩. ಎಂ. ಎಂ. ಕಲಬುರ್ಗಿ : ಶಾಸನಗಳಲ್ಲಿ ಶಿವಶರಣರು, ಪುಟ-೧೬೩.

೪. ಅದೇ, ಪುಟ-೧೬೫.

“ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ” ವೇ ವಸ್ತುಕವಾಗಿರುವ ಸಾಧ್ಯತೆ ಇದೆ ಎಂದು ವಿದ್ವಾಂಸರು ಊಹಿಸಿದ್ದರು.[೫] ಆದರೆ ಇದೂ ಷಟ್ಪದಿರೂಪದಲ್ಲಿರುವುದರಿಂದ ಅವರ ಊಹೆಯನ್ನು ಕೈಬಿಡಬೇಕಾಗುತ್ತದೆ.

* * *

ಹೂಲಿಯ ಗುರುಪರಂಪರೆಗೆ ಸಂಬಂಧಪಟ್ಟಂತೆ ಭಾವರತ್ನಾಭರಣದ ಕರ್ತೃ ಚಿಕ್ಕನಂಜೇಶನಿಗೆ ಹಿಂದಣ ಗುರುವಂಶಾವಳಿಯಲ್ಲಿ ಒಬ್ಬನಾಗಿರುವ ಸತ್ಯಶಿವಯೋಗಿ (ಸಿದ್ಧನಂಜೇಶ) ಶಿವಾಚಾರ್ಯರು ಎಡೆಯೂರಿನ ಶ್ರೀ ತೋಂಟದಾರ್ಯ ಗುರುಕುಲದ ವಿರಕ್ತರಿಗೆ ಶಿವಯೋಗಾಭ್ಯಾಸವನ್ನು ಬೋಧಿಸುವ ಕಾರ್ಯವನ್ನು ಕೈಕೊಂಡಿದ್ದರೆಂದು ಈ ಚಿಕ್ಕನಂಜೇಶನ ಅಣ್ಣ ಮತ್ತು ಕಾವ್ಯಗುರುವಾದ ನಂದೀಶಕೃತ ‘ಮರುಳಾರಾಧ್ಯ ವಿಜಯ’ದ–

ಸಿದ್ಧಕುಲಕಿಷ್ಟಾರ್ಥವೀಯುವ
ಸಿದ್ಧಕುಲಪತಿಯಾದ ತೋಂಟದ
ಸಿದ್ಧಲಿಂಗನ ಗುರುಕುಲದೆ ಶಿವಯೋಗ ಬೋಧಿಸುತ
ಶುದ್ಧವಿರತಿತತಿಗೆ ಗುರುಪದ
ಬದ್ಧನಾಗಿಹ ಮದ್ಗುರು ಶ್ರೀ
ಸಿದ್ಧನಂಜೇಶ್ವರನು ಮಾಳ್ಕೆಮಗಿಷ್ಟಸಿದ್ಧಿಯನು॥

ಎಂಬ ಪದ್ಯದಿಂದ ತಿಳಿದುಬರುತ್ತದೆ. ವಿರೂಪಾಕ್ಷಪಂಡಿತ ಕೃತ ಚೆನ್ನಬಸವಪುರಾಣದಲ್ಲಿಯೂ (ಸಂಧಿ ೬೩, ಪದ್ಯ ೪೭) ತೋಂಟದಾರ್ಯರ ಪರಿವಾರದಲ್ಲಿ ಒಬ್ಬ ‘ಸಿದ್ಧನಂಜೇಶ’ನ ಹೆಸರೂ ಕಂಡುಬರುವುದನ್ನು ಇಲ್ಲಿ ಗಮನಿಸಬೇಕು.[೬] ಇದು ನಿಜವಿದ್ದ ಪಕ್ಷದಲ್ಲಿ ವಿರಕ್ತಪೀಠಕ್ಕೂ ಗುರುಪೀಠಕ್ಕೂ ಈ ಹಿಂದೆ ಇದ್ದ ಪರಸ್ಪರ ಸದ್ಭಾವನೆ ಸ್ಪಷ್ಟವಾಗುತ್ತದೆ. ಇದನ್ನು “ಭಾವರತ್ನಾಭರಣ’ ಇನ್ನೂ ಸ್ಪಷ್ಟಪಡಿಸುತ್ತದೆ.

ಈ ಕೃತಿ, ತೋಂಟದಾರ್ಯನ ಪವಾಡಗಳನ್ನೇ ಪ್ರಮುಖವಾಗಿ ಹೇಳುತ್ತಿದ್ದು, ವಿರಕ್ತತೋಂಟದಾರ್ಯನ ಶ್ರೀ ಸಿದ್ಧೇಶ್ವರ ಮಹಾಪುರಾಣವೇ ಇದಕ್ಕೆ ಆಕರವಾಗಿರುವ ಸಾಧ್ಯತೆಯಿದೆ.

“ಮಲ್ಲಣಾರ್ಯಜ ತ್ವತ್ಪ್ರಬಂಧಮಂ ರಚಿಸಿಯಿರ
ಲೊಲ್ಲೆ ನಿರ್ವಂಶಮಂ ಮಾಡೆನಲ್ಕಿತ್ತೆ ......” (ಪದ್ಯ ೭೯)

ಈ ಪದ್ಯ, ತೋಂಟದಾರ್ಯನನ್ನು ಕುರಿತು ಪುರಾಣ ಬರೆದ ಶಾಂತೇಶನು ಅವರ ಕಣ್ಣ ಮುಂದೆಯೇ ಐಕ್ಯವಾದನೆಂಬ ಘಟನೆಯನ್ನು ವ್ಯಕ್ತಪಡಿಸುತ್ತ, ಶಾಂತೇಶಕೃತ ಸಿದ್ಧೇಶ್ವರ ಪುರಾಣದ

---

೫. ಎಸ್. ಎಸ್. ಭೂಸನೂರಮಠ : ಗುರುರಾಜಚಾರಿತ್ರ, ಪ್ರಸ್ತಾವನೆ, ಪುಟ–೧೦.

೬. ಪೂವಲ್ಲಿ (ಹೂಲಿ)ಯ ಸಿಂಹಾಸನ ಬೃಹನ್ಮಠದ ಸಂಕ್ಷಿಪ್ತ ಇತಿಹಾಸ (೧೯೫೩), ಪುಟ–೬೪ ಮತ್ತು ೮೬.

ಕಾಲವಾದ ಕ್ರಿ. ಶ. ೧೫೬೧ ರಲ್ಲಿ ತೋಂಟದಾರ್ಯರು ಜೀವಂತವಾಗಿದ್ದರೆಂಬ ಹೊಸ ಅಂಶವನ್ನು ಹೊರಗೆಡಹುತ್ತ, ತೋಂಟದಾರ್ಯರ ಕಾಲ ೧೬ನೆಯ ಶತಮಾನದ ಉತ್ತರಾರ್ಧವೆಂದು ವಿದ್ವಾಂಸರು ಇತ್ತೀಚೆ ಹೇಳುತ್ತಿರುವುದಕ್ಕೆ ತುಂಬ ಬೆಲೆಯುಳ್ಳ ಹೊಸ ಆಧಾರವಾಗಿ ಪರಿಣಮಿಸಿದೆ. ಇದಲ್ಲದೆ ಕರಸ್ಥಲದ ನಾಗದೇವನಿಗೆ ಹಂಪೆಯ ವಿರೂಪಾಕ್ಷನು ಹರಿಹರಕೃತ "ಬಸವರಾಜದೇವರ ರಗಳೆ" ಯ ಭಿಕ್ಷೆಯನ್ನು ನೀಡಿದನೆಂಬ ಸಂಗತಿ (ಪದ್ಯ ೪೬) ಪ್ರಥಮಸಲ ಬೆಳಕಿಗೆ ಬರುತ್ತದೆ.

ಅಲ್ಲಲ್ಲಿ ಸುಂದರವಾದ ಕಾವ್ಯಾಂಶವಿದ್ದರೂ (ಪದ್ಯ ೫, ೭೯, ೧೦೮, ೧೧೦ ಇತ್ಯಾದಿ) ಕವಿತ್ವದ ದೃಷ್ಟಿಯಿಂದ ಇದು ಮಧ್ಯಮವರ್ಗದ ಕೃತಿಯೆಂದೇ ಹೇಳಬೇಕು. ಆದರೆ ಈ ಕವಿತ್ವದ ಹಿಂದಿರುವ ಭಕ್ತಿಭಾವ ಮಾತ್ರ ಅನನ್ಯವಾದುದು. ಗುರುವರ್ಗದ ಒಬ್ಬ ಶಿವಯೋಗಿ ವಿರಕ್ತವರ್ಗದ ಇನ್ನೊಬ್ಬ ಶಿವಯೋಗಿಯನ್ನು ಕುರಿತು ಈ ರೀತಿ ಭಕ್ತಿಭಾವದಿಂದ ಹಾಡಿದುದು, ಭಾವನಿರ್ಭರತೆಯಿಂದ ಹೊಗಳಿದುದು ಉಭಯ ವರ್ಗಗಳ ಅನ್ಯೋನ್ಯತೆಯನ್ನು ತೋರಿಸಿಕೊಡುತ್ತದೆ, ಗುರು-ವಿರಕ್ತರೆಂಬ ಕಲಹದಲ್ಲಿ ನಿರತರಾದವರಿಗೆ ನಿಜಸ್ಥಿತಿಯನ್ನು ನಿವೇದಿಸುತ್ತದೆ.

* * *

"ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ" ನಮಗೆ ಲಭಿಸಿದ್ದು ಕಲಬುರ್ಗಿ ಜಿಲ್ಲೆಯ ಜೇವರಗಿ ತಾಲೂಕಿನ ಎಡ್ರಾಮಿ ಗ್ರಾಮದ ಶ್ರೀ ಮಹಾಲಿಂಗಯ್ಯ ಭಾವಿಮಠ ಅವರ ಮನೆಯಲ್ಲಿ. ಬಹಳ ದಿನಗಳಿಂದ ಸಂಶೋಧಕರ ಕಣ್ಣು ತಪ್ಪಿಸುತ್ತ ನಡೆದಿದ್ದ ಈ ಕೃತಿ, ಕವಿಯ ಕಾರ್ಯಕ್ಷೇತ್ರಗಳಾದ ಹೂಲಿ, ನಂದ್ಯಾಲಪುರಗಳ ಪರಿಸರದಲ್ಲಿ ಸಿಗದೆ ದೂರದ ಎಡ್ರಾಮಿಯಲ್ಲಿ ಸಿಕ್ಕುದು ಆಶ್ಚರ್ಯವೇ ಸರಿ. ಇದು ಕಾಗದಪ್ರತಿಯಿದ್ದು (೭" x೪") ತಕ್ಕಮಟ್ಟಿಗೆ ಶುದ್ಧವಾಗಿಯೇ ಇದೆ. ಅವಶ್ಯವಿದ್ದಲ್ಲಿ ಮಾಡಿರುವ ತಿದ್ದುಪಡಿಗಳನ್ನು ಚೌಕಕಂಸಿನಲ್ಲಿ ಕೊಡಲಾಗಿದೆ. ತಿದ್ದುಪಡಿಗಳಿಗೆ ಸಂವಾದಿಯಾದ ಮೂಲಪಾಠವನ್ನು 'ಮೂ' ಎಂಬ ಸಂಕೇತದಿಂದ ಅಡಿಯಲ್ಲಿ ಕಾಣಿಸಲಾಗಿದೆ. ಹೀಗಿದ್ದೂ ಇನ್ನೂ ಅನೇಕ ಸಂದೇಹಗಳು ಉಳಿದಿವೆ. ವಿದ್ವಾಂಸರು ಪರಿಹಾರಗಳನ್ನು ಸೂಚಿಸಿದಲ್ಲಿ ತುಂಬ ಉಪಕಾರವಾಗುತ್ತದೆ.

ಈ ಕೃತಿಯ ಸಾಮಾಜಿಕ ಮತ್ತು ಐತಿಹಾಸಿಕ ಮಹತ್ವವನ್ನು ಮನದಂದು ಶ್ರೀಮನ್ನಿರಂಜನ ಜಗದ್ಗುರು ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ತಮ್ಮ ಶ್ರೀಮಠದ "ವೀರಶೈವ ಅಧ್ಯಯನಸಂಸ್ಥೆ" ಯಿಂದ ಪ್ರಕಟಿಸುವುದಕ್ಕೋಸುಗ ಇದನ್ನು ಪರಿಷ್ಕರಿಸಿಕೊಡಬೇಕೆಂದು ಆದೇಶ ನೀಡಿದರಲ್ಲದೆ, ಸಾಮಾನ್ಯರ ವಾಚನಕ್ಕೋಸುಗ ಪ್ರತಿಯೊಂದು ಪದ್ಯಕ್ಕೆ ಪ್ರತಿಪದಾರ್ಥ ಮತ್ತು ಸರಳಾನುವಾದ ಬರೆಯುವ ಆವಶ್ಯಕತೆಯನ್ನೂ ನಮ್ಮ ಗಮನಕ್ಕೆ ತಂದರು. ಈ ಮೇರೆಗೆ ತುಂಬ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿದರೂ ಅಲ್ಲಲ್ಲಿ ಅತೃಪ್ತಿಯ ನೆಲೆಗಳು ಉಳಿದುಕೊಂಡಿರುವುದಾಗಿ ನಮಗೆ ಮನವರಿಕೆಯಾಗಿದೆ. ವಿದ್ವಾಂಸರು ಸೂಚಿಸಿದಲ್ಲಿ ಮುಂದಿನ ಆವೃತ್ತಿಯಲ್ಲಿ ಕೃತಜ್ಞತೆಯೊಂದಿಗೆ ತಿದ್ದಿಕೊಳ್ಳುತ್ತೇವೆ.

ಗದುಗಿನ ಶ್ರೀ ಜಗದ್ಗುರು ತೋಂಟದಾರ್ಯಮಠ ಪ್ರಾರಂಭಿಸಿದ "ವೀರಶೈವ ಅಧ್ಯಯನ ಸಂಸ್ಥೆ", ಇಂದಿನ ಜಗದ್ಗುರುಗಳಾದ ಶ್ರೀ ತೋಂಟದಾರ್ಯ ಮಹಾಸ್ವಾಮಿಗಳು ಕಟ್ಟಿಕೊಂಡ ಒಂದು ಮಹಾಕನಸು.

ಉದಯವಾದ ೨-೩ ವರ್ಷಗಳಲ್ಲಿಯೇ ತುಂಬ ಕ್ರಿಯಾಶೀಲವಾಗಿ ಮುನ್ನಡೆದ ಈ ಸಂಸ್ಥೆಯ ಮೂಲಕ "ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ"ವನ್ನು ಪ್ರಕಟಿಸುತ್ತಿರುವ ಶ್ರೀಸನ್ನಿಧಿಗೆ ಭಕ್ತಿಯಿಂದ ತಲೆಬಾಗುತ್ತೇವೆ. ಹಸ್ತಪ್ರತಿಯ ಮೂಲ ಒಡೆಯರಾದ ಶ್ರೀ ಮಹಾಲಿಂಗಯ್ಯ ಭಾವಿಮಠ ಅವರಿಗೂ ಈಗ ಕನ್ನಡ ಅಧ್ಯಯನಪೀಠದಲ್ಲಿರುವ ಅದನ್ನು ಪ್ರಕಟಿಸಲು ಅನುಮತಿಯಿತ್ತ ನಿರ್ದೇಶಕರಾದ ಡಾ. ಎಂ. ಎಸ್. ಸುಂಕಾಪುರ ಅವರಿಗೂ ಕೃತಜ್ಞತೆಗಳು. ಅಲ್ಪಾವಧಿಯಲ್ಲಿ ಅಂದವಾಗಿ ಮುದ್ರಿಸಿದ ಧಾರವಾಡದ 'ಮನೋಹರ ಮುದ್ರಣಾಲಯ'ದ ಒಡೆಯರಾದ ಶ್ರೀ ಸೋಮಶೇಖರ ಆಕಳವಾಡಿ ಮತ್ತು ಅವರ ಮಕ್ಕಳಾದ ರವಿ ಆಕಳವಾಡಿ ಅವರಿಗೂ ವಂದನೆಗಳು.

೧೨-೪-೧೯೭೭

– ಸಂಪಾದಕರು

❖❖

ತೋಂಟದ ಸಿದ್ಧೇಶ್ವರನ ಭಾವರತ್ನಾಭರಣ ಸ್ತೋತ್ರ

ದೇವ ತೋಂಟದ ಸಿದ್ಧಲಿಂಗಚರಣಕಲಿತ
ಭಾವರತ್ನಾಭರಣದಲ್ಲಿ ಮಾರ್ಪೊಳೆಯದಿಹ
ಭಾವಮಿಲ್ಲಂ ಪದಪದಕೆ ವಿಮಲಭಾವಜ್ಞರುಂ ವಿಚಾರಿಸಿ ನೋಡಲು

* ಆಕಲಿತ–ಕೂಡಿದ, ಅರ್ಪಿತವಾದ; ಮಾರ್ಪೊಳೆ–ಪ್ರತಿಫಲಿಸು, ಪ್ರತಿಬಿಂಬಿಸು; ಭಾವಜ್ಞ–ರಸಾನುಭವಿ

* ಶ್ರೀ ತೋಂಟದ ಸಿದ್ಧಲಿಂಗದೇವನ ಚರಣಗಳಿಗೆ ಅರ್ಪಿತವಾದ "ಭಾವರತ್ನಾಭರಣ"ದ ಪದಪದಗಳಲ್ಲಿ ವಿಚಾರಿಸಿ ನೋಡಲು ಪ್ರತಿಬಿಂಬಿತವಾಗದ ಭಾವವೇ ಇಲ್ಲ (ಎಲ್ಲ ಭಾವಗಳು ಪ್ರತಿಬಿಂಬಿತವಾಗಿವೆಯೆಂದು ಅರ್ಥ)

೧

ಶ್ರೀಗಿರಿವರಾತ್ಮಜೆಯು ಮುಳಿಯಲೊಡೆ ದ್ವಿತ್ರಿಮುಖ
ನಾಗಿ[೧][ಬಾ][೧] ಹಾಸಹಸ್ರಂಗಳಿಂದಪ್ಪಿಯನು
ರಾಗಾತಿರೇಕದಿಂದ ಕಾಲ್ಗೆರಗಲುಂಗುಟದಲತಿಗೆ ಪಣೆಗಂಟಿದಂತೆ
[೨]ಆಗೆಸೆಯೆ[೨] ಭಾಳಾಕ್ಷಿಯಪರಾಧಿ ವಿಟರ್ಗೆ ತೋ
ಡಾಗಿ ರಾಜಿಸುವ ನಿರ್ಮಲಮೂರ್ತಿ ಸುಖದಾಯಿ
ನಾಗೇಂದ್ರಚರ್ಮಧರ ಸಿದ್ಧನಂಜೇಶ್ವರಂ ರಕ್ಷಿಸುಗೆ ನಿರ್ವಿಘ್ನದಿಂ

* ಗಿರಿವರಾತ್ಮಜಾ–ಹಿಮಪರ್ವತದ ಮಗಳು, ಪಾರ್ವತಿ; ದ್ವಿತ್ರಿಮುಖ–ಐದು ಮುಖ, ಬಾಹಾಸಹಸ್ರ–ಸಾವಿರ ತೋಳು, ಅಲತಿಗೆ–ಸ್ತ್ರೀಯರ ಮೈಮೇಲೆ ಚಿತ್ರ ಬಿಡಿಸಿಕೊಳ್ಳಲು ಉಪಯೋಗಿಸುವ ಮದರಂಗಿ ಬಣ್ಣ, ಭಾಳಾಕ್ಷಿ–ಹಣೆಗಣ್ಣು, ತೋಡು–ಸಮಾನ, ಸುಖದಾಯಿ–ಸುಖ ನೀಡುವವ, ನಾಗೇಂದ್ರಚರ್ಮಧರ–ಆನೆಯ ಚರ್ಮವನ್ನು ಧರಿಸಿದವ, ಶಿವ.

೧–೧ ಬ (ಮೂ), ೨–೨ "ಆಗಿ+ಎಸೆಯೆ" ಎಂದು ಬಿಡಿಸಿ ಓದಬೇಕು (ಸಂ).

* ಸಿಟ್ಟಿಗೆದ್ದ ಪಾರ್ವತಿಯನ್ನು ಐದು ಮುಖ ಸಾವಿರ ಭುಜಗಳಿಂದ ಅಪ್ಪಿ, ಅನುರಾಗದ ಅತಿರೇಕದಿಂದ ನಮಸ್ಕರಿಸುವಲ್ಲಿ ಅವಳ ಉಂಗುಟದ ಅಲತಿಗೆಯೇ ಹಣೆಗೆ ಹತ್ತಿರುವಂತೆ ನೊಸಲನೇತ್ರ ಶೋಭಿಸುತ್ತಿರಲು, ಅಪರಾಧಿ ವಿಟರಿಗೆ ಸಮಾನವಾಗಿ ಕಾಣುವ ನಿರ್ಮಲಮೂರ್ತಿ ಸುಖದಾಯಿ ಗಜಚರ್ಮಧರ ಎನಿಸಿದ ಸಿದ್ಧನಂಜೇಶ್ವರನು ನಿರ್ವಿಘ್ನದಿಂದ (ನಮ್ಮನ್ನು) ಕಾಪಾಡಲಿ.

೨

ಆದಿವೃಷಭೇಂದ್ರ ತಾನೆಂಬುದಂ ತಿಳಿಪುವೊಡೆ
ಸಾದರದಿ ಸಿಂಗಿರಾಜಂಗೆ ಶೃಂಗವನಿತ್ತು
ಮಾದೇವನವತಾರ ಕಕ್ಕಯ್ಯಗಳ ಬಾಗಿಲಂ ಕಾಯ್ದು ನಂದಿಯೆಂದು
ಮೇದಿನಿಗೆ ಪ್ರಕಟಿಸೀಶಂಗೆ ತನಗಂ ನೋಡೆ
ಭೇದವಿಲ್ಲೆಂಬುದಂ ಕಾಣಿಸಿ ಹಳಾಹಳವ
ಮೋದದಿಂದುಂಡು ಮೆರೆ[೩][ದಿಹ][೩] **ಬಸವನೀಗೆ ಭಕ್ತಿಜ್ಞಾನವೈರಾಗ್ಯಮಂ**

* ಶೃಂಗ–ಕೋಡು, ಕೊಂಬು; ಮೇದಿನಿ–ಭೂಮಿ, ಹಳಾಹಳ–(ಹಾಳಾಹಳ) ವಿಷ, ಮೋದ–ಸಂತೋಷ.

* ಆದಿವೃಷಭನು ತಾನೆಂಬುದನ್ನು ತಿಳಿಸುವುದಕ್ಕೋಸುಗ ಸಿಂಗಿರಾಜನಿಗೆ ಶೃಂಗವನ್ನು ನೀಡಿ, ಶಿವನ ಅವತಾರವೆನಿಸಿದ ಕಕ್ಕಯ್ಯನ ಮನೆಯ ಬಾಗಿಲ ಕಾಯುವುದರ ಮೂಲಕ (ಶಿವನ ಬಾಗಿಲ ಕಾಯ್ದು) ನಂದಿಯೇ ತಾನೆಂದು ಲೋಕಕ್ಕೆ ವ್ಯಕ್ತಪಡಿಸಿ, ಶಿವನಿಗೂ ತನಗೂ ಭೇದವಿಲ್ಲೆಂಬುದನ್ನು ತೋರಿಸುವ ರೀತಿಯಲ್ಲಿ ಸಂತೋಷದಿಂದ ವಿಷವನ್ನು ಸೇವಿಸಿ ಮೆರೆದ ಬಸವೇಶ್ವರನು (ಕ್ರಮವಾಗಿ) ಭಕ್ತಿಜ್ಞಾನವೈರಾಗ್ಯವನ್ನು (ನಮಗೆ) ನೀಡಲಿ.

೩

ಶರಣ ನಂಬೆಣ್ಣ ಮಡಿವಳಮಾಚಿರಾಜ ಭಾ
ಸುರ ಮುಸುಟಿಚೌಡಯ್ಯ ಕೆಂಭಾವಿಭೋಗ ವಿ
ಸ್ತರದ ಬಹುರೂಪಚೌಡಂ ಬಿಬ್ಬಿಬಾಚಯ್ಯ ಕಲಕೇತಬ್ರಹ್ಮದೇವ
ಪರಮ ಶಂಕರದಾಸಿಮಯ್ಯ ದಸರಯ್ಯರೆಂ
ಬುರುತರ ಸುನವರಸಾಲಂಕಾರಯುತರ ಪದ
ಸರಸಿಜಕ್ಕೆಱಗೆ ನವರಸಭಾವಭರಿತವಹ ಮತಿ ದೊರಕದಿಹುದೆ ಎನಗೆ

———
೩–೩ ದ (ಮೂ).

* ಭಾಸುರ–ಪ್ರಕಾಶಿಸುವ, ಪ್ರಸಿದ್ಧನಾದ; ವಿಸ್ತರದ–ಮಹಿಮಾಶಾಲಿಯಾದ, ಉರುತರ–ಶ್ರೇಷ್ಠ, ಸುನವರಸಾಲಂಕಾರಯುತ–ಶೃಂಗಾರ ರೌದ್ರ ವೀರ ಭೀಭತ್ಸ ಹಾಸ್ಯ ಕರುಣ ಅದ್ಭುತ ಭಯಾನಕ ಶಾಂತವೆಂಬ ಒಂಬತ್ತು ರಸಗಳಿಂದ ಕೂಡಿದ (ಇಲ್ಲಿ ಹೆಸರಿಸಲಾದ ಒಂಬತ್ತು ಜನ ಶರಣರು ಕ್ರಮವಾಗಿ ಒಂಬತ್ತು ರಸಪ್ರಧಾನ ವ್ಯಕ್ತಿತ್ವವುಳ್ಳವರಾಗಿದ್ದಾರೆ): ಪದಸರಸಿಜ–ಪಾದಕಮಲ, ಭರಿತ–ತುಂಬಿದ, ಮತಿ–ಬುದ್ಧಿ, ವಿವೇಕ.

* ನಂಬಿಯಣ್ಣ ಮಡಿವಳಮಾಚಿದೇವ ಮುಸುಟಿಚೌಡಯ್ಯ ಕೆಂಭಾವಿಭೋಗಣ್ಣ ಬಹುರೂಪಿಚೌಡಯ್ಯ ಬಿಬ್ಬಿಬಾಚಯ್ಯ ಕಲಕೇತಬ್ರಹ್ಮಯ್ಯ ಶಂಕರದಾಸಿಮಯ್ಯ ದಸರಯ್ಯರೆಂಬ ನವರಸಯುಕ್ತರಾದ ನವಶರಣಶ್ರೇಷ್ಠರ ಪಾದಕಮಲಗಳಿಗೆ ನಮಸ್ಕರಿಸಲು ನವರಸಭಾವಭರಿತ ವಿವೇಕವು ನನಗೆ ದೊರಕಲಾರದೇ? (ದೊರಕುತ್ತದೆ ಎಂದರ್ಥ).

೪

ಹರಭಕ್ತ ವರ ಹಲಾಯುಧ ಮಹೇಶ್ವರ ಸುಖೋ
ತ್ಕರ ರಾಘವಾಂಕ ಪರತರ ಸುಪ್ರಸಾದಿಯಹ
ಗರುವ ಪಾಲ್ಕುಱಿಕೆ ಸೋಮೇಶ್ವರಂ ಪ್ರಾಣಲಿಂಗಸ್ವರೂಪೋದ್ಭಟಯ್ಯ
ಶರಣಸಂಗಂ ಕೆಱೆಯ ಪದ್ಮರಸ ಲಿಂಗದೊಳು
ಬೆರೆದೈಕ ಹರಿದೇವರೀ ಷಟ್ಸ್ಥಲಾತ್ಮಕರ
ಚರಣಾಬ್ಜವೆನ್ನ ಸ್ತುತಿಷಟ್ಪದಿಗೆ ಸಂತಸ[೪] [ವ][೪] ನೀವುದತಿಶಯವಲ್ತದು

* ವರ–ಶ್ರೇಷ್ಠ, ಉತ್ಕರ–ರಾಶಿ, ಸಮೂಹ; ಪರತರ–ಶ್ರೇಷ್ಠ, ಗರುವ–ಯೋಗ್ಯ, ಗಣ್ಯ; ಷಟ್ಸ್ಥಲಾತ್ಮಕ–ಷಟ್‌ಸ್ಥಲಸ್ವರೂಪಿ (ಇಲ್ಲಿ ಪ್ರತಿಯೊಬ್ಬ ಶರಣನಿಗೆ ವಿಶೇಷಣವಾಗಿ ಬಳಸಿದ ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ(ಕ್ಯ) ಪದಗಳನ್ನು ಗಮನಿಸಿರಿ); ಷಟ್ಪದಿ–ಭ್ರಮರ, (ಷಟ್ಪದಿ ಛಂದಸ್ಸಿನ ಪದ್ಯ).

* ಶಿವಭಕ್ತನಾದ ಹಲಾಯುಧ, ಮಹೇಶ್ವರಸುಖಸಮೂಹನಾದ ರಾಘವಾಂಕ, ಶ್ರೇಷ್ಠ ಸುಪ್ರಸಾದಿಯಾದ ಗಣ್ಯ ಪಾಲ್ಕುರಿಕೆ ಸೋಮೇಶ್ವರ, ಪ್ರಾಣಲಿಂಗ ಸ್ವರೂಪಿಯಾದ ಉದ್ಭಟಯ್ಯ, ಶರಣಸಂಗಿಯಾದ ಕೆರೆಯ ಪದ್ಮರಸ, ಲಿಂಗದಲ್ಲಿ ಐಕ್ಯನಾದ (ಕವಿ) ಹರಿಹರದೇವರೆಂಬ ಷಟ್‌ಸ್ಥಲಸ್ವರೂಪಿಗಳ ಪಾದಕಮಲಗಳು ನನ್ನ ಸ್ತೋತ್ರಷಟ್ಪದಿಗೆ (ನನ್ನ ಸ್ತೋತ್ರರೂಪದ ಭ್ರಮರಕ್ಕೆ ಅಥವಾ ನನ್ನ ಸ್ತೋತ್ರ ರೂಪದ ಷಟ್ಪದಿ ಪದ್ಯಕ್ಕೆ) ಸಂತೋಷವನ್ನು ಕೊಡುವುದು ಅತಿಶಯವಲ್ಲ.

೪–೪ x (ಮೂ).

೫

ಅಸಮದುರ್ಗದ ಕಾಲಕಾಮರೆಂದೆಂಬ ತರು

ವಿಸರಮಂ ಕಡಿದು ಷಡ್ವರ್ಗತಾಮಸವೆಂಬ

ಕಸವ ಕಿತ್ತೆನ್ನ ಮಾನಸಭೂಮಿಯಲ್ಲಿ ಶಿವಭಕ್ತಿ ಬೀಜವನು ಬಿತ್ತಿ

ಸಸಿನೆ ಕಾರುಣ್ಯಜಲವೆರೆದು ಗುರುಚರಣ ಸುರ

ವಸುಧಾರುಹಕ್ಕೆ ಪರ್ಬಿಸುವ ತೋಂಟದ ಸಿದ್ಧ

ನೊಸೆದು ತನ್ನಯ ಸ್ತೋತ್ರಲತೆಯ ಭೂಗಗನದಿಕ್ತಟಗಳೊಳು ಬೆಳಸದಿಹನೆ

* ಅಸಮದುರ್ಗ–ಸುಗಮವಲ್ಲದ ಅರಣ್ಯ(ವೆಂಬ ದೇಹ), ಕಾಲ–ಯಮ, ತರುವಿಸರ–ಮರಗಳ ಸಮೂಹ, ಷಡ್ವರ್ಗ–ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಅರಿಷಡ್ವರ್ಗಗಳು, ತಾಮಸ–ತಾಮಸವೆಂಬ ಗುಣ, ಮಾನಸ ಭೂಮಿ–ಮನೋಭೂಮಿ, ಸಸಿನೆ–ಚೆನ್ನಾಗಿ, ಸುರವಸುಧಾರುಹ–ದೇವಲೋಕದ ವೃಕ್ಷ, ಕಲ್ಪವೃಕ್ಷ (ವಸುಧಾರುಹ–ಮರ); ಭೂಗಗನದಿಕ್ತಟ–ಭೂಮಿ ಆಕಾಶ ದಿಕ್ಕುಗಳ ತುದಿ.

* ಸುಗಮವಲ್ಲದ ಅರಣ್ಯ (ವೆಂಬ ದೇಹ)ದ ಕಾಲಕಾಮರೆಂಬ ಗಿಡಗಳ ಸಮೂಹವನ್ನು ಕಡಿದು, ಕಾಮ ಕ್ರೋಧ ಲೋಭ ಮೋಹ ಮದ ಮತ್ಸರವೆಂಬ ಕಸವ ಕಿತ್ತು, ಮನೋಭೂಮಿಯಲ್ಲಿ ಶಿವಭಕ್ತಿಯೆಂಬ ಬೀಜವನ್ನು ಬಿತ್ತಿ, ಕಾರುಣ್ಯವೆಂಬ ನೀರನ್ನು ಚೆನ್ನಾಗಿ ಎರೆದು ಗುರುಪಾದವೆಂಬ ಕಲ್ಪವೃಕ್ಷಕ್ಕೆ ಹಬ್ಬಿಸುವ ತೋಂಟದ ಸಿದ್ಧಲಿಂಗೇಶ್ವರನು ತನ್ನ ಸ್ತೋತ್ರವೆಂಬ ಈ ಬಳ್ಳಿಯನ್ನು ಭೂಮಿ ಆಕಾಶ ದಿಕ್ಕುಗಳ ತುದಿಯವರೆಗೆ ಹಬ್ಬಿಸದಿರುವನೆ?

೬

ಶರಭ ಶಾರ್ದೂಲ ಪುರಷಾಮೃಗಂಗಳ ಗಣಿಸು

ತಿರದೆ ಶುನಿಯಂ ಲೆಕ್ಕಿಸುವರೆ ನವರತ್ನಗಳ

ನುರೆ ಕೋ[೫][ವು][೫] ವಾಗ ಕೆಱಹಿನ ಬಿಲ್ಲೆಯಂ ಮಧ್ಯಕಿಕ್ಕುವರೆ ಲಕ್ಷಣಯುತ[೬][ರ್][೬]

ತರಳೆಯ ಪರಿಣಯಕ್ಕೆ ಮೋಟ ಮೂಕೊರೆಯರಂ

ಕರೆವರೇ ತೋಂಟದಾರ್ಯರ ಮಹಾಸ್ತೋತ್ರದೊಳು

ದುರುಳಕವಿಗಳ ಮಾತದೇಕೆನಗೆ ಕವಿರಾಯ ನಂದೀಶನೊಲವಿರುತಿರೆ

* ಶರಭ–ಎಂಟು ಕಾಲಿನ ಪ್ರಾಣಿ, ಶಾರ್ದೂಲ–ಸಿಂಹ, ಪುರುಷಾಮೃಗ–ಪುರುಷಾಕೃತಿಯ ಪ್ರಾಣಿವಿಶೇಷ, ಗಣಿಸು–ಎಣಿಕೆಮಾಡು, ಶುನಿ–ನಾಯಿ, ನವರತ್ನ–ಒಂಬತ್ತು ಬಗೆಯ ರತ್ನಗಳು;

೫–೫ ಲು (ಮೂ), ೬–೬ x (ಮೂ).

ವಜ್ರ ಮಾಣಿಕ್ಯ ಮರಕತ ಪುಷ್ಯರಾಗ ನೀಲ ಗೋಮೇಧಿಕ ವೈಡೂರ್ಯ ಮುತ್ತು ಹವಳ, ಕೋವು–ಪೋಣಿಸು, ಲಕ್ಷಣಯುತ–ವಿದ್ವಾಂಸ, ತರಳೆ–ಮಗಳು, ಕನ್ಯೆ; ಪರಿಣಯ–ಮದುವೆ, ಮೋಟ–ಅಂಗಹೀನ, ಮೂಕೊರೆಯ–ಮೂಗುಹರಕ, ಕವಿರಾಯ ನಂದೀಶ–ಈ ಸಿದ್ಧನಂಜೇಶನ ಅಣ್ಣನೂ ಕಾವ್ಯಗುರುವೂ ಆಗಿದ್ದ ನಂದೀಶಕವಿ.

* ಶರಭಶಾರ್ದೂಲಪುರಾಷಮೃಗಗಳನ್ನು ಎಣಿಕೆ ಮಾಡುವಲ್ಲಿ ನಾಯಿಯನ್ನು ಲಕ್ಷಿಸುವರೆ? ನವರತ್ನಗಳನ್ನು ಪೋಣಿಸುವಾಗ ವಿದ್ವಾಂಸರು ಮಧ್ಯದಲ್ಲಿ ಪಾದರಕ್ಷೆಯ ಬಿಲ್ಲೆಯನ್ನು ಸೇರಿಸುವರೆ? ಮಗಳ ವಿವಾಹಕ್ಕೆ ಅಂಗಹೀನ, ಮೂಗುಹರಕರನ್ನು ಕರೆಯುವರೆ? ನನಗೆ ಕವಿರಾಯ ನಂದೀಶನ ದಯೆಯಿರಲು ತೋಂಟದ ಸಿದ್ಧಲಿಂಗೇಶ್ವರನ ಮಹಾಸ್ತೋತ್ರದಲ್ಲಿ ದುರುಳ ಕವಿಗಳ ಮಾತೇಕೆ ?

೭

ಭಾವಜ್ಞ ಗುರುರೂಪ ಯತಿರಾಯನವ್ಯಯ ಸ
ದಾ ವಿಚಿತ್ರಾರ್ಥಪದದಾನಿ ದಿವ್ಯಾಖ್ಯಾತ
ತಾವಿರಳರಸವಿಭಕ್ತಿಪ್ರಸಂಧಿಪ್ರಿಯನಲಘುಭೂತ್ಯಲಂಕಾರನು
ಆವಗಸಮಾಸದಿಂ ಸುಖವೀವ ಭಜಕರ್ಗೆ
ದೇವ ತೋಂಟದ ಸಿದ್ಧ ಶಬ್ಧಶಾಸ್ತ್ರಾಕೃತಿ ಮ
ಹಾ ವಿಭುಸ್ತೋತ್ರಮಂ [೭]ಪೇಳ್ವೊಡನುಮಾನವೇಕಾಗದೇ ಬುಧಶ್ರಾವ್ಯವು[೭]

* ಭಾವಜ್ಞ–ಜ್ಞಾನಿ, ರಸಾನುಭವಿ; ಗುರುರೂಪ–ಗೌರವಾನ್ವಿತ, ಎರಡು ಮಾತ್ರಾಮೌಲ್ಯದ ಗುರು ಅಕ್ಷರದಿಂದ ಕೂಡಿದ; ಯತಿರಾಯ–ವಿರಕ್ತ ಸಾರ್ವಭೌಮ, ಪದ್ಯದ ವಿರಾಮಸ್ಥಾನ; ಸದಾ ವಿಚಿತ್ರಾರ್ಥಪದದಾನಿ–ನಿರಂತರವಾಗಿ ವಿಸ್ಮಯಕಾರಕ ಸಂಪತ್ತಿನ ಸ್ಥಿತಿಯನ್ನು ದಯಪಾಲಿಸುವವ, ನಿರಂತರವಾಗಿ ಸುಂದರವಾದ ಅರ್ಥವುಳ್ಳ ಶಬ್ದಗಳ ನೀಡುವ; ದಿವ್ಯಾಖ್ಯಾತತಾವಿರಳಸವಿಭಕ್ತಿ ಪ್ರಸಂಧಿಪ್ರಿಯನ್–ದಿವ್ಯವೂ ಪ್ರಸಿದ್ಧವೂ ಆದ ಸಾಂದ್ರವೂ ರಸಯುಕ್ತವೂ ಆದ ವಿಶೇಷ ಭಕ್ತಿ ಬೆಸುಗೆಯನ್ನೇ ಪ್ರೀತಿಸುವವ, ದಿವ್ಯವಾದ ಕ್ರಿಯಾಪದ ಅವಿರಳವಾದ ರಸ ವಿಭಕ್ತಿ ಸಂಧಿಕ್ರಿಯೆಯುಳ್ಳ; ಅಲಘು ಭೂತ್ಯಲಂಕಾರನು–ಘನವಾದ ಐಶ್ವರ್ಯ(–ಭೂತಿ)ದಿಂದ ಶೋಭಿಸುವವ, ಲಘುವಲ್ಲದ ಶ್ರೇಷ್ಠವಾದ ಅಲಂಕಾರಗಳಿಂದ ಕೂಡಿದ; ಆವಗ[ಂ]–ಯಾವಾಗಲೂ, ಅಸಮಾಸದಿಂ–ಕ್ಲಿಷ್ಟರಹಿತವಾಗಿ, ಸಮಾಸ ರಹಿತವಾಗಿ; ಭಜಕರ್ಗೆ–ಭಜಿಸುವವರಿಗೆ, ಶಬ್ದಶಾಸ್ತ್ರಾಕೃತಿ–ವ್ಯಾಕರಣಶುದ್ಧಕೃತಿ (ಇಲ್ಲಿ ತೋಂಟದ ಸಿದ್ಧಲಿಂಗ ಮತ್ತು ವ್ಯಾಕರಣ ಶುದ್ಧ ಕೃತಿಗಳನ್ನು ಶ್ಲೇಷೆಯಿಂದ ವರ್ಣಿಸಲಾಗಿದೆ), ಮಹಾವಿಭು–ಮಹಾಸ್ವಾಮಿ, ಬುಧಶ್ರಾವ್ಯ–ವಿದ್ವಾಂಸರು ಕೇಳಲು ಯೋಗ್ಯವಾದ.

೭–೭ ಪೇಳ್ವೊಡನುಮಾನವೇಕೆ ? + ಆಗದೇ ಬುಧಶ್ರಾವ್ಯವು" ಎಂದು ಬಿಡಿಸಿ ಓದಬೇಕು(ಸಂ).

*   ಜ್ಞಾನಿಯೂ ಗೌರವಾನ್ವಿತನೂ ವಿರಕ್ತಸಾರ್ವಭೌಮನೂ ನಿರಂತರವಾಗಿ ವಿಸ್ಮಯಕಾರಕ ಸಂಪತ್ತಿನ ಸ್ಥಿತಿಯನ್ನು ದಯಪಾಲಿಸುವವನೂ ದಿವ್ಯ-ಪ್ರಸಿದ್ಧ-ಸಾಂದ್ರ-ರಸಯುಕ್ತ ವಿಶೇಷಭಕ್ತಿ ಬೆಸುಗೆಯನ್ನು ಪ್ರೀತಿಸುವವನೂ ಘನವಾದ ಐಶ್ವರ್ಯದಿಂದ ಶೋಭಿಸುವವನೂ ಭಕ್ತರಿಗೆ ಕ್ಲಿಷ್ಟರಹಿತವಾಗಿ ಸುಖವನ್ನು ದಯಪಾಲಿಸುವವನೂ ಆದ ತೋಂಟದ ಸಿದ್ಧಲಿಂಗನು, ರಸಾನುಭವತೆ-ಗುರ್ವಕ್ಷರ-ಯತಿಸ್ಥಾನ-ಸುಂದರವಾದ ಅರ್ಥವುಳ್ಳ ಶಬ್ಧ-ಆಖ್ಯಾತ-ರಸ-ವಿಭಕ್ತಿ-ಸಂಧಿ-ಅಲಂಕಾರ-ಅಸಮಾಸಗಳಿಂದ ಕೂಡಿದ ವ್ಯಾಕರಣಶುದ್ಧಕೃತಿಯಂತೆಯೇ ಇರುವ ಕಾರಣ ಆ ಮಹಾಸ್ವಾಮಿಯ ಸ್ತೋತ್ರವನ್ನು ಹೇಳುವೊಡೆ ಅನುಮಾನವೇಕೆ? ಇದು ವಿದ್ವಾಂಸರಿಗೆ ಶ್ರವಣ ಯೋಗ್ಯವಾಗಿಯೇ ತೀರುತ್ತದೆ.

೮

ಶಿವನ ನಿಜರೂಪನ್ನದಾನೀಶ್ವರನ ಹಸ್ತ
ಭವನನಘ ಕುರುವತ್ತಿ ನಂಜೇಶ ಕರಜಾತ
[೮][ತವೆ][೮] ಪಂಚವಣ್ಣಿಗೆಯ ಸಿದ್ಧನಂಜೇಶ್ವರನ ಚರಣಕೃಪೆವೆತ್ತ ಶಿಷ್ಯಂ
ಶಿವಯೋಗಿವರನ ತೋಂಟದ ಸಿದ್ಧಲಿಂಗನಾ
ಸ್ತವರಾಜ ಭಕ್ತಹೃತ್ಕುಮುದಮನಲರ್ಚ ಕುಡದೇ ಬುಧಚಕೋ[೯][ರ್ಗೆ][೯] ಮುದಮಂ

*   ಹಸ್ತಭವ-ಹಸ್ತದಲ್ಲಿ ಹುಟ್ಟಿದವ, ಶಿಷ್ಯ; ಅನಘ-ನಿರ್ದೋಷ, ಪಾಪರಹಿತ; ಕರಜಾತ-ಹಸ್ತದಲ್ಲಿ ಹುಟ್ಟಿದವ, ಶಿಷ್ಯ, ತವೆ-ಚೆನ್ನಾಗಿ, ಪಂಚವಣ್ಣಿಗೆ-ವೀರಶೈವ ಕಾಶೀಪೀಠದ ಒಂದು ಬಗೆ, ಚರಣ-ಪಾದ, ಒರೆ-ರಚಿಸು, ಹೇಳು; ಸ್ತವರಾಜ-ಸ್ತೋತ್ರವೆಂಬ ಚಂದ್ರ, ಹೃತ್ಕುಮುದ-ಹೃದಯವೆಂಬ ರಾತ್ರಿಕಮಲ, ಅಲರ್ಚು-ಅರಳಿಸು, ಬುಧ-ವಿದ್ವಾಂಸ, ಚಕೋರ-ಬೆಳದಿಂಗಳನ್ನೇ ಸೇವಿಸಿ ಬದುಕುವ ಪಕ್ಷಿ.

*   ಸಾಕ್ಷಾತ್ ಶಿವಸ್ವರೂಪಿಯಾದ ಅನ್ನದಾನೀಶ್ವರನ ಕರಸಂಜಾತನು ಕುರುವತ್ತಿ ನಂಜೇಶ. ಆ ಕುರುವತ್ತಿ ನಂಜೇಶನ ಶಿಷ್ಯನು ಪಂಚವಣ್ಣಿಗೆಯ ಸಿದ್ಧನಂಜೇಶ್ವರ, ಆ ಸಿದ್ಧನಂಜೇಶ್ವರನ ಚರಣಕೃಪೆವೆತ್ತ ಶಿಷ್ಯನಾದ ಶಿವಕವೀಶ್ವರ ಸಿದ್ಧನಂಜೇಶನು ಭಕ್ತಿಯಿಂದ ಹೇಳಿದ ಶಿವಯೋಗಿವರ ತೋಂಟದ ಸಿದ್ಧಲಿಂಗೇಶ್ವರನ ಸ್ತೋತ್ರಚಂದ್ರಮನು ಭಕ್ತ ಹೃದಯಕಮಲವನ್ನು ಅರಳಿಸಿ, ವಿದ್ವಾಂಸರೆಂಬ ಚಕೋರಪಕ್ಷಿಗಳಿಗೆ ಸಂತೋಷವನ್ನು ಕೊಡಲಾರನೇ?

೯

ಪಾತಾಳಲೋಕಕ್ಕೆ ಬೇರಿಳಿದು ಬೆಳೆದಬ್ಜ
ಜಾತಲೋಕಕ್ಕೆ ಕುಡಿ ನೆಗೆದು ಪರಿಕಲಿಸಿ ದಿ

೮-೮ ತವ (ಮೂ), ೯-೯ ರ (ಮೂ).

ಗ್ವಾತದೊಳಗಿಟ್ಟಣಿಸಿ ಭೂಪ್ರದೇಶವ ತುಂಬಿತಯ್ಯ ತವ ಕೀರ್ತಿಲತೆಯು
ಆತತ ಮಹತ್ವಾಳಿಗವಧಿಯಿಲ್ಲೆನ್ನೆರ್ದೆಯೊ
ಳೇ ತೆರದೆ ನಿಂ [೧೦][ದು][೧೦] ನೀನೊರೆದಾ ತೆರದೆ ಪೊಗಳ್ವ
ಡೇತಕನುಮಾನ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅಬ್ಜಜಾತಲೋಕ–ಬ್ರಹ್ಮಾಂಡಲೋಕ, ಪರಿಕಲಿಸು–ವಿಸ್ತಾರವಾಗು, ವ್ರಾತ–ಸಮೂಹ, ಇಟ್ಟಣಿಸು–ಅಡಕವಾಗಿ ತುಂಬು, ತವ–ನಿನ್ನ, ಆತತ–ವಿಸ್ತಾರವಾದ ಆಳಿ–ಸಮೂಹ, ಅವಧಿ–ಸ್ಥಳ, ಅವಕಾಶ; ಮತ್ಕಲ್ಪತರುವೇ–ನನ್ನ ಕಲ್ಪವೃಕ್ಷವೇ.

* ಪಾತಾಳಲೋಕದ ವರೆಗೆ ಬೇರು ಬಿಟ್ಟು ಇಳಿದು, ಬ್ರಹ್ಮಾಂಡಲೋಕದ ವರೆಗೆ ಕುಡಿಬಿಟ್ಟು ಬೆಳೆದು, ದಿಕ್ಕು ದಕ್ಕಿನಲ್ಲಿ ಅಡಕವಾಗಿ ತುಂಬಿಕೊಂಡು ನಿನ್ನ ಕೀರ್ತಿಲತೆ ಭೂಭಾಗವನ್ನೆಲ್ಲ ವ್ಯಾಪ್ತಿಸಿತಯ್ಯಾ. ನಿನ್ನ ವಿಸ್ತಾರವಾದ ಮಹತ್ವಗಳ ಸಮುದಾಯಕ್ಕೆ ಈಗ ಎಲ್ಲಿಯೂ ಸ್ಥಳವಿಲ್ಲ. ಕಾರಣ ಯಾವುದೇ ರೀತಿಯಾದ ನನ್ನ ಹೃದಯಸ್ಥಲದಲ್ಲಿ ನಿಂತು ನೀನು ನುಡಿಸಿದ ಹಾಗೆ ನುಡಿಯುತ್ತೇನೆ. ಅನುಮಾನವೇಕೆ? ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦

ಹರಶಿರೋಮಂಡಿತ ಸುಧಾಂಗ ಖೇಚರತೆಯಿಂ
ಸ್ಫುರಿಸಿ ಪುತ್ತೊಡಲಡರಿ ದೋಷಾಕರನುಮಾದ
ಸರಿಯಲ್ಲುವಿಂದು ದೇಹವನು ಪುತ್ತಡರ್ದು ಭಕ್ತರ ಶಿರೋಮಂಡಿತ ಪದಾ
ಸ್ಫುರಿತ ಭಸ್ಮಾಂಗನಾಗಿಳೆಯಲ್ಲಿ ಸುಳಿದು ಭಜಿ
ಪರ ದೋಷಮಂ ಕೆಡಿ[೧೧][ಪ][೧೧] ಪರಮಪಾವನ ನಿಮಗೆ
ಪೊರೆ ಮನೋರಥವಿತ್ತು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಂಡಿತ–ಇಡಲ್ಪಟ್ಟ, ಅಲಂಕರಿಸಲ್ಪಟ್ಟ; ಸುಧಾಂಗ–ಚಂದ್ರ, ಖೇಚರತೆ–ಆಕಾಶ ಗಮನ, ಸ್ಫುರಿಸಿ–ಚಿಮ್ಮಿ, ಪುತ್ತೊಡಲಡರಿ–ಹುತ್ತು ದೇಹವನ್ನೆಲ್ಲ ವ್ಯಾಪಿಸಿ, ದೋಷಾಕರ–ದೋಷದಿಂದ ಕೂಡಿದವನಾದ (ಬಿಂಬದೊಳಗೆ ಕಪ್ಪು ಇರುವುದರಿಂದ ಇಲ್ಲವೆ ಗುರುತಲ್ಪಪ್ರವೇಶಿಯಾದುದರಿಂದ ಚಂದ್ರನು ದೋಷಾಕರ), ಇಂದು–ಚಂದ್ರ, ಸ್ಫುರಿತ–ಹೊಳೆಯುವ, ಪೊರೆ–ರಕ್ಷಿಸು, ಮನೋರಥ–ಬಯಕೆ.

* ಶಿವನ ತಲೆಯಲ್ಲಿ ಅಲಂಕೃತನಾಗಿದ್ದರೂ ಗಗನಗಮನ ಕಾರಣವಾಗಿ ಸೋರಿ ಹೋದವನೂ ಅಮೃತಶರೀರಿಯಾಗಿದ್ದರೂ ದೇಹವೆಲ್ಲ ಹುತ್ತಡರಿ ದೋಷಯುಕ್ತನೂ ಆದ ಚಂದ್ರನು, ಭಕ್ತರ ಶಿರವನ್ನು ಪಾದದಿಂದ ಅಲಂಕರಿಸಿದ್ದರೂ ಇಳೆಯಲ್ಲಿ ಸುಳಿಯುವವನೂ, ದೇಹವನ್ನು ಹುತ್ತು ಆವರಿಸಿದ್ದರೂ ಭಸ್ಮಶರೀರಿಯಾಗಿ ಭಜಿಸುವವರ ದೋಷವನ್ನು ನಿವಾರಿಸುವವನೂ ಆದ

೧೦–೧೦ ದ (ಮೂ), ೧೧–೧೧ ಪೆ (ಮೂ).

ಪರಮಪಾವನನೇ ನಿಮಗೆ ಸಮಬಾರನು. ಬಯಕೆಗಳನ್ನು ಪೂರೈಸಿ ನಮ್ಮನ್ನು ರಕ್ಷಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೧

ಹರಭಕ್ತರಾತ್ಮವೆಂಬಾಕಾಶದಲ್ಲಿ ಸಂ
ಚರಿಸಿಯಜ್ಞಾನಮಮಂ ಕೆಡಿಸಿ ಷಟ್ಸ್ಥಲ ಸು
ಸರಸಿರುಹವಂ ವಿಕಾಸಂಗೆಯ್ಸಿದನಘ ಶಾಪಾನುಗ್ರಹ ಸಮರ್ಥನೇ
ಪರಮಚಿತ್ಸೂರ್ಯ ನಿಮಗೊರೆಯ ಇನ ನಿಲ್ಲದೇ
ತಿರುಗಿಯಜ್ಞಾನದಿಂ ಮುನಿಶಾಪದೊಳು ಕುಷ್ಟ
ಪರಿಭೂತನಾದವಂ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರಿವೇ

* ಸರಸಿರುಹ–ಕಮಲ, ವಿಕಾಸಂಗೆಯ್–ಅರಳಿಸು, ಅನಘ–ಪಾಪರಹಿತ, ಶಾಪಾನುಗ್ರಹ ಸಮರ್ಥ–ಶಾಪಸಮರ್ಥ ಮತ್ತು ಅನುಗ್ರಹಸಮರ್ಥ, ಚಿತ್ಸೂರ್ಯ–ಸೂರ್ಯಸಮ ಚಿತ್ತುಳ್ಳವ, ಒರೆ–ಸಮಾನ, ಇನ–ಸೂರ್ಯ, ಕುಷ್ಟಪರಿಭೂತ–ಕುಷ್ಟ ರೋಗದಿಂದ ಅಪಮಾನಿತ.

* ಶಿವಭಕ್ತರ ಆತ್ಮವೆಂಬ ಆಕಾಶದಲ್ಲಿ ಸಂಚರಿಸಿ, ಅವರ ಅಜ್ಞಾನವೆಂಬ ಕತ್ತಲೆಯನ್ನು ಹೊಡೆದೋಡಿಸಿ, ಷಟ್‌ಸ್ಥಲವೆಂಬ ಕಮಲವನ್ನು ಅರಳಿಸಿ, ಪಾಪರಹಿತನಾಗಿ, ಶಾಪಾನುಗ್ರಹಸಮರ್ಥನಾದ ಪರಮಚಿತ್ಸೂರ್ಯನೇ ಅಜ್ಞಾನದಿಂದ ನಿರಂತರ ತಿರುಗಿ ಮುನಿಶಾಪದಿಂದ ಕುಷ್ಟರೋಗಿಯಾದ ಸೂರ್ಯನು ನಿಮಗೆ ಸಮಾನನಾಗಬಲ್ಲನೇ? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತುರುವೇ?

೧೨

ನೀರಸಂ ಪಾಷಾಣಕಠಿಣಹೃದಯಂ ನೋಡೆ
ದಾರಿದ್ರ್ಯಹರಮಹುದು ಮೋಕ್ಷಮಂ ಕುಡದ ಚಿಂ
ತಾರತ್ನ ಸರಿಯಲ್ತು ನಿಮಗೆ ಕಾರುಣ್ಯರಸನೇತ್ರಶಿವತತ್ತ್ವರೂಪಾ
ಸಾರಸಂ ಮೃದುಹೃದಯ ತವಪದಧ್ಯಾನ ಸಂ
ಸ್ಕಾರಸದ್ಭಕ್ತವಶಗತಭೋಗ ಮೋಕ್ಷಪು
ಣ್ಯಾರಾಮ ನಿಸ್ಸೀಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪಾಷಾಣ–ಕಲ್ಲು, ದಾರಿದ್ರ್ಯ ಹರ–ಬಡತನವನ್ನು ಹೋಗಲಾಡಿಸುವ, ಚಿಂತಾರತ್ನ–ಬಯಸಿದುದನ್ನು ಕೊಡುವ ರತ್ನ, ಸಾರಸ–ಸರಸ್ಸಿನಲ್ಲಿ ಹುಟ್ಟಿದುದು, ಕಮಲ; ಆರಾಮ–ಉದ್ಯಾನ.

* ನೀರಸವೂ ಶಿಲಾಕಠಿಣಹೃದಯವೂ ಆಗಿ ಬಡತವನ್ನು ದೂರ ಮಾಡುತ್ತಿದ್ದರೂ ಮೋಕ್ಷವನ್ನು ಕೊಡದ ಚಿಂತಾಮಣಿಯು, ಕಾರುಣ್ಯರಸನೇತ್ರಯುಕ್ತಶಿವತತ್ತ್ವ ರೂಪನೂ ಕಮಲಮೃದುಹೃದಯನೂ ಆಗಿ ನಿನ್ನ ಪಾದಾಧ್ಯಾನ ಸಂಸ್ಕಾರವುಳ್ಳ ಭಕ್ತರಿಗೆ ಭೋಗವಶಗತನೆನಿಸಿದ ಮೋಕ್ಷಪುಣ್ಯೋದ್ಯಾನ ಸ್ವರೂಪನಾದ ನಿಮಗೆ ಸಮಬಾರದು, ನಿಸ್ಸೀಮ ಗುರುವೇ ತೋಂಟದ ಸಿದ್ಧಲಿಂಗನೆಂಬ ಕಲ್ಪತರುವೇ.

೧೩

ಮಾತರಿಯದಧಮಪಶುಜಾತಿಯು ತೃಣಗ್ರಾಹಿ
ಯೋತು ಪಾಲೀವುದೊಂದೇ ಗುಣಂ ಸುರಧೇನು
ವೇ ತೆರದೆ ನಿಮಗೆ ಪಾಸಟಿಯೆನಲ್ಬಹುದೆ ಶಿವತತ್ತ್ವೋಪದೇಶ ಸಿದ್ಧಾ
ಖ್ಯಾತ ಗುರುರೂಪವಿಧಿರಂಧ್ರದೊಳು ಸುಧೆಯನ[೧೨][ನು][೧೨]
ಭೂತಿಯಿಂದುಂಡು ಯತಿಗಳ ಸಾರ್ಥತೆ[೧೩][ಗೆಯ][೧೩] **ಮೃತ**
ಸಾತಿಶಯ ದಾನಿ ಮದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅಧಮ–ಹೀನ, ಕೀಳು; ತೃಣಗ್ರಾಹಿ–ಹುಲ್ಲನ್ನು ತಿನ್ನುವುದು, ಓತು–ಪ್ರೀತಿಯಿಂದ, ಪಾಲ್–ಹಾಲು, ಈಯು–ಕೊಡು, ಸುರಧೇನು–ಕಾಮಧೇನು, ಏ ತೆರದೆ–ಯಾವ ರೀತಿಯಲ್ಲಿ ? ಪಾಸಟಿ–ಸಮಾನ, ಆಖ್ಯಾತ–ಪ್ರಸಿದ್ಧ, ವಿಧಿರಂಧ್ರ–ಬ್ರಹ್ಮರಂಧ್ರ, ಸುಧೆ–ಅಮೃತ, ಅನುಭೂತಿ–ಅನುಭವ, ಸಾತಿಶಯ–ಅತಿ ಹೆಚ್ಚಾದ.

* ಮಾತುಬಾರದ ಹೀನಪಶುಜಾತಿಯೂ ಹುಲ್ಲು ತಿನ್ನುವಂಥದೂ ಆಗಿರುವ ಆದರೆ ಪ್ರೀತಿಯಿಂದ ಹಾಲು ಕೊಡುವ ಗುಣವೊಂದನ್ನು ಮಾತ್ರ ಹೊಂದಿರುವ ಕಾಮಧೇನುವು, ಶಿವತತ್ತ್ವೋಪದೇಶಸಿದ್ಧನೆಂಬ ಪ್ರಸಿದ್ಧಗುರುರೂಪನಾಗಿ ಬ್ರಹ್ಮರಂಧ್ರದಲ್ಲಿರುವ ಅಮೃತವನ್ನು ಅನುಭವದಿಂದ ಉಂಡು ಮುನಿಗಳ ಕಲ್ಯಾಣಕ್ಕಾಗಿ ಅಮೃತವನ್ನು ಅತಿಶಯವಾಗಿ ದಾನ ಮಾಡುವ ನಿಮಗೆ ಸಮವೆನ್ನಬಹುದೇ? ನನ್ನ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೪

ಪರುಷ ತಾನಾದೊಡಂ ಸರಿಯಲ್ತು ನಿಮ್ಮಡಿಗೆ
ಪರುಷ ಸೋಂಕಿದ ಲೋಹ ಚಿನ್ನವಾಯ್ತದರಂತೆ
ಪರುಷವೆನಿಸಿದುದಿಲ್ಲ ದೇವ ನಿಮ್ಮಂಘ್ರಿಯಂ ನೆರೆ ಪೊರ್ದಿದಧಮ ನರನು
ಗುರುರೂಪನಪ್ಪನದರಿಂ ಪರಾತ್ಪರ ಮಹಿಮ

೧೨–೧೨ ಭಿ (ಮೂ), ೧೩–೧೩ ಗ (ಮೂ).

ಧರ ಜಿತೇಂದ್ರಿಯ ಪಾಲಿಸೆನ್ನ ಸದ್ಗುಣ ರನ್ನ

ದುರಿತಾಚಲಸ್ವರುವೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪರುಷ–ಮುಟ್ಟಿದುದನ್ನು ಚಿನ್ನವಾಗಿಸುವ ಕಲ್ಲು, ಸೋಂಕು–ಮುಟ್ಟು, ಲೋಹ–ಧಾತು, ಅಂಘ್ರಿ–ಪಾದ, ಪೊರ್ದು–ಹೊಂದು, ನರ–ಮನುಷ್ಯ, ಪರಾತ್ಪರ–ಶ್ರೇಷ್ಠತಮ, ಜಿತೇಂದ್ರಿಯ–ಇಂದ್ರಿಯಗಳನ್ನು ಜಯಿಸಿದವ, ರನ್ನ–ರತ್ನ, ದುರಿತಾಚಾಲ–ಪಾಪವೆಂಬ ಪರ್ವತ, ಸ್ವರು–ಸಿಡಿಲು.

* ಪರುಷ ಮುಟ್ಟಿದ ಲೋಹ ಚಿನ್ನವಾಗುತ್ತದೆಯೇ ಹೊರತು ಪರುಷವಾಗಲಾರದು. ಕಾರಣ ಆ ಪರುಷ ನಿಮ್ಮ ಪಾದಕ್ಕೆ ಸಮಬಾರದು. ಯಾಕೆಂದರೆ ನಿಮ್ಮ ಪಾದವನ್ನು ಆಶ್ರಯಿಸಿದ ಅಲ್ಪಮಾನವನು ಗುರುಸ್ವರೂಪನೇ ಆಗುವನು, ಆದುದರಿಂದ ಶ್ರೇಷ್ಠತಮ ಮಹಿಮಾಧರನೇ, ಇಂದ್ರಿಯಗಳನ್ನು ಜಯಸಿದವನೇ, ಸದ್ಗುಣರತ್ನನೇ, ಪಾಪಪರ್ವತಕ್ಕೆ ಸಿಡಿಲಾಗಿರುವವನೇ ನನ್ನನ್ನು ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೫

ಮುನಿಗೆ ಕೈಸೆರೆಯಾಗಿ ಭಂಗಮಂ ತಳೆದ ಜೀ

ವನದಿಯಂತಲ್ಲ ಮುನಿಗಣಸೇವಿತ ಪಾದ

ವನಜ ಶರಣಾಗತರ ಭವಭಂಗವಂ ಕೆಡಿಸಿ ಜೀವನ ಗುಣಗಳ ತೊರೆಸಿ

ವಿನುತ ಸದ್ಯೋನ್ಮುಕ್ತರಂ ಮಾಳ್ಪ ಕರುಣಾಬ್ಧಿ

[೧೪]**[ಇ]**[೧೪] **ನಿತು ಕಡೆಗಣ್ಬೆಳಗಿನಿಂದೆನ್ನ ಪೊರೆ ಬಿಡದೆ**

ಘನತೇಜ ಯತಿರಾಜ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಭಂಗ–ನಾಶ, ಹಾನಿ; ತಳೆ–ಹೊಂದು, ಜೀವನದಿ–ಸಮುದ್ರ, ನಿಸೇವಿತ–ವಿಶೇಷವಾಗಿ ಸೇವಿಸಲ್ಪಟ್ಟ, ವನಜ–ಕಮಲ, ಭವಭಂಗ–ಸಂಸಾರಯಾತನೆ, ಜೀವನ ಗುಣಂ–ಜೀವಭಾವ, ವಿನುತ–ಶ್ರೇಷ್ಠ, ಸದ್ಯೋನ್ಮುಕ್ತ–ತಕ್ಷಣ ಮುಕ್ತನಾಗುವ, ಅಬ್ಧಿ–ಸಮುದ್ರ, ಇನಿತು–ಇಷ್ಟು, ಸ್ವಲ್ಪ; ಪೊರೆ–ರಕ್ಷಿಸು, ಯತಿರಾಜ–ಯತಿಚಂದ್ರ.

* (ಅಗಸ್ತ್ಯ)ಮುನಿಗೆ ಕೈಸೆರೆಯಾಗಿ ಹಾನಿಗೊಳಗಾದ ಸಮುದ್ರದ ಹಾಗೆ ನೀನಲ್ಲ. ಮುನಿಸಮೂಹದಿಂದ ಸೇವಿತ ಪಾದಕಮಲನಾಗಿ, ಶರಣಾಗತರ ಸಂಸಾರಯಾತನೆಯನ್ನು ಕೆಡಿಸಿ, ಜೀವಭಾವವನ್ನು ಬಿಡಿಸಿ ತಕ್ಷಣ ಮುಕ್ತರನ್ನಾಗಿ ಮಾಡುವ ಕರುಣಾಸಾಗರನು ನೀನು. ಘನತೇಜದ ಯತಿಚಂದ್ರನೇ ಇನಿತು ಕಡೆಗಣ್ಣ ಬೆಳಗಿನಿಂದ ನನ್ನನ್ನು ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೪–೧೪ ನೀ (ಮೂ)

೧೬

ದೇವ ನಿಮ್ಮಯ ಪದಸ್ಮರಣೆಯುಂ ಪಾದಾಂಬು
ಸೇವನೆಯು ಚರಣದರುಶನ ಕಾಶಿ ಕೇತಾರ
ಪಾವನ ಶ್ರೀಗಿರಿಯ ಮಹಿಮೆಗಳನಿಳಿಕೆಯ್ದು ಕ್ಷಿಪ್ರದಿಂ ಸನ್ಮುಕ್ತಿಯಾ
ಈಯುತಿಹುದತಿ ಸುಲಭದಿಂದೆ ನಿಮ್ಮಡಿಗೆ ತೊಣೆ
ಯಾವ ಕ್ಷೇತ್ರಂಗಳೊಳವಖಿಳಲೋಕಂಗಳೊಳು
ನೀ ಪಾಲಿ[೧೫][ಸುವು][೧೫] **ದೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ**

* ಪದಸ್ಮರಣೆ–ಪಾದಧ್ಯಾನ, ಪಾದಾಂಬುಸೇವನೆ–ಪಾದಜಲಸೇವನೆ, ಚರಣ ದರುಶನ–ಪಾದದರ್ಶನ, ಇಳಿಕೆಯ್–ತಿರಸ್ಕರಿಸು, ಕ್ಷಿಪ್ರ–ತೀವ್ರ, ಸನ್ಮುಕ್ತಿ–ಶ್ರೇಷ್ಠತರವಾದ ಮುಕ್ತಿ, ಈಯು–ನೀಡು, ತೊಣೆ–ಸಮಾನ, ಒಳವು–ಉಂಟು.

* ದೇವಾ, ನಿಮ್ಮ ಪಾದಧ್ಯಾನ ಪಾದಜಲಸೇವನೆ ಪಾದದರ್ಶನಗಳು (ಕ್ರಮವಾಗಿ) ಕಾಶಿ ಕೇದಾರ ಶ್ರೀಶೈಲಗಳ ಮಹತ್ವವನ್ನೂ ಕಡಿಮೆ ಮಾಡಿ ತಕ್ಷಣದಲ್ಲಿಯೇ ಸುಲಭದಿಂದ ಶ್ರೇಷ್ಠಮುಕ್ತಿಯನ್ನು ನೀಡುತ್ತವೆ. ನಿಮ್ಮ ಪಾದಗಳಿಗೆ ಸರಿಸಮಾನವಾಗಿ ಈ ಸಮಸ್ತಲೋಕದಲ್ಲಿ ಯಾವ ಕ್ಷೇತ್ರಗಳುಂಟು? ನೀವು ಪಾಲಿಸುವುದಯ್ಯಾ, ಎನ್ನ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೭

ವೃದ್ಧಶ್ರವಂ ಮೇಲೆ ದುಶ್ಚ್ಯವನ ಮುನಿಶಾಪ
ಬದ್ಧ ಮಾಯಾಮುದ್ರಿತಾಂಗನೆಲ್ಲಾಗಳ್ಪ್ರ
ಸಿದ್ಧವಹ ನಿರ್ಜರಾಧಿಪ ಪದವನುಲ್ಲಂಘಿಸಿದ ಜರಾಮರಣರಹಿತಾ
ಸಿದ್ಧಮುನಿವರದ ಶಿವಪದಪಟ್ಟಬದ್ಧಜಯ
ಶುದ್ಧ ಪಂಚಾಕ್ಷರಿಯೆ ತನು[೧೬][ವನಾಂ][೧೬]**ತಿಹ ಘನ**
ಪ್ರೋದ್ಧತ ಮಹಾಮಹಿಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ವೃದ್ಧಶ್ರವ–ಹಿರಿದಾದ ಕೀರ್ತಿವುಳ್ಳವ, ಇಂದ್ರ; ದುಶ್ಚ್ಯವನ–ಪರಾಭವಗೊಳಿಸಲಿಕ್ಕೆ ಅಸಾಧ್ಯನಾದವ, ಇಂದ್ರ; ಮುನಿಶಾಪಬದ್ಧ–ಅಹಲ್ಯೆಯನ್ನು ಮೋಹಿಸಿ ಅವಳ ಗಂಡನಾದ ಗೌತಮಮುನಿಯಿಂದ ಶಾಪಗ್ರಸ್ತನಾದವ, ಇಂದ್ರ; ಮಾಯಾಮುದ್ರಿತಾಂಗ–ಶರೀರದ ಮೇಲೆ ಯೋನಿ ಗುರುತುಗಳುಳ್ಳವ, ಇಂದ್ರ; ನಿರ್ಜರಾಧಿಪಪದ–ಇಂದ್ರಪದವಿ, ಜರಾ–ಮುಪ್ಪು, ವರದ–ವರವನ್ನು ದಯಪಾಲಿಸುವವ, ಅಂತ–ಹೊಂದಿದ, ಪ್ರೋದ್ಧತ(ಪ+ಉದ್ಧತ)–ಅತಿಶ್ರೇಷ್ಠ.

* ವೃದ್ಧಶ್ರವ, ದುಶ್ಚ್ಯವನ, (ಗೌತಮ) ಮುನಿಶಾಪಯುಕ್ತ, ಯೋನಿಮುದ್ರಿತ ಶರೀರಿಯೆನಿಸಿದ ಇಂದ್ರನ ಪ್ರಸಿದ್ಧ ಪದವಿಯನ್ನೂ ಅಲಕ್ಷಿಸಿ (ಕ್ರಮವಾಗಿ) ಮುಪ್ಪು ಸಾವುಗಳನ್ನು ಮೀರಿದವನೂ

೧೫–೧೫ ಪು (ಮೂ), ೧೬–೧೬ ವಾ (ಮೂ).

ಸಿದ್ಧಮುನಿಗಳಿಗೆ ವರವನ್ನು ನೀಡುವವನೂ ಶಿವಪದಪಟ್ಟ ಬದ್ಧನೂ ಜಯಶುದ್ಧವಾದ ಪಂಚಾಕ್ಷರೀ ಮಂತ್ರಶರೀರಿ–ಹೀಗೆ ಅತಿಶ್ರೇಷ್ಠವಾದ ಮಹಾಪದವಿಯನ್ನು ಹೊಂದಿದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೮

ಮಗಳ ರಮಿಸಿದ ದೋಷಿ ಶುನಕಯುತಗೃಹವವನ
ಮೊಗವು ಮೂಕೊರತೆಯಂ ಕೂಡಿಕೊಂಡಿಹ ಮೊಂಡ
ಜಗವರಿಯೆ ಜಡಜಭವಪದ ಹಾಸ್ಯಮೆಂದುಳಿದು ಪರಮನಿಸ್ಸಂಗಿಯಾಗಿ
ತಗುಳ್ದು ಪಂಚೇಂದ್ರಿಯವೆನಿಪ್ಪ ಶುನಕಂಗಳಂ
ಬಗೆವೆಚ್ಚಿ ಸುಜ್ಞಾನಶಕ್ತಿಯೊಡನಾಡುತಿಹ
ಸಗುಣ ನಿರ್ಗುಣರೂಪ ಗುರುವೆ ತೊಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ರಮಿಸು–ಭೋಗಿಸು, ಮೊಗ–ಮುಖ, ಬಾಯಿ; ಮೂಕೊರತೆ–ಮೂಗನ್ನು ಕೊರೆಯಿಸಿಕೊಂಡವಳು, ಸರಸ್ವತಿ; ಮೊಂಡ–ಅಂಗಹೀನ, ಜಡಜಭವ–ಕಮಲದಲ್ಲಿ ಹುಟ್ಟಿದವ, ಜಡತೆಯಲ್ಲಿ ಹುಟ್ಟಿದವ, ಬ್ರಹ್ಮ; ಪದ–ಪದವಿ, ಸ್ಥಾನ; ತಗುಳ್–ಬಿಡು, ಶುನಕ–ನಾಯಿ, ಬಗೆ–ಮನಸ್ಸು, ಸಗುಣ–ಸಾಕಾರ, ನಿರ್ಗುಣ–ನಿರಾಕಾರ.

* ಮಗಳನ್ನೇ ಮೋಹಿಸಿದ ದೋಷಿ, ನಾಯಿ(ವೇದ)ಗಳನ್ನೊಳಗೊಂಡ ಗೃಹವುಳ್ಳವ, ಮೂಗನ್ನು ಕೊರೆಯಿಸಿಕೊಂಡ ಸರಸ್ವತಿಯನ್ನು ಬಾಯಿಯಲ್ಲಿ ತಾಳಿದ ಮೊಂಡ ಎನಿಸಿದ ಬ್ರಹ್ಮನ ಲೋಕಪ್ರಸಿದ್ಧಪದವಿಯು ಹಾಸ್ಯಾಸ್ಪದವಾದುದೆಂದು ಬಿಟ್ಟು (ಕ್ರಮವಾಗಿ) ಪರಮ ನಿಸ್ಸಂಗಿಯೆನಿಸಿ, ಪಂಚೇಂದ್ರಿಯವೆಂಬ ನಾಯಿಗಳನ್ನು ತೊರೆದು, ಸಂತೋಷದಿಂದ ಸಜ್ಞಾನಶಕ್ತಿಯೊಡನೆ ಕೂಡಿರುವ ಸಾಕಾರ ನಿರಾಕಾರ ರೂಪದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೯

ಭೃಗು ಸತಿಯ ದೂಸರಿಂ ಶಪಿಸಿದಂ ಕೋಪದಿಂ
ನೆಗೆದೊದೆದನಾ ದಧೀಚಂ ಶಂಕುಕರ್ಣ ಮುನಿ
ದುಗಿದು ಮುಂದಲೆಯ ಕೊಯ್ದಂ ಜಲಂಧರದೈತ್ಯ ನಾಗಪಾಶದೊಳು ಕಟ್ಟಿ
ಗಗನಕೀಡಾಡಿದನಧೋಕ್ಷಜನ ಪದವಿ ತಾಂ
ನಗೆಗೆಡೆಯೆನುತ ಜರೆದ ಮುನಿವರದ ಶಿವಯೋಗ
ಗಗನಮಾರ್ಗವನಡರ್ದ ಗುರು[೧೭][ವೆ][೧೭] ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

೧೭–೧೭ x (ಮೂ)

* ಭೃಗುಸತಿ–ಭೃಗುಮಹರ್ಷಿಯ ಹೆಂಡತಿಯಾದ ಖ್ಯಾತಿ (ಇವಳನ್ನು ಕೊಂದ ಕಾರಣ ವಿಷ್ಣುವಿಗೆ ಭೂಮಿಯಲ್ಲಿ ಜನಿಸುವ ಶಾಪ ತಟ್ಟಿತು), ದೂಸರ್–ಕಾರಣ, ನಿಮಿತ್ತ; ದಧೀಚ–ಅಥರ್ವಣ ಋಷಿಯ ಮಗ, ಶಂಕುಕರ್ಣ–ಚಂದ್ರವಂಶದ ಜನಮೇಜಯನ ಎರಡನೆಯ ಮಗ, ಉಗಿ–ಜಗ್ಗು, ಜಲಂಧರ–ಒಬ್ಬ ರಾಕ್ಷಸ, ಸಾಗರನ ಮಗ (ತಂದೆ ಸಾಗರನಿಂದ ಪಡೆದ ವಸ್ತುಗಳನ್ನು ತಿರುಗಿ ಕೊಡಲು ತಿರಸ್ಕರಿಸಿದ ಇಂದ್ರನೊಂದಿಗೆ ಜಲಂಧರನು ಭೀಕರ ಯುದ್ಧ ನಡೆಸುತ್ತಾನೆ); ಈಡಾಡು–ಬೀಸಾಡು, ಅಧೋಕ್ಷಜ–ಇಂದ್ರ.

* ಭೃಗುಮುನಿಯು ತನ್ನ ಹೆಂಡತಿಯಾದ ಖ್ಯಾತಿಯನ್ನು ಕೊಂದು ಕಾರಣ ಶಾಪ ನೀಡಿದ. ದಧೀಚನು ಸಿಟ್ಟಿನಿಂದ ಮೇಲೆ ನೆಗೆದು ಒದೆದ. ಶಂಕುಕರ್ಣ ಕೋಪದಿಂದ ಜಗ್ಗಿ ಮುಂದಲೆಯ ಮುಡಿಯನ್ನು ಕೊಯ್ದ. ಜಲಂಧರನೆಂಬ ರಾಕ್ಷಸನು ನಾಗಪಾಶದಲ್ಲಿ ಕಟ್ಟಿ ಆಕಾಶಕ್ಕೆ ಬೀಸಾಡಿದ. ಇಂಥ ವಿಷ್ಣುವಿನ ಪದವಿಯನ್ನು, ನಗೆಗೇಡೆಯೆಂದು ತಿರಸ್ಕರಿಸಿದವನೂ ಮುನಿಗಳಿಗೆ ವರ ನೀಡಿದವನೂ ಶಿವಯೋಗಗಗನಮಾರ್ಗವನ್ನು ಏರಿದವನೂ ಆದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೦

ಚಾರುತ್ರಿಕರಣದೊಳು ಸ್ತ್ರೀಯನುಳಿದಂಗರ್ಧ
ನಾರೀಶನೆಂತು ಸರಿ ಹೊನ್ನಂ ನಿರಾಕರಿಸಿ
ದಾರೂಢಗೆಣೆಯೆ ವಸುಗಿರಿನಿಲಯ ಮಣ್ಣಿನಾಕಾಂಕ್ಷೆಯಂ ಬಿಟ್ಟಧಿಕಗೆ
ಈರೇಳು ಭುವನಮಂ ಪೊಡೆಯೊಳಿಟ್ಟೋವುವವ
ವಾರಿಗೆಯೆ ಶಾಂತಂಗಮುಗ್ರ ಸ[೧೮][ಮ][೧೮]ನೇ ನಿಮಗ
ದಾರು ಸರಿಯಧಿಕ ನೀಂ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಚಾರು–ಮನೋಹರ, ತ್ರಿಕರಣ–ಮನಸ್ಸು ಮಾತು ದೇಹ, ಅರ್ಧನಾರೀಶ–ಶಿವ, ಆರೂಢ–ವಿರಕ್ತ, ಎಣೆ–ಸಮಾನ, ವಸುಗಿರಿನಿಲಯಂ–ಬೆಳ್ಳಿಬೆಟ್ಟವಾದ ಕೈಲಾಸವನ್ನೇ ಮನೆ ಮಾಡಿಕೊಂಡಿರುವವ, ಶಿವ; ಆಕಾಂಕ್ಷೆ–ಆಸೆ, ಈರೇಳು ಭುವನ–ಹದಿನಾಲ್ಕು ಲೋಕ, ಪೊಡೆ–ಹೊಟ್ಟೆ, ಓವು–ಕಾಪಾಡು, ವಾರಿಗೆ–ಸಮಾನ, ಉಗ್ರ–ರುದ್ರ.

* ಕಾಯಾವಾಚಾಮನಸಾ ಹೆಣ್ಣನ್ನು ತೊರೆದವನಾದ (ನಿನಗೆ) (ಅರ್ಧನಾರೀಶನಾದ) ಶಿವನು ಹೇಗೆ ಸಮಾನ? (ಕಾಯಾವಾಚಾಮನಸಾ) ಹೊನ್ನನು ನಿರಾಕರಿಸಿದ ವಿರಕ್ತನಾದ (ನಿನಗೆ) (ಬೆಳ್ಳಿಯ ಬೆಟ್ಟವಾದ ಕೈಲಾಸವನ್ನೇ ವಾಸಸ್ಥಾನ ಮಾಡಿಕೊಂಡಿರುವ) ಶಿವನು ಹೇಗೆ ಸಮಾನ? ಮಣ್ಣಿನ ಆಸೆಯನ್ನೇ ಬಿಟ್ಟ (ನಿನಗೆ) ಹದಿನಾಲ್ಕು ಲೋಕಗಳನ್ನು ಹೊಟ್ಟೆಯಲ್ಲಿಟ್ಟುಕೊಂಡು ಕಾಪಾಡುವ

೧೮–೧೮ x (ಮೂ)

ಶಿವನು ಸರಿಯೇ? ಶಾಂತನಾದ ನಿನಗೆ ಉಗ್ರನಾದ ಶಿವನು ಸಾಟಿಯೇ? ನಿನಗೆ ಯಾರು ಸರಿ, ಯಾರು ಶ್ರೇಷ್ಠ? ನೀವಲ್ಲದೆ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೧

ಏಳು ವ್ಯಸನಗಳೆಂಬ ಶಿಖಿಯ ನಾಲಗೆಗಳಂ
ಸೀಳಿ ದುರಹಂಕಾರವೆಂಬ ರಕ್ಕಸನೆರ್ದೆಯ
ಹೋಳಿ ಮಾಯಾಪ್ರಪಂಚಂ ಕೊಡಹಿ ವೀರ ವೃಷಭೇಂದ್ರ ಭೃಂಗೀಶರದಟಂ
ತಾಳಿ ಭಕ್ತಿಜ್ಞಾನವೈರಾಗ್ಯಮಂ ಶರಣ
ಜಾಳಕೊಲಿದೀವ ಭೂಭಾಗದ ವಿರಕ್ತಕುಲ
ಮೌಳಿ ಪಾಲಿಪುದೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತುರುವೇ

* ಏಳುವ್ಯಸನ–ಜೂಜು ಮಾಂಸಭಕ್ಷಣ ಸುರಾಪಾನ ವೇಶ್ಯಾಗಮನ ಪರನಾರೀ ಗಮನ, ಮೃಗಯಾ ಚೌರ್ಯ; ಶಿಖಿ–ಬೆಂಕಿ, ರಕ್ಕಸ–ರಾಕ್ಷಸ, ಕೊಡಹಿ–ಕೆಡವಿ, ವೀರ–ವೀರಭದ್ರ, ವೃಷಭೇಂದ್ರ–ಶಿವನ ವಾಹನವಾದ ನಂದಿ, ಭೃಂಗೀಶ–ಶಿವನ ಮುಂದೆ ಮೂರು ಕಾಲಿನಿಂದ ನರ್ತಿಸುವ ನಟ, ಅದಟ–ಪರಾಕ್ರಮ, ಜಾಳ–ಸಮೂಹ, ಮೌಳಿ–ನಾಯಕ, ಶಿಖರ.

* ಸಪ್ತವ್ಯಸನಗಳೆಂಬ ಅಗ್ನಿ(ಯಜ್ಞ)ಯ ನಾಲಗೆಯನ್ನು ಸೀಳಿ, ದುರಹಂಕಾರವೆಂಬ ರಾಕ್ಷಸನ ಎದೆಯನ್ನು ಹೋಳಿ, ಮಾಯಾಪ್ರಪಂಚವನ್ನು ಕೆಡವಿ, (ಕ್ರಮವಾಗಿ) ವೀರಭದ್ರ ವೃಷಭೇಂದ್ರ ಹಾಗೂ ಭೃಂಗೀಶರ ಪರಾಕ್ರಮವನ್ನು ತಾಳಿ, (ಕ್ರಮವಾಗಿ) ಭಕ್ತಿಜ್ಞಾನವೈರಾಗ್ಯವನ್ನು ಶರಣಸಮೂಹಕ್ಕೆ ಪ್ರೀತಿಯಿಂದ ದಯಪಾಲಿಸುವ ಭೂಲೋಕದ ವಿರಕ್ತಕುಲನಾಯಕನೇ ನನ್ನನ್ನು ಕಾಪಾಡು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೨

ಗುರುಕರುಣವೆಂಬ ಸುರಿಗೆಯೊಳು ಸಂಸೃತಿಯೆಂಬ
ಮರೆಯನಿರಿದೀಶ್ವರಜ್ಞಾನವೆಂಬಾ ಶರದಿ
ಮುರು ಪುರಾಕೃತಕರ್ಮವೆಂಬ ಹರಿಣನನೆಚ್ಚು ಸತ್ಯವೆಂಬಾ ಸಬಳದಿಂ
ದುರುಳ ಮಾಯಾಮೋಹವೆಂಬ ^೧೯^[ರುಕ್ಷವ]^೧೯^ **ತಿವಿದು**
ಪರತರ ಕಿರಾತರುದ್ರಾವತಾರನೊ ಎನಲ್
ಮೆರೆದ ನತಜನವರದ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

೧೯–೧೯ ವೃಕ್ಷವಂ (ಮೂ)

* ಸುರಿಗೆ–ಖಡ್ಗ, ಸಂಸೃತಿ–ಸಂಸಾರ, ಮರೆ–ಒಂದು ಜಾತಿಯ ಜಿಂಕೆ, ಶರ–ಬಾಣ, ಉರು–ಅಧಿಕ, ಪುರಾಕೃತಕರ್ಮ–ಹಿಂದೆ ಮಾಡಿದ ಕರ್ಮ, ಸಂಚಿತಕರ್ಮ; ಹರಿಣಿ–ಜಿಂಕೆ, ಎಚ್ಚು–ಬಾಣಪ್ರಯೋಗ ಮಾಡಿ, ಸಬಳ–ಈಟಿ, ಬರ್ಚಿ; ದುರುಳ–ದುಷ್ಟ, ರುಕ್ಷ–ಕರಡಿ, ಪರತರ–ಶ್ರೇಷ್ಠ, ಕಿರಾತರುದ್ರ–ಶಿವನ ೧೫ನೆಯದಾದ ಕಿರಾತಲೀಲೆ, ನತಜನವರದ–ನಮಸ್ಕರಿಸಿದ ಜನರಿಗೆ ವರವನ್ನು ದಯಪಾಲಿಸುವವ.

* ಗುರುಕರುಣವೆಂಬ ಖಡ್ಗದಿಂದ ಸಂಸಾರವೆಂಬ ಜಿಂಕೆಯನ್ನು ಕೊಂದು, ಶಿವಜ್ಞಾನವೆಂಬ ಬಾಣದಿಂದ ಪುರಾಕೃತಕರ್ಮವೆಂಬ ಹರಿಣವನ್ನು ಹೊಡೆದು, ಸತ್ಯವೆಂಬ ಈಟಿಯಿಂದ ದುಷ್ಟಮಾಯಾಮೋಹವೆಂಬ ಕರಡಿಯನ್ನು ತಿವಿದು, ಶ್ರೇಷ್ಠ ಕಿರಾತರುದ್ರನ ಅವತಾರನೋ ಎಂಬಂತೆ ಮೆರೆದ ಭಕ್ತಜನವರದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ,

೨೩

ಕಾಮಾದಿಗಳ ದಹಿಸಿ ತ್ರಿವಿಧ ತನುಗುಣಮೆಂಬ
ಗ್ರಾಮಗಳ ಗೆದ್ದು ಕಾಲನೊದೆದುವಜ್ಞಾನ
ತಾಮಸವೆನಿಪ್ಪಂಧಕಾಸುರನ ಕೆಡೆ ಮೆಟ್ಟಿ ಮಂತ್ರದೊಳು ನಲಿದಾಡುತಾ
ಹೇಮಭೂಸ್ತ್ರೀಯೆಂಬ ಶಕ್ರವಿಧಿವಿಧುಗಳ
ಸ್ತೋಮಮಂ ಸಂಹರಿಸಿದನಘ ಭೂರುದ್ರ ಜಯ
ಭೀಮ ಯತಿಪಲಲಾಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತ್ರಿವಿಧ ತನುಗುಣ–ಸತ್ವರಜತಮವೆಂಬ ಮೂರು ಗುಣಗಳು, ಕಾಲ–ಯಮ, ತಾಮಸ–ಕತ್ತಲು, ಮೆಟ್ಟು–ತುಳಿ, ಹೇಮ–ಬಂಗಾರ, ಶಕ್ರ–ಇಂದ್ರ, ವಿಧಿ–ಬ್ರಹ್ಮ, ವಿಧು–ವಿಷ್ಣು, ಸ್ತೋಮ–ಸಮೂಹ, ಅನಘ–ಪಾಪರಹಿತ, ಭೂರುದ್ರ–ಭೂಲೋಕದ ರುದ್ರ, ಯತಿಪ–ಯತಿಗಳ ಒಡೆಯ, ಲಲಾಮ–ಶ್ರೇಷ್ಠ.

* ಕಾಮಾದಿಗಳನ್ನು ಸುಟ್ಟು, ತ್ರಿವಿಧ ತನುಗುಣ(ಸತ್ವರಜತಮ)ವೆಂಬ ಪುರಗಳನ್ನು ಜಯಿಸಿ, ಯಮನನ್ನು ಒದೆದು, ಅಜ್ಞಾನ ತಾಮಸನೆನಿಸುವ ಅಂಧಕಾಸುರನನ್ನು ಕೆಡೆ ತುಳಿದು, ಮಂತ್ರದಲ್ಲಿ ನಲಿದಾಡುತ್ತ ಹೊನ್ನುಮಣ್ಣುಹೆಣ್ಣೆಂಬ ಇಂದ್ರ ಬ್ರಹ್ಮ ವಿಷ್ಣು ಸ್ತೋಮವನ್ನು ನಾಶಮಾಡಿದ ಪಾಪರಹಿತನಾದ ಭೂಲೋಕದ ರುದ್ರನೇ ಜಯಭೀಮನೇ ಯತಿಪತಿಶ್ರೇಷ್ಠನೇ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೪

ನಿನ್ನಂಘ್ರಿನಖಮುಕುರಮಂ ನಿರೀಕ್ಷಿಸಿದ ನರ
ತನ್ನ ಪೂರ್ವಾಪರವನೆಲ್ಲಮಂ ತಿಳಿದು ಶಿವ

ಗಂ ನೋೞ್ಪುಡಾನನನ್ಯಂ ಚಿ[20][ದ][20] ಂಶಿಕನೀ ತನುಗುಣ[21][ದಿಂ][21] ಮರೆದೆನೆಂದು
ಚೆನ್ನಾಗಿ ಸ್ವಸ್ವರೂಪವ ಕಂಡು ಭಕ್ತಿ ಸಂ
ಪನ್ನತೆಯೊಳುಂ ಮುಕ್ತನಹನು ಸುಲಭದೆ ನಿಮ್ಮ
ಪನ್ನಳಿನವೆರ್ದೆಯೊಳಿಡು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅಂಘ್ರಿ–ಪಾದ, ನಖ–ಉಗುರು, ಮುಕುರ–ಕನ್ನಡಿ, ನರ–ಮನುಷ್ಯ, ಪೂರ್ವಾಪರ–ಭೂತಭವಿಷ್ಯ, ಅನನ್ಯ–ಬೇರೆಯಲ್ಲದ, ಚಿದಂಶಿಕ–ಚಿದ್ರೂಪಿಯಾದ ಶಿವನ ಅಂಶ, ತನುಗುಣ–ಸತ್ವರಜತಮವೆಂಬ ಮೂರು ತನುಗುಣಗಳು, ಪನ್ನಳಿನ–ಪಾದಕಮಲ.

* ನಿನ್ನ ಪಾದದ ಉಗುರೆಂಬ ಕನ್ನಡಿಯನ್ನು ನೋಡುವಷ್ಟರಲ್ಲಿ ಮಾನವರು ತನ್ನ ಭೂತಭವಿಷ್ಯತ್ ಅವಸ್ಥೆಯನ್ನು ತಿಳಿದುಕೊಂಡು ಶಿವನಿಗೆ ನಾನು ಅನ್ಯನಲ್ಲ; ಅವನ ಚಿದಂಶಿಕನು, ದೇಹಗುಣದಿಂದ ಇವನ್ನು (ಈ ಅದ್ವೈತಭಾವವನ್ನು) ಮರೆತುಬಿಟ್ಟೆನೆಂದು ತಿಳಿವು ಮೂಡಲು ಸ್ವಸ್ವರೂಪವನ್ನು ಅರ್ಥಮಾಡಿಕೊಂಡು ಭಕ್ತಿಸಂಪನ್ನತೆಯಿಂದ ಸಹಜವಾಗಿ ಮುಕ್ತನೆ ಆಗುತ್ತಾನೆ. ನಿಮ್ಮ ಪಾದಕಮಲವನ್ನು ಎನ್ನ ಹೃದಯದಲ್ಲಿಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೫

ಮಡುಗಟ್ಟಿನಿಂದು ಪಾಂಸೆಯು ಸುತ್ತಿ ಜಡಜಕ್ಕೆ
ಯೊಡಲಾದ ಕೃತಕಸರಸಿಯನುಳಿದುವಾಧಾರ
[22][ಬಿಡದೆ ಸ್ವಾಧಿಷ್ಠ ಮಣಿಪೂರನಾಹತಶುದ್ಧಿಯಾಜ್ಞೆ ವಿಧಿರಂಧ್ರವೆಂಬಾ][22]
ಷಡುಚಕ್ರಕಮಲದ ದಳಂಗಳೊಳು ಸಂಚರಿಸಿ
ಮೃಡಭಕ್ತಿಮಾನಸಮಹಾಸರೋವರದೊಳೆಡೆ
ವಿಡದಿರ್ಪ ಯತಿಹಂಸ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪಾಂಸೆ–ಪಾಚಿ, ಹಾವಸೆ; ಜಡಜ–ಕಮಲ, ಸರಸಿ–ಸರೋವರ, ಆಧಾರ–ಗುಧಸ್ಥಾನ, ಸ್ವಾದಿಷ್ಠಾನ–ಗುಹ್ಯಸ್ಥಾನ, ಮಣಿಪೂರಕ–ನಾಭಿಸ್ಥಾನ, ಅನಾಹತ–ಹೃದಯಸ್ಥಾನ, ವಿಶುದ್ಧಿ–ಕಂಠಸ್ಥಾನ, ಆಜ್ಞೇಯ–ಭ್ರೂಮಧ್ಯಸ್ಥಾನ, ವಿಧಿರಂಧ್ರ–ಬ್ರಹ್ಮರಂಧ್ರ, ಷಡುಚಕ್ರ–ಆರುಚಕ್ರ, ಕಮಲ–ಸಹಸ್ರದಳ ಕಮಲ, ಮೃಡ–ಶಿವ, ಎಡೆವಿಡದೆ–ಬಿಟ್ಟೂಬಿಡದೆ, ನಿರಂತರ; ಯತಿಹಂಸ–ಯತಿಶ್ರೇಷ್ಠ.

* ಮಡುಗಟ್ಟಿ ಹಾವಸೆ ಆವರಿಸಿ ಕಮಲಕ್ಕೆ ಆಶ್ರಯವಾದ ಕೃತಕಸರೋವರವನ್ನು ಬಿಟ್ಟು, ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞೇಯವೆಂಬ ಷಡುಚಕ್ರಗಳಲ್ಲಿ ಮತ್ತು ಕಮಲ ದಳಗಳಲ್ಲಿ ಸುಳಿಯುತ್ತ ಶಿವಭಕ್ತಿಮಾನಸಸರೋವರದಲ್ಲಿ ಸದಾ ನೆಲೆಸಿರುವ ಯತಿಹಂಸನಾದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೦–೨೦ ದಾ (ಮೂ), ೨೧–೨೧ ದಿ (ಮೂ), ೨೨–೨೨ ಬಿಡದೆ ಮಣಿಪೂರಕವನಾಹತ ವಿಶುದ್ಧಿಯಾಜ್ಞೇಯ ವಿಧಿರಂಧ್ರವೆಂಬಾ (ಮೂ).

೨೬

ಪರಿಪೂರ್ಣ ಹೆಚ್ಚು ಕುಂದಿಲ್ಲದಿಹ ಸುಪ್ರಭಾ
ಭರಿತ ಕುವಲಯ ಶುಭೋದಯ ನಿಷ್ಕಳಂಕ ದು
ಸ್ತರ ವಿಷಯ ಸೈಂಹಿಕೇಯಗ್ರಸ[೨೩][ನ][೨೩] ನಾಗದಿಹ ದಿಗ್ಭರಿತಕೀರ್ತಿ ನಿಚಯಾ
ಪರಮಶಾಂತಿಸ್ವರೂಪಾಪ್ರತಿಮ ಷಟ್ಸ್ಥಲಾ
ಚರಣಾಂಬುರಾಶಿಯಂ ಪೆಚ್ಚಿಸಿದ ಯತಿರಾಜ
ದುರಿತಹರಚರಿತಧರ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಸುಪ್ರಭಾ–ಸುಪ್ರಕಾಶ, ಭರಿತ–ತುಂಬಿದ, ಕುವಲಯ–ಭೂಮಿ, ಕಮಲ; ದುಸ್ತರ–ಅಸಾಧ್ಯ, ಸೈಂಹಿಕೇಯ–ರಾಹು, ಗ್ರಸನ–ತಿನ್ನುವಿಕೆ, ಯತಿರಾಜ–ಯತಿಚಕ್ರವರ್ತಿ, ಯತಿಚಂದ್ರ; ದುರಿತಹರ–ಪಾಪನಾಶಕ, ಚರಿತಧರ–ಸಚ್ಚಾರಿತ್ರ್ಯವಂತ.

* ಪರಿಪೂರ್ಣನಾದ, ನೆರತೆ ಕೊರತೆಗಳಿಲ್ಲದವ, ಸುಪ್ರಕಾಶದಿಂದ ಕೂಡಿದ, ಭೂಲೋಕಕ್ಕೆ ಶುಭವನ್ನುಂಟು ಮಾಡುವ ಕಲಂಕರಹಿತನಾದ, ಅಸಾಧ್ಯವಿಷಯವೆಂಬ ರಾಹುವಿನಿಂದ ತಿನ್ನಲ್ಪಡದ, ದಿಕ್ಕು ತುಂಬಿದ ಕೀರ್ತಿ ಸಮೂಹವುಳ್ಳ, ಪರಮಶಾಂತಿ ಸ್ವರೂಪನಾದ, ಅಪ್ರತಿಮ ಷಟ್‌ಸ್ಥಲಾಚರಣೆಯೆಂಬ ಸಮುದ್ರವನ್ನು ಹೆಚ್ಚಿಸಿದ ಯತಿಚಂದ್ರನಾದ, ಪಾಪನಾಶಕನೂ ಸಚ್ಚಾರಿತ್ರ್ಯವಂತನೂ ಆಗಿರುವ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೭

ನಾರ ಬೇರಂ ತಿಂದು ನುಡಿದು ದುರ್ಮಂತ್ರವವಿ
ಚಾರದಿಂ ಘುಟಿಕೆಯಂಜನಗಳಾಂತಿಹ ದುರ್ವಿ
ಕಾರಸಿದ್ಧರ ತಲೆಗೆರಪ ಬರಸಿಡಿಲು ಲಿಂಗಸುಪ್ರಸಾದೋಪಭೋಗಿ
ಚಾರುಪಂಚಾಕ್ಷರಾತ್ಮಕ ಭಸ್ಮರುದ್ರಾಕ್ಷಿ
ಧಾರಕ ಸಮಸ್ತಸಿದ್ಧಿಪ್ರದಾಯಕ ಸಿದ್ಧ
ರಾರಾಧ್ಯ ಸಿದ್ಧೇಶ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಘುಟಿಕೆ–ಗುಳಿಗೆ, ಅಂಜನ–ಅದೃಶ್ಯ ವಸ್ತುವನ್ನು ಕಾಣಿಸಿಕೊಡುವ ಕಾಡಿಗೆ, ಆಂತು–ಹೊಂದಿ, ಚಾರು–ಶ್ರೇಷ್ಠ, ಪ್ರದಾಯಕ–ಅಧಿಕವಾಗಿ ನೀಡುವ, ಆರಾಧ್ಯ–ಆರಾಧನೆಯ ವ್ಯಕ್ತಿ.

* ನಾರು ಬೇರುಗಳನ್ನು ತಿಂದು, ಕೆಟ್ಟ ಮಂತ್ರಗಳನ್ನು ಹೇಳಿ, ಅವಿಚಾರದಿಂದ ಗುಳಿಗೆ ಅಂಜನಗಳನ್ನು ಹೊಂದಿದ ವಿಕಾರಿಗಳಾದ ಸಿದ್ಧರ ತಲೆಗೆ ಎರಗುವ ಸಿಡಿಲಾದ ನೀನು ಲಿಂಗಪ್ರಸಾದವನ್ನು

೨೩–೨೩ x (ಮೂ).

ಸೇವಿಸುವವನು. ಪಂಚಾಕ್ಷರ ಸ್ವರೂಪನು, ವಿಭೂತಿ ರುದ್ರಾಕ್ಷಿ ಧರಿಸಿದವನು, ಸಕಲ ಸಿದ್ಧಿಗಳನ್ನು ಅಧಿಕವಾಗಿ ದಯಪಾಲಿಸುವವನು. ಹೀಗೆ ಸಿದ್ಧರ ಆರಾಧನೆಯ ವ್ಯಕ್ತಿಯೂ ಸಿದ್ಧರ ಒಡೆಯನೂ ಎನಿಸಿದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೮

ಮಿಸುಪ ಕುಂಡಲಿಯ ಸರ್ಪನನೂರ್ಧ್ವಮುಖಗೆ [೨೪][ಯ್ಸಿ][೨೪]
ದಶವಾಯುಗಳ ಚಲತೆಯಂ ನಿಲಿಸಿ ಹೃದಯದೊಳು
ಸಸಿನೆ ಪಂಚಾನನಧ್ಯಾನ ಬಲಿದಷ್ಟಮದಗಜನ ಮುರಿದಧಿಕ ಮಹಿಮಾ
ಶಶಿರವಿಗಳೊಂದಾಗಿ ನಡೆಸಿಯಜ್ಞಾನತಮ
ಮುಸುಕದಂತಿರೆ ಸುಷುಮ್ನೆಯ ಮುಖಂದೆಗೆದ ಸುಧೆ
ಯೊಸರಲುಂಡೊಲೆವ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಿಸುಪ–ಹೊಳೆಯುವ, ಪ್ರಕಾಶಿಸುವ; ಕುಂಡಲಿ–ಸುರುಳಿಯಾಗಿರುವುದು. ಸರ್ಪ; ಊರ್ಧ್ವಮುಖಗೆಯ್ಸಿ–ಮೇಲುಮುಖ ಮಾಡಿಸಿ, ದಶವಾಯು–೫ ಪ್ರಾಣ ವಾಯು: ಪ್ರಾಣ ಅಪಾನ ವ್ಯಾನ ಉದಾನ ಸಮಾನ, ೫ ಉಪಾನವಾಯು : ನಾಗ ಕೂರ್ಮ ಕೃಕರ ದೇವದತ್ತ ಧನಂಜಯ ಎಂಬ ೧೦ ವಾಯುಗಳು; ಸಸಿನೆ–ಚೆನ್ನಾಗಿ, ಪಂಚಾನನ–ಶಿವ, ಅಷ್ಟಮದ–ಕುಲ ಛಲ ಧನ ರೂಪ ಯೌವನ ವಿದ್ಯಾ ರಾಜ್ಯ ತಪವೆಂಬ ೮ ಮದಗಳು; ತಮ–ಕತ್ತಲು, ಸುಷಮ್ನೆ–ಇಡಾಪಿಂಗಳ ನಾಡಿಗಳ ನಡುವಿನ ನಾಡಿ, ಸುಧೆ–ಅಮೃತ.

* ಹೊಳೆಯುವ ಕುಂಡಲಿಯ ಸರ್ಪವನ್ನು ಮೇಲುಮುಖಮಾಡಿಸಿ, ಹತ್ತೂ ವಾಯುಗಳ ಅಲೆದಾಟವನ್ನು ನಿಲ್ಲಿಸಿ, ಹೃದಯದಲ್ಲಿ ಚೆನ್ನಾಗಿ ಶಿವಧ್ಯಾನವನ್ನು ಬೆಳೆಸಿಕೊಂಡು, ಅಷ್ಟಮದಗಳೆಂಬ ಆನೆಗಳನ್ನು ಸಂಹರಿಸಿದ ಮಹಿಮನು ನೀನು. ಚಂದ್ರ ಸೂರ್ಯರನು ಒಂದಾಗಿ ನಡೆಸಿ, ಅಜ್ಞಾನವೆಂಬ ಕತ್ತಲು ಆವರಿಸದ ಹಾಗೆ ಸುಷುಮ್ನನಾಡಿಯ ಬಾಯಿ ತೆರೆದು ಹೊರಸೂಸುವ ಅಮೃತವನ್ನು ಉಂಡು ನಲಿಯುವ ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೯

ಮರುಳಶಂಕರನಂತೆ ಪರಮಪ್ರಸಾದಿ ಬಸ
ವರಸರೊಲು ಭಕ್ತಿಗುಣಸಂಪನ್ನ ಚೆನ್ನಬಸ
ವರಸರೊಲು ಷಟ್ಸ್ಥಲಾಚಾರಕೋವಿದ ಸಿದ್ಧರಾಮನೊಲು ಶಿವಯೋಗಿಯು
ಪರಿಪೂರ್ಣಭಾವ ನಿಜಗುಣಯೋಗಿಯಂತೆ ಭಾ

೨೪–೨೪ ಯ್ದು (ಮೂ).

ಸುರ ಪ್ರಭುದೇವರೊಲು ಸರ್ವಜ್ಞ ಮೂರ್ತಿ ಜಯ
ಸುರಸೇವ್ಯ ವರಭವ್ಯ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಸಂಪನ್ನ–ತುಂಬಿಕೊಂಡಿರುವವ, ಷಟ್ಸ್ಥಲ–ಭಕ್ತ ಮಹೇಶ ಪ್ರಸಾದಿ ಪ್ರಾಣಲಿಂಗ ಶರಣ ಐಕ್ಯ ಎಂಬ ೬ ಸ್ಥಲಗಳು, ಕೋವಿದ–ಬಲ್ಲಿದ, ಭಾಸುರ–ಹೊಳೆಯುವ, ಸುರ–ದೇವತೆ.

* ಮರುಳಶಂಕರದೇವನಂತೆ ಪರಮಪ್ರಸಾದಿ, ಬಸವಣ್ಣನಂತೆ ಭಕ್ತಿಗುಣಸಂಪನ್ನ, ಚೆನ್ನಬಸವಣ್ಣನಂತೆ ಷಟ್‌ಸ್ಥಲಾಚಾರ ಬಲ್ಲಿದ, ಸಿದ್ಧರಾಮನಂತೆ ಶಿವಯೋಗಿ, ನಿಜಗುಣಯೋಗಿಯಂತೆ ಪರಿಪೂರ್ಣಭಾವವುಳ್ಳವ, ತೇಜೋಮೂರ್ತಿ ಪ್ರಭುದೇವನಂತೆ ಸರ್ವಜ್ಞನಾದವ. ಇಂಥ ದೇವತಾಸೇವ್ಯ ವರಭವ್ಯನಾದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೦

ಕಾಮಿ ಶಿವಪದದಲ್ಲಿ ಕ್ರೋಧಿ ಕರಣಂಗಳೊಳು
ಕಾಮಿನಿಯರಿಗೆ ಮನವ ಕುಡದ ಲೋಭಿಯು ಮೋಹಿ
ಯಾ ಮಹಾಲಿಂಗದೊಳು ಚಿನ್ಮಹದ ಮದನು ಮಾತ್ಸರ್ಯಯುತ ತನುಗುಣದೊಳು
ಭೂಮಿಯೊಳು ಷಡ್ವರ್ಗರಹಿತನೆಂಬುದು ಚಿತ್ರ
ವೀ ಮಹೀಜಾವಳನದಲ್ತೆಂದು ಸಜ್ಜನ
ಸ್ತೋಮ ಪೊಗಳ್ದರು ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪದ–ಪಾದ, ಚರಣ; ಕರಣ–ಪಂಚಕರಣ, ತನುಗುಣ–ಸತ್ವರಜತಮವೆಂಬ ದೇಹಗುಣ, ಷಡ್ವರ್ಗ–ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ; ಚಿತ್ರ–ಆಶ್ಚರ್ಯ, ಮಹೀಜಾವಳ–ಭೂಲೋಕದ ಸಾಮಾನ್ಯ, ಸ್ತೋಮ–ಸಮೂಹ.

* ಶಿವನ ಪಾದದಲ್ಲಿ ಕಾಮಿ, ಪಂಚಕರಣಗಳಲ್ಲಿ ಕ್ರೋಧಿ, ಸ್ತ್ರೀಯರಿಗೆ ಮನವನ್ನು ಕೊಡದ ಲೋಭಿ, ಇಷ್ಟಮಹಾಲಿಂಗದಲ್ಲಿ ಮೋಹಿ, ದೇಹಗುಣಗಳಾದ ಸತ್ವರಜತಮಗಳಲ್ಲಿ ಮತ್ಸರಿ. ಹೀಗೆ (ಮಾನವ ಸಹಜ) ಈ ಕಾಮಕ್ರೋಧಮೋಹ ಮದಮತ್ಸರವಿಲ್ಲದವನೆಂಬುದು ಆಶ್ಚರ್ಯ. ಇಂಥ ನೀನು ಈ ಲೋಕದ ಸಾಮಾನ್ಯ ವ್ಯಕ್ತಿಯಲ್ಲವೆಂದು ಸಜ್ಜನ ಸಮೂಹ ಕೀರ್ತಿಸುತ್ತಿದೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೧

ಒಸೆದು ಸರ್ವರ ಪಾಲಿಪಲ್ಲಿ ಮೃಡನಾಗಿಯುಂ
ಪೊಸಬಿಸವ ಕಂಠದೊಳು ತಳೆದಾತನಲ್ಲ ಭಾ
ವಿಸಲು ಭಿಕ್ಷಾನಟನನಾಗಿಯುಂ ಮುನಿವಧೂಚಿತ್ತವಿಭ್ರಮಣನಲ್ಲ

ಕುಸುಮಶರಹರನಾಗಿ ರತಿವರದನಲ್ಲ ಮಾ
ನುಸರೂಪಮಂ ತಳೆದ [೨೫][ಅ][೨೫]ಪ್ರತಿಮ ಶಿವನೆಂದು
ವಸುಧೆ ಪೊಗಳ್ದುದು ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಒಸೆದು–ಪ್ರೀತಿಯಿಂದ, ಮೃಡ–ಶಿವ, ಬಿಸ(ದ್ಭ)–ವಿಷ, ಕಂಠ–ಗಂಟಲು, ಮುನಿವಧೂ ಚಿತ್ತ ವಿಭ್ರಮಣನಲ್ಲ–ಶಿವನ ಭಿಕ್ಷಾಟನ ಲೀಲಾಪ್ರಸಂಗದಲ್ಲಿ ಋಷಿ ಪತ್ನಿಯರು ಚಂಚಲಚಿತ್ತರಾದರೆಂದು ಪುರಾಣದ ಹೇಳಿಕೆ. ವಿಭ್ರಮಣ–ತಲ್ಲಣ, ಚಂಚಲ; ಕುಸುಮಶರ–ಕಾಮ, ವರದ–ವರವನ್ನು ದಯಪಾಲಿಸುವವ, ಮಾನುಸ–ಮನುಷ್ಯ, ವಸುಧೆ–ಭೂಮಿ.

* ಪ್ರೀತಿಯಿಂದ ಸಕಲ ಜೀವಿಗಳನ್ನು ರಕ್ಷಿಸುವಲ್ಲಿ ಶಿವನಾಗಿದ್ದರೂ ವಿಷವನ್ನು ಗಂಟಲಲ್ಲಿ ಧರಿಸಿಕೊಂಡವನಲ್ಲ. ಭಿಕ್ಷಾಟನ (ಲೀಲೆ)ವನ್ನು ಆಚರಿಸಿದರೂ ಯತಿಪತ್ನಿಯರ ಮನಸ್ಸನ್ನು ತಲ್ಲಣಗೊಳಿಸಿದವನಲ್ಲ. ಕಾಮನನ್ನು ಸಂಹರಿಸಿದರೂ ರತಿಗೆ ವರವನ್ನು (ಒಲವನ್ನು) ದಯಪಾಲಿಸಿದವನಲ್ಲ. ಹೀಗಾಗಿ ಮಾನವರೂಪವನ್ನು ಧರಿಸಿದ ಅಪ್ರತಿಮ ಶಿವನೆಂದೇ ಈ ಲೋಕ ನಿಮ್ಮನ್ನು ಹೊಗಳುತ್ತಿದೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೨

ಪರಮಶಿವತತ್ತ್ವಾಮೃತಾಂಗ ತವ ಪಾದಾಬ್ಜ
ವೆರಗಿದರ ಲೋಚನಚಕೋರಿಗಿಷ್ಟಾರ್ಥಮಂ
ಸ್ಮರಿಸುವರ ಹೃತ್ಕುಮುದಕಾನಂದಮಂ ಪೊಗಳುವರ ವಿಮಲಮತಿವಾರ್ಧಿಗಂ
ಪಿರಿದು ಪೆಚ್ಚುಗೆಯುಮಂ ಮಾಡದಿಹುದೇ ಕೃಪಾ
ಕರನೆ ನಿನ್ನಡಿ ನೆಲಸುಗೆನ್ನೆರ್ದೆಯೊಳುಂ ಬಿಡದೆ
ಪರಿಜಿತೇಂದ್ರಿಯನೀಕ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅಮೃತಾಂಗ–ಚಂದ್ರ, ತವ–ನಿನ್ನ, ಪಾದಾಬ್ಜ–ಪಾದಕಮಲ, ಲೋಚನ–ಕಣ್ಣು, ಚಕೋರಿ–ಬೆಳದಿಂಗಳನ್ನು ಸೇವಿಸಿ ಬದುಕುವ ಪಕ್ಷಿ, ಹೃತ್ಕುಮುದ–ಹೃದಯವೆಂಬ ರಾತ್ರಿಕಮಲ, ವಿಮಲಮತಿ–ನಿರ್ಮಲಬುದ್ಧಿ, ವಾರ್ಧಿ–ಸಮುದ್ರ, ಪೆಚ್ಚುಗೆ–ಭರತಿ, ಕೃಪಾಕರ–ಕೃಪೆಯನ್ನುಂಟುಮಾಡುವವ, ಪರಿಜಿತೇಂದ್ರನೀಕ–ಅಧಿಕವಾದ ಜಿತೇಂದ್ರಯತ್ವದಿಂದ ಕೂಡಿದ.

* ಪರಮಶಿವತತ್ತ್ವಚಂದ್ರನಾದ ನಿನ್ನ ಚರಣಕಮಲಗಳು ಮನಸ್ಕರಿಸಿದವರ ಕಣ್ಣೆಂಬ ಚಕೋರಪಕ್ಷಿಗೆ ಇಷ್ಟಫಲಗಳನ್ನೂ ನಾಮಸ್ಮರಣೆ ಮಾಡುವವರ ಹೃದಯ ರಾತ್ರಿಕಮಲಗಳಿಗೆ ಆನಂದವನ್ನೂ ಕೀರ್ತಿಸುವವರ ಶುದ್ಧಜ್ಞಾನಸಮುದ್ರಕ್ಕೆ ಉಕ್ಕೇರುವಿಕೆಯನ್ನೂ ಮಾಡಲಾರವೆ? ಕೃಪಾಕರನೇ, ಅಧಿಕವಾದ ಜಿತೇಂದ್ರಿಯತ್ವದಿಂದ ಕೂಡಿದವನೇ ನಿನ್ನ ಪಾದಗಳು ನನ್ನ ಹೃದಯದಲ್ಲಿ ಸದಾ ನೆಲೆಗೊಳ್ಳಲಿ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೨೫–೨೫ x (ಮೂ)

೩೩

ಲಲಿತಕರ್ನಾಟಕದೇಶದ ರಾಜನಿಟಿಲತಟ

ತಿಲಕ ಕಸ್ತೂರಿಕಾರಜವಿರಾಜಿತ ಸುನಿ

ರ್ಮಳ ತವ ಪದಾಂಗುಲಿ[೨೬][ಯ][೨೬] ನಖದ ಸಿರಿಕಱೆಯಿಂ ವಿಜೃಂಭಿಸುವ ಶುಭ್ರಾಂಶುವಾ

ಒಲಿ[೨೭][ದ][೨೭] ಕೃಷ್ಣನ ತಳೆದ ಕ್ಷೀರಾಬ್ಧಿಯಂ ಗೆಲ್ದು

ದಲಘು ಮಹಿಮಾಯಿಲನೆ ನಿನ್ನ ಪದಮಂ ಪೊಗಳ

ಲಳವೆ ಪಾಲಿಪುದೆನ್ನ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಲಲಿತ–ಮನೋಹರ, ನಿಟಿಲತಟ–ಹಣೆಭಾಗ, ರಜ–ಹುಡಿ, ಧೂಳಿ; ವಿರಾಜಿತ–ಶೋಭಿಸುವ, ತವ–ನಿನ್ನ, ಪದಾಂಗಲಿ–ಪಾದಬೆರಳು, ನಖ–ಉಗುರು, ಕಱೆ–ತೀರ, ಕೊನೆ; ಶುಭ್ರಾಂಶು–ಶುಭ್ರಕಿರಣ, ಒಲಿದ–ಮೆಚ್ಚಿದ, ಅಲಘು–ಕಡಿಮೆಯಲ್ಲದ, ಆಯಿಲ–ವ್ಯವಹರಿಸುವವ ಎಂಬ ಅರ್ಥದ ತದ್ಧಿತ ಪ್ರತ್ಯಯ.

* ಮನೋಹರವಾದ ಕನ್ನಡನಾಡಿನ ರಾಜರ ಹಣೆಯ ಕಸ್ತೂರಿ ತಿಲಕದ ಹುಡಿಯಿಂದ ಶೋಭಿಸುವ ನಿನ್ನ ಪವಿತ್ರ ಕಾಲ್ಬೆರಳಿನ ಉಗುರ ಕೊನೆಯಿಂದ ಸ್ಫುರಿಸುವ ಶುಭ್ರಕಿರಣವು. ಕೃಷ್ಣನನ್ನು ಹೊಂದಿದ ಹಾಲ್ಗಡಲನ್ನೇ ಗೆದ್ದಿತು (ತನ್ನತ್ತ ಸೆಳೆಯಿತು). ಮಹಿಮಾಸ್ಪದನೇ ನಿನ್ನ ಚರಣವನ್ನು ಹೊಗಳುವುದು ನನಗೆ ಸಾಧ್ಯವೇ? ನನ್ನ ಸಲುಹ ಬೇಕು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೪

ಪರತರಬ್ರಹ್ಮಸ್ವರೂಪ ವಾಚಾತೀತ

ಸುರುಚಿರ[೨೮][ದ][೨೮] ಷಟ್ಸ್ಥಲಾಚಾರಯುತ ನಿಸ್ಸೀಮ

ಗರುವ ಪ್ರತ್ಯಕ್ಷಭೂರುದ್ರ ತ್ರಿಗುಣಗಳುಂ ಪೊದ್ದದಗಣಿತ ಮಹಿಮನು

ಹರಭಕ್ತಹೃನ್ನಿಳಯನತುಳ ವಿಶ್ವವ್ಯಾಪಿ

ಧರೆಯೊಳತಿ ಚಿತ್ರತರ ಮಹಿಮನೆಂದುಂ ಸಕಲ

ರುರೆ ಪೊಗಳ್ವರುಂ ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪರತರ–ಶ್ರೇಷ್ಠ, ವಾಚಾತೀತ–ಮಾತಿಗೆ ಮೀರಿದ, ಸುರುಚಿರ–ಮನೋಹರವಾದ, ಗರುವ–ಶ್ರೇಷ್ಠ, ಭೂರುದ್ರ–ಭೂಲೋಕದ ಶಿವ, ತ್ರಿಗುಣ–ಸತ್ವರಜತಮವೆಂಬ ಮೂರು ತನುಗುಣ, ಹೃನ್ನಿಳಯ–ಹೃದಯ ಮನೆ, ಉರೆ–ಚೆನ್ನಾಗಿ.

೨೬–೨೬ x (ಮೂ), ೨೭–೨೭ ದು (ಮೂ), ೨೮–೨೮ ದು(ಮೂ).

* ಶ್ರೇಷ್ಠಬ್ರಹ್ಮಸ್ವರೂಪನೂ ಮಾತಿಗೆ ಅತೀತನೂ ಮನೋಹರವಾದ ಷಟ್‌ಸ್ಥಲಾಚಾರಯುತನೂ ಸೀಮಾತೀತ ಘನವಂತನೂ ಭೂಲೋಕದ ಪ್ರತ್ಯಕ್ಷಶಿವನೂ ಸತ್ವರಜತಮವೆಂಬ ತ್ರಿಗುಣಗಳನ್ನು ಹೊಂದದ ಅಗಣಿತ ಮಹಿಮಾನ್ವಿತನೂ ಶಿವಭಕ್ತರ ಹೃದಯನಿವಾಸದಲ್ಲಿ ನೆಲೆಸಿರುವವನೂ ಹೋಲಿಕೆಗೆ ಅತೀತನಾಗಿ ವಿಶ್ವದ ತುಂಬ ವ್ಯಾಪಿಸಿರುವವನೂ ಲೋಕದಲ್ಲಿ ಆಶ್ಚರ್ಯಕರಮಹಿಮನೂ ಎಂದು ಎಲ್ಲ ಜನರು ನಿನ್ನನ್ನು ಕೀರ್ತಿಸುವರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೫

ತರುಗಳೊಳು ಕಲ್ಪತರು ಶಿಲೆಗಳೊಳು ದೇವಶಿಲೆ
ಗಿರಿಗಳೊಳು ಮೇರು ಪಶುಕುಲಗಳೊಳು ಸುರಧೇನು
ಪರಿವ ನದಿವಿಸರದೊಳು ಭಾಗೀರಥಿಯ ಮಾಳ್ಕೆ ಸಕಲ ಮಾಹೇಶ್ವರರೊಳು
ಪರತರೋತ್ಕೃಷ್ಟ ಘನಮಹಿಮಾಯಿಲಂ ಕೃಪಾ
ಶರಧಿ ಶಾಶ್ವತನೆಂದು ಸಕಲಸದ್ಭಕ್ತರುಂ
ಪಿರಿದು ಪೊಗಳ್ವರು ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತರು–ಮರ, ಕಲ್ಪತರು–ಕಲ್ಪವೃಕ್ಷ, ಶಿಲೆ–ಕಲ್ಲು, ದೇವಶಿಲೆ–ಚಿಂತಾಮಣಿ, ಸುರಧೇನು–ಕಾಮಧೇನು, ವಿಸರ–ಸಮೂಹ, ಭಾಗೀರಥಿ–ಗಂಗಾನದಿ, ಮಾಹೇಶ್ವರ–ಮಹೇಶ್ವರ ಸಂಬಂಧಿ, ಪರತರ–ಶ್ರೇಷ್ಠ, ಆಯಿಲ–ವ್ಯವಹರಿಸುವವ ಅರ್ಥದ ತದ್ಧಿತ ಪ್ರತ್ಯಯ, ಶರಧಿ–ಸಮುದ್ರ.

* ಮರಗಳಲ್ಲಿ ಕಲ್ಪವೃಕ್ಷ, ಕಲ್ಲುಗಳಲ್ಲಿ ಚಿಂತಾಮಣಿ, ಪರ್ವತಗಳಲ್ಲಿ ಮೇರುಪರ್ವತ, ಪಶುಸಮೂಹದಲ್ಲಿ ಕಾಮಧೇನು, ನದಿಸಮೂಹದಲ್ಲಿ ಗಂಗೆ ಶ್ರೇಷ್ಠವಾಗಿರುವಂತೆ ಸಮ್ತಸ ಮಹೇಶ್ವರನ ಸಂಬಂಧಿಗಳಲ್ಲಿ ನೀನು ಶ್ರೇಷ್ಠ ಉತ್ಕೃಷಟ ಘನಮಹಿಮಾವಂತ ಕೃಪಾಸಮುದ್ರ ಶಾಶ್ವತ ಎಂದು ಎಲ್ಲ ಸದ್ಭಕ್ತರು ಅಧಿಕವಾಗಿ ಹೊಗಳುವರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೬

ನಿನ್ನ ಪಾದಾಬ್ಜಕುವಲಯದೊಳಭಿಮತಸಿದ್ಧಿ
ಯಂ ನಿಮಿರ್ಚಿಸಲಧಿಕತರವಾದುದುಂ ಗಡಾ
ಎನ್ನ ಚಿತ್ತಭ್ರಮರಕನುರಾಗಮಂ ಮಾಡದಿಹುದೆ ಕಾರುಣ್ಯರೂಪಾ
ಚಿನ್ನಿಧಿ ಶಿವಾಭಿನ್ನ ಸರ್ವಾಂಗಲಿಂಗಸಂ
ಪನ್ನ ಶರಣಾಗತತ್ರಾಣ ಸಜ್ಞಾನಕರ
ಮನ್ನಾಥ ಪೊ ೨೯[ರೆ]೨೯ ಬಿಡದೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

೨೯–೨೯ x (ಮೂ)

* ಅಬ್ಜ–ಕೆಂಪುಕಮಲ, ಕುವಲಯ–ನೀಲಕಮಲ, ಅಭಿಮತ–ಇಷ್ಟವಾದ, ನಿಮಿರ್ಚು–ವರ್ಧಿಸು, ಬೆಳೆಸು; ಅಧಿಕತರ–ಭಾರ, ಅನುರಾಗ–ಪ್ರೀತಿ, ಶಿವಾಭಿನ್ನ–ಪಾರ್ವತಿಯೊಂದಿಗೆ ಅಭಿನ್ನವಾಗಿರುವವ, ತ್ರಾಣ–ಆಧಾರ, ಮನ್ನಾಥ–ನನ್ನ ಒಡೆಯ.

* ನಿನ್ನ ಪಾದವೆಂಬ ಕೆಂಪುಕಮಲ ಮತ್ತು ನೀಲಕಮಲಗಳಲ್ಲಿ ಇಷ್ಟವಾದ ಸಿದ್ಧಿಯನ್ನು ಗಳಿಸಿಕೊಳ್ಳಲು ಕಷ್ಟವೆನಿಸುತ್ತದೆ. ಕಾರಣ ಕಾರುಣ್ಯರೂಪನೇ ನನ್ನ ಮನಸ್ಸೆಂಬ ಭ್ರಮರಕ್ಕೆ ಒಲುಮೆಯನ್ನು ಮಾಡದೆ ಇರುವುದೇ? ಚಿದ್ರೂಪನೇ, ಪಾರ್ವತೀ ಸಮೇತನೇ, ಸರ್ವಾಲಿಂಗಸಂಪನ್ನನೇ, ಶರಣಾಗತರಿಗೆ ಆಧಾರನೇ, ಸುಜ್ಞಾನವನ್ನುಂಟುಮಾಡುವವನೇ, ನನ್ನ ಒಡೆಯನೇ ಬಿಡದೆ ಕಾಪಾಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೭

ವಿಷಯಗಳ ಕೊಂದಿಂದ್ರಿಯಂಗಳಂ ನಿಲಿಸಿಯೋ
ಡಿಸಿ ಕರಣಗುಣಗಳಂ ಲಿಂಗಮೋಹಂ ಬಲಿದು
ರಸೆಯಲ್ಲಿ ಮುಕ್ತವಶವೆನಿಸಿ ಬಂದೆರಗಿದರ್ಗೀಶನೊಲವಂ ತೋರಿಸಿ
[೩೦][ವಶ][೩೦] ವೆನಿಸಿದಿರಿ ಮಾರಣಸ್ತಂಭನೋಚ್ಚಾಟ
ನೆಸೆವ ಮೋಹನವಶೀಕರಣಮಾಕರುಷಣಮೆ
ನಿಸುವ ಷಟ್ಸಾಮರ್ಥ್ಯ ಗುರುವೆ ತೊಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ವಿಷಯ–ಶಬ್ದಸ್ಪರ್ಶರೂಪರಸಗಂಧವೆಂಬ ಪಂಚವಿಷಯ, ಇಂದ್ರಿಯ–ಶ್ರೋತ್ರ ತ್ವಕ್ ಚಕ್ಷು ಜಿಹ್ವೆ ಘ್ರಾಣ ಎಂಬ ೫ ಇಂದ್ರಿಯಗಳು, ಕರಣಗುಣ–ಇಂದ್ರಿಯಗುಣ, ರಸೆ–ಭೂಮಿ, ಮಾರಣ (–ಕೊಲ್ಲುವಿಕೆ), ಸ್ತಂಭನ(–ನಿಲ್ಲಿಸುವಿಕೆ), ಉಚ್ಚಾಟನ(–ತೆಗೆದು ಹಾಕುವಿಕೆ), ಮೋಹನ (–ಭ್ರಾಂತಿಗೊಳಿಸುವಿಕೆ), ವಶೀಕರಣ(–ವಶಮಾಡಿಕೊಳ್ಳುವಿಕೆ), ಆಕರುಷಣ(–ಒಲಿಸುವಿಕೆ) ಎಂಬ ಮಾಂತ್ರಿಕನ ೬ ಸಾಮರ್ಥ್ಯಗಳು.

* ಪಂಚವಿಷಯಗಳನ್ನು ಕೊಂದು, ಪಂಚ ಇಂದ್ರಿಯಗಳನ್ನು ಹಿಡಿದು ನಿಲ್ಲಿಸಿ, ಕರಣಗಣತ್ರಯನ್ನು ಓಡಿಸಿ, ಲಿಂಗವ್ಯಾಮೋಹವನ್ನು ಗಟ್ಟಿಗೊಳಿಸಿ, ಮುಕ್ತಿಯನ್ನು ವಶಪಡಿಸಿಕೊಂಡುಬಂದು ನಮಸ್ಕರಿಸಿದವರಿಗೆ ಶಿವನ ಕೃಪೆಯನ್ನು ತೋರಿಸುತ್ತ ಮಾರಣ ಸ್ತಂಭನ ಉಚ್ಚಾಟನ ಮೋಹನ ವಶೀಕರಣ ಆಕರ್ಷಣವೆಂಬ ೬ ಸಾಮರ್ಥ್ಯಗಳನ್ನು ವಶಪಡಿಸಿಕೊಂಡವರೆನಿಸಿದಿರಿ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೦–೩೦ ಒಸ (ಮೂ).

೩೮

ಮನವಚನಾಕಾಯದೊಳು ಸ್ತ್ರೀಯ ಪೊದ್ದದ ಮಹಾ
ಮುನಿನಾಥ[೩೧][ನೆಂ][೩೧]ಬ ಸತ್ಕೀರ್ತಿ ಬಂದೆಡೆಗೊಳ್ಳೆ
ವಿನುತಿಸುವೊಡಿದು ಕೊರತೆಯೆಂದರಿದು ನಿಲ್ಲಲೀಸದೆ ತಗುಳ್ದನೆಂಬಂದದಿ
ಘನಚತುರ್ದಶಭುವನದಲ್ಲಿ ತೊಳಲಿದಳಯ್ಯ
ನಿನತು ಜಸವೆಣ್ಣು ಕುಂದೊಂದದ ಮಹಾಮಹಿಮ
ಚಿನುಮಯನೆ ಪೊರೆಯೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ವಚನ-ಮಾತು, ಕಾಯ-ದೇಹ, ಪೊದ್ದದ-ಹೊಂದದ, ಎಡೆಗೊಳ್ಳು-ಸೇರು, ವಿನುತಿಸು-ಕೀರ್ತಿಸು, ಸ್ತುತಿಸು; ಈಸು-ಅವಕಾಶಮಾಡಿಕೊಡು, ತಗುಳ್-ತಿರುಗು, ನಿನತು-ನಿನ್ನ, ಜಸವೆಣ್ಣು-ಯಶಸ್ಸೆಂಬ ಕನ್ಯೆ, ಕುಂದೊಂದದ-ಕುಂದು ಹತ್ತದ.

* ಮನಸ್ಸು ಮಾತು ದೇಹಗಳಲ್ಲಿ ಸ್ತ್ರೀವ್ಯಾಮೋಹವನ್ನು ಹೊಂದದ ಘನಮುನಿಯೆಂಬ ಸತ್ಕೀರ್ತಿಯೇ ಪ್ರಾಪ್ತವಾಗಿರಲು, ಮತ್ತೂ ಕೀರ್ತಿಸಿದರೆ ಅದು ಕೊರತೆಯೆಂದು ತಿಳಿದು ಯಶಃಕಾಮಿನಿಗೆ ನಿಲ್ಲಲೂ ಅವಕಾಶಕೊಡದೆ ಹಿಂದಟ್ಟಿದನೆಂಬಂತೆ ಹದಿನಾಲ್ಕು ಲೋಕಗಳಲ್ಲಿ ಆಕೆ ಸುತ್ತಾಡಿದಳು. ಕುಂದುರಹಿತನಾದ ಮಹಾಮಹಿಮನೇ, ಚಿನ್ಮಯನೇ ನನ್ನನ್ನು ಕಾಪಾಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೯

ಪುತ್ತ ನೆಲೆವನೆಯಾದರಕ್ರಮರು ವಕ್ರಗತಿ
ವೆತ್ತರೆಲ್ಲಾ ಲೋಕದಲ್ಲಿಯೆಂಬರ ಬಾಯ
ನೊತ್ತಿ ಪೆರ್ಬುತ್ತದೊಳು ನೆಲಸಿ ಮೂಲೋಕದೊಳು ಸತ್ಕ್ರಮಾಚಾರರೆನಿಸಿ
ಉತ್ತರೋತ್ತರ ಪರಮನಿರ್ವಕ್ರಸದ್ಗತಿಯ
ನಿತ್ತು ಶರಣಾಗತರ ಪಾಲಿಸಿದ ವಿಮಲ ಮಹಿ
ಮೋತ್ತಂಸ ಪೊರೆ ಬಿಡದೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನೆಲೆವನೆ-ನೆಲೆಸುವ ಮನೆ, ಅಕ್ರಮರು-ಅವ್ಯವಹಾರಿಗಳು, ವಕ್ರಗತಿ-ನೇರನಡತೆಯಲ್ಲದುದು, ಪೆರ್ಬುತ್ತು-ದೊಡ್ಡಹುತ್ತು, ಉತ್ತರೋತ್ತರ-ಶ್ರೇಷ್ಠಾತಿಶ್ರೇಷ್ಠ, ನಿರ್ವಕ್ರ-ನೇರ, ಉತ್ತಂಸ-ಆಭರಣ, ಪೊರೆ-ರಕ್ಷಿಸು.

೩೧-೩೧ ಯೆಂ (ಮೂ).

* ಹುತ್ತು ನೆಲೆವನೆಂಬಾದ(–ಹಾವು)ವರು ಅನಾಚರಿಗಳು (ಅವ್ಯವಹಾರಿಗಳು), ನೇರನಡತೆಯಲ್ಲದವರು ಎಂದು ಹೇಳುವ ಲೋಕದ ಎಲ್ಲ ಜನರು ಬಾಯಿ ಮುಚ್ಚುವಂತೆ ದೊಡ್ಡಹುತ್ತದಲ್ಲಿ ನೆಲಸಿಯೂ ಮೂರುಲೋಕದಲ್ಲಿ ಸದಾಚಾರಿಯಾಗಿ, ಶ್ರೇಷ್ಠಾತಿಶ್ರೇಷ್ಠ ನೇರನಡತೆಯ ಸದ್ಗತಿಯನ್ನು ದಯಪಾಲಿಸಿ ಶರಣಾಗತರನ್ನು ಪಾಲಿಸಿದ ನಿರ್ಮಲಮಹಿಮಾಭರಣನಾದವನೇ ರಕ್ಷಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೦

ಬಸವರಸ ಪ್ರಭುದೇವ ಮಾದೇವಿಯಕ್ಕಗಳ
ಮಿಸುಪ ಭಕ್ತಿ ಜ್ಞಾನವೈರಾಗ್ಯಮುಂ ನಿಮಗೆ
ರಸೆಯಲ್ಲಿ ಮನವಚನಕಾಯತ್ರಯಂಗಳಾಗಿರ್ಪವೆನಲೊಲ್ದು ನಿಮ್ಮಂ
ಒಸೆದು ಕೀರ್ತಿಸಿ ನುತಿಸಿ ನೆನೆವರ್ಗೆ ಸದ್ಭಕ್ತಿ
ಯೆಸೆವ ಸುಜ್ಞಾನವೈರಾಗ್ಯ ಸಮನಿಸದಿಹುದೆ
ಅಸಮಾಕ್ಷನವತಾರ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಿಸುಪ–ಹೊಳೆಯುವ, ರಸೆ–ಭೂಮಿ, ಒಸೆದು–ಪ್ರೀತಿಸಿ, ನುತಿಸಿ–ಸ್ತುತಿಸಿ, ಸಮನಿಸು–ದೊರಕು, ಪ್ರಾಪ್ತವಾಗು; ಅಸಮಾಕ್ಷ–ಶಿವ.

* ಬಸವಣ್ಣ ಪ್ರಭುದೇವ ಅಕ್ಕಮಹಾದೇವಿಯರ ಭಕ್ತಿ ಜ್ಞಾನ ವೈರಾಗ್ಯ ಈ ಲೋಕದಲ್ಲಿ ಕ್ರಮವಾಗಿ ನಿಮಗೆ ಮನಸ್ಸು ಮಾತು ದೇಹಗಳಾಗಿರುವವು. ಇಂಥ ನಿಮ್ಮನ್ನು ಪ್ರೀತಿಯಿಂದ ಹೊಗಳಿ ಸ್ತುತಿಸಿ ಧ್ಯಾನಿಸುವವರಿಗೆ ಭಕ್ತಜ್ಞಾನವೈರಾಗ್ಯ ಪ್ರಾಪ್ತವಾಗಲಾರವೇ? ಶಿವನ ಅವತಾರವಾದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೧

ದುರುಳ ಮಾಯಾಪಾಶವೆಂಬ ನಿಗಳವ ಪರಿದು
ಮಿರದಷ್ಟಮದವೆಂಬ ಬಲ್ಗಂಭಮಂ ಮುರಿದು
ಸರಕು ಮಾಡದೆಯಹಂಕಾರವೆನಿಸುವ ಜೋದರನ ಕೆಡಹಿ ಜನನವೆನಿಪಾ
ಸರಸಿಜವ ಕಿತ್ತು ಷಡ್ವರ್ಗಕದಳೀವನವ
ನುರೆ ತುಳಿದು ತನ್ನಮರದಿಭರಾಜ ಬಂದುದೆಂ
ಬರು ನಿಮ್ಮನಿ ೨[ಳೆ]೨ಗೆ ಸದ್ಗುರವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

೩೨–೩೨ ೪ (ಮೂ).

* ದುರುಳ–ದುಷ್ಟ, ಪಾಶ–ಬಂಧ, ನಿಗಳ–ಬೇಡಿ, ಸಂಕೋಲೆ; ಅಷ್ಟಮದ–ಕುಲ ಛಲ ಧನ ರೂಪ ವಿದ್ಯಾ ಯೌವನ ರಾಜ್ಯ ತಪ ಎಂಬ ೮ ಮದಗಳು; ಬಲ್ಗಂಭ–ಆನೆಯನ್ನು ಕಟ್ಟುವ ದೊಡ್ಡಕಂಬ, ಸರಕುಮಾಡು–ಲಕ್ಷಿಸು, ಜೋದ–ಮಾವುತಿಗ, ಸರಸಿಜ–ಕಮಲ, ಷಡ್ವರ್ಗ–ಕಾಮ ಕ್ರೋಧ ಲೋಭ ಮೋಹ ಮದ ಮತ್ಸರ; ಕದಳೀವನ–ಬಾಳೆಯ ತೋಟ, ತನ್ನಮರದಿಭರಾಜ–ದೇವತೆಗಳ ಗಜರಾಜ, ಐರಾವತ; ಇಳೆ–ಭೂಮಿ.

* ದುಷ್ಟ ಮಾಯಾಪಾಶವೆಂಬ ಬಂಧನವನ್ನು ಹರಿದುಹಾಕಿ, ಅಷ್ಟಮದವೆಂಬ ದೊಡ್ಡಕಂಬವನ್ನು ಮುರಿದು, ಅಹಂಕಾರವೆನ್ನುವ ಮಾವುತಿಗನನ್ನು ಲಕ್ಷಿಸದೆ ಕೆಡೆದು, ಹುಟ್ಟು ಎನಿಸುವ ಕಮಲವನ್ನು ಕಿತ್ತು, ಕಾಮಕ್ರೋಧಲೋಭಮೋಹಮದ ಮತ್ಸರವೆಂಬ ಬಾಳೆವನವನ್ನು ತುಳಿದು, ಆ ದೇವಲೋಕದ ಆನೆಯಾದ ಐರಾವತನೇ ಭೂಮಿಗೆ ನಡೆತಂದುದೆಂದು ನಿಮ್ಮನ್ನು ಭಾವಿಸುವರು. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೨

ಧರೆಯಲ್ಲಿ ದುರ್ಮಾರ್ಗವಿಡಿದು ನಡೆಯದ ಹೆಳವ
ಹರಭಕ್ತನಿಂದೆಯಂ ಕೇಳಬಾರದ ಕಿವುಡ
ಪರವಧುವ ಕಾಂಕ್ಷೆಯಿಂದೀಕ್ಷಿಸದ ಕುರುಡನಿವನಲ್ಲದಿಲ್ಲೆನಿಸಿ ಬಳಿಕಾ
ಗುರುಕ್ಷೇತ್ರಯಾತ್ರೆಯಂ ಶಿವಕಥಾಶ್ರವಣಮಂ
ವರಲಿಂಗ ನೋಟವೆಲ್ಲೆಡೆಯೊಳುಂ [೩೩]ಸಮನಿಸತಿ[೩೩]
ಕರುಣದಿಂದ ಪೊರೆ ಬಿಡದೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಧರೆ–ಭೂಮಿ, ಹೆಳವ–ಕುಂಟ, ಹರಭಕ್ತ–ಶಿವಭಕ್ತ, ಪರವಧೂ–ಅನ್ಯಸ್ತ್ರೀ, ಕಾಂಕ್ಷೆ–ಇಚ್ಛೆ, ಈಕ್ಷಿಸು–ನೋಡು, ಗುರುಕ್ಷೇತ್ರ–ಪುಣ್ಯಸ್ಥಳ, ಶ್ರವಣ–ಕೇಳುವಿಕೆ, ಸಮನಿಸೆ–ಉಂಟಾಗಲು.

* ಈ ಲೋಕದಲ್ಲಿ ದುರ್ಮಾರ್ಗ ಹಿಡಿದು ನಡೆಯುವ ಕುಂಟ, ಶಿವಭಕ್ತರ ನಿಂದೆಯ ಕೇಳದ ಕಿವುಡ, ಅನ್ಯಸ್ತ್ರೀಯನ್ನು ಕಾಂಕ್ಷೆಯಿಂದ ನೋಡದ ಕುರುಡ ಇವನಲ್ಲದೆಯಿಲ್ಲಯೆನಿಸಿದ ನಿನ್ನಲ್ಲಿಯೇ ಪುಣ್ಯಕ್ಷೇತ್ರಯಾತ್ರೆ ಶಿವಕಥಾಶ್ರವಣ ಲಿಂಗನೋಟ ಉಂಟಾಗಿವೆ. ನನ್ನನ್ನು ತುಂಬ ಕರುಣೆಯಿಂದ ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೩

ಮೂರುಲೋಕದ ಸಕಲಜಗವ ಸಚರಾಚರವ
ಚಾರುಕುಕ್ಷಿಯೊಳಿಟ್ಟು ಸೈತಿಟ್ಟು ಪೊರಗೇನುವಂ

೩೩–೩೩ 'ಸಮನಿಸೇ+ಅತಿ' ಎಂದು ಬಿಡಿಸಿಕೊಳ್ಳಬೇಕು (ಸಂ).

ತೋರಿಸದ ಲಿಂಗಸ್ವರೂಪದ ನಿನ್ನಯ ಪಾದಕಮಲದೊಳು ಮನೆಯ ಮಾಡಿ
ಆರೈದು ಕೂ[೩೪][ಡೆ][೩೪] ದಯದಿಂದೆನ್ನ ಪಾಲಿಪುದು
ಭಾರವೇ ಭೂತಹಿತ[೩೫][ನಾರ್ತ][೩೫]ನಾದನ ಕಂಡು
ವಾರೆಯಾಗುವರೆ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಸಚರಾಚರ–ಸ್ಥಾವರಜಂಗಮಜಗತ್ತು, ಚಾರು–ಸುಂದರ, ಮನೋಹರ; ಕುಕ್ಷಿ–ಹೊಟ್ಟೆ, ಸೈತಿಡು–ಚೆನ್ನಾಗಿ ಮಡಗಿಕೊಳ್ಳು, ಆರೈ–ವಿಚಾರಿಸು, ಭೂತಹಿತನೇ–ಪ್ರಾಣಿಹಿತವನ್ನು ಮಾಡುವವನೇ, ಆರ್ತನಾದನ–ದುಃಖಿತನಾದವನ, ವಾರೆಯಾಗು–ಮಗ್ಗಲುಸರಿ.

* ಮೂರುಲೋಕ (ಪಾತಾಳ ಲೋಕ ಭೂಲೋಕ ದೇವಲೋಕ)ಗಳ ಸಮಸ್ತ ಪ್ರಪಂಚವನ್ನೂ ತನ್ನ ಹೊಟ್ಟೆಯಲ್ಲಿ ಮಡಗಿಕೊಂಡು ಬಹಿರಂಗದಲ್ಲಿ ಇದಾವುದನ್ನೂ ತೋರಿಸದ ಲಿಂಗಸ್ವರೂಪನೇ. ನಿನ್ನ ಚರಣಕಮಲಗಳಲ್ಲಿ ಮನೆಮಾಡಿ ಕೂಡಿಕೊಂಡಿರುವ ನನ್ನನ್ನು ರಕ್ಷಿಸುವುದು ನಿನಗೆ ದೊಡ್ಡಭಾರವೇ? ಭೂತಹಿತನಾದ ನೀನು ದುಃಖಿತನಾದ ನನ್ನನ್ನು ಕಂಡು ದೂರಸರಿಯುವುದೇ? ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೪

ಲಸಿತಭಸಿತಾಂಗರುಚಿ ತೊಳಪ ಸುಲಿಪಲ್ಲ ಛವಿ
ಎಸೆವ ಮುಗುಳ್ನಗೆವೆಳಗು ಕರುಣಾರ್ದ್ರನೇತ್ರ [೩೬][ಭಾ][೩೬]
ವಿಷಮಮಹಿಮಾರೋಚಿ ನಿಜಕೀರ್ತಿಸತ್ಪ್ರಭೆಯು ಕೂಡಿ ದಿಕ್ತಟಗಳಲಿ
ಪಸರಿಸಿಯಹರ್ನಿಶಂ ಬೆಳಗೆ ರವಿಶಶಿಗಳುಂ
ಮಸುಳಿಸಿ ದಿನಂ ಸತ್ತು ಹುಟ್ಟುತಿರ್ದಪರು ನೀ
[೩೭][ನ][೩೭]ಸಮತೇಜೋನಿಧಿಯು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಲಸಿತ–ಹೊಳೆಯುವ, ಭಸಿತ–ವಿಭೂತಿ, ತೊಳಪ–ಹೊಳೆಯುವ, ಸುಲಿಪಲ್ಲ–ತಿಕ್ಕದ ಹಲ್ಲು, ಛವಿ–ಕಾಂತಿ, ಎಸೆ–ಶೋಭಿಸು, ಆರ್ದ್ರ–ಜಲಮಿಶ್ರಿತ, ಭಾ–ಪ್ರಕಾಶ, ರೋಚಿ–ಕಿರಣ, ಕಾಂತಿ; ಅಹರ್ನಿಶ–ಹಗಲು ರಾತ್ರಿ, ರವಿ–ಸೂರ್ಯ, ಶಶಿ–ಚಂದ್ರ, ಮಸುಳಿಸು–ಕಾಂತಿಹೀನವಾಗು, ಅಸಮ–ಸಮಾನವಿಲ್ಲದ.

* ಹೊಳೆಯುವ ಭಸ್ಮಕಾಯದ ಕಾಂತಿ, ಹೊಳೆಯುವ ಶುಭ್ರವಾದ ಹಲ್ಲಿನ ಪ್ರಕಾಶ, ಶೋಭಿಸುವ ನಸುನಗೆಯ ಬೆಳಕು, ಕರುಣಾಪೂರಿತ ಕಣ್ಣಿನ ಪ್ರಕಾಶ, ವಿಷಮಮಹಿಮೆಯ ಕಿರಣ, ನಿನ್ನ ಕೀರ್ತಿಯ ಪ್ರಭೆಗಳು ಒಟ್ಟುಗೂಡಿ ಪಸರಿಸಿ ಹಗಲಿರುಳೂ ಬೆಳಗಲು ಸೂರ್ಯಚಂದ್ರರು ಕಾಂತಿಹೀನರಾಗಿ ಪ್ರತಿದಿನ ಉದಯ ಅಸ್ತಮಾನಗಳನ್ನು ಹೊಂದುತ್ತಿಹರು. ನೀನು ಮಾತ್ರ ಅಸಮತೇಜೋನಿಧಿಯು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೩೪–೩೪ ಡಿ (ಮೂ), ೩೫–೩೫ ರಾರ್ಥ (ಮೂ), ೩೬–೩೬ ಭ (ಮೂ), ೩೭–೩೭ x (ಮೂ).

೪೫

ಗುರು ರೇವಣಾಸಿದ್ಧ ಪ್ರಭುದೇವರಂತೆ ಭಾ

ಸುರ ಕಾಶಿ ಕೇತಾರ ನೈಮಿಷಾರಣ್ಯ ಬಂ

ಧುರ ನೀಲಕಂಠ ಗಯೆ ಹಂಪೆ ದಾಕ್ಷಾರಾಮ ಶ್ರೀಗಿರಿ ಚಿದಂಬರದೊಳು

ಮೆರೆವ ಮನುಮುನಿಸಿದ್ಧಸಾಧಕಪ್ರಚಯದಿಂ

ಪರಿಚರಿಯೆಯಂ ಕೊಂಡು ಬೇಡಿದುದನಿತ್ತು ಸಂ

ಚರಿಸಿದ ಮಹಾಮಹಿಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಭಾಸುರ–ಪ್ರಕಾಶಿಸುವ, ನೈಮಿಷ್ಯಾರಣ್ಯ–ಗೋಮತೀನದೀ ತೀರದ ಒಂದು ಪವಿತ್ರವನ (ಹಿಂದೆ ದೇವತೆಗಳು ಇಲ್ಲಿ ದೊಡ್ಡ ಯಜ್ಞ ಮಾಡಿದರು), ಬಂಧುರ–ಶ್ರೇಷ್ಠ, ಪ್ರಚಯ–ಸಮೂಹ, ಪರಿಚರಿಯ–ಪೂಜೆ, ಸೇವೆ.

* ಗುರು ರೇವಣಸಿದ್ಧೇಶ್ವರ ಮತ್ತು ಪ್ರಭುದೇವರ ಹಾಗೆ ಕಾಶಿ ಕೇದಾರ ನೈಮಿಷಾರಣ್ಯ ನೀಲಕಂಠ ಗಯೆ ಹಂಪೆ ದಾಕ್ಷರಾಮ ಶ್ರೀಗಿರಿ ಚಿದಂಬರ ಮೊದಲಾದ ಪುಣ್ಯಕ್ಷೇತ್ರಗಳಲ್ಲಿರುವ ಮನು ಮುನಿ ಸಿದ್ಧ ಸಾಧಕರಿಂದ ಪೂಜೆಗೊಂಡು, ಅವರು ಬೇಡಿದುದನ್ನು ದಯಪಾಲಿಸಿ ಸಂಚಾರಮಾಡಿದ ಘನಮಹಿಮ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೬

ವಿಲಸದುತ್ತರದೇಶದಲ್ಲಿ ಶಂಕರನ ಗುಡಿ

ಗೊಲಿದೆಯ್ದಿ ಭಿಕ್ಷವೆನೆ ಭಕ್ತನೊಲು ಶಿವ ನಮಿಸಿ

ನಲಿದು ಭಿಕ್ಷವ ನೀಡೆ ಮುನ್ನ ಕರಸ್ಥಲದ ನಾಗಯ್ಯಗೆ ವಿರೂಪಾಕ್ಷನು

ಸುಲಭ ಹರಿಹರನೊರೆದ ಬಸವರಗಳೆಯ ಭಿಕ್ಷ

ವಲಸದಿತ್ತಿಂತುಟೇ ಭಯಭಕ್ತಿಯೆಂದು ಜನ

ಸಲೆ ನುತಿಸಿದರು ನಿಮ್ಮ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ವಿಲಸತ್–ಹೊಳೆಯುವ, ಒರೆ–ಹೇಳು, ರಚಿಸು; ಅಲಸು–ಬೇಸರಪಡು, ಇಂತುಟು–ಇಂತಹದು, ನುತಿಸು–ಸ್ತುತಿಸು.

* ಉತ್ತರದೇಶದ ಪರ್ಯಟನಸಮಯದಲ್ಲಿ ನೀವು ಶಿವಾಲಯಕ್ಕೆ ಹೋಗಿ "ಭಿಕ್ಷೆ" ಎನ್ನಲು ಶಿವನೇ ಭಕ್ತನ ರೂಪದಲ್ಲಿ ಬಂದು ನಮಸ್ಕರಿಸಿ, ಸಂತೋಷದಿಂದ ಭಿಕ್ಷೆಯನ್ನು ನೀಡಿದ. ಈ ಮೊದಲು ಹಂಪೆಯ ವಿರೂಪಾಕ್ಷನು ಕರಸ್ಥಲದ ನಾಗಯ್ಯನಿಗೆ ಹರಿಹರ ವಿರಚಿತ ಬಸವರಾಜದೇವರ ರಗಳೆಯನ್ನು ಭಿಕ್ಷೆಯಾಗಿ ನೀಡಿದನು. ನಿನ್ನ ಭಯಭಕ್ತಿ ಇಂತಹದುಯೆಂದು ಲೋಕದ ಜನ ನಿಮ್ಮನ್ನು ಸ್ತುತಿಸಿದರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೭

ಉತ್ತರದ ಮಾಬಳೇಶ್ವರಲಿಂಗಶಿರದೆ ಪೊ

ಣ್ಮುತ್ತಿರ್ದ ಗಂಗೆ ಬರತೊಡೆ ನೀವು ಚರಣವಿಡ

ಲೊತ್ತಿ ಪರಿದುದು ಕಣ್ಣಪಂ ಪದವಿನಿಡೆ ಶಿವನ ಕಣ್ಣೊಳುದಿಸುವ ವಾರಿಯು

ಬತ್ತಿಹೋಯಿತ್ತಂದು ಗುಡಿಯ ಪೊಗಗುಡದಿರ್ದ

ಮತ್ತ ಪಾರ್ವರು ಶರಣ್ಬೊಗಲು ರಕ್ಷಿಸಿದ ಮಹಿ

ಮೋತ್ತಂಸ ಪೊರೆಯೆನ್ನ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪೊಣ್ಮು–ಹೊರಬರು, ಬರತೊಡೆ–ಒಣಗಿದೊಡೆ, ಚರಣ–ಪಾದ, ವಾರಿ–ನೀರು, ಮತ್ತು–ಸೊಕ್ಕಿನ, ಪಾರ್ವ–ಬ್ರಾಹ್ಮಣ, ಉತ್ತಂಸ–ಆಭರಣ.

* ಉತ್ತರಭಾರತದ ಮಹಾಬಳೇಶ್ವರಲಿಂಗದ ತಲೆಯಿಂದ ಹರಿಯುತ್ತಲಿದ್ದ ನೀರು ಒಣಗಲು, ನಿಮ್ಮ ಪಾದಸ್ಪರ್ಶದಿಂದ ಅದು ಮುನ್ನಿನಂತೆ ಹರಿಯತೊಡಗಿತು; ಬೇಡರ ಕಣ್ಣಪ್ಪನು ಲಿಂಗದ ಮಸ್ತಕದ ಮೇಲೆ ಕಾಲನ್ನಿಡಲು ಶಿವಲಿಂಗದ ಕಣ್ಣಿನಿಂದ ಸುರಿವ ನೀರು ಬತ್ತಿಹೋದಂತೆ. ಆಗ ಶಿವಾಲಯ ಪ್ರವೇಶವನ್ನು ನಿನಗೆ ನಿಷೇಧಿಸಿದ ಬ್ರಾಹ್ಮಣರು ಶರಣಾಗತರಾಗಲು ಅವರನ್ನು ರಕ್ಷಿಸಿದ ಮಹಿಮಾಭರಣ ನೀನು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೮

ದ್ರಾವಿಡದೊಳಣ್ಣಾಮಲೇಶ ಮುತ್ತಿನ ಪಂಚ

ತಾವಡದ ಭಕ್ತಿಪೂರ್ವಕದೊಳೀಯಲ್ ನಿಮಗೆ

ಕೋವಿದಂ ರಾಘವಾಂಕಂಗೆಯೋರುಂಗಲ್ಲ ವೇರೇಶ ಕ[೩೮]**[ಲ್ ಪ]**[೩೮]**ದಕವಾ**

ತೀವಿದುತ್ಸವದಿಂದ ಕೊಟ್ಟನೆಂಬರ್ ಕಂಡೆ

ವೀ ವಿಮಲ ಮಹಿಮನಡಿಗಳನೆಂದು ಪೊಗಳ್ದರೆಲೆ

ದೇವ ಸಕಲರ್ ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ದ್ರಾವಿಡ–ತಮಿಳುನಾಡು, ಅಣ್ಣಾಮಲೇಶ–ಅಣ್ಣಾಮಲೈ ಬೆಟ್ಟದಲ್ಲಿರುವ ಶಿವಲಿಂಗ. ತಾವಡ–ಸರ, ಈಯು–ನೀಡು, ಕೊಡು; ಕೋವಿದ–ಬಲ್ಲಿದ, ವಿದ್ವಾಂಸ.

* ತಮಿಳುನಾಡಿನ ಅಣ್ಣಾಮಲೇಶನು ಮುತ್ತಿನ ಪಂಚಹಾರವನ್ನು ಭಕ್ತಿಪೂರ್ವಕವಾಗಿ ನಿಮಗೆ ನೀಡಿದರೆ, ಓರಂಗಲ್ಲಿನ ವೀರೇಶನು ಕವಿರಾಘವಾಂಕನಿಗೆ ಕಲ್ಲಪದಕವನ್ನು ತುಂಬ ಸಂತೋಷದಿಂದ ದಯಪಾಲಿಸಿದನೆಂದು ಹೇಳುವರು. ಇಂಥ ಮಹಾಮಹಿಮನ ನಿರ್ಮಲಪಾದಗಳನ್ನು ಕಂಡು

೩೮– ಲ್ಪ (ಮೂ).

ಧನ್ಯರಾದೆವೆಂದು ಜನರು ನಿಮ್ಮನ್ನು ಸ್ತುತಿಸುವರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೪೯

ಕಾಶಿಯೊಳು ಕೇತಾರದಲ್ಲಿ ಹಂಪೆಯೊಳೆಸೆವ
ಶ್ರೀಶೈಲದಲ್ಲಿ ಮಿಗೆ ರಾಮೇಶ್ವರದೊಳೊಂದು
ಮಾಸಿಕವಾ ಮಧ್ಯಾಹ್ನದವಸರದಿರವ ಭಕ್ತರೊಡನೊರೆಯಲಾಗಿ (?)
ಆಶುವೇ ತಿಳಿದು ನೀವಲ್ಲಿರ್ದುದೆಲ್ಲವಹ
ರೀಶನೋರ್ವನೆಯೆಂದೆವೆಂದು ನುತಿಸಿದರು ಮಹಿ
೩೯[ಮಾ]೩೯ ಸದಾಶಿವ ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಾಸಿಕ–ತಿಂಗಳು, ಸೋಮವಾರ (?); ಅವಸರ–ಸಮಯ, ಆಶು–ಬೇಗನೆ ಈಶ–ಶಿವ, ನುತಿಸು–ಸ್ತುತಿಸು.

* ಕಾಶಿ ಕೇದಾರ ಹಂಪೆ ಶ್ರೀಶೈಲ ರಾಮೇಶ್ವರಗಳಲ್ಲಿ ಸೋಮವಾರ(?) ಮಧ್ಯಾಹ್ನ ಭಕ್ತರಿಗೆ ಏಕಕಾಲಕ್ಕೆ ಕಾಣಿಸಿಕೊಂಡಿರಿ. ಹೀಗೆ ನೀವು ಇರುವುದನ್ನು ಆ ಕ್ಷಣವೇ ತಿಳಿದ ಭಕ್ತರಿಗೆ ಎಲ್ಲ ಶಿವಕ್ಷೇತ್ರಗಳಲ್ಲಿರುವವ ಶಿವನೊಬ್ಬನೇ ಎಂದು ಸದಾಶಿವನೇ ನಿನ್ನ ಮಹಿಮೆಯನ್ನು ಸ್ತುತಿಸಿದರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೦

ಚರಮೂರ್ತಿ ಚಿಕ್ಕಸಿದ್ಧೇಶಂಗೆ ಹೊನ್ನಮ್ಮ
ಸಿರಿಗಿರಿಯೊಳಿಷ್ಟಕಾಮೇಶ್ವರಿಯು ಬೇಡಿದುದ
ಹರುಷದಿಂದಿತ್ತರೆಲೆ ದೇ೪೦[ವಾ]೪೦ ಪೊಳಲ್ಗುಂದದಾ ಮಾಯೆ ತಾನೆ ಬಂದು
ಸರಸಸದ್ಭಕ್ತಿಯಿಂ ಬಿನ್ನಾಹಮಂ ಮಾಡಿ
ಪರಿತೋಷವಡಿಸಿ ನಿಮ್ಮಡಿಯ ಕೃಪೆವಡೆದಳ
ತ್ಯುರುತರ ಮಹಾಮಹಿಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಚರಮೂರ್ತಿ–ಜಂಗಮಮೂರ್ತಿ, ಸಿರಿಗಿರಿ–ಶ್ರೀಶೈಲ, ಪರಿತೋಷ–ಸಂತೋಷ, ಅಡಿ–ಪಾದ, ಉರುತರ–ಶ್ರೇಷ್ಠ, ಮಹಿಮ–ಘನತೆಯನ್ನು ಹೊಂದಿರುವವ.

೩೯–೩೯ ಶಾ (ಮೂ), ೪೦–೪೦ ವ (ಮೂ).

*   ಜಂಗಮಮೂರ್ತಿಯಾದ ಚಿಕ್ಕಸಿದ್ಧೇಶ್ವರನಿಗೆ ಹೊನ್ನಮ್ಮನೂ ಶ್ರೀಶೈಲದಲ್ಲಿ ಇಷ್ಟ ಕಾಮೇಶ್ವರಿಯೂ ಬೇಡಿದ ವರವನ್ನು ಸಂತೋಷದಿಂದ ದಯಪಾಲಸಿದರು. ದೇವಾ ಅದೇರೀತಿ ಪೊಳಲ್ಲುಂದದ ಮಾಯಾದೇವಿ ಸರಸ ಸದ್ಭಕ್ತಿಯಿಂದ ಬಂದು ನಿಮಗೆ ಬಿನ್ನಹವನ್ನು ನೀಡಿ, ಸಂತೋಷಪಡಿಸಿ ನಿಮ್ಮ ಪಾದಕೃಪೆ ಪಡೆದಳು. ಅಧಿಕತರ ಮಹಾಮಹಿಮ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೧

ಅಸುಗಳೆದು ಸರ್ಪನಿರೆ ಶಿವನ ತೊಡವೆಂದು ಭಾ
ವಿಸಿ ದಯೆಯಿನಡಿಯಿಡುತ್ತೇಳೆನಲ್ಕಸು ಬಂದು
ವಸುಧೆಯೊಳು ಪರಿದು ಪೋಗಲು ಭೈರವೇಶ ಮುಸುಟಿಯ ಚೌಂಡ ಬಸವಯ್ಯನು
ಸಸಿನೆ ಪ್ರಾಣಂಗಳೆದ ಪ್ರಾಣಿಗಳಿಗಸುವಿತ್ತ
ರುಸಿರಲೇನಪ್ರತಿಮನೆಂದು ಕಗ್ಗೆರೆಯ ಜನ
ಒಸೆದು ಪೊಗಳ್ದರು ನಿಮ್ಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

*   ಅಸು–ಪ್ರಾಣ, ಸರ್ಪ–ಹಾವು, ತೊಡವು–ಆಭರಣ, ಅಡಿ–ಪಾದ, ವಸುಧೆ–ಭೂಮಿ, ಸಸಿನೆ–ಚೆನ್ನಾಗಿ, ಅಪ್ರತಿಮ–ಸಮಾನವಲ್ಲದ, ಒಸೆದು–ಪ್ರೀತಿಯಿಂದ.

*   ಶಿವನ ಆಭರಣವೆಂಬ ಭಾವದಿಂದ ಸತ್ತ ಹಾವಿಗೆ ಪಾದಸ್ಪರ್ಶಮಾಡಿ "ಏಳು" ಎನ್ನಲು, ಪ್ರಾಣ ತಿರುಗಿ ಅದು ಚಲಿಸತೊಡಗಿತು. ಹಿಂದೆ ಭೈರವೇಶ ಮುಸುಟಿ ಚೌಡಯ್ಯ ಬಸವಯ್ಯರು ಗತಪ್ರಾಣವಾದ ಪ್ರಾಣಿಗಳಿಗೆ ಜೀವ ನೀಡಿದರು. ಇದನ್ನು ಏನೆಂದು ಹೇಳಲಿ? ಅಪ್ರತಿಮನೆಂದು ಕಗ್ಗೆರೆಯ ಜನರೇ ನಿನ್ನನ್ನು ಹೊಗಳಿದರು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೨

ಮೂಗಿತಿಯ ಕದ್ದಿಲ್ಲವೆಂದು ನಿಮ್ಮಾಣೆಯಿ
ಟ್ಟಾಗಸಕೆ ಕೈನೆಗಹಲಾದುದು ಭುಜಸ್ತಂಭ
ವಾಗ ವಿಶ್ವೇಶ ನಿಕಟದೆ ವ್ಯಾಸ ಕೈನೆಗಹೆ ನಂದೀಶ ನುಡಿದು ನಿಲಿಸಿ
ಆಗಸದೊಳಿರ್ದಂತೆ ಭಯದೆ ತಪ್ಪೆಂದೆಱಗಿ
ಮೂಗುತಿಯ ಕುಡೆ ಕೈಯ ನೆಡಲೂರೊಳಂ ಬಿಡಿಸಿ
ಬೇಗದೆ ಪೊರೆದೆಯವಳ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಆಗಸ–ಆಕಾಶ, ಭುಜಸ್ತಂಭ–ಭುಜವು ಕಂಬದಂತೆ ನಿಲ್ಲುವಿಕೆ. ನಿಕಟ–ಹತ್ತಿರ, ಸನ್ನಿಧಿ, ಪೊರೆ–ರಕ್ಷಿಸು.

* ನೆಡಲೂರಿನಲ್ಲಿ ಮಹಿಳೆಯೊಬ್ಬಳು ಮೂಗುತಿಯನ್ನು ಕಳವು ಮಾಡಿ, ಕದ್ದಿಲ್ಲವೆಂದು ನಿಮ್ಮ ಆಣೆಯನ್ನು ಸಾರಿ ಮೇಲಕ್ಕೆ ಕೈಯೆತ್ತಲು ಅದು ಆಕಾಶದಲ್ಲಿ ನಿಂತಿತು; ಶಿವನ ಮುಂದೆ ವ್ಯಾಸನು ಎತ್ತಿದ ತೋಳು ನಂದೀಶನಿಂದಾಗಿ ಆಕಾಶದಲ್ಲಿ ನಿಂತಂತೆ. ಆಗ ಭಯದಿಂದ ಕಳವು ಮಾಡಿದ ತಪ್ಪೊಪ್ಪಿಕೊಂಡು ಮೂಗುತಿಯನ್ನು ಕೊಡಲು ನೀನು ಆಕೆಯನ್ನು ರಕ್ಷಿಸಿದೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೩

ಚೋಳಂಗೆ ನಿಂಬಿಗಂ ರಾಘವಗೆ ಪೊಮ್ಮಳೆಯ
ಭಾಳಾಕ್ಷ ಸುರಿಸಿದಂ ಕೋಟೆಯೂ[೪೧][ರ್][೪೧] **ಶಿವದೇವ**
[೪೨][ಗಾ][೪೨] **ಳೋಚನೆಯನರಿದುಧಾನ್ಯವೃಷ್ಟಿಯ ಸುರಿಸಿದಂತೆ ಎಲೆದೇವ ನೀವು**
ಗೂಳೂರ ಪ್ರಭುಶೆಟ್ಟಿಯರಮನೆಯೊಳುಂ ಕುಳಿತು
ಹೇಳೆಯೊಳು ದ್ರೋಣಕುಸುಮದ ಮಳೆಯ ಸುರಿಸಿದಿರಿ
ಕಾಳಕಂಠಪ್ರತಿಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪೊಮ್ಮಳೆ–ಬಂಗಾರ ಮಳೆ, ಭಾಳಾಕ್ಷ–ಶಿವ, ವೃಷ್ಟಿ–ಮಳೆ, ಹೇಳಾ–ವಿನೋದ, ದ್ರೋಣಕುಸುಮ–ಒಂದು ಬಗೆಯ ಹೂವು, ಕಾಳಕಂಠ–ಶಿವ.

* ಶಿವನು ಚೋಳ ನಿಂಬೆಣ್ಣ ಮತ್ತು ರಾಘವಾಂಕರಿಗೆ ಹೊನ್ನಮಳೆಯನ್ನು, (ತಾಳಿ)ಕೋಟೆಯೂರ ಶಿವದೇವರಿಗೆ ಧಾನ್ಯಮಳೆಯನ್ನು ಸುರಿಸಿದಂತೆ ಗೂಳೂರ ಪ್ರಭುಶೆಟ್ಟಿಯ ಮನೆಯಲ್ಲಿ ಕುಳಿತು ವಿನೋದದಿಂದ ದ್ರೋಣಹೂವಿನ ಮಳೆಯನ್ನು ಬರಿಸಿದಿರಿ, ಕರಿಗೊರಲನಾದ ಶಿವನಿಗೆ ಸಮಾನನಾದ ಗುರುವೇ ತೋಂಟದ ಸಿದ್ಧಿಲಿಂಗನೆಂಬ ನನ್ನ ಕಲ್ಪತರುವೇ.

೫೪

ಹರಿದೇವ ಬ್ರಹ್ಮರಕ್ಷೋಭಯಕ್ಕತ್ಯಂತ
ಹರುಷದಿಂ ಮೋಕ್ಷವಿತ್ತಂತೆರಡು ಭೂತಗಳು
ಮೆರೆವ ಕಗ್ಗೆರೆಯಲ್ಲಿ ನಿಮ್ಮ ಪದಸೇವೆಗೆಯ್ಯಲ್ಕೆ ನಿಜಮೋಕ್ಷವಿತ್ತು
ಪೊರೆದೆ ಭೂತಾತ್ಮನೆಂದೆನ್ನ ಬಿಡದಿರು ನಿಮ್ಮ

೪೧–೪೧ ರ (ಮೂ), ೪೨–೪೨ ರಾ (ಮೂ).

ಚರಣಾಂಬುಜದ ಮರೆಯ ಹೊಕ್ಕೆನೆಲೆ ರಕ್ಷಕನೆ
ಪೆರರನಾಂ ಬಲ್ಲೆನೇ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಹರಿದೇವ–ಹರಿಹರ ಮಹಾಕವಿ, ಪೊರೆದ–ರಕ್ಷಿಸಿದೆ, ಭೂತಾತ್ಮ–ಪಂಚಮಹಾ ಭೂತಗಳಿಂದಾದ ವ್ಯಕ್ತಿ, ಚರಣಾಂಬುಜ–ಪಾದಕಮಲ.

* ಹರಿಹರನು ಉಭಯ ಬ್ರಹ್ಮರಾಕ್ಷಸರಿಗೆ ಮೋಕ್ಷವನ್ನು ದಯಪಾಲಿಸಿದಂತೆ ಕಗ್ಗೆರೆಯಲ್ಲಿ ನಿಮ್ಮ ಪಾದಸೇವೆ ಮಾಡಿಕೊಂಡಿದ್ದ ಎರಡೂ ಭೂತಗಳಿಗೆ ಮೋಕ್ಷಪದವಿಯನ್ನು ನೀಡಿ ರಕ್ಷಿಸಿದಿರಿ. ಪಂಚಭೂತಾತ್ಮನೆಂದು ನನ್ನನ್ನು ಕೈಬಿಡಬೇಡ. ನಿಮ್ಮ ಚರಣಕಮಲದ ಮೊರೆಹೊಕ್ಕಿದ್ದೇನೆ. ಎಲೆ ರಕ್ಷಕನೇ, ನಿಮ್ಮ ಹೊರತು ನಾನು ಅನ್ಯರನ್ನು ಬಲ್ಲನೇ ? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೫

ತುರುವ ಕಳಬಂದು ಕಣ್ಗಾಣದಡಿಗೆಱಗಲ್ಕೆ
ಪೊರೆದನಾ ಬಸವ ಕಣ್ಗಳನಿತ್ತು ಮೋದೂರ
ಸರಣಿಯೊಳು ನಿಮ್ಮ ಪೊದಪಂ ಸೆಳೆದುಕೊಂಡು ಕಣ್ಗಾಣದವರಳ್ಕಿ ಬಳ್ಕಿ
ಮರಳಿಬಂದವರು ಪೊದಪಿತ್ತು ನುತಿಸುವ ಪುಳಿಂ
ದರ ಪಾಲಿಸಿದೆ ಕಣ್ಣುಕೊಟ್ಟು ಜ್ಞಾನಾಕ್ಷಿಯಿ
ತ್ತುರೆ ಪಾಲಿಸೆನ್ನ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತುರು–ಆಕಳು, ಅಡಿ–ಪಾದ, ಪೊರೆ–ರಕ್ಷಿಸು, ಸರಣಿ–ಹಾದಿ, ಪೊದಪು–ಸಂಪತ್ತು, ಸೆಳೆ–ಅಪಹರಿಸು, ನುತಿಸು–ಸ್ತುತಿಸು, ಪುಳಿಂದ–ಬೇಡ, ಜ್ಞಾನಾಕ್ಷಿ–ಅರಿವಿನಕಣ್ಣು, ಉರು–ಚೆನ್ನಾಗಿ, ಪಾಲಿಸು–ರಕ್ಷಿಸು.

* ಆಕಳುಗಳನ್ನು ಕದಿಯಲಿಕ್ಕೆ ಬಂದು ಕುರುಡರಾಗಿ, ಪಾದಗಳಿಗೆ, ನಮಸ್ಕರಿಸಿದ ವ್ಯಕ್ತಿಗಳಿಗೆ ಬಸವಣ್ಣನು ಕಣ್ಣುಗಳನ್ನು ನೀಡಿ ಸಲುಹಿದ. ಅದೇ ರೀತಿ ಮೋದೂರ ಹಾದಿಯಲ್ಲಿ ನಿಮ್ಮ ಸಂಪತ್ತನ್ನು ಅಪಹರಿಸಿಕೊಂಡು ಹೋದ ಬೇಡರು ಕಣ್ಣುಕಳೆದು ಕೊಂಡು, ಅಳ್ಕಿಬಳ್ಕಿ ತಿರುಗಿ ಬಂದು ಆ ಸಂಪತ್ತನ್ನು ನಿನಗೆ ಅರ್ಪಿಸಿ, ಭಕ್ತಿಯಿಂದ ನಾಮಸ್ಮರಣೆಯನ್ನು ಮಾಡಲು ಅವರಿಗೆ ಕಣ್ಣು ನೀಡಿ ರಕ್ಷಿಸಿದೆ. ಹಾಗೆಯೇ ನನಗೆ ಜ್ಞಾನವೆಂಬ ಕಣ್ಣನ್ನು ಕೊಟ್ಟು ಸಲಹು. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೬

ತವನಿಧಿಯು ಬರತುದೆಂದೆಱಗೆ ಜೇಡರದಾಸಿ
ತವೆ ತುಂಬಿ ಪೊರಸೂಸುವಂತೆ ಶಂಕರದಾಸ

ತವನಿಧಿಯ ಕೊಟ್ಟಂತೆ ಹೆಬ್ಬೂರ ಕೆರೆಬಾವಿ [೪೩][ಯೆ][೪೩]ಲ್ಲರತೊಡಖಿಲ ಜನರು
ಶಿವರೂಪ ಸಿದ್ಧೇಂದ್ರಯೆಂದೆಱಗೆ ಕೆಱೆಬಾವಿ
ಜವ[೪೪][ದಿ][೪೪] ವರುಷದಿನುಕ್ಕಿ ನೀರು ಕಬ್ಬಿಗೆವರಿದು
ದವಿರಳಾತ್ಮ[೪೫][ಕ][೪೫] ಸಲಹು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಬರತು-ಒಣಗಿ, ಬತ್ತಿ; ಅರತು-ಒಣಗಿ, ಬತ್ತಿ; ಅಖಿಲ-ಸಮಸ್ತ, ಎಱಗು-ನಮಸ್ಕರಿಸು, ಜವದಿ-ವೇಗದಿಂದ, ವರುಷ-ಮಳೆ, ಪರಿ-ಹರಿ, ಅವಿರಳಾತ್ಮಕ-ಪರಿಪೂರ್ಣಾತ್ಮಕ, ಸಲಹು-ರಕ್ಷಿಸು.

* ತವನಿಧಿಯು ಬತ್ತಿತೆಂದು ಜೇಡರದಾಸಿಮಯ್ಯ ಎರಗಲಾಗಿ ಶಂಕರದಾಸಿಮಯ್ಯ ತುಂಬಿ ಹೊರಸೂಸುವಂತೆ ಅದನ್ನು ಕೊಟ್ಟನು. ಹೆಬ್ಬೂರ ಕೆರೆ ಬಾವಿಗಳೆಲ್ಲ ಬತ್ತಿ ಹೋಗಲು ಸಮಸ್ತಜನರು "ಶಿವರೂಪ ಸಿದ್ಧೇಂದ್ರ" ಎಂದು ನಮಸ್ಕರಿಸಲು, ವೇಗದಿಂದ ಮಳೆ ಬಂದು ನೀರು ಉಕ್ಕಿ ಕಬ್ಬಿನ ಪೈರಿಗೆ ಹರಿಯಿತು. ಸಲಹಯ್ಯಾ ಅವಿರಳಾತ್ಮಕ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೭

ನಂಬಿ ಕುಸುಮವನು ಭಾವಾರ್ಪಣಂಗೆಯ್ದುದಂ
ನಂಬಿ ಪೂಗೊಪ್ಪೆಯೊಳು ಲಿಂಗಮಂ ತೋರ್ದಂತೆ
ಶಂಭುಸ್ವರೂಪ ಸಲಿಸೆಂದು ತೆಂಗಿನಕಾಯ ಮುಂದಿಡಲ್ಕೊರ್ವ ನೋಡಿ
[೪೬][ಆಂ][೪೬] ಭಾವ[೪೭][ಕಾ][೪೭] ರ್ಪಣವ ಮಾಡಿದೆವು ಭಾವದೊಳ
ಗೆಂಬುದಕೆ ಕಾಯ್ವೊಳೆ ಗಜಕಪಿತ್ಥನ್ಯಾಯ
ವಿಂಬುಗೊಂಡಿರೆ ತೋರ್ದ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನಂಬಿ-ನಂಬಿಯಣ್ಣನೆಂಬ ಶಿವಶರಣ, ಕುಸುಮ-ಹೂವು, ಭಾವಾರ್ಪಣ-ಭಾವಪೂರ್ವಕ ಅರ್ಪಿಸಿಕೊಳ್ಳುವದು, ಕೊಪ್ಪೆ-ತುದಿ, ಶಂಭುಸ್ವರೂಪ-ಶಿವರೂಪಿ, ಸಲಿಸು-ಸ್ವೀಕರಿಸು, ಗಜಕಪಿತ್ಥನ್ಯಾಯ-ಗಜ ಬೆಳವಲಕಾಯಿ ನ್ಯಾಯ (ಆನೆ ಬೆಳವಲ ಕಾಯಿಯನ್ನು ನುಂಗಿ ವಿಸರ್ಜಿಸುವಲ್ಲಿ ಕವಚವುಳಿದು ತಿರುಳು ಅಳಿದಿರುತ್ತದೆ). ಇಂಬುಗೊಳ್ಳು-ಘಟಿಸು.

* ನಂಬಿ ಹೂವನ್ನು ಭಾವಾರ್ಪಾಣಗೆಯ್ದಂತೆ, ನಂಬಿ ಹೂವಿನ ತುದಿಯಲ್ಲಿ ಲಿಂಗವನ್ನು ತೋರಿಸಿದಂತೆ ವ್ಯಕ್ತಿಯೊಬ್ಬನು "ಶಂಭುಸ್ವರೂಪ ಸ್ವೀಕರಿಸು" ಎಂದು ತೆಂಗಿನಕಾಯಿಯನ್ನು ನಿನ್ನ ಮುಂದೆ ಇಡಲು, "ನಾವು ಭಾವಾರ್ಪಣವ ಮಾಡಿದೆವು" ಎಂದು ಹೇಳಿದಿರಿಯಾಗಿ ಕಾಯಿಯನ್ನು

೪೩-೪೩ ಯ (ಮೂ), ೪೪-೪೪ ದ (ಮೂ), ೪೫-೪೫ x(ಮೂ), ೪೬-೪೬ ಆಂ (ಮೂ), ೪೭-೪೭ ರಾ (ಮೂ).

ಹೋಳುಮಾಡಿದರೆ ಗಜಕಪಿತ್ಥನ್ಯಾಯದಂತೆ ಒಳಗೆ ಏನೂ ಇಲ್ಲದ ಘಟನೆಯನ್ನು ಮೆರೆದಿರಿ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೮

ಕಲ್ಲನಂದಿಗೆ ಕಬ್ಬ ಮೆ[೪೮][ಲ್ಲಿ][೪೮]ಸಿದ ಬಾವೂರ
ಬಲ್ಲಿದಂ ಬೊಮ್ಮಯ್ಯನೆಂಬ[೪೯][ವಂ ದೇವ][೪೯] ನೀ
ವೆಲ್ಲರರಿವಂತೆ ಹೆಬ್ಬೂರೊಳಂ ಕದಳಿ ಪ್ರಸಾದವಂ ಸತಿಯ ಕೈ[೫೦][ಯಿಂ][೫೦]
ಕಲ್ಲಬಸವಗೆ ಮೆಲಿಸಚೇತನಕೆ ಚೇತನವ
ಸಲ್ಲೀಲೆಯಿಂದಿತ್ತ ಮಹಿಮ ಪಾಲಿಪುದು ಯತಿ
ವಲ್ಲಭನೆ ದುರ್ಲಭನೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನಂದಿ–ಬಸವ, ಬೊಮ್ಮಯ್ಯ–ಬೊಮ್ಮಯ್ಯನೆಂಬ ಶಿವಶರಣ, ಅರಿ–ತಿಳಿ, ಕದಳಿ–ಬಾಳೆ, ಸತಿ–ಹೆಂಡತಿ, ಅಚೇತನ–ಜಡವಾದ, ಇತ್ತ–ನೀಡಿದ, ಕರುಣಿಸಿದ; ಪಾಲಿಸು–ಕಾಪಾಡು, ವಲ್ಲಭ–ಒಡೆಯ, ಗಂಡ.

* ಬಾವೂರ ಬೊಮ್ಮಯ್ಯನೆಂಬವನು ಕಲ್ಲುಬಸವನಿಗೆ ಕಬ್ಬನ್ನು ಮೆಲ್ಲಿಸಿದ, ಹೆಬ್ಬೂರಲ್ಲಿ ನೀವು ಎಲ್ಲರ ಎದುರು ಹೆಣ್ಣುಮಗಳೊಬ್ಬಳ ಕೈಯಿಂದ ಕಲ್ಲನಂದಿಗೆ ಬಾಳೆಹಣ್ಣಿನ ಪ್ರಸಾದವನ್ನು ತಿನ್ನಿಸಿದಿರಿ. ಹೀಗೆ ಜಡವಸ್ತುವಿಗೆ ಪ್ರಾಣಕಳೆಯನ್ನು ತುಂಬಿದ ಮಹಿಮಾನ್ವಿತನೇ ಯತಿವರನೇ ನನ್ನನ್ನು ಕಾಪಾಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೯

ಒಕ್ಕಲಿಗ ನೆಲ್ಲಗದ್ದೆಯ ತಿಂಬ ಗೂಳಿಗಿರ
ದಿಕ್ಕೆ ನಿಮ್ಮಾಣೆಯಂ ತೊರೆದು ಮೇವಂ ಪದವ
ನಿಕ್ಕದಲ್ಲೇ ನಿಂದಿರಲ್ಕೆ ನಿಮಗರುಹಲಾಣೆಯ ಬಿಡಿಸಿ ಪೊರೆದ ಪರಿಯ
ಚಿಕ್ಕನೆಯಚೇತನಕೆ ಚೇತನಕೆ ಮಂತ್ರವೈ
ದಕ್ಕರವೆಯೆಂದು ತಿರುಚಿಟ್ಟ ಮೆರೆದಂತಾಯ್ತು
ರಕ್ಕಿಸೆನ್ನಂ ಬಿಡದೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನೆಲ್ಲ–ಬತ್ತ, ತೊರೆ–ಬಿಡು, ಪದವಿಡು–ಕಾಲುಕಿತ್ತಿಡು, ಅರುಹು–ಹೇಳು, ಪೊರೆ–ರಕ್ಷಿಸು, ಪರಿ–ರೀತಿ, ಅಕ್ಕರ–ಅಕ್ಷರ, ತಿರುಚಿಟ್ಟ–ಅರುವತ್ತುಮೂರು ಪುರಾತನರಲ್ಲಿ ಒಬ್ಬನು, ರಕ್ಕಿಸು–ಕಾಪಾಡು.

೪೮–೪೮ ಲಿ (ಮೂ), ೪೯–೪೯ ವರ್ದೇವ (ಮೂ), ೫೦–೫೦ ಯ್ಯಂ (ಮೂ).

* ರೈತನೊಬ್ಬನು ತನ್ನ ಬತ್ತದ ಗದ್ದೆಯಲ್ಲಿ ಮೇಯುತ್ತಿದ್ದ ಗೂಳಿಗೆ ನಿಮ್ಮ ಹೆಸರಿನ ಆಣೆಯನ್ನಿಡಲು, ಅದು ಮೇವನ್ನು ತಿನ್ನದೆ ಕಾಲನ್ನು ಮುಂದಿಡದೆ ಅಲ್ಲಿಯೇ ನಿಂತಿತು. ನಿಮಗೆ ಅದನ್ನು ಅರುಹಲು ಆಣೆಯನ್ನು ಬಿಡಿಸಿ ಆ ಗೂಳಿಯನ್ನು ಕಾಪಾಡಿದುದು ಜಡ ಮತ್ತು ಚೇತನವುಳ್ಳ ವಸ್ತುಗಳಿಗೆ ಐದಕ್ಷರ ಮಂತ್ರವೇ ಗತಿಯೆಂದು ತಿರುಚಿಟ್ಟನು ಮೆರೆದಂತಾಯಿತು. ಕಾರಣ ನನ್ನನ್ನು ಬಿಡದೆ ರಕ್ಷಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೦

ಚೆನ್ನನಲ್ಲುಂಡು ಚೋಳನ ಭಕ್ತಿಯೊಲ್ಲದಿಹ
ಪನ್ನ[೫೧][ಂ][೫೧]ಗಧರನೊಲೊಡ್ಡರು ಪರ್ವಮಂ ಮಾಡಿ
ಯನ್ನಮಂ ಸುರಿದು ಸಿದ್ಧೇಶ ಸಲಿಸೆನೆ ಬಯಲಮಾಡಿದಿರಿ ಭಕ್ತರಿತ್ತಾ
ಬಿನ್ನಾಹವಂ ಮಾಡಲಿಚ್ಛೆಯಿಲ್ಲುಂಡೆವೆಂ
ದುಂ ನುಡಿಸಿ ಸಾಕ್ಷಿಯಂ ಮೆರೆದ ಪೂತಾತ್ಮ ಪ್ರ
ಸನ್ನಸ್ವರೂಪ ಪೊರೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಚೆನ್ನ-ಮಾದಾರಚೆನ್ನಯ್ಯನೆಂಬ ಶಿವಶರಣ, ಚೋಳ-ಶಿವಭಕ್ತ ಚೋಳರಾಜ, ಪನ್ನಂಗಧರ-ಶಿವ, ಪರ್ವ-ಹಬ್ಬ, ಸಲಿಸು-ಸ್ವೀಕರಿಸು, ಬಿನ್ನಾಹ-ಒತ್ತಾಯ, ಪೂತಾತ್ಮ-ಪವಿತ್ರಾತ್ಮ, ಪೊರೆ-ರಕ್ಷಿಸು.

* ಮಾದಾರಚೆನ್ನಯ್ಯನ ಮನೆಯಲ್ಲಿ ಉಂಡು ಚೋಳರಾಜನ ಭಕ್ತಿಪ್ರಸಾದವನ್ನು ಉಣ್ಣದ ಶಿವನ ಹಾಗೆ ಒಡ್ಡರು ಹಬ್ಬವನ್ನು ಮಾಡಿ, ಪ್ರಸಾದವನ್ನು ನೀಡಿ "ಸಿದ್ಧೇಶ ಸಲಿಸು" ಎನ್ನಲು. ಅದನ್ನು ಬಯಲುಮಾಡಿದಿರಿ. ಅದರೆ ಭಕ್ತರು ಒತ್ತಾಯ ಮಾಡಲು ಈಗಾಗಲೇ ಉಂಡಿದ್ದೇವೆ ಸದ್ಯ ಇಚ್ಛೆಯಿಲ್ಲವೆಂದು ಸಾಕ್ಷಿ ನುಡಿಸಿದ ಪವಿತ್ರಾತ್ಮನೇ ಪ್ರಸನ್ನರೂಪನೇ ನನ್ನನ್ನು ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೧

ಉರಗ ಕಚ್ಚಳಿಯಲೊಡ ನಿಮ್ಮಾಣೆಯಿಂದ ವಿಷವ
ಪರಿಹರಿಸಿ ಗೂಳೂರೊಳೊರ್ವನ ಬರ್ದುಂಕಿಸಲು
ಧರೆಯಲ್ಲಿ ವೇಮನಾರಾಧ್ಯರಂತಪ್ರತಿಮನೆಂದು ಪೊಗಳ್ದರು ಸಕಲರು
ದುರುಳ ದುರ್ವಿಷ[೫೨][ಯ ಉ][೫೨] ರಗನ ವಿಷವ ಸಂಹರಿಸಿ

೫೧-೫೧ x (ಮೂ), ೫೨-೫೨ ಯೋ (ಮೂ).

ಪೊರೆಯೆನ್ನ ಶಿಖಿಗಮನನಂತೆ [೫೩][ಪ್ರ][೫೩] ಣವಾತ್ಮಕನೆ

ಸುರನರೋರಗಸೇವ್ಯ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಉರಗ–ಹಾವು, ಅಳಿ–ಸಾಯು, ಧರೆ–ಭೂಮಿ, ಅಪ್ರತಿಮ–ಉಪಮಾತೀತ, ಪೊಗಳು–ಹೊಗಳು, ಕೀರ್ತಿಸು; ಸಕಲ–ಎಲ್ಲ, ದುರುಳ–ದುಷ್ಟ, ವಿಷಯ–ಕಾಮಕ್ರೋಧಾದಿಗಳು, ಪೊರೆ–ಕಾಪಾಡು, ಶಿಖಿಗಮನ–ಷಣ್ಮುಖ, ಪ್ರಣವ–ಓಂಕಾರ ಮಂತ್ರ, ಸುರ–ದೇವತೆ, ನರ–ಮನುಷ್ಯ, ಸೇವ್ಯ–ಸೇವೆಮಾಡಿಸಿಕೊಳ್ಳಲು ಯೋಗ್ಯ.

* ಗೂಳೂರಲ್ಲಿ ಹಾವು ಕಚ್ಚಿ ಮಡಿದ ವ್ಯಕ್ತಿಯನ್ನು ನಿಮ್ಮ ಆಣೆಯಿಟ್ಟು ವಿಷವ ಪರಿಹರಿಸಿ ಬದುಕಿಸಲು, ಈ ಲೋಕದಲ್ಲಿ ನೀವು ಮೇಮನಾರಾಧ್ಯರಂತೆ ಮಹಿಮಾಶಾಲಿಗಳೆಂದು ಜನರು ಹೊಗಳಿದರು. ಪ್ರಣವಾತ್ಮಾಕನೇ ತ್ರಿಲೋಕಪೂಜ್ಯನೇ ಕೆಟ್ಟ ವಿಷಯವೆಂಬ ಸರ್ಪನ ವಿಷವನ್ನು ನಾಶಮಾಡಿ ಷಣ್ಮುಖನಂತೆ ನನ್ನನ್ನು ರಕ್ಷಿಸು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೧

ಬಿದಿರೂರ ಜಂಬುನೀರಿಲ ಮರವಕಾಲದೊಳು

ಮುದದಿ ಭಿಕ್ಷವ ಪಣ್ಗಳಂ ನೀಡೆ ಕೈಕೊಂಡು

ಸದುವಿನಯದಿಂ ಸೇವಿಸಲ್ಕೆ ನಿಡುಮಾಗಡಿಯೊಳುಂ ಕರಿಯ ಬಸವೇಶಗೆ

ಪದಪಿಂದ ಬಾಗಿ ತೆಂಗಿನ ಮರಂ ಫಲವಿತ್ತೊ

ಲಿದು ಚಿತ್ರವೆಂದು ನಿಮ್ಮಡಿಯ ಪೊಗಳಿದರೆಲ್ಲ

ಮದನಾರಿ ಸಲಹೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಜಂಬುನೀರಿಲಮರ–ನೇರಿಲಮರ, ಅಕಾಲ–ಋತುವಲ್ಲದ ಸಮಯ, ಪದಪು–ಆತುರ, ಸಂತೋಷ; ಚಿತ್ರ–ವಿಚಿತ್ರ, ಅಡಿ–ಪಾದ, ಪೊಗಳು–ಹೊಗಳು, ಕೀರ್ತಿಸು; ಮದನಾರಿ–ಕಾಮನವೈರಿ, ಶಿವ; ಸಲಹು–ರಕ್ಷಿಸು.

* ಬಿದರೂರಿನಲ್ಲಿರುವ ನೇರಿಲಗಿಡವು ಅಕಾಲದಲ್ಲಿ ಪ್ರೀತಿಯಿಂದ ಹಣ್ಣುಗಳ ಭಿಕ್ಷೆಯನ್ನು ನೀಡಲು ಅದನ್ನು ನೀನು ಸ್ವೀಕರಿಸಿದುದು, ನಿಡುಮಾಗಡಿಯ ಕರಿಬಸವೇಶನಿಗೆ ತೆಂಗಿನ ಮರವು ಸಂತೋಷದಿಂದ ಫಲಗಳನ್ನು ನೀಡಿದಂತೆ ಅತ್ಯಂತ ಆಶ್ಚರ್ಯಕರವೆಂದು ಲೋಕವೆಲ್ಲ ನಿನ್ನನ್ನು ಕೀರ್ತಿಸಿತು. ಶಿವಸ್ವರೂಪನೇ ಎನ್ನನ್ನು ಸಲಹಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೫೩–೫೩ ಪ್ರಾ (ಮೂ).

೬೩

ಚಿದ್ರೂಪನೋಹಿಲಗೆ ಸೌರಾಷ್ಟ್ರಸೋಮೇಶ
ಮುದ್ರಿಸಿದ ಕದವ ತೆಗೆದಂತೆ ಹರಿಯರಸಂಗೆ
ಭದ್ರದಿಂ ಬಂಧಿಸಿದ ಕದವನಿದಿರ್ವಂದು ಬೇಲೂರ ಚೆನ್ನಿಗ ತೆಗೆದೊಲು
ಸದೃಢದೆ ಸುರಿವ ಪೆರ್ಮೊಳೆಯೊಳೆಯೆ ನಾಗಸ
ಮುದ್ರದ ಗುಡಿಯ[೫೪][ಮುದ್ರೆ][೫೪] ತೆಗೆದುದುಂ ನಿಮಗೆ ಭೂ
ರುದ್ರ ಪಾಲಿಪುದೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಚಿದ್ರೂಪ–ಚಿತ್‌ಸ್ವರೂಪ, ಶಿವ; ಓಹಿಲ–ಓಹಿಲಯ್ಯನೆಂಬ ಶಿವಶರಣ, ಮುದ್ರಿಸಿದ–ಮುಚ್ಚಿದ, ಕದ–ಬಾಗಿಲು, ಹರಿಯರಸ–ಮಹಾಕವಿ ಹರಿಹರ; ಪೆರ್ಮಳೆ–ದೊಡ್ಡಮಳೆ, ಮುದ್ರೆ–ಬಾಗಿಲು, ಭೂರುದ್ರ–ಭೂಲೋಕದ ರುದ್ರ, ಪಾಲಿಪುದು–ಸಲಹುವುದು.

* ಶರಣ ಓಹಿಲಯ್ಯನಿಗೆ ಸೌರಾಷ್ಟ್ರಸೋಮನಾಥನು ಮುಚ್ಚಿದ ಬಾಗಿಲನ್ನು ತೆಗೆದಂತೆ, ಮಹಾಕವಿ ಹರಿಹರನಿಗೆ ಬೇಲೂರ ಚೆನ್ನಕೇಶವನು ಗಟ್ಟಿಯಾಗಿ ಮುಚ್ಚಿದ ಬಾಗಿಲನ್ನು ತೆಗೆದಂತೆ ನಿಮಗೆ ಧಾರಾಕಾರವಾಗಿ ಮಳೆ ಬೀಳುವ ಸಮಯದಲ್ಲಿಯೇ ನಾಗಸಮುದ್ರದ ಗುಡಿಯ ಕದವು ತೆರೆಯಿತು. ಭೂರುದ್ರನೇ ನನ್ನನ್ನು ಪಾಲಿಸಯ್ಯಾ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೪

ಕೊಡನು ತುಮಕೂರ ನಡುಗೆಱೆಗೆ [೫೫][ಗಾ][೫೫]ಳಿಗೆ ನಡೆಯೆ
ಮಡದಿ ನಿಮ್ಮಡಿಗಳಾಣೆಯನಿಡಲು ಕೆಱೆಮುನ್ನಿ
ನೆಡೆಗೆ ತಂದಿತ್ತುದುಂ ಕೊಡನನೆಂತೆನಲಗಸ್ತ್ಯನ ದೆಸೆಯೊಳಂಬುರಾಶಿ
ಕುಡಿತೆಗೊಳಗಾಯ್ತಿತನಾಜ್ಞೆಯಂ ಮೀರೆ ಕೇ
ಡಡಸದಿರದೆನಗೆಂದು ಭಯದೆ ದಿವ್ಯಾಜ್ಞೆಯಂ
ನಡೆಸಿ[೫೬][ತು][೫೬] ಮಹಾಮಹಿಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಡದಿ–ಹೆಂಡತಿ, ಅಡಿ–ಪಾದ, ಎಡೆ–ಸ್ಥಳ, ಅಗಸ್ತ್ಯ–ಸಮುದ್ರವನ್ನೇ ಕುಡಿದ ಒಬ್ಬ ಋಷಿ, ಅಂಬುರಾಶಿ–ಸಮುದ್ರ, ಕುಡಿತೆ–ಬೊಗಸೆ, ಆಜ್ಞೆ–ಅಪ್ಪಣೆ, ಅಡಸು–ಉಂಟಾಗು.

* ತುಮಕೂರಿನಲ್ಲಿ ಕೊಡವು ಗಾಳಿಯ ಹೊಡತಕ್ಕೆ ನಡುಗೆರೆಯ ವರೆಗೆ ಹೋಗಲು, ಹೆಣ್ಣುಮಗಳು ನಿಮ್ಮಾಣೆಯನ್ನು ಇಡುವುದೇ ತಡ ಕೆರೆಯು ಅದನ್ನು ದಂಡೆಗೆ ತಂದು ಮುಟ್ಟಿಸಿದುದು. ಹಿಂದೆ ಅಗಸ್ತ್ಯನಿಂದ ಸಮುದ್ರದ ನೀರು ಬೊಗಸೆಯಲ್ಲಿ ಅಳವಟ್ಟಿತ್ತು. ಈಗ ಸಿದ್ಧಲಿಂಗೇಶನ ಆಜ್ಞೆಯನ್ನು

೫೪–೫೪ x (ಮೂ), ೫೫–೫೫ ಘೂ(ಮೂ), ೫೬–೫೬ ದ (ಮೂ).

ಮೀರಿದರೆ ನನಗೆ ಕೇಡುಂಟಾಗದಿರದೆಂಬ ಭಯದಿಂದ ಅಪ್ಪಣೆಯನ್ನು ಪೂರೈಸಿದಂತಾಯಿತು ಮಹಾಮಹಿಮ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೫

ಹರ ಭಗೀರಥ ನಿಮಿತ್ತಂ ಸ್ಮರಿಸೆ ಘೂರ್ಮಿಸುವ
ಸುರದೀರ್ಘಿಕೆಯ ಕಪರ್ದದೊಳಡಕವಂ ಮಾಡಿ
ದಿ[೫೭][ರವಿನ][೫೭]ಂತೊಂಬತ್ತು ಕೊಳಗ ಗೋಕ್ಷೀರಮಂ ಗೂಳೂರೊಳಂ ಮುದದೊಳು
ಶಿರ[೫೮][ದ][೫೮] ಮೇಲೆರೆಯಲಿನಿ[೫೯][ತುಂ][೫೯] ಸೂಸದ[೬೦][ರ][೬೦]ರೆಯ
ಚ್ಚರಿದಳೆದು ಪೊಗಳ್ದ[೬೧][ರಂ][೬೧] ಶರಣ್ಬೊಕ್ಕರಂ[೬೨][ಸಲಹಿ][೬೨]
[೬೩][ದಿರಿ][೬೩] ನಾಡೆ [೬೪][ನೀವು][೬೪] ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಭಗೀರಥ–ದೇವಗಂಗೆಯನ್ನು ಭೂಮಿಗೆ ತಂದವ, ನಿಮಿತ್ತ–ಕಾರಣವಾಗಿ, ಘೂರ್ಮಿಸು–ಗರ್ಜಿಸು, ಸುರದೀರ್ಘಿಕೆ–ದೇವಗಂಗಾನದಿ, ಕಪರ್ದ–ಜಡೆ, ಅಡಕ–ಒತ್ತಿ ಇಟ್ಟುಕೊಳ್ಳುವುದು, ಇರವು–ರೀತಿ, ಕೊಳಗ–ಅಳತೆವಿಶೇಷ, ಗೋಕ್ಷೀರ–ಆಕಳಹಾಲು, ಶಿರ–ತಲೆ, ಇನಿತುಂ–ಇಷ್ಟೂ, ಸ್ವಲ್ಪವೂ; ಅಚ್ಚರಿ–ಆಶ್ಚರ್ಯ, ಪೊಗಳು–ಹೊಗಳು, ಕೀರ್ತಿಸು; ಶರಣ್ಬೊಗು–ಶರಣಾಗತವಾಗು, ನಾಡೆ–ಚೆನ್ನಾಗಿ.

* ಭಗೀರಥನ ಕಾರಣದಿಂದ ಭೋರ್ಗರೆಯುವ ದೇವಗಂಗೆ ಶಿವನ ಜಡೆಯಲ್ಲಿ ಅಡಗಿದಂತೆ ಗೂಳೂರಲ್ಲಿ ನಿಮ್ಮ ತಲೆಯ ಮೇಲೆ ಒಂಬತ್ತು ಕೊಳಗ ಪ್ರಮಾಣದ ಹಾಲಿನ ಅಭಿಷೇಕವನ್ನು ಮಾಡಿದರೂ ಹಾಲು ಸ್ವಲ್ಪವೂ ಹೊರಸೂಸಲಿಲ್ಲ. ಈ ಅದ್ಭುತವನ್ನು ಕಂಡು ಕೀರ್ತಿಸಿದವರನ್ನು ಶರಣಾಗತರಾದವರನ್ನು ನೀವು ಚೆನ್ನಾಗಿ ಸಲುಹಿದಿರಿ. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೬

ಶಿವ ತ್ರಿಪುರವಂ ನಿರೀಕ್ಷಿಸುವಾಗ ನಯನಜಲ
ಭುವನದೊಳು ಬೀಳೆ ರುದ್ರಾಕ್ಷಿತರುವಾಗಿ ಸಂ
ಭವಿಸಿದೊಲು ನಿಮ್ಮ ಪಾದೋದಕವನೊಯ್ವುತಿರೆ ಧರೆಯ [೬೫][ಮೇಲ್][೬೫] ಬೀಳಲೊಡನೆ
ಶಿವಲಿಂಗವಾಗಿ ಜನಿಸಿಷ್ಟಾರ್ಥಕರಮಾದು

೫೭–೫೭ ರವಿನ (ಮೂ), ೫೮–೫೮ x (ಮೂ), ೫೯–೫೯ ತು (ಮೂ), ೬೦–೬೦ x(ಮೂ), ೬೧–೬೧ ರುಂ (ಮೂ), ೬೨–೬೨ ಸಕಲ (ಮೂ), ೬೩–೬೩ ಧರ (ಮೂ), ೬೪–೬೪ ನಿಮ್ಮ (ಮೂ), ೬೫–೬೫ ಲೆ (ಮೂ).

ದವಿರಳಾತ್ಮಕ ಪರಬ್ರಹ್ಮಸ್ವರೂಪ ಶಾಂ

ಭ[೬೬][ವ][೬೬] ಗಣಾಧೀಶ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತ್ರಿಪುರ–ತಾರಕಾಸುರನ ಮಕ್ಕಳಾದ ತಾರಾಕ್ಷ ಕಮಲಾಕ್ಷ ವಿದ್ಯುನ್ಮಾಲಿಯೆಂಬವರು ಆಕಾಶದಲ್ಲಿ ಬಂಗಾರ ಬೆಳ್ಳಿ ಕಬ್ಬಿಣಗಳಿಂದ ನಿರ್ಮಿಸಿದ ಮೂರು ಪಟ್ಟಣಗಳು, ನಿರೀಕ್ಷಿಸು–ನೋಡು, ನಯನಜಲ–ಕಣ್ಣೀರು, ಭುವನ–ಲೋಕ, ತರು–ಗಿಡ, ಸಂಭವಿಸು–ಹುಟ್ಟು, ಏಳು; ಪಾದೋದಕ–ಪಾದಜಲ, ಧರೆ–ಭೂಮಿ, ಅವಿರಳಾತ್ಮಕ–ಪರಿಪೂರ್ಣ, ಶಾಂಭವ–ಶಂಭುಸಂಬಂಧಿಯಾದ, ಪೊರೆ–ಸಲಹು.

* ಶಿವನು ತ್ರಿಪುರವನ್ನು ನೋಡುವಾಗ ಕಣ್ಣನೀರು ಭೂಮಿಯ ಮೇಲೆ ಬಿದ್ದು ರುದ್ರಾಕ್ಷಿಮರ ಹುಟ್ಟಿದಂತೆ, ನಿಮ್ಮ ಪಾದೋದಕವನ್ನು ಕೊಂಡೊಯ್ಯುವಾಗ ಆ ಜಲ ಪೃಥ್ವಿಯ ಮೇಲೆ ಬಿದ್ದು ಶಿವಲಿಂಗವಾಗಿ ಎದ್ದು, ಬಯಸಿದುದನ್ನು ನೀಡುವುದಾಯಿತು. ಅವಿರಳಾತ್ಮಕನೇ ಪರಬ್ರಹ್ಮಸ್ವರೂಪನೇ ಶಾಂಭವನೇ ಗಣಾಧೀಶನೇ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೭

ತರಣಿತನಯಂ ಸಮರದಲ್ಲಿ ರಥ ಮುರಿಯಲೊಡ
ಕರವಾಂತು ತತ್ಕಾಲದಲ್ಲಿ ನಡೆಸಿದುದೊಂದು
ಪಿರಿದಲ್ಲ ನಿಮ್ಮ ಮೆರಸುವ ಪುಷ್ಪರಥವಂತರದೆ ಮುರಿಯೆ ಶಿವಭಕ್ತರು
ಭರದಿ ನಿಮ್ಮಾಣೆಯಿಡೆ ನಿಂದುದತ್ಯಾಶ್ಚರ್ಯ
ತರವಲಾ ಭೂವಳಯದಲ್ಲಿ ಕಾರಣಮಹಿಮ
ಚರಚಕ್ರವರ್ತಿ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತರುಣಿತನಯ–ಸೂರ್ಯಪುತ್ರ, ಕರ್ಣ; ಸಮರ–ಯುದ್ಧ, ರಣರಂಗ; ಕರವಾಂತು–ಕೈಯೊಡ್ಡಿ. ಪಿರಿದು–ಹಿರಿದು, ಭರದಿ–ತತ್‌ಕ್ಷಣ, ಭೂವಳಯ–ಭೂಲೋಕ, ಕಾರಣಮಹಿಮ–ಕಾರಣಪುರುಷ, ಚರಚಕ್ರವರ್ತಿ–ಜಂಗಮಸಾಮ್ರಾಟ.

* ರಣರಂಗದಲ್ಲಿ ಕರ್ಣನು ಮುರಿದ ರಥವನ್ನು ಕೈಹಚ್ಚಿ ಮುನ್ನಡೆಸಿದುದು ದೊಡ್ಡದಲ್ಲ. ನಿಮ್ಮನ್ನು ಮೆರೆಸುವ ಪುಷ್ಪರಥವು ಅಂತರದಲ್ಲಿಯೇ ಮುರಿಯಲು ಶಿವಭಕ್ತರು ತತ್‌ಕ್ಷಣ ನಿಮ್ಮಾಣೆಯನ್ನು ಇಟ್ಟು ಮೊದಲಿನಂತೆ ನಿಲ್ಲಿಸಿದುದು ಈ ಲೋಕಕ್ಕೆ ಅತ್ಯಂತ ಆಶ್ಚರ್ಯಕರ ಘಟನೆಯೇ ಸರಿ. ಕಾರಣಪುರುಷನೇ ಜಂಗಮಚಕ್ರವರ್ತಿಯೇ ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೬–೬೬ x (ಮೂ).

೬೮

ಬಸವರಾಜೇಂದ್ರ ಕರ್ನಾಟಭಾಷೆಯನು ಸಂ
ತಸದೆ ಶ್ರೀಪಂಡಿತಾರಾಧ್ಯರ್ಗೆ ಕೊಟ್ಟಂತೆ
ಯೊಸೆದು ದ್ರಾವಿಡದೇಶದಿಂದ ನಿಮ್ಮಂಘ್ರಿಯಂ ನೋಡಲೆಂದೆಳಸಿ ಬಂದ
ಕುಶಲಮತಿ ವೀರೇಶಗಿತ್ತೆ ಕನ್ನಡಭಾಷೆ
ಯಸದೃಶಂ ಭೂವಳಯದಲ್ಲಿ ತವ ಮಹಿಮೆ ಭಾ
ವಿಸುವೊಡೆನ್ನಂ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಬಸವರಾಜೇಂದ್ರ–ಬಸವೇಶ್ವರ, ಕರ್ನಾಟಭಾಷೆ–ಕನ್ನಡಭಾಷೆ, ಒಸೆದು–ಪ್ರೀತಿಯಿಂದ, ದ್ರಾವಿಡದೇಶ–ತಮಿಳುನಾಡು, ಅಂಘ್ರಿ–ಪಾದ, ಎಳಸು–ಬಯಸು, ಅಸದೃಶ–ಹೋಲಿಕೆಗೆ ಮೀರಿದ, ತವ–ನಿನ್ನ, ಸಲಹು–ರಕ್ಷಿಸು.

* ಬಸವೇಶ್ವರನು ಪಂಡಿತಾರಾಧ್ಯರಿಗೆ ಕನ್ನಡಭಾಷೆಯನ್ನು ದಯಪಾಲಸಿದಂತೆ ನಿಮ್ಮನ್ನು ನೋಡಲು ತಮಿಳುನಾಡಿನಿಂದ ಬಂದ ವೀರೇಶನಿಗೆ ಕನ್ನಡಭಾಷೆಯನ್ನು ದಯಪಾಲಿಸಿದಿರಿ. ಈ ಭೂಮಿಯಲ್ಲಿ ನಿಮ್ಮ ಮಹಿಮೆ ಉಪಮಾತೀತವಾದುದು. ಸಲಹಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೬೯

ಹರ ಗಾನರಸಕೊಲ್ದು ಪಾಡೆನಲ್ಕೊಲ್ಲದ
ತ್ಯುರುಲಿಂಗಪೂಜೆಗಂ ಪೋದ ಹನುಮನಲಿಂಗ
ವಿರದೆ ಬಯಲಂ ಮಾಡಿ ನುತಿಸಲಿತ್ತೀಶನೊಲು ಸುಪ್ರಸಾದದ ಕುಸುಮವಾ
ತರಳಾಕ್ಷಿ ಗೂಳೂರೊಳೊಲ್ಲೆನೆನೆ ಲಿಂಗವಂ
ತರಸಿ ಪೋಗ[೬೭][ಲ್ಕೊಡೆ][೬೭] ನೀಂ [೬೮][ಮೊರೆಯೊ][೬೮]ಗಲ್ಕಿತ್ತೆ
ಪರಮಮಹಿಮಾಭರಣ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಹರ–ಶಿವ, ಪಾಡು–ಹಾಡು, ಉರು–ಶ್ರೇಷ್ಠ, ನುತಿಸು–ಸ್ತುತಿಸು, ಈಶ–ಶಿವ, ಕುಸುಮ–ಹೂವು, ತರಳಾಕ್ಷಿ–ಚಂಚಲನೇತ್ರ, ಸ್ತ್ರೀ; ಅಂತರಿಸಿ–ಮಾಯವಾಗಿ, ಮೊರೆಯೊಗು–ಆಶ್ರಯಪಡೆ, ಶರಣಾಗು; ಪರಮ–ಶ್ರೇಷ್ಠ.

* ಸಂಗೀತರಸಕ್ಕೊಲಿದ ಶಿವನು ಹಾಡನ್ನು ಹೇಳೆಂದರೂ ಮೀರಿ ಲಿಂಗಪೂಜೆಗೆ ಹೋದ ಹನುಮಂತನ ಆರಾಧ್ಯಲಿಂಗವನ್ನೇ ಬಯಲುಮಾಡಿ, ಆತನು ಸ್ತುತಿಸಲು ಆ ಲಿಂಗವನ್ನು ತಿರುಗಿ ನೀಡಿದನು. ಹಾಗೆಯೇ ಪ್ರಸಾದರೂಪದಲ್ಲಿ ನೀಡಿದ ಹೂವನ್ನು ಗೂಳೂರಿನ ಹೆಣ್ಣುಮಗಳೊಬ್ಬಳು

೬೭–೬೭ ಲ್ಕೊಡಂ (ಮೂ), ೬೮–೬೮ ಮರೆಯಾ (ಮೂ).

ನಿರಾಕರಿಸುವಲ್ಲಿ ಆಕೆಯು ಶಿವಲಿಂಗ ವಾಾಯುವಾಗಲು, ಅವಳ ಮೊರೆಯನ್ನು ಕೇಳಿ ಪರಮಮಹಿಮಾಭರಣನೇ ಅವಳಿಗೆ ಅದನ್ನು ದಯಪಾಲಿಸಿದೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೦

ಗುರಸಿದ್ಧರಾಮಯೆನ್ನದೆ ಧೂಳಿಮಾಕಾಳ
ಪಿರಿದೆಂದು ಪೆಸರಿಡಲು ಪಾಲ್ವೆಣ್ಣೆಗಂ ಬಾಯ
ದೆರೆಯದಿಹ ಸಿದ್ಧನೊಲು ನಿಮ್ಮ ಪೆಸರಿಡಲಳ್ಕಿ ತಮ್ಮ ದೇವರ ಪೆಸರಲಿ
ಕರೆಯೆ ಭೂಸುರರು ಶಿಶು ಮರವಟ್ಟು ಮೊಲೆಯುಣ್ಣ
ದಿರೆ ಶರಣ್ಬೊಕ್ಕು ಪೆಸರಿಡಲು ರಕ್ಷಿಸಿದ ಶಂ
ಕರನ ನಿಜರೂಪ ಪೊರೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪೆಸರು–ಹೆಸರು, ಅಳ್ಕಿ–ಅಂಜಿ, ಹಿಂಜರಿದು; ಭೂಸುರ–ಬ್ರಾಹ್ಮಣ, ಶಿಶು–ಮಗು, ಮರವಡು–ಮೂರ್ಛೆಹೊಂದು, ಶರಣ್ಬೊಕ್ಕು–ಶರಣಾಗತವಾಗಿ, ಪೊರೆ–ರಕ್ಷಿಸು.

* 'ಸಿದ್ಧರಾಮ' ಎಂಬುದಕ್ಕೆ ಬದಲು 'ಧೂಳಿಮಾಕಾಳ' ಎಂಬ ಹೆಸರಿಟ್ಟ ಕಾರಣ ಹಾಲುಬೆಣ್ಣೆಗೆ ಬಾಯನ್ನು ತೆರೆಯದ ಶಿಶುಸಿದ್ಧರಾಮನಂತೆ ಜನಿಸಿದ ಮಗುವೊಂದಕ್ಕೆ ಬ್ರಾಹ್ಮಣರು ನಿಮ್ಮ ಹೆಸರನ್ನು ಇಡಲು ಹಿಂಜರಿದು ತಮ್ಮ ಕುಲದೈವದ ಹೆಸರಿನಿಂದ ಕರೆಯಲು, ಮಗು ಮೈಮರೆತು ಮೊಲೆಹಾಲು ಕುಡಿಯದಿರಲು ಶರಣಾಗತರಾಗಿ ಆ ಮಗುವಿಗೆ ನಿಮ್ಮ ಹೆಸರನ್ನಿಡಲು ಅವರನ್ನು ರಕ್ಷಿಸಿದ ಶಿವನ ನಿಜರೂಪನೇ ರಕ್ಷಿಸು. ಗುರವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೧

ಅನುನಯದೆ ನುತಿಸಿ ದೇಗುಲದ ಮುಖವಂ ತಿರುಹಿ
ದನು ರಾಘವಾಂಕಪಂಡಿತನೆಂಬುವರು ದೇವ
ಮನೆಯ ದಿಕ್ಕಿಗೆ ಬಾಳೆ ಪೂತು ಫಲವಾಗಲವರಳ್ಕಿ ನಿಮ್ಮಾಣೆಯಿಡಲು
ಗೊನೆ ಸಹಿತ ಬಾಳೆ ಪೊರದೆಸೆಗೆ ಮುಖವಾದುದ
ತ್ಯನುಪನು ಮಹಾಮಹಿಮ ಪೊಗಳಲಳವೇ ನಿಮ್ಮ
ಘನವನೆನ್ನಂ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅನುನಯ–ಪ್ರೀತಿ, ಭಕ್ತಿ; ನುತಿಸಿ–ಸ್ತುತಿಸಿ, ಪೂತು–ಹೂ ಬಿಟ್ಟು, ಫಲ–ಕಾಯಿ, ಹಣ್ಣು; ಅಳ್ಕಿ–ಭಯಪಟ್ಟು, ಪೊರದೆಸೆ–ಹೊರಗಿನ ಜಾಗ, ಅನುಪಮ–ಶ್ರೇಷ್ಠ, ಪೊಗಳು–ಹೊಗಳು, ಕೀರ್ತಿಸು; ಅಳವು–ಸಾಮರ್ಥ್ಯ, ಶಕ್ತಿ; ಸಲಹು–ಕಾಪಾಡು.

* ರಾಘವಾಂಕಪಂಡಿತನು ಭಕ್ತಿಯಿಂದ ಸ್ತುತಿಸಿ ದೇವಾಲಯದ ಮುಖವನ್ನು ತಿರುಗಿಸಿದನೆನ್ನುವರು, ದೇವಾ ಮನೆಯ ದಿಕ್ಕಿಗೆ ಹೂಬಿಟ್ಟು ಫಲವನ್ನು ಹೊತ್ತು ನಿಂತ ಬಾಳೆಗಿಡವನ್ನು ಕಂಡು ಭಯಗ್ರಸ್ತರಾಗಿ ನಿಮ್ಮಾಣೆಯನ್ನಿಡಲು, ಆ ಬಾಳೆಗಿಡ ಗೊನೆಸಹಿತ ಹೊರಗಿನ ಭಾಗಕ್ಕೆ ಮುಖಮಾಡಿತು. ಇಂಥ ಮಹಾಮಹಿಮನಾದ ನಿನ್ನ ಘನತೆಯನ್ನು ಹೊಗಳಲು ನನಗೆ ಸಾಧ್ಯವೇ ? ರಕ್ಷಿಸಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೨

ಹುಟ್ಟುಗುರುಡಂ ನಿಮ್ಮ ಪಾದಮಂ ಧ್ಯಾನಿಸುತ
ಪಟ್ಟಣದ ಕೇರಿಯಲ್ಲಿರೆ ಲಿಂಗರೂಪಿನಿಂ
ಹುಟ್ಟಿ ಮನದಿಷ್ಟಮಂ ಕೊಟ್ಟು ಸಲಹಿದ ಪರಿಯು ಸೌರಾಷ್ಟ್ರಸೋಮೇಶ್ವರಂ
ನೆಟ್ಟನೆ ಕೊಟಾರದೊಳು ಜನಿಸಿ ಬಾಚರಸರಂ
ಮುಟ್ಟಿ ರಕ್ಷಿಸಿದ ತೆರನಾಯ್ತೆಂದು ವಿಸ್ಮಯಂ
ಬಟ್ಟುದುಂ ಧರೆ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಧ್ಯಾನ–ನಾಮಸ್ಮರಣೆ, ಕೇರಿ–ಓಣಿ, ಇಷ್ಟ–ಬಯಕೆ, ಪರಿ–ರೀತಿ, ಕೊಟಾರ–ಗುಡಿಸಲು, ತೆರ–ರೀತಿ, ವಿಸ್ಮಯಂಬಟ್ಟುದ–ಆಶ್ಚರ್ಯಪಟ್ಟುದು, ಧರೆ–ಭೂಮಿ, ಸಲಹು–ಕಾಪಾಡು.

* ಪಟ್ಟಣದ ಓಣಿಯಲ್ಲಿ ಹುಟ್ಟುಗುರುಡನೊಬ್ಬನು ನಿಮ್ಮ ನಾಮಸ್ಮರಣೆಯನ್ನು ಮಾಡುತ್ತಿರಲು, ನೀನು ಲಿಂಗರೂಪದಿಂದ ಉದಯಿಸಿ ಅವನಿಗೆ ನೇತ್ರದಾನ ಮಾಡಿದ ರೀತಿಯು, ಸೌರಾಷ್ಟ್ರಸೋಮೇಶ್ವರನು ಗುಡಿಸಲಿನಲ್ಲಿ ಹುಟ್ಟಿ ಬಾಚರಸರನ್ನು ರಕ್ಷಿಸಿದ ಹಾಗಾಯಿತೆಂದು ಭೂಲೋಕವೆಲ್ಲ ಆಶ್ಚರ್ಯಪಟ್ಟಿತು. ರಕ್ಷಿಸಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ತನ್ನ ಕಲ್ಪತರುವೇ.

೭೩

ನೆಲ್ಲ ಕುದಿಸುವ ಹರವಿ ಬಿರಿದೊಡೆದು ಬೀಳ್ವನಿತ
ರಲಿ ನಿಮ್ಮಾಣೆಯಿಡೆ ಬಲಿದೊಲೆಯ ಮೇಲೆ ನಿಲೆ
ಗೊಲ್ಲತಿಯು ಜಾರಿ ಬೀಳುತ್ತ ಬಸವಾ ಎನಲು ನೃಪಸಭೆಯೊಳಿರ್ದು ಕೊಡನಾ
ನಲ್ಲ ಬಸವಂ ಪಿಡಿದು ನಿಲಿಸಿದಂತಾಯಿತೆಂ
ದೆಲ್ಲ ಭಕ್ತರು ನಿಮ್ಮ ಪೊಗಳ್ದರುಂ ಹೊನ್ನುಡಿಕೆ
ಯಲ್ಲಿ ಪಾಲಿಪುದೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನೆಲ್ಲ–ಬತ್ತ, ಬಿರಿ–ಬಿರುಕುಬಿಡು, ಅನಿತರಲ್ಲಿ–ಅಷ್ಟರಲ್ಲಿ, ಬಲಿದು–ಗಟ್ಟಿಯಾಗಿ, ನೃಪ–ರಾಜ, ನಲ್ಲ–ಪ್ರೀತಿಯಿಂದ, ಪೊಗಳು–ಹೊಗಳು, ಕಿರ್ತಿಸು; ಪಾಲಿಪು–ರಕ್ಷಿಸು.

* ನೆಲ್ಲು ಕುದಿಸುವ ಮಣ್ಣಿನ ಮಡಿಕೆ ಬಿರುಕುಬಿಟ್ಟು ಒಡೆದು ಕೆಳಗೆ ಬೀಳುವಷ್ಟರಲ್ಲಿ ನಿಮ್ಮಾಣೆಯಿಡಲು ಅದು ಮತ್ತೆ ಗಟ್ಟಿಯಾಗಿ ಒಲೆಯ ಮೇಲೆ ನಿಂತುದು, ಗೊಲ್ಲತಿಯೊಬ್ಬಳು ಜಾರಿ ಬೀಳುವಾಗ 'ಬಸವಾ' ಎಂದು ಸ್ಮರಿಸಲು ಬಸವೇಶ್ವರನು ರಾಜನ ಸಭೆಯಲ್ಲಿದ್ದುಕೊಂಡೇ ಆಕೆಯ ತಲೆಯ ಮೇಲಿನ ಕೊಡವನ್ನು ಹಿಡಿದು ನಿಲ್ಲಿಸಿದಂತಾಯಿತೆಂದು ಹೊನ್ನುಡಿಕೆ ಗ್ರಾಮದ ಭಕ್ತಸಮೂಹ ನಿಮ್ಮನ್ನು ಹೊಗಳಿದರು. ನನ್ನನ್ನು ರಕ್ಷಿಸುವುದಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೪

ನೆಲ [೧೯][ಪೊ][೧೯]ಗಳೆ ಗೆಲ್ದುಂ ಖಲಿಂದರರ ಲೋಕಕ್ಕೆ
ಮಳೆಯ ಕರೆಸಿದ ಮಳೆಯಮಲ್ಲೇಶ್ವರನ ತೆರದೆ
ಮಳೆಯಿಲ್ಲದೆಲ್ಲ[೨೦][ರುಂ][೨೦] ಪಲುಬೆ ವ್ಯಾಪರಿಗತಿ ಕೃಪೆಯಿಂದೆ ಬಾಂಬೊಳೆಯನು
ಇಳೆಗಿಳುಹಿಸಿದನೊಯೆಂಬಂತೆ ಪೆರ್ಮಳೆಗರೆಸಿ
ಯುಳುಹಿದಿರಿ ಸರ್ವರಂ ನಿಮ್ಮಂತೆ ಭೂತಹಿತ
ರೊಳರೆ ಮೂಲೋಕದೊಳು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನೆಲ–ಭೂಮಿ, ಖಲಿಂದರಲೋಕ–ಅರಬಸ್ಥಾನ, ಮಳೆಯಮಲ್ಲೇಶ–ಗುರು ಸಿದ್ಧನಂಜೇಶನ ಶಿಷ್ಯ, ಕವಿಚಿಕ್ಕನಂಜೇಶನ ಸಹಾಧ್ಯಾಯಿ, ಚೆನ್ನಬಸವಪುರಾಣದ ಕರ್ತೃತ ವಿರೂಪಾಕ್ಷಪಂಡಿತನ ಗುರುವಿನ ಗುರುವಾಗಿರುವ ಈತನು ಪಂಪಾಕ್ಷೇತ್ರದ ಹಿರೇಮಠದ ಪಟ್ಟಾಧಿಕಾರಿಯಾಗಿದ್ದನು. ಪ್ರೌಢರಾಯನ ಕಾವ್ಯದ ಅದ್ರೀಶಕವಿಯ ಗುರು, ಬೆಳ್ಳುಬ್ಬಿಯ ಮಳೆಯಮಲ್ಲೇಶನು ಈತನೇ ಆಗಿರಬಹುದು. ಅರಬಸ್ತಾನಕ್ಕೆ ಹೋಗಿ ಮಳೆಯ ಪವಾಡ ಮೆರೆದ ವ್ಯಕ್ತಿಯೀತ, ಈತ ಮತ್ತು ತೋಂಟದಾರ್ಯರ ಶಿಷ್ಯ ಬೆಳ್ಳುಬ್ಬಿಯ ಮಳೆಯಮಲ್ಲೇಶ ಒಬ್ಬನೇ ಆಗಿರಬಹುದು; ಪಲುಬು–ಹಲುಬ; ವ್ಯಾಪಾರಿಗತಿ–ಕ್ರಿಯಾಶೀಲ ರೀತಿ (?), ಬಾಂಬೊಳೆ–ಆಕಾಶಗಂಗೆ, ಇಳೆ–ಭೂಮಿ, ಪೆರ್ಮಳೆ–ದೊಡ್ಡಮಳೆ, ಭೂತಹಿತ–ಪ್ರಾಣಿಹಿತವಂತ.

* ಲೋಕವೆಲ್ಲ ಹೊಗಳುವಂತೆ ಜಯಶಾಲಿಯಾಗಿ ಅರಬಸ್ಥಾನದಲ್ಲಿ ಮಳೆಯನ್ನು ಬರಿಸಿದ ಮಳೆಯಮಲ್ಲೇಶನ ಹಾಗೆ, ಮಳೆಬರದೆ ಜನರೆಲ್ಲ ಹಲುಬುತ್ತಿರಲು ಕ್ರಿಯಾಶೀಲ ರೀತಿಯ ಕೃಪಾಶೀರ್ವಾದದಿಂದ ಆಕಾಶಗಂಗೆಯನ್ನು ಭೂಮಿಗೆ ಕರೆತಂದನೋ ಎಂಬಂತೆ ದೊಡ್ಡಮಳೆಯನ್ನು ಉಂಟುಮಾಡಿ, ಎಲ್ಲರನ್ನೂ ರಕ್ಷಿಸಿದಿರಿ. ನಿಮ್ಮಂತೆ ಭೂತದಯಾಪರರು ತ್ರಿಲೋಕದಲ್ಲಿ ಇನ್ನಾರಾದರೂ ಇದ್ದಾರೆಯೇ? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೯–೧೯ ಮೊ (ಮೂ). ೨೦–೨೦ ರು (ಮೂ).

೭೫

ಗುರುಲಿಂಗಜಂಗಮ ತ್ರಿವಿಧವಾದಾತನು[೭೧][ಂ][೭೧]

ಪಿರಿದು ಪೂಜಿಸಲು ಸದ್ಭಕ್ತನಾದಾತನುಂ

ವರ ಬಸವನೇ ನಾನೆಂದು [೭೨][ಹರ ಗಿರಿಜೆಗೊರೆದು][೭೨] ದೃಷ್ಟವ ತೋರ್ದೊಲು

ಭರದೆ ಬಸವನ ರೂಪಿನಿಂ ಜನಿಸಿಯಾಸಂದಿ

ಪುರದ ಭಕ್ತರ ಮನೋರಥವಿತ್ತು ಪಾಲಿಸಿದ

ಪರಮಪುರುಷನೆ ಸಲಹು [೭೩][ಗುರುವೆ][೭೩] ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಹರ–ಶಿವ, ಗಿರಿಜೆ–ಪಾರ್ವತಿ, ಬರೆ–ರಚಿಸು, ಹೇಳು; ದೃಷ್ಟ–ಪ್ರತ್ಯಕ್ಷ, ಭರದೆ–ತತ್‌ಕ್ಷಣ, ಮನೋರಥ–ಮನದಿಚ್ಛೆ, ಪಾಲಿಸು–ಸಲಹು, ಪರಮಪುರುಷ–ಕಾರಣಪುರುಷ.

* (ಪೂಜಿಸಿಕೊಳ್ಳಲು) ಗುರುಲಿಂಗಜಂಗಮವೆಂಬ ತ್ರಿವಿಧವಾದಾತನೂ (ಇವುಗಳನ್ನೂ) ಪೂಜಿಸಲು ಸದ್ಭಕ್ತನಾದಾತನೂ ಆಗಿರುವ ಬಸವೇಶ್ವರನೇ ನಾನು ಎಂದು ಶಿವನು ಪಾರ್ವತಿಗೆ ಪ್ರತ್ಯಕ್ಷಮಾಡಿ ತೋರಿಸಿದಂತೆ, ಕೂಡಲೇ ಬಸವನ ರೂಪಿನಿಂದ ಉದಯಿಸಿ ಆಸಂದಿಪುರದ ಭಕ್ತರ ಬಯಕೆಯನ್ನು ಪೂರೈಸಿ, ರಕ್ಷಿಸಿದ ಪರಮಪುರಷನೇ ನನ್ನನ್ನು ಸಲಹಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೬

ಮಾರುಡಿಗೆಯೊಳು ನೊಂದು ಬಂದು ಪೊರಗಿರೆ ಭಕ್ತ

ಮಾರಾರಿ ಸ್ವಪ್ನದೊಳು ನಾಚಯ್ಯಗೊರೆದಂತೆ

ಘೋರರಾತ್ರಿಯೊಳು ಹರಿವಾಣಕ್ಕೆ ಬಂದೊರ್ವ ಭಕ್ತ ಹೊರಬಾಗಿಲೊಳಿರೆ

ಸಾರಿ ಸ್ವಪ್ನದಿ ನೀವು ಮನೆಯವರ್ಗೆ ಪೇಳಲವ

ರಾರೈದು ಕಂಡಿತ್ತರೆರಗಿ ಹರಿವಾಣಮನ

ಪಾರಮಹಿಮಾಗಾರ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪೊರಗೆ–ಹೊರಗೆ, ಮಾರಾರಿ–ಕಾಮವೈರಿ, ಶಿವ; ಒರೆ–ಹೇಳು, ಹರಿವಾಣ–ತಳಿಗೆ, ಸಾರಿ–ಸಮಿಪಕ್ಕೆ ಹೋಗಿ, ಆರೈ–ವಿಚಾರಿಸು. ಎರಗಿ–ನಮಸ್ಕರಿಸಿ, ಆಗಾರ–ಮನೆ.

* ನೊಂದುಬಂದ ಶಿವಭಕ್ತನೊಬ್ಬನು ಮಾರುಡಿಗೆಯ ಹೊರವಲಯದಲ್ಲಿರಲು ಶಿವನು ಆ ವಿಷಯವನ್ನು ನಾಚಯ್ಯನಿಗೆ ಕನಸಿನಲ್ಲಿ ಹೇಳಿದಂತೆ ಕರಾಳರಾತ್ರಿಯಲ್ಲಿ ಊಟಕ್ಕಾಗಿ ಬಂದು ಶಿವಭಕ್ತನೊಬ್ಬನು ಹೊರಬಾಗಿಲಲ್ಲಿರಲು, ನೀವು ಮನೆಯವರಿಗೆ ಸ್ವಪ್ನದಲ್ಲಿ ಆ ವಿಷಯವನ್ನು ತಿಳಸಲು, ಅವರು ಶಿವಭಕ್ತನನ್ನು ಕಂಡು ನಮಸ್ಕರಿಸಿ ತಳಿಗೆಯನ್ನು ನೀಡಿದರು. ಇಂಥ ಮಹಿಮೆಗೆ ಮನೆಯಾಗಿರುವವನು ನೀನು ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೧–೭೧ x (ಮೂ), ೭೨–೭೨ ಹರನಿಜೆನೊರೆದ (ಮೂ), ೭೩–೭೩ x (ಮೂ).

೭೭

ಶತದಳದ ಕುಸುಮಮಂ ಬೆಟ್ಟದಾವರೆಯ[೭೪][ಮ][೭೪]ರ
ನತಿಭಕ್ತಿಯಿಂದ ನಮಿಸಿಯೊಲಿದು ನಿಮಗಿತ್ತುದುಂ
ಸತತ ಸದ್ಭಕ್ತಿಯಿಂ ಪೂಗಿಡಗಳುಂ ಮಣಿದು ದಸರಯ್ಯಗಿತ್ತಂದದಿ
ಕ್ಷಿತಿಯೊಳಪ್ರತಿಮನಲ್ಲದೆ ಜಾವಳನೆ ನೀನು
ಮತಿಯ ಹವಣೇ ನಿಮ್ಮ ಮಹಿಮೆಯಂ ಪೊಗಳುವೊಡೆ
ಯತಿರಾಯ ಸಲಹೆನ್ನ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಶತದಳದ ಕುಸುಮ–ಕಮಲ, ಮಣಿದು–ಬಾಗಿ, ಕ್ಷಿತಿ–ಭೂಮಿ, ಅಪ್ರತಿಮ–ಹೋಲಿಕೆಗೆ ಮೀರಿದ, ಜಾವಳ–ಸಾಮಾನ್ಯ, ಮತಿ–ಬುದ್ಧಿ, ಹವಣು–ಸಾಧ್ಯ, ಪೊಗಳು–ಕೀರ್ತಿಸು, ಸಲಹು–ರಕ್ಷಿಸು.

* ಬೆಟ್ಟದಾವರೆಯ ಮರವು ಅತಿಭಕ್ತಿಯಿಂದ ನಿಮ್ಮ ಪಾದಗಳಿಗೆ ನಮಸ್ಕರಿಸಿ, ನೂರುದಳದ ಕುಸುಮ(ಕಮಲ)ವನ್ನು ಅರ್ಪಿಸಿದುದು, ಹೂಗಿಡಗಳು ಬಾಗಿ ಸದ್ಭಕ್ತಿಯಿಂದ ದಸರಯ್ಯನಿಗೆ ಹೂವುಗಳನ್ನು ನೀಡಿದಂತಾಯಿತು. ಈ ಭೂಮಿಯಲ್ಲಿ ನೀನು ಮಹಾನುಭಾವನಲ್ಲದೆ ಸಾಮಾನ್ಯನೇ? ನಿಮ್ಮ ಮಹಿಮೆಯನ್ನು ಹೊಗಳುವುದು ನನ್ನ ಬುದ್ಧಿಗೆ ಶಕ್ಯವೇ? ಯತಿರಾಜ ನನ್ನನ್ನು ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೮

ಈಶಾವತಾರನೆಂದರಿಯದೇ ದುರ್ಮದದೆ
ದಾಸನೊರ್ವಂ ನಿಮ್ಮ ನಿಂದಿಸಲು ಸ್ವಪ್ನದೊಳು
ಶೇಷಭೂಷಂ ದಂಡದಿಂ ತಿವಿಯಲೆಚ್ಚತ್ತು ಪಲ್ಗಳೆದುಮಿರೆ ಕಾಣು[೭೫][ತೆ][೭೫]
ಆಶು[೭೬][ವೇ][೭೬] ನಿಮ್ಮಡಿಯ ಮರೆಹೊಗಲು ಕವಿ ರಾಘ
ವೇಶಂಗೆ ಹರಿಯರಸ ಪಲ್ಗಳಿತ್ತಂತಿತ್ತು
ಪೋಷಿಸಿದೆಯವನ ಸದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಈಶಾವತಾರ–ಶಿವನ ಅವತಾರ, ಶೇಷಭೂಷ–ಹಾವಿನಿಂದ ಅಲಂಕೃತನಾದವ, ಶಿವ, ದಂಡ–ಕೋಲು, ತಿವಿ–ಚುಚ್ಚು, ಪಲ್ಗಳೆದು–ಹಲ್ಲುಕಳೆದು, ಆಶು–ತಕ್ಷಣವೇ, ಅಡಿ–ಪಾದ, ಮರೆಹೊಗು–ಆಶ್ರಯಿಸಿ, ಪೋಷಿಸು–ರಕ್ಷಿಸು.

* ನೀನು ಪರಶಿವನ ಅವತಾರವೆಂಬುದನ್ನು ತಿಳಿಯದೆ ದಾಸನೊಬ್ಬನು ಅಹಂಕಾರದಿಂದ ನಿಮ್ಮನ್ನು ನಿಂದಿಸಲು, ಅವನ ಕನಸಿನಲ್ಲಿ ಕಾಣಿಸಿಕೊಂಡು ಕೋಲಿನಿಂದ ತಿವಿದು ಎಬ್ಬಿಸಿ, ಹಲ್ಲುಗಳನ್ನು

೭೪-೭೪ ವ (ಮೂ), ೭೫-೭೫ x (ಮೂ), ೭೬-೭೬ ವೈ (ಮೂ).

ಉದುರಿಸಿದಿರಿ, ಆಗ ಆ ದಾಸನು ನಿಮ್ಮಲ್ಲಿ ಶರಣಾಗತನಾಗಲು, ಹರಿಹರನು ರಾಘವಾಂಕನಿಗೆ ಹಲ್ಲುಗಳನ್ನು ದಯಪಾಲಿಸಿದಂತೆ ನೀವು ಆತನಿಗೆ ಹಲ್ಲುಗಳನ್ನಿತ್ತು ಸಲಹಿದಿರಿ. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೯

ಮಲ್ಲಣಾರ್ಯಜ ತ್ವತ್ಪ್ರಬಂಧಮಂ ರಚಿಸಿಯಿರ
ಲೊಲ್ಲೆ ನಿರ್ವಂಶಮಂ ಮಾಡೆನಲ್ಕಿತ್ತೆ ಮುದ
ದಲ್ಲಿ ನಿಮ್ಮಂಘ್ರಿಯಂ ಪೊಗಳ್ದೆನ್ನಯ ಮನದ ಕಾಮನಿರ್ಮೂಲಮಾಗೆ
ಕೊಲ್ಲು ದಯಮಂ ಮೇಲೆ ಚೆಲ್ಲು ಹೃದಯದೊಳೊಲಿದು
ನಿಲ್ಲು ಮೃದುತರವಾದ ಸೊಲ್ಲುಗಳನಿತ್ತು ಯತಿ
ವಲ್ಲಭನೆ ಸಲಹು ಮದ್ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಲ್ಲಣಾರ್ಯಜ–ಗುಬ್ಬಿಯ ಮಲ್ಲಣಾರ್ಯನ ಮಗನಾದ ಶಾಂತೇಶ ಕವಿ, ತ್ವತ್–ನಿನ್ನ, ಪ್ರಬಂಧ–ಕೃತಿ, ನಿರ್ವಂಶ–ವಂಶನಿರ್ಮೂಲನ, ಮುದ–ಪ್ರೀತಿ, ಅಂಘ್ರಿ–ಪಾದ, ಪೊಗಳ್–ಕೀರ್ತಿಸು, ಸೊಲ್ಲು–ಮಾತು, ವಲ್ಲಭ–ಒಡೆಯ.

* ನಿಮ್ಮನ್ನು ಕುರಿತು ಕಾವ್ಯವನ್ನು ರಚಿಸಿದ ಗುಬ್ಬಿಯ ಮಲ್ಲಣಾರ್ಯನ ಮಗನಾದ ಶಾಂತೇಶನು "ನಾನು ಇನ್ನು ಜೀವಿಸುವುದು ಸಾಕು ಇಲ್ಲಿಗೆ ನನ್ನ ವಂಶವನ್ನು ನಿರ್ವಂಶ ಮಾಡು" ಎನ್ನಲು. ಲಿಂಗೈಕ್ಯಪದವಿಯನ್ನು ದಯಪಾಲಿಸಿದಿರಿ. ಹಾಗೆಯೇ ನಿಮ್ಮ ಪಾದವನ್ನು ಸ್ತುತಿಸುವ ನನ್ನ ಮನದ ಕಾಮವನ್ನು ನಿರ್ಮೂಲವಾಗುವಂತೆ ಕೊಲ್ಲು, ದಯಾದೃಷ್ಟಿಯನ್ನು ಚೆಲ್ಲು. ನನ್ನ ಹೃದಯಮಂದಿರದಲ್ಲಿ ನಿಲ್ಲು, ಮೃದುತರವಾದ ಸೊಲ್ಲುಗಳನ್ನು ದಯಪಾಲಿಸಿ ಯತಿವಲ್ಲಭನೇ ಕಾಪಾಡು. ನನ್ನ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೦

ಜನಿಸಿದುದು ಮೊದಲು ಶಿವತತ್ತ್ವಪಥಮಂ ಕಾಣ
ದನುಗೆಟ್ಟು ನಡೆವ ಜಾತ್ಯಂಧಕರು ನಿಮ್ಮಡಿಯ
ನೆನೆಯೆ ಸುಜ್ಞಾನದೃಷ್ಟಿಯನಿತ್ತು ಶಿವಪದವ ತೋರಿ ಪಾಲಿಪಿರಿ ಮುನ್ನಾ
ವಿನುತ ಕವಿಕಾಳಿದಾಸಾದಿಗಳು ಕಣ್ಗಳಂ
ಜನವರಿಯೆ ಕುರುಡರ್ಗೆ ಕೊಟ್ಟುದುದಕಿಂದಲತಿ
ಘನವಲಾ ತ್ವನ್ಮಹಿಮೆ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಜನಿಸು–ಹುಟ್ಟು, ಪಥ–ಮಾರ್ಗ, ದಾರಿ; ಅನುಗೆಡು–ರೀತಿಗೆಡು, ಜಾತ್ಯಂಧಕ–ಹುಟ್ಟುಗುರುಡ, ಅಡಿ–ಪಾದ, ನೆನೆ–ಸ್ಮರಿಸು, ಧ್ಯಾನಿಸು; ವಿನುತ–ಶ್ರೇಷ್ಠ, ಘನ–ಮಿಗಿಲು, ತ್ವತ್–ನಿನ್ನ.

* ಹುಟ್ಟಿನಿಂದ ಮೊದಲುಮಾಡಿ ಶಿವತತ್ತ್ವಮಾರ್ಗವನ್ನು ಕಾಣದೆ ರೀತಿಗೆಟ್ಟು ನಡೆಯುವ ಹುಟ್ಟುಗುರುಡರು ನಿಮ್ಮ ನಾಮಸ್ಮರಣೆಮಾಡಲು ಅವರಿಗೆ ಸುಜ್ಞಾನ ದೃಷ್ಟಿಯನ್ನು ದಯಪಾಲಿಸಿ, ಶಿವಮಾರ್ಗವನ್ನು ತೋರಿಸಿ ರಕ್ಷಿಸಿದಿರಿ. ಪೂರ್ವದಲ್ಲಿ ಕವಿಕಾಳಿದಾಸ ಮೊದಲಾದವರು ಕುರುಡರಿಗೆ ಕಣ್ಣು ನೀಡಿದುದಕಿಂತ ಈ ನಿನ್ನ ಮಹಿಮೆ ಮಿಗಿಲಾದುದು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೧

ನನ್ನಯ್ಯ ಹೊನ್ನಯ್ಯ ಚೆನ್ನಯ್ಯಗಳ ರೀತಿ
ನಿನ್ನೊ[೨೨][ಳ][೨೨]ರೆ ಗುರುಪೂಜ್ಯ ಕರಣಾಮೃತವ ತಾಳ್ದ
ಉನ್ನತಾಂಗಂ ಶಂಭು ಸಹಭೋಜನಂಗಳಿಂದೊಪ್ಪಿ ಪರಿರಾಜಿಸುತಿರೆ
ಪನ್ನಗೇಂದ್ರರಿಗರಿದು ಕೀರ್ತಿಪೊಡೆ ಮೋಕ್ಷಸಂ
ಪನ್ನಯ್ಯ ನನ್ನಯ್ಯ ಹೊನ್ನಯ್ಯ ಚೆನ್ನಯ್ಯ
ನಿನ್ನ ಘನಮಂ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನನ್ನಯ್ಯ–ಗುರು ಸುಜ್ಞಾನಿದೇವನ ಪ್ರಾಣವನ್ನು ಪಡೆದ ಒಬ್ಬ ಶರಣ, ಹೊನ್ನಯ್ಯ–ಬಿಜ್ಜಳನಿಗೆ ಅಂಟಿದ ತೊನ್ನುರೋಗವನ್ನು ಕಳೆದ ಕರುಣಾಳು ಅಗ್ಘವಣಿ ಹೊನ್ನಯ್ಯ, ಶಂಭು–ಶಿವ, ಪರಿರಾಜಿಸು–ಚೆನ್ನಾಗಿ ಪ್ರಕಾಶಿಸು, ಪನ್ನಗೇಂದ್ರ–ಆದಿಶೇಷ, ಅರಿ–ತಿಳಿ, ಕೀರ್ತಿಸು–ಹೊಗಳು, ಸಲಹು–ರಕ್ಷಿಸು.

* ಶರಣ ನನ್ನನ್ನು ಹೊನ್ನಯ್ಯ ಚೆನ್ನಯ್ಯಗಳ ನಡವಳಿಕೆ ನಿನ್ನಲ್ಲಿರುವುದರಿಂದ (ಕ್ರಮವಾಗಿ) ಗುರುಪೂಜ್ಯ, ಕರುಣಾಮೃತವ ತಾಳ್ದ ಉನ್ನತಾಂಗ, ಶಂಭು ಸಹ ಭೋಜನಗಳಿಂದ ನೀನು ಶೋಭಿಸುತ್ತಿರಲು ಮೋಕ್ಷಸಂಪನ್ನನಾದ ನನ್ನ ಒಡೆಯನೂ (ನನ್ನ+ಅಯ್ಯ) ಬಂಗಾರದಂಥ ಒಡೆಯನೂ (ಹೊನ್ನ_ಅಯ್ಯ), ಚೆನ್ನಾದೊಡೆಯನೂ (ಚೆನ್ನ+ಅಯ್ಯ) ಆದ ನಿನ್ನ ಘನತೆಯನ್ನು ಹೊಗಳುವುದು ಆದಿಶೇಷನಿಗೂ ಅಸಾಧ್ಯ, ಸಲಹಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೨

ವರ ಸಿದ್ಧರಾಮನುಂ ನೀವು ತೋಂಟದೆ ಶಿವನ
ಬೆರಸುವಾಗಂಗಜನ ಗೆದ್ದು ಹುತ್ತದೊಳಿರ್ದು
ಸರಿ ಪೂಜ್ಯವಡೆದಿರಾತಂ ನರಕದಲ್ಲಿರ್ದ ಬಿಲ್ಲೇಶಬೊಮ್ಮಯ್ಯನಾ
ಪರಿದೆಯ್ದಿ ತೆಗೆದುದಕೆ ಸಂಸಾರವೆಂದೆಂಬ
ನರಕದಿಂದೆನ್ನ ತೆಗೆದುದ್ದರಿಸಿದೊಡಸದೃಶ
ತರ ಕೀರ್ತಿ ಬಹುದು ಸದ್ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

೨೨–೨೨ ಳ (ಮೂ)

* ಬೆರಸು–ಕೂಡುಮ ಐಕ್ಯಹೊಂದು; ಅಂಗಜ–ಕಾಮ, ಪರಿದೆಯ್ದು–ಮುಂದಕ್ಕೆ ಧಾವಿಸಿಹೋಗಿ, ಉದ್ಧರಿಸು–ಮೇಲಕ್ಕೆ ಎತ್ತು, ಅಸದೃಶ–ಉಪಮಾತೀತ.

* ಶಿವಯೋಗಿ ಸಿದ್ಧರಾಮ ಹಾಗೂ ನೀವು ತೋಟದಲ್ಲಿ ಶಿವೈಕ್ಯರಾಗುವಾಗ ಕಾಮನನ್ನು ಜಯಿಸಿ, ಹುತ್ತದಲ್ಲಿ ವಾಸಿಸಿ ಸಮಾನ ಪೂಜ್ಯತೆಯನ್ನು ಹೊಂದಿದಿರಿ. ಆತನು ನರಕದಲ್ಲಿದ್ದ ಬಿಲ್ಲೇಶಬೊಮ್ಮಯ್ಯನನ್ನು ಮುಂದಕ್ಕೆ ಧಾವಿಸಿಹೋಗಿ ಮೇಲಕ್ಕೆ ಎತ್ತಿ ತೆಗೆದನು. ಅದೇ ರೀತಿ ನೀವು ಸಂಸಾರವೆಂಬ ನರಕದಿಂದ ನನ್ನನ್ನು ಮೇಲಕ್ಕೆ ಎತ್ತಿ ತೆಗೆದರೆ ನಿಮಗೆ ಉಪಮಾತೀತವಾದ ಕೀರ್ತಿ ಬರುವುದು. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೩

ಆನಧಿಕ ಸುಕೃತಿಯಾದೊಡೆ ನಿಮ್ಮ ಪಾದಮಂ
[೭೮]ಧ್ಯಾನಿಸಲದೇಕೆ[೭೮] ಕಾರ್ಬೊನ್ನು ಕುಂದಣಕೆ ಸ
ಮಾನ ವಿಕ್ರಯಮಾಗೆ ಸಿದ್ಧರಸಮಂ ಬೆದಕಿಯಾಯಸಂಗೊಳಲೇತಕೆ
ದೀನನಜ್ಞಾನಿ ಮತಿಹೀನನವಗತಪುಣ್ಯ
ದಾನವಿರಹಿತನಿವನೇನಪ್ಪುದೆನ್ನದೆ ದ
ಯಾನಿಧಿಯೆ ಸಲಹು ಸದ್ಗುರುವೇ ತೋಂಟದ ಸಿದ್ದಲಿಂಗ ಮತ್ಕಲ್ಪತರುವೇ

* ಆನು–ನಾನು, ಸುಕೃತಿ–ಪುಣ್ಯಶಾಲಿ, ಧ್ಯಾನಿಸು–ಸ್ಮರಿಸು, ಕಾರ್ಬೊನ್ನ–ಕಬ್ಬಿಣ, ಕುಂದಣ–ಚೊಕ್ಕಚಿನ್ನ, ವಿಕ್ರಯ–ಮಾರಾಟ, ಸಿದ್ಧರಸ–ಲೋಹವನ್ನು ಬಂಗಾರ ಮಾಡುವ ವಿಶೇಷರಸ, ಬೆದಕು–ಹುಡುಕಾಡು, ದೀನ–ಬಡವ, ಅವಗತ–ಕಳೆದುಹೋದ, ಇಲ್ಲದ.

* ನಾನು ಅತ್ಯಂತ ಪುಣ್ಯಶಾಲಿಯಾಗಿದ್ದುದೇ ಆದರೆ ನಿಮ್ಮ ಪಾದಸ್ಮರಣೆಯನ್ನು ಮಾತ್ರ ಮಾಡುತ್ತಲಿರಲಿ. ಕಬ್ಬಿಣ ಬಂಗಾರದ ಬೆಲೆಗೆ ಮಾರಾಟವಾದರೆ ಸಿದ್ಧರಸವನ್ನು ಹುಡುಕಿ ಏಕೆ ಶ್ರಮಪಡಲಿ? ಇವನು ದೀನನು ಅಜ್ಞಾನಿ ಬುದ್ಧಿಹೀನ ಪುಣ್ಯಹೀನ ದಾನರಹಿತನೆಂದನ್ನದೆ ದಯಾಪರನೇ ನನ್ನನ್ನು ರಕ್ಷಿಸು. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೪

ಕತ್ತಲೆಯನೆಬ್ಬಟ್ಟದಿರೆ ಪ್ರಭಾಕರ ನಾಮ
ವೆತ್ತಣದು ಸೂರ್ಯಂಗೆ ಲೋಹ ಹೊನ್ನಾಗದಿರೆ
ಪತ್ತುವುದೆ ಪರುಷಾಭಿಧಾನ ಪಾಷಣಕ್ಕೆ ಮಾಯಾಪ್ರಪಂಚು ತಲೆಯ

೭೮–೭೮ "ಧ್ಯಾನಿಸಲಿ+ಅದೇಕೆ" ಎಂದು ಬಿಡಿಸಿ ಓದಬೇಕು (ಸಂ).

ಎತ್ತಲೀಯದೆ ಸುತ್ತಿಯೊತ್ತಿ ಮೆಟ್ಟಲ್ಪಲುಂ
ಬುತ್ತ ನಿಮ್ಮಯ ಮರೆಯಹೊಕ್ಕೆ ಪಿಡಿದೆತ್ತದಿರ
ಲೆತ್ತಣದು ತ್ವನ್ಮಹಿಮೆ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಎಬ್ಬಟ್ಟು-ಬೆನ್ನಟ್ಟು, ಓಡಿಸು; ಪ್ರಭಾಕರ-ಸೂರ್ಯ, ನಾಮ-ಹೆಸರು, ಹೊನ್ನು-ಬಂಗಾರ, ಪರುಷ-ಲೋಹವನ್ನು ಬಂಗಾರ ಮಾಡುವ ಕಲ್ಲು, ಅಭಿಧಾನ-ಹೆಸರು, ಪಾಷಾಣ-ಕಲ್ಲು, ಪಲುಂಬು-ಹಲುಬು, ಮರೆಯಹೊಗು-ಶರಣಾಗತವಾಗು, ಆಶ್ರಯಪಡೆ; ತ್ವತ್-ನಿನ್ನ.

* ಕತ್ತಲೆಯನ್ನು ಓಡಿಸದಿದ್ದರೆ ಸೂರ್ಯನಿಗೆ ಪ್ರಭಾಕರನೆಂಬ ಹೆಸರು ಏಕೆ? ಲೋಹವನ್ನು ಬಂಗಾರವನ್ನಾಗಿ ಮಾಡದಿದ್ದರೆ ಪಾಷಾಣಕ್ಕೆ ಪರುಷವೆಂಬ ಹೆಸರು ಏಕೆ? ಮಾಯಾರೂಪದ ಸಂಸಾರವು ತಲೆಯನ್ನು ಎತ್ತಲೀಯದೆ ಸುತ್ತಿ ಒತ್ತಿ ಮೆಟ್ಟಲಾಗಿ ಹಲಬುತ್ತ ನಿಮ್ಮ ಮೊರೆಹೊಕ್ಕ ನನ್ನನ್ನು ಹಿಡಿದು ಎತ್ತದಿದ್ದರೆ ನಿಮ್ಮ ಮಹಿಮೆ ಎಂತಹದು? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೫

ಸೊಕ್ಕಿಯುದ್ರೇಕದಿಂ ಹೋಗಲಾಡಿದುದಲ್ಲ
ತಕ್ಕೆಯನಗಲ್ದಿನಿಯನಂ ಕಂಡು ನಿಜವನಿತೆ
ಧಿಕ್ಕರಿಸಿ ಕೋಪದಿಂ ಬಯ್ದೊಡಂ ಹೊಯ್ದೊಡಂ ಸರಸವಲ್ಲದೆ ವಿರಸಮೆ
ಅಕ್ಕರಿಂ ಪಡೆದವರು ಪುತ್ರರವರೋದನವ
ಲೆಕ್ಕಿಸದೆ ಪೊರೆವೊಲನ್ಯರ್ಮುದ್ದಿಪರೆ ಎನಗೆ
ದಿಕ್ಕು ನೀವೆ ಸಲಹು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಉದ್ರೇಕ-ಆವೇಶ; ಉದ್ಧಟತನ; ಹೋಗಲಾಡು-ದೂರಸರಿಸು; ಇನಿಯ-ಗಂಡ, ನಲ್ಲ; ವನಿತೆ-ಹೆಂಡತಿ, ಹೊಯ್-ಹೊಡೆ, ಬಡಿ; ಸರಸ-ಚೇಷ್ಟೆ. ಅಕ್ಕರ-ಪ್ರೀತಿ, ಪುತ್ರ-ಮಗ, ಅವರೋದನ-ಅಳುವಿಕೆ, ಪೊರೆ-ರಕ್ಷಿಸು.

* ಆಲಿಂಗನದಿಂದ ದೂರಾದ ನಲ್ಲನನ್ನು ತಿರಸ್ಕರಿಸಿ, ಸಿಟ್ಟಿನಿಂದ ಅವನನ್ನು ಬಯ್ದರೂ ಬಡಿದರೂ ಅದು ಚೇಷ್ಟೆಯೇ ಹೊರತು ದೋಷವಲ್ಲ, ಉದ್ರಿಕ್ತಕೋಪದಿಂದ ದೂರಸರಿಸಿದುದೂ ಅಲ್ಲ. ತಮ್ಮ ಮಕ್ಕಳ ಅಳುವಿಕೆಯನ್ನು ಲಕ್ಷಿಸದೆ ತಂದೆತಾಯಿಗಳಂತೆ ಬೇರೊಬ್ಬರು ಕಾಪಾಡುವರೇ? ನನಗೆ ನೀವೇ ಗತಿ. ಸಲಹಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೬

ಜೀವದಾಪೇಕ್ಷೆಯಿಂ ಭ್ರಮರನಂ ಹೃದಯದೊಳು
ಭಾವಿಸಿದ ಕೀಟಕಂ ಭ್ರಮರನಾದುದು ಗಡಾ

ದೇವ ನಾಂ ದಶಶತಸಹಸ್ರಾಪರಾಧಮಂ ಮಾಡಿರಲಿ ನಿಮ್ಮ ಪದವ
ಆವಗಂ ನೆನೆದು ನುತಿಸಿದ ಬಳಿಕಲೆನ್ನ ದು
ರ್ಜೀವಭಾವಂ ನಷ್ಟವಾಗದಿರೆ ನಿಮ್ಮನೀ
ಭೂವಳಯ ನಗದಿಹುದೆ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ದಶಶತಸಹಸ್ರ–ಹತ್ತುನೂರುಸಾವಿರ, ಅಪರಾಧ–ತಪ್ಪು, ಪದ–ಪಾದ, ಆವಗಂ–ಯಾವಗಲೂ, ನೆನೆ–ಸ್ಮರಿಸು, ನುತಿಸು–ಕೀರ್ತಿಸು, ದುರ್ಜೀವಭಾವ–ಕೆಟ್ಟಜೀವಭಾವ, ಭೂವಳಯ–ಭೂಲೋಕ.

* ಜೀವದ ಆಸೆಯಿಂದ ಭ್ರಮರವನ್ನು ಹೃದಯದಲ್ಲಿ ಧ್ಯಾನಿಸಿದ ಕೀಟಕವು ಭ್ರಮರವೇ ಆಗುವುದು. ದೇವನೆ ನಾನು ದಶಶತಸಹಸ್ರ ಅಪರಾಧವನ್ನು ಮಾಡಿರಲಿ, ಸದಾ ನಿಮ್ಮ ಪಾದಸ್ಮರಣೆಯನ್ನು ಮಾಡಿದ ಬಳಿಕವೂ ನನ್ನ ದುರ್ಜೀವಭಾವ ನಾಶವಾಗದಿದ್ದರೆ ನಿಮ್ಮನ್ನು ನೋಡಿ ಈ ಲೋಕ ನಗದಿರಲಾರದೇ? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೭

ನಂಬಿ ಮೇರುವ ಸೇರಿತೇ ಕಾಗೆ ಕಪ್ಪಳಿದು
ಪೊಂಬಣ್ಣವಾಗದೇ ಕಾಗೆಯೊಳು ಸದ್ಗುಣವ
ನುಂ ಬೆದಕಿತೇ ಮೇರು ಎನ್ನೊಳು ಗುಣಾವಗುಣಗಳನೆಣಿಸಲೇಕೆ ನಿಮ್ಮ
ಸಿಂಬಕರ ಸಿಂಬಕಂ ಮಾಳ್ಪುದೆಲ್ಲಾ ತಪ್ಪು
ವಂಬುಜಸರಾಂಬುಧರಚಂಡಾಸುಗ ಪ್ರಣುತ (?)
ಕುಂಬಿನೀಜನ ಸಲಹು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮೇರು–ಬಂಗಾರದ ಪರ್ವತ, ಪೊಂಬಣ್ಣ–ಬಂಗಾರದ ಬಣ್ಣ, ಬೆದಕು–ವಿಚಾರಿಸು, ಹುಡುಕು; ಸಿಂಬಕ–ತೊತ್ತು, ಸೇವಕ; ಅಂಬುಜಸರ–ಹೂಬಾಣ, ಕಾಮ; ಅಂಬುಧರ–ಮೋಡ, ಚಂಡಾಸುಗ–ಬಿರುಗಾಳಿ, ಪ್ರಣುತ–ಸ್ತುತಿಸಲ್ಪಟ್ಟ, ಕುಂಭಿನೀ–ಭೂಮಿ.

* ನಂಬುಗೆಯಿಂದ ಕಾಗೆ ಮೇರುಪರ್ವತವನ್ನು ಪ್ರವೇಶಿಸುವುದೇ ತಡ ಕಪ್ಪುಬಣ್ಣ ಅಳಿದು ಬಂಗಾರ ಬಣ್ಣದ್ದಾಗದೇ? ಆ ಕಾಗೆಯಲ್ಲಿ ಮೇರುಪರ್ವತ ಸದ್ಗುಣವನ್ನು ಹುಡುಕುವುದೇ? ಅದೇ ರೀತಿ ನೀನು ನನ್ನಲ್ಲಿ ಗುಣದೋಷಗಳನ್ನು ವಿಚಾರಿಸುವುದೇಕೆ? ನಿಮ್ಮ ತೊತ್ತಿನ ತೊತ್ತಾದ ನಾನು ಮಾಡುವುದೆಲ್ಲವೂ ತಪ್ಪು. ಆದುದರಿಂದ ಕಾಮನೆಂಬ ಮೋಡಕ್ಕೆ ಬಿರುಗಾಳಿಯಾದ, ಭೂಲೋಕದ ಜನರಿಂದ ವಂದ್ಯನಾದ ನೀನು ರಕ್ಷಿಸಯ್ಯಾ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ?

೮೮

ರನ್ನದೊಳಗೆಸೆವ ರಂಗಿನ ಮಾಳ್ಕೆ ಚೊಕ್ಕ ಬಾ
ವನ್ನದೊಳಗಿರ್ಪ ನರುಗಂಪಿನೊಲು ಕನಕದೊಳ
ಗಂ ನೆಲಸಿದೊಳುವಣ್ಣದಂತೆ ಜ್ಯೋತಿಯೊಳಿರ್ಪ ಸುಪ್ರಕಾಶದ ಮಾಳ್ಕೆಯಿಂ
ಎನ್ನೊಳುಂ ಬೇರಿಡಲ್ಬಾರದಂತಿರ್ದು ನೀ
ನಿನ್ನು ನರರಂ ಬೇಡಿ [೭೯]ಹಾಡಿಸಳಲಿಸೆ[೭೯] ಕುಂದು
ನಿನ್ನದೈಸೆನಗೇನು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ.

* ರನ್ನ–ರತ್ನ, ರಂಗು–ಬಣ್ಣ, ಮಾಳ್ಕೆ–ರೀತಿ, ಚೊಕ್ಕ–ಶುದ್ಧ, ಬಾವನ್ನ–ಶ್ರೀಗಂಧ, ನರುಗಂಪು–ಸುಗಂಧ, ಕನಕ–ಬಂಗಾರ, ನರ–ಮನುಷ್ಯ, ಅಳಲು–ದುಃಖ, ಕುಂದು–ತಪ್ಪು.

* ರತ್ನದಲ್ಲಿರುವ ಬಣ್ಣದಂತೆ, ಶ್ರೀಗಂಧದಲ್ಲಿರುವ ಪರಿಮಳದಂತೆ, ಬಂಗಾರದಲ್ಲಿರುವ ಬಣ್ಣದಂತೆ, ಜ್ಯೋತಿಯಲ್ಲಿರುವ ಬೆಳಗಿನಂತೆ ನನ್ನಲ್ಲಿ ಅಭೇದರೂಪದಲ್ಲಿದ್ದೂ ನನ್ನಿಂದ ಮಾನವರನ್ನು ಬೇಡಿ ಹೊಗಳಿಸಿದರೆ ಯಾತನೆಪಡಿಸಿದರೆ ಆ ಕುಂದು ನನ್ನದಲ್ಲ; ನಿಮ್ಮದಯ್ಯಾ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೯

ಸೂತ್ರಮಂ ಮಿಡಿಯೆ ನರ್ತಿಸುವ ಪಾಂಚಾಳಿಕಗೆ
ಸೂತ್ರಧಾರಿಯ ಚೇಷ್ಟೆಯಲ್ಲದೆ ಸ್ವತಂತ್ರಮಣು
ಮಾತ್ರಮುಂಟೇ ಸಕಲ ಚೈತನ್ಯಕಾರ [೮೦][ಸ][೮೦] ಸಮರ್ಥನಹ ಕರ್ತೃ ನೀನು
ಧಾತ್ರಿಯೊಳು ಪ್ರೇರಿಸಿದ ಮಾಳ್ಕೆಯಾಚರಿಸಿದಪೆ
ಪಾತ್ರನೆಂದೆನ್ನಂ ಪರಿಗ್ರಹಿಸದಿರೆ ದಯಾ
ಕ್ಷೇತ್ರ ನಿಮಗಾಣೆ [೮೧][ಯುಂ][೮೧] ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಪಾಂಚಾಳಿಕ–ಸೂತ್ರದ ಗೊಂಬೆ, ಚೇಷ್ಟೆ–ಅಂಗಚಲನೆ, ನಟನೆ; ಅಣು–ಸ್ವಲ್ಪವೂ, ಧಾತ್ರಿ–ಭೂಮಿ, ಮಾಳ್ಕೆ–ರೀತಿ, ಮಾಟ; ಪಾತ್ರ–ಪಾತ್ರಧಾರಿ, ಪರಿಗ್ರಹಿಸು–ಸ್ವೀಕರಿಸು.

* ಸೂತ್ರಧಾರಿಯು ದಾರವನ್ನು ಮಿಂಟಿದಾಗ ಮಾತ್ರ ಕುಣಿಯುವ ಸೂತ್ರದಗೊಂಬೆಗೆ ಸ್ವಾತಂತ್ರ್ಯವೆಂಬುದು ಸ್ವಲ್ಪವೂ ಇಲ್ಲ. ಸಮಸ್ತ ಜೀವಾವಳಿಗಳ ಚೇತನಸ್ವರೂಪನೂ ಸಮರ್ಥನೂ ಕರ್ತನೂ ಆದ ನೀನು ಈ ಲೋಕದಲ್ಲಿ ಪ್ರೇರೇಪಿಸಿದ ರೀತಿಯಲ್ಲಿ ನಾನು ಪಾತ್ರವನ್ನು ಆಚರಿಸುವೆನು. ಕಾರಣ ನನ್ನನ್ನು ಸ್ವೀಕರಿಸದಿದ್ದರೆ ದಯಾವಂತನೇ ನಿಮ್ಮ ಮೇಲೆ ಆಣೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೭೯–೭೯ "ಹಾಡಿಸೆ+ಅಳಲಿಸೆ" ಎಂದು ಬಿಡಿಸಿ ಓದಿರಿ (ಸಂ). ೮೦–೮೦ x (ಮೂ), ೮೧–೮೧ ಯಂ (ಮೂ).

೯೦

ಅಂಬರಸ್ಥಿತಸೂರ್ಯ ಜಲಕುಂಭದಲ್ಲಿ ಪ್ರತಿ
ಬಿಂಬಿಸುವೊಲೆನ್ನಂತರಂಗದೊಳು ನೆಲೆಗೊಂಡು
ಬೆಂಬಿಡದೆ ಸರ್ವ ಸಚರಾಚರವ ಪೊರೆವ ಚೈತನ್ಯಸ್ವರೂಪ ನೀನು
ಶಂಬರದ್ವಿಷ್ಮದಾಡಂಬರಗಿರಿಸ್ಫುಟನ
ಸಂಬನತ ಭಕ್ತನಿಕರುಂಬ ದುರ್ಭವಕುಂಭಿ
ಕುಂಭವಿದಳನಸಿಂಹ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ (?)

* ಅಂಬರ–ಆಕಾಶ, ಜಲ–ನೀರು, ಕುಂಭ–ಕೊಡ, ಬೆಂಬಿಡದೆ–ಬೆನ್ನುಬಿಡದೆ, ಸತತ, ಸಚರಾಚರ–ಚೇತನ ಅಚೇತನ, ಪೊರೆ–ರಕ್ಷಿಸು, ಶಂಬರದ್ವಿಷ್ಮದಾಡಂಬರಗಿರಿಸ್ಫುಟನ–ಶಂಬರನೆಂಬ ವೈರಿಮದಾಡಂಬರಪರ್ವತವನ್ನು ಸ್ಫೋಟಗೊಳಿಸುವವ, ಸಂಬತನ–ಶಂಭೂ ಎಂದು ನಿನಗೆ ತಲೆಬಾಗಿದ, ನಿಕರುಂಬ–ಸಮೂಹ, ದುರ್ಭವ–ಕೆಟ್ಟಜನ್ಮ, ಕುಂಭಿ–ಆನೆ, ಕುಂಭ–ಆನೆಯ ತಲೆ, ವಿದಳನ–ಸೀಳುವಿಕೆ.

* ಆಕಾಶದಲ್ಲಿರುವ ಸೂರ್ಯ ನೀರು ತುಂಬಿದ ಕೊಡಗಳಲ್ಲಿ ಪ್ರತಿಬಿಂಬಿಸುವ ಹಾಗೆ ನನ್ನ ಅಂತರಂಗದಲ್ಲಿಯೂ ನೆಲೆಸಿ, ಸಕಲ ಚರಾಚರವನ್ನು ರಕ್ಷಿಸುವ ಚೈತನ್ಯಸ್ವರೂಪನು ನೀನು. ಶಂಬರ ರಾಕ್ಷಸನೆಂಬ ಪರ್ವತವನ್ನು ಹೋಳುಮಾಡಿದವನೂ, ಶಂಭೂ ಎಂದು ಬಾಗಿಬಂದ ಭಕ್ತಸಮೂಹದ ಕೆಟ್ಟಜನ್ಮವೆಂಬ ಆನೆಯ ತಲೆಯನ್ನು ಸೀಳಿದ ಸಿಂಹನೂ ಆದ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರವೇ.

೯೧

ತೊಲಗುಗೈಶ್ವರ್ಯ ಬಿಡದೆಡರು ಬಡತನವಟ್ಟಿ
೮೨[ಯಲಗುಗೆ]೮೨ ಶರೀರಕವಧಿಯು ಬರ್ಕೆ ಮಾಯದಿಂ
ದಳಿವು ಸಮನಿಸುಗೆಯಂತಾದೊಡಂ ನಿಮ್ಮ ಪಾದವ ಪೊಗಳ್ವ ನಾಲಗೆಯಲಿ
ಛಲವುಳಿದು ದೈನ್ಯದಿಂದಲ್ಪನರರಂ *ಬೇಡಿ
ಸಳ೮೩[ಲಿ]೮೩ಸದಿರಾ* ನೀಂ ವಿರಕ್ತನಾದುದರಿಂದೆ
ಕಲಿಮಲಾಪಹ ಪರಮ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತೊಲಗು–ಹೊರಟುಹೋಗು, ಐಶ್ವರ್ಯ–ಸಂಪತ್ತು, ಎಡರು–ತೊಂದರೆ, ಅಲಗುಗೆ–ನಡುಗಿಸಲಿ, ಅವಧಿ–ಕೊನೆ, ಅಳಿವು–ಸಾವು, ಮರಣ; ಸಮನಿಸು–ಉಂಟಾಗು, ನರ–ಮನುಷ್ಯ, ಕಲಿಮಲಾಪಹ–ಕಲಿಯುಗದ ಪಾಪವನ್ನು ನಾಶ ಮಾಡಿದ.

೮೨–೮೨ ಎಲೆ ಗೂಗೆ (ಮೂ), ೮೩–೮೩ X (ಮೂ), *–* "ಬೇಡಿಸಿ+ಅಳಲಿಸದಿರಾ" ಎಂದು ಬಿಡಿಸಿ ಓದಿರಿ (ಸಂ).

* ಸಂಪತ್ತು ಹೊರಟುಹೋಗಲಿ, ಬಿಟ್ಟೂಬಿಡದೆ ಬಡತನವು ಬೆನ್ನಟ್ಟಿಬಂದು ನಡುಗಿಸಲಿ, ಶರೀರಕ್ಕೆ ಅವಸಾನಕಾಲ ಬರಲಿ, ಮಾಯದಿಂದ ಸಾವು ಉಂಟಾಗಲಿ, ಹೀಗಾದರೂ ವಿರಕ್ತನಾದ ನಿಮ್ಮ ಪಾದಸ್ಮರಣೆಯನ್ನು ಮಾಡುವ ನಾಲಗೆಯಿಂದ-ನಿಷ್ಠೆಯಳಿದು ದೀನನಾಗಿ-ಅಲ್ಪರನ್ನು ಬೇಡುವಂತೆ ಮಾಡಿ ನನ್ನನ್ನು ದುಃಖಪಡಿಸದಿರು. ಪರಮ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೨

ಕಾಮರಹಿತಂ ದುರಾಶಾದೂರ ನಿಶ್ಚಿಂತ
ತಾಮಸಾದಿಗಳಿಲ್ಲದನುಪಮನೆ ನಿಮ್ಮ ಪದ
ತಾಮರಸಯುಗಳಮನಹರ್ನಿಶಂ ಮನವಚನಕಾಯದೊಳು ಭಜಿಸಿ ನುತಿಸಿ
ಕಾಮಮುಂ ದುರ್ಭವದುರಾಶೆಯುಂ ದುಶ್ಚಿಂತೆ
ತಾಮಸಾದಿಗಳೆನ್ನನಲೆದೊಡಂ ಹಾನಿ ನಿಮ
ಗೀ ಮಹಿಯೊಳುಂ ಬಹುದು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಅನುಪಮ-ಹೋಲಿಕೆಗೆ ಮೀರಿದ, ಪದ-ಪಾದ, ತಾಮರಸ-ಕಮಲ, ಯುಗಳ-ಎರಡು, ಜೋಡಿ; ಅಹರ್ನಿಶ-ಹಗಲುರಾತ್ರಿ, ನಿರಂತರ; ವಚನ-ಮಾತು, ನುಡಿ; ಕಾಯ-ದೇಹ, ಶರೀರ; ನುತಿಸಿ-ಸ್ತುತಿಸಿ, ದುರ್ಭವ-ಹೀನಜನ್ಮ, ದುರಾಶೆ-ಕೆಟ್ಟಆಶೆ, ಅಲೆ-ಬೆನ್ನಟ್ಟು, ಪೀಡಿಸು; ಮಹೀ-ಭೂಮಿ.

* ಕಾಮವಿದೂರನೂ ಆಶಾರಹಿತನೂ ನಿಶ್ಚಿಂತನೂ ಸತ್ವರಜತಾಮಸಗುಣಗಳಿಲ್ಲದವನೂ ಆದ ಅನುಪಮಮೂರ್ತಿಯೇ ನಾನು ನಿಮ್ಮ ಪಾದಕಮಲಗಳನ್ನು ಹಗಲಿರುಳು ಮನವಚನಕಾಯದಲ್ಲಿ ಸ್ತುತಿಸಿದರೂ ಕಾಮ ದುರ್ಭವ ದುರಾಶೆ ದುಶ್ಚಿಂತೆ ತಾಮಸಾದಿ ಗುಣಗಳು ನನ್ನನ್ನು ಬೆನ್ನಟ್ಟಿದರೆ, ಆ ಹಾನಿ ನಿಮಗೇ ಬರುವುದು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೩

ಒಂದ ಕೈಯೊಳ್ಪಿಡಿದು ನೂರೊಂದುಮೆಂಬೆ ನೀ
ನೆಂದೆರಗಿದರ ಮೂರುಹಾದಿಯಂ ಹಚ್ಚಿಸುವೆ
ಎಂದೆಂದು ಪರವಾಗಿ ಕಂಡರಂ ಹತ್ತೆಗರೆದಪೆ ಲೇಸು ನಿನ್ನ ನಂಬಿ
ಇಂದೀಗಲಾದುದು ನಿರಾಶೆಯೆನಗಂ ಕೃಪಾ
ಸಿಂಧು ನಿಮ್ಮಯ ಗುಣವನೆಣಿಸಲಳವೇ ಪರಾ
ನಂದಸ್ವರೂಪ ಪೊರೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ (?)

* ಎರಗು–ನಮಸ್ಕರಿಸು, ಮೂರುಹಾದಿ–ತೊಂದರೆ, ಪರ–ವಿರೋಧ, ಹತ್ತೆಗರೆ–ಹತ್ತಿರ ಕರೆ, ಸಿಂಧು–ಸಮುದ್ರ, ಅಳವು–ಸಾಮರ್ಥ್ಯ, ಶಕ್ತಿ; ಪೊರೆ–ರಕ್ಷಿಸು.

* ಕೈಯ್ಯಲ್ಲಿ ಒಂದನ್ನು ಹಿಡಿದು ನೂರೊಂದು ಎಂದು ನುಡಿಯುವಿ. ನೀನೇ ಗತಿಯೆಂದು ಶರಣುಹೊಕ್ಕವರಿಗೆ ಮೂರುಹಾದಿಯನ್ನು ತುಳಿಯುವ ತೊಂದರೆಯನ್ನು ಕೊಡುವಿ. ಯಾವಾಗಲೂ ನಿನ್ನನ್ನು ವಿರೋಧಿಸುವವರನ್ನೇ ಸಮೀಪ ಕರೆಯುವೆ. ಹೀಗಾಗಿ ಇಂದು ನಿನ್ನನ್ನು ನಂಬಿ ನನಗೆ ನಿರಾಶೆಯಾಯಿತು. ಕೃಪಾನಿಧಿಯೇ, ನಿಮ್ಮ ಗುಣವನ್ನು ಎಣಿಸಲು ನನಗೆ ಸಾಧ್ಯವೇ? ರಕ್ಷಿಸಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯ಳ

ನಿಮ್ಮ ಮಹಿಮಾತಿಶಯಮಮಂ ಕೇಳ್ದು ತಲೆದೂಗ
ಲುಂ ಮಹೀತಳ ಕೆಡೆಯದಿರದೆಂದು ಶೇಷಂಗೆ
ಬೊಮ್ಮ ಮುನ್ನವೆ ತಿಳಿದು ಕಿವಿಯ ಪುಟ್ಟಿಸದಾದನಲ್ಲದೊಡೆ ಕರ್ಣಮಿರದೆ
ಸುಮ್ಮನೇತಕೆ ಬಹುದು ಚಾತುರ್ಯ ಚತುರ್ಮುಖಗೆ
ದಿಮ್ಮಿತಹ ನಿನತು ಜಸಮಂ ಪೊಗಳಲಳವೆ ಎನ
ಗಂ ಮನೋರಥವೀ[ಲಳ][ಯು][ಲಳ] ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಮಹೀತಳ–ಭೂಮಿ, ಶೇಷ–ಆದಿಶೇಷ, ಬೊಮ್ಮ–ಬ್ರಹ್ಮ, ಕರ್ಣ–ಕಿವಿ, ಚತುರ್ಮುಖ–ಬ್ರಹ್ಮ, ದಿಮ್ಮಿತು–ಬಲವಾದ, ದೊಡ್ಡ; ನಿನತು–ನಿನ್ನಯ, ಜಸ–ಯಶ, ಪೊಗಳು–ಕೀರ್ತಿಸು, ಅಳವು–ಸಾಮರ್ಥ್ಯ, ಮನೋರಥ–ಮನದಿಚ್ಛೆ, ಈ–ದಯಪಾಲಿಸು.

* ನಿಮ್ಮ ಮಹಿಮೋನ್ನತಿಯನ್ನು ಕೇಳಿ ತಲೆದೂಗಿದರೆ ಈ ಭೂಮಿ ಕೆಳಗೆ ಬೀಳದಿರದು ಎಂದು ತಿಳಿದೇ ಆದಿಶೇಷನಿಗೆ ಬ್ರಹ್ಮನು ಕಿವಿಯನ್ನು ಹಟ್ಟಿಸಿಲ್ಲ. ಇಲ್ಲದಿದ್ದರೆ ಕಿವಿಯಿರುತ್ತಿರಲಿಲ್ಲವೇ? ಬ್ರಹ್ಮನಿಗೆ ಚತುರನೆನ್ನುವುದು ಈ ಕಾರಣಕ್ಕಾಗಿ, ನಿನ್ನ ಯಶವನ್ನು ಹೊಗಳಲು ನನಗೆ ಸಾಧ್ಯವೇ? ನನ್ನ ಅಭಿಲಾಷೆಯನ್ನು ಈಡೇರಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೫

ಅಱಿಗುಲಿಯು ಪೊಂಬಸರಗುಲಿಯು ರಕ್ಕಸಗುಲಿಯು
ತರಿಸಂದು ಕಾರೊಡಲಗುಲಿ ಕಾವಗುಲಿಯೆಂದು
ಉರುವ ದುಃಕರ್ಮ ಜನನ ಪ್ರಮದ ಸಾತ್ವಿಕ[ಲಜ][ದ][ಲಜ] ಕಾಮಾದಿಗಳನೊರೆಸಲು
ನೆರೆ ಬಂದುದುಂ ನಿಮಗೆ ಕೀರ್ತಿಯೆನ್ನಯ ಮನವ
ತಱಿದು ಸಂಹರಿಸದೊಡೆ ದುಃಕೀರ್ತಿ ಬಹುದು ಎಳೆ
ವೆಱೆದಲೆಯನವತಾರ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

ಲಳ–ಳಳ ಯಿ (ಮೂ), ಲಜ–ಲಜ + (ಮೂ).

* ಅಱಗುಲಿ–ಯಮನನ್ನು ಕೊಂದವ, ಶಿವ; ಪೊಂಬಸರಗುಲಿ–ಬ್ರಹ್ಮನನ್ನು ಕೊಂದವ, ಶಿವ; ರಕ್ಕಸಗುಲಿ–ರಾಕ್ಷಸನನ್ನು ಕೊಂದವ, ಶಿವ; ತರಿಸಂದು–ಚೆನ್ನಾಗಿ, ಕಾರೊಡಲ ಗುಲಿ–ವಿಷ್ಣುವನ್ನು ಕೊಂದವ, ಶಿವ; ಕಾವಗುಲಿ–ಕಾಮನನ್ನು ಕೊಂದವ, ಶಿವ; ಉರುವ–ಶ್ರೇಷ್ಠ, ನೆರೆ ಚೆನ್ನಾಗಿ, ತಱಿದು–ಕತ್ತರಿಸಿ, ಎಳವೆಱದಲೆಯ–ಬಾಲ ಚಂದ್ರನನ್ನು ತಲೆಯಲ್ಲಿ ಇಟ್ಟುಕೊಂಡವ ಶಿವ.

* ಯಮ ಬ್ರಹ್ಮ ರಾಕ್ಷಸ ವಿಷ್ಣು ಕಾಮರನ್ನು ಕೊಲ್ಲುವ ಮೂಲಕ ದುಃಕರ್ಮ ಜನನ ಮದ ಸಾತ್ವಿಕ ಕಾಮಗಳನ್ನು ಒರೆಸಿಹಾಕಿದ ನಿಮಿತ್ತ ನಿನಗೆ ಸುಕೀರ್ತಿ ಲಭಸಿತು. ಶಿವನ ಅವತಾರನೇ, ಎನ್ನಯ ಮನವನ್ನು ಕತ್ತರಿಸದಿದ್ದರೆ ನಿನಗೆ ದುಃಕೀರ್ತಿ ಪ್ರಾಪ್ತವಾಗುತ್ತದೆ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೩

ನಿನ್ನ ಶಾಂತಿಗೆ ಸದೃಶಮೇ ಶೀತಕರ ನೋಡೆ
ನಿನ್ನ ಧರ್ಮಾಚರಣೆಗೆಣೆಯಹರೆ ಮನುಗಳುಂ
ನಿನ್ನ ಗೌರವಕೊರೆಯ ಮೇರು ಗಂಭೀರಕ್ಕೆ ಸಾಟಿಯಹುದೇ ಸಾಗರ
ನಿನ್ನ ಘನಮಂ ಪೊಗಳೆ ಪನ್ನಗೇಂದ್ರಂಗಳವೆ
ಎನ್ನ ಪುರುಳಂ ನೋಡದಿನ್ನು ದಯವಿಟ್ಟು ಪೊರೆ
ಸನ್ನುತನೆ ಭವಜಿತನೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಸದೃಶ–ಸಮಾನ, ಹೋಲಿಕೆ; ಶೀತಕರ–ಚಂದ್ರ, ಎಣೆ–ಸಮಾನ, ಒರೆ–ಸಮಾನ, ಮೇರು–ಬಂಗಾರದ ಪರ್ವತ, ಸಾಟಿ–ಸಮಾನ, ಸಾಗರ–ಸಮುದ್ರ, ಘನ–ಘನತೆ, ಪನ್ನಗೇಂದ್ರ–ಆದಿಶೇಷ, ಅಳವೇ–ಸಾಧ್ಯವೇ? ಪುರುಳ್–ಯೋಗ್ಯತೆ, ಸನ್ನುತ–ಹೊಗಳಲ್ಪಟ್ಟ, ಭವಜಿತ–ಹುಟ್ಟು ಜಯಿಸಿದವ, ಶಿವ.

* ನಿನ್ನ ಶಾಂತಿಗೆ ಚಂದ್ರನು ಸಮಾನನೇ? ನಿನ್ನ ಧರ್ಮಾಚರಣೆಗೆ ಮನುಗಳು ಸಮಾನರೇ? ನಿನ್ನ ದೊಡ್ಡಸ್ತಿಕೆಗೆ ಮೇರುಪರ್ವತ ಸಮಾನವೇ? ನಿನ್ನ ಗಾಂಭೀರ್ಯಕ್ಕೆ ಸಮುದ್ರವು ಸಮಾನವೇ? ನಿನ್ನ ಘನತೆಯನ್ನು ಹೊಗಳಲು ಆದಿಶೇಷನಿಗೆ ಸಾಧ್ಯವೇ? ಸನ್ನುತನೇ ಭವಜಿತನೇ ನನ್ನ ಯೋಗ್ಯತೆಯನ್ನು ನೋಡದೆ ದಯವಿಟ್ಟು ರಕ್ಷಿಸು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೭

ಬಿಡೆ ತುಂಬಿ ಪರಿವ ತೊರೆಯಂ ಕೊಡನ ಪಿಡಿದು ನರ
ಕಡೆಹಾಯಬಹುದು ಗಡ ಸರ್ವಲೋಕಂಗಳಂ
ಪೊಡೆಯೊಳಿಟ್ಟೋವು[೩-][ವ][-೩] ದಯಾಭರಿತ ಶಿವರೂಪ ನಿಮ್ಮ ಪಾದವ ಭಕ್ತಿಯಿಂ

೩–೩ x (ಮೂ).

ಪಿಡಿದು ಮಾನವನು ಸಂಸಾರವೆಂದೆಂಬ ಬ

ಲ್ಗಡಲ ದಾಂಟುವುದರಿದೆ ನಂಬದೀ ಬಿನುಗುಮನ

ಕೊಡು ಭಕ್ತಿಯಂ ಮನಕೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಬಿಡೆ–ವಿಶೇಷವಾಗಿ, ಪರಿ–ಹರಿ, ಪ್ರವಹಿಸು; ತೊರೆ–ನದಿ, ನರ–ಮನುಷ್ಯ, ಕಡೆಹಾಯು–ದಾಟು, ಪಾರಾಗು; ಪೊಡೆ–ಹೊಟ್ಟೆ, ಓವು–ಕಾಪಾಡು, ಬಲ್ಗಡಲ–ಮಹಾಸಮುದ್ರ, ಬಿನುಗು–ಹೀನ, ನೀಚ; ಅರಿದೆ–ಅಸಾಧ್ಯವೇ?

* ಕೊಡದ ಸಹಾಯದಿಂದ ವಿಶೇಷವಾಗಿ ತುಂಬಿ ಹರಿಯುವ ಹೊಳೆಯನ್ನು ದಾಟಬಹುದು, ಹಾಗೆಯೇ ಸಮಸ್ತಲೋಕಗಳನ್ನು ಹೊಟ್ಟೆಯಲ್ಲಿಟ್ಟುಕೊಂಡು ಪೋಷಿಸುವ ದಯಾಭರಿತನೇ ಶಿವರೂಪನೇ ಭಕ್ತಿಯಿಂದ ನಿಮ್ಮ ಪಾದಗಳನ್ನು ಹಿಡಿದು ಸಂಸಾರವೆಂಬ ಮಹಾಸಮುದ್ರವನ್ನು ದಾಟುವುದು ಅಸಾಧ್ಯವೇ? ಈ ಹೀನಮನಸ್ಸು ನಿಮ್ಮನ್ನು ನಂಬದು, ಈ ಮನಸ್ಸಿಗೆ ಭಕ್ತಿಯನ್ನು ಕರುಣಿಸಿಕೊಡು, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೯೮

ತಂದೆ ನಾನಾ ಪರಿಯೊ[೮೭]**[ಳುಂ]** [೮೭]**ಪಲುಬುತಿರೆ ಕೇಳ**

ದಂದದಿಂದಿರ್ಪರೇ ಬೆಂದಹುಣ್ಣಂ ಕಂಬಿ

ಯಿಂದ ಕೀಸುವರೆ ಭವದಿಂದ ನೊಂದಾ ಕಂದಯೆಂದು ತಲೆದಡಹಿಯಳಲ

[೮೮]**[ನಂ]**[೮೮] **ದಿಸದೊಡಾರಣ್ಯದಲ್ಲಿ ತೊಳಲುವ ಶಿಶುವಿ**

ನಂದವಾದೆಂ ಕೃಪಾಸಿಂಧು ಸದ್ಭಕ್ತಜನ

ಬಂಧುವೇ ಶರಣಾಗು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ನಾನಾಪರಿ–ಅನೇಕರೀತಿ, ಪಲುಬು–ಹಲಬು, ಬೆಂದ–ಹಣ್ಣಾದ, ಉಲ್ಬಣಿಸಿದ; ಕಂಬಿ–ಕಬ್ಬಿಣದ ಕಡ್ಡಿ, ಕೀಸು–ಗೀಚು, ಕೆತ್ತು; ಭವ–ಹುಟ್ಟು, ಸಂಸಾರ; ತಲೆದಡಹು–ಸಮಾಧಾನಪಡಿಸು, ಅಳಲು–ದುಃಖ, ಅರಣ್ಯ–ಕಾಡು, ತೊಳಲು–ಕಷ್ಟಪಡು, ಶಿಶು–ಮಗು, ಸಿಂಧು–ಸಮುದ್ರ.

* ಅನೇಕರೀತಿಯಲ್ಲಿ ಹಲಬುತ್ತಿರುವ ನನ್ನ ಕೂಗನ್ನು ಕೇಳಿಯೂ ಕೇಳದಂತಿರುವುದು ಯೋಗ್ಯವೇ ತಂದೆ? ಉಲ್ಬಣಿಸುವ ಹುಣ್ಣನ್ನು ಕಬ್ಬಿಣದ ಕಡ್ಡಿಯಿಂದ ಕೆತ್ತುವರೇ? ಸಂಸಾರದಿಂದ ನೊಂದೆಯಾ ಮಗು ಎಂದು ನನ್ನನ್ನು ಸಮಾಧಾನಪಡಿಸಿ ದುಃಖವನ್ನು ಆರಿಸದಿದ್ದರೆ ಅರಣ್ಯದಲ್ಲಿ ಕಷ್ಟವನ್ನನುಭವಿಸುವ ಮಗುವಿನಂತಾಗುವೆನು. ಕೃಪಾ ಸಮುದ್ರನೇ ಭಕ್ತಜನಬಂಧುವೇ ನನ್ನನ್ನು ಕಾಪಾಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೮೭–೮೭ ಳು (ಮೂ), ೮೮–೮೮ ನೊಂ (ಮೂ).

೯೯

ಬೋಧಿಸಿದನಲ್ಲದಾಚರಿಸಿ ತೋರಿದುದಿಲ್ಲ
ವಾದಿಯೊಳು ದಕ್ಷಿಣಾಮೂರ್ತಿ ಬಸವೇಶ್ವರಂ
ಮೇದಿನಿಯೊಳಾಚರಿಸಿ ತೋರ್ದನಲ್ಲದೆ ಬೋಧಿಸಿದುದಿಲ್ಲ ತತ್ತ್ವಪದಮಂ
ಆ[೫೯][ದ][೫೯]ರದೊಳಾಚರಿಸಿ [೬೦][ಮಾ] [೬೦] ಹೇಶ್ವರಾವಳಿಗೆ
ಬೋಧಿಸಿದಿರಿಹದಲ್ಲಿ ಗುರುಭಕ್ತನೆಂಬ ಪೆಸ
ರಾದು[೬೧][ದೈ] [೬೧] ನಿಮಗೆ ಸದ್ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ದಕ್ಷಿಣಾಮೂರ್ತಿ–ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದಾದ ದಕ್ಷಿಣಾಮೂರ್ತಿಲೀಲೆ, ಮೇದಿನಿ–ಭೂಮಿ, ಮಾಹೇಶ್ವರ–ಮಹೇಶ್ವರನಿಗೆ ಸಂಬಂಧಿಸಿದವ, ಆವಳಿ–ಸಮೂಹ, ಇಹ–ಭೂಲೋಕ, ಪೆಸರು–ಹೆಸರು.

* ಪೂರ್ವಕಾಲದಲ್ಲಿ ದಕ್ಷಿಣಾಮೂರ್ತಿಯು ತತ್ತ್ವವನ್ನು ಬೋಧಿಸಿದನಲ್ಲದೆ ಆಚರಿಸಿ ತೋರಿಸಲಿಲ್ಲ. ಬಸವೇಶ್ವರನು ತತ್ತ್ವವನ್ನು ಆಚರಿಸಿ ತೋರಿಸಿದನಲ್ಲದೆ ಬೋಧಿಸಲಿಲ್ಲ. ಆದರೆ ನೀವು ತತ್ತ್ವವನ್ನು ಆಚರಿಸುವುದರ ಜೊತೆಯಲ್ಲಿ ಮಾಹೇಶ್ವರ ಸಮೂಹಕ್ಕೆ ಬೋಧಿಸಿದಿರಿ. ಕಾರಣ ನಿಮಗೆ ಈ ಲೋಕದಲ್ಲಿ ಗುರುಭಕ್ತ ಎಂಬ ಹೆಸರು ಪ್ರಾಪ್ತವಾಯಿತು. ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೦

ಕರಚರಣಗಳ ನಖಂ ಬೆಳೆದುಂ ಮುಸುಂಕಿ ಶ್ರೀ
ಗಿರಿಯೊಳು ಶಿವಾನಂದನಿರೆ ಕಂಡ ಗಂಧರ್ವ
ರರಿಗೆ ಮೃಗಜನ್ಮದೊಳು ತೊಳಲ್ದೊಲಾದುದು ನೀವು ಶಿವಯೋಗದೊಳು ತೋಂಟದಿ
ಹರುಷದಿಂದಿರ್ದು ನಿಟ್ಟಿಸಿದ ನರಜೀವಿಗಳ
ದುರಿತಗಳ ಸಂಹರಿಸಿ ಪೊರೆದ ನಿರ್ಮಲದಯಾ
ಭರಿತ ನಿನಗಾರು ಸರಿ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಕರ–ಹಸ್ತ, ಚರಣ–ಪಾದ, ನಖ–ಉಗುರು, ಶ್ರೀಗಿರಿ–ಶ್ರೀಶೈಲ, ಮೃಗ–ಪ್ರಾಣಿ, ತೊಳಲು–ಒದ್ದಾಡು, ನಿಟ್ಟಿಸು–ನೋಡು, ನರ–ಮನುಷ್ಯ, ದುರಿತ–ಪಾಪ, ಸಂಹರಿಸು–ದೂರಮಾಡು, ಪೊರೆ–ರಕ್ಷಿಸು, ಸರಿ–ಸಮಾನ.

* ಕೈಕಾಲುಗಳ ಉಗುರು ಬೆಳೆದು ಶ್ರೀಗಿರಿಯಲ್ಲಿದ್ದ ಶಿವಾನಂದಮುನಿಯನ್ನು ಕಂಡ ಗಂಧರ್ವರು,

---

೫೯–೫೯ ಧಾ (ಮೂ), ೬೦–೬೦ ಮ (ಮೂ), ೬೧–೬೧ ದು (ಮೂ).

ಪ್ರಾಣಿಜನ್ಮ ಹೊಂದಿ ಅಲೆದಾಡಿದರು. ತೋಟದಲ್ಲಿ ಸದಾ ಶಿವಯೋಗಾನಂದದಲ್ಲಿರುವ ನಿಮ್ಮನ್ನು ನೋಡಿದರೆ ಸಾಕು ಮಾನವಜೀವಿಗಳ ಪಾಪವನ್ನು ದೂರಮಾಡಿ ರಕ್ಷಿಸುವ ದಯಾಭರಿತ ನಿಮಗೆ ಯಾರು ಸಮಾನರಾಗಬಲ್ಲರು? ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೧

ಬಟ್ಟೆಬಡಕನೊಳು ದಯಮುಂಟೆ ಬೊಬ್ಬುಲಿಯೊಳುಂ
ಪುಟ್ಟುವುದೆ ಇನಿವಣ್ಣು ಇದ್ದಿಲೊಳು ಬಿಳಿದನುರೆ
ನಿಟ್ಟಿಸುವರೇ ಗಂಜಳದೊಳು ಹೊಸಬಾವನ್ನ ಗಂಪನರಸುವರೆ ಬುಧರು
ಹೊಟ್ಟೆಹೊರಕಜ್ಞಾನಿ ದುಃಖಜೀವಿಯು ಕಪಟ
ಕೆಟ್ಟಪಾತಕನೆನ್ನೊಳುಂಟೆ ಸದ್ಗುಣವು ದಯ
ವಿಟ್ಟು ಪಾಲಿಪುದೆನ್ನ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಬಟ್ಟೆಬಡಕ–ದಾರಿಗಳ್ಳ, ಬೊಬ್ಬುಲಿ–ಜಾಲಿಮರ, ಇನಿವಣ್ಣು–ರುಚಿಯಾದ ಹಣ್ಣು, ಉರು–ಚೆನ್ನಾಗಿ, ನಿಟ್ಟಿಸು–ನೋಡು, ಗಂಜಳ–ದನಕರುಗಳ ಮೂತ್ರ, ಬಾವನ್ನ–ಶ್ರೀಗಂಧ, ಕಂಪು–ಸುಗಂಧ, ಅರಸು–ಹುಡುಕು, ಬುಧ–ವಿದ್ವಾಂಸ.

* ದಾರಿಗಳ್ಳನಿಗೆ ಕರುಣೆಯುಂಟೇ? ಜಾಲಿಯಮರದಲ್ಲಿ ಸಿಹಿಹಣ್ಣು ಹುಟ್ಟುವುದೇ? ಇದ್ದಲಿಯಲ್ಲಿ ಬಿಳಿಯ ಬಣ್ಣವನ್ನು ಹುಡುಕುವರೇ? ದನಕರುಗಳ ಮೂತ್ರದಲ್ಲಿ ಶ್ರೀಗಂಧದ ಸುಗಂಧವನ್ನು ಹುಡುಕುವರೇ? ವಿದ್ವಾಂಸರು. ಸ್ವಾರ್ಥಿ ಅಜ್ಞಾನಿ ದುಃಖಜೀವಿ ಕಪಟಿ ಪಾಪಿಯಾದ ನನ್ನಲ್ಲಿ ಒಳ್ಳೆಯ ಗುಣಗಳುಂಟೇ? ದೇವಾ ಕರುಣೆಯಿಂದ ನನ್ನನ್ನು ಸಲಹುವುದು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೨

ಕಲ್ಲಿದೇವನ ಮನೆಯ ನಾಯಿ ಬನವಸೆ ಬ್ರಹ್ಮ
ನಲ್ಲಿ ಪುಟ್ಟಿದ ಕಾಗೆ ಶ್ರುತಿಯೋದಿ ದೂಷಕರ
ನೆಲ್ಲಮೆಬ್ಬಟ್ಟವೇ ಪುರುಷಾರ್ಥಮಿಲ್ಲದಾ ನರ ಕಾಗೆ ನಾಯಿಗಿಂದಾ
ಹೊಲ್ಲವೀ ತನು ವ್ಯರ್ಥಮೆನಿಸದೇ ನಿಮ್ಮಡಿಯ
ನೆಲ್ಲೆಡೆಯೊಳುಂ ಪೊಗಳ್ವ ಸೈಪ ಕೊಡು ಬೋಳೆಯರ
ಬಲ್ಲಹನೆ ವಲ್ಲಭನೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಶ್ರುತಿ–ವೇದ, ದೂಸಕರು–ನಿಂದಕರು, ಎಬ್ಬಟ್ಟು–ಓಡಿಸು, ನರ–ಮನುಷ್ಯ, ಹೊಲ್ಲ–ಅಯೋಗ್ಯ, ತನು–ದೇಹ, ಅಡಿ–ಪಾದ, ಪೊಗಳು–ಹೊಗಳು, ಸೈಪು–ಪುಣ್ಯ, ಬೋಳೆಯರು–ದೇವತೆಗಳು,

ಬಲ್ಲಹ–ವಲ್ಲಭ, ಒಡೆಯ.

* ಹಾವಿನಹಾಳ ಕಲ್ಲಯ್ಯನ ಮನೆಯ ನಾಯಿ, ಬನವಾಸಿಯ ಬ್ರಹ್ಮದೇವನ ಮನೆಯ ಕಾಗೆ ವೇದವನ್ನು ಓದಿ ನಿಂದಕರನ್ನು ಹಿಮ್ಮೆಟ್ಟಿಸಲಿಲ್ಲವೇ ? ಪುರುಷಾರ್ಥವಿಲ್ಲದ ಮಾನವನು ನಾಯಿ ಕಾಗೆಗಳಿಗಿಂತ ಕನಿಷ್ಠ. ಎಲೈ ದೇವತೆಗಳ ಒಡೆಯನೇ ಈ ದೇಹವನ್ನು ವ್ಯರ್ಥ ಹೋಗಗೊಡದೆ ಯಾವಾಗಲೂ ನಿಮ್ಮ ನಾಮಸ್ಮರಣೆ ಮಾಡುವ ಪುಣ್ಯವನ್ನು ನನಗೆ ಕರುಣಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೩

ಚೋಳನಂ ಬೆಂಬಿದ್ದ ಬ್ರಹ್ಮಹತ್ಯದ ತೆರದಿ
ಕಾಳು ವಿಷಯಂ ಬಿಡದದೆಲ್ಲಿ ಹೊಕ್ಕ[೬೨][ರು][೬೨] ತಾಮ್ರ
ಕಾಳಿಕೆಯೊಲುಂ ಮಿ[೬೩][ಳ][೬೩] ನವಾದಾಣವಾದಿಮಲ ತೊಡರಿ ಕಾಲ್ವಿಡಿದು ಕೆಡಪಿ
ಯಾಳಲೀಯದು ಬಂದು ಕೈವಿಡಿ [೬೪][ದು][೬೪] ರಕ್ಷಿಪ ದ
ಯಾಳುವಾರ್ನೀವಲ್ಲದೊಡೆ ದುರ್ಭವದ ನೋವ
ತಾಳಲಾರೆನು ಶಿವಧೊ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಬೆಂಬೀಳು–ಬೆನ್ನಿಗೆ ಬೀಳು, ಕಾಳು–ಕೆಟ್ಟ, ವಿಷಯ–ಕಾಮ, ಹೊಗು–ಪ್ರವೇಶಿಸು, ಕಾಳಿಕೆ–ಕಪ್ಪು, ಕಿಲುಬು; ಮಿಳನ–ಮಿಲನ, ಸಂಯೋಗ; ಆಣವಾದಿಮಲ–ಆತ್ಮನಿಗೆ ಅಂಟಿಕೊಂಡ ಆಣವಮಾಯಾಕಾರ್ಮಿಕ ಎಂಬ ಮಲತ್ರಯಗಳು, ತೊಡರಿ–ತೊಡಕಿ, ಆಳಲೀಯದು–ಬಿಡದು, ದುರ್ಭವ–ಕೆಟ್ಟಜನ್ಮ.

* ಚೋಳನ ಬೆನ್ನಿಗೆ ಬಿದ್ದ ಬ್ರಹ್ಮಹತ್ಯದ ಹಾಗೆ ಎಲ್ಲಿಹೋದರೂ ಕೆಟ್ಟ ವಿಷಯ ಸುಖವು ಬೆನ್ನಬಿಡದು, ತಾಮ್ರದ ಕಿಲುಬಿನಂತೆ ಸೇರಿಕೊಂಡಿರುವ ಆಣವಮಾಯಾಕಾರ್ಮಿಕ ಮಲಗಳು ತೊಡಕಿ. ಕಾಲುಹಿಡಿದು ಕೆಡವಿ ಆಳಲು–ಬಾಳಲು ಅವಕಾಶ ಮಾಡಿಕೊಡವು. ಬಂದು ಕೈಹಿಡಿದು ರಕ್ಷಿಸುವ ಕರುಣಾಳು ನೀವಲ್ಲದೆ ಮತ್ತಾರಿದ್ದಾರೆ? ದೇವಾ ಈ ನರಜನ್ಮದ ದುಃಖವನ್ನು ತಾಳಲಾರೆನು ಶಿವಧೋ, ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೪

ಮಳೆಯರಾಜೋದ್ಭಟ ಹಲಾಯುಧಂ ಮಯ್ಯೂರ
ಮಲುಹಣಂ ಕಾಳಿದಾಸಂ ಬಾಣ ಮುಖ್ಯ ಕವಿ
ಗಳ ಮಹಾಸ್ತುತಿಯ ಕೈಕೊಂಡಂಗೆ ಈ ಸ್ತೋತ್ರ ಸೊಗಯಿಪುದೆ ಎನಲೇತಕೆ

೬೨–೬೨ ರ (ಮೂ), ೬೩–೬೩ ೞ (ಮೂ), ೬೪–೬೪ x (ಮೂ), ೬೫–೬೫ x(ಮೂ).

ಪಲಸಿನುರು ಪಕ್ವಫಲಮಿರ್ದಂತೆ ದ್ರಾಕ್ಷಾ[೯೫][ಫಲ][೯೫]
[೯೬][ಕ್ಕೊ][೯೬]ಲಿದು ಬಾಯ್ದೆರೆಯರೇ ಸವಿಯಬಲ್ಲವರು ನಿ
ರ್ಮಲ ಕೃಪಾನಿಧಿ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತುರವೇ

* ಸ್ತುತಿ–ಹೊಗಳಿಕೆ, ಪಲಸು–ಹಲಸಿನಹಣ್ಣು, ಉರು–ಶ್ರೇಷ್ಠ, ಪಕ್ವಫಲ–ಮಾಗಿದ ಹಣ್ಣು, ಒಲಿದು–ಬಯಸಿ, ಮನಸ್ಸುಮಾಡಿ, ನಿರ್ಮಲ–ಮಲರಹಿತ, ಪವಿತ್ರ, ಸಲಹು–ರಕ್ಷಿಸು.

* ಮಳೆಯರಾಜ ಉದ್ಭಟಯ್ಯ ಹಲಾಯುಧ ಮಯೂರ ಮಲುಹಣ ಕಾಳಿದಾಸ ಬಾಣ ಮೊದಲಾದ ಪ್ರಮುಖ ಕವಿಗಳು ರಚಿಸಿದ ಮಹಾ 'ಸ್ತುತಿ'ಯನ್ನು ಕೇಳಿದವನಿಗೆ ಈ "ಸ್ತೋತ್ರ" ರಂಜಿಸುವುದೇ? ಎನ್ನಲೇಕೆ. ಸವಿಯನ್ನು ಬಲ್ಲವರು ಹಲಸಿನ ಪಕ್ವವಾದ ಹಣ್ಣು ಇರುತ್ತಿರಲು ದ್ರಾಕ್ಷಿಯ ಹಣ್ಣಿಗೆ ಒಲಿದು ಬಾಯಿ ತೆರೆಯರೇ? ನಿರ್ಮಲ ಕೃಪಾನಿಧಿ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೫

ಉಪಮಾನರಹಿತನಂಘ್ರಿಯನಲೋಪಮೆಗಳಿಂ
ವಿಪುಳವಾಚ್ಯಬ್ರಹ್ಮಮೂರ್ತಿಯುತ್ಪ್ರೇಕ್ಷೆಯಿಂ
ಕ್ಷಪಿತೇಂದ್ರಿಯಂ ನಿರಾವರಣನಂ ನವರಸಾಲಂಕಾರದಿಂ ಪೊಗಳ್ವೆನು
ಶಪಥವೆಂದೆಂಬವನ ಮತಿಯ ಪವಣೇ ನಿಮ್ಮ
ಕೃಪೆಯಿಂದ ಬಲ್ಲಂತೆ ಪೊಗಳ್ದೆ ಪೊರೆಯನ್ಯರಿಂ
ದಪಹಾಸ್ಯಬಾರದೊಲು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಉಪಮಾನರಹಿತ–ಹೋಲಿಕೆಗೆ ಮೀರಿದ, ಅಂಘ್ರಿ–ಪಾದ, ವಿಪುಳವಾಚ್ಯ–ಹೆಚ್ಚು ವರ್ಣಿಸಿಕೊಳ್ಳುವ, ಕ್ಷಪಿತ–ನಾಶಮಾಡಲ್ಪಟ್ಟ, ನಿರಾವರಣ–ಹೊದಿಕೆಯಿಲ್ಲದ, ಶಪಥ–ಪ್ರತಿಜ್ಞೆ, ಮತಿ–ಬುದ್ಧಿ, ಪವಣ–ಸಾಮರ್ಥ್ಯ, ಅಳತೆ; ಪೊರೆ–ಸಲಹು, ಅನ್ಯರು–ಬೇರೆಯವರು.

* ಉಪಮಾತೀತನ ಪಾದವನ್ನು ಉಪಮೆಗಳಿಂದಲೂ ಹೆಚ್ಚುವರ್ಣಿಸಿಕೊಳ್ಳುವ ಬ್ರಹ್ಮಮೂರ್ತಿಯನ್ನು ಉತ್ಪ್ರೇಕ್ಷೆಯಿಂದಲೂ ಜಿತೇಂದ್ರಿಯ ಹಾಗೂ ನಿರಾಕಾರ ಮೂರ್ತಿಯನ್ನು ನವರಸ ಹಾಗೂ ಅಲಂಕಾರಗಳಿಂದಲೂ ವರ್ಣಿಸುತ್ತೇನೆಂದು ಪ್ರತಿಜ್ಞೆ ತೊಟ್ಟವನ ಬುದ್ಧಿಸಾಮರ್ಥ್ಯಕ್ಕೆ ಸಾಧ್ಯವೇ ? ನಿಮ್ಮ ಕೃಪಾಶೀರ್ವಾದಿಂದ ನನಗೆ ತಿಳಿದಂತೆ ಸ್ತುತಿಸಿದ್ದೇನೆ. ಬೇರೆಯವರಿಂದ ಅಪಹಾಸ್ಯ ಬರದಂತೆ

೯೬–೯೬ ತೊ (ಮೊ).

ನನ್ನನ್ನು ಕಾಪಾಡು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೬

ರವಿ ಕಾಣದುದನು ಸತ್ಕವಿ ಕಂಡನೆಂಬರಾ
ಕವಿಗೆ ಕಣ್ಣೆಲ್ಲಿಯದು ನಿನ್ನ ಮಹಿಮಾತಿಶಯ
ಕ್ಕವಧಿಯುಂಟೇ ಗುಹೆಯೊಳಿರ್ದು ಧ್ವನಿಗೆಯ್ಯೆ ಮಾರ್ದನಿಗೊಡುವ ವಿವರದಂತೆ
ತವೆ ಎನ್ನೊಳಿರ್ದು ನೀನೊರೆದಂತೆ ಪೇಳ್ದೆನೀ
ಸ್ತವವ ಕೈಕೊಂಡು ಪರಿರಕ್ಷಿಸುದ್ಧರಿಸೋ[೯೭][ಪ][೯೭]
ಶಿವರೂಪ ಸ್ಮರಲೋಪ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ರವಿ–ಸೂರ್ಯ, ಅವಧಿ–ಮೇರೆ, ಮಿತಿ; ಗುಹೆ–ಗವಿ, ಮಾರ್ದನಿ–ಪ್ರತಿಧ್ವನಿ, ವಿವರ–ಗವಿಯ ಬಾಗಿಲು, ತವೆ–ಚೆನ್ನಾಗಿ, ಒರೆ–ಹೇಳು, ವಿಸ್ತರಿಸು; ಸ್ತವ–ಸ್ತೋತ್ರ, ಸ್ತುತಿ; ಪರಿರಕ್ಷಿಸು–ಚೆನ್ನಾಗಿ ರಕ್ಷಿಸು, ಓಪ–ಪ್ರಿಯನಾದವ, ಒಡೆಯ; ಸ್ಮರಲೋಪ–ಕಾಮನನ್ನು ನಾಶಮಾಡಿದವ, ಶಿವ.

* ರವಿ ಕಾಣದುದನ್ನು ಕವಿ ಕಾಣುತ್ತಾನೆ ಎನ್ನುವರು, ಹಾಗಾದರೆ ಆ ಕವಿಗೆ ಕಣ್ಣನ್ನು ನೀಡಿದವರು ಯಾರು? ದೇವಾ ನಿನ್ನ ಮಹಿಮೋನ್ನತಿಗೆ ಮಿತಿಯುಂಟೇ? ಗವಿಯಲ್ಲಿದ್ದುಕೊಂಡು ಧ್ವನಿಮಾಡಲು, ಅದು ಬಾಗಿಲ ಮೂಲಕ ಪ್ರತಿಧ್ವನಿಯುನ್ನುಂಟು ಮಾಡುವಂತೆ ನೀನು ನನ್ನ ಹೃದಯಗವಿಯಲ್ಲಿದ್ದುಕೊಂಡು ನುಡಿದುದನ್ನೇ ನಾನು ಈ 'ಸ್ತೋತ್ರ'ವಾಗಿ ರಚಿಸಿದ್ದೇನೆ. ಪ್ರಿಯನೇ ಶಿವರೂಪನೇ ಕಾಮಸಂಹರನೇ ಸ್ವೀಕರಿಸಿ ಕಾಪಾಡು, ಉದ್ಧರಿಸು, ಸದ್ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೭

ಬಸವ ತೃಣಪುರುಷನಿಂದೋದಿಸಿದ ಮಾಳ್ಕೆಯೆನ
ಗೊಸೆದು ಚೈತನ್ಯಸ್ವರೂಪನಾಗಿ ಸ್ತುತಿಯ
ನುಸಿರ್ದಾತನುಂ ನೀನೆ ಸ್ತುತಿಗೊಡೆಯನಾಗಿ ಕೈಕೊಂಡ ಘನರ್ಮ[೯೮][ಹಿಮ್][೯೮] **ನೀನೆ**
ಹಸನಾದ ಕಹಳೆ ಹೊಲೆಯನದಾದರುಂ ಬಿರಿದು
ಸಸಿನೆ ಕರ್ತನದಲಾ ಮಾನಾವಮಾನಗಳು
ಮುಸುಕವೆನ್ನಂ ಸಲಹು ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ತೃಣಪುರುಷ–ಬಸವಣ್ಣನು ಒಂದು ಹುಲ್ಲುಕಡ್ಡಿಗೆ ಮಾನವರೂಪ ಕೊಟ್ಟು, ಅದರ ಮೂಲಕ

೯೭–೯೭ x (ಮೂ), ೯೮–೯೮ x (ಮೂ).

ಮೀಮಾಂಸಕವನನ್ನು ಜಯಸಿದನು; ಮಾಳ್ಕೆ-ರೀತಿ, ಒಸೆದು-ಪ್ರೀತಿಯಿಂದ, ಬಿರಿದು-ಜಯಘೋಷ, ಸಸಿನೆ-ನಿಜ, ನೇರ; ಮುಸುಕು-ಮುತ್ತು, ಆವರಿಸು; ಸಲಹು-ರಕ್ಷಿಸು.

* ಶ್ರೀಬಸವೇಶ್ವರನು ಹುಲ್ಲುಕಡ್ಡಿಯ ಮೂಲಕ (ಮೀಮಾಂಸಕನೊಡನೆ) ವಾದ ಮಾಡಿಸಿದ ರೀತಿಯಲ್ಲಿ ಚೈತನ್ಯಸ್ವರೂಪನಾಗಿ ನನ್ನಿಂದ "ಸ್ತುತಿ"ಯನ್ನು ಹೇಳಿಸಿದಾತನೂ ನೀನೇ, "ಸ್ತುತಿ"ಗೆ ಒಡೆಯನಾಗಿ ಸ್ವೀಕರಿಸಿದ ಘನಮಹಿಮನೂ ನೀನೇ. ಒಳ್ಳೆಯ ಕಹಳೆ ಹೊಲೆಯನದಾದರೂ ಜಯಘೋಷ ಒಡೆಯನದಲ್ಲವೇ? ಈ ರೀತಿ ಮಾನಾಪಮಾನಗಳು ನನ್ನನ್ನು ಮುಸುಕವು. ಸಲಹಯ್ಯಾ ಗುರವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೮

ಸುರಸಾನ್ನದಾನೀಶನೆಂಬ ಕಾಸಾರದೊಳು
ಕುರುವತ್ತಿ ನಂಜೇಶನೆಂಬ ಕಮಲಂ ಪುಟ್ಟಿ
ತಿರದೆ ತತ್ಕಮಲದೊಳು ಸಿದ್ಧನಂಜೇಶನೆನಿಸುವ ಪರಬ್ರಹ್ಮನೊಗೆದಂ
ಸ್ಫುರಿಸಿದ ಬ್ರಹ್ಮದೊಳು ಕವಿಸಿದ್ಧನಂಜಾದ್ರಿ
ಹರುಷದಿಂ ಸ್ತೋತ್ರಗಿರಿಜೆಯ ಪಡೆದು ಭಕ್ತಿಯಿಂ
ಹರರೂಪ ನಿಮಗಿತ್ತ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಸುರಸ-ಮನೋಹರ, ಕಾಸಾರ-ಸರೋವರ, ಒಗೆ-ಹುಟ್ಟು, ಸ್ಫುರಿಸಿದ-ವ್ಯಕ್ತವಾದ, ಅದ್ರಿ-ಪರ್ವತ, ಗಿರಿಜಾ-ಪರ್ವತದಲ್ಲಿ ಹುಟ್ಟಿದವಳು, ಪಾರ್ವತಿ; ಪರರೂಪ-ಶಿವರೂಪ.

* ಮನೋಹರವಾದ ಅನ್ನದಾನೀಶನೆಂಬ ಮಹಾಸರೋರವದಲ್ಲಿ ಕುರುವತ್ತಿ ನಂಜೇಶವೆನ್ನುವ ಕಮಲ ಹುಟ್ಟಿತು. ಆ ಕಮಲದಲ್ಲಿ ಸಿದ್ಧನಂಜೇಶನೆಂಬ ಬ್ರಹ್ಮ ಜನಿಸಿದ. ಆ ಸಿದ್ಧನಂಜೇಶನೆಂಬ ಬ್ರಹ್ಮನಲ್ಲಿ ಉದಯಿಸಿದ ಕವಿ ಸಿದ್ಧನಂಜನೆಂಬ ಪರ್ವತವು ಈ ಸ್ತೋತ್ರವೆಂಬ ಪಾರ್ವತಿಯನ್ನು ಹಡೆದು ಶಿವರೂಪಿಯಾದ ನಿಮಗೆ ಶಿವಭಕ್ತಿ ಪೂರ್ವಕ ಸರ್ಮಪಿಸಿದ. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೦೯

ಚಾರುಭಾವಪ್ರಭಾಯುತ ಶಬ್ದರತ್ನಗಳ
ನಾರೈದು ಕಾರಕವೆನಿಪ್ಪ ಕುಂದಾಣದಿಂ
ಚೀರಣಿಸಿ ಕೆತ್ತಿ ಸದ್ಭಾವರತ್ನಾಭರಣವೆಂಬಾಭಿಧಾನವಿತ್ತು
ಸಾರ ಸತ್ಕವಿ ಸಿದ್ಧನಂಜ ತ್ವದಂಘ್ರಿ ಮೃದು
ಸಾರಸಕೆ ತೊಡರಿಸಿದ ಬಿರುದ ನಿರ್ವಹಿಸಿಕೋ

ಭಾರ ನಿಮ್ಮದು ಸಲಹು ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೇ

* ಚಾರು–ಸುಂದರ, ಪ್ರಭಾ–ಪ್ರಕಾಶ, ಆರೈದು–ಹುಡುಕಿ, ಶೋಧಿಸಿ, ಕಾರಕ–ಮಾಡುವುದು, ಕ್ರಿಯಾಯೋಗ್ಯ; ಕುಂದಾಣ–ಬಂಗಾರ, ಚೀರಣ–ಉಳಿ, ಅಭಿಧಾನ–ಹೆಸರು, ತ್ವತ್–ನಿನ್ನ, ಅಂಘ್ರಿ–ಪಾದ, ಸಾರಸ–ಕಮಲ, ತೊಡರು–ಆಭರಣ, ಬಿರುದ–ಜಯಘೋಷ, ಭಾರ–ಹೊಣೆ, ಸಲಹು–ರಕ್ಷಿಸು.

* ಸುಂದರವಾದ ಭಾವಪ್ರಕಾಶದಿಂದ ಕೂಡಿದ ಶಬ್ದಗಳೆಂಬ ರತ್ನಗಳನ್ನು ಶೋಧಿಸಿ, ಕ್ರಿಯಾಯೋಗ್ಯವೆನಿಸುವ ಬಂಗಾರದಿಂದ ಉಳಿ ಹಿಡಿದು ಕೆತ್ತಿ, "ಭಾವರತ್ನಾಭರಣ" ವೆಂಬ ನಾಮಕರಣಮಾಡಿ ಶ್ರೇಷ್ಠಸತ್ಕವಿ ಸಿದ್ಧನಂಜೇಶನು ನಿಮ್ಮ ಪಾದಕಮಲಗಳಿಗೆ ಆಭರಣವಾಗಿ ತೊಡಿಸಿದ. ಈ ಬಿರುದನ್ನು ನಿರ್ವಹಿಸಿಕೊಳ್ಳುವ ಭಾರ ನಿಮ್ಮದು. ಸಲಹಯ್ಯಾ ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೧೦

ಅರಿಸಮಾಸೆನಿಪ ಹುಳು ಕಡಿದ ಕುಸುಮವ ಬಿಟ್ಟು
ತೊರೆದು [೯೯][ಕ್ರಿಯಾ][೯೯] ರಹಿತವೆಂಬ ಕೆದರಿದ ಹೂವ
[೧೦೦][ಸರಿಸಿ][೧೦೦] ಕಾರಕರಹಿತವಾದ ಕಂಪಿಲ್ಲದರಳುಳಿದು ದುಸ್ಸಂಧಿಯೆಂಬಾ
ಹರಿದ ಹೂವಂ ನಿವಾರಿಸಿ ಸುಶಬ್ದಗಳೆಂಬ
ಪರಿಮಳಿಪ ಪೊಸಕುಸುಮಗಳನೆ ನೂರೆಂಟು ತವ
ಚರಣಕ್ಕೆ [೧೦೧][ಅ][೧೦೧]ರ್ಪಿಸಿದೆ ಗುರುವೆ ತೋಂಟದ ಸಿದ್ಧಲಿಂಗ ಮತ್ಕಲ್ಪತುರುವೆ

* ಅರಿಸಮಾಸ–ಪೂರ್ವೋತ್ತರಪದಗಳಲ್ಲಿ ಒಂದು ಕನ್ನಡ, ಇನ್ನೊಂದು ಸಂಸ್ಕೃತ ಪದದಿಂದ ಉಂಟಾದ ಸಮಾಸ; ಕೆದರಿದ–ಪಕಳೆ ಉದುರಿದ, ಕಂಪು–ಸುವಾಸನೆ, ಅರಳು–ಹೂವು, ತವ–ನಿನ್ನ, ಚರಣ–ಪಾದ.

* ಅರಿಸಮಾಸವೆಂಬ ಹುಳು ಕಡಿದ ಹೂವನ್ನು ಬಿಟ್ಟು ತೊರೆದು, ಕ್ರಿಯಾರಹಿತವೆಂಬ ಪಕಳೆ ಉದುರಿದ ಹೂವನ್ನು ಸರಿಸಿ, ಕಾರಕರಹಿತವಾದ ಪರಿಮಳವಿಲ್ಲದ ಹೂವನ್ನು ಉಳಿದು, ದುಸ್ಸಂಧಿಯೆಂಬ ಹರಿದುಹೋದ ಹೂವನ್ನು ನಿವಾರಿಸಿ, ಸುಶಬ್ದಗಳೆಂಬ ಪರಿಮಳವುಳ್ಳ ನೂರೆಂಟು

೯೯–೯೯ ಕ್ರಿಯ (ಮೂ), ೧೦೦–೧೦೦ ನರಸಿ (ಮೂ), ೧೦೧–೧೦೧ ಸಮ (ಮೂ).

ಹೊಸ ಹೂವುಗಳನ್ನೇ ನಿಮ್ಮ ಪಾದಗಳಿಗೆ ಅರ್ಪಿಸಿರುವೆನು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

೧೧೧

ವರ [೧೦೨][ಸೌಂದರ][೧೦೨]ನೊಳಿಟ್ಟ ಕೂರ್ಮೆಯಿಂ ಶಂಕರಂ
ಪರವೆನಾಚಿಯಳುರದೊಳಿರ್ದು ಪೊಂಗಳನಿತ್ತ
ತೆರದೊಳೀ ಸ್ತೋತ್ರಮಂ ಬರೆದೋದಿ ಪಠಿಸಿ ಲಾಲಿಸುವರೆರ್ದೆಯಲ್ಲಿ ನಿಂದು
ಹರುಷದಿಂ ನಿರ್ವಕ್ತ್ಯ ಸುಖಭೋಗಮೋಕ್ಷಂಗ
ಳಿರದಿತ್ತು ರಕ್ಷಿಪುದು ಎನ್ನ ಮೇಲತಿ ಪೂರ್ಣ
ಕರುಣವಿಟ್ಟುದರಿಂದೆ ಗುರುವೇ ತೋಂಟದ ಸಿದ್ಧಲಿಂಗ ಮತ್ಕಲ್ಪತರುವೆ.

* ಸೌಂದರ–ಸೌಂದರ ನಂಬಿಯಣ್ಣ, ಕೂರ್ಮೆ–ಪ್ರೀತಿ, ಪರವೆನಾಚಿ–ಸೌಂದರ ನಂಬಿಯಣ್ಣನ ಪ್ರಿಯತಮೆ, ಉರ–ಎದೆ, ಪೊಂಗಳನಿತ್ತ–ಹೊನ್ನುಗಳನ್ನು ಕೊಟ್ಟ, ತೆರ–ರೀತಿ, ಲಾಲಿಸು–ಕೇಳು, ನಿರ್ವಕ್ತ್ಯ–ಮಾತಿಗೆ ಮೀರಿದ, ಇರದೆ–ಬಿಡದೆ.

* ಸೌಂದರನಂಬಿಯಣ್ಣನ ಮೇಲಿನ ಪ್ರೀತಿ ಕಾರಣವಾಗಿ ಶಿವನು ಪರವೆನಾಚಿಯ ಎದೆಯಲ್ಲಿದ್ದುಕೊಂಡು ಅವಳಿಗಾಗಿ ಹೊನ್ನನ್ನು ನೀಡಿದ ಹಾಗೆ, ನನ್ನ ಮೇಲಿನ ಕರುಣೆ ಕಾರಣವಾಗಿ ಈ ಸ್ತೋತ್ರಕಾವ್ಯವನ್ನು ಲಿಖಿಸಿ ವಚಿಸಿ ಪಠಿಸಿ ಲಾಲಿಸುವವರ ಹೃದಯದಲ್ಲಿ ನಿಂತು ಅವರಿಗಾಗಿ ನಿರ್ವಕ್ತ್ಯ ಸುಖಭೋಗಮೋಕ್ಷಗಳನಿತ್ತು ರಕ್ಷಿಸು. ಗುರುವೇ ತೋಂಟದ ಸಿದ್ಧಲಿಂಗನೆಂಬ ನನ್ನ ಕಲ್ಪತರುವೇ.

ತೋಂಟದ ಸಿದ್ಧೇಶ್ವರನ ಭಾವರತ್ನಾಭರಣಸ್ತೋತ್ರ ಸಮಾಪ್ತ
ಮಂಗಳ ಮಹಾಶ್ರೀ

❖❖

೧೦೨–೧೦೨ ಸವುಂದ (ಮೂ).

ಪದ್ಯಗಳ ಅಕಾರಾದಿ

(ಅಂಕಿ ಪದ್ಯವನ್ನು ಸೂಚಿಸುತ್ತದೆ)

❖❖

ಆದಯ್ಯನ ಲಘುಕೃತಿಗಳು

ಸಂಪಾದಕರು

ಡಾ. ಎಂ. ಎಂ. ಕಲಬುರ್ಗಿ

೧೯೮೦

ವೀರಶೈವ ಅಧ್ಯಯನಸಂಸ್ಥೆ

ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ

ಡಂಬಳ–ಗದಗ

*

ಚರಿತ್ರೆ

ಶಿವಶರಣರ ಚರಿತ್ರೆ ಮತ್ತು ಸಾಹಿತ್ಯಗಳ ವ್ಯಾಪಕವೂ ಆಳವೂ ಆದ ಅಧ್ಯಯನ ಇತ್ತೀಚಿನ ದಿನಗಳಲ್ಲಿ ಭರದಿಂದ ನಡೆಯುತ್ತಲಿದ್ದರೂ ಪೂರೈಸಬೇಕಾದ ಕಾರ್ಯ ಇನ್ನೂ ಅಪಾರವಾಗಿದೆ. ಈ ಸಾಲಿನಲ್ಲಿ ಆದಯ್ಯನ ಚರಿತ್ರೆ ಮತ್ತು ಸಾಹಿತ್ಯಗಳಿಗೆ ಸಂಬಂಧಿಸಿದ ಸಂಗತಿಗಳೂ ಪರಿಗಣಿತವಾಗುತ್ತವೆ.

ಆದಯ್ಯನ ಹೆಸರನ್ನು ನೆನೆದ ಕೂಡಲೇ ನಮ್ಮ ಕಣ್ಣೆದುರು ನಿಲ್ಲುವ ಘಟನೆಯೆಂದರೆ, ಹುಲಿಗೆರೆಯಲ್ಲಿ ಜರುಗಿದ ಸೋಮೇಶ್ವರನ ಪ್ರತಿಷ್ಠಾಪನೆ. ಆದರೆ ಈ ದೈವತದ ಪ್ರತಿಷ್ಠಾಪಕನು ಆದಯ್ಯನೆಂದು ಹರಿಹರನ ಆದಯ್ಯನ ರಗಳೆ, ಪಾಲ್ಕುರಿಕೆ ಸೋಮನಾಥನ ಪಂಡಿತಾರಾಧ್ಯಚರಿತ್ರಮು, ರಾಘವಾಂಕನ ಸೋಮನಾಥಚಾರಿತ್ರ, ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿ, ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ವಿರೂಪಾಕ್ಷನ ಚೆನ್ನಬಸವ ಪುರಾಣ, ಸಿದ್ಧನಂಜೇಶನ ರಾಘವಾಂಕ ಚರಿತೆಗಳು ಹೇಳಿದರೆ; ಸೋಮಣ್ಣನೆಂದು, ಪಾಲ್ಕುರಿಕೆ ಸೋಮನಾಥನ ಬಸವಪುರಾಣಮು, ಭೀಮಕವಿಯ ಬಸವಪುರಾಣ, ಮಲ್ಲಣಾರ್ಯನ ವೀರಶೈವಾಮೃತ ಮಹಾಪುರಾಣ, ವಿರೂಪಾಕ್ಷನ ಚೆನ್ನಬಸವಪುರಾಣ, ಸಿದ್ಧಲಿಂಗನ ಪಾಲ್ಕುರಿಕೆ ಸೋಮೇಶ್ವರ ಪುರಾಣ, ಶಾಂತಲಿಂಗದೇಶಿಕನ ಭೈರವೇಶ್ವರಕಾವ್ಯದ ಕಥಾಮಣಿಸೂತ್ರರತ್ನಾಕರಗಳು ಹೇಳುತ್ತವೆ.

ಆದಯ್ಯನ ಕಥೆ ಹೀಗಿದೆ:

ಸೌರಾಷ್ಟ್ರದಿಂದ ಹುಲಿಗೆರೆಗೆ ವ್ಯಾಪಾರಕ್ಕೋಸುಗ ಬಂದ ಶಿವಭಕ್ತ ಆದಯ್ಯ, ಜೈನ ಯುವತಿ ಪದ್ಮಾವತಿಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಮನೆಗೆ ಬರುವ ಜಂಗಮಕ್ಕೆ ಮಾಡಿಸಿದ ಅಡಿಗೆಯನ್ನು ಜೈನಯತಿಗಳು ಉಂಡುಹೋದ ನಿಮಿತ್ತ ಮಾವ ಪಾರಿಸಸೆಟ್ಟಿ – ಅಳಿಯ ಆದಯ್ಯಗಳಲ್ಲಿ ಮನಸ್ತಾಪ ಹುಟ್ಟಿ, ಮಾಡಿದ ಪ್ರತಿಜ್ಞೆಯ ಮೇರೆಗೆ ಸೌರಾಷ್ಟ್ರದ ವರೆಗೂ ನಡೆದುಹೋಗಿ, ಸೋಮೇಶ್ವರನನ್ನು ಒಲಿಸಿಕೊಂಡುಬಂದು, ಸುರಹೊನ್ನೆಬಸದಿಯ ಜಿನನ ಭಗ್ನಗೊಳಿಸಿ ಸೋಮೇಶ್ವರನನ್ನು ಪ್ರತಿಷ್ಠಾಪಿಸುತ್ತಾನೆ, ಆದಯ್ಯ.

ಸೋಮಣ್ಣನ ಕಥೆ ಹೀಗಿದೆ :

ನಿತ್ಯವೂ ಶಿವಲಿಂಗಸ್ಪರ್ಶಮಾಡಿಯೇ ಪ್ರಸಾದ ಸೇವಿಸುವುದು ಈತನ ವ್ರತ. ಒಮ್ಮೆ ಕಣ್ಣುಬೇನೆ ಕಾರಣವಾಗಿ ಮನೆಯಲ್ಲಿಯೇ ಉಪವಾಸ ಕುಳಿತಿರಲು ಕೆಲವು ಜೈನರು ಶಿವಾಲಯಕ್ಕೆ ಕರೆದುಕೊಂಡು ಹೋಗುವುದಾಗಿ ನಂಬಿಸಿ, ಸುರಹೊನ್ನೆಜಿನಾಲಯಕ್ಕೆ ಕರೆದೊಯ್ದು ನಮಿಸುವಂತೆ ಮಾಡಿದರು.

ತಾನು ನಮಿಸಿದುದು ಜಿನಬಿಂಬಕ್ಕೆ ಎಂದು ಗೊತ್ತಾಗಲು ಕೋಪದಿಂದ ಕಣ್ದೆರೆದು ನೋಡಲಾಗಿ ಜಿನಬಿಂಬ ಒಡೆದು ಸೋಮೇಶ್ವರಲಿಂಗ ಮೂಡಿತು.

ಈ ಎರಡೂ ಕಥೆಗಳು ಬೇರೆ ಬೇರೆ ಕಾವ್ಯಗಳಲ್ಲಿ ಅಲ್ಪವ್ಯತ್ಯಾಸದಿಂದ ತೋರಿಬರುತ್ತಿದ್ದರೂ ಲಕ್ಕಣ್ಣ ದಂಡೇಶನ ಶಿವತತ್ವಚಿಂತಾಮಣಿಯಲ್ಲಿ ಒಂದುಗೂಡಿ ನಿಂತಿವೆ. ಇವುಗಳಲ್ಲಿ ಯಾವುದು ನಿಜವೆಂಬ ಸಂದೇಹವೇ ಸಾಕಾಗಿರುವಾಗ ಈತ ಎರಡನ್ನೂ ಕೂಡಿಸಿ ಬೇರೊಂದು ಸಂದೇಹವನ್ನು ಸೃಷ್ಟಿಸಿದ್ದಾನೆ. ಹೀಗಾಗಿ ಆಧುನಿಕ ವಿದ್ವಾಂಸರಲ್ಲಿ ಕೆಲವರು ಈ ಎರಡೂ ಹೆಸರುಗಳು ಒಬ್ಬನಿಗೆ ಇರಬಹುದೆಂದು, ಇನ್ನು ಕೆಲವರು ಪುಲಿಗೆರೆಯಲ್ಲಿ ಇವು ಕಾಲಾಂತರದಲ್ಲಿ ಜರುಗಿದ ಬೇರೆಬೇರೆ ಘಟನೆಗಳೆಂದು, ಬೇರೆ ಕೆಲವರು ಇವು ಬೇರೆಬೇರೆ ಗ್ರಾಮಗಳಲ್ಲಿ ಜರುಗಿದ ಘಟನೆಗಳೆಂದು ಊಹಿಸಿದ್ದಾರೆ. ಹೀಗೆ ಸೋಮೇಶ್ವರನನ್ನು ಸ್ಥಾಪಿಸಿದ ವ್ಯಕ್ತಿ ಮತ್ತು ಸ್ಥಾಪಿಸಿದ ಸ್ಥಳದ ಬಗೆಗೆ ಇನ್ನೂ ಸಂದೇಹಗಳು ಉಳಿದುಕೊಂಡಿವೆ. ಹೀಗಿದ್ದೂ ಆದಯ್ಯನು ಹುಲಿಗೆರೆಯಲ್ಲಿ ಸ್ಥಾಪಿಸಿದನೆಂಬುದು ಸರ್ವಸಾಮಾನ್ಯ ಗ್ರಹಿಕೆಯಾಗಿದೆ.

* * *

ಆದಯ್ಯನ ಕಾಲದ ಬಗೆಗೆ ನೇರ ಮತ್ತು ಸ್ಪಷ್ಟ ಉಲ್ಲೇಖಗಳಿಲ್ಲವಾದುದರಿಂದ, ಹುಲಿಗೆರೆಯ ಸೋಮೇಶ್ವರಲಿಂಗವನ್ನು ಕುರಿತ ಉಲ್ಲೇಖಗಳ ಬಲದಿಂದ ಈತನ ಕಾಲವನ್ನು ನಿರ್ಧರಿಸಬೇಕಾಗುತ್ತದೆ. ಹುಲಿಗೆರೆಯ ಸುಮಾರು ೬೦ ಶಾಸನಗಳಲ್ಲಿ ಜಿನಮೂರ್ತಿ ಭಗ್ನಗೊಂಡು ಶಿವಮೂರ್ತಿ ಸ್ಥಾಪನೆಗೊಂಡ ಸಂಗತಿಯನ್ನು ಒಂದೂ ಶಾಸನ ಹೇಳುವುದಿಲ್ಲ. ೭ನೆಯ ಶತಮಾನದಿಂದ ಮೊದಲುಮಾಡಿ ಈ ಶಾಸನಗಳು ಲಭಿಸುತ್ತಿದ್ದರೂ ಒಂದರಲ್ಲಿಯೂ ಅಷ್ಟು ಪ್ರಸಿದ್ಧವಾಗಿದ್ದ ಸುರಹೊನ್ನೆ ಬಸದಿಯ ಪ್ರಸ್ತಾಪವಿಲ್ಲವಾದುದರಿಂದ ಸೋಮೇಶ್ವರದೇವರಿಗೆ ಸಂಬಂಧಿಸಿದ ಶಾಸನೋಲ್ಲೇಖಗಳನ್ನು ಆಧರಿಸಬೇಕಾಗುತ್ತದೆ. ಕ್ರಿ.ಶ.೧೧೦೨ರ ಹುಲಿಗೆರೆಯ ಶಾಸನವೊಂದು "ಶ್ರೀ ರಾಜಧಾನಿ ಪಟ್ಟಣಂ ಪುಲಿಗೆರೆಯ ಶ್ರೀ ಸ್ವಯಂಭೂ ಸೋಮೇಶ್ವರದೇವರು....." ಅಂಗಭೋಗಕ್ಕಾಗಿ ಆ ದೇವಾಲಯದ ಸ್ಥಾನಾಚಾರ್ಯ ಮಹೇಂದ್ರಸೋಮಪಂಡಿತನ ಕಾಲನ್ನು ತೊಳೆದು ದತ್ತಿಬಿಟ್ಟುದನ್ನು ತಿಳಿಸುತ್ತದೆ. ಅಲ್ಲಿಯ ಕ್ರಿ.ಶ.೧೧೫೩ನೆಯ ಬೇರೊಂದು ಶಾಸನ

ದೇವಸೋಮವ್ರತಿ

(ಕುಳೋದ್ಭವ)

|

ಮಹೇಂದ್ರಸೋಮವ್ರತಿ (ಕ್ರಿ.ಶ.೧೧೦೨ರ ಶಾಸನದಲ್ಲಿಯೂ ಉಕ್ತ)

(ಮಗ)

|

ಜ್ಞಾನಸೋಮವ್ರತಿ (ಕ್ರಿ.ಶ. ೧೧೫೩ರ ಶಾಸನ)

ಎಂದು ಈ ಆಚಾರ್ಯಪರಂಪರೆಯನ್ನು ತಿಳಿಸುತ್ತದೆ. ದೇವಸೋಮವ್ರತಿಯು ೧೧೦೨ರ ಮಹೇಂದ್ರಸೋಮವ್ರತಿಯ ತಂದೆಯಾಗಿದ್ದರೆ ಅವನ ಕಾಲ ೧೧ನೆಯ ಶತಮಾನದ

ಉತ್ತರಾರ್ಧವಾಗುತ್ತದೆ. ಪೂರ್ವಜನಾಗಿದ್ದರೆ ('ಕುಳೋದ್ಭವ' ಪದವನ್ನು ಗಮನಿಸಿರಿ) ಇನ್ನು ಹಿಂದೆ ಹೋಗುತ್ತಿದ್ದು, ಸೋಮೇಶ್ವರಲಿಂಗ ಪ್ರತಿಷ್ಠಾಪನೆಯೂ ಅಷ್ಟು ಹಿಂದೆ ಸರಿಯುತ್ತದೆ.

ಕ್ರಿ.ಶ. ೧೧೯೬ರ ಬಳ್ಳಿಗಾವಿಯ ಶಾಸನದಲ್ಲಿ ಸರ್ವದೇವನೆಂಬವನ ಮಗನಾದ ಸೋಮೇಶ್ವರನೆಂಬವನನ್ನು ಕುರಿತು "ಪುಲಿಕರ ನಗರದ ಸೋಮೇಶ್ವರದೇವರ ಪ್ರಸಾದದಿಂದ ಸೋಮೇಶ್ವರನುದಯಿಸಲ್" ಎಂದು ಹೇಳಲಾಗಿದೆ. ಅಲ್ಲಿಯೇ ಈ ಸೋಮೇಶ್ವರನೆಂಬವನನ್ನು ಕುರಿತು "ಸೋಮಮಂ......... ವಧೂಜನಕಾಮಂ ಸಂಗ್ರಾಮದೆಡೆಯೊಳು ಭೀಮಂ....." ಎಂದು ಕರೆದಿರುವುದರಿಂದ ಈ ಕಾಲಕ್ಕೆ ಈತನ ವಯಸ್ಸು ೨೫-೩೦ರಷ್ಟಾದರೂ ಇರಬಹುದು. ಹಾಗಿದ್ದರೆ ಪುಲಿಗೆರೆಯ ಕಗ್ಗತ್ತೂರು ಶಾಸನದಲ್ಲಿ "ಹುಲಿಗೆರೆಯ ಸೋಮನಾಥದೇವರ ಕ್ಷೇತ್ರಸನ್ಯಾಸಿ....." ಎಂಬ ಉಲ್ಲೇಖವಿದ್ದು ಸಂಪಾದಕರು ಊಹಿಸಿದಂತೆ ಇದರ ಕಾಲ ಕ್ರಿ.ಶ. ೧೦೫೦ ಇದ್ದರೆ ದೇವರ ಪ್ರತಿಷ್ಠಾಪನ ಸಮಯ ಕನಿಷ್ಠ ೧೦೫೦ಕ್ಕೆ ಹಿಂದೆ ನಿಲ್ಲುತ್ತದೆ. ಹೀಗಾಗಿ ಕಾರ್ಯ ಮಾಡಿದವನು, ಸೋಮಣ್ಣನಾಗಿರದೆ ಆದಯ್ಯನೇ ಆಗಿದ್ದಪಕ್ಷದಲ್ಲಿ ಆತನ ಕಾಲವೂ ೧೦೫೦ಕ್ಕೆ ಹಿಂದೆ ಎನ್ನಬೇಕಾಗುತ್ತದೆ.

ಆದಯ್ಯನ ಹೆಸರಿನಲ್ಲಿ ಈವರೆಗೆ ೩೯೭ ವಚನ ಲಭಿಸಿವೆ. ವಚನ ಸಾಹಿತ್ಯ ಕ್ರಿ.ಶ.೧೦೫೦ರಷ್ಟು ಹಿಂದೆ ಪ್ರಾರಂಭವಾಗಿರದೆ ಮತ್ತು ಆದಯ್ಯನ ವಚನಗಳಲ್ಲಿ ೧೨ನೆಯ ಶತಮಾನದ ಬಸವ, ಚೆನ್ನಬಸವರನ್ನು ನೆನೆಯಲಾಗಿರುವ ಕಾರಣ ಮೂರ್ತಿ ಸ್ಥಾಪಕ ಆದಯ್ಯ ಮತ್ತು ವಚನಕಾರ ಆದಯ್ಯ ಭಿನ್ನವೆನಿಸುತ್ತದೆ. ಈ ಕಾಲದ ಅಂತರವನ್ನು ಪರಿಹರಿಸಿದಲ್ಲಿ ಮಾತ್ರ ಇಬ್ಬರೂ ಅಭಿನ್ನರೆಂದು ಹೇಳಬಹುದಾದರೂ ಹಾಗೆ ಪರಿಹರಿಸುವ ಆಧಾರಗಳು ನಮಗೆ ಇನ್ನೂ ಲಭಿಸಿಲ್ಲ. ಹೀಗಾಗಿ ಅಂಥ ಆಧಾರಗಳು ಸಿಗುವ ವರೆಗೆ ವಚನಕಾರರ ಆದಯ್ಯ, ಮೂರ್ತಿಸ್ಥಾಪಕ ಆದಯ್ಯನಿಂದ ಬೇರೊಬ್ಬನಿದ್ದು ಆತನು ಬಸವಣ್ಣನವರ ಕಿರಿಯ ಸಮಕಾಲೀನನೆಂದು ಹೇಳಬಹುದು.

* * *

ಮೂರ್ತಿಸ್ಥಾಪನೆ, ಜೀವಿತ ಕಾಲಗಳಂತೆ ವೀರಶೈವಕ್ಕೆ ವಿರುದ್ಧವಾದ ಸ್ಥಾವರಲಿಂಗ ಸ್ಥಾಪನೆಮಾಡಿದ ಆದಯ್ಯನ ಮತವೂ ಚರ್ಚೆಗೆ ಒಳಗಾಗಿದೆ.

೧. ಸೋಮೇಶ್ವರ ದೇವಾಲಯದ ಸ್ಥಾನಪತಿಗಳ ಕೊನೆಯ 'ವ್ರತಿ' ಎಂಬ ಉಪಾಧಿಯೂ ಅವರಿಗಿರುವ 'ಮಹಾವ್ರತಿ ಕುಳೋದ್ಭವಂ' ಎಂಬ ಹೇಳಿಕೆಯೂ ಇವರು ಮಹಾವ್ರತಿಗಳೆಂದು ಸೂಚಿಸುತ್ತವೆ. ಬ್ರಹ್ಮಶಿವನು "ಕಾಳಾಮುಖ, ಕಾಪಾಲಿಕ, ಪಾಶುಪತ, ಶೈವ ಎಂಬ ನಾಲ್ಕು ಬಗೆಯ ಶಿವೋಪಾಸಕರಲ್ಲಿ ಮಹಾವ್ರತಿಯು ರುದ್ರಮಾರ್ಗದಿಂದ ನಡೆಯುತ್ತಾನೆ" ಎಂದು ಹೇಳುವನು. ಮಾಲತೀಮಾಧವದ ಪ್ರಕಾರ ಮಹಾವ್ರತಿಗಳೆಂದರೆ ಕಾಪಾಲಿಕರು. ಇವರದು ಸೋಮ ಸಿದ್ಧಾಂತ, ಮೇಲೆ ಹೇಳಿದ ಅರ್ಚಕರ ಹೆಸರಿನ ಮುಂದೆ 'ಸೋಮ' ಎಂಬ ಉಪಾಧಿ ಇದೆ. ಸ್ಥಾಪಿತವಾದ ದೇವತೆ 'ಸೋಮ'ನಾಗಿದ್ದಾನೆ ಆದುದರಿಂದ ಮೂರ್ತಿ ಸ್ಥಾಪಕನಾದ ಆದಯ್ಯನೂ ಕಾಪಾಲಿಕನಾಗಿರಬಹುದು."*

---

* ಕರ್ನಾಟಕದ ಶಾಸನಗಳಲ್ಲಿ 'ಮಹಾವ್ರತಿ' ಎಂಬುದು ನಕುಲೀಶಪಾಶುಪತಿಗಳಿಗೂ ಇರುವ ಬಿರುದು. ಆದುದರಿಂದ ಆದಯ್ಯ ನಕುಲೀಶಪಾಶುಪತನಾಗಿರಬಹುದೆಂಬ ಸಂದೇಹ ಹುಟ್ಟುತ್ತದೆ.(ಕರ್ನಾಟಕದ ಲಾಕುಳಶೈವ ಇತಿಹಾಸ, ಪು. ೭೪)

೨. ಸೋಮೇಶನನ್ನು ಪ್ರತಿಷ್ಠಾಪಿಸಿದ ಸಂದರ್ಭದಲ್ಲಿ "ಆ ದಿನ ಬಂದೆಲ್ಲ ಶೈವಕಾದಿ ಶೈವಾನುಗ್ರಹ"ವನ್ನು ನೀಡಲಾಯಿತೆಂದು ಭೈರವೇಶ್ವರ ಕಾವ್ಯ ಹೇಳುವುದರಿಂದ ಆದಯ್ಯನು 'ಆದಿಶೈವ'ವೆಂಬ ಶೈವಪ್ರಭೇದಕ್ಕೆ ಸೇರಿದವನಾಗಿರಬಹುದು.

೩. ಈಗ ಲಕ್ಷ್ಮೇಶ್ವರದಲ್ಲಿ ಸೋಮೇಶ್ವರನ ವಾರ್ಷಿಕ ಮಹಾಪೂಜೆ ಮಾಡುವವರು ವೀರಶೈವ "ಆದಿಬಣಜಿಗರು". ಆದುದರಿಂದ ಬಣಜಿಗನಾದ ಆದಯ್ಯ ಇಂದಿನ "ಆದಿಬಣಜಿಗ"ರ ಪಂಥದ ಪೂರ್ವಪುರುಷನಾಗಿರಬಹುದು. ಹೀಗೆ ಆದಯ್ಯನ ಮತದ ವಿಷಯವಾಗಿ ಭಿನ್ನ ಅಭಿಪ್ರಾಯಗಳು ಮೂಡಿತ್ತಿದ್ದರೂ ಮೂರ್ತಿಸ್ಥಾಪಕ ಆದಯ್ಯ ವಚನಕಾರ ಆದಯ್ಯಗಳು ಅಭಿನ್ನರೆನ್ನುವ ವಿದ್ವಾಂಸರು ಮೂರ್ತಿಪ್ರತಿಷ್ಠಾಪನೆ ಮಾಡಿದ ತರುವಾಯ ವೀರಶೈವ ಮತವನ್ನು ಸ್ವೀಕರಿಸಿರಬಹುದೆಂದು ಊಹಿಸುತ್ತಾರೆ. ಒಂದುವೇಳೆ ಇಬ್ಬರೂ ಅಭಿನ್ನರಾಗಿದ್ದರೆ ವಚನಕಾರ ಆದಯ್ಯ ವೀರಶೈವನಿದ್ದು ಮೂಲದಲ್ಲಿ ಯಾವ ಪಂಥದವನೋ ಹೇಳಲು ಬರುವುದಿಲ್ಲ. ಒಟ್ಟಿನಲ್ಲಿ ೧೯೬೮ ರಲ್ಲಿ ನಾನು ಮಂಡಿಸಿದ್ದ–

೧. ಸೋಮನಾಥನ ಸಂಸ್ಥಾಪಕ ಆದಯ್ಯನೇ? ಸೋಮಣ್ಣನೇ ?

೨. ಆದಯ್ಯನಾಗಿದ್ದರೆ ಆತನು ಮೂಲತಃ ವೀರಶೈವನೇ? ವೀರಶೈವೇತನೇ?

೩. ಆದಯ್ಯನ ಘಟನೆ ಹುಲಿಗೆರೆಯಲ್ಲಿ ನಡೆಯಿತೇ? ಬೇರೊಂದು ಊರಲ್ಲಿ ನಡೆಯಿತೇ?

೪. ಪುಲಿಗೆರೆಯ ಸೋಮೇಶ್ವರ ಮೂರ್ತಿಸ್ಥಾಪನೆಯ ಕಾಲವಾವುದು?

೫. ಮೂರ್ತಿಸ್ಥಾಪಕ ಆದಯ್ಯ, ವಚನಕಾರ ಆದಯ್ಯ ಭಿನ್ನರೇ? ಅಭಿನ್ನರೇ?*

ಈ ಪ್ರಶ್ನೆಗಳು ಇನ್ನೂ ಪ್ರಶ್ನೆಗಳಾಗಿಯೇ ಉಳಿದಿವೆಯೆಂದು ಹೇಳಬಹುದು.

ಸಾಹಿತ್ಯ

ಶಿವಶರಣರ ಬರವಣಿಗೆಯನ್ನು ರೂಪದೃಷ್ಟಿಯಿಂದ ವಚನಸಾಹಿತ್ಯ, ಸ್ವರ ವಚನಸಾಹಿತ್ಯ, ಇತರಸಾಹಿತ್ಯ ಎಂದು ವರ್ಗೀಕರಿಸುವುದು ಸೂಕ್ತವೆಂದು ತೋರುತ್ತದೆ. ಇವುಗಳಲ್ಲಿ ನಾವು ವಚನಸಾಹಿತ್ಯದ ಬಗೆಗೆ ಹೆಚ್ಚು ಆಸಕ್ತಿವಹಿಸಿದ್ದೇವೆ. ಸ್ವರವಚನಸಾಹಿತ್ಯದ ಬಗೆಗೆ ಇತ್ತೀಚೆ ಆಸಕ್ತಿ ತೋರುತ್ತಲಿದ್ದೇವೆ. ಇತರ ಸಾಹಿತ್ಯದ ಬಗೆಗೆ ಕಣ್ಣೆತ್ತಿಯೂ ನೋಡಿಲ್ಲ. ಪ್ರಮಾಣದೃಷ್ಟಿಯಿಂದ ಶರಣರು ವಚನಗಳನ್ನು ಅಧಿಕ ಸಂಖ್ಯೆಯಲ್ಲಿ, ಸ್ವರವಚನಗಳನ್ನು ಕಡಿಮೆ ಸಂಖ್ಯೆಯಲ್ಲಿ, ಇತರ ಕೃತಿಗಳನ್ನು ಇನ್ನೂ ಕಡಮೆ ಸಂಖ್ಯೆಯಲ್ಲಿ ಬರೆದಿದ್ದಾರೆ.

ವಚನಸಾಹಿತ್ಯ ಸರಳ, ಶಾಸ್ತ್ರ, ಬೆಡಗು ಮಾರ್ಗಗಳಲ್ಲಿ ಮುನ್ನಡೆದರೆ ಸ್ವರ ವಚನಸಾಹಿತ್ಯ ಸಾವಿರಾರು ರಾಗ–ಛಂದಗಳಲ್ಲಿ ಪ್ರವಹಿಸಿದ್ದು, ಕಣಿ, ಸ್ತೋತ್ರ, ಕೋಲುಪದ, ಚಂದಮಾಮ ಮೊದಲಾದ

* ವಚನಪಿತಾಮಹ(೧೯೬೮), ಪುಲಿಗೆರೆಯ ಸೋಮೇಶ್ವರ : ಪು. ೪೭೦–೯೦, ಮೇಲಿನ ವಿಚಾರಗಳನ್ನು ಈ ಲೇಖನದಿಂದ ಸಂಗ್ರಹಿಸಲಾಗಿದೆ. ವಿವರಗಳಿಗೆ ಅಲ್ಲಿ ನೋಡಬಹುದು.

ಜಾನಪದಬಂಧಗಳನ್ನೂ ಮೈಗೂಡಿಸಿಕೊಂಡಿದೆ. ಇತರ ಸಾಹಿತ್ಯವರ್ಗ ಮಂತ್ರಗೋಪ್ಯ, ಮಿಶ್ರಾರ್ಪಣ, ಕರಣಹಸಿಗೆ, ಸೃಷ್ಟಿಯವಚನ, ಕಾಲಜ್ಞಾನ, ಶತಕ, ಪಂಚಾಶಿಕೆ, ತ್ರಿವಿಧಿ, ಪೀಠಿಕೆ, ಸಂಪಾದನೆ ಮೊದಲಾದ ರೂಪಗಳಲ್ಲಿ ಗರಿಬಿಚ್ಚಿಕೊಂಡಿದೆ.

ಪ್ರಸ್ತುತ ಆದಯ್ಯ ವಿರಚಿತ ಸಾಹಿತ್ಯವನ್ನೂ ವಚನ, ಸ್ವರವಚನ, ಇತರ ಎಂದು ಮೂರು ಬಗೆಗಳಲ್ಲಿ ವಿಂಗಡಿಸಬಹುದು. ಇವುಗಳಲ್ಲಿ ಆತನ ವಚನಸಾಹಿತ್ಯ ಪ್ರಕಟವಾಗಿದ್ದು, ಸ್ವರವಚನಸಾಹಿತ್ಯ ಮತ್ತು ಇತರಸಾಹಿತ್ಯ ಒಮ್ಮೆಯೂ ಬೆಳಕು ಕಂಡಿಲ್ಲ. ಹೀಗಾಗಿ ಈತನ ವಚನೇತರ ಎರಡೂ ಪ್ರಕಾರಗಳನ್ನು "ಲಘು ಸಾಹಿತ್ಯ" ಹೆಸರಿನಿಂದ ಇಲ್ಲಿ ಪ್ರಕಟಿಸಲಾಗಿದೆ.

ಆದಯ್ಯನ ವಚನಗಳು ಒಂದೇ ಕಟ್ಟಿನಲ್ಲಿಯಾಗಲೀ, ಷಟ್ಸ್ಥಲಕ್ರಮದಲ್ಲಿಯಾಗಲೀ ಸಿಗುವುದಿಲ್ಲ. ಇವು ಪ್ರಧಾನವಾಗಿ (೧) ಸಕಲ ಪುರಾತನರ ವಚನಗಳು, (೨) ಆದಯ್ಯನ ವಚನಗಳು, (೩) ಇತರ ಸಂಕಲನಗಳು – ಹೀಗೆ ಮೂರು ಮೂಲಗಳಲ್ಲಿ ದೊರೆಯುತ್ತವೆ. 'ಆದಯ್ಯನ ವಚನಗಳು' ಹೆಸರಿನಿಂದ ಹಳಕಟ್ಟಿಯವರು ೧೫೧, ಉತ್ತಂಗಿಯವರು ೩೯೭ ವಚನಗಳ ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಸೌರಾಷ್ಟ್ರ ಸೋಮೇಶ್ವರ' ಈತನ ಮುದ್ರಿಕೆಯಾಗಿದ್ದರೂ ಅಲ್ಲಿಯೇ ಜೊತೆಗೆ ಮಲ್ಲಿಕಾರ್ಜುನ, ನಿಷ್ಕಳಂಕ ಮಲ್ಲಿಕಾರ್ಜುನ, ನಿಷ್ಕಳಂಕ ಶಾಂತಮಲ್ಲಿಕಾರ್ಜುನ ಎಂಬ ಅಂಕಿತಗಳೂ ಗೋಚರಿಸುತ್ತವೆ. ಸರಳವಚನ, ಶಾಸ್ತ್ರವಚನ, ಬೆಡಗಿನವಚನಗಳಾಗಿರುವ ಇವು ಆದಯ್ಯನು ವಚನಸಾಹಿತ್ತಯದ ವೈವಿಧ್ಯಗಳಿಗೆ ಸ್ಪಂದಿಸಿದುದನ್ನು ಸೂಚಿಸುತ್ತವೆ. ಇಲ್ಲಿ ಶಾಸ್ತ್ರವಚನಗಳೇ ಅಧಿಕವಾಗಿದ್ದು ಇವು ಶೈವ ವೀರಶೈವಗಳ ಪ್ರಕಾರ, ಸ್ವರೂಪ, ಶಿವ–ಜೀವ–ಜಗತ್ತುಗಳ ವಿವೇಚನೆಗಳನ್ನೊಳಗೊಂಡಿವೆ. ಹೀಗಾಗಿ ಈ ವಚನಗಳಲ್ಲಿ ಸುಮಾರು ೬೦ರಷ್ಟು ಸಂಸ್ಕೃತ ಉದ್ಧರಣೆಗಳು ಬರುತ್ತಿದ್ದು ಇವುಗಳಿಗೆ ಮುಂದಿನವರು ಟೀಕೆಯನ್ನು ಬರೆದಿರುವರು. ಇವನ ಕೆಲವು ಬೆಡಗಿನ ವಚನಗಳಿಗೂ ಟೀಕೆಗಳು ಸಿಗುತ್ತವೆ. 'ಸಕಲಪುರಾತನರ ವಚನಗಳು' ಕಟ್ಟಿನಲ್ಲಿರುವ ಈತನ ೨೦೬ ವಚನಗಳಲ್ಲಿ ೧೯೪ ರಿಂದ ೨೦೬ರ ವರೆಗಿನವುಗಳಿಗೆ "ಮನವಾತ್ಮಸಂಪಾದನೆಯ ವಚನ" ಎಂದು ಕರೆದುದೊಂದು ವಿಶೇಷ.

ಆದಯ್ಯನ ಸ್ವರವಚನಸಾಹಿತ್ಯದಲ್ಲಿ "ಶರಣನೆ ಸತಿ ಲಿಂಗವೆ ಪತಿಯಾಗಿರ್ದ...." ಎಂದು ಪ್ರಾರಂಭವಾಗುವ ಒಂದು ಹಾಡನ್ನು ಮಾತ್ರ ಶಿವಯೋಗ ಪ್ರದೀಪಿಕೆಯಿಂದ ಎತ್ತಿಕೊಂಡು ಶಿವದಾಸ ಗೀತಾಂಜಲಿಯಲ್ಲಿ ಪ್ರಕಟಿಸಲಾಗಿದೆ.* ಈಗ ಇದಕ್ಕೆ ೧೯ ಹೊಸ ಹಾಡುಗಳು ಸೇರಿ ಈತನ ಸ್ವರವಚನಕ್ಕೆ ಪ್ರಥಮಬಾರಿ ತನ್ನ ವಿಸ್ತಾರವನ್ನು ನಮ್ಮ ಗಮನಕ್ಕೆ ತರುತ್ತಿದೆ. ಇವುಗಳಿಗೆ ಸೂಚಿಸಲಾಗಿರುವ ಶ್ರೀರಾಗ, ವರಾಳಿ, ಗೌಳ, ನಾದರಾಮಾಕ್ರಿ, ಸಾಗಳ, ಶಾಂತಮಲಹರಿ, ಆಹಿರಿ, ಕಾಂಬೋಧಿ, ವರಾಳಿಗೌಳ, ಭೂಪಾಳಿ, ನಾಟಿ, ತೋಂಡಿ, ವಸಂತ ಹೆಸರಿನ ರಾಗ ವೈವಿಧ್ಯ, ವಿಷಯ ವೈವಿಧ್ಯಗಳು ಆದಯ್ಯನ ವೈದುಷ್ಯ ಮತ್ತು ಅನುಭಾವಗಳಿಗೆ ಸಾಕ್ಷಿಯಾಗಿವೆ. ಶರಣರ ಹೆಸರಿನಲ್ಲಿ ಸಿಗುವ ಸ್ವರವಚನಗಳು, ತರುವಾಯದವರು ಮೂಲವಚನಗಳನ್ನೇ ಹಾಡಿಗೆ ತಿರುಗಿಸಿ ಮತ್ತು ಹೊಸ ಹಾಡುಗಳನ್ನು ಕಟ್ಟಿ ಹೇಳಿದುವಾಗಿವೆಯೆಂದು ಕೆಲವರು ತರ್ಕಿಸುತ್ತಾರೆ. ಹೀಗೆ ಹೇಳಲು ಇವರಿಗೆ

---

* ಇದನ್ನು ೨೦ನೆಯ ಸ್ವರವಚನವಾಗಿ ಈ ಕೃತಿಯಲ್ಲಿ ಸ್ವೀಕರಿಸಿದ್ದೇವೆ(ಸಂ)

ಪ್ರಮುಖ ಆಧಾರವೆಂದರೆ ವಚನಗಳಲ್ಲಿಯ 'ಶ್ರೇಷ್ಠತೆ' ಇವುಗಳಲ್ಲಿ ಇಲ್ಲವೆಂಬುದು. ಆದರೆ ಈ ಸ್ವರವಚನಸಾಹಿತ್ಯದಲ್ಲಿ ವಚನಸಾಹಿತ್ಯದಂತೆ ಪ್ರಕ್ಷಿಪ್ತಭಾಗ ಇರಬಹುದಾದರೂ ಅವುಗಳ ಇಡೀ ಅಸ್ತಿತ್ವವನ್ನೇ ಪ್ರಶ್ನಿಸುವುದು ಪ್ರಾಮಾಣಿಕ ನಿಲುವು ಅಲ್ಲ. ಮೇಲಾಗಿ ಕೆಲವು ಹಾಡುಗಳು ತುಂಬ ಸುಂದರವಾಗಿದ್ದು ವಚನಗಳಿಗೆ ಹೆಗಲುಹಚ್ಚಿ ನಿಲ್ಲುತ್ತವೆ. ಈ ಮಾತಿಗೆ ಪ್ರಸ್ತುತ ಆದಯ್ಯನ ಕೆಲವು ಸವರವಚನಗಳು ಅಪರೂಪದ ಉದಾಹರಣೆಗಳೆಂದು ಹೇಳಬಹುದು. ಇನ್ನೊಂದು ವಿಷಯ : ವಚನ ಓದಲು, ಸ್ವರವಚನ ಹಾಡಲು ಬರೆದುವು. ಆದುದರಿಂದ ಸ್ವರವಚನಗಳ ಶ್ರೇಷ್ಠತೆಯನ್ನು ಹಾಡಿಯೇ ತಿಳಿದುಕೊಳ್ಳಬೇಕು. ದಾಸರ ಕೀರ್ತನೆಗಳನ್ನು, ಜನಪದ ಹಾಡುಗಳನ್ನು ಹಾಡುವಾಗ ಸಿಗುವ ಸುಖ ಓದಿದಾಗ ಸಿಗುವುದಿಲ್ಲವೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇನ್ನು ತಕ್ಕ ಸಂಖ್ಯೆಯಲ್ಲಿ ರಚಿತವಾದರೂ ಸ್ವರವಚನಗಳು ಅಷ್ಟಾಗಿ ಪ್ರಚಾರದಲ್ಲಿ ಉಳಿದುಬರಲಿಲ್ಲವೇಕೆ? ಎಂಬುದೊಂದು ಪ್ರಶ್ನೆ. ಹಾಗೆ ನೋಡಿದರೆ ವಚನಸಾಹಿತ್ಯಕ್ಕೂ ಪ್ರಾಚೀನ ಕಾಲದಲ್ಲಿ ಸಿಗಬೇಕದ ಪ್ರಮಾಣದಲ್ಲಿ ಪ್ರಚಾರ ಸಿಕ್ಕಿಲ್ಲ. ಬಹುಶಃ ೧೨ನೆಯ ಶತಮಾನಕ್ಕೆ ವಚನರಚನೆ ನಿಂತುಕೊಂಡರೂ ಸ್ವರವಚನಸೃಷ್ಟಿ ಮುಂದುವರಿದು ನಿಜಗುಣರಂಥವರ ಕೈವಲ್ಯ ಗೀತಕೃತಿಗಳು ಹುಟ್ಟಿದ ಕಾರಣ ಈ ಮೊದಲಿನ ಸ್ವರವಚನಗಳ ಪ್ರಭಾವ ಕಡಿಮೆಯಾಗಿರಬೇಕು. ದಾಸರು ಬಹುಸಂಖ್ಯೆ ಹಾಡುಗಳನ್ನು ಬರೆದುದಲ್ಲದೆ ಮನೆಮನೆಗೂ ಹೋಗಿ ಹಾಡಿದ ಪ್ರಚಾರತಂತ್ರದಿಂದಾಗಿ ಅವುಗಳ ಪ್ರಭಾವ ಇನ್ನೂ ಕಡಿಮೆಯಾಗಿರಬೇಕು. ಈ ಸ್ಥಿತಿಯನ್ನು ಅನುಭವಿಸುತ್ತ ಬಂದ ಸ್ವರವಚನಸಾಹಿತ್ಯದಲ್ಲಿ ಆದಯ್ಯನವು ತುಂಬ ಸೊಗಸಾಗಿವೆ. ಸಾರ್ಥಕ ಪದಪ್ರಯೋಗ, ರಚನಾವಿಧಾನ, ಭಾವರಮ್ಯತೆಗಳ ದೃಷ್ಟಿಯಿಂದ ಸ್ವರವಚನಸಾಹಿತ್ಯದಲ್ಲಿಯೇ ಅವು ವೈಶಿಷ್ಟಸ್ಥಾನ ಪಡೆಯುತ್ತವೆ.

ಆದಯ್ಯನ ಇತರ ಸಾಹಿತ್ಯದಲ್ಲಿ ಆದಯ್ಯಗಳ ಕಂದ, ಉಯ್ಯಲಪದ ಮತ್ತು ಮುಕ್ತಿಕ್ಷೇತ್ರಗಳನ್ನು ಹೆಸರಿಸಬಹುದು. 'ಆದಯ್ಯಗಳ ಕಂದ' ಹದಿನಾರು ಕಂದ ಪದ್ಯಗಳ ಗುಚ್ಛ. ಶರಣರು ಕವಿಸಾಹಿತ್ಯದ ಈ ಮಟ್ಟವನ್ನು ಎಷ್ಟು ಸುಂದರವಾಗಿ ಸಮರ್ಪಕವಾಗಿ ಬಳಸಬಲ್ಲರೆಂಬುದಕ್ಕೆ ಇದು ಉತ್ತಮ ಉದಾಹರಣೆ. ಭಕ್ತಿ, ಭಾವ ನಿರ್ಭರತೆ, ಭಾಷಾಪ್ರಯೋಗ, ಛಂದಸ್ಸಿನ ಹದ ದೃಷ್ಟಿಯಿಂದ ಇವು ಕನ್ನಡ ಸಾಹಿತ್ಯದ ಅಪೂರ್ವಕಂದಪದ್ಯಗಳೆನಿಸಿವೆ.

ಇವುಗಳಲ್ಲಿ 'ಉಯ್ಯಲ ಪದ'ವನ್ನು ಸ್ವರವಚನದಲ್ಲಿ ಪರಿಗಣಿಸಬಹುದಾದರೂ ಹಸ್ತಪ್ರತಿಯಲ್ಲಿ ಸ್ವರವಚನಗಳಿಂದ ಇದನ್ನು ಪ್ರತ್ಯೇಕಿಸಿ ಬರೆಯಲಾಗಿರುವುದರಿಂದ ನಾವು ಇದಕ್ಕೆ ಸ್ವತಂತ್ರಸ್ಥಾನ ಕೊಟ್ಟಿದ್ದೇವೆ. 'ಉಯ್ಯಲ'ವೆಂಬುದು ಶರಣರ ಪರಿಭಾಷೆಯಲ್ಲಿ 'ಶಿವಾನುಭವ'ಕ್ಕೆ ಸಂಕೇತವಾಗಿದೆ. 'ಶಿವದಾಸ ಗೀತಾಂಜಲಿ'ಯಲ್ಲಿ "ತೂಗಿದೆನು ನಿಜದುಯ್ಯಲೆ......" ಎಂಬ ಅಕ್ಕಮಹಾದೇವಿಯ ಹಾಡು ಬರುತ್ತಿದ್ದು,"* ಅದೇ ಲಯದ, ಆದರೆ ಅದಕ್ಕಿಂತ ಸುಂದರವೂ ವಿಸ್ತಾರವೂ ಆದ ಗೀತೆಯಿದು. ಉಯ್ಯಾಲೆ ತೂಗುವ ದಾಟಿಯಲ್ಲಿ ಜೀಕುವ ಇದು ಒಂದು ಅಪರೂಪದ ಸ್ವರವಚನವೆಂದೇ ಹೇಳಬೇಕು.

---

* ಶಿವದಾಸ ಗೀತಾಂಜಲಿ(ಡಾ. ಎಲ್. ಬಸವರಾಜು), ಪು. ೧೭೪

"ಮುಕ್ತಿಕ್ಷೇತ್ರ" ಇಲ್ಲಿಯ ಇನ್ನೊಂದು ಕೃತಿ. ಶರಣನ ದೇಹವೇ ದೇವಾಲಯ, ಕಾಯವೇ ಕೈಲಾಸವೆಂದು ಅನೇಕ ವಚನಗಳು ಸಾರುತ್ತವೆ. ಇಂಥ ಮುಕ್ತಾತ್ಮನ ಮತ್ತು ಅವನ ಜ್ಞಾನಸಂಪತ್ತಿನ ಸ್ವರೂಪಪ್ರತಿಪಾದನೆ ಈ ಕೃತಿಯ ವಸ್ತು. ಮೂರು ಮಾತ್ರೆಯ ಮಾತ್ರಾಗಣ ಇಲ್ಲವೆ ೨ ಅಂಶಗಳ ಬ್ರಹ್ಮಗಣಗಳ ನಡಿಗೆಯಲ್ಲಿ ತುಂಬ ಶಿಸ್ತಿನಿಂದ ಮುಂದುವರಿವ ಈ ಬಂಧ ಆದಯ್ಯನ ಛಂದೋಪರಿಣತಿಯನ್ನು ಬಿಂಬಿಸುತ್ತದೆ.

ಹೀಗೆ ಭಾಷೆಯ ಎರಡು ಮೈಗಳಾದ ಶುದ್ಧಿ-ಶೈಲಿಗಳನ್ನು, ಸಾಹಿತ್ಯದ ಎರಡು ಮೈಗಳಾದ ದರ್ಶನ-ಪ್ರದರ್ಶನಗಳನ್ನು ಈ ಕೃತಿಗಳು ಬಹುಮಟ್ಟಿಗೆ ಸಮರ್ಪಕವಾಗಿ ನಿರ್ವಹಿಸಿವೆಯೆಂದೇ ಹೇಳಬೇಕು.

ಪರಿಷ್ಕರಣ

ಕನ್ನಡ ಸಂಶೋಧನಸಂಸ್ಥೆಯ ೬೬೩ನೆಯ ನಂಬರಿನ ತಾಳೆಗರಿ ಕಟ್ಟು (ಸಂಕೇತ-'ಮೂ'), ಈ "ಆದಯ್ಯನ ಲಘುಕೃತಿಗಳು" ಗ್ರಂಥಕ್ಕೆ ಮೂಲಮಾತೃಕೆ. ಇದರ ಆಕಾರ ೭" x ೧ ೧/೨". ಪುಟ ೧ ರಿಂದ ೧೨೨. ಮುಂದಿನ ಪುಟಗಳು ಕಳೆದುಹೋಗಿ ಗ್ರಂಥ ಅಪೂರ್ಣಸ್ಥಿತಿಯಲ್ಲಿ ಉಳಿದಿದೆ. ಪ್ರತಿಯೊಂದು ಗರಿಯಲ್ಲಿ ಸುಮಾರು ೮ ಚರಣಗಳು. ರೇಫೆ, ರಳಗಳನ್ನು ಸರಿಯಾಗಿ ಬಳಸಲಾಗಿದೆ. ಬರವಣಿಗೆ ಸ್ಪಷ್ಟವಾಗಿದ್ದು ಪ್ರತಿಯೂ ಭದ್ರವಾಗಿದೆ. ಈ ಕಟ್ಟಿನಲ್ಲಿ-

೧. ಆದಯ್ಯಗಳ ವಚನ (ಪು. ೧-೪೯ಎ) ೧೭೩ ವಚನಗಳು.

೨. ಆದಯ್ಯಗಳ ಕಂದ (೪೯ಎ-೫೧) ೧೬ ಕಂದಪದ್ಯಗಳು.

೩. ವಚನ (ಆದಯ್ಯ-) (೫೧, ೫೧ ೫೨) ೮ ವಚನಗಳು.

೪. ಸ್ವರವಚನ (ಆದಯ್ಯ-) (೫೨-೬೧ಎ) ೧೯ ಸ್ವರವಚನಗಳು.

೫. ಉಯ್ಯಲ ಪದ (ಆದಯ್ಯ-) (೬೧ಎ-೬೩ಎ).

೬. ಮುಕ್ತಿಕ್ಷೇತ್ರ (ಆದಯ್ಯ-) (೬೩ಎ-೭೧) ೫೧ ಪದ್ಯ.

೭ ಕರಸ್ಥಲದ ನಾಗಿದೇವರು ನಿರೂಪಿಸಿದ ಲಿಂಗನಿಜಸ್ಥಲದ ವಚನ (೭೧ಎ-೭೮ಎ)೯೮ ತ್ರಿಪದಿ.

೮. ಕತಸ್ಥಲದ ವೀರಣ್ಣೊಡೆಯ ದೇವರ ವಚನ (೭೮ಎ-೮೫) ೭೦ ಕಂದ್ಯ ಪದ್ಯಗಳು.

೯. ಪರಮವಿರಕ್ತನು ಮುಂದೆ ನಿಜನಿರ್ವಾಣದಲ್ಲಿ ಚರಿಸಿ ಲಿಂಗದೊಳು ಐಕ್ಯವಾದಸ್ಥಲ (೮೫-೪೯)೬೧ ತ್ರಿಪದಿ.

೧೦. ವಚನಂಗಳು (ಸಂಕಲನ) (೪೯-೧೨೨ಎ)

ಹೆಸರಿನ ಕೃತಿಗಳಿವೆ. ಈ ಕಟ್ಟಿನಿಂದ ೨, ೪, ೫, ೬ನೆಯ ಕೃತಿಗಳಾದ ಆದಯ್ಯಗಳ ಕಂದ, ಸ್ವರವಚನ, ಉಯ್ಯಲಪದ, ಮುಕ್ತಿಕ್ಷೇತ್ರಗಳನ್ನು ಇದೇ ಕ್ರಮದಲ್ಲಿ ಇಲ್ಲಿ ಎತ್ತಿಕೊಳ್ಳಲಾಗಿದೆ. ಸ್ವರವಚನಗಳಿಗೆ

ಬೇರೆ ಮೂಲದಿಂದ ಲಭಿಸಿದ ಒಂದು ಸ್ವರ ವಚನವನ್ನು ಸೇರಿಸಿದ್ದೇವೆ.* ಆದಯ್ಯಗಳ ಕಂದದ ಇನ್ನೊಂದು ಪ್ರತಿ ಕನ್ನಡ ಅಧ್ಯಯನ ಪೀಠಕ್ಕೆ ಸಂಬಂಧಿಸಿದ್ದು (ನಂ.೭೯೧) 'ಅ' ಸಂಕೇತದಿಂದ ಅದನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಮಿಕ್ಕವುಗಳಿಗೆ ಬೇರೆ ಹಸ್ತಪ್ರತಿಗಳು ಇದ್ದ ಸಂಗತಿ ಈ ವರೆಗೆ ಬೆಳಕಿಗೆ ಬಂದಿಲ್ಲ. ಮೂಲಮಾತೃಕೆಯೇ(ಮೂ) ಕೆಲಮಟ್ಟಿಗೆ ಶುದ್ಧವಾಗುರುವುದರಿಂದ ಇಲ್ಲಿ ಊಹೆಗೆ ಅವಕಾಶ ಸಿಕ್ಕುದು ಅಲ್ಪವೆಂದೇ ಹೇಳಬೇಕು. ಅವಶ್ಯವೆನಿಸಿದಲ್ಲಿ ಮಾಡಿದ ಊಹೆಗಾಗಿ ಚೌಕ ಕಂಸನ್ನು ಬಳಸಿದ್ದೇನೆ. ಕೆಲವೆಡೆ ಪಾಠಸಂದೇಹವೂ ಉಳಿದುಕೊಂಡಿದೆ. ಒಟ್ಟಿನಲ್ಲಿ ಈ ಕೃತಿ ಬಹುಮಟ್ಟಿಗೆ ಶುದ್ಧರೂಪದಲ್ಲಿಯೇ ಪ್ರಕಟವಾಗಿದೆಯೆಂದು ನಂಬಿದ್ದೇನೆ.

ಕೃತಜ್ಞತೆ

ಶಿವಶರಣರ ಸಾಹಿತ್ಯದ ಹೊಸ ಮುಖಗಳನ್ನು ಬಿಚ್ಚಿ ತೋರಿಸುವ ಈ ಹೊಸ ಪ್ರಯತ್ನ, ಗಾತ್ರದಲ್ಲಿ ಚಿಕ್ಕದಾದರೂ ಪಾತ್ರದಲ್ಲಿ ಚಿಕ್ಕದೇನಲ್ಲ. "ಕೊಂಡಗುಳಿ ಕೇಶಿರಾಜನ ಕೃತಿಗಳು" ಗ್ರಂಥ ಪ್ರಕಟಣೆಯ ತರುವಾಯ ಮಾಡಿದ ಅದೇ ಮಾದರಿಯ ಪ್ರಯತ್ನವಾದ ಇದು, ಆದಯ್ಯನ ವಚನೇತರ ಸಾಹಿತ್ಯದ ಮಗ್ಗಲುಗಳ ಬಗೆಗೆ ಕುತೂಹಲ ಹುಟ್ಟಿಸುವ ಉಪಯುಕ್ತ ಗ್ರಂಥವಾಗಿದೆ.

ಪೂಜ್ಯ ಶ್ರೀ ಜಗದ್ಗುರು ತೋಂಟದಾರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ತಲೆಯೆತ್ತಿ, ಈ ಕಾಲದ ವೀರಶೈವ ಚಟುವಟಿಕೆಗಳ ಪ್ರಮುಖ ಕ್ರಿಯಾಶೀಲ ಕೇಂದ್ರವಾಗಿರುವ "ವೀರಶೈವ ಅಧ್ಯಯನ ಸಂಸ್ಥೆ"ಯ ಆಶ್ರಯದಲ್ಲಿ ಈ ಕೃತಿ ಪ್ರಕಟವಾಗುತ್ತಿರುವುದು ಒಂದು ವಿಶೇಷ. ಈ ಅವಕಾಶವನ್ನು ದಯಪಾಲಿಸಿದ ಶ್ರೀ ಸನ್ನಿಧಿಗೆ ಭಕ್ತಿಪೂರ್ವಕ ಪ್ರಣಾಮಗಳು. ಈ ಕೃತಿಗೆ ಅವಶ್ಯವಿದ್ದ ಹಸ್ತಪ್ರತಿಗಳನ್ನು ಪೂರೈಸಿದ ಕನ್ನಡ ಅಧ್ಯಯನ ಪೀಠ ಮತ್ತು ಕನ್ನಡ ಸಂಶೋಧನ ಸಂಸ್ಥೆಗಳ ನಿರ್ದೇಶಕರಿಗೆ, ಕೃತಿಯನ್ನು ಅರ್ಥೈಸುವಲ್ಲಿ ನೆರವಾದ ಪಂ. ನಾಗಭೂಷಣಶಾಸ್ತ್ರಿ ಅವರಿಗೆ, ಅಲ್ಪಾವಧಿಯಲ್ಲಿ ಅಂದವಾಗಿ ಅಚ್ಚುಮಾಡಿದ ವಿದ್ಯಾವಾಹಿನಿ ಮುದ್ರಣಾಲಯದ ಒಡೆಯರಾದ ಶ್ರೀ ಫ. ಶಿ. ಭಾಂಡಗೆ ಅವರಿಗೆ ಧನ್ಯವಾದಗಳು.

ಕನ್ನಡ ಅಧ್ಯಯನಪೀಠ — ಎಂ. ಎಂ. ಕಲಬುರ್ಗಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

❖ ❖

* ಶಿವದಾಸ ಗೀತಾಂಜಲಿ(ಡಾ. ಎಲ್. ಬಸವರಾಜು)ಪುಟ ೧೭೦. ಈ ಹಾಡು ಮೂಲತಃ ಶಿವಯೋಗ ಪ್ರದೀಪಿಕೆಗೆ ಸಂಬಂಧಿಸಿದೆ.

*

ಪರಿವಿಡಿ

ಆದಯ್ಯಗಳ ಕಂದ

ಸೋಮನ ಸಕಲದೊಳಗೆ ನಿ
ಸ್ಸೀಮನ ನಿಃಕಲದೊಳಂತು ಸುಲಭನನಂತಾ
ಸೋಮನ ಕೃಪಾಸ[೧][ಮು][೧] ದ್ರನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೧॥

ಸೋಮನ ಕರುಣಾಕರನಂ
ಸೋಮನ ಘನತೇಜದಿಂದಲೊಪ್ಪಿಹ [೨][ಶ][೨] ರ್ವನ
ಸೋಮನನೇಕೋದೇವನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೨॥

ಸೋಮನನುಜ್ವಳತೇಜನ
ಸೋಮನನೀರೇಳು ಭುವನದಧಿಪತಿಯಂತಾ
ಸೋಮನ ಜ್ಯೋತಿರ್ಲಿಂಗನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೩॥

ಸೋಮನನುರುತರ [೩]ನಾ[೩]ಮನ
ಸೋಮನನತಿಭೀಮನಂ ದಯಾಳುವ[೪][ನಂ][೪]ತಾ
ಸೋಮನ ಮನಕ್ಕತೀತನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೪॥

೧–೧ ಮಾ (ಮೂ). ೨–೨ ಸ(ಮೂ) ೩–೩ ಸೋ(ಮೂ) ೪–೪ ನುಂ(ಮೂ)

ಪ್ರಾರಂಭದಲ್ಲಿ "ಆದಯ್ಯಗಳ ಕಂದ ವಯಿದ್ಯ" ಎಂದು ಬರೆಯಲಾಗಿದೆ. ಇದರ ಅರ್ಥವೇನೋ ತಿಳಿಯದು(ಸಂ.)

ಸೋಮನ ಮನದಧಿದೇವನ
ಸೋಮನ ಮನದಾಧಿಪತ್ಯಕರ್ತೃವನಂತಾ
ಸೋಮನ ಮನಸನ್ಮೂರ್ತಿಯ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೫॥

ಸೋಮನನಹಿಭೂಷಣನಂ
ಸೋಮನ ಮಹವೆನಿಸಿ ಪೂರ್ಣಭಾವದೊಳಿರುತಿಹ
ಸೋಮನ ವಿಹರಣೆಯಿಲ್ಲದ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೬॥

ಸೋಮನ ಬೆಳಬೆಳಗುವನಂ
ಸೋಮನ ಥಳಥಳಿಪ ದಳದ ನಡುವಿರ್ಪವನಂ
ಸೋಮನ ಹೊಳೆಹೊಳೆವಜಡನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೭॥

ಸೋಮನನಾದಿಯ ಲಿಂಗನ
ಸೋಮನನಾದ್ಯಂತಮಧ್ಯರಹಿತನನೆಂದುಂ
ಸೋಮನ ನಾದಬ್ರಹ್ಮನ
ಸೋಮನನತಿವೇಗದಿಂದ ಭಾವಿಸಿ ಕಂಡೆಂ ॥೮॥

ಅಱಿವು*[ಂ]* ಮಱಹಿಲ್ಲದ ನಿಜ
ದಱಿವೇ ತಾನಂಗವಾಗಿ ಘನತರದಱಿವಿಂ
ನೆಱೆ ಮಱೆದು ನಿಶ್ಚಲತ್ವದ
ತೆಱಪುಳ್ಳವ ಶಾಂತ ಸೋಮ ನಿಮ್ಮಯ ಶರಣಂ ॥೯॥

ಅಂಗದ ಮೇಲಣ ಲಿಂಗದಿ
ಸಂಗ ಅಸಂಗಗಳ ಬಗೆಯೊಳಿಲ್ಲದ ಘನ ನಿ
ಸ್ಸಂಗಿಯಾಗಿರ್ಪ ಯೋಗಿ[೫]ಯ
ಭಂಗನು[೫] ಸೌರಾಷ್ಟ್ರಸೋಮ ನಿಮ್ಮಯ ಶರಣಂ ॥೧೦॥

- x (ಮೂ.ಅ) ೫-೫ ಆ ಭಂಗಮ(ಮೂ)

ಭೋಕ್ತವದೆಂಬುದು ತನು ತಾ
ಭೋಕ್ತವು ಕ್ರಿಯೆಯಲ್ಲದಾ [೬]ವ[೬] ತೆಱಿನುಮದಲ್ಲಂ
ಭೋಕ್ತಾಭೋಕ್ತವನುಳಿದ ಸು
ಭೋಕ್ತನು ಸೌರಾಷ್ಟ್ರಸೋಮ ನಿಮ್ಮಯ ಶರಣಂ ॥೧೧॥

ದೇವಂ ಚಿತ್ಸುಖವಿನುತಂ
ದೇವದ್ವಯ ಹಿಂಗಿ ಸರ್ವವೆಲ್ಲಂ ತಾನಾ
ದೇವರಸಭರಿತ ದೇವಂ
ದೇವಂ ಸೌರಾಷ್ಟ್ರ[೭][ದ][೭] ಸೋಮೇಶ್ವರದೇವಂ ॥೧೨॥

ದೇವಂ ಸರ್ವಜನಕೆ ಸಂ
ಜೀವಂ ದೇವಾಧಿದೇವನುರುತರಸುಖವಾ
ದೇವ ರಸಭರಿತ ಸಮ್ಯಕ್
ದೇವಂ ಸೌರಾಷ್ಟ್ರ[೮][ದ][೮] ಸೋಮೇಶ್ವರದೇವಂ ॥೧೩॥

ಬಟ್ಟ ಬಯಲೆಂಬುದದು ತಾ
ನೆಟ್ಟನೆ ಆಕಾಶತತ್ವವಲ್ಲದೆ ಲಿಂಗವೆ
ಸೃಷ್ಟಿಯೊಳ್ಮುಟ್ಟಿ[೯][ಯು ಮು][೯]ಟ್ಟದೆ
ಇಟ್ಟಣಿಸಿಹ ಶಾಂತ ಸೋಮನಲ್ಲದೆ ಪೆಱತೇಂ[೧೦] ॥೧೪॥

ಅಱುವಿಂದ ಕುಱುಹ ಧ್ಯಾನಿಸಿ
ಕುಱುಹಿಂದಂ ಅಱಿವ ಮಱೆದು ಕುಱುಹಱಿವೆರಡಂ
ಅಱಿವಱಿವನಱಿವ ಮಱೆದಾ
ಬೆಱಗಿನ ಸೌರಾಷ್ಟ್ರಸೋಮ ನಿಮ್ಮಯ ಶರಣಂ ॥೧೫॥

ಏನೊಂದಂ ನೆನೆಯದೆ ತ
ಧ್ಯಾನಂಗೊಂಡಿರದೆ ಮೌನಮುದ್ರಿತನಾಗಿ
ದರ್ಾ ಘನಲಿಂಗವ ಬೆರಸಿ
ಪರ್ಾನಂದಸುಖಾಬ್ಧಿಸೋಮ ನಿಮ್ಮಯ ಶರಣಂ ॥೧೬॥

❖❖

೭–೭ x (ಮೂ.ಅ) ೮–೮ x (ಮೂ.ಅ) ೯–೯ x (ಮೂ.ಅ). ೧೦. 'ಅ' ಪ್ರತಿಯಲ್ಲಿ ೧೧,೧೪ನೆಯ ಪದ್ಯಗಳು ಸ್ಥಾನಪಲ್ಲಟಗೊಂಡಿವೆ.

ಸ್ವರವಚನ

೧

ಶ್ರೀರಾಗ॥

ಭಕ್ತಯಜೀವನು ಭಕ್ತಿಯಜೀವನು
ಭಕ್ತಿಯಜೀವನಜೀತು ತಾನು ಮುಕ್ತನಾಗಿ ಇರ್ಪನು ॥ಪಲ್ಲವಿ॥

ಜಾತಿಭೇದವಿಲ್ಲ ತನಗೆ
ಪ್ರೀತಿಯೆಂಬುದಿಲ್ಲ ಅ
ಪ್ರೀತಿಯೆಂಬುದಿಲ್ಲದಿರ್ಪ–
ಜಾತ ಸತ್ಯಶರಣನು ॥೧॥

ಸೀಮೆಯೆಂಬುದಿಲ್ಲ ನಿ
ಸ್ಸೀಮೆಯೆಂಬುದಿಲ್ಲ ಸು
ಸೀಮೆಯೆಂಬ ಲಿಂಗದಲ್ಲಿ
ಪ್ರೇಮಿಯಾಗಿ ಇದ್ದನು ॥೨॥

ಜ್ಞಾನಜ್ಯೋತಿ ಉದಿಸಿ ಪರ್ಬಿ
ಭಾನುಕೋಟಿತೇಜದಿಂದ
ತಾನು ತಾನೆಯಾಗಿ ಇಪ್ಪ
ಮೋನ ಮುಗ್ಧ ಶರಣನು ॥೩॥

ನಾದಬಿಂದುಕಳೆಗತೀತ
ವಾದ ಮಹವ ನೆಮ್ಮಿನಿಂದು

ವೇದವಾದ ಭ್ರಮೆಯನಳಿದ–
ಸಾಧ್ಯಸಿದ್ಧ ಶರಣನು ॥೪॥

ಇಷ್ಟವೆಂಬುದಿಲ್ಲ ಅ
ನಿಷ್ಟವೆಂಬುದಿಲ್ಲ ಸೌ
ರಾಷ್ಟ್ರಸೋ[೧][ಮ][೧] ತನಗೆ ದೃ[೨][ಷ್ಟಾ][೨]
ದೃಷ್ಟವಾಗಿ ಇರ್ಪನು ॥೫॥

೨

ರಾಗ : ವರಾಳಿ ॥

ಹರಣವಿಡಿದಾ
ಕರಣವಿಡಿಯನು ಶರಣ ॥ಪಲ್ಲವಿ॥

ಭವಬಂಧಪಾಶವ
ಶಿವಸುಖವೆನಿಪಾ
ನವ ಅಸಿಧಾರೆಯೊ
ಳವನತಿ ಖಂಡಿಸಿ
ಭವವಿರಹಿತನಾದ ॥೧॥

ಪಂಚೀಕರಣದ
ಪಂಚೀಕೃತವನು
ಸಂಚಿಸಿ ಲಿಂಗದಿ
ವಂಚನೆಯಳಿದು
ನಿಶ್ಚಿಂತನಾದ ಯೋಗಿ ॥೨॥

ಯೋಗಿಯೆನಿಸಿ ಹರ
ಯೋಗದ ಸ್ವಾತ್ಮಾ
ಯೋಗದ [೩][ಲ][೩] ೦ಬಿಕಾ

೧–೧ ಮೇಶ (ಮೂ). ೨–೨ ಷ್ಟ(ಮೂ) ೩–೩ ಅಂ(ಮೂ)

ಯೋಗ ಹಿಂಗಿ ಶಿವ
ಯೋಗಿಯಾದ ಶರಣ ॥೩॥

ಶರಣಸ್ಥಲವನೆಯ್ದಿ
ಮರಣವಳಿದು ಲಿಂಗ
ವೆರಸಿ ಸುಖಿಪ ಸಂಗ
ನಿರವಯದೊಳು ನಿಂದು
ಚಿರನವಿರಳನಾದಾ ॥೪॥

ಅವಿರಳ ವಿರಳ *[ವ
ತ]* ವೆ ಹಿಂಗಿ ನಿಶ್ಚಲ
ಸುವಿವೇಕದಿಂದಿರ್ಪ
ತವಿಸಬಾರದ ಸುಖ
ಸೌರಾಷ್ಟ್ರಸೋಮೇಶನು ॥೫॥

೩

ರಾಗ : ಗೌಳ ॥

ತತ್ವವೈದಾಱಱಿಂ ಮೀಱಿದ
ಶಕ್ತಿಸಮೇತ ಪರವಸ್ತು ಸ್ವಲೀಲೆಯಿಂದಿರುತಿರ್ಪ ತಾನೆ ॥ಪಲ್ಲವಿ॥

ಅಱಿಯದ ಮಱೆಯದ ಮಱೆವಱಿವಿಗೆ ತೆಱಹಿಲ್ಲದ
ಬಱಿಯಱಿವಿನ ಬೆಱಗಿನ ನಿಱುಗೆಯ ಸಂದಱಿಯದ
೪[ಕು]೪ಱುಹಿನಿತಿಲ್ಲದ ಅನುಪಮಲಿಂಗವ ಅಂಗವಾಗಿ
ತೆಱಹಿಲ್ಲದೆ ಮನ ಕಱಿಗೊಂಡಿಹ ಪರಿಯಱಿವನ್ನಾರೋ ॥೧॥

ಲಿಂಗದ ಸಂಗದ ಅಂಗವಿದೆನ್ನದೆ ಸಂಗನಿಸ್ಸಂಗ ಲಿಂಗದಿ
ಸಂಗಿಸಿ ಹಿಂಗದೆ ಸಂಗಮದಱಿಯದೆ ಲಿಂಗದಲ್ಲಂಗವಱಿತು
ಮಂಗಳಮಯವಹ ಲಿಂಗವೆ ಪ್ರಾಣ ಪ್ರಾಣವೆ ಲಿಂಗವಾಗಿ ಸಂದಿಲ್ಲದಿರ್ಪ
ಲಿಂಗದ ಪ್ರಾಣದ ಸಂಗಮದೆನ್ನದ ಪರಿಯದೆಂತೋ ॥೨॥

– ದ ಕ(ಮೂ), ೪–೪ ಕ(ಮೂ), *–* x(ಮೂ).

ಕರಣೇಂದ್ರ್ಯಂಗಳು ಭರದಿಂ ಲಿಂಗದಿ ಬೆರಸಿ ಸಂದಿಲ್ಲದಿರ್ಪ
ಪರಿ ಪರವಿಹವೆನ್ನದ ಪರಿಪೂರ್ಣವೆ ಮಹವೆ *[೯]* ಮಹ
ದುರವಣೆಯೆ ಸರ್ವಾದಿಲೋಕವನವಗವಿಸಿಕೊಂಡಿರ್ಪ
ಘನವು ಸೌರಾಷ್ಟ್ರ ಸೋಮೇಶ್ವರನೆಂಬುದನಜೆವನ್ನಾರೋ ॥೩॥

೪

ರಾಗ : ನಾದರಾಮಾಕ್ರಿ ॥

ಗುರುವೆ ಪರವೆ ಪರಾಪರವೆ ಗುರುವೆ ಪರಮಾತ್ಮ
ಗುರುವೆ ಗುರುವೆ ಪರಬ್ರಹ್ಮವಾ ಗುರುಕರುಣದಿ ॥ಪಲ್ಲವಿ॥

ಕಾಮ ಕ್ರೋಧ ಲೋಭವೆಂಬ ಸೀಮೆಯನ್ನು ಸೋಂಕದೆ
ತಾಮಸಾಮಿಷಾದಿ ಗುಣವ ಹೊದ್ದದಿಪ್ಪನು
ಆ ಮಹಾಗುರುವಿನಂಘ್ರಿವಿಡಿದು ಭವಜನ್ಮದಾ
ಸ್ತೋಮವನ್ನು ಪಜೆದೆ ಘನಗುರುವೇಧೆಯಿಂ ॥೧॥

೫[ತತ್ ತ್ವಂ ಅಸಿ]೫ ಪದದಿಂದುತ್ತರೋತ್ತರಾರ್ಥದಾ
ಕರ್ತೃವಪ್ಪ ಸ್ವಯಂಜ್ಯೋತಿ ಬೆಳಗುದೋಱಲು
ಸತ್ತು ಚಿತ್ತು ಆನಂದಾತೀತವಮಳಗುರುಲಿಂಗ
ಸತ್ಯ ಜಂಗಮವಾ ಗುರುವೇಧೆಯಿಂ ॥೨॥

ಇಷ್ಟಕಾಮ್ಯಮೋಕ್ಷವೆಂಬ ಬಟ್ಟೆಯನ್ನು ಮೆಟ್ಟದೆ
ಇಷ್ಟಲಿಂಗ ಮನಕೆ ವೇದ್ಯವಾಗಿ ತಾನೆಯೆ
ನೈಷ್ಠೆಯಿಂ ಪ್ರಾಣಲಿಂಗ ಲಿಂಗಪ್ರಾಣವಾಗಿ ಸೌ
ರಾಷ್ಟ್ರ ಸೋಮೇಶನೆಂಬ ಗುರುವೇಧೆಯಿಂ ॥೩॥

೫

ರಾಗ : ಸಾಳಗ ॥

ತಾನೇ ತಾನಾಗಿ ತಾನಿದಿರೆನ್ನದ
ತಾನೇ ಪ್ರತಿಯಲ್ಲದಪ್ರತಿಮ ॥ಪಲ್ಲವಿ॥

- ದ ಕ(ಮೂ). ೫-೫ ತತ್ವ ತ್ವಂ ಮು(ಮೂ)

ತಾನೇ ತನ್ನಿಂ ತೋಱುವ ತೋಱಿಕೆ
ತಾನೇ ತನ್ನಿಂದಾದುದನು
ತಾನೇ ತನ್ನಿಂ ತನ್ನನೆ ತಿಳಿಯಲು
ತಾನೇ ತನ್ನಿಂದನ್ಯವೊಂದುಂಟೆ ॥೧॥

ತಾನೇ ಅಷ್ಟತನುವಿನೊಳು ಸಿಲುಕಿರ್ದು
ತಾನೇ ಮೀಱಿ ತೋರ್ಪಾತ ತಾನೆ
ತಾನೇ ತನ್ನ ಘನತೆಯಿಂದಿರ್ಪನ ತಾ
ನಾನಱಿತೆನೆಂಬುದು ದಿಟವಹುದೆ ॥೨॥

ತಾನೆ ಸನ್ಮಣಿಮುಕುರದಂತಿರುತಿರ್ಪ
ತಾನೆ ಪ್ರತಿಯಿಟ್ಟು ತೋರ್ಪ ತಾನೆ
ತಾನೆ ತಾನೆಂದಱಿದ ನಿಜಾತ್ಮನು
ತಾನೆ ಸೌರಾಷ್ಟ್ರಸೋಮೇಶ ತಾನೆ ॥೩॥

೬

ನಾದರಾಮಾಕ್ರಿ ॥

ನಾಹಮೆಂದು ಎನ್ನದಖಿಲ
ಸೋಹಮೆನ್ನದಿರ್ಪನು
[ಕೋ] ಹಮೆಂದು ಎನ್ನ ದಾ–
ಸೋಹಮೆನ್ನದಾ ॥ಪಲ್ಲವಿ॥

ತುರೀಯತರಯತೀತವೆನ್ನದಾ ಆಆಆಆಆಆ
ನಿರುತನಿಜದ ಪರಮಕಳೆಯೊಳಱಿರತ ಅಂಗದಾ ಆಆಆ
ಸರಸಿಜಾರ್ದ್ರಸಾರ್ಣವಾರ್ಕಕಿರಣದಿಂದೆ ವಿಕಚಿಪಂತೆ
ಹೃದಯಕಮಲಸ್ವಯಚಿದಪ್ರಕಾಶದಿನಕರಾ ಆಆಆ ॥೧॥

ಕನಸುಜಾಗ್ರ ೬[ಸುಷುಪ್ತಿ]೬ ತ್ರಿವಿಧದಾ ಆಆಆಆಆಆ
ನೆನಹು ಹಿಂಗಿ ಘನಕೆ ಘನವು ವೇದ್ಯವಾದುದೂ ಊಊಊ
ಉನುಮನಿಯಸ್ಥಾನದಲ್ಲಿ ಮನವು ಪ್ರಾಣನೇಕವಾಗಿ
ಕನಸುಜಾಗ್ರ ೬[ಸುಷುಪ್ತಿ]೬ ಯೇಕವಾದುದೂ ಊಊಊ ॥೨॥

– ರೋ (ಮೂ). ೬–೬ ಸುಪುತಿ(ಮೂ)

ಸವಿದ ಸವಿಯದೆನ್ನ೭[ದ]೭ಲ್ಲ ತನ್ನಯಾ ಆಆಆಆಆಆ
ಸುಖವದಾಗಿ ಭುವನ ಭುವನ ಭುವನ ಭುವನದೀ ಈಈಈ
ಸೌರಾಷ್ಟ್ರ ಸೋಮೇಶ್ವರಲಿಂಗ ಒಳಗು ಹೊಱಗೆ ನವ
ಸುಖಪ್ರದಯುಕ್ತವಾದ ಕಲೆಯಿದೂ ೭[ಊಊಊ]೭ ॥೩॥

೭

[ರಾಗ : ?]೮

ಸಮ್ಯಕ್‌ಜ್ಞಾನಕರ್ಮವಱಿಯದತುಳಕರ್ಮಭಕ್ತಿಯಾಂತಲಿ
ದುರ್ಮದಾಂಧತ್ವದಾ ಕರ್ಮಕಪಟದಿ ಈಈಈ ॥ಪಲ್ಲವಿ॥

ಶೀಲವ್ರತ ಜಿತೇಂದ್ರಿಯತ್ವದಾ ಆಆಆಆಆಆ
ಧ್ಯಾನಮೌನಕಾಲನೇಮಜಪತಪಂಗಳಿಂ ಇಂಇಂಇಂ
ಸಾಲುವಿಡಿದ ಕ್ರಿಯೆಗಳಿಂದನಾಮ ೯[ಯನ]೯ ಕಾಣ್ಬೆನೆಂದು
ಕಾಲನಾಜ್ಞೆಯಲ್ಲಿ ಸಿಲುಕಿ ಭವದೊಳಾಳ್ದರೂ ಊಊಊ ॥೧॥

ಅರ್ಪಿಸುವ ಪದಾರ್ಥವೆಲ್ಲವಾ ಆಆಆಆಆಆ
ನಿತ್ಯತೃ*[ಪ್ತ]* ಗರ್ಪಿಸುವೆನೆಂಬ ನೇಮದೀ ಈಈಈ
ಅರ್ಪಿಸಿದ ಅರ್ಪಿತಗಳನರ್ಪಿತಂಗಳಾದುದಱಿಯ
ದಿರ್ಪ ಭಕ್ತಿಗೆಂತು ಮುಕ್ತಿಯಪ್ಪುದೆಂತುಟೋ ಓಓಓ ॥೨॥

ಇಂತು ಭವಕೆ ಮಾರುವೋದರಾ ಆಆಆಆಆಆ
ಕಂತುಹರನದೆಂತು ತನ್ನ ಭಕ್ತರೆಂಬನೂ ಊಊಊ
ಭ್ರಾಂತು ನಿಲುಕದಿರ್ಪ ಸೌರಾಷ್ಟ್ರ ಸೋಮೇಶಲಿಂಗ
ನಂತುವನ್ನು ತಿಳಿಯಲಱಿಯದಿಂತು ಭಜಿಪರೂ ಊಊಊ ॥೩॥

೭–೭ x (ಮೂ) ೮ ಈ ಸ್ವರವಚನಕ್ಕೆ ರಾಗದ ಹೆಸರು ಬರೆದಿಲ್ಲ (ಸಂ) ೯–೯ ಯೆನ್ನ (ಮೂ) *–* ಪ್ರಿ(ಮೂ)

೮

ರಾಗ : ನಾದರಾಮಾಕ್ರಿ ॥

ಭಕ್ತ್ಯಂಗನೆ ನಿನ್ನಸಮಸುಖದೊಳಿರ್ದ ಸುವಿ
ರಕ್ತಂಗೆ ಚಿಚ್ಛಕ್ತಿ ಸೋತುದೇನೆಂಬೆ ॥ಪಲ್ಲವಿ॥

ಕ್ರಿಯಾಂಗನೆಯ ಕಂಡು ನಿಲಿಸಿ ಕರ್ಮಾಂಗನೆಯ
ಬಾಯ ಟೊ*[ಣೆದು ದಿವ್ಯಾ]*ಂಗನೆಯ ಬಿಚ್ಚಿ ಬಿಸುಟು
ಮಾಯಾಂಗನೆಯ ಜಱಿದು ಭಾವಾಂಗನೆಯ ಮೀಱಿ
ಕಾಯಾಂಗನೆಯ ಮಱೆದು ಜ್ಞಾನಾಂಗನೆಯೊಳು ॥೧॥

ಮಂತ್ರಶಕ್ತಿಯನಱಿತು ಆದಿಶಕ್ತಿಯ ಕಳಿದು
ತಂತುಶಕ್ತಿಯ ಪಿಡಿದು ಪರಾಶಕ್ತಿಯೆಯ್ದಿ
ಸಂತತಂ ವೀರಶಕ್ತಿಯೊಳು ಜಯಶಕ್ತಿಯಿಂ
ಮುಂತುಗೊಂಡಾ ಮುಕ್ತಿಶಕ್ತಿಯೊಳ್ಕೂಡಿ ॥೨॥

ಅಂತಖಿಲಶಕ್ತಿಸಂಗದೊಳಿರ್ಪ ಮುಕ್ತಂಗ
ನಂತಸುಖವಿಂಬುಗೊಂಡಂತದಕೆ ಸಿಲುಕಾ
ಇಂತು ಮುಕ್ತಿಗತೀತ ಸೌರಾಷ್ಟ್ರ ಸೋಮೇಶ
ನೆಂತೆಂತು ನೋಳ್ಪವರಿಗಂತಂತು ತೋರ್ಪಾ ॥೩॥

೯

ರಾಗ : ಶಾಂತಮಲಹರಿ ॥

ಲಿಂಗ ಲಿಂಗವಂಗವಾಗಿ ಮಂಗಳಾಂಗದಿಂಗಿತದಿ
ಭಂಗಭಂಗ ಹಿಂಗಿ ಚಿಲ್ಲಿಂಗ ಸಂಗಿಯಾಗಿ ಮಹ
ಲಿಂಗವಗಲದಗಲದಗಣಿತ ಸಗುಣ ನಿರ್ಗು
ಣಂಗಳೆಯ್ದದ ನಿಗಮಾಗಮಾತೀತನು ಶರಣ ॥ಪಲ್ಲವಿ॥

ಮುಖಮುಖಮುಖ ಮುಖವಜಿತರ್ಪಿತಾನರ್ಪಿತವವಜಿತು
ಮುಕುಮುಕು ಮುಕುತಿಯೆಯ್ದಿ ಯುಕುಯುಕು
ಯುಕುತಿ ಯುಕುತಿಯಳಿದಾ ॥೧॥

– ಣ ದಿವ್ವಾ (ಮೂ)

ಥಳಥಳ ದಳದಳದೊಳು ಸುಳಿಸುಳಿದಾಡುವ ಹಂಸನ
ನಳನಳ ನಾಳನಳಿನ ಮಧ್ಯದಲ್ಲಿ ನಿಲಿಸಿ
ಕಳವಳವಳಿದು ಒಳಒಳಒಳ ಹೊಱಗಳಿದುಳಿದವಿರಳದ
ಬೆಳಬೆಳಬೆಳ ಬೆಳಗಂ ತಾನೆ ತನ್ನಿಂ
ತಿಳಿತಿಳಿತಿಳಿ ತಿಳಿವ ಉಳಿವಳಿದುಳಿದ ಜಡವ
ಕಳಕಳಕಳ ಕಳಿದುಳಿದುಳುಮೆಯಳಿದುಳಿದ
ಸುಳುಸುಳುಸುಳುಸುಳುಹಱಿತಱಿವನದೇನೆಂಬೆ
ಆಳವಳವಲ್ಲದ ಪರಾಪರ ಬೊಮ್ಮವ ॥೨॥

ಭಟಭಟಭಟಭಟ ಸುಭಟರುಗಳನಯ್ವರ
ನಿಟಿನಿಟಿನಿಟಿ ನಿಟಿಲಾಕ್ಷಿಯಿಂದೆ ಕಂಡು
ಸಟೆದಿಟವಳಿದು ದಿಟದಿಟದಿಟ ಘಟದಿ ಸರ್ವಾಂಗಲಿಂಗ ತಾನೆಯಾಗಿ
ದಟದಟದಟ ದಟ್ಟಯಿಸಿ ನಿಂದಾ
ಬಟಬಟ ಬಟ್ಟಬಯಲ ಸುರಾಳ ನಿರಾಳದಿಂದತ್ತ
ತುಟತುಟ ತುಟ್ಟತುದಿಯ ಮೆಟ್ಟಿನಿಂದು
ಹುಟ್ಟುಗೆಟ್ಟು ಇಟ್ಟಣಿಸಿಟ್ಟಣಿಸಿರ್ಪ ಸೌರಾಷ್ಟ್ರ ಸೋಮೇಶ ತಾನೆ
ಮುಟ್ಟಿಮುಟ್ಟಿ ಮುಟ್ಟದನನ್ಯ ॥೩॥

೧೦
ರಾಗ : ಶಾಂತಮಲಹರಿ ॥

ಸೋಮೇಶಲಿಂಗ ತನ್ನ ತಾನಿದಿರಿಟ್ಟು ನೋಡುವ ತನ್ನ ತಾ ನೋಡಿಸಿಕೊಂಬ
ನೋಟಕ*[ಗ]*ನ್ಯ ತಾ ತನಗನ್ಯನಲ್ಲದೆ ನನ್ನಿಯಿಂದಿರ್ಪನು ॥ಪಲ್ಲವಿ॥

ಕಾಯಜೀವದ ಹೊಲಿಗೆಯನಱಿದಾ
ಮಾಯಪಾಶವ ಬಿಚ್ಚಿ ಬಿಸುಟು ನಿ
ರ್ಮಾಯ ನಿರ್ಮಳ ನಿತ್ಯನಿರಂಜನದಿಯನುವಿನೊಳಿರ್ದು
ಪಾಯುಪಾಣಿಪಾದೇಂದ್ರಿಯವಾಗುಹ್ಯ
ದಾಯತವನಱಿತವಱಿಲ್ಲಿಯ
ಸಾಯಸವನಳಿದುಳಿದ ಶಿವೈಕ್ಯದ ನಿಯಮಂಗಳಿಂದಾ ॥೧॥

– ನ (ಮೂ)

ನೇತ್ರಸುಖವನಿಂಬುಗೊಂಡ ಶಿವಲಿಂಗ
ಗಾತ್ರಸುಖವನಿಂಬುಗೊಂಡ ಜಂಗಮಲಿಂಗ
ಶ್ರೋತ್ರಸುಖವನಿಂಬುಗೊಂಡ ಪ್ರಸಾದಲಿಂಗವೀತ್ರಯಾಂಗದಿಂದಾ
ಜ್ಞಾತೃವಿಡಿದಾತಂ ಮನನೊಚ್ಚತಗೊಂಡ
ದಾತೃ[೧][ವ][೧]ಪ್ಪ ಮಹಾಲಿಂಗ ನಾಸಿಕ
ಮಾತ್ರವಿಂಬುಗೊಂಡಾಚಾರಲಿಂಗ ಸುಸೂತ್ರ ಜಿಹ್ವೆಯೊಳು ॥೨॥

ದೃಷ್ಟವಾಗಿಪ್ಪ ಗುರುಲಿಂಗ ಷಡುಸ್ಥಲ
ವಿಷ್ಟಪ್ಟು ತೆಱಹಿಲ್ಲದಿರ್ಪ ಲಿಂಗಾಂಗದಿ
ದುಷ್ಟಲೋಹವ ಪರುಷವು ವೇಧಿಸಿದಷ್ಟು ಕನಕವಾದಂತೆ
ದ್ರಷ್ಟದರುಶನದೃಶ್ಯಂಗಳೆಯ್ದಿದ
ನಿಷ್ಠೆ ನಿಃಪತಿಯೆಯ್ದಿ ಸೊಪ್ಪಡಗಿ ಸೌ
ರಾಷ್ಟ್ರ ಸೋಮೇಶಲಿಂಗವ ಧರಿಸಿ ಅನಿಷ್ಟರಹಿತನಾದ ॥೩॥

೧೧

ರಾಗ : ಆಹಿರ ॥

ಸಮತೆ ಕಂಡಾ ಅಯ್ಯ ಸಾಮ್ಯವಜಿತವಗೆ
ಸಮತೆ ಸಮತೆ ಕಂಡಾ [೧೦][ಸಾ][೧೦] ಮ್ಯವಜಿತವಗೆ ॥ಪಲ್ಲವಿ॥

ಬಜೆಯ ಗಜಬಜೆ ಹಿಂಗಿ ಮಱವೆಯಳಿದುಳಿದ ನಿಜ
ನಿಱುಗೆಗಂಡಾ ಯಮನು ಬಜೆಯಜೆವುತಾನೆ ॥೧॥

ಶಿಶುಕಂಡ ಕನಸಿನಂತುಸುರಬಾರದ ಘನವ
ನುಸುರಲನುವೆಯ್ದದಾ ಹೊಸಹೊಸತ ಕಂಡವಗೆ ॥೨॥

ನೆನೆವ ಮನದ ಕೊನೆಯ ಮನೆಯ ಮೆ[೧೧][ೞಲ][೧೧]ಣ ಬೆಳಗ
ನೆನೆನೆನೆದು ಸ್ವಯವಾದ ಘನವನಜಿತವಗೆ ॥೩॥

೧-೧ ತ(ಮೂ), ೧೦-೧೦ ಸ(ಮೂ), ೧೧-೧೧ ರ (ಮೂ).

ಶಬ್ದವೆಂದೆನ್ನ ನಿಃಶಬ್ದವೆಂದೆನ್ನದಾ
ಶಬ್ದಮುಗ್ಧವನಜಿತ ಮುಗ್ಧ ತಾನಾದವಗೆ ॥೪॥

ನಾಮ ನಿರ್ನಾಮವಾದಾ ಮಹಾತುಮರಮಲ
ನಾಮವೆನೆ ಸೌರಾಷ್ಟ್ರ ಸೋಮೇಶವಿಡಿದವಗೆ ॥೫॥

೧೨

ರಾಗ : ಕಾಂಬೋಧಿ ॥

ಸಾಧಕ *[ನು]* ಲಿಂಗವೇಧಿಸಿ೧[ದಾ]೧ತನು ನಾದರಹಿತನುವಾದ
ಭೇದಾಭೇದವ ಭೇದಿಸಿದ ಸರ್ವದಾದಿಯಾದಿಗನಾದಿ ॥ಪಲ್ಲವಿ॥

ಸಾಧಕನ ಏನ ಹೇಳುವೆ ಸ್ವಾನುಭವವನ್ನು ಜ್ಞಾನದೊಳಂತರ್ಗತ ಸ್ವಾನು
ವದರೊಳು ಭಾನುಕೋಟಿಪ್ರಭೆ*[ಯ]*ನಗಮ್ಯದಿ ತಾ೧೨[ನು]೧೨ತಾ ॥೧॥

*[ತಾ]*ನು ತಾನೆಂದು ತಾನದೇನೆಂದು ತಾನೆ ತನ್ನೊಳು ನೋಡಲು
ಆ೧೩[ನು ನೀ]೧೩ನೆಂಬುದೇನುವಿ*[ರ]*ದ ಸ್ವಾನುಭವವದು ತಾನು ತಾ ॥೨॥

ನಾಮರಹಿತನುದ್ದಾಮ ಸುಖಸ್ವರೂಪಾ ಮನೋಹರವಾದವ
ಸೀಮೆ ಸೌರಾಷ್ಟ್ರಸೋಮೇಶ್ವರಲಿಂಗವಾ ಮಹಾಘನವೆ೧೪[ಮ್ಮ]೧೪ ಯ ॥೩॥

೧೩

ರಾಗ : ವರಾಳಿಗೌಳ ॥

ಖಂಡಿಸಿ ನುಡಿವರೊ ಎಲ್ಲೆಲೊ ಅಖಂಡಿತ ಖಂಡಿತಾ–
ಖಂಡಿತವೆನ್ನದಿನ್ನಾದಿ*[ಯ]* ಘನಲಿಂಗವ ॥ಪಲ್ಲವಿ॥

ಉರಿಯೊಳಡಗಿರ್ದ ಕರ್ಪುರದಂತೆ ಅವಿರಳ
ದಿರವು ಸಂಘಟಿಸಿದಾ ತೆಱದೊಳಂಗ

– ನ(ಮೂ), ೧–೧ ದ(ಮೂ), *–* x(ಮೂ), ೧೨–೧೨ ನಂ(ಮೂ), *–*(ತ.ಮೂ), ೧೩–೧೩ ನನ್ನಿ(ಮೂ), *–* x(ಮೂ), ೧೪–೧೪ ಮ(ಮೂ).

ಕರಣಭಾವಗಳಿಂತು ಬೆರಸಿರ್ಪ ಶಿವಲಿಂಗ
ಶರಣರೊಡನೆ ಸಂಗವಿಂತು ಭಿನ್ನವಿಲ್ಲ ॥೧॥

ಶಿಲೆಯೊಳಗಡಗಿದ ಪಾವಕನಂತೆ ಪರಿಮಳ
ನೆಲಸಿಹ ಕುಸುಮದ ಪರಿಮಳ ಶರಣನೊಳು
ಲಿಂಗಿವಹ ಭೇದ ನಿರ್ಭಿನ್ನದಿಂದಿರ್ಪ
ನಿಲವನೇನೆಂಬೆ ಉಪಮೆಗೆ ಬಾರದವನ ॥೨॥

ಕಾಷ್ಟದೊಳಗಣ ಅನಲನಂತೆ ದೃಕ್ಕಿಗೆ
ದೃಷ್ಟವಾಗಿರದ ಅಗೋಪ್ಯದಿಂ ಸೌ
ರಾಷ್ಟ್ರ ಸೋಮೇಶ ಶರಣರೊಳು ನೆಲಸಿಹ ಲಿಂಗ
ನಿಷ್ಠೆ ನಿಃಪತಿಯನೆಯ್ದಿದ ನಿಜವಿಂತು ॥೩॥

೧೪

ರಾಗ : ಭೂಪಾಳಿ ॥

ಉದಿಸಿದವನೂ ಅಲ್ಲ ಅಳಿವನೂ ಮುನ್ನಲ್ಲ
ಆದಿಯಿಂದತ್ತತ್ತಲಾದ ಮಹಿಮ ॥ಪಲ್ಲವಿ॥

ಅಡಿಯಿಲ್ಲ ಮುಡಿಯಿಲ್ಲ ನಡುವಿಲ್ಲದಾ ಮಹಿಮ ಘನವ
ಕಡೆಗಣಿಸಿ ಕಾಣ್ಬೆನೆಂಬಾ ಭ್ರಾಂತಿನಿಂ
ನುಡಿನುಡಿದು ಜಡವಜಡದೊಳಗೆ ಸಿಲುಕಿರುತಿರ್ಪ
ಜಡರು ನಿಜವಱಿವಱಿವನದೆಂತಱಿವರು ॥೧॥

ಹೊಱಗು ಒಳಗೆಂಬುಭಯ ಭಾವದಲ್ಲಱಸುವ
ಅಱಿವಿಂಗಗೋಚರಾತೀತ ಶಿವನು
[ಕು] ಱುಹಳಿದು ನಿಱುಗೆ ನಿರ್ಧರವಾದ ಅನುಪಮರ
ಅಱಿವು ಮಹದಱಿವಿಂಗೆ ತೋಱುತಿರ್ಪ ॥೨॥

ನಾದ ನೀನಲ್ಲ ನಾದಬ್ರಹ್ಮ ನೀನಲ್ಲ
ವೇದಿಸುವ ವೇದ್ಯಕ್ಕಭೇದ್ಯ ನೀನು

– ಕ(ಮೂ)

ಸಾಧಕತ್ವದಿ ಸಿದ್ಧನೆನಿಸಿಹಂ ಮಮತೆಯಿಂ
ದೊದವಿರುತ ನಿಮ್ಮ ನಿಜವೆಂತಜೀವರು ॥೩॥

ಥಳಥಳಿಪ ನಿಟಿಲತಟದಲ್ಲಿ ಸನ್ನಿಹಿತದಿಂ
ಸುಳಿಸುಳಿವ ಸುಳಿವ ಮನವನು ಸೋಂಕದೆ
ತೊಳತೊಳಗಿ ತೊಳಗಿ ಬ್ರಹ್ಮಾಂಡದೂರ್ಧ್ವದ ತಟದಿ
ಬೆಳಬೆಳಗಿ ಬೆಳಗಿ ತನ್ನೊಳಗೆ ತಾನೆ ॥೪॥

ನಿಟ್ಟಿಸಲ್ಕಾವ ತೇಜಿನಂತಲ್ಲದಿಹ ಘನವ
ಮುಟ್ಟಿ ಪೂಜಿಪರು ನಿಮ್ಮಯ ಶರಣರಾ
ಭೀಷ್ಟ ನೀವೇ ನಿಮ್ಮ ನಿಜವು ತಾವೆನಿಸಿ ಸೌ
ರಾಷ್ಟ್ರ ಸೋಮೇಶ್ವರನೊಳು ಬೆರಸಿರ್ಪರು ॥೫॥

೧೫

ರಾಗ : ನಾಟಿ ॥

ಪರಿಮಳವನುಂಡ ಮಧುಕರನಂತೆ ಜಿನುಗಳಿದು
ಹೊಱೆಯೇರಿ ಮೈಮಱೆದುದೇ ಪರಮಯೋಗ ॥ಪಲ್ಲವಿ॥

ಅಂಬರದ ಸಂಭ್ರಮದಲಾಡುವ ಭ್ರಮರನ ಬಿಂಬ
ಕಂಬಳಿಯೊಳಗೆ ಸೂಚಿಸಲು ಬಿಂದು
ಆ ಬಿಂದು ಆ ನಾದ ಕಳೆಗಳೊಡಗೂಡಿದ
ಬಚ್ಚಬಜೆಯ ಸುಖವೆ ಪರಮಯೋಗ ॥೧॥

ಆನೆಂಬುದೇ ಅಹಂಕಾರವಾದದನುಳಿಯೆ
ನೀನೆಂಬುದೇ ಭಿನ್ನಭಾವವದು ದೂರ
ಆನು ನೀನೆಂಬುಭಯವಳಿದು ಸಮ್ಯಕ್ ಸದಾ
ತಾನು ತಾನಾಗಿರ್ಪುದೇ ಪರಮಯೋಗ ॥೨॥

ಚಲವಚಲವಳಿದು ನಿಶ್ಚಲಮೌನಸುಖಿಯಾಗಿ
ಕಾಲಕಾಮಾದಿಭಯರಹಿತನಾಗಿ

ಲೀಲೆಯಿಂದವಿರಳಾತ್ಮಕನಾಗಿ ಮಹಘನವು
ಒಲಿದೊಲವುವ ಸೌರಾಷ್ಟ್ರ ಸೋಮೇಶ ಬಲ್ಲ ॥೩॥

೧೬

ರಾಗ : ನಾದರಾಮಾಕ್ರಿ ॥

ಪ್ರಾಣಪ್ರಕೃತಿಯ ಭ್ರಮೆಗಳನಳಿದಂದು
ಜೀವದ ಸುಕೃತ ದುಃಕೃತವೆಂಬುದಿಲ್ಲ ಬಳಿಕ ॥ಪಲ್ಲವಿ॥

ವಾಗುಮನಕೆ ನಿಲುಕದ ಲಿಂಗವಜಡ
ವಾಗುಮಾತ್ರದ ಅಜೆವದು ಜಡ
ಆಗಮನಿಗಮಂಗಳಿಂದಜೆವುದು ಜಡ
ಯೋಗದಾಗಿನೊಳಿಪ್ಪುದದು ಜಡ ॥೧॥

ನಡೆದು ನಡೆದು ಕಡೆಗಾಣ್ಬೆನೆಂಬುದು ಜಡ
ನುಡಿದು ನುಡಿದು ಪೇಳ್ವುದು ಜಡ
ಒಡಲ ಇಂದ್ರಿಯದಿಚ್ಛೆಗೆ ಕುಡಿವುದು ಜಡ
ಬಿಡದೆ ಬಿಟ್ಟುದ ಹಿಡಿವುದು ಜಡ ॥೨॥

ಈ ಮನ ಈ ಧನ ಈ ಆಸೆ ತನು ಜಡ
ಈ ಮಾಯ ಮೋಹ ಪಾಶವು ಜಡ
ಕಾಮನಿಃಕಾಮವೆಂಬುದು ಜಡ ಸೌರಾಷ್ಟ್ರ
ಸೋಮೇಶಲಿಂಗವೆಂಬು*[ದ]*ಜಡ ॥೩॥

೧೭

ರಾಗ : ತೋಂಡಿ ॥

ಲಿಂಗವ ನೆನೆವುತಿಹ ಮನ
ಲಿಂಗವು ತಾನಾಗಿಯೆ ನೆನಹಳಿಯಿತು ॥ಪಲ್ಲವಿ॥

– ದು(ಮೂ)

ಲಿಂಗವಂಗವೆಂದೆನೆ ಭಿನ್ನವಾಯಿತ್ತು
ಅಂಗಲಿಂಗವೆಂಬುದೇ ಜಡ
ಅಂಗವ ಜಱಿದು ಲಿಂಗವು ತಾನಾಗಿಪ್ಪ
ಲಿಂಗವೆ ಅಂಗ ಅಂಗವು ಲಿಂಗವಾದುದು ॥೧॥

ಲಿಂಗವು ತಾನೆಂದು ನೆನೆಯದಿಹುದು ಅಲ್ಲ
ಲಿಂಗ ಬೇಱೆಂದು ನೆನೆವುದಲ್ಲ
ಲಿಂಗ ತಾನೆಂಬೆರಡರೊಳಿಲ್ಲದಾ ಮನ
ಲಿಂಗವೆ ಮನ ಮನವೆ ಲಿಂಗವಾದುದು ॥೨॥

ಪ್ರಾಣಲಿಂಗದ ನಾದವ ಕೇಳ್ದು ಲಿಂಗವೆ
ಪ್ರಾಣವಾಗಿ ಸುಳುಹಱೆಯದು
ಪ್ರಾಣ ಲಿಂಗ ಉಭಯವಳಿದು ಲಿಂಗವೆ
ಪ್ರಾಣವು ಪ್ರಾಣ ತಾನೆ ಲಿಂಗವಾದುದು ॥೩॥

ಭಾವ ಲಿಂಗವಾಗಿಯೆ ಭವಹಿಂಗಿತು
ಸಾವಧಾನ ಲಿಂಗವಾಯಿತ್ತು
ಅವಧಾನದ ಮೊಳೆ ಮುಱೆಯಿತ್ತು ಸಹಜಾನು
ಭಾವಗಮ್ಯವಳವಟ್ಟಿತು ಲಿಂಗದಿ ॥೪॥

ಅಱಿವು ಲಿಂಗವಾಗಿಯೆ ಮಱಹಳಿಯಿತ್ತು
ಕುಱುಹಾ ಮಹದೊಳಗಡಿಗಿತ್ತು
ನಿಱುಗೆಯ ಜ್ಞಾನವಱಿತು ಲಿಂಗವಾಗಿಯೆ
ಕಱೆಗೊಂಡ ನಿಃಪತಿ ತಾನಾದುದು ॥೫॥

ಸರ್ವಾಂಗವು ಲಿಂಗವಾಗಿ ಸರ್ವೇಂದ್ರಿಯ
ಸರ್ವಗಮನಗೆಟ್ಟು ನಿಂದಿತು
ಸರ್ವಗರ್ವವಳಿದಾ ಲಿಂಗ ಗೂಡಾಗಿ
ಸರ್ವಾಂಗವು ಲಿಂಗವು ತಾನಾದುದು ॥೬॥

ಅನುಭಾವವು ಲಿಂಗವಾಗಿ ವಿಚಾರವು
ಘನಮಹಲಿಂಗವನೆಯ್ದಿತು

ಅನಘ ಸೌರಾಷ್ಟ್ರ ಸೋಮೇಶ್ವರಲಿಂಗವ
ನೆನದು ನೆನದು ನೆನಹಜೀಯಿತು ಸ್ವಯದಿಂ ॥೭॥

೧೮

ರಾಗ : ವರಾಳಿ ॥

ಮಾಯಾಸಂಗತಿಯಿಂದ ಆಆಆ
ಕಾಯ ಕಪಟವ ತಾಳ್ದನಾತ್ಮ ॥ಪಲ್ಲವಿ॥

ಮಾಯೆಯ ತೊಟ್ಟಾಡಿಸಿ ಮಾಯವಿಡಿದಾ
ಮಾಯಾವಶಗತನಾಗಿ ಆತ್ಮ ॥೧॥

ಮಾಯೆ ಸರ್ವಲೋಕಂಗಳ ಸೃಜಿಸಿದ
ಮಾಯೆಯ ಸೃಜಿಸಿದನಾ ಪರಮಾತ್ಮ ॥೨॥

ಮಾಯೆಯ ಸೃಜಿಸಿ ನಿರ್ಮಾಯನೆನಿಸಿ ತಾನು
ಮಾಯೆ ನಿರ್ಮಾಯೆಗತೀತ ಚಿದಾತ್ಮ ॥೩॥

ಆಯಸುವಿನಿದಿರ ಆಯಸ್ಕಾಂತದ ತೆಜಿ
ಮಾಯೆಯಿದಿರೆ ಪರಮಾತ್ಮನಿಹನು ॥೪॥

ತರಣಿಕಿರಣ ಪೇಯಾಪೇಯದೊಳಿರ್ದಿರದಂತೆ
ಇರುತವೆ ಸರ್ವದೊಳಿರ್ದಿರದಾತ್ಮ ॥೫॥

ಮಾಡುತ ಮಾಡದೆ ನೋಡುತ ನೋಡದೆ
ಕೂಡುತ ಕೂಡದಿಹ ಪರಮಾತ್ಮ ॥೬॥

ಪಾಡುತ ಪಾಡಳಿದಾಡುತ ಸುಖದೊಳು
ಮೂಡುತ ಮುಳುಗುತ್ತಿಹ ಪರಮಾತ್ಮ ॥೭॥

ಆನೆನ್ನ ನೀನೆನ್ನ ತಾನೆನ್ನ ಬೇಜಿನ್ನ
ಏನೆನ್ನದ ನಿಜವಾ ಪರಮಾತ್ಮ ॥೮॥

ಆವುದೇನೆಂದೆಂಬಾ ಪರಿಯಲ್ಲದ
ಸೌರಾಷ್ಟ್ರ ಸೋಮೇಶನಾ ಪರಮಾತ್ಮ ॥೯॥

೧೯

ರಾಗ : ವಸಂತ ॥

ಸಕಲನಿಃಕಲ ನಿರವಯನಿರುಪಮ ಸದಾಚಿದ್ಭರಿತ ಶರಣಜನಸಂಗ [೧೫][ವಿನೋದಾ][೧೫]
ಅಖಿಳವ್ಯಾಪಕಲಿಂಗಸಂಗ ನಿಜವಜಿತಜೆವು ಚಿತ್ಸುಖಾನಂದಪೂರ್ಣಾ ॥ಪಲ್ಲವಿ॥

ಷಡುಚಕ್ರ ಷಡುವರ್ಣ ಷಡುದೇವತೆಗಳಿಂದ
ಷಡುಗಂಧ ಷಡುರುಚಿ ಷಡಾಕ್ಷರಂಗಳವಿಡಿದು
ಷಡುವರ್ಗ ಷಡುವಿಷಯ ಷಡ್ಭ್ರಮೆಗಳಂತೆ ಜೀವಿಸಿ
ಷಡುಕರ್ಮ ಷಡುಯೋಗರಹಿತವಾದ ಲಿಂಗ ಲಿಂಗ
ಷಡುಲಿಂಗ ಷಡುಲಿಂಗ ಷಡುಹಸ್ತ
ಷಡುಮುಖ ಷಡಾಂಗ ಷಡುಷಡುತತ್ವ ಶೈವದಾ
ಷಡುಶೀಲ ಷಡುಮಹೇಶ್ವರ ಷಡುವ್ರತದಿಂದೆ
ಷಡುವಿಧಾನಂ ಷಡ್ದರುಶನಂಗಳು ಹಿಂಗಿ ಷಡುಮೂರ್ತಿ
ಷಡುಶಕ್ತಿ ಷಡುರತಂಗಳು ರಹಿತ ಷಡುಜ್ಞಾನ
ಷಡುಚಕ್ರ ಷಟ್ಕಳೆಗಳಿಂ ಸಂಗಸಂಗ ಷಡುತ್ರಿಂಶತಿತತ್ವ
ಷಡುನಿಜಾಕಾಶ ಷಡುಷಡುಸ್ಥಲಬ್ರಹ್ಮದಿಂದಾ ॥೧॥

ತ್ರಿವಿಧತನು ತ್ರಿವಿಧಮನ ತ್ರಿವಿಧಜೀವಂಗಳಿಂ
ತ್ರಿವಿಧಗುಣ ತ್ರಿವಿಧತಾಪಂ ತ್ರಿವಿಧಮಲ ಹಿಂಗಿ
ತ್ರಿವಿಧಸತ್ವಂಗಳಿಂ ತ್ರಿವಿಧವಸ್ಥೆಗಳಿಂದ
ತ್ರಿವಿಧಮೂರ್ತಿ ತ್ರಿವಿಧಶಕ್ತಿಯಿಂದ
ತ್ರಿವಿಧ ತ್ರಿವಿಧ ತ್ರಿವಿಧ ಗುರುಲಿಂಗಜಂಗಮ
ತ್ರಿವಿಧಭಾವದಿಂ ತ್ರಿವಿಧಾಕ್ಷರಂಗಳಿಂದ
ತ್ರಿವಿಧಪ್ರಜ್ಞನು ತ್ರಿವಿಧಪರಮಾರ್ಥಿಕರಿಂದೆ
ತ್ರಿವಿಧತತ್ವಂ ತ್ರಿವಿಧಧಾತೃಧ್ಯೇಯಗಳಿಂದೆ
ತ್ರಿವಿಧನಾದಂ ತ್ರಿವಿಧತ್ರಿವಿಧಜ್ಞೇಯಂ ಲಿಂಗ
ತ್ರಿವಿಧಲಿಂಗೋದಕಂ ತ್ರಿವಿಧತ್ರಿವಿಧಸೋಹಂ

೧೫–೧೫ ವಿನ್ನೊಂದಾ(ಮೂ)

ತ್ರಿವಿಧ ತ್ರಿವಿಧ ತ್ರಿವಿಧ ತನುಮನಧನಂ
ತ್ರಿವಿಧಲಿಂಗದೊಳಿರ್ಪ ತ್ರಿವಿಧಪ್ರಸಾದದಿಂದ ॥೨॥

ಏಕಯೇವೋರುದ್ರನದ್ವಿತೀಯಾಯೆಂದು
ಏಕಯೇವೋದೇವಯೆಂದು ಶ್ರುತಿಸಾಱುತಿರೆ
ಏಕಮೂಲಂ ಪ್ರಣಮ ಏಕಾಕ್ಷರಂ ಬೆಳಗು
ಏಕಕಳೆ ಏಕಪರವಸ್ತುವಿಂದ ಏಕಾನೇಕ
ಏಕಸ್ಥಲಂ ಏಕಶಕ್ತಿರ್ಯೇಕಂ ಬ್ರಹ್ಮ ಏಕಾತ್ಮನೇಕಾತ್ಮನು
ಏಕಮೂರ್ತಿದೇವ ಸುರಾಳ ನಿರಾಳ ಸುಚಿತ್ತ ಸುನಾದ ವಿನೋದ ಶರ
ಣೈಕ್ಯ ಸೌರಾಷ್ಟ್ರ ಸೋಮೇಶ ಸೋಮೇಶ ಸೋಮೇಶ ಸೋಮಂ
ಏಕಯೇಕ ಹಲವಾಗಿ ತೋರ್ಪ ವಸ್ತುವೊಂದೆ ಜಲಂ ಒಂದೆ
ರುಚಿ ಬೇಱಾದುದು ॥೩॥

೨೦

ರಾಗ : ಕಾಂಬೋಧಿ ॥

ಶರಣನೆ ಸತಿ ಲಿಂಗವೆ ಪತಿಯಾಗಿರ್ಪ
ಸುರತದ ಸುಖವನೆಂತುಪಮಿಸುವೆ ॥ಪಲ್ಲವಿ॥

ಸತಿಯೊಳಂತರ್ಮುಖವಾಗಿ ಸುರತದ ಸುಖ
ಪತಿಯೊಳಾವರಿಸಿ ನೂರ್ಮಡಿಸಿರಲು
ಸತಿಪತಿ ಸಂಯೋಗವತಿರತಿವೆತ್ತಿರೆ
ಗತಿಮತಿಯ ರತಿಯಹ ಸ್ವಯಸುಖವ

ಕಂಗಳ ಕೆಂಪು ಸೋರ್ಮುಡಿ ಮೊಗ ಕಿಱುಬೆಮ
ರಂಗ ರೋಮಾಂಚನ ಪುಳಕಿಸಲು
ತಂಗದಿರ್ಗಳು ಸರ್ವಾಂಗದಿ ನೆಲಸಿರೆ
ಲಿಂಗಸ್ವಭಾವದ ಸ್ವಯಸುಖವ

ಪಡಪಡ ಪಾರ್ವದೆ ತಡಬಡಿಸುವ ನುಡಿ
ಕಡುಗೆಂಪವೆತ್ತಂಗ ಒಡನೊಡನೆ
ಗುಡಿಗಟ್ಟುವ ಮನಕರಣ ಸರ್ವೇಂದ್ರಿಯ
ಒಡಗೂಡಿಹ ನಿಂದಿಹ ಸ್ವಯಸುಖವ

ಉಸುರಡಗಿದ ಪರಿಮಳ ನಾಸಿಕ ಷಡು
ರಸ ಜಿಹ್ವೆಯೊಳಡಗಿದ ಭೇದ
ಎಸೆವ ಸ್ಪರ್ಶನ ತಾನಾಗಿ ತೃಪ್ತಿಗಳತಿ
ಹೊಸತು ಪರಿಯೊಳಿಹ ಸ್ವಯಸುಖವ

ಘರ್ಮಜಲಂಗಳು ನಿಜಸುಖವ ಸುರಿದ
ವರ್ಮಸ್ಥಾನಗಳೊಳಗಲೊಸರ್ವ
ನಿರ್ಮಳ ಹರುಷ ಶರಧಿಯೊಳು ತೇಕಾಡು
ತಿರ್ಮನವಳಿದಿಹ ಸ್ವಯಸುಖವ

ಬಾವನ್ನವೀರರು ಬಟ್ಟೆಯಳಿದ ಲಿಂಗ
ವಾವರಿಸಿತು ಸರ್ವಾಂಗವನು
ತೀವಿಹ ಸೌರಾಷ್ಟ್ರ ಸೋಮೇಶ್ವರನ ಸ್ವ
ಭಾವಭರಿತವಾದ ಸ್ವಯಸುಖವ*

❖❖

*ಶಿವಯೋಗ ಪ್ರದೀಪಿಕೆಗೆ ಸಂಬಂಧಿಸಿದ ಈ ಸ್ವರವಚನವನ್ನು ಶಿವದಾಸ ಗೀತಾಂಜಲಿಯಿಂದ(ಪು.೧೭೦) ಎತ್ತಿಕೊಳ್ಳಲಾಗಿದೆ.

ಉಯ್ಯಲ ಪದ

ರಾಗ : ಬವುಳಿ ॥

ಖಲ್ವಿದಂ ಬ್ರಹ್ಮವೆಂಬಾ
ಉಯ್ಯಲಿದು ಸಲ್ವುದಜಡಾದ್ವೈತಿಗೆ ॥ಪಲ್ಲವಿ॥

ಕರ್ಮವೆನಿಪಾ ಭೂಮಿಯಾ ಮೇಲೆ ನಿಃ
ಕರ್ಮವರ್ಮದ ಕಂಬವು
ನಿರ್ಮಲದ ಮೇಲುತ್ತರಾವಾಸ ಪರ
ಬೊಮ್ಮವೇ ಕಳಸವಾಗಿ ॥೧॥

ಅಱಿಕೆಗೆ*[ಟ್ಟs]*ಕೊಂಡಿಯ ತೊಡರಿಪ್ಪ
ಅಱಿವೆಂಬ ವಂಶವಿಡಿದು
ಕುಱುಹೆಂಬ ಮಣೆಯ ಮೆಟ್ಟಿ ಒಲೆಯಲಾ
ಕುಱುಹಱಿವು ಬೇಱಾದುದು ॥೨॥

ಭಕ್ತಿಶಕ್ತ್ಯಾದಿಯಾ೧[ದಾ]೧ಶಕ್ತಿ ಪರ–
ಶಕ್ತಿ ಚಿಚ್ಛಕ್ತಿವಿಡಿದಾ
ಶಕ್ತಿಯಿಚ್ಛಾಜ್ಞಾನದಾ ಶಕ್ತಿಯರು
ಮುಕ್ತಿಗಧಿಕನ ತೂಗಲು ॥೩॥

– ಟ್ಟು (ಮೂ), ೧–೧ ಧಾ(ಮೂ).

ಯಮನ ಮೇಲಣ ದಾಳಿಯಾ ಹೋಹಂತೆ
ಸುಮನದಿಂದೊದೆದುಯ್ಯಲಾ
ಗಮನವಿಲ್ಲದೆ ತೂಗುತಾ ತಮವಳಿದ
ವಿಮಳದುತ್ತರ ಕಕ್ಷೆಗೆ ॥೪॥

ನಿಶ್ಚಯದ ಪೂರ್ವಾದ್ರಿಗೆ ಒಲೆದೊಲೆದು
ಪಶ್ಚಿಮದ ಪದಗಾಣುತಾ
ದುಶ್ಚರಿತ ದುರ್ವ್ಯಸನದಾ ಭ್ರಮೆಯೋಡಿ
ನಿಶ್ಚಲಜ್ಞಾನ ಮೂಡಿ ॥೫॥

ಭಕುತಿಗೊಲಿದಾಕಾರನೂ ನಂ*[ಬ]*ದಾ
ಭಕುತಿಹೀನರ್ಗೆ ಶೂನ್ಯ
ಅಖಿಲಕ್ಕತೀತನಾಗಿ ನಿರವಯದಿ
ಸಕಲನಿಃಕಲನಾಗಿಹ ॥೬॥

ದುಷ್ಟಶಿಕ್ಷಕನಿಗ್ರಹ ಭರ್ಗನತಿ
ಶಿಷ್ಟಮುನಿಜನರಕ್ಷಣಾ
ನಿಷ್ಠೆನಿಬ್ಬೆಱಗಾಗಿಹ ಶರಣಪ್ರ
ಮುಷ್ಟಪ್ರಮೋದವೆನಿಪಾ ॥೭॥

ವರದ ಕರದಿಂದೀವುತಾ ಅಭಯದಿಂ
ಪರಶಿವಂ ಶಕ್ತಿವಿಡಿದು
ಸಿರಿಬಡತನಗಳಿಲ್ಲದಾ ಸಾರ್ಥದಿಂ
ಪರಕೆ ಪರವಾಗಿರ್ದನು ॥೮॥

ನುಡಿಯ ಗಡಣದಿ ತೊಡರದಾ ಷಡುಗುಣದ
ಬೆಡಗುಯೆಡೆಯುಡುಗದಿಪ್ಪಾ
ಕಡೆಮೊದಲುನಡುವೆನ್ನದೆ ಎಲ್ಲೆಡೆಯ
ಲೊಡಗೂಡಿ ಬಿಡ¹[ದ]¹ಡಗಿಹಾ ॥೯॥

– ಬಿ(ಮೂ), ೨–೨ ವ(ಮೂ).

ಪಾರ್ವರಾ ಕ್ರತುವವೇಳ್ದು ಕಾಣರಾ
ನಿರ್ವಾಣಲಿಂಗಸಾಧ್ಯ
ಸಾರ್ವಶ್ರುತಿತತಿ ಕಾಣದೆ ೩[ಮಗು]೩ಳುತಂ
ದೂರ್ವವಾ ನಿಜವಱಿಯದೆ ॥೧೦॥

ಶೈವನೊಂದಂ ಪೂಜಿಸಿ ಭಜಿಭಜಿಸಿ
ಕೈವಲ್ಯಮಂ ಬಯಸುವಾ
ದೈವವಂ ಶೂನ್ಯವೆಂಬಾ ಬೇಱಿಂದು
ದೈವವುಂಟೆಂಬನೊರ್ವಂ ॥೧೧॥

ಬುದ್ಧರಾವಾವ ವಿಧದಿಂ ತಪಗೆಯ್ದಿ
ಬದ್ಧರಾದರು ಕರ್ಮದಿಂ
ಸಿದ್ಧಿಗೆಯಿದಾ ಸಿದ್ಧರುs ಕಾಪಾಲಿ
ಇದ್ದನೆಂದೇ ಮಱೆದರು ॥೧೨॥

ಕರ್ಮಕಪಟದಿ ವೈಷ್ಣವಂ ಬೊಮ್ಮವಂ
ನೆಮ್ಮಲಱಿಯದೆ ಭ್ರಮಿಸಿದ
ಕರ್ಮಭಕ್ತಿಜ್ಞಾನವು ವೈರಾಗ್ಯ
ದಿಂ ಮುಳುಗಿ ಅಳಿದಿರ್ದರು ॥೧೩॥

ಆರುದರುಶನಗಳೆಲ್ಲಾ ತಮತಮಗೆ
ಬೇಱಿ ಬೇಱಿಂದೊಂದನೂ
ಕೀಱಿ ಕಟ್ಟಿದವಲ್ಲದೆ ಅಱಿಱಿಂ
ಮೀಱಿಪ್ಪ ಮ*[ಹ]* ವಱಿಯದೆ ॥೧೪॥

ಅಜಹರಿಗಳಿಂಗಸಾಧ್ಯ ಸುರರುಗಳ
ಭಜನೆಯೊಳು ನಿಲುಕದಿಪ್ಪಾ
ಗಜಬಜಿಪ ಯಜನೆಯಿಂದಾ
ಯಜಿಪರೀ ಅಜಪೆಯೊಳು ಸಿಲುಕದಿಹನಾ ॥೧೫॥

೩–೩ಮೊಗ (ಮೂ) *–* ನ (ಮೂ)

ತತ್ವಮಸೀತಿಯೆಂಬಾ ಶ್ರುತಿಗಳಿಂ
ದುತ್ತರೋತ್ತರವಾಗಿಹ
ಕರ್ತೃ ತಾನೆಂದೆಂಬರಾ ವಚಿಸಿನಿಂ
ದತ್ತತ್ತವಾದ ಘನವೂ ॥೧೬॥

ಭಾವವೇ ಭ್ರಮೆಗೊಂಡಿಹ ದುರ್ಭಾವ
ದುದ್ಭವದ ಭವರಹಿತದಾ
ಭಾವಲಿಂಗವ ಭಾವಿಪಾ ಭಾವವಾ
ಸದ್ಭಾವವೈಕ್ಯವಾಗಿ ॥೧೭॥

ಅಂಗಲಿಂಗದ ಸಂಗದಾ ಸಮರಸದ
ಸಂಗಸಂಗಿಸಿ ಹಿಂಗದಾ
ಸಂಗ ತಾನಿದಿರೆನ್ನದಾ ಸಮಸುಖದ
ಸಂಗವಡೆದೆಜಿಹಿಲ್ಲದಾ ॥೧೮॥

ಧರ್ಮಾರ್ಥಕಾಮಮೋಕ್ಷ ಸಂಗದಿಂ
ಹಮ್ಮುವಿಡಿದಿಹ ಭಕ್ತಿಯಾ
ಸೊಮ್ಮ ಮೆಟ್ಟದೆ ಲಿಂಗದಾ ತ[೪][ನ್ನೈ][೪]ಕ್ಯ
ಬೊಮ್ಮದನುಸಂಧಾನವು ॥೧೯॥

ನಾಹಮೆಂಬೀ ತ[೫][ನ್ನ][೫]ಯಾ ಮುನ್ನಿನಾ
ಸೋಹಮೆಂಬೀ ಭಿನ್ನದಾ
ಕೋಹಮೆಂಬನ್ಯವಡತಿ ಪರಮದಾ–
ಸೋಹ ಪಾ[೬][ಶ][೬] ಂಗಳಳಿದಾ ॥೨೦॥

ಪರಿವೃಢಜ್ಞಾನದಿಂದ ಪರವಿಹಿ
ಪರಿಭವವ ಪರಿಹರಿಸುತ
ಪರಬೊಮ್ಮವನು ನೆಮ್ಮಿಹ ನೆಮ್ಮುಗೆಯೆ
ಪರಿಪೂರ್ಣವಾದುದಾಗಿ ॥೨೧॥

೪–೪ ನ್ಯಯಿ(ಮೂ), ೫–೫ ನ (ಮೂ), ೬–೬ ಸ್ಯ(ಮೂ).

ಮೌನಮುದ್ರೆಯನೊಡೆಯದೆ ಮುದ್ರಿಸಿದ
ಸಾನುರಾಗದ ಸಂಗದಿಂ
ಏನೊಂದ ಭಾವಿಸಿಪ್ಪ ಭಾವವಳಿ
ದಾನಂದಮಯವಾದುದು ॥೨೨॥

ಸೀಮೆಯಿಲ್ಲದ ಉಯ್ಯಲ ಸೌರಾಷ್ಟ್ರ
ಸೋಮೇಶ ನಿಮ್ಮ ಶರಣ
ನಾಮವಿಲ್ಲದ ನಾಮದಿಂದೊಲಿದಾಡು
[ವಾ] ಮಹಾಮಹದಂಗದಿಂ ॥೨೩॥

❖❖

– ತಾ (ಮೂ)

ಮುಕ್ತಿಕ್ಷೇತ್ರ

ಶ್ರೀಮದನಘನಚಲನಾತ್ಮರಾಮನಜಡನನುಪಮಂ ಸ
ನಾಮನೇಮರಹಿತನಾದನವನು ಮುಕ್ತನು ॥ಪಲ್ಲವಿ॥

ಸಕಲನಿಷ್ಕಲಕ್ಕತೀತ ವಿಕಳನಿಗಮವೇದಶಾಸ್ತ್ರ
ನಿಕರವ[೧][ರಿ][೧]ಯ ವಾಸವಾದಿ ದಿವಿಜದನುಜರು
ಸುಕರ ಸವಿತಮೋಷಧೀಶ ಮಕರಕುಂಡಲಾದ್ವಿರಿಂಚಿ
ಅಖಿಲರಜಿೞಯದಚಲ ನಿತ್ಯನಿಜವನಜಿೞಯೆ ಮುಕ್ತನು ॥೧॥

ಆದಿ ಮಧ್ಯ ಅಂತ್ಯರಹಿತ ಭೇದಪ್ರಮೆಯಕಪ್ರಮೇಯ
ವಾದ ಶಬ್ದತರ್ಕಗಿರ್ಕಗಳಿಗತರ್ಕ್ಯನು
ಭೂತಸೀತವೆಲ್ಲಕಾದಿ ವಾಙ್ಮನಕ್ಕತೀತವಾದ
ಶಿವನ ಸಸ್ವರೂಪನಜಿೞಯಲವನು ಮುಕ್ತನು ॥೨॥

ಸಾಧ್ಯಸಿದ್ಧಯಕ್ಷರಿಂಗಭೇದ್ಯನಪ್ಪ ಪರಶಿವಂ ಸು
ಬೋಧ್ಯನಾಗಿ ಷಡ್ಗುಣಂಗಳಿಂದವಖಿಲಕೆ
ಬಾಧ್ಯನಾಗಿಯುಂ ಅನನ್ಯವೇದ್ಯನಾಗಿ ಮೆಱೆವ ಶಿವನ
ಚೋದ್ಯದೇವತಾದಿಯೆಂಬ ಶ್ರುತಿಯ ತಿಳಿಯೆ ಮುಕ್ತನು ॥೩॥

ನಾದಬಿಂದುಕಳೆಗತೀತವಾದ ಪ್ರಣಮ ತಾನೆ ಚಿತ್ತು
ಭೇದದಿಂದ ತ್ರಿವಿಧವಾಗಿ ವಸ್ತುಸಂಗದಿಂ
ನಾದಬಿಂದುಕಳೆಗೆ ಮೂಲ ಅಕ್ಷರತ್ರಯ*[ವ]*ಭೇದ
ದಿಂದ ಕೂಡಿ ಪ್ರಣಮವಾದುದಜಿೞಯೆ ಮುಕ್ತನು ॥೪॥

೧–೧ ರ್ಣಿ(ಮೂ), *–* ನ್ನ(ಮೂ).

ಚಿತ್ತು ಪ್ರಣಮಮೂಲ ಪ್ರಣಮ ಚಿತ್ತುಮೂಲವಾಗಿ ತಮ್ಮೊ
ಳುತ್ತರೋತ್ತರೀಯವೆನಿಸಿ ತೋಱಿ ತಮ್ಮನು
ವೃತ್ತಿ ಬಗೆಗಳಿಂದ ಮಱಸಿ ಚಿತ್ತುವಲ್ಲದಂತಿರೆಸೆವ
ವೃತ್ತಿ ಬಗೆಗಳಳಿದು ಚಿತ್ತುವಱಿಯಲವನು ಮುಕ್ತನು ॥೫॥

ಚಿತ್ತುವಿಂದ ಜಗದ ಜನನದೋತ್ತರಂ ವಿಶೇಷಮಾದ
ಭಿತ್ತಿಯಿಂದ ತೋಱಿತಚರಚರಗಳೆಲ್ಲವು
ವೃತ್ತಿ ಬಗೆಗಳಿಂದ ಹೊತ್ತು ಸುತ್ತಿ ಸುಳಿವ ಮಾನಸಾದಿ
ಸತ್ತುಚಿತ್ತಿನಿರವಿದೆಂದು ತಿಳಿಯಲವನು ಮುಕ್ತನು ॥೬॥

ಚಿತ್ತುವಿಂದ ನಾಮರೂಪು ಚಿತ್ತುವಿಂದ ವೃತ್ತಿಭೇದ
ಚಿತ್ತುವಿಂದ ಕರ್ಮಾಕರ್ಮ ಭೇದಭೇದ್ಯವೂ
ಚಿತ್ತುವಿಂದ ರಾಗವಿದ್ಯೆ ಚಿತ್ತುವಿಂದ ನೇತಿಕಲೆ ಸು
ಚಿತ್ತ ಚಿದ್ವಿವರ್ತವೆಂದು ಚಿತ್ತನಱಿಯೆ ಮುಕ್ತನು ॥೭॥

ಧರಣಿ ಸರಸಿ ಮರುತಮಿತ್ರ ಮರುತ ಗಗನ ಸೋಮ ಸೂರ್ಯ
ಸುರಚಿರಾತ್ಮರಾಷ್ಟ ಅಸ್ತಿಭಾತಿಯಿಂ
ವಿರಚಿಸಿದ ಸುಚಿತ್ತು ತಾನೆ ಪರಕೆ ಪರವೆನಿಪ್ಪ ಶಿವನು
ನಿರುತಶುದ್ಧಜ್ಞಪ್ತಿಯೆಂದು ತಿಳಿಯಲವನು ಮುಕ್ತನು ॥೮॥

ಪರಶಿವಂ ಶಿವಾತ್ಮವಿದ್ಯೆ ನೆರೆದು ಗಗನ ಜನಿಸಿತದಱ
ಇರವಿನಿಂದ ವಾಯು ಜನಿಸಿತದಱ ಗರ್ಭದಿಂ
ಮರುತಮಿತ್ರ ಜನಿಸಿತದಱ ನೆರೆವಿಯಿಂದ ಸರಸಿ ಜನಿಸಿ
ಧರಣಿಯಚರಚರಗಳಖಿಲವಾದುದಱಿಯೆ ಮುಕ್ತನು ॥೯॥

ಧರಣಿ ಸರಸಿಯೊಳಗೆ ಮುಳುಗಿ ಸರಸಿ ವಹ್ನಿಯಲ್ಲಿಯಱಿತು
ಮರುತಮಿತ್ರ ಮರುತನಲ್ಲಿ ಲಯವನೆಯ್ದಲು
ಮರುತ ಗಗನದಲ್ಲಿ ಕೆಟ್ಟುಯಿರದೆ ಗಗನವಿದ್ಯೆಯಲ್ಲಿ
ಬೆಱಸಿ ಆತ್ಮವಿದ್ಯೆ ಶಿವನೊಳಡಗಲಱಿಯೆ ಮುಕ್ತನು ॥೧೦॥

ಶಿವನೊಳಾತ್ಮವಿದ್ಯೆ ಜನಿಸಿ ಭವಕೆ ಬೀಜವಾದ ಜೀವ
ನೆವದಿ ಆತ್ಮವಿದ್ಯೆಯಲ್ಲಿ ಜನಿಸಿತದಱೊಳು

ಸುಮನ ಜನಿಸಿ ಮನದಿ ಹಮ್ಮು ಸ೨[ಮ]೨ನಿಸಿತ್ತು ಬುದ್ಧಿ ಚಿತ್ತ
ಕ೩[ವು]೩ಗಳಿಂದ ವೃತ್ತಿ ಬಗೆಗಳಾದುದಱಿಯೆ ಮುಕ್ತನು ॥೧೧॥

ವೃತ್ತಿ ಚಿತ್ತದಲ್ಲಿ ಕೆಟ್ಟು ಚಿತ್ತ ಬುದ್ಧಿ ಹಮ್ಮು ಮನಸಿ
ನತ್ತಲಡಗಿ ಮನವು ಜೀವನಲ್ಲಿ ಲಯಿಸಲೂ
ಪ್ರತ್ಯಗಾತ್ಮವಿದ್ಯೆ*[ಯ]*ಲ್ಲ ನಿತ್ಯಜೀವ ಲಯವನೆಯ್ದಿ
ಹರ್ತ ಶಿವನೊಳಾತ್ಮವಿದ್ಯೆ ಅಡಗಲಱಿಯೆ ಮುಕ್ತನು ॥೧೨॥

ಅಂಡಪಿಂಡ ಹೊಱಗು ಒಳಗಖಂಡವಾದ ಶಿವಮಹಾತ್ಮ
ರಂಡಲಿಪುದೆ? ತಾಪಕೋಪ ಲೇಪವಪ್ಪುದೆ?
ಕಂಡಕಂಡ ಕರ್ಮಕಪಟವಿಂಡುಗಳನು ತಳೆದು ಭವದಿ
ದಿಂಡುಗೆಡೆಯದಚಲಶೀಲನಾವನವನು ಮುಕ್ತನು ॥೧೩॥

ಆವುದೊಂದನೊಮ್ಮೆಗೊಮ್ಮೆ ಭಾವಿಸುತ್ತ ಭ್ರಮಿಸಿ ಬೆದರಿ
ಸಾವ ನೋವ ೪[ಬೇ]೪ವಸಕ್ಕೆ ಸಿಕ್ಕಿ ಕೊರಗುವಾ
ದಾವತಿಯೊಳಗಾಳುತೇಳುತಾವನೊರ್ವ ಜೀವಿಸಿರ್ಪ
ಜೀವನಧಮನೆಂದಹೋ ತಿರಸ್ಕರಿಸಲು ಮುಕ್ತನು ॥೧೪॥

ವಿಷಯವಳಿಪು ವಿಕಳವಂದ ವ್ಯಸನಮದವಿರಾಗಕಾಂಕ್ಷೆ
ಹಸಿವು ಕಳವು ಹಿಂಸೆ ಪಾರದ್ವಾರ ಠಕ್ಕಿಲಿ
ನುಸುಳಿ ನುಸುಳಿ ಗದಕಿತನದಿ ಬಸಿದು ಬೀಳ್ವ ಬಾಳ್ವೆ ಬೇಳ್ವೆ
ಎಸಕವೆಂದು ತಿಳಿದಹೋ ತಿರಸ್ಕರಿಸಲು ಮುಕ್ತನು ॥೧೫॥

ಕನಕವೆಂಬ ಭೂತ ಸೋಂಕಿ ಜಿನುಗಿಗಳುಬ ಒಂದನೊಂದು
ನೆನೆದು ನೆನೆದು ಭಿತಿಬಿಟ್ಟು ಕಳಲಿ ಕೆಳಲುತಾ
ಕನಲಿ ಅಳಲಿ ಬಳಲಿ ಸುಳಿಯೆ ಮನಕೆ ಮಱವೆ ಶಂಕೆ ಕುಟಿಲ
ಅನವರತ ಘಟಿಸಿ ನಟಿಸದಿಪ್ಪನವನು ಮುಕ್ತನು ॥೧೬।

ಡಂಬು ಪ್ರಕಟು ಸಂಚಿತಂ ನಿಡಂಬು ಬಱೆಯ ವಾಗ್ವಿಲಾಸ
ವಿಂಬುಗೊಂಡು ತೃಷ್ಣೆ ಲೋಭವಾಸೆಯಾಮಿಷಂ

೨–೨ ವೆ(ಮೂ), ೩–೩ ವೆ(ಮೂ), *–* ಯೆ (ಮೂ), ೪–೪ ಜೀ(ಮೂ).

ಎಂಬಿವೆಲ್ಲವ$[ದು ಮರೀಚಿ]$ಯೆಂಬುದಜಿತು ಶಿವನ ಭವನ
ಶಂಭುವಂ ವಿವೇಕದಿಂದ ಭಜಿಸಲಜಿಯೆ ಮುಕ್ತನು ॥೧೭॥

ಪರಿಭವಂಗಳಿಂದ ಹಲವು ಪರಿಯ ತನುವ ತಳೆದು ಕಳೆದು
ಬರುತ ಬರುತ ಮರ್ತ್ಯಜನ್ಮದೊರಕಲೆಂತಕೆ
ಪರಶಿವಂಗೆ ಭೃತ್ಯನಾಗಿ ಪರವಿಹಂಗಳಜಿತು ಮತ್ತೆ
ಮರಳಿ ಪರಿಭವಕ್ಕೆ ಬಾರದಿರಲಿಕವನು ಮುಕ್ತನು ॥೧೮॥

ಹುಟ್ಟದಿಪ್ಪ ಯೋನಿಯಿಲ್ಲ ಮೆಟ್ಟದಿಪ್ಪ ಭೂಮಿಯಿಲ್ಲ
ಮುಟ್ಟಿ ಸವಿಯದಿಪ್ಪ ಆಹರಂಗಳಿಲ್ಲೆನೆ
ಕೆಟ್ಟು ಕೆಟ್ಟು ಭವದೊಳುರುಳ್ವ ಬಟ್ಟೆಗೆಟ್ಟು ಗುರುಕಟಾಕ್ಷ
ನಟ್ಟು ಭವವ ಸುಟ್ಟು ಹುಟ್ಟುಗೆಟ್ಟು ನಿಲಲು ಮುಕ್ತನು ॥೧೯॥

ರಜ್ಜುಸರ್ಪನೆಂಬ ತೆಱ ಜಗಜ್ಜನಂಗಳಾವಿವೇಕ
ದುಜ್ಜುಗಂಗಳಿಂತು ಭವಭವಾಂತರಂಗಳು
ರಜ್ಜುರಜ್ಜುವೆಂಬ ತಿಳಿವು ಪ್ರಜ್ವಳಿಕ್ಕು ಪರಿಭವಗಳ
ಪಜ್ಜೆಗಂಧಜ್ಞಾನ ನಿ*[ರ]*ತನಾವನವನು ಮುಕ್ತನು ॥೨೦॥

ಭೂತಪಂಚಕಂಗಳಿಂದ ೫[ವಾದ]೫ ಕಾಯ ಜೀವನಲ್ಲಿ
ವಾತವಹ್ನಿಯಂತರಿಕ್ಷ ಜೀವದಂಶವು
ಶೀತಳಂ ಧರಿತ್ರಿ ದೇಹ ೬[ವೀ]೬ ತಶಾಂತವೆಂದು ಪಂಚ
ಭೂತ ಪಂಚಬ್ರಹ್ಮ ಪಂಚಲಿಂಗವಜಿಯೆ ಮುಕ್ತನು ॥೨೧॥

ಸತ್ಯ ಸಮತೆ ಸಮ್ಯ ಸಮಸುಚಿತ್ತ ಸಾರಹೃದಯ ಸುಮನ
ತಥ್ಯಮಿಥ್ಯವಡಗಿದಾ ಸುಬುದ್ಧಿ ಸುಸ್ಥಿರಂ
ನಿತ್ಯನಿಜವಿವೇಕ ✦[ವರಿವು]✦ ಬಿತ್ತರಂ ಕ್ಷಮಾದಮಾದಿ
ಯೊತ್ತಕದ ಸುಶಾಂತಿ ಕಾಯನಾವನವನು ಮುಕ್ತನು ॥೨೨॥

ಸಗುಣ ವಿನಯ ನಯಮೃದೂಕ್ತಿ ಬೆಗಡುಗೊಳ್ಳದಾ ವಿರಕ್ತಿ
ಬಗೆಗೆ ನಿಲುಕದಿಪ್ಪ ದಯೆ ತಿತಿಕ್ಷೆ ದಾಂತಿಯಿಂ

$–$ ದ ಮಂತ್ರಿ ತ್ರಿ(ಮೂ), *–* ರು(ಮೂ) ೫–೫ ದಾಯ(ಮೂ), ೬–೬ ದಿ (ಮೂ), ✦–✦ ಯರಿಯ (ಮೂ).

ವಿಗಡ $[ವಾ]$ ತ್ಮತೇಜವಡಗಿದಗಣಿತದ ಸುಧರ್ಮ ಚಿತ್ತ
ನೆಗೆದ ಪರಮಜ್ಞಾನಕಾಯನಾವನವನು ಮುಕ್ತನು ॥೨೩॥

ಸುಮತಿಯಜೀವು ತೆಱಪುಗೊಂಡ ೭[ಸಯಶ]೭ ಪುಳಕ ಪ್ರಮದರಾಗ
ಸುಮ*[ನ]* ನಿಸ್ತರಂಗವಮೃತಸಿಂಧುವಂದದಿ
ಗಮನ ಫೇನ ಬುದ್ಬುದಂಗಳಮಿತಮಾಗಿ ವಿಷಯವಡಗಿ
ದಮಲ ಶುದ್ಧನಿಸ್ಪೃಹಾತ್ಮನಾವನವನು ಮುಕ್ತನು ॥೨೪॥

ಭಾವದಗ್ರದೊಳಗೆ ಬೆಳೆವುದಾವುದೊಂದು ಸುಕಳೆ ಮನದಿ
ತೀವಿ ಹೊಳೆವ ಸುಪ್ರಕಾಶನೇತ್ರದಗ್ರದಿ
ಸಾವಧಾನದಿಂದ ತಾರಕಾವಳಿಗಳ ತೆಱದಿ ದೃಶ್ಯ
ವಾವನೊರ್ವನಂಗಕಳೆ ✦[ಯು]✦ ಕಂಡನವನು ಮುಕ್ತನು ॥೨೫॥

ಹೊಳೆವ ರತ್ನದೀಪ್ತಿಯಂತೆ ಬೆಳಪ ತಾರಕಾದ್ರಿಯಂತೆ
ತೊಳಗಿ ಬೆಳಗುವಾತ್ಮಸುಪ್ರಕಾಶನೇತ್ರಕೆ
ಹೊಳೆದು ದೃಶ್ಯಮಾಗಿ ತೋರ್ಪ ಸುಳುಹು ಸೂಕ್ಷ್ಮಕಳೆಯೆನಿಪ್ಪ
ಬೆಳಗು ಲಿಂಗಕಳೆಯಿದೆಂದು ತಿಳಿದನವನು ಮುಕ್ತನು ॥೨೬॥

ರವಿಯ ಬೆಳಗನುಗಿದು ಸಸಿಯ ನವಸುಕಳೆಯ ಸೆಳೆದು ನೂತ್ನ
ಹವಿಯ ಬಣ್ಣಮಂ ಬಳಿಲ್ಚಿ ರತ್ನದೀಪ್ತಿಯ
ಕವರಿ ವಿದ್ಯುಲ್ಲತೆಯ ರುಚಿಯನವರಿದಾ ಸ್ವಯಂಪ್ರಕಾಶ
ಅವಗವಿಸಿದ ಲಿಂಗಕಳೆಯನಱಿಯಲವನು ಮುಕ್ತನು ॥೨೭॥

ಅಂಗಕಳೆಯ ಬಿಂದುಬೆಳಗು ಲಿಂಗಕಳೆಯ ನಾದಬೆಳಗು
ಸಂಗವಾಗಿ ಕಳೆ❖[ಯು]❖ ಬೆಳಗು ಬೆರೆ⌘[ಸ]⌘ ಭಿನ್ನದಿ
ಕಂಗಳಗ್ರದೊಳಗೆ ಬೆಳಗಿ ಮಂಗಳಾತ್ಮಸುಪ್ರಕಾಶ
ಲಿಂಗದಲ್ಲಿ ತಿಳಿದು ಹೊಳೆದ ಬೆಳಗನಱಿಯೆ ಮುಕ್ತನು ॥೨೮॥

ನಾದಬಿಂದುಗಾದಿ ಬಿಂದು ನಾದಕಾದಿಯಾಗಿ ಬಿಂದು
ನಾದವೆರಡಕಾದಿ ಕಳೆ ಸುಮೂಲವಾಗಿರೆ

$–$ ನಾ(ಮೂ), ೭–೭ ಶಯೆಷು(ಮೂ), *–* x(ಮೂ), ✦–✦ಯ(ಮೂ), ❖–❖ಯ(ಮೂ),⌘–⌘ಸಿ(ಮೂ).

ವೇದದನ್ವಯಂಗಳೆಲ್ಲ ನಾದಬಿಂದುಕಳೆಯ ಪೇಳ್ದ
ನಾದಿನಾಥಭೇದವಿದನು ಭೇದಿಸಱಿಯೆ ಮುಕ್ತನು ॥೨೯॥

ಹಂಸಜೀವನಿಂದ ಮೆಱೆವ ಹಂಸಪರಮನೆಂಬ ಅನ್ವ
ಯಂಶಮಾತ್ರದಿಂದ ತೋಱಿ ಮೆಱೆವ ನಾದವು
ಹಂಸನಾದ ಮೂಲನಾದ ಹಂಸಲೀನದಿಂ ಯದಾ
ಹಂಸನಾದ*[ನೆ]*ಂಬ ಶ್ರುತಿಯ ತಿಳಿಯಲವನು ಮುಕ್ತನು ॥೩೦॥

ನಾದವತುಳನಾದವಾ ಮಹಾದಿನಾದದಲ್ಲಿ ಸಂಸು
ನಾದ ಕೂಡೆ ತೋಱಿತೋಱದಂತಿಹ
ನಾದಗೋಪ್ಯ ಗೋಪ್ಯದಿಂ ಸರೂಪ್ಯಮಾದ ತತ್ಸುನಾದ
ನಾದಮೂರ್ತಿಲಿಂಗ*[ನೆ]*ಂದು ತಿಳಿಯಲವನು ಮುಕ್ತನು ॥೩೧॥

ದಂಥಮೆಂಬ ಮುರುಜನಾದ ಮಂದಮಪ್ಪ ತಂತ್ರಿನಾದ
ಸಿಂಧುವಂತೆ ಭೋರ್ಗರೆವ ನಾದವು
ಬಂಧಮಾದ ಭೃಂಗನಾದ ಗಂಧವಹನ ವಾಸದಾ
ನಂದವಪ್ಪ ಬ್ರಹ್ಮನಾದವಱಿಯಲವನು ಮುಕ್ತನು ॥೩೨॥

ನಟಿಸಿ ಜಯಸುಘಂಟನಾದ ಚಟುಲತರದ ಭೇರಿನಾದ
ಸುಠಿಯೊಳೀ ಮನಸ್ಸನುಗಿವ ಬ್ರಹ್ಮನಾದವು
ಛಿಟಿಲು ಛಿಣಿಲೆನಿಪ್ಪ ನಾದ ಪಟುತರದ ಸುಕರ್ಣನಾದ
ಘಟಿಸಿ ಝೇಂಕರಿಪ್ಪ ನಾದವಱಿಯಲವನು ಮುಕ್ತನು ॥೩೩॥

ನಾಸಿಕಾಗ್ರದಲ್ಲಿ ವಾಯು ಸೂಸದಡಗದಿಪ್ಪ ಸಂಚ
ಮೋಷಮಾಗಿ ವಿಷಯದೊಳಗೆ ಮುಳುಗಿ ಬಾಹ್ಯದಿ
ಪೂಸಿಯಾಗಿ ನೊಂದು ಬಱಿಯ ವೇಷಧಾರಿಯಾಗಿ ಸುಳಿವ
ಹೇಸಿಕೆಯನು ಹೇಸಿಬಿಟ್ಟು ನಿಲಲಿಕವನು ಮುಕ್ತನು ॥೩೪॥

ಶ್ವಾಸಗಂಧ ಕೂಡಿ ಚಲಿಪ ಶ್ವಾಸ ಮಸ್ತಕದೊಳು ಸುತ್ತಿ
ಶ್ವಾಸ ನಾಶಿಕಾಗ್ರದಲ್ಲಿ ನುಸುಳಿ ನುಸುಳದೆ

– ವೆ(ಮೂ)

ಶ್ವಾಸ ಅಜಸುನಾಳದಲ್ಲಿ ವಾಸಮಾಗಿ ಲೀಲೆಯಿಂದ
ವಾಸನಾಕ್ಷಯಂಗಳಾದುದಱಿಯಲವನು ಮುಕ್ತನು ॥೩೫॥

ಗಂಧ ಗಂಧವಹನು ಕೂಡಿ ಗಂಧ ನಾಸಿಕದೊಳು ಜನಿಸಿ
ನಿಂದು ತನ್ನ ತಾನೆ ಸುಖದ ಸುಳುಹುಗಂಡಿರೆ
ಇಂದು ರವಿಗಳೊಂದುಗೂಡಿದಂದು ರಾಜಯೋಗದಲ್ಲಿ
ಸಂದು ಬಂಧಮೋಕ್ಷಮೋಹರಹಿತನಾಗೆ ಮುಕ್ತನು ॥೩೬॥

ಸಲಿಲವಾಱು ರುಚಿಯ ಕೂಡಿ ಸಲಿಲ ತನ್ನ ರುಚಿಯ ಮಱೆಸಿ
ಸಲಿಲವೆಂತು ತಾನೆ ನಟಿಸಿದೆಂತುಟಂತುಟು
ಹಲವು ರುಚಿಯ ಜಿಹ್ವೆ ಸೋಂಕಿ ಹಲವಱೊಳಗೆ ತನ್ನ ರುಚಿಯ
ಹೊಲಬುದಪ್ಪಿಸಿಪ್ಪ ರುಚಿಯನಱಿಯಲವನು ಮುಕ್ತನು ॥೩೭॥

ರಸಗಳುರವಣಿಸುವವಾಱು ರಸಗಳೊಂದುಗೂಡಿ ತಮ್ಮೊ
ಳೊಸೆದು ರಸನೆ ಸೋಂಕುತಿಪ್ಪ ಸೋಂಕ ನೂಂಕಿರೆ
ರಸನೆ ತನ್ನ ರುಚಿಯ ತಾನೆ ರಸನೆ ಕಂಡು ರುಚಿಪ ರುಚಿಯ
ಹಸನಹಂತೆಗಂಡು ಸುಖವ ಸುಖಿಪನವನು ಮುಕ್ತನು ॥೩೮॥

ಪರುಶನೇಂದ್ರಿಯಂತದೊಂದ ನೆರೆದು ಪರುಶನಂಗಳಿಂದ
ಪರುಶಿಸಿಪ್ಪ ಪರುಶನ ತ್ರಿಲೋಕದಲ್ಲಿಯು
ಸುರತದಿಂದ ನೆರೆವ ಸುಖವ ಪರವ ಮಾಡಿ ಲಿಂಗದೊಡನೆ
ನೆರೆದು ನೆರೆದ ಸುಖದ ನೆರವಿಯಱಿಯಲವನು ಮುಕ್ತನು ॥೩೯॥

ಇಂತು ಸುಖದ ಸುಳುಹುಗಂಡನಂತಸುಖದ ನೆರವಿಗಂಡು
ಸಂತತಂ ಸುಖಾಂಬುಧಿಯೊಳು ಮುಳುಗಿಯೊಂದಿರೆ
ತಂತುಮಾತ್ರ ಕಪಟಮೊಳೆಯದಂತು ಸಂತಸಂಗಳಿಂ ನಿ
ರಂತರಂ ಪರಂಗಳಿಹವ ನೆರೆಯದಿರಲು ಮುಕ್ತನು ॥೪೦॥

ಲೋಹವಗ್ನಿಸಂಗದಿಂದ ಕಾಹುಗೊಂಡು ನಿಂದು ತನ್ನ
ಸಾಹಸಂಗಳಳಿದು ಕಠಿಣಗುಂದುವಂದದಿ
ದೇಹ ಜ್ಞಾನಸಂಗದಿಂದ ಕಾಹುಗೊಂಡು ದರ್ಪಗುಂದಿ
ಆಹ ಲಿಂಗದಲ್ಲಿ ಸಂಗಿಯಾದುದಱಿಯೆ ಮುಕ್ತನು ॥೪೧॥

ಎಲೆಗಳುದುರ್ದ ವೃಕ್ಷದಂತೆ ಉಲುಹಡಂಗಿದಿಂದ್ರಿಯಾದಿ
ಫಲದ ಕಾಂಕ್ಷೆಗೆಟ್ಟು ಖ್ಯಾತಿಲಾಭಪೂಜೆಯು
ತೊಲಗಿ ಭೂತ ಭೋಗದಿಚ್ಛೆ ನೆಲಸದಾ ಅನನ್ಯಭಾವ-
ಕಲಸಿ ಕಲೆ ಕಲಂಕುದೋರದಿರಲಿಕವನು ಮುಕ್ತನು ॥೪೨॥

ಅಂದಿಗಂದಿಗಾಯು ನೂಱು ಸಂದಿತೆಂದು ದೇಹಮೋಹ
ಗುಂದಿ ಭೀತಿಬಿಟ್ಟು ಧೀರನಾಗಿ ಚರಿಸುತ
ಕುಂದು ನಿಂದೆ ವಂದನೆಗಳ ಸಂದು ಸಂಶಯಂಗಳಡಗಿ
ನಿಂದನಿಂದ ಎಡೆಗಳೊಳು ನಿರಾಳನವನು ಮುಕ್ತನು ॥೪೩॥

ಘೃತದ ತಿಳಿಯೊಳಡಗಿ ತೋರ್ಪ ಪ್ರತಿಸುಬಿಂಬ ನೋಡೆ ನೋಡೆ
ಪ್ರತಿಯಡಂಗುವಂತು ದ್ವೈತವಱಿತ ಭಾವವು
ಶ್ರುತಿಗುರೂಕ್ತಿಸ್ವಾನುಭವದಿ ಧೃತಿಪ್ರಕೃತಿವಿಕೃತಿಗಳ ವಿ
ಸ್ಮೃತಿಗಳಳಿದು ತನಗೆ ತಾನಪ್ರತಿಮನಾಗೆ ಮುಕ್ತನು ॥೪೪॥

ಅಂಗಕಳೆ ಅನಾದಿಲಿಂಗಸಂಗವಾದ ಬಳಿಕ ಮರಳಿ
ಅಂಗವೆಂಬ ಶಂಕೆಯಱಿತು ಅಱಿವು ಆತ್ಮನ
ಸಂಗದಿಂದ ..... ಸಂಗ ಹಂಗುಹಱಿದು ಸುಮನಲಿಂಗ
ಸಂಗಿಯಾಗಿ ಭಂಗವಳಿಯೆ ಕಾಯಮುಕ್ತನು ॥೪೫॥

ವೇದಶಾಸ್ತ್ರಜಾಗ್ರದ ಪ್ರಸಾದಧ್ಯಾನಸ್ವಪ್ನದ ಪ್ರ
ಸಾದಮೂರ್ಛೆ ಮೃತಿ ಸಮ ಕ.....ಸುಷ್ತಿಯಾ
ಭೇದ ಸಮತೆ ನಿತ್ಯನಿಜಸುಖಾದಿಯೆಲ್ಲ ಲಿಂಗದ ಪ್ರ
ಸಾದವೆಂದು ತಿಳಿದು ಜೀವಿಸಿರಲು ಜೀವಮುಕ್ತನು ॥೪೬॥

ತ್ವಕ್ಕು ಸರ್ವ ಅವಯವದೊಳು ತಕ್ಕುದಾಗಿ ಆತ್ಮಪೂರ್ಣ
...... ಕ್ಕು ತ್ವಕ್ಕುರಾತ್ಮನುಭಯಸಂಗದನುವನು
ಮಿಕ್ಕು ಮೀಱಿದಱಿವು ತನ್ನೊಳುಕ್ಕಿ ಸೊಕ್ಕಿನಾಹಂ *........*
ದಿಕ್ಕಿ ಕಳೆದು ಉಳಿದ ಉಳುಮೆಯಳಿಯೆ ಮನಸು ಮುಕ್ತನು ॥೪೭॥

– ಗರಿಯ ಒಂದು ಮಗ್ಗಲು ಮುರಿದಿರುವುದರಿಂದ ಈ ಭಾಗಗಳು ಲೋಪವಾಗಿವೆ.

೮–೮ ಗರಿಯ ಒಂದು ಮಗ್ಗಲು ಮುರಿದಿರುವುದರಿಂದ ಈ ಪಾಠಗಳು ಲೋಪವಾಗಿದೆ. ಸಾಧ್ಯವಿದ್ದಲ್ಲಿ ಮಾಡಿದ ಊಹೆಗಾಗಿ ಚೌಕ ಕಂಸನ್ನು ಬಳಸಲಾಗಿದೆ.

ಅಱಿಕೆಯ[೮][ರತ][೮] ಅಱಿವು ಬಯಕೆ ಬಱಿತ ಭಾವದಾ ದಿಗುಪ್ಪು
ಪರಿದು ಸಂಶಯಂ ವಿಕಲ್ಪಕಲ್ಪನೆಗಳನು
[೮][ತೊರೆದು][೮] ತನ್ನ ತನು ಸುಖಂಗಳೆಱಿಕಗೆಟ್ಟುಪಾಧಿಯಳಿದು
ಅಱಿವು ಮಱವೆ ಕುಱುಹು ತೆಱಹುಗೆಟ್ಟು ...... ಮುಕ್ತನು ॥೪೮॥

ಏನುವಲ್ಲದೇನುಯಿಲ್ಲದೇನನೊಂದ ಸಂಗಿಸದ ಸು
ಯಾನ ಮಾನ [೮]......[೮] ಧ್ಯಾನಯೇನು ಇಲ್ಲದಾ
ಜ್ಞಾನತೀತತೀತವಲ್ಲ ಸಾನುರಾಗಸಂಗವಿಲ್ಲ
ಮಾನಮಾ [೮].......[೮] ಯ ನಿಲುಕದಜಡವಱಿಯೆ ಮುಕ್ತನು ॥೪೯॥

ಸಾಕು ಸಾಲದುಂಟುಯಿಲ್ಲ ಬೇ [ಕು ಬೇ] ಡವೆಂಬ ಬಹಳ
ವ್ಯಾಕುಳಂಗಳೆಂಬ ವಿಧಿನಿಷೇಧವಿಲ್ಲದೆ
ಏಕಲಿಂಗ ನಿಷ್ಠೆಯಿಂ [೮]......[೮] ಕಾಕು ಬಳಕೆಯಳಿದು
ನಾಕಲೋಕದಿಚ್ಛೆಗೆಟ್ಟು ನಿಲಲಿಕವನು ಮುಕ್ತನು ॥೫೦॥

ನಾಮನಾಮ [೮][ನೇಮವಿ][೮] ಲ್ಲ ಕಾಮಿತಾದಿ ಸೀಮೆಯಿಲ್ಲ
ದಾಮಹಾಂಗಸಂಗನಿ*[ರತನಾ]*ದ ಶರಣಗೆ
ತಾಮಸಾಮಿಷಾದಿಯಿಲ್ಲದೆ ..... ಹಾನುಭವಿಯ ನಿತ್ಯ
[೯][ಧಾ][೯]ಮದಿಂ ಸೌರಾಷ್ಟ್ರ ಸೋಮೇಶ್ವರನನಱಿಯೆ ಮುಕ್ತನು ॥೫೧॥

❖❖

೮-೮ ಗರಿಯ ಒಂದು ಮಗ್ಗಲು ಮುರಿದಿರುವುದರಿಂದ ಈ ಪಾಠಗಳು ಲೋಪವಾಗಿವೆ. ಸಾಧ್ಯವಿದ್ದಲ್ಲಿ ಮಾಡಿದ ಊಹೆಗಾಗಿ ಚೌಕ ಕಂಸನ್ನು ಬಳಸಲಾಗಿದೆ.

- ರುತವಾ(ಮೂ) ೯-೯ ದಾ (ಮೂ)

ಶಬ್ದಾರ್ಥ

ಆದಯ್ಯಗಳ ಕಂದ :

ಸಕಲ–ಸಾಕಾರ, ಮೂರ್ತರೂಪ. ನಿಃಕಲ–ನಿರಾಕಾರ, ಚೈತನ್ಯರೂಪ. ಶರ್ವ–ಶಿವ. ಏಕೋದೇವ–ಒಬ್ಬನೇ ದೇವ. ಈರೇಳುಭುವನ–ಸಪ್ತೂರ್ಧ್ವಲೋಕ:(ಭೂರ್ಲೋಕ, ಭುವರ್ಲೋಕ, ಸ್ವರ್ಲೋಕ, ಮಹರ್ಲೋಕ, ಜನರ್ಲೋಕ, ತಪರ್ಲೋಕ, ಸತ್ಯಲೋಕ); ಸಪ್ತ ಅಧೋಲೋಕ: (ಅತಲ, ವಿತಲ, ಸುತಲ, ರಸಾತಲ, ತಲಾತಲ, ಮಹಾತಲ, ಪಾತಾಲ). ಮನದಾಧಿಪತ್ಯ ಕರ್ತೃ–ಮನಸ್ಸಿನ ಅಧಿರೂಪದ ಒಡೆಯ. ಮನಸನ್ಮೂರ್ತಿ–ಶುದ್ಧಮನಸ್ಸಿನಿಂದ ಗ್ರಹಿಸಲಿಕ್ಕೆ ಯೋಗ್ಯಮೂರ್ತಿ. ಅಹಿಭೂಷಣ–ಹಾವಿನಿಂದ ಅಲಂಕೃತನಾದವ, ಶಿವ. ವಿಹರಣೆ–ವಿಯೋಗ. ದಳದ ನಡುವಿರ್ಪವ–ಶಿರದಲ್ಲಿ ಬ್ರಹ್ಮ ಶಿಖಾ ಪಶ್ಚಿಮ ಎಂಬ ಮೂರು, ಶರೀರದ ಮಿಕ್ಕ ಭಾಗದಲ್ಲಿ ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ ಆಜ್ಞಾ ಎಂಬ ಆರು–ಹೀಗೆ ಒಟ್ಟು ೯ ಚಕ್ರಗಳಿದ್ದು ಇವು ಚೈತನ್ಯದ ಕೇಂದ್ರಸ್ಥಾನಗಳು. ಈ ಚಕ್ರಗಳಿಗೆ ದಳಗಳಿರುತ್ತವೆ. ಈ ದಳಗಳ ಮಧ್ಯದಲ್ಲಿ ಶಿವನಿರುತ್ತಾನೆ. ಅಜಡ–ಚೈತನ್ಯರೂಪನಾದ ಶಿವ. ಆದ್ಯಂತಮಧ್ಯರಹಿತ–ಮೊದಲು ಕೊನೆ ನಡುವೆಗಳಿಲ್ಲದವ, ಶಿವ. ನಾದಬ್ರಹ್ಮ–ಓಂಕಾರಶಬ್ದಾತ್ಮಕ ಶಿವ. ತೆಱಪು–ತೆರಹು, ರೀತಿ. ಅಭಂಗ–ನಾಶವಿಲ್ಲದ, ಮುರಿಯದ. ಭೋಕ್ತ–ಭೋಗಿಸುವವ. ಭೋಕ್ತಾಭೋಕ್ತ–ಭೋಗಿಸುವವ ಮತ್ತು ಭೋಗಿಸದವ. ದೇವದ್ವಯ ಹಿಂಗಿ–ಇಬ್ಬರು ದೇವರೆಂಬುದನ್ನು ತ್ಯಜಿಸಿ. ದೇವ ರಸಭರಿತ–ದಿವ್ಯರಸದಿಂದ ತುಂಬಿದ. ಸಮ್ಯಕ್–ಚೆನ್ನಾದ, ಶುದ್ಧವಾದ. ಆಕಾಶ ತತ್ವ–ಪಂಚಭೂತಳಿಗೆ ಸಂಬಂಧಿಸಿದ ಆಕಾಶ. ಇಟ್ಟಣಿಸು–ದಟ್ಟವಾಗಿ ವ್ಯಾಪಿಸು. ಕುಱುಹು–ಆಕಾರ, ಇಷ್ಟಲಿಂಗ. ಸುಖಾಬ್ಧಿ–ಸುಖಸಮುದ್ರ, ಶಿವ.

ಸ್ವರವಚನ :

೧. ನಾದಬಿಂದುಕಳೆಗತೀತ–ನಾದಬಿಂದುಕಳೆಗಳೆಂಬ ಅವಸ್ಥೆಗಳಿಗೆ ಪೂರ್ವದವ, ಶಿವ. ವೇದವಾದ–ವೇದಗಳಲ್ಲಿ ಪ್ರತಿಪಾದಿತವಾದ ವಿಷಯಚರ್ಚೆ.

೨. ನವ ಅಸಿಧಾರೆ–ಹೊಸ ಖಡ್ಗದ ಅಲಗು. ಪಂಚೀಕರಣದ ಪಂಚೀಕೃತ–ಪಂಚೀಕರಣದಿಂದ ಪಂಚೀಕೃತವಾದ ಭೂತಗಳು. ಉದಾ : ಅರ್ಧಭೂಮಿ ಮತ್ತು ಅದರ ಮಿಕ್ಕರ್ಧದಲ್ಲಿ ನಾಲ್ಕು ಭೂತಗಳು ಸೇರಿ ಆದುದೇ ಭೂಮಿಯ ಪಂಚೀಕರಣ. ಇದರಂತೆ ಅಪ್, ತೇಜ, ವಾಯು, ಆಕಾಶ ಪಂಚೀಕರಣಗಳುಂಟು. ಹೀಗೆ ಮಾಡಲ್ಪಟ್ಟುದೇ ಪಂಚೀಕೃತ. ಸಂಚಿಸು–ಸಮೂಹಗೊಳಿಸು.

ಹಠಯೋಗ–ಶಿವಯೋಗ. ಲಂಬಿಕಾಯೋಗ–ಹಠಯೋಗದ ಒಂದು ಪ್ರಕ್ರಿಯೆ. ನಿರವಯ–ಅವಯವರಹಿತ, ನಿರಾಕಾರನಾದ ಶಿವ, ಅವಿರಳ–ಪರಿಪೂರ್ಣ, ಅಖಂಡಿತನಾದ ಶಿವ.

೩. ತತ್ವವೈದಾರು–ವೀರಶೈವದ ಪ್ರಕಾರ ತತ್ವಗಳು ೩೬. ಆದರೆ ಇಲ್ಲಿ ಅಶುದ್ಧ ತತ್ವಗಳು ೨೪ (ಅಂತಃಕರಣಗಳು ೪, ಜ್ಞಾನೇಂದ್ರಿಯಗಳು ೫, ಕರ್ಮೇಂದ್ರಿಯಗಳು ೫, ತನ್ಮಾತ್ರಗಳು ೫, ಮಹಾಭೂತಗಳು ೫) ಶುದ್ಧಾಶುದ್ಧತತ್ವಗಳು ೬ (ಮಾಯಾ, ಕಾಲ, ಕಲಾ, ವಿದ್ಯಾ, ನಿಯತಿ, ರಾಗ ಪುರುಷ)–ಹೀಗೆ ೩೦ (೫x೬=೩೦) ತತ್ವಗಳನ್ನು ಸೂಚಿಸಿದಂತಿದೆ. ಶಕ್ತಿಸವೇತ 'ಅಸ್ಮಿಪ್ರಕಾಶೇನಂದಾಮಿ' ಎಂಬ ಸ್ವರೂಪದಲ್ಲಿರುವ ಶಕ್ತಿಯಿಂದ ಕೂಡಿದ. ಕಜೆಗೊಳ್–ಗಟ್ಟಿಯಾಗು, ಲಯವಾಗು. ಕರಣೇಂದ್ರಿಯ–ಕರಣಗಳು ೪ (ಪ್ರಕೃತಿ, ಬುದ್ಧಿ, ಅಹಂಕಾರ, ಮನಸ್ಸು), ಇಂದ್ರಿಯಗಳು ೫ (ಶ್ರೋತ್ರ, ತ್ವಕ್, ಚಕ್ಷುಸ್, ಜಿಹ್ವಾ, ನಾಸಿಕಾ), ಅವಗವಿಸು–ಅನುಗ್ರಹಿಸು.

೪. ಪರ–ಶ್ರೇಷ್ಠ. ಪರಾಪರ–ಶ್ರೇಷ್ಠಕ್ಕೆ ಶ್ರೇಷ್ಠ. ಆಮಿಷ–ಹೊನ್ನು ಬೇಕು, ಹೆಣ್ಣು ಬೇಕು, ಮಣ್ಣು ಬೇಕು ಎಂಬುದೇ ಆಸೆ; ಹೊನ್ನಿದ್ದೂ ಹೊನ್ನು ಬೇಕು, ಹೆಣ್ಣಿದ್ದೂ ಹೆಣ್ಣುಬೇಕು, ಮಣ್ಣಿದ್ದೂ ಮಣ್ಣುಬೇಕೆಂಬ ಅತಿಯಾಸೆಯೇ ಆಮಿಷ. ಹೊದ್ದು–ಪಡೆ, ಆಶ್ರಯಿಸು. ಭವಜನ್ಮ–ಮರ್ತ್ಯದ ಬದುಕು. ವೇಧೆ–ದೀಕ್ಷಾತ್ರಯದ ಒಂದು ಭೇದ; ಹಸ್ತಮಸ್ತಕಸಂಯೋಗರೂಪದ ದೀಕ್ಷೆಯಿದು. ತತ್ ತ್ವಂ ಅಸಿ–ಅದು ನೀನೇ ಇರುವಿ, ಪರಬ್ರಹ್ಮನೇ ನೀನು. ಸತ್ತುಚಿತ್ತು ಆನಂದತೀತ–ಸತ್ತುಚಿತ್ತು ಆನಂದದಿಂದ ಕೂಡಿದ (ತೀತ–ಕೂಡಿದ). ಗುರುಲಿಂಗಜಂಗಮ–ಭಕ್ತನನ್ನು ಉದ್ಧರಿಸುವ ಲಿಂಗಪ್ರಭೇದಗಳು. ಇಷ್ಟಕಾಮ್ಯಮೋಕ್ಷವೆಂಬ ಬಟ್ಟೆ–ಇಷ್ಟವಾದ ವಿಷಯಗಳ ಬಿಡುಗಡೆಯೆಂಬ ಮಾರ್ಗ. ಇಷ್ಟಲಿಂಗ–ಗುರು ಕರುಣಿಸಿದ ಕರಸ್ಥಲದ ಲಿಂಗ.

೫. ಅಷ್ಟತನು–ಪಂಚಭೂತ+ಸೂರ್ಯ+ಚಂದ್ರ+ಆತ್ಮ. ಮಣಿಮುಕುರ–ಮಣಿಖಚಿತವಾದ ಕನ್ನಡಿ. ಪ್ರತಿಯಿಟ್ಟು–ಇದಿರಿಟ್ಟು.

೬. ನಾಹಂ–ನ+ಅಹಂ, ನಾನು ಇಲ್ಲ. ಸೋಹಂ–ಸಃ+ಅಹಂ, ಅವನೇ ನಾನು. ಕೋಹಂ–ಕಃ+ಅಹಂ, ನಾನು ಯಾರು? ದಾಸೋಹಂ–ದಾಸಃ+ಅಹಂ, ನಾನು ದಾಸನು. ತುರೀಯ–ಜಾಗೃತ್ ಸ್ವಪ್ನ ಸುಷುಪ್ತಿಗಳೆಂಬ ಅವಸ್ಥಾತ್ರಯಗಳಿಗೆ ಮೀರಿದ ಅವಸ್ಥೆ. ಅರತ–ಒಂದಾದ, ಇಂಗಿದ. ಆರ್ದ್ರಸಾರ್ಣವಾರ್ಕ–ಆರ್ದ್ರವಾಗಿ ಚಲಿಸುವ ಸೂರ್ಯ (?). ವಿಕಚಿಪ–ವಿಕಸಿಪ, ಅರಳುವ. ಸ್ವಯ–ತನ್ನ. ಚಿದಪ್ರಕಾಶ–ಜ್ಞಾನಪ್ರಕಾಶ. ವೇದ್ಯ–ಅನುಭವ. ಸುಖಪ್ರದಪ್ರಯುಕ್ತ ಕಲೆ–ಸುಖಪ್ರದವಾಗಿ ಕೂಡಿಕೊಂಡಿರುವ ರೀತಿ.

೭. ಸಮ್ಯಕ್‌ಜ್ಞಾನಕರ್ಮ–ಶುದ್ಧವಾದ ಜ್ಞಾನಕ್ರಿಯೆ. ಕರ್ಮಭಕ್ತಿ–ಕರ್ಮಾಸಕ್ತಭಕ್ತಿ. ಆಂತಲಿ–ಹೊಂದಿದಲ್ಲಿ. ಕರ್ಮಕಪಟದಿ–ಕಪಟಕರ್ಮದಲ್ಲಿ. ಆಳ್–ಮುಳುಗು. ಕಂತುಹರ–ಶಿವ. ಅಂತು–ರಹಸ್ಯ.

೮. ಭಕ್ತ್ಯಂಗನೆ–ಭಕ್ತಿಸತಿ. ಚಿಚ್ಛಕ್ತಿ–ಜ್ಞಾನಶಕ್ತಿ. ಕ್ರಿಯಾಂಗನೆ ಕರ್ಮಾಂಗನೆ ದಿವ್ಯಾಂಗನೆ ಮಾಯಾಂಗನೆ ಭಾವಾಂಗನೆ ಕಾಯಾಂಗನೆ ಇವುಗಳನ್ನು ಮೀರಿ ಜ್ಞಾನಾಂಗನೆಯನ್ನು ಹೊಂದಿ ಮಂತ್ರಶಕ್ತಿ ಆದಿಶಕ್ತಿ ತಂತುಶಕ್ತಿ ವೀರಶಕ್ತಿ ಜಯಶಕ್ತಿ ಮುಕ್ತಿಶಕ್ತಿಗಳನ್ನು ಗಳಿಸಬೇಕೆಂಬುದು ಈ ಪದ್ಯದ ಆಶಯ.

೯. ಲಿಂಗಲಿಂಗವಂಗವಾಗಿ–ಇಷ್ಟಪ್ರಾಣಭಾವವೆಂಬ ತ್ರಿವಿಧಲಿಂಗ ಮತ್ತು ಆಚಾರಲಿಂಗ ಗುರುಲಿಂಗ ಶಿವಲಿಂಗ ಚರಲಿಂಗ ಪ್ರಸಾದಲಿಂಗ ಮಹಾಲಿಂಗವೆಂಬ ಷಡ್ಲಿಂಗ ಹೀಗೆ ನವಲಿಂಗಮಯ ಶರೀರವಾಗಿ. ಇಂಗಿತ–ರಹಸ್ಯ. ಚಿಲ್ಲಿಂಗ–ಜ್ಞಾನಲಿಂಗ. ಸಗುಣನಿರ್ಗುಣಂಗಳೆಯ್ದದ–ಸಾಕಾರನಿರಾಕಾರಾತೀತ. ನಿಗಮಾಗಮ–ವೇದ ಮತ್ತು ಆಗಮ. ದಳ ಹೃದಯಕಮಲದಳ. ಹಂಸ–ಹೃದಯಕಮಲದಲ್ಲಿ ಚಲಿಸುವ ಜೀವಹಂಸ. ನಳಿನಮಧ್ಯದಲ್ಲಿ–ಹೃದಯಕಮಲದ ಮಧ್ಯದಲ್ಲಿ. ಸುಭಟರುಗಳನ್ವಯರ–ಇಂದ್ರಿಯಗಳೆಂಬ ಐದು ಜನ ಯೋಧರ. ನಿಟಿಲಾಕ್ಷಿ–ಹಣೆಯಲ್ಲಿಯ ಆಜ್ಞಾಚಕ್ರದಲ್ಲಿರುವ ಪ್ರಜ್ಞಾಚಕ್ಷು. ಘಟ–ಶರೀರ. ಸುರಾಳನಿರಾಳ–ಸಾಕಾರ, ನಿರಾಕಾರ. ಇಟ್ಟಣಿಸು–ದಟ್ಟವಾಗಿ ವ್ಯಾಪಸು, ತುಂಬು.

೧೦. ಮಾಯೆ–ಅಜ್ಞಾನ. ಪಾಯುಪಾಣಿಪಾದೇಂದ್ರಿಯವಾಗುಹ್ಯ–ಪಾಯು ಪಾಣಿ ಪಾದ ಇಂದ್ರಿಯ ವಾಕ್ ಗುಹ್ಯವೆಂಬ ಐದು ಕರ್ಮೇಂದ್ರಿಯಗಳು. ಆಯತ–ಸಾಮರ್ಥ್ಯ. ಸಾಯಸ–(ಸ+ಆಯಾಸ) ಕಷ್ಟ. ನೇತ್ರ(ಕಣ್ಣು)ದಲ್ಲಿ ಶಿವಲಿಂಗ, ಗಾತ್ರ(ಶರೀರ)ದಲ್ಲಿ ಜಂಗಮಲಿಂಗ, ಶ್ರೋತ್ರ(ಕಿವಿ)ದಲ್ಲಿ ಪ್ರಸಾದಲಿಂಗ, ನಾಸಿಕ(ಮೂಗು)ದಲ್ಲಿ ಆಚಾರಲಿಂಗ, ಜಿಹ್ವೆ(ನಾಲಗೆ)ಯಲ್ಲಿ ಗುರುಲಿಂಗ ಸ್ಥಾಪ್ಯವಾಗುವುದೇ ಅಂಗವು ಲಿಂಗವಾಗುವ ಬಗೆ. ವೇಧಿಸು–ಅಪ್ಪಳಿಸು, ತಾಗು. ದ್ರಷ್ಟದರುಶನದೃಶ್ಯ–ನೋಡುವವ, ನೋಡುವಿಕೆ, ನೋಡಿಸಿಕೊಳ್ಳುವುದು (ಜ್ಞಾತೃಜ್ಞಾನಜ್ಞೇಯವೆಂಬ ತ್ರಿಪುಟಿ). ಸೊಪ್ಪಡಗಿ–(ಸೊಪ್ಪ ಸಪ್ಪಳ, ಶಬ್ದ ?) ಸಂಪೂರ್ಣ ಅಳಿದು.

೧೧. ಸಾಮ್ಯ–ಸಮತ್ವ, ಬ್ರಹ್ಮ (ಸಮತ್ವಂ ಬ್ರಹ್ಮ ಉಚ್ಯತೇ). ನಿಱುಗೆ–ವ್ಯವಸ್ಥೆ, ಕ್ರಮ. ಯಮನು–(ಯಮಿಯು), ಮನೋನಿಗ್ರಹಿ. ಸ್ವಯವಾದ–ತಾನೇ ತಾನಾದ.

೧೨. ವೇಧಿಸಿದ–ವೇಧಾದೀಕ್ಷೆಹೊಂದಿದ. ಭಾನುಕೋಟಿಪ್ರಭೆ–ಕೋಟಿ ಸೂರ್ಯರ ಬೆಳಕು. ಸ್ವಾನುವು (ಸ್ವ+ಅನುವು) (ಲಿಂಗರೂಪಾದ) ತನ್ನನ್ನು ಅನುಸರಿಸಿರುವಿಕೆಯು.

೧೩. ಅಂಗಕರಣಭಾವ–ತನುಮನಭಾವ. ಭೇದ–ರೀತಿ. ಪಾವಕ–ಬೆಂಕಿ. ಕಾಷ್ಟ–ಕಟ್ಟಿಗೆ. ಅನಲ–ಬೆಂಕಿ. ದೃಕ್–ಕಣ್ಣು.

೧೪. ಕುಱುಹು–ಸಾಕಾರತ್ವ. ನಿಱುಗೆ–ಕ್ರಮ. ವೇದಿಸುವ ವೇದ್ಯ–ತಿಳಿಸುವ ತಿಳಿವಳಿಕೆ. ನಿಟಿಲತಟ–ಹಣೆಯ ಭಾಗ, ಆಜ್ಞಾಚಕ್ರ. ಊರ್ಧ್ವದ ತಟ–ಎತ್ತರವಾದ ಅಂಚು. ಅಭೀಷ್ಟ–ಸ್ವೀಕಾರಕ್ಕೆ ತಕ್ಕ.

೧೫. ಮಧುಕರ–ಭ್ರಮರ, ದುಂಬಿ. ಹೊಱೆಯೇರಿ–ಸಂತೋಷದಿಂದ ಉಬ್ಬಿ. ಅಂಬರ–ಶೂನ್ಯ, ಬಯಲು. ಬಿಂಬ–ಚಿತ್ತು. ಕಂಬಳಿ–ಪರಿಪೂರ್ಣಜ್ಞಾನ.

೧೬. ಪ್ರಾಣಪ್ರಕೃತಿ–ಪ್ರಾಣದ ಸ್ವಭಾವ. ಸುಕೃತ–ಪುಣ್ಯ. ದುಃಕೃತ–ಪಾಪ. ವಾಗುಮನಕೆ ನಿಲುಕದ–ಮಾತು ಮನಗಳಿಗೆ ಮೀರಿದ. ವಾಗುಮಾತ್ರದ ಅಱಿವು–ಮಾತಿನಲ್ಲಿ ಮಾತ್ರ ವ್ಯವಹರಿಸುವ ಜ್ಞಾನ.

೧೭. ಸಾವಧಾನ–ಎಚ್ಚರ. ಕುಱುಹು–ಸ್ಥೂಲತ್ವ. ನಿಱುಗೆ–ಕ್ರಮ. ಕಱೆಗೊಳ್–ಗಟ್ಟಿಯಾಗು. ನಿಃಪತಿ–ಲಯ. ಅನಘ–ಪಾಪರಹಿತ. ಸ್ವಯ–ತನ್ನಿಂದ.

೧೮. ಕಾಯಕಪಟ–ಕಾಯದ ಕುಟಿಲತೆ. ಅವಶಗತ–ವಶವಲ್ಲದ. ಆಯಸ–ಕಬ್ಬಿಣ. ಆಯಸ್ಕಾಂತ–ಸೂಜಿಗಲ್ಲು. ತರಣಿ–ಸೂರ್ಯ. ಪೇಯಾಪೇಯ–ಕುಡಿಯಲು ಯೋಗ್ಯ ಮತ್ತು ಕುಡಿಯಲು ಅಯೋಗ್ಯ.

೧೯. ಚಿದ್ಭರಿತ–ಜ್ಞಾನದಿಂದ ತುಂಬಿದ. ಷಡುಚಕ್ರ–ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧಿ, ಆಜ್ಞೇಯಗಳೆಂಬ ದೇಹದಲ್ಲಿಯ ೬ ಚಕ್ರಗಳು. ಷಡುವರ್ಣ–೬ ಚಕ್ರಗಳಿಗೆ

ಸಂಬಂಧಿಸಿದ ಪೀತ, ಶ್ವೇತ, ಹರಿತ, ಮಾಂಜಿಷ್ಟ, ಕಪೋತ, ಮಾಣಿಕ್ಯವೆಂಬ ೬ ಬಣ್ಣಗಳು. ಷಡುದೇವತೆ–೬ ಚಕ್ರಗಳಿಗೆ ಸಂಬಂಧಿಸಿದ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ, ಮಹೇಶ್ವರ ಎಂಬ ೬ ದೇವತೆಗಳು. ಷಡುರುಚಿ–ಉಪ್ಪು, ಕಾರ, ಹುಳಿ, ಒಗರು, ಕಹಿ, ಸಿಹಿ. ಷಡಾಕ್ಷರ–ಓಂನಮಃ ಶಿವಾಯ ಎಂಬ ಮಂತ್ರ. ಷಡುವರ್ಗ–ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ. ಷಡ್‌ಭ್ರಮೆ–ಜಾತಿಭ್ರಮೆ, ವರ್ಣಭ್ರಮೆ, ಆಶ್ರಮಭ್ರಮೆ, ಕುಲಭ್ರಮೆ, ಗೋತ್ರಭ್ರಮೆ. ಷಡುಕರ್ಮ–ನಡೆ, ನುಡಿ, ರುಚಿ, ನೋಟ, ಸಂಗ, ತೃಪ್ತಿ. ಷಡುಲಿಂಗ–ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಚರಲಿಂಗ, ಪ್ರಸಾದಲಿಂಗ, ಮಹಾಲಿಂಗ. ಷಡುಅಂಗ–ಪೃಥ್ವಿ, ಅಪ್, ತೇಜ, ವಾಯು, ಆಕಾಶ, ಆತ್ಮ. ಷಡುಹಸ್ತ–ಸುಚಿತ್ತ, ಸುಬುದ್ಧಿ, ನಿರಹಂಕಾರ, ಸುಮನ, ಸಜ್ಞಾನ, ಸದ್ಭಾವ. ಷಡುಮುಖ–ಘ್ರಾಣೇಂದ್ರಿಯ, ಜಿಹ್ವೇಂದ್ರಿಯ, ನೇತ್ರೇಂದ್ರಿಯ, ತ್ವಗಿಂದ್ರಿಯ, ಶ್ರೋತ್ರೇಂದ್ರಿಯ, ಹೃದಯೇಂದ್ರಿಯ. ಷಡುಷಡುತತ್ವ–೨೫ ಆತ್ಮತತ್ವ, ೧೦ ವಿದ್ಯಾತತ್ವ, ೧ ಶಿವತತ್ವ ಹೀಗೆ ೩೬ ತತ್ವಗಳು. ಷಡುಶೀಲ–ಅಕ್ರೋಧ, ಸತ್ಯವಚನ, ಕ್ಷಮೆ, ಭವಿಭಕ್ತಭೇದ, ಅನುಗ್ರಹ, ಸತ್ಪಾತ್ರ ದ್ರವ್ಯಾರ್ಪಣ. ಷಡುವ್ರತ–ಗುರುವಾಜ್ಞೆಯನ್ನು ಪಾಲಿಸುವುದು ಗುರುವ್ರತ, ಲಿಂಗಪೂಜೆಯಲ್ಲಿ ನಿಯತಾತ್ಮನಾಗಿರುವುದು ಲಿಂಗವ್ರತ, ಜಂಗಮವೇ ಮಹಾಲಿಂಗವೆಂದರಿದು ಆತ್ಮಾರ್ಪಣ ಮಾಡುವುದೇ ಚರವ್ರತ, ಪ್ರಸಾದಸೇವನೆಯು ಪ್ರಸಾದವ್ರತ, ಪಾದೋದಕ ಸೇವನೆಯು ಪಾದೋದಕವ್ರತ, ಅಷ್ಟಾವರಣದಲ್ಲಿ ಲೀಯವಾದ ಭಕ್ತಿಯೇ ಭಾಕ್ತಿಕವ್ರತ. ಷಡುದರುಶನ–ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರಮೀಮಾಂಸೆ. ಷಡುಶಕ್ತಿ–ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿಚ್ಛಕ್ತಿ. ಷಟ್ಕಳೆ–ನಿವೃತ್ತಿಕಳೆ, ಪ್ರತಿಷ್ಠಾಕಳೆ, ವಿದ್ಯಾಕಳೆ, ಶಾಂತಿಕಳೆ, ಶಾಂತ್ಯತೀತಕಳೆ, ಶಾಂತ್ಯತೀತೋತ್ತರಕಳೆ. ಷಡುತ್ರಿಂಶತಿತತ್ವ–೫ ಕರ್ಮೇಂದ್ರಿಯ, ೫ ಜ್ಞಾನೇಂದ್ರಿಯ, ೫ ಪ್ರಾಣಾದಿವಾಯು, ೫ ಶಬ್ದಾದಿ ವಿಷಯಗಳು, ೪ ಚಿತ್ತ ಮನ ಬುದ್ಧಿ ಅಹಂಕಾರ ಮತ್ತು ೧ ಜೀವ ಹೀಗೆ ೨೫ ಆತ್ಮತತ್ವಗಳು; ೫ ಸಾದಾಖ್ಯಗಳು ೫ ಕಲೆಗಳು ೧ ಶಿವತತ್ವ ಹೀಗೆ ೧೧ ಲಿಂಗತತ್ವಗಳು ಸೇರಿ ೩೬ ತತ್ವಗಳು. ಷಡುಸ್ಥಲ–ಭಕ್ತ, ಮಾಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಒಂದೊಂದು ಸ್ಥಲದಲ್ಲಿ ಭಕ್ತನ ಭಕ್ತ, ಭಕ್ತನ ಮಾಹೇಶ್ವರ ಹೀಗೆ ೬ ಸ್ಥಲಗಳು, ಒಟ್ಟು ೩೬ ಸ್ಥಲ. ತ್ರಿವಿಧತನು–ಸ್ಥೂಲತನು, ಸೂಕ್ಷ್ಮತನು, ಕಾರಣತನು. ತ್ರಿವಿಧಮನ–ಮನ, ಮನನ, ಮನನೀಯ. ತ್ರಿವಿಧಜೀವ–ವಿಶ್ವ, ತೈಜಸ, ಪ್ರಾಜ್ಞ. ತ್ರಿವಿಧಗುಣ–ಸತ್ವ, ರಜ, ತಮ. ತ್ರಿವಿಧತಾಪ–ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕ. ತ್ರಿವಿಧಮಲ–ಆಣವ, ಮಾಯಾ, ಕಾರ್ಮಿಕ. ತ್ರಿವಿಧಸತ್ವ–ವ್ಯಾವಹಾರಿಕಸತ್ವ, ಪಾರಮಾರ್ಥಿಕಸತ್ವ, ಪ್ರಾತಿಭಾಸಕಸತ್ವ. ತ್ರಿವಿಧವಸ್ಥೆ–ಜಾಗ್ರ, ಸ್ವಪ್ನ, ಸುಷುಪ್ತಿ. ತ್ರಿವಿಧತತ್ವ–೨೫ ಆತ್ಮತತ್ವ, ೧೦ ವಿದ್ಯಾತತ್ವ, ೧ ಶಿವತತ್ವ ಹೀಗೆ ತ್ರಿವಿಧವಾದ ೩೬ ತತ್ವಗಳು. ತ್ರಿವಿಧಲಿಂಗ–ಇಷ್ಟ, ಪ್ರಾಣ, ಭಾವ. ಲಿಂಗೋದಕತ್ರಿವಿಧ–ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ. ತ್ರಿವಿಧಪ್ರಸಾದ–ಶುದ್ಧಪ್ರಸಾದ, ಸಿದ್ಧಪ್ರಸಾದ, ಪ್ರಸಿದ್ಧಪ್ರಸಾದ. ಏಕಮೇವೋರುದ್ರನದ್ವಿತೀಯಾಯ–ರುದ್ರನೊಬ್ಬನೇ ಇದ್ದಾನೆ, ಅವನಿಗಿಂತ ಭಿನ್ನವಾದುದು ಇಲ್ಲ. ಏಕಯೇವೋದೇವ–ಒಬ್ಬನೇ ದೇವನು. ಏಕಮೂಲಂ–ಒಂದೇ ಮೂಲವಾಗಿರುವ. ಪ್ರಣಮ ಏಕಾಕ್ಷರ–ಓಂ.

೨೦. ಸುರತ–ಕಾಮಭೋಗ. ಸ್ವಯ–ತನ್ನ, ಸೋರ್ಮುಡಿ–ಬಿಚ್ಚಿದ ತುರುಬು. ಗುಡಿಗಟ್ಟು–ಉತ್ಸಾಹಗೊಳ್ಳು. ಪಂಚಮಹಾವಾದ್ಯ–೫ ಬಗೆಯ ಗೌರವಪೂರ್ಣ ವಾದ್ಯಗಳು. ಉಣ್ಮು–ಉಕ್ಕು,

ಹೊರಚೆಲ್ಲು. ಘರ್ಮಜಲ-ಬೆವರು. ಬಾವನ್ನ-ಐವತ್ತೆರಡು (ಷಟ್ಚಕ್ರದಳದ ಮಂತ್ರಾಕ್ಷರಗಳು). ತೀವು-ತುಂಬು.

ಉಯ್ಯಲಪದ :

ಖಲ್ವಿದಂ ಬ್ರಹ್ಮ (ಖಲು+ಇದಂ+ಬ್ರಹ್ಮ)-ಇದು (ಜಗತ್ತು) ನಿಶ್ಚಯವಾಗಿ ಬ್ರಹ್ಮವು. ಅಜಡಾದ್ವೈತಿ-ಚೇತನಾದ್ವೈತಿ, ವೀರಶೈವ. ಕರ್ಮ-ಸಕಾಮಕರ್ಮ. ನಿಃಕರ್ಮ-ನಿಷ್ಕಾಮಕರ್ಮ. ಉತ್ತರಾವಾಸ-ಮೇಲೆ ವಾಸಿಸುವ. ಅಜಿಕೆಗೆಟ್ಟ-ಜ್ಞಾನಕ್ಕೆ ಮೀರಿದ. ವಂಶ-ಬಿದಿರು. ಕುಱುಹು-ಇಷ್ಟಲಿಂಗ. ಭಕ್ತಿಶಕ್ತ್ಯಾದಿಯಾದ ಶಕ್ತಿ-ಆದಿಶಕ್ತಿ. ಶಕ್ತಿ ಇಚ್ಛಾಜ್ಞಾನದಾಶಕ್ತಿ-ಕ್ರಿಯಾಶಕ್ತಿ, ಇಚ್ಛಾಶಕ್ತಿ, ಜ್ಞಾನಶಕ್ತಿ. ಸುಮನ-ಶುದ್ಧಮನಸ್ಸು. ಉತ್ತರಕಕ್ಷೆ-ಉತ್ತರಭಾಗ, ಬ್ರಹ್ಮರಂಧ್ರ, ಪೂರ್ವಾದ್ರಿ-ಶಿಖಾಚಕ್ರ, ಪಶ್ಚಿಮದ ಪದ-ಪಶ್ಚಿಮಚಕ್ರ. ಆಕಾರ-ಸಾಕಾರ, ಇಷ್ಟಲಿಂಗ. ನಿರವಯ-ನಿರಾಕಾರ. ಸಕಲನಿಃಕಲ-ಪ್ರಾಣಲಿಂಗ. ಶಿಕ್ಷಕನಿಗ್ರಹ-ಶಿಕ್ಷಕನಾಗಿ ನಿಗ್ರಹಿಸುವವ. ಭರ್ಗ-ಶಿವ. ನಿಬ್ಬೆರಗು-ತನ್ಮಯ. ಮುಷ್ಟ-ಅಪಹರಿಸಿದ. ವರದಕರ-ವರವನ್ನು ನೀಡುವ ಹಸ್ತವುಳ್ಳವ. ಶಕ್ತಿ-ಚಿಚ್ಛಕ್ತಿ. ಸಾರ್ಥ-ಸಂಪತ್ತು. ಪರಕೆ ಪರ-ಶ್ರೇಷ್ಠಕ್ಕೆ ಶ್ರೇಷ್ಠ. ಷಡುಗುಣ-ಐಶ್ವರ್ಯ, ಜ್ಞಾನ, ಯಶಸ್, ಶ್ರೀ, ವೈರಾಗ್ಯ, ಧರ್ಮ. ಕ್ರತುವವೇಳ್ದು-ಯಜ್ಞದಲ್ಲಿ ಸುಡುವ ಕೆಲಸಮಾಡಿ. ಶ್ರುತಿತತಿ-ವೇದಸಮೂಹ. ದೂರ್ವವು(ದೂರುವವು)-ನಿಂದಿಸುವವು, ದೈವಮಂ ಶೂನ್ಯವೆಂಬಾ ಬೇರೊಂದು ದೈವವುಂಟೆಂಬ-ಶಿವನನ್ನು ನಿರಾಕರಿಸಿ ಕರ್ಮವೇ ದೈವವೆನ್ನುವ ಕರ್ಮಕಾಂಡಿಗಳು. ಸಿದ್ಧಿಗೆಯಿದ-ಸಿದ್ಧಿ ಪಡೆದ. ಕಾಪಾಲಿ-ಶಿವ. ಕಪಟಕರ್ಮ-ಸಕಾಮಕರ್ಮ. ನೆಮ್ಮು-ಹೊಂದು, ಆಶ್ರಯಿಸು. ಆರುದರುಶನ-ನ್ಯಾಯ, ವೈಶೇಷಿಕ, ಸಾಂಖ್ಯ, ಯೋಗ, ಪೂರ್ವಮೀಮಾಂಸೆ, ಉತ್ತರಮೀಮಾಂಸೆ. ಕೀಱಿಕಟ್ಟು- ಚೀರಿ ಸಿದ್ಧಾಂತವನ್ನು ಸ್ಥಾಪಿಸು. ಆಱಱಿಂ-ಆರುದರ್ಶನಗಳಿಂದ. ಅಜ-ಬ್ರಹ್ಮ. ಯಜನ-ಪೂಜೆ, ಯಜ್ಞ. ಯಜಿಪರು-ಯಜ್ಞಮಾಡುವರು ಪೂಜೆಮಾಡುವರು. ಅಜಪೆ-ಹಂಸವೆಂಬ ಮಂತ್ರ, ಅಜಪಾಯಜ್ಞ (?). ತತ್ವಮಸೀತಿ (ತತ್+ತ್ವಂ+ಅಸಿ+ಇತಿ)-ಈ ಪ್ರಕಾರ ಅವನೇ ನೀನು ಇರುವಿ. ವಚಸ್-ಮಾತು. ಭಾವವೇ ಭ್ರಮೆಗೊಂಡಿಹ ದುರ್ಭಾವದುದ್ಭವದ ಭವ-ಭ್ರಮೆಗೊಂಡ ಭಾವರೂಪದ ದುರ್ಭಾವದ ಪ್ರಪಂಚ. ನಾಹಂ(ನ+ಅಹಂ)-ನಾನಲ್ಲ. ಸೋಹಂ (ಸಃ+ಅಹಂ)-ಅವನೇ ನಾನು. ಕೋಹಂ (ಕಃ+ಅಹಂ)-ನಾನು ಯಾರು? ಪರಿವೃಢ-ಗಟ್ಟಿಯಾದ. ಪರಿಭವ-ಯಾತನೆ. ನೆಮ್ಮು-ಆಶ್ರಯಿಸು, ಹೊಂದು.

ಮುಕ್ತಿಕ್ಷೇತ್ರ :

ಸಕಲನಿಷ್ಕಲಕ್ಕತೀತ-ಸಾಕಾರ ನಿರಾಕಾರಗಳಿಗೆ ಮೀರಿದ. ವಿಕಳ-ಅಪೂರ್ಣ. ನಿಗಮ-ವೇದ. ವಾಸವ-ಇಂದ್ರ. ಸವಿತ-ಸೂರ್ಯ. ಓಷಧೀಶ-ಚಂದ್ರ. ಮಕರ ಕುಂಡಲ-ಕುಬೇರ(?). ಭೇದಪ್ರಮೇಯಕಪ್ರೇಯ-ಭಿನ್ನಾತ್ಮಕ ವಿಷಯಗಳಿಗೆ ಮೀರಿದ. ಅತರ್ಕ್ಯ-ತರ್ಕಕ್ಕೆ ನಿಲುಕದ. ಭೂತಸೀತವೆಲ್ಲಕೆ (ಭೂತ+ಅಸಿ+ಇತಿ+ಎಲ್ಲಕೆ)-ಭೂತಕಾಲ ವರ್ತಮಾನಕಾಲಗಳಿಗೆ. ಸಾಧ್ಯಸಿದ್ಧ-ಸಾಧ್ಯರು, ಸಿದ್ಧರು. ಸುಬೋಧ್ಯ-ಚೆನ್ನಾಗಿ ತಿಳಿಯಲು ಯೋಗ್ಯ. ಷಡ್ಗುಣ-ಐಶ್ವರ್ಯ, ಜ್ಞಾನ, ಯಶಸ್, ಶ್ರೀ, ವೈರಾಗ್ಯ, ಧರ್ಮ. ವೇದ್ಯ-ತಿಳಿಯಲು ಯೋಗ್ಯ. ಚಿತ್-ಜ್ಞಾನ. ತ್ರಿವಿಧವಾಗಿ-ನಾದಬಿಂದುಕಳೆಯಾಗಿ. ವಸ್ತು-ಶಿವ, ಲಿಂಗ. ಅಕ್ಷರತ್ರಯವು-ಅಉಮ. ಪ್ರಣಮ-ಓಂ. ಉತ್ತರೀಯ-ಉತ್ತರೋತ್ತರ. ಒತ್ತರ-

ಒತ್ತಡ, ದಟ್ಟ. ಸತ್–ಇರುವಿಕೆ, ಅಚರ. ಚಿತ್–ಚರ. ನಾಮರೂಪು–ಸೃಷ್ಟಿ. ನೇತಿ (ನ+ಇತಿ)–ಇಲ್ಲ ಎಂಬುದು. ಚಿದ್ವಿವರ್ತ–ಚಿತ್ತಿನಲ್ಲಿ ತೋರುವ. ಧರಣಿ–ಭೂಮಿ. ಸರಸಿ–ನೀರು. ಮರುತ ಮಿತ್ರ–ಬೆಂಕಿ. ಅಸ್ತಿ–ಇರುತ್ತದೆ (ಸದ್ರೂಪ). ಭಾತಿ–ಪ್ರಕಾಶಿಸುತ್ತದೆ (ಚಿದ್ರೂಪ). ಶುದ್ಧಜ್ಞಪ್ತಿ–ಶುದ್ಧಜ್ಞಾನರೂಪ. ಶಿವಾತ್ಮವಿದ್ಯೆ–ಶಕ್ತಿ. ಅವಿದ್ಯೆ–ಮಾಯೆ. ಆತ್ಮವಿದ್ಯೆ–ಶಕ್ತಿ. ವಹ್ನಿ–ಬೆಂಕಿ. ಸುಮನ–ಒಳ್ಳೆಯ ಮನಸ್ಸು. ಹಮ್ಮು–ಅಹಂಕಾರ. ಪ್ರತ್ಯಗಾತ್ಮ–ಆಂತರಿಕ ಆತ್ಮ. ಹರ್ತ–ಸಂಹಾರಕರ್ತ, ಶಿವ. ಅಂಡಲೆ–ಬೆನ್ನಟ್ಟು, ಕಾಡು. ದಿಂಡುಗೆಡೆ–ಮರದ ತುಂಡಿನಂತೆ ನಿಡಿದಾಗಿ ಬೀಳು. ಬೇವಸ–ಕಷ್ಟ, ದಾವತಿ–ತೊಂದರೆ, ದುಃಖ. ಆಳುತೇಳುತ–ಮುಳುಗುತ್ತ ತೇಲುತ್ತ. ಅಳಿಪು–ಆಸೆ. ಪಾರದ್ವಾರ–ಪರಸ್ತ್ರೀಗಮನ. ಗದಕಿತನ–ಕಪಟತನ. ಬೇಳ್ವೆ–ಸುಡುವಿಕೆ. ಜಿನುಗು–ಗೋಣಗು, ಹಲುಬು. ಅಳುಬ–ಅಳುಪ, ಆಸೆಮಾಡನು. ಕಳಲು–ಸಡಿಲಾಗು. ಪ್ರಕಟು–ತೋರಿಕೆ. ಸಂಚಿತ–ಸಂಚಿತಕರ್ಮ. ಪರಿಭವ–ಅಪಮಾನ, ಯಾತನೆ. ಅಱಿತು–ಹಿಂಗಿ, ಬತ್ತಿಹೋಗಿ. ರಜ್ಜು–ಹಗ್ಗ. ಉಜ್ಜುಗ–ಉದ್ಯೋಗ. ಪಜ್ಜೆಗೆ–ಹೆಜ್ಜೆಗೆ, ಮಾರ್ಗಕ್ಕೆ. ಅಂಧಜ್ಞಾನ–ಕುರುಡುಭಾವ. ಭೂತಪಂಚಕ ಪೃಥ್ವಿ, ಅಪ್, ತೇಜ, ವಾಯು, ಆಕಾಶಗಳೆಂಬ ೫ ಭೂತಗಳು. ವಾತವಹ್ನಿಯಂತರಿಕ್ಷ–ಪಂಚಭೂತದ ಘಟಕಗಳಾದ ಗಾಳಿ, ಬೆಂಕಿ, ಆಕಾಶ ಇವು ಜೀವದ ಅಂಶಗಳು. ಶೀತಳಂಧರಿತ್ರಿ–ಪಂಚಭೂತದ ಘಟಕಗಳಾದ ನೀರು, ಭೂಮಿ ಇವು ದೇಹದ ಅಂಶಗಳು. ವೀತಶಾಂತ(?)–ಶಾಂತತೆಯನ್ನು ಕಳೆದುಕೊಂಡ. ಪಂಚಬ್ರಹ್ಮ–ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ. ಪಂಚಲಿಂಗ–ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಆಚಾರಲಿಂಗ, ಗುರುಲಿಂಗ. ಬಿತ್ತರ–ವಿಸ್ತಾರ. ಕ್ಷಮಾದಮಾ–ಬಾಹ್ಯ ಸಹನಶೀಲತೆ ಮತ್ತು ಆಂತರಿಕ ಸಹನಶೀಲತೆ. ಒತ್ತಕ–ದಟ್ಟ. ಬೆಗಡು–ಭಯ, ವಿಸ್ಮಯ. ತಿತಿಕ್ಷೆ–ತಾಳ್ಮೆ, ಸಹನೆ. ದಾಂತಿ–ಮನೋನಿಗ್ರಹ. ತೆಱಪುಗೊಳ್–ವ್ಯಕ್ತವಾಗು. ಸಯಶ–ವಿಜಯಯುಕ್ತ. ಫೇನಬುದ್ಬುದ–ನೊರೆ, ತೆರೆ. ನಿಸ್ಪೃಹ–ಇಚ್ಛಾರಹಿತ. ಹವಿ–ಬೆಂಕಿ(?). ಕವರ್–ಸೆಳೆದುಕೊಳ್ಳು, ಅಪಹರಿಸು. ವಿದ್ಯುಲ್ಲತೆ–ಮಿಂಚು. ಅವರಿದ–ಅಮರಿದ, ಹಿಡಿದ. ಅವಗವಿಸು–ಅವಗ್ರಹಿಸು, ಅನುಗ್ರಹಿಸು. ಯದಾ–ಯಾವಾಗ. ಗಂಧವಹನ–ಗಾಳಿ. ಮೋಷ–ಕಳೆದುಹೋದ. ಪೂಸಿ–ಪುಸಿ, ಹುಸಿ. ಅಜಸುನಾಳ–ಬ್ರಹ್ಮನಾಳ. ಇಂದುರವಿ–ಇಡಾಪಿಂಗಳನಾಡಿ. ರಸನೆ–ನಾಲಗೆ. ಪರುಶನೇಂದ್ರಿಯ–ಸ್ಪರ್ಶನೇಂದ್ರಿಯ, ತ್ವಕ್ಕು. ನೆರವಿ–ಸಮೂಹ. ಘೃತ–ತುಪ್ಪ. ಶ್ರುತಿ–ಶಾಸ್ತ್ರ. ಉಪಾಧಿ–ವಿಘ್ನ, ಮೋಸ. ಯಾನ–ಹೋಗುವಿಕೆ. ಕಾಕುಬಳಕೆ–ತಪ್ಪು ನಡೆವಳಿಕೆ. ನಾಕಲೋಕ–ಸ್ವರ್ಗಲೋಕ. ಧಾಮ–ಮನೆ.

❖❖

ಕೊಂಡಗುಳಿ ಕೇಶಿರಾಜನ ಕೃತಿಗಳು

ಸಂಪಾದಕರು
ಡಾ. ಎಂ. ಎಂ. ಕಲಬುರ್ಗಿ

೧೯೯೯

ವೀರಶೈವ ಅಧ್ಯಯನಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಡಂಬಳ–ಗದಗ

*

ನಮನ

ಪ್ರಭುವರ್ಗ, ಪುರೋಹಿತವರ್ಗ, ಪುರುಷವರ್ಗಗಳ ಕೃತಕ "ಸ್ಥಾಪನಾವ್ಯವಸ್ಥೆ"ಯನ್ನು ವಿರೋಧಿಸಿ "ಜಂಗಮವ್ಯವಸ್ಥೆ" ಯನ್ನು ಸ್ಥಾಪಿಸಲು ಉದಯಿಸಿದ ಶರಣ ಚಳುವಳಿ–ಶರಣಸಾಹಿತ್ಯಗಳು ಸಮಾಜದೊಂದಿಗೆ ಸಂಘರ್ಷ ನಡೆಸುತ್ತಲೇ ಬೆಳೆದುಬಂದವು. ಹೀಗಾಗಿ ಆ "ಸ್ಥಾವರವ್ಯವಸ್ಥೆ"ಯ ಉಪೇಕ್ಷೆ, ಮಾತ್ಸರ್ಯಗಳಿಗೆ ತುತ್ತಾಗಿ ಅನೇಕ ವೀರಶೈವ ಹಸ್ತಪ್ರತಿಗಳು ನಾಶವಾದವು. ಪ್ರಾಚೀನಕಾಲದ "ಗ್ರಂಥರಕ್ಷಣೆ"ಯ ಕೊರತೆಯಿಂದಾಗಿ ಮತ್ತೆ ಕೆಲವು ಹಾಳಾದರೆ, ಕೆಲವು ಅಜ್ಞಾತವಾಸದಲ್ಲಿಯೇ ಉಳಿದುಕೊಂಡುಬಿಟ್ಟವು. ಈ ಅಜ್ಞಾತದಿಂದ ಜ್ಞಾತಕ್ಕೆ ಬರುತ್ತಲಿರುವ ವೀರಶೈವಕೃತಿಗಳ ಸಾಲಿನಲ್ಲಿ ನಿಲ್ಲುತ್ತದೆ, "ಕೊಂಡಗುಳಿ ಕೇಶಿರಾಜನ ಕೃತಿಗಳು."

'ಬಸವಾದಿಪ್ರಮಥಯುಗ'ದ ಸೂರ್ಯೋದಯಕ್ಕೆ ಹಿನ್ನೆಲೆಯಾಗಿ ಜರುಗಿದ ಅರುಣೋದಯರೂಪದ ಕ್ರಿಯಾಕಲಾಪಗಳು ಈ ಕೇಶಿರಾಜನ ಬದುಕಿನಲ್ಲಿ, ಬರೆಹದಲ್ಲಿ ಒಡೆದು ಕಾಣುತ್ತವೆ. ಆದುದರಿಂದ ಈತನ ಅಭ್ಯಾಸ, ಈತನ ಕೃತಿಗಳ ಅಭ್ಯಾಸಗಳೆಂದರೆ 'ಬಸವಪೂರ್ವಯುಗ'ದ ಅಭ್ಯಾಸವೇ ಆಗುತ್ತದೆ. ಹೀಗಾಗಿ ಬಸವ ಪೂರ್ವಯುಗದ ಮೌನವನ್ನು ಮುರಿಯಬೇಕಾಗಿರುವ ಇಂದಿನ ಪ್ರಸಂಗದಲ್ಲಿ ಪ್ರಸ್ತುತ ಕೃತಿಪ್ರಕಟನೆ ಒಂದು ಗಮನಾರ್ಹ ಪ್ರಯತ್ನವೇ ಸರಿ.

ಇವುಗಳಲ್ಲಿ 'ಮಂತ್ರಮಹತ್ವದಕಂದ'ವನ್ನು ಬಿಟ್ಟರೆ ಮಿಕ್ಕುವೆಲ್ಲ ಏಕೈಕ ಹಸ್ತ ಪ್ರತಿಗಳು. 'ಹಿಂಡನಗಲಿದ ಗಜ'ದಂತೆ ಉಳಿದುಕೊಂಡು ಬಂದಿರುವ ಇವುಗಳ ರಕ್ಷಣೆ, ಪ್ರಕಟನೆಗಳಿಗೆ ಆದ್ಯಗಮನ ಕೊಡಬೇಕಾದುದು ನಮ್ಮ ಕರ್ತವ್ಯ. ಹೀಗಾಗಿ ತುಂಬ ತ್ರುಟಿತವಾಗಿದ್ದರೂ ಲಿಂಗಸ್ತೋತ್ರವನ್ನು ಇಲ್ಲಿ ಅಚ್ಚಿಸಲಾಗಿದೆ, ಉಳಿದುನಿಂದ ಪುಣ್ಯವನ್ನೂ ಕಳೆದುಕೊಳ್ಳಬಾರದೆಂದು.

ಗ್ರಂಥಸಂಪಾದನೆಗೆ ಹಸ್ತಪ್ರತಿಗಳೇ ಮೂಲಧನ. ಇಲ್ಲಿಯ "ಶೀಲಮಹತ್ವದ ಕಂದ" ವನ್ನುಳಿದು ಮಿಕ್ಕ ಕೃತಿಗಳಿಗೆ ಬಳಸಿದ ಹಸ್ತಪ್ರತಿಗಳು ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರಕ್ಕೆ ಸಂಬಂಧಿಸಿದುವು. ಇವುಗಳನ್ನು ಪೂರೈಸಿದ ಕನ್ನಡ ಅಧ್ಯಯನಪೀಠಕ್ಕೆ ಕೃತಜ್ಞ.

'ಶೀಲಮಹತ್ವದ ಕಂದ' ಮೈಸೂರಿನ ಪ್ರೊ. ಗು. ಆ. ಶಿವಲಿಂಗಯ್ಯನವರ ತೀರ ಇತ್ತೀಚಿನ ಶೋಧನೆ, ಕೇಶಿರಾಜನ ಕೃತಿಗಳ ಈ ಸಮಗ್ರ ಸಂಪುಟದಲ್ಲಿ ಇದನ್ನು ಸೇರಿಸಿಕೊಳ್ಳಲು ಅನುಮತಿ ಇತ್ತುದಲ್ಲದೆ ತಮ್ಮ ವಶದಲ್ಲಿರುವ ಹಸ್ತಪ್ರತಿಯನ್ನೂ ಕಳಿಸಿಕೊಟ್ಟ ಅವರ ಉಪಕಾರವನ್ನು

ಮರೆಯುವಂತಿಲ್ಲ. 'ನವರತ್ನಮಾಲೆ'ಯನ್ನು ಪ್ರಕಟಿಸಿದವರು ಡಾ. ವಿ. ಬಿ. ರಾಜೂರ ಅವರು. "ಅಳಲಾಷ್ಟಕ"ವನ್ನು ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದಿಂದ ಶೋಧಿಸಿ ಪ್ರಕಟಿಸಿದವರು ಶ್ರೀ ಎಸ್. ಶಿವಣ್ಣ ಮತ್ತು ಶ್ರೀ ಬಿ. ಬಿ. ಬಿರಾದಾರ. "ಮಂತ್ರ ಮಹತ್ವದ ಕಂದ"ದ ಅನುಬಂಧ ಮತ್ತು "ಕೇಶಿರಾಜ ಡಣಾಯಕರ ಕಂದ"ಗಳನ್ನು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದಿಂದ ಶೋಧಿಸಿ ಪ್ರಕಟಿಸಿದವರು ಶ್ರೀ ಎಸ್. ಶಿವಣ್ಣ ಅವರು, ಇವುಗಳನ್ನು ಬಳಸಿಕೊಳ್ಳಲು ಅನುಮತಿ ನೀಡಿದ ಇವರೆಲ್ಲರಿಗೂ ಕೃತಜ್ಞ.

"ಕೊಂಡಗುಳಿ ಕೇಶಿರಾಜನ ಕೃತಿಗಳು" ಹೆಸರಿನ ಈ ಕೃತಿಯ ಪ್ರಥಮ ಆವೃತ್ತಿ ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ಮೂಲಕ – ೧೯೭೭ರಲ್ಲಿ ಪ್ರಕಟವಾಗಿದ್ದಿತು. ಈಗ ಮಂತ್ರಮಹತ್ವದ ಕಂದದ ಅನುಬಂಧ, ಕೇಶಿರಾಜ ಡಣಾಯಕರ ಕಂದ, ಅಳಲಾಷ್ಟಕಗಳನ್ನು ಹೊಸದಾಗಿ ಸೇರಿಸಿಕೊಂಡು ಪ್ರಸ್ತುತ ದ್ವಿತೀಯ ಆವೃತ್ತಿ ಪ್ರಕಟವಾಗುತ್ತಲಿದೆ. ಇದನ್ನು ಪ್ರಕಟಿಸುತ್ತಲಿರುವ ಗದುಗಿನ ಶ್ರೀ ತೋಂಟದಾರ್ಯಮಠದ ವೀರಶೈವ ಅಧ್ಯಯನ ಸಂಸ್ಥೆಗೆ ಋಣಿಯಾಗಿದ್ದೇನೆ. ಮುದ್ರಿಸಿಕೊಟ್ಟ ಶ್ರೀ. ಫ. ಶಿ. ಭಾಂಡಗೆ, ಶ್ರೀ. ಕೆ. ಅಶೋಕ ಅವರಿಗೆ ಕೃತಜ್ಞ.

– ಎಂ. ಎಂ. ಕಲಬುರ್ಗಿ

❖❖

*

ಪ್ರಸ್ತಾವನೆ

ಚಾಲುಕ್ಯರ ಸಮಯದ ಆದ್ಯರು :

ಕನ್ನಡ ಸಾಹಿತ್ಯಚರಿತ್ರೆಯಲ್ಲಿ 'ಬಸವಪೂರ್ವಯುಗ'ವೊಂದು ಸಂಶೋಧಕರಿಗೆ ಅನೇಕ ಆಹ್ವಾನಗಳನ್ನೊಡ್ಡಿನಿಂತ ಅವಧಿಯಾಗಿದೆ. ವೀರಶೈವದ ಆಚಾರ, ವಿಚಾರ, ವಾಙ್ಮಯಗಳು ಆಕಾರ ಪಡೆಯುತ್ತಲಿದ್ದ ಕಾಲವದು. ಈ 'ಆಕಾರಮುದ್ರೆ'ಯ ಕಾರ್ಯದಲ್ಲಿ ತೊಡಗಿದವರನ್ನು ವೀರಶೈವ ಪರಿಭಾಷೆಯಲ್ಲಿ 'ಆದ್ಯ'ರೆಂದು ಕರೆಯಬಹುದು. ಶರಣರ ವಚನ, ಹರಿಹರನ ರಗಳೆ ಮತ್ತು ವೀರಶೈವ ಪುರಾಣಗಳಲ್ಲಿ ಪ್ರಾಸಂಗಿಕವಾಗಿ ಬರುವ ಚಾಲುಕ್ಯ ಅರಸರ ಉಲ್ಲೇಖಗಳ ಸಹಾಯದಿಂದ ಈ ಆದ್ಯರ ಚರಿತ್ರೆಯನ್ನು ಹೀಗೆ ರೂಪಿಸಬಹುದಾಗಿದೆ :

ಕಲ್ಯಾಣಚಾಲುಕ್ಯ ಅರಸು ಜಯಸಿಂಹನ ಕಾಲ ಕ್ರಿ. ಶ. ೧೦೧೮-೧೦೪೨. ಈತನ ಸತಿ ಶಿವಭಕ್ತೆ ಸುಗ್ಗಲೆ. ಈ ಸುಗ್ಗಲೆಗೆ ಗುರುವಾಗಿದ್ದ, ಈತ ಜೇಡರ ದಾಸಿಮಯ್ಯನಿಂದ ಭಿನ್ನ. ಪೊಟ್ಟಲಕೆರೆ ಪ್ರದೇಶದಲ್ಲಿ ಪ್ರಸಿದ್ಧನಾಗಿದ್ದ. ಈ ದಾಸಿಮಯ್ಯ, ಆಂಧ್ರಪ್ರದೇಶದ ತೆಲಗು ಬಸವಪುರಾಣದಲ್ಲಿ ಘಟಸರ್ಪ ಪವಾಡಸಹಿತ ಉಲ್ಲಿಖಿತನಾಗಿದ್ದಾನೆ.

ಜಯಸಿಂಹನ ತರುವಾಯ, ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದವ, ಅವನ ಮಗ ಮೊದಲನೆಯ ಸೋಮೇಶ್ವರ (೧೦೪೨-೧೦೬೮). ಈತನ ಮಗ ಇಮ್ಮಡಿ ಸೋಮೇಶ್ವರ (೧೦೬೮-೧೦೭೬). ಈತನ ತಮ್ಮ ಆರನೆಯ ವಿಕ್ರಮಾದಿತ್ಯ (೧೦೭೬-೧೧೨೬). ಈ ವಿಕ್ರಮಾದಿತ್ಯ ಇತಿಹಾಸ ಪ್ರಸಿದ್ಧ ದೊರೆ. "ವಿಕ್ರಮಾದಿತ್ಯನಂತಹ ಅರಸು, ಕಲ್ಯಾಣದಂಥ ಪಟ್ಟಣ ಹಿಂದೆ ಇರಲಿಲ್ಲ, ಇಂದು ಇಲ್ಲ, ಮುಂದೆ ಇರಲಾರದು" ಎಂಬಂತೆ ರಾಜ್ಯಭಾರ ಮಾಡಿದವನೀತ. ಆರನೆಯ ವಿಕ್ರಮಾದಿತ್ಯನಿಗೆ ಪೆರ್ಮಾಡಿ ಎಂಬುದು ಇನ್ನೊಂದು ಹೆಸರು. ಇವನ ರಾಣಿ ಲಕ್ಷ್ಮೀದೇವಿ ವೀರಶೈವದತ್ತ ಒಲುಮೆಯುಳ್ಳವಳು. ಈತನಲ್ಲಿ ಮಂತ್ರಿಯಾಗಿ ಕೊಂಡಗುಳಿ ಕೇಶಿರಾಜ, ಸೇವಕನಾಗಿ ತೆಲುಗು ಜೊಮ್ಮಯ್ಯಗಳಿದ್ದರೆಂದು ಹರಿಹರ ಮೊದಲಾದ ಕವಿಗಳು ಹೇಳುತ್ತಾರೆ. "ತೆಲುಗೇಶ್ವರಾ" ಮುದ್ರಿಕೆಯಲ್ಲಿ ಸಿಗುವ ವಚನ ತೆಲುಗು ಜೊಮ್ಮಯ್ಯನದೋ, ತೆಲುಗೇಶ ಮಸಣಯ್ಯನದೋ ಸ್ಪಷ್ಟವಿಲ್ಲ.

ವಿಕ್ರಮಾದಿತ್ಯನಿಗೆ ಲಕ್ಷ್ಮೀದೇವಿ ಸತಿಯಾಗಿದ್ದಳೆಂಬ, ಕೇಶಿರಾಜನು ಮಂತ್ರಿಯಾಗಿದ್ದನೆಂಬ ಸಂಗತಿಗಳು ಇಂದು ಶಾಸನಾಧಾರದಿಂದ ಐತಿಹಾಸಿಕ ಸತ್ಯವಾಗಿ ಪರಿಣಮಿಸಿವೆ. ಕೇಶಿರಾಜನು "ಮಾತುಮಾತಿಂ ಪುರಾತನ ಗೀತವಂಕುರಿಸೆ" ಬಿದಿರು ಕಾಯಕದ ಶರಣನಾದ ವಂಶವರ್ಧನನೊಡನೆ ಅನುಭವಗೋಷ್ಠಿಯಲ್ಲಿರುತ್ತಿದ್ದನೆಂದೂ ಶರಣ ಬಾಹೂರ ಬೊಮ್ಮಯ್ಯನು ಈ ಪೆರ್ಮಾಡಿಯ ಸಮಕಾಲೀನನೆಂದೂ ಹರಿಹರ ಹೇಳುತ್ತಾನೆ.

ಪ್ರತಿಷ್ಠಿತರ ಮಟ್ಟದಲ್ಲಿ ಕರ್ಮಪ್ರಧಾನವಾಗಿದ್ದ, ಸಾಮಾನ್ಯರ ಮಟ್ಟದಲ್ಲಿ ವಾಮಮಾರ್ಗಿಯಾಗಿದ್ದ "ಸ್ಥಾವರಧರ್ಮ"ವನ್ನು ಎದುರಿಸಿ, ವೀರಶೈವ ಹೆಸರನಲ್ಲಿ "ಜಂಗಮಧರ್ಮ"ವೊಂದು ದಳ ಬಿಚ್ಚುತ್ತಲಿದ್ದ ಕಾಲವಿದು. ಈ ವಿಕ್ರಮಾದಿತ್ಯನಿಗೆ ಮುಮ್ಮುಡಿ ಜಯಸಿಂಹ ತಮ್ಮ. ಮುಮ್ಮಡಿ ಸೋಮೇಶ್ವರ (೧೧೨೭–೧೧೩೮) ಮಗ. ಈ ಮುಮ್ಮುಡಿ ಸೋಮೇಶ್ವರನ ಮಗ ಇಮ್ಮಡಿ ಜಗದೇಕಮಲ್ಲ (೧೧೩೮–೫೧). ಶಂಕರದಾಸಿಮಯ್ಯನು ಹರಿಹರ, ಜಗದೇಕಮಲ್ಲನ ಸಮಕಾಲೀನನೆಂದು ಭೀಮಕವಿ ಹೇಳುತ್ತಿದ್ದು, ಇವರು ಈ ಮುಮ್ಮುಡಿ ಜಯಸಿಂಹ ಮತ್ತು ಇಮ್ಮಡಿ ಜಗದೇಕಮಲ್ಲರೇ ಆಗಿರಬಹುದು. ಶಂಕರದಾಸಿಮಯ್ಯನ ಕೆಲವು ವಚನಗಳು ಸಿಕ್ಕಿದ್ದು,

> ಹರನಿರೂಪದಿಂದ ಧರೆಗೆ ಬಸವಣ್ಣನವತರಿಸಿದ ಕಾರಣ
> ಶಿವಾಚಾರ ಸದಾಚಾರವೆಂಬುದು ಧರೆಗೆ ವಿಖ್ಯಾತವಾಯಿತ್ತು.
> ಶಿವಗಣ ಪ್ರಮಥಗಣಂಗಳೆಂಬ ಮಹಾಮಹಿಮರ ಸುಳುಹು
> ಧರೆಯ ಮೇಲೆ ಕಾಣಬಂದಿತ್ತು ನೋಡಯ್ಯ.
> ಪರುಷವ ಸಾಧಿಸಿದಂತಾಯಿತು, ನಿಮ್ಮ ಶರಣರ ಸಂಗದಿಂದ,
> ಎನ್ನ ನಂದಿಯ ಮೊಗವಾಡ, ನೊಸಲ ಕಣ್ಣೆಂಬ ಅಹಂಕಾರವ
> ಮುಂದುಗೊಂಡಿದ್ದೆನಯ್ಯಾ,
> ಎನ್ನ ಮದ ಉಡುಗಿ, ಸಂಗನ ಬಸವಣ್ಣನ ಕರುಣದಿಂದ
> ಪ್ರಭುದೇವರ ನಿರಾಳವ ಕಂಡು ಬದುಕಿದೆನು ಕಾಣಾ
> ನಿಜಗುರು ಶಂಕರದೇವಾ.

ಎಂಬ ವಚನದಲ್ಲಿ ತನಗೆ ಕಿರಿಯನಾದ ಬಸವಣ್ಣನನ್ನು ಹೊಗಳಿದ್ದಾನೆ. ಢಕ್ಕೆಯ ಬೊಮ್ಮಯ್ಯನೆಂಬ ಶರಣ ಈ ಶಂಕರದಾಸಿಮಯ್ಯನ ಹಮ್ಮು ಅಡಗಿಸಿದಂತೆ ಹರಿಹರ ಹೇಳುತ್ತಾನೆ. ಈವರೆಗೆ 'ಕಾಲಾಂತಕ ಭೀಮೇಶ್ವರ' ಮುದ್ರಿಕೆಯಿಂದ ಢಕ್ಕೆಯ ಬೊಮ್ಮಯ್ಯನ ೬೦ ವಚನಗಳು ಲಭಿಸಿದ್ದು, ಅಲ್ಲಿ ಕಿರಿಯ ಸಮಕಾಲೀನರಾದ ಬಸವಣ್ಣ, ಚನ್ನಬಸವಣ್ಣ ಮೊದಲಾದವರನ್ನು ನೆನೆದಿರುವನು. ಈ ಶಂಕರ ದಾಸಿಮಯ್ಯನಿಂದ ಅಹಂಕಾರ ನಿರಸನ ಮಾಡಿಕೊಂಡವ, ಜೇಡರ ದಾಸಿಮಯ್ಯ[೧] ಈತನ

---

೧. ಹರಿಹರನು 'ಜೇಡರದಾಸಿಮಯ್ಯ'ನೊಂದಿಗೆ, ಪಾಲ್ಕುರಿಕೆ ಸೋಮನು 'ದೇವರ ದಾಸಿಮಯ್ಯ'ನೊಂದಿಗೆ "ರಾಮನಾಥ" ದೇವರ ಸಂಬಂಧ ಕಲ್ಪಿಸಿದ್ದಾರೆ. ಹೀಗಾಗಿ ಇಬ್ಬರೂ, ಒಬ್ಬನೇ ಇದ್ದು ಆಂಧ್ರಪ್ರದೇಶದ ಕಡೆಗೆ ದೇವರದಾಸಿಮಯ್ಯನಾಮ–ಘಟಸರ್ಪ ಪವಾಡ, ಕರ್ನಾಟಕದ ಕಡೆಗೆ ಜೇಡರ ದಾಸಿಮಯ್ಯನಾಮ–ತವನಿಧಿ ಪವಾಡಗಳು ಪ್ರಚಾರಕ್ಕೆ ಬಂದುಬಿಟ್ಟಿವೇ? ಎಂಬ ಸಂದೇಹವೂ ಮೂಡುತ್ತದೆ. ಇದನ್ನು ನಂಬಿ ಸುಗ್ಗಲೆಯ ಪತಿ ಜಯಸಿಂಹ(೧೦೧೮–೪೧) ನಷ್ಟು ಈತನನ್ನು ಹಿಂದೆ ಒಯ್ದರೆ ಈತನ ಗುರು ಶಂಕರದಾಸಿಮಯ್ಯ ಬಸವಾದಿಗಳನ್ನು ಹೇಗೆ ನೆನೆದ? ಎಂಬ ಸಂದೇಹ ಎದ್ದು ನಿಲ್ಲುತ್ತದೆ.

ನೆರೆ ನಂಬಿ ಕರೆದಡೆ ನರಿ ಕುದುರೆಯಾಗಿ ಹರಿಯನೆ?
ಜಗವೆಲ್ಲವರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದಡೆ ಬಂದುದು ಕರಸ್ಥಲಕ್ಕೆ
ನಂಬದೆ ಕರೆದವರ ಹಂಬಲವನೊಲ್ಲ ನಮ್ಮ ರಾಮನಾಥ.

ಎಂಬ ವಚನದಲ್ಲಿ ತನಗೆ ಹಿರಿಯನಾದ ಕೊಂಡಗುಳಿ ಕೇಶಿರಾಜನನ್ನು ತೊರೆಯಲ್ಲಿ ಬಿದ್ದ ಲಿಂಗದ ಘಟನೆಯ ಮೂಲಕ ಸೂಚಿಸಿರುವನು. ಈತನ ಸುಮಾರು ೧೫೦ ವಚನಗಳು ಲಭಿಸಿವೆ. ಇವನ ಹೆಂಡತಿ ದುಗ್ಗಳೆ 'ದಾಸಯ್ಯಪ್ರಿಯ ರಾಮನಾಥ' ಮುದ್ರಿಕೆಯಲ್ಲಿ ವಚನ ಬರೆದಿದ್ದು, ಅಲ್ಲಮ, ಬಸವ, ಸಿದ್ಧರಾಮರನ್ನು ಸ್ಮರಿಸಿರುವಳು. ಚಾಳುಕ್ಯವಂಶದವನಾದ ಕೋವೂರ ಬ್ರಹ್ಮಯ್ಯನು ಈ ಯುಗದಲ್ಲಿಯೇ ಪರಿಗಣಿತನಾಗುವಂತಿದೆ. ಡೋಹಾರ ಕಕ್ಕಯ್ಯ, ಕರಿಕಾಲ ಚೋಳನ ಸಮಕಾಲೀನನಾದ ಮಾದಾರ ಚೆನ್ನಯ್ಯ, ಮೆರೆಮಿಂಡದೇವ, ಕೆಂಭಾವಿ ಭೋಗಣ್ಣ, ಮಾರುಡಿಗೆ ನಾಚಯ್ಯ, ದಶಗಣ ಸಿಂಗಿದೇವ, ಮುಸುಟೆಯ ಚಾವುಂಡರಾಯ ಇವರು ಇದೇ ಸಮಯದವರಿರಬಹುದೆಂದು ತೋರುತ್ತದೆ.

ಈ ವಿವರಗಳನ್ನು ಅವಲೋಕಿಸಿದರೆ ಕಲಚುರಿಗಳ ಸಮಯದ ಬಸವಾದಿ 'ಪ್ರಮಥ'ರು ತಲೆಯೆತ್ತುವುದಕ್ಕೆ ಪೂರ್ವಭಾವಿಯಾಗಿ, ಚಾಲುಕ್ಯ ಸಮಯದಲ್ಲಿ ಕೇಶಿರಾಜಾದಿಯಾಗಿ ಈ ಎಲ್ಲ 'ಆದ್ಯ'ರು ತಲೆಯೆತ್ತಿದ ಚಿತ್ರವೊಂದು ಕಣ್ಮುಂದೆ ನಿಲ್ಲುತ್ತದೆ. ಪ್ರಧಾನವಾಗಿ ಈ ಮೊದಲ ಘಟ್ಟ ಚಾಲುಕ್ಯ ಪೆರ್ಮಾಡಿಯ ಸುತ್ತ ಹೆಣೆದುಕೊಂಡರೆ, ಎರಡನೆಯ ಘಟ್ಟ ಕಲಚುರಿ ಬಿಜ್ಜಳನ ಸುತ್ತ ಹೆಣೆದುಕೊಂಡುದನ್ನು ಈ ಕೆಳಗೆ ಗಮನಿಸಬಹುದು.

ಕಲಚುರಿಗಳ ಸಮಯದ ಪ್ರಮಥರು :

ಆದ್ಯರ ಚರಿತೆಯನ್ನು ಗಮನಿಸಿದರೆ, ಅವರು ಬಹುಮಟ್ಟಿಗೆ ವೈಯಕ್ತಿಕ ಸಾಧನೆಯ ಪಥದಲ್ಲಿದ್ದರೆಂದು ವೇದ್ಯವಾಗುತ್ತದೆ. ಆದರೂ ಒಬ್ಬೊಬ್ಬರಾಗಿ ಕಲ್ಯಾಣವನ್ನು ಸೇರುತ್ತಲಿರುವುದು, ತ್ರಿಪುರಾಂತಕದೇವಾಲಯ ಕೇಂದ್ರವಾಗಿ ಪರಿಣಮಿಸುತ್ತಲಿರುವುದು ಗೋಚರಿಸುತ್ತದೆ. ಇದು ವರ್ಧಿಸುತ್ತ ನಡೆದು, ಕಲಚುರಿಗಳ ಕಾಲಕ್ಕೆ ವೈಯಕ್ತಿಕ ಸಾಧನೆ ಸಾಂಘಿಕರೂಪ ಪಡೆಯಿತು. ಆಗ ಸ್ಥಾವರಲಿಂಗಭಕ್ತಿಯೊಂದಿಗೆ ಇಷ್ಟಲಿಂಗಭಕ್ತಿ-ವೀರಶೈವದ ಅಸ್ಪಷ್ಟ ಧೋರಣೆಗಳು ತೋರಿದರೆ, ಈಗ ಕೇವಲ ಇಷ್ಟಲಿಂಗಭಕ್ತಿ-ವೀರಶೈವದ ಸ್ಪಷ್ಟ ಧೋರಣೆಗಳು ಮೂಡಿನಿಂತವು. ಬಹುಶಃ ಅದು ಆತ್ಮೋದ್ಧಾರ ಪ್ರಧಾನವಾಗಿದ್ದರೆ, ಇದು ಆತ್ಮೋದ್ಧಾರ-ಸಮಾಜೋದ್ಧಾರ ಪ್ರಧಾನವಾಗಿದೆ. ಜಾತಿನಿರ್ಮೂಲನ, ಸ್ತ್ರೀ ಪುರುಷ ಸಮಾನತೆ, ಕಾಯಕ ಮೊದಲಾದ ಸಾಮಾಜಿಕ ಸುಧಾರಣೆಗಳು 'ಆದ್ಯಯುಗ'ದಲ್ಲಿ ಅಸ್ಪಷ್ಟವಾಗಿ ತೋರಿಬರುತ್ತಲಿದ್ದರೂ ಅದು ವ್ಯಾಪ್ತಿಯನ್ನೂ ಸ್ಪಷ್ಟತೆಯನ್ನೂ ಪಡೆದುದು ಈ 'ಪ್ರಮಥಯುಗ'ದಲ್ಲಿ, ಬಸವಣ್ಣನವರ ನೇತೃತ್ವದಲ್ಲಿ. ಹೀಗಾಗಿ ಕನ್ನಡ ಸಾಹಿತ್ಯಕ್ಕೆ ಮೊದಲಿಗನಲ್ಲದಿದ್ದರೂ ಬಸವಣ್ಣನು 'ಆದಿಪುರುಷ' ಎನಿಸಿಕೊಂಡನು.

ಕೊಂಡಗುಳಿ ಕೇಶೀರಾಜ :

ಚಾಲುಕ್ಯ ಸಮಯದ ಆದ್ಯರ ಸಮೂಹದಲ್ಲಿ ಅಗ್ರವ್ಯಕ್ತಿಯಾಗಿ, ಕೆಲಮಟ್ಟಿಗೆ ಕೇಂದ್ರಶಕ್ತಿಯಾಗಿ ತೋರುವ ಕೇಶಿರಾಜನ ಚರಿತ್ರೆ, ವೀರಶೈವ ಕೃತಿಗಳಲ್ಲಿ, ಶಾಸನಗಳಲ್ಲಿ ಹೀಗೆ ಗೋಚರಿಸುತ್ತದೆ.

ಕೇಶೀರಾಜನ ಗ್ರಾಮ ಸಿಂದಗಿ ತಾಲೂಕಿನ (ಡೋಣಿ) ಕೊಂಡಗುಳಿ. ಪ್ರಾಚೀನ ಕಾಲದಲ್ಲಿ ಬಹುಶಃ ತರ್ದವಾಡಿ ಪ್ರಾಂತಕ್ಕೆ ಸಂಬಂಧಿಸಿದ ಇದನ್ನು ಕೊಂಡಗುಳಿಯ ಎರಡು ಶಾಸನಗಳು (೧೧೦೭, ೧೧೩೨) "ಸರ್ವನಮಸ್ಯದಗ್ರಹಾರಂ" ಎಂದು, ಹರಿಹರ "ಅಗ್ರಹಾರ" ಎಂದು ಕರೆದಿರುವರು.

ದೊಡ್ಡ ವಿದ್ವಾಂಸರಾಗಿದ್ದ ಅಲ್ಲಿಯ ಮಹಾಜನರಿಂದಾಗಿ ಅಗ್ರಹಾರ ಕೊಂಡಗುಳಿ ವಿದ್ಯಾಪ್ರಸಾರ ಕೇಂದ್ರವಾಗಿದ್ದುದನ್ನು ೧೧೩೨ರಲ್ಲಿ ಶಾಸನ ಹೀಗೆ ವ್ಯಕ್ತಪಡಿಸುತ್ತದೆ :

"ವಿದ್ಯಾದಾನ ನಿಮಿತ್ತವಾಗಿ ಸೂತ್ರಸಂಹಿತೆ ಪಿರಿಯ ಗ್ರಂಥಂಗಳಂ ಪೇಳ್ವ ವುಪಾಧ್ಯಾಯರ್ಗೆ ಪೊಂನ ವ್ರಿದ್ದಿಯಲೆ ಗ್ರಾಸ ನಡವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ ಲೊಕ್ಕಿಗದ್ಯಾಣ ೨೦.

ಮತ್ತಂ ಸಂಹಿತೆಯುಂ ಕಿಱಿಯ ಗ್ರಂಥಂಗಳುಂ ಯಾಜ್ಞವಲ್ಕ ಸಹಿತ ಪೇಳ್ವ ಉಪಾಧ್ಯಾಯರ್ಗೆ ಪೊಂನ ವ್ರಿದ್ದಿಯಲೆ ಗ್ರಾಸ ನಡವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕರ ವ್ರಿದ್ದಿಯ(ಲು) ಕೊಟ್ಟ ವರ್ತಕ ಲೊಕ್ಕಿಗದ್ಯಾಣ ೨೦."

ಮತ್ತಂ [ಅ]ಕ್ಷರ ವ್ಯಾಕರಣ 'ರೂಪಾವತಾರ'ಮಿಂತಿನಿತುಂ ಪೇಳ್ದು ಬಾಲ ಶಿಕ್ಷೆಯಂ ಮಾಳ್ಪ ಉಪಾಧ್ಯಾಯರ್ಗೆ ಪೊಂನ ವಿದ್ರಿಯಲೆ ಗ್ರಾಸ ನಡೆವಂತಾಗಿ ಪೊಂಗೆ ತಿಂಗಳಿಂಗೆ ವೀಸಂ ನಾಲ್ಕಱ ವ್ರಿದ್ದಿಯ[ಲು] ಕೊಟ್ಟ ವರ್ತಕ ಲೊಕ್ಕಿಗದ್ಯಾಣ ೨೦"

ಈ ಮಾತುಗಳು, ಕೊಂಡಗುಳಿಯಲ್ಲಿ ನಡೆಯುತ್ತಲಿದ್ದ ಅಭ್ಯಾಸದ ವಿಷಯ ವೈವಿಧ್ಯವನ್ನು, ಮತ್ತು ಬಡ್ಡಿಯ ಹಣದಿಂದ ಇವುಗಳ ಪೋಷಣೆಗಾಗಿ ಮಾಡಿದ ವ್ಯವಸ್ಥೆಯನ್ನು ಸ್ಪಷ್ಟಪಡಿಸುತ್ತವೆ. ಕೇಶಿರಾಜ ದಂಡನಾಯಕರು ಅಗ್ರಹಾರದ ಮಹಾಜನಗಳಿಗೆ ದತ್ತಿ ನೀಡುವುದರ ಮೂಲಕ, ತಮ್ಮ ಊರಿನಲ್ಲಿ ಮೇಲಿನ "ವಿದ್ಯಾದಾನ" ವ್ಯವಸ್ಥೆ ಮಾಡಿದರೆಂಬುದು ಇಲ್ಲಿ ಗಮನಿಸಬೇಕಾದ ಸಂಗತಿ.

ಅಗ್ರಹಾರದ ಇನ್ನೊಂದು ಉಪಕ್ರಮವೆಂದರೆ ದೇವಾಲಯಗಳ ವ್ಯವಸ್ಥೆ, ಕೇಶಿರಾಜ ದಂಡನಾಯಕರ ತಂದೆ ನಿಂಬಣದಂಡನಾಯಕರೂ ದೇವಾಲಯಗಳಿಗೆ ದಾನ ಬಿಟ್ಟಿದ್ದಾರೆ. ನಿಂಬಣದಂಡನಾಯಕರು ನೀಡಿರಬಹುದಾದ ದಾನದ ವಿಷಯ "ರಾಯನಾರಾಯಣಪು.......ಯುದ್ಯಾಪನದಲು ಕೆಱೆಯಪುರದೊ.................... ಧರ್ಮ್ಮವಾಗಿ ಶ್ರೀಮತ್ರಿಭುವನಮ..................ಲು ಧಾರಾಪೂರ್ವ..........ಶ್ಯದಗ್ರಹಾರ.......ಮಾಗಿಡೆ ಪಡೆಸ ಸಹಿ................." ಎಂಬ ೧೧೦೭ರ ಕೊಂಡಗುಳಿಯ ತ್ರುಟಿತ ಶಾಸನದಲ್ಲಿದೆ. ಇದೇ ಶಾಸನದ ಪ್ರಕಾರ, ಸ್ವತಃ ಕೇಶಿರಾಜದಂಡನಾಯಕರು "ತಾವು ಮಾಡಿಸಿದ ಶಿವಾಲಯದ ಮೂಲಸ್ಥಾನದ ಶ್ರೀ ಸೋಮೇಶ್ವರದೇವರ್ಗೆ ತಮ್ಮ ಪ್ರಭುತ್ವದ ದೋಣಿಯಿಂ ತೆಂಕ ಒಡ್ಡವಾಡಿಗೆಯ ಬಟ್ಟೆಯಿಂ ಪಡುವ ಬನ್ದು ಚಿನ್ತಾಮಣಿಯ ಈರ್ಪತ್ತೆಂಟು ಗೇಣಕೋಲಲು ತಮ್ಮಂ(ಶ)ಕ್ಕೆ ಬಂದ ಮತ್ತರಯ್ವತ್ತೇಳಱೊಳಗೆ" ಒಂದಿಷ್ಟು ಭೂಮಿಯನ್ನು ನೀಡಿದರೆಂದು ತಿಳಿದು ಬರುತ್ತದೆ. ಇದಲ್ಲದೆ ಕ್ರಿ. ಶ. ೧೧೩೨ರ ಶಾಸನದಲ್ಲಿ "ಸ್ರೀಮತು ಭಾಂಡಾರಿಗ ರಾಮದೇವ ನಾಯಕರು ಸೌಪರ್ಣದ ತಾಂಬೂಲದಾನಕ್ಕೆ ಪೊಂಗೆ ತಿಂಗಳಿಂಗೆ ವೀಸ ೪ಱ ವೃದ್ಧಿಯಲು ಕೊಟ್ಟ ಕಟಕಪ್ರಿಯಗದ್ಯಾಣ ೧೦.

ಮತ್ತಂ ಬ್ರಹ್ಮದೇವಭಟ್ಟರು ತಾಂಬೂಲದಾನಕ್ಕಾ ವೃದ್ಧಿಯಲೆ ಕೊಟ್ಟ ಕಟಕಂ ಗದ್ಯಾಣ ೨.

ಶ್ರೀ ಮತ್ಸರ್ವನಮಸ್ಯದಗ್ರಹಾರ ಕೊಂಡುಗುಳಿಯಶೇಷಮಹಾಜನಂಗಳು ಶ್ರೀ ಕೇಶವದೇವರ್ಗ್ಗೆ ದೀಪದಾನವಾಗಿ ಗಾಣವಾಯಿಲೆಯಲ್ಲಿ ದೇವಸದಲು ಸೊಲ್ಲಗೆ ಯಣ್ಣೆಯಂ ಕೊಟ್ಟರು ಮತ್ತಂ ಪುಷ್ಪದಾನವಾಗಿಯರೆವತ್ತರು ತೋಂಟಮಂ ಕೊಟ್ಟರು" ಎಂಬ ವಿವರಗಳಿವೆ.

ಈ ವಿವರಗಳಿಂದ ಕೇಶಿರಾಜನು ಕ್ರಿ. ಶ. ೧೧೦೭ಕ್ಕೆ ಮೊದಲು ಸೋಮೇಶ್ವರ ದೇವಾಲಯ ಕಟ್ಟಿಸಿದ್ದನೆಂದು ತಿಳಿದುಬರುತ್ತದೆ. ೧೧೩೨ರ ಶಾಸನದಲ್ಲಿ ಕೇಶವೇಶ್ವರದೇವರ ಉಲ್ಲೇಖ ಬರುತ್ತಿದ್ದು, ಇದು ಪ್ರಾಚೀನ ಕಾಲದಿಂದಲೂ ಆ ಊರಿನಲ್ಲಿದ್ದು, ಈ ದೇವರ ಹೆಸರನ್ನು ಕೇಶಿರಾಜನಿಗೆ ಇಟ್ಟಿರಬೇಕು; ಅಥವಾ ಕೇಶಿರಾಜನೇ ಈ ದೇವಾಲಯ ಕಟ್ಟಿಸಿ ಈ ದೇವರಿಗೆ ತನ್ನ ಹೆಸರು ಇಟ್ಟಿರಬೇಕು. ಇದಲ್ಲದೆ ಈ ಊರಿನಲ್ಲಿ ಜ್ಯೋತೀಶ್ವರ, ಮಲ್ಲಿಕಾರ್ಜುನ, ಭಳಾರಿ ದೇವಾಲಯಗಳೂ ಕಲ್ಲುಮಠ ಹೆಸರಿನ ಒಂದು ಮಠವೂ ಸೋಮಬೀದಿ, ಸೂರ್ಯಬೀದಿ ಹೆಸರಿನ ರಸ್ತೆಗಳೂ ಇದ್ದವೆಂದು ಶಾಸನಗಳು ತಿಳಿಸುತ್ತವೆ.

ಹೀಗಾಗಿ ಅಗ್ರಹಾರ ಕೊಂಡಗುಳಿ ಶೈಕ್ಷಣಿಕವಾಗಿ, ಧಾರ್ಮಿಕವಾಗಿ ತುಂಬ ಶ್ರೀಮಂತಗ್ರಾಮವೆಂದು ಹೇಳಬಹುದು. ಇಂಥ ಗ್ರಾಮಪರಿಸರದಲ್ಲಿ ಹುಟ್ಟಿದವ ಕೇಶಿರಾಜದಂಡನಾಯಕ. ಈತನ ತಂದೆ ನಿಂಬಣದಂಡನಾಥ, ತಂದೆಯನ್ನು 'ವಾಜಿಕುಳಾಂಬರದ್ಯುಮಣಿ' ಎಂದು, ಮಗನನ್ನು 'ವಾಜಿಕುಳಾರ್ಣವ ಪಾರಿಜಾತ' ಎಂದು ೧೧೦೭ರ ಶಾಸನ ಕರೆದಿರುವುದರಿಂದ ಇವರದು 'ವಾಜಿಕುಲ'. ನಿಂಬಣನು ಇಮ್ಮಡಿ ಸೋಮೇಶ್ವರ (೧೦೬೮–೭೬) ಮತ್ತು ತಮ್ಮ ೬ನೆಯ ವಿಕ್ರಮಾದಿತ್ಯ (೧೦೭೬–೧೧೨೬)ರಲ್ಲಿ ದಂಡನಾಯಕನಾಗಿದ್ದನೆಂದು ಕ್ರಿ. ಶ. ೧೦೭೫ರ ಕೊಪ್ಪ ಶಾಸನ, ಕ್ರಿ. ಶ. ೧೦೮೬ರ ತುಂಬಗಿ ಶಾಸನಗಳು ತಿಳಿಸುತ್ತವೆ. ಕ್ರಿ. ಶ. ೧೧೦೭ ಕೊಂಡುಗುಳಿ ಶಾಸನದಲ್ಲಿ ಉಲ್ಲೇಖ ಬರುತ್ತಿದ್ದರೂ ಈಗ ಈತನು ಬದುಕಿರುವ ಸಾಧ್ಯತೆ ಕಡಿಮೆ. ಈತನು

> ಎನಿತಂ ಚಾಳುಕ್ಯ ಚಕ್ರೇಶ್ವರ ನಿಜವಿಜಗೀಷು ಪ್ರಭಾಟೋಪಮಾಯ್ತು
> ನ್ತನಿತರ್ಕಂ ಮಂತ್ರಸಂಪಾದನದ ಪದಕೆ ತಾಂ ಮಂತ್ರಿ ಯುದ್ಧಕ್ಕದೇನ್ನ
> ಚ್ಚಿನ ದಣ್ಣಾಧೀಶ್ವರಂ ತಾನೆನೆ ಚತುರುಪಧಾಶುದ್ಧಿಯಿಂ ತಾಳ್ದಿದಂ ನೂ
> ತನ ಮುದ್ರಾರಾಕ್ಷಸಂ ನೂತನ ಕಮಳಭವಂ ನಿಂಬದಣ್ಣಾಧಿನಾಥಂ ॥

ಎಂದು ಕೊಪ್ಪ ಶಾಸನದಲ್ಲಿ[೨]

"(ಸ)ಮಧಿಗ(ತ) ಪಞ್ಚಮಹಾ(ಶ)ಬ್ದ ಮಹಾಸಾಮನ್ತಾಧಿ(ಪ)ತಿ ಮಹಾ ಪ್ರಚಣ್ಣ ದಣ್ಣ (ನಾ)ಯಕಂಗೋತಪವಿತ್ರ ಸುಜನೈಯ್ಕಮಿಯತ್ರನ(ಭಿ)ನವಮ(ನ್ತ್ರಾ)ರ ವಿಭವಪುರಂಧರ.......... ವಭಿಕುಳಾ(ಬ).........(ಹ)ಸಿಟ್ಟ...........ಜನ..........ಶ್ರೀಮತ್ರಿ...........ದೇವಪಾದಾರಾ ....ರ್ಯ್ಯಸಾಧಕ ನಾಮಾ.............ಸ್ತ ಪ್ರಸತ್ತಿಸ(ಹಿ)ತ........ನ್ಮಹಾಪ್ರಧಾನ (ಹೇರಿ).. ....ಗ್ರಹಿ ಮನವೆ(ರ್ಗ್ಗೆ)......ಯಕಂ ನಿ(೦)ಬಣ ...." ಎಂದು ತುಂಬಗಿ ಶಾಸನದಲ್ಲಿದೆ.

---

೨. SII xi-i ೧೧೬ ಕೋಪ್ಪ (ಕ್ರಿ.ಶ. ೧೦೭೫)

"ಸಮಧಿಗತ ಪಂಚಮಹಾಶಬ್ದ ಮಹಾಸಾಮಾನ್ತಾಧಿಪತಿ ಮಹಾಪ್ರಚಂಡ ದಂಡನಾಯಕರು ವಿಬ್ಧವರದಾಯಕ ಗೋತ್ರಪವಿತ್ರ ಸುಜನೈಕಮಿತ್ರ ಅಭಿಮಾನ ಮಂದರ ವಿಭವಪುರಂಧರ ಸರಸ್ವತೀಗಣಲಾಲಪಟ್ಟ ಕನ್ನಕೈರದಿಶಾಪಟ್ಟ ವಾಜಿಕುಳಾಂಬರದ್ಯುಮಣಿ ಬಂಧುಜನಚಿನ್ತಾಮಣಿ......... ಮನೆವೆರ್ಗಡೆ" ಎಂದು ಕೊಂಡಗುಳಿ ಶಾಸನದಲ್ಲಿ ಕೀರ್ತಿತನಾಗಿದ್ದಾನೆ.

ಇವುಗಳನ್ನು ಗಮನಿಸಿದರೆ ಮಗ ಕೇಶಿರಾಜನಂತೆ ತಂದೆ ನಿಂಬಣನೂ ವಿಕ್ರಮಾದಿತ್ಯನ ರಾಜಕೀಯ ವ್ಯವಸ್ಥೆಯಲ್ಲಿ ಉನ್ನತಸ್ಥಾನ ಹೊಂದಿದ್ದನೆಂದು ವ್ಯಕ್ತವಾಗುತ್ತದೆ. ಇಂದು ಕೊಂಡಗುಳಿಯಲ್ಲಿ ಸಿಗುವ ಒಂಬತ್ತು ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರಿಗೆ ಸಂಬಂಧಿಸಿದ ಐದೂ ಶಾಸನಗಳು ೬ನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ಹುಟ್ಟಿರುವುದಕ್ಕೆ, ಇದು ಈ ಅರಸನ ಮಂತ್ರಿಗಳಾಗಿದ್ದ ನಿಂಬಣ್ಣಯ್ಯ ಮತ್ತು ಕೇಶಿರಾಜರ ಗ್ರಾಮವೆಂಬುದೇ ಕಾರಣವಾಗಿರಬೇಕು.

ಕೇಶಿರಾಜ ದಂಡನಾಯಕರೂ ಗಣಪತಿ ದಂಡನಾಯಕರೂ ಕೂಡಿ ವಿಧ್ಯಾಭ್ಯಾಸಕ್ಕೋಸುಗ ಮೇಲೆ ಹೇಳಿದ ದಾನ ನೀಡಿರುವುದರಿಂದ ಇವರಲ್ಲಿ ಬಾಂಧವ್ಯವಿರಬಹುದೆ? ಎಂಬ ಸಂದೇಹ ಮೂಡುತ್ತದೆ. ಕೇಶಿರಾಜನ ಗುರು ವಿರೂಪಾಕ್ಷದೇವರೆಂದೂ ಹೆಂಡತಿ ಗಂಗಾದೇವಿಯೆಂದೂ ಹರಿಹರನ ಹೇಳಿಕೆ. ದೋಣಿ ನದಿಯ ದಕ್ಷಿಣಕ್ಕೆ ಒಡ್ಡವಾಡಗಿಗೆ ಹೋಗುವ ದಾರಿಯ ಪಶ್ಚಿಮದಲ್ಲಿ ಇವರ ಮನೆತನಕ್ಕೆ ಸಂಬಂಧಿಸಿದ ೫೭ ಮತ್ತರ ವಿಸ್ತಾರದ ಹೊಲವಿದ್ದಿತೆಂದು ೧೧೦೭ರ ಶಾಸನ ಸೂಚಿಸುತ್ತದೆ.

ಶಾಸನದಲ್ಲಿ ಬರುವ "ಶ್ರೀ ಸ್ವಸ್ತಿ ಸಮಧಿಗತ ಪಞ್ಚಮಹಾಶಬ್ದ ಮಹಾ ಸಾಮನ್ತಾಧಿಪತಿ........ ಮಹಾಪ್ರಚಣ್ಣ ದಣ್ಣನಾಯಕ ದುಷ್ಟವಿದ್ವಿಷ್ಟ ವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ ಸುಕವಿಶುಕಚೂತ ಬನ್ದುವನವಸನ್ತ ವಚಶ್ರೀ ವಧೂಕಾನ್ತ ಸಾಹಿತ್ಯಸರೋರುಹಮಧುಬ್ರತ ಸತ್ಯಸತ್ಯಬ್ರತ ಹರಚರಣರಜೋರಂಜಿತೋತ್ತಮಾಂಗನಯ್ಯನಸಿಂಗ ನಾಮಾದಿ ಸಮಸ್ತಪ್ರಶಸ್ತಿ ಸಹಿತಂ ಶ್ರೀಮನ್ಮಹಾಪ್ರಧಾನಂ ಹೇರಿಲಾಳ ಸನ್ದಿವಿಗ್ರಹಿ ದಣ್ಣಾನಾ(ಯ)ಕಂ ಕೇಶಿರಾಜರಸರು" ಎಂಬ ವಿವರ ಕೇಶಿರಾಜನ ರಾಜಕೀಯ, ಸಾಹಿತ್ಯಿಕ, ಧಾರ್ಮಿಕ ವ್ಯಕ್ತಿತ್ವವನ್ನು ಹೇಳುತ್ತದೆ. ಅಂದು ಎಲ್ಲ ಸಚಿವರಿಗೆ ಮಹಾಪ್ರಧಾನ ಎಂದೇ ಕರೆಯುತ್ತಿದ್ದರು. ಈತನು ಮಹಾಪ್ರಧಾನನಾಗಿ ಲಾಳ (=ನಾಡ, ಒಳನಾಡ?) ಸಂಧಿವಿಗ್ರಹ (ಯುದ್ಧ-ಒಪ್ಪಂದ) ವ್ಯವಸ್ಥೆ ನೋಡಿಕೊಳ್ಳುವವನಾಗಿದ್ದನು. ಇಲ್ಲಿಯ 'ಹೇರಿ' ಎಂಬುದು ಈ ಸಂಧಿವಿಗ್ರಹಿಗಳಲ್ಲಿಯೇ ಹಿರಿಯ ಅಧಿಕಾರವನ್ನು ಸೂಚಿಸುತ್ತದೆ. ವಿಕ್ರಮಾದಿತ್ಯನ ಕಾಲದ ೧೧೦೭ ಮತ್ತು ಸೋಮೇಶ್ವರನ ಕಾಲದ ೧೧೩೨ರ ಶಾಸನಗಳಲ್ಲಿ ಕೇಶಿರಾಜನ ಉಲ್ಲೇಖವಿದ್ದುದರಿಂದ, ಈತನು ಉಭಯ ಅರಸರ ಆಳಿಕೆಯ ಅವಧಿಯಲ್ಲಿ ಬದುಕಿದ್ದನೆಂಬುದು ಸ್ಪಷ್ಟ. ಆದರೆ ವಿಕ್ರಮಾದಿತ್ಯನೊಂದಿಗೆ ಮನಸ್ತಾಪ ಉದ್ಭವಿಸಿ, ದಂಡನಾಥ ಪದವಿಯನ್ನು ಬಿಟ್ಟನೆಂದು ಕನ್ನಡ ಕಾವ್ಯಗಳು ಹೇಳುವ ಕಾರಣ, ವಿಕ್ರಮಾದಿತ್ಯನ ಕೊನೆಯ ವರ್ಷವಾದ ಕ್ರಿ. ಶ. ೧೧೨೬ಕ್ಕೆ ಮೊದಲು ಈ ಘಟನೆ ನಡೆದಿರುವುದು ಸಹಜ. ಅದಕ್ಕಾಗಿಯೇ ಮೊದಲಿನ ಶಾಸನ ಇವನ ಎಲ್ಲ ಬಿರುದುಗಳನ್ನು ಹೇಳಿದರೆ, ಎರಡನೆಯದು ಕೇವಲ "ಶ್ರೀಮತ್ ಕೇಶಿಮಯ ದಂಡನಾಯಕರು" ಎಂದು ಕರೆದಂತಿದೆ. ಇವನು ಶರಣನಾಗಿದ್ದ ಕಾರಣ ಎರಡನೆಯ ದತ್ತಿಶಾಸನದಲ್ಲಿ ಬ್ರಾಹ್ಮಣರ "ಕಾಲಂ ಕರ್ಚ್ಚಿ" ಇತ್ಯಾದಿ ಪದಗಳನ್ನು ಬಳಸಿಲ್ಲವೆಂದು ಊಹಿಸಬಹುದು. ಈ ಎರಡು ಶಾಸನಗಳಲ್ಲಲ್ಲದೆ,

"ಓಹಿಲ ದಾಸ ಚೆನ್ನ ಸಿರಿಯಾಳ ಹಲಾಯುಧ ಬಾಣನುದ್ಭಟ ।
ದೇಹದೊಳೊಂದಿ ಬಂದ ಮಳಯೇಶ್ವರ ಕೇಶವರಾಜರಾದಿಯಾಗಿ...."
"ಕಾಳಿದಾಸ ಕೇಶರಾಜದಣ್ಣಾಯಕ ಸುರಿಗೆಯ ಚೆಲ್ವಡರಾಯ......"

ಎಂದು ಅಬ್ಬಲೂರು (ಕ್ರಿ. ಶ. ೧೨೦೦), ಮರಡಿಪುರ (ಕ್ರಿ. ಶ. ೧೨೮೦) ಶಾಸನಗಳಲ್ಲಿಯೂ ಕೀರ್ತಿತನಾಗಿದ್ದಾನೆ.

ಹರಿಹರನ ರಗಳೆಯ ಪ್ರಕಾರ ಈತನ ಚರಿತ್ರೆಗೆ ಸಂಬಂಧಪಟ್ಟ ಕೆಲವು ಘಟನೆಗಳು ಹೀಗಿವೆ: ಮಂತ್ರಿ ಕೇಶಿರಾಜ ಒಮ್ಮೆ ಶರಣರ ಅನುಭಾವಗೋಷ್ಠಿಯಲ್ಲಿ ಮಗ್ನನಾಗಿದ್ದನು. ಅರಸನ ಹೇಳಿಕೆಯಂತೆ ಕರೆಯ ಬಂದವರು ಒತ್ತಾಯ ಮಾಡಲು

"ಸಿರಿಯ ಸಂಗಂ ಶರಣಸಂಗಕ್ಕೆ ಪಗೆಯಾಯ್ತು.
ನರನೋಲಗದ ಪರಾಧೀನವಿಜೆದಂತಾಯ್ತು.

ಎಂದು ನೊಂದು ನುಡಿಯುತ್ತ, ಆಸ್ಥಾನಕ್ಕೆ ಬರುತ್ತಾನೆ. ಅಷ್ಟರಲ್ಲಿ ರಾಜಪರಿವಾರದ ವಿಪ್ರರು "ಕೇಶಿರಾಜನು ವಿಷ್ಣುನಿಂದಕ, ಅಷ್ಟೇ ಅಲ್ಲ ಬಾಹ್ಯದಲ್ಲಿ ನಿಮಗೆ, ಅಂತರ್‍ಯದಲ್ಲಿ ಬೆರಳಿನುಂಗುರದಲ್ಲಿರುವ 'ಗುರುಪಾದ'ಕ್ಕೆ ನಮಸ್ಕರಿಸುವ"ನೆಂದು ಚಾಡಿ ಹೇಳುವರು. ಆಸ್ಥಾನಕ್ಕೆ ಬಂದ ಕೇಶಿರಾಜನನ್ನು ಅರಸ ಹತ್ತಿರ ಕುಳ್ಳಿರಿಸಿಕೊಂಡು, ಸರಸದಿಂದ ಉಂಗುರವನ್ನು ಪಡೆದು, ತನ್ನ ಬೆರಳಿಗೆ ಇಟ್ಟುಕೊಳ್ಳುತ್ತಾನೆ. ಕೆಲವು ಸಮಯಾನಂತರ ಓಲಗದಿಂದ ಹೊರಟ ಕೇಶಿರಾಜ ಅರಸನಿಗೆ ಕೈಮುಗಿಯಲಿಲ್ಲ. ಇದರಿಂದ ಮುನಿದ ಅರಸು

"ಕಂಡಿರೇ ಎನ್ನಿಂದವೀ ಸಂಪದಂಬಡೆದು
ಅಂಡಲೆವ ದಾರಿದ್ರ್ಯವೆಲ್ಲವಂ ನೆಱೆ ತೊಡೆದು
ಎನಗೆ ಪೊಡಮಡದುದಾಸೀನಮಂ ಮಾಳ್ಪರೇ"

ಎಂದು ಗರ್ಜಿಸುವುದೇ ತಡ, ಕೇಶಿರಾಜ–

"ಕೇಳರಸ, ನಿನ್ನ ಸಿರಿ ನಿನಗಿಕ್ಕೆ ನಿನಗಿಕ್ಕೆ
ಶೂಲಿಯಣುಗರ ಸಂಗಸಂಪದವದೆನಗಿಕ್ಕೆ"

ಎಂದು ಪ್ರಧಾನಿಭೂಷಣಗಳನ್ನೆಲ್ಲ ಒಂದೊಂದಾಗಿ ಕಳಚಿ, ಅರಸನ ಮುಂದಿಟ್ಟು,

"ಹೊನ್ನ ಕರಡಿಗೆ ಸೆಜ್ಜೆ ನಿನ್ನವೆಂದವಗಿತ್ತು
ಚೆನ್ನ ವಸ್ತ್ರಂಗಳುಂ ನಿನ್ನ ಸೊಮ್ಮೆಂದಿತ್ತು
ಅಂಗೈಯ ಸೆಜ್ಜೆಯೊಳು ಸೋಮನಾಥನನಿರಿಸಿ
ಮುಂಗೈಯ ನಾಗವೇದಿಕೆಗೆ ಬಿಜಯಂಗೈಸಿ"

ಕೇಶಾಂಬರದಿಂದ ಮೈಮುಚ್ಚಿಕೊಂಡು, "ಸೇವಕಾವೃತ್ತಿಯಂ ಮನದ ಕಾಲಿಂದೊದೆದು". ಕಲ್ಯಾಣವನ್ನು ತೊರೆದು ನಡೆಯುತ್ತಾನೆ. ಸತಿ ಗಂಗಾದೇವಿಯೂ ಪತಿಯನ್ನೂ ಹಿಂಬಾಲಿಸುತ್ತಾಳೆ. ಕೇಶಿರಾಜ ಕಲ್ಯಾಣದಿಂದ ಯೋಜನಾಂತರದಲ್ಲಿದ್ದ ಶಿವಪುರಕ್ಕೆ ಬರಲು, ಅಲ್ಲಿಯ ಬಿದಿರ ಕಾಯಕದ ವಂಶವರ್ಧನನೆಂಬ ಶಿವಶರಣ ತನ್ನ ಮನೆಗೆ ಭಕ್ತಿಯಿಂದ ಬರಮಾಡಿಕೊಳ್ಳುತ್ತಾನೆ. ಅಷ್ಟರಲ್ಲಿ

ಆಗಮಿಸಿದ ಭಕ್ತಜನರೊಂದಿಗೆ "ಮಾತುಮಾತಿಂ ಪುರಾತನರ ಗೀತದ ಮೇಲೆ ಶಿವಗೋಷ್ಠಿಯಂಕುರಿಸೆ" ಏಳು ದಿನ ನಿರಂತರ ಗೋಷ್ಠಿ ನಡೆಯುತ್ತದೆ. ಆ ಮೇಲೆ ಶಿವಪುರದಿಂದ ಕಲ್ಯಾಣ ಪಟ್ಟಣದ ತ್ರಿಪುರಾಂತಕದೇವರತ್ತ ಶರಣಸಮೂಹದೊಂದಿಗೆ ವೈಭವದಿಂದ ನಡೆಯುತ್ತಾನೆ. ಕೇಶಿರಾಜನ ಈ ಮಹಿಮೆಗೆ ಬೆರಗಾಗಿ ಕ್ಷಮೆ ಕೇಳಿದ ಅರಸನನ್ನು ಮನ್ನಿಸಿ, ಅವನ ಬಿನ್ನಹದಂತೆ ಮತ್ತೆ ಕಲ್ಯಾಣಕ್ಕೆ ಬಂದು ಬದುಕು ನಡೆಸುತ್ತಾನೆ.

ಒಮ್ಮೆ ತೆಲುಗು ಜೊಮ್ಮಣ್ಣನೆಂಬ ಬೇಟೆಕಾಯಕದ ಶಿವಭಕ್ತನ ದರ್ಶನಕ್ಕೆ ಬಂದ ಕೇಶಿರಾಜ, ಬೇಟೆಯ ಮಾಂಸದಿಂದ ತುಂಬಿದ ಆತನ ಮನೆಯ ವಾತಾವರಣಕ್ಕೆ ಹೇಸಿ, ಊರ ಹೊರಗಿನ ದೇವಾಲಯದಲ್ಲಿ ತಂಗುತ್ತಾನೆ. ಅಲ್ಲಿಗೇ ಬಂದು ಜೊಮ್ಮಣ್ಣ ಆಮಂತ್ರಿಸಿದರೆ 'ಸಮಯಶೀಲ'ದ ಪ್ರಶ್ನೆ ಎದುರಾಗಿ ಕೇಶಿರಾಜ ಅರೆಮನಸ್ಕನಾದ. ಇದರಿಂದ ಪೂಜೆಗಾಗಿ ಸಿಂಹಾಸನದ ಮೇಲಿಟ್ಟ ಶಿವಲಿಂಗ ಎಷ್ಟು ಎತ್ತಿಕೊಂಡರೂ ಕೇಶಿರಾಜನ ಕೈಗೆ ಬರದಾಗುತ್ತದೆ. ಜೊಮ್ಮಣ್ಣನ ಕೃಪೆಯಿಂದ ಅದನ್ನು ಕೈಗೆ ಪಡೆದು ಆತನ ಮನೆಗೆ ಆಗಮಿಸುತ್ತಾನೆ. ಅಲ್ಲಿ ನೀಡಿದ ಮಾಂಸಾನ್ನಕ್ಕೆ ಕೇಶಿರಾಜ ಹೇಸಿಕೊಳ್ಳುವಷ್ಟರಲ್ಲಿ ಅದು ಪಕ್ವಾನ್ನವಾಗಿ ಪರಿಣಮಿಸುತ್ತದೆ. ಅದನ್ನು ಸ್ವೀಕರಿಸಿ, ಪುರಾತನರ ಗೀತಗೋಷ್ಠಿಯಲ್ಲಿ ಕಾಲ ಕಳೆಯುತ್ತಾನೆ.

ಇನ್ನೊಮ್ಮೆ, ಕಲ್ಯಾಣದ ಕಡೆಗೆ ಪ್ರಯಾಣಿಸುತ್ತ ನದಿಯ ದಂಡೆಯ ಮೇಲೆ ಲಿಂಗಪೂಜೆಯನ್ನು ಕೈಕೊಳ್ಳುತ್ತಾನೆ. ಆಗ ಅಂಗೈಯ ಲಿಂಗದ ಮೇಲೆ ಇಟ್ಟ ದಾಸಿವಾಳದ ಹೂವನ್ನು ಮಾಂಸವೆಂದೇ ಬಗೆದು, ಹಾರುವ ಹಕ್ಕಿಯೊಂದು ಲಿಂಗಸಹಿತ ಅದನ್ನು ಕಚ್ಚಿಕೊಂಡು ಹೋಗಿ ನದಿಯಲ್ಲಿ ಚೆಲ್ಲುತ್ತದೆ. ಲಿಂಗ ಅಗಲಿತೆಂದು ದಣ್ಣಾಯಕರು ಪ್ರಾಣಘಾತಕ್ಕೋಸುಗ ಶಸ್ತ್ರಹಿರಿಯಲು ಪರಿವಾರದ ಶರಣರು ತಡೆದು ನಿಲ್ಲಿಸಿ, ನದಿಯಲ್ಲಿ ಹುಡುಕ ತೊಡಗುತ್ತಾರೆ. ಸಿಗದಿರಲು ಸ್ವತಃ ಕೇಶಿರಾಜಯ್ಯನೇ ಹರಿಗೋಲನ್ನೇರಿ ನದಿಯ ಮಧ್ಯೆಕ್ಕೆ ಸಾಗಿ, ಕೈಗೆ ಬರಬೇಕೆಂದು ಶಿವಲಿಂಗವನ್ನು ಕುರಿತು ಪ್ರಾರ್ಥಿಸುತ್ತಾನೆ. ಇವನ ಭಕ್ತಿಗೆ ಮೆಚ್ಚಿ ಮುಳುಗಿದ್ದ ಲಿಂಗವೆದ್ದು ಬಂದು ಕೈಸೇರುವಲ್ಲಿ, ಶಿವ ಪ್ರತ್ಯಕ್ಷನಾಗಿ ಕೇಶಿರಾಜಯ್ಯನನ್ನು ದೇವಲೋಕಕ್ಕೆ ಕರೆದೊಯ್ಯುತ್ತನೆ. ಈ ಘಟನೆಗಳಿಂದ ಮತ್ತು ಈ ಕಾಲದ ಶರಣರ ಘಟನೆಗಳಿಂದ ವ್ಯಕ್ತವಾಗುವ ಮುಖ್ಯ ವಿಷಯಗಳಿವು :

೧. ಎಲ್ಲ ಜಾತಿಯವರಿಗೂ (ಕಿರಾತನಾದ ಜೊಮ್ಮಯ್ಯ, ಮೇದಾರನಾದ ವಂಶವರ್ಧನ) ಶರಣ ಸಮೂಹದಲ್ಲಿ ಮನ್ನಣೆ ಇದ್ದಿತ್ತು.

೨. ಶರಣರು ಬೇರೆ ಬೇರೆ (ಬೇಡ, ಮೇದಾರ, ಸೂಜಿ, ಢಕ್ಕೆ, ನೇಯ್ಗೆ) ಕಾಯಕಗಳನ್ನು ಕೈಕೊಂಡವರಾಗಿದ್ದರು.

೩. ಕೆಲವರು ಮಾಂಸಾಹಾರಿಗಳಾಗಿದ್ದರೂ ಇದರ ಬಗ್ಗೆ ನಿರುತ್ತೇಜನವಿದ್ದಿತು. (ಮುಂದೆ ಬಸವಯುಗದಲ್ಲಿ ಇದು ನಿಷಿದ್ಧವಾಗಿ ಹೋಯಿತು).

೪. ವೈಷ್ಣವ ಮತ್ತು ಜೈನಗಳೆಂಬ ತಳವೂರಿದ್ದ ಧರ್ಮಗಳನ್ನು ಪ್ರತಿಭಟಿಸುತ್ತಿದ್ದರು.

೫. ರಾಜಶಕ್ತಿಯೊಡನೆ ನಿರ್ಭೀತಿಯಿಂದ ವ್ಯವಹರಿಸುತ್ತಿದ್ದರು.

೬. ಲಿಂಗವನ್ನು ಅಂಗೈಯಲ್ಲಿಟ್ಟು, ಇಲ್ಲವೆ ಸಿಂಹಾಸನದ ಮೇಲಿಟ್ಟು ಪೂಜಿಸುತ್ತಿದ್ದರು.

೭. ಇವರ ಉದಾತ್ತ ವಿಚಾರಗಳಿಗೆ ಚಕ್ರವರ್ತಿಗಳ ಪಿರಿಯರಸಿಯರಾದ ಲಕುಮಾದೇವಿ, ಸುಗ್ಗಲೆಯಂಥವರೂ ಶರಣು ಹೋಗಿದ್ದರು.

೮. ಬಸವಾದಿ ಪ್ರಮಥರು 'ಬಿಜ್ಜಳ' ಶಕ್ತಿಯೊಂದಿಗೆ ಸೆಣಸಿದರೆ, ಕೇಶಿರಾಜಾದಿ ಆದ್ಯರು 'ಪೆರ್ಮಾಡಿ' ಶಕ್ತಿಯೊಂದಿಗೆ ಸೆಣಸಿದರು.

ಇವೆಲ್ಲ ಬಸವಾದಿ ಪ್ರಮಥರ ಕಾಲದ ಚಲನವಲನಗಳಿಗೆ ಬೀಜಗಳಾಗಿ ತೋರುತ್ತಿದ್ದು, ಕೇಶಿರಾಜನೇ ಇಲ್ಲಿ ನಾಯಕವ್ಯಕ್ತಿಯಾಗಿ ಕಾಣುತ್ತಾನೆ.

ಕೇಶಿರಾಜನದು ರಾಜಕೀಯದಲ್ಲಿ ದೊಡ್ಡ ಹೆಸರು, ಹಾಗೆಯೇ ಸಾಹಿತ್ಯದಲ್ಲಿಯೂ. ಕ್ರಿ. ಶ. ೧೧೧೭ರ ಕೊಂಡಗುಳಿ ಶಾಸನ 'ಸುಕವಿಶುಕಬಂಧುವನವಸಂತ, ವಚಶ್ರೀವಧೂಕಾಂತ, ಸಾಹಿತ್ಯಸರೋರುಹಮಧುವ್ರತ" ಎಂದು ಈತನ ಸಾಹಿತ್ಯ ಸಿದ್ಧಿಯನ್ನು ಗುರುತಿಸಿದೆ. ಹರಿಹರನು

"ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ
ಅಚ್ಚರಿ ಮಿಗಲ್ಕೆ ಪೇಳ್ವಂ ಶಿವಾನಾಥಂಗೆ
ಪಂಚಾಕ್ಷರಾನುಬಂಧಂ ಛಂದವನುವಾಗೆ
ಪಂಚಮುಖನಾಮದಭಿದಾನ ಬುದ್ದಿಯದಾಗೆ"
ಶಿವವಾಕ್ಯಶಬ್ದಶುದ್ಧಿಯು ವ್ಯಾಕರಣಮಾಗೆ
ಶಿವಭಕ್ತಿ ವೃತ್ತಕ್ಕಲಂಕಾರದಂತಾಗೆ
ಪದ್ಯಂಗಳಂ ಶಿವಂಗನುದಿನಂ ಪೇಳುತಂ
ಚೋದ್ಯವೆನೆ ಶಂಕರಸ್ತೋತ್ರದೊಳೆ ಬಾಳುತಂ"

ಎಂದು ಕೇಶಿರಾಜನ ಕವಿತ್ವದ ಶಿವಪರಿಕರಗಳನ್ನು ವಿವರಿಸಿದ್ದಾನೆ. "ಎಡೆಗೊಂಡು ಶಿವಗೋಷ್ಠಿ ಉರ್ಬುತಿರೆ ಚಂದದೊಳು...... ಶಿವನ ಪದ್ಯವನೋದಿ ಮಿಗೆ ಬೀಗಿ ಬಿರಿವುತಂ.........ಶರಣ ಸಂಗೀತಗೋಷ್ಠಿಯೊಳೇನುವಜೆಯದಿರೆ.......ಮಾತು ಮಾತಿಂ ಪುರಾತನರ ಗೀತದ ಮೇಲೆ ಶಿವಗೋಷ್ಠಿಯಂಕುರಿಸೆ....ಗೀತಕ್ಕೊಮ್ಮೊಮ್ಮೆ ಪೊಡಮಡುತೆ.... ಪುರಾತನ ಗೀತ ಗದ್ಯಪದ್ಯಜನಿತ ಭಕ್ತಿರಸಾಮೃತಾಸ್ವಾದಂ........ ಶಿವಗೋಷ್ಠಿಯೊಳಗಿರ್ದು ಪರಮಸುಖಮಂ ತಾಳ್ದು......... ಪದ್ಯಂಗಳೋದುತಂ ಮೆಯ್ಯಿಕ್ಕಿ ನಿಂದಿರಲು" ಇತ್ಯಾದಿ ಮಾತುಗಳಲ್ಲಿ ಕೇಶಿರಾಜನ ಸಾಹಿತ್ಯಿಕ ಚಟುವಟಿಕೆಗಳನ್ನು ಹರಿಹರ ಸೂಚಿಸಿದ್ದಾನೆ. "ಶಿವಪೂಜೆಯಂ ಮಾಡುವಾಗ ಕಂದ, ವೃತ್ತ, ಗ್ರಂಥ, ತ್ರಿವಿಧಿ, ರಗಳೆ, ವಚನ, ಪದ, ಪದ್ಯ, ಗದ್ಯ, ದಂಡಕ, ಅಷ್ಟಕ ಇವು ಮೊದಲಾದವುಗಳಿಂದ ಲಿಂಗವ ದಿನಂಪ್ರತಿಯಲ್ಲಿ........" ಪೂಜಿಸುತ್ತಿದ್ದನೆನ್ನುತ್ತ ಶಾಂತಲಿಂಗದೇಶಿಕನು ಕೇಶಿರಾಜ ರಚಿಸಿದ ಸಾಹಿತ್ಯಪ್ರಕಾರಗಳನ್ನು ಎತ್ತಿನುಡಿದಿರುವನು. ಈ ಹೇಳಿಕೆಗಳಿಗೆ ಸಾಕ್ಷಿಯಾಗಿ ಈತನ ವಿಪುಲ ಸಾಹಿತ್ಯರಾಶಿಯಲ್ಲಿ ಈ ವರೆಗೆ ೭ ಕೃತಿಗಳು ಮಾತ್ರ ಲಭಿಸಿವೆ. ಇವುಗಳಲ್ಲಿ 'ಮಂತ್ರಮಹತ್ವದ ಕಂದ'ವನ್ನು ಕವಿಚರಿತೆಕಾರರು ಗುರುತಿಸಿರುವರು. 'ಲಿಂಗ ಸ್ತೋತ್ರದ ಕಂದ-೧, ಮತ್ತು 'ಲಿಂಗಸ್ತೋತ್ರದ ಕಂದ-೨' ಇವು ೧೯೬೮, ೧೯೭೨ ರಲ್ಲಿ ನನ್ನಿಂದ ಬೆಳಕಿಗೆ ಬಂದವು.[3] 'ನವರತ್ನಮಾಲಾ'

೩. ಪ್ರಬುದ್ಧ ಕರ್ನಾಟಕ ೫೦-೩ ಮತ್ತು ಚಿತ್ಪ್ರಭೆ(ಶ್ರೀ ಜಗದ್ಗುರು ಮೂರುಸಾವಿರ ಮಠದ ಪ್ರಕಟಣೆ) ಪು. ೬೨೩.

ಡಾ. ವಿ.ಬಿ. ರಾಜೂರ ಅವರಿಂದ[೪] ೧೯೭೭ರಲ್ಲಿ, ಶೀಲಮಹತ್ವದ ಕಂದ ಶ್ರೀ ಜಿ. ಎ. ಶಿವಲಿಂಗಯ್ಯನವರಿಂದ[೫] ೧೯೭೮ರಲ್ಲಿ ಬೆಳಕು ಕಂಡವು. 'ಅಳಲಾಷ್ಟಕ'ಹೆಸರಿನ ಅಷ್ಟಕವನ್ನು ಎಸ್. ಶಿವಣ್ಣ, ಬಿ. ಬಿ. ಬಿರಾದಾರ ಸೇರಿ ೧೯೮೪ರಲ್ಲಿ (ಬಸವಪಥ ೬-೬) ಹೊರತಂದರು. ಕೇಶಿರಾಜ ಡಣ್ಣಾಯಕರ ಕಂದ' ಹೆಸರಿನ ೧೦೫ ಕಂದಪದ್ಯಗಳ[*] ಕೃತಿ ೧೯೮೫ರಲ್ಲಿ ಎಸ್. ಶಿವಣ್ಣ ಅವರ ಮೂಲಕ (ಸಾಧನೆ ೧೪-೧) ಪ್ರಕಟವಾಯಿತು. ಹೀಗೆ ಈವರೆಗೆ ಇವನ ಹೆಸರಿನಲ್ಲಿ ೭ ಕೃತಿಗಳು ಲಭ್ಯವಾಗಿವೆ.

ಈ ಕೃತಿಗಳನ್ನು ಸೂಕ್ಷ್ಮವಾಗಿ ಓದಿದರೆ ಇಲ್ಲಿಯ ಪದ್ಯಗಳು ಕೇಶಿರಾಜಕೃತವಾಗಿದ್ದರೂ 'ನವರತ್ನಮಾಲಾ' 'ಅಳಲಾಷ್ಟಕ'ಗಳನ್ನು ಹೊರತುಪಡಿಸಿ ಮಿಕ್ಕವುಗಳಿಗೆ 'ಗ್ರಂಥರೂಪ' ಕೊಟ್ಟವರು ತರುವಾಯದ ವೀರಶೈವ ಸಂಕಲನಕಾರರೆಂದು ತೋರುತ್ತದೆ. ೧೨ನೆಯ ಶತಮಾನದ ವೀರಶೈವ ವಚನರಾಶಿಯಿಂದ ಏಕೋತ್ತರ ಶತಸ್ಥಲ, ಲಿಂಗಲೀಲಾವಿಲಾಸ ಚಾರಿತ್ರ್ಯ, ಶೂನ್ಯಸಂಪಾದನೆಗಳನ್ನು ಸಂಪಾದಿಸಿದಂತೆ ಕೇಶಿರಾಜನ ಸಾಹಿತ್ಯರಾಶಿಯಿಂದ ಒಂದೊಂದು ವಿಷಯಕ್ಕೆ ಸಂಬಂಧಿಸಿದ ಪದ್ಯಗಳು ಸಂಕಲನಕಾರರಿಂದ ಸಂಪಾದಿಸಲ್ಪಟ್ಟಿವೆಯೆಂಬ ಭಾವನೆ ಹುಟ್ಟುತ್ತದೆ. ಇದನ್ನು ಎರಡು ಆಧಾರಗಳಿಂದ ಸ್ಪಷ್ಟೀಕರಿಸಬಹುದು.

೧. ಲಿಂಗಮಹತ್ವದ ಕಂದ-೧ ಮತ್ತು ೨ರಲ್ಲಿ ೪೦ ಪದ್ಯಗಳು ಪುನರುಕ್ತಗೊಂಡಿವೆ. ಬಹುಶಃ ಇಬ್ಬರೂ ಸ್ವತಂತ್ರವಾಗಿ ಸಂಗ್ರಹ ಮಾಡಿರುವುದರಿಂದಲೇ ಈ ಪದ್ಯಗಳು ಎರಡರಲ್ಲಿಯೂ ಸೇರಿವೆ.

೨. ಮಂತ್ರಮಹತ್ವದ ಕಂದದ ಕೆಲವು ಹಸ್ತಪ್ರತಿಗಳ ಆರಂಭ ಮತ್ತು ಅಂತ್ಯಗಳಲ್ಲಿ "ಯಳಮಲೆಯ ಗುರುಶಾಂತದೇವರು ಸೇರಿಸಿದ ಷಡಕ್ಷರಿಯ ಕಂದ", "ಯಳಮಲೆಯ ಗುರುಶಾಂತದೇವರು ಸೇರಿಸಿದ ಮಂತ್ರಮಹತ್ವದ ಕಂದ" ಎಂದೂ, ಲಿಂಗಸ್ತೋತ್ರದ ಕಂದ-೨ರ ಆದಿಯಲ್ಲಿ "ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ ಕೇಶಿರಾಜ...." ಎಂದೂ ಹೇಳಲಾಗಿದೆ.

ಹೀಗಾಗಿ ಪದ್ಯರಚನೆ ಕೇಶಿರಾಜನದೆಂದೂ ಗ್ರಂಥರಚನೆ ಸಂಪಾದಕರದೆಂದೂ ಹೇಳುವುದು ನ್ಯಾಯಸಮ್ಮತವೆನಿಸುತ್ತದೆ.

೧. **ಮಂತ್ರಮಹತ್ವದ ಕಂದ** : ಈ ಕೃತಿ ೧೯೦೭ರಷ್ಟು ಪೂರ್ವದಲ್ಲಿಯೇ ಶ್ರೀ ಆರ್. ನರಸಿಂಹಾಚಾರ್ ಅವರಿಂದ ಗುರುತಿಸಲ್ಪಟ್ಟು, ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳಿಂದ ೨ ಸಲ ಪ್ರಕಟವಾಗಿದೆ.[$] "ಷಡಕ್ಷರಿಯ ಕಂದ" ಎಂಬ ಇದರ ಪರ್ಯಾಯನಾಮವೇ ಸೂಚಿಸುವಂತೆ ಇದು "ಓಂ" ಎಂಬ ಪ್ರಣವ ಮತ್ತು "ನಮಃ ಶಿವಾಯ" ಎಂಬ ಶಿವಪಂಚಾಕ್ಷರಿಯ ಸಂಪುಟವಾದ "ಓ ನಮಃ ಶಿವಾಯ" ಎಂಬ ಷಡಕ್ಷರಿ ಮಂತ್ರದ ಮಹಿಮೆಯನ್ನು ನಿರೂಪಿಸುತ್ತದೆ. ಲೋಕಸಂಚಾರಿಯಾದ

---

೪. ಕರ್ನಾಟಕ ಭಾರತಿ ೯-೪

೫. ಬಸವ ಜರ್ನಲ್ ೩-೨

* ಶ್ರೀ ಶಿವಣ್ಣ ಅವರ - ಪ್ರಕಟನೆಯಲ್ಲಿ ೧೧೧ ಪದ್ಯಗಳಿವೆ. ಆದರೆ ಇಲ್ಲಿಯ ಪುನರುಕ್ತಗಳನ್ನು ತೆಗೆದುಹಾಕಿ, ನಾವು ೧೦೫ ಪದ್ಯ ಉಳಿಸಿಕೊಂಡಿದ್ದೇವೆ.

$ ಬಿ. ಶಿವಮೂರ್ತಿಶಾಸ್ತ್ರೀಗಳಿಗೆ ಮೊದಲು ಬೀಚನಹಳ್ಳಿ ಬಸವಾರಾಧ್ಯರು ಪ್ರಕಟಿಸಿರುವುದಾಗಿ ಎಸ್. ಶಿವಣ್ಣ ಅವರಿಂದ ತಿಳಿದುಬರುತ್ತದೆ.

ಮನಸ್ಸನ್ನು ಶಿವಸಂಚಾರಿಗೊಳಿಸಲು ಈ ಮಂತ್ರ ಪರಮಮಾಧ್ಯಮ. ಈ ಶಿವನಾಮ ಶಿವನಿಗಿಂತ ಮಹತ್ವಪೂರ್ಣವಾದುದೆಂದು ನಂಬಿದ ಭಕ್ತನಿಗೆ ಇದರ ಜಪ, ಉಸಿರು–ಪ್ರಾಣ.

ಪ್ರಸ್ತುತ ಕೃತಿಯಲ್ಲಿ ೧೧೦ ಕಂದಪದ್ಯಗಳಿದ್ದು (ಹೆಚ್ಚಿನದಾಗಿ ಅನುಬಂಧದಲ್ಲಿ ೫ ಕಂದಪದ್ಯಗಳಿಗೆ) ಪ್ರತಿಯೊಂದೂ "ಓಂ ನಮಃ ಶಿವಾಯೆಂಬ ಪದಂ" ಎಂಬ ಮುದ್ರಿಕೆಯಿಂದ ಮುಗಿಯುತ್ತವೆ.

ಆರಕ್ಕರದೀ ಮಂತ್ರಂ
ಮೂರುಂ ಕಣ್ಣಭವನಿಂದ ವೆಗ್ಗಳ ದೈವಂ
ಬೇರಿಲ್ಲವೆಂದು ಧಾತ್ರಿಗೆ
ಸಾರಿದೆನಾಂ ಕೇಶಿರಾಜ ದಂಡಾಧೀಶಂ ॥

ಎಂಬ ಪದ್ಯ ಕೃತಿಯ ಕೊನೆಯಲ್ಲಿ ಬರುತ್ತದೆ.

೨. ಲಿಂಗಸ್ತೋತ್ರದ ಕಂದ–೧ : ನೂರು ಕಂದಪದ್ಯಗಳನ್ನೊಳಗೊಂಡ ಈ ಕೃತಿಯ ವಸ್ತು ಹೆಸರೇ ಸೂಚಿಸುವಂತೆ 'ಲಿಂಗಮಹತ್ವ' ನಿರೂಪಣೆಯಾಗಿದೆ. ಭಕ್ತನ ಮೊರೆ ಮಡುಗಟ್ಟಿದಂತಿರುವ ಇದರ ಎರಡು ಹಸ್ತಪ್ರತಿಗಳು ಸಿಕ್ಕಿದ್ದು, ಒಂದು ಧಾರವಾಡದ ಕನ್ನಡ ಅಧ್ಯಯನ ಪೀಠದಲ್ಲಿ, ಇನ್ನೊಂದು ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿವೆ."[೧] ಧಾರವಾಡದ ಪ್ರತಿಯಲ್ಲಿ ೧೨ನೆಯ ಪದ್ಯದ ಉತ್ತರಾರ್ಧದಿಂದ ೨೬ನೆಯ ಪದ್ಯದ ಪೂರ್ವಾರ್ಧದ ವರೆಗಿನ ಭಾಗವನ್ನೊಳಗೊಂಡ ಒಂದು ಗರಿ ಕಳೆದು ಹೋದರೆ, ಲಿಪಿಕಾರನ ವಿಸ್ಮೃತಿಯಿಂದಾಗಿ ೮೭ನೆಯ ಪದ್ಯವೂ ಕೈಬಿಟ್ಟು ಹೋಗಿದೆ. ಮೈಸೂರು ಪ್ರತಿಯ, ಮೊದಲ ಓಲೆಗಳು ಕಳೆದುಹೋದ ಕಾರಣ, ಪ್ರಾರಂಭದ ೨೯ ಪದ್ಯಗಳಿಲ್ಲ. ಆದರೆ ಧಾರವಾಡದ ಪ್ರತಿಯಲ್ಲಿ ಇಲ್ಲದ ೮೭ನೆಯ ಪದ್ಯ ಮಾತ್ರ ಇದೆ. ಕರ್ನಾಟಕ ಕವಿ ಚರಿತೆಯಲ್ಲಿ (ಪರಿಷತ್ ಮುದ್ರಣ ೧೯೬೧ ಪು. ೫೧೨) 'ಶಿವಪ್ರಾರ್ಥನಾಶತಕ' ಹೆಸರಿನ ಕೆಳಗೆ "ನೋಡಿ ನಲಿನಲಿದು......." "ಹರನ ದಯಾಮೃತ.........." "ಬಾಲಂ ಜನನಿಯಗಲ್ಕೆಗೆ........" ಎಂಬ ಮೂರು ಪದ್ಯಗಳಿವೆ. ಇವು ಲಿಂಗಮಹತ್ವದ ಕಂದಕ್ಕೇ ಸಂಬಂಧಿಸಿರುವುದರಿಂದ, ಈ ಕೃತಿ ಕವಿಚರಿತೆಕಾರರ ಕಣ್ಣಿಗೆ ಬಿದ್ದಿದ್ದಿತೆಂದೂ ಇದರ ಇನ್ನೊಂದು ಹೆಸರು "ಶಿವಪ್ರಾರ್ಥನಾ ಶತಕ"ವೆಂದೂ ವೇದ್ಯವಾಗುತ್ತದೆ.

೩. ಲಿಂಗಸ್ತೋತ್ರದ ಕಂದ–೨ : ಒಂದುನೂರಾ ಎಂಟು ಕಂದಪದ್ಯಗಳ ಕೃತಿಯಿದು. ಹೆಸರೇ ಸೂಚಿಸುವಂತೆ ಇದೂ 'ಲಿಂಗಮಹತ್ವ'ವನ್ನು ಹೇಳುತ್ತದೆ. ಭಕ್ತನ ದೈನ್ಯಭಾವವನ್ನು ಒಳಗೊಂಡಿರುವ ಲಿಂಗಸ್ತೋತ್ರದ ಕಂದ–೧ರಲ್ಲಿಯ ೪೦ ಪದ್ಯಗಳು ಇಲ್ಲಿವೆ. ಕಾರಣ ಇದು ಒಟ್ಟು ೬೮ ಹೆಚ್ಚಿನ ಪದ್ಯಗಳನ್ನು ಒದಗಿಸುತ್ತದೆ. ಈ ಕೃತಿಯ ಒಂದೇ ಪ್ರತಿ ಲಭಿಸಿದ್ದು, ಇದರ ಎಲ್ಲ ಗುರಿಗಳ ಒಂದು ಮೂಲೆಯನ್ನು ಹುಳುತಿಂದ ಕಾರಣ, ಬಹಳಷ್ಟು ಪದ್ಯಗಳು ಪೂರ್ಣಸ್ಥಿತಿಯಲ್ಲಿ ಸಿಗುವುದಿಲ್ಲ. ಕರ್ನಾಟಕ ಕವಿಚರಿತೆಯಲ್ಲಿ (ಪರಿಷತ್ ಮುದ್ರಣ ೧೯೬೧ ಪು. ೫೧೨) 'ಶಿವಪ್ರಾರ್ಥನಾಶತಕ' ಹೆಸರಿನ ಕೆಳಗಿರುವ ಮೂರು ಪದ್ಯಗಳಲ್ಲಿ ಒಂದಾದ 'ನೋಡಿ ನಲಿನಲಿದು...' ಎಂಬುದು ಇಲ್ಲಿಯೂ ಕಂಡುಬರುತ್ತದೆ.

---

೧. ಪ್ರಬುದ್ಧ ಕರ್ನಾಟಕ ೫೦–೩, ೫೧–೧ ನೋಡಿರಿ

೪. ಕೇಶಿರಾಜ ಡಣಾಯಕರ ಕಂದ : ೨೧೪ ಕಂದ ಪದ್ಯಗಳ ಓಲೆಕಟ್ಟಿನಿಂದ, ಅಪ್ರಕಟಿತ ೧೧೦ ಪದ್ಯಗಳನ್ನಾಯ್ದು, ಇವುಗಳಲ್ಲಿ ೫ ಪದ್ಯಗಳನ್ನು ಮಂತ್ರ ಮಹತ್ವದ ಕಂದಕ್ಕೆ ಅನುಬಂಧವಾಗಿ ಜೋಡಿಸಿ, ಮಿಕ್ಕ ೧೦೫ ಪದ್ಯಗಳನ್ನು ಇಲ್ಲಿ ಇಟ್ಟುಕೊಳ್ಳಲಾಗಿದೆ. ಇವು 'ಲಿಂಗಸ್ತೋತ್ರದ ಕಂದ' ಧೋರಣೆಯ ಪದ್ಯಗಳಿದ್ದು, ಭಕ್ತನ ಆರ್ತನಾದ, ಲಿಂಗದ ಮಹತ್ವ ಈ ಕೃತಿಯ ಸ್ಥಾಯಿಯಾಗಿದೆ.

೫. ಶೀಲಮಹತ್ವದ ಕಂದ : ಒಂದುನೂರಾ ಒಂದು ಕಂದಪದ್ಯಗಳ ಕೃತಿಯಿದು. "ಕೇಶಿರಾಜ ದಣಾಯಕರು ನಿರೂಪಿಸಿದ ಕಂದ" ಹೆಸರಿನಲ್ಲಿ ಲಭಿಸಿದ ಈ ಕೃತಿ, ವೀರಶೈವದ ೬೪ ಶೀಲಗಳನ್ನು ವಿವರಿಸುವುದರಿಂದ 'ಶೀಲಮಹತ್ವದ ಕಂದ' ಎಂದು ನಾವು ಹೆಸರಿಸಿದ್ದೇವೆ–ಮಂತ್ರಮಹತ್ವದ ಕಂದ ಎಂಬ ಮಾದರಿಯಲ್ಲಿ, ವೀರಶೈವದ ಆಚಾರಕ್ಕೆ ಸಂಬಂಧಪಟ್ಟ ಅಪೂರ್ವ ಕೃತಿಯಿದು. ಈವರೆಗೆ ತಿಳಿದು ಬಂದಂತೆ ವೀರಶೈವನಿಗೆ ಅವಶ್ಯವಾದ ೬೪ ಶೀಲಗಳನ್ನು ವಿವರಿಸುವ ಉಪಲಬ್ಧ ಪ್ರಥಮಗ್ರಂಥ ಪಾಲ್ಕುರಿಕೆ ಸೋಮೇಶ್ವರನ "ಶೀಲಸಂಪಾದನೆ"ಯಾಗಿದ್ದಿತು. ಆ ಕೀರ್ತಿ ಈಗ ಕೇಶಿರಾಜನ ಪ್ರಸ್ತುತ ಕೃತಿಗೆ ಲಭಿಸುತ್ತಿದ್ದು, ಈ ಶೀಲಗಳು ಕೇಶಿರಾಜನಷ್ಟು ಪೂರ್ವದಲ್ಲಿಯೇ ವೀರಶೈವ ಚೌಕಟ್ಟಿನಲ್ಲಿ ಸೇರಿದುದು ಸ್ಪಷ್ಟವಾಗುತ್ತದೆ. ಇಲ್ಲಿಯ ಗುರುಸೇವೆ, ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಕಾಯಕನಿಷ್ಠೆ ಮೊದಲಾದ ಮೌಲಿಕ ವಿಚಾರಗಳು ಬಸವಪೂರ್ವದ 'ಶರಣಸಿದ್ಧಾಂತ'ದತ್ತ ನಮ್ಮ ಗಮನ ಸೆಳೆಯುತ್ತವೆ.

೬. ನವರತ್ನಮಾಲಾ : ಕೇಶಿರಾಜನು "ನಿಚ್ಚಲೆಂಟುಂ ಪದ್ಯಮಂ ಸೋಮನಾಥಂಗೆ" ಹೇಳುತ್ತಿದ್ದನೆಂದು ಹರಿಹರ ತಿಳಿಸುತ್ತ, ಈತನ ಲಘುಸಾಹಿತ್ಯ ಪ್ರಕಾರವನ್ನು ಸೂಚಿಸುತ್ತಾನೆ. ಈ ವರ್ಗಕ್ಕೆ ಸಂಬಂಧಪಟ್ಟ ೯ ಪದ್ಯಗಳ 'ನವರತ್ನಮಾಲಾ' ಹೆಸರಿನ ಕೃತಿಯೊಂದು ಇತ್ತೀಚೆ ಲಭಿಸಿದೆ. "ಕಂಡೆರ್ದದಣಿದು ಕುಳಿರ್ಕೋಡಿತೆನ್ನಂತರಂಗಂ" ಎಂದು ಮುಕ್ತಾಯವಾಗುವ ಪ್ರತಿಯೊಂದು ಪದ್ಯದ ವಸ್ತು ಶಿವಸ್ತುತಿ. ದಟ್ಟ ಸಂಸ್ಕೃತಮಯವಾಗಿರುವ ಈ ಕೃತಿಯ ಅಂತರಂಗದಲ್ಲಿ ದಟ್ಟ ಶಿವಭಕ್ತಿ ಮಡುಗಟ್ಟಿ ನಿಂತಿದೆ.

೭. ಅಳಲಾಷ್ಟಕ : ಇದೂ ಕೇಶಿರಾಜನ ಲಘುಸಾಹಿತ್ಯ ಪ್ರಕಾರಕ್ಕೆ ಸೇರುತ್ತದೆ. ಇದರಲ್ಲಿಯ ೧, ೫ನೆಯ ಪದ್ಯಗಳು 'ಕೇಶಿರಾಜ ಡಣಾಯಕರ ಕಂದದ' ೯೬, ೯೭ನೆಯ ಪದ್ಯಗಳಾದುದರಿಂದ ಇಡೀ ಅಳಲಾಷ್ಟಕ ಆತನದೆಂದು ಭಾವಿಸಲಾಗಿದೆ. ಇದರ ಮುದ್ರಿಕೆ "ಪಂಪಾರಮಣ" ಇರುವುದು ಚಿಂತನೀಯವೆನಿಸಿದೆ. ಶಿವನ ಮಹತ್ವವನ್ನು ಪ್ರಶ್ನಿಸುವವನನ್ನು ದಂಡಿಸದ ಹೊರತು ನನ್ನ ಅಳಲು, ತಳಮಳ ಶಾಂತವಾಗುವುದಿಲ್ಲ ಎಂಬ ಅರ್ಥದ ಪದ್ಯಗಳಿವು.

ನವರತ್ನಮಾಲೆ, ಅಳಲಾಷ್ಟಕಗಳನ್ನು ಬಿಟ್ಟರೆ ಮಿಕ್ಕುವೆಲ್ಲ ೧೦೦,೧೦೮,೧೧೦ ಕಂದ ಪದ್ಯಗಳ ಕೃತಿಗಳಾದುದರಿಂದ ಇವು ಶತಕಸಾಹಿತ್ಯ ವರ್ಗಕ್ಕೆ ಸೇರುತ್ತವೆ. ಲಿಂಗಸ್ತೋತ್ರದ ಕಂದದ ಇನ್ನೊಂದು ಹೆಸರು "ಶಿವಪ್ರಾರ್ಥನಾಶತಕ"ವೆಂಬುದನ್ನು ಗಮನಿಸಿದರೆ ಕನ್ನಡ ಶತಕಸಾಹಿತ್ಯದ 'ಆದಿಕವಿ'ಯೆನಿಸುತ್ತಾನೆ, ಕೇಶಿರಾಜ. ಇವೆಲ್ಲ ಈತನ ಕಂದ ಮತ್ತು ವೃತ್ತ ಗ್ರಂಥಗಳು. ಹರಿಹರ–ಶಾಂತಲಿಂಗದೇಶಿಕರು ಹೇಳುವ ಈತನ ಮಿಕ್ಕ ಸಾಹಿತ್ಯಪ್ರಕಾರಗಳ ಶೋಧ ನಡೆಯಬೇಕಾಗಿದೆ.

ಪ್ರಸ್ತುತ ಕೃತಿಗಳನ್ನು ವೀರಶೈವತತ್ವದ ಹಿನ್ನೆಲೆಯಲ್ಲಿ ಗಮನಿಸಿದರೆ ಮಂತ್ರಮಹತ್ವದ ಕಂದ, ಲಿಂಗಮಹತ್ವದ ಕಂದ–೧ ಮತ್ತು ೨, ಅಷ್ಟಾವರಣ ವರ್ಗಕ್ಕೆ ಸಂಬಂಧಿಸಿದ ಮಂತ್ರ ಮತ್ತು

ಲಿಂಗಗಳನ್ನು ಕುರಿತು ಬರೆದುವಾಗಿವೆಯಂಬುದು ಸ್ಪಷ್ಟ. "ಶಿಲಮಹತ್ವದ ಕಂದ" ಮಾತ್ರ ವೀರಶೈವದ ಆಚಾರಗಳನ್ನು ನಿರೂಪಿಸುತ್ತಿದ್ದು, ಆ ಕಾಲದ ವೀರಶೈವದ ಚಿತ್ರವೊಂದನ್ನು ಇದರಲ್ಲಿ ಕಾಣಬಹುದಾಗಿದೆ. ಅದರಲ್ಲಿಯೂ ಗುರುಲಿಂಗಜಂಗಮ (ತ್ರಿವಿಧ), ಕಾಯಕ, ಭವಿ, ಭಕ್ತ, ಮಹೇಶ, ಚರ, ಜಂಗಮ, ವೀರಶೈವ, ಲಿಂಗಾಯತವಂತ, ಸಮಯಾಚಾರ, ಪ್ರಸಾದ, ಆಯತ, ಸ್ವಾಯತ, ದಶವಿಧ ಪಾದೋದಕ, ಏಕಾದಶ ಪ್ರಸಾದ, ಉಪಾಧಿ, ನಿರುಪಾಧಿ ಇತ್ಯಾದಿ ಪರಿಭಾಷೆಗಳನ್ನು ವ್ಯಾಖ್ಯೆಯುಕ್ತವಾಗಿ ಬಳಸಿದುದನ್ನು ಇಲ್ಲಿ ಗಮನಿಸಬೇಕು.

ಈ ತತ್ವಗಳಷ್ಟೇ ಅಲ್ಲ, ಇವುಗಳನ್ನು ವ್ಯಕ್ತಪಡಿಸಿದ ಮಾತಿನ ರೀತಿಯೂ ಮುಂದಿನ ವಚನಕಾರರ ಮೇಲೆ ದಟ್ಟ ಪ್ರಭಾವ ಬೀರಿದುದನ್ನು ಇಲ್ಲಿ ನೋಡಬಹುದು–

೧. ಜರೆ ಮರಣ ದುರಿತ ಕೋಟಲೆ
ನೆರೆದಿಹ ನಿಜಭವ ಶರೀರಕರ್ಮಾಂತರದೊಳ್
ಪರವಶದಗ್ಗದ ಕುಲಗಳ
ಪರಿಹರಿಸುವುದೊಂ ನಮಃ ಶಿವಾಯೆಂಬ ಪದಂ ॥ (ಮಂತ್ರಮಹತ್ವದ ಕಂದ ೧೭)

"ಭವಬಂಧನ ದುರಿತಂಗಳ ಗೆಲುವೊಡೆ ಓಂ ನಮಃ ಶಿವಾಯ
ಶರಣೆಂದೊಡೆ ಸಾಲದೆ"(ಬ. ವ. ೭೯)

೨. ಕರಿಯಂಕುಶಕಂಜುಗುಮಾ
ಗಿರಿಯಂಜುಗು ಕುಲಿಶಕ್ಕೆ ತಮಂಧಂ ಪರಿಗುಂ
ಖರಕರಕಿರಣಕ್ಕೆಮುಗಂ
ಪರಿವೊಡೆ ಪಾಪೋಂ ನಮಃ ಶಿವಾಯೆಂಬ ಪದಂ ॥ (ಮಂತ್ರಮಹತ್ವದ ಕಂದ ೯೪)

ಕರಿಯಂಜುವುದಂಕುಶಕ್ಕಯ್ಯಾ,
ಗಿರಿಯಂಜುವುದು ಕುಲಿಶಕ್ಕಯ್ಯಾ
ತಮಂಧವಂಜುವುದು ಜ್ಯೋತಿಗಯ್ಯಾ
ಕಾನನವಂಜುವುದು ಬೇಗೆಗಯ್ಯಾ,
ಪಂಚಮಹಾಪಾತಕವಂಜುವುದು ಕೂಡಲಸಂಗನ ನಾಮಕ್ಕಯ್ಯಾ. (ಬ. ವ. ೭೫)

೩. ಉರಿಯಾ ಬಲು ಹೊಯ್ಲಿಂಗಾಂ
ತಿರುಬಲ್ಲುವೆಯರಗಿನಲ್ಪ ಬೊಂಬೆಗಳೆಲ್ಲಂ..... (ಮಂತ್ರಮಹತ್ವದ ಕಂದ ೯೫)

"ಅರಗಿನ ಪುತ್ಥಳಿಯ ಉರಿಯ ನಾಲಗೆ ಹೊಯಿದು ಮಾತನಾಡುವ ಸರಸಬೇಡ"
(ಬ. ವ. ೬೬೦)

೪. ಶಿವನೆಂದು ಕಂಡ ಬಳಿಕಂ
ಅವಗುಣಿಯವರೆಂದು ನೀಕರಿಸಿ ಕೆಡಬೇಡಂ .... (ಶೀಲಮಹತ್ವದ ಕಂದ ೧೨)

"ಆ ಜಂಗಮ ಹರನೆಂದು ಕಂಡು, ನರನೆಂದು ಭಾವಿಸಿದರೆ ನರಕ ತಪ್ಪದು" (ಬ.ವ. ೪೨೦)

೫. ಲಿಂಗಪ್ರಸಾದವಲ್ಲದೆ
ನುಂಗಿದು(ವುಂ) ಕಿಲ್ವಿಷಂಗಳ್...... (ಶಿಲಮಹತ್ವದ ಕಂದ ೧೩)

"ಲಿಂಗವಿಲ್ಲದೆ ಉಗುಳು ನುಂಗಿದಡೆ ಅಂದಂದಿಗೆ ಕಿಲ್ಬಿಷವಯ್ಯಾ" (ಬ. ವ. ೬೦೮)

೬. ಕಾಮಿಸಿತು ಕಾಯಭೋಗಂ
ಕಾಮಿಸದದು ಲಿಂಗಭೋಗಂ.............. (ಶೀಲಮಹತ್ವದ ಕಂದ ೮೨)

"ಬಯಸಿ ಬಂದುದು ಅಂಗಭೋಗ,
ಬಯಸದೆ ಬಂದುದು ಲಿಂಗಭೋಗ" (ಬ. ವ. ೫೮೫)

ಇತ್ಯಾದಿ ಸಮಾನ ಅಭಿವ್ಯಕ್ತಿಗಳನ್ನು ನೋಡಿದರೆ ಕೇಶಿರಾಜನ 'ಆದ್ಯತೆ'ಯ ಘನತೆ ಗೊತ್ತಾಗುತ್ತದೆ.

ಹರಿಹರ, ಶಾಂತಲಿಂಗದೇಶಿಕರು ಹೇಳುವಂತೆ ಕೇಶಿರಾಜನ ಸಾಹಿತ್ಯಕೃಷಿ ವಿಪುಲವೂ ವೈವಿಧ್ಯಪೂರ್ಣವೂ ಆಗಿದೆ. ಆದರೆ ಇದರಲ್ಲಿ ನಮಗೆ ಲಭಿಸಿದುದು ತುಂಬ ಕಡಿಮೆ. ಹೀಗೆ ಲಭಿಸಿದ ಸಾಹಿತ್ಯದಲ್ಲಿ ನೆಲೆನಿಂತುವು, ತತ್ವ ಮತ್ತು ಭಕ್ತಿ. ಹೀಗಾಗಿ ಕನ್ನಡ ಸಾಹಿತ್ಯದ "ವೀರಯುಗ"ವನ್ನು ಹಿಂದೆ ಸರಿಸಿ ಮೂಡಿ ನಿಂತ "ಭಕ್ತಿಯುಗ"ಕ್ಕೆ ಈತನು ಅರುಣೋದಯದ ಸೂರ್ಯನಾಗಿ ತೋರುತ್ತಾನೆ.

ಬಸವ, ಹರಿಹರಾದಿಗಳ ಭಕ್ತಿನಿರ್ಭರತೆಗೆ ಸಮಾನವಾದ ಅಭಿವ್ಯಕ್ತಿಗೆ ಉದಾಹರಣೆಯಾಗಿ ಈತನ

ಅಂಗೈಯೊಳಾಲಿಕಲ್ಲುಂ
ಪಿಂಗದೆ ನಡೆ ನೋಡೆ ನೋಡೆ ಕರಗುವ ತೆಱದಿಂ ।
ಲಿಂಗವನೆ ನೋಡಿ ಮತ್ಸ
ರ್ವಾಂಗಂ ನೆಱೆ ಕಱಗಿ ಕೊಱಗುತೆಂದಿರ್ದಪೆನೋ ॥

ಬೆರತಂತಿರೆ ಬೈತಂತಿರೆ
ಕರುವಿಟ್ಟಂತಿರೆ ಜಗುಳ್ದು ನಾಂದಂತಿರೆ ಕಂ ।
ಡರಿಸಿರ್ದಂತಿರೆ ಬೆಚ್ಚಂ
ತಿರೆ ರಮಯಿಕ್ಕೆನ್ನ ಮನದೊಳಭವ ಪದಂಗಳ್ ॥

ಆನುಂ ನೀನುಂ ಬೆಟ್ಟಂ
ಕಾನನಮುಂ ತೀರ್ಥಜಲಮುಮಲ್ಲದೆ ಪೆರತೊಂ ।
ದೇನುಮಣಮಿಲ್ಲದೆಡೆಯೊಳು
ಧ್ಯಾನಿಸುವದಪೇಕ್ಷೆಯೆನಗೆ ಗಿರಿಜಾರಮಣಾ ॥

ಇತ್ಯಾದಿ ಪದ್ಯಗಳು ಮಾಲೆಮಾಲೆಯಾಗಿ ಕಣ್ಣುಮುಂದೆ ನಿಲ್ಲುತ್ತವೆ.

ಶ್ರೀಯಂ ಶಾಶ್ವತಭಕ್ತಿ
ಶ್ರೀಯಂ ತ್ವತ್ಪದವ ನೆನೆವ ಪರಮಾನಂದ ।
ಶ್ರೀಯನೊಲಿದಿತ್ತು ಕೃಪೆಯಿಂ
ಜೀಯ ಶ್ರೀಸೋಮನಾಥ ರಕ್ಷಿಪುದೆನ್ನಂ ॥

ಬಿಡೆಬಿಡೆನುಮೇಶ ನಿಮ್ಮಂ
ಬಿಡೆಬಿಡೆ ನಾನ..... ಲೇಪದ ತೆಱದಿಂ ।
ಪಿಡಿದು ಬಿಡೆನೆಂಬ ನುಡಿಯುಱೆ
ವೊಡಲೊಳಡಂಗಿತ್ತು ಸತ್ತೊಡಾಂ ಬಿಟ್ಟಪೆನೇ ॥

ಇವು ಹರಿಹರನ ರಕ್ಷಾಶತಕದ ಭಕ್ತಿನಿರ್ಭರತೆಯನ್ನು ನೆನಪಿಸುತ್ತವೆ. ಹೀಗಾಗಿ ೧೨ನೆಯ ಶತಮಾನದ ವಿಶಿಷ್ಟ ಸಿದ್ಧಗಳಾದ 'ಭಕ್ತಿ ಸಾಹಿತ್ಯ'ಕ್ಕೆ ಸೆಲೆಯಾಗಿ, 'ಸಾಮಾಜಿಕ ಕ್ರಾಂತಿ'ಗೆ ಅರುಣೋದಯವಾಗಿ, 'ವೀರಶೈವತತ್ವ'ಕ್ಕೆ ತಳಪಾಯವಾಗಿ ಈತನ ಸಾಹಿತ್ಯ ಗೋಚರಿಸುತ್ತದೆ.

ಗ್ರಂಥ ಪರಿಷ್ಕರಣ :

ಕೇಶಿರಾಜನ ಈ ಕೃತಿಗಳನ್ನು ಶಾಸ್ತ್ರಶುದ್ಧವಾಗಿ ಸಂಪಾದಿಸುವಲ್ಲಿ ಬಳಸಲಾದ ಹಸ್ತಪ್ರತಿಗಳು ಮತ್ತು ಅವುಗಳ ವಿವರ ಹೀಗಿದೆ:

೧. ಮಂತ್ರಮಹತ್ವದ ಕಂದ :

ಶ್ರೀ ಜಗದ್ಗುರು ಉರಗಾದ್ರಿ ಗವಿಮಠ ಉರವಕೊಂಡೆ ಅವರಿಂದ ಬಂದ, ಕನ್ನಡ ಅಧ್ಯಯನಪೀಠ ಹಸ್ತಪ್ರತಿ ಭಾಂಡಾರದ ೮೪೦ನೆಯ ತಾಳೆಗರಿ ಪ್ರತಿ. ಹಳಗನ್ನಡ 'ಱ'ಕಾರ ಬಳಕೆ ಇದೆ. ಕೃತಿ ಗರಿ ೮೯ ರಿಂದ ೯೭ರ ವರೆಗೆ ಹಬ್ಬಿಕೊಂಡಿದೆ. ಉದ್ದ. ೭.೫" ಅಗಲ ೧.೯". ಗರಿಯ ಒಂದು ಮಗ್ಗಲು ೯-೧೦ ಸಾಲುಗಳಿವೆ. ಪ್ರಾರಂಭದಲ್ಲಿ "ಶ್ರೀ ಗುರುಬಸವಲಿಂಗಾಯ ನಮಃ ಯೆಳೆಮಲೆಯ ಗುರುಶಾಂತದೇವರು ಸೇರಿಸಿದ ಷಡಕ್ಷರಿಯ ಕಂದ" ಎಂದೂ, ಅಂತ್ಯದಲ್ಲಿ "ದಣ್ಣಾಯಕರ ಕಂದ ಸಮಾಪ್ತ ಮಂಗಳ ಮಹಾಶ್ರೀ ಶ್ರೀ ಶ್ರೀ" ಎಂದೂ ಬರೆಯಲಾಗಿದೆ. ಇದಕ್ಕೆ 'ಮೂ' ಎಂದೂ, ಇದರ ಪಾಠಾಂತರಕ್ಕೋಸುಗ ಬಳಸಿದ ಶ್ರೀ ಬಿ. ಶಿವಮೂರ್ತಿಶಾಸ್ತ್ರಿ ಸಂಪಾದಿತ "ಷಡಕ್ಷರ ಮಂತ್ರ ಮಹಿಮೆ"ಗೆ 'ಶಿ' ಎಂದೂ ಸಂಕೇತ ಕೊಡಲಾಗಿದೆ. ಧಾರವಾಡ ಕನ್ನಡ ಅಧ್ಯಯನಪೀಠದ

೧೪೧೩ನೆಯ ನಂಬರಿನ "ಕೇಶಿರಾಜ ಡಣಾಯಕರ ಕಂದ" ಹೆಸರಿನ ಕೃತಿಯಲ್ಲಿ 'ಮಂತ್ರಮಹತ್ವದ ಕಂದ'ಕ್ಕೆ ಸಂಬಂಧಿಸಿದ ೫ ಹೊಸ ಪದ್ಯಗಳಿದ್ದು, ಅವುಗಳನ್ನು ಈ ದ್ವಿತೀಯ ಆವೃತ್ತಿಯಲ್ಲಿ 'ಅನುಬಂಧ'ವಾಗಿ ಕೊಡಲಾಗಿದೆ.

೨. ಲಿಂಗಸ್ತೋತ್ರದ ಕಂದ–೧ :

ಕನ್ನಡ ಅಧ್ಯಯನ ಪೀಠದ ೧೨೫ನೆಯ ನಂಬರಿನ ತಾಳೆಗರಿ ಪ್ರತಿ. ಮೂಲತಃ ಮಹಾಲಿಂಗಪುರದ ಶ್ರೀಮಹಾಲಿಂಗೇಶ್ವರ ಮಠಕ್ಕೆ ಸಂಬಂಧಿಸಿದುದು. ೮ ಗರಿಗಳಲ್ಲಿ ೧೦೦ ಕಂದಗಳನ್ನು ಅಳವಡಿಸಲಾಗಿದೆ. ೨ನೆಯ ಗರಿ ಇಲ್ಲ. ಹೀಗಾಗಿ ೧೨ನೆಯ ಕಂದದ ಉತ್ತರಾರ್ಧದಿಂದ ೨೬ನೆಯ ಕಂದದ ಪೂರ್ವಾರ್ಧದ ವರೆಗಿನ ಪಾಠ ಕಳೆದು ಹೋಗಿದೆ. ಬರಹ ಸಾಧಾರಣ. ಹಳಗನ್ನಡ 'ಱ' ದ ಬಳಕೆ ಇದೆ. ಕೃತಿಯ ಉದ್ದ ೮" ಅಗಲ ೨". ಗರಿಯ ಒಮ್ಮೈಯಲ್ಲಿ ಹೆಚ್ಚೆಂದರೆ ೯ ಸಾಲುಗಳಿವೆ. ಆದಿಯಲ್ಲಿ "ಕೇಶಿರಾಜದಂಡನಾಥಾಯಂ ನಮಃ । ಶಿವಾಯ ನಮಃ ಶುಭಮಸ್ತು, ಕೇಶಿರಾಜ ದಂಡನಾಥಾಯನಮಃ xxx" ಎಂದೂ, ಅಂತ್ಯದಲ್ಲಿ "ಕೇಶಿರಾಜದಂಡನಾಥರು ನಿರೂಪಿಸಿದ ಲಿಂಗಸ್ತೋತ್ರದ ಕಂದಪದ್ಯಂಗಳ್ಸಮಾಪ್ತಂ ಮಂಗಳಮಹಾ ಶ್ರೀ ಶ್ರೀ ಶಿವಾಯ ನಮಃ ಎಂದೂ ಬರೆಯಲಾಗಿದೆ. ಇದಕ್ಕೆ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ K 848 ನಂಬರಿನ ಪ್ರತಿ (ಸಂಕೇತ – ಮೈ) ಯನ್ನು ಪಾಠಾಂತರಕ್ಕೋಸುಗ ಬಳಸಿದ್ದೇವೆ. ಈ ಲಿಂಗಸ್ತೋತ್ರದ ಕಂದ–೧ಕ್ಕೆ 'I' ಸಂಕೇತ ಕೊಟ್ಟಿದ್ದೇವೆ.

೩. ಲಿಂಗಸ್ತೋತ್ರದ ಕಂದ–೨ :

ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಾಂಡಾರದ ೩೨೭ (ಬ)ನೆಯ ನಂಬರಿನ ತಾಳೆ ಪ್ರತಿ. ಗರಿಗಳ ಉದ್ದ ೬" ಅಗಲ ೨". ಗರಿಯ ಒಂದು ಮಗ್ಗಲು ೨೩ರಿಂದ ೨೬ ವರೆಗೆ ಸಾಲುಗಳಿವೆ. ೧೦೮ ಕಂದಪದ್ಯಗಳನ್ನು ಕೇವಲ ಎರಡೂವರೆ ಗರಿಗಳಲ್ಲಿ (೪೯–೫೧ಅ) ಸಣ್ಣ ಅಕ್ಷರಗಳ ಮೂಲಕ ಹಿಡಿದಿಡಲಾಗಿದೆ. ಪ್ರತಿ ಶುದ್ಧ; ಆದರೆ ತ್ರುಟಿತ. ಎಲ್ಲ ಗರಿಗಳ ಬಲಭಾಗದ ಮೇಲಿನ ಮೂಲೆ ಮುರಿದು ಒಂದು ಕಂದವು ಸಂಪೂರ್ಣ ಸಿಗದಂತಾಗಿದೆ. ಹಳಗನ್ನಡ 'ಱ' ಕಾರ ಬಳಕೆಯಾಗಿದೆ. ಕೃತಿಯ ಆದಿಯಲ್ಲಿ "ಶ್ರೀಗುರು ಬಸವಲಿಂಗಾಯ ನಮಃ । ಸಂಪಾದನೆಯ ಸಿದ್ಧವೀರೇಶ್ವರದೇವರು ಸೇರಿಸಿದ ಕೇಶಿರಾಜ xxx" ಎಂದಿದ್ದರೆ, ಅಂತ್ಯದಲ್ಲಿ 'ಲಿಂಗಸ್ತೋತ್ರದ ಕಂದ ಸಮಾಪ್ತಿ ಮಂಗಳ ಮಹಾ' ಎಂದಿದೆ. ಈ 'ಲಿಂಗಸ್ತೋತ್ರದ ಕಂದ–೨ಕ್ಕೆ II ಸಂಕೇತವನ್ನು ಬಳಸಿದ್ದೇವೆ.

೪. ಕೇಶಿರಾಜ ಡಣಾಯಕರ ಕಂದ :

ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ೧೪೧೩ನೆಯ ನಂಬರಿನ ತಾಳೆ ಪ್ರತಿ. ಇದರಲ್ಲಿ ೨೧೪ ಕಂದ ಪದ್ಯಗಳಿದ್ದು, ಇವುಗಳಲ್ಲಿ ಮಂತ್ರ ಮಹತ್ವದ ಕಂದದ ೫ ಹೊಸ ಪದ್ಯಗಳಿವೆ. ಇವುಗಳನ್ನು ಮತ್ತು ಪ್ರಕಟಿತಗಳನ್ನು ಬಿಟ್ಟು ಅಪ್ರಕಟಿತ ೧೦೫ ಪದ್ಯಗಳನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಎಸ್. ಶಿವಣ್ಣ ಅವರು ಸಾಧನೆ (೧೪–೧)ಯಲ್ಲಿ ಪ್ರಕಟಿಸಿದ್ದ ಈ ಕೃತಿಯನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ.

೫. ಶೀಲಮಹತ್ವದ ಕಂದ :

ಮೈಸೂರಿನ ಮರಿಮಲ್ಲಪ್ಪ ಜ್ಯೂನಿಯರ್ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ. ಜಿ. ಎ. ಶಿವಲಿಂಗಯ್ಯನವರು ಶೋಧಿಸಿದ ತಾಳೆಪ್ರತಿ. ಉದ್ದ ೬" ಅಗಲ ೨". ಪ್ರತಿ ಗರಿಯ ಒಂದು ಕಡೆಗೆ ೯-೧೦ ಪಂಕ್ತಿಗಳಿವೆ. ಕೃತಿ ಒಟ್ಟು ೧೨ ಗರಿಗಳಲ್ಲಿ ಹಬ್ಬಿಕೊಂಡಿದೆ. ಅಕ್ಷರ ದುಂಡಾಗಿವೆ. ಭಾಷೆ ಸಾಧಾರಣ. ಹಳಗನ್ನಡ 'ೞ'ಕಾರ ಬಳಕೆಯಿದೆ. ಪ್ರಾರಂಭದಲ್ಲಿ "ಶ್ರೀಗುರು ಬಸವಲಿಂಗಾಯನಮಃ। ಕೇಶೀರಾಜ ದಣಾಯಕರು ನಿರೂಪಿಸಿದ ಕಂದ" ಎಂದೂ ಅಂತ್ಯದಲ್ಲಿ "ಶ್ರೀ ಕೇಶೀರಾಜ ದಣಾಯಕರು ನಿರೂಪಿಸಿ ಕಂದ ಸಮಾಪ್ತ ಮಂಗಳಮಹಾ ಶ್ರೀ ಶ್ರೀ ಶ್ರೀ" ಎಂದೂ ಬರೆಯಲಾಗಿದೆ. ಈ ಪ್ರತಿಯ ಪಾಠಗಳನ್ನು 'ಮೂ' ಎಂಬ ಸಂಕೇತದಿಂದ ಸೂಚಿಸಿದ್ದೇವೆ.

೬. ನವರತ್ನಮಾಲೆ :

ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಾಂಡಾರದ ೧೪೧೩/೧೧ ನೆಯ ನಂಬರಿನ ತಾಳೆಗರಿ ಪ್ರತಿ. ಇದು ಮೂಲತಃ ಶ್ರೀ ಮರಿಶಾಂತವೀರಸ್ವಾಮಿಗಳು ಗವಿಮಠ ಕೊಪ್ಪಳ ಇವರಿಗೆ ಸಂಬಂಧಿಸಿದುದು. ಇದರ ಉದ್ದ ೩-೯" ಅಗಲ ೧-೬". ಅಕ್ಷರ ಸಣ್ಣ, ಸಾಧಾರಣ. ಒಂದು ಗರಿಯಲ್ಲಿ ೯-೧೦ ಸಾಲುಗಳಿವೆ. ಪ್ರಾರಂಭದಲ್ಲಿ 'ನವರತ್ನಮಾಲೆ' ಎಂದು ಕೊನೆಯಲ್ಲಿ "ಇತಿ ಕೇಶಿರಾಜ ದಂಡನಾಥ ಚೂಡಾಮಣಿ ನಿರೂಪಿಸಿದ ನವರತ್ನಮಾಲೆಗೆ ಸಂತೋಷಮಸ್ತು" ಎಂದು ಬರೆಯಲಾಗಿದೆ. ಈ ಪ್ರತಿಯ ಪಾಠಗಳನ್ನು "ಮೂ" ಸಂಕೇತದಿಂದ ಸೂಚಿಸಿದ್ದೇವೆ.

೭. ಅಳಲಾಷ್ಟಕ :

ಈ ಹೆಸರಿನ ಕೃತಿ ಹಲವು ಹಸ್ತಪ್ರತಿಗಳಲ್ಲಿ ಸಿಗುತ್ತಿದ್ದು, ಕರ್ತೃ ಗೊತ್ತಿರಲಿಲ್ಲ, ಆದರೆ ಇಲ್ಲಿಯ ೧, ೫ನೆಯ ಪದ್ಯಗಳು "ಕೇಶಿರಾಜ ಡಣಾಯಕರ ಕಂದ" (೧೩೧೪) ಕೃತಿಯ ೯೬, ೯೭ನೆಯ ಪದ್ಯಗಳಾಗಿರುವುದರಿಂದ ಈ ಅಷ್ಟಕದ ಕರ್ತೃ ಕೇಶಿರಾಜನೆಂದು ಹೇಳಬಹುದಾಗಿದೆ. ಕನ್ನಡ ಅಧ್ಯಯನ ಪೀಠದ ೨೫೮೯ನೆಯ ಪ್ರತಿ, ಸಿರಿಗೆರೆ ಮಠದ ೧೭೭ನೆಯ ಪ್ರತಿಗಳ ಆಧಾರದಿಂದ ಎಸ್. ಶಿವಣ್ಣ ಮತ್ತು ಬಿ. ಬಿ. ಬಿರಾದಾರ ಪ್ರಕಟಿಸಿದ್ದ (ಬಸವ ಪಥ ೬-೬) ಈ ಕೃತಿಯನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ.

ಹೀಗೆ ಹಸ್ತಪ್ರತಿಗಳ ಸಾಮಗ್ರಿ ತುಂಬ ವಿರಳವಾಗಿರುವುದರಿಂದ ಈ ಕೃತಿಗಳ ಪರಿಷ್ಕರಣ ತುಂಬ ತೊಂದರೆದಾಯಕವೆನಿಸಿತು. 'ಲಿಂಗಸ್ತೋತ್ರದ ಕಂದ-೨' ಮತ್ತು 'ಶೀಲಮಹತ್ವದ ಕಂದ' ಗಳಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಱ ಮತ್ತು ೞ ಅಕ್ಷರಗಳ ಶುದ್ಧ ಬಳಕೆಯನ್ನು ಬಿಟ್ಟರೆ ಮಿಕ್ಕ ಪರಿಷ್ಕರಣ ಕಾರ್ಯವನ್ನು ತುಂಬ ಎಚ್ಚರವಹಿಸಿ ಮಾಡಿದ್ದೇವೆ. ಹೀಗಿದ್ದೂ ಉಳಿದಿರಬಹುದಾದ ದೋಷಗಳನ್ನು ವಿದ್ವಾಂಸರು ಮನ್ನಿಸಬೇಕು.

೨೮ ನವೆಂಬರ ೧೯೯೮ — **ಎಂ. ಎಂ. ಕಲಬುರ್ಗಿ**

❖❖

*

ಪರಿವಿಡಿ

ಅನುಬಂಧ

೧

ಮಂತ್ರಮಹತ್ವದ ಕಂದ

ಶ್ರೀಯಂ ಪಡೆವೊಡೆ ಶಾಶ್ವತ
ದಾಯುಷ್ಯದಪೇಕ್ಷೆ ತನಗೆ ಕೈಗೂಡುವೊಡಾ
[೧](ಮಾಯಕ್ಕೊಳಗಾಗಿರದೊಡೆ)[೧]
ಜೀಯನ ಜಪವೋಂ ನಮಃ ಶಿವಾಯೆಂಬ ಪದಂ ॥೧॥

ಪುಣ್ಯಕ್ಷೇತ್ರದ ಬೀಜಂ
ಪುಣ್ಯಮಹಾನದಿಗಳಿರವು ಸುಕೃತದ ಬೀ[೨]ಯಂ[೨]
[೩]ಬಣ್ಣನೆಗೆ ಬಾರದೀ[೩] ಘನ
ಪುಣ್ಯವಿದೆ[೪] ಮಗೋಂ ನಮಃ ಶಿವಾಯೆಂಬ ಪದಂ ॥೨॥

ಸಕಲ[೫]ಸು[೫] ತೀರ್ಥಸ್ನಾನಂ
ಸಕಲಕ್ರಿಯೆ [೬]ಪಂಚಯಜ್ಞ ಪಾರಾಯಣಮುಂ[೬]
ಸಕಲ ಹವಿ [೭]ಹೋಮ ನೇಮವ[೭]
ಪ್ರಕಟಿಪ ಜಪವೋಂ ನಮಃ ಶಿವಾಯೆಂಬ ಪದಂ ॥೩॥

ಕೋಟಿ ಜಪ ಕೋಟಿ [೮]ತಪಂ[೮]
ಕೋಟಿ ಮಹಾದಾನಧರ್ಮ ಪರಹಿತಚರಿತಂ
[೯]ಕೋಟ್ಯಂತರ ಪಾಪಂಗಳ್[೯]
ದಾಟಿಪ ಜಪವೋಂ ನಮಃ ಶಿವಾಯೆಂಬ ಪದಂ ॥೪॥

೧–೧ ಮಾಯಕ್ಕೊಳಗಾಗದಿರ್ಪೊಡೆ(ಮೂ), ಮಾಯೆಗೊಳಗಾಗದಿರ್ಪೊಡೆ(ಶಿ), ೨–೨ ಜಂ (ಶಿ), ೩–೩ ಬಣ್ಣಿಸಲ್ಬಾರದ(ಮೂ), ೪+ನ(ಮೂ)೫–೫ ನದಿ(ಮೂ), ೬–೬ ಗೆ ಪರಾಯಣಮುಮಂ(ಮೂ), ೭–೭ ಹೋಮಂಗಳ (ಶಿ), ೮–೮ ಯಜ್ಞಂ(ಮೂ), ೯–೯ ಕೋಟಿಗಳಿಂದತ್ತತ್ತಲೆ(ಮೂ).

ಭೂದಾನವನ್ನದಾನಂ
ಗೋದಾನ ಸುವರ್ಣದಾನ ಕನ್ಯಾದಾನಂ
ವೇದಂ ನಾಲ್ಕರ ದಾನಕೆ
ಭೇದಿಸೆ ಘನವೋಂ ನಮಃ ಶಿವಾಯೆಂಬ ಪದಂ ॥೫॥

ಅಟಮಟದ ಮಾತನಾಡಿಯೆ
ತುಟಿ ಮಿಡುಕಲದೇಕೆ ಜನನ ಮರಣಾರ್ಣವದಾ
[೧೦]ತಟವಂ ಸಾರ್ಚಿಪ ತೆಪ್ಪಂ
ದಿಟವಿದು ಕೇಳೋಂ[೧೦] ನಮಃ ಶಿವಾಯೆಂಬ ಪದಂ ॥೬॥

[೧೧]ಪೊಡವಿಯೊಳನ್ಯರ ಪೋಗಳ್ವ[೧೧]
ನುಡಿಗಳ ಕಲಿತೊಡಲ ಹೊರೆವ [೧೨]ಕರ್ಮಾತುರದೊಳ್[೧೨]
[೧೩]ಕಿಡಿಪ ವಿಧಿವಶವ ಕಳೆವೊಡೆ
ಮೃಡಜಪಮೆಮಗೋಂ[೧೩] ನಮಃ ಶಿವಾಯೆಂಬ ಪದಂ ॥೭॥

[೧೪]ಲೋಕಕೆ ತೃಪ್ತಿಯ ಮಾತನ[೧೪]
ನೇಕಂಗಳನಾಡಿಯಾಡಿ ಗಳಹುವ ಕುಟಿಲಂ
ಕಾಕು ಸಟೆಯೆಂಬಿವೆಲ್ಲವ
ನೂಕುವ ಜಪವೋಂ ನಮಃ ಶಿವಾಯೆಂಬ ಪದಂ ॥೮॥

ಕಿರುನುಡಿಗಳನೊರೆವುತೆ ತ
ನ್ನರಿವಂತುಳಿದವರ ಜರೆವುತಂ ತರ್ಕಿಸುವಾ
ಪರವಾದಿಯ ವಾಕ್ಶಸ್ತ್ರವ
ಮುರಿವೊಡೆ ನಮಗೋಂ ನಮಃ ಶಿವಾಯೆಂಬ ಪದಂ ॥೯॥[೧೫]

ಜಾಣುನುಡಿ ಸದುವಿವೇಕಂ
ವಾಣೀವರ ಸಕಲಶಾಸ್ತ್ರಪರಿಣತೆಯರಿ[೧೬]ವುಂ[೧೬]
ಕ್ಷೋಣಿ[೧೭]ಯೊಳು ವಿದ್ಯೆ ಪೆರತೇಂ[೧೭]
ಮಾಣದ ಜಪವೋಂ ನಮಃ ಶಿವಾಯೆಂಬ ಪದಂ ॥೧೦॥

೧೦-೧೦ ತಟವ ಸಾರ್ಚಿಸುವದೋಂ(ಮೂ),೧೧-೧೧ ಒಡಲೊಳಗೆಂಟಂತಿರುಗುವ (ಮೂ), ೧೨-೧೨ ಕರ್ಮಾಂತದೊಳ್(ಮೂ), ೧೩-೧೩ ಕೆಡುವ ವಿಧಿವಶ ಕಳೆದಡೆ ಮೃಡಜಪಓಂ(ಮೂ),೧೪-೧೪ ಲೋಕಂ ವ್ಯಾಪ್ತಿಯ ಮಾತಿನ(ಮೂ),೧೫-೧೫ ಕಿಚಿಕಿಚಿದು ನುಡಿದು ಸೈರಿಸ। ದರುವಿಂಗೊರೆಗಟ್ಟಿ ತರ್ಕ ಕರ್ಕಶದಿಂದ। ಜರೆದಿರುವ ವಾಕುಶಸ್ತ್ರದವ। ಮರಿವಡೆ ನಮಗೋಂ ನಮಃ ಶಿವಾಯೆಂಬ ಪದಂ(ಮೂ) ೧೬-೧೬ ದುಂ (ಮೂ), ೧೭-೧೭ಗೆ ಸುವಿದ್ಯೆ ಪೆರತೇಂ(ಶಿ).

[೧೮]ಕೂಗಿಡಿಸುವ[೧೮] ಸಕಲೇಂದ್ರಿಯ
ಕಾಗರಮೆನಿಸಿರ್ದ ತನುವಿನವಗುಣ [೧೯]ಗಣಮಂ[೧೯]
ನೀಗುವೊಡೆ ಶಂಕರನ ಜಪ
[೨೦]ಮಾಗಳು[೨೦] ಬಿಡದೋಂ ನಮಃ ಶಿವಾಯೆಂಬ ಪದಂ ॥೧೧॥

ಹಿರಿದುಂ ಲೋಭದ [೨೧]ಮೋಹದ
ಕಿರಿದೊದಗುವ[೨೧] ಕೋಪತಾಪದಾಪತ್ತುಗಳಂ
ಬೆರೆಸಿದರಿವರ್ಗವಾರನು
ಪರಿಹರಿಸುದೋಂ ನಮಃ ಶಿವಾಯೆಂಬ ಪದಂ ॥೧೨॥

[೨೨]ಬೇರಿಳಿದ[೨೨] ಮೂರು ಗುಣಗಳ
ತೋರಿಕೆಯಂ ಬೀರಿ ಬಿಗಿದು ತನುವಂ [೨೩]ಮನಮಂ[೨೩]
ಸೂರೆಗೊಳುತಿರ್ಪ ಕರ್ಮವ
ಜಾರಿಪ ಜಪವೋಂ ನಮಃ ಶಿವಾಯೆಂಬ ಪದಂ ॥೧೩॥

ತನುವೆಸನಂ ಮನವೆಸನಂ
ಧನವೆಸನಂ ರಾಜ್ಯವೆಸನ ವಿದ್ಯಾವೆಸನಂ
ಜಿನುಗುತಿಹ ವಿಷಯವೆಸನದ
ಕನಸಂ ಕಿಡಿಪೋಂ ನಮಃ ಶಿವಾಯೆಂಬ ಪದಂ ॥೧೪॥

ತರಿಯಲ್ ಮೋಹದ ಕೆಚ್ಚಂ
ಹರಿಯಲ್ ಭವಪಾಶಮಂ ಮನೋಜನ ಬಿಲ್ಲಂ
ಮುರಿಯಲ್ ಮಾಯೆಯ ಬೇರಂ
ಕೊರೆಯಲ್ ಜಪವೋಂ ನಮಃ ಶಿವಾಯೆಂಬ ಪದಂ ॥೧೫॥

ಕಳವಳಿಸಿ ಕಾಲಕರ್ಮದ
ಸುಳಿಗಡಲೊಳಗಾಳು[೨೪]ತೇಳುವವಗಡದೊಡಲಾ[೨೪]
ಸುಳಿಗೆ ನೆಲೆಯಪ್ಪ [೨೫]ಭವಭಯ[೨೫]
ವಳಿವೊಡೆ ನಮಗೋಂ ನಮಃ ಶಿವಾಯೆಂಬ ಪದಂ ॥೧೬॥

೧೮-೧೮ ಕೂಗಿಡುಗಿಹ(ಶಿ), ೧೯-೧೯ ಗಳಮುಂ(ಮೂ), ೨೦-೨೦ ದಾಗಳು(ಮೂ), ೨೧-೨೧ ಮೋಹಕ್ಕಿರದೊದಗು(ಶಿ), ೨೨-೨೨ ಬೇರಿರ್ದ(ಮೂ), ೨೩-೨೩ ಪ್ರಾಣವ(ಮೂ), ೨೪-೨೪ ತೇಳ್ವದವಗಡದೊಡಲಂ(ಮೂ), ೨೫-೨೫ ಭಯಂ(ಮೂ).

ಜರೆ [೨೬]ಮರಣ ದುರಿತ ಕೋಟಲೆ[೨೬]
ನೆರೆದಿಹ ನಿಜಭವ ಶರೀರಕರ್ಮಾಂತರದೊಳ್
[೨೭]ಪರವಶದಗ್ಗದ[೨೭] ಕುಲಗಳ
ಪರಿಹರಿಸುವುದೊಂ ನಮಃ ಶಿವಾಯೆಂಬ ಪದಂ ॥೧೭॥

ಹಸರದ ಹುಸಿ ದುರ್ಗತಿಗಳ
ಮಸಕ ದುರಾಚಾರದಧಿಕಮಿಥ್ಯಾದಿಗಳಾ
ಮಸಗಿ ಹರಿವುರವಣೆಯ ಮ
[೨೮]ಗ್ಗಿಸುವೊಡೆ ನಮಗೋಂ[೨೮] ನಮಃ ಶಿವಾಯೆಂಬ ಪದಂ ॥೧೮॥

ಒಡಲ ನಿಡುಸರದ ಕೋಪದ
ಲೆಡೆಗೊಂಡ ಮನೋವಿಕಾರ [೨೯]ರಾಗಾದಿಗಳಂ[೨೯]
ಬಿಡಿಸಿ ಮೃಡನಡಿಗಳಲ್ಲಿಗೆ
ನಡೆಸುವ ಪಥವೋಂ ನಮಃ ಶಿವಾಯೆಂಬ ಪದಂ ॥೧೯॥

ಆಸೆ ಹುಸಿ ಸಟೆ [೩೦]ವಿಕಾರಂ
ದ್ವೇಷದ[೩೦] ಬಳಿವಿಡಿದು ತೊಳಲುವವಗುಣಶತಮಂ
[೩೧]ಬೀಸಾಟ ಭಕ್ತಿ[೩೧] ಪಥದ
ಭ್ಯಾಸಕ್ಕೆಡೆವೋಂ ನಮಃ ಶಿವಾಯೆಂಬ ಪದಂ ॥೨೦॥

ಡಂಬಿನ ವಿಕಳದ ಕೋಟಲೆ
ತುಂಬಿದ ಸಂಸಾರ ಘೋರ [೩೨]ನರಕಮದೆಲ್ಲವ[೩೨]
ನೀಂ ಬಿಡುವ ಪಥವಿದೊಂದೆ
ತ್ರ್ಯಂಬಕ ಜಪವೋಂ ನಮಃ ಶಿವಾಯೆಂಬ ಪದಂ ॥೨೧॥

ತೆರನರಿಯದೆ ಸಂಸಾರದ
ಸೆರೆಯೊಳ್ ಸಿಲುಕಿರಲು ಕೋಟಿಕೋಟಲೆಗಳ್ ಬಂ
ದರೆಯಟ್ಟಿ ಕೊಲಲು ಕಾವೊಡೆ
[೩೩][ಪೆರತೇಂ ಶರಣೋಂ][೩೩] ನಮಃ ಶಿವಾಯೆಂಬ ಪದಂ ॥೨೨॥

೨೬–೨೬ ಮರಣಂ ದುರಿತಕುಲಂ(ಶಿ), ೨೭–೨೭ ಪರವದಗ್ಗದ(ಮೂ), ೨೮–೨೮ ಗ್ಗಿ ಸುವೊಡಿದೆಮಗೋಂ(ಶಿ), ೨೯–೨೯ದಾಕಾರಗಳಂ(ಮೂ) ೩೦–೩೦ ವಿಕಾರದ ದ್ವೇಷ(ಮೂ) ೩೧–೩೧ ಬೀಸಾಟುವ ಭಕ್ತಿಯ(ಮೂ) ೩೨–೩೨ ನರಕಾದಿಗಳಂ(ಶಿ), ೩೩–೩೩ ಪೆರತೆನ್ನ ಶರಣೋಂ(ಮೂ) ಪೆರತೇಂ ಹರನೋ(ಶಿ).

ಇಟ್ಟೆಡೆಯೊಳು ಸಂಸಾರದ
ಘಟ್ಟಣೆಯೊಳು ಸಿಲುಕೆ ಮಾಯೆಮೋಹವಿಕಾರಂ
ಕಟ್ಟಿ ಎಳೆದೊಯ್ವ ಕರ್ಮವ
ನಿಟ್ಟೊರಸುವುದೋಂ ನಮಃ ಶಿವಾಯೆಂಬ ಪದಂ ॥೨೩॥

ಬಚ್ಚರಣೆಯ ಸಂಸಾರದ
ಹಚ್ಚನೆ ಕೆಚ್ಚನೆಯ ಕಂಡು ದಿಟವೆನುತಿರ್ಪಾ
ಕುಚ್ಚಿತ ಮನದಾಮಿಷಮಂ
ಬೆಚ್ಚಿಸುವೊಡಿದೋಂ ನಮಃ ಶಿವಾಯೆಂಬ ಪದಂ ॥೨೪॥

ಕಾತರಿಸದೆ ಸಂಸಾರದ
ಯಾತನೆಗೊಳಗಾದೆನೆಂದು ಬೆದರದೆ ಪರಮ
ಪ್ರೀತಿ ನೆಲೆಗೊಂಡು ನೆನೆವೊಡ
ಜಾತನ ಜಪವೋಂ ನಮಃ ಶಿವಾಯೆಂಬ ಪದಂ ॥೨೫॥

ಅತ್ಯುತ್ಕಟದವಗುಣಮಂ
ಚಿತ್ತದ [೩೪]ಚಂಚಲತೆ[೩೪] ಮನದ ಕಳವಳ ಕಾಮಂ
ಸತ್ವರಜತಮ ವಿಕಾರವ
ನುತ್ತರಿಸುವ ಜಪವೋಂ ನಮಃ ಶಿವಾಯೆಂಬ ಪದಂ ॥೨೬॥

ಜವನಂ ಜಕ್ಕುಲಿಸುವೊಡಾ
ಅವಗುಣದಾಮಿಷದ ಕಸವ ಕೀಳ್ವೊಡೆ ಮತ್ತಾ
ಅವಿರಳ ಸುಖಮಂ ಪಡೆವೊಡೆ
ಶಿವಜಪಮೆಮಗೋಂ ನಮಃ ಶಿವಾಯೆಂಬ ಪದಂ ॥೨೭॥

ಮೃತ್ಯು [೩೫]ನಡೆತಂದು[೩೫] ಗಂಟಲ
[೩೬][ನೊತ್ತುವೊಡರೆ][೩೬] ಯಟ್ಟಿ ಮುಟ್ಟಿ ಜವನವರೆಲ್ಲರ್
[೩೭]ಮುತ್ತುತ್ತೆಳೆದೊಡೆ[೩೭] ಕಾವುದಿ
ದುತ್ತಮಗುಣವೋಂ ನಮಃ ಶಿವಾಯೆಂಬ ಪದಂ ॥೨೮॥

೩೪–೩೪ ಸಂಜಾತೆ (ಮೂ), ೩೫–೩೫ ಯೈತಂದು(ಮೂ), ೩೬–೩೬ ನೊತ್ತುವದರೆ(ಮೂ), ನೊತ್ತಿರೆಯರ(ಶಿ), ೩೭–೩೭ ಮುತ್ತಿ ಎಳೆದೊಯ್ಯೆ(ಮೂ).

[೩೮]ಚಿಂತಾಭಯಲೋಭಂಗಳ[೩೮]
ಭ್ರಾಂತೆಡೆಗೊಂಡಖಿಳ ವಿಷಯವಶಗತನಾಗಿ
ನ್ನೆಂತೆಂದು ಬೆದರದಿರು ಕಾ
ಮಾಂತಕ ಜಪವೋಂ ನಮಃ ಶಿವಾಯೆಂಬ ಪದಂ ॥೨೯॥

ಗರ ಸೋಂಕಿದೊಡುರಿ ಹೊಡೆದೊಡೆ
ಹಿರಿದಾಪತ್ತೈದಲುರಗ ವೃಶ್ಚಿಕ ವಿಷವಾ
ವರಿಸಲತಿದುಃಖವೆಲ್ಲವ
ಪರಿಹರಿಸುವದೋಂ ನಮಃ ಶಿವಾಯೆಂಬ ಪದಂ ॥೩೦॥

ಏಗೆಯ್ವೆನೆಂದುಮೀ ಭವ
ರೋಗಕ್ಕಗಿದಗಿದು ಬೆಚ್ಚಿ ಬೆದರದಿರೊಂದು
ದ್ಯೋಗಂ ನಿನಗಿದೆ ನೆನೆವೊಡೆ
ಯಾಗಳು ಜಪವೋಂ ನಮಃ ಶಿವಾಯೆಂಬ ಪದಂ ॥೩೧॥

ಭೇದಿಸುವೊಡೆ ಸದ್ಗತಿಯಂ
[೩೯]ಸಾಧಿಸುವೊಡೆ ಮನದ[೩೯] ತನುವಿಕಾರದ ವಿಷಯಂ
ಶೋಧಿಸುವೊಡೆ ಹರಜಪವೆಂ
ದೋದಿಸುವೊಡಿದೋಂ ನಮಃ ಶಿವಾಯೆಂಬ ಪದಂ ॥೩೨॥

ಕಿಡಿಸುವೊಡೆ ಸಕಲಕರ್ಮವ
ಬಿಡಿಸುವೊಡತಕ್ಕಧಿಕ ಮೋಹಪಾಶಾದಿಗಳಂ
ಸುಡಿಸುವೊಡೆ ಸರ್ವದುರ್ಧರ
ದಡವಿಯನೆಮಗೋಂ ನಮಃ ಶಿವಾಯೆಂಬ ಪದಂ ॥೩೩॥

ದುರ್ಗತಿಯ ಸುಳಿಯನಳಿವೊಡೆ
ಭರ್ಗನ ಪದಯುಗಳಕಮಳಮಂ ನೆನೆವೊಡೆ ಸಂ
ಸರ್ಗ ಸಕಲಾಗ[೪೦]ಮಾರ್ಥಾಂ
ತರ್ಗತಮೆಮ[೪೦]ಗೋಂ ನಮಃ ಶಿವಾಯೆಂಬ ಪದಂ ॥೩೪॥

೩೮-೩೮ ಚಿಂತೆ ಭಯ ಲೋಭ ಮೋಹದ(ಮೂ)೩೯-೩೯ ಸಾಧಿಪಡೆ(ಮೂ) ೪೦-೪೦ ಮಂಗಳ ತರ್ಗತ(ಮೂ)

ನೋಡುವೊಡೆ ಚಿತ್ರವೈಭವ
[೪೧]ದಾಡಂಬರವೀಪ್ರಪಂಚ ವಿಷಯಂಗಳವಂ[೪೧]
ಕೂಡದೆ ಮನದೊಲವಿಂ ನೆನೆ
[೪೨]ಬೇಡಿದುದೀವೋಂ[೪೨] ನಮಃ ಶಿವಾಯೆಂಬ ಪದಂ ‖೩೫‖

ಮದಮಾತ್ಸರ್ಯದ ದ್ವೇಷದ
ಲೊದವಿದ ಸಂಸಾರತಾಪದಾಪತ್ತುಗಳಂ
ಬೆದರಟ್ಟಿ ಕಳೆವೊಡಿದೆ ಗತಿ
ಪದುಳವೆ ನೆನೆವೋಂ ನಮಃ ಶಿವಾಯೆಂಬ ಪದಂ ‖೩೬‖

ಬಾರದ ಭವಂಗಳಂ ಬಂ
ದೋರಂತಿದೆ ತೊಳಲಿ ಬಳ[೪೩]ಲಿ ಎ[೪೩]ಳತಟದಿಂದ ಸಂ
ಸಾರವಿಧಿವಶವ ಕಳೆವೊಡೆ
ಸಾರಾಯವಿದೋಂ ನಮಃ ಶಿವಾಯೆಂಬ ಪದಂ ‖೩೭‖

ನೆರೆದ ವಿಧವಶ[೪೪] ಗಳೆಲ್ಲವು[೪೪]
ಹರಿದಪ್ಪಿಯೆ ಬಂದು ನುಂಗಲೋಡರಿಪ ಪಥದೊಳ್
ಶರಣೆನಲು ಕಾವೊಡಿದ ಗತಿ
ಹರಜಪಮಮಗೋಂ ನಮಃ ಶಿವಾಯೆಂಬ ಪದಂ ‖೩೮‖

[೪೫]ಅಸಕಳಿದಿಹ ಮದದೆಸಕದ[೪೫]
ಮಸಕದ ಮಾತ್ಸರ್ಯದೊದವಿನದಟಿನ ಚಿತ್ತಂ
[೪೬]ದೆಸೆದೆಸೆಗೇರುವುದಿದ[೪೬]ಮಾ
ಣಿಸುವೊಡೆ ನಮಗೋಂ ನಮಃ ಶಿವಾಯೆಂಬ ಪದಂ ‖೩೯‖

ಆಗಮ ಸಕಲಾಚಾರಂ
ಯೋಗವ್ರತನಿಯಮನಿತ್ಯತತ್ತ್ವ ವಿಚಾರಂ
ವಾಗುಮನಭಾವಚಿತ್ತದೊ
ಳಾಗಳು ಬಿಡದೋಂ ನಮಃ ಶಿವಾಯೆಂಬ ಪದಂ ‖೪೦‖

೪೧–೪೧ ವಾಡಂಬರಮೆಂಬ ಸಂಖ್ಯೆಯಳತಟವಿನುತಂ(ಮೂ), ೪೨–೪೨ ಬೇಡಿತು ನಮಗೋಂ(ಮೂ), ೪೩–೪೩ ಲುವೆ(ಶಿ), ೪೪–೪೪ ಮದೆತ್ತಂ(ಶಿ), ೪೫–೪೫ ಅಸಬಳದ ಮಸದ ತವಕದ(ಮೂ), ೪೬–೪೬ ದೆಸೆದೆಸೆಗೆ ಹರಿವುದಿದ(ಶಿ).

[೪೭]ಪೆರತೇನು ಜಗದ ಕರ್ತನ[೪೭]
ನರಿವೊಡೆ ಮದ ಲೋಭ ಮೋಹ ಮಾತ್ಸರ್ಯಗಳಂ
[೪೮]ತೊರೆವೊಡೆ ಪಾಶಾದಿಗಳಂ
ಹರಿವೊಡಮೆಮಗೋಂ ನಮಃ ಶಿವಾಯೆಂಬ ಪದಂ ॥೪೧॥

ಉಬ್ಬಿ ನಲಿನಲಿದು ವಿಷಯದೊ
ಳಬ್ಬರಿಸುವ ಮುನಿಸು ಮನದ ಕನಲಿಕೆ ಕಾಮಂ
ಬೊಬ್ಬಿಡುವ ದುರಿತಕೋಟಿಯ
ನೆಬ್ಬಟ್ಟುವುದೋಂ ನಮಃ ಶಿವಾಯೆಂಬ ಪದಂ ॥೪೨॥

ಬೇಸರದೆ ಬೆದರದಂಜದೆ
[೪೯]ಸೋಸದೆ ಕರಣಾದಿ[೪೯] ಕರ್ಮದುರ್ಮತಿ[೫೦]ಗಳನ[೫೦]
ಭ್ಯಾಸಿಸದೆ ನೆನೆವೊಡಿದೆ ಸಕ
ಳೇಶನ ಜಪವೋಂ ನಮಃ ಶಿವಾಯೆಂಬ ಪದಂ ॥೪೩॥

[೫೧]ಕೊಲು[೫೧]ವೊಡಖಿಳೇಂದ್ರಿಯಂಗಳ
ಗೆಲುವೊಡೆ ಸನ್ಮಾರ್ಗ ಸತ್ಯಸಾರವ್ರತಮಂ
ಕಲಿವೊಡೆ ಭಕ್ತಿಯ ಪಥದೊಳ್
ನಿಲುವೊಡೆಮೆಮಗೋಂ ನಮಃ ಶಿವಾಯೆಂಬ ಪದಂ ॥೪೪॥

ವೇದಾಂತ ಸಕಲಶಾಸ್ತ್ರಗ
ಳಾದಿಯ ಪೌರಾಣವಖಿಳ ಮಂತ್ರಂ ತಂತ್ರಂ
ನಾದಮಯವಾಗಮಶ್ರುತಿ
ಸಾಧಿಸುವೊಡಿದೋಂ ನಮಃ ಶಿವಾಯೆಂಬ ಪದಂ ॥೪೫॥

ತಲ್ಲಣದ ತವಕದವಕದ
ಗೆಲ್ಲದ ಹೋರಟೆಯ ಸಟೆಯ ಸಂಸಾರದೊ[೫೨]ಳೇ
ನಿಲ್ಲ[೫೨]ನೆನೆ ಮನವೆ ಗೌರೀ
ವಲ್ಲಭಜಪವೋಂ ನಮಃ ಶಿವಾಯೆಂಬ ಪದಂ ॥೪೬॥

೪೭–೪೭ ಪೆರತೇಂ ತ್ರಿಜಗತ್ ಕರ್ತೃವ(ಶಿ) ೪೮–೪೮ ಹರಿವಡೆ ನಮಃ ಶಿವಾಯೆಂಬ ಪದಂ(ಮೂ) ೪೯–೪೯ ಪಾಶಿಗೆ ಮಯ್ಯೆತ್ತ(ಶಿ) ೫೦–೫೦ ಗಳೊಳ(ಶಿ)೫೧–೫೧ ತಿಳಿ(ಶಿ) ೫೨–೫೨ ಳಿಹುದಿಲ್ಲ(ಮೂ)

ನೀರೊಳ್ ಬರೆದಕ್ಕರವಿದ
ನಾರ್ೈವೊಡೆ ಮರನ ನೆಳಲು ಮಾಯದ ಮನೆ ಸಂ
ಸಾರದಭಿಮಾನ ಭಯವ ನಿ
ವಾರಿಸುವೊಡಿದೋಂ ನಮಃ ಶಿವಾಯೆಂಬ ಪದಂ ॥೪೭॥

[೫೩]ಗಾಳದೆ ಮತ್ಸ್ಯಂ ಕೆಡೆವಂ
ತೀಲೋಕಂ ವಿಷಯಜಲಧಿಯೊಳ್ ಕೆಡೆದಾಗಳ್[೫೩]
ತೇಲುವೊಡುಪಾಯಮಿದರೊಳ್
ಸಾಲದೆ ಎಮಗೋಂ ನಮಃ ಶಿವಾಯೆಂಬ ಪದಂ ॥೪೮॥

ಪರಧನ ಪರಸತಿಯರ ಪರ
ಚರಿತದ ಪರರ ಚಿಂತೆ [೫೪]ಪರಗೃಹವಾರ್ತಾ
ಪರತೆಯ ದುರಿತಂ ಬೆರಸದೆ
ಯೊರೆವಾ[೫೪] ಜಪವೋಂ ನಮಃ ಶಿವಾಯೆಂಬ ಪದಂ ॥೪೯॥

ಜನಿಸಲೊಡನೊಡನೆ ಹುಟ್ಟಿದ
ತನುಗುಣದನುವಿನೊಳು ನಡೆದು ಕನಲುವ ಚಿತ್ತ
ಕ್ಕನುಸನ್ಮತಮಂ[೫೫] [ಕೊಡಿಪೊಡೆ][೫೫]
ಪಿನಾಕಿಯ ಜಪವೋಂ ನಮಃ ಶಿವಾಯೆಂಬ ಪದಂ ॥೫೦॥

ಮುಕ್ಕುಳಿಸಿ ಮನದ ತವಕದ
ಲುಕ್ಕುವ ತನುವಗಡುತನದಲೊಗೆದಾಮಿಷಮಂ
ಮಿಕ್ಕು ಹುಸಿ ರೋಷವೆಂಬಿವ
ಜಕ್ಕುಲಿಸುವುದೋಂ ನಮಃ ಶಿವಾಯೆಂಬ ಪದಂ ॥೫೧॥

ಮನಕುದುರೆವರಿದು ಮಾತಿನ
ಕನಲಿಕೆ ಗರಿಗಟ್ಟಿ ತನುವಿಕಾರದ ಚಿತ್ತಂ
ತೊನೆತೊನೆದು ಕರ್ಮಭೇದಗ
ಳನುವಳಿವೊಡಿದೋಂ ನಮಃ ಶಿವಾಯೆಂಬ ಪದಂ ॥೫೨॥

೫೩–೫೩ ಗಾಳದೊಳು ಮತ್ಸ್ಯ ಕೆಡುವಂತೀ ಲೋಕ ವಿಕಾರ ವಿಷಯ ತನುಮನವೆರಡಂ(ಮೂ), ೫೪–೫೪ ಪರಗೃಹವಾತಂ ಪರದುರಿ ಚರಿತ ಬೆರಸದ ದೊರೆ(ಮೂ), ೫೫–೫೫ ಕೆಡೆಪಡೆ(ಮೂ), ಕೆಡೆವೊಡೆ(ಶಿ).

ಅಗಿದಗಿದು ತುರಿಸಿ ತೋಟಿಯ
ತೆಗೆತೆಗೆದುಗುರುಗಳ ಮಸೆದು ಮುಂದಣ ಗತಿಯಂ
ಬಗೆಯದಘದೊಳಗೆ ಕಿಡುವನ
ನೆಗಹುವ ಜಪವೋಂ ನಮಃ ಶಿವಾಯೆಂಬ ಪದಂ ॥೫೩॥

ಘಾತಿಸುವ ದುರಿತಕೋಟಿಗ
ಳಾತುರದಲಿ ಸಿಲುಕಿ ತೊಲಗಲಾರದೆ ಕರ್ಮ
[೫೬]ವ್ರಾತ[೫೬]ದೆಳತಟವ ಕಳೆವೊಡ
ಜಾತನ ಜಪವೋಂ ನಮಃ ಶಿವಾಯೆಂಬ ಪದಂ ॥೫೪॥

ಕುಲಮದ ಚಲಮದ ವಿದ್ಯಾ
ಬಲಮದ ಯೌವನದಲೊಗೆದ ಸದಮದವಿಂತೀ
ಪಲತೆರದ ಮದದ ಕದನವ
ಗೆಲುವೊಡೆಯೆಮಗೋಂ ನಮಃ ಶಿವಾಯೆಂಬ ಪದಂ ॥೫೫॥

ಉಕ್ಕುಕ್ಕು ಹಳಚುವಂದದಿ
[೫೭]ತಕ್ಕಿಗೆ ತಕ್ಕೊಮ್ಮೆ[೫೭]ಯೆನುತ ತರ್ಕಿಸುತಿರ್ಪಾ
ಕರ್ಕಶದ ಸೊಕ್ಕು ತಿಳಿವೊಡೆ
ತಕ್ಕುದು ನಮಗೋಂ ನಮಃ ಶಿವಾಯೆಂಬ ಪದಂ ॥೫೬॥

ಬೊಂಬಾಳವೆನಿಪ ಕರ್ಮ[೫೮]ದಿ
ರುಂಬಿನೊಳಕಟಕಟ ಸಿಲುಕಿ[೫೮] ಮರೆದಿರ್ದಪೆ ಕೇ
ಳಂಬುಜರಿಪುಧರಚರಣದ
ನಂಬುಗೆಯೆಮಗೋಂ ನಮಃ ಶಿವಾಯೆಂಬ ಪದಂ ॥೫೭॥

ಕಲಿತಖಿಳ ವಿದ್ಯೆಯೆಲ್ಲವ
ಅಲಸಿಕೆಯೊಳು ಸಿಲುಕಿ ಬೆದರಿ ಬೇಸರುವುದರಿಂ
ಸುಲಭ ಮದನಾರಿಯೊಲವಿನ
ಚೆಲುವಿಕೆಯಮಗೋಂ ನಮಃ ಶಿವಾಯೆಂಬ ಪದಂ ॥೫೮॥

೫೬-೫೬ ಭ್ರಾಂತ(ಮೂ) ೫೭-೫೭ ತಕ್ಕಿಗೆ ತಕ್ಕೊರ್ಮೆ(ಮೂ) ೫೮-೫೮ ದ ರೆಂಬಿನೊಳ ಕಟ್ಟಿಕೆ ಸಿಲುಗಿ(ಮೂ)

ಚೋಹಂ ಮುಸುಕಿದ ಡಾಣೆಯೊ
[ಲಾ] ಹೊತ್ತುಂ ಕಳಲೆವರಿದು ರೋಷಂ ದ್ವೇಷಂ
ಬೇಹೈಸೆ ಮುಸುಕ ನುಸುಳುವ
ಕಾಹಿದೆ ನಮಗೋಂ ನಮಃ ಶಿವಾಯೆಂಬ ಪದಂ ॥೫೯॥

ಸದುಗತಿ ಸದುಮತಿ ಸಾತ್ವಿಕ
ಸದುಗುಣ ಸದುಭಕ್ತಿ ಸದುವಿವೇಕ ಸದಾಸಂ
ಪದ [೫೯]ಸಕಳ[೫೯] ನೆನೆವ ಮನುಜಂ
ಗಿದೆ ಹರಜಪವೋಂ ನಮಃ ಶಿವಾಯೆಂಬ ಪದಂ ॥೬೦॥

ಒಡೆದ ಸೊರೆ ನಾಯ ತೊಗಲೊಂ
ದೊಡವೆಗೆ ಸರಿಯಾಗದದರಿನಿದು ಕರಕಷ್ಟಂ
ಒಡಲಿಚ್ಚೆಗೆ ಹರಿಯದೆ ಗತಿ
ವಡೆವೊಡೆ ನಮಗೋಂ ನಮಃ ಶಿವಾಯೆಂಬ ಪದಂ ॥೬೧॥

[೬೦]ತೃಷೆಯಿಂ ಮಿಗಂ ಬಯಲ್ದೊರೆ
ಯೆಸಕಕೆ ಪರಿವಂತೆ ಪರಿವ[೬೦] ಮನದಾಮಿಷಮಂ
ಬಿಸುಟು ನೆನೆಯಮೃತಲಹರಿಯ
ರಸವಿದೆ ನಿನಗೋಂ ನಮಃ ಶಿವಾಯೆಂಬ ಪದಂ ॥೬೨॥

ಘಟ್ಟದ ಬೆಟ್ಟದ ಗಹ್ವರ
ದಿಟ್ಟೆಡೆ ನಟ್ಟಡವಿಯೊಳಗೆ ಸಕಲಾಮಿಷಮಂ
ಬಿಟ್ಟು ಮನಮುಟ್ಟಿ ದುರಿತಘ
ರಟ್ಟನ ನೆನೆವೋಂ ನಮಃ ಶಿವಾಯೆಂಬ ಪದಂ ॥೬೩॥

ಇರೆ ಕಲ್ಪವೃಕ್ಷವಿದಿರೊಳ್
ದೊರೆಕೊಂಡಿರೆ ಕಾಮಧೇನು ಚಿಂತಾಮಣಿ ಸಾ
ರ್ದಿರೆ ಪರರನಾಸೆ [೬೧]ಗಯ್ಯದ
ಪರಿ[೬೧] ಹರಜಪವೋಂ ನಮಃ ಶಿವಾಯೆಂಬ ಪದಂ ॥೬೪॥

೫೯-೫೯ ವ ಸಲೆ(ಶಿ), ೬೦-೬೦ ತೃಷಿ ಮಸಗಿ ಮುಸುಕಿ ಮೃಗ ಬಿಸಲೆಸಕದ ಜಲವೆತ್ತು ಹರಿವ(ಮೂ),೬೧-೬೧ ಗೆಯ್ದುದ ಪುರ(ಮೂ).

ನಂಬು ಎರಡಿಲ್ಲದೀಶನ
ನಂಬಿದೊಡಮರೇಂದ್ರವಿಷ್ಣುವಜರ ಪದಂಗಳ್
ಬೆಂಬಿಡದೆ ಬಂದು ಬೆಸನೇ
೬೨[ನೆಂಬೊಡೆ]೬೨ ಜಪವೋಂ ನಮಃ ಶಿವಾಯೆಂಬ ಪದಂ ॥೬೫॥

ಇರುಳು ಹಗಲೀಗಳಾಗಳು
ಜರೆ ಜವ್ವನವೆನ್ನದೆಯ್ದೆ ಜವನಾಳ್ಗಳು ಬಂ
ದಿರಿಯದ ಮುನ್ನವೆ ನೆನೆನೆನೆ
ಪುರಹರ ಜಪವೋಂ ನಮಃ ಶಿವಾಯೆಂಬ ಪದಂ ॥೬೬॥

ಮೊಗದ ತೆರೆ ನೆಗೆದು ಸೆರೆಗಳ್
ಬಿಗಿದು ಶಿರಂ ನಡುಗಿ ಪಿಡಿವ ನಡೆವಾ ಕೈಕಾಲ್
ಮಿಗೆಯುಡುಗದೆ ಜವ್ವನಮಂ
ಜಗುಳದೆ ನೆನೆಯೋಂ ನಮಃ ಶಿವಾಯೆಂಬ ಪದಂ೬೫ ॥೬೭॥

ಕೀವಿನ ಮೂತ್ರದಮೇಧ್ಯದ
ಬಾವಿಯೊಳದ್ದಿರ್ದುಮೆನಗೆ ಸರಿಯಿಲ್ಲೆಂಬೀ
ಭಾವನೆಯ ಬಿಸುಟು ನೆನೆವೊಡೆ
ಪಾವನಮೆಮಗೋಂ ನಮಃ ಶಿವಾಯೆಂಬ ಪದಂ೬೫ ॥೬೮॥

ಒದರಿ ಮನಬೆದರಿ ಭ್ರಾಂತಿಯ
ಸದಮದದೊಳ್ಸಿಲುಕಿ ನಿಜವ ನಿಃಕರಿಸುವ ಉ
ನ್ಮದಗತಿಯ ಬಿಸುಟು ಪ್ರಮಥರ
ಪದಕೆಯ್ದುವೊಡೋಂ ನಮಃ ಶಿವಾಯೆಂಬ ಪದಂ ॥೬೯॥

ಒಂದೊಂದು ನಿಮಿಷ ಗಳಿಗೆಗ
ಳಂದಂದಿನ ಮಾಸವರ್ಷದಾಯುಷ್ಯಂಗಳ್
ಕುಂದದ ಮುನ್ನವೆ ನೆನೆನೆನೆ
ಸಂಧಿಸಿ ಬಿಡದೋಂ ನಮಃ ಶಿವಾಯೆಂಬ ಪದಂ ॥೭೦॥

೬೨-೬೨ ನೆಂಬರು(ಮೂ), ನೆಂಬುವ(ಶಿ), ೬೫-೬೫ "ಮೂ" ಪ್ರತಿಯಲ್ಲಿ ೬೭ ಮತ್ತು ೬೮ ನೆಯ ಪದ್ಯಗಳು ಒಂದರೊಳಗೊಂದು ಹೀಗೆ ಸೇರಿವೆ: ಮೊಗದ ತೆರೆ ನೆಗೆದು ಸೆರೆಗಳ್ ಬಿಗಿದು ಶಿರಂ ನಡುಗಿ ನಡವದಿಡುಗಡದೆ ನಗೆಯುಡುಗದೆ ಜವ್ವನ ಜಗುಳದೆ ಮಿಳದಿರ್ದ ನೀವೆನಗೆ ಸರಿಯಿಲ್ಲೆಂಬ ಭಾವನೆಯ ಬಿಸುಟು ನೆನೆವಡೆ ಪಾವನ ನಮಗೋಂ ನಮಃ ಶಿವಾಯೆಂಬ ಪದಂ.

ಮಣಿಯದೆ [೧೪]ಮನೆವಾಳ್ತಿಯೊ
ಳ [೧೪]ಣಿಯರವಾಡುತ್ತಲಿರ್ಪ ತನುಗುಣಮಂ
ಟೊಣೆಟೊಣೆದು ಬಿದಿರ್ದು [೧೫]ಕಳೆವೊಡೆ[೧೫]
ತ್ರಿಣಯನ ಜಪವೊಂ ನಮಃ ಶಿವಾಯೆಂಬ ಪದಂ ॥೨೧॥

ತೊಡಕಿದ ಭ್ರಮೆಯಂ ಬಿಡಿಸುವ
ಕಡುಗುವ ಸಕಲೇಂದ್ರಿಯಂಗಳೆಳತಟದೊಡಲಂ
ಕಿಡಿಸುವ ಕರ್ಮವ ಬಿಡಿಸುವ
ಮೃಡಜಪಮೆಮಗೋಂ ನಮಃ ಶಿವಾಯೆಂಬ ಪದಂ ॥೨೨॥

ಅವಗಡದ ನುಡಿಯ ಸಡಗರ
ದ ವಿಕಾರದ ಸೊಕ್ಕಿನೊಳಗೆ ತೇಂಕುವ ಲೋಕ
ವ್ಯವಹರಣೆಯಳಿದು [೧೬]ನಿಜಮುದು
ಭವಿ[೧೬]ಸುವ ಜಪವೋಂ ನಮಃ ಶಿವಾಯೆಂಬ ಪದಂ ॥೨೩॥

ಎಳತಟದಿಂ ಸಂಸಾರದ
ಕಳವಳದೊಳು ಸಿಲುಕಿ ತೊಲಗಲಾರದೆ ಕೋಪಾ
ನಳನದುಪತಾಪ[೧೭]ಮಂ ನೀಂ[೧೭]
ಕಳೆವೊಡೆ [೧೮]ತಪವೋಂ[೧೮] ನಮಃ ಶಿವಾಯೆಂಬ ಪದಂ ॥೨೪॥

ಪರಧನ ಪರಸತಿಯೆಂಬೀ
ವರದೀಪ್ತಿಯೆ ಕಣ್ಣೊಳೆಯ್ದೆ [೧೯][ತೊಳಲುತಿರದದರೊಳ್][೧೯]
[೨೦]ನರಶಲಭಂ[೨೦] ಬೀಳುರುಟದ
ಹರಜಪ ನಮಗೋಂ ನಮಃ ಶಿವಾಯೆಂಬ ಪದಂ ॥೨೫॥

ನೆರೆದಿರ್ದ ಮುಗಿಲ ಮಂಜಿನ
ತೆರಳಿಕೆ ಕುಡಿಮಿಂಚು ಗಾಳಿಗೊಡ್ಡಿದ ಸೊಡರೀ
[೨೧]ಸರಿರವಿದ ನೆಚ್ಚಿ ಕೆಡದಿರು
ಹರಜಪಮೆಮಗೋಂ[೨೧] ನಮಃ ಶಿವಾಯೆಂಬ ಪದಂ ॥೨೬॥

೧೪–೧೪ ಮನೆ ಸಂಸಾರದಲ(ಮೂ), ೧೫–೧೫ ಕಳೆವಾ(ಶಿ), ೧೬–೧೬ ಸಂಭವಿ(ಮೂ), ೧೭–೧೭ ನಾವಂ(ಮೂ), ೧೮–೧೮ ನಮಗೋ(ಮೂ), ೧೯–೧೯ ತೊಳಲು ತೆರನೀ(ಮೂ), ತೊಳಲುತ್ತದರೊಳ್(ಶಿ), ೨೦–೨೦ ವರಪತಂಗ(ಮೂ), ೨೧–೨೧ ಶರೀರವಿದೆಂದು ನೆಚ್ಚಿ ಕೆಡದಿರು ಹರಿಪದ ಓಂ(ಮೂ).

ಕೆಡೆದೀ ಕರ್ಮದ ಬೆಡಗಿನ
ಸಿಡಿವಲೆಯೊಳ್ ಸಿಲುಕಿ ಬಿಡಿಸಿಕೊಳಲಾರದೆ ಬಾ
ಯ್ವಿಡದೆ ನೆನೆ ಮನವೆ [೨೨]ಸುಗತಿಗೆ[೨೨]
ಮೃಡಜಪಮೆಮಗೋಂ ನಮಃ ಶಿವಾಯೆಂಬ ಪದಂ ॥೭೭॥

ಬಡಮನದೆ ಬಯಲ ಬಳಸುವ
ತುಡುಗುಣಿತನದೊಳಗು ಹೊರಗುಮರಿಯದೆ ವಿಷಯ
ಕ್ಕೊಡರಿಸುವ ಕರ್ಮ [೨೩]ಪಟಲವ[೨೩]
ಕಿಡಿಸುವ ಜಪವೋಂ ನಮಃ ಶಿವಾಯೆಂಬ ಪದಂ ॥೭೮॥

ಎಲ್ಲಿವರ ಜನನ ಸುಖ ಧನ
ಮಲ್ಲಿವರಂ ಮರಣ ದುಃಖ ದಾರಿದ್ರಂಗಳ್
ನಿಲ್ಲದೆ ಎಯ್ತಪ್ಪುವು ಗೆಲ
ಬಲ್ಲಡೆಯೆಮಗೋಂ ನಮಃ ಶಿವಾಯೆಂಬ ಪದಂ ॥೭೯॥

ಎನ್ನ ಧನವೆನ್ನ ಸತಿಸುತ
ರೆನ್ನಯ ತನುವೆನ್ನದೆನ್ನದೆಂದೆಂದು ಮಹಾ
ಬಿನ್ನಾಣದೊಳಗೆ ಕೆಡೆಯದ
ಮುನ್ನವೆ ನೆನೆಯೋಂ ನಮಃ ಶಿವಾಯೆಂಬ ಪದಂ ॥೮೦॥

ಬರಿದೊಡಲ [೨೪]ಕುಟ್ಟಿ[೨೪] ಬಲುಮೆಯ
ಮರುಕದೊಳಗಿದಗಿದು ಮೂಗ ಮೇಲೆತ್ತಿಯಹಂ
ಕರಿಸುತುಪತಾಪದಲಿ ಕೆಡೆ
ದೊರಲದೆ ನೆನೆಯೋಂ ನಮಃ ಶಿವಾಯೆಂಬ ಪದಂ ॥೮೧॥

ಒಳಗರಿಯದೆ ಹೊರಗರಿಯದೆ
ತಿಳಿವರಿಯದೆ ಗತಿಯ ಪಥವನರಿಯದೆ ಬಯಲಂ
ಬಳಸಿ ಗುರುಹಿರಿಯರೆಡೆಯೊಳ್
ಗಳಹದೆ ನೆನೆಯೋಂ ನಮಃ ಶಿವಾಯೆಂಬ ಪದಂ ॥೮೨॥

೨೨-೨೨ ಕೇಳೆಲೆ(ಮೂ), ೨೩-೨೩ ಪಟ್ಟವ(ಮೂ), ೨೪-೨೪ ಕಟ್ಟೆ(ಶಿ).

ಆನು ಕವಿಯಾನು ಸದುಗುಣಿ
ಯಾನು ಮಹಾದಾನಿ ಸಕಲವಿದ್ಯಾ [೭೫]ಜಾಣಂ[೭೫]
ಆನೆಂಬು[೭೬]ದಳಿದು[೭೬] ಪರಮ
ಜ್ಞಾನಾತ್ಮಕವೋಂ ನಮಃ ಶಿವಾಯೆಂಬ ಪದಂ ॥೮೩॥

ಇದಿರಲವಗುಣವ ಬೆದಕದ
ಸದುಗುಣಿಯಾನೆಂದು [೭೭]ಬೀಗಿ[೭೭] ಬೆರೆಯದೆ ಪದುಳಂ
ಮದನಮದಹರನ ಶ್ರೀಪದ
ಪದುಮವ ನೆನೆಯೋಂ ನಮಃ ಶಿವಾಯೆಂಬ ಪದಂ ॥೮೪॥

ನಿಜಪದತತ್ತ್ವಂ ಯೋಗ
ವ್ರಜವಾಗಮ ಸಕಲಮಂತ್ರ ತಂತ್ರಗಳೆಂಬೀ
ಗಜಮುದುಡಿನೊಳಗೆ ಸಿಲುಕದೆ
ಭಜಿಯಿಸುವೊಡಿದೋಂ ನಮಃ ಶಿವಾಯೆಂಬ ಪದಂ ॥೮೫॥

ಧರ್ಮಾರ್ಥಕಾಮಮೋಕ್ಷದ
ಪೆರ್ಮೆಯ ಬಯಸುವೊಡಮುಭಯ ಕರ್ಮಾದಿಗಳಂ
ನಿರ್ಮೂಲವ ಮಾಡುವ ನಿಜ
ನಿರ್ಮಲಜಪವೋಂ ನಮಃ ಶಿವಾಯೆಂಬ ಪದಂ ॥೮೬॥

ನೀರೇರುಹ ದಶಶತಕದಿಂ
ದೋರಂತಿರೆ ನಿತ್ಯ ನಿಯಮ ಪಂಚಾಕ್ಷರಿಯಿಂ
ನಾರಾಯಣ ಚಕ್ರವ ಪಡೆ
ದಾರಾಧನೆಗೋಂ ನಮಃ ಶಿವಾಯೆಂಬ ಪದಂ ॥೮೭॥

ಅಳವಿಯಲಮರ್ದುಂ ಭಕ್ತರ
ನಲವಿಂ ಪೊಗಳುತ್ತಮಿರ್ಪ ಪುಣ್ಯಾತ್ಮನ ನಿ
ರ್ಮಳ [೭೮]ಶಿವಭಕ್ತ್ಯತಿ ಭಾಗ್ಯದ[೭೮]
ಕಳೆಗೆಯ್ದುವುದೋಂ ನಮಃ ಶಿವಾಯೆಂಬ ಪದಂ ॥೮೮॥

೭೫–೭೫ ನಿಪುಣಂ(ಶಿ), ೭೬–೭೬ ದ ತಿಳಿದು(ಮೂ), ೭೭–೭೭ ತನ್ನಂ (ಮೂ), ೭೮–೭೮ ಶಿವನ ಭಕಿಮಾರ್ಗದ(ಶಿ).

ಪುರಹರನ ಭಕ್ತಿಭಾವದ
ತೆರಳಿಕೆಯುರವಣಿಯಲಮರ್ದು ತನುಗುಣ[೭೯]ಮಂತಃ
ಕರಣಂ ನೆಲಸುತೆ[೭೯] ನೆನೆವೊಡೆ
ಪರಮಾರ್ಥಮಿದೋಂ ನಮಃ ಶಿವಾಯೆಂಬ ಪದಂ ॥೮೯॥

ಶಿವಭಕ್ತಿ ಶಿವನ ಕೀರ್ತನೆ
ಶಿವನ ಸ್ತುತಿ ಶಿವನ ಮಂತ್ರ ಶಿವಪೂಜೆ ಸದಾ
ಶಿವನೊಲವು ಶಿವನನೆಯ್ದಿಪ
ಶಿವಜಪಮೆಮಗೋಂ ನಮಃ ಶಿವಾಯೆಂಬ ಪದಂ ॥೯೦॥

ಕ್ಷಣ ಕಡಿಕನ [೮೦]ಕಡಿಗತ್ತಿಯು
ಕ್ಷಣ[೮೦] ಕೊಂದೈದಾರು ಕೋಟಿ ಸಬವಂ ಕಡಿ[೮೧]ವೊಲ್[೮೧]
ಕ್ಷಣ ಪರುಷ ಮುಟ್ಟೆ ಲೋಹದ
ಗುಣ ಕೆಡುವೊಡಿದೋಂ ನಮಃ ಶಿವಾಯೆಂಬ ಪದಂ ॥೯೧॥

ಉಪಪಾತಕ ಕೋಟಿಗಳ
ತ್ಯಪರಾಧವನಂತ ಕೋಟಿಯಂ ಮಾಡಿದೊಡೇಂ
'ಜಪತೋ ಪಾಪಂ ನಾಸ್ತಿ'
ಶ್ವಪಚೋತ್ತಮಗೋಂ ನಮಃ ಶಿವಾಯೆಂಬ ಪದಂ ॥೯೨॥

ತರ್ದು ತುರಿ ಕೆಮ್ಮು ಬಗದಳ
ಯಿರ್ದಿರಿಕೆಯಲಾದ ಗೋಷ್ಠ ವಾತಂ ಪಿತ್ತಂ
ಹೊರ್ದಿದ ರುಜೆಯಂ ಕಿಡಿಸುವ
ಮರ್ದಿದೆಯೆಮಗೋಂ ನಮಃ ಶಿವಾಯೆಂಬ ಪದಂ ॥೯೩॥

ಕರಿಯಂಕುಶಕಂಜುಗುಮಾ
[೮೨]ಗಿರಿಯಂಜುಗು ಕುಲಿಶಕ್ಕೆ ತಮಂಧಂ ಪರಿಗುಂ
ಖರಕರಕಿರಣಕ್ಕೆಮಗಂ
ಪರಿವೊಡೆ ಪಾಪೋಂ[೮೨] ನಮಃ ಶಿವಾಯೆಂಬ ಪದಂ ॥೯೪॥

೭೯–೭೯ ಮಂತಃಕರಣ ನೆಲಗೊಂಡು(ಮೂ), ೮೦–೮೦ ಕಡುಗಮದೊರ್ಚಣ(ಶಿ), ೮೧–೮೧ ವುದು(ಮೂ), ೮೨–೮೨ ಗಿರಿಯಂಜುಗುಮಲ್ತೆ ಕುಲಿಶಂಕೆ ತಮಂ ಭಾಸ್ಕರ ಕಿರಣಕ್ಕಂತುಮಘಂ ಪರಿವೊಡೆ ಯೆಮಗೋಂ(ಶಿ).

[೮೩]ಉರಿಯಾ ಬಲು ಹೂಯ್ಲಿಂಗಾಂ[೮೩]
ತಿರಬಲ್ಲುವೆಯರಗಿನಲ್ಪ ಬೊಂಬೆಗಳೆಲ್ಲಂ
[೮೪]ಪರಮನ ಮಂತ್ರಕ್ಕ[೮೪]ಘವಾಂ
ತಿರಬಲ್ಲುದೆ? ಓಂ ನಮಃ ಶಿವಾಯೆಂಬ ಪದಂ ॥೯೫॥

ಇದು ಸಾಕ್ಷಾತ್ ಶೈವವ್ರತ
ವಿದು ಸಾಕ್ಷಾತ್ತತ್ತ್ವವಿದೆ ಶಿವಾಗಮ ಯೋಗಂ
ಹೃದಯ ಮನ ಚಿತ್ತ ಭಾವದೊ
ಳುದುಭವಿಸುವೊಡೋಂ ನಮಃ ಶಿವಾಯೆಂಬ ಪದಂ ॥೯೬॥

ವನಜರಿಪುಧರನ ಚರಣವ
ನನುದಿನ ನೆನೆನೆನೆದು ಸ್ತುತಿಸಿ ಮುನಿಜನವೆಲ್ಲಂ
ಘನತೆಯನೆಯ್ದಿದ ಮಹಿಮೆಯ
ನೆನೆ ಮುಂತೀಗೋಂ ನಮಃ ಶಿವಾಯೆಂಬ ಪದಂ ॥೯೭॥

ಅರ್ಥದೊಳು ನಿಮ್ಮ ಮಹಿಮೆಯ
ಕೀರ್ತಿಸಲೆನ್ನಳವೆ ದೇವ ತ್ರೈಜಗಧೀಶಾ
ಇತ್ತಲಿದೇ ಗತಿಪಥ ಪರ
ಮಾರ್ಥಕ್ಕಿದೆಯೋಂ ನಮಃ ಶಿವಾಯೆಂಬ ಪದಂ ॥೯೮॥

[೮೫]ತತ್ತ್ವ[೮೫] ವಿಚಾರಕ್ಕರಿವಿದೆ
ಭೃತ್ಯಾಚಾರದ ಗುಣಕ್ಕೆ ಸಾಧನವಿದೆ[೮೬] ಮ
ತ್ತತ್ಯಂತ[೮೬] ಸುಲಭ [೮೭]ನೆನೆವೊಡೆ
ಕರ್ತನ ಜಪವೋಂ[೮೭] ನಮಃ ಶಿವಾಯೆಂಬ ಪದಂ ॥೯೯॥

ಅಕ್ಷಿತ್ರಯನಂ [೮೮]ನೆರೆಪ[೮೮]ಷ
ಡಕ್ಷರದುನ್ನುತಿಯ ಮಹಿಮೆ ಕರ್ಮಾದಿಗಳಂ
ಶಿಕ್ಷಿಸುವುದು ನೆನೆದವರಂ
ರಕ್ಷಿಸುವುದಿದೋಂ ನಮಃ ಶಿವಾಯೆಂಬ ಪದಂ ॥೧೦೦॥

೮೩–೮೩ ಉರಿಯ ಬಲು ಹೊಯ್ಯಲದು ಕಾಂ(ಮೂ), ೮೪–೮೪ ದುರಿತಂ ಹರಮಂತ್ರಕ್ಕಾಂ(ಶಿ), ೮೫–೮೫ ತಥ್ಯ(ಶಿ), ೮೬–೮೬ ಮೇಣುತ್ಯಂತ(ಶಿ), ೮೭–೮೭ಜಪಮಿದೆ ಮೃತ್ಯುಂಜಯ ನೋಂ(ಶಿ), ೮೮–೮೮ ನೆನೆವ(ಮೂ) .

ಏಕೋದೇವನ ನೆನೆಯಲ್
ಏಕೋಜಪವೆನಲು ಮೂಲಮಂತ್ರಂ ಮತ್ತೆಯ
ನೇಕಶ್ರು[೮೯]ತಿ[೮೯] ಹರಿಪಿತಮಹ
ರೈಕದಲೆಮಗೋಂ ನಮಃ ಶಿವಾಯೆಂಬ ಪದಂ ॥೧೧೧॥

ಇದು ಲೇಸಿದು ಮಿಗಿಲಿದು [೯೦]ಮ
ತ್ತಿದುಜ್ವಲಂ[೯೦] ಮತ್ತೆ ಮತ್ತೆಯಧಿಕಕ್ಕಧಿಕಂ
ಇದು ಮೋಕ್ಷದ ತುದಿಗೆಯ್ದಿಪ
ಪದವಿದು ಜಪವೋಂ ನಮಃ ಶಿವಾಯೆಂಬ ಪದಂ ॥೧೧೨॥

ಶ್ರುತಿಗೆ [೯೧][ಮೊದಲರಿವಿಗಾಶ್ರಯ][೯೧]
ಯತಿಗಳ ಮನದಲ್ಲಿ ಜತನವಾಗಿಹ ಲಿಂಗಂ
ಸ್ತುತಿ ಸಕಲಜನ್ಮಕರ್ಮ
ಚ್ಯುತಿಗತಿಯೆಮಗೋಂ ನಮಃ ಶಿವಾಯೆಂಬ ಪದಂ ॥೧೧೩॥

ಸುರ ದನುಜ ಖಚರ ಖೇಚರ
ರುರಗಾದಿ ಸಮಸ್ತಮುನಿಜನಂಗಳ ವೇದಂ
ನೆರೆದು ತಮತಮಗೆ ನುತಿಸಲ್
ವರಮೀವುದಿದೋಂ ನಮಃ ಶಿವಾಯೆಂಬ ಪದಂ ॥೧೧೪॥

ನರರೊಳಗೆ ಭಕ್ತರಧಿಕರ್
ಸುರರೊಳಗಾ ಪ್ರಮಥರಧಿಕರಾ ಹರಿಯಜರೊಳ್
ಪರಮನೆಯಧಿಕಂ ಮಂತ್ರೋ
ತ್ಕರದೊಳಗಧಿಕೋಂ ನಮಃ ಶಿವಾಯೆಂಬ ಪದಂ ॥೧೧೫

ವರಮಂತ್ರದೊಳಗೆ ಘನವಿದು
[೯೨]ಗುರುತರ ವೇದಾದಿಸಾರಮೀ ಶಿವಮಂತ್ರಂ[೯೨]
ಮುರಹರನ ಮೂಲನಿಧಿಯಿದು
ಪರಮನ ಮಂತ್ರೋಂ ನಮಃ ಶಿವಾಯೆಂಬ ಪದಂ ॥೧೧೬॥

೮೯-೮೯ x (ಮೂ), ೯೦-೯೦ ಮತ್ತಾವಿದು ಬರಲು(ಮೂ), ೯೧-೯೧ ಮೂಲರಿವಿನಾಶ್ರಯ(ಮೂ), ಮೊದಲರಿವಿನಾಶ್ರಯ(ಶಿ), ೯೨-೯೨ ವರದಿ ವಕ್ತ್ರದಲಿ(ಮೂ).

ತಿಲಕದಲಿ ಭಸಿತಂ ಘನಮದು
ಫಲದೊಳಗಂ ಗುರುವಿನಧಿಕಕರುಣಂ ಫಲವದು
ಕುಲದೊಳ್ ಭಕ್ತಂ ಮಂತ್ರದೆ
ಮಲಹರಜಪವೋಂ ನಮಃ ಶಿವಾಯೆಮಬ ಪದಂ ॥೧೦೭॥

ಮನದಿಂ ಮತ್ತೊಂದ ನೆನೆಯೆ
ತನುವಿಗೆ ತಾನೌಷಧಂಗಳೆಂಬಿವನೊಲ್ಲೆಂ
ಅನವರತೋಂ ನಮಃ ಶಿವ
ಯೆನುತಿರ್ಪುದೆ ಮಂತ್ರ ತಂತ್ರಮೌಷಧವೆನಗಂ ॥೧೦೮॥

ಅಷ್ಟೋತ್ತರಶತಕ್ರತುಗಳ
ನಷ್ಟಾದಶಜನ್ಮದಲ್ಲಿ ಮಾಡಿದ ಫಲದಿಂ
ದಷ್ಟೋತ್ತರ ಶತಜಪ ಮಿಗಿ
ಲಿಷ್ಟಾರ್ಥಮಿದೋಂ ನಮಃ ಶಿವಾಯೆಂಬ ಪದಂ ॥೧೦೯॥

ಅರಕ್ಕರದೀ ಮಂತ್ರಂ
ಮೂರುಂ ಕಣ್ಣಭವನಿಂದೆ ವೆಗ್ಗಳ ದೈವಂ
ಬೇರಿಲ್ಲವೆಂದು ಧಾತ್ರಿಗೆ
ಸಾರಿದೆ ನಾಂ ಕೇಶಿರಾಜದಂಡಾಧೀಶಂ ॥೧೧೦॥

ಮಂತ್ರಮಹತ್ವ ಕಂದ ಸಮಾಪ್ತ

❖❖

ಅನುಬಂಧ

ಧಾರವಾಡದ ಕನ್ನಡ ಅಧ್ಯಯನಪೀಠದ ಹಸ್ತಪ್ರತಿ ಭಂಡಾರದಲ್ಲಿರುವ ೧೩೧೪ನೆಯ ನಂಬರಿನ ಪ್ರತಿಯಲ್ಲಿ (ಗರಿ ೧೧೮-೨೯) "ಕೇಶಿರಾಜ ಡಣಾಯಕರ ಕಂದ" ಹೆಸರಿನ ಕೃತಿಯಿದೆ. ೨೧೪ ಕಂದಗಳನ್ನೊಳಗೊಂಡಿರುವ ಇದರಲ್ಲಿ "ಮಂತ್ರಮಹತ್ವದ ಕಂದ"ಕ್ಕೆ ಸಂಬಂಧಿಸಿದ ಐದು ಹೊಸ ಪದ್ಯಗಳಿವೆ.*

ನಾಲಗೆ ಬತ್ತುವಿನಂ ಸಲೆ
ಮಾಲಾಮಂತ್ರಗಳನೋದಿ ಗಳಹಲದೇತಕೆ
ಓಲಗವೆ ಮೋಕ್ಷಲ[ಕು]ಮಿಗೆ
ಸಾಲದೆ ಕೇಳೋ ನಮಃ ಶಿವಾಯೆಂಬ ಪದಂ ॥೫೨॥

ಹಿಡಿಹಿಡಿದು ಹಿಡಿದು ತಿರುಪುತ
ನುಡಿಗಳ ಕಲಿತೊಡಲ ಹೊರವ ಕರ್ಮಾರ್ಣವದೊಳು
ಕೆಡೆವ ವಿಧಿವಶವ ಕಳೆವೊಡೆ
ಮೃಡಜಪ ನಮಗೋಂ ನಮಃ ಶಿವಾಯೆಂಬ ಪದಂ ॥೭೩॥

ಕುದುರ ತೊಳೆಯಲ್ಕೆ ಕೆಸಱಿಂ
ಬುದನಜೆಯದೆ ಮತ್ತೆ ಮತ್ತೆ ಮರ್ತ್ಯರ ಗುಣವಂ
ಮಿಡಿಮಿಡಿದು ಮಿಡುಹಿ ಗಳಹದೆ
ಪದುಳದೆ ನೆನೆ ಓಂ ನಮಃ ಶಿವಾಯೆಂಬ ಪದಂ ॥೭೪॥

ಅಕ್ಕಟ ಸಂಸಾರದ ಸೆಱೆ-
ಸಿಕ್ಕಿದ ದುಃಕ್ಕರ್ಮ ದುರಿತ ಪಾಪದ ಬೇರಂ
ಹೊಕ್ಕುಗಿದು ಬಿಸುಟು ಕಳವೈ-
ದಕ್ಕರ ನಮಗೋಂ ನಮಃ ಶಿವಾಯೆಂಬ ಪದಂ ॥೭೯॥

ಮುಸುಕಿಹ ಪಂಚೇಂದ್ರಿಯಗಳ
ವಶದೊಳು ದೆಸೆದೆಸೆಗೆ ಪರಿವ ವಿಷಯಂಗಳ
ಟ್ಟಿಸುವೈದಕ್ಕರಗಳ ಸಂ-
ತಸದಿಂ ನೆನೆ ಓಂ ನಮಃ ಶಿವಾಯೆಂಬ ಪದಂ ॥೮೨॥

❖❖

---

* ಈ ಪದ್ಯಗಳನ್ನು ಪ್ರಕಟಿಸಿದ ಶ್ರೀ ಎಸ್. ಶಿವಣ್ಣ ಅವರಿಗೆ ಕೃತಜ್ಞ, ನೋಡಿ. ಕೊಂಡಗುಳಿ ಕೇಶಿರಾಜನ ಕೆಲವು ಅಪ್ರಕಟಿತ ಷಡಕ್ಷರ ಕಂದಗಳು(ಬಸವ ಪಥ ೬-೧೦).

೨

ಲಿಂಗಸ್ತೋತ್ರದ ಕಂದ : ೧

ಶ್ರೀಮದಮರಾಸುರಾರ್ಚಿತ
ಕಾಮಾಂತಕ ದೇವ ಭಕ್ತಜನವನಚೈತ್ರಾ
ವ್ಯೋಮಮರುದವನಿ ರವಿಶಿಖಿ
ಸೋಮ ಜಲಾತ್ಮಾಷ್ಟಪತಿಯೆ ರಕ್ಷಿಪುದೆನ್ನಂ ॥೧॥ [೧]*

ಶ್ರೀಯಂ ಶಾಶ್ವತಭಕ್ತಿ
ಶ್ರೀಯಂ ತತ್ವಪದವ ನೆನೆವ ಪರಮಾನಂದ
ಶ್ರೀಯನೊಲಿದಿತ್ತು ಕೃಪೆಯಿಂ
ಜೀಯ ಶ್ರೀಸೋಮನಾಥ ರಕ್ಷಿಪುದೆನ್ನಂ ॥೨॥ [೨]

ಅವಧರಿಪುದು ಬಿನ್ನಪವಂ
ಸವಿನಯದಿಂದೆಱಗಿ ನಿಮಗೆ ಕೈಯೊಡ್ಡಿದಪೆಂ
ಭವದೀಯ ಚರಣಕಮಳ
ಕ್ಕವಭರದೆಱಗುಗೆ ಮದೀಯ ಮಾನಸಭೃಂಗಂ ॥೩॥

ಒಲ್ಲದೆ ಬಿಸುಟ್ಟು ವಿಷಯೋ
ತ್ಫುಲ್ಲಮನೀಶಾಂಘ್ರೀಕಮಳಪರಿಮಳಮಮಂ ಕೊಂ
ಡಲ್ಲಿಯೆ ಸುಳಿದಲ್ಲಿಯೆ ತೊಡ
ರ್ದಲ್ಲಿಯೆ ರಮಯಿಸುಗೆ ಮನ್ಮನೋಮದಭೃಂಗಂ ॥೪॥

---

* ಚೌಕ ಕಂಸಿನಲ್ಲಿಯ ಅಂಕಿಗಳು ಲಿಂಗಸ್ತೋತ್ರದ ಕಂದ : ೨ ರಲ್ಲಿಯ ಪದ್ಯಗಳನ್ನು ಸೂಚಿಸುತ್ತವೆ.

ಉಱಿದಱಿದು ವಿಷಯತತಿಗಳ
ನುಱಿಯದೆ ಸುಳಿಸುಳಿದು ಮನ್ಮನೋಮದಭೃಂಗಂ
ಬಱಿಲದ ನಲಿನಲಿದಲಸದೆ
ತೊಱಲ್ಗೆ ಭವಹರನ ಚರಣಸರಸಿಜಯುಗದೊಳ್ ॥೫॥

ಪೆಱತೊಂದು ದೆಸೆಯನಾಲಿಸ
ತೆಱಪಿಲ್ಲದೆ ಶಿವನ ಪದಾರವಿಂದದ ಗಂಧ
ಕೆಱಗಿ ಮನೋಮದಮಧುಪಂ
ಗಱೆಗಱೆದಮರ್ದಿರ್ಕೆ ಕಂಪನಾಸ್ವಾದಿಸುತಂ ॥೬॥

ತ್ವಚ್ಚರಣಮೆನ್ನ ಮನದೊ
ಳ್ವೆಚ್ಚಂತಮರ್ದಂತೆ ಕಡೆದು ಕಂಡರಿಸಿರ್ದಂ
ತಚ್ಚೊತ್ತಿದಂತೆ ನೆಟ್ಟನೆ
ನಿಚ್ಚಂ ನೆಲಸಿರ್ಕೆ ರಾಜರಾಜಿತಚೂಡಾ ॥೭॥ [೨೨]*

ಶಿವಪೂಜೆ ಶಿವನಿರೀಕ್ಷಣೆ
ಶಿವಭಕ್ತರ ಸೇವೆ ಶಿವನ ತತ್ತ್ವವಿಚಾರಂ
ಶಿವನ ನಿಜಗುಣದ ನಾಮ
ಸ್ತವಮುಂ ದೊರೆಕೊಳ್ಗೆ ಜನ್ಮಜನ್ಮಾಂತರದೊಳ್ ॥೮॥

ಶಿವಯೆಂದು ನುಡಿವ ನಾಲಗೆ
ಶಿವಪೂಜೆಯನಟ್ಕಿಱಿಂದೆ ನೋಡುವ ಕಂಗಳ್
ಶಿವನಂ ಪೂಜಿಪ ಕೈಗಳ್
ಶಿವನಂ ಬಲಗೊಂಬ ಕಾಲ್ಗಳೇೞೇೞ್ಬವದೊಳ್ ॥೯॥

ಶಿವಯೆಂಬುದು ದಿವ್ಯೌಷಧಿ
ಶಿವಯೆಂಬುದು ಸಕಲಮಂತ್ರಸಾಧನ ಮತ್ತೀ
ಶಿವಶಿವಶಿವಯೆಂದೆಂಬುದ
ನವಿರತಮಂ ಪಡೆದೊಡವನ ಜನ್ಮವು ಸಫಲಂ ॥೧೦॥

ಶಿವನೆ ಎನಗಾಳ್ದನೆಂಬಂ
ಶಿವನೇ ಮೂಲೋಕಮೆಂದು ಪೇೞ್ವವನಾವಂ
ಅವನೆ ಗುಣಿಯವನೆ ಪಂಡಿತ
ನವನೆ ಕರಂ ಚದುರನವನೆ ಮಾನವರತ್ನಂ ॥೧೧॥

ನಿಮ್ಮಡಿಗೆಱಗುಗೆ ತಲೆ ಶಿವ
ನಿಮ್ಮಂ ಪೂಜಿಸುಗೆ ಎನ್ನ ನಿಜಕರ *ಯುಗಳಂ
ನಿಮ್ಮಂ ಪಾಡುಗೆ x x x ಗಿ
ನಿಮ್ಮಂ ಬಲಗೊಳ್ಗೆ ಕಾಲ್ಗಳೇಳುಂ ಭವದೊಳ್* ॥೧೨॥ [೭೪]

......ರೂಪಿನ ತೇಜಿದಿಂ
ಯಂತ್ರಾಯಕ ಶರಣೆನುತ್ತಮೆಂದಿರ್ದಪೆನೋ ॥೨೬॥[1]

ನಲಿನಲಿದು ಕುಣಿದು ಕುಕಿಲಿಱಿ
ದುಲಿದುಲಿದು ಬೆಮರ್ತುದಾರ ಕಂಪನದಿಂದಂ
ಸಲೆಯೊಲ್ದು ತನುವನಱಿಯದೆ
ನೆಲೆವೆರ್ಚಿದ ಪರಮಸುಖಮದೆಂದಾದಪುದೋ ॥೨೭॥

ಹಾಡಿ ರಹದಿಂದೆ ನಲಿದೊ
ಲ್ದಾಡಿ ಸುಖಾನಂದದಿಂದೆ ತಾಮಸಮಂ ಬೇ
ಳ್ಮಾಡಿ ನಿಜಚಿತ್ತದೊಳ್ನೆಱಿ
ಕೂಡಿ ದಶಾವಸ್ಥೆ ಶಿವನೊಳೆಂದಾದಪುದೋ ॥೨೮॥ [೭೩]

ಒದವಿರ್ದಪಾಯಕೋಟಿಗ
ಳಿದಿರ್ವಂದೊಡಮಿಂದ್ರಪದವಿ ಸಾರ್ದೊಡದೆಂತುಂ
ಬೆದಱಿ ಮದವೇಱಿ ಮಱಿಯದೆ
ಪದುಳಂ ನಿಲ್ಕೆನ್ನ ಮನದೊಳಭವಪದಂಗಳ್ ॥೨೯॥[2]+[೨೩]

ಬರೆತಂತಿರೆ ಬೈತಂತಿರೆ
ಕರುವಿಟ್ಟಂತಿರೆ ಜಗುಟ್ಟುನಾಂದಂತಿರೆ ಕಂ
ಡರಿಸಿರ್ದಂತಿರೆ ಬೆಚ್ಚಂ
ತಿರೆ ರಮಯಿಕ್ಕೆನ್ನ ಮನದೊಳಭವ[ಪ]ದಂಗಳ್ ॥೩೦॥

– x (l)

೧. ೧೨ನೆಯ ಪದ್ಯದ ಉತ್ತರಭಾಗದಿಂದ ಈಪದ್ಯದ ಪೂರ್ವಭಾಗದ ವರೆಗಿನ ಪಾಠವನ್ನೊಳಗೊಂಡ ಒಂದು ಓಲೆ 'ಮೂ' ಪ್ರತಿಯಲ್ಲಿ ಕಳೆದು ಹೋಗಿದೆ.

೨. ಪ್ರಾರಂಭದ ೨೮ ಪದ್ಯಗಳನ್ನೊಳಗೊಂಡ ಒಂದು ಗರಿ 'ಮೈ' ಪ್ರತಿಯಲ್ಲಿ ಕಳೆದು ಹೋಗಿದೆ.

ತಣಿವಱಿಯದೆ ಶಿವಭಕ್ತಿಯೊ
ಲ (ಳ?) ಣಿಯರವಾಗುತ್ತೆ ಪೊಣ್ಮೆ ಪುಳಕಂ ಮನದೊಂ
ದೆಣಿಕೆಯನಱಿಯದೆ ಭರದಿಂ
ತ್ರಿಣೇತ್ರನಂ ಪಾಯ್ದು ಪಿಡಿದು ಬಿಡದಿರವೇಡಾ ॥೩೧॥ [೯೩]

ನೋಡಿ ನಲಿನಲಿದು ಭಕ್ತಿಯೊ
ಳಾಡಿ ಮನಂ ಬೆರಸಿ ಪಾಡಿ ಮೃಡನೋಳ್ಚಿತ್ತಂ
ಗೂಡಿ ಸುಖಜಲಧಿಯೊಳ್ಮುಳು
ಗಾಡಿ ಕರಂ ಲೀಲೆಯಿಂದಮೆಂದಿರ್ದಪೆನೋ ॥೩೨॥ [೫೪]*

ಮನವಮರ್ದು ಲಿಂಗದಲ್ಲಿಗೆ
ತನುವಮರ್ದು ಮಹಾನುಭಾವಸುಖಸಂತತಿಗಂ
ತನಿವಿತ್ತದಾನಶೀಲನ
ನೆನಸುಂ ನೋಡುತ್ತೆ ಸುಖದೊಳೆಂದಿರ್ದಪೆನೋ ॥೩೩॥

ಬಗೆ ನಿಮ್ಮೊಳ್ನೆಲೆಗೊಂಡಂ
ತೊಗೆಯಲ್ಪುಳಕಾಳಿ ರೋಮಕೂಪಾವಳಿ[೧]ಯೊಳ್
ಮಿಗೆ [ಮುಳುಗಿ?][೧] ನೇತ್ರವಾರಿಯೊ
ಳಗಜೇಶನ ಕಂಡು ಕರಗುತೆಂದಿರ್ದಪೆನೋ ॥೩೪॥

ಅಗೆ ಹೊಯ್ದು ತೆಱದೆ ಪುಳಕಂ
ನೆಗೆಯಲ್ಸರ್ವಾಂಗದಿಂದೆ ಕಣ್ಣುಂ ಮನಮುಂ
ಬಗರಿಗೆಯಂದದಿನೊಸರ
ಲ್ಕಗಜೇಶನ ಕಂಡು ಕರಗುತೆಂದಿರ್ದಪೆನೋ ॥೩೫॥ [೬೪]

ಕಳವಳಿಸಿ ನಗುತಟುತ್ತಂ
ಪುಳಕಿತ ತನುವಾಗಿ ಭಕ್ತಿಭರದಿಂದಹಿಕುಂ
ಡಳನಂ ನೆನೆದು ಸುಖಾಶ್ರುವ
ಜಳನಿಧಿಯೊಳ್ಮೂಡಿ ಮುಳುಗುತೆಂದಿರ್ದಪೆನೋ ॥೩೬॥

---

* ಈ ಪದ್ಯ ಕರ್ನಾಟಕ ಕವಿಚರಿತೆ I (೧೯೬೧) ಪು. ೫೧೨ರಲ್ಲಿದೆ.

೧–೧ ಮುಳಿಳುಗುತ್ತೆ(ಮೂ), ಯೊಳ್ಮುಳುಗುತ್ತೆ(ಮೈ)

ಕಡೆಗೋಡಿವಱಿಯೆ ಕಣ್ಬನಿ
ನುಡಿ ತಡಬಡವಾಗಿ ರೋಮಕೂಪದೊಳೆಲ್ಲಂ
ಬಿಡದೊಗೆಯೆ ಪುಳಕವಾಯೆ
ನ್ನೊಡೆಯನ ಮುಂದಱಿಯದಾಡುತೆಂದಿರ್ದಪೆನೋ ॥೩೭॥ [೬೯]

ಒಗೆವಶ್ರುಪುಳಕತತಿಯಿಂ
ದಗಲದೆ ಶಿವ ಶಿವ ಶಿವ ಪ್ರಘೋಷದೊಳೆಂದುಂ
ಪಗಲಿರುಳೆಂಬುದನಱಿಯದೆ
ನಗಜಾವಲ್ಲಭನೊಳಾೞುತೆಂದಿರ್ದಪೆನೋ ॥೩೮॥ [೭೧]

ಮೃಡಭಕ್ತಿರಸಸಮುದ್ರದ
ಮಡುವಿನೊಳವಗಾಹಮಿರ್ದು ತಣಿ[೨]ವಡೆ[೨]ಗುವಿನಂ
ಕುಡಿದು ಸುಖಮೂರ್ಚೆಯಿಂದಂ
ಕೆಡೆದು ಸದಾಶಿವನನೇಗಳಾಂ ಕಂಡಪೆನೋ ॥೩೯॥ (೫೯)

ದೆಸೆಯಱಿಯದೆ ಪೊಲ[೩]ನ[೩]ಱಿಯದೆ
ಪಸಿವಱಿಯದೆ ನಿದ್ರೆಯರಿಯದಿರುಳುಂ ಪಗಲುಂ
[೪]ತಿಸುಳಿ[೪]ಯೊಡನೊಂದಿ ಭಕ್ತಿಯ
ರಸದೊಳಗಾನೆಂದು ಮುೞುಗಿ ಸುಖಿಯಾದೆಪೆನೋ ॥೪೦॥

[ಹ]ರಚರಣಭಕ್ತಿರಸಮಂ
[೫]ಹರಿಸದೆ ಕುಡಿದುರ್ಕಿ ಸೊರ್ಕಿ[೫] ಪರವರ (ಶ?) ದಿಂದಂ
ಸ್ಮರಿಯಿಸಲುಂ ಪೂಜಿಸಲುಂ
ನಿರುತಂ ಬಣ್ಣಿಸಲುಮಱಿಯದೆಂದಿರ್ದಪೆನೋ ॥೪೧॥ [೭೬]

[೬]ನಡೆವ[೬] ನುಡಿವೆಡೆಯೊಳೊರ್ಮೆಯು
ಮೆಡೆಯುಡುಗದೆ ಕಮಳನಾಳಸೂತ್ರದ ತೆಱದಿಂ
ಮೃಡಚರಣಧ್ಯಾನಮನಾಂ
ಪಡೆದು ಸುಖಾಸ್ಪದದೊಳೊಂದಿ ಬೞಿ ಸಂದಪೆನೋ ॥೪೨॥ (೪೪)

೨–೨ ಯೊದ(ಮೈ), ೩–೩ ಬ (ಮೈ), ೪–೪ ಪಸುಪತಿ(ಮೈ), ೫–೫ ಹರುಷದಿ ಕುಡಿಕುಡಿದು ಸೊಕ್ಕಿ(ಮೈ), ೬–೬ ನುಡಿವ(ಮೂ).

ಗಿರಿಜಾರಮಣನ [೭]ಪದಪಂ
ಕರುಹಂಗಳ[೭] ಭಕ್ತಿರತಿಯ ಸುಖಮಲ್ಲದೆ ಮ
ತ್ತೆರಡನೆಯ ಸುಖವನಱಿಯದೆ
ಪರಮಾರ್ಥದ ತುಟ್ಟತುದಿ[೮]ಯನೆಂದ್ಯೈದುವೆನೋ[೮] ॥೪೩॥ [೯೨]

ಭಕ್ತಿರತಿಯಲ್ಲಿ ತೋರುವ
ಭಕ್ತಿರಸಾಸ್ವಾದಸುಖವನನುಭವಿಸುತ್ತುಂ
ಭಕ್ತಿ ಲವಲವಿಕೆ ಪಿಂಗದೆ
[೯]ಭಕ್ತಿಪಯೋಧಿಯೊಳ್[೯] ಮುಳುಗುತೆಂದಿರ್ದಪೆನೊ ॥೪೪॥

ಮಂದಾರದ ಮುಚುಕುಂದದ
ಕುಂದೇಂದೀವರದ ಪಾರಿಜಾತದ ಪೂವಂ
ತಂದಾನಂದದೆ ಹಿಮಗಿರಿ
ಕಂದರದೊಳಗಿಂದುಧರನನೆಂದರ್ಚಿಪೆನೋ ॥೪೫॥ [೯೯]

ಬೆಟ್ಟದ ಘಟ್ಟದ ಗುಹೆಯೊಳ
ಗಟ್ಟಡವಿಯೊಳೆಯ್ದೆ [೧೦]ಶಿವನಗದ[೧೦] ಗಹ್ವರದೊ
ಳ್ಕಟ್ಟೇಕಾಂತದೆ ದುರಿತಘ
ರಟ್ಟನನನುಭವಿಪ ಸುಖಮದೆಂದಾದಪುದೋ ॥೪೬॥ [೧೦೦]

ಆನುಂ ನೀನುಂ ಬೆಟ್ಟುಂ
ಕಾನನಮುಂ ತೀರ್ಥಜಲಮುಮಲ್ಲದೆ ಪೆಱತೊಂ
ದೇನುಮಣಮಿಲ್ಲದೆಡೆಯೊಳು
ಧ್ಯಾನಿಸುವುದಪೇ[೧೧]ಕ್ಷೆಯೆ[೧೧]ನಗೆ ಗಿರಿಜಾರಮಣಾ ॥೪೭॥

ಸುಳಿ[೧೨]ದಂ[೧೨]ತೆ ಮುಂದೆ ಕಣ್ಣೊ
ಳ್ಪೊಳೆದಂತೆ ಮದೀಯ ಹೃದಯಕಮಳಾಸನದೊಳ್
ಬೆಳಗುತ್ತಮಿರ್ಕೆ ಪನ್ನಗ
ವಳಯನ ಸನ್ಮೂರ್ತಿಯೆನಗೆ ಭಾವಿಪ ಪದದೊಳ್ ॥೪೮॥

೭-೭ ಪದಸರಸಿರುಹಂಗಳ(ಮೈ), ೮-೮ ಯೊಳೆಂದ್ಯೆಯ್ದುವೆನೋ(ಮೈ), ೯-೯ ಭಕ್ತ್ಯಂಬುಧಿಯೊಳಗೆ(ಮೈ), ೧೦-೧೦ ಶಿವನನುರು(ಮೂ), ೧೧-೧೧ಕ್ಷಿಸೆ(ಮೈ), ೧೨-೧೨ ವಂ(ಮೈ).

ನೀನೆ ಶರಣೆಂಬ ತೀರ್ಥ
ಸ್ನಾನದಿನೇನಧಿಕಮೊಳವೆ ತೀರ್ಥಸ್ನಾನಂ
ನೀನೇ ಶರಣೆಂಬ ಜಪದಿಂ
ದೇನಧಿಕಂ ಜಪವು[೧೩]ಮೊ[೧೩]ಳವೆ ಗಿರಿಜಾರಮಣಾ ॥೪೯॥

ಗಿರಿಜಾರಮಣನ ಗಣಪದ
ಸರಸಿರುಹಕ್ಕೆ [೧೪]ಯುಮೆನ್ನ[ಯ][೧೪] ಮಾನಸ ವಿಕಚ
ತ್ಸರಸಿರುಹಕ್ಕೆಯುಮಮಳ್ದಾ
ವರೆಯಂದದಿನೊಂದೆ ನಾಳವೆಂದಾದಪುದೋ ॥೫೦॥

ಅಡಿಗಡಿಗೆ ಶಿವನ ರೂಪಂ
ನಡೆ ನೋಡಿ ಮನೋನುರಾಗದಿಂ ತಣಿಯದೆ ಕೈ
ವಿಡಿದು ಮನದತ್ತ ತೋಱುವ
ಮೃಡನನುಭವಸುಖದ ಸೊಗಸದೆಂದಾದಪುದೋ ॥೫೧॥ [೪೭]

ಅವಸರ[೧೫]ವಱಿಯದ[೧೫] ನೋಟಂ
ತವಿಲಱಿಯದ ಬೇಟವೆರಡನಱಿಯದ ಕೂಟಂ
ಶಿವಭಕ್ತಿ ರತಿಯೊಳಾಟಂ
ಸವೆಯದ ಸುಖವೆನ್ನೊಳೆಂದು ನೆಲೆಗೊಂಡಪುದೋ ॥೫೨॥ [೬೭]

ಶಿವನೊಲವೆ ಜಾನವಾಗಿಯೆ
ಶಿವನನುಭವಸುಖದ ಸುಧೆಯೆ ಜಪವಾಗಿಯೆ ತಾಂ
ಶಿವನ ನೆಱೆಪಿಡಿದು ಬರ್ದುಕುವ
ಶಿವಶರಣರ ಸಂಗವೆನಗದೆಂದಾದಪುದೋ ॥೫೩॥

ಅಂಬುಜದ ರಜವ ನವರುವ
ತಂಬೆಲರೊಳ್ವೆರೆದು ಬೆಳೆದ ಘನಸೌರಭಮಂ
ಕಂಬಾಯ್ತನದಿಂದುಂಬಾ
ತುಂಬಿಯ ಲವಲವಿಕೆ ಶಿವನೊಳೆಂದಾದಪುದೋ ॥೫೪॥ [೯೦]

೧೩–೧೩ ಮ(ಮೈ), ೧೪–೧೪ ಮದೀಯ ಹೃದಯ(ಮೈ), *–೧೪ ವಿಮಳ(ಮೂ), ೧೫–೧೫ ವಿಲ್ಲದ (ಮೈ).

ಬಿರಿವರಲ ಪೊರೆಯ ಪೊರೆಯೊಳ್
[೧೬]ಪರಿವರಿವೃತ ಬ[೧೬]ವರಿಗೊಳ್ವ ತುಂಬಿವೊಲೆ ಮನಂ
ಬಿರಿದು ತನು ಜರಿದು ಲಿಂಗದ
[೧೭]ಪೊರೆಯೊಳ್ ರಾಜಿಸುವ[೧೭] ಭಕ್ತಿಯೆಂದಾದಪುದೋ ॥೫೫॥

ಪೊಡಮಟ್ಟು ಪೋಗಿ ಪೋಗದೆ
ತಡೆ ಮೆಟ್ಟುತ್ತಡಿಯನಡಿಯನೊಯ್ಯನೆ ಸಾರ್ತಂ
ದಡಿಗಡಿಗೆ ಪಿಡಿದು ಲಿಂಗವ
ಬಿಡಲಾರದ ನೇಹವೆನಗದೆಂದಾದಪುದೋ ॥೫೬॥ [೭೯]

ಉಟ್ಟುದು ಪೊದೆದುದು ಮೆಲ್ದುದು
ತೊಟ್ಟುದು ತೊಡವೆಲ್ಲವೆರಸು ಲಿಂಗದ ಬಸಿಱೊ
ಳ್ಪುಟ್ಟಿ ಬೆಳೆದಂತೆ ಕಣ್ಮನ
ಕಿಟ್ಟಣಮಾಗಿರ್ಪ [೧೮]ಸುಖ[೧೮] ಮದೆಂದಾದಪುದೋ ॥೫೭॥

ಸ್ತುತಿಯಜೆಯದೆ ಮತಿಯಜೆಯದೆ
ಯತಿಪರವಶಭೂತನಾಗಿ ಶಿವನನುಭವದೊ
ಳ್ಮತಿ ವಿಕಲನಾಗಿ ಲಿಂಗದ
ಗತಿಮತಿಯೊಳ್ಸಲ್ವ ಸುಖಮದೆಂದಾದಪುದೋ ॥೫೮॥

ಸರ್ವದ್ವಂದ್ವಂ ಮಱೆದಾ
ನೊರ್ವನೆ ಏಕಾಂತದಲ್ಲಿ ಶಿವನನುಭವದೊಳ್
ನಿರ್ವಂದದಿಂದಮಿರ್ಪಾ
ನಿರ್ವಾಣದ ಪರಮಸುಖಮದೆಂದಾದಪುದೋ ॥೫೯॥

ಮಾಱಾಗಿ ತನುಮನಂ ತಾಂ
ಬೇಱಿಲ್ಲದೆ ಲಿಂಗತಂದೆಯನುಭವದಿಂದಂ
ಕೀಱಿ ನಿಜಸೌಖ್ಯವರಮಂ
ಬೀಱುವ ಸುಖಮೋಹವೆನಗದೆಂದಾದಪುದೋ ॥೬೦॥

೧೬–೧೬ ಸುರಿವರಳಂತೆ (ಮೈ), ೧೭–೧೭ ಪೊರೆಯೊಳಡಂಗಿಸುವ(ಮೈ), ೧೮–೧೮ ಸೈಪ(ಮೈ), ೧೯–೧೯ ಕಮಲದ(ಮೈ).

ಭವದೀಯ ಚರಣ [೧೯]ಸರಸಿಜ[೧೯]
ನವಕುಸುಮಾಸವವನೆನ್ನ ಮಾನಸಭೃಂಗಂ
ಸವಿನಯದಿನೀಂಟಿ ಸೊರ್ಕುತೆ
ಶಿವಶಿವಶಿವಯೆಂದು ಜಿನುಗುತೆಂದಿರ್ದ[೨೦]ಪುದೋ[೨೦] ॥೬೧॥ [೧೮]

ಮೆಯ್ಯಱಿ[೨೧]ಯದ[೨೧] ಭಕ್ತಿಯೊಳಂ
[೨೨]ದ[೨೨]ಯ್ಯ ಮಹಾದೇವ ಪಾರ್ವತೀಧವ ನೀನಿಂ
ತೊಯ್ಯೆಂದು ಬಿಟ್ಟು ಧರೆಯೊಳ್
ಪುಯ್ಯಲಿಡುತ್ತಿರ್ಪ ಸೈಪದೆಂದಾದಪುದೋ ॥೬೨॥

ನೆನೆನೆನೆದು ಮೂರ್ತಿ ಭಾವದೊ
ಳನುಭವಿಸುವ ಭಕ್ತಿರಸದೊಳೆನ್ನಯ ಮನಮಂ
ನನೆಯಿಕ್ಕಿ ನನೆವ ತಾಣದೊ
ಳನುಪಮ ನಿಜ ಪರಮಪದಮದೆಂದಾದಪುದೋ ॥೬೩॥

ಮಾರಮದಹರನೆ ನಿನ್ನಾ
ಕಾರಂ ಸಾನಂದಮಪ್ಪ ಮಚ್ಚಿತ್ತಸುಧಾ
ವಾರಿಧಿಯೊಳಗಗಲದೆ ತಿಳಿ
ನೀರೊಳಗಣ ತಿಂಗಳಂತಿರೆಂದಿರ್ದ[೨೩]ಪುದೋ[೨೩] ॥೬೪॥ ೨೦

ಲಿಂಗವನೆ ನೋಡಿ ಚಿತ್ತಂ
ಪಿಂಗದೆ ತಲ್ಲೀಯಮಾಗಿ ಪೆಱತಂ ಮಱೆದಾ
ಸಂಗದೊಳೆ ನಿಂದು ಶಿವನ ವ (ಮ?)
ನಂಗೊಳಿಸುವ ಭಕ್ತಿಯೆನಗದೆಂದಾದಪುದೋ ॥೬೫॥ [೫೫]

ಕಪ್ಪುಮುರಿಯಿಂ ನೀರಿಂ
ದುಪ್ಪು ಕರಂ ಕರಗುವಂತೆ ತನುಮನವೆ[೨೪]ರಡಂ[೨೪]
ತಪ್ಪು (ಪ್ಪಿ?) ತವೆದಲ್ಲ ಶಂಕರ
ನೊಪ್ಪವ ನಾನೆಂದು ಕಂಡು ಸುಖಿಯಾದಪೆನೋ ॥೬೬॥ [೬೨]

೨೦–೨೦ ಪೆನೋ(ಮೈ), ೨೧–೨೧ ದೆ(ಮೂ), ೨೨–೨೨ ತ(ಮೂ), ೨೩–೨೩ ಪೆನೋ(ಮೈ), ೨೪–೨೪ ಡುಂ(ಮೈ).

ಪರಿದ್ಯೆದಿ ಲಿಂಗದೇವನ
ಚರಣಂಗಳನಿರದೆ ನೋಡಿ ಹಿಮ್ಮೆಟ್ಟದೆ ಕಾ
ತರಿಸಿ ಪೆಱಪಿಂಗಲಱಿಯದೆ
ಬಿರಮುಗುಳ್ಗಳ ತುಂಬಿಯಂತಿರೆಂದಿರ್ದಪೆನೋ ॥೬೭॥ [೪೮]

ಮನವುಡುಗಲ್ತನು ಕರಗ
ಲ್ಮೊನೆದೋಱಲ್ ರೋಮರಾಜಿ ಲಿಂಗದೊಳನಿಶಂ
ತನಿನೇಹದಿನಶ್ರುಜಲಂ
ಜನಿಯಿಸಲಾನೆಂದು ಕಂಡು ಸುಖಿಯಾದಪೆನೋ ॥೬೮॥ [೬೩]

ತಡವರಿಸಿ ನೋಡಿ ಕಂಡಾ
ಮೃಡನಿರ್ದಪನೆಂಬ ಭಾವವೆನ್ನೊಳ್ನೆಲಸ
ಲ್ದುಡುಗುಡುನೆ ಸುರಿವ ಕಂಬನಿ
ಮಡುಗಳೊಳೋಲಾಡುತಾ[೨೫]ನದೆಂ[೨೫]ದಿರ್ದಪೆನೋ ॥೬೯॥

ಸೆಜ್ಜೆಯನೆ ತೆಗೆದು ನೋಡ
ಲ್ಕುಜ್ಜಳಿಸುವ ಲಿಂಗವೆಸೆಯೆ ಕಣ್ಗಂ ಮನಕಂ
ಪಜ್ಜಳಿಪ ಕಾಂತಿಯೊಳಗಾಂ
ಜಜ್ಜನೆ ಜರಿವುತ್ತೆ ಶಿವನೊಳೆಂದಿರ್ದಪೆನೋ ॥೭೦॥ [೪೯]

ಆವರಿಸಿ ಭಕ್ತಿರಸಮದು
ತೀವುತ್ತಾ ರೋಮಕೂಪವೆನಿತನಿತಱೊಳಂ
[೨೬]ಭಾ[೨೬] ವರ್ಷದಂತೆ ಸುರಿಯೆ ಸು
ಖಾವರ್ಷದೆ ತೇಂಕನಾಡುತೆಂದಿರ್ದಪೆನೋ ॥೭೧॥

ಅಂಗೈಯೊಳಾಲಿ [೨೭]ಕಲ್ಲುಂ[೨೭]
ಪಿಂಗದೆ ನಡೆ ನೋಡೆ ನೋಡೆ ಕರಗುವ ತೆಱದಿಂ
ಲಿಂಗವನೆ ನೋಡಿ ಮತ್ಸ
ರ್ವಾಂಗಂ ನೆಱೆ ಕರಗಿ ಕೊಱಗುತೆಂದಿರ್ದಪೆನೋ ॥೭೨॥ [೫೧]

೨೫-೨೫ನುತೆಂ(ಮೈ), ೨೬-೨೬ ಜೋ(ಮೂ), ೨೭-೨೭ ಲ್ಲುದು (ಮೂ).

ಒಚ್ಚತನವೆನಿಸುವ ಲಿಂಗ
ಕ್ಕಚ್ಚರಿಯಿಂ ಮಾಱುವೋಗಿ ಶಿವಪೂಜೆಯೊಳಾಂ
ಮಚ್ಚಿ ಪೆಱತಾವ ಸುಖಮಂ
ಮೆಚ್ಚದ ಸಚ್ಚರಿತೆ ಶಿವನೊಳೆಂದಾದಪುದೋ ॥೭೩॥

ಶಿವಶಿವಶಿವಯೆಂದೆನುತಂ
ಶಿವಮಂತ್ರಾಕ್ಷರದ ಜಪವನಳವಡಿಸುತ್ತಂ
ಶಿವನ ನಿಜಮೂರ್ತಿಯಂ ಸಲೆ
ಭವಭವದೊಳ್ನೋಳ್ಪುದೆನಗದೆಂದಾಪುದೋ ॥೭೪॥ [೭೦]

ಮೃಡನಂ ಪೂಜಿಸಿ ಪೂಜೆಯ
ನಡಿಗಡಿಗಾಂ ನೋಡಿ ನೋಡಿ ಪೂಜಾಮೃತಮಂ
ಕುಡಿಕುಡಿದುಂ [೨೮]ತಣಿದಾಗಳು[೨೮]
ಮೆಡೆವಱಿಯದ ಭಕ್ತಿಯೆನಗದೆಂದಾಪುದೋ ॥೭೫॥ [೫೮]

ಹರನ ದಯಾಮೃತವರ್ಷದ
ಸುರಿವೊನಲಿಂ ನಾಂದು ನಾಂದು ತನುಮನವೆಂಬು
ರ್ವರೆ ದಣಿದು ಭಕ್ತಿಬೀಜಾಂ
ಕುರವದು ತಾನೆಂದು ಬೆಳೆದು ಫಲವಾದಪುದೋ ॥೭೬॥*

ಅಱಿವಲ್ಲವಱಿತು ಲಿಂಗದೊ
ಳೞಿತ ಮನಂ ಪಾಲೊಳೆಱೆದ ವಾರಿಯ ತೆಱದಿಂ
ಮೊಱೆಪೊಣ್ಮದಲ್ಲಿ ರಮಯಿಸೆ
ಪೆಱಪಿಂಗದ ಲಿಂಗಸಂಗವೆಂದಾದಪುದೋ ॥೭೭॥

ಪರಮ ಪ್ರಭುಲಿಂಗ (ವಿಂ?) ಗಾಶ್ರಿತ
ವರಗಂ (ದಂ?) ಗಹಿಕಂಕಣಂಗೆ ರಾಜಿತರಾಜಾ
ಭರಣಂಗೆ ಮನವನೊಪ್ಪಿಸಿ
ಪರಮಸುಖಾಶ್ರಯದೊಳೊಲ್ದು ರಮಯಿಸವೇಡಾ ॥೭೮॥ [೩೭]

೨೮–೨೮ ತಣಿಯಲಱಿಯಲಾಱದೆ(ಮೈ).
* ಈ ಪದ್ಯ ಕರ್ಣಾಟಕ ಕವಿಚರಿತೆ I (೧೯೬೧)ಪು. ೫೧೨ರಲ್ಲಿದೆ.

ಅಸಿಯಳಗಲ್ಕೆಗೆ ನಲ್ಲಂ
ಕುಸುಮಾಸ್ತ್ರನ ಬಾಧೆಗಳ್ಕಿ ಚಿಂತಿಸುವಂತಾ
ನಸಮಾಕ್ಷನಂಘ್ರಿಸೇವೆಗೆ
[೨೯]ಬಿಸಜಾಕ್ಷಿ[೨೯]ಯನಗಲ್ದನಂತೆ ಮಱುಗಲ್ವೇಡಾ ॥೭೯॥

ಓಪನ ರತಿಯೊಳ್ನಲವಿಂ
ಚಾಪಳೆ ನಲಿನಲಿದು ಸುಖವನನುಭವಿಸುವವೋಲ್
[೩೦]ಪಾಪಹರನಂಗಸಂಗದೊ
ಳಾಪೋಟ್ತುಂ ಸುಖದ ಸೊಗಸದೆಂದಾದಪುದೊ[೩೦] ॥೮೦॥ [೮೯]

ಎರಡಕ್ಕರಮುಚ್ಚರಿಸಲ್
ಸರಿರಂ ಬಡವಾಗದ [೩೧]ತುಳ ಸುಖಮೊದವುಗುವೊಂ[೩೧]
ದರೆ ಕಾಣಿತವದ ಮೋಕ್ಷಂ
ದೊರೆಕೊಳ್ಗುಂ [೩೨]ಮನಮನೀಯೆ[೩೨] ಶಿವಶಿವಯೆನ್ನಾ ॥೮೧॥

ಶಿವಯೆಂಬೆರಡಕ್ಕರಮವು
ಭವದುಃಖಿಯ ಬಾಯ್ಗೆ ಮಱೆದು [೩೩]ಬಂದೊಡೆ[೩೩] ಮತ್ತಾ
ಶಿವನಿಪ್ಪ ಸೆಜ್ಜೆಯೆಂದಾ
ಜವನೊಯ್ಯಂ ಶಿವನ ಮಹಿಮೆ ಸಾಧಾರಣಮೇ ॥೮೨॥

ಸ್ತುತಿಗೊಡೆಯನಪ್ಪ ನಿಮ್ಮಂ
ಸ್ತುತಿಯಿಸದೇ ಕೆಟ್ಟು ಬೆಂದ ಬಸುಱಿಂ ಪೊಱೆಯ[೩೪]
[೩೪]ಲ್ಮತಿ ವಿಕಳನಾಗಿ ಪೆಱರಂ
ಸ್ತುತಿಯಿಪುದಂ ಮಾಣಿಸೆನಗೆ ಗಿರಿಜಾರಮಣಾ ॥೮೩॥

ನೀನೊಲ್ಲದೊಡೊಲ್ವ[ವ]ರಾ
ರ್ನೀನೀಯದೊಡೀವರಾರ್ ಜಗನ್ನಾಥನೆ ಕೇಳ್
ನೀನಲ್ಲದೊಡೆಯರಿಲ್ಲೈ
ನೀನಿದನಜಿದೆನ್ನ[೩೫]ನೆಯ್ದೆ[೩೫] ರಕ್ಷಿಪುದಭವಾ ॥೮೪॥

೨೯–೨೯ ಶಶಿಮುಖಿ(ಮೈ), ೩೦–೩೦ ಪಾಪಹರ ನಿಮ್ಮ ಮಹಿಮೆಯ ನಾಪೊತ್ತು ಶಿವನಭವನ ಮೂಲಸ್ತಂಭಾ(ಮೈ), ೩೧–೩೧ ಪರಸುಖವರೆ ತನಗೊಂ(ಮೈ),೩೨–೩೨ ಮನವ ಬಿಡದೆ (ಮೈ), ೩೩–೩೩ ಬರಲೊಡ(ಮೈ), ೩೪–೩೪ ದೆಂ ಮ(ಮೈ), ೩೫–೩೫ ನೊಲಿದು(ಮೈ).

ಆಸತ್ತೆ ಮಗನೆಯಕ್ಕಟ
ಬೇಸತ್ತೈ ಶಿಶುವೆಯೆಂದು ಕೃಪೆಯಿಂದೆನ್ನಂ
ಈಸಾ ನೀನಾರಯ್ಯದ
ಬೇಸಱು ಘನವೆಂತು ಬರ್ದುಕುವೆಂ ಬೆಸಸಭವಾ ॥೮೫॥

ಆನೆಂತುಂ ನಿನ್ನ ಪದ
ಧ್ಯಾನಮನೊಲ್ಲದವನಲ್ಲ ಮನಮಿಂತೀಗ
ಳ್ತಾನೊಲ್ಲದು ಮೊಱೆಯೋ ಶಿವ
ನೀನೆನ್ನಂ ಪೊಲ್ಲನೆಂಬೆ ಮಾಣಿಸು ಮನಮಂ ॥೮೬॥

ಎನ್ನ ವಶವಲ್ಲ ಮನವಿದು
ನಿನ್ನ ಪದಂಗಳ ನೆನೆಯಲ್ ಈಯದು ತಾನಿದು
ನಿನ್ನ ವಶವೆಂಬುದಱಿತೆಂ
ನಿನ್ನಂ ನೆನೆವಂತೆ ಪೇಳ್ಮನಕ್ಕಾಣತಿಯಾ[೩೬] ॥೮೭॥

ಒತ್ತಂಬದಿಂದೆ ಮನಮಂ
ಪತ್ತಿಸಲೆನಗರಿದು ಮನ್ಮನೋಲತೆಯದು ತಾ
ನೆತ್ತೆತ್ತ ನಿಮಿರ್ದು ಪರ್ಬಿದೊ
ಡತ್ತತ್ತಂ ನಿಂದು ನೀನಡರ್ಪಾಗಭವಾ ॥೮೮॥

ಎನ್ನ ಮನವೆಂಬ ಶುಕನಂ
[೩೭]ನಿನ್ನಗ್ಗದ[೩೭] ಭಕ್ತಿವನಿತೆ ಪಿಡಿದೊಯ್ದು ಶಿವಾ
[೩೮]ಯೆನ್ನೆಂದೋದಿಸಿ[೩೮] ನಿಜಪಾ
ದೋನ್ನತ ಪಂಜರದೊಳೆಂದು ಸೆರೆಯಿಟ್ಟಪಳೋ ॥೮೯॥ [೨೬]

ಅರಸಂ [೩೯]ಮಂಚಕ್ಕೇರಲ್[೩೯]
ಸಿರಿಯ[೪೦]ಕ್ಕಂ[೪೦] ಮಂಚವೇಱದಿರ್ಪಳೆ ನಿಮ್ಮಂ
ಪರಿಸನ ಮಾಟ್ಟಿತಿ ಸುಖದಿಂ
ಹರ ನಿಮ್ಮಂ ದೇವನೆಂಬೆ ದೇವುಗನೆಂಬೆಂ ॥೯೦॥ [೮೬]

---

೩೬ ಈ ಪದ್ಯ 'ಮೂ' ಪ್ರತಿಯಲ್ಲಿ ಲಿಪಿಕಾರನ ವಿಸ್ಮೃತಿಯಿಂದಾಗಿ ಬಿಟ್ಟುಹೋಗಿದೆ. ೩೭–೩೭ ನಿನ್ನಂಗದ (ಮೂ), ೩೮–೩೮ ಯೆಂದೆನ್ನೋದಿಸಿ(ಮೈ), ೩೯–೩೯ ಮಂಚಕ್ಕರಸಲು(ಮೈ), ೪೦–೪೦ ಕ್ಕುಂ (ಮೈ).

ಸರಸದೆ ದೇವುಗನೆಂಬೆಂ
ಹರಿಸದೆ ನಾಂ ದೇವನೆಂಬೆ ನಿಮ್ಮನುಭವದೊಳ್
ಪರವಶನಾದುದಜೆಂದಂ
ಕರುಣಾಕರ ದೇವನೆಂಬೆ ದೇವುಗನೆಂಬೆಂ ॥೯೧॥ [೮೮]

ದಾಸಿಯನರಸಂ ಕರೆಸಲ್
ಪಾಸಂ ಬಂದೇಱುವಂತೆ ನಿಮ್ಮನುಭವದಾ
ವೇಸದೆ ಮೆಯ್ಮಱೆದೊಲವಿಂ
ದೋಸರಿಸದೆ ದೇವನೆಂಬೆ ದೇವುಗನೆಂಬೆಂ ॥೯೨॥ [೮೭]

ಆರ ಬಳಿವಿಡಿದು ಬರ್ದುಕುವೆ
ನಾರಾಸೆಯೊಳಿರ್ಪೆನಾರ ಮಱೆಯಂ ಪೊಗುವೆಂ
ಮಾರಮದಹರನೆ ನೀನಿರ
ಲಾರಂ ಶರಣೆಂದು ಜೀವಿಪೆಂ ಬೆಸಸಭವಾ ॥೯೩॥

ತ್ರ್ಯಂಬಕನಲ್ಲದೆ ದುರಿತ ಕ
ದಂಬಕಮಂ ಕಳೆಯಲುಟಿದರೇನಾರ್ಪರ್[೪೧]ರೆ ಬೇ
ಳಂಬದ[೪೧] ದೈವದ ಫಲಮೇಂ
ಮಿಂಬುಳುಗಳ ಬೆಳಗು ಕಳೆಗುಮೇ ಕಟ್ಟಿಲೆಯಂ ॥೯೪॥

ಲಿಂಗವನೆ ನಿಜೆಸಿ ಮನದೊ
ಳ್ಪಿಂಗದೆ ತಾಂ ಕೂರ್ಮೆಯಿಂದ ಹೃದಯಾಂಬುಜದೊಳ್
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖಮದೆಂದಾದಪುದೋ ॥೯೫॥ [೪೦]

ಪಲವುಂ ನಾಲಗೆಯಿಂದಂ
ಪಲವುಂ ಕಣ್ಣಿಂದೆ ಪಲವು ಕೈಯಿಂ ನಿಮ್ಮಂ
ಸಲೆ ಪೊಗಟದೆ ಗೆಲ ನೋಡದೆ
[೪೨]ನಲಿದರ್ಚಿಸದೆನ್ನ ಚಿತ್ತಮೇಂ ತಣಿದಪುದೇ[೪೨] ॥೯೬॥

೪೧-೪೧ ರೊ ಪೇಳೆಂಬೊಲು(ಮೈ), ೪೨-೪೨ ವೊಲಿದರ್ಚಿಸುವನ ಭಕ್ತಿಯಂ ಮಚ್ಚುವನೇ(ಮೈ).

ಬಾಲಂ ಜನನಿಯಗಲ್ಕೆಗೆ
ನಾಲಗೆಗಿತ್ತಳುವ ತೆರದಿನಿರುಳುಂ ಪಗಲುಂ
ನೀಲಗ್ರೀವನ ಪದಯುಗ
ದೋಲಗಕಾಂ ಬಾಲನಂತೆ ಮಱುಗಲ್ವೇಡಾ ॥೯೭॥

ಆರಣ್ಯದೊಳಗೆ ರಭಸದೆ
ಭೋರನೆ ಪರಿತಪ್ಪ ನದಿಯ ತಟದೊಳ್ಕುಳ್ತಿ
ರ್ದಾರೊಡನೆಡಬಲನಿಲ್ಲದು
ಮಾರಮಣನ ಚರಣಸಂಗವೆಂದಾದಪುದೋ ॥೯೮॥ [೨೮]

ಒಂದುಮನಱಿಯದೆ ಶಿವಶಿವ
ಯೆಂದೆಂದುಂ ಜೋಲ್ದು [೪೩]ಜೋಲ್ದು[೪೩] ಶಿವಪೂಜೆಯೊಳಾಂ
[೪೪]ಬಂದುದ ಪೋದುದ[೪೪]ನಱಿಯದೆ
ನಿಂದು ಮನಂ ಲಿಂಗದೊಳಗದೆಂದಾದಪುದೋ ॥೯೯॥ [೭೫]

ಆರಕ್ಕರಂದಿಂ ಮಂತ್ರಂ
ಮೂರುಂ ಕಣ್ಣಭನಿಂದಮಗ್ಗಳ ದೈವಂ
[೪೫]ಬೇಱಿಲ್ಲವೆಂದು ಧರಣಿಗೆ[೪೫]
ಸಾಱಿದಪಂ ಕೇಶಿರಾಜ ದಂಡಾಧೀಶಂ ॥೧೦೦॥

ಕೇಶಿರಾಜದಂಡನಾಥರು ನಿರೂಪಿಸಿದ
ಲಿಂಗಸ್ತೋತ್ರದ ಕಂದ ಪದ್ಯಂಗಳ್ ಸಮಾಪ್ತಂ

❖❖

* ಈ ಪದ್ಯ ಕರ್ಣಾಟಕ ಕವಿಚರಿತೆ I(೧೯೬೧)ಪು. ೫೧೨ರಲ್ಲಿದೆ. ೪೩–೪೩ ಬಳಲ್ದು(ಮೈ)
೪೪–೪೪ ಬಂದರ ಪೋದರ (ಮೂ), ೪೫–೪೫ ಬೇಱಿಲ್ಲೆಂದು ಧರಿತ್ರಿಗೆ(ಮೈ).

೩

ಲಿಂಗಸ್ತೋತ್ರದ ಕಂದ : ೨

[೧]ಶ್ರೀಮದಮರಾ[೧]ಸುರಾರ್ಚಿತ
ಕಾಮಾಂತಕದೇವ ಭಕ್ತಜನವನಚೈತ್ರಾ
[೨]ವ್ಯೋ[೨]ಮಮರುದವನಿ [೩]ರವಿಶಿಖಿ
ಸೋಮಜಲಾತ್ಮಾಷ್ಟಪತಿಯೆ ರಕ್ಷಿಪುದೆ[೩]ನ್ನಂ ॥೧॥ [೧]

ಶ್ರೀಯಂ ಶಾಶ್ವತಭಕ್ತಿ
ಶ್ರೀಯಂ[೪]ತ್ವ[೪]ತ್ಪದವ ನೆನೆವ ಪರಮಾನಂ[೫]ದ[೫]
ಶ್ರೀಯನೊಲಿದಿತ್ತು [೬]ಕರುಣದಿ[೬]
[೭]ಜೀಯ ಶ್ರೀ ಸೋಮನಾಥ ರಕ್ಷಿಪುದೆನ್ನಂ[೭] ॥೨॥ [೨]

ಸೋಮಂ ಸೋಮಾವರನುಂ
ಸೋಮಂ ಸೋಮಾಂಗಧರನು ಸೋಮಸಹಾಯಂ
[೮]ಸೋಮ[ಂ][೮] ನಿಸ್ಸೀಮನೆನಿಪ
[೯]ಭಿ[೯][೯]... ... ... ಮಂ ॥೩॥

ಪರಮೇಶಂ ಭವನಾಶಂ
ಉರುತರ ತೇಜಪ್ರಕಾಶ ಭವಭಯನಾಶಂ
ಶರಣರ ಹೃದಯಾವಾಸಂ
... ... ॥೪॥

---

* ಚೌಕ ಕಂಸದೊಳಗಿನ ಅಂಕಿ ಲಿಂಗಸ್ತೋತ್ರದ ಕಂದ : ೧ ರ ಪದ್ಯಗಳನ್ನು ಸೂಚಿಸುತ್ತವೆ.

೧–೧ x ಮರ (II), ೨–೨ ವ್ಯಾ(II), ೩–೩ ಶಿಖಿರವಿವಿx (II), ೪–೪ ತ(II) ೫–೫ ದಂ (II), ೬–೬ ಕೃಪೆಯಿಂ(I), ೭–೭x(II), ೮–೮ ಸೋ(II), ೯–೯ ಭಿ(II).

ಎನ್ನಾನಂದ ಸುಖಾಬ್ಧಿಯೆ
ಎನ್ನಯ ಹೃತ್ಕಮಲಹಂಸನಾಗಿಂ ಹೊದ್ದಿಯೆ
ಎನ್ನಂ ಸಲಹುಗೆ ಕಪ ... ...
... ...ದ ಕೃಪಾರ್ದ್ರಿಯೇ ॥೫॥

ಮಂಗಳಮಯ ಘನಲಿಂಗಂ
ಹಿಂಗದೆ ನೆನೆವವರ ಸಲಹುತಿಹ ಮಹಿಮಾಂಗಂ
ಪೊಂಗು [೧೦]... ... ...
...[೧೦] ಸಲಹೆನ್ನ ನೀನೇ ಸೋಮ [೧೧][ಯ][೧೧] ಲಿಂಗಂ ॥೬॥

ಸತ್ಯರ ನೆನಹಿಗೆ ಬಂದು ಜ
ಗುತ್ಪತ್ತಿಯ ದೆಸೆಗೆ ನಾದಬಿಂದುವದೆಂದು[ಂ]
[೧೨][ತ್ವ][೧೨]ತ್ವದಮ ... ...
... ... ಲಿಂಗವಾಗಿ ನಿಂದುದು ಬಂದುಂ ॥೭॥

ಇದು ಕಾರಣ ಕ್ರೀಲಿಂಗವೆ
ಮುದದಿಂದಲಿ ಇಷ್ಟಲಿಂಗವೆಂಬುದದಾಯ ...
... ... ಡಿಸುವುದುಂ
ಇದು ಶಿವನಾನಂದವಿದು ಮಹಾಘನಲಿಂಗಂ ॥೮॥

ಅಮೃತ ದೊರೆಕೊಂಡರುಂಬೊಡೆ
ಸು ... ... ಱಸಲುಂಟೆ ಪುಣ್ಯೋದಯ ಸಂ
ಭ್ರಮನಂ ಪೂಜಿಸು ಬೇಗದಿ
ವಿಮಲಂ ಸುಮೂಹೂರ್ತವರ[ನ]ನರ್ಚಿಸು ಶಿವನಂ ॥೯॥

... ... ಕಾಲೊಂದೆಸೆ
ಮೈಯ್ಯೊಂದೆಸೆಯಾಗಿ ತಟ್ಟುಗಡೆಯದ ಮುನ್ನಂ
ಅಯ್ಯೋ ಜಗದೇಕ ಗುರುವಂ
ಕೈಯಿಂ ಕಣ್ಣಾರೆ ನೋಡಿ ಪೂಜೆ ... ... ॥೧೦॥

೧೦–೧೦ ಇಷ್ಟು ಭಾಗವನ್ನು ಲಿಪಿಕಾರ ವಿಸ್ಮೃತಿಯಿಂದ ಬರೆದಿಲ್ಲ, ೧೧–೧೧ಮ(II), ೧೨–೧೨ ತ(II).

ಲಿಂಗ[೧೩][ವ][೧೩] ಭಜಿಯಿಸಿ ನೆನೆವುದು
ಲಿಂಗವನಾರಾಧಿಸುತ್ತ ಧರಿಸಿರುತಿಹುದುಂ
ಲಿಂಗವಿಡಿದೆಲ್ಲ ದೇವರು
ಲಿಂಗವನುಂ ಭಜಿಸಿ ಋಷಿಯರಾದರು ... ... ॥೧೧॥

ಮುಟ್ಟಿ ಪರಶಿವನ ನೆನೆದಡೆ
ಕಟ್ಟಕ್ಕಜಲಭವ ನೋಡಿ ಸಲಹುವನವನಂ
ಮುಟ್ಟದೆ ಮತ್ಸ್ಯಂ ಶಿಶುವಂ
ನಿಟ್ಟಿಸಿ ತಾಂ ನೋಡಿ ಸಲಹುವೊಲು ಸಲ ... ॥೧೨॥

ಮುದದಿಂದ ನೆನೆಯೆ ಶಿವನಂ
ಪದುಳದಲುಂ ಸಲಹಿ ತನ್ನ ರೂಪನೆ ಮಾಳ್ಪಂ
ಹು[೧೪][ದು][೧೪]ಗಿಸಿ ಪಕ್ಷಿಯು ತತ್ತಿಯ
ನದು ತನ್ನಯ ರೂಪ ಮಾಡುವೊಲು ... ... ನುಂ ॥೧೩॥

ಶಿವಶಿವಶಿವಯೆಂದೆಂಬಂ
ಶಿವನೇ ಅವನವನೆ ಶಿವನು ಸಲೆ ಬೇಱಿಲ್ಲಂ
ತವೆ ಕೂರ್ಮ ಶಿಶುವ ನೆನೆಯಲ್
ಜವದಿಂ ತೃಪ್ತಿಯನು ಎಯ್ದುವ ... ... ॥೧೪॥

ಶಿವನೊಲುಮೆ ಜನನಿಯಾಗಿಯೆ
ಶಿವನನುಭವಸುಖದ ರಸವೆ ಸುಧೆಯಾಗಿಯೆ ತಾಂ
ಶಿವ ನೆನಹೆ ಬೆಣ್ಣೆಯಾಗಿಯೆ
ಶಿವಸೀಮೆಯೆ ತೊಟ್ಟಿ ... ... ದಿರ್ದಪೆನೋ ॥೧೫॥

ಶಿವನೊಲವೆ ಜೀವವಾಗಿಯೆ
ಶಿವನನುಭವಸುಖದ ಸುಖವೆ ತನುವಾಗಿಯೆ ತಾಂ
ಶಿವನ ದಯವುಂಡು ಬದುಕುವ
ಶಿವ ದಯದಾ ... ... ನಗದೆಂದಾದಪುದೋ ॥೧೬॥

೧೩–೧೩ ವಂ(II)೧, ೪–೧೪ ದು(II).

ಶಿವಯೆಂಬ ತೊದಲದಾಗಿಯೆ
ಶಿವಸದ್ಭಾವ್ಯೆ [೧೫][ಕ][೧೫] ದಟ್ಟಿಯಿಂ ಬೆಱಗಾಗಿಯೆ
ಶಿವಸುಖದ ನಿದ್ರೆಯಾಗಿಯೆ
ಶಿವನಡಿಗಂ ಹೊ ... ... ಪದೆಂದಾದಪುದೋ ॥೧೭॥

ಭವದೀಯ ಚರಣ [೧೬]ಕಮಲದ[೧೬]
ನವಕುಸುಮಾ [೧೭]ಸವವನೆನ್ನ[೧೭] ಮಾನಸಭೃಂಗಂ
ಸವಿನಯದಿನೀಂಟಿ ಸೊಕ್ಕುತೆ
ಶಿವಶಿವ [೧೮]ಶಿವ[೧೮]ಯೆಂದು ಜಿನುಗುತೆಂದಿರ್ದಪುದೋ ॥೧೮॥ [೬೧]

ದಾನಿ ನೀನೆಂದು ಪಿರಿಯದಿ[೧೯]
ನಾನಾರುವ ಬಿಟ್ಟು ನಿಮ್ಮ ದೆಸೆಗಂ ಸಾರ್ದೆಂ
ಆನಂದಾಕರ ಶುಭಕರ
ನೀನೇ ಮಾ ... ... ನವ ನೆಲೆಗೊಳ್ಳಭವಾ ॥೧೯॥

ಮಾರಮದಹರನೆ ನಿನ್ನಾ
ಕಾರಂ ಸಾನಂದಮಪ್ಪ ಮಚ್ಚಿತ್ತಸುಧಾ
ವಾರಿಧಿಯೊಳಗಗಲ[೨೦]ದೆ[೨೦] ತಿಳಿ
ನೀರೊಳಗಣ ತಿಂಗ[೨೧]ಳಂತಿರೆಂದಿರ್ದ[೨೨]ಪುದೋ[೨೨] ॥೨೦॥ [೬೪]

ಆನಂದಾಮೃತಸರದೊಳ್
ಧ್ಯಾನದ ಚೂಣಿಕೆಯನಾಗಳಂಟಂಟಿ ಕರಂ
ಮಾನಸಪಟದೊಳ್ಭಕ್ತಿವ
ರಾನನೆ ಚಿತ್ರಿಸುಗೆ ರೂಪನಹಿ ... ... ನಂ ॥೨೧॥

ತ್ವಚ್ಚರಣ[೨೩]ಮೆ[೨೩]ನ್ನ ಮನದೊ
ಳ್ಬೆಚ್ಚಂತಮರ್ದಂತೆ ಕ[೨೪]ಡೆ[೨೪]ದು ಕಂಡರಿಸಿರ್ದ[೨೫] [ಂ
ತ][೨೫]ಚ್ಚೊತ್ತಿದಂ [೨೬]ತಿರಗಲದೆ[೨೬]
ನಿಚ್ಚಂ ನೆಲಸಿರ್ಕೆ ರಾಜರಾಜಿತಚೂಡಾ ॥೨೨॥ [೭]

೧೫–೧೫ ಕಂ(II), ೧೬–೧೬ ಸರಸಿಜ(I), ೧೭–೧೭ ರಸವ ಎನ್ನ(II), ೧೮–೧೮x(II), ೧೯–೧೯ ಮೊದಲ ಚರಣದಲ್ಲಿ ಛಂದಸ್ಸು ತಪ್ಪಿದೆ ೨೦–೨೦ ದ (II), ೨೧ x (II), ೨೨–೨೨ ಪೆನೋ(II), ೨೩–೨೩ ವೆ(II), ೨೪–೨೪ ಡ(II), ೨೫–೨೫ x (II), ೨೬–೨೬ ತೆ ನೆಟ್ಟನೆ(I).

[೨೭]ಒದ[೨೭]ವಿರ್ದಪಾಯ ಕೋಟಿಗ
ಳೀದಿರ್ವಂದೊ [೨೮]ಡಮಿಂದ್ರ[೨೮] ಪದವಿ ಸಾರ್ದೊಡ[೨೯]ಮೆಂದುಂ[೨೯]
ಬೆದಱೆ ಮದವೇಱೆ ಮಱೆಯದೆ
ಪದುಳಂ ನಿಲ್ಕೆನ್ನ ಮನದೊಳಭ[೩೦] ವಪದಂ[೩೦]ಗಳ್ ॥೨೩॥ [೨೯]

ನೋಡಿ ಕಣ್ ಪಾಡಿ ನಾಲಗೆ
ಯಾಡಿ ಪದಂ ಬಿಡದೆಯರ್ಚಿಸುತ್ತಂ ಕರದೊಳ್
ಕೂಡಿ ಮನ ನಿರ್ಮ್ಮೊಳಿರ್ಪುದ
ಮಾಡು ಗಡಾ ಕೂರ್ಪೊಡೆನಗೆ ಪರಮ ... ... ವೇ ॥೨೪॥

ಅಡಿಗಡಿಗಾಡುವ ಪಾಡುವ
ಕೆಡೆ ನೋಡುವ ಮುಂದುವರಿವ ಕರಣವಿಕಾರ
ಕ್ಕೆಡೆಗುಡವೆ ಭಕ್ತಿರಸದೊಳು
ಮೃಡನಂ ಮನ್ಮನದೊಳೆಂದು ... ... ಟ್ಟಪೆನೋ ॥೨೫॥

ಎನ್ನ ಮನವೆಂಬ ಶುಕನಂ
[೩೧]ನಿನ್ನಗ್ಗ[೩೧]ದ ಭಕ್ತಿವನಿತೆ ಪಿಡಿದೊಯ್ದು ಶಿವಾ
ಯೆನ್ನೆಂದೋದಿಸಿ ನಿಜ ಪಾ
ದೋನ್ನತ ಪಂಜರದೊಳೆಂದು [೩೨]ಸೆರೆಯಿ[೩೨]ಟ್ಟಪಳೋ ॥೨೬॥ [೮೯]

ಸುಳಿವುತ್ತ ಎನ್ನ ಮುಂದಂ
ಹೊಳೆವುತ್ತಂ ಮನದ ಕೊನೆಯೊಳಗೆ ನಿಂದೀಗಂ
ತೊಳಗಿ ಬೆಳಗಿಪ್ಪ ತೇಜೋ
ವಳಯನ ತನ್ಮೂರ್ತಿ ನೆನಹದೆ ... ... ದೋ ॥೨೭॥

ಆರಣ್ಯದೊಳಗೆ ರಭಸ[೩೩]ದೆ[೩೩]
ಭೋರನೆ ಪರಿತರ್ಪ ನದಿಯ ತಟದೊಳ್ಕು[೩೪]ಳ್ಳಿ[೩೪]
ರ್ದಾರೊಡನೆಡಬಲನಿಲ್ಲ[೩೫]ದೆ
ಮಾರಾರಿಯ [೩೫]ಚರಣ [೩೬]ಧ್ಯಾನ[೩೬]ವೆಂದಾದಪುದೋ ॥೨೮॥ [೯೮]

೨೭–೨೭ x (II), ೨೮–೨೮ ಡೆ ಇಂದ್ರ(II), ೨೯–೨೯ ದೆಂತುಂ(I), ೩೦–೩೦ x (II), ೩೧–೩೧ ನಿನ್ನಂಗ(I), ೩೨–೩೨x(II), ೩೩–೩೩ ದಿ(II), ೩೪–೩೪ ಳ್ತಿ(I), ೩೫–೩೫ ದುಮಾರಮಣನ (I), ೩೬–೩೬ ಸಂಗ(I).

ಹಿಂದುಂ ಮುಂದೇನಱಿಯದೆ
ನಿಂಮ ಮನಂ ಶಿವಸುಖಾಮೃತವ ದಣಿಯುಂಡುಂ
ಬಂದುದ ಹೋದುದನಱಿಯದೆ
ನಿಂದಾನಂ ... ... ಲದೆಂದಿರ್ದಪುದೋ ॥೨೯॥

ಕರೆದೊಡೆ ಕೇಳದೆ ನುಡಿಸಿದೊ
ಡಱಿಯದೆ ಶಿವಲಿಂಗತಂದೆಯನುಭವದಿಂದಂ
ಕರಗಿ ಮನವಳಿದು ನೆಟ್ಟನೆ
ಮರಮಾ ... ... ನಂದಿರ್ದಪೆನೋ ॥೩೦॥

ಎಡೆವಿಡದ ಸ್ನೇಹವೂರ್ಬರ
ನುಡಿ ಸೊಗಸದ ಚಿತ್ತ ಸುತ್ತಲಾಲಿಸದ ಮನಂ
ಒಡಗೂಡಿ ಲಿಂಗದೇವನ
ಬಿಡಲಾರದ ... ... ದೆಂದಾದಪುದೋ ॥೩೧॥

ಧ್ಯಾನಂ ಲಿಂಗದಿ ಕಱಿಗೊಂ
ಡುಂ ನೋಟಂ ನಟ್ಟು ಸಿಕ್ಕಿ ತಾನಂದಿದಿರೆಂ
ದೇನುವನೇನೆಂದಱಿಯದ
ಧ್ಯಾನಾ ... ... ದಾದಪುದೋ ॥೩೨॥

ಹಸಿವೇನೆಂದಱಿಯದೆ ಬಹು
ತೃಷೆ ಕಿಂಚಿತ್ತೇನುವಱಿಯೆ ನಿದ್ರೆಯ ಸುಖವಿ
ಘ್ನ ... ... ಯಿಲ್ಲದೆ
ಪಶುಪತಿ [೩೩]ನೆನಹೊಂದಿ ಮುಸುಕಿ ಮರವಟ್ಟಿಹೆನೋ ॥೩೩॥

ಮರೆದು ಮನವಿಂದ್ರಿಯಾರ
ಕ್ಕೆಱಗದೆ ಮಚ್ಚ ... ... ಕ್ಕರಮಂ
ತೆಱಹಿಲ್ಲದೆ ಶಿವಲಿಂಗದೆ
ಎಱಗಿ ಸುಖಾಂಬುಧಿಯೊಳಗಲದೆಂದಿರ್ದಪೆನೋ ॥೩೪॥

೩೭-೩೭ +ಯ(II)

ಪರವ ಪಾತುವ ಭಕ್ತ್ಯ*
ವರಿಸ ... ... ಳಿದು ಮನಂ
ಹರಹರಯೆಂಬಾಳಾಪದಿ
ನಿರುತಂ ನೆನಹೊಂದಿ ಸುಖದಲೆಂದಿರ್ದಪೆನೋ ॥೩೫॥

ಲಿಂಗಾನುಭವದ ಸುಖ ... ...
... ... ಪಿ ಪುಳಕಾಂಕುರದಿಂ
ಪೊಂಗಿ ಪೊಱಕರಿಸಿ ಮನದೊಳು
ಲಿಂಗಾವಸ್ಥೆಯೊಳದೆಂದು ಸುಖಿಯಾದಪೆನೋ ॥೩೬॥

ಪರಮಪ್ರಭು [೩೮]ಲಿಂ (ಏಂ?) ಗಾಶ್ರಿತ
ವರಗಂ (ದಂ?) ಗಹಿಕಂಕಣಂ[೩೮]ಗೆ ರಾಜಿತರಾಜಾ
ಭರಣಂಗೆ ಮನವನೊಪ್ಪಿಸಿ
ಪರಮಸುಖಾಶ್ರಯದೊಳಲ್ದು ರಮಯಿಸ[೩೯]ವೇ[೩೯]ಡಾ ॥೩೭॥ [೭೮]

ಲಿಂಗದ ಹಂ ... ...
... ... ಮನವನಾವರಿಸಿಹವೋಲು
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೆಱವೆ ಸುಖಮದೆಂದಾದಪುದೋ ॥೩೮॥

ನಿಜ ... .
... ... ನೋಟ ಕೇಳಿಯೊಳೆಲ್ಲಂ
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖಮದೆಂದಾದಪುದೋ ॥೩೯॥

ಲಿಂಗವನೆ ನಿಜೆಸಿ ಮನದೊ
ಳ್ಪಿಂಗದೆ ತಾಂ ಕೂರ್ಮೆಯಿಂ[೪೦]ದೆ[೪೦] ಹೃದ[೪೧]ಯಾಂ[೪೧]ಬುಜದೊಳ್
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖಮದೆಂ[೪೨]ದಾದಪುದೋ[೪೨] ॥೪೦॥ (೯೫)

---

* ಈ ಚರಣದಲ್ಲಿ ಛಂದೋಭಂಗವಿದೆ. ೩೮-೩೮ x (II), ೩೯-೩೯ ಬೇ(I), ೪೦-೪೦ ದ(I), ೪೧-೪೧ಯಂ(II), ೪೨-೪೨ x (II).

....
... . ದಲುಂ ಕಳೆಯ ಮನವನಾವರಿಸಿಹವೊಲು
ಲಿಂಗಮಯವೆತ್ತ ತೊರ್ಪ ಬೆ
ಡಂಗಿನ ಕಂದೊಳಲ ಸು ... ... ॥೪೧॥

....ಲಿ
ವುಡುವುಂ ಬೇಡೆ ಕೊಡುವ ಕೊಂಬ ತಸ್ಕರನಿಹಂ
ಪಡುವೆಡೆಯಲಿ ಶಿವಲಿಂಗವ
ಬಿಡದಿಹದಕ್ಕಿಂ ... ... ॥೪೨॥

... ... ನಡೆವ ಎಡಹುವ
[೪೩][ಪ][೪೩]ಡುವ ಪೊಡಮಡುವ ಪಾಡುವ ಪೆಱತೋಂ
ದೆಡೆಯೊಳೆಡೆಯುಡುಗದೆಂದ ... ...
... ... ॥೪೩॥

[೪೪]ನಡೆವ[೪೪] ನುಡಿವೆಡೆಯೊಳೊರ್ಮೆಯು
ಎಡೆಯುಡುಗ[೪೫]ದೆ[೪೫] ಕಮಳನಾಳಸೂತ್ರದ ತೆಱದಿಂ
ಮೃಡಚರಣಧ್ಯಾ[೪೬]ನಮನಾಂ
ಪಡೆದು ಸುಖಾಸ್ಪದದೊಳೊಂದಿ ಬಟಿಸಂದಪೆನೋ[೪೬] ॥೪೪॥ [೪೨]

ಒಳಗಂ ಪೊಱಗಂ ಎನ್ನಯ
ಕಳೆಗಂ ನೀನಲ್ಲದನ್ಯವೇನಱಿಯದೊಲುಂ
ತಳೆದಿಲ್ಲಿ ನಿನ್ನ ಪಾದದ
ಬೆಳಗೆ ಸ... ... ... ॥೪೫॥

... ... ಘುಂ
ನಡೆ ನೋಡಿ ಮನೋನುರಾಗವಗಲದೆ ಯೋಗಂ
ಮಿಡಿದು ಕಡೆಗೊಡೆದು ಪರಿಯದೆ
ಮೃಡಮೂರ್ತಿ ... ... ॥೪೬॥

೪೩–೪೩ ಪೊ(II), ೪೪–೪೪ ನುಡಿವ(I), ೪೫–೪೫ ದ(I), ೪೬–೪೬ x (II).

[೪೭]ಅಡಿಗಡಿಗೆ ಶಿವನ ರೂಪಂ[೪೭]
ನಡೆ ನೋಡಿ ಮನೋನುರಾಗದಿಂ [೪೮]ದ[೪೮]ಣಿಯದೆ ಕೈ
ವಿಡಿದು ಮನದತ್ತ ತೋಱುವ
ಮೃಡನನುಭವಸುಖದ [೪೯]ಸೊಗಸದೆಂದಾದಪುದೋ[೪೯] ॥೪೭॥ [೫೧]

[೫೦]ಪರಿದೈದಿ ಲಿಂಗದೇವನ
ಚರಣಂ[೫೦]ಗಳನಿರದೆ ನೋಡಿ ಹಿಮ್ಮೆಟ್ಟದೆ ಕಾ
ತರಿಸಿ ಪೆ[೫೧]ಱ[೫೧]ಪಿಂಗ[೫೨]ಲಱಿಯದೆ[೫೨]
ಬಿರಿಮುಗು[೫೩]ಳೊಳು[೫೩] ತುಂಬಿಯಂತಿರೆಂದಿರ್ದಪೆನೋ ॥೪೮॥ [೬೩]

[೫೪]ಸೆಜ್ಜೆಯನೆ ತೆಗೆದು ನೋಡ
ಲುಜ್ಜಳಿಸುವ ಲಿಂಗವೆ[೫೪]ಸೆಯೆ [೫೫]ಕಣ್ಗಂ[೫೫] ಮನಕಂ
ಪಜ್ಜಳಿಪ ಕಾಂತಿಯೊಳ[೫೬]ಗಾಂ[೫೬]
ಜಜ್ಜನೆ ಜರಿವು[೫೭]ತ್ತೆ[೫೭] ಶಿವ[೫೮]ನನೆಂದರ್ಚಿ[೫೮]ಪೆನೋ ॥೪೯॥ [೭೦]

ಉರಸೆಜ್ಜೆಯ ಲಿಂಗವನಾ
ಕ ... ...
ಣ್ಣಾರೊಗುವಶ್ರಾಂಬುವಿನಿಂ
ಪರಮಂಗಭಿಷೇಕವೆಱೆವುದೆಂದಾದಪುದೋ ॥೫೦॥

ಅಂಗೈಯೊಳಾಲಿಕ[೫೯]ಲ್ಲುಂ[೫೯]
ಪಿಂಗದೆ ನಡೆ [೬೦]ನೋಡೆ ನೋಡೆ ಕರಗುವ ತೆರದಿಂ
ಲಿಂಗವ ನೋಡಿಯೆ [೬೦]ಮತ್ಸ
ರ್ವಾಂಗಂ ನೆಱೆ ಕರಗಿ ಕೊಱಗುತೆಂದಿರ್ದಪೆನೋ ॥೫೧॥ (೭೨)

ಅಡವಿಯ ಹಸಲೆಯ ಮಂಚಿನ
ನಡುವಸರುವೊಲೆಸೆವ ರೋಮ ... ...
... ... ಗ
ಳೆಡೆಯುಡುಗದೆ ಶಿವನ ನೋಡುತೆಂದಿರ್ದಪೆನೋ ॥೫೨॥

೪೭–೪೭x(II), ೪೮–೪೮ ತ(II), ೪೯–೪೯ ಸೊಬಗದೇಂx(II), ೫೦–೫೦x(II), ೫೧–೫೧ ಜಿ (II), ೫೨–೫೨ ಲಾಱದೆ (II), ೫೩–೫೩ ಳ್ಗಳ (I), ೫೪–೫೪x(II), ೫೫–೫೫ ಕಣ್ಣಂ(II), ೫೬–೫೬ ಗಂ(II), ೫೭–೫೭ ತ್ತ(II), ೫೮–೫೮ ನೊಳೆಂದಿರ್ದ(I), ೫೯–೫೯ ದು(II), ೬೦–೬೦x(II).

ನಡೆ ನೋಡಿ ಲಿಂಗದೇವನೊ
ಳೆಡೆಯುಡುಗದೆ ಲಿಂಗ ನೆನೆದು ಮನದೊಳನಿ ....
... ...
... ಮಡುಗಳೊಳೋಲಾಡುತೆಂದಿರ್ದಪೆನೋ ॥೫೩॥

ನೋಡಿ ನಲಿನಲಿದು ಭಕ್ತಿಯೊ
ಳಾಡಿ ಮನಂ ಬೆರಸಿ ಪಾಡಿ ಮೃಡನೊಳ್ಚಿತ್ತಂ
ಗೂಡಿ ಸುಖ ೬೧ಜಲಧಿಯೊಳ್ಮುಱು
ಗಾಡಿ ಕರಂ ಲೀಲೆಯಿಂದಮಂ೬೧ದಿರ್ದಪೆನೋ ॥೫೪॥ [೩೨]

ಲಿಂಗವನೆ ನೋಡಿ ಚಿತ್ತಂ
ಪಿಂಗದೆ ೬೨ತನುಮಯವದಾಗೆ೬೨ ಪೆಱತಂ ಮಱೆದಾ
ಸಂಗದೊಳ್೬೩ಲ್ಲಾ ಶಿವನ ಮ೬೩
ನಂಗೊಳಿಸುವ ೬೪ಭಕ್ತಿಯೆನಗದೆಂದಾದಪುದೋ೬೪ ॥೫೫॥ [೬೫]

ಲಿಂಗವ ನೋಳ್ಪ(ಳ್ಪಾ?) ನೋಟಂ
ಪಿಂಗದೆ ಪರಿಯದೆ ಪೊಗಳ್ದು ಪೊರೆಯಾಗದೆ ತಾಂ
ಮುಂಗಡೆ ಪಿಂಗಡೆ ಕೆಲಬಲ
ಕಂಗೈಸದೆ ನಟ್ಟ ದೃ .... ॥೫೬॥

ನೋಡುತಲುಂ ಶಿವಲಿಂಗವ
ನೀಡುತಲುಂ ಸಕಲ ಕುಸುಮವೃಂದಂಗಳವಂ
ಬೇಡುತಲು ನಿಮ್ಮ ಕರುಣವ
ನೀಡಿತ್ತೆ ವರವು ಕರುಣಿ ... ... ॥೫೭॥

ಮೃಡನಂ ಪೂಜಿಸಿ ಪೂಜೆಯ
ನಡಿಗಡಿ೬೫ಗಂ೬೫ ನೋಡಿ ನೋಡಿ ಪೂಜಾಮೃತಮಂ
ಕುಡಿಕುಡಿದುಂ೬೬ ತಣಿದಾಗಳು
ಮೆ೬೬ಡೆವಱಿಯದ೬೭ಭಕ್ತಿಯೆನಗದೆಂದಾ೬೭ದಪುದೋ ॥೫೮॥ [೭೫]

೬೧–೬೧ ಸಂಧಿಯಾ..........ಲೆಂ(II), ೬೨–೬೨ ತಲ್ಲೀಯಮಾಗಿ(I), ೬೩–೬೩ ನಿಂದು ಶಿವನವ(ಮ?)(I), ೬೪–೬೪ದೋ(I), ೬೫–೬೫ ಗಾಂ(I), ೬೬–೬೬ ತಣಿಯಲಾಱದೆಯ(II).

ಮೃಢಭಕ್ತಿರಸಸಮುದ್ರದ
ಮಡುವಿನೊಳವಗಾಹಮಿರ್ದು [೧೮]ತಣಿವೊದಗುವಿನಂ[೧೮]
ಕುಡಿದು ಸುಖಮೂರ್ಚೆಯಿಂ[೧೯]ದಂ
ಕೆಡೆದು ಸದಾಶಿವನನೇಗಳಾಂ ಕಂಡಪೆನೋ[೧೯] ॥೫೯॥ [೩೯]

ಆನಂದದಿಂದ ನೋಡಿ ಸ
ದಾನಂದದಿಯಿಂದುಮೌಳಿಯಂ ಶೂಲಿಯನೊ
ಲ್ದಾನಂದ ಬಾಷ್ಪಸಲಿಲ
ಸ್ಥಾನಮನಾನೆಂದು ಕಂಡು ಸುಖಿಯಾದಪೆನೋ[೧೯]॥೬೦॥

[೨೦][ಪದ್ಮಾಸ][೨೦]ನದಲಿ ಕುಳಿತುಂ
ಪದ್ಮಾಕರಹೃದಯ[ದಿ] ವಿಕಸಿತ ಮುಖದಿಂ[ದಂ]
ಪದ್ಮಾ[೨೧][ಕ್ಷ][೨೧] ಪೂಜಿತ[ಹ] ಪದ
ಪದ್ಮವನಾನೆಂದು ಕಂಡು ಸುಖಿಯಾದಪೆನೋ ॥೬೧॥

ಕಪ್ಪುರವುರಿಯಿಂ[೨೨] ನೀರಿಂ
ದುಪ್ಪು[೨೨] ಕರಂ ಕರಗುವಂತೆ ತನುಮನವೆರ[೨೩]ಡುಂ
ತಪ್ಪುವದಲ್ಲಿಂ[೨೩] ಶಂಕರ
ನೊಪ್ಪವನಾನೆಂದು ಕಂಡು ಸುಖಿಯಾದಪೆನೋ ॥೬೨॥ [೬೬]

ಮನವುಡುಗಲ್ತನು ಕರಗ
[೨೪]ಲ್ಕೊ[೨೪]ನೆದೋ[೨೫]ಜಿಲ್ ರೋಮರಾ[೨೫]ಜಿ ಲಿಂಗದೊಳನಿ[೨೬]ಸುಂ[೨೬]
ತನಿ ನೇಹದಿನಶ್ರುಜಲಂ
ಜನಿಯಿಸಲಾನೆಂದು ಕಂಡು ಸುಖಿಯಾದಪೆನೋ ॥೬೩॥ [೬೮]

ಅಗೆ[೨೭]ಹೊಯ್ದ[೨೭] ತೆಱದೆ ಪುಳಕಂ
ನೆಗೆಯಲ್ಸರ್ವಾಂಗದಿಂದೆ [೨೮]ಕಣ್ಣುಂ[೨೮] ಮನಮುಂ
ಬಗ[೨೯]ರಿ[೨೯]ಗೆಯಂದ[೩೦]ದಿ[೩೦]ನೊಸರ
ಲ್ಕಗಜೇಶನ ಕಂಡು ಕರಗುತೆಂದಿರ್ದಪೆನೋ ॥೬೪॥ [೩೫]

೧೭–೧೭x(II), ೧೮–೧೮ ತಣಿವಡಗುವಿನಂ(I), ೧೯–೧೯ ದೆನ್ನೊಡೆಯನದಾx(II), ೨೦–೨೦x(II), ೨೧–೨೧ ಕ್ಷಿ(II), ೨೨–೨೨x(II), ೨೩–೨೩ ಡಂ । ತಪ್ಪುತವೆದಲ್ಲಿ(I), ೨೪–೨೪ ಲ್ಕೊ(II), ೨೫–೨೫x(I), ೨೬–೨೬ ಶಂx(I), ೨೭–೨೭ಯು(II), ೨೮–೨೮x(II), ೨೯–೨೯ ರ(I), ೩೦–೩೦ ದಿಂ(II).

ಎಱಗಿ ಮನ ಬೇರ್ವರಿದಿರೆ
ಹೊಱತೆಗೆಯದೆ ನಟ್ಟ ದೃಷ್ಟಿ ನಟ್ಟಂತಿರೆ ... ...
... ದು ನೆಱೆ ಕರಗಿ ಉಱೆ ಜೋ
ಲ್ದೊಡಗಿ ಪರಾವಸ್ಥೆ ಶಿವನೊಳೆಂದಾದಪುದೋ ॥೬೫॥

ಕಂಗಳರೆಮುಗಿಯೆ ಕರಣಕು
ಳಂಗಳು ಹಾರೈಸೆ ಮನವು ಮಹದೊಳಿರೆ ಸ ...
... ... ಗ ಜೊಮ್ಮಿಡೆ ಕರತಳ
ಕಂಗೈಸುವ ಲಿಂಗಸಂಗವೆಂದಾದಪುದೋ ॥೬೬॥

ಅವಸರ[೮೧]ವಱೆಯದ[೮೧]ನೋಟಂ
ತವಿಲಱೆಯದ ಬೇಟವೆರ[೮೨]ಡನ[೮೨]ಱೆಯದ ಕೂಟಂ
ಶಿವಭಕ್ತಿ [೮೩]ರತಿಯೊಳಾಟಂ[೮೩]
ಸವೆಯದ ಸುಖವೆನ್ನೊಳೆಂದು ನೆಲೆಗೊಂಡಪುದೋ ॥೬೭॥ [೫೨]

ಎಸೆವ ಶಿವಭಕ್ತಿಯಿನಿದುಂ
ಪಸರಿಸಿ ತನುಮನವ ಮುಸುಕಿ ಕಣ್ಗಂ ಮನಕಂ
ಒಸೆದಿ ... ... ಯಱೆಯದೆ
ಶಶಿಮೌಳಿಯ ನೆರೆವ ತುರಿಯವೆಂದಾದಪುದೋ ॥೬೮॥

ಕಡೆಗೋಡಿವಱೆಯೆ ಕಂಬನಿ
ನುಡಿ ತಡಬಡವಾಗೆ ರೋಮಕೂಪದೊಳೆಲ್ಲಂ
ಬಿಡದೊಗೆ[೮೪]ಯೆ[೮೪] ಪು [೮೫]ಳಕವಾ[೮೫]ಯೆ
ನ್ನೊಡೆಯನ ಮುಂದಱೆಯದಾಡುತೆಂದಿರ್ದಪೆನೋ ॥೬೯॥ [೩೭]

ಶಿವಶಿವ ಶಿವಯೆಂದೆನುತಂ
ಶಿವಮಂತ್ರಾಕ್ಷರದ ಜಪವನಳವಡಿಸುತ್ತಂ
ಶಿವನ ನಿಜ[೮೬] ಮೂರ್ತಿಯಂ ಸಲೆ[೮೬]
ಭವಭವದೊ[೮೭]ಳ್ನೋೞ್ಪುದೆನಗೆ[೮೭]ದೆಂದಾದಪುದೋ ॥೭೦॥ [೭೪]

೮೧–೮೧ ವಿಲ್ಲದ(II), ೮೨–೮೨ ಡುವ(II), ೮೩–೮೩xಳಾಪಂ(II), ೮೪–೮೪ ವ(II), ೮೫–೮೫x(II), ೮೬–೮೬ x ತಿರ್ಯ ತವೆ(II), ೮೭–೮೭ ಳಗೆ ನೋೞ್ಪು(II).

ಒಗೆವಶ್ರುಪುಳಕತತಿಯಿಂ
ದಗಲದೆ ಶಿವಶಿವಶಿವ ಪ್ರ[೮೮]ಘೊಷದೊಳೆಂದುಂ[೮೮]
ಪಗಲಿರುಳೆಂ[೮೯]ಬುದನ್[೮೯]ಱಿಯದೆ
[೯೦]ಅ[೯೦]ಗಜಾವಲ್ಲಭನೊಳಾಟುತೆಂದಿರ್ದಪೆನೋ ॥೭೧॥ [೩೮]

ಅಸ್ಥಿಯೊಳ್ಬೆಮರುವನ್ನಂ*
ಮಸ್ತಕ ದಣಿವನಕ ಶರಣೆನುತ ಶಿವಯೆನುತಂ
ಸುಸ್ಥಿರದಲಭವ .... ಯು
ವಿಸ್ತರಿಸಿಹ ಭಾಗ್ಯವೆನಗದೆಂದಾದಪುದೋ ॥೭೨॥

[೯೧]ಪಾ[೯೧]ಡಿ ರಹದಿಂ[೯೨]ದೆ[೯೨] ನಲಿ[೯೩]ದೊ
ಲ್ದಾಡಿ[೯೩] ಸುಖಾನಂದದಿಂದೆ ತಾಮಸವಂ ಬೇ
ಳ್ಮಾಡಿ ನಿಜ [೯೪]ಚಿತ್ತದೊಳ್ನೆಱ[೯೪]
ಕೂಡಿ [೯೫]ದಶಾವಸ್ಥೆ[೯೫] ಶಿವನೊ[೯೬]ಳೆಂ[೯೬]ದಾದಪುದೋ ॥೭೩॥ [೨೮]

ನಿಮ್ಮಡಿಗೆಱಗುಗೆ ತಲೆ ಶಿವ
ನಿಮ್ಮಂ ಪೂಜಿಸುಗೆ ಎನ್ನ ನಿಜ ಕರ್[೯೭]ಯುಗಳಂ
ನಿಮ್ಮಂ ಪಾಡುಗೆ ... ... ಗಿ
ನಿಮ್ಮಂ ಬಲಗೊಳ್ಗೆ ಕಾಲ್ಗಳೇಳುಂ ಭವದೊಳ್[೯೭] ॥೭೪॥ [೧೨]

ಒಂದುಮನಱೆಯದೆ ಶಿವಶಿ[೯೮]ರ್ವ[೯೮]
[೯೯]ಯೆಂದೆಂದುಂ ಜೋಲ್ದು[೯೯] ಜೋಲ್ದು ಶಿವಪೂಜೆಯೊ[೧೦೦]ಳಾಂ[೧೦೦]
ಬಂ[೧೦೧]ದುದ ಪೋದುದ[೧೦೧]ನಱೆಯದೆ
[೧೦೨]ನಿಂದು[೧೦೨] ಮನಂ ಲಿಂಗದೊಳಗದೆಂದಾದಪುದೋ ॥೭೫॥ [೯೯]

[೧೦೩]ಹ[೧೦೩]ರಚರಣ ಭಕ್ತಿರಸಮಂ
ಹರುಷದಿ [೧೦೪]ಕುಡಿಕುಡಿದು ಸೊಕ್ಕಿ[೧೦೪] [೧೦೫]ಪ[೧೦೫]ರವಶದಿಂದಂ
[೧೦೬]ಸ್ಮರಿಯಿಂ[೧೦೬]ಸಲುಂ ಪೂಜಿಸಲುಂ
ನಿರುತಂ ಬಣ್ಣಿಸಲುಮಱೆಯದೆಂದಿರ್ದಪೆನೋ ॥೭೬॥ [೪೧]

೮೮-೮೮ ಪೋಪದಿನೆಂದುಂ(II) ೮೯-೮೯x(II) ೯೦-೯೦ ನ(II) * ಈ ಪಾದ ಛಂದೋದೋಷ ಹೊಂದಿದೆ. ೯೧-೯೧ ಹಾ(I) ೯೨-೯೨x(II) ೯೩-೯೩ ದೆದ್ದಾಡಿ(II) ೯೪-೯೪x(II) ೯೫-೯೫ ದವಸ್ಥೆ(II)೯೬-೯೬ ಳೆನಗದಂ(II) ೯೭-೯೭x(I) ೯೮-೯೮x(II) ೯೯-೯೯ ಯೆಂದು ಮನ ಬಳಲಿ(II) ೧೦೦-೧೦೦ಳುಂ(II) ೧೦೧-೧೦೧ದು x x x ದ(II) ೧೦೨-೧೦೨ ನಿಂದ(II) ೧೦೩-೧೦೩ ಚ(I) ೧೦೪-೧೦೪ ಕುಡಿದುರ್ಕಿ ಸೊರ್ಕಿ(I) ೧೦೫-೧೦೫ ಭ, ೧೦೬-೧೦೬x(II)

ಹಿರಿದುಂ ತುರಿಯದಲಾನುಂ
ಕರೆ ಕರೆದುಂ ಕಂಡು ಕಾಲ ... ... ಉ ನೀನುಂ
ಕರುಣಮದಿಲ್ಲದೆ ಕಾಲಂ
ಮುಱಿವಂದವಿದೇನು ನಮ್ಮ ಘನಸೋಮೇಶಾ ॥೭೭॥

ಬಿಡೆ ಬಿಡೆನುಮೇಶ ನಿಮ್ಮಂ
ಬಿಡೆ ಬಿಡೆನಾನ ... ... ಲೇಪದ ತೆಱದಿಂ
ಪಿಡಿದು ಬಿಡೆನೆಂಬ ನುಡಿಯುಱೆ
ವೊಡಲೊಳಡಂಗಿತ್ತು ಸತ್ತೊಡಾಂ ಬಿಟ್ಟಪನೆ ॥೭೮॥

ಪೊಡಮಟ್ಟು [೧೦೭]ಪೋಗಿ[೧೦೭]ಪೋಗದೆ
[೧೦೮]ತಡೆಮೆಟ್ಟುತ್ತಡಿಯಡಿಯ[೧೦೮] ನೊಯ್ಯನೆ ಸಾರ್ತಂ
ದಡಿಗಡಿಗೆ ಪಿಡಿದು ಲಿಂಗವ
ಬಿಡಲಾಱದ ನೇಹವೆನ[೧೦೯]ಗದೆಂದಾದಪುದೋ[೧೦೯] ॥೭೯॥ [೫೬]

[೧೧೦][ನ][೧೧೦]ನೆಯಂ ಪಿಡಿದಿಹ ... ದು
ತನಿವಣ್ಣಾಗಲ್ಕೆ ಮೆಲ್ಲನದು ಬಿಡುವವೊಲುಂ
ಘನಮಹಿಮ ನಿಮ್ಮ ಕೃಪೆ ತೊ
ಟ್ಟನು ನಾಂ ಬಿಡೆನಯ್ಯಾ ಸೋಮನಾಥಪ್ರಭುವೇ ॥೮೦॥

ಗತಿಗೆ ... ... ಟ್ಟುಂ
ಧೃತಿಗೆಟ್ಟುಂ ನಾಣುಗೆಟ್ಟು ಲಜ್ಜೆಯ ಬಿಟ್ಟುಂ
ನರ್ತಿಸಿ ನಿಮಗಾನೊಲಿದಿ
ರುಲ್ಹುಟಿಮಿಡುಕಿರಿದೇಕೆ ನಮ್ಮ ಘನಸೋಮೇಶಾ* ॥೮೧॥

... ... ನೀಂ ನುಡಿಯದಿರ್ದೊಡೆ
ಹರವೊಳಗೆ ನೀ ಬೆಳಗಿ ತೋಱಲದ ಕೈಕೊಂಬೆಂ
ಮಱೆಯದೆನ್ನಂಗವಂ ನೀಮ
ನೆ ... ... ಯ್ಯ ಸೋಮನಾಥಪ್ರಭುವೇ ॥೮೨॥

೧೦೭–೧೦೭ ಪೊಂಗಿ(II), ೧೦೮–೧೦೮ ತ್ತೊಡೆಯನಡಿಯ(II), ೧೦೯–೧೦೯ಗೆ ಗಿರಿಜಾರಮಣಾ(II), ೧೧೦–೧೧೦ ನೆ(II), * ಉತ್ತರಾರ್ಧದಲ್ಲಿ ಛಂದಸ್ಸು ಕೆಟ್ಟಿದೆ.

ನೀನಿರಿಸಿದಂತೆ ಇರಲುಂ
ನೀಂ ಸಲಹಿದೊಲೆನ್ನಯಸುವು ನೀನೇ ಕರ್ತನ್
ನೀನೇ ಭರ್ತನ್ ಹರ್ತನ್
... ... ನಯ್ಯ ಗಿರಿಜಾರಮಣಾ ॥೮೩॥

ನೀನೆ ಕುಲಂ ನೀನೆ ಧನಂ
ನೀನೆ ಕುಲಸ್ವಾಮಿ[ಯು] ನೀನೇ ದೇವತೆಯುಂ
ನೀನೆ ಕುಲವಿದ್ಯೆ ಪುರ ... ...
... ... ವೆನಗೆ ಪರಮಪ್ರಭುವೇ ॥೮೪॥

ಆರಾಧ್ಯನಮರವ[ಂ]ದ್ಯನೆ
ಈರೇಳುಂ ಭುವನದೊಡೆಯನೆಂದೊಡೆ ನಿಮ್ಮಂ
ಸಾರ ಧವ ... ...
... ... ಗೆ ಬಿಟ್ಟಿರ್ದೆನಿತ್ತಲವಧಾರಭವಾ ॥೮೫॥

ಅರಸಂ [೧೧೧]ಮಂಚಕ್ಕೇರಲ್[೧೧೧]
ಸಿರಿಯಕ್ಕಂ ಮಂಚವೇರದಿರ್ಪಳೆ ನಿಮ್ಮಂ
[೧೧೨]ಸ್ಪರ್ಶನ[೧೧೨]ಮಾಳ್ಪತ್ತಿ[೧೧೩] ಸುಖದಿಂ
ಹರ ನಿಮ್ಮ ದೇವ[೧೧೩]ನೆಂಬೆ ದೇವುಗನೆಂಬೆಂ ॥೮೬॥ (೯೦)

ದಾಸಿಯನರಸಂ ಕರೆ[೧೧೪]ಸಲ್[೧೧೪]
ಪಾಸಂ [೧೧೫]ಬಂದೇಱುವಂತೆ[೧೧೫] ನಿಮ್ಮನುಭವದಾ
[೧೧೬]ವೇಸದೆ[೧೧೬] ಮೆಯ್ಮಱೆದೊಲ[೧೧೭] ವಿಂ
ದೋಸರಿಸದೆ ದೇವನೆಂ[೧೧೭]ಬೆ ದೇವುಗನೆಂಬೆಂ ॥೮೭॥ (೯೨)

ಸರಸದೆ ದೇವುಗನೆಂಬೆಂ
[೧೧೮]ಹರುಷದೆ[೧೧೮] ನಾಂ ದೇವನೆಂಬೆ ನಿಮ್ಮನುಭವ[೧೧೯]ದೊಳ್[೧೧೯]
ಪರವಶನಾ[೧೨೦] ದುದಱಿಂದಂ
ಕರುಣಾಕರ ದೇವನೆಂ[೧೨೦]ಬೆ ದೇವುಗನೆಂಬೆಂ ॥೮೮॥ (೯೧)

೧೧೧–೧೧೧ ಮಂಚಕೆ ತರಸಲು(II), ೧೧೨–೧೧೨ ಪರಿಸನ(II), ೧೧೩–೧೧೩ ತೆಱxxx (II), ೧೧೪–೧೧೪ಲ್(I), ೧೧೫–೧೧೫ ಬಂದೆಱಗುವಂತೆ(II), ೧೧೬–೧೧೬ ಲೇಸನದಿ(II), ೧೧೭–೧೧೭x(II), ೧೧೮–೧೧೮ ಹರಿಸದೆ(II), ೧೧೯–೧೧೯ ದಾ(II), ೧೨೦–೧೨೦x(II).

ಓಪನ ರತಿಯೊಳ್ನಲವಿಂ
ಚಾಪಳೆ ನಲಿನಲಿದು ಸುಖವನನುಭವಿಸುವವೊಲ್
[೧೨೧]ಪಾಪಹರನಂಗಸಂಗದೊ
ಳಾ ಪೊಟ್ಟುಂಸುಖದ ಸೊಗಸದೆಂದಾದಪುದೋ[೧೨೧] ॥೮೯॥ [೮೦]

ಅಂಬುಜದ ರಜವ[೧೨೨]ನ[೧೨೨]ವರುವ
[೧೨೩]ತಂಬೆಲರೊಳ್ಪೊರೆದು[೧೨೩] ಬೆಳೆದ ಘನ [೧೨೪]ಸೌರಭಮಂ
ಕಂಬಾಯ್ತನದಿಂದುಂಬಾ
ತುಂ[೧೨೪]ಬಿಯ ಲವಲವಿಕೆ ಶಿವನೊಳೆಂದಾದಪುದೋ ॥೯೦॥ [೫೪]

ಬಿರಿ[ದ]ರಳ ಪರಿಮಳವನುಂ
ಪಿರಿದುಣ್ಣಲು ತುಂಬಿಯೊ ... ...
... ... ಫ್ರಿವರಲುಂ
ಬಿರಿವದು ಗಡವೆಂದೋ ಸೋಮನಾಥಪ್ರಭುವೇ ॥೯೧॥

ಗಿರಿಜಾರಮಣನ ಪದ[೧೨೫] ಪಂ
ಕರುಹಂಗಳ ಭಕ್ತಿರತಿಯ ಸುಖಮಲ್ಲದೆ ಮ
ತ್ತೆ[೧೨೫]ರಡನೆಯ ಸುಖ[೧೨೬]ವನಜಿಯದ[೧೨೬]
ಪರಮಾರ್ಥದ ತುಟ್ಟತುದಿಯನೆಂದೈದುವೆನೋ ॥೯೨॥ [೪೩]

ತಡೆ[೧೨೬]ವಜಿಯದೆ ಶಿವಭಕ್ತಿಯೊ
ಲ (ಳ?)ಣಿಯರವಾಗುತ್ತೆ[೧೨೭] ಪೊಣ್ಮಿ ಪುಳಕಂ [೧೨೮]ಮನದೊಂ[೧೨೮]
ದೆಣಿಕೆಯನಜಿಯದೆ [೧೨೭]ಭರದಿಂ
ತ್ರೀಣೇತ್ರನಂ ಪಾ[೧೨೭]ಯ್ದು ಪಿಡಿದು ಬಿಡದಿರವೇಡಾ ॥೯೩॥ [೩೧]

.... ಶಿವಭಕ್ತಿಯ
ದಣಿಯಲು ಮಾಡುತ್ತ ಮುನ್ನ ಪುಳಕಂ ಮಯ್ಯಂ
ದೆಣಿಕೆಯನ ....
... ... ಬಿಡದಿರವೇಡಾ ॥೯೪॥

೧೨೧-೧೨೧ ತಾಪಹx(II), ವನಭವನ ಮೂಲಸ್ತಂಭಂ(II), ೧೨೨-೧೨೨ ನೆ(II), ೧೨೩-೧೨೩ ತಂಬೆಲರೊಳ್ವೆರೆದು(I), ೧೨೪-೧೨೪ ಸಾರx(II), ೧೨೫-೧೨೫ ಸರಬರುx(II), ೧೨೬-೧೨೬ ವಜಿಯದೆ(II), ೧೨೭-೧೨೭x(II), ೧೨೮-೧೨೮ ದಮದೊಂ(II).

ಅಂಗಜಹರನೆನಿಸಿದ ಶಿವ
ಲಿಂಗಕ್ಕಾನೆಐಗಿ ದಣಿಯಲಾರದ ... ...
... .
... ... ದ ಸಂಗವೆಂದಾದಪುದೋ ॥೯೫॥

ಭವವಡುವುದು ಸುಖವೆನಗೀ
ಭವನಿಂದಲೆಯಭವನಿಮ್ಮೊಳ ... ...
... ...
... ... ದೆ ಸಾಕು ನಿಮ್ಮೊಳಗಜಾರಮಣಾ ॥೯೬॥

ಪರಿವಗ್ಗವಣಿಯ ತಂದುಂ
ಪರಿಮಳಿಸುವ ಫಲವು ... ...
... ...
... ... ಪೂಜಿಸುವ ಭಾಗ್ಯವೆಂದಾದಪುದೋ ॥೯೭॥

ಇರವಂತಿ ಜಾಜಿ ಪಡ್ಡಳಿ
ಸುರಹೊ[೧೩೦]ನ್ನದಿರ್ಗಂತಿ[೧೩೦] ಮೊ ... ...
... .
... ... ಸುವಂದವೆಂದಾದಪುದೋ ॥೯೮॥

ಮಂದಾರದ ಮುಚುಕುಂದದ
ಕುಂದೇಂದೀವರದ ಪಾರಿಜಾತದ[೧೩೧] ಪೂವಂ
ತದಾನಂದದೆ ಹಿಮಗಿರಿ
ಕಂದರದೊಳಗಿಂದುಧರನನೆಂದರ್ಚಿಪೆನೋ ॥೯೯॥ [೪೫]

ಬೆಟ್ಟದ ಘಟ್ಟದ ಗುಹೆ[೧೩೨]ಯೊಳ
ಗ[೧೩೨]ಟ್ಟಡವಿಯೊಳೆಯ್ದೆ[೧೩೩] ಶಿವನನುರು[೧೩೩] ಗಹ್ವರದೊ
[೧೩೪]ಳ್ಕಟ್ಟೇಕಾಂತದೆ ದುರಿತಘ
ರಟ್ಟನನನುಭವಿಪ ಸುಖಮ[೧೩೪]ದೆಂದಾದಪುದೋ ॥೧೦೦॥ [೪೬]

೧೨೯–೧೨೯ ತವಕದಿ। ತ್ರಿಣಯನ ಪಾx(II), ೧೩೦–೧೩೦ ನ್ನದೃಗ್ರಂತಿ(II), ೧೩೧–೧೩೧x(II), ೧೩೨–೧೩೨ ಗಳೊಳ(II), ೧೩೩–೧೩೩ ಗುಹೆ(II), ೧೩೪–೧೩೪x(II).

ಒಂದು ಬಿರಿವರಳನೊಯ್ಯನೆ
ತಂದಾ ಶಿವಲಿಂಗ[ದ] ಮುಕುಟದೊಳ್ನಿಲಿಸಿ ಮ
ತ್ತೊಂ ... ...
... ... ಸುಖಮದೆಂದಾದಪುದೋ ॥೧೦೧॥

ಧ್ಯಾನಾಮೃತದಿಂ ಲಿಂಗ
ಕ್ಕಾನಂದ ಸ್ನಾನ ಮನವೆ ಪುಷ್ಪವು ಗಂಧಂ
... ...
... ... ನಾಥಪ್ರಭುವೇ ॥೧೦೨॥

ಹಮ್ಮಳಿದಾರೋಗಣೆಯದು
ನೆಮ್ಮಿದ ಪರಿಣಾಮ ವೀಳೆಯವೆ ತಾನೆನಿಕುಂ
ವುಂಹ ... ...
... ... ನಾಥಪ್ರಭುವೇ ॥೧೦೩॥

ಕಂಗಳ ಬೆಳಗಾರತಿಯುಂ
ಹಿಂಗ[೧೩೫][ದ][೧೩೫] ನಱುಸುಯ್ ಧೂಪಂ ಮನವೇ ಪುಷ್ಪಂ
ಲಿಂಗೆಂಬರಸನ ... ...
... ... ಥಪ್ರಭುವೇ ॥೧೦೪॥

ಎರಡೆಂಬೆನೆ ಕರ ಸಂದುಂ
ಎರಡಳಿದಿಹೆನೆಂಬ ನಂಬುಗೆಯ ಸಂದಲ್ಲವು
ಎರಡೊಂದಳಿದಿಹೆ ... ...
... ... ಥಪ್ರಭುವೇ ॥೧೦೫॥

ಕಡಲೊಳಗಣ ನೊರೆ ಬೇಱೊಂ
ದೆಡೆಯೊಳಗಡಗುವುದೆ ಅಲ್ಲೆಯಡಗುವೊಲೆನ್ನೀ
ಇಡಿದಿಹ ಮನವ ... ...
... ... ನಾಥಪ್ರಭುವೇ ॥೧೦೬॥

೧೩೫–೧೩೫ ದೆ(II)

ಘಟಮಠದೊಳಗಣ ಬಯಲುಂ
ಘಟಿಯಿಸಲೆಲ್ಲಿಂದ ಬಂದವಾಕಾಶವೆಯಾ
ಘಟಮಠವಾಕಾಶವೆಯ ....
.... ನಾಥಪ್ರಭುವೇ ॥೧೦೭॥

ಪದದಿಂದ್ರಿಯಂಗಳ[ಂ] ಮನ
ಹುದುಗಿರಿಸಿರ್ಪವೊಲೆನ್ನ[ಯ] ದೇಹದ ನಿನ್ನೀ
ಪದದ ಕೃಪೆ ಹುದುಗಿ ... ...
... ... ಗಾಯ್ತಯ್ಯ ಸೋಮನಾಥಪ್ರಭುವೇ ॥೧೦೮॥

ಲಿಂಗಸ್ತೋತ್ರದ ಕಂದ ಸಮಾಪ್ತ ಮಂಗಳ ಮಹಾಶ್ರೀ

❖❖

೪

ಕೇಶಿರಾಜ ಡಣಾಯಕರ ಕಂದ*

ಭವವಾಗದೊಡದು ಸುಖ[೧][ವ್ಯೈ][೧]
ಭವವಡಗಿದೊಡಭವ ನಿಮ್ಮೊಳನುಭವವುಂಟೇ
ಭವ ಭವ ಭವಾಂತರ[ದಿ] ಸಂ
ಭವಿಸು[೨][ಗೆ ಗಡ][೨] ನಿಮ್ಮೊಳಗೆ ದಾಸೀಭಾವಂ ॥೫॥

ನಿಮಗೆಱಗದ ನರಪಶುವಿನೊ
ಳೆನಗೆಂತುಂ ನೋಟ ಕೂಟ ನುಡಿಗಡಣಂಗಳು
ಮನದೊಳಿನಿಸಾದೊಡಂ ಕೇ
ಳ್ಜನಿಯಿಸದಿರ್ಕಭವ ಜನ್ಮ ಜನ್ಮಾಂತರದೊ[ಳ್] ॥೬॥

ಮೈವೆಚ್ಚುಗೆ ಶಿವಪದಮಂ
ಕೈವೆಚ್ಚುಗೆ ಶಿವನ ಪೂಜೆಯೋಜೆಯನೊಲವಿಂ
ಬಾ[ಯ್ವೆ]ಚ್ಚುಗೆ ಶಿವಮಂತ್ರವೆ
ಸುಯ್ವೆಚ್ಚುಗೆ ಶಿವಷಡಾಕ್ಷರಂಗಳ ಬಳಿಯೊ[ಳ್] ॥೮॥

ಶ್ರುತಿಯಜೆಯದೆ ಮತಿಯಜೆಯದೆ
ಅತಿ ಪರವ[ಶಿ]ಭೂತನಾಗಿ ಶಿವಪೂಜೆಯೊಳಂ
ಮತಿವಿಕಳನಾಗಿ ಲಿಂಗದ
ಗತಿಮತಿಯೊಳ[೩][ಗಳ್ದು][೩] ಸುಖವದೆಂದಾದಪುದೋ ॥೧೭॥

---

* ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠದ ೧೩೧೪ನೆಯ ನಂಬರಿನ ಹಸ್ತಪ್ರತಿಯಲ್ಲಿ "ಕೇಶಿರಾಜ ಡಣಾಯಕರ ಕಂದ" ಹೆಸರಿನ ಕೃತಿಯಿದೆ. ಇದರಲ್ಲಿ ಒಟ್ಟು ೨೧೪ ಕಂದಗಳಿವೆ. ಇವುಗಳಲ್ಲಿ "ಓಂ ನಮಃ ಶಿವಾಯವೆಂಬ ಪದಂ" ಎಂದು ಮುಕ್ತಾಯವಾಗುವ ೫ ಹೊಸ ಕಂದ ಪದ್ಯಗಳಿದ್ದು, ಇವುಗಳನ್ನು 'ಅನುಬಂಧ'ದಲ್ಲಿ ಕೊಡಲಾಗಿದೆ. ಮಿಕ್ಕವುಗಳಲ್ಲಿ ಪ್ರಕಟಿತಗಳನ್ನು ಬಿಟ್ಟು, ಅಪ್ರಕಟಿತ ೧೦೫ ಕಂದಗಳನ್ನು ಮಾತ್ರ ಇಲ್ಲಿ ಎತ್ತಿಕೊಳ್ಳಲಾಗಿದೆ. ೧–೧ ವೇ. ೨–೨ ಗಡಾ ೩–೩ ಳಲುವ(ಮೂ)

ಅಡಿಗಡಿಗೆ ರೋಮತತಿಗಳು
[ಜ]ಡೆಗಟ್ಟಲು ಹರುಷವಡರಿ ಕುಣಿಕುಣಿದಾಡುತೆ
ಮೃಡ ನಿಮ್ಮ ಪೂಜೆ ಮಾಡುವ
ಸಡಗರದೊಲ[ವೆ]ನ್ನೊಳಗಲದೆಂದಾದಪುದೋ ॥೨೧॥

ಮುಗ್ಗುತೆ ಮುಂದು[ಂ]ಗಾಣದೆ
ಹಿಗ್ಗುತಾನಂದವೆತ್ತು[ಂ] ಕುಣಿ ಕುಣಿದಾಡುತ
ಭರ್ಗ ನಿಮ್ಮಂಘ್ರಿಯರ್ಚಿಪ
ಸುಗ್ಗಿಯ ಪರವಶದ ಸುಖವದೆಂದಾದಪುದೋ ॥೨೨॥

ಷಡುರುಚಿ ರಸಾಯನಂಗಳ
ಬಡಿಸಿದ ದಿವ್ಯಾನ್ನ ಶಾಕಪಾಕಾದಿಗಳೊಳ್
ತುಡುಗುಣಿತನವಂ ಮಾಡದೆ
ಮೃಡ ನಿಮಗರ್ಪಿಸುವ ಸುಖವದೆಂದಾದಪುದೋ ॥೨೩॥

ದೆಸೆದೆಸೆಗೆ ಪರಿವ ಮನಮಂ
ವಶಗೊಳಿಸಿ ನಿಜಾಂಘ್ರಿಯಲ್ಲಿಯೇ ನಿಂದಜೆಯದೆ
ಪಶುಪತಿ[೪][ಹರ][೪] ನಿಮ್ಮಂಘ್ರಿಯ
ವೊಸೆದರ್ಚಿಪ ಪರಮಸುಖವದೆಂದಾದಪುದೋ ॥೨೪॥

ನಿಮ್ಮ ನಿಜ ದಿವ್ಯಮೂರ್ತಿಯ
ಎನ್ನಯ ಮನವಾರೆ ನೋಡಿ ಕಣ್ಮನ ದಣಿಯದೆ
ಪನ್ನಗಭೂಷಣ ನಿಮ್ಮಂ
ಚೆನ್ನಾಗಿಯೆ ಪೂಜಿಪಕ್ಕಜೆಂದಾದಪುದೋ ॥೨೫॥

ಸವಿನಯದ ಭಕ್ತಿರಸದಿಂ
ಸುವಿಚಾರಂ ಚಿತ್ತು ಸುಖದೊಳೋಲಾಡಿಸುತಂ
ಶಿವ ನಿಮ್ಮ ದಿವ್ಯ ಚರಣವ
ನೆವೆಯಲುಗದೆ ನೋಳ್ಪ ಸುಖವದೆಂದಾದಪುದೋ ॥೨೬॥

೪-೪ ಧರ(ಮೂ)

ದಳದಳನೆ ಸುರಿವ ಕಣ್ಬನಿ
ಮೊಳೆದೋಱುವ ರೋಮರಾಜಿ ಗದ್ಗದದಿಂದಂ
ಎಳೆವೆಱೆಯ ಸೂಡಿದಭವನ
ಕಳವಳಿಸುವ ಪರಮಸುಖವದೆಂದಾದಪುದೋ ॥೨೭॥

ಕಂಗೊಳಿಸಿ ಕಂಪುವಡೆದಿಹ
ಹೊಂಗೇದಗೆಯಲರಿನಿಂದ ಲವಲವಿಸುತ್ತಿಹ
ಮಂಗಲೆಯ ಪ್ರಾಣವಲ್ಲಭ
ನಂಘ್ರಿಯ ಪೂಜಿಸುವ ಸುಖವಂದೆಂದಾದಪುದೋ ॥೨೮॥

ಬಿಡದಡರಿ ನೋಡುವಾ ಮನ
ದೆಡೆಯುಡುಗದೆ ನೋಡಿ ನೋಡಿ ಲಿಂಗದ ಚರಣವ
ಪಿಡಿದು ಬಿಡಲಾರದರ್ಥಂ
ಒಡಲೊಳ್ಪೂಣ್ದಿರ್ಪ ಸುಖವದೆಂದಾದಪುದೋ ॥೨೯॥

ಇಟ್ಟಣಿಸಿ ಬೆಳೆದ ಪರ್ವತ
ದೊಟ್ಟಿಲ ತಪ್ಪಲೊಳು ಕೂತು ಕಂಬನಿಯಱೆಯದೆ
ಖಟ್ವಾಂಗಧರನ ಮೂರ್ತಿಯ
ನಿಟ್ಟಿಸಿ ನೋಳ್ಪಱೆವದೆನ್ನೊಳೆಂದಾದಪುದೋ ॥೩೦॥

ಎಡವಿಡದೆ ಎನ್ನೊಳಿನಿತುಂ
ಸಡಗರದಿಂ ಪರಿವ ನದೀ ತೀರದೊಳು ಕುಳ್ಳಿ
ರ್ದುಡುಪತಿಧರ ನಿಮ್ಮಂ ಎಡೆ
ವಿಡದರ್ಚಿಪ ಸುಖದ ಸೊಬಗದೆಂದಾದಪುದೋ ॥೩೧॥

ಕರಕಮಲದೊಳಗೆ ಬೆಳಗುವ
ನಿರುಪಮ ಮೂರ್ತಿಯನೆ ಕಂಡು ತನುಮನವೆರಡುಂ
ಉರಿಕೊಂಡ ಕರ್ಪುರದವೊಲು
ಕರಗಿ ಸದಾನಂದದಿಂದಯೆಂದಿರ್ದಪೆನೋ ॥೪೯॥

ಹಲವು ಬಹು ದುಃಖಜಾಲವ
ಕೆಲಕೊತ್ತಿಯೆ ನಿಮ್ಮ ಮೇಲಣಾರ್ಥಂ ಮಿಗೆ ನಾಂ
ಮಲರಹಿತ ನಿಮ್ಮನರ್ಚಿಸಿ
ಉಲುಹಡಗಿ[ದ] ವೃಕ್ಷದಂತೆಯೆಂದಿರ್ದಪೆನೋ ॥೫೦॥

ಅಳಿ ಸೋಂಕದರಳ್ಗಳಿಂದಂ
ಥಳಥಳಿಸುವ ಲಿಂಗದೇವರಂಘ್ರಿಯ ಪೂಜಿಸಿ
ಕಳೆದು ಬಹುದುಃಖಜಾಲವ
ನಳನಳಿಸುತ್ತಕ್ಕಜೆಂದಯೆಂದಿರ್ದಪೆನೋ ॥೫೧॥

ಆಡದು ಗಡ ಘಟ ಉಲಿದೆ
ದ್ದಾಡದು ಗಡ ಲಿಂಗ ಜಂಗಮಕ್ಕಾನಂದಂ
ಮಾಡದು ಗಡ ಶಿವಪೂಜೆಯ
ಮಾಡದೊಡೀ ತನುವಾನೊಯಿದು ಸುಡುವೆ ಗಡಭವಾ ॥೮೫॥

ಬೀಗದು ಗಡ ಬಿಕ್ಕದು ಗಡ
ತೇಗದು ಗಡ ಸವಿದು ಸವಿದು ಭಕ್ತ್ಯಾಮೃತಮಂ
ನೀಗದು ಗಡ ಸಂಸಾರೋ
ದ್ಯೋಗವನೀ ತನುವನೊಯಿದು ಸುಡುವೆ ಗಡಭವಾ ॥೮೬॥

ಉಬ್ಬದು ಗಡ ನಲಿ ನಲಿ [ನಲಿ]
ದಬ್ಬರಿಸಿ ಶಿವಾನುಭಾವದಾ ಸವಿ ಸುಖಮಂ
ಕೊಬ್ಬಿ ಕೊನೆದಾಡಿ ದುರಿತವ
ನೆಬ್ಬಟ್ಟದ ತನುವನೊಯಿದು ಸುಡುವೆ ಗಡಭವಾ ॥೮೭॥

ನೀರಡಿಸಿ ಪರಿವ ನದಿಯಂ
ದೂರ ದೂರದಲಿ ಕಂಡು ಮರುಗುವ ತೆಱದಿಂ
ಮಾರಮದಹರನ ಸೇವನೆ
ಗೋರಂತಾಂ ತೃಷಕನಂತೆ ಮರುಗಲ್ವೇಡಾ ॥೯೨॥

ಎಲೆ ನಾಲಗೆ ಕೇಳ್ನಿನಂ
ಮಲಹರನಂ ಭಜಿಸಲೆಂದು ವದನಾಂಬುಜದೊಳು
ತಳೆದಿರ್ದನ್ನೈಸೆ ಹಲವಂ
ಗಳಹಿದಡಾಂ ಬೇರುವೆರಸಿ ಕೀಳದೆ ಮಾಣೆಂ ॥೯೩॥

ನಾಲಗೆ ಕೇಳ್ಪರನಿಂದೆಗೆ
ಏಳುಮೊಳಕ್ಕುದ್ದವಹುದು ಜಪವೆಂದೆನೆ ತಾ

ಗೋನಾಳಿ ಜಿಹ್ವೆ ಮಿಡುಕದು
ಕಾಳುಮ[ನ] ನಾನೇನೆಂಬೆ ಗಿರಿಜಾರಮಣಾ ॥೯೪॥

ಭ್ರಷ್ಟ ನೀಂ ಗಳಹದಿರು ಕಂ
ಗೊಟ್ಟುಂ ತಲೆಗೊಟ್ಟು ಲಿಂಗ ಡಿಂಗರರಾದರು
ವಿಟ್ಟಣ್ಣನು ಬೊಮ್ಮಣ್ಣನು
ಕೊಟ್ಟುದನೀ ದಿಟ್ಟ ಮಣಿಯ ಬಿರ್ದುದನಜೆಯಾ ॥೯೮॥

ಮಂತ್ರವನೆ ಮಱೆದು ಕಯ್ಯೋ-
ಳ್ಜಂತ್ರದ ಪರಿಯಾಯವಳಿದು ಅಭವನ ಸೊದೆಯೆ
ಜಂತ್ರದ ರೂಹಿನ ತೆಱದಿಂ
ಯಂತ್ರಾಯಕ ಶರಣೆನುತ್ತಲೆಂದಿರ್ದಪೆನೋ ॥೯೯॥

ಲಿಂಗದೊಳು ನೋಟ ನಗೆ ನುಡಿ
ಪಿಂಗದೆ ಭಕ್ತ್ಯಂಗನೆಯೊಳು ಬೇಟಂ ಕೂಡಿಂ
ಜಂಗಮದೊಳಗಣ ಮಾಟಂ
ಸಂಗಂ ದೊರಕೊ[ಳ್ಗೆ] ಜನ್ಮಜನ್ಮಾಂತರದೊಳ್ ॥೧೦೦॥

ಮನಸಿಜಹರನಂ ಪೂಜಿಪ
ಮನುಜನ ಮನೆ ವಾರಣಾಸಿ ಶಿವಪೂಜೆಯೊಳಂ
ಮನವೊಲಿದು ಮಾಡದಾತನ
ಮನೆ ತಾಂ ವೈತರಣಿಯದುವೆ ಕುಂಭೀಪಾಕಂ ॥೧೦೭॥

ಮರ್ದುಂಡು ಕುತ್ತುಗೊಂಬರೆ
ಮರ್ದುಂ ಮತ್ತುಣಲದೇಕೆ ಮಾಡಿದ ಫಲಮಂ
ಪೀರ್ದು[ಂ] ಮ[ತ್ತಾ] ಬಾಳ್ವಡೆ
ಪೊರ್ದಲದೇಕಭವ ನಿಮ್ಮ ಚರಣಾಂಬುಜಮಂ ॥೧೦೮॥

ಎಡಹಿದರೇಱೆ[ತ] ಕುದುರೆಯ
ಮಿಡಿಯಂ ಹಱಿಹೊಯಿವರೇ ಸದಾಶಿವ ಕೇಳೈ
ಮೃಡಭಕ್ತರ್ಜಡನಾದಡೆ
ನಡಸೂದೇ ನಿಮ್ಮ ಮಹಿಮೆ ಪರಮಪ್ರಭುವೇ ॥೧೦೯॥

ಶಿವ ನಿಮ್ಮ ನೆನಹು ಮಾತ್ರದಿ
ಭವ ಪಱಿವುದು ಸುಕೃತವಹುದುಯೇನಚ್ಚರಿಯೋ
ಶಿವ ನಿಮ್ಮ ನೆನೆ[ಯ]ದವರಿಗೆ
ಭವಪಱಿವುದೆ ಸುಕೃತವಹುದೆ ಕಾಮಧ್ವಂಸೀ ॥೧೧೦॥

ಶ್ರುತಿನಿಕರ ಪೊಗಳಿ ಕಾಣವು
ಅತಿಶಯ ನಿಮ್ಮಂಘ್ರಿಯುಗವ ನಾನೆಂತಱಿವೆ [ಂ]
ನುತ ಪುಣ್ಯಕೀರ್ತಿ ಭಕ್ತರ
ಗತಿ ಮತಿ ಪಾಲಿಸೊದೆನ್ನ ಪಾವಕಧರನೇ ॥೧೧೧॥

ವೇದಕ್ಕತೀತನೆನಿಸುವ
ಮೂದೇವರಿಗೊಡೆಯನಪ್ಪ ಪಾರ್ವತಿಯರಸನ
ಪಾದವನೆ ಪೂಜೆ ಮಾಡುವ
ವೇದನೆ ದೊರಕೊಳ್ಗೆ ಜನ್ಮಜನ್ಮಾಂತರದೊ[ಳ್] ॥೧೧೨॥

ಪ್ರೀತಿವೆತ್ತಕ್ಕಱಿಂದಂ
ಸಾತ್ವಿಕ[ದಾ] ಭಕ್ತಿರಸದೊಳೋಲಾಡುತ್ತಂ
ಭೂತೇಶ ನಿಮ್ಮ ಪೂಜೆ
ಯಾತನೆ ದೊರಕೊಳ್ಗೆ ಜನ್ಮಜನ್ಮಾಂತರದೊ[ಳ್] ॥೧೧೩॥

ಹರವರಿಯ ಹರುಷದಿಂದಂ
ಸುರಿವಾನಂದಾಶ್ರು ಜಲದಿ ಮುಳುಗಾಡುತ್ತಂ
ಪುರಹರ ನಿಮ್ಮಂ ಪೂಜಿಪ
ಉರುತರ ಸುಖವೆನ್ನೊಳೆಂದು ನೆಲೆಗೊಂಡಪುದೋ ॥೧೧೪॥

ಗಜಬಜೆಯನುಳಿದು ಮೋಕ್ಷದ
ನಿಜ ಸುಖ ನಿರ್ವಾಣದಲ್ಲಿ ನಿರ್ಮಲದಿಂದಂ
ಗಜಚರ್ಮಧರನೆ ನಿಮ್ಮುವ
ಭಜಿಸುವ ಸುಖವೆನ್ನೊಳೆಂದು ನೆಲೆಗೊಂಡಪುದೋ ॥೧೧೫॥

ಬಾಲ ಯೌವ್ವನದಿ ಕೆಲದಿನ
ಮೇಲಱಿಯದೆ ವೃದ್ಧನಾಗಿ ಬಾಳ್ವೆನು ಕೆಲದಿನ

ಕಾಲನವರೊಯ್ಯ ಬಂದರೆ
ಮೇಲಾವುದು ಬದ್ಧಿಯೆನಗೆ ಗಿರಿಜಾರಮಣಾ ॥೧೧೬॥

ಮನ ನಿಮ್ಮ ನೆನೆಯಲಜೆಯದೆ
ಜಿನುಗುತ್ತಿದೆ ಹಲವು ದೆಸೆಗೆ ಹರಿದಾಡುತ್ತಿದೆ
ಘನ ಮಹಿಮ ನಿಮ್ಮ ನೆನೆವೊಡೆ
ಮನ ನಿಲ್ಲದು ಏವೆನಯ್ಯಾ ಗಿರಿಜಾರಮಣಾ ॥೧೧೭॥

ದುರಿತಾಬ್ಧಿ ವಡಬನೆನಿಸುವ
ವರ ಪಂಚಾಕ್ಷರಿಯ ಜಪಿಸಿ ಭವಬಂಧನಮಂ
ಪರಿಹರಿಸು ನಿಮ್ಮ ಸಾರಿದೆ
ಕರುಣಾಂಬುಧಿ ಕಾಯೊಯೆನ್ನ ಗಿರಿಜಾರಮಣಾ ॥೧೧೮॥

ನಿಟಿಲಾಂಬಕ ನಿಮ್ಮೊಳ್ಮನ
ನಟಿಸದೆ ದುರ್ವಿಷಯದಲ್ಲಿ ಹಜೆದಾಡುವ ಉ
ತ್ಕಟದ ದುರ್ಮನ[ಕೆ] ಮೋಕ್ಷದ
ತಟವಾವುದುಪೇಕ್ಷಿಸೆನಗೆ ಗಿರಿಜಾರಮಣಾ ॥೧೧೯॥

ಮನ್ಮಥನ ವೈರಿಯಂಘ್ರಿಯ
ಸನ್ಮತದಿಂ ಪೂಜೆಮಾಡಿ ದಣಿವಜೆಯದೆ ತಾಂ
ಮನ್ಮಥನ ಬಾಧೆಗಳ್ಕುವ
ಉನ್ಮತ್ತರಿಗಹುದೆ ಮುಕ್ತಿ ಗಿರಿಜಾರಮಣಾ ॥೧೨೦॥

ಆರುವನು ಕಾಣೆನಭ [ವಾ]
ಸಾರಿದೆ ನಿಮ್ಮಂಘ್ರಿಯುಗವ ಕೃಪೆಯಿಂದೆನ್ನಂ
ಮಾರಹರ ನಿಮ್ಮ ಕರುಣದ
ಸಾರವನೆಜೆದೆನ್ನ ಸಲಹು ಗಿರಿಜಾರಮಣಾ ॥೧೨೧॥

ಅಜಹರಿಗಳಜಿಸಿ ಕಾಣದ
ನಿಜಮೂರ್ತಿಯ ಚರಣಯುಗವ ಸದ್ಭಕ್ತಿಯೊಳಂ
ಭಜಿಸಿ ಭವದೂರನಾಗದೆ
ಕುಜನಪ್ರಿಯ[೧][ನಾಗಲೇಕೆ][೧] ಗಿರಿಜಾರಮಣಾ ॥೧೨೨॥

೧–೧ ನಗಲಯ್ಯ

ಕುಡಿವರಿವ ಕೂರ್ಮೆಯಿಂದಂ
ಅಡಿಗಡಿಗಾನಂದವೆತ್ತು ನಲಿನಲಿದಾಡುತೆ
ಮೃಡ ನಿಮ್ಮ ಪೂಜೆ ಮಾಡದ
ಕಡುಪಾತ[1][ಕಿ ನಾನಯ್ಯಾ][1] ಗಿರಿಜಾರಮಣಾ ॥೧೨೩॥

ನಿಮ್ಮ ಮಹಿಮೆಯನು ಪೊಗಳುವ
ರೆನ್ನಳವೇ ಮಿಕ್ಕ ದೇವ ದಾನವರಳವೇ
ಪನ್ನಗಭೂಷಣ ಕೃಪೆಯಿಂ
ನಿಮ್ಮೊಲವಿತ್ತೆನ್ನ ಸಲಹು ಗಿರಿಜಾರಮಣಾ ॥೧೨೪॥

ಆಱೊಡನೆ ಅಳಲಿ ಬಳಲುವೆ
ಆಱವನೆಂದಾರಿಗುಸುರ್ವೆ ನೆಱೆ ಮಾರಹರ
ಕಾರುಣ್ಯಮೂರ್ತಿ ನೀವಿರ
ಲಾಱೆಗೆ ಪೇಳ್ದಪೆನು ಕಾ[ಯೊ] ಗಿರಿಜಾರಮಣ ॥೧೨೫॥

ಉರ್ವಿಯೊಳು ಪುಟ್ಟಿ ಮನುಜರು
ದುರ್ವಿಷಯದಿ ಹಲವು ದೆಸೆಗೆ ಹರಿದಾಡುತ್ತಿಹ
ಗರ್ವಿ ಮಾನವರಿಗಹುದೆಯ
ಪೂರ್ವವಲಾ ನಿಮ್ಮ ಮಹಿಮೆ ಗಿರಿಜಾರಮಣಾ ॥೧೨೬॥

ಮತಿಗೆಟ್ಟು ಮುಂದುಗಾಣದೆ
ಧೃತಿಗೆಟ್ಟು ದುರಾಸೆಯಿಂದ ಪರರಂ ಪೊಗಳುವ
ಮತಿಹೀನ ದುಶ್ಚರಿತ್ರಗೆ
ಮತವಾವುದುಪೇಕ್ಷಿಸೆನಗೆ ಗಿರಿಜಾರಮಣಾ ॥೧೨೭॥

ಕ್ಷಣಕೊಮ್ಮೆ ಕಂದಿ ಕುಂದುತೆ
ಕ್ಷಣಕೊಮ್ಮೆ ಸುಖಾನುಭಾವದಿಂದುಣ್ಮುತ್ತಂ
ಬಣಗುತನದಿಂದ ಬಾಳ್ವೀ
ಕ್ಷಣಿಕ ಮನಕ್ಕೇವೆನಯ್ಯಾ ಗಿರಿಜಾರಮಣಾ ॥೧೨೮॥

---

೧. ಕ ನಾನಲಯ್ಯ

ಶರಣಾರ್ಥಿ ಪೂರ್ಣಚಂದ್ರಾ
ಶರಣಜನೋವನಚೈತ್ರಾ ಪಾಲಿಪುದೆನ್ನಂ
ಶರಣಾರ್ಥಿ ಕಲ್ಪವೃಕ್ಷವೆ
ಕರುಣಿಸು ಸದ್ಭಕ್ತಿಯ[ನೆ]ನಗೆ ಗಿರಿಜಾರಮಣಾ ॥೧೨೯॥

ಎಲೆ ಮಗನೆ ಬಾರೆನುತ್ತಂ
ತಲೆದಡವಿ ಕೃಪಾಬ್ಧಿಯೊಳಗೆ ಓಲಾಡಿಸುತಂ
ಸಲೆ ಎನ್ನ ಕಾಯದಿರ್ದಡೆ
ಗೆಲಲಹುದೇ ನಿಮ್ಮ ಮಾಯೆ ಗಿರಿಜಾರಮಣಾ ॥೧೩೦॥

ಇರುಳುಂ ಪಗಲುಂ ಶರೀರವ
ಭರವಸದಿಂ ಸಂತಸವಿಡುವೆನಲ್ಲದೆ ನಿಮ್ಮಂ
ಸ್ಮರಿಸುವ ಚಿಂತನೆಯೆನ್ನೊಳು
ದೊರಕೊಳ್ಳದು ಏವೆನಯ್ಯಾ ಗಿರಿಜಾರಮಣಾ ॥೧೩೨॥*

ನೀನೆ ನಿಧಿ ನೀನೆ ಮಂತ್ರಂ
ನೀ[ನರ್ಚ][೧] ನೆ ನೀನೆ ಭಕ್ತಿ ನೀನುಪದೇಶವು
ನೀನಜಿವು ನೀನೆ ಸಿದ್ಧಿಯು
ನೀನೆ ಗಡಾ ಈಶ ನೋಡು ನಡೆಯಂ ನುಡಿಯಂ ॥೧೩೩॥

ನೀನೆ ಗುರು ನೀನೆ ತಂದೆಯು
ನೀನಾಳ್ದಂ ನೀನೆ ಜನನಿ ನೀನೆ ಜಗಂಗಳ್
ನೀನೆ ಸಖ ನೀ[ನೆ] ಸಹಾಯಂ
ನೀನಲ್ಲದೆ ಪೆಜಿತನಜಿಯೆನಾಶ್ರಿತ ಸುಲಭಾ ॥೧೩೪॥

ಚಿಂತಿಸುತಿರೆ ಸಂತಾಪದೆ
ನಿಂತಿರಲುಂ ತಾನೆ ಹೊತ್ತು ಹೋದಪುದೀಗಳ್
ಚಿಂತಾಯಕನಿಂದವೆ ಮನ
ಸಂತೈಸುದು ಏವೇನೇವೆನಘವಿಧ್ವಂಸೀ ॥೧೩೫॥

---

* ಈ ಕಂದ ೧೯೦ನೆಯದಾಗಿ ಹಸ್ತಪ್ರತಿಯಲ್ಲಿ ಮತ್ತೆ ಬರೆಯಲಾಗಿದೆ. ಆದುದರಿಂದ ಅದನ್ನು ಕೈಬಿಡಲಾಗಿದೆ(ಸಂ).
೧. ನಾಕ್ಷ

ಆಸರದಿರು ಆಲಸದಿ[ರು]
ಬೇಸರದಿರು ಬೆಂಬಿಡದೆ ಬಿಡದೆ ನೀನೊಬ್ಬನು
ಲೇಸಾಗಿ ಹೊರವೆನೆಂಬೀ
ಆಸೆಯನೆನಗೆಂತು ತೋರ್ಪೆಯಗಜಾರಮಣಾ ॥೧೩೬॥

ಎನ್ನಯ ಮಹಿಮೆಯ ಸಾರಂ
ಎನ್ನಯ ಸಂಸಾರ ಜನನವೇಂ ಬರಭಾರಂ
ಮುನ್ನಾದುದು ಮುನ್ನಾದುದು
ಇನ್ನುಂ ನಾನೆಂತು ಸೈರಿಪೆಂ ಬೆಸಸಭವಾ ॥೧೩೭॥

ಎಂತೆಂತು ನಿಮ್ಮನರ್ಚಿಪೆ
ಎಂತೆಂತು ಪಲುಬಿ ಕೆಡದು[ಂ] ಪಂಬಲಿಸುವೆ ನಾಂ
ಎಂತೆಱಗುವೆನಲ್ಲದೆ ನಾ
ನೆಂತುಟು ಗಡ ಮನವನೊಯಿದು ಸುಡುವೆ ಗಡಭವಾ ॥೧೩೮॥

ನಿಲ್ಲದು ಗಡ ಭವಪದದೊಳು
ಸಲ್ಲದು ಗಡ ಮನವದಾವ ದೆಸೆಗಂ ಎನ್ನಂ
ತೊಲ್ಲದು ಗಡ ಭಾವಿಸಲುಂ
ಕಲ್ಲೆರ್ದೆಯಾನೆಂತು ಬದುಕುವೆಂ ಬೆಸಸಭವಾ ॥೧೩೯॥

ಅಲಸುವದಾಗುಳಿಸುವದು
ಮ್ಮಳಿಸೂದೊಮ್ಮೆಮ್ಮೆ ಬೆಸಱಸಱುವುದು ಸಂ
ಕಲಿಸೂದೀ ಮನ ನಿಮ್ಮೊಳು
[೧][ಒಳಗೊ][೧] ಳ್ಳದನಾಶ್ರಿತೈಕವತ್ಸಲ ದ[ಯೆ]ಯಿಂ ॥೧೪೦॥

ಮದಗಜದ ಮರಿಯನಕ್ಕಟ
ಕುದುರೆಯ ಮೊಲೆಯೂಡಿ ಸಲಹಲಕ್ಕುಮೆ ಮುದದಿಂ
ವಿಧಿತೇಶ ನಿಮ್ಮ ಭಕ್ತರ
ವಿಧಿಯುಕ್ತರಿಗೇಕೆ ಹಂಗು ಮಾಡಿದಿರಭವಾ ॥೧೪೧॥

---

೧. ಕೊ

ಹುರುಳಿಲ್ಲದ ಸಂಸಾರವ
ಸ್ಥಿರವೆಂದೆನುತಲ್ಲಿಯಿಪ್ಪ ಮನ್ಮನದಿಂದಂ
ದುರುಳಾಗಿರ್ದಹೆ ನಿನ್ನಂ
ನಿರುತದಿ ನಂಬಿದೆನುಮೇಶ ಕರುಣದಿ ನೋಡಾ ॥೧೪೨॥

ಪಕ್ಕಂಬೊಯಿದಾ ಚಿಕ್ಕಟು
ಪಕ್ಕಿಯವೊಲು ದೆಸೆಗೆ ಬಾಯ ಬಿಡುತಿರ್ದಪೆ ನೀ
ನಿಕ್ಕಯ್ಯ ಭಕ್ತಿಕುಟುಕಂ
ರಕ್ಷಿಸಿ ಸಲಹಯ್ಯ ತಂದೆ ಚಂದ್ರಾಭರಣಾ ॥೧೪೩॥

ಉಂಡಿಗೆಪಶು ನಾನಾಗಿಯೆ
ಗುಂಡಿಯ ಸಂಸಾರದಗಳೋಳಾಳುತ್ತೈದೆನೆ
ಕಂಡು ಕಡೆಗಣಿಸಲೇಕೈ
ಕುಂಡಿಲ ಪಿಡಿದೆತ್ತು ನಿಮ್ಮ ನಿಜಕರಯುಗಳದಿ ॥೧೪೪॥

ಅಱಿಯಮೆಯಂ ಪೊಲ್ಲಮೆಯಂ
ಮಱವೆಯನೆಂತಲ್ಲಿ ತಪ್ಪುವಿಡಿಯದೆ ಶಿವ ನೀಂ
ಪೊಱಗಿಕ್ಕಿ ಕಾಯ್ವುದೆನ್ನಂ
ಮಱೆಯೊಕ್ಕೆಂ ತ್ರಿಭುವನ[ಪತಿ] ಶರಣ[ನೆ] ನಿನ್ನಂ ॥೧೪೫॥

ನೀನೆ ಶರಣೆಂದು ನಂಬಿದೆ
ನೀನಲ್ಲದೆ ಪೆಱತನರಿಱೆಯೆ ನಿಮ್ಮಂ ಮುನ್ನಂ
ನೀನೆ ಗತಿ ನೀನೆ ಮತಿಯೆಂ
ದಾನಿಪ್ಪೆನುಮೇಶ ಕರುಣಿ ಕರುಣಿಸಿ ನೋಡಾ ॥೧೪೬॥

ನಿನ್ನಿಚ್ಛೆಮಾತ್ರದೊಳಗಿ
ಪ್ಪನುವ[ಂ] ನಿನ್ನಿಚ್ಛೆಯಲ್ಲಿ ಪ್ರೇರಿಸುತಿರ್ಪಾ
ಬಿನ್ನಣವನೆನಗೆ ಕರುಣಿಸಿ
ನಿನ್ನನೆ ಮಱೆದೆನ್ನ ಕಾಯ್ವುದಘವಿಧ್ವಂಸೀ ॥೧೪೭॥

ಎನ್ನೊಳು ಸದ್ಗುಣವುಳ್ಳೊಡೆ
ನಿನ್ನುವನಾಶ್ರೈಸಲೇಕೆ ಸಕಲವಗುಣವುಂ

ಎನ್ನೊಳು ನೆಲಸಿಹ ಕಾರಣ
ನಿನ್ನಂ ಮಱೆವೊಕ್ಕೆನೀಶ ಕರುಣಿಸಿ ನೋಡಾ ॥೧೪೮॥

ಎನ್ನಂತೆ ಧೂರ್ತನಾವಂ
ಎನ್ನಂತತಿ ದೇವ ನಿಮ್ಮಂ ಕುಡಿತೆಯ ನೀರಂ (?)
ಬಿನ್ನವಿಪನವಗೆ ದಯೆಯಂ
ನಿನ್ನಯ ಭಕ್ತಿಯನೆ ಕೊಟ್ಟು ಸುಖಮಾಡೆನ್ನಂ ॥೧೪೯॥

ಎಂದು ನಿನಗಾರು ಇಲ್ಲೆಲೆ
ಕಂದನೆ ಬಾರೆಂದು ತೆಗೆದು ತಕ್ಕೈಸಿ ಮನಂ
ಗುಂದದಿರು ನಿನ್ನ ಸಲಹುವೆ
ಯೆಂದೆನ್ನೊಡನೆಂದು ನುಡಿವೆ ಪರಮಪ್ರಭುವೇ ॥೧೫೦॥

ಓರಂತೆ ಮರುಗಿ ಬಂಧನ
ಕಾರಣವಳಿ ಮೋಹದಿಂದ ನಿನ್ನಯ ತೊತ್ತಂ
ದಾರೈದು ಭಕ್ತಜನ ವಿ
ಸ್ತಾರಕ ನೀನೆನ್ನನೀಶ ಕರುಣಿಸಿ ನೋಡಾ ॥೧೫೧॥

ಶರಣೆಂಬ ವಚನವೆನ್ನದು
ಶರಣಾಗತ ರಕ್ಷನೆಂಬ ನುಡಿ ನಿನಗೆಂದುಂ
ಬಿರುದಾಗಿ ಮೆಱೆವುದದಱಿಂ
ಪರಿಹರಿಸಿಯೆ ಕಾಯ್ವುದೆನ್ನಗಜಾರಮಣಾ ॥೧೫೨॥

ಉತ್ತಮ ಗುಣವೆನಗುಳ್ಳೊಡೆ
ಭೃತ್ಯನು ನಿನಗಾಗಲೇಕೆ ಚಂದ್ರಾಭರಣಾ
ಎತ್ತಮು ಮಹೋದ್ದದಾ ಮನ(?)
ಕರ್ತೃತ್ವಂಮೆಂಬುದು ದೇವ ಸುಖಮಾಡೆನ್ನಾ ॥೧೫೩॥

ಇಂದು ಕೃತಕೃತ್ಯನಾದೆನು
ಇಂದು ಕರಂ ಧನ್ಯನಾದೆ ಪಲದಿನ ಕಾಲ
ಕ್ಕಿಂದೆನ್ನ ಜನ್ಮ ಸಫಲ ಪು
ರಂಧರಪತಿಯೆನ್ನ ಕೈಗೆ ಬಿಜಯಂಗೆಯ್ಯ[ಲ್] ॥೧೫೪॥

ಶಂಕರನ ರೂಪು ಹೃದಯದೊ
ಳಂಕುರ ಪಲ್ಲವಿತಮಾಗಿ ಹರುಷಾಮೃತದಿಂ
ತೇಂಕಾಡಲೆಂದು ಫಲವನ
ವಂಕುರಿಸುತವ ಕಲ್ಪತರುವಿನಂತಿರಬೇಡಾ ॥೧೫೬॥

ನೆಱೆ ತನಗೆ ಮಾಡಿಕೊಂಬಡೆ
ಕಱೆಕಂಠನ ಕಯ್ಯ ಮರುಳೆ ಅಲವರಿಸೂದೇ
ಕಱುಗಡಸಿದ ಎಳೆಗಂತಿಯ
ಮಱೆಗಡಸಿದ ಹುಲ್ಲೆಯಂತೆ ಮಱುಗಲ್ವೇಡಾ ॥೧೫೭॥

ಮನವುಂ ಸೋಹವ ಮಾಡದೆ
ಮನಸಿಜಮರ್ದನನ ಪದಪಯೋಜದ್ವಯಮಂ
ಕನಸಿನೊಳಂ ನೆನವಂತಿರೆ
ಮನವ ನಿಮ್ಮಲ್ಲಿಯಿರಿಸೆ ಪ್ರೇರಿಸಲ್ವೇಡಾ ॥೧೫೮॥

ಪೊಸತೆನಿಪ ಭಕ್ತಿನಿಚಯದೆ
ಪಸರಿಸಿ [ವಿ]ಗುಣಿಸಿ ಪೊಣ್ಮು[ವ] ಪುಳಕಿಕ್ಕೀ ಮನ
ವಶವಾಗಿ ಲಜ್ಜೆಯಜೆಯದೆ
ಶಶಿಮೌಲಿಯ ಬೆನ್ನನೆಂದು ಬಿಡದಿರವೇಡಾ ॥೧೫೯॥

ನಡೆವೆಡೆಯೊಳು ನುಡಿವೆಡೆಯೊಳು
ಕೊಡುವೆಡೆಯೊಳು ನೋಡುತಿಪ್ಪ ಪಟ್ಟಿರ್ಪೆಡೆಯೊಳು
ಮೃಡ ಶರಣು ಶರಣು ಶರಣೆಂ
ದೆಡವಜೆಯದ [ಸುಖ] ದುಃಖವದೆಂದಾದಪುದೋ ॥೧೬೦॥

ನಡುಗಡ[೧][ಲೊಳು ಮುಳುಗು][೧] ವೆನೋ
ಕುಡಿವೆನೊ ಹಾಳಾಹಳದ ವಿಷ[ಮು]ಮಂ ಕ್ಷಣದಿಂ
ಸುಡುವೆನೋ ಮದ್ದೇಹವನೆ
ನ್ನೊಡೆಯನೆ ನಿಮ್ಮೊಲವು ಸಾರ್ದು ಮುಟ್ಟದ ಪದದೊಳ್ ॥೧೬೧॥

೧–೧ ನೋಡಿ ಪೊಗಳು

ನಡೆವಡೆಯೊಳು ನುಡಿವೆಡೆಯೊಳು
ನುಡಿಯದೆ ಶಿವಲಿಂಗ ತಂದೆಯನುಭವದಿಂದಂ
ನಡೆ ನುಡಿ ಮನವೊಂದಾಗಿರ
ಲೆಡೆವಜೆಯದೆ ನೆನೆವ ಸುಖವದೆಂದಾದಪುದೋ ॥೧೬೨॥

ಅರ್ಥವನೆ ಬಿಟ್ಟು ಮನದೊಳ್
ಮೂರ್ತಿಯನಳವಡಿಸಿ ಶಿವಪದಾಬ್ಜದ ರಜಮಂ
ಕೀರ್ತಿಸುವುದೊಂದು ಭಕ್ತಿಯ
ಕೂರ್ತೀವುದು ಶಂಭು ಜನ್ಮಜನ್ಮಾಂತರದೊಳ್ ॥೧೬೩॥

ಬಳಸಿರ್ದಾನಪಟಮಂ(?)
ತಳದೊಳಗಂ ತೊಳಗಿ ಬೆಳಗಿ ಧವಳಿಸಿ ನೇತ್ರಾ
ವಳಿಯೆನಿಪ ದಿವ್ಯವಸ್ತ್ರವ
ನಲಿದೀಶಂಗೀವ ಸುಖವೆಂದಾದಪುದೋ ॥೧೬೪॥

ಭಾವಂ ಮುಸುಕಿದೊಗಸುದಿನ (?)
ಹಾವಸೆಗಳನುಳಿದು ಮನದ ಸದ್ವಾಸನೆಯಂ
ತೀವಿದ ಗಂಧವನಾ ಮಹ
ದೇವಂಗೊಲಿದೀವ ಸುಖವದೆಂದಾದಪುದೋ ॥೧೬೫॥

ಅಕ್ಷಯದಪವ[ನ]ಳಿದುಳಿದು
ಪೇಕ್ಷೆಯನತಿಗಳೆದು ಮೋಕ್ಷವ[ನೆ] ಮೀಜಿದ ಪಂ
ಚಾಕ್ಷ[ರಿ] ನಿಜ ನಿಧಿ ಕಜಿಗೊಂ
ಡಕ್ಷತೆಯಂ ತ್ರಿಯಕ್ಷಗೀವುದೆಂದಾದಪುದೋ ॥೧೬೭॥

ಉತ್ಕಟದೊಳಷ್ಟದಳದಿ ಚ
ಮತ್ಕಾರದಿ ಹರಿವ ಮನವ ನಿಲಿಸುತ್ತಾಹಾ
ಹೃತ್ಕಮಲದೆಸಳ ಹೂವಂ
ಮತ್ಕಾಂತ[ಂ]ಗೀವ ಸುಖವದೆಂದಾದಪುದೋ ॥೧೬೮॥

ದುರ್ಗುಣಮಮಂ ದುರ್ಗಂಧಮ
ನೆರ್ಬಿಸಿಯೇ ಸ್ವಾನುಭಾವ ಪರಿಮಳವೆಸೆವೀ

ಗುಗ್ಗಳ ಧೂಪ ವಾಸನೆ[ಯ]
ಭರ್ಗ[ಂ]ಗೊಲಿದೀವ ಸುಖವದೆಂದಾದಪುದೋ ॥೧೬೯॥

ಒಳಗಿಡಿದಂಥಮನೆಬ್ಬಿಸಿ
ತೊಳಗುವ ಸುಜ್ಞಾನಜ್ಯೋತಿಯಂ ಪರತರಗೈ
ದೊಲವಿನೊ[ಳುಪ್ಪಾ]ರತಿಯಂ
ನಲಿದೀಶಂಗೀವ ಸುಖವದೆಂದಾದಪುದೋ ॥೧೭೦॥

ಸೇರಿರ್ದ ಕ್ಷುಧೆಯಂ (?)
ಸಾರಿಸಿ ನಿಜದಱಿವಿನಮೃತ ಸೈರಣೆಯಿಂದಂ
ಪೂರೈಸೀಶನ ಭಕ್ತಿಯೊ
ಳಾರೋಗಣೆಯೀವ ಸುಖವದೆಂದಾದಪುದೋ ॥೧೭೧॥

ಆಲಸ್ಯವನತಿ ಕ್ಲೇಶವ
ನೋಲೈಸುವ ಪರಮ ಪದದ ಸುಖಮುಖದಿಂದಂ
ಲೀಲೆಯೊಳೀಶಗೆ ಕರ್ಪುರ
ವೀಳೆಯಮಂ ಕೊಡುವ ಸುಖವದೆಂದಾದಪುದೋ ॥೧೭೨॥

ಅಡಗಿದ ಮದ ಉಡುಗಿದ ತನು
ಕಡು ನಿದ್ರೆಯೊಳಿಪ್ಪ ದೇಹದಱಿವುಂ ಮಱಿವುಂ
ತೊಡರಿ[ಂ] ನಿಜೈಕ್ಯಭಾವದೊ
ಳೊಡಗೂಡುವ ಪರಮಸುಖವದೆಂದಾದಪುದೋ ॥೧೭೩॥

ನೆತ್ತಿಗಳೊಡೆವನ್ನಕ್ಕಂ
ಮಸ್ತಕ ಬಿರಿವನ್ನ ಬಿಡದೆ ಶಿವ ಶಿವಯೆನುತಂ
ಹೃತ್ಕಮಲವಲರ್ದು ಕಂಪಿಸಿ
ಉತ್ತಮ ಶಿವಮೂರ್ತಿ ಶಿವನೊಳೆಂದಾದಪುದೋ ॥೧೭೪॥

ಲಿಂಗಮಯಂ ಸಕಲಜಗಂ
ಲಿಂಗಮಯಂ ಸ್ಥಾವರಾದಿ ಜಂಗಮವೆಲ್ಲಂ
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖವದೆಂದಾದಪುದೋ ॥೧೮೧॥

ಮುನ್ನ ಕಡು ದುಃಖಿಯಾದೊಡೆ
ತನ್ನಂತಿರೆ ಪೆಱರ ಬಗೆವ ತ್ರಿಜಗದೆ ಮಹಿ
ಮೋನ್ನತ ಪರಮಸುಖ[ದ] ಸಂ
ಪನ್ನನೆ ನೀನೆತ್ತ ಬಲ್ಲೆ ದುಃಖವನಭವಾ ॥೧೮೪॥

ಅಳ್ಳಿರ್ದೆಯಾಗಿ ಮೋಹದ
ಬಳ್ಳಿಯೊಳು ತೊಡರ್ದು ಬಿದ್ದು ನೊಂದಪೆನೀಶಾ
ಕೊಳ್ಳಿಯ ನಡುವಣ ಪುಳುವಿನ
ತಲ್ಲ[ಣ]ವೆನಗಾಯ್ತು ತೆಗೆದು ರಕ್ಷಿಪುದಭವಾ ॥೧೮೫॥

ಎಂದಿರ್ದಿದನೇ ಬೇಡುವೆ
ನಿಂದುಧರ ನಿಮ್ಮ[ಂ ಅ]ಱಿಯದಾತ್ಮದ್ರೋಹನೊ
ಳೊಂದು ನಿಮಿಷಾರ್ಧನವನೊಳ
ಗೆಂದುಂ ನುಡಿಗಡಣಮಾಗದಿರ್ಕೆ ಗಡಭವಾ ॥೧೮೬॥

ಜನನ ಮರಣಾದಿ ದುಃಖವ
ನನುಭವಿಸಿದಲ್ಲದಱಿಯೈ ದುಃಖಂಗಳ ನೀಂ
ಜನನ ಮರಣಾದಿ ವಿರಹಿತ
ಅನುಪಮ ಸುಖಿಯೆತ್ತ ಬಲ್ಲೆ ದುಃಖವನಭವಾ ॥೧೮೭॥

ಅಱಿತುಂ ಡಿಂಗರಿಗನೊ[ಳಗ]
ನಱಿಸುವರೇ ದೇವ ಎನ್ನ ಗುಣವವಗುಣಮಂ
ಪೊಱಗಿಕ್ಕಿ ನಿಮ್ಮ ಮಹಿಮೆಯ
ಮೆಱೆವುದು ಸರ್ವೇಶ ಬೇರೆ ಗತಿ ಮತಿಯುಂಟೇ ॥೧೮೮॥

ಸೊಡರಿಂಗಂ ಕತ್ತಲೆಗಂ
ಗಡ ಸೊಗಯಿಪುದೇ ದಿಟವೀ ಭಕ್ತನ ಮನದೊಳು
ಮೃಡನೆಡೆಗೊಂಡೋರಂತಿ[ರೆ]
ಫಡ ಮಾತೇಕನ್ಯಭಾವವಿರಲಱಿದಪುದೇ ॥೧೮೯॥

ತಲೆ ಬಿರಿಯ ಹೊಯ್ದು ಗಳಹುವ
ಕಲಹಕ್ಕಾ ಮೊಳವ ನಿಮಿರ್ದುದೆನ್ನಯ ನಾಲಗೆ

ಹೊಲೆ ಹುಸಿವುದು ನಿಮ್ಮಯ ಸ್ತುತಿ
ಗಲಸೂದಿನ್ನೆಂತು ಬಾಳ್ವೆನಗಜಾರಮಣಾ ॥೧೯೫॥

ಸ್ಮರನ ಶರದಿಂದಲೆಸೆವಡೆ
ದುರೆ[ಬ]ಂದಾ ವಿರಹಿಯೆಡೆಯ ತಾಗಿದ ತೆಱದಿಂ
ಪರಮತದ ಭೀತಿ ವೇಧಿಸಿ
ನಿರುಪಮ ರಣರಣಕವೆನಗದೆಂದಾದಪುದೋ ॥೧೯೯॥

ಕುಸುಮಶರಾರಿಯೆ ನಿನ್ನೊಂ
ದೆಸೆವ ಗುಣಂಗಳೊಳು ಎನ್ನ ತನುವಿನಲಿನ್ನೊಂ
ದೆಸೆಯಂ ಕಾಣದೆ ಸುಳಿ ಸುಳಿ
ವಸಮಾಕ್ಷನನಡರಿ ನೋಡುತೆಂದಿರ್ದಪೆನೋ ॥೨೦೩॥

ಲಿಂಗವನೆ ನೆನೆವ ಧ್ಯಾನಂ
ಹಿಂಗದೆ ಮನ ವಚನ [1][ಕಾಯ ನೋಟದೊ][1]ಳೆಲ್ಲಂ
ಲಿಂಗಮಯವಾಗಿ ತೋರ್ಪ ಬೆ
ಡಂಗಿನ ಕಂದೊಳಲ ಸುಖವದೆಂದಾದಪುದೋ ॥೨೦೪॥

ಮಂತ್ರಕ್ಕೆ ಮುಖ್ಯವೆನಿಸಿತು
ತಂತ್ರಕ್ಕಂ ತಾನೆಯ್ದೆದೆ ಭೂಷಣವೆನಿಸಿತು
ಯಂತ್ರಂಗಳನುದ್ಧರಿಪುದು
ಸಂತತ ಶಿವಗಣದ ನೊಸಲೊಳೆಸೆವ ತ್ರಿಪುಂಡ್ರಂ ॥೨೧೧॥

ಆವೆಡೆಯೊಳಾವ ತೆಱದಿಂ
ಆವುದನಾವರಿಸುತಿರ್ಪುದಂ ಪೇಳಲೊಡಂ
ತಾವದನೆ ಬಿಡದವೊಲು ಮ
ತ್ತಾವಗ ಶಿವಯೆನ್ನೊಳೆಂದು ನೆಲೆಗೊಂಡಪನೋ ॥೨೧೩॥

❖❖

೧–೧ ನೋಟಕ್ಕೆಣೆಯೆ

೫

ಶೀಲಮಹತ್ವದ ಕಂದ

ವರ ವೀರಶೈವ ೧[ಸಿದ್ಧಿಯ]೧
ಪರಿಯಾಯಗಳಿಂದಲಱಿದು ಗುರುಮಹಿಮೆಗಳಂ
ಕರುಣದಲಿ ಪಡೆದು ನಡೆವಂ
ಗುರುಭಕ್ತಂ ಗುರುವಿನಲ್ಲಿ ಬೆರೆಸಿಹ ಮುಕ್ತಂ ॥೧॥

ಗುರುವೇ ಪ್ರಸನ್ನಗುರುವೇ
ಗುರುವೆ ಶಿವಾಧಿಕ್ಯ ತ್ರಿವಿಧಮಲಹರ ಗುರುವೇ
ಗುರುವೇ ತ್ರಿಲಿಂಗಧಾರಣ
ಗುರುವೆ ಮಹಾಗುರುವೆಯೆಂಬನೇ ಗುರುಭಕ್ತಂ ॥೨॥

ಪರಧನವಂ ಪರವಧುವಂ
ಪರದೈವಂಗಳನು ತೊಱೆದು ಲಿಂಗದ ನಿಜ[ವೊಂ]
ದಿರವಾಗಿನಯ್ಯವಱಿಯದೆ
ಇರಬಲ್ಲ ಮಹಾತ್ಮನೀಗಲವನೆ ಮಹೇಶ ॥೩॥

ನುಡಿದುದಱಾಯತದಿಂದಂ
[ನಡೆವಂ] ಸ್ವಾಯತದಿ ಹಿಡಿದ ಶೀಲವ್ರತವನ್
ಕಡೆತನಕ ಸಲಿಸಿ ತ್ರಿವಿಧದ
ದೃಢದಿಂದಂ ತಾ೨[ನೆ ನಡೆವ]೨ನತಿನಿಷ್ಠೆಯಲುಂ ॥೪॥

೧-೧ ಸಿದ್ಧದ(ಮೂ), *-* ನುಡಿ (ಮೂ), ೨-೨ ನದೆನ್ನ(ಮೂ).

ಎಡೆದೆಱಿಪಿಲ್ಲದೆ ತ್ರಿವಿಧಕೆ
ಕಡೆಯಿಲ್ಲದೆ ಮೋಹಿಯಾಗಿ ನಡೆವ ಸದರ್ಥಂ
ಕಡು ನಿಷ್ಠೆ ಗಟ್ಟಿಗೊಂಡುಂ
ನಡೆವಾತನೆ ಭಕ್ತ ನಿಷ್ಠೆಯೊಳಗೆ ಮಹೇಶಂ ॥೫॥

ವೀರವ್ರತ ನಿಷ್ಠೆಯುವಾ
ಚಾರಂ ತನುಗುಣಗಳಿಂದ್ರಿಯಳಿದಿಹ ಶೀಲಂ
ಧೀರಂ ಸಜ್ಜನಸತ್ಯಾ
ಚಾರಂ ಸನ್ಮಾರ್ಗಸಹಜನಹನು ಮಹೇಶಂ ॥೬॥

ದಾಸನಾಗಿಹುದು ಚರಕಂ
ವಾಸಿಯಲುಂ ವೀರದಾಸಭೃತ್ಯರ ಭೃತ್ಯಂ
[೩][ಆ][೩] ಸಜ್ಜನ ಸಕಲಾವ
ಸ್ಥಾ ಸಮಯಾಚಾರವಾಱು ತೆರ ಭಕ್ತಿಯದುಂ ॥೭॥

ನೊಸಲಲಿ ಮೈಯಲಿ ಭಸ್ಮಂ
ಅಸಮಾಕ್ಷನ ನೆನಹು ಮುಖ[೪][ದಿ][೪] ಗಳದಲಿ ಲಿಂಗಂ
ಎಸೆ[೫][ವಾ][೫] ರುದ್ರಾಕ್ಷಿಯಿರಲು[೬]
ಅಸಮಾಕ್ಷನ್ ಪಂಚವದನ ಪರಶಿವನೆಂಬೆಂ ॥೮॥

ಆ ರುದ್ರಲೋಕದಿಂ ತಾ
ಆ ರುದ್ರನೆ ಎನ್ನ ಭಾಗ್ಯದಿಂದಲು ಬಂದಂ
ಆ ರುದ್ರನೆಂದು ಕಾಣಲು
ಆ ರುದ್ರನೆ ಗುರುವು ಸಕಲರೂಪನೆಯೆನಿಕುಂ ॥೯॥

ತನಗೆಂದು ಅಡಿಗೆ ಮಾಡದೆ
ಮನೆಯವರಿಗೆ ಮಾಡು ಎಂಬ ಮಾತನ[೭][ದ][೭]ಳಿದುಂ
ಘನ ಲಿಂಗಜಂಗಮಕ್ಕೆಂ
ದನುವಾಗಿಯೆ ಮಾಡಿಸುವದು ಜಂಗಮಭಕ್ತಂ ॥೧೦॥

೩-೩ ವಾ (ಮ), ೪-೪ ದ (ಮೂಲ), ೫-೫ ವ(ಮೂಲ), ೬+೦(ಮೂ).

ಬಳಲಿದಿರಿ ಜೀಯ ಕರ್ಮವ
ತೊಳೆಯಲಿಕಂ ಬಂದಿರೆನ್ನ ಭಾಗ್ಯದೊಲೆಂದುಂ
ಬಳಿ[೮][ಸಂ][೮]ದು ಕಿಂಕಿಲದಲುಂ
ಎಳಸಿರಲು ಜಂಗಮದಲ್ಲಿ ಭಕ್ತಿಯದೆಂದುಂ ॥೧೧॥

ಶಿವನೆಂದು ಕಂಡಬಳಿಕಂ
ಅವಗುಣಿಯವರೆಂದು ನೀಕರಿಸಿ ಕೆಡಬೇಡಂ
ಶಿವಗವಗುಣಗಳವಿಲ್ಲಂ
ಶಿವಭಕ್ತ್[೯][ನೆ][೯] ಶಿವನದೆನದ ಶೀಲವದಿಲ್ಲಂ ॥೧೨॥

ಲಿಂಗಪ್ರಸಾದವಲ್ಲದೆ
ನುಂಗಿದು[೧೦][ವುಂ][೧೦] ಕಿಲ್ಬಿಷಂಗಳದು ಕಾರಣದಿಂ
ಲಿಂಗಮುಖವಾಗಿ ಕೊಂಬುದು
ಲಿಂಗದದಾ ತನುವದಾಗಿ ಲಿಂಗದ ಶೇಷಂ ॥೧೩॥

ಭವರಹಿತನಾದ ಬಳಿಕಂ
ಭವಿಪಾಕವ ಲಿಂಗಕೀಯೆ ರೌರವನರಕಂ
ತವೆ ಮೀರೆ ಕಂಡನಾದರೆ
ಭವಿಗಿಂದಂ ಬದ್ಧನರಕದಲಿ ತಾ ಬೀಳ್ವಂ ॥೧೪॥

ಮಾಡದ ಮನೆ ಮಾಡದ ಒಲೆ
ಮಾಡದ ಕೈಗಾಣ ಮಾಡದಿಹ ಮಡಕೆಗಳುಂ
ಮಾಡದ ಮೊಱನೊರಳೊನಕೆಯು
ಮಾಡದವೀ ತೆಱನನಱಿಯದಿರೆ ದುಃಶೀಲಂ ॥೧೫॥

ಭವಿ ಮುಟ್ಟಲಾಗದೆಂಬಂ
ಭವಿಯಲ್ಲವೆ ತನಗೆ ಹೊನ್ನು ಹೆಣ್ಣುಂ ಮಣ್ಣುಂ
ಭವಿಪಾಕವೊಲ್ಲೆನೆಂಬಂ
ಭವಪಾಕದಿ ಬೇವ ತಾನೆ ಶಿಲವದಲ್ಲಂ ॥೧೬॥

೭–೭ ಳಿನ(ಮೂ), ೮–೮ ಸಿಂ (ಮೂ), ೯–೯ ನ(ಮೂ), ೧೦–೧೦ ದುಂ(ಮೂ).

ಹರವಿಯ ಕಟ್ಟಿದರೇನುಂ
ಪರರಂ ಹೊಗಲೀಸೆವೆಮ್ಮ ಮನೆಗೆನೆ ತಾನುಂ
ಪರರಿಂ[೧೧][ಗಿಕ್ಕದಿರೇ][೧೧]ನುಂ
ಪರದೈವ ಪರಾರ್ಥ ಬಿಡದ ಶೀಲವದೇನುಂ ॥೧೭॥

ಪರಸತಿಯ ಕಾಣುತಾಗಂ
ವರಜನನಿಯು ಪುತ್ರಿ ತನ್ನವೊಡಹುಟ್ಟಿದಳೆಂ
ದಿರು[೧೨][ವಂ][೧೨] ಮನದಾರನವರ[೧೩]
ಪರಿಭಾವಿಸಿ ನೋಡನಾವತೆಱದಿ ಮಹೇಶಂ ॥೧೮॥

ಪರರ ಧನವೆಂಬು[೧೪][ದನವಂ][೧೪]
ಪರಿಕಿಸನದ ನೋಡನದಱ ದೆಸೆಗೆ ಹಾರಂ
ಪರಿಭವ ವರವಶಕೆ ಬಾರಂ
ಪರಧನವಂ ತೆಗೆವರವರ ನೆಱೆಯ ಮಹೇಶಂ ॥೧೯॥

ಭಾವವಚ್ಚೊತ್ತಿ ಮನದಲಿ
ದೇವನ ನೆಱೆ ನಂಬಿ ನಿಷ್ಠೆ ಕಱೆ ನೆಲೆಗೊಂಡುಂ
ಆವು[೧೫][ದನ][೧೫]ವನದಱಿಯದೇ
[೧೬][ತವೆ][೧೬] ತನಗಾಗಿ[೧೭][ಯೆ][೧೭] ನಿಯಭರಿತಂ ಮಹೇಶಂ ॥೨೦॥

ಭವಿಪಾಕಂ ಭವಿಭಾಂಡಂ
ಭವಿಲಿಂಗಂ ಭವಿಯ ಭೂಮಿ ಭವಿವಂದನೆಯುಂ
ಭವಿನೋಟಂ ಭವಿಮಾಟಂ
ಭವಿಸೇವೆಯ ಮಾಡದಿಪ್ಪನೇ ಶೀಲಯುತಂ ॥೨೧॥

ತಾನಿಪ್ಪ ಮಠಕೆ ಮುದ್ರೆಯು
ತಾನಾಯತವಪ್ಪ ಪಶುವಿಗಂ ಶಿವಮುದ್ರೆಯು
ತಾನಾಗೃಹದೊಳಗಿಹವವ
ಕೇನೇನುಂ ಮುದ್ರೆಯಿರಲದೊಂದನೆ ಶೀಲಂ ॥೨೨॥

೧೧–೧೧ ನಿಕ್ಕಿದಿರಲೇ (ಮೂ), ೧೨–೧೨ ಹ (ಮೂ), ೧೩–೦(ಮೂ) ೧೪–೧೪ ದವಗಂ(ಮೂ), ೧೫–೧೫ ದನ್ಯ(ಮೂ), ೧೬–೧೬ ತಾನೆ(ಮೂ), ೧೭ x(ಮೂ).

ತನ್ನ ಸತಿಗೊಂದದಾಗದೆ
ತನ್ನಯ ಸಮಶೀಲವಾಗಿ ತಾನೇಂ ನೆನೆದುದ
ತನ್ನ ನೆಳಲಂತೆ ಇರುತಿರೆ
ಸನ್ನಿಹಿತವದೀಗಲೆರಡನೆಯ ಶೀಲವದುಂ ॥೨೩॥

ವಧುವಿಗೆ ತನಗಂ ಬೇಱೋಂ
ದಿದಿರೆನ್ನದೆ ತನ್ನವಯವಂಗಳೊಲಿರಲಾ
ವಧು[೧೮] ರಜಸಿಲೆಯಾದರೆ ತಾನ್
ವಿಧಿಸೂತಕವಳಿ[೧೯][ವು][೧೯]ದೀಗ ಎರಡೆನಿಸಿ[೨೦][ಹು][೨೦]ದುಂ ॥೨೪॥

ತಾನೇನಂ ನೆನೆದುದಕಂ
ತಾನೇನಂ ನೆಗಳಿದುದಕೆಯನುಕೂಲತೆ[೨೧][ಯಂ][೨೧]
ತಾನೇನ [೨೨]ನೆಮ್ಮೆ ಶೀಲವ
[೨೩][ತಾನೆ ಪರಿಗ್ರಹಿಸಲೀಗ][೨೩] ಮೂರನೆ ಶೀಲಂ ॥೨೫॥

ವರ್ಮವನಱಿದಾ ಭಕ್ತಿಯ
ನಿರ್ಮಲನಿಶ್ಚಿಂತನಾಗಿ ನಿಶ್ಚಯಪದದಿಂ
ಕರ್ಮಪೂಜೆಗಳ ಕಳೆದುಂ
ಧರ್ಮಾಚಾರದಲಿ ನಡೆಯೆ ನಾಲ್ಕನೆಯದದುಂ ॥೨೬॥

ಸತಿಗರ್ಭವಾಗೆ ತನಗಿಂದ
ದತಿಶಯ ಶೀಲಾವಧಾನಿಗಳ ಹಸ್ತದಲುಂ
ಪತಿಕರಿಸಿ ಭಸಿತವಿಟ್ಟ[೨೪][ಡ][೨೪]
ದತಿಶಯದಿಂ ಲಿಂಗಧಾರಣೈದನೆಯ ಶೀಲಂ ॥೨೭॥

ಜಂಗಮದ ಪಾದತೀರ್ಥವ
ಲಿಂಗದ ಸ್ನಪನಕ್ಕೇಱಿದುದರ ಶೇಷವನುಂ
ಲಿಂಗಕ್ಕೆಯಿತ್ತು ಕೊಂಬುದು
ಅಂಗವದಾಗಿರಲುವಾಱನೆಯ ಶೀಲವದುಂ ॥೨೮॥

೧೮+ವು(ಮೂ), ೧೯–೧೯ ದು(ಮೂ), ೨೦–೨೦ ಹು(ಮೂ), ೨೧–೨೧ ಯುಂ(ಮೂ), ೨೨+೦(ಮೂ) ೨೩–೨೩ ತಾ ತಾಪತಿಗ್ರಹಿಸಲೀಗ(ಮೂ), ೨೪–೨೪ ವ(ಮೂ).

ಗುರುಲಿಂಗಜಂಗಮವನುಂ
ಸ್ಥಿರದಿಂದಲಿ ಒಂದೆಯೆಂದು ಎರಡದನಳಿದುಂ
ಚರವಾಗಿ ಮಾಳ್ಪ ಮಾಟಂ
ಸ್ಥಿವಾಗಿಯೆ ನಿಂದರೇಳನೆಯ ಶೀಲವದುಂ ॥೨೯॥

ಕೂಪೋದಕ ಪೊಸಭಾಂಡಂ
ಲೇಪಿಸಿ ವಸ್ತ್ರವನು ಮಂತ್ರಶುದ್ಧದಿ ಲಿಂಗಕೆ
ತಾ ಪಾಕ [೨೫]ಯತ್ನ ಸವೆಸಲು
ಲೇಪದಿ ಶಿವನೊಳಗೆ ನಿಂದರೆಂಟನೆ ಶೀಲಂ ॥೩೦॥

ಧೇನು[೨೬]ಕ್ಷೀರವದಲ್ಲದೆ
ತಾನಾಗದು ಶಿವಗ[೨೭][ನ್ಯಂ][೨೭] ಮಿಕ್ಕವಿವೆಂದುಂ
ಹೀನತರ ಮಹಿಷಿಯಿಂದ[ಂ]
ಹಾನಿಯಂಗಳಾಗಿ ನವಮದೆನಿಪ್ಪುದುಂ[೨೮] ॥೩೧॥

ಶಿವಭಕ್ತನ ಹಸ್ತದಲುಂ
ತವೆ ವಸನಂ ಭಾಂಡ ರಜಕ ದರ್ಪಣ ಕೆಲಸಂ
ಶಿವನಾಯತದಲಿ ಮಾಡಲು
ಶಿವನವನೊಳಗಿಪ್ಪನಾಗಿ ಹತ್ತನೆಯದದುಂ ॥೩೨॥

ಅಂಗದಲಿ ಲಕ್ಷಣಾನ್ವಿತ
ಲಿಂಗದ ಮುದ್ರೆಯನು ವತ್ಸಗಂ ಧೇನುವಿಗಂ
ಅಂಗೀಕರಿಪುದು ಶೀಲವ
ಲಿಂಗಾಯತವಂತದೀಗ ಹನ್ನೊಂದನೆಯದು ॥೩೩॥

ಭಕ್ತನ ಕೈಯಲಿ ತೃಣಮುಂ
ಭಕ್ತನ ಕೈಯಿಂದಲುದಕ [೨೯][ತಂ][೨೯]ಣಿಯನದಕಂ
ಭಕ್ತನೆ ಕಾವುದು ತನ್ನ ಸು
ಭಕ್ತೆಯೆಯೆನಿಸಿ[೩೦]ಪ್ಪು[೩೦]ಗೋವು ಹನ್ನೆರಡನೆಯದು ॥೩೪॥

೨೫+ ಪ್ರ(ಮೂ), ೨೬+ವಿನ(ಮೂ), ೨೭–೨೭ ನಂ(ಮೂ), ೨೮ ಈ ಪದ್ಯದಲ್ಲಿ ಛಂದೋದೋಷವಿದೆ ೨೯–೨೯x(ಮೂ).

ಬಹುಬಹು ಜಲಚರಗ[೩೧][ಳ][೩೧] ಬಹ
ಬಹಮುಖರುಂ ತಹರು ಬಹುಜಿಗುಪ್ಸೆಯದಾಗಿಯು
ಬಹುದೋಷವೆಂದು ವಿವರಿಸೆ
ವಿಹರಿಸೆ ನೀ ಲವಣವೆನಲು ತಾ ಹದಿಮೂರುಂ ॥೩೫॥

ತನ್ನಾಯತವಹ ಧೇನುವ
ಉನ್ನತ ಗೋಮಯದಿಂದಂ ಗೃಹಸಾರಣೆಯಿಂ
ಸನ್ನಹಿತ ಭಸ್ಮವದಜೆಂ
ಧನ್ಯಂ ಫಲವಾಗಿ ತಾನೆ ಹದಿನಾಲ್ಕೆನಿಕುಂ ॥೩೬॥

ನರ ತೊಗಲು ಮುಟ್ಟದಂದದಿ
ಹರಭಕ್ತರೆ ನೂತ ನೂಲ ಭಕ್ತರ ಕೈಯಿಂ
ವರವಸ್ತ್ರ ವಸನವಾಗಲು
ಹರನೊಲಿವಂ ಶೀಲ ತಾನೇ ಹದಿನೈದೆನಿಕುಂ ॥೩೭॥

ತಮ್ಮಾಯತಕ್ಕೆ ಭಾಂಡವ
ತಮ್ಮಯ ಗೃಹದಲ್ಲಿ ರಚಿಸಿ ಮುದ್ರೆಯನದಕಂ
[೩೨][ನೆಮ್ಮಿ][೩೨] ಸುಗೆ ಕಂಠಪಾವ[೩೩][ಡ][೩೩]
ಹಮ್ಮಳಿದಿರಲದು ತದೀಗ ಹದಿನಾಱೆನಿಕುಂ ॥೩೮॥

ಅಂಗದ ಲಿಂಗದ ವಸ್ತ್ರವ
ಹಿಂಗಿಸಿ ಬಹುಜಲ[೩೪][ದ][೩೪] ಕೂಪ ಉದಕದಲವನುಂ
[೩೫][ಲಿಂಗಾಯ][೩೫]ತದಲಿ ಸಮೆಯಲು
ಲಿಂಗದ ಮೆಚ್ಚಿ [೩೬][ರಲಾಗಳೆ][೩೬] ಹದಿನೇಳೆನಿಕುಂ ॥೩೯॥

ಚರ್ಮದಲಿ ಬೆಳೆದ ಬೆಳ[೩೭][ಸುಂ][೩೭]
ವರ್ಮವನಱಿಯಲ್ಕೆ ಶಿವಗೆ ಸಲ್ಲದುದೆಲ್ಲಂ
ಚರ್ಮಪಾದುಕೆಯ ಬಿಟ್ಟುಂ
ನಿರ್ಮಲನಾಗಿರಲು ತಾನೆ ಹದಿನೆಂಟೆನಿಕುಂ ॥೪೦॥

೩೦–೩೦ ಪ್ಲೀ (ಮೂ), ೩೧–೩೧ ಳು(ಮೂ), ೩೨–೩೨ ನೇಮಿ (ಮೂ), ೩೩–೩೩ ಡೆ(ಮೂ), ೩೪–೩೪ ವ(ಮೂ), ೩೫–೩೫ ಲಿಂಗಯಾ(ಮೂ), ೩೬–೩೬ ಗಲಾಗ (ಮೂ), ೩೭–೩೭ ಸಂ(ಮೂ).

ತಮ್ಮ ಅನುವಪ್ಪ ತೋಟಕೆ
ಗಮ್ಮನೆ ಭವಿದೃಷ್ಟಿ ತಾಗದಂದದಿ ಮಱೆಯಂ
ನೆಮ್ಮಿ ಕೂಪೋದಕವ ಶಿವ
ಸೊಮ್ಮೆಂದುಂ ಸವೆಸಲೀಗ ಹತ್ತೊಂಬತ್ತುಂ ॥೪೧॥

ಭಕ್ತನ ಗ್ರಾಮದಲಿ [೩೮][ದ್ದುಂ][೩೮]
ಭಕ್ತನ ಹಸ್ತದಲಿ ಭೂಮಿಯಂ ಗ್ರಹಿಸೂದುಂ
ಮತ್ತದಕೆ ಲಿಂಗಮುದ್ರೆಯ
ವ್ಯಕ್ತಿಕ [೩೯][ದಿಂ ಸಲ್ಲಿ][೩೯] ಯಿರಲು ಇಪ್ಪತ್ತದು ತಾಂ ॥೪೨॥

ಲಿಂಗ[೪೦][ದ][೪೦] ಮುದ್ರೆಯ ಬಸವ[೪೧][ಗೆ][೪೧]
ಲಿಂಗ[೪೦][ದ][೪೦] ಮುದ್ರೆಯ ಭಾವಿ ಸೀಮೆಗೆ ಲಿಂಗಂ
ಅಂಗೀಕರಿಸದೆ ಚರ್ಮವ
ಹಿಂಗಿಸಿಯಿಹುದೀಗ ಇಪ್ಪತ್ತೊಂದನೆಯದದುಂ ॥೪೩॥

ಗುರುಲಿಂಗಜಂಗಮವನುಂ
ಹರನೆಂದೇ ಕಂಡವರನನುಗ್ರಹಿಸಿಹುದುಂ
ಹರವಾಕ್ಯವವರ ವಾಕ್ಯವ
ಪರಿಗ್ರಹಿಸಿಹು[೪೨][ದು][೪೨] ಇಪ್ಪತ್ತೆರಡನೆಯದದುಂ ॥೪೪॥

ಭವಿಗೆ ಕೊಳುಕೊಡೆಯದಿಲ್ಲವು
ಭವಿ ನಂಟನು ಭವಿಯ ಕೈಯ ತಂದುವು ಸಲ್ಲವು
ಭವಿ ತಟ್ಟಮುಟ್ಟದೆಲ್ಲವು
ಭವಿಯಂ ಬಿಟ್ಟಿಹು[೪೩][ದೆ][೪೩] ಇಪ್ಪತ್ತನೆಯದ ಮೂಱುಂ ॥೪೫॥

ಭವಿಶಬ್ದ ಭವಿಯ ಹೊಗಳತೆ
ಭವಿದೈವಂ ಭವಿಯ ಸೋಂಕು ಭವಿ ತರಲೊಲ್ಲನ್
ಭವಿಪಾಪವೆಂದು ಬಿಟ್ಟವ
ವಿವರಿಸಲಿಪ್ಪತ್ತನಾಲ್ಕು ತಾನೆಂದೆನಿಕುಂ ॥೪೬॥

೩೮–೩೮ ದ್ದು ತಾಂ(ಮೂ), ೩೯–೩೯ ದಿ ಸಲ್ಲೆ(ಮೂ), ೪೦–೪೦ x(ಮೂ), ೪೧–೪೧ ನ್(ಮೂ), ೪೨–೪೨ ದೀಗ(ಮೂ), ೪೩–೪೩ ದು(ಮೂ), ೪೪–೪೪ x(ಮೂ).

ಶಿವಭಕ್ತ ಶಿವನ ಘನವುಂ
ಶಿವಮಂತ್ರ ಶಿವಾನುಭಾವವೇ ಘನವೆಂದುಂ
ತವೆ ಶ್ರುತದೃಷ್ಟದಿ ತೋಱಲು
ವಿವರಿಸಲಿಪ್ಪತ್ತ ಐದನೆಯ ಶೀಲವದುಂ ॥೪೭॥

ಜಾತಿಯ ಹೊಲೆ ಜನನದ ಹೊಲೆ
ಪ್ರೇತದ ಹೊಲೆ ಬಂಧನಂಗಳಿಹ ಹೊಲೆಯಳಿದುಂ
ನೀತಿ ಶಿವಪದವು ನಿಂದರೆ
ಓತಹುದಿಪತ್ತ ಆರನೆ[೪೪][ಯ][೪೪] ಶೀಲವದುಂ ॥೪೮॥

ಪರಧನಮಂ ಪರಸತಿಯಂ
ಪರಗೃಹ ಪರ[೪೫][ರ][೪೫] ಕ್ಷೇತ್ರಂ ಪರರುದಕಗಳಂ
ಪರಿಹರಿಸಿ ಸಲ್ಲದೆಂದವ
ಸರಿದುಂ ಬಿಡೆ ಇಪ್ಪತ್ತೇಳನೆಯ[೪೬][ದದೆ][೪೬] ನಿಕುಂ ॥೪೯॥

ಕಾಮಿಸಿ ಕಲ್ಪಿಸಿ ಲಿಂಗದಿ
ನೇಮಿಸಿ ಭಾವಿಸಿ ಭಜಿಯಿ[೪೭][ಸಿ][೪೭] ದಾ ಲಿಂಗದಲುಂ
ತಾಮಸವನಳಿ[೪೮][ದು][೪೮] ಇರಲುಂ
ನೇಮಿಸಲಿಪ್ಪತ್ತ ಎಂಟನೆಯ ಶೀಲವದುಂ ॥೫೦॥

ಶಿವಕುಲ[೪೯][ನೆ][೪೯] ಭಕ್ತನೆಂದುಂ
ಶಿವಭಕ್ತರೆ ತನಗೆ ತಂದೆತಾಯಿಗಳೆಂದುಂ
ಶಿವಭಕ್ತಿಪಥದಿ ನಿಂದುಂ
ಶಿವನಾಯತವಾಗೆ ಇಪ್ಪತ್ತೊಂಬತ್ತೆಂದುಂ ॥೫೧॥

ಭಕ್ತರೊಳು ಸರಸವಾಡದೆ
ಭಕ್ತರೊಳವಗು[೫೦][ಣಿ][೫೦]ಗಳೆಂದು ಕುಂದಂ ನುಡಿಯದೆ
ಭಕ್ತರ ಮನ ನೋವ್ ಮಾಡದೆ
ಭಕ್ತರ ಮನೆಮಗನಾದಾಗೆ ಮೂವತ್ತೆನಿಕುಂ ॥೫೨॥

೪೫–೪೫ x(ಮೂ), ೪೬–೪೬ ದೆಂದೆ(ಮೂ), ೪೭–೪೭ ಸ (ಮೂ), ೪೮–೪೮ ದ(ಮೂ) ೪೯–೪೯ ವೆ(ಮೂ), ೫೦–೫೦–ಣ(ಮೂ).

ಭಕ್ತರೊಳು ವಾದವಿಲ್ಲದೆ
ಭಕ್ತರುಗಳು ಬೇಡಿ ಕಾಡಿ ಭೇದವದಿಲ್ಲದೆ
ಭಕ್ತರೊಳನುಸರಿಯಿಲ್ಲದೆ
ಭಕ್ತಿಯಲಿರೆ ಮೂವತ್ತೊಂದನೆ ಶೀಲವದುಂ ॥೫೩॥

ಶುನಕಂ ಸೂಕರ ಕುಕ್ಕುಟ
ಮನೆಗಂ ಮಾರ್ಜಾಲ ಮೂಷಕಂಗಳನೇನಂ
ಇನಿಸವಂ ಸುಳಿಯ[೫೧][ಲ್ಕೀ][೫೧]ಯದೆ
ಅನುನಯದಿಂದಿರೆ ಮೂವತ್ತೆರಡನೆಯದದುಂ ॥೫೪॥

ತನುವಿಂಗೆ ವ್ಯಾಧಿಯಾದರೆ
ಅನುಕರಿಸದೆ ನಾರುಬೇರು ಮಣಿಮಂತ್ರಗಳಂ
ಮನಸಿನಲಿ ನೆನೆಯದಿರಲದು
ಅನುಪಮ ಮೂವತ್ತಮೂರನೆಯ ಶೀಲವದುಂ ॥೫೫॥

ವಾರ ತಿಥಿ ಲಗ್ನ ಶುಭದಿನ
ತಾರಾಬಲ ಚಂದ್ರಬಲ ನವಗ್ರಹಬಲಗಳ
ಸೇರಿ ಶುಭವಶುಭ ಶಕುನವ
ಹಾರದ ಮೂವತ್ತನಾಲ್ಕನೆಯ ಶೀಲವದುಂ ॥೫೬॥

ಭವಿಯ ನೆರೆ ಭವಿಯ ಮನೆಯುಂ
ಭವಿ ಬೆಳಸುಂ ಭವಿಯ ನುತಿಯು ಭವಿಗಳ ನೋಟಂ
ಭವಿಯ ಕೂಡಿದರ ಕೂಟಂ
ಭವಿ[೫೨][ಯೆ][೫೨]ಂದು ಬಿಡೆ ಮೂವತ್ತೈದನೆಯದದುಂ ॥೫೭॥

ಶಿವರಾತ್ರಿ ಶಂಕುರಾಂತಿಯು
ಶಿವವಾರಂ ಏಕಭುಕ್ತವುಪವಾಸಗಳಂ
ಶಿವಪಥಗಳಲ್ಲವೆಂದವ
ತವೆ ಬಿಟ್ಟರೆ ಮೂವತ್ತಾರನೆ ಶೀಲವದುಂ ॥೫೮॥

೫೧–೫೧ ಲೀ (ಮೂ). ೫೨–೫೨ ವೆ (ಮೂ).

ಗುರುಲಿಂಗಜಂಗಮಕ್ಕಾ
ದರದಿಂದ ತನುಮನವು ಧನವು ವಂಚನೆಯಳಿದುಂ
ಪರಿಪಕ್ವವಾಗಿ ಮಾಡುವ
ಇರವುಂ ಮೂವತ್ತಯೇಳನೆಯ ಶೀಲವದುಂ ॥೫೯॥

ಹರಿದು ಶಿವತೀರ್ಥವೆಂದುಂ
ಇರದಲ್ಲಿಗೆ ಹೋಗಿ ಪಾಪವೆಲ್ಲಕೆ ನಿಂದುಂ
ನರಕವ ತಾನೇಮಂದುಂ
ನೆರೆಯದಿರಲ್ಮೂವತ್ತೆಂಟನೆಯದಿದೆಂದುಂ ॥೬೦॥

ಉಪದೇಶ ಮಾಡದಾರಿಗೆ
ಅಪರಾಪರವಸ್ತುವಲ್ಲಿ ಚಿತ್ತವ ನಿಲಿಸುಗೆ
ಕಪಟಗಳ [೫೩][ಒ][೫೩]ಳಗ[೫೪][ನ]ಳಿದರೆ
ಉಪಮಿಸನನ್ಯರ ಮೂವತ್ತೊಂಬತ್ತೆನಿಕುಂ ॥೬೧॥

ಜಂಗಮದ ಮಾಟದೆಡೆಗಂ
ಹಿಂಗಿಸಿ ಎರಡುಂ ಉಪಾಧಿ ನಿರುಪಾಧಿಯನುಂ
ಅಂಗಗೊಂಡೊಂದು ಸಹಜದಿ
ಅಂಗೀಕರಿಸಲಿಕೆ ನಾಲ್ವತ್ತನೆಯದೆನಿಕುಂ ॥೬೨॥

ತನ್ನ ಸಮಶೀಲದೊಡೆಯರೊ
ಳುನ್ನತದಿಂದ ಶೇಷಗೊಳುತಿರಲವರಳಿಯೆ ತಾ
ಸನ್ನಹಿತನವರೊಳಳಿಯಲು
ಉನ್ನತ ನಾಲ್ವತ್ತವೊಂದನೆಯ ಶೀಲವದುಂ ॥೬೩॥

ಅನುಸರಣೆ ನಡೆಯ ನಡೆಯದೆ
ಮನವಂ ಲೌಕಿಕದವ[೫೫][ರಾ][೫೫] ಕಡೆಗಂ ತಾರದೆ
ತನುಮನದಾಸೆಯನಡರದೆ
ನೆನಹೇ ನಿಃಸಂಗಿಯಾಗೆ ನಾಲ್ವತ್ತೆರಡುಂ ॥೬೪॥

೫೩–೫೩ ಳವ(ಮೂ), ೫೪–೫೪ ಳ (ಮೂ), ೫೫–೫೫ರ (ಮೂ).

ತನುಗಾಚಾರಂ ನಿಂದುಂ
ಮನ[೫೬][ಕಾ][೫೬]ಚಾರ ಪ್ರಾ[೫೭][ಣಂ][೫೭] ಜಂಗಮವೆಂದುಂ
ಅನುಭಾವದಲ್ಲಿ ನಿಂದುಂ
ಅನುನಯ ನಾಲ್ವತ್ತಮೂರನೆಯದದುಯೆಂದುಂ ॥೬೫॥

ಕಾಲಕಲ್ಪಿತಗಳಳಿದುಂ
ಮೇಲೆನಿಸುವ ಪುಣ್ಯಪಾಪವೆಂಬುವ ಹಳಿದುಂ
ಆಲಂಬವಿಲ್ಲದೆಂದುಂ
ಮೇಲೆನೆ ನಾಲ್ವತ್ತನಾಲ್ಕನೆಯದದು ಸಂದುಂ ॥೬೬॥

ಜಿಹ್ವಾಲಂಪಟವಿಲ್ಲದೆ
ಜಿಹ್ವೆಯಲಿ ಕುಶಬ್ದವೇನನೊಂದಂ ನುಡಿಯದೆ
ಜಿಹ್ವೇನ್ಯಕೃತಿಯ ನೆಗಳದೆ
ಜಿಹ್ವೆಯ ಶಿವಗೀಯೆ ನಾಲ್ವತ್ತೈದನೆಯದುಂ ॥೬೭॥

ಭವಿನುಡಿಯೇನುಂ ಕೇಳದೆ
ಭವಿ ಹೇಳಿದ ಕಬ್ಬಗೇಳ್ವ ಕಿವಿಯಂ ತಾಳದೆ
ಭವ ಘೋರದಲ್ಲಿ ಬೀಳದೆ
ಭವಿಯತ್ತೆಳಸದಿರೆ ನಾಲ್ವತ್ತಾರನೆಯದುಂ ॥೬೮॥

ಜಾಗರಸ್ವಪ್ನಸುಷುಪ್ತಿಯ
ಲೀಗಂ ಶಿವಲಿಂಗವಲ್ಲದನ್ಯವನಱಿಯದೆ
ಮೇಗನ್ಯ ನೆನಹದಿಲ್ಲನು
ರಾಗದಿ ನಾಲ್ವತ್ತಯೇಳನೆಯ ಶೀಲವದುಂ ॥೬೯॥

ಉದಯಾಸ್ತಮಾನಗಳನುಂ
ಮುದದಿಂದಲು ಚಂದ್ರಸೂರ್ಯ ಬೆಳಗೆಲ್ಲವನುಂ
ಮದನಹರ ಬೆಳಗಿನಲ್ಲಿರ
ಲದು ತಾ [೫೮][ನಾ][೫೮]ಲ್ವತ್ತಯೆಂಟನೆಯ ಶೀಲವದುಂ ॥೭೦॥

೫೬–೫೬ ವದುವಾ(ಮೂ), ೫೭–೫೭ ಣ(ಮೂ), ೫೮–೫೮x(ಮೂ).

ತನ್ನ ಶಿವಸೀ[೫೯][ಮೆ][೫೯]ಯೊಳಗಂ
ಉನ್ನತಿಯಿಂದಾಡಿ ಪಾಡಿಯರ್ಚಿಸಿ ಶಿವನಂ
ಅನ್ಯ[೬೦][ರ][೬೦] ಸೇವೆಯನು ಬಿಟ್ಟು
ತನ್ನನುವಿಂದಿರೆ ನಾಲ್ವತ್ತೊಂಬತ್ತೆನಿಕುಂ ॥೭೧॥

ನೂಲಲಿ ಗೂಢೌರವದುಂ
ಮೇಲಾ ಶಿವಭಕ್ತರಾಗ ವೃಷಭಂಗಳನುಂ
ಆಲೋಕ ಶಿವನೊಳಿರಲಾ
ಮೇಲದು ಶಿವಮಾರ್ಗಕಧಿಕವೈವತ್ತಱದುಂ[೬೧] ॥೭೨॥

ಒಂದೊಂದು [೬೨][ದಾನ][೬೨]ಗಳು ತ
ಮ್ಮಂ[೬೩][ದ][೬೩]ಂಗಳಿಗೆಳೆವವಾಗಿಯವರಿಚ್ಛೆಗೆ ತಾ
ನಿಂದಿರದೆ ಶಿವ ನೆನಹಲಿರೆ
ಸಂದಿಹುದೈವತ್ತವೊಂದನೆಯ ಶೀಲವದುಂ ॥೭೩॥

ಕಾಮಂ ಕ್ರೋಧಂ ಲೋಭಂ
ತಾಮಸದ ಮತ್ಸರಾದಿಗಳನವಂ ಬಿಸುಟಂ
ತಾ ಮನ ಶಿವತತ್ವದೊಳಿರೆ
ನೇಮಂ ಶೀಲವದೈವತ್ತೆರಡನೆಯದದುಂ ॥೭೪॥

ಕಸ್ತುರಿ ಕರ್ಪುರ ಪುಣುಗುಂ
ವಿಸ್ತರಿಪ ಜವಾದಿ ಕುಂಕುಮನುಲೇಪಗಳಂ
ವ್ಯಸ್ತವೆಂದವನು ಬಿಡಲುಂ
ಸುಸ್ಥಿರವದು ಶೀಲವೈವತ್ತಮೂಱನಿಕುಂ ॥೭೫॥

ಸಕಲಾಭರಣ[೬೪][ವದೆಲ್ಲಕೆ][೬೪]
ಮುಖವಿದು ಮುಖ್ಯಾರ್ಥವೀವ ಪರಶಿವ ತಾನಿದು
ಮುಖರುದ್ರನಕ್ಷಿಯೆಂದಿದ
ಸುಖದಿಂದಂ ಧರಿಸಲೈವತ್ತಱನಾಲ್ಕೆನಿಕುಂ ॥೭೬॥

೫೯-೫೯ ವೆ(ಮೂ), ೬೦-೬೦ x(ಮೂ), ೬೧ ಈ ಪದ್ಯದ ಅರ್ಥ ಅಸ್ಪಷ್ಟ ೬೨-೬೨ ವಾನು(ಮೂ), ೬೩-೬೩ ಡ(ಮೂ), ೬೪-೬೪ ವೆಲ್ಲವು (ಮೂ).

ಎಲ್ಲರಲಿಯಿಪ್ಪ ಶಿವನೆನ
ಲಿಲ್ಲವು ಸದ್ಭಕ್ತರೊಳಗೆ ಇಹನೆಂದೆನಲುಂ
ಎಲ್ಲ ಶಾಸ್ತ್ರಗಳಲಱುಹಿಸ
ಬಲ್ಲುದೆ ಅಯಿವತ್ತ ಐದನೆಯ ಶೀಲವದುಂ ॥೭೭॥

ದಶವಿಧ ಪಾದುದಕೇಕಾ
ದಶವಿಧದ ಪ್ರಸಾದವಂ ವಿವರಿಸೆ ತಾಂ
ಎಸೆವುದು ತ್ರಿವಿಧ[೬೫][ದಿ][೬೫] ವರ್ತಿಸಿ
ವಶವಾಗಿರಲೈವತ್ತಾಱನೆಯ ಶೀಲವದುಂ ॥೭೮॥

ಧರ್ಮಾರ್ಥಕಾಮಮೋಕ್ಷವ
ನೆಮ್ಮದೆ ಕಾಮ್ಯಾದಿಫಲಪದಂಗಳ ಬಯಸದೆ
ಹಮ್ಮಳಿದು ನಿಂದು ನಿಜದಲಿ
ನೆಮ್ಮಿಹುದೈವತ್ತಯೇಳನೆಯ ಶೀಲವದುಂ ॥೭೯॥

ಐದಿಂದ್ರಿಯಂಗಳಿಗೆ ಮನ
ವೈದದೆ ಶಿವಲಿಂಗದಲಿ ಮನವಂ
ಐದೈದ ಕಿಡಿಸಿ ನಿಲಿಸಲು
ಎಯ್ದುವುದೈವತ್ತ ಎಂಟನೆಯ ಶೀಲವದುಂ ॥೮೦॥

ಆಱನೊಳಕೊಂಡು ನಿಂದುಂ
ಬೇಱಿಲ್ಲದೆ ಸಾವಧಾನಿಯಾಗಿರಲಂದುಂ
ಮೂಱಿೊಂದುಗೂಡಿ ನಿಂದುಂ
ಬೇಱಿಲ್ಲೈವತ್ತವೊಂಬತ್ತನೆಯದೆಂದುಂ ॥೮೧॥

ಕಾಮಿಸಿತು ಕಾಯಭೋಗಂ
ಕಾಮಿಸದದು ಲಿಂಗಭೋಗವೆಂದದನರಿದುಂ
ಕಾಮಿತಕಲ್ಪಿತವಳಿದುಂ
ಪ್ರೇಮದಲಱುವತ್ತನೆಯದು ಶೀಲವದೆನಿಕುಂ ॥೮೨॥

೬೫–೬೫ ದಲಿ (ಮೂ)

ಮತಿಶ್ರುತಿ ಮನಪರಿಯಾಯಂ
ಅತಿಜ್ಯೋತಿಯು ಕೇವಲಂಗಳೈದುಂ ಜ್ಞಾನಂ
ಅತಿಶಯದಿ ತೋಱಲಾಗಂ
ಹಿತವಹ ಅಱುವತ್ತವೊಂದನೆಯ ಶೀಲವದುಂ ॥೮೩॥

ಉದಯ ಮಧ್ಯಾಹ್ನ ಸಂಜೆಯು
ಮು[೬೬][ದ][೬೬]ದಿಂದಂ ಬಿಟ್ಟು [೬೭][ಏಗಳುಂ][೬೭] ಶಿವನಂ ತಾ
ಮುದದಿಂದಂ ಅರ್ಚಿಸುತಿರ
ಲದು ತಾನಱುವತ್ತಯೆರಡನೆಯ ಶೀಲವದುಂ ॥೮೪॥

ಬೊಮ್ಮವಹ ಲಿಂಗವನು ತಾಂ
ನೆಮ್ಮಿಯು ಲಿಂಗದಲಿ ಶೇಷವಲ್ಲದೆ ಏನಂ
ನೆಮ್ಮದೆ ಎರಡಳಿದಿಹುದುಂ
ನಿರ್ಮಲ ಅಱುವತ್ತಮೂಱನೆಯ ಶೀಲವದುಂ ॥೮೫॥

ಜಪತಪಗ[೬೮][ಳೇ][೬೮]ನುಯಿಲ್ಲದೆ
ಅಪರಿಮಿತಾನಂದ ನಿಶ್ಚಯದೊಳಗೆ ನಿಂದುಂ
ಸುಪಥಶಿವನೊಳಗೆ ಬೆರೆದಿರ
ಲಪರಿಮಿತಱುವತ್ತುನಾಲ್ಕನೆಯ ಶೀಲವದುಂ ॥೮೬॥

ಶೀಲಂಗಳಾಱು ತೆಱನುಂ
ಮೇಲಾ ವ್ರತವಾಱು ತೆಱನುಮನುಪಮವಾಱುಂ
ಮೂಲಮಂತ್ರಂಗಳಾಱುಂ
ಮೇಲವಕಂ ತೋಱುತ್ತಿಪ್ಪ ಶೇಷವದಾಱುಂ ॥೮೭॥

ಶಿವಸನ್ನಿಹಿತ[೬೯][ದು][೬೯] ಶೀಲಂ
ಶಿವಮಾರ್ಗಾಚಾರವಲ್ಲದದು ದುಶ್ಶೀಲಂ
ಶಿವಭಕ್ತರಿಗೇಂ ಸೋಲಂ
ಶಿವನೊಲ್ಲನು ಪಾಪವೆಲ್ಲವದು ಭವಜಾಲಂ ॥೮೮॥

೬೬–೬೬x(ಮೂ), ೬೭–೬೭ ಯೇಗಲುಂ(ಮೂ), ೬೮–೬೮ ಳ (ಮೂ), ೬೯–೬೯ ದ(ಮೂ).

ಅಕ್ರೋಧಸತ್ಯಕ್ಷಮೆಯುಂ
ವಕ್ತ್ರಂ ಭವಿಭಕ್ತನುಗ್ರಹಂ ಸತ್ಪಾತ್ರಂ
ವಿಕ್ರಯ [೨೦]ದ್ರವ್ಯ[೨೧]ದ[೨೧] ಶೋಧನೆ
ಅಕ್ರಮಗಳನಳಿದು ನಡೆವುದೇ ಶಿವಶೀಲಂ ॥೮೯॥

ಆಱು ವಿಭಗಳನು ಕಳೆದುಂ
ಆಱುಂ ಶೀಲಗಳ ಅಂಗಗಳನವ ತಿಳಿದುಂ
ಆಱು ವ್ರತಗಳನಱಿದುಂ
ಬೇಱಾಗಿರದಿದ್ದರೀಗಲದೆ ಶಿವಶೀಲಂ ॥೯೦॥

ಸತ್ಯಂ ಕ್ಷಮೆಯುಂ ಶಾಂತಂ
ಮರ್ತ್ಯರು ಭಕ್ತರುಗಳವರನುಗ್ರ[೨೧][ಹವಱಿವುಂ][೨೧]
ಸತ್ಯಪಾತ್ರಗಳನಱಿವುದು
ಅತ್ಯಂತವಿವಾಱು ಶೀಲಪರಿಯಾಯಗಳುಂ ॥೯೧॥

ಏಕಾದಶ ಪ್ರಸಾದಂ
ಬೇಕಾ ಗೌರವವು ಲಿಂಗಜಂಗಮಭಾಗಂ
ಬೇಕಾ ಭಕ್ತಿವಿವಾಹಂ
ಬೇಕಾ ದಶಪಾ[೨೨][ದೋ][೨೨]ದಕ ವ್ರತಗಳಿವಾಱುಂ ॥೯೨॥

ಇವಱ ಆದಿಗಳನಱಿದುಂ
ಅವಿರಳ ಲಿಂಗದಲಿ ನಿಲಲು ತಾನಾಯೊಂದಂ
ವಿವರಿಸಲು ಆಱುವೊಂದುಂ
ವಿವರಿಸೆ ದಶವಿಧ[೨೩][ದೋ][೨೩]ದಕ ಬೇಱಿಲ್ಲೆಂದುಂ ॥೯೩॥

ವಿಸ್ತರಿಪ ವ್ಯೋಮಚಕ್ರದ
ವಸ್ತುವ ಪರಿಪೂರ್ಣವಾ ಸುಧಾಮಯ ಲಿಂಗವ
ಸ್ವಸ್ಥಾನದಿಂದ ಭಾವಿಸಿ
ಸ್ವಸ್ಥಿರದ ವಿವೇಕಬುದ್ಧಿಯಿಂದಱಿದಿಹುದುಂ ॥೯೪॥

೨೦-೦(ಮೂ) ೨೧-೨೧x(ಮೂ), ೨೧-೨೧ವಱಿಯುಂ(ಮೂ), ೨೨-೨೨ ದು(ಮೂ), ೨೩-೨೩ ದ ಉ(ಮೂ).

ಚಿದ್ದೀಪಿಕಾಗ್ರದಲ್ಲಿಹ
ಚಿದ್ಬ್ರಹ್ಮಾಂಡದೊಳಗಳ ಚಿದಾಕಾಶದೊಳಂ
ಚಿದ್ಘನ ಪರಿಪೂರ್ಣದಲುಂ
ಚಿದ್ಘನವಿಧುಬಿಂಬ ಕಳೆಯಲಿಹ ಬೆಳಗಿನಲುಂ ॥೯೫॥

ಹದಿನಾಱು ಕಳೆಯ ಕೂಡಿದ
ವಿಧುಬಿಂಬದ ಪರಿಯಲಿಪ್ಪ ಲಿಂಗದ ಒಲವಿಂ
ಸದಮಲಾತ್ಮಕನು ಆತನ
ಇದಿರಿನಲುಂ ಲೋಕವೆನ್ನ ಶಿವಶೀಲದರುಂ ॥೯೬॥

ಚಿದ್ಘನಲಿಂಗವದಕೆ ತಾಂ
ಚಿದ್ಘನವಾಕಾಶಂ ಚಿಚ್ಚುಖ ಚಿತ್ಪ್ರಾಣಂ
ಚಿದ್ಘನವಂಗವದಾಗಿಹ
ಚಿದ್ಘನಶೀಲದಲಿ ಇರಲು ಚಿದ್ಘನಲೋಲಂ ॥೯೭॥

ಆವ ಕೆಲಸಗಳ ಮಾಡಲು
ದೇವನ ಮುಖಕದವನು ಸವೆಸಲದು ಕರ ಲೇಸುಂ
ಆವ ಸೇವೆಗಳ ಮಾಡಲು
ದೇವನದೆಂದೆಂಬನಾವನದು ಕಾಯಕವುಂ ॥೯೮॥

ನುಡಿದುದಱಾಯತದಿಂದಲು
ನಡೆವಂ ಸ್ವಾಯತದಿ ಹಿಡಿದ ಶೀಲವ್ರತವಂ
ಕಡೆತನಕ ಸವೆಸಿ ತ್ರಿವಿಧವ
ಎಡವಱಿಯದೆಯಪ್ಪನವನು ತಾ ಶಿವಭಕ್ತಂ ॥೯೯॥

ಭಕ್ತರಿಗೆ ಮೂಲಧನ ಶಿವ
ಭಕ್ತಿಯೆ ಭಕ್ತಂಗೆ ಕುಲವುಂ ಭಕ್ತಿಯೆ ಬಲವುಂ
ಭಕ್ತಿಯೆ ನೆಲಮುಂ ಚಲಮುಂ
ಭಕ್ತಿಯೆ ಭಂಡಾರ ಭಕ್ತಗೆ ಸಿರಿ ತಾನುಂ ॥೧೦೦॥

ಆಱಕ್ಕರದಿಂ ಮಂತ್ರಂ
ಮೂಱುಂ ಕಣ್ಣಭವನಿಂದವಗ್ಗಳ ದೈವಂ
ಬೇಱಿಲ್ಲೆಂದು ಧರಿತ್ರಿಗೆ
ಸಾಱಿದಪಂ ಕೇಶಿರಾಜ ದಂಡಾಧೀಶಂ ॥೧೦೧॥

ಕೇಶಿರಾಜ ದಣ್ಣಾಯಕರು ನಿರೂಪಿಸಿದ ಕಂದ ಸಮಾಪ್ತ
ಮಂಗಳ ಮಹಾ ಶ್ರೀ ಶ್ರೀ ಶ್ರೀ

❖❖

೬

ನವರತ್ನಮಾಲಾ

ಸ್ಫುಟಿತಬ್ರಹ್ಮಾಂಡಖಂಡಂಗಳೊಳಿದೆ ಮಿಗಿಲೆಂಬಂತೆ ಕಾಪಾಲದಾಮಂ
ನಿಟಿಲೋಪಾಂತಕ್ಕೆ ಚೆಲ್ವಿಂ ತಳೆಯಲೆಸೆವ ದೇವೇಶನಂ ತ್ರೈಜಗತ್ಪ್ರಾ
ಕಟತೇಜಃಪುಂಜನೇತ್ರ ತ್ರಯನನಸದೃಷೋಲ್ಲಾಸನಂ ಬಾಲಲೀಲೋ
ತ್ಕಟ ನಾಂಟ್ಯಾಡಂಬನಂ ಕಂಡೆರ್ದೆದಣಿದು ಕುಳಿರ್ಕೊಣ್ಡಿತೆನ್ನಂತರಂಗಂ ॥೧॥

ಬೆ[1][ಳಗಿ][1]ಂದಂ ಜೊತ್ಸ್ನೆಮೂರ್ತಿಂಬಡೆದುದೆನಿಸುವೀ ಚಂದ್ರಲೇಖಾಂಶುವಿಂ ಪ್ರ
ಜ್ವಲಿಸುತಿರ್ಪಾ ಜಟಾಜೂಟನನಮರಕುಜೋದ್ಯಾನಸೌಗಂಧಪುಷ್ಪಂ
ಗಳ ಕಂಪಿಂ ಬ[ರ್ಪ], ಮಂದಾನಿಳನೊಳೆಳಸುತ್ತಂ ಭೋರನ್ನೈತರ್ಪ ಗಂಗಾ
ಜಳಧಾರಾಪೂರನಂ ಕಂಡೆರ್ದೆದಣಿದು ಕುಳಿರ್ಕೊಣ್ಡಿತೆನ್ನಂತರಂಗಂ ॥೨॥

ಹೃದಯಾಂಭೋಜಾತರಂಗಕ್ಕವತರಿಸಿ ಸುಖಾಸೀನನಾಗಿರ್ದ ಸೌಖ್ಯಾ
ಸ್ಪದನಂ ಮಜ್ಜೀವಿತಾಧೀಶ್ವರನನುಪಮ[ನ]ಂ ಮನ್ಮನೋವಲ್ಲಿ[2][ಗೆ][2]ತ್ತಂ
ಪದಪಿಂ ಪರ್ಬಲ್ಕಡರ್ಪಾದಮರಕುಜನನರ್ಕೇಂದುಕೋಟಿಪ್ರಭಾ ಸಂ
ಪದನಂ ಪ್ರತ್ಯಕ್ಷನಂ ಕಂಡೆರ್ದೆದಣಿದು ಕುಳಿರ್ಕೊಣ್ಡಿತೆನ್ನಂತರಂಗಂ ॥೩॥

ಎಸೆವೀ ದುಗ್ಧಾಬ್ಧಿ ಲೋಕತ್ರಯ ಗಗನದಿಶಾಚಕ್ರದೊಳ್ ಕೂಡಿ ಕಾಂತಿ
ಪ್ರಸದಂ ಕೈಕೊಂಡು ಪರ್ಬಿತ್ತೆನಿಸುವ ಧವಲಶ್ರೀಯುಮೊಪ್ಪಿರ್ಪ ಮಾಣಿ
ಕ್ಯಶರೀರಪ್ರೋಕ್ತನಂ ತಳ್ತಡರ್ದೆಡೆಗುಡುತಂ ತೀವಿರಲ್ತೋಱುತಿರ್ಪಂ
ತೆಸೆವತ್ಯುದ್ದಾಮನಂ ಕಂಡೆರ್ದೆದಣಿದು ಕುಳಿರ್ಕೊಣ್ಡಿತೆನ್ನಂತರಂಗಂ ॥೪॥

೧-೧ ಳ್ಪಿ(ಮೂ) ೨-೨ ಯ(ಮೂ)

ಹಿಮವತ್ಶೈಲೇಂದ್ರಪುತ್ರೀನಯನಕುಮುದಿನೀಶ್ರೀವಿಭಾವೈಕವಾಕ್ಯಂ
ದ್ರುಮನಂ ಗೌರೀಮುಖಾಂಭೋರುಹವಿಕಸಿತ ಸತ್ಸಾರಸೌಗಂಧಲುಬ್ಧ
ಭ್ರಮರವ್ಯಾಪಾರನಂತರ್ಭ್ರಮಣನಗಜೆಯುತ್ತುಂಗಪೀನಸ್ತನದ್ವಂ
ದ್ವಮಣಿಪ್ರಾ[೩][ಲಂಬ][೩] ನಂ ಕಂಡೆರ್ದೆದಣಿದು ಕುಳಿರ್ಕೊಡಿತೆನ್ನರಂಗಂ ॥೫॥

ಕನಕಾಂಶೂತ್ಕೇಶಬಂಧಂ [೪][ರವಿಶಶಿಫಣಭೃನ್ಮಂಡನಂ][೪] ಭಾಳನೇತ್ರಂ
ದ್ಯುನದೀ ಶ್ರೀನೀಲಕಂಠಂ ದಶಭುಜನುರಗೇಂದ್ರಾಂಕ ಶೂಲಂ ಕಪಾಲಂ
ಅನಲಂ ಖಟ್ವಾಂಗಹಸ್ತಂ ಡಮರುಗ ವರದಂ ಶೋಭೆಯಿಂ ತನ್ನೊಳೊಪ್ಪಿ
ರ್ಪನಿಮೇಷಾಧೀ[೫][ಶ][೫]ನಂ ಕಂಡೆರ್ದೆದಣಿದು ಕುಳಿರ್ಕೊಡಿತೆನ್ನಂತರಂಗಂ ॥೬॥

ಪದಪಿಂದೀರೇಳು ಲೋಕಂಗಳನತಿ ಮುದದಿಂ ರಕ್ಷಿರಲ್ತಾಂ ಪೃಥುವ್ಯಾ
ಳದೊಳರ್ಕಂ ಮಾರುತಂ ಚಂದ್ರಮನವನೀ ನಭಂ ವಹ್ನಿತೋಯಾತ್ಮಕಂ ತಾಂ
ಮೊದಲೆಂಬೈಕಸ್ವಭಾವಂ ನಿಜಮೆನಿಸಿದ ಸರ್ವೇಶನಂ ಶರ್ವನಂ ಸಂ
ಪದನಂ ಪ್ರತ್ಯಕ್ಷನಂ ಕಂಡೆರ್ದೆದಣಿದು ಕುಳಿರ್ಕೊಡಿತೆನ್ನಂತರಗಂ ॥೭॥

ಮದರಾಗದ್ವೇಷಜನ್ಮಂ ಜರೆ ರುಜೆ ಮರಣಂ ಸ್ವೇದಂ ಖೇದಂ ವಿಷಾದಂ
ಪುದಿದಿರ್ದಾಕಾಂಕ್ಷೆ ನಿದ್ರಾ ಭ್ರಮೆ ಪಸಿವು ತೃಷಾ ಚಿಂತಾ ಸಂಕ್ಲೇಶ ಮೋಹಂ
ಪದಿನೆಂಟುಂ ದೋಷದಿಂದಂ ತೊಲಗಿದನನಘಂ ದೇವದೇವೇಶನಪ್ಪೀ
ಮದನಪ್ರಧ್ವಂಸಿಯಂ ಕಂಡೆರ್ದೆದಣಿದು ಕುಳಿರ್ಕೊಡಿತೆನ್ನಂತರಂಗಂ ॥೮॥

ತಿಲದೊಳ್ತೈಲಂ ಮಹೀಜಪ್ರಕರದೊಳನಲಂ ಕ್ಷೀರದೊಳ್ಸರ್ಪಿ ಭೂತಂ
ಗಳೊಳೆಲ್ಲಾ ಭೂತತಂತ್ರಂಗಳೊಳೆ[ಸೆ]ವಸಿತೋಪಾರ್ತ್ಮನಂ ಸೂಕ್ಷ್ಮನಂ ನಿ
ರ್ಮಳನಂ ನಿರ್ಭೇದ್ಯನಂ ನಿಃಕಳನನನುಪ [೬][ಮಾನನ್ಯನಂ][೬] ಭಕ್ತಾವಾಂಭೋ
ತ್ಪಳಕಲ್ಪೋರ್ವೀಜನಂ ಕಂಡೆರ್ದೆದಣಿದು ಕುಳಿರ್ಕೊಡಿತೆನ್ನಂತರಂಗಂ ॥೯॥

ಇತಿ ಕೇಶಿರಾಜ ದಂಡನಾಥಚೂಡಾಮಣಿ ನಿರೂಪಿಸಿದ
ನವರತ್ನಮಾಲೆಗೆ ಸಂತೋಷಮಸ್ತು

❖❖

೩–೩ ರಂಭ(ಮೂ), ೪–೪ ರವಿಶಶಿಫಣಿಭೃತ್ಕುಂಡಲಂ(ಮೂ), ೫–೫ x (ಮೂ), ೬–೬ ಮಯ್ಯನಂ(ಮೂ).

೭

ಅಳಲಾಷ್ಟಕ

ಷಡುದರುಶನ[೧]ಕಧಿ[೧]ಪತಿಯಹ
ಮೃಡನೇತಱ ದೈವವೆಂದು ನುಡಿವನ ಬಾಯೊಳ್
ಹುಡಿಯಂ [೨]ಹೋದಿಟ್ಟಗೆ[ಯಿಂ][೨]
ಮಡದಲ್ಲಿ [೩][ಘಟ್ಟಿಸ][೩] ದೊಡೆನ್ನಳಲಾರ್ದಪುದೇ ॥೧॥

ಟೆಂಟಣಿಸೆ ಗರಳದುರಿಯಂ
ಕಂಠದಿ ಹತವಾದ ದೇವರು [ತಾಂ] ಮುಕ್ತಿ ಕಱಿ
ಕಂಠಗೆಣೆಯೆಂ[೪]ಬ[೪] ಬಾಯೊಳ್
ಗೂಂಟ[೫]ವ[೫] ಕಾಸಿ ಬ[೬]ಲಿ[೬]ದೊಡೆನ್ನಳಲಾರ್ದಪುದೆ ॥೨॥

ಆ ಸಮಯ ಹರಿಯ ಪೊಗಳುವ
ವ್ಯಾಸನ ಕರವರಿದು[ದು] ಮೂಜಗವಱಿಯಲ್ಮ
ತ್ತೀಶ[೭][ಗೆಣೆಯೆಂಬ][೭] ಬಾಯೊಳ್
ಸೀಸ[೮]ವ[೮] ಕಾಸಿ ಪೊಯ್ದಡೆನ್ನಳಲಾರ್ದಪುದೇ ॥೩॥

ಖಂಡೇಂದುಧರ ಮಹೇಶಗೆ
ಮಂಡಲದೊಳು ಜನಿಸಿ ಮಡಿವ ಪುಂಡರಿಕಾಕ್ಷನ
ಭಂಡರ ಸರಿಯೆಂಬವರನು
[೯][ಖಂ][೯]ಡಿಸಿ [೧೦]ಶಿರವ[೧೦] ಬಿಸುಟೊಡೆನ್ನಳಲಾರ್ದಪುದೇ ॥೪॥

೧–೧ ದಾ (ಕ), ೨–೨ ಹೊಯಿದಿದ ಬಗೆಯಂ(ಕ), * ಯಂ(ಕ, ಗ), ೩–೩ ತಟ್ಟಿಸಿ(ಗ), ೪–೪ ಬವನ(ಕ), ಬವರ(ಗ), ೫–೫ ವ ನೆರೆ(ಕ), ವನೆಱಿ(ಗ), ೬–೬ ಡಿ(ಕ) ೭–೭ ನೊಳು ಸರಿಯೆಂಬನ(ಕ, ಗ), ೮–೮ ವನುಱಿ (ಕ, ಗ), ೯–೯ ದಂ (ಕ, ಗ), ೧೦–೧೦ ಶಿರವಱಿದು(ಕ, ಗ).

ಕೆಂಡಗಣ್ಣ[೧೧]ಭವ[೧೧] ವಿಷ[೧೨]ಮಂ[೧೨]
[೧೩]ಕೊಂಡು[ಂ] ಬಳಲ್ದ ಬಾಳ್ಗೀ[೧೩] ಸುರರೆಣೆಯೆಂಬರ
ಹಿಂಡಿ ಹಿಳಿದಪ್ಪಳಿಸು[೧೪]ತಂ[೧೪]
ಕೆಂಡವ ಶಿರ[೧೫] [ದಿ ಹೊಯ್ದು][೧೫]ಡೆನ್ನಳಲಾರ್ದಪುದೇ ॥೫॥

ಅಪ್ರತಿಮ ಶಿವಗೆ ಮಿಕ್ಕಿನ
ಚಪ್ಪಟೆ ದೈ[೧೬]ವ[೧೬]ಗಳು [೧೭]ಸರಿಯೆನಿಪ್ಪನ[೧೭] ಬಾಯೊಳ್
ಕುಪ್ಪಳಿಸಿ [೧೮]ಅಣಲ ಹಲ್ಲಂ[೧೮]
ತೊಪ್ಪನೆ ಕಳೆದಲ್ಲ[೧೯]ದೊಡೆ[೧೯]ನ್ನಳಲಾರ್ದಪುದೇ ॥೬॥

ತ್ರಿಜಗಕಧಿಪತಿ ಮಹೇಶಗೆ
ಅಜಗಿಜ ಹರಿಗಿರಿ ಸುರಪ [೨೦][ಗಿರಪ][೨೦] ಸರಿಯೆಂದೆಂಬ[೨೧][ನ][೨೧]
ಭುಜದಿಂ ಮಡದಿಂ ಕರದಿಂ
ಅಜಗಿ[೨೨][ಜೆ][೨೨]ಯಂ ಮಾ[೨೩][ಡ][೨೩]ದೊಡೆನ್ನಳಲಾರ್ದಪುದೇ ॥೭॥

ಮೂಲೋಕವ [೨೪]ಪಡೆ[ದ][೨೪]ವನ ಕ
ಪಾಲವ ಕರದ್ವಯದಿಂದ ಪಿಡಿದ ಕೃಪಾನಿಧಿಗೆ
ಬಿಡು ಬಿಡು ಸುರರೆಣೆಯೆಂಬರ
ನಾಲ[೨೫][ಗೆ][೨೫]ಕೀಳ್ದು ಬಿಸುಟೊಡೆನ್ನಳಲಾರ್ದಪುದೇ ॥೮॥

ಅಳಲಾಷ್ಟಕವನೊಲಿದು ಪೇ
ಳಲು ಸಲೆ [೨೬]ಭಕ್ತಿಯಿಂದೋದಿ[೨೬] ಪಠಿಸುತ್ತಿರಲುಂ
ಮಲಹರನು ತನ್ನ ಕೃಪೆಯಿಂ
ದೊಲಿದು ನಿಜಪದವನೀವಂ ಪಂಪಾರಮಣಂ ॥೯॥

❖❖

೧೧–೧೧ ಭವನ(ಕ, ಗ), ೧೨–೧೨ ಯಂ(ಕ, ಗ), ೧೩–೧೩ ಕೊಂಡಂಬರಾಳ್ದು ಬಾಳ್ದೆ(ಗ), ೧೪–೧೪ ತ್ತಂ(ಗ), ೧೫–೧೫ ದೊಳಗಹೊಯ್ದು(ಕ, ಗ), ೧೬–೧೬ ವಂ(ಕ, ಗ), ೧೭–೧೭ ಸರಿಯೆನುತಿರ್ಪನ(ಕ) ಗುರಿಯೆನುತಿರ್ಪನ(ಗ), ೧೮–೧೮ ಸ್ವೀಕೃತಪಾಠ ೪೧೩/೨ (ವ.ವಾ.ಭಾಂ), ನಲ್ಲಿನ ಓಲೆ ಪ್ರತಿಯಲ್ಲಿದೆ(ಕ್ರಮಾಂಕ–೯೭), ಹಲ್ಲ ಪೆಂಟರಿ(ಕ. ಗ), ೧೯–೧೯ದೆ(ಕ), ೨೦–೨೦ ಗಿರಸ(ಕ, ಗ), ೨೧–೨೧ ರ(ಕ, ಗ), ೨೨–೨೨ ಜ(?) ೨೩–೨೩ ಡಿದಲ್ಲಿ(ಕ. ಗ), ೨೪–೨೪ ಶದ(ಕ) ಪಡ(ಗ) + ಮತ್ತಾ(ಕ, ಗ), ೨೫–೨೫ ಗೆ ಯಂ(ಕ, ಗ), ೨೬+ ಒಲಿದು (ಕ, ಗ).

ಅನುಬಂಧ

೧. ಶಾಸನಗಳು

ಕೇಶಿರಾಜನ ತಂದೆ ನಿಂಬಣದಂಡಾಧೀಶನ ಶಾಸನಗಳು

ಕೊಪ್ಪ, ಬೀಳಗಿ ತಾಲೂಕು, ವಿಜಾಪುರ ಜಿಲ್ಲೆ

ಕಲ್ಯಾಣ ಚಾಲುಕ್ಯ–ಭುವನೈಕಮಲ್ಲದೇವ (ಸೋಮೇಶ್ವರ II) ಕ್ರಿ. ಶ. ೧೦೭೫

[SII XI-i No. 116]

*೧. ನಯಂ ವಿಕ್ರಮಾದಿತ್ಯನಾತಂಗೇ ಮಾತೋ ತಮ್ಮನಪ್ಪಯ್ಯಣನವನನುಜಂ ಸಿಂಗನುತ್ತುಂಗ ವೀರಶ್ರೀಮಾದ್ಯದ್ದನ್ತಿನೀ ಬ

೨. ನ್ಧನ[ವಿ]ಜಯಭುಜಂ ಮಲ್ಲಿಕಾಮೋದದೇವಂ॥ [೧॥*] ಕನ್ದ॥ ದಿಗ್ವಿರದ ವ್ಯಾಪ್ತಯಶೋಭಾಗ್ದ್ವಾದಶದಿನಪತೇಜನಜಪುರಪುರ

೩. ಸನ್ಧಗ್ವಿಕ್ರಮಶೇಖರನಪರುಗ್ದಿಟ್ಟತಿ ತತ್ತನೂಜನಾಹವಮಲ್ಲಂ ॥ [೨॥*] ವೃ॥ ಶ್ರೀಮತ್ತ್ರೈಲೋಕ್ಯಮಲ್ಲ ಕ್ಷಿತಿಪತಿ ಹಿ

೪. ಮಮತ್ಸೇ[ತು] ಪೂರ್ವ್ವಾಸ್ತಶೈಳಂ ಸೀಮಾಸ್ತಂಭಾಳಿರಾಜನ್ವತಿ ಸಕಳಮಹೀ ಕಾನ್ತೆ ಯಾಗಲ್ಪ್ರತಾಪೋದ್ದಾಮಾವಷ್ಟಂ

೫. ಭದಿಮ್ಮಾಳಿಸಿ ಕವಚಹರಂ ಮೂರ್ತಿಮಾರ್ತ್ತಣ್ಡನೆನ್ದುತ್ಪ್ರೇಮಂ ಸೋಮೇಶ್ವರೋರ್ವ್ವೀಪತಿಗೆ ಸಕಳಸಾಮ್ರಾಜ್ಯ.

೬. ಮಂ ಕೂರ್ತ್ತು ಕೊಟ್ಟಂ ॥ [೩॥*] ಧರೆಯಂ ತ್ರೈಲೋಕ್ಯಮಲ್ಲ ಕ್ಷಿತಿಪತಿ ಕುಡೆ ಕ[ಯ್ಗೊ]ಣ್ಡುಮತ್ತತ್ತ ರತ್ನಾಕರ ಮಧ್ಯದ್ವೀಪ ನಾನಾ ವಿ

೭ ಷಯತತಿಗೆ ತನ್ನಾಣೆ ತನ್ನಚ್ಚು ತನ್ನಿಟ್ಟರಸರ್ತ್ತನ್ನೋಲೆ ತನ್ನುಣ್ಡಿಗೆಯೆನೆ ವಿದಿತಾಜ್ಞಾನ್ವಿತಂ ಮಾಡಿದಂ ಬಾಪ್ಪುರೆ ಪ

* ಮೊದಲಿನ ಕೆಲವು ಸಾಲುಗಳು ಹೋಗಿವೆ.

೮. ದ್ಮಾನನ್ದತೇಜಂ ನೃಗನಳಚರಿತಂ ಮೂರ್ತ್ತಿಮಾರ್ತ್ತಣ್ಡದೇವಂ ॥[೪॥*]ಎನಿತಂ ಚಾಳುಕ್ಯಚಕ್ರೇಶ್ವರ ನಿಜವಿಜಗೀಷು ಪ್ರಭಾಟೋಪಮಾಯ್ತ್ತು

೯. ನ್ತನಿತರ್ಕ್ಕಂ ಮಂತ್ರಸಂಪಾದನದ ಪದಕೆ ತಾಂ ಮಂತ್ರಿ ಯುದ್ಧಕ್ಕದೇನಚ್ಚಿನ ದಣ್ಡಾಧೀಶ್ವರಂ ತಾನೆನೆ ಚತುರುಪಧಾಶುದ್ಧಿಯಂ ತಾ

೧೦. ಳ್ದಿದಂ ನೂತನಮುದ್ರಾರಾಕ್ಷಸಂ ನೂತನಕಮಳಭವಂ ನಿಂಬದಣ್ಡಾಧಿನಾಥಂ ॥[೫॥* *]ವಚನ ॥ ಎನೆ ನೆಗಳ್ದ ಮನೆವೆರ್ಗ್ಗಡೆ ದಣ್ಡ

೧೧. ನಾಯಕಂ ನಿಂಬಣಯ್ಯಂಗಳ ಬಿನ್ನಪದಿಂ ॥ ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾಜಾಧಿರಾ

೧೨. ಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣಂ ಶ್ರೀಮದ್ಭುವನೈಕಮಲ್ಲದೇವರ

೧೩. ವಿಜಯರಾಜ್ಯ ಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸಲುತ್ತಮಿರೆ [।*] ತರ್ದ್ದವಾಡಿಯ ಬಳಿಯ

೧೪. ಕಾರಕುಱುವಂ ನಾಲ್ವತ್ತಱೊ[ಳ]ಗೆ ಪೆರ್ದ್ದೊಱೆಯ ಬಡಗದಟಿಯ ತಂಗೊಡಗೆಯ ಬೀಡಿನೊಳ್ಸುಖಸಂಕಥಾ ವಿನೋ

೧೫. ದದಿಂ ರಾಜ್ಯಂಗೆಯ್ಯುತ್ತಮಿರ್ದ್ದು ಸಕವರ್ಷ ೯೯೭ನೆಯ ರಾಕ್ಷಸ ಸಂವತ್ಸರದ ವೈಶಾಖ ಶುದ್ಧ ೩ ಸೋಮವಾರದ

೧೬. ನ್ದಿನ ಅಕ್ಷಯತ್ರಿತೀಯ ಪರ್ವ್ವ ನಿಮಿತ್ತಂ ಪಲವುಂ ಮಹಾದಾನಂಗಳಂ ನಿರ್ವ್ವರ್ತ್ತಿಸುವಲ್ಲಿಯ ದಕ್ಷಿಣಾಕಾ[ಲದೊಳ್]

೧೭. ವಿಕ್ರಮಪುರದ ಶ್ರೀಸ್ವಯಂಭೂ ನಗರೇಶ್ವರದೇವರ ಮಠದ ನೈಷ್ಠಿಕತಪೋಧನರ್ಕ್ಕಾಳಾಮುಖ ಪರ್ವ್ವತವಳಿ

೧೮. ಯ ಶ್ರೀ ತ್ರಿಭುವನಶಕ್ತಿಪಣ್ಡಿತದೇವರ ಶಿಷ್ಯರ್ ॥ಕಂದ॥ ಯಮನಿಯಮ ಸ್ವಾಧ್ಯಾಯಕ್ರಮದಿನನು

೧೯. ಷ್ಠಾಣನಿಷ್ಠಿತಾತ್ಮರ್ನ್ನಿಗಜ್ಜಾಗಮಿಕರ್ಗ್ಗಮಕರ್ತ್ತಪ್ಪುರುಷಮುನೀಶ್ವರರಖಿಳ ವಸುಮತೀ ಮಣ್ಡಲದೊಳ್ ॥[೬॥*॥] ವೃತ್ತ॥

೨೦. ಪರಮಪದಂ ಮಹಾಪ್ಪದಮುಪಾಸನೆಗೆಯ್ವ ನರ[ಂ]ಗೆ ಮಾಡುಗಂ ಪರಮ ಪದಕ್ಕೆ ತಾನೆ ನೆಲೆಯೆಂಬಿನಮೆನ್ದತಿ ಭಕ್ತಿಗೆ

೨೧. ಯ್ವ ತತ್ಪುರುಷರನೆಯ್ದೆ ಧರ್ಮ್ಮದೊಳೆ ನಿರ್ಮ್ಮಿಸಿ ದಾನಿಗಳಾಗಿ ಸನ್ದ ತತ್ಪುರುಷ ಮಹಾಮುನೀಶ್ವರ ಸತ್ಪುರುಷ

೨೨. ರ್ತ್ತಪದೊಳ್ ಗುಣಂಗಳೊಳ್ ॥[೭॥*॥] ಸ್ವಸ್ತಿ ಯುಮನಿಯಮ ಸ್ವಾಧ್ಯಾಯ ಧ್ಯಾನಧಾರಣಾಮೌನಾನುಷ್ಠಾನ

೨೩. ಜಪಸಮಾಧಿಶೀಳಸಂಪನ್ನರಪ್ಪ ಶ್ರೀ ಮತ್ತತ್ಪುರುಷಪಣ್ಡಿತದೇವರ ಕಾಲಂಕರ್ಚ್ಚಿ ಧಾರಾಪೂರ್ವಕಂ ಮಾಡಿ ಕಿಸು

---

* ಮೊದಲಿನ ಕೆಲವು ಸಾಲುಗಳು ಹೋಗಿವೆ.

೨೪. ಕಾಡೆಟ್ಟಿತ್ತಱಿ ಬಳಿಯ ಬಾದುಬ್ಬೆಯಪಾಳನವರ ವಿದ್ಯಾರ್ತ್ಥಿ ತಪೋಧನರ ಗ್ರಾಸಕ್ಕಂ ದೇವರ ಪೂಜೆಗಂ ಸರ್ವ್ವನಮ

೨೫. ಸ್ಯಂ ಮಾಡಿ ಶ್ರೀ ಬಲ್ಲವರಸಕ್ಕೊರ್ಟ್ಟರಾಯೂರಿಂಗೆ ಸೀಮೆ ಊರಿಂ ಮೂಡಲಡ್ಡವೆಟ್ಟದ ಮೂಡಣ ಮೊನೆಯ ಪುಣು

೨೬. ಸೆಯ ಕುಪ್ಪೆ ಆಗ್ನೇಯದ ದೆಸೆಯಲಾಳಿಗಿಗೆಱೆಯಿಂ ಮೂಡಲ್ ಕಱುಕೆಯಕಲ್ಲ ಪಡುವಣ ಮೊನೆ ತಂಕಣ

೨೭. ದೆಸೆಯೊಳ್ಸೆನ್ದೆಯ ಬಾವಿಯಂ ಕೋಲೆಯ ಮಳೆ ಗಟ್ಟುಗಿನ ಪಳ್ಳದಿಂ ತೆಂಕಲ್ಲುಮ್ಗುಡ್ಡೆ ಪಡುವಲ್ಲಗ್ಗಿಲಂ ಮಳೆ ಅಲ್ಲಿ ತ್ರಿಕೂಟ

೨೮. ದ ಮೂಱುಕಲ್ಲು ಅಲ್ಲಿಂ ಬಡಗ ಬೆಲಪುತ್ತಿನ ಸುಣ್ಣದ ಕಲ್ಲಕುಪ್ಪೆ ಕಡವರೆಯ ಕಲ್ಲ ಪುಣುಸೆಯ ಕಲ್ಲಕುಪ್ಪೆಯ

೨೯. ಕಿಱೆಯ ಕೆಱೆ ಅಲ್ಲಿಂ ಬಡಗಲ್ ಕಾಗೆಯಕೊಳ್ಳ ಅಲ್ಲಿಂ ಮೂಡಲ್ ಪಟ್ಟಿನಗುಣ್ಡು ॥ಮತ್ತಂ ತಳವೃತ್ತಿ॥

೩೦. ವಿಕ್ರಮಪುರದಲ್ ಸಿಂದರಗೆಱೆಯೇರಿಯ ಕೆಳಗೆ ಶ್ರೀಸ್ವಯಂಭೂ ನಗರೇಶ್ವರದ ಕಲಿದೇವಸ್ವಾಮಿಯ ಪೂ

೩೧. ದೋಂಟಾ ಮತ್ತರೊನ್ದು ಅಲ್ಲಿ ನನ್ದನವನದಿಂ ಬಡಗಲ್ ದೇವರ ನೀವೇದ್ಯಕ್ಕೆ ಗಟ್ದೆ ಮತ್ತರೊನ್ದು ಸೋಮೇಶ್ವರದೇವರ ನಿವೇದ್ಯಕ್ಕೆ ಗ

೩೨. ಟ್ದೆ ಮತ್ತರೊನ್ದು ವಿದ್ಯಾರ್ತ್ಥಿತಪೋಧನರ ಗ್ರಾಸಕ್ಕೆ ಗಟ್ದೆ ಮತ್ತರೊನ್ದು ಊರಿಂ ಬಡಗದೂರ ಪಲ್ಗೆಱೆಯ ಭಳಾರಿಯ ಮಾ

೩೩. ನ್ಯದಿಂ ಪಡುವಲ್ ಪೂದೋಂಟಂ ಮತ್ತರೊನ್ದು ಕರುವಗಟ್ದೆಯಿಂ ಬಡಗಲ್ ತಪೋಧನರ್ಗ್ಗೆ ವಖ್ಖಾಣಿಸುವ ಉಪಾಧ್ಯಾಯರ್ಗ್ಗೆ

೩೪. ಗಟ್ದೆ ಮತ್ತರೊನ್ದು ಗಳಂತಿಗೆ ಗಟೆಯಿಂ ತೆಂಕ ಮತ್ತರೊನ್ದು ವಿದ್ಯಾರ್ತ್ಥಿ ಮಾಣಿಯರ್ಗ್ಗೆ ಪುಲ್ಲೆಯಮೊನೆಯಿಂ ಪಡುವಲ್

೩೫. ಮತ್ತರ್ಪ್ಪದಿನಾಱು ಊರಿಂ ತೆಂಕಲ್ ಮೂಱುವಡಿನ ಪೊಲದೋಲ್ ಪಱೆ ಕಾಱಿಗೆಯ್ಮತ್ತರ್ಮೂವತ್ತು ದೇವರ್ಗ್ಗೆ ಕೊಟ್ಟ ಕಿ

೩೬. ರಿಯೂರ ತೆಂಕಣ ಪೆರ್ಬ್ಬಾಗಿಲ್ ಮೊದಲಾಗಿ ಮೂಡ ಮೊಗದೆ ಬಡಗಲ್ ಬ್ರಹ್ಮಪುರಿಗೇರಿ ಮೂಡಲ್ ಕೆಱೆ

೩೭. ಯ ಕೋಡಿಯ ನೀರ್ವ್ವರಿ ತೆಂಕಲ್ ಪರಿಸೂತ್ರಮೆ ಮೇರೆ ವಕ್ಖಾಣಭಟ್ಟರ್ಗೆ ಬ್ರಹ್ಮಪುರಿಯ ಬಟ್ಟೆಯಿಂ

೩೮. ಬಡಗಲ್ ಗುಣ್ಡಕಲ್ಲ ಸಮೀಪದಲ್ ಮನೆಯೊನ್ದು ದೇವರ ನನ್ದಾದೀವಿಗೂರೊಳಗೆ ಬಿಟ್ಟ ಗಾಣವೆ

೩೯. ರಡು ನಗರಸಮಸ್ತಮಿರ್ದ್ದು ದೇವರ್ಗ್ಗೆ ಅಂಗಡಿದಪ್ಪದೊನ್ದು ಮಾನ ಲೆಕ್ಕದೆ ಸೊಂಟಿಗೆ ಜೋಳಮಂ ಕೊಟ್ಟರ್ ॥

೪೦. ಇನ್ತೀ ಧರ್ಮ್ಮಮಂ ಸುಧರ್ಮ್ಮದಿಂ ಪ್ರತಿಪಾಳಿಸಿದವರ್ಗ್ಗೆ ಕುರುಕ್ಷೇತ್ರಂ ವಾರಾಣಾಸಿ ಪ್ರಯಾಗೆಯರ್ಘ್ಯ

೪೧. ತೀರ್ಥ್ಥಮೆಂಬ ತೀರ್ತ್ಥಸ್ಥಾನಂಗಳೊಳೊನ್ದುಕೋಟಿ ಕವಿಲೆಯನಳಂಕಾರ ಸಹಿತಂ ದಿವ್ಯತಪೋಧನರ್ಗ್ಗಂ

೪೨. ಚತುರ್ವ್ವೇದಪಾರಗರಪ್ಪ ಬ್ರಾಹ್ಮಣರ್ಗ್ಗಂ ಸೂರ್ಯ್ಯಗ್ರಹಣದೊಳ್ ದಾನಮಂ ಕೊಟ್ಟ ಫಲಮಕ್ಕುಂ ॥

೪೩. ಇದನಳಿದನಾ ಸ್ಥಾನಂಗಳೊಳನಿತು ಕವಿಲೆಯುಮನನಿಬರ್ತ್ತಪೋಧನರುಮಂ ಬ್ರಾಹ್ಮಣರುಮನಳಿ

೪೪. ದ ಮಹಾಪಾತಕನಕ್ಕುಂ ॥ ಸಾಮಾನ್ಯೋಯಂ ಧರ್ಮಸೇತುರ್ನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭ

೪೫. ವದ್ಭಿಃ । ಸರ್ವ್ವಾನೇತಾನ್ಭಾಗಿಜರ್ಪ್ಪಾರ್ತ್ಥಿವೇಂದ್ರಾನ್ ಭೂಯೋ ಭೂಯೋ ಯಾಚತೇ ರಾಮಭದ್ರಃ ॥[೯॥]*

೪೬. ಮದ್ವಂಶಜಾಃಪ್ಪರಮಹೀಪತಿ ವಂಶಜಾ ವಾ ಪಾಪಾದಪೇತಮನಸಾ ಭುವಿ ಭಾವಿಭೂಪಾಃ॥ ಯೇ ಪಾಲ

೪೭. ಯನ್ತಿ ಮಮಧರ್ಮ್ಮಮಿದಂ ಸಮಸ್ತಂ ತೇಷಾಂ ಮಯಾವಿರಚಿತಾಂಜಲಿರೇಷ ಮೂರ್ದ್ಧ್ನಿ ॥[೧೦॥*] ಬಹುಭಿರ್ವ್ವಸು

೪೮. ಧಾ ಭೋಕ್ತಾ ರಾಜಭಿಸ್ಸಗರಾದಿಭಿಃ । ಯಸ್ಯ ಯಸ್ಯ ಯದಾ ಭೂಮಿಃ ತಸ್ಯ ತಸ್ಯ ತದಾ ಫಲಂ ॥[೧೧॥*]

೪೯. ಸ್ವದತ್ತಾಂ ಪರದತ್ತಾಂ ವಾಯೋ ಹರೇತ ವಸುನ್ದರಾಂ । ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯತೇ ಕೃಮಿಃ ॥[೧೨॥*]

೫೦. ಶ್ರಿಮದೊರ್ಕ್ಕುನ್ದದ ಚನ್ದರಸನಾ ದೆವಸಮೆ ಬಾದುಬ್ಬೆಯ ಪಾಳ ತನ್ನ ಮನ್ನೆಯಸ್ವಾಮ್ಯಮಂ ಸ್ವಯಂಭು ಕಲಿ

೫೧. ದೇವಸ್ವಾಮಿಗೆ ಶ್ರೀಖಣಕ್ಕಂ ಧೂಪಕ್ಕವೆನ್ದು ಸರ್ವ್ವಬಾಧಾ ಪರಿಹಾರಂ ಮಾಡಿ ಬಿಟ್ಟು ಕೊಟ್ಟಂ ॥ ಕವಿ ವೈಜನಾಥ ಬರೆದಂ ॥

೫೨. ಶ್ರೀಮತ್ ಶಿವಪುರದ ಗೋವರ್ದ್ಧನೇಶ್ವರದೇವರ ನಿವೇದ್ಯಕ್ಕೆ ಕಳವೆಗೊಳ್ಳದಲ್ಲಿ ಗರ್ದ್ದೆ ಮತ್ತೊರೊನ್ದು ಶವರ್ತ್ತ್ಯ ನಮಸ್ಯ

೫೩. ಕಲುಕುಟಿಗ ಬೀರೋಜಂಗ ಸುರೋಜಂಗ ರಾಯಗಟ್ಟಿಯಿಂ ಬಡಗ ಮತ್ತರು ೧೨ ಸಿಡಿಲು ಹು

೫೪. ಣುಸೆಯಿಂ ಪಡುವ ಮತ್ತರು ೧೨ ತೋಂಟ ಮತ್ತರು ೨ [॥*]

ತುಂಬಿಗಿ, ಮುದ್ದೇಬಿಹಾಳ ತಾಲೂಕು, ವಿಜಾಪುರ ಜಿಲ್ಲೆ
ಕಲ್ಯಾಣಚಾಲುಕ್ಯ–ತ್ರಿಭುವನಮಲ್ಲದೇವ (ವಿಕ್ರಮಾದಿತ್ಯ–VI) ಕ್ರಿ. ಶ. ೧೦೮೬
[SII XI-ii No. 132]

೧ನೆಯ ಮುಖ

೧. ನಮಸ್ತು [ೞಗ ಶಿರಶ್ಚುಂ]ಬಿಚಂದ್ರ ೨. ಚಾಮರ ಚಾರವೇ ತ್ರೈಲೊ
೩. ಕ್ಯನಗರಾರಂಭಮೂಳಸ್ತಂ ೪. ಭಾಯ ಶಂಭವೇ ॥
೫. [ಸ್ವ]ಸ್ತಿಸಮಸ್ತ ಭುವನಾಶ್ರ ೬. ಯ ಶ್ರೀಪ್ರಿಥ್ವೀವಲ್ಲಭ ಮ
೭. ಹಾರಾಜಾಧಿರಾಜ ಪರ ೮. [ಮೇ]ಸ್ವರ ಪರಮಭಟ್ಟಾರಕಂ ಸ
೯. [ತ್ಯಾ]ಶ್ರಯ ಕುಳತಿಳಕಂ ೧೦. ಚಾಳುಕ್ಯಾಭರಣಂ
೧೧. [ಶ್ರೀ] ಮತ್ರಿಭುವನಮಲ್ಲ ೧೨. ದೇವರ ವಿಜಯರಾಜ್ಯ
೧೩. ಮುತ್ತರೋತ್ತರಾಭಿವೃದ್ಧಿಪ್ರವ ೧೪. [ರ್ದ್ಧ]ಮಾನಮಾಚಂದ್ರಾರ್ಕ್ಕ
೧೫. ತಾರಂಬರಂ ಸಲುತ್ತಮಿರೆ ೧೬ [ಸ]ಮಧಿಗ[ಥ] ಪಞ್ಚಮಹಾ
೧೭. [ಶ]ಬ್ದ ಮಹಾಸಾಮನ್ತಾಧಿ ೧೮. [ಪ]ತಿ ಮಹಾಪ್ರಚಣ್ಡದಣ್ಡ
೧೯. [ನಾ]ಯಕಂ ವಿಪ್ರವರದಾ ೨೦. [ಯ]ಕಂ ಗೋತ್ರಪವಿತ್ರ ಸು
೨೧. ಜನೈಯ್ಕಮಿತ್ರನ[ಭಿ]ನವ ೨೨. ಮ[ನ್ದಾ]ರ ವಿಭವಪುರಂದರ

೨ನೆಯ ಮುಖ

೨೩. .... ೨೪. ವಭಿ ಕುಳಾ[ಂಬ]......
೨೫. [ಹ] ಸಿಟ್ಟ ಜನ .... ೨೬. ಶ್ರೀಮತ್ರಿಭು.............
೨೭. ದೇವ ಪಾದಾರ .... ೨೮. ರ್ಯ್ಯಸಾಧಕ ನಾಮಾ........
೨೯. ಸ್ತ ಪ್ರಶಸ್ತಿ ಸ[ಹಿ]ತ ೩೦. ನ್ಮಹಾಪ್ರಧಾನ [ಹೇರಿ]....
೩೧. ಗ್ರಹಿ ಮನೆವೆ[ರ್ಗ್ಗ]........ ೩೨. ಯಕಂ ನಿ[ಂ] ಬಣ.....
೩೩. ಚಾಳುಕ್ಯ ವಿಕ್ರ[ಮ]...... ೩೪. ಹನ್ನೊನ್ದನೆಯ ಕ್ಷಯ
೩೫. ಸಂವತ್ಸರದ ವೈಶಾಖ ೩೬. ದ ಪುಣ್ಣಮೆ ಆದಿವಾರ [ದ]
೩೭. ಂದು ಅಗ್ರಹಾರಂ ತುಂಬಿ[ಗೆ] ೩೮. ಯ ಶಾಲೆಯ ತ್ರೈಪು[ರು]
೩೯. ಷದೇವರ್ಗ್ಗೆ ಕೊಣ್ಡಿ...... ೪೦. ಯೂರೊಡೆಯ..............
೪೧. ಭಟ್ಟರುಂ ನಾರಾ[ಯ] ೪೨. ಣಭಟ್ಟರುಂ ಸ[ಹಿತ]
೪೩. ಇಜ್ಞಲದ ಬಟ್ಟೆಯಿ[ಂ]..... ೪೪. ದ ಹೊಲೆ..........

೩ನೆಯ ಮುಖ

೪೫. ಶ್ರೀ ತ್ರೈ..................

೪೭. ಯ್ದ ರೂವಾರಿ

೪೯. ಗಿ ಪರುಷೆ ನೂ........

೫೧. ಗೆ ಸರ್ವ್ವನಮ.....

೫೩. ......ಲು ಬಿಟ್ಟ [ಮ]

೫೫. ನಿವೇ.......

೪೬. [ದೇ]ವರ ಪ್ರತಿ.....

೪೮. [ಗೆ] ಪ್ರಭು [ವೆ].....

೫೦. ಮೂನೂಱಱ.....

೫೨. ಶಾನ್ಯದೆ.....

೫೪. ಹನ್ನೆರಡು...

೫೬. ಡು ಕೈ [॥*॥]

* * *

ಕೇಶಿರಾಜ ದಂಡಾಧೀಶನ ಶಾಸನಗಳು

ಕೊಂಡಗುಳಿ, ಸಿಂದಗಿ ತಾಲೂಕು, ವಿಜಾಪುರ ಜಿಲ್ಲೆ

ಕಲ್ಯಾಣ ಚಾಲುಕ್ಯ – ತ್ರಿಭುವನಮಲ್ಲ (ವಿಕ್ರಮಾದಿತ್ಯ ೬) ಕ್ರಿ. ಶ. ೧೧೦೭

[SII XX No. 69]

ಮೊದಲನೆಯ ತುಂಡು

೧. ।ಓಂ ನಮಃ। ಶಿವಾಯ ॥ ನಮ ....

೨–೫ ಅಳಿಸಿ ಹೋಗಿವೆ

೬. ಗಳುರ್ವ್ವಿಗೆ ಮ.... [ಸಿದ।] ನಾ ನ್ರಿಪೋತ್ತಮನಿಂ ತ್ರೈಲೋ

೭. ಕ್ಯಮಲ್ಲನಾಹವಮಲ್ಲಂ ॥ ಸ್ವಸ್ತಿ ಸಮಸ್ತ ಭುವನಾಶ್ರಯಂ ಶ್ರೀ

೮. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪ

೯. ರಮಭಟ್ಟಾರಕಂ ಸತ್ಯಾಶ್ರಯಕುಳತಿಳಕಂ ಚಾಳುಕ್ಯಾ

೧೦. ಭರಣಂ ಶ್ರೀಮತ್ರೃಭುವನಮಲ್ಲದೇವರ ವಿಜಯರಾ

೧೧. ಜ್ಯಮುತ್ತರೋತ್ತರಾಭಿವ್ರಿದ್ಧಿ ಪ್ರವರ್ಧಮಾನಮಾ

೧೨. ಚಂದ್ರಾರ್ಕ್ಕ ತಾರಂಬರಂ ಸಲುತ್ತಂ ಕಲ್ಯಾಣಪುರದ

೧೩. ನೆಲೆವೀಡಿನೊಳ್ಸುಖಸಂಕಥಾವಿನೋದದಿಂ ರಾಜ್ಯಾಂಗ

೧೪. ಯ್ಯುತ್ತಮಿರೆ ತತ್ಪಾದಪದ್ಮೋಪಜೀವಿ ಸಮಧಿಗತ

೧೫. ಪಞ್ಚಮಹಾಶಬ್ದ ಮಹಾಸಾಮನ್ತಾಧಿಪ

೧೬. ತಿ ಮಹಾಪ್ರಚಣ್ಡದಣ್ಡನಾಯಕ[೦] ವಿಬ್ದವರ

೧೭. ದಾಯಕ ಗೋತ್ರಪವಿತ್ರ ಸುಜನೈಕ

೧೮. ಮಿತ್ರ ಅಭಿಮಾನಮನ್ದರ ವಿಭವಪುರಂದರ ಸರಸ್ವತೀಗಣ

೧೯. ಲಲಾಟಪಟ್ಟ ಕನ್ನಕೈರದಿಶಾಪಟ್ಟ ವಾಜಿಕುಳಾಂ

೨೦. ಬರದ್ಯುಮಣಿ ಬನ್ಧುಜನಚಿನ್ತಾ[ಮ*]ಣಿ ಶ್ರೀ
೨೧. ಮತ್ತೃಭುವನಮಲ್ಲದೇವ ಪದಾರಾಧಕಂ ಪ.....
೨೨. ಕನಾಮಾದಿ ಸಮಸ್ತ ಪ್ರಶಸ್ತಿಸಹಿತ....
೨೩. ಮನುಮಹಾಪ್ರಧಾನಂ ಮನೆವೆರ್ಗ್ಗಡೆ ದಂಡ........
೨೪. ಬಣಯ್ಯಂಗಳ್ ರಾಯನಾರಾಯಣಪು ....
೨೫. ಯು[ದ್ಯಾಪ]ನದಲು ಕೆಜಿೞಯ ಪುರದೊ........
೨೬. ಧರ್ಮ್ಮಮಾಗಿ ಶ್ರೀಮತ್ತೃಭುವನಮ.....
೨೭. .... ಲು ಧಾರಾಪೂರ್ವ್ವ.............
೨೮. .... ಶ್ಯದಗ್ರ [ಹಾ] ....

ಎರಡನೆಯ ತುಂಡು

೨೯. .... ಮಾಗಿರೆ ಪಡೆದ ಸಹಿ ......
೩೦. .... ಕೊಣ್ಡಂಗುಳಿಯಲು ನಿಂಬ
೩೧. ......ಗಳ ಮಗ ಸ್ವಸ್ತಿಸಮಧಿಗತಪಞ್ಚ
೩೨. ಮಹಾಶಬ್ದ ಮಹಾಸಾಮನ್ತಾಧಿಪತಿ (ಮ)
೩೩. ಮಹಾಪ್ರಚಣ್ಡದಣ್ಡನಾಯಕ ದುಷ್ಟವಿದ್ವಿಷ್ಟ
೩೪. ವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ
೩೫. ಸುಕವಿಶುಕಚೂತ ಬನ್ದುವನವಸನ್ತ ವಚಶ್ರೀವಧೂ
೩೬. ಕಾನ್ತ ಸಾಹಿತ್ಯಸರೋರುಹಮಧುಬ್ರತ ಸತ್ಯಸ
೩೭. ತ್ಯಬ್ರತ ಹರಚರಣ ರಜೋರಂಜಿತೋತ್ತಮಾಂಗನ
೩೮. ಯ್ಯನಸಿಂಗ ನಾಮಾದಿ ಸಮಸ್ತ ಪ್ರಶಸ್ತಿಹಿತಂ ಶ್ರೀಮನ್ಮಹಾಪ್ರ
೩೯. ಧಾನಂ ಹೇರಿಲಾಳಸನ್ಧಿವಿಗ್ರಹಿ ದಣ್ಣನಾ[ಯ]ಕಂ ಕೇಸಿರಾ
೪೦. ಜರಸರು ಶ್ರೀಮಚಾಳ್ಯ ವಿಕ್ರಮವರ್ಷದ ೩೩ನೆ
೪೧. ಯ ಸರ್ವ್ವಜಿತ್ ಸಂತ್ಸರದ ಮಾರ್ಗ್ಗಸಿರದಮಾವಾಸ್ಯೆ
೪೨. ಸೋಮವಾರದಂದಿನ ಸೂರ್ಯ್ಯಗ್ರಹಣ ಪರ್ವ್ವ ನಿಮಿತ್ತದಲು
೪೩. ತಾವು ಮಾಡಿಸಿದ ಶಿವಾಲೆಯದ ಮೂಲಸ್ಥಾನದ
೪೪. ಶ್ರೀ ಸೋಮೇಶ್ವರದೇವರ್ಗ್ಗೆ ತಮ್ಮ ಪ್ರಭುತ್ವದ ದೋಣಿಯಿಂ
೪೫. ತೆಂಕ ಒಡ್ಡವಾಡಿಗೆಯ ಬಟ್ಟೆಯಿಂ ಪ

---

* ಇಲ್ಲಿಗೆ ಶಾಸನ ನಿಂತುಬಿಡುತ್ತದೆ.

೪೬. ಡುವ ಬನ್ದುಚಿನ್ತಾಮಣಿಯ ಈರ್ಪ್ಪತ್ತೆಂಟು ಗೇಣ ಕೋ
೪೭. ಲಲು ತಮ್ಮಂ[ಶ]ಕ್ಕೆ ಬಂದ ಮತ್ತರಯ್ವತ್ತೇಳಜೊಳಗೊ

* * *

ಕೊಂಡಗುಳಿ, ಸಿಂದಗಿ ತಾಲೂಕು, ವಿಜಾಪುರ ಜಿಲ್ಲೆ

ಕಲ್ಯಾಣಚಾಲುಕ್ಯ – ಭೂಲೋಕಮಲ್ಲ– ಸೋಮೇಶ್ವರ III ಕ್ರಿ. ಶ. ೧೧೩೨

[EI. XXXVII-iv P. 189]

೧. ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ
೨. ಪ್ರಿಥ್ವೀವಲ್ಲಭ ಮಹಾರಾಜಾಧಿರಾಜ
೩. ಪರಮೇಶ್ವರ ಪರಮಭಟ್ಟಾರಕ ಸತ್ಯಾ
೪. ಶ್ರಯ ಕುಲತಿಲಕ ಚಾಲುಕ್ಯಾಭರ
೫. ಣ ಶ್ರೀಮಚ್ಚಾಲುಕ್ಯ ಭೂಲೋಕಮಲ್ಲದೇ
೬. ವರ ವಿಜಯರಾಜ್ಯಮುತ್ತರೋತ್ತರಾ
೭. ಭಿವೃದ್ಧಿ ಪ್ರವರ್ಧಮಾಣಮಾಚಂದ್ರಾ
೮. ರ್ಕ ತಾರಂಬರಂ ಸಲುತ್ತಮಿರೆ ಮಾಹುರ
೯. ದ ನೆಲೆವೀಡಿನಲು ಸುಖಸಂಕಥಾ
೧೦. ವಿನೋದದಿಂ ರಾಜ್ಯಂಗೆಯ್ಯುತ್ತಮಿರಲು
೧೧. ಶ್ರೀಮಚ್ಚಾಲುಕ್ಯ ಭೂಲೋಕಮಲ್ಲ ವರ್ಷದ ೭ನೆ
೧೨. ಯ ಪರಿಧಾವಿ ಸಂವತ್ಸರದ ಪುಷ್ಯದ
೧೩. ಪೌರ್ಣಮಾಸ್ಯೆ ಆದಿತ್ಯವಾ[ರ]ದುತ್ತರಾ
೧೪. ಯಣ ಸಂಕ್ರಮಣ ಪರ್ವದಂದು ಶ್ರೀಮತ್ಸ
೧೫. ರ್ವ್ವನಮಸ್ಯದಗ್ರಹಾರಂ ಕೊಂಡಂಗು
೧೬. ಳ್ಯಸೇಷಮಹಾರಾಜನಂಗಲಿ(ಳಿ)ಗೆ
೧೭. ಶ್ರೀಮತ್ ಕೇಸಿಮಯ ದಂಡನಾಯಕರುಂ ಗ
೧೮. ಣಪತಿ ದಂಡನಾಯಕರು[ಂ] ಕೂಡಿ ವಿದ್ಯ[ದಾ]
೧೯. ನ ನಿಮಿತ್ತವಾಗಿ ಸೂತ್ರಸ[ಂಹಿ]ತ ಪಿರಿ
೨೦. ಯ ಗ್ರಂಥಂಗಲ[ಳ]ಂ ಪೇಳ್ವ ವುಪಾಧ್ಯಾಯರ್ಗೆ ಪೊಂನ
೨೧. ವ್ರಿದ್ದಿಯಲೆ ಗ್ರಾಸ ನಡವಂತಾಗಿ
೨೨. ಪೊಂಗೆ ತಿಂಗಲಿ(ಳಿ)ಂಗೆ ವೀಸಂ ನಾ
೨೩. ನಾಲ್ಕಱ ವಡ್ಡಿಯಲು ಕೊಟ್ಟ ವರ್ತಕ
೨೪. ಲೊಕ್ಕಿಗದ್ಯಾಣ ೨೦ ಮತ್ತು [ಂ]

೨೫. ಸಂಹಗಿತೆಯಂ ಕಿ(ಜೆ)ಯ ಗ್ರಂಥಂಗ
೨೬. ಲು(ಳು)ಂ ಯಾಜ್ಞ್ಯವಲ್ಕಿ ಸಹಿತ ಪೇಲ್ವ(ಳ್ವ)
೨೭. ಉಪಾಧ್ಯಾಯರ್ಗೆ ಪೊಂನ ವಿ(ವೃ)ದ್ದಿಯ
೨೮. ಲೆ ಗ್ರಾಸ ನಡವಂತಾಗಿ ಪೊಂ
೨೯. ಗೆ ತಿಂಗಲಿ (ಳಿ)ಂಗೆ ವೀಸಂ ನಾಲ್ಕ
೩೦. ರ ವೃದ್ಧಿಯಂ ಕೊಟ್ಟ ವರ್ತಕ ಲೊ
೩೧. ಕ್ಕಿಗದ್ಯಾಣ ೨೦ ಮತ್ತು ಅಕ್ಷ
೩೨. ರ ವ್ಯಾಕರಣ ರೂಪಾವತಾರಮಿಂ
೩೩. ತಿನಿತುಂ ಪೇರ್ದು ವಾ(ಬಾ)ಲ ಶಿಕ್ಷೆ
೩೪. ಯಂ ಮಾರ್ಪ ಉಪಾಧ್ಯಾಯರ್ಗೆ ಪೊಂ
೩೫. ನ ವೃದ್ಧಿಯಲೆ ಗ್ರಾಸಂ ನಡವಂ
೩೬. ತಾಗಿ ಪೊಂಗೆ ತಿಂಗಲಿ(ಳಿ)ಂಗೆ
೩೭. ವೀಸಂ ನಾಲ್ಕ(ಱ) ವೃದ್ಧಿಯಂ ಕೊ
೩೮. ಟ್ಟ ವರ್ತಕ ಲೊಕ್ಕಿಗದ್ಯಾ
೩೯. ಣ ೨೦ ಈ ಧರ್ಮವಂ ಮಹಾಜ
೪೦. ನಂಗಲು(ಳು)ಂ ನಡಸುವರು ॥
೪೧. ಶ್ರೀಮತು ಭಾಂಡಾರಿಗೆ ರಾಮದೇ
೪೨. ವನಾಯಕರು ಸೌಪರ್ಣ
೪೩. ದ ತಾಂಬೂಲ ದಾನಕ್ಕೊ(ಕ್ಕೆ) ಪೊಂ(ಗೆ)
೪೪. ತಿಂಗಲಿ(ಳಿ)ಂಗೆ ವೀಸಂ ೪।ಜ। ವೃ(ದ್ಧಿ)
೪೫. ಯಲು ಕೊಟ್ಟ ಕಟಕಪ್ರಿಯ
೪೬. ಗದ್ಯಾಣ ೧೦ ಮತ್ತಂ ಬ್ರಹ್ಮದೇ
೪೭. ವಭಟ್ಟರು ತಾಂಬೂಲದಾನ
೪೮. ವೃದ್ಧಿಯಲೆ ಕೊಟ್ಟ ಕಟಕಂ ಗ
೪೯. ದ್ಯಾಣ. ೨ ಶ್ರೀಮತ್ಸರ್ವನಮ
೫೦ ಸ್ಯದಗ್ರಹಾರ ಕೊಂಡಂಗುಲಿ(ಳಿ]ಯ
೫೧. ಶೇಷಮಹಾಜನಂಗಲು (ಳು) ಶ್ರೀ
೫೨. ಕೇಶವದೇವರ್ಗೆ ದೀಪದಾ
೫೩. ನವಾಗಿ ಗಾಣವಾಯಿಲೆಯ

ಪೂಣ್–ಹೂಳು
ಪುಂಡರಿಕಾಕ್ಷ–ವಿಷ್ಣು
ಪೊಲ–ಸ್ಥಾನ, ಕ್ಷೇತ್ರ
ಪೊಲ್ಲಮೆ–ನೀಚತನ
ಪ್ರಘೋಷ–ದೊಡ್ಡ ಧ್ವನಿ
ಬಗದಳ–ಹುಣ್ಣು
ಬಗರಗೆ–ಒರತೆ
ಬಚ್ಚರಣೆ–ಬಣ್ಣಗಾರಿಕೆ
ಬಣಗು–ಕೀಳು
ಬಲಗೊಳ್–ಪ್ರದಕ್ಷಿಣೆಹಾಕು
ಬವರಿಗೊಳ್–ಸಂಚರಿಸು
ಬಿನ್ನಾಣ–ಬಿಂಕ
ಬಿಸಜಾಕ್ಷಿ–ಕಮಲನೇತ್ರೆ
ಬೀಗು–ಗರ್ವಿಸು, ಉಬ್ಬು
ಬೀಯ–ಆಹಾರ, ಅಮೃತ
ಬೆದರಟ್ಟು–ಬೆದರಿಸಿ ಓಡಿಸು
ಬೇಳಂಬ–ಯಜ್ಞ
ಬೇಳ್ಮಾಡು–ಹೋಮಮಾಡು, ಸುಡು
ಬೇಹೈಸು–ಹೊಂಚುಹಾಕು
ಬೈತಂತಿರು–ಹುದುಗಿಸಿಕೊಂಡಿರು
ಬೊಂಬಾಳ–ದೊಡ್ಡ, ಘನ
ಬೊಮ್ಮಣ್ಣ–ಬ್ರಹ್ಮ
ಭರ್ಗ–ಶಿವ
ಭವ–ಹುಟುವಿಕೆ, ಜನ್ಮ, ಶಿವ
ಭವದೀಯ–ನಿನ್ನ
ಭಾವರ್ಷ–ಬೆಳಕಿನ ಮಳೆ
ಭೂತೇಶ–ಶಿವ
ಮಗ್ಗಿಸು–ಹೋಗಲಾಡಿಸು
ಮಂಗಲೆ–ಪಾರ್ವತಿ
ಮಡ–ಹಿಮ್ಮಡ
ಮದನ ಪ್ರಧ್ವಂಸಿ–ಕಾಮಧ್ವಂಸಿ, ಶಿವ
ಮದೀಯ–ನನ್ನ
ಮರ್ದು–ಔಷಧ
ಮಧುಪ–ಜೇನ್ನೊಣ
ಮನೆವಾಳ್ತೆ–ಮನೆಗೆಲಸ
ಮನೋಜ–ಕಾಮ
ಮರವಡು–ಮೈಮರೆ
ಮಲರಹಿತ–ತ್ರಿವಿಧಮಲಾತೀತ, ಪವಿತ್ರ
ಮಲಹರ–ಶಿವ
ಮಸಕ–ಮೈಲಿಗೆ
ಮಹೀಜ–ಗಿಡ
ಮಾರ್ಜಾಲ–ಬೆಕ್ಕು
ಮಾಟ–ದಾಸೋಹರೂಪದ ಕ್ರಿಯೆ, ಕ್ರಿಯೆ
ಮಾಱಾಗು–ವಶವರ್ತಿಯಾಗು
ಮಿಗ–ಮೃಗ
ಮಿಡಿ–ಹಗ್ಗ
ಮೀಂಬುಳು–ನಕ್ಷತ್ರ
ಮುಚುಕುಂದ–ಒಂದು ಬಗೆಯ ಹೂಗಿಡ
ಮೂರು ಗುಣ–ಸತ್ವ, ರಜ, ತಮ
ಮೂಷಕ–ಇಲಿ
ಮೈವೆಚ್ಚು–ಮೈಯುಬ್ಬು
ಮೊಳೆದೋರು–ಅಂಕುರಿಸು
ಯಂತ್ರಾಯಕ–ನಿಯಂತ್ರಕ, ಶಿವ
ಯಾತನೆ–ತೀವ್ರಸಂಕಟ
ರಜ–ಧೂಳಿ
ರಜಕ–ಅಗಸ
ರಜಶಿಲೆ–ರಜಸ್ವಲೆ, ಮುಟ್ಟಾಗುವಿಕೆ
ರಣರಣಕ–ವಿರಹ
ರಹ–ಸೋಜಿಗ
ರಾಜರಾಜಿತಚೂಡಾ–ಶಿವ
ರಾಜಾಭರಣ–ಚಂದ್ರಶೇಖರ, ಶಿವ
ರಾಜಿ–ಸಮೂಹ
ವಡಬ–ನೀರೊಳಗಿನ ಬೆಂಕಿ
ವನಜರಿಪುಧರ–ಚಂದ್ರಧರ, ಶಿವ
ವಸನ–ಬಟ್ಟೆ
ವಹ್ನಿ–ಬೆಂಕಿ
ವಾಗು–ವಾಕು, ಮಾತು
ವಿಕಸಿತ–ಅರಳಿದ
ವಿಗುಣಿಸು–ಅಧಿಕ ಗುಣಿಸು
ವಿಟ್ಟಣ್ಣ–ವಿಷ್ಣು
ವಿಧಿತೇಶ–ಶಿವ
ವಿಧುಬಿಂಬ–ಚಂದ್ರಮಂಡಲ
ವೆಗ್ಗಳ–ಅಧಿಕ, ಶ್ರೇಷ್ಠ
ವೇದನೆ–ಜ್ಞಾನ
ವೈತರಣಿ–ಒಂದು ನರಕದ ಹೆಸರು
ವ್ಯಸ್ತ–ನಿಯಮ ಬಾಹಿರ
ಶಲಭ–ಪತಂಗ


ಶರ್ವ–ಶಿವ
ಶಾಕಪಾಕ–ಸೊಪ್ಪಿನ ಅಡುಗೆ
ಶಶಿಮೌಲಿ–ಚಂದ್ರನನ್ನು ಧರಿಸಿದ ಶಿವ
ಶುನಕ–ನಾಯಿ
ಶ್ರುತಿ–ವೇದ
ಶ್ರುತದೃಷ್ಟ–ಶಾಸ್ತ್ರಮುಖದಿಂದ ಮತ್ತು ಗುರು ಮುಖದಿಂದ ಕೇಳಿದುದು ಶ್ರುತ, ಪ್ರತ್ಯಕ್ಷ ಕಂಡುದು ದೃಷ್ಟ.
ಷಡುದರ್ಶನ–ಸಾಂಖ್ಯ, ಯೋಗ, ನ್ಯಾಯ, ವೇದಾಂತ, ಮೀಮಾಂಸೆ, ವೈಶೇಷಿಕ ಈ ಆರು ಹಿಂದೂ ದರ್ಶನಗಳು
ಸಂಸರ್ಗ–ಸಂಸಾರ
ಸಂಕಲಿಸು–ಸಂಕೋಲೆಯಿಂದ ಬಿಗಿಯಲ್ಪಡು
ಸರ್ಪಿ–ತುಪ್ಪ
ಸಬ–ಶವ
ಸರ–ಸರೋವರ
ಸಾರ್ಚು–ಸೇರು
ಸಿಡಿವಲೆ–ಒಂದು ಬಗೆಯ ಬಲೆ
ಸಿರಿಯಕ್ಕ–೬೩ ಪುರಾತನರಲ್ಲಿ ಒಬ್ಬಳಾದ ಮಾಂಗಾಯಕ್ಕರಸಿ(ನೋಡಿ ಬ.ವ. ೭೩೮)
ಸುಕೃತ–ಪುಣ್ಯ
ಸೂಕರ–ಹಂದಿ
ಸೂಡು–ಧರಿಸು
ಸೆಜ್ಜೆ–ಶಯ್ಯಾ, ಲಿಂಗದ ವಸ್ತ್ರ
ಸೊಡರು–ದೀಪ
ಸೊದೆ–ಸುಧಾ, ಅಮೃತ
ಸೊಮ್ಮು–ಸಂಪತ್ತು
ಸೊರೆ–ಈಸುಗುಂಬಳ
ಸೋಮಸಹಾಯಂ–ಕುಬೇರ ಸಹಾಯನಾದ ಶಿವ
ಸೋಮಾಂಗಧರ–ಚಂದ್ರಧರ, ಶಿವ
ಸೋಮಾವರ–ಉಮಾ ಸಹಿತನಾದ ಶಿವ
ಸೋಹು–ಸೋಂಕು
ಸ್ನಪನ–ಸ್ನಾನ
ಸ್ವಾಯತ–ಪ್ರಾಣಲಿಂಗ
ಹರವಿ–ಪ್ರಕಟನೆ
ಹರಿಹೊಯ್–ಹರಿಯುವಂತೆ ಹೊಡೆ
ಹಸರ–ವಿಸ್ತಾರ
ಹಸಲೆ–ಹಸಿಯ ಹುಲ್ಲು
ಹಳಚು–ತಾಗು
ಹವಿ–ಯಜ್ಞದಲ್ಲಿ ಹಾಕುವ ಪದಾರ್ಥ
ಹಾಳಾಹಳ–ವಿಷ
ಹೊರೆ–ರಕ್ಷಿಸು
ಹೋರಟೆ–ಹೋರಾಟ, ಜಗಳ
ಕ್ಷಣಕಡಿಕ–ತೀವ್ರಘಾತಕ

❖❖

೩. ಪದ್ಯಗಳ ಅಕಾರಾದಿ

(ಅಂಕಿಗಳು ಪದ್ಯವನ್ನು ಸೂಚಿಸುತ್ತದೆ)

❖❖



ಡಾ. ಎಂ. ಎಂ. ಕಲಬುರ್ಗಿ ಅವರು ಸುಪ್ರಸಿದ್ಧ ಸಂಶೋಧಕರು. ವ್ಯಕ್ತಿ ನೆಲೆಯಲ್ಲಿ ಅವರು ಬರೆದದ್ದು ಅಪಾರ; ಸಾಂಸ್ಥಿಕ ನೆಲೆಯಲ್ಲಿ ಅವರು ಮಾಡಿದ ಸಾಧನೆಗಳು ಶಿಖರಪ್ರಾಯವಾದವುಗಳು. ಗ್ರಾಮೀಣ ಶ್ರಮಸಂಸ್ಕೃತಿ ಹಾಗೂ ವಿಜಯಪುರ ಜಿಲ್ಲೆಯ, ಸಿಂದಗಿ ತಾಲ್ಲೂಕಿನ ಯರಗಲ್ಲ ಗ್ರಾಮದ ಅವಿಭಕ್ತ ಕುಟುಂಬ ಪರಿಸರ ಪ್ರಭಾವದಲ್ಲಿ ಬೆಳೆದು ಬಂದ ಡಾ. ಕಲಬುರ್ಗಿ ಅವರು ಇಡೀ ನಾಡನ್ನೇ ಅವಿಭಕ್ತವಾಗಿ ಕಂಡವರು.

ಹೀಗಾಗಿ ಅವರು ನಾಡಿನ ತುಂಬೆಲ್ಲ ಹರಡಿಕೊಂಡಿರುವ ಸಂಘ-ಸಂಸ್ಥೆಗಳೊಂದಿಗೆ ಮಠ-ಮಾನ್ಯಗಳೊಂದಿಗೆ ಸರಕಾರಿ ಇಲಾಖೆಗಳೊಂದಿಗೆ ಒಡನಾಟವಿಟ್ಟುಕೊಂಡು ಅನೇಕ ಯೋಜನೆಗಳನ್ನು ಹುಟ್ಟು ಹಾಕಿದರು. ಹಲವಾರು ಪ್ರತಿಷ್ಠಾನಗಳನ್ನು ಸ್ಥಾಪಿಸುತ್ತ ಅವುಗಳನ್ನು ಕನ್ನಡದ ಪ್ರಾತಿನಿಧಿಕ ಸಂಸ್ಥೆಗಳನ್ನಾಗಿ ರೂಪಿಸಿದರು.

ಇಂಥ ಅಪರೂಪದ ವ್ಯಕ್ತಿಯ ಬಹುಮುಖಿ ಸಾಧನೆಯನ್ನು ಅಕ್ಷರ, ದೃಶ್ಯ, ಧ್ವನಿ, ಚಿತ್ರ ಮಾಧ್ಯಮಗಳ ಮೂಲಕ ಪರಿಚಯಿಸುವುದು, ಅವರ ಸಮಗ್ರ ಸಾಹಿತ್ಯವನ್ನು ವಿಷಯಾನುಗುಣವಾಗಿ ವರ್ಗೀಕರಿಸಿ ಸಂಪುಟಗಳಲ್ಲಿ ಪ್ರಕಟಿಸುವುದು, 'ಡಾ. ಎಂ. ಎಂ. ಕಲಬುರ್ಗಿ ಸಮಗ್ರ ಸಾಹಿತ್ಯ ಪ್ರಕಟನ ಯೋಜನೆ'ಯ ಮುಖ್ಯ ಉದ್ದೇಶವಾಗಿದೆ.

ಈಗಾಗಲೇ ಇಂಥ ಹಲವು ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸುತ್ತ ಬಂದ ನಮ್ಮ ವಚನ ಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಮೂಲಕ ಈ ಕಾರ್ಯವನ್ನು ಈಡೇರಿಸಲು ಅವಕಾಶ ದೊರೆತುದು ಸಂತೋಷದ ಸಂಗತಿ. ಈ ಕಾರ್ಯ ನಾವು ಭಾವಿಸಿದಷ್ಟು ಸುಲಭವಾದುದಲ್ಲ. ಅಲ್ಲಲ್ಲಿ ಚದುರಿ ಹೋಗಿರುವ ಪ್ರಕಟಿತ ಹಾಗೂ ಅಪ್ರಕಟಿತ ಕೃತಿಗಳು, ಚಿತ್ರಗಳು, ಧ್ವನಿ ಮುದ್ರಿಕೆಗಳು, ದೃಶ್ಯಮಾಧ್ಯಮಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟವಾದ ವಿಷಯಗಳನ್ನು ಸಂಗ್ರಹಿಸುವ ಹಂತಗಳಲ್ಲಿ ವಿದ್ವಾಂಸರು ವಿಶೇಷವಾಗಿ ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಸಂಪಾದಕರಾದ ಡಾ. ವೀರಣ್ಣ ರಾಜೂರ ಹಾಗೂ ಎಲ್ಲ ಕಾರ್ಯಗಳನ್ನು ಸಂಯೋಜಿಸಲು ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ದೊರಕಿದ್ದಾರೆ. ಈ ಯೋಜನೆಯ ಕಾರ್ಯದರ್ಶಿಗಳು, ಸಲಹಾ ಸಮಿತಿ ಸದಸ್ಯರು ಮತ್ತು ನಾಡಿನ ಹಲವಾರು ವಿದ್ವಾಂಸರು ಈ ಕಾರ್ಯದಲ್ಲಿ ಆಸಕ್ತಿವಹಿಸಿ ಕೈಜೋಡಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಅಮೂಲ್ಯವಾದ ಆಕರ ಸಂಪತ್ತು ದೊರಕುವಂತಾದುದು ಹೆಮ್ಮೆಯ ಸಂಗತಿಯಾಗಿದೆ.

ಡಾ. ಎಂ.ಬಿ.ಪಾಟೀಲ
ಅಧ್ಯಕ್ಷರು, ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ
ಗೃಹಸಚಿವರು, ಕರ್ನಾಟಕ ಸರ್ಕಾರ

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ.ಸಂಸ್ಥೆ, ವಿಜಯಪುರ – ೫೮೬೧೦೩

ದಿ ಪ್ರಿಂಟ್ ಪಾಯಿಂಟ್, ಬೆಂ. ಮೊ : 97390 67359